# ಐಸಿ - 38

# ವೆಬ್ ಅಗ್ರಿಗೇಟರ್‌ಗಳು

# ಸಂಯೋಜಿತ

**ಸ್ವೀಕೃತಿ**

ಈ ಪಠ್ಯಕ್ರಮವನ್ನು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್ ಡಿಎಐ)ದಿಂದ ಸೂಚಿಸಲಾದ ಪರಿಷ್ಕೃತ ಪಠ್ಯಕ್ರಮವನ್ನು ಆಧರಿಸಿದೆ ಮತ್ತು ಮುಂಬೈ ವಿಮಾ ಸಂಸ್ಥೆಯಿಂದ ಸಿದ್ಧಪಡಿಸಲಾಗಿದೆ.

**ಲೇಖಕರು/ ವಿಮರ್ಶಕರು (ವರ್ಣಮಾಲೆಯ ಕ್ರಮದಲ್ಲಿ)**

**ಡಾ. ಆರ್. ಕೆ. ದುಗ್ಗಲ್**

**ಡಾ. ಶಶಿಧರನ್ ಕೆ. ಕುಟ್ಟಿ**

**ಕ್ಯಾ. ಕೋಟೇಶ್ವರ ರಾವ್**

**ಡಾ. ಪ್ರದೀಪ ಸರ್ಕಾರ**

**ಪ್ರೊ. ಮಾಧುರಿ ಶರ್ಮಾ**

**ಡಾ. ಜಾರ್ಜ್ ಈ. ಥಾಮಸ್**

**ಪ್ರೊ. ಅರ್ಚನಾ ವಝೆ**

**ಇವರ ನೆರವಿನೊಂದಿಗೆ ಈ  ಪಠ್ಯವನ್ನು ಕನ್ನಡಕ್ಕೆ ಅನುವಾದಿಸಲಾಗಿದೆ ಮತ್ತು ಪರಿಶೀಲಿಸಲಾಗಿದೆ.**

**ಸಿ-ಡ್ಯಾಕ್, ಪುಣೆ.**

**ಶ್ರೀ. ಪಿ. ವಿ. ಭಟ್**

**ಶ್ರೀ ದತ್ತಾತ್ರೇಯ ಎನ್.**

भारतीय बीमा संस्थान
INSURANCE INSTITUTE OF INDIA

G - ಬ್ಲಾಕ್, ಪ್ಲಾಟ್ ಸಂಖ್ಯೆ. C-46, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (E), ಮುಂಬೈ - 400 051.

# ವೆಬ್ ಅಗ್ರಿಗೇಟರ್‌ಗಳು

# ಸಂಯೋಜಿತ

# ಐಸಿ – 38

ಆವೃತ್ತಿಯ ವರ್ಷ: 2023

**ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ**

ಈ ಪಠ್ಯಕ್ರಮದ ವಿಷಯಗಳು ಭಾರತೀಯ ವಿಮಾ ಸಂಸ್ಥೆ (III) ಯ ಹಕ್ಕುಸ್ವಾಮ್ಯವಾಗಿದೆ. ವಿಮಾ ಸಂಸ್ಥೆಯ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿಷಯಗಳನ್ನು ಒದಗಿಸಲು ಈ ಪಠ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ. ಈ ಪಠ್ಯಕ್ರಮದ ವಿಷಯವನ್ನು ಸಂಸ್ಥೆಯ ಪೂರ್ವ ಲಿಖಿತ ಅನುಮತಿಯಿಲ್ಲದೆ, ಭಾಗಶಃ ಅಥವಾ ಸಂಪೂರ್ಣವಾಗಿ ವಾಣಿಜ್ಯ ಉದ್ದೇಶಕ್ಕಾಗಿ ಪುನರುತ್ಪಾದಿಸಲಾಗುವುದಿಲ್ಲ.

ವಿಷಯಗಳು ಚಾಲ್ತಿಯಲ್ಲಿರುವ ಉತ್ತಮ ಅಭ್ಯಾಸಗಳನ್ನು ಆಧರಿಸಿವೆ ಮತ್ತು ವಿವಾದಗಳ ಸಂದರ್ಭದಲ್ಲಿ, ಕಾನೂನು ಅಥವಾ ಇತರ ವಿಷಯಗಳಿಗೆ ಸಂಬಂಧಿತ ಅರ್ಥವಿವರಣೆಗಳು ಅಥವಾ ಪರಿಹಾರಗಳನ್ನು ನೀಡಲು ಉದ್ದೇಶಿಸಿಲ್ಲ.

ಇದು ಕೇವಲ ಸೂಚಕ ಅಧ್ಯಯನದ ವಿಷಯವಾಗಿದೆ. ಪರೀಕ್ಷೆಯಲ್ಲಿನ ಪ್ರಶ್ನೆಗಳು ಈ ಅಧ್ಯಯನ ಸಾಮಗ್ರಿಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.

ಪ್ರಕಟಿಸಿದವರು: ಸೆಕ್ರೆಟರಿ ಜನರಲ್, ಭಾರತೀಯ ವಿಮಾ ನಿಗಮ, ಜಿ-ಬ್ಲಾಕ್, ಪ್ಲಾಟ್ C-46, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂ.) ಮುಂಬೈ – 400 051 ಮತ್ತು ಮುದ್ರಿಸಲಾಗಿದೆ

ಈ ಅಧ್ಯಯನ ದ ಸಾಮಗ್ರಿಗೆ ಸಂಬಂಧಿಸಿದ ಯಾವುದೇ ಸಂವಹನವನ್ನು ವಿಷಯದ ಶೀರ್ಷಿಕೆ ಮತ್ತು ಅನನ್ಯ ಪ್ರಕಟಣೆ ಸಂಖ್ಯೆಯನ್ನು ನಮೂದಿಸಿ ಕವರ್ ಪೇಜ್ ನಲ್ಲಿ ನಮೂದಿಸಿರುವ **ctd@iii.org.in** ಗೆ ತಿಳಿಸಬಹುದು.

# ಮುನ್ನುಡಿ

ವಿಮಾ ಏಜೆಂಟರಿಗಾಗಿ ಈ ಪಠ್ಯಕ್ರಮದ ಸಾಮಗ್ರಿಯನ್ನು ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್ ಡಿಎಐ) ಸೂಚಿಸಿದ ಪಠ್ಯಕ್ರಮದ ಆಧಾರದ ಮೇಲೆ ಭಾರತೀಯ ವಿಮಾ ನಿಗಮ (ನಿಗಮ)ವು ಅಭಿವೃದ್ಧಿಪಡಿಸಿದೆ. ಪಠ್ಯಕ್ರಮದ ಸಾಮಗ್ರಿಯ ತಯಾರಿಸುವಲ್ಲಿ ಉದ್ಯಮದಲ್ಲಿಯ ತಜ್ಞರು ಪಾಲ್ಗೊಂಡಿದ್ದರು.

ಈ ಪಠ್ಯವು ತಮ್ಮ ವೃತ್ತಿಪರ ವೃತ್ತಿಜೀವನವನ್ನು ಸರಿಯಾದ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಳ್ಳಲು ಮತ್ತು ಗೌರವಿಸಲು ಆಯಾ ಪ್ರಕಾರದ ವ್ಯವಹಾರದ ಏಜೆಂಟರಿಗೆ ಸಹಾಯವಾಗುವಂತೆ ಜೀವ, ಸಾಮಾನ್ಯ ಮತ್ತು ಆರೋಗ್ಯ ವಿಮೆಯ ಮೂಲಭೂತ ಜ್ಞಾನವನ್ನು ಒದಗಿಸುತ್ತದೆ.

ಪಠ್ಯಕ್ರಮವನ್ನು ನಾಲ್ಕು ವಿಭಾಗಗಳಲ್ಲಿ ರಚಿಸಲಾಗಿದೆ. (1) ಅವಲೋಕನ - ವಿಮಾ ಏಜೆಂಟರು ತಿಳಿದುಕೊಳ್ಳಬೇಕಾದ ವಿಮಾ ತತ್ವಗಳು, ಕಾನೂನು ತತ್ವಗಳು ಮತ್ತು ನಿಯಂತ್ರಕ ವಿಷಯಗಳನ್ನು ಒಳಗೊಂಡಿರುವ ಒಂದು ಸಾಮಾನ್ಯ ವಿಭಾಗ. (2) ಜೀವ ವಿಮಾ ಏಜೆಂಟರು, (3) ಸಾಮಾನ್ಯ ವಿಮಾ ಏಜೆಂಟರು ಮತ್ತು (4) ಆರೋಗ್ಯ ವಿಮಾ ಏಜೆಂಟರಾಗಲು ಬಯಸುವವರಿಗೆ ಪ್ರತ್ಯೇಕ ವಿಭಾಗಗಳನ್ನು ಒದಗಿಸಲಾಗಿದೆ.

ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸ್ವರೂಪ ಮತ್ತು ಪರೀಕ್ಷೆಯಲ್ಲಿ ಕೇಳಬಹುದಾದ ವಸ್ತುನಿಷ್ಠ ಪ್ರಶ್ನೆಗಳ ಕಲ್ಪನೆಯನ್ನು ನೀಡಲು ಪಠ್ಯಕ್ರಮದಲ್ಲಿ ಮಾದರಿ ಪ್ರಶ್ನೆಗಳನ್ನು ಸೇರಿಸಲಾಗಿದೆ. ಮಾದರಿ ಪ್ರಶ್ನೆಗಳು ಅವರು ಕಲಿತದ್ದನ್ನು ಪರಿಷ್ಕರಿಸಲು ಸಹಾಯ ಮಾಡುತ್ತವೆ.

ವಿಮೆಯು ಕ್ರಿಯಾತ್ಮಕ ವಾತಾವರಣದಲ್ಲಿ ಕಾರ್ಯನಿರ್ವಹಿಸುತ್ತದೆ. ಮಾರುಕಟ್ಟೆಯಲ್ಲಿಯ ಬದಲಾವಣೆಗಳ ಬಗ್ಗೆ ಏಜೆಂಟರು ಮಾಹಿತಿಯನ್ನು ಹೊಂದಿರಬೇಕು. ಅವರು ವೈಯಕ್ತಿಕ ಅಧ್ಯಯನ ಮತ್ತು ಆಯಾ ವಿಮಾಗಾರರು ಆಯೋಜಿಸುವ ಆಂತರಿಕ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಜ್ಞಾನವನ್ನು ಸಕ್ರಿಯವಾಗಿ ನವೀಕರಿಸಲು ಪ್ರಯತ್ನಿಸಬೇಕು.

ಈ ಕೆಲಸವನ್ನು ನಿಗಮಗೆ ವಹಿಸಿದ್ದಕ್ಕಾಗಿ ನಿಗಮವು ಐಆರ್ ಡಿಎಐ ಗೆ ಧನ್ಯವಾದಗಳನ್ನು ಅರ್ಪಿಸುತ್ತದೆ. ನಿಗಮವು ವಿಮಾ ಮಾರ್ಕೆಟಿಂಗ್ ನಲ್ಲಿ ಅಧ್ಯಯನ ಮಾಡಲು ಆಸಕ್ತಿ ಹೊಂದಿರುವ ಎಲ್ಲರಿಗೂ ಯಶಸ್ವಿ ವೃತ್ತಿಜೀವನವನ್ನು ಹಾರೈಸುತ್ತದೆ.

# ವಿಷಯಗಳು


| ಅಧ್ಯಾಯ ಸಂ. | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| **ವಿಭಾಗ** | **ಸಾಮಾನ್ಯ ಅಧ್ಯಾಯಗಳು** | |
| C-01 | ವಿಮೆಯ ಪರಿಚಯ | 2 |
| C-02 | ವಿಮೆಯ ಪ್ರಮುಖ ಅಂಶಗಳು | 24 |
| C-03 | ವಿಮೆಯ ತತ್ವಗಳು | 37 |
| C-04 | ವಿಮಾ ಒಪ್ಪಂದಗಳ ವೈಶಿಷ್ಟ್ಯಗಳು | 54 |
| C-05 | ಅಂಡರ್ ರೈಟಿಂಗ್ ಮತ್ತು ಬೆಲೆನಿರ್ಧಾರ | 65 |
| C-06 | ಕ್ಲೇಮ್ ಗಳ ಪ್ರಕ್ರಿಯೆ | 76 |
| C-07 | ದಾಖಲೆಗಳು | 85 |
| C-08 | ಗ್ರಾಹಕ ಸೇವೆ | 96 |
| C-09 | ದೂರು ನಿವಾರಣಾ ವ್ಯವಸ್ಥೆ | 117 |
| C-10 | ವಿಮಾ ಏಜೆಂಟರ ನಿಯಂತ್ರಕ ಅಂಶಗಳು | 128 |
| **ವಿಭಾಗ** | **ಜೀವವಿಮೆ** | |
| L-01 | ಜೀವವಿಮೆ ಏನನ್ನು ಒಳಗೊಂಡಿರುತ್ತದೆ | 142 |
| L-02 | ಆರ್ಥಿಕ ಯೋಜನೆ | 151 |
| L-03 | ಜೀವ ವಿಮಾ ಉತ್ಪನ್ನಗಳು: ಸಾಂಪ್ರದಾಯಿಕ | 170 |
| L-04 | ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳು | 185 |
| L-05 | ಜೀವವಿಮೆಯ ಅನ್ವಯಗಳು | 193 |
| L-06 | ಜೀವವಿಮೆಯ ಬೆಲೆನಿರ್ಧಾರ ಮತ್ತು ಮೌಲ್ಯಮಾಪನ | 198 |
| L-07 | ಜೀವವಿಮಾ ದಾಖಲೆಗಳು | 210 |
| L-08 | ಜೀವವಿಮಾ ಅಂಡರ್ ರೈಟಿಂಗ್ | 230 |
| L-09 | ಜೀವವಿಮಾ ಕ್ಲೇಮ್ ಗಳು | 249 |
| **ವಿಭಾಗ** | **ಆರೋಗ್ಯ ವಿಮೆ** | |
| H-01 | ಆರೋಗ್ಯ ವಿಮೆಯ ಪರಿಚಯ | 260 |
| H-02 | ಆರೋಗ್ಯ ವಿಮೆಯ ದಾಖಲೆಗಳು | 270 |
| H-03 | ಆರೋಗ್ಯ ವಿಮಾ ಉತ್ಪನ್ನಗಳು | 281 |
| H-04 | ಆರೋಗ್ಯ ವಿಮೆಯ ಅಂಡರ್ ರೈಟಿಂಗ್ | 321 |
| H-05 | ಆರೋಗ್ಯ ವಿಮೆಯ ಕ್ಲೇಮ್ ಗಳು | 343 |
| **ವಿಭಾಗ** | **ಸಾಮಾನ್ಯ ವಿಮೆ** | |
| G-01 | ಸಾಮಾನ್ಯ ವಿಮೆ ದಾಖಲಾತಿ | 367 |
| G-02 | ಅಂಡರ್ ರೈಟಿಂಗ್ ಮತ್ತು ಬೆಲೆ ನಿರ್ಧಾರ | 389 |
| G-03 | ವೈಯಕ್ತಿಕ ಮತ್ತು ಚಿಲ್ಲರೆ ವಿಮೆ | 402 |
| G-04 | ವಾಣಿಜ್ಯ ವಿಮೆ | 416 |
| G-05 | ಸಾಮಾನ್ಯ ವಿಮಾ ಕ್ಲೇಮ್ ಗಳು | 451 |
| **ವಿಭಾಗ** | **ಅನುಬಂಧಗಳು** | |
| A-01 | ಅನುಬಂಧಗಳು - ಭರ್ತಿಮಾಡಬೇಕಾದ ಪ್ರಸ್ತಾವನೆಯ ಮಾದರಿ ನಮೂನೆಗಳು ಮತ್ತು ಕ್ಲೇಮ್ ಗಳ ಮಾದರಿ ನಮೂನೆಗಳು | 463 |

# ವಿಭಾಗ

# ಅವಲೋಕನ

# ಅಧ್ಯಾಯ C-01

# ವಿಮೆಯ ಪರಿಚಯ

**ಅಧ್ಯಾಯ ಪರಿಚಯ**

ಈ ಅಧ್ಯಾಯವು ವಿಮೆಯ ಮೂಲಭೂತ ಅಂಶಗಳನ್ನು ಪರಿಚಯಿಸುವ, ಅದರ ವಿಕಾಸ ಮತ್ತು ಅದು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನಿರೂಪಿಸುವ ಗುರಿಯನ್ನು ಹೊಂದಿದೆ. ಇದು ಅನಿರೀಕ್ಷಿತ ಘಟನೆಗಳ ಪರಿಣಾಮವಾಗಿ ಉಂಟಾಗುವ ಆರ್ಥಿಕ ನಷ್ಟಗಳ ವಿರುದ್ಧ ವಿಮೆ ಹೇಗೆ ರಕ್ಷಣೆ ನೀಡುತ್ತದೆ ಮತ್ತು ಅಪಾಯ ವರ್ಗಾವಣೆಯ ಸಾಧನವಾಗಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಕಲಿಸುತ್ತದೆ.

**ಕಲಿಕೆಯ ಫಲಿತಾಂಶಗಳು**

A. ವಿಮೆ - ಇತಿಹಾಸ ಮತ್ತು ವಿಕಾಸ

B. ಅಪಾಯ ಸಂಚಯನದ ತತ್ವ

C. ಅಪಾಯ ನಿರ್ವಹಣೆ ತಂತ್ರಗಳು

D. ಅಪಾಯವನ್ನು ನಿರ್ವಹಿಸುವ ಸಾಧನವಾಗಿ ವಿಮೆ

E. ವಿಮೆಯನ್ನು ಆಯ್ಕೆ ಮಾಡುವ ಮೊದಲಿನ ಪರಿಗಣನೆಗಳು

F. ವಿಮಾ ಮಾರುಕಟ್ಟೆಯ ವೃತ್ತಿಪರರು

G. ಸಮಾಜದಲ್ಲಿ ವಿಮೆಯ ಪಾತ್ರ

## A. ವಿಮೆ – ಇತಿಹಾಸ ಮತ್ತು ವಿಕಾಸ

ನಾವು ಅನಿಶ್ಚಿತತೆಯ ಜಗತ್ತಿನಲ್ಲಿ ವಾಸಿಸುತ್ತಿದ್ದೇವೆ. ನಾವು ಈ ಕೆಳಗಿನವುಗಳ ಬಗ್ಗೆ ಕೇಳುತ್ತೇವೆ:

- ✓ ರೈಲುಗಳ ಅಪಘಾತ
- ✓ ಇಡೀ ಸಮುದಾಯಗಳನ್ನು ನಾಶಪಡಿಸುವ ಪ್ರವಾಹಗಳು
- ✓ ಕಟ್ಟಡಗಳನ್ನು ನಾಶಪಡಿಸುವ ಭೂಕಂಪಗಳು
- ✓ ಅನಿರೀಕ್ಷಿತವಾಗಿ ಸಾಯುವ ಯುವಕರು

**ಚಿತ್ರ 1: ನಮ್ಮ ಸುತ್ತಲೂ ನಡೆಯುತ್ತಿರುವ ಘಟನೆಗಳು**




ಈ ಘಟನೆಗಳು ಏಕೆ ಜನರಲ್ಲಿ ಆತಂಕ ಮತ್ತು ಭಯವನ್ನು ಉಂಟುಮಾಡುತ್ತವೆ**?**

ಕಾರಣ ಸರಳವಾಗಿದೆ.

- **i.** ಮೊದಲನೆಯದಾಗಿ, ಈ ಘಟನೆಗಳು ಅನಿರೀಕ್ಷಿತವಾಗಿರುತ್ತವೆ. ಘಟನೆಯನ್ನು ನಿರೀಕ್ಷಿಸುವುದು ಮತ್ತು ಊಹಿಸುವುದು ಸಾಧ್ಯವಾದರೆ, ಅದಕ್ಕೆ ಸಿದ್ಧರಾಗಬಹುದು.
- **ii.** ಎರಡನೆಯದಾಗಿ, ಸಾಮಾನ್ಯವಾಗಿ ಇಂತಹ ಅನಿರೀಕ್ಷಿತ ಮತ್ತು ಅಹಿತಕರ ಘಟನೆಗಳು **ಆರ್ಥಿಕ ನಷ್ಟ ಮತ್ತು ದುಃಖಕ್ಕೆ ಕಾರಣವಾಗುತ್ತವೆ**.

ಹಂಚಿಕೊಳ್ಳುವ ಮತ್ತು ಪರಸ್ಪರ ಬೆಂಬಲದ ವ್ಯವಸ್ಥೆಯನ್ನು ಮಾಡಿಕೊಳ್ಳುವ ಮೂಲಕ ಸುತ್ತಮುತ್ತಲಿನ ಜನರು ಅಂತಹ ಘಟನೆಗಳಿಂದ ಪ್ರಭಾವಿತರಾದ ವ್ಯಕ್ತಿಗಳ ಸಹಾಯಕ್ಕೆ ಬರಬಹುದು. ವಿಮೆಯ ಕಲ್ಪನೆಯು ಸಾವಿರಾರು

ವರ್ಷಗಳ ಹಿಂದಿನದಾಗಿದೆ. ಆದರೂ, ವಿಮೆಯ ಪ್ರಸ್ತುತ ರೂಪವು ಕೇವಲ ಎರಡು ಅಥವಾ ಮೂರು ಶತಮಾನಗಳಷ್ಟು ಹಳೆಯದಾಗಿದೆ.

## 1. ವಿಮೆಯ ಇತಿಹಾಸ

ಕ್ರಿಸ್ತಪೂರ್ವ 3000 ದಿಂದ ವಿಮೆಯು ಬೇರೆ ಬೇರೆ ರೂಪದಲ್ಲಿ ಅಸ್ತಿತ್ವದಲ್ಲಿದೆ. ಅನೇಕ ನಾಗರಿಕತೆಗಳು, ಸಮುದಾಯದ ಕೆಲವು ಸದಸ್ಯರು ಅನುಭವಿಸಿದ ಎಲ್ಲ ನಷ್ಟಗಳನ್ನು ತಮ್ಮ ನಡುವೆ ಸಂಚಯನದ ಮೂಲಕ ಹಂಚಿಕೊಳ್ಳುವ ಪರಿಕಲ್ಪನೆಯನ್ನು ಅಭ್ಯಾಸ ಮಾಡಿವೆ. ಈ ಪರಿಕಲ್ಪನೆಯನ್ನು ಅನ್ವಯಿಸಿದ ಕೆಲವು ವಿಧಾನಗಳನ್ನು ನಾವು ನೋಡೋಣ.

## 2. ಯುಗಾನುಯುಗಗಳಿಂದ ನಡೆದು ಬಂದ ವಿಮೆ - ಕೆಲವು ನಿದರ್ಶನಗಳು

| | |
|---|---|
| ಹಡಗನ್ನು ಅಡವಿಟ್ಟ ಸಾಲಗಳು | **ಬ್ಯಾಬಿಲೋನ್ ನ ವ್ಯಾಪಾರಿಗಳು** ತಮ್ಮ ಸರಕು ಕಳೆದುಹೋದರೆ ಅಥವಾ ಕಳ್ಳತನವಾದರೆ ತಮ್ಮ ಸಾಲವನ್ನು ಮನ್ನಾ ಮಾಡಲು ಸಾಲದಾತರಿಗೆ ಹೆಚ್ಚುವರಿ ಹಣವನ್ನು ಪಾವತಿಸಿದರು.<br>**ಭರೂಚ್ ಮತ್ತು ಸೂರತ್ ನ ವ್ಯಾಪಾರಿಗಳು** ಸಹ ಇದೇ ರೀತಿಯ ಅಭ್ಯಾಸಗಳನ್ನು ಹೊಂದಿದ್ದರು. |
| ಹಿತಚಿಂತಕ ಸಮಾಜಗಳು/ ಸೌಹಾರ್ದಯುತ ಸಮಾಜಗಳು | 7 ನೇ ಶತಮಾನದಲ್ಲಿ ಗ್ರೀಕರು., ಸತ್ತ ಸದಸ್ಯರ ಕುಟುಂಬವನ್ನು ನೋಡಿಕೊಳ್ಳಲು ಮತ್ತು ಸದಸ್ಯರ ಅಂತ್ಯಕ್ರಿಯೆಯ ವೆಚ್ಚವನ್ನು ಮುಂಗಡವಾಗಿ ಪಾವತಿಸುತ್ತಿದ್ದರು. ಇಂಗ್ಲೆಂಡಿನಲ್ಲಿಯೂ ಇದೇ ರೀತಿಯ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತು. |
| ರೋಡ್ಸ್ | ಸಮುದ್ರದ ಮೂಲಕ ಸರಕುಗಳನ್ನು ಕಳುಹಿಸುತ್ತಿದ್ದಾಗ, ಯಾರಾದರೂ ಹಡಗಿನಿಂದ ಸರಕನ್ನು ಎಸೆಯಬೇಕಾಗಿ(ಜೆಟ್ಟಿಸನ್‌ನಿಂದ) ತಮ್ಮ ಸರಕುಗಳನ್ನು ಕಳೆದುಕೊಂಡರೆ ರೋಡ್ಸ್‌ನ ವ್ಯಾಪಾರಿಗಳು ನಷ್ಟವನ್ನು ತಮ್ಮತಮ್ಮಲ್ಲಿ ಹಂಚಿಕೊಳ್ಳುತ್ತಿದ್ದರು. |
| ಚೀನೀ ವ್ಯಾಪಾರಿಗಳು | ಕೆಲವು ದೋಣಿಗಳು ಮುಳುಗಿದರೂ, ತಮ್ಮ ನಷ್ಟವು ಭಾಗಶಃ ಆಗಿರುತ್ತದೆಂದು ಪ್ರಾಚೀನ ಕಾಲದಲ್ಲಿ ಚೀನೀ ವ್ಯಾಪಾರಿಗಳು ತಮ್ಮ ಸರಕುಗಳನ್ನು ವಿವಿಧ ಹಡಗುಗಳಲ್ಲಿ ಕಳುಹಿಸುತ್ತಿದ್ದರು. |

## 3. ವಿಮೆಯ ಆಧುನಿಕ ಪರಿಕಲ್ಪನೆಗಳು

ಜೀವ ವಿಮೆಯ ತತ್ವವು ಭಾರತದಲ್ಲಿ ಜಂಟಿ-ಕುಟುಂಬ ವ್ಯವಸ್ಥೆಯಲ್ಲಿ ಪ್ರತಿಫಲಿಸುತ್ತದೆ. ಪ್ರತಿಯೊಬ್ಬ ಸದಸ್ಯರು ಸುರಕ್ಷಿತವಾಗಿರುವಂತೆ ಒಬ್ಬ ಸದಸ್ಯರ ನಿಧನದಿಂದ ಉಂಟಾದ ನಷ್ಟವನ್ನು ಕುಟುಂಬದ ವಿವಿಧ ಸದಸ್ಯರು ಹಂಚಿಕೊಳ್ಳುತ್ತಾರೆ.

ಆಧುನಿಕ ಯುಗದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯ ವಿಘಟನೆ ಮತ್ತು ವಿಭಕ್ತ ಕುಟುಂಬದ ಆಗಮನದಿಂದಾಗಿ, ದೈನಂದಿನ ಜೀವನದಲ್ಲಿ ಒತ್ತಡದ ಜೊತೆಗೆ ಭದ್ರತೆಗಾಗಿ ಪರ್ಯಾಯ ವ್ಯವಸ್ಥೆಗಳನ್ನು

ವಿಕಸನಗೊಳಿಸುವುದು ಅಗತ್ಯವಾಗಿದೆ. ಇದು ಪ್ರತಿಯೊಬ್ಬ ವ್ಯಕ್ತಿಗೆ ಜೀವ ವಿಮೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ.

i. **ಲಾಯ್ಡ್ಸ್:** ಆಧುನಿಕ ವಾಣಿಜ್ಯ ವಿಮೆಯ ಮೂಲವು ವ್ಯಾಪಾರಿಗಳು ಸಮುದ್ರದಲ್ಲಿ ವಿವಿಧ ಅಪಾಯಗಳಿಂದ ಅನುಭವಿಸಿದ ನಷ್ಟವನ್ನು ಹಂಚಿಕೊಳ್ಳಲು ಒಪ್ಪಿಕೊಳ್ಳಲಾಯಿತು ಮತ್ತು ಇದು ಲಂಡನ್ನಿನ ಲಾಯ್ಡ್ಸ್ ಕಾಫಿ ಹೌಸ್‌ನಲ್ಲಿ ಪ್ರಾರಂಭವಾಯಿತು.

ii. ಲಂಡನ್ನಿನಲ್ಲಿ **1706** ರಲ್ಲಿ ಸ್ಥಾಪಿಸಲಾದ **ಶಾಶ್ವತ ಭರವಸೆಗಾಗಿ ಸೌಹಾರ್ದಯುತ ಸೊಸೈಟಿಯನ್ನು** ವಿಶ್ವದ ಮೊದಲ ಜೀವ ವಿಮಾ ಕಂಪನಿಯೆಂದು ಪರಿಗಣಿಸಲಾಗಿದೆ.

## 4. ಭಾರತದಲ್ಲಿ ವಿಮೆಯ ಇತಿಹಾಸ

**a) ಭಾರತ:** ವಿದೇಶಿ ವಿಮಾದಾರರ ಏಜೆನ್ಸಿಗಳು ಸಾಗರ ವಿಮಾ ವ್ಯವಹಾರವನ್ನು ಪ್ರಾರಂಭಿಸುವುದರೊಂದಿಗೆ ಭಾರತದಲ್ಲಿ ಸುಮಾರು **1800** ರ ಆರಂಭದಲ್ಲಿ ಆಧುನಿಕ ವಿಮೆಯು ಪ್ರಾರಂಭವಾಯಿತು.

| | |
|---|---|
| ಓರಿಯಂಟಲ್ ಲೈಫ್ ಇನ್ಶ್ಯುರೆನ್ಸ್ ಕಂ. ಲಿಮಿಟೆಡ್ | ಇಂಗ್ಲಿಷ್ ಕಂಪನಿಯಾಗಿದ್ದು ಭಾರತದಲ್ಲಿ ಸ್ಥಾಪಿಸಲಾದ ಮೊದಲ ಜೀವ ವಿಮಾ ಕಂಪನಿಯಾಗಿದೆ |
| ಟ್ರೈಟಾನ್ ಇನ್ಶ್ಯುರೆನ್ಸ್ ಕಂ. ಲಿ. | ಭಾರತದಲ್ಲಿ ಸ್ಥಾಪಿತವಾದ ಮೊದಲ ಜೀವೇತರ ವಿಮಾಗಾರರು |
| ಬಾಂಬೆ ಮ್ಯೂಚುಯಲ್ ಅಶ್ಯೂರೆನ್ಸ್ ಸೊಸೈಟಿ ಲಿ. | ಮೊದಲ ಭಾರತೀಯ ವಿಮಾ ಕಂಪನಿ. ಇದು ಮುಂಬೈನಲ್ಲಿ 1870 ರಲ್ಲಿ ಸ್ಥಾಪಿತವಾಯಿತು |
| ನ್ಯಾಶನಲ್ ಇನ್ಶ್ಯೂರೆನ್ಸ್ ಕಂಪನಿ ಲಿ. | ಭಾರತದ ಅತ್ಯಂತ ಹಳೆಯ ವಿಮಾ ಕಂಪನಿ. ಇದನ್ನು 1906 ರಲ್ಲಿ ಸ್ಥಾಪಿಸಲಾಯಿತು |

ಶತಮಾನದ ತಿರುವಿನಲ್ಲಿ ಸ್ವದೇಶಿ ಆಂದೋಲನದ ಪರಿಣಾಮವಾಗಿ ಇತರ ಅನೇಕ ಭಾರತೀಯ ಕಂಪನಿಗಳನ್ನು ಸ್ಥಾಪಿಸಲಾಯಿತು.

**ಪ್ರಮುಖ**

**a)** ವಿಮಾ ಕಾಯಿದೆ **1938** ಭಾರತದಲ್ಲಿ ವಿಮಾ ಕಂಪನಿಗಳ ನಡವಳಿಕೆಯನ್ನು ನಿಯಂತ್ರಿಸುವ ಮೊದಲ ಶಾಸನವಾಗಿದೆ. ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಈ ಕಾಯಿದೆಯು ಜಾರಿಯಲ್ಲಿದೆ.

**b)** ಜೀವ ವಿಮಾ ವ್ಯವಹಾರವನ್ನು **1**, ಸೆಪ್ಟೆಂಬರ್ **1956** ರಂದು ರಾಷ್ಟ್ರೀಕರಣಗೊಳಿಸಲಾಯಿತು ಮತ್ತು ಭಾರತೀಯ ಜೀವ ವಿಮಾ ನಿಗಮ (ಎಲ್ಐಸಿ) ವನ್ನು ರಚಿಸಲಾಯಿತು. ಭಾರತದಲ್ಲಿ ಜೀವ ವಿಮಾ

---

ಜೆಟ್ಟಿಸನ್ / ಜೆಟ್ಟಿಸನಿಂಗ್ ಎಂಬ ಪದವು ಸಮುದ್ರದಲ್ಲಿರುವಾಗ ಹಡಗಿನ ತೂಕವನ್ನು ಕಡಿಮೆ ಮಾಡುವುದಕ್ಕಾಗಿ ಕೆಲವು ಸರಕುಗಳನ್ನು ಹೊರಗೆ ಎಸೆಯುವುದನ್ನು ಸೂಚಿಸುತ್ತದೆ.

ವ್ಯವಹಾರವನ್ನು ಮಾಡಲು ಎಲ್‌ಐಸಿ **1956** ರಿಂದ **1999** ರವರೆಗೆ, ವಿಶೇಷ ಹಕ್ಕುಗಳನ್ನು ಹೊಂದಿತ್ತು.

**c)** ಜೀವೇತರ ವಿಮಾ ವ್ಯವಹಾರವನ್ನು **1972** ರಲ್ಲಿ ರಾಷ್ಟ್ರೀಕರಣಗೊಳಿಸಲಾಯಿತು ಮತ್ತು ಜನರಲ್ ಇನ್ಶ್ಯುರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಜಿಐಸಿ) ಮತ್ತು ಅದರ ನಾಲ್ಕು ಅಂಗಸಂಸ್ಥೆಗಳನ್ನು ಸ್ಥಾಪಿಸಲಾಯಿತು.

**d) 1994** ರಲ್ಲಿ ಮಲ್ಹೋತ್ರಾ ಸಮಿತಿಯು ಸಲ್ಲಿಸಿದ ತನ್ನ ವರದಿಯಲ್ಲಿ ಸ್ಪರ್ಧೆಗಾಗಿ ಮಾರುಕಟ್ಟೆಯನ್ನು ತೆರೆಯಲು ಶಿಫಾರಸು ಮಾಡಿತು.

**e)** ಸನ್ **2000** ದ ಏಪ್ರಿಲ್ ನಲ್ಲಿ ವಿಮಾ ಉದ್ಯಮಕ್ಕಾಗಿ ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ(ಐಆರ್ ಡಿಎಐ)ವನ್ನು ಶಾಸನಬದ್ಧ ನಿಯಂತ್ರಕ ಸಂಸ್ಥೆಯನ್ನಾಗಿ ಸ್ಥಾಪಿಸಿದ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯಿದೆ, **1999** (ಐಆರ್ ಡಿಎಐ)ಯನ್ನು ಜಾರಿಗೊಳಿಸುವದರೊಂದಿಗೆ ವಿಮಾ ಮಾರುಕಟ್ಟೆಯನ್ನು ಮುಕ್ತಗೊಳಿಸಲಾಯಿತು.

**f) 2021** ರಲ್ಲಿನ ವಿಮಾ ಕಾಯಿದೆಯ ತಿದ್ದುಪಡಿಯು ವಿದೇಶಿ ಹೂಡಿಕೆದಾರರಿಗೆ ಭಾರತೀಯ ವಿಮಾ ಕಂಪನಿಯಲ್ಲಿ ಪೇಡ್ ಅಪ್ ಇಕ್ವಿಟಿ ಬಂಡವಾಳದ **74%** ವರೆಗೆ ಹೂಡಿಕೆಯನ್ನು ಹೊಂದಲು ಅವಕಾಶ ಮಾಡಿಕೊಟ್ಟಿದೆ. ಈಗ ವಿದೇಶಿ ವಿಮಾಗಾರರು ಮರುವಿಮೆಯನ್ನು ಮಾಡಲು ಭಾರತದಲ್ಲಿ ಶಾಖೆಗಳನ್ನು ಸ್ಥಾಪಿಸಬಹುದು.

**a. ವಿಮಾ ಉದ್ಯಮ ಇಂದು (30 ಸೆಪ್ಟೆಂಬರ್, 2021 ರಂತೆ)**

a) ಭಾರತದಲ್ಲಿ **24** ಜೀವ ವಿಮಾ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ, ಭಾರತದ ಜೀವ ವಿಮಾ ನಿಗಮ (ಎಲ್‌ಐಸಿ) ಸಾರ್ವಜನಿಕ ವಲಯದ ಕಂಪನಿ (ಪಿಎಸ್ ಯು)ಯಾಗಿದೆ ಮತ್ತು ಉಳಿದ **23** ಜೀವ ವಿಮಾ ಕಂಪನಿಗಳು ಖಾಸಗಿ ವಲಯದಲ್ಲಿವೆ.

b) **34** ಸಾಮಾನ್ಯ ವಿಮಾ ಕಂಪನಿಗಳಲ್ಲಿ **-** ನ್ಯಾಷನಲ್ ಇನ್ಶ್ಯುರೆನ್ಸ್ ಕಂ. ಲಿಮಿಟೆಡ್, ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ. ಲಿಮಿಟೆಡ್, ದಿ ಓರಿಯೆಂಟಲ್ ಇನ್ಶ್ಯೂರೆನ್ಸ್ ಕಂ. ಲಿಮಿಟೆಡ್ ಮತ್ತು ಯುನೈಟೆಡ್ ಇಂಡಿಯಾ ಇನ್ಶ್ಯುರೆನ್ಸ್ ಕಂ. ಲಿಮಿಟೆಡ್, ಈ 4, ಸಾಮಾನ್ಯ ವಿಮೆಯ ಎಲ್ಲ ಕ್ಷೇತ್ರಗಳಲ್ಲಿ ವ್ಯವಹರಿಸುವ ಪಿಎಸ್ ಯು ಕಂಪನಿಗಳಾಗಿವೆ. **26** ಖಾಸಗಿ ಕಂಪನಿಗಳು ಸಹ ಸಾಮಾನ್ಯ ವಿಮೆಯ ಎಲ್ಲ ಕ್ಷೇತ್ರಗಳೊಂದಿಗೆ ವ್ಯವಹರಿಸುತ್ತವೆ. **6** ಸಾಮಾನ್ಯ ವಿಮಾಗಾರರು ಆರೋಗ್ಯ ವಿಮೆಯಲ್ಲಿ ಮಾತ್ರ ವ್ಯವಹರಿಸುತ್ತಾರೆ. **2** ವಿಶೇಷ ವಿಮಾಗಾರರು - ಕೃಷಿ ವಿಮಾ ಕಂಪನಿ [ಎಐಸಿ] ಮತ್ತು ಎಕ್ಸ್‌ಪೋರ್ಟ್ ಕ್ರೆಡಿಟ್ ಆಂಡ್ ಗ್ಯಾರಂಟಿ ಕಾರ್ಪೊರೇಷನ್ [ಈಸಿಜಿಸಿ], ಎರಡೂ ಸಾರ್ವಜನಿಕ ವಲಯದ ಘಟಕಗಳಾಗಿ ಸ್ಥಾಪಿಸಲ್ಪಟ್ಟಿವೆ.

c) ಜನರಲ್ ಇನ್ಶ್ಯೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ [**GIC Re**] [ಜಿಐಸಿ ಆರ್ ಈ] ಒಂದು ಮರುವಿಮಾ ಕಂಪನಿಯಾಗಿದ್ದು **11** ವಿದೇಶಿ ಮರುವಿಮಾಗಾರರು ಶಾಖಾ ಕಚೇರಿಗಳ ಮೂಲಕ ಕಾರ್ಯನಿರ್ವಹಿಸುತ್ತಾರೆ.

d) ಭಾರತ ಸರ್ಕಾರದ ಅಂಚೆ ಇಲಾಖೆಯು (ಇಂಡಿಯಾ ಪೋಸ್ಟ್ ಎಂದು ಕರೆಯಲ್ಪಡುತ್ತದೆ), ಅಂಚೆ ಜೀವವಿಮೆ(ಪೋಸ್ಟಲ್ ಲೈಫ್ ಇನ್ಶ್ಯೂರೆನ್ಸ್) ಎಂದು ಕರೆಯಲ್ಪಡುವ ಜೀವ ವಿಮೆಯನ್ನು ಸಹ ವಹಿವಾಟು ಮಾಡುತ್ತದೆ. ಭಾರತದ ಅಂಚೆ ವಿಮಾ ನಿಯಂತ್ರಕರ ವ್ಯಾಪ್ತಿಯಿಂದ ಮುಕ್ತವಾಗಿದೆ.

**ನಿಮ್ಮನ್ನು ಪರೀಕ್ಷಿಸಿ 1**

ಭಾರತದಲ್ಲಿಯ ವಿಮಾ ಉದ್ಯಮಕ್ಕೆ ಈ ಕೆಳಗಿನವುಗಳಲ್ಲಿ ಯಾವುದು ನಿಯಂತ್ರಕ ಸಂಸ್ಥೆಯಾಗಿದೆ**?**

I. ಭಾರತೀಯ ವಿಮಾ ಪ್ರಾಧಿಕಾರ

II. ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ

III. ಭಾರತೀಯ ಜೀವ ವಿಮಾ ನಿಗಮ

IV. ಭಾರತೀಯ ಸಾಮಾನ್ಯ ವಿಮಾ ನಿಗಮ

**ವಿಮೆಯು ಹೇಗೆ ಕೆಲಸ ಮಾಡುತ್ತದೆ**

ಆಸ್ತಿಯ ಮಾಲೀಕತ್ವದ ತತ್ವದ ಮೇಲೆ ಆಧುನಿಕ ವಾಣಿಜ್ಯವನ್ನು ಸ್ಥಾಪಿಸಲಾಯಿತು. ಆಸ್ತಿಯು ಮೌಲ್ಯವನ್ನು ಕಳೆದುಕೊಂಡಾಗ (ನಷ್ಟ ಅಥವಾ ವಿನಾಶದಿಂದ), ಆಸ್ತಿಯ ಮಾಲೀಕರು ಆರ್ಥಿಕ ನಷ್ಟವನ್ನು ಅನುಭವಿಸುತ್ತಾರೆ. ಈ ನಷ್ಟವನ್ನು ಅದೇ ತೆರದ ಆಸ್ತಿಯ ಅನೇಕ ಮಾಲೀಕರ ಸಣ್ಣ ಕೊಡುಗೆಗಳಿಂದ ಮಾಡಲಾದ ಸಾಮಾನ್ಯ ನಿಧಿಯಿಂದ ಸರಿದೂಗಿಸಬಹುದು. ನಷ್ಟವನ್ನುಂಟು ಮಾಡುವ ಘಟನೆಯ ಅವಕಾಶ ಮತ್ತು ಪರಿಣಾಮಗಳನ್ನು ವರ್ಗಾಯಿಸುವ ಈ ಪ್ರಕ್ರಿಯೆಯೇ ವಿಮೆಯಾಗಿದೆ.

ಅಪಾಯಗಳನ್ನು ಒಟ್ಟುಗೂಡಿಸುವ ಈ ಕಾರ್ಯವಿಧಾನವು ವಾಣಿಜ್ಯ ಆಸ್ತಿಯ ನಷ್ಟ / ನಾಶವಿಲ್ಲದುದರಿಂದ ಸಾವು ಮತ್ತು ಅಂಗವೈಕಲ್ಯದ ಸಂದರ್ಭದಲ್ಲಿ ವಿಭಿನ್ನವಾಗಿ ಕಾರ್ಯನಿರ್ವಹಿಸುತ್ತದೆ.

**ವ್ಯಾಖ್ಯಾನ**

ಹೀಗೆ ಒಂದೇ ರೀತಿಯ ಅನಿಶ್ಚಿತ ಘಟನೆಗಳು/ಸಂದರ್ಭಗಳಿಗೆ ಒಡ್ಡಿಕೊಂಡ ಕೆಲವರ ನಷ್ಟವನ್ನು ಹಂಚಿಕೊಳ್ಳುವ ಪ್ರಕ್ರಿಯೆಯನ್ನು ವಿಮೆ ಎಂದು ಪರಿಗಣಿಸಬಹುದು.

**ಚಿತ್ರ 2: ವಿಮೆ ಹೇಗೆ ಕೆಲಸ ಮಾಡುತ್ತದೆ**




ಆದಾಗ್ಯೂ ಕೆಲವು ಪ್ರಶ್ನೆಗಳಿಗೆ ಉತ್ತರಿಸಬೇಕಾದ ಅವಶ್ಯಕತೆಯಿದೆ.

i. ಜನರು ತಾವು ಕಷ್ಟಪಟ್ಟು ದುಡಿದ ಹಣವನ್ನು ಇಂತಹ ಸಾಮಾನ್ಯ ನಿಧಿಯನ್ನು ರಚಿಸಲಿಕ್ಕಾಗಿ ಹಂಚಿಕೊಳ್ಳಲು ಒಪ್ಪುತ್ತಾರೆಯೇ?

ii. ತಮ್ಮ ಕೊಡುಗೆಗಳನ್ನು ನಿಜವಾಗಿ ಅಪೇಕ್ಷಿತ ಉದ್ದೇಶಕ್ಕಾಗಿಯೇ ಬಳಸಲಾಗುತ್ತಿದೆ ಎಂದು ಅವರು ಹೇಗೆ ನಂಬಬಹುದು?

iii. ತಾವು ಅತಿ ಹೆಚ್ಚು ಅಥವಾ ಅತಿ ಕಡಿಮೆ ಪಾವತಿಸುತ್ತಿರುವುದಾಗಿ ಅವರಿಗೆ ಹೇಗೆ ತಿಳಿಯುತ್ತದೆ?

iv. ಈ ಹಣವನ್ನು ನಿರ್ವಹಿಸುವ ಮತ್ತು ನಷ್ಟ ಅನುಭವಿಸುವವರಿಗೆ ಪಾವತಿಸುವ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತಾರೆ?

ವಿಮಾಗಾರರ ಅಗತ್ಯವು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವಾಗಿ ಬರುತ್ತದೆ. ವಿಮಾಗಾರರು ಅಪಾಯವನ್ನು ನಿರ್ಣಯಿಸುತ್ತಾರೆ, ವೈಯಕ್ತಿಕ ಕೊಡುಗೆ (ಪ್ರೀಮಿಯಂ ಎಂದು ಕರೆಯಲ್ಪಡುತ್ತದೆ)ಗಳನ್ನು ನಿರ್ಧರಿಸುತ್ತಾರೆ ಮತ್ತು ಸಂಗ್ರಹಿಸುತ್ತಾರೆ, ಅಪಾಯಗಳು ಮತ್ತು ಕಂತುಗಳನ್ನು ಸಂಗ್ರಹಿಸುತ್ತಾರೆ ಮತ್ತು ನಷ್ಟವನ್ನು ಅನುಭವಿಸುವವರಿಗೆ ಪಾವತಿಸುವ ವ್ಯವಸ್ಥೆಯನ್ನು ಮಾಡುತ್ತಾರೆ. ವಿಮಾಗಾರರು ವ್ಯಕ್ತಿಗಳು ಮತ್ತು ಸಮುದಾಯದ ನಂಬಿಕೆಯನ್ನು ಸಹ ಗೆಲ್ಲಬೇಕು.

**1. ವಿಮೆಯು ಮೌಲ್ಯದ ಕುರಿತಾಗಿದೆ**

a) ಮೊದಲನೆಯದಾಗಿ, ಆರ್ಥಿಕ ಮೌಲ್ಯವನ್ನು ಹೊಂದಿರುವ ಒಂದು ಆಸ್ತಿಯಿರಬೇಕು. ಆಸ್ತಿಯು ಈ ಕೆಳಗಿನ ಪ್ರಕಾರದಲ್ಲಿರಬಹುದು:

i. **ಭೌತಿಕ** (ಕಾರು ಅಥವಾ ಕಟ್ಟಡ) ಅಥವಾ

ii. **ಭೌತಿಕವಲ್ಲದ** (ಖ್ಯಾತಿ, ಸದ್ಭಾವನೆ, ಯಾರಿಗಾದರೂ ಪಾವತಿಸುವ ಹೊಣೆಗಾರಿಕೆ) ಅಥವಾ

iii. **ವೈಯಕ್ತಿಕ** (ಕಣ್ಣುಗಳು, ಅಂಗಗಳು, ದೇಹ ಮತ್ತು ದೈಹಿಕ ಸಾಮರ್ಥ್ಯಗಳು).

b) ಒಂದು ನಿರ್ದಿಷ್ಟ ಘಟನೆ ಸಂಭವಿಸಿದಲ್ಲಿ ಸ್ವತ್ತು ತನ್ನ ಮೌಲ್ಯವನ್ನು ಕಳೆದುಕೊಳ್ಳಬಹುದು. ಈ ನಷ್ಟದ ಅವಕಾಶವನ್ನು **ಅಪಾಯ**ವೆಂದು ಕರೆಯಲಾಗುತ್ತದೆ. ಅಪಾಯದ ಘಟನೆಯ ಕಾರಣವನ್ನು **ಗಂಡಾಂತರ**ವೆಂದು ಕರೆಯಲಾಗುತ್ತದೆ.

c) **ಸಂಚಯನ**(ಪೂಲಿಂಗ್)ವೆಂದು ಕರೆಯಲ್ಪಡುವ ಒಂದು ತತ್ವವಿದೆ. ಇದು ವಿವಿಧ ವ್ಯಕ್ತಿಗಳಿಂದ ಹಲವಾರು ವೈಯಕ್ತಿಕ ಕೊಡುಗೆ (ಪ್ರೀಮಿಯಂಗಳು ಎಂದು ಕರೆಯಲಾಗುತ್ತದೆ) ಗಳನ್ನು ಸಂಗ್ರಹಿಸುವುದನ್ನು ಒಳಗೊಂಡಿರುತ್ತದೆ. ಈ ವ್ಯಕ್ತಿಗಳು ಒಂದೇ ರೀತಿಯ ಆಸ್ತಿಗಳನ್ನು ಹೊಂದಿದ್ದು, ಅವುಗಳು ಒಂದೇ ರೀತಿಯ ಅಪಾಯಗಳಿಗೆ ಒಡ್ಡಿಕೊಂಡಿರುತ್ತವೆ. ಅನೇಕ ಸಂದರ್ಭಗಳಲ್ಲಿ ಅವರ ಸ್ವತ್ತುಗಳನ್ನು 'ಅಪಾಯ' ಎಂದೂ ಕರೆಯಲಾಗುತ್ತದೆ.

d) ಈ ನಿಧಿಯ ಸಂಚಯವನ್ನು **ಗಂಡಾಂತರ**ದಿಂದ ಉಂಟಾದ ನಷ್ಟವನ್ನು ಅನುಭವಿಸುವ ಕೆಲವರ ನಷ್ಟವನ್ನು ಸರಿದೂಗಿಸಲು ಬಳಸಲಾಗುತ್ತದೆ.

e) **ವಿಮಾಗಾರ** (ವಿಮಾ ಕಂಪನಿ) ರೆಂದು ಕರೆಯಲ್ಪಡುವ ಸಂಸ್ಥೆಯ ಮೂಲಕ ಹಣವನ್ನು ಸಂಗ್ರಹಿಸುವ ಮತ್ತು ದುರದೃಷ್ಟಕರರಾದ ಕೆಲವರಿಗೆ ಪರಿಹಾರ ನೀಡುವ ಈ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ.

f) ವಿಮಾಗಾರರು ಈ ಸಂಚಯನ(ಪೂಲಿಂಗ್)ದ ವ್ಯವಸ್ಥೆಯಲ್ಲಿ ಭಾಗವಹಿಸಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ವಿಮಾ **ಒಪ್ಪಂದ**ವನ್ನು ಪ್ರವೇಶಿಸುತ್ತಾರೆ. ಭಾಗವಹಿಸುವ ವ್ಯಕ್ತಿಗಳನ್ನು ವಿಮಾದಾರರು ಎಂದು ಕರೆಯಲಾಗುತ್ತದೆ.

**2. ವಿಮೆಯು ಅಪಾಯದ ಹೊರೆಯನ್ನು ಕಡಿಮೆ ಮಾಡುತ್ತದೆ**

ಒಂದು ನಿರ್ದಿಷ್ಟ ನಷ್ಟದ ಪರಿಸ್ಥಿತಿ/ಘಟನೆಗೆ ಒಡ್ಡಿಕೊಳ್ಳುವುದರಿಂದ ಭರಿಸಬೇಕಾದ ವೆಚ್ಚಗಳು, ನಷ್ಟಗಳು ಮತ್ತು ಅಂಗವೈಕಲ್ಯಗಳನ್ನು ಅಪಾಯದ ಹೊರೆಯು ಸೂಚಿಸುತ್ತದೆ.

**ಚಿತ್ರ 3: ಓರ್ವರು ಅನುಭವಿಸುವ ಅಪಾಯದ ಹೊರೆಗಳು**




ಒಬ್ಬನು ಅನುಭವಿಸುವ ಎರಡು ವಿಧದ ಅಪಾಯದ ಹೊರೆಗಳಿವೆ - **ಪ್ರಾಥಮಿಕ ಮತ್ತು ದ್ವಿತೀಯಕ**.

**a) ಅಪಾಯದ ಪ್ರಾಥಮಿಕ ಹೊರೆ**

**ಅಪಾಯದ ಪ್ರಾಥಮಿಕ ಹೊರೆ**ಯು ಶುದ್ಧ ಅಪಾಯದ ಘಟನೆಗಳ ಪರಿಣಾಮವಾಗಿ ಕುಟುಂಬಗಳು (ಮತ್ತು ವ್ಯಾಪಾರ ಘಟಕಗಳು) ಅನುಭವಿಸುವ ನಷ್ಟಗಳನ್ನು ಒಳಗೊಂಡಿರುತ್ತದೆ. ಈ ನಷ್ಟಗಳು ಸಾಮಾನ್ಯವಾಗಿ ನೇರ ಮತ್ತು ಅಳೆಯಬಹುದಾದವು; ಮತ್ತು ವಿಮೆಯಿಂದ ಸುಲಭವಾಗಿ ಸರಿದೂಗಿಸಬಹುದು.

| **ಉದಾಹರಣೆ** |
| --- |

ಒಂದು ಕಾರ್ಖಾನೆಯು ಬೆಂಕಿಯಿಂದ ನಾಶವಾದಾಗ, ಹಾನಿಗೊಳಗಾದ ಅಥವಾ ನಾಶವಾದ ಸರಕುಗಳ ನಿಜವಾದ ಮೌಲ್ಯವನ್ನು ಅಂದಾಜು ಮಾಡಬಹುದು ಮತ್ತು ನಷ್ಟವನ್ನು ಅನುಭವಿಸಿದ ಕಾರ್ಖಾನೆಯ ಮಾಲೀಕರಿಗೆ ಪರಿಹಾರವನ್ನು ಪಾವತಿಸಬಹುದು.

ಅದೇ ರೀತಿಯಾಗಿ, ಒಬ್ಬ ವ್ಯಕ್ತಿಯು ಹೃದಯದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೆ, ಅದರ ವೈದ್ಯಕೀಯ ವೆಚ್ಚವನ್ನು ತಿಳಿದುಕೊಂಡು ಪರಿಹಾರವನ್ನು ನೀಡಲಾಗುತ್ತದೆ. ಜೊತೆಗೆ ಕೆಲವು ಪರೋಕ್ಷ ನಷ್ಟಗಳೂ ಆಗಿರಬಹುದು.

| **ಉದಾಹರಣೆ** |
| --- |

ಬೆಂಕಿಯು ವ್ಯಾಪಾರದ ಕಾರ್ಯಾಚರಣೆಗಳಿಗೆ ಅಡ್ಡಿಪಡಿಸಬಹುದು ಮತ್ತು ಲಾಭದ ನಷ್ಟಕ್ಕೆ ಕಾರಣವಾಗಬಹುದು, ಅಂಥ ನಷ್ಟವನ್ನು ಅಂದಾಜು ಮಾಡಬಹುದು ಮತ್ತು ಅದನ್ನು ಅನುಭವಿಸುವವರಿಗೆ ಪರಿಹಾರವನ್ನು ಪಾವತಿಸಬಹುದು.

ಪಾದಚಾರಿಗಳಿಗೆ ಸ್ಕೂಟರ್ ಸವಾರ ಡಿಕ್ಕಿ ಹೊಡೆದಾಗ, ನ್ಯಾಯಾಲಯವು ನಿರ್ಧರಿಸುವ ಪರಿಹಾರವನ್ನು ಬಲಿಯಾದವರಿಗೆ ಪಾವತಿಸಲು ಜವಾಬ್ದಾರರಾಗಿರುತ್ತಾರೆ.

**b) ಅಪಾಯದ ದ್ವಿತೀಯಕ ಹೊರೆ**

ಯಾವುದೇ ಘಟನೆ ಸಂಭವಿಸದಿದ್ದರೂ ಮತ್ತು ಯಾವುದೇ ನಷ್ಟವಾಗದಿದ್ದರೂ, ಅಪಾಯಕ್ಕೆ ಒಡ್ಡಿಕೊಳ್ಳುವ ಜನರು ಸ್ವಲ್ಪ ಹೊರೆಯನ್ನು ಹೊರುತ್ತಾರೆ. ಅಂದರೆ, ಪ್ರಾಥಮಿಕ ಹೊರೆಯ ಹೊರತಾಗಿ, ಅಪಾಯದ **ದ್ವಿತೀಯಕ** ಹೊರೆಯನ್ನು ಸಹ ಹೊರುತ್ತಾರೆ.

**ಅಪಾಯದ ದ್ವಿತೀಯಕ ಹೊರೆ**ಯು ಹೇಳಲಾದ ಘಟನೆಯು ಸಂಭವಿಸದಿದ್ದರೂ ಸಹ ನಷ್ಟದ ಪರಿಸ್ಥಿತಿಗೆ ಒಡ್ಡಿಕೊಂಡಿರುವ ಅಂಶದಿಂದ ಭರಿಸಬೇಕಾದ ವೆಚ್ಚಗಳು ಮತ್ತು ಒತ್ತಡಗಳನ್ನು ಒಳಗೊಂಡಿರುತ್ತದೆ.

ಈ ಕೆಲವು ಹೊರೆಗಳನ್ನು ನಾವು ಅರ್ಥಮಾಡಿಕೊಳ್ಳೋಣ:

i. ಮೊದಲನೆಯದಾಗಿ **ದೈಹಿಕ ಮತ್ತು ಮಾನಸಿಕ ಒತ್ತಡ ಭಯ ಮತ್ತು ಆತಂಕ**ದಿಂದ ಉಂಟಾಗುತ್ತದೆ. ಇದು ಒತ್ತಡವನ್ನು ಉಂಟುಮಾಡುತ್ತದೆ ಮತ್ತು ವ್ಯಕ್ತಿಯ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ii. ಎರಡನೆಯದಾಗಿ, **ನಷ್ಟ ಸಂಭವಿಸುವ ಅಥವಾ ಇಲ್ಲ ಎಂಬ ಬಗ್ಗೆ ಅನಿಶ್ಚಿತತೆಯಿರುವಾಗ,** ಅಂತಹ ಘಟನೆಯನ್ನು ಪೂರೈಸಲು ಮೀಸಲು ನಿಧಿಯನ್ನು ಇಟ್ಟುಕೊಳ್ಳುವುದು ವಿವೇಕಯುತವಾಗಿದೆ. ಅಂತಹ ಹಣವನ್ನು ದ್ರವ ರೂಪದಲ್ಲಿ ಇರಿಸಲ್ಪಡಬಹುದು ಮತ್ತು ಕಡಿಮೆ ಆದಾಯವನ್ನು ನೀಡಬಹುದು.

ವಿಮಾಗಾರರಿಗೆ ಅಪಾಯವನ್ನು ವರ್ಗಾಯಿಸುವ ಮೂಲಕ, ಮನಸ್ಸಿನ ಶಾಂತಿಯನ್ನು ಆನಂದಿಸಲು ಮತ್ತು ಹಣವನ್ನು ಹೆಚ್ಚು ಪರಿಣಾಮಕಾರಿಯಾಗಿ ಹೂಡಿಕೆ ಮಾಡಲು ಸಾಧ್ಯವಾಗುತ್ತದೆ. ಈ ಕಾರಣಗಳಿಂದಾಗಿ ನಿಃಸ್ಸಂದೇಹವಾಗಿ ವಿಮೆಯ ಅಗತ್ಯವಿದೆ.

ಭಾರತದಲ್ಲಿ, ವಾಹನವನ್ನು ಹೊಂದಿರುವ ಪ್ರತಿಯೊಬ್ಬರು ಸಾರ್ವಜನಿಕ ರಸ್ತೆಯಲ್ಲಿ ವಾಹನವನ್ನು ಚಲಾಯಿಸ ಬಯಸಿದರೆ ವಿಮೆ ಕಡ್ಡಾಯವಾಗಿರುವುದರಿಂದ ಮೂರನೇ ವ್ಯಕ್ತಿಯ ವಿಮೆಯನ್ನು ಖರೀದಿಸಬೇಕು. ಅದೇ ಸಮಯದಲ್ಲಿ ಕಡ್ಡಾಯವಲ್ಲದಿದ್ದರೂ ಸ್ವಂತ ಕಾರಿಗೆ ಆಗಬಹುದಾದ ಹಾನಿಯ ನಷ್ಟದ ಸಾಧ್ಯತೆಯನ್ನು ಸರಿದೂಗಿಸಲು ವಿಮೆಯು ವಿವೇಕಯುತವಾಗಿರುತ್ತದೆ. ಮಾಲೀಕರು-ಚಾಲಕರಿಗೆ ಸಹ ವೈಯಕ್ತಿಕ ಅಪಘಾತದ ಕವರ್ ಹೊಂದಿರುವುದು ಸಹ ಕಡ್ಡಾಯವಾಗಿದೆ.

**ನಿಮ್ಮನ್ನು ಪರೀಕ್ಷಿಸಿ**

ಈ ಕೆಳಗಿನವುಗಳಲ್ಲಿ ಯಾವುದು ಅಪಾಯದ ದ್ವಿತೀಯಕ ಹೊರೆಯಾಗಿದೆ?

I. ವ್ಯಾಪಾರ ಅಡಚಣೆ ವೆಚ್ಚ

II. ಹಾನಿಗೊಳಗಾದ ಸರಕುಗಳ ಬೆಲೆ

III. ಭವಿಷ್ಯದಲ್ಲಿಯ ಸಂಭಾವ್ಯ ನಷ್ಟಗಳನ್ನು ಪೂರೈಸಲು ಪೂರ್ವಸಿದ್ಧತೆಯಾಗಿ ಮೀಸಲುಗಳನ್ನು ಹೊಂದಿಸುವುದು

IV. ಹೃದಯಾಘಾತದ ಪರಿಣಾಮವಾಗಿ ಆಸ್ಪತ್ರೆಯ ವೆಚ್ಚಗಳು

---

**B. ಅಪಾಯ ಸಂಚಯನದ ತತ್ವ**

ವಿಮಾ ಕಂಪನಿಗಳು ವಿವಿಧ ಘಟಕಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳುತ್ತವೆ -ಅವು ವ್ಯಕ್ತಿಗಳು ಅಥವಾ ಕಾರ್ಪೊರೇಟ್ ಆಗಿರಬಹುದಾದ ಪಾಲಿಸಿದಾರರು. ಪಾಲಿಸಿದಾರರಿಗೆ ಅವರು ಪಾವತಿಸುವ ಪ್ರಯೋಜನಗಳು ಒಪ್ಪಂದದ ಬಾಧ್ಯತೆಗಳಾಗಿವೆ. ವಿಮಾಗಾರರು ಅಪಾಯಗಳನ್ನು ವಹಿಸಿಕೊಳ್ಳಲು ಮತ್ತು ನಷ್ಟಗಳು ಸಂಭವಿಸಿದಾಗ ಅವುಗಳನ್ನು ಸರಿದೂಗಿಸಲು ಆರ್ಥಿಕವಾಗಿ ಸಮರ್ಥರಾಗಿದ್ದರೆ ಮಾತ್ರ ವಿಮಾ ಒಪ್ಪಂದಗಳು ಅರ್ಥಪೂರ್ಣವಾಗಿರುತ್ತವೆ. ರಚನೆಯು ಪರಸ್ಪರ ಅಥವಾ ಸಂಚಯನ(ಪೂಲಿಂಗ್)ದ ತತ್ವದ ಅನ್ವಯದಿಂದ ಉದ್ಭವಿಸುತ್ತದೆ.

ಹಣಕಾಸಿನ ಮಾರುಕಟ್ಟೆಗಳಲ್ಲಿ ಅಪಾಯವನ್ನು ಕಡಿಮೆ ಮಾಡಲು **ಪರಸ್ಪರತೆ** ಮತ್ತು ವೈವಿಧ್ಯೀಕರಣ - ಇವುಗಳೆರಡು ಪ್ರಮುಖ ಮಾರ್ಗಗಳಾಗಿವೆ. ಅವು ಮೂಲಭೂತವಾಗಿ ವಿಭಿನ್ನವಾಗಿವೆ.

| ವೈವಿಧ್ಯೀಕರಣ | ಪರಸ್ಪರತೆ |
|---|---|
| ಹಣವನ್ನು ಇಲ್ಲಿ ವಿವಿಧ ಸ್ವತ್ತುಗಳಲ್ಲಿ ಹರಡಲಾಗುತ್ತದೆ (ಮೊಟ್ಟೆಗಳನ್ನು ವಿವಿಧ ಬುಟ್ಟಿಗಳಲ್ಲಿ ಇರಿಸಲಾಗುತ್ತದೆ). | ವಿವಿಧ ವ್ಯಕ್ತಿಗಳ ಹಣವನ್ನು ಪರಸ್ಪರ ಅಥವಾ ಸಂಚಯನ(ಪೂಲಿಂಗ್)ದಡಿಯಲ್ಲಿ, ಸಂಯೋಜಿಸಲಾಗುತ್ತದೆ (ಎಲ್ಲ ಮೊಟ್ಟೆಗಳನ್ನು ಒಂದು ಬುಟ್ಟಿಯಲ್ಲಿ ಇರಿಸಲಾಗುತ್ತದೆ). |
| ಒಂದು ಮೂಲದಿಂದ ಅನೇಕ ಸ್ಥಳಗಳಿಗೆ ನಿಧಿಗಳು ಹರಿಯುತ್ತವೆ. | ನಿಧಿಗಳು ಹಲವು ಮೂಲಗಳಿಂದ ಒಂದು ಸ್ಥಳಕ್ಕೆ ಹರಿಯುತ್ತವೆ. |

**ಚಿತ್ರ 4: ಪರಸ್ಪರತೆ - ಪರಸ್ಪರತೆ (ಹಲವು ಮೂಲಗಳಿಂದ ನಿಧಿಗಳು ಒಂದು ಸ್ಥಳಕ್ಕೆ ಹರಿಯುತ್ತವೆ)**




ವಿಮಾ ಒಪ್ಪಂದಗಳಿಗೆ ಅವುಗಳ ಶಕ್ತಿ ಮತ್ತು ಅನನ್ಯತೆಯನ್ನು ಪರಸ್ಪರತೆಯ ತತ್ವವು ನೀಡುತ್ತದೆ. ಒಂದು ಸಣ್ಣ ಕೊಡುಗೆಯನ್ನು (ಪ್ರೀಮಿಯಂ) ಪಾವತಿಸುವ ಮೂಲಕ, ವಿಮಾದಾರರು ತಕ್ಷಣವೇ ಅವನಿಗೆ/ಆಕೆಗೆ ವಿಮೆ ಮಾಡಿದ ಅಪಾಯದ ಕಾರಣದಿಂದ ಉಂಟಾಗುವ ನಷ್ಟದ ಸಂದರ್ಭದಲ್ಲಿ ಲಭ್ಯವಾಗುವ ದೊಡ್ಡ ಪ್ರಮಾಣದ ನಿಧಿಯನ್ನು ರಚಿಸುತ್ತಾರೆ. ಹಣದ ಈ ಸಂಭಾವ್ಯ ನಿಧಿಯು ವಿಮೆಯನ್ನು ಅಸಾಮಾನನ್ಯವನ್ನಾಗಿಸುತ್ತದೆ ಮತ್ತು ಎಲ್ಲ ಹಣಕಾಸು ಉತ್ಪನ್ನಗಳಲ್ಲಿ ಯಾವುದೇ ಬದಲಿ ಶಕ್ಯವಿಲ್ಲದಂತೆ ಮಾಡುತ್ತದೆ.

## C. ಅಪಾಯ ನಿರ್ವಹಣೆಯ ತಂತ್ರಗಳು

ಎಲ್ಲ ರೀತಿಯ ಅಪಾಯದ ಸಂದರ್ಭಗಳಿಗೆ ವಿಮೆಯು ಸರಿಯಾದ ಪರಿಹಾರವೇ ಎಂದು ಸಹ ಕೇಳಬಹುದು. ಅದಕ್ಕೆ ಉತ್ತರ 'ಅಲ್ಲ'.

ವಿಮೆಯು ವ್ಯಕ್ತಿಗಳು ತಮ್ಮ ಅಪಾಯಗಳನ್ನು ನಿರ್ವಹಿಸಲು ಪ್ರಯತ್ನಿಸುವಲ್ಲಿಯ ಕೇವಲ ಒಂದು ವಿಧಾನವಾಗಿದೆ. ಇದರಲ್ಲಿ ಅವರು ಎದುರಿಸುತ್ತಿರುವ ಅಪಾಯಗಳನ್ನು ವಿಮಾ ಕಂಪನಿಗೆ ವರ್ಗಾಯಿಸುತ್ತಾರೆ. ಆದಾಗ್ಯೂ ಅಪಾಯಗಳನ್ನು ಎದುರಿಸಲು ಇತರ ವಿಧಾನಗಳಿವೆ, ಅವುಗಳನ್ನು ಈ ಕೆಳಗೆ ವಿವರಿಸಲಾಗಿದೆ:

### 1. ಅಪಾಯ ತಪ್ಪಿಸುವಿಕೆ

ನಷ್ಟವುಂಟಾಗುವ ಪರಿಸ್ಥಿತಿಯನ್ನು ತಪ್ಪಿಸುವ ಮೂಲಕ ಅಪಾಯವನ್ನು ಕಡಿಮೆ ಮಾಡುವುದನ್ನು ಅಪಾಯ ತಪ್ಪಿಸುವಿಕೆ ಎಂದು ಕರೆಯಲಾಗುತ್ತದೆ. ಹೀಗೆ ಅಪಾಯಕ್ಕೆ ಕಾರಣವಾಗಬಹುದಾದ/ಒಡ್ಡಿಕೊಂಡಿರಬಹುದಾದ ಚಟುವಟಿಕೆಗಳು ಅಥವಾ ಸಂದರ್ಭಗಳನ್ನು ತಪ್ಪಿಸಲು ಪ್ರಯತ್ನಿಸಬಹುದು ಅಥವಾ ಆಸ್ತಿ ಅಥವಾ ವ್ಯಕ್ತಿಗಳೊಂದಿಗೆ ವ್ಯವಹರಿಸುವುದನ್ನು ತಪ್ಪಿಸಬಹುದು.

| **ಉದಾಹರಣೆ** |
|---|

i. ಉತ್ಪಾದನೆಯ ಗುತ್ತಿಗೆಯನ್ನು ಬೇರೆಯವರಿಗೆ ನೀಡುವ ಮೂಲಕ ಕೆಲವು ಉತ್ಪಾದನಾ ಅಪಾಯಗಳನ್ನು ತಪ್ಪಿಸಬಹುದು.

ii. ಅಪಘಾತ ಸಂಭವಿಸಬಹುದೆಂಬ ಭಯದಿಂದ ಮನೆಯಿಂದ ಹೊರಗೆ ಹೋಗದಿರಬಹುದು ಅಥವಾ ವಿದೇಶದಲ್ಲಿದ್ದಾಗ ಅನಾರೋಗ್ಯಕ್ಕೆ ಒಳಗಾಗುವ ಭಯದಿಂದ ಪ್ರಯಾಣಿಸುವುದನ್ನೇ ಬಿಡಬಹುದು.

ಅಪಾಯ ತಪ್ಪಿಸುವಿಕೆಯನ್ನು ಅಪಾಯ ನಿರ್ವಹಣೆಯ ನಕಾರಾತ್ಮಕ ಮಾರ್ಗವೆಂದು ಪರಿಗಣಿಸಲಾಗುತ್ತದೆ. ವ್ಯಕ್ತಿಗಳು ಮತ್ತು ಸಮಾಜಗಳು ತಮ್ಮ ಪ್ರಗತಿಗಾಗಿ ಚಟುವಟಿಕೆಗಳನ್ನು ಮಾಡಲು ಕೆಲವು ಅಪಾಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತಹ ಅಪಾಯವನ್ನು ತೆಗೆದುಕೊಳ್ಳುವ ಚಟುವಟಿಕೆಗಳನ್ನು ತಪ್ಪಿಸುವುದು ಅಂತಹ ಚಟುವಟಿಕೆಗಳಿಂದಾಗುವ ಪ್ರಯೋಜನಗಳನ್ನು ಕಳೆದುಕೊಳ್ಳಲು ಕಾರಣವಾಗುತ್ತದೆ.

### 2. ಅಪಾಯದ ಧಾರಣೆ

ಓರ್ವರು ಅಪಾಯದ ಪರಿಣಾಮವನ್ನು ನಿರ್ವಹಿಸಲು ಪ್ರಯತ್ನಿಸುತ್ತಾರೆ ಮತ್ತು ಅಪಾಯವನ್ನು ಮತ್ತು ಅದರ ಪರಿಣಾಮಗಳನ್ನು ತಾವೇ ಭರಿಸಲು ನಿರ್ಧರಿಸುತ್ತಾರೆ. ಇದನ್ನು ಸ್ವಯಂ ವಿಮೆ ಎಂದು ಕರೆಯಲಾಗುತ್ತದೆ.

| **ಉದಾಹರಣೆ** |
|---|

ಒಂದು ನಿರ್ದಿಷ್ಟ ಮಿತಿಯವರೆಗೆ ಸಣ್ಣ ನಷ್ಟವನ್ನು ಭರಿಸುವ ಸಾಮರ್ಥ್ಯದ ಅನುಭವದ ಆಧಾರದ ಮೇಲೆ, ಅಪಾಯವನ್ನು ತನ್ನೊಂದಿಗೆ ಉಳಿಸಿಕೊಳ್ಳಲು ವ್ಯಾಪಾರ ಸಂಸ್ಥೆಯು ನಿರ್ಧರಿಸಬಹುದು.

### 3. ಅಪಾಯದಲ್ಲಿ ಕಡಿತ ಮತ್ತು ನಿಯಂತ್ರಣ

ಅಪಾಯವನ್ನು ತಪ್ಪಿಸುವುದಕ್ಕಿಂತ ಇದು ಹೆಚ್ಚು ಪ್ರಾಯೋಗಿಕ ಮತ್ತು ಸೂಕ್ತ ವಿಧಾನವಾಗಿದೆ. ನಷ್ಟ ಸಂಭವಿಸುವ ಸಾಧ್ಯತೆಯನ್ನು ಕಡಿಮೆ ಮಾಡಲು ಮತ್ತು/ಅಥವಾ ಅಂತಹ ನಷ್ಟ ಸಂಭವಿಸಿದಲ್ಲಿ ಅದರ ಪ್ರಭಾವದ ತೀವ್ರತೆಯನ್ನು ಕಡಿಮೆ ಮಾಡಲು ಕ್ರಮಗಳನ್ನು ತೆಗೆದುಕೊಳ್ಳುವುದು ಎಂದು ಇದರ ಅರ್ಥ.

**ಪ್ರಮುಖ**

ನಷ್ಟವನ್ನುಂಟುಮಾಡುವ ಘಟನೆಗಳ ಸಂಭವವನ್ನು ಕಡಿಮೆ ಮಾಡುವ ಕ್ರಮಗಳನ್ನು **'ನಷ್ಟ ತಡೆಗಟ್ಟುವಿಕೆ'** ಎಂದು ಕರೆಯಲಾಗುತ್ತದೆ. ನಷ್ಟ ಸಂಭವಿಸಿದಲ್ಲಿ, ನಷ್ಟದ ಮಟ್ಟವನ್ನು ಕಡಿಮೆ ಮಾಡುವ ಕ್ರಮಗಳನ್ನು **'ನಷ್ಟ ಕಡಿತ'**/ನಷ್ಟ ಕಡಿಮೆಗೊಳಿಸುವಿಕೆ ಎಂದು ಕರೆಯಲಾಗುತ್ತದೆ.

ಅಪಾಯದ ಕಡಿತವು ನಷ್ಟಗಳ ಆವರ್ತನ ಮತ್ತು/ಅಥವಾ ಗಾತ್ರವನ್ನು ಕಡಿಮೆ ಮಾಡುವುದನ್ನು ಒಳಗೊಂಡಿರುತ್ತದೆ:

a) **ವಿವಿಧ ರೀತಿಯ ಉದ್ಯೋಗಿಗಳಿಗೆ ಸರಿಯಾದ ಅಪಾಯದ ಅಭ್ಯಾಸಗಳಲ್ಲಿ ಶಿಕ್ಷಣ ಮತ್ತು ತರಬೇತಿ - ಉದಾ.** **(i)** 'ಫೈರ್ ಡ್ರಿಲ್'ಗಳಲ್ಲಿ ಭಾಗವಹಿಸುವುದು; **(ii)** ಕಾರುಗಳಲ್ಲಿ ಸೀಟ್ ಬೆಲ್ಟ್ ಹೆಲ್ಮೆಟ್ ಗಳನ್ನು ಧರಿಸುವುದು.

b) **ಪರಿಸರದಲ್ಲಿ ಬದಲಾವಣೆಗಳನ್ನು ಮಾಡುವುದು** - ಭೌತಿಕ ಸ್ಥಿತಿಗಳನ್ನು ಸುಧಾರಿಸುವಂತಹ - ಉದಾ. (**i**) ಅಗ್ನಿಶಾಮಕ ಎಚ್ಚರಿಕೆಗಳನ್ನು ಸ್ಥಾಪಿಸುವುದು; **(ii)** ಮಲೇರಿಯಾ ಹರಡುವಿಕೆಯನ್ನು ಕಡಿಮೆ ಮಾಡಲು ಸೊಳ್ಳೆಗಳನ್ನು ಕೊಲ್ಲಲು ರಾಸಾಯನಿಕಗಳನ್ನು ಸಿಂಪಡಿಸುವುದು.

c) ಯಂತ್ರೋಪಕರಣಗಳು ಮತ್ತು ಉಪಕರಣಗಳನ್ನು ಬಳಸುವಾಗ ಅಥವಾ ಇತರ ಕಾರ್ಯಗಳ ಕಾರ್ಯಾಚರಣೆಯಲ್ಲಿ **ಅಪಾಯಕಾರಿ ಅಥವಾ ವಿಪತ್ತುಕಾರಿ ಕಾರ್ಯಾಚರಣೆಗಳಲ್ಲಿ ಮಾಡಿದ ಬದಲಾವಣೆಗಳು** - ಉದಾ. (**i**) ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಹೆಲ್ಮೆಟ್ ಗಳನ್ನು ಧರಿಸುವುದು; **(ii)** ರಾಸಾಯನಿಕಗಳನ್ನು ನಿರ್ವಹಿಸುವಾಗ ಕೈಗವಸುಗಳು ಮತ್ತು ಮುಖದ ಫಲಕಗಳನ್ನು ಧರಿಸುವುದು.

d) **ಆರೋಗ್ಯಕರ ಜೀವನಶೈಲಿಯನ್ನು ನಡೆಸುವುದು**- ಅನಾರೋಗ್ಯಕ್ಕೆ ಒಳಗಾಗುವ ಸಂಭವವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ - ಉದಾ. (**i**) ನಿಯಮಿತ ವೈದ್ಯಕೀಯ ತಪಾಸಣೆಗೆ ಒಳಗಾಗುವುದು; **(ii)** ನಿಯಮಿತವಾಗಿ ಯೋಗದ ಅಭ್ಯಾಸವನ್ನು ಮಾಡುವುದು.

e) ಯಾವುದೇ ಒಂದು ಸ್ಥಳದಲ್ಲಿ ಅಪಘಾತದ ಪರಿಣಾಮವನ್ನು ಕಡಿಮೆ ಮಾಡಲು ಆಸ್ತಿಯ ವಿವಿಧ ವಸ್ತುಗಳನ್ನು **ಪ್ರತ್ಯೇಕಿಸುವುದು** ಅಥವಾ ಅವುಗಳನ್ನು ಕೇಂದ್ರೀಕರಿಸುವ ಬದಲು ವಿವಿಧ ಸ್ಥಳಗಳಲ್ಲಿ ಹರಡುವುದು - ಉದಾ. (**i**) ಪ್ರತ್ಯೇಕ ಸ್ಥಳಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸುಲಭವಾಗಿ ಹೊತ್ತಿಕೊಳ್ಳುವ ವಸ್ತುಗಳನ್ನು ಸಂಗ್ರಹಿಸುವುದು; **(ii)** ಕಾರ್ಖಾನೆಗಳ ಅಪಾಯಕಾರಿ ಪ್ರದೇಶಗಳಲ್ಲಿ ಅಗ್ನಿ ನಿರೋಧಕ ಬಾಗಿಲುಗಳನ್ನು ಜೋಡಿಸುವುದು.

### 4. ಅಪಾಯದ ಹಣಕಾಸು

ಇದು ಸಂಭವಿಸಬಹುದಾದ ನಷ್ಟವನ್ನು ಪೂರೈಸಲು ಹಣದ ಪೂರ್ವಸಿದ್ಧತೆಯನ್ನು ಸೂಚಿಸುತ್ತದೆ.

a) **ಸ್ವಯಂ-ಹಣಕಾಸಿನ ಮೂಲಕ ಅಪಾಯದ ಧಾರಣೆ**ಯು ನಷ್ಟ ಸಂಭವಿಸಿದಾಗ ನಷ್ಟವನ್ನು ಸ್ವತಃ ಭರಿಸುವುದನ್ನು ಒಳಗೊಂಡಿರುತ್ತದೆ. ಸಂಸ್ಥೆಯು ತನ್ನ ಸ್ವಂತ ಅಥವಾ ಎರವಲು ಪಡೆದ ನಿಧಿಯ

ಮೂಲಕ ತನ್ನ ಅಪಾಯವನ್ನು ಊಹಿಸುತ್ತದೆ ಮತ್ತು ಹಣಕಾಸು ನೀಡುತ್ತದೆ, ಇದನ್ನು **ಸ್ವಯಂ ವಿಮೆ** ಎಂದು ಕರೆಯಲಾಗುತ್ತದೆ.

b) **ದೊಡ್ಡ ಗುಂಪಿನೊಳಗೆ ಅಪಾಯ ಧಾರಣೆ:** ಅಪಾಯವು ಪೋಷಕ ಕಂಪನಿಯಂತೆ ದೊಡ್ಡ ಗುಂಪಿನ ಭಾಗವಾಗಿದ್ದರೆ, ಅಪಾಯವನ್ನು ನಷ್ಟಗಳಿಗೆ ಹಣಕಾಸು ನೀಡುವ ದೊಡ್ಡ ಗುಂಪಿನಲ್ಲಿ ಉಳಿಸಿಕೊಳ್ಳಬಹುದು. ಇದು ಪರಸ್ಪರ ಒಪ್ಪಿಗೆಯಿಂದ ರೂಪುಗೊಂಡ ಗುಂಪು ಸಹ ಆಗಿರಬಹುದು.

c) **ಅಪಾಯದ ವರ್ಗಾವಣೆಯು** ಅಪಾಯದ ಧಾರಣಕ್ಕೆ ಇರುವ ಪರ್ಯಾಯವಾಗಿದೆ. ಇದು ನಷ್ಟದ ಜವಾಬ್ದಾರಿಯನ್ನು ಮತ್ತೊಂದು ಪಕ್ಷಕ್ಕೆ ವರ್ಗಾಯಿಸುವುದನ್ನು ಒಳಗೊಂಡಿರುತ್ತದೆ.

**ಅಪಾಯ ವರ್ಗಾವಣೆಯ ಪ್ರಮುಖ ಸ್ವರೂಪಗಳಲ್ಲಿ ವಿಮೆಯೂ ಒಂದಾಗಿದೆ. ಇತರ ಹಲವು ಸ್ವರೂಪಗಳ ಅನಿಶ್ಚಿತತೆಯನ್ನು ಎದುರಿಸುವ ಬದಲು, ವಿಮೆಯು ಖಚಿತತೆ ಮತ್ತು ಮನಸ್ಸಿನ ಶಾಂತಿಯನ್ನು ನೀಡುವುದರಿಂದ ಜನರು ವಿಮೆಗೆ ಹೆಚ್ಚು ಆದ್ಯತೆ ನೀಡುತ್ತಾರೆ.**

## 5. ವಿಮೆ ವಿರುದ್ಧ ಭರವಸೆ

ವಿಮೆಯನ್ನು ಸಂಭವಿಸಬಹುದಾದ ಅಥವಾ ಸಂಭವಿಸದ ಮತ್ತು ಘಟನೆಯ ನಂತರವೇ ನಷ್ಟದ ಮೊತ್ತವನ್ನು ನಿರ್ಣಯಿಸಬಹುದಾದ ಘಟನೆಯ ವಿರುದ್ಧ ರಕ್ಷಣೆ ನೀಡುವ ಹೆಚ್ಚಿನ ಸಾಮಾನ್ಯ ವಿಮಾ ಒಪ್ಪಂದಗಳಿಗಾಗಿ ಬಳಸಲಾಗುತ್ತದೆ.

ಭರವಸೆಯು ವಿಸ್ತೃತ ಅವಧಿಗಳಿಗೆ ಅಥವಾ ಮರಣದವರೆಗೆ ಹಣಕಾಸಿನ ವ್ಯಾಪ್ತಿಯನ್ನು ಸೂಚಿಸುತ್ತದೆ. ಜೀವ ವಿಮೆಯ ಸಂದರ್ಭದಲ್ಲಿ, ಸಾವು ಸಂಭವಿಸುವುದು (ನಷ್ಟ ಮಾಡುವ ಘಟನೆ) ನಿಶ್ಚಿತವಾಗಿದೆ. ಸಮಯ ಮಾತ್ರ ಅನಿಶ್ಚಿತವಾಗಿದೆ. ಅಲ್ಲದೇ, ಒಬ್ಬ ವ್ಯಕ್ತಿಯು ಸತ್ತಾಗ ಅನುಭವಿಸಲಾದ ಆರ್ಥಿಕ ನಷ್ಟದ ಪ್ರಮಾಣವನ್ನು ಅಂದಾಜು ಮಾಡಲು ಸಾಧ್ಯವಿಲ್ಲ. ಪಾವತಿಸಬೇಕಾದ ನಷ್ಟದ ಮೊತ್ತವನ್ನು ಮುಂಚಿತವಾಗಿ ನಿಗದಿಪಡಿಸಬೇಕು. ಅದಕ್ಕೆಂದೇ ಜೀವ ವಿಮೆಯ ಸಂದರ್ಭದಲ್ಲಿ ಜನರು **'ಭರವಸೆ'ಯೆಂಬ** ಪದವನ್ನು ಬಳಸುತ್ತಾರೆ.

**ಇಂತಹ ಸೂಕ್ಷ್ಮ ತಾಂತ್ರಿಕ ವ್ಯತ್ಯಾಸಗಳಿದ್ದರೂ, ಭಾರತ ಸೇರಿದಂತೆ ಹೆಚ್ಚಿನ ಮಾರುಕಟ್ಟೆಗಳಲ್ಲಿ 'ವಿಮೆ' ಮತ್ತು ಭರವಸೆ' ಎಂಬ ಪದಗಳನ್ನು ಪರಸ್ಪರ ಬದಲಿಯಾಗಿ ಬಳಸಲಾಗುತ್ತದೆ.** ಭಾರತದ ಅತಿದೊಡ್ಡ ಸಾಮಾನ್ಯ ವಿಮಾಗಾರರಲ್ಲಿ ಒಬ್ಬರಾದ - ನ್ಯೂ ಇಂಡಿಯಾ **ಅಶ್ಯೂರೆನ್ಸ್** ಕಂಪನಿ ಲಿಮಿಟೆಡ್ ಈ ಹೆಸರನ್ನು ಹೊಂದಿದ್ದಾರೆ ಮತ್ತು ಭಾರತದಲ್ಲಿ ಯಾವುದೇ ಜೀವವಿಮಾ ಕಂಪನಿಯು ತನ್ನ ಹೆಸರಿನಲ್ಲಿ **ಅಶ್ಯೂರೆನ್ಸ್'** ಪದವನ್ನು ಬಳಸುತ್ತಿಲ್ಲ!]

**ಚಿತ್ರ 5: ವಿಮಾದಾರರಿಗೆ ವಿಮೆ ಹೇಗೆ ಪರಿಹಾರ ನೀಡುತ್ತದೆ**




**ನಿಮ್ಮನ್ನು ಪರೀಕ್ಷಿಸಿ**

ಈ ಕೆಳಗಿನವುಗಳಲ್ಲಿ ಯಾವುದು ಅಪಾಯ ವರ್ಗಾವಣೆಯ ವಿಧಾನವಾಗಿದೆ**?**

I. ಬ್ಯಾಂಕ್ ಸ್ಥಿರ ಠೇವಣಿ

II. ವಿಮೆ

III. ಇಕ್ವಿಟಿ ಷೇರುಗಳು

IV. ಸ್ಥಿರಾಸ್ತಿ (ರಿಯಲ್ ಎಸ್ಟೇಟ್)

---

## D. ಅಪಾಯವನ್ನು ನಿರ್ವಹಿಸುವ ಸಾಧನವಾಗಿ ವಿಮೆ

'ಅಪಾಯ'ವೆಂಬ ಪದವು ನಿಜವಾಗಿ ಅನುಭವಿಸಿದ ನಷ್ಟವಲ್ಲ ಆದರೆ, ಸಂಭವಿಸಬಹುದಾದ ನಷ್ಟವನ್ನು ಸೂಚಿಸುತ್ತದೆ. ಹೀಗಾಗಿ ಅದು ನಿರೀಕ್ಷಿತ ನಷ್ಟವಾಗಿದೆ. ಈ ನಿರೀಕ್ಷಿತ ನಷ್ಟದ ವೆಚ್ಚವು ಎರಡು ಅಂಶಗಳನ್ನು ಅವಲಂಬಿಸಿದೆ:

i. ಅಪಾಯದ ವಿರುದ್ಧ ವಿಮೆ ಮಾಡಲಾದ ನಷ್ಟಕ್ಕೆ ಕಾರಣವಾಗುವ **ಸಂಭವನೀಯತೆ** ಸಂಭವಿಸಬಹುದು

ii. **ತೀವ್ರತೆ (ಪರಿಣಾಮ)** ಅಥವಾ ಪರಿಣಾಮವಾಗಿ ಆಗಬಹುದಾದ ನಷ್ಟದ ಪ್ರಮಾಣ.

ಅಪಾಯದ ವೆಚ್ಚವು ಸಂಭವನೀಯತೆ ಮತ್ತು ತೀವ್ರತೆ (ನಷ್ಟದ ಮೊತ್ತ) ಈ ಎರಡಕ್ಕೂ ನೇರ ಅನುಪಾತದಲ್ಲಿ ಹೆಚ್ಚಾಗುತ್ತದೆ. ಇದು ವಿಭಿನ್ನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ - (ಎ) ನಷ್ಟದ ಪ್ರಮಾಣವು ತುಂಬಾ ಹೆಚ್ಚಿದ್ದರೆ ಮತ್ತು ಅದು ಸಂಭವಿಸುವ ಸಂಭವನೀಯತೆಯು ಚಿಕ್ಕದಾಗಿದ್ದರೆ, ಅಂತಹ ನಿದರ್ಶನಗಳು ತುಂಬಾ ಕಡಿಮೆಯಿರುವುದರಿಂದ ಅಪಾಯದ ವೆಚ್ಚವು ಕಡಿಮೆ ಇರುತ್ತದೆ. (ಬಿ) ನಷ್ಟದ ಪ್ರಮಾಣವು ಚಿಕ್ಕದಾಗಿದ್ದರೂ, ಅದರ ಸಂಭವಿಸುವಿಕೆಯ ಸಂಭವನೀಯತೆಯು ತುಂಬಾ ಹೆಚ್ಚಿದ್ದರೆ, ಅಂತಹ ಅನೇಕ ಘಟನೆಗಳು ಘಟಿಸುವುದರಿಂದ ಅಪಾಯದ ವೆಚ್ಚವು ಅಧಿಕವಾಗಿರುತ್ತದೆ. ತಮ್ಮ ಅಪಾಯವನ್ನು ನಿರ್ವಹಿಸುವ ಪ್ರಬಲ ಸಾಧನವಾಗಿ ವಿಮೆಯನ್ನು ಕಾಣಬಹುದು. ತಮ್ಮ ಆಸ್ತಿ/ಸಂಪತ್ತನ್ನು ಕಳೆದುಕೊಳ್ಳುವದರಿಂದಾಗುವ ಆರ್ಥಿಕ ನಷ್ಟಗಳನ್ನು ವಿಮೆಯ ಮೂಲಕ ರಕ್ಷಿಸಿಕೊಳ್ಳಬಹುದು.

**ಚಿತ್ರ 6: ವಿಮೆಯನ್ನು ಆಯ್ಕೆ ಮಾಡುವ ಮೊದಲು ಪರಿಗಣಿಸಬೇಕಾದ ಅಂಶಗಳು**




## E. ವಿಮೆಯನ್ನು ಆಯ್ಕೆ ಮಾಡುವ ಮೊದಲು ಪರಿಗಣಿಸಬೇಕಾದ ಅಂಶಗಳು

ವಿಮೆ ಮಾಡಬೇಕೆ ಅಥವಾ ಬೇಡವೇ ಎಂಬುದನ್ನು ನಿರ್ಧರಿಸುವಾಗ, ಅಪಾಯವನ್ನು ವರ್ಗಾಯಿಸುವ ವೆಚ್ಚ[ವಿಮಾ ಕಂತು]ವನ್ನು ಸ್ವತಃ ಭರಿಸುವ ವೆಚ್ಚದ ವಿರುದ್ಧ ಮೌಲ್ಯಮಾಪನ ಮಾಡಬೇಕಾಗುತ್ತದೆ. ನಷ್ಟದ ಪರಿಣಾಮವು ತುಂಬಾ ಹೆಚ್ಚಿರುವಲ್ಲಿ ಆದರೆ ಸಂಭವನೀಯತೆ (ಮತ್ತು ಅಲ್ಲದೇ ಕಂತು) ತುಂಬಾ ಕಡಿಮೆಯಾಗಿರುವಲ್ಲಿ ವಿಮೆಯು ಹೆಚ್ಚು ಅವಶ್ಯಕವಾಗಿರುತ್ತದೆ. ಉದಾ. (**i)** ಭೂಕಂಪದ ಸಾಧ್ಯತೆ; **(ii)** ಹಡಗು ಮುಳುಗುವ ಸಾಧ್ಯತೆ.

**a) ಅತಿ ಸ್ವಲ್ಪಕ್ಕಾಗಿ ಬಹಳಷ್ಟನ್ನು ಅಪಾಯಕ್ಕೆ ಗುರಿಯಾಗಿಸಬೇಡಿ:** ಅಪಾಯವನ್ನು ವರ್ಗಾಯಿಸುವ ವೆಚ್ಚ ಮತ್ತು ಪಡೆದ ಮೌಲ್ಯದ ನಡುವೆ ಸಮಂಜಸವಾದ ಸಂಬಂಧವಿರಬೇಕು.

ಸಾಮಾನ್ಯ ಬಾಲ್ ಪೆನ್ ಅನ್ನು ವಿಮೆ ಮಾಡುವುದರಲ್ಲಿ ಅರ್ಥವಿದೆಯೇ?

b) **ನಿಮ್ಮ ಕಳೆದುಕೊಳ್ಳುವ ಸಾಮರ್ಥ್ಯಕ್ಕಿಂತ ಹೆಚ್ಚಿನ ಅಪಾಯವನ್ನು ಎದುರಿಸಬೇಡಿ:** ಒಂದು ಘಟನೆಯ ಪರಿಣಾಮವಾಗಿ ಉಂಟಾಗುವ ನಷ್ಟವು ದಿವಾಳಿತನವನ್ನು ಉಂಟುಮಾಡುವಷ್ಟು ದೊಡ್ಡದಾಗಿದ್ದರೆ, ಅಪಾಯವನ್ನು ಉಳಿಸಿಕೊಳ್ಳುವುದು ಸೂಕ್ತವಲ್ಲ.

ಒಂದು ದೊಡ್ಡ ತೈಲ ಸಂಸ್ಕರಣಾಗಾರ(ಆಯಿಲ್ ರಿಫೈನರಿ) ನಷ್ಟವಾದರೆ, ಮಾಲೀಕರಿಗೆ ನಷ್ಟವನ್ನು ಭರಿಸುವುದು ಸಾಧ್ಯವಾಗುವುದಿಲ್ಲ.

c) **ಅಪಾಯದ ಸಂಭವನೀಯ ಪರಿಣಾಮಗಳನ್ನು ಎಚ್ಚರಿಕೆಯಿಂದ ಪರಿಗಣಿಸಿರಿ:** ನಷ್ಟದ ಘಟನೆಯ ಸಂಭವನೀಯತೆ (ಆವರ್ತನ) ಕಡಿಮೆ ಆದರೆ ಸಂಭವನೀಯ ಪರಿಣಾಮ (ತೀವ್ರತೆ)ವು ಹೆಚ್ಚಿರುವ ಸ್ವತ್ತುಗಳನ್ನು ವಿಮೆ ಮಾಡುವುದು ಉತ್ತಮ.

ಬಾಹ್ಯಾಕಾಶ ಉಪಗ್ರಹದ ನಷ್ಟವು ತುಂಬಾ ದುಬಾರಿಯಾಗಬಹುದಾದ್ದರಿಂದ ಅದನ್ನು ವಿಮೆ ಮಾಡಬೇಕು.

**ನಿಮ್ಮನ್ನು ಪರೀಕ್ಷಿಸಿ**

ಈ ಕೆಳಗಿನ ಯಾವ ಸನ್ನಿವೇಶಗಳಲ್ಲಿ ವಿಮೆಯು ಅಗತ್ಯವಾಗಿದೆ?

I. ಕುಟುಂಬದ ಗಳಿಸುವ ಏಕೈಕ ಸದಸ್ಯರು ಅಕಾಲಿಕವಾಗಿ ಸಾಯಬಹುದು

II. ಒಬ್ಬ ವ್ಯಕ್ತಿಯು ತನ್ನ ಕೈಚೀಲವನ್ನು ಕಳೆದುಕೊಳ್ಳಬಹುದು

III. ಸ್ಟಾಕ್ ಗಳ ಬೆಲೆಗಳು ತೀವ್ರವಾಗಿ ಕುಸಿಯಬಹುದು

IV. ನೈಸರ್ಗಿಕ ಸವಕಳಿಯ ಕಾರಣದಿಂದಾಗಿ ಮನೆ ತನ್ನ ಮೌಲ್ಯವನ್ನು ಕಳೆದುಕೊಳ್ಳಬಹುದು

## F. ವಿಮಾ ಮಾರುಕಟ್ಟೆ ನಿರ್ವಹಣಾಗಾರರು

ವಿಮಾ ಕಂಪನಿಗಳು (ವಿಮಾಗಾರರು) ವಿಮಾ ಉದ್ಯಮದಲ್ಲಿಯ ಪ್ರಮುಖ ಆಟಗಾರರಾಗಿದ್ದಾರೆ. ವಿಮಾಗಾರರ ಜೊತೆಗೆ, ಅನೇಕ ಪಕ್ಷಗಳು ವಿಮಾ ಮೌಲ್ಯ ಸರಪಳಿಯ ಭಾಗವಾಗಿವೆ. ಸಂಪೂರ್ಣ ಮಾರುಕಟ್ಟೆಯನ್ನು ನಿಯಂತ್ರಿಸುವ ವಿಮಾ ನಿಯಂತ್ರಕವಿದೆ.

ಏಜೆಂಟರು, ದಲ್ಲಾಳಿಗಳು, ಬ್ಯಾಂಕ್ ಗಳು (ಬ್ಯಾಂಕ್ ಅಶ್ಯೂರೆನ್ಸ್ ಮೂಲಕ) ವಿಮಾ ಮಾರ್ಕೆಟಿಂಗ್ ಫರ್ಮ್ ಗಳು ಮತ್ತು ನಿರೀಕ್ಷಿತ ಗ್ರಾಹಕರಿಗೆ/ವಿಮಾದಾರರೊಂದಿಗೆ ಸಂವಹನ ನಡೆಸುವ, ಅವರ ಅಗತ್ಯಗಳನ್ನು ಕವರ್ ಮಾಡಲು ಲಭ್ಯವಿರುವ ಪಾಲಿಸಿಗಳ ಬಗ್ಗೆ ಮಾಹಿತಿಯನ್ನು ನೀಡುವ ಪಾಯಿಂಟ್ ಆಫ್ ಸೇಲ್ಸ್ ಪರ್ಸನ್ ರಂತಹ ಮಧ್ಯವರ್ತಿಗಳು ಈ ಕ್ಷೇತ್ರದಲ್ಲಿದ್ದಾರೆ.

ಸಮೀಕ್ಷಕರು ಮತ್ತು ನಷ್ಟದ ಮೌಲ್ಯಮಾಪಕರು/ಹೊಂದಾಣಿಕೆದಾರ (ಅಡ್ಜಸ್ಟರ್)ರು ಕ್ಲೇಮ್ ಗಳ ಮೌಲ್ಯಮಾಪನ ಮತ್ತು ಪೂರಕ ಕೆಲಸವನ್ನು ಮಾಡುತ್ತಾರೆ. ತೃತೀಯ ಪಕ್ಷದ ನಿರ್ವಾಹಕರು ಆರೋಗ್ಯ ಮತ್ತು ಪ್ರಯಾಣ ವಿಮೆಯ ಕ್ಲೇಮ್ ಗಳೊಂದಿಗೆ ವ್ಯವಹರಿಸುತ್ತಾರೆ. ನಿಯಮಗಳ ಪ್ರಕಾರ ಎಲ್ಲ ಮಧ್ಯವರ್ತಿಗಳು ಗ್ರಾಹಕರೆಡೆಗೆ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ವಿಮಾ ಕಂಪನಿ ಮತ್ತು ವಿಮಾದಾರರ ನಡುವಿನ ಮಧ್ಯವರ್ತಿಗಳಾಗಿರುವ ಏಜೆಂಟರು, ವಿಮಾದಾರರಿಂದ ಅಪಾಯದ ಬಗೆಗಿನ ಎಲ್ಲ ವಾಸ್ತವಿಕ ಮಾಹಿತಿಯನ್ನು ವಿಮಾಗಾರರಿಗೆ ಒದಗಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**ಪ್ರಮುಖ**

**ನಿರೀಕ್ಷಿತ ಗ್ರಾಹಕರೆಡೆಗೆ ವಿಮಾ ಏಜೆಂಟ್/ಮಧ್ಯವರ್ತಿಯ ಕರ್ತವ್ಯ**

ಐಆರ್ ಡಿಎಐ ನಿಯಮಗಳ ಪ್ರಕಾರ ಮಧ್ಯವರ್ತಿಗಳು ನಿರೀಕ್ಷಿತ ಗ್ರಾಹಕರೆಡೆಗೆ ಕೆಲವು ಜವಾಬ್ದಾರಿಗಳನ್ನು ಹೊಂದಿರುತ್ತಾರೆ. ಮಧ್ಯವರ್ತಿಗಳು ವಿಮಾಗಾರೆಡೆಗೆ ಸಹ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ನಿರೀಕ್ಷಿತ ಗ್ರಾಹಕರು ವಿಮಾಗಾರ ಅಥವಾ ಅವರ ಏಜೆಂಟರು ಅಥವಾ ವಿಮಾ ಮಧ್ಯವರ್ತಿಯ ಸಲಹೆಯ ಮೇಲೆ ಅವಲಂಬಿತವಾಗಿರುವಾಗ ಅಂತಹ ಮಧ್ಯವರ್ತಿ ವ್ಯಕ್ತಿಯು ನ್ಯಾಯಯುತ ರೀತಿಯಲ್ಲಿ ನಿರೀಕ್ಷಿತ ಗ್ರಾಹಕರಿಗೆ ಸಲಹೆಯನ್ನು ನೀಡಬೇಕೆಂದು ನಿಯಂತ್ರಣವು ಹೇಳುತ್ತದೆ. "ಒಬ್ಬ ವಿಮಾಗಾರರು ಅಥವಾ ಅವರ ದಳ್ಳಾಲಿ ಅಥವಾ ಇತರ ಮಧ್ಯವರ್ತಿಗಳು ನಿರೀಕ್ಷಿತ ಗ್ರಾಹಕರು ಅವನ ಅಥವಾ ಅವಳ ಆಸಕ್ತಿಗೆ ಉತ್ತಮವಾದ ಕವರ್ ಅನ್ನು ನಿರ್ಧರಿಸಲು ಅವಕಾಶ ನೀಡುವಂತೆ" ಉದ್ದೇಶಿತ ಕವರ್ ಗೆ ಸಂಬಂಧಿಸಿದಂತೆ ಎಲ್ಲ ವಾಸ್ತವಿಕ ಮಾಹಿತಿಯನ್ನು ಒದಗಿಸಬೇಕೆಂದು ಸಹ ನಿಯಂತ್ರಣವು ಹೇಳುತ್ತದೆ.

ಪ್ರಸ್ತಾವನೆ ಮತ್ತು ಇತರ ಸಂಬಂಧಿತ ದಾಖಲೆಗಳನ್ನು ಗ್ರಾಹಕರು ಭರ್ತಿ ಮಾಡಿರದಿದ್ದರೆ, ಫಾರ್ಮ್ ಮತ್ತು ದಾಖಲೆಗಳ ವಿಷಯಗಳನ್ನು ಸಂಪೂರ್ಣವಾಗಿ ತಮಗೆ ವಿವರಿಸಲಾಗಿದೆ ಮತ್ತು ತಾವು ಈ ಪ್ರಸ್ತಾವಿತ ಒಪ್ಪಂದದ ಪ್ರಾಮುಖ್ಯತೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದಾರೆ ಎಂದು ಗ್ರಾಹಕರಿಂದ ಪ್ರಸ್ತಾವನೆಯ ನಮೂನೆಯ ಕೊನೆಯಲ್ಲಿ ಪ್ರಮಾಣಪತ್ರವನ್ನು ಅಳವಡಿಸಬಹುದು..

ಗ್ರಾಹಕರು ವಿಮಾಗಾರರಿಗೆ ಕಂತನ್ನು ಪಾವತಿಸಿದಾಗ, ವಿಮಾಗಾರರು ರಶೀದಿಯನ್ನು ನೀಡಲು ಬದ್ಧರಾಗಿರುತ್ತಾರೆ..

## G. ಸಮಾಜಲ್ಲಿ ವಿಮೆಯ ಪಾತ್ರ

ವಿಮಾ ಕಂಪನಿಗಳು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ದೇಶದ ಸಂಪತ್ತನ್ನು ರಕ್ಷಿಸಲಾಗಿದೆ ಮತ್ತು ಸಂರಕ್ಷಿಸಲಾಗಿದೆ ಎಂದು ಅವರು ಖಚಿತಪಡಿಸುತ್ತಾರೆ. ಅವರ ಕೆಲವು ಕೊಡುಗೆಗಳನ್ನು ಈ ಕೆಳಗೆ ನೀಡಲಾಗಿದೆ.

a) ಪರಸ್ಪರತೆಯ ತತ್ವದ ಮೇಲೆ ವಿಮೆಯು ಸ್ಥಾಪಿಸಲ್ಪಟ್ಟಿದ್ದು, ಇದರಲ್ಲಿ ಆರ್ಥಿಕ ನಷ್ಟವನ್ನು ಅನುಭವಿಸುವ ದುರದೃಷ್ಟಕರ ಕೆಲವು ಸದಸ್ಯರನ್ನು ಬೆಂಬಲಿಸಲು ಸಮುದಾಯದ ಸಾಮೂಹಿಕ ಶಕ್ತಿಯನ್ನು ಒಟ್ಟುಗೂಡಿಸಲಾಗುತ್ತದೆ. ವಿಮೆಗೆ ಯಾವುದೇ ಪರ್ಯಾಯಗಳಿಲ್ಲ.

b) ಸಣ್ಣ ಪ್ರಮಾಣದ ಕಂತುಗಳನ್ನು ಸಂಗ್ರಹಿಸಿ ವಿಮಾ ಕಂಪನಿಗಳು ಅವುಗಳನ್ನು ಬೃಹತ್ ನಿಧಿಗಳನ್ನಾಗಿ ಒಟ್ಟುಗೂಡಿಸುತ್ತವೆ. ಈ ನಿಧಿಗಳನ್ನು ಪಾಲಿಸಿದಾರರ ಹಿತಾಸಕ್ತಿ ಮತ್ತು ಸಮುದಾಯದ ಪ್ರಯೋಜನಕ್ಕಾಗಿ ಇರಿಸಲಾಗುತ್ತದೆ ಮತ್ತು ಹೂಡಿಕೆ ಮಾಡಲಾಗುತ್ತದೆ. ಅವುಗಳನ್ನು ಅನಗತ್ಯವಾಗಿ ಊಹಾತ್ಮಕ ಉದ್ಯಮಗಳಲ್ಲಿ ಹೂಡಿಕೆ ಮಾಡಲಾಗುವುದಿಲ್ಲ.

c) ವಿಮೆಯು ವ್ಯಕ್ತಿಗಳು ಮತ್ತು ಉದ್ಯಮಗಳನ್ನೊಳಗೊಂಡು ಹಲವಾರು ವಿಮಾದಾರರಿಗೆ - ಅಪಘಾತಗಳು ಅಥವಾ ಆಕಸ್ಮಿಕ ಘಟನೆಗಳಿಂದ ಉಂಟಾಗುವ ನಷ್ಟಗಳ ವಿರುದ್ಧ ರಕ್ಷಣೆಯ ಪ್ರಯೋಜನವನ್ನು ಒದಗಿಸುತ್ತದೆ. ಇದು ಬಂಡವಾಳವನ್ನು ಸಂರಕ್ಷಿಸುತ್ತದೆ ಮತ್ತು ದೇಶದ ಬೆಳವಣಿಗೆಗೆ ಸಹಾಯವಾಗುವಂತೆ ವ್ಯಾಪಾರ ಮತ್ತು ಉದ್ಯಮದ ಅಭಿವೃದ್ಧಿಗೆ ಅದನ್ನು ಬಿಡುಗಡೆ ಮಾಡುತ್ತದೆ.

d) ಬಂಡವಾಳದ ಹೂಡಿಕೆಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಕಾರಣವಾಗುವಂತೆ ವಿಮೆ ಶಕ್ತಗೊಳಿಸುತ್ತದೆ. ಇದು ಉದ್ಯಮಶೀಲತೆಗೆ ಸಂಬಂಧಿಸಿದ ಭಯ, ಚಿಂತೆ ಮತ್ತು ಆತಂಕವನ್ನು ತೆಗೆದುಹಾಕುವಲ್ಲಿ ಸಹಾಯ ಮಾಡುತ್ತದೆ.

e) ಅನೇಕ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ನಷ್ಟ ಅಥವಾ ಹಾನಿಯ ವಿರುದ್ಧ ವಿಮೆ ಮಾಡದ ಹೊರತು ಆಸ್ತಿಯ ಮೇಲೆ ಸಾಲವನ್ನು ಮುಂಗಡ ಮಾಡುವುದಿಲ್ಲ. ಅವರಲ್ಲಿ ಹಲವರು ಪಾಲಿಸಿಯನ್ನು ಮೇಲಾಧಾರ ಭದ್ರತೆಯನ್ನಾಗಿ ನಿಯೋಜಿಸಲು ಒತ್ತಾಯಿಸುತ್ತಾರೆ.

f) ದೊಡ್ಡ ಕ್ಲಿಷ್ಟಕರವಾದ ಅಪಾಯಗಳನ್ನು ಸ್ವೀಕರಿಸುವ ಮೊದಲು, ಸಾಮಾನ್ಯ ವಿಮಾದಾರರು ಅರ್ಹ ಇಂಜಿನಿಯರ್‌ಗಳು/ಇತರ ತಜ್ಞರಿಂದ ಆಸ್ತಿಯ ತಪಾಸಣೆಗಾಗಿ ವ್ಯವಸ್ಥೆಯನ್ನು ಮಾಡುತ್ತಾರೆ. ಅವರು ಅಪಾಯವನ್ನು ನಿರ್ಣಯಿಸುತ್ತಾರೆ ಮತ್ತು ಅಪಾಯವನ್ನು ಕಡಿಮೆ ಮಾಡಲು ಕ್ರಮಗಳನ್ನು ಸೂಚಿಸುತ್ತಾರೆ ಮತ್ತು ಬೆಲೆನಿರ್ಣಯದಲ್ಲಿ ಸಹಾಯ ಮಾಡುತ್ತಾರೆ.

g) ವಿಮೆಯು ದೇಶಕ್ಕೆ ವ್ಯಾಪಾರ, ಹಡಗು ಮತ್ತು ಬ್ಯಾಂಕಿಂಗ್ ಸೇವೆಗಳಂತಹ ವಿದೇಶಿ ವಿನಿಮಯವನ್ನು ಗಳಿಸುತ್ತದೆ.

h) ವಿಮಾದಾರರು ಬೆಂಕಿಯ ನಷ್ಟ ತಡೆಗಟ್ಟುವಿಕೆ, ಸರಕು ನಷ್ಟ ತಡೆಗಟ್ಟುವಿಕೆ, ಕೈಗಾರಿಕಾ ಸುರಕ್ಷತೆ ಮತ್ತು ರಸ್ತೆ ಸುರಕ್ಷತೆಯಲ್ಲಿ ತೊಡಗಿರುವ ಸಂಸ್ಥೆಗಳೊಂದಿಗೆ ಸಂಬಂಧವನ್ನು ಹೊಂದಿರುತ್ತಾರೆ.

i) ವಿಮೆ ನೀಡುವ ರಕ್ಷಣೆಯೊಂದಿಗೆ ಉದ್ಯಮಿಗಳು ಹೊಸ ಅಥವಾ ತುಲನಾತ್ಮಕವಾಗಿ ಅಪರಿಚಿತವಾಗಿರುವ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ವಿಶ್ವಾಸವನ್ನು ಪಡೆಯುತ್ತಾರೆ.

**ಮಾಹಿತಿ**

**ವಿಮೆ ಮತ್ತು ಸಾಮಾಜಿಕ ಭದ್ರತೆ**

a) ಸಾಮಾಜಿಕ ಭದ್ರತೆಯು ರಾಜ್ಯದ ಒಂದು ಬಾಧ್ಯತೆಯಾಗಿದೆ. ಕಡ್ಡಾಯ ಅಥವಾ ಸ್ವಯಂಪ್ರೇರಿತ ವಿಮೆಯ ಬಳಕೆಯನ್ನು ರಾಜ್ಯದ ಸಾಮಾಜಿಕ ಭದ್ರತಾ ಯೋಜನೆಗಳು ಸಾಮಾಜಿಕ ಭದ್ರತೆಯ ಸಾಧನವಾಗಿ ಒಳಗೊಂಡಿರುತ್ತದೆ. ಕವರ್ ಗೆ ಒಳಪಡುವ ಕೈಗಾರಿಕಾ ಉದ್ಯೋಗಿಗಳು ಮತ್ತು ಅವರ ಕುಟುಂಬಗಳಿಗೆ ಅನಾರೋಗ್ಯ, ಅಂಗವೈಕಲ್ಯ, ಹೆರಿಗೆ ಮತ್ತು ಮರಣದ ವೆಚ್ಚವನ್ನು ಪಾವತಿಸಲು ಉದ್ಯೋಗಿಗಳ ರಾಜ್ಯ ವಿಮಾ ಕಾಯಿದೆ, **1948 ನೌಕರರ ರಾಜ್ಯ ವಿಮಾ ನಿಗಮ**ವನ್ನು ಒದಗಿಸುತ್ತದೆ.

b) ಸರ್ಕಾರವು ಪ್ರಾಯೋಜಿಸಿರುವ ಈ ಕೆಳಗೆ ತೋರಿಸಿದ ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ವಿಮಾದಾರರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ

1. ಪಿಎಮ್ ಜೆಜೆಬಿವೈ –ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ
2. ಪಿಎಮ್ ಎಸ್ ಬಿವೈ - ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ
3. ಪಿಎಮ್ಎಫ್ ಬಿವೈ- ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ
4. ಪಿಎಮ್ ಜೆಎವೈ - ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಆಯುಷ್ಮಾನ್ ಭಾರತ)
5. ಪಿಎಮ್ ವಿವಿವೈ - ಪ್ರಧಾನ ಮಂತ್ರಿ ವಯ ವಂದನಾ ಯೋಜನೆ - ಒಂದು ಪಿಂಚಣಿ ಯೋಜನೆ
6. ಎಪಿವೈ - ಅಟಲ್ ಪಿಂಚಣಿ ಯೋಜನೆ

ಸರ್ಕಾರದ ಮೇಲಿನ ಮತ್ತು ಇಂಥ ಇತರ ಯೋಜನೆಗಳು ಭಾರತೀಯ ಸಮಾಜ/ಸಮುದಾಯಕ್ಕೆ ಪ್ರಯೋಜನವನ್ನು ನೀಡುತ್ತಿವೆ.

c) ಸರ್ಕಾರದ ಯೋಜನೆಗಳನ್ನು ಬೆಂಬಲಿಸುವುದರೊಂದಿಗೆ, ವಿಮಾ ಉದ್ಯಮವು ವಾಣಿಜ್ಯ ಆಧಾರದ ಮೇಲೆ ವಿಮಾ ರಕ್ಷಣೆಗಳನ್ನು ನೀಡುತ್ತ ಸಾಮಾಜಿಕ ಭದ್ರತೆಯನ್ನು ಒದಗಿಸುವ ಅಂತಿಮ ಉದ್ದೇಶವನ್ನು ಹೊಂದಿದೆ. ವಾಣಿಜ್ಯ ಆಧಾರದ ಮೇಲೆ ಕಾರ್ಯನಿರ್ವಹಿಸುವ **ಗ್ರಾಮೀಣ ವಿಮಾ ಯೋಜನೆಗಳನ್ನು** ಗ್ರಾಮೀಣ ಕುಟುಂಬಗಳಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ.

**ನಿಮ್ಮನ್ನು ಪರೀಕ್ಷಿಸಿ 5**

ಈ ಕೆಳಗಿನ ಯಾವ ವಿಮಾ ಯೋಜನೆಗಳು ಭಾರತ ಸರ್ಕಾರದಿಂದ ಪ್ರಾಯೋಜಿಸಲ್ಪಟ್ಟಿವೆ?

I. ಪಿ ಎಮ್ ಜನ ಆರೋಗ್ಯ ಯೋಜನೆ - ಆಯುಷ್ಮಾನ್ ಭಾರತ

II. ಪಿ ಎಮ್ ಫಸಲ್ ಬಿಮಾ ಯೋಜನೆ

III. ಪಿ ಎಮ್ ಸುರಕ್ಷಾ ಬೀಮಾ ಯೋಜನಾ

IV. ಮೇಲಿನ ಎಲ್ಲವೂ

**ಸಾರಾಂಶ**

- ವಿಮೆಯೆಂದರೆ ಅಪಾಯದ ಸಂಚಯನದ ಮೂಲಕ ಮಾಡುವ ಅಪಾಯದ ವರ್ಗಾವಣೆಯಾಗಿದೆ.
- ಇಂದಿನ ವಾಣಿಜ್ಯ ವಿಮಾ ವ್ಯವಹಾರವು ಲಂಡನ್‌ನಲ್ಲಿರುವ ಲಾಯ್ಡ್ಸ್ ಕಾಫಿ ಹೌಸ್ ನಲ್ಲಿ ಪ್ರಾರಂಭವಾಯಿತು.
- ವಿಮಾ ವ್ಯವಸ್ಥೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ:
  - ✓ ಆಸ್ತಿ,
  - ✓ ಅಪಾಯ,
  - ✓ ಗಂಡಾಂತರ,
  - ✓ ಒಪ್ಪಂದ,
  - ✓ ವಿಮಾಗಾರರು ಮತ್ತು
  - ✓ ವಿಮಾದಾರರು
- ಒಂದೇ ರೀತಿಯ ಸ್ವತ್ತುಗಳನ್ನು ಹೊಂದಿರುವ ವ್ಯಕ್ತಿಗಳು, ಒಂದೇ ರೀತಿಯ ಅಪಾಯಗಳಿಗೆ ಒಡ್ಡಿಕೊಂಡಿರುವಾಗ, ಒಂದು ಸಾಮಾನ್ಯ ನಿಧಿಗೆ ಕೊಡುಗೆಯನ್ನು ನೀಡುತ್ತಾರೆ ಅದನ್ನು ಸಂಚಯನ(ಪೂಲಿಂಗ್)ವೆಂದು ಕರೆಯಲಾಗುತ್ತದೆ.
- ವಿಮೆಯ ಹೊರತಾಗಿ, ಇತರ ಅಪಾಯ ನಿರ್ವಹಣೆಯ ತಂತ್ರಗಳಲ್ಲಿ ಈ ಕೆಳಗಿನವುಗಳು ಸೇರಿವೆ:
  - ✓ ಅಪಾಯ ತಡೆಗಟ್ಟುವಿಕೆ,
  - ✓ ಅಪಾಯ ನಿಯಂತ್ರಣ,
  - ✓ ಅಪಾಯ ಧಾರಣೆ,
  - ✓ ಅಪಾಯದ ಹಣಕಾಸು ಮತ್ತು
  - ✓ ಅಪಾಯದ ವರ್ಗಾವಣೆ
- ವಿಮೆಯ ಪ್ರಮುಖ ನಿಯಮಗಳು:
  - ✓ ಕಳೆದುಕೊಳ್ಳಲು ಸಾಧ್ಯವಿರುವ ಮತ್ತು ಸಾಮರ್ಥ್ಯಕ್ಕಿಂತ ಹೆಚ್ಚು ಅಪಾಯವನ್ನು ಎದುರಿಸಬೇಡಿ,

- ✓ ಅಪಾಯದ ಸಂಭವನೀಯ ಫಲಿತಾಂಶಗಳನ್ನು ಎಚ್ಚರಿಕೆಯಿಂದ ಪರಿಗಣಿಸಿ ಮತ್ತು
- ✓ ಅತಿ ಚಿಕ್ಕದ್ದಕ್ಕಾಗಿ ಬಹಳಷ್ಟನ್ನು ಅಪಾಯಕ್ಕೊಡ್ಡಬೇಡಿ

## ಪ್ರಮುಖ ಪದಗಳು

1. ಅಪಾಯ
2. ಸಂಚಯನ
3. ಆಸ್ತಿ
4. ಅಪಾಯದ ಹೊರೆ
5. ಅಪಾಯದ ತಡೆಗಟ್ಟುವಿಕೆ
6. ಅಪಾಯ ನಿಯಂತ್ರಣ
7. ಅಪಾಯ ಧಾರಣೆ
8. ಅಪಾಯದ ಹಣಕಾಸು
9. ಅಪಾಯದ ವರ್ಗಾವಣೆ

## ನಿಮ್ಮನ್ನು ಪರೀಕ್ಷಿಸಿಗಾಗಿ ಉತ್ತರಗಳು

ಉತ್ತರ 1 - ಸರಿಯಾದ ಆಯ್ಕೆ **II** ಆಗಿದೆ

ಉತ್ತರ 2 - ಸರಿಯಾದ ಆಯ್ಕೆ **III** ಆಗಿದೆ

ಉತ್ತರ 3 - ಸರಿಯಾದ ಆಯ್ಕೆ **II** ಆಗಿದೆ

ಉತ್ತರ 4 - ಸರಿಯಾದ ಆಯ್ಕೆ **I** ಆಗಿದೆ

ಉತ್ತರ 5 - ಸರಿಯಾದ ಆಯ್ಕೆ **IV** ಆಗಿದೆ

# ಅಧ್ಯಾಯ C-02

# ವಿಮೆಯ ಪ್ರಮುಖ ಅಂಶಗಳು

**ಅಧ್ಯಾಯ ಪರಿಚಯ**

ಈ ಅಧ್ಯಾಯದಲ್ಲಿ, ವಿಮೆಯ ಕಾರ್ಯನಿರ್ವಹಣೆಯನ್ನು ನಿಯಂತ್ರಿಸುವ ವಿಮೆಯ ವಿವಿಧ ಪ್ರಮುಖ ಅಂಶಗಳು ಮತ್ತು ತತ್ವಗಳ ಬಗ್ಗೆ ನಾವು ಕಲಿಯುತ್ತೇವೆ.

**ಕಲಿಕೆಯ ಫಲಿತಾಂಶಗಳು**

**A.** ವಿಮೆಯ ಅಂಶಗಳು

**B.** ಆಸ್ತಿಗಳು ಮತ್ತು ಅಪಾಯ

**C.** ಆಪತ್ತು ಮತ್ತು ಗಂಡಾಂತರ

**D.** ಅಪಾಯ ಸಂಚಯನ

ಈ ಅಧ್ಯಾಯವನ್ನು ಅಧ್ಯಯನ ಮಾಡಿದ ನಂತರ, ಈ ಕೆಳಗಿನ ಅಂಶಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ:

1. ಆಸ್ತಿಗಳ ಬಗ್ಗೆ ತಿಳಿಯಲು
2. ಅಪಾಯ, ಆಪತ್ತುಗಳು ಮತ್ತು ಗಂಡಾಂತರಗಳು
3. ಅಪಾಯ ನಿರ್ವಹಣೆಯನ್ನು ಪ್ರಶಂಸಿಸಲು
4. ವಿಮೆಯಲ್ಲಿ ಸಂಚಯನವನ್ನು ತಿಳಿದುಕೊಳ್ಳಲು

## A. ವಿಮೆಯ ಅಂಶಗಳು

ವ ಿಮೆಯ ಪ್ರಕ್ರಿಯೆಯು ನಾಲ್ಕು ಅಂಶಗಳನ್ನು ಒಳಗೊಂಡಿದೆಯೆಂದು ನಾವು ನೋಡಿದ್ದೇವೆ

- ✓ ಆಸ್ತಿ
- ✓ ಅಪಾಯ
- ✓ ಅಪಾಯ ಸಂಚಯನ

ನಾವು ಈಗ ವಿಮಾ ಪ್ರಕ್ರಿಯೆಯ ವಿವಿಧ ಅಂಶಗಳನ್ನು ಸ್ವಲ್ಪ ವಿವರವಾಗಿ ನೋಡೋಣ.

### 1. ಆಸ್ತಿ

**ವ್ಯಾಖ್ಯಾನ**

ಆಸ್ತಿಯನ್ನು 'ಕೆಲವು ಲಾಭಗಳನ್ನು ನೀಡುವ ಮತ್ತು ಮಾಲೀಕರಿಗೆ ಆರ್ಥಿಕ ಮೌಲ್ಯವನ್ನು ಹೊಂದಿರುವ ಯಾವುದೇ ವಸ್ತು' ಎಂದು ವ್ಯಾಖ್ಯಾನಿಸಬಹುದು.

---

ಒಂದು ಆಸ್ತಿಯು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿರಬೇಕು:

- ➢ ಆರ್ಥಿಕ ಮೌಲ್ಯ: ಒಂದು ಆಸ್ತಿಯು ಆರ್ಥಿಕ ಮೌಲ್ಯವನ್ನು ಹೊಂದಿರಬೇಕು. ಮೌಲ್ಯವು ಎರಡು ರೀತಿಯಲ್ಲಿ ಉದ್ಭವಿಸಬಹುದು.

**a)** ಆದಾಯ ಉತ್ಪಾದನೆ: ಆಸ್ತಿಯು ಉತ್ಪಾದಕತೆಯನ್ನು ಹೊಂದಿರಬಹುದು ಮತ್ತು ಆದಾಯವನ್ನು ಉಂಟುಮಾಡಬಹುದು.

**ಉದಾಹರಣೆ**

ಬಿಸ್ಕತ್ತುಗಳನ್ನು ತಯಾರಿಸಲು ಬಳಸುವ ಯಂತ್ರ ಅಥವಾ ಹಾಲು ನೀಡುವ ಹಸು ಎರಡೂ ತಮ್ಮ ಮಾಲೀಕರಿಗೆ ಆದಾಯವನ್ನು ತರುತ್ತವೆ. ಆರೋಗ್ಯವಂತ ಕೆಲಸಗಾರರು ಸಂಸ್ಥೆಗೆ ಆಸ್ತಿಯೇ ಸರಿ.

---

**b)** ಅಗತ್ಯಗಳನ್ನು ಪೂರೈಸುವುದು: ಒಂದು ಅಥವಾ ಅನೇಕ ಅಗತ್ಯಗಳನ್ನು ಪೂರೈಸುವ ಮೂಲಕ ಆಸ್ತಿಯು ಮೌಲ್ಯವನ್ನು ಕೂಡ ಸೇರಿಸಬಹುದು.

**ಉದಾಹರಣೆ**

ಒಂದು ರೆಫ್ರಿಜರೇಟರ್ ಆಹಾರವನ್ನು ತಂಪಾಗಿರಿಸುತ್ತದೆ ಮತ್ತು ಸಂರಕ್ಷಿಸುತ್ತದೆ ಅದೇ ಒಂದು ಕಾರು ಸಾರಿಗೆಯಲ್ಲಿ ಸಮಾಧಾನ ಮತ್ತು ಸೌಕರ್ಯವನ್ನು ಒದಗಿಸುತ್ತದೆ, ಅದೇ ರೀತಿಯಾಗಿ ಅನಾರೋಗ್ಯದಿಂದ ಮುಕ್ತವಾದ ದೇಹವು ತನಗೆ ಮತ್ತು ಕುಟುಂಬಕ್ಕೆ ಮೌಲ್ಯವನ್ನು ನೀಡುತ್ತದೆ.

➢ ಕೊರತೆ ಮತ್ತು ಮಾಲೀಕತ್ವ

ಗಾಳಿ ಮತ್ತು ಸೂರ್ಯನ ಬೆಳಕಿನ ಬಗ್ಗೆ ಏನು ಹೇಳಬಹುದು**?** ಅವುಗಳು ಆಸ್ತಿಯಲ್ಲವೇ**? –** ಇದಕ್ಕೆ ಉತ್ತರ **'**ಅಲ್ಲ**'**ವೆಂದೇ ಹೇಳಬೇಕು**.**

ಕೆಲವು ವಸ್ತುಗಳು ಗಾಳಿ ಮತ್ತು ಸೂರ್ಯನ ಬೆಳಕಿನಷ್ಟು ಮೌಲ್ಯಯುತವಾಗಿವೆ. ಅವುಗಳಿಲ್ಲದೆ ನಾವು ಬದುಕಲು ಸಾಧ್ಯವಿಲ್ಲ. ಆದರೂ ಆರ್ಥಿಕ ಪದಗಳ ಅರ್ಥದಲ್ಲಿ ಅವುಗಳನ್ನು ಸ್ವತ್ತುಗಳೆಂದು ಪರಿಗಣಿಸಲಾಗುವುದಿಲ್ಲ.

ಇದಕ್ಕೆ ಎರಡು ಕಾರಣಗಳಿವೆ:

- ✓ ಅವುಗಳ ಪೂರೈಕೆಯು ಹೇರಳವಾಗಿದೆ ಮತ್ತು ವಿರಳವಾಗಿಲ್ಲ.
- ✓ ಯಾವುದೇ ಒಬ್ಬ ವ್ಯಕ್ತಿಯು ಅವುಗಳ ಮಾಲೀಕತ್ವವನ್ನು ಹೊಂದಿಲ್ಲ ಆದರೆ ಅವುಗಳು ಎಲ್ಲರಿಗೂ ಉಚಿತವಾಗಿ ಲಭ್ಯವಿರುತ್ತವೆ

ಒಂದು ಆಸ್ತಿಯು ಆಸ್ತಿಯೆಂದು ಅರ್ಹತೆಯನ್ನು ಪಡೆಯಲು ಇನ್ನೆರಡು ಷರತ್ತುಗಳನ್ನು ಪೂರೈಸಬೇಕು ಎಂದು ಇದು ಸೂಚಿಸುತ್ತದೆ - ಅದರ ಕೊರತೆ ಮತ್ತು ಅದರ ಮಾಲೀಕತ್ವ ಅಥವಾ ಯಾರದೋ ಸ್ವಾಧೀನತೆ.

➢ **ಆಸ್ತಿಗಳ ವಿಮೆ**

ವಿಮೆಯು ಅನಿರೀಕ್ಷಿತ ಘಟನೆಗಳಿಂದ ಉಂಟಾಗುವ ಹಣಕಾಸಿನ ನಷ್ಟಗಳ ವಿರುದ್ಧ ಮಾತ್ರ ರಕ್ಷಣೆಯನ್ನು ನೀಡುತ್ತದೆ ಮತ್ತು ಕಾಲಾಂತರದಲ್ಲಿ ಬಳಕೆಯಿಂದಾಗಿ ಆಗುವ ಆಸ್ತಿಗಳ ನೈಸರ್ಗಿಕ ಸವಕಳಿಯ ವಿರುದ್ಧ ರಕ್ಷಣೆಯನ್ನು ನೀಡುವುದಿಲ್ಲ.

ವಿಮೆಯು ನಷ್ಟ ಅಥವಾ ಹಾನಿಯಿಂದ ಆಸ್ತಿಯನ್ನು ರಕ್ಷಿಸಲು ಸಾಧ್ಯವಿಲ್ಲ ಎಂಬುದನ್ನು ನಾವು ಗಮನಿಸಬೇಕು. ವಿಮೆ ಮಾಡಿದ್ದರೂ ಅಥವಾ ವಿಮೆ ಮಾಡಿಲ್ಲದಿದ್ದರೂ ಭೂಕಂಪನವು ಮನೆಯನ್ನು ನಾಶಪಡಿಸುತ್ತದೆ. ವಿಮಾಗಾರರು ನಷ್ಟದ ಆರ್ಥಿಕ ಪರಿಣಾಮವನ್ನು ಕಡಿಮೆ ಮಾಡಲು ಹಣವನ್ನು ಮಾತ್ರ ಪಾವತಿಸಬಹುದು.

ಒಪ್ಪಂದದ ಉಲ್ಲಂಘನೆಯ ಸಂದರ್ಭದಲ್ಲಿ ನಷ್ಟಗಳು ಉಂಟಾಗಬಹುದು.

| **ಉದಾಹರಣೆ** |
|---|

ಇನ್ನೊಂದು ಬದಿಯಲ್ಲಿರುವ ಆಮದುದಾರರು ಸರಕುಗಳನ್ನು ಸ್ವೀಕರಿಸಲು ನಿರಾಕರಿಸಿದರೆ ಅಥವಾ ಪಾವತಿ ಮಾಡಲು ತಪ್ಪಿದರೆ ರಫ್ತುದಾರರು ದೊಡ್ಡ ಮೊತ್ತವನ್ನು ಕಳೆದುಕೊಳ್ಳುತ್ತಾರೆ.

---

➢ ಜೀವವಿಮೆ

ಹಾಗಾದರೆ ನಮ್ಮ ಬದುಕುಗಳ ಬಗ್ಗೆ ಏನು? ನಮ್ಮ ಸ್ವಂತ ಮತ್ತು ನಮ್ಮ ಪ್ರೀತಿಪಾತ್ರರ ಜೀವನಕ್ಕಿಂತ ನಮಗೆ ಮೌಲ್ಯಯುತವಾದ ಯಾವುದೂ ಇರುವುದಿಲ್ಲ. ಅಪಘಾತ ಅಥವಾ ಅನಾರೋಗ್ಯಕ್ಕೆ ಒಳಗಾದಾಗ ನಮ್ಮ ಜೀವನದ ಮೇಲೆ ಗಂಭೀರ ಪರಿಣಾಮವಾಗಬಹುದು.

ಇದು ಎರಡು ರೀತಿಯಲ್ಲಿ ಪರಿಣಾಮ ಬೀರಬಹುದು :

- ✓ ಮೊದಲನೆಯದಾಗಿ ನಿರ್ದಿಷ್ಟ ಕಾಯಿಲೆಯ ಚಿಕಿತ್ಸೆಗಾಗಿ ಚಿಕಿತ್ಸೆಯ ವೆಚ್ಚಗಳಿರುತ್ತವೆ.
- ✓ ಎರಡನೆಯದಾಗಿ ಸಾವು ಅಥವಾ ಅಂಗವೈಕಲ್ಯದಿಂದಾಗಿ ಆರ್ಥಿಕ ಗಳಿಕೆಯ ನಷ್ಟವಾಗಬಹುದು.

ವ್ಯಕ್ತಿಯ ವಿಮೆಗಳು ಅಥವಾ ವೈಯಕ್ತಿಕ ವಿಮಾ ಮಾರ್ಗಗಳಿಂದ ಈ ರೀತಿಯ ನಷ್ಟಗಳನ್ನು ಕವರ್ ಮಾಡಲಾಗುತ್ತದೆ. ಮೌಲ್ಯವನ್ನು ಹೊಂದಿರುವ [ಅಂದರೆ. ಆದಾಯವನ್ನು ಸೃಷ್ಟಿಸುವ ಅಥವಾ ಕೆಲವು ಅವಶ್ಯಕತೆಗಳನ್ನು ಪೂರೈಸುವ] ಮತ್ತು ಯಾವುದರ ನಷ್ಟವು [ಅದೃಷ್ಟಪೂರ್ವಕ ಅಥವಾ ಆಕಸ್ಮಿಕ ಘಟನೆಗಳಿಂದ] ಹಣಕಾಸಿನ ನಷ್ಟವನ್ನು ಉಂಟುಮಾಡುವಂತಹ [ಹಣದ ಪರಿಭಾಷೆಯಲ್ಲಿ ಅಳೆಯಬಹುದು] ಸ್ವತ್ತುಗಳನ್ನು ಹೊಂದಿರುವ ಯಾರಿಗೇ ಆದರೂ ವಿಮೆ ಮಾಡುವುದು ಸಾಧ್ಯವಿದೆ.

ಹೀಗೆ ಸಾಮಾನ್ಯವಾಗಿ ವಿಮಾ ಭಾಷೆಯಲ್ಲಿ ಈ ಸ್ವತ್ತುಗಳನ್ನು ವಿಮೆಯ ವಿಷಯವಸ್ತು ಎಂದು ಕರೆಯಲಾಗುತ್ತದೆ.

**2. ಅಪಾಯ**

ವಿಮೆಯ ಪ್ರಕ್ರಿಯೆಯಲ್ಲಿಯ ಎರಡನೇ ಅಂಶವೆಂದರೆ ಅಪಾಯದ ಪರಿಕಲ್ಪನೆ. ಅಪಾಯವನ್ನು ನಷ್ಟ ಉದ್ಭವಿಸುವ ಅವಕಾಶವೆಂದು ವ್ಯಾಖ್ಯಾನಿಸಬಹುದು. ಹೀಗೆ ಅಪಾಯವು ಘಟನೆ ಸಂಭವಿಸುವಿಕೆಯ ಸಂದರ್ಭದಲ್ಲಿ ಉಂಟಾಗಬಹುದಾದ ನಷ್ಟ ಅಥವಾ ಹಾನಿಯನ್ನು ಸೂಚಿಸುತ್ತದೆ. [ಕೆಲವೊಮ್ಮೆ ಅಪಾಯವನ್ನು ವಿಮೆಯ ವಿಷಯವಸ್ತುವನ್ನು ಉಲ್ಲೇಖಿಸಲು ಸಹ ಬಳಸಲಾಗುತ್ತದೆ.] ಮನೆ ಸುಟ್ಟುಹೋಗಬಹುದು ಅಥವಾ ಕಾರು ಅಪಘಾತಕ್ಕೊಳಗಾಗಬಹುದು ಎಂದು ಸಾಮಾನ್ಯವಾಗಿ ಯಾರೂ ನಿರೀಕ್ಷಿಸುವುದಿಲ್ಲ. ಆದರೂ ಅದು ಸಂಭವಿಸಬಹುದು.

ಅಪಾಯಗಳ ಉದಾಹರಣೆಗಳೆಂದರೆ ಮನೆ ಸುಡುವಿಕೆ ಅಥವಾ ಕಳ್ಳತನ ಅಥವಾ ಅಪಘಾತದಿಂದ ಉಂಟಾಗುವ ಆರ್ಥಿಕ ನಷ್ಟದ ಸಾಧ್ಯತೆ, ಇದು ಅಂಗಾಂಗವನ್ನು ಕಳೆದುಕೊಳ್ಳುವಲ್ಲಿ ಕಾರಣವಾಗುತ್ತದೆ.

ಇದು ಎರಡು ಒಳಾರ್ಥಗಳನ್ನು ಹೊಂದಿದೆ.

i. **ಮೊದಲನೆಯದಾಗಿ,** ನಷ್ಟವು ಸಂಭವಿಸಬಹುದು ಅಥವಾ ಸಂಭವಿಸದೇ ಇರಬಹುದು ಎಂದು ಅರ್ಥ.

ii. **ಎರಡನೆಯದಾಗಿ,** ನಿಜವಾಗಿ ನಷ್ಟಕ್ಕೆ ಕಾರಣವಾಗುವ ಘಟನೆಯನ್ನು ಅಪಾಯ/ಗಂಡಾಂತರವೆಂದು ಕರೆಯಲಾಗುತ್ತದೆ. ಇದು ನಷ್ಟದ ಕಾರಣವಾಗಿದೆ

**ಉದಾಹರಣೆ**

ಗಂಡಾಂತರಗಳ ಉದಾಹರಣೆಗಳೆಂದರೆ ಬೆಂಕಿ, ಭೂಕಂಪಗಳು, ಪ್ರವಾಹಗಳು, ಸಿಡಿಲು, ಕಳ್ಳತನ, ಹೃದಯಾಘಾತ ಇತ್ಯಾದಿ.

**ನೈಸರ್ಗಿಕ ಸವಕಳಿ**

ಶಾಶ್ವತವಾಗಿ ಯಾವುದೂ ಉಳಿಯುವುದಿಲ್ಲವೆಂಬುದು ನಿಜವೇ ಆಗಿದೆ. ಪ್ರತಿಯೊಂದು ಆಸ್ತಿಯು ಕ್ರಿಯಾತ್ಮಕವಾಗಿರುವ ಮತ್ತು ಪ್ರಯೋಜನಗಳನ್ನು ನೀಡಬಲ್ಲ ಸೀಮಿತ ಜೀವಿತಾವಧಿಯನ್ನು ಹೊಂದಿರುತ್ತದೆ. ತಮ್ಮ ಮೊಬೈಲ್ ಗಳು, ವಾಷಿಂಗ್ ಮೆಷಿನ್ ಗಳು ಮತ್ತು ಬಟ್ಟೆಗಳು ಸವೆದಾಗ ಅವುಗಳನ್ನು ತಿರಸ್ಕರಿಸುವುದು ಅಥವಾ ಬದಲಾಯಿಸುವುದು ಸಹಜ ಪ್ರಕ್ರಿಯೆಯಾಗಿದೆ. ಆದ್ದರಿಂದ ಸಾಮಾನ್ಯ ಸವಕಳಿಯಿಂದ ಉಂಟಾಗುವ ನಷ್ಟಗಳು ವಿಮೆಯಲ್ಲಿ ಒಳಗೊಂಡಿರುವುದಿಲ್ಲ.

ಅಪಾಯಕ್ಕೆ ಒಡ್ಡಿಕೊಳ್ಳುವುದು: ಗಂಡಾಂತರದ ಸಂಭವವು ನಷ್ಟಕ್ಕೆ ಕಾರಣವಾಗಬೇಕೆಂದೇನಿಲ್ಲ. ಆಂಧ್ರದ ಕರಾವಳಿಯಲ್ಲಿ ಉಂಟಾದ ಪ್ರವಾಹದಿಂದ ಮುಂಬೈಯಲ್ಲಿ ನೆಲೆಸಿರುವ ವ್ಯಕ್ತಿಗೆ ಯಾವುದೇ ನಷ್ಟವಾಗುವುದಿಲ್ಲ. ನಷ್ಟ ಸಂಭವಿಸಬೇಕಾದರೆ ಆಸ್ತಿಯು ಅಪಾಯಕ್ಕೆ ಒಡ್ಡಿಕೊಂಡಿರಬೇಕು. ವಿಮಾ ಪರಿಹಾರಕ್ಕೆ ಕೇವಲ ಅಪಾಯಕ್ಕೆ ಒಡ್ಡಿಕೊಂಡಿರುವುದು ಅಷ್ಟೇ ಸಾಕಾಗುವುದಿಲ್ಲ.

**ಉದಾಹರಣೆ**

ನಿಜವಾದ ಹಾನಿಯನ್ನುಂಟುಮಾಡದೆ ಫ್ಯಾಕ್ಟರಿ ಆವರಣದಲ್ಲಿ ಬೆಂಕಿಯು ಸಂಭವಿಸಬಹುದು. ಗಂಡಾಂತರದ ಪರಿಣಾಮವಾಗಿ ನಿಜವಾದ ಆರ್ಥಿಕ (ಆರ್ಥಿಕ) ನಷ್ಟವು ಉಂಟಾದರೆ ಮಾತ್ರ ವಿಮೆ ಕಾರ್ಯರೂಪಕ್ಕೆ ಬರುತ್ತದೆ.

**ಅಪಾಯದ ಮಾನ್ಯತೆಯ ಮಟ್ಟ:**

ಎರಡು ಸ್ವತ್ತುಗಳು ಒಂದೇ ಗಂಡಾಂತರಕ್ಕೆ ಒಡ್ಡಿಕೊಂಡಿರಬಹುದು ಆದರೆ ನಷ್ಟದ ಸಂಭವನೀಯತೆ ಅಥವಾ ನಷ್ಟದ ಪ್ರಮಾಣದಲ್ಲಿ ಹೆಚ್ಚಿನ ಬದಲಾವಣೆ ಕಾಣಬಹುದು. ನೀರು ಸಾಗಿಸುವ ಟ್ಯಾಂಕರ್ ಗಿಂತ ಸ್ಫೋಟಕಗಳನ್ನು ಸಾಗಿಸುವ ವಾಹನವು ಬೆಂಕಿಯಿಂದ ಹೆಚ್ಚಿನ ನಷ್ಟವನ್ನುಂಟುಮಾಡುತ್ತದೆ.

**3. ಅಪಾಯ ನಿರ್ವಹಣೆ**

➢ **ಅನುಭವಿಸಬಹುದಾದ ಹಾನಿಯ ಪ್ರಮಾಣ**

ವ್ಯಕ್ತಿ ಅಥವಾ ವ್ಯವಹಾರದ ಮೇಲೆ ಆಗುವ ಅದರ ಪ್ರಭಾವದಿಂದ ನಷ್ಟದ ಪ್ರಮಾಣವನ್ನು ತಿಳಿಸಲ್ಪಡುತ್ತದೆ. ಇದರ ಆಧಾರದ ಮೇಲೆ ಮೂರು ರೀತಿಯ ಅಪಾಯದ ಘಟನೆಗಳು ಅಥವಾ ಸಂದರ್ಭಗಳನ್ನು ಗುರುತಿಸಬಹುದು:

- **ಗಂಭೀರ**

ನಷ್ಟಗಳು ಇಂತಹ ಪ್ರಮಾಣದಲ್ಲಿದ್ದಾಗ; ಅದು ಸಂಪೂರ್ಣ ನಷ್ಟ ಅಥವಾ ದಿವಾಳಿತನಕ್ಕೆ ಕಾರಣವಾಗಬಹುದು. ಅಪಘಾತವು ಗಮನಾರ್ಹ ಮತ್ತು ತೀವ್ರ ಪರಿಣಾಮದ್ದಾಗಿದ್ದು ಅಂಗವೈಕಲ್ಯ, ಉಪಕರಣಗಳು ಮತ್ತು ಪರಿಸರಕ್ಕೆ ಹಾನಿಯನ್ನು ಉಂಟುಮಾಡಿದ ನಷ್ಟಗಳನ್ನು ಸ್ವಲ್ಪ ಮಟ್ಟಿಗೆ ಹಿಂತಿರುಗಿಸಬಹುದು. ಗಂಭೀರ ನಷ್ಟಗಳು ಕಾರ್ಯಾಚರಣೆಯನ್ನು ಮುಂದುವರಿಸಲು ಸಾಲವನ್ನು ಪಡೆಯಲು ಸಂಸ್ಥೆಯನ್ನು ಒತ್ತಾಯಿಸುತ್ತ ಗಂಭೀರವಾದ ಹಣಕಾಸಿನ ನಷ್ಟಗಳಿಗೆ ಕಾರಣವಾಗುತ್ತವೆ.

| **ಉದಾಹರಣೆ: ಗಂಭೀರ** |
|---|

- ✓ ಗುರ್ ಗಾಂವ್ ನಲ್ಲಿಯ ಬೃಹತ್ ಬಹುರಾಷ್ಟ್ರೀಯ ಕಂಪನಿಯೊಂದರ ಸ್ಥಾವರದಲ್ಲಿ ಬೆಂಕಿ ಕಾಣಿಸಿಕೊಂಡು **1** ಕೋಟಿ ಮೌಲ್ಯದ ದಾಸ್ತಾನು ನಾಶವಾಗಿದೆ. ನಷ್ಟವು ಭಾರೀ ಪ್ರಮಾಣದಲ್ಲಿದೆ ಆದರೆ ದಿವಾಳಿತನಕ್ಕೆ ಕಾರಣವಾಗುವಷ್ಟು ಹೆಚ್ಚಿಲ್ಲ.
- ✓ ಕಡಲುಗಳ್ಳರ ಹಡಗಿನಿಂದ ನೌಕಾ ಸ್ಫೋಟಕ(ಟಾರ್ಪಿಡೊ)ವು ಇಡೀ ಪ್ರವಾಸಿ ಹಡಗನ್ನು ಮುಳುಗಿಸುತ್ತದೆ ಆದರೆ ಹೆಚ್ಚಿನ ಪ್ರಯಾಣಿಕರನ್ನು ಉಳಿಸಲಾಗುತ್ತದೆ.
- ✓ ಕಿಡ್ನಿ ಹಾನಿಗೆ ಕಾರಣವಾಗುವ ಒಂದು ದೊಡ್ಡ ಅಪಘಾತವು ಮೂತ್ರಪಿಂಡ ಕಸಿ ಕಾರ್ಯಾಚರಣೆಯ ಅವಶ್ಯಕತೆ ಮತ್ತು ಪ್ರತಿಬಂಧಕ ವೆಚ್ಚವನ್ನು ಉಂಟುಮಾಡುತ್ತದೆ

- **ದುರಂತ**

ದುರಂತದ ನಷ್ಟಗಳು ಹೆಚ್ಚಿನ ಸಂಖ್ಯೆಯಲ್ಲಿ ಜನರಿಗೆ ಸಾವು ಅಥವಾ ಸಂಪೂರ್ಣ ಅಂಗವೈಕಲ್ಯ, ಆಸ್ತಿಗಳ ವ್ಯಾಪಕ ನಷ್ಟ, ಪರಿಸರದ ಮೇಲೆ ಪ್ರಾಯೋಗಿಕವಾಗಿ ಪುನಃ ಬದಲಾಯಿಸಲಾಗದಂತಹ ಗಮನಾರ್ಹವಾದ ಪ್ರಭಾವವನ್ನು ಹೊಂದಿರುತ್ತವೆ. ದುರಂತದ ನಷ್ಟಗಳು ಸಾಮಾನ್ಯವಾಗಿ ಹಠಾತ್, ವ್ಯಾಪಕ ಮತ್ತು ತಡೆಯಲಾಗದ ವಿಪತ್ತುಗಳನ್ನು ಸೂಚಿಸುತ್ತವೆ.

| **ಉದಾಹರಣೆ: ದುರಂತ** |
|---|

- ✓ ಸಂಪೂರ್ಣವಾಗಿ ಕೆಲವು ಹಳ್ಳಿಗಳನ್ನು ನಾಶಪಡಿಸುವ ಭೂಕಂಪ ಅಥವಾ ಪ್ರವಾಹ
- ✓ ವಿಶಾಲ ಭೂಪ್ರದೇಶದ ಮೇಲಿನ ಬಹುಕೋಟಿ ಬೆಲೆಯ ಸ್ಥಾಪನೆಯನ್ನು ಸಂಪೂರ್ಣವಾಗಿ ನಾಶಪಡಿಸುವ ಭಯಂಕರ ಬೆಂಕಿ
- ✓ ವಿಶ್ವ ವ್ಯಾಪಾರ ಕೇಂದ್ರ(ವರ್ಲ್ಡ್ ಟ್ರೇಡ್ ಸೆಂಟರ್)ದ ಮೇಲಾದ **9/11** ರ ಭಯೋತ್ಪಾದಕರ ದಾಳಿಯು ಹೆಚ್ಚಿನ ಸಂಖ್ಯೆಯ ಜನರಿಗೆ ಗಾಯಗಳನ್ನು ಉಂಟುಮಾಡಿತು

- ✓ ಕೋವಿಡ್ -**19** ನಂತಹ ಸಾಂಕ್ರಾಮಿಕ ರೋಗವು ಜಗತ್ತಿನಾದ್ಯಂತ ಜನರಿಗೆ ರೋಗವನ್ನು ಉಂಟುಮಾಡುತ್ತದೆ

---

- ➢ **ಕನಿಷ್ಠ / ಅತ್ಯಲ್ಪ**

ಸಂಭವನೀಯ ನಷ್ಟಗಳು ಅತ್ಯಲ್ಪವಾಗಿರುತ್ತವೆ ಮತ್ತು ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯ ಮೇಲೆ ಯಾವುದೇ ಅನಗತ್ಯ ಹಣಕಾಸಿನ ಒತ್ತಡವನ್ನು ಹೇರದೆ ಅಸ್ತಿತ್ವದಲ್ಲಿರುವ ಆಸ್ತಿಗಳು ಅಥವಾ ಪ್ರಸ್ತುತ ಆದಾಯದಿಂದ ಸುಲಭವಾಗಿ ಪೂರೈಸಬಹುದಾಗಿವೆ.

**ಉದಾಹರಣೆ**

- ✓ ಒಂದು ಸಣ್ಣ ಕಾರು ಅಪಘಾತವು ಕಾರಿನ ಬದಿಯಲ್ಲಿ ಸ್ವಲ್ಪ ತರಚುಗಳಿಗೆ ಕಾರಣವಾಗುತ್ತದೆ, ಇದರಿಂದಾಗಿ ಸ್ವಲ್ಪ ಬಣ್ಣವು ಹಾನಿಗೊಳಗಾಗುತ್ತದೆ ಮತ್ತು ಕಾರಿನ ಹೊರಮೈ(ಫೆಂಡರ್) ಸ್ವಲ್ಪ ಬಾಗುತ್ತದೆ.
- ✓ ಸಾಮಾನ್ಯ ಶೀತ ಮತ್ತು ಕೆಮ್ಮಿನಿಂದ ಬಳಲುತ್ತಿರುವ ಓರ್ವ ವ್ಯಕ್ತಿ.

---

**4. ವಿಪತ್ತುಗಳು ಮತ್ತು ಗಂಡಾಂತರಗಳು**

ನಷ್ಟದ ಸಂಭವನೀಯತೆಯನ್ನು ಅಥವಾ ಅದರ ತೀವ್ರತೆಯನ್ನು ಹೆಚ್ಚಿಸುವ, ಮತ್ತು ಅಪಾಯದ ಮೇಲೆ ಪರಿಣಾಮ(ಗಳು) ಬೀರುವ ಸ್ಥಿತಿ ಅಥವಾ ಪರಿಸ್ಥಿತಿಗಳನ್ನು ವಿಪತ್ತುಗಳೆಂದು ಕರೆಯಲಾಗುತ್ತದೆ. ವಿಮಾಗಾರರು ಅಪಾಯದ ಮೌಲ್ಯಮಾಪನವನ್ನು ಮಾಡಿದಾಗ, ಅದು ಸಾಮಾನ್ಯವಾಗಿ ಆಸ್ತಿಯು ಒಡ್ಡಿಕೊಂಡಿರುವ ವಿಪತ್ತುಗಳನ್ನು ಉಲ್ಲೇಖಿಸುತ್ತದೆ.

ವಿಮೆಯ ಪರಿಭಾಷೆಯಲ್ಲಿ ವಿಪತ್ತು ಎಂಬ ಪದವು ನಿರ್ದಿಷ್ಟ ಗಂಡಾಂತರದಿಂದ ಉಂಟಾಗುವ ನಷ್ಟದ ಅವಕಾಶವನ್ನು ಸೃಷ್ಟಿಸುವ ಅಥವಾ ಹೆಚ್ಚಿಸುವ ಪರಿಸ್ಥಿತಿಗಳು ಅಥವಾ ವೈಶಿಷ್ಟ್ಯಗಳು ಅಥವಾ ಗುಣಲಕ್ಷಣಗಳನ್ನು ಸೂಚಿಸುತ್ತದೆ. ಅಪಾಯವನ್ನು ಒಡ್ಡುವ ವಿವಿಧ ವಿಪತ್ತುಗಳ ಸಂಪೂರ್ಣ ಜ್ಞಾನವು ಅಂಡರ್ ರೈಟಿಂಗ್ ಸಲುವಾಗಿ ಅತ್ಯಂತ ಅವಶ್ಯಕವಾಗಿದೆ. ಆಸ್ತಿಗಳು, ಗಂಡಾಂತರ ಮತ್ತು ವಿಪತ್ತುಗಳ ನಡುವಿನ ಸಂಬಂಧದ ಉದಾಹರಣೆಗಳನ್ನು ಕೆಳಗೆ ನೀಡಲಾಗಿದೆ.

| **ಆಸ್ತಿ** | **ಗಂಡಾಂತರ** | **ವಿಪತ್ತು** |
|---|---|---|
| **ಜೀವ** | ಕ್ಯಾನ್ಸರ್ | ಅತಿಯಾದ ಧೂಮ್ರಪಾನ |
| **ಕಾರ್ಖಾನೆ** | ಬೆಂಕಿ | ದುರ್ಲಕ್ಷ ಮಾಡಲಾದ ಸ್ಫೋಟಕ ವಸ್ತುಗಳು |
| **ಕಾರು** | ಕಾರು ಅಪಘಾತ | ಚಾಲಕರಿಂದ ಅಜಾಗರೂಕತೆಯ ಚಾಲನೆ |
| **ಸರಕು** | ಬಿರುಗಾಳಿ | ಸರಕುಗಳಲ್ಲಿ ನೀರು ಸೇರುವುದು ಮತ್ತು ಹಾಳಾಗುವುದು; ಜಲನಿರೋಧಕ ಧಾರಕಗಳಲ್ಲಿ ಸರಕುಗಳನ್ನು ಪ್ಯಾಕ್ ಮಾಡಲಾಗಿಲ್ಲ |

**ಪ್ರಮುಖ**

- ವಿಪತ್ತುಗಳ ನಮೂನೆಗಳು

a) **ಭೌತಿಕ ವಿಪತ್ತು** ನಷ್ಟದ ಸಾಧ್ಯತೆಯನ್ನು ಹೆಚ್ಚಿಸುವ ಭೌತಿಕ ಸ್ಥಿತಿಯಾಗಿದೆ.

**ಉದಾಹರಣೆ**

i. ಕಟ್ಟಡದಲ್ಲಿಯ ದೋಷಯುಕ್ತ ವೈರಿಂಗ್

ii. ಜಲ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವುದು

iii. ಜಡತ್ವದ ಜೀವನಶೈಲಿಯನ್ನು ನಡೆಸುವುದು

---

b) **ನೈತಿಕ ಅಪಾಯ**ವು ವ್ಯಕ್ತಿಯಲ್ಲಿಯ ನಷ್ಟದ ಆವರ್ತನ ಅಥವಾ ತೀವ್ರತೆಯ ಮೇಲೆ ಪ್ರಭಾವ ಬೀರುವ ಅಪ್ರಾಮಾಣಿಕತೆ ಅಥವಾ ಗುಣದಲ್ಲಿಯ ದೋಷಗಳನ್ನು ಸೂಚಿಸುತ್ತದೆ. ಒಬ್ಬ ಅಪ್ರಾಮಾಣಿಕ ವ್ಯಕ್ತಿಯು ವಿಮೆಯ ಸೌಲಭ್ಯವನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ವಂಚನೆ ಮಾಡಲು ಮತ್ತು ಹಣವನ್ನು ಗಳಿಸಲು ಪ್ರಯತ್ನಿಸಬಹುದು.

**ಉದಾಹರಣೆ**

ಓರ್ವರು ತಮ್ಮ ಆಸ್ತಿಗೆ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿ ಪಾಲಿಸಿಯ ಅಡಿಯಲ್ಲಿ ನಷ್ಟದ ವಿರುದ್ಧ ಕ್ಲೇಮ್ ಗಳನ್ನು ಸಂಗ್ರಹಿಸಿದರೆ, ಅಂತಹ ಕ್ಲೇಮ್ ಗಳು ಸ್ಪಷ್ಟವಾಗಿ ಮೋಸದಿಂದ ಕೂಡಿರುತ್ತವೆ ಮತ್ತು ನ್ಯಾಯಸಮ್ಮತವಾಗಿ ತಿರಸ್ಕರಿಸಲ್ಪಡಬಹುದು

ನೈತಿಕ ಅಪಾಯದ ಒಂದು ಶ್ರೇಷ್ಠ ನಿದರ್ಶನವೆಂದರೆ ಕಾರ್ಖಾನೆಗಾಗಿ ವಿಮೆಯನ್ನು ಖರೀದಿಸುವುದು ಮತ್ತು ನಂತರ ವಿಮಾ ಮೊತ್ತವನ್ನು ಸಂಗ್ರಹಿಸಲು ಅದನ್ನು ಸುಟ್ಟುಹಾಕುವುದು ಅಥವಾ ಪ್ರಮುಖ ಕಾಯಿಲೆಯ ಪ್ರಾರಂಭದ ನಂತರ ಆರೋಗ್ಯ ವಿಮೆಯನ್ನು ಖರೀದಿಸುವುದು.

---

c) ಹಾನಿಗಳಿಗಾಗಿ ಪಾವತಿಸುವ ಹೊಣೆಗಾರಿಕೆಯನ್ನು ಒಳಗೊಂಡಿರುವ ಪ್ರಕರಣಗಳಲ್ಲಿ **ಕಾನೂನು ಅಪಾಯ**ವು ಹೆಚ್ಚು ಪ್ರಚಲಿತವಾಗಿರುತ್ತದೆ. ಕಾನೂನು ವ್ಯವಸ್ಥೆ ಅಥವಾ ನಿಯಂತ್ರಕ ಪರಿಸರದ ಕೆಲವು ವೈಶಿಷ್ಟ್ಯಗಳು ನಷ್ಟದ ಸಂಭವ ಅಥವಾ ತೀವ್ರತೆಯನ್ನು ಹೆಚ್ಚಿಸಿದಾಗ ಇದು ಉದ್ಭವಿಸುತ್ತದೆ.

**ಉದಾಹರಣೆ**

ಅಪಘಾತಗಳ ಸಂದರ್ಭದಲ್ಲಿ ಕಾರ್ಮಿಕರ ಪರಿಹಾರವನ್ನು ನಿಯಂತ್ರಿಸುವ ಕಾನೂನನ್ನು ಜಾರಿಗೊಳಿಸುವುದರಿಂದ ಪಾವತಿಸಬೇಕಾದ ಹೊಣೆಗಾರಿಕೆಯ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಬಹುದು.

---

ಅಪಾಯಗಳು ಮತ್ತು ಸಂಬಂಧಿತ ವಿಪತ್ತುಗಳ ನಡುವಿನ ಸಂಬಂಧವು ವಿಮೆಯಲ್ಲಿನ ಪ್ರಮುಖ ಕಾಳಜಿಯ ವಿಷಯವಾಗಿದೆ. ಈ ಆಧಾರದ ಮೇಲೆ ಸ್ವತ್ತುಗಳನ್ನು ವಿವಿಧ ಅಪಾಯದ ವರ್ಗಗಳಾಗಿ ವರ್ಗೀಕರಿಸಲಾಗಿದೆ

ಮತ್ತು ಸಂಬಂಧಿತ ವಿಪತ್ತುಗಳ ಉಪಸ್ಥಿತಿಯ ಪರಿಣಾಮವಾಗಿ ನಷ್ಟಕ್ಕೆ ಒಳಗಾಗುವ ಸಾಧ್ಯತೆಯು ಅಧಿಕವಾಗಿದ್ದರೆ ವಿಮಾ ರಕ್ಷಣೆಗೆ ವಿಧಿಸಲಾದ ಬೆಲೆ [ಕಂತುಗಳು] ಹೆಚ್ಚಾಗುತ್ತದೆ.

**5. ಲೆಕ್ಕಾಚಾರದ ಪ್ರಕಾರ ವಿಮೆ (ಅಪಾಯದ ಸಂಚಯನ(ಪೂಲಿಂಗ್))**

ವಿಮೆಯಲ್ಲಿ ಮೂರನೇ ಅಂಶವು ವಿಮೆಯನ್ನು ಸಾಧ್ಯವಾಗಿಸುವ ಲೆಕ್ಕಾಚಾರದ ತತ್ವವಾಗಿದೆ. ಇದನ್ನು ಅಪಾಯದ ಸಂಚಯನ(ಪೂಲಿಂಗ್)ದ ತತ್ವವೆಂದು ಕರೆಯಲಾಗುತ್ತದೆ.

**ಉದಾಹರಣೆ**

ಸರಾಸರಿ ರೂ. 50000 ನಷ್ಟವನ್ನು ಉಂಟುಮಾಡಬಹುದಾದ ಸುಮಾರು 100000 ಆರ್ ಸಿಸಿ ಮನೆಗಳು ಬೆಂಕಿಯ ಅಪಾಯಕ್ಕೆ ಒಡ್ಡಿಕೊಂಡಿವೆಯೆಂದು ಭಾವಿಸೋಣ. ಮನೆಗೆ ಬೆಂಕಿ ತಗುಲುವ ಸಾಧ್ಯತೆ 1000 ರಲ್ಲಿ 2 [ಅಥವಾ 2/ 1000 = 0.002] ಆಗಿದ್ದರೆ, ನಷ್ಟದ ಒಟ್ಟು ಮೊತ್ತವು ರೂ. 10000000 [= 50000**x** 0.002 **x** 100000] ಎಂದು ಅರ್ಥ.

ವಿಮಾಗಾರರು 100000 ಮನೆಗಳ ಮಾಲೀಕರಿಂದ ರೂ 100 ಕೊಡುಗೆಗಳನ್ನು ಪಡೆದರೆ ಮತ್ತು ಈ ಕೊಡುಗೆಗಳನ್ನು (100000 **x** 100 = ರೂ. 10000000) ಒಂದೇ ನಿಧಿಗೆ ಒಟ್ಟುಗೂಡಿಸಿದರೆ, ಬೆಂಕಿಯಿಂದ ಬಳಲುತ್ತಿರುವ ದುರದೃಷ್ಟಕರರಾದ ಕೆಲವರ ನಷ್ಟವನ್ನು ಪಾವತಿಸಲು ಸಾಕಾಗುತ್ತದೆ.

ವಿಮೆ ಮಾಡಲಾದ ಎಲ್ಲರಲ್ಲಿ ಸಮಾನತೆ [ನ್ಯಾಯ] ಇರುವುದನ್ನು ಖಚಿತಪಡಿಸಿಕೊಳ್ಳಲು, ಎಲ್ಲ ಮನೆಗಳು ಒಂದೇ ರೀತಿಯ ಅಪಾಯಕ್ಕೆ ಒಡ್ಡಿಕೊಂಡಿರುವುದು ಅವಶ್ಯಕವಾಗಿದೆ. ಮೇಲಿನ ಉದಾಹರಣೆಯಲ್ಲಿ ಮಣ್ಣಿನ ಮನೆಗಳ ಅಪಾಯದ ಒಡ್ಡಿಕೊಂಡಿರುವಿಕೆ ವಿಭಿನ್ನವಾಗಿರುತ್ತದೆ.

**a) ಈ ತತ್ವವು ವಿಮೆಯಲ್ಲಿ ನಿಖರವಾಗಿ ಹೇಗೆ ಕಾರ್ಯನಿರ್ವಹಿಸುತ್ತದೆ?**

ಸಮಾನವಾದ ಗಂಡಾಂತರದ ಕಾರಣದಿಂದಾಗಿ ನಷ್ಟದ ಸಾಧ್ಯತೆಗೆ ಒಡ್ಡಿಕೊಂಡಿರುವ ಎಲ್ಲ ವಿಮಾದಾರರ ವಿವಿಧ ಅಪಾಯಗಳನ್ನು ಒಟ್ಟುಗೂಡಿಸುವ ಮೂಲಕ ವಿಮಾಗಾರರು ಆ ಅಪಾಯ ಮತ್ತು ಅದರ ಆರ್ಥಿಕ ಪರಿಣಾಮವನ್ನು ಊಹಿಸಲು ಸಾಧ್ಯವಾಗುತ್ತದೆ.

| ಹೆಚ್ಚಿನ ಸಂಖ್ಯೆಯ ಜನರು | ಪಾವತಿಸುವ ಕಂತು | ಕಂತು | ನಷ್ಟ ಅನುಭವಿಸಿದ ಕೆಲವರಿಗೆ ಕ್ಲೇಮ್ ಗಳನ್ನು ಪಾವತಿಸುವುದು |
|---|---|---|---|
| ಅನೇಕ ಜನರು ಪಾವತಿಸುತ್ತಾರೆ | ಕಂತಿನ ರೂಪದಲ್ಲಿ ಸಣ್ಣ ಮೊತ್ತದ ಹಣ | ಈ ಸಣ್ಣ ಮೊತ್ತವನ್ನು ಸಾಮಾನ್ಯ ನಿಧಿಯಾಗಿ ಒಟ್ಟುಗೂಡಿಸಲಾಗುತ್ತದೆ, ಸಂಖ್ಯಾಶಾಸ್ತ್ರೀಯವಾಗಿ ಅಂದಾಜು ಮಾಡಲಾದ ಸಂಖ್ಯೆಯ ಕ್ಲೇಮ್ ಗಳನ್ನು ಪಾವತಿಸಲು ಸಾಕಷ್ಟು ದೊಡ್ಡದಾಗಿದೆ | ನಷ್ಟವನ್ನು ಅನುಭವಿಸಿದವರಿಗೆ ದೊಡ್ಡ ಮೊತ್ತವನ್ನು ನೀಡಲಾಗುತ್ತದೆ |

**b)** ಅಪಾಯದ ಸಂಚಯನ( ಪೂಲಿಂಗ್) ಮತ್ತು ದೊಡ್ಡ ಸಂಖ್ಯೆಗಳ ನಿಯಮ

ಹಾನಿಯ ಸಂಭವನೀಯತೆ [ಮೇಲಿನ ಉದಾಹರಣೆಯಲ್ಲಿ **1000** ರಲ್ಲಿ **2** ಅಥವಾ **0.002** ರಂತೆ ಪಡೆಯಲಾದ]ಯು ಕಂತನ್ನು ನಿರ್ಧರಿಸುವ ಆಧಾರವನ್ನು ರೂಪಿಸುತ್ತದೆ. ನಿಜವಾದ ಅನುಭವವು ನಿರೀಕ್ಷಿಸಿದಂತೆ ಆಗಿದ್ದರೆ ವಿಮಾಗಾರರು ನಷ್ಟದ ಅಪಾಯವನ್ನು ಎದುರಿಸುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಲವಾರು ವಿಮಾದಾರರ ಕಂತುಗಳು ಅಪಾಯದಿಂದ ಪ್ರಭಾವಿತರಾದವರ ನಷ್ಟವನ್ನು ಸಂಪೂರ್ಣವಾಗಿ ಸರಿದೂಗಿಸಲು ಸಾಕಾಗುತ್ತದೆ. ಆದರೆ ನಿಜವಾದ ಅನುಭವವು ನಿರೀಕ್ಷೆಗಿಂತ ಹೆಚ್ಚು ಪ್ರತಿಕೂಲವಾಗಿದ್ದರೆ ಮತ್ತು ಕ್ಲೇಮ್ ಗಳನ್ನು ಪಾವತಿಸಲು ಸಂಗ್ರಹಿಸಿದ ಕಂತುಗಳು ಸಾಕಾಗದೇ ಇದ್ದಲ್ಲಿ ವಿಮಾಗಾರರು ಅಪಾಯವನ್ನು ಎದುರಿಸಬೇಕಾಗುತ್ತದೆ.

ವಿಮಾಗಾರರು ತಮ್ಮ ಊಹೆಗಳ ಬಗ್ಗೆ ಹೇಗೆ ಖಾತ್ರಿಯನ್ನು ಹೊಂದಬಹುದು**?** **"**ದೊಡ್ಡ ಸಂಖ್ಯೆಗಳ ನಿಯಮ" ಎಂದು ಕರೆಯಲ್ಪಡುವ ತತ್ವದಿಂದಾಗಿ ಇದು ಸಾಧ್ಯವಾಗುತ್ತದೆ. ಅಪಾಯ ಸಂಚಯನದ ಗಾತ್ರವು ದೊಡ್ಡದಾದಷ್ಟು, ನಷ್ಟದ ಸರಾಸರಿಯ ಅಂದಾಜು ಅಥವಾ ನಿರೀಕ್ಷಿತ ಸರಾಸರಿಯು ನಿಜವಾದ ನಷ್ಟಕ್ಕೆ ಹತ್ತಿರವಾಗಿರುತ್ತದೆ ಎಂದು ಅದು ಹೇಳುತ್ತದೆ.

**c)** ವಿಮಾ ಕಂಪನಿಗಳು ಆರ್ಥಿಕವಾಗಿ ಸದೃಢವಾಗಿ ಉಳಿಯಲು:

ಅಪಾಯಗಳ ಸಂಚಯನಗಳು ಮತ್ತು ರಚಿಸಲಾದ ಕಂತಿನ ಸಂಚಯನಗಳು ಕ್ಲೇಮ್ ಗಳನ್ನು ಪಾವತಿಸುವ ಹೊಣೆಗಾರಿಕೆಯನ್ನು ಪೂರೈಸಲು ಸಾಕಾಗುವಷ್ಟಿಲ್ಲದೇ ಇದ್ದರೆ (ಘಟನೆಗಳು ಸಂಭವಿಸಿದರೆ), ಅಪಾಯದ ಸಂಚಯನದ ಮತ್ತು ವಿಮೆಯ ವ್ಯವಸ್ಥೆಯು ವಿಫಲವಾಗಬಹುದು. ವಿಮಾಗಾರರು ಸಂಚಯನದ ಎಲ್ಲ ಸದಸ್ಯರಿಗೆ ಕೊಟ್ಟ ತಮ್ಮ ಭರವಸೆಗಳನ್ನು ಪೂರೈಸಲು ಸಾಕಷ್ಟು ಹಣವನ್ನು ಹೊಂದಿರಬೇಕು. ಅವರು ಸಾಕಷ್ಟು ಹಣವನ್ನು ಹೊಂದಿದ್ದರೆ, ಅವರನ್ನು ಆರ್ಥಿಕ ದೃಷ್ಟಿಯಲ್ಲಿ ಸಧೃಡರೆಂದು ಪರಿಗಣಿಸಲಾಗುತ್ತದೆ ಮತ್ತು ಅವರ ಜವಾಬ್ದಾರಿಗಳನ್ನು ಪೂರೈಸಲು ಅವರು ಹಣವನ್ನು ಹೊಂದಿಲ್ಲದಿದ್ದರೆ ಅವರು ದಿವಾಳಿಯಾಗುತ್ತಾರೆ.

ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ವಿಮಾಗಾರರು ನಿರೀಕ್ಷಿತ ಮತ್ತು ವಾಸ್ತವಿಕ ಕ್ಲೇಮ್ ಗಳ ನಡುವಿನ ಅನಿರೀಕ್ಷಿತ ಅಂತರ/ಬದಲಾವಣೆಯನ್ನು ಪೂರೈಸಲು ತಮ್ಮೊಂದಿಗೆ ಕೆಲವು ಹೆಚ್ಚುವರಿ ಹಣ (ಅಥವಾ ಸಾಲ್ವೆನ್ಸಿ ಮಾರ್ಜಿನ್)ವನ್ನು ಹೊಂದಿರಬೇಕಾಗುತ್ತದೆ. ಭವಿಷ್ಯದ ಪಾವತಿಗಳ ಕಡೆಗೆ ವಿಮಾಗಾರರ ಬದ್ಧತೆಗಳನ್ನು ಸರಿದೂಗಿಸಲು ಲಭ್ಯವಿರುವ ಸ್ವತ್ತುಗಳ ಪ್ರಮಾಣವನ್ನು ಆರ್ಥಿಕ ಧೃಡತೆಯ ಅನುಪಾತವು ನಿರ್ಣಯಿಸುತ್ತದೆ. ಆರ್ಥಿಕ ಧೃಡತೆಯ ಅನುಪಾತವನ್ನು ನಿರ್ಣಯಿಸಲು ವಿವಿಧ ದೇಶಗಳು ವಿಭಿನ್ನ ಕ್ರಮಗಳನ್ನು ಬಳಸುತ್ತವೆ. ಭಾರತದಲ್ಲಿ ವಿಮಾಗಾರರು ಕನಿಷ್ಠ 1.5 ರಷ್ಟು ಆರ್ಥಿಕ ಧೃಡತೆಯ ಅನುಪಾತವನ್ನು ನಿರ್ವಹಿಸುವ ಅಗತ್ಯವಿದೆಯೆಂದು ಐಆರ್ ಡಿಎಐ ಕಡ್ಡಾಯಗೊಳಿಸಿದೆ.

**ಉದಾಹರಣೆ**

ಸರಳವಾದ ವಿವರಣೆಯನ್ನು ನೀಡುವುದಾದರೆ, ನಾಣ್ಯವನ್ನು ಹಾರಿಸಿದಾಗ ತಲೆ(ಹೆಡ್)ಗಳು ಮೇಲೆ ಬೀಳುವ ಸಂಭವನೀಯತೆಯು **2** ರಲ್ಲಿ **1** ಆಗಿದೆ. ಆದರೆ ಒಂದು ನಾಣ್ಯವನ್ನು ನಾಲ್ಕು ಬಾರಿ ಹಾರಿಸಿದರೆ ವಾಸ್ತವವಾಗಿ **2** ತಲೆಗಳು ಮೇಲೆ ಬೀಳುವುದು ಖಚಿತವಾಗಿರುವುದಿಲ್ಲ.

ನಾಣ್ಯವನ್ನು ಹಾರಿಸುವ ಸಂಖ್ಯೆಯು ತುಂಬಾ ದೊಡ್ಡದಾದಾಗ ಮತ್ತು ಅನಂತಕ್ಕೆ ಹತ್ತಿರವಾದಾಗ ಮಾತ್ರ, ಪ್ರತಿ ಎರಡು ಹಾರಿಕೆಗಳಿಗೆ ಒಮ್ಮೆ ತಲೆ(ಹೆಡ್) ಮೇಲೆ ಬೀಳುವ ಅವಕಾಶವು ಒಂದಕ್ಕೆ ಹತ್ತಿರವಾಗುತ್ತದೆ.

---

ಅಂದರೆ ವಿಮಾಗಾರರು ಹೆಚ್ಚಿನ ಸಂಖ್ಯೆಯ ವಿಮಾದಾರರನ್ನು ವಿಮೆ ಮಾಡಲು ಸಾಧ್ಯವಾದಾಗ ಮಾತ್ರ ತಮ್ಮ ಊಹೆಯ ಆಧಾರದ ಬಗ್ಗೆ ಖಚಿತವಾಗಿರಬಹುದು ಎಂದು ತಿಳಿಯುತ್ತದೆ. ಕೆಲವೇ ನೂರು ಮನೆಗಳಿಗೆ ವಿಮೆ ಮಾಡಿದ ವಿಮಾಗಾರರು ಹಲವಾರು ಸಾವಿರ ಮನೆಗಳಿಗೆ ವಿಮೆ ಮಾಡಿದವರಿಗಿಂತ ಹೆಚ್ಚು ಕೆಟ್ಟ ಪರಿಣಾಮಕ್ಕೆ ಒಳಗಾಗಬಹುದು.

**ಪ್ರಮುಖ**

ಅಪಾಯವನ್ನು ವಿಮೆ ಮಾಡಲು ಷರತ್ತುಗಳು

ವಿಮಾಗಾರರ ದೃಷ್ಟಿಕೋನದಿಂದ ಯಾವಾಗ ಅಪಾಯವನ್ನು ವಿಮೆ ಮಾಡುವುದು ಅರ್ಥಪೂರ್ಣವಾಗಿದೆ?

ಅಪಾಯವನ್ನು ವಿಮೆ ಮಾಡಬಹುದಾದ ಅಪಾಯವೆಂದು ಪರಿಗಣಿಸಲು ಆರು ಪ್ರಮುಖ ಅವಶ್ಯಕತೆಗಳನ್ನು ಈ ಕೆಳಗೆ ನೀಡಲಾಗಿದೆ.

**i.** ಸಾಕಷ್ಟು ದೊಡ್ಡ ಸಂಖ್ಯೆಯ ಸಮಾನವಾಗಿ [ಒಂದೇ ರೀತಿಯಲ್ಲಿ] ಒಡ್ಡಿಕೊಂಡಿರುವ ಘಟಕಗಳು ನಷ್ಟದ ಸಂಭವನೀಯತೆಯನ್ನು ಸಮಂಜಸವಾಗಿ ಊಹಿಸಲು ಸಹಾಯ ಮಾಡುತ್ತವೆ. ಇದು ದೊಡ್ಡ ಸಂಖ್ಯೆಗಳ ನಿಯಮವನ್ನು ಅನುಸರಿಸುತ್ತದೆ. ಇದನ್ನು ಹೊರತುಪಡಿಸಿ ಅಪಾಯವನ್ನು ಊಹಿಸುವುದು ಕಷ್ಟ.

**ii.** ಅಪಾಯದಿಂದ ಉಂಟಾಗುವ ನಷ್ಟವು ಖಚಿತ ಮತ್ತು ಅಳೆಯುವಂತಿರಬೇಕು. ನಷ್ಟ ಸಂಭವಿಸಿದೆ ಮತ್ತು ಎಷ್ಟು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲದಿದ್ದರೆ ಪರಿಹಾರವನ್ನು ನಿರ್ಧರಿಸುವುದು ಕಷ್ಟ.

**iii.** ನಷ್ಟವು ಅಸಂಕಲ್ಪಿತ ಅಥವಾ ಆಕಸ್ಮಿಕವಾಗಿರಬೇಕು. ಅದು ಸಂಭವಿಸಬಹುದಾದ ಅಥವಾ ಅಸಂಭವವಾದ ಘಟನೆಯ ಫಲಿತಾಂಶವಾಗಿರಬೇಕು. ಘಟನೆಯು ವಿಮಾದಾರರ ನಿಯಂತ್ರಣವನ್ನು ಮೀರಿರಬೇಕು. ವಿಮಾದಾರರಿಂದ ಉದ್ದೇಶಪೂರ್ವಕವಾಗಿ ಸಂಭವಿಸಿದ ನಷ್ಟವನ್ನು ಯಾವುದೇ ವಿಮಾಗಾರರು ಭರಿಸುವುದಿಲ್ಲ.

**iv.** ವಿಮೆ ಮಾಡಿದ ಗುಂಪಿನ ಒಂದು ಸಣ್ಣ ಶೇಕಡಾವಾರು ಜನರು ಒಂದು ನಿರ್ದಿಷ್ಟ ಅವಧಿಯಲ್ಲಿ ನಷ್ಟವನ್ನು ಅನುಭವಿಸಿದಾಗ ಮಾತ್ರ ಕೆಲವರ ನಷ್ಟವನ್ನು ಅನೇಕರು ಹಂಚಿಕೊಳ್ಳಬಹುದೆಂಬ ಸಿದ್ಧಾಂತ ಕೆಲಸ ಮಾಡಬಹುದು.

v. **ಆರ್ಥಿಕ ವ್ಯವಹಾರ್ಯತೆ:** ಸಂಭವನೀಯ ನಷ್ಟಕ್ಕೆ ಸಂಬಂಧಿಸಿದಂತೆ ವಿಮೆಯ ವೆಚ್ಚವು ಅಧಿಕವಾಗಿರಬಾರದು; ಇಲ್ಲದಿದ್ದರೆ ವಿಮೆಯು ಆರ್ಥಿಕವಾಗಿ ಅಶಕ್ತವಾಗಿರುತ್ತದೆ.

vi. **ಸಾರ್ವಜನಿಕ ನೀತಿ:** ಕೊನೆಯದಾಗಿ ಒಪ್ಪಂದವು ಸಾರ್ವಜನಿಕ ನೀತಿ ಮತ್ತು ನೈತಿಕತೆಗೆ ವಿರುದ್ಧವಾಗಿರಬಾರದು.

**ನಿಮ್ಮನ್ನು ಪರೀಕ್ಷಿಸಿ 1**

ಈ ಕೆಳಗಿನವುಗಳಲ್ಲಿ ಯಾವುದು ವಿಮೆ ಮಾಡಬಹುದಾದ ಅಪಾಯವನ್ನು ಪ್ರತಿನಿಧಿಸುವುದಿಲ್ಲ**?**

**I.** ಬೆಂಕಿ

**II.** ಕಳುವಾದ ಸಾಮಾನು

**III.** ದರೋಡೆ

**IV.** ಹಡಗು ಮುಳುಗುವಿಕೆಯಿಂದಾದ ಸರಕುಗಳ ನಷ್ಟ

---

**ಸಾರಾಂಶ**

**a)** ವಿಮಾ ಪ್ರಕ್ರಿಯೆಯು ನಾಲ್ಕು ಅಂಶಗಳನ್ನು ಹೊಂದಿದೆ (ಆಸ್ತಿ, ಅಪಾಯ, ಅಪಾಯದ ಸಂಚಯನ ಮತ್ತು ವಿಮಾ ಒಪ್ಪಂದ).

**b)** ಆಸ್ತಿಯೆಂದರೆ ಕೆಲವು ಪ್ರಯೋಜನಗಳನ್ನು ನೀಡುವ ಮತ್ತು ತನ್ನ ಮಾಲೀಕರಿಗೆ ಆರ್ಥಿಕ ಮೌಲ್ಯವನ್ನು ನೀಡುವ ಯಾವುದೇ ವಸ್ತುವಾಗಿರಬಹುದು.

**c)** ನಷ್ಟದ ಅವಕಾಶವು ಅಪಾಯವನ್ನು ಪ್ರತಿನಿಧಿಸುತ್ತದೆ.

**d)** ನಷ್ಟದ ಸಂಭವನೀಯತೆ ಅಥವಾ ತೀವ್ರತೆಯನ್ನು ಹೆಚ್ಚಿಸುವ ಸ್ಥಿತಿ ಅಥವಾ ಪರಿಸ್ಥಿತಿಗಳನ್ನು ವಿಪತ್ತುಗಳು ಎಂದು ಕರೆಯಲಾಗುತ್ತದೆ.

**e)** ವಿಮೆಯನ್ನು ಸಾಧ್ಯವಾಗಿಸುವ ಗಣಿತದ ತತ್ವವನ್ನು ಅಪಾಯದ ಸಂಚಯನದ ತತ್ವವೆಂದು ಕರೆಯಲಾಗುತ್ತದೆ.

**ಪ್ರಮುಖ ಪದಗಳು**

**a)** ಆಸ್ತಿ

**b)** ಅಪಾಯ

**c)** ವಿಪತ್ತು

**d)** ಅಪಾಯ ಸಂಚಯನ

**e)** ಪ್ರಸ್ತಾವನೆ ಮತ್ತು ಸ್ವೀಕೃತಿ

**f)** ನ್ಯಾಯಬದ್ಧ ಪರಿಹಾರ

---

**ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು**

ಉತ್ತರ 1 - ಸರಿಯಾದ ಆಯ್ಕೆ **II** ಆಗಿದೆ.

---

# ಅಧ್ಯಾಯ C-03

# ವಿಮೆಯ ತತ್ವಗಳು

## ಅಧ್ಯಾಯ ಪರಿಚಯ

ಈ ಅಧ್ಯಾಯದಲ್ಲಿ, ವಿಮೆಯ ಕಾರ್ಯವ್ಯವಸ್ಥೆಯು ಯಾವ ತತ್ವಗಳನ್ನಾಧರಿಸಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನಾವು ಚರ್ಚಿಸುತ್ತೇವೆ.

**a)** ಅತ್ಯಂತ ಉತ್ತಮ ನಂಬಿಕೆ ಅಥವಾ "ಉಬೆರ್ರಿಮಾ ಫೈಡ್ಸ್" ಅನ್ನು " ನಿಖರವಾಗಿ ಮತ್ತು ಸಂಪೂರ್ಣವಾಗಿ, ಪ್ರಸ್ತಾಪಿಸಲಾಗುತ್ತಿರುವ ಅಪಾಯಕ್ಕೆ ಸಂಬಂಧಿಸಿದ ಎಲ್ಲ ಸಂಗತಿಗಳನ್ನು ವಿನಂತಿಸಿರಲಿ ಅಥವಾ ಇಲ್ಲದಿರಲಿ ಸ್ವಯಂಪ್ರೇರಿತವಾಗಿ ಬಹಿರಂಗಪಡಿಸುವ ಧನಾತ್ಮಕ ಕರ್ತವ್ಯವೆಂದು ವ್ಯಾಖ್ಯಾನಿಸಲಾಗಿದೆ, ". ಎಲ್ಲ ವಿಮಾ ಒಪ್ಪಂದಗಳು ಅತ್ಯಂತ ಉತ್ತಮ ನಂಬಿಕೆ / ಉಬೆರಿಮಾ ಫೈಡ್ಸ್ ನ ತತ್ವವನ್ನು ಆಧರಿಸಿವೆ

**b)** 'ವಿಮಾಸಕ್ತಿಯ' ಅಸ್ತಿತ್ವವು ಪ್ರತಿಯೊಂದು ವಿಮಾ ಒಪ್ಪಂದದ ಅತ್ಯಗತ್ಯ ಅಂಶವಾಗಿದೆ ಮತ್ತು ವಿಮೆಗೆ ಕಾಯ್ದೆಯನ್ವಯ ಪೂರ್ವಾಪೇಕ್ಷಿತವೆಂದು ಪರಿಗಣಿಸಲಾಗುತ್ತದೆ.

**c)** ಅನಿಶ್ಚಿತ ಘಟನೆಯ ಸಂಭವಿಸುವಿಕೆಯ ಮೇಲೆ ಆದ ನಷ್ಟದ ಮಟ್ಟಿಗೆ ವಿಮಾದಾರರಿಗೆ ಪರಿಹಾರವನ್ನು ನೀಡಲಾಗುತ್ತದೆ ಎಂದು ರಕ್ಷಣೆಯು ಖಚಿತಪಡಿಸುತ್ತದೆ.

**d)** ಸಬ್ರೊಗೇಶನ್ ಎಂದರೆ ವಿಮೆಯ ವಿಷಯವಸ್ತುವಿಗೆ ಸಂಬಂಧಿಸಿದಂತೆ ಎಲ್ಲ ಹಕ್ಕು ಮತ್ತು ಪರಿಹಾರಗಳನ್ನು ವಿಮಾದಾರರಿಂದ ವಿಮಾಗಾರರಿಗೆ ವರ್ಗಾಯಿಸುವುದು.

**e)** ಒಂದೇ ಆಸ್ತಿಯನ್ನು ಒಂದಕ್ಕಿಂತ ಹೆಚ್ಚು ವಿಮಾ ಕಂಪನಿಗಳೊಂದಿಗೆ ವಿಮೆ ಮಾಡಲಾಗಿದ್ದರೆ, ಎಲ್ಲ ವಿಮಾದಾರರು ಒಟ್ಟಾಗಿ ಪಾವತಿಸಿದ ಪರಿಹಾರವು ಅನುಭವಿಸಿದ ನಿಜವಾದ ನಷ್ಟವನ್ನು ಮೀರಬಾರದು ಎಂದು ಕೊಡುಗೆಯ ತತ್ವವು ಸೂಚಿಸುತ್ತದೆ.

**f)** ಅತ್ಯಂತ ಸಮೀಪದ ಕಾರಣವು ವಿಮೆಯ ಪ್ರಮುಖ ತತ್ವವಾಗಿದ್ದು ನಷ್ಟ ಅಥವಾ ಹಾನಿಯು ನಿಜವಾಗಿ ಹೇಗೆ ಸಂಭವಿಸಿತು ಮತ್ತು ಅದು ನಿಜವಾಗಿಯೂ ವಿಮೆ ಮಾಡಲಾದ ಅಪಾಯದ ಪರಿಣಾಮವಾಗಿದೆಯೇ ಎಂಬುದಕ್ಕೆ ಸಂಬಂಧಿಸಿದೆ.

## ಕಲಿಕೆಯ ಫಲಿತಾಂಶಗಳು

**A.** ಅತ್ಯಂತ ಉತ್ತಮ ನಂಬಿಕೆ ಅಥವಾ "ಉಬೆರ್ರಿಮಾ ಫೈಡ್ಸ್

**B.** ವಿಮಾಸಕ್ತಿ

**C.** ಅತ್ಯಂತ ಸಮೀಪದ ಕಾರಣ

**D.** ನಷ್ಟಪರಿಹಾರ / ರಕ್ಷಣೆ

**E.** ಸಬ್ರೊಗೇಶನ್

F. ಕೊಡುಗೆ

## A. ಅತ್ಯಂತ ಉತ್ತಮ ನಂಬಿಕೆ ಅಥವಾ ಉಬೆರ್ರಿಮಾ ಫೈಡ್ಸ್

ವಿಮಾ ಒಪ್ಪಂದಗಳು ಹಲವಾರು ವಿಶೇಷ ಲಕ್ಷಣಗಳನ್ನು ಹೊಂದಿದ್ದು ಅವುಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

### 1. ಅತ್ಯಂತ ಉತ್ತಮ ನಂಬಿಕೆ ಅಥವಾ "ಉಬೆರ್ರಿಮಾ ಫೈಡ್ಸ್

ವಿಮಾ ಒಪ್ಪಂದದ ಮೂಲಭೂತ ತತ್ತ್ವಗಳಲ್ಲಿ ಒಂದಾದ ಅತ್ಯಂತ ಉತ್ತಮ ನಂಬಿಕೆ ಅಥವಾ "ಉಬೆರ್ರಿಮಾ ಫೈಡ್ಸ್" ಅನ್ನು "ಕೇಳಿರಲಿ ಅಥವಾ ಇಲ್ಲದಿರಲಿ ಪ್ರಸ್ತಾಪಿಸಲಾದ ಅಪಾಯದ ಬಗೆಗಿನ ಎಲ್ಲ ಸಂಗತಿಗಳನ್ನು ಸ್ವಯಂಪ್ರೇರಣೆಯಿಂದ ನಿಖರವಾಗಿ ಮತ್ತು ಸಂಪೂರ್ಣವಾಗಿ ಬಹಿರಂಗಪಡಿಸುವ ಧನಾತ್ಮಕ ಕರ್ತವ್ಯ" ಎಂದು ವ್ಯಾಖ್ಯಾನಿಸಲಾಗಿದೆ.

ಆದರೆ ಎಲ್ಲ ವಾಣಿಜ್ಯ ಒಪ್ಪಂದಗಳಲ್ಲಿ, ಮಾಹಿತಿ ನೀಡುವಾಗ ಅಥವಾ ವ್ಯವಹಾರವನ್ನು ಮಾಡುವಾಗ ಯಾವುದೇ ಮೋಸ ಅಥವಾ ವಂಚನೆ ಇರಲಾರದಂತೆ ಆದರೆ ಎಲ್ಲ ವಾಣಿಜ್ಯ ಒಪ್ಪಂದಗಳಲ್ಲಿ ಉತ್ತಮ ನಂಬಿಕೆಯನ್ನು ಆಧರಿಸಿವೆ. ಇಲ್ಲಿ ಅನುಸರಿಸಲಾದ ನಿಯಮವೆಂದರೆ "ಕೇವಿಯಟ್ ಎಂಪ್ಟರ್" ಅಂದರೆ ಖರೀದಿದಾರರೇ ಎಚ್ಚರಿಕೆಯಿಂದಿರಬೇಕು ಎಂಬುದು. ಒಪ್ಪಂದದ ಪಕ್ಷಗಳು ಒಪ್ಪಂದದ ವಿಷಯವಸ್ತುವನ್ನು ಪರಿಶೀಲಿಸಿಕೊಳ್ಳಬೇಕಾಗಿದೆ ಮತ್ತು ಎಲ್ಲಿಯವರೆಗೆ ಒಂದು ಪಕ್ಷವು ಇನ್ನೊಂದು ಪಕ್ಷವನ್ನು ತಪ್ಪುದಾರಿಗೆಳೆಯದೇ ಮತ್ತು ಉತ್ತರಗಳನ್ನು ಸತ್ಯವಾಗಿ ನೀಡಿದರೆ, ಇತರ ಪಕ್ಷವು ಒಪ್ಪಂದವನ್ನು ತಪ್ಪಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಒಪ್ಪಂದದ ವಿಷಯವು ಅಮೂರ್ತವಾಗಿದ್ದು ವಿಮಾಗಾರರಿಗೆ ಸುಲಭವಾಗಿ ತಿಳಿದಿರುವುದಿಲ್ಲವಾದ್ದರಿಂದ ವಿಮಾ ಕರಾರುಗಳು ವಿಭಿನ್ನ ನೆಲೆಯಲ್ಲಿ ನಿಲ್ಲುತ್ತವೆ. ಅಲ್ಲದೇ, ಪ್ರಸ್ತಾಪಕರಿಗೆ ಮಾತ್ರ ತಿಳಿದಿರಬಹುದಾದ ಇನ್ನೂ ಅನೇಕ ಸಂಗತಿಗಳಿರುತ್ತವೆ. ಮಾಹಿತಿಗಾಗಿ ವಿಮಾಗಾರರು ಸಂಪೂರ್ಣವಾಗಿ ಪ್ರಸ್ತಾಪಕರ ಮೇಲೆ ಅವಲಂಬಿತರಾಗಿರಬೇಕಾಗುತ್ತದೆ. ಆದ್ದರಿಂದ ಪ್ರಸ್ತಾಪಕರು ವಿಮಾಗಾರರಿಗೆ ವಿಮೆಯ ವಿಷಯವಸ್ತುವಿನ ಬಗೆಗಿನ ಎಲ್ಲ ವಾಸ್ತವಿಕ ಮಾಹಿತಿಯನ್ನು ಬಹಿರಂಗಪಡಿಸುವ ಕಾನೂನುಬದ್ಧ ಕರ್ತವ್ಯವನ್ನು ಹೊಂದಿರುತ್ತಾರೆ. ಅಂದರೆ, ವಿಮಾ ಒಪ್ಪಂದಕ್ಕೆ ಸಂಬಂಧಿಸಿದ ಯಾವುದೇ ವಾಸ್ತವಾಂಶದ ಬಗ್ಗೆ ವಿಮಾದಾರರು ಯಾವುದೇ ತಪ್ಪು ನಿರೂಪಣೆಯನ್ನು ಮಾಡಬಾರದು. ವಿಮಾ ಒಪ್ಪಂದಗಳಿಗೆ ಸಂಬಂಧಿಸಿದಂತೆ ಪೂರ್ಣ ಪ್ರಾತಿನಿಧ್ಯ ಮತ್ತು ಸಂಪೂರ್ಣ ಬಹಿರಂಗಪಡಿಸುವಿಕೆಯ ಹೆಚ್ಚಿನ ಬಾಧ್ಯತೆಯು ಅವುಗಳನ್ನು ಅತ್ಯಂತ ಉತ್ತಮ ನಂಬಿಕೆಯ ಒಪ್ಪಂದಗಳನ್ನಾಗಿ ಮಾಡುತ್ತದೆ.

ಯಾವುದೇ ಪಕ್ಷವು ಅತ್ಯಂತ ಉತ್ತಮ ನಂಬಿಕೆಯನ್ನು ಅನುಸರಿಸದಿದ್ದರೆ, ಇನ್ನೊಂದು ಪಕ್ಷವು ಒಪ್ಪಂದವನ್ನು ತಪ್ಪಿಸಬಹುದು. ವಿಶೇಷವಾಗಿ ವಿಮೆಯ ಒಪ್ಪಂದಕ್ಕೆ ಪ್ರವೇಶಿಸುವಾಗ ತನ್ನ ಸ್ವಂತ ತಪ್ಪಿನ ಲಾಭವನ್ನು ಪಡೆಯಲು ಯಾರನ್ನೂ ಅನುಮತಿಸಬಾರದು ಎಂಬ ತರ್ಕವನ್ನು ಇದು ಅನುಸರಿಸುತ್ತದೆ.

a) **ವಾಸ್ತವಿಕ ಸಂಗತಿ:** ಅಪಾಯವನ್ನು ಒಪ್ಪಿಕೊಳ್ಳಬೇಕೇ ಮತ್ತು ಒಪ್ಪಿಕೊಳ್ಳಬೇಕಾದಲ್ಲಿ, ಕಂತಿನ ದರ ಮತ್ತು ನಿಯಮಗಳು ಮತ್ತು ಷರತ್ತುಗಳನ್ನು ನಿರ್ಧರಿಸುವಲ್ಲಿ ವಿಮಾ ಅಂಡರ್ ರೈಟರ್ ರ ತೀರ್ಪಿನ ಮೇಲೆ ಪರಿಣಾಮ ಬೀರುವ ವಾಸ್ತವಾಂಶವನ್ನು ವಾಸ್ತವಿಕ ಸಂಗತಿಯೆಂದು ವ್ಯಾಖ್ಯಾನಿಸಲಾಗಿದೆ. ವಿಮಾ ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲ ಸಂಗತಿಗಳನ್ನು ಸಂಪೂರ್ಣವಾಗಿ ಮತ್ತು ನಿಖರವಾಗಿ ಬಹಿರಂಗಪಡಿಸಲು ವಿಮಾದಾರನು ಬಾಧ್ಯತೆಯನ್ನು ಹೊಂದಿರುತ್ತಾನೆ.

ಬಹಿರಂಗಪಡಿಸದ ಸತ್ಯವು ವಾಸ್ತವಿಕ ಸಂಗತಿಯಾಗಿದೆಯೇ ಅಥವಾ ಇಲ್ಲವೇ ಎಂಬುದು ಪ್ರತಿಯೊಂದು ಪ್ರಕರಣದ ಸಂದರ್ಭಗಳನ್ನು ಅವಲಂಬಿಸಿರುತ್ತದೆ ಮತ್ತು ಅಂತಿಮವಾಗಿ ನ್ಯಾಯಾಲಯದಲ್ಲಿ ಮಾತ್ರ ನಿರ್ಧರಿಸಬಹುದು. ಅಪಾಯದ ಮೇಲೆ ಪರಿಣಾಮ ಬೀರುವ ಸಂಗತಿಗಳನ್ನು ವಿಮಾದಾರರು ಬಹಿರಂಗಪಡಿಸಬೇಕು.

ವಿಮಾದಾರರಿಗೆ ಈ ಕೆಳಗಿನ ಸಂಗತಿಗಳನ್ನು ನಿರ್ಧರಿಸಲು ಅನುವು ಮಾಡಿಕೊಡುವ ಮಾಹಿತಿಯನ್ನು ವಾಸ್ತವಿಕ ಸಂಗತಿಗಳು ಸೂಚಿಸುತ್ತವೆ:

- ✓ ತಾವು ಅಪಾಯವನ್ನು ಸ್ವೀಕರಿಸಬಹುದೇ?
- ✓ ಹಾಗಿದ್ದಲ್ಲಿ, ಕಂತು ದರ ಎಷ್ಟಾಗಿರಬೇಕು ಮತ್ತು ಯಾವ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಸ್ವೀಕರಿಸಬಹುದು?

ಸಾಮಾನ್ಯ ಕಾನೂನಿನಡಿಯಲ್ಲಿ ಅತ್ಯಂತ ಉತ್ತಮ ನಂಬಿಕೆಯ ಕಾನೂನು ಇರುತ್ತದೆ. ಕರ್ತವ್ಯವು ಪ್ರಸ್ತಾಪಕರಿಗೆ ತಿಳಿದಿರುವ ವಾಸ್ತವಿಕ ಸಂಗತಿಗಳಿಗೆ ಅನ್ವಯಿಸುತ್ತದೆ ಮಾತ್ರವಲ್ಲದೇ ಅವರು ತಿಳಿದುಕೊಂಡಿರಬೇಕಾದ ವಾಸ್ತವಿಕ ಸಂಗತಿಗಳಿಗೂ ವಿಸ್ತರಿಸುತ್ತದೆ. ಅದೇ ರೀತಿಯಲ್ಲಿ ಪಾಲಿಸಿಯ ಬಗೆಗಿನ ಯಾವುದೇ ಮಾಹಿತಿಯನ್ನು ವಿಮಾಗಾರರು ಸಹ ತಡೆಹಿಡಿಯಬಾರದೆಂಬ ಅನುಗುಣವಾದ ಕರ್ತವ್ಯವಿದೆ.

| **ಉದಾಹರಣೆ** |
|---|

ಪ್ರಸ್ತಾವನೆಯನ್ನು ಮಾಡುವಾಗ ಪ್ರಸ್ತಾಪಕರು ಬಹಿರಂಗಪಡಿಸಬೇಕಾದ ವಾಸ್ತವಿಕ ಸಂಗತಿಯ ಕೆಲವು ಉದಾಹರಣೆಗಳು ಈ ಕೆಳಗಿನಂತಿವೆ:

i. **ಜೀವ ವಿಮೆ** : ತಮ್ಮ ಸ್ವಂತ ವೈದ್ಯಕೀಯ ಇತಿಹಾಸ, ಆನುವಂಶಿಕ ಕಾಯಿಲೆಗಳ ಕುಟುಂಬದ ಇತಿಹಾಸ, ಧೂಮಪಾನ ಮತ್ತು ಮದ್ಯಪಾನದಂತಹ ಅಭ್ಯಾಸಗಳು, ಕೆಲಸದಿಂದ ಗೈರುಹಾಜರಿ, ವಯಸ್ಸು, ಹವ್ಯಾಸಗಳು, ಪ್ರಸ್ತಾಪಕರ ಆದಾಯದ ವಿವರಗಳಂತಹ ಹಣಕಾಸಿನ ಮಾಹಿತಿ, ಮೊದಲೇ ಅಸ್ತಿತ್ವದಲ್ಲಿರುವ ಜೀವ ವಿಮಾ ಪಾಲಿಸಿಗಳು, ಉದ್ಯೋಗ ಇತ್ಯಾದಿ.

ii. **ಅಗ್ನಿ ವಿಮೆ** : ನಿರ್ಮಾಣ, ಸ್ಥಳ/ ಅಪಾಯದ ಪರಿಸ್ಥಿತಿ ಮತ್ತು ಕಟ್ಟಡದ ಬಳಕೆ, ಕಟ್ಟಡದ ವಯಸ್ಸು, ಆವರಣದಲ್ಲಿನ ಸರಕುಗಳ ಸ್ವರೂಪ ಇತ್ಯಾದಿ.

iii. **ಸಾಗರ ವಿಮೆ** : ಸರಕುಗಳ ವಿವರಣೆ, ಪ್ಯಾಕಿಂಗ್ ವಿಧಾನ ಮತ್ತು ಸಾಗಣೆಯ ವಿಧಾನ ಇತ್ಯಾದಿ.

iv. **ಮೋಟಾರು ವಿಮೆ** : ವಾಹನದ ವಿವರಣೆ, ಖರೀದಿಸಿದ ದಿನಾಂಕ ಮತ್ತು ಪ್ರಾದೇಶಿಕ ನೋಂದಣಿ ಪ್ರಾಧಿಕಾರ ಇತ್ಯಾದಿ.

v. **ಆರೋಗ್ಯ ವಿಮೆ** : ಮೊದಲೇ ಅಸ್ತಿತ್ವದಲ್ಲಿರುವ ರೋಗ, ವಯಸ್ಸು ಇತ್ಯಾದಿ.

b) **ಒಂದು ಸತ್ಯವು 'ವಾಸ್ತವಿಕ'ವಾದಾಗ:** ಬಹಿರಂಗಪಡಿಸಬೇಕಾದ ಕೆಲವು ರೀತಿಯ ವಾಸ್ತವಿಕ ಸಂಗತಿಗಳೆಂದರೆ ನಿರ್ದಿಷ್ಟ ಅಪಾಯವು ಸಾಮಾನ್ಯವಾಗಿ ನಿರೀಕ್ಷಿಸಿರುವುದಕ್ಕಿಂತ ಹೆಚ್ಚಿನ ಒಡ್ಡಿಕೊಳ್ಳುವಿಕೆಯನ್ನು ಪ್ರತಿನಿಧಿಸುತ್ತದೆಯೆಂದು ಸೂಚಿಸುವ ಸಂಗತಿಗಳಾಗಿವೆ.

| **ಉದಾಹರಣೆ** |
|---|

ಹಡಗಿನ ಮೂಲಕ ಕಳುಹಿಸುವ ಸರಕುಗಳ ಅಪಾಯಕಾರಿ ಸ್ವರೂಪ, ಅನಾರೋಗ್ಯದ ಹಿಂದಿನ ಇತಿಹಾಸ, ಹಿಂದಿನ ಇತಿಹಾಸ, ಮನೆಯ ದರೋಡೆ.

i. ಎಲ್ಲ ವಿಮಾಗಾರರಿಂದ ತೆಗೆದುಕೊಳ್ಳಲಾದ ಪಾಲಿಸಿಗಳ ಅಸ್ತಿತ್ವ ಮತ್ತು ಅವುಗಳ ಪ್ರಸ್ತುತ ಸ್ಥಿತಿ

ii. ವಿಮೆಯ ವಿಷಯವಸ್ತುವಿನ ವಿವಿಧ ಅಂಶಗಳಿಗೆ ಮತ್ತು ಅಪಾಯಕ್ಕೆ ಒಡ್ಡಿಕೊಂಡಿರುವುದಕ್ಕೆ ಸಂಬಂಧಿಸಿರುವುದರಿಂದ ಪ್ರಸ್ತಾವನೆಯ ನಮೂನೆ ಅಥವಾ ವಿಮೆಯ ಅರ್ಜಿಯಲ್ಲಿನ ಎಲ್ಲ ಪ್ರಶ್ನೆಗಳನ್ನು ವಾಸ್ತವಿಕವೆಂದು ಪರಿಗಣಿಸಲಾಗುತ್ತದೆ. ಅವುಗಳಿಗೆ ಸತ್ಯವಾಗಿ ಮತ್ತು ಎಲ್ಲ ರೀತಿಯಲ್ಲೂ ಪೂರ್ಣವಾಗಿ ಉತ್ತರಿಸಬೇಕು.

ವಾಸ್ತವಿಕ ಸಂಗತಿಗಳನ್ನು ಬಹಿರಂಗಪಡಿಸಬೇಕಾದ ಅಗತ್ಯವಿಲ್ಲದ ಕೆಲವು ಸನ್ನಿವೇಶಗಳು ಈ ಕೆಳಗಿನಂತಿವೆ.

| **ಮಾಹಿತಿ** |
|---|

a. **ಬಹಿರಂಗಪಡಿಸಬೇಕಾದ ಅಗತ್ಯವಿಲ್ಲದ ವಾಸ್ತವಿಕ ಸಂಗತಿಗಳು:** ಅಂಡರ್ ರೈಟರ್ ಗಳಿಂದ ವಿಶೇಷ ವಿಚಾರಣೆ ಇಲ್ಲದಿದ್ದರೆ, ಪ್ರಸ್ತಾಪಕರು ಈ ಕೆಳಗಿನ ಸಂಗತಿಗಳನ್ನು ಬಹಿರಂಗಪಡಿಸುವ ಯಾವುದೇ ಬಾಧ್ಯತೆಯನ್ನು ಹೊಂದಿರುವುದಿಲ್ಲ:

i. **ಅಪಾಯವನ್ನು ಕಡಿಮೆ ಮಾಡಲು ಅಳವಡಿಸಲಾದ ಕ್ರಮಗಳು. ಉದಾ:** ಅಗ್ನಿಶಾಮಕ ಸಾಧನದ ಉಪಸ್ಥಿತಿ

ii. **ವಿಮಾದಾರರಿಗೆ ಗೊತ್ತಿಲ್ಲದ ಅಥವಾ ತಿಳಿದಿರದ ಸಂಗತಿಗಳು.** ಉದಾ: ಒಬ್ಬ ವ್ಯಕ್ತಿಯು ಅಧಿಕ ರಕ್ತದೊತ್ತಡವನ್ನು ಹೊಂದಿದ್ದರೂ ಪಾಲಿಸಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಅದರ ಬಗ್ಗೆ ಅವರಿಗೆ ತಿಳಿದಿರಲಿಲ್ಲ, ಈ ಸಂದರ್ಭದಲ್ಲಿ ಸತ್ಯವನ್ನು ಬಹಿರಂಗಪಡಿಸದಿರುವ ಆರೋಪವನ್ನು ಅವರ ಮೇಲೆ ಹೊರಿಸಲಾಗುವುದಿಲ್ಲ.

iii. **ಯೋಗ್ಯ ತರ್ಕದಿಂದ ಯಾವುದನ್ನು ಕಂಡುಹಿಡಿಯಬಹುದಾದದ್ದು.** ಪ್ರತಿಯೊಂದು ಸಣ್ಣ ವಾಸ್ತವಿಕ ಸಂಗತಿಗಳನ್ನು ಬಹಿರಂಗಪಡಿಸುವುದು ಅನಿವಾರ್ಯವಲ್ಲ. ಅಂಡರ್ ರೈಟರ್ ರು ಹೆಚ್ಚಿನ ಮಾಹಿತಿಯ

ಅಗತ್ಯವಿದ್ದರೆ ಅದನ್ನು ಕೇಳುವಷ್ಟು ಜಾಗೃತರಾಗಿರಬೇಕು. ಉದಾ: ಜವಳಿ ಅಂಗಡಿಯ ವಿಮೆಯನ್ನು ಮಾಡುವಾಗ ಅಂಗಡಿಯಲ್ಲಿರುವ ಕೆಲವು ಸಿಂಥೆಟಿಕ್ ಬಟ್ಟೆಗಳು ಹೆಚ್ಚು ದಹನಶೀಲವಾಗಿರುವ ಬಗ್ಗೆ ವಿಶೇಷವಾಗಿ ಹೇಳಬೇಕಾಗಿಲ್ಲ.

iv. **ಕಾನೂನಿನ ವಿಷಯಗಳು:** ಪ್ರತಿಯೊಬ್ಬರೂ ದೇಶದ ಕಾನೂನನ್ನು ತಿಳಿದಿರಬೇಕು. ಉದಾ: ಸ್ಫೋಟಕಗಳನ್ನು ಸಂಗ್ರಹಿಸುವ ಬಗ್ಗೆ ಪುರಸಭೆಯ ಕಾನೂನುಗಳು

v. ಉದಾಸೀನತೆಯನ್ನು ತೋರುವ ವಿಮಾಗಾರರು (ಅಥವಾ ಹೆಚ್ಚಿನ ಮಾಹಿತಿಯ ಅಗತ್ಯವನ್ನು ಬಿಟ್ಟುಕೊಟ್ಟಿದ್ದಾರೆ)

ಅಂತಹ ಸಂದರ್ಭಗಳಲ್ಲಿ, ಉತ್ತರಗಳು ಅಪೂರ್ಣವಾಗಿವೆ ಎಂಬ ಆಧಾರದ ಮೇಲೆ ನಂತರ ವಿಮಾಗಾರರು ಜವಾಬ್ದಾರಿಯನ್ನು ನಿರಾಕರಿಸುವಂತಿಲ್ಲ.

---

b. **ಬಹಿರಂಗಪಡಿಸುವ ಕರ್ತವ್ಯ:** ವಿಮಾ ಒಪ್ಪಂದಗಳ ಸಂದರ್ಭದಲ್ಲಿ, ಬಹಿರಂಗಪಡಿಸುವ ಕರ್ತವ್ಯವು ಪ್ರಸ್ತಾಪವನ್ನು ಅಂಗೀಕರಿಸುವವರೆಗೆ ಮತ್ತು ಜೀವ ವಿಮಾ ಪಾಲಿಸಿಯನ್ನು ನೀಡುವವರೆಗೆ ಮಾತುಕತೆಯ ಸಂಪೂರ್ಣ ಅವಧಿಯ ಉದ್ದಕ್ಕೂ ಇರುತ್ತದೆ.

ಜೀವ ವಿಮಾ ಪಾಲಿಸಿಯನ್ನು ಒಮ್ಮೆ ಒಪ್ಪಿಕೊಂಡ ಮೇಲೆ, ಪಾಲಿಸಿಯ ಅವಧಿಯಲ್ಲಿ ಬರಬಹುದಾದ ಯಾವುದೇ ವಾಸ್ತವಿಕ ಸಂಗತಿಗಳನ್ನು ಬಹಿರಂಗಪಡಿಸುವ ಅಗತ್ಯವಿರುವುದಿಲ್ಲ.

**ಉದಾಹರಣೆ**

ಶ್ರೀ ರಾಜನ್ ಅವರು ಹದಿನೈದು ವರ್ಷಗಳ ಅವಧಿಗಾಗಿ ಜೀವ ವಿಮಾ ಪಾಲಿಸಿಯನ್ನು ತೆಗೆದುಕೊಂಡಿದ್ದಾರೆ. ಪಾಲಿಸಿ ತೆಗೆದುಕೊಂಡ ಆರು ವರ್ಷಗಳ ನಂತರ, ಶ್ರೀ ರಾಜನ್ ಅವರಿಗೆ ಹೃದಯದ ಕೆಲವು ಸಮಸ್ಯೆಗಳು ಎದುರಾಗಿ ಕೆಲವು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗುತ್ತದೆ. ಶ್ರೀ ರಾಜನ್ ಅವರು ವಿಮಾದಾರರಿಗೆ ಈ ಸತ್ಯವನ್ನು ಬಹಿರಂಗಪಡಿಸುವ ಅಗತ್ಯವಿಲ್ಲ.

---

[ಆದಾಗ್ಯೂ, ಬಾಕಿ ಇರುವ ಕಂತುಗಳನ್ನು ಪಾವತಿಸಲು ವಿಫಲವಾದ ಕಾರಣದಿಂದಾಗಿ ಪಾಲಿಸಿಯು ರದ್ದಾದ ಸ್ಥಿತಿಯಲ್ಲಿದ್ದರೆ ಮತ್ತು ಪಾಲಿಸಿದಾರರು ಪಾಲಿಸಿ ಒಪ್ಪಂದವನ್ನು ಪುನರುಜ್ಜೀವಿತಗೊಳಿಸಲು ಮತ್ತು ಅದನ್ನು ಮತ್ತೆ ಜಾರಿಗೆ ತರಲು ಬಯಸಿದರೆ, ಅಂತಹ ಪುನರುಜ್ಜೀವಿತಗೊಳಿಸುವ ಸಮಯದಲ್ಲಿ ಅವರು ಹೊಸ ಪಾಲಿಸಿಯಂತೆಯೇ ವಾಸ್ತವಿಕ ಮತ್ತು ಸಂಬಂಧಿತ ಎಲ್ಲ ಸಂಗತಿಗಳನ್ನು ಬಹಿರಂಗಪಡಿಸುವ ಕರ್ತವ್ಯವನ್ನು ಹೊಂದಿರುತ್ತಾರೆ.]

ಶ್ರೀ ರಾಜನ್ ರವರು ಆರೋಗ್ಯ ವಿಮೆಯನ್ನು ಹೊಂದಿದ್ದರೆ, ಪಾಲಿಸಿಯನ್ನು ನವೀಕರಿಸುವ ಸಮಯದಲ್ಲಿ, ಅವರು ಈ ಆರೋಗ್ಯ ಸಮಸ್ಯೆಯ ಬಗ್ಗೆ ವಿಮಾದಾರರಿಗೆ ತಿಳಿಸಬೇಕು.

ಅದೇ ರೀತಿಯಾಗಿ, ಸಾಮಾನ್ಯ ವಿಮೆಯ ಸಂದರ್ಭದಲ್ಲಿ, ಉದ್ಯಮ/ಕಾರ್ಖಾನೆಗಾಗಿ ಬೆಂಕಿ ಪಾಲಿಸಿಯನ್ನು ನವೀಕರಿಸುವ ಸಮಯದಲ್ಲಿ, ವಿಮಾದಾರನು ಕಟ್ಟಡದ ನಿವಾಸದಲ್ಲಿ ಬದಲಾವಣೆಯನ್ನು ಮಾಡಿದ್ದರೆ ವಿಮಾಗಾರರಿಗೆ ತಿಳಿಸಬೇಕು.

ಹಡಗಿನ ಹೊದಿಕೆ(ಹಲ್) ಪಾಲಿಸಿಯನ್ನು ನವೀಕರಿಸುವ ಸಮಯದಲ್ಲಿ, ವಿಮೆದಾರನು ಬೇರೆ ರೀತಿಯ ಉದಾಹರಣೆಗೆ ಬೇಳೆಕಾಳುಗಳ ಬದಲಿಗೆ ಅಪಾಯಕಾರಿ ರಾಸಾಯನಿಕಗಳ ಸರಕುಗಳನ್ನು ಸಾಗಿಸಲು ಹಡಗನ್ನು ಮಾರ್ಪಡಿಸಿದ್ದರೆ ವಿಮಾಗಾರರಿಗೆ ತಿಳಿಸಬೇಕು;.

**c.** ವಿಮಾಗಾರರು ಯಾವುದೇ ವಿಶಿಷ್ಟ ವಿಚಾರಣೆಯನ್ನು ಮಾಡದಿರುವ ಕಾರಣ ವಾಸ್ತಕವ ಸಂಗತಿಗಳ ಬಗ್ಗೆ ವಿಮಾದಾರರು ಮೌನವಾಗಿದ್ದರೆ ಬಹಿರಂಗಪಡಿಸದಿರುವ ಸಂದರ್ಭಗಳು ಉದ್ಭವಿಸಬಹುದು. ವಿಮಾಗಾರರಿಂದ ಕೇಳಲಾದ ಪ್ರಶ್ನೆಗಳಿಗೆ ತಪ್ಪಿಸಿಕೊಳ್ಳುವ ಉತ್ತರಗಳ ಮೂಲಕ ಸಹ ಇಂತಹ ಸಂದರ್ಭಗಳು ಉಂಟಾಗಬಹುದು.

ಸಾಮಾನ್ಯವಾಗಿ ಬಹಿರಂಗಪಡಿಸದಿರುವುದು ಅಚಾತುರ್ಯವಾಗಿರಬಹುದು (ಅಂದರೆ ಅದು ತಿಳಿಯದೇ ಅಥವಾ ಉದ್ದೇಶವಿಲ್ಲದೆ ಮಾಡಲ್ಪಟ್ಟಿರಬಹುದು) ಅಥವಾ ಪ್ರಸ್ತಾಪಕರು ಸತ್ಯವು ವಾಸ್ತುವಿಕವಲ್ಲವೆಂದು ಭಾವಿಸಿದ್ದರಿಂದ ಘಟಿಸಿರಬಹುದು. ಅಂತಹ ಸಂದರ್ಭದಲ್ಲಿ ಅವರು ನಿರಪರಾಧಿಯಾಗಿರುತ್ತಾರೆ.

ಸತ್ಯವನ್ನು ಉದ್ದೇಶಪೂರ್ವಕವಾಗಿ ನಿಗ್ರಹಿಸಿದಾಗ ಅದನ್ನು ಮರೆಮಾಚುವಿಕೆ ಎಂದು ಪರಿಗಣಿಸಲಾಗುತ್ತದೆ. ಅದರಲ್ಲಿ ಮೋಸ ಮಾಡುವ ಉದ್ದೇಶವಿರುತ್ತದೆ.

**d.** **ತಪ್ಪು ನಿರೂಪಣೆ:** ವಿಮೆಯ ಒಪ್ಪಂದದ ಮಾತುಕತೆಯ ಸಮಯದಲ್ಲಿ ಮಾಡಿದ ಯಾವುದೇ ಹೇಳಿಕೆಯನ್ನು ನಿರೂಪಣೆಯೆಂದು ಕರೆಯಲಾಗುತ್ತದೆ. ನಿರೂಪಣೆಯು ಸತ್ಯ ಸಂಗತಿಯ ಒಂದು ನಿರ್ದಿಷ್ಟ ಹೇಳಿಕೆ ಅಥವಾ ನಂಬಿಕೆಯ ಹೇಳಿಕೆ, ಉದ್ದೇಶ ಅಥವಾ ನಿರೀಕ್ಷೆಯ ಹೇಳಿಕೆಯಾಗಿರಬಹುದು. ಹೇಳಿಕೆಯು ಗಣನೀಯವಾಗಿ ಸರಿಯಾಗಿರಬೇಕೆಂದು ನಿರೀಕ್ಷಿಸಲಾಗಿದೆ. ನಂಬಿಕೆ ಅಥವಾ ನಿರೀಕ್ಷೆಯ ವಿಷಯಗಳಿಗೆ ಸಂಬಂಧಿಸಿದ ನಿರೂಪಣೆಗಳನ್ನು ಅತ್ಯುತ್ತಮ ನಂಬಿಕೆಯಿಂದ ಮಾಡಿರಬೇಕು. ತಪ್ಪು ನಿರೂಪಣೆಯಲ್ಲಿ ಎರಡು ವಿಧಗಳಿವೆ:-

**i.** **ಮುಗ್ಧತೆಯ ತಪ್ಪು ನಿರೂಪಣೆಯು** ಯಾವುದೇ ಮೋಸದ ಉದ್ದೇಶವಿಲ್ಲದೆ ಮಾಡಿದ ತಪ್ಪಾದ ಹೇಳಿಕೆಗಳಿಗೆ ಸಂಬಂಧಿಸಿದೆ.

**ii.** **ಇನ್ನೊಂದೆಡೆ ಮೋಸಪೂರಿತ** ತಪ್ಪು ನಿರೂಪಣೆಯು ಉದ್ದೇಶಪೂರ್ವಕವಾಗಿ ವಿಮಾಗಾರನನ್ನು ಮೋಸಗೊಳಿಸುವ ಉದ್ದೇಶದಿಂದ ಮಾಡಿದ ಅಥವಾ ಸತ್ಯವನ್ನು ಪರಿಗಣಿಸದೆ ಅಜಾಗರೂಕತೆಯಿಂದ ಮಾಡಿದ ಸುಳ್ಳು ಹೇಳಿಕೆಗಳನ್ನು ಸೂಚಿಸುತ್ತದೆ.

ಸ್ಪಷ್ಟವಾಗಿ ಮೋಸಗೊಳಿಸುವ ಉದ್ದೇಶದಿಂದ ಮಾಡಿದ ಮರೆಮಾಚುವಿಕೆಯ ಪ್ರಕರಣವಿದ್ದಾಗ ಅಥವಾ ಮೋಸದ ತಪ್ಪಾದ ನಿರೂಪಣೆಯಿದ್ದಾಗ ಸಾಮಾನ್ಯವಾಗಿ ವಿಮಾ ಒಪ್ಪಂದವು ಅನೂರ್ಜಿತವಾಗುತ್ತದೆ.

ವಿಮಾ ಕಾಯಿದೆ, 1938 ರ ತಿದ್ದುಪಡಿಗಳು (ಮಾರ್ಚ್, 2015) ಮೋಸಕ್ಕಾಗಿ ಪಾಲಿಸಿಯನ್ನು ಪ್ರಶ್ನಿಸಬಹುದಾದ ಷರತ್ತುಗಳ ಕುರಿತು ಕೆಲವು ಮಾರ್ಗಸೂಚಿಗಳನ್ನು ಒದಗಿಸಿವೆ. ಹೊಸ ನಿಬಂಧನೆಗಳು ಈ ಕೆಳಗಿನಂತಿವೆ

e. **ಮೋಸ:** "ಮೋಸ" ಎಂಬ ಪದವನ್ನು ವಿಮಾ ಕಾಯಿದೆಯ (**2015** ರಲ್ಲಿ ತಿದ್ದುಪಡಿ ಮಾಡಲಾಗಿದೆ) ಸೆಕ್ಷನ್ **45 (2)** ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ. ಅದೇ ತೆರನಾಗಿ, ವಿಮಾಗಾರರು ಜೀವ ವಿಮಾ ಪಾಲಿಸಿಯನ್ನು ಮೋಸದ ಆಧಾರದ ಮೇಲೆ ಒಂದು ನಿರ್ದಿಷ್ಟ ಅವಧಿಯೊಳಗೆ ಮಾತ್ರ ಪ್ರಶ್ನಿಸಬಹುದು ಮತ್ತು ನಂತರ ಪ್ರಶ್ನಿಸಲಾಗದು. ಆದಾಗ್ಯೂ, (ಎ) ಪಾಲಿಸಿಯನ್ನು ನೀಡಿದ ದಿನಾಂಕದಿಂದ (ಬಿ) ಅಪಾಯದ ಪ್ರಾರಂಭದ ದಿನಾಂಕದಿಂದ, (ಸಿ) ಪಾಲಿಸಿಯ ಪುನರುಜ್ಜೀವಿತದ ದಿನಾಂಕದಿಂದ ಅಥವಾ (ಡಿ) ರೈಡರ್ ನ ದಿನಾಂಕದಿಂದ ಮೂರು ವರ್ಷಗಳ ಒಳಗೆ ಮಾತ್ರ ವಿಮಾಗಾರರು ಹಾಗೆ ಮಾಡಬಹುದು.

   ಪಾಲಿಸಿಯನ್ನು ಪ್ರಶ್ನಿಸಲಾದ ಕಾರಣಗಳನ್ನು ವಿಮಾದಾರರು ಅಥವಾ ಅವನ/ಅವಳ ಕಾನೂನು ಪ್ರತಿನಿಧಿಗಳು, ನಾಮನಿರ್ದೇಶಿತರು ಅಥವಾ ನಿಯೋಜಿತರಿಗೆ ಲಿಖಿತವಾಗಿ ವಿಮಾಗಾರರು ತಿಳಿಸಬೇಕಾಗುತ್ತದೆ.

   "ಮೋಸ" ಎಂಬ ಅಭಿವ್ಯಕ್ತಿ ಎಂದರೆ ವಿಮಾಗಾರರನ್ನು ಮೋಸಗೊಳಿಸುವ ಉದ್ದೇಶದಿಂದ ಅಥವಾ ವಿಮಾ ಪಾಲಿಸಿಯನ್ನು ನೀಡಲು ವಿಮಾಗಾರರನ್ನು ಪ್ರೇರೇಪಿಸುವ ಉದ್ದೇಶದಿಂದ ವಿಮಾದಾರರು ಮಾಡಿದ ಯಾವುದೇ ಕ್ರಿಯೆ. ಒಂದು ವೇಳೆ ಪಾಲಿಸಿದಾರರು ಜೀವಂತವಾಗಿಲ್ಲದಿದ್ದರೆ, ಮೋಸ ನಡೆದಿಲ್ಲ ಎಂದು ಸಾಬೀತುಪಡಿಸುವ  ಜವಾಬ್ದಾರಿ ಪಾಲಿಸಿಯ ಫಲಾನುಭವಿಗಳ ಮೇಲೂ ಇರುತ್ತದೆ.

## B. ವಿಮಾಸಕ್ತಿ

'ವಿಮಾಸಕ್ತಿ'ಯ ಅಸ್ತಿತ್ವವು ಪ್ರತಿ ವಿಮಾ ಒಪ್ಪಂದದ ಅತ್ಯಗತ್ಯ ಅಂಶವಾಗಿದೆ ಮತ್ತು ವಿಮೆಗೆ ಕಾನೂನುಬದ್ಧ ಪೂರ್ವಾಪೇಕ್ಷಿತ ಅಂಶವೆಂದು ಪರಿಗಣಿಸಲಾಗುತ್ತದೆ.

**ವಿಮಾಸಕ್ತಿಯ ಮೂರು ಪ್ರಮುಖ ಅಂಶಗಳು:**

i. ವಿಮೆ ಮಾಡುವ ಸಾಮರ್ಥ್ಯವುಳ್ಳ ಆಸ್ತಿ, ಹಕ್ಕು, ಆಸಕ್ತಿ, ಜೀವನ ಅಥವಾ ಸಂಭಾವ್ಯ ಹೊಣೆಗಾರಿಕೆಯಿರಬೇಕು.

ii. ಇಂತಹ ಆಸ್ತಿ, ಹಕ್ಕು, ಆಸಕ್ತಿ, ಜೀವನ ಅಥವಾ ಸಂಭಾವ್ಯ ಹೊಣೆಗಾರಿಕೆಯು ವಿಮೆಯ ವಿಷಯವಸ್ತುವಾಗಿರಬೇಕು.

iii. ಆಸ್ತಿ, ಹಕ್ಕು, ಆಸಕ್ತಿ, ಜೀವನ ಅಥವಾ ಹೊಣೆಗಾರಿಕೆಯ ಸ್ವಾತಂತ್ರ್ಯದ ಸುರಕ್ಷತೆಯಿಂದ ಪ್ರಯೋಜನವನ್ನು ಹೊಂದಲು ವಿಮಾದಾರರು ವಿಷಯವಸ್ತುವಿನೊಂದಿಗೆ ಕಾನೂನು ಸಂಬಂಧವನ್ನು ಹೊಂದಿರಬೇಕು. ಅದೇ ರೀತಿಯಲ್ಲಿ, ಅವರು ಯಾವುದೇ ನಷ್ಟ, ಹಾನಿ, ಗಾಯ ಅಥವಾ ಹೊಣೆಗಾರಿಕೆಯ ಸೃಷ್ಟಿಯಿಂದ ಆರ್ಥಿಕವಾಗಿ ಹಾನಿಗೆ ಒಳಗಾಗುತ್ತಿರಬೇಕು.

ಜೂಜು ಅಥವಾ ಪಣವೊಡ್ಡುವ ಒಪ್ಪಂದದಿಂದ ವಿಮೆಯು ಹೇಗೆ ಭಿನ್ನವಾಗಿದೆ ಎಂಬುದನ್ನು ನಾವು ನೋಡೋಣ.

a) **ಜೂಜು ಮತ್ತು ವಿಮೆ:** ಇಸ್ಪೀಟು ಆಟದಲ್ಲಿ ಗೆಲುವು ಅಥವಾ ಸೋಲು/ಕಳೆದುಕೊಳ್ಳುವುದು ಇದ್ದರೆ, ಬೆಂಕಿಯು ಮನೆಯ ಮಾಲೀಕರಿಗೆ ನಷ್ಟವನ್ನುಂಟುಮಾಡುವ ಒಂದೇ ಪರಿಣಾಮವನ್ನು ಉಂಟುಮಾಡುತ್ತದೆ.

   ಅನುಭವಿಸಿದ ನಷ್ಟವನ್ನು ಕೆಲವು ರೀತಿಯಲ್ಲಿ ಸರಿದೂಗಿಸಲು ಮಾಲೀಕರು ವಿಮೆಯನ್ನು ತೆಗೆದುಕೊಳ್ಳುತ್ತಾರೆ.

   ಬೇರೆ ರೀತಿಯಲ್ಲಿ ಹೇಳುವುದಾದರೆ, ವಿಮಾಸಕ್ತಿಯು ವಿಮೆಯ ವಿಷಯವಸ್ತುವಿನಲ್ಲಿ ವಿಮಾದಾರರು ಹೊಂದಿರುವ ಆಸಕ್ತಿಯಾಗಿದೆ. ವಿಮಾ ಒಪ್ಪಂದವನ್ನು ವಿಮಾಸಕ್ತಿಯು ಮಾನ್ಯ ಮತ್ತು ಕಾನೂನಿನಡಿಯಲ್ಲಿ ಜಾರಿಗೊಳಿಸಬಹುದಾದ ಒಪ್ಪಂದವನ್ನಾಗಿ ಮಾಡುತ್ತದೆ.

**ಉದಾಹರಣೆ**

ಶ್ರೀ ಪಟೇಲ್ ಅವರು ಬ್ಯಾಂಕಿನಿಂದ 15 ಲಕ್ಷ ರೂ.ಗಳ ಅಡಮಾನ ಸಾಲದೊಂದಿಗೆ ಮನೆಯನ್ನು ಕೊಂಡುಕೊಂಡರೆ ಮತ್ತು ಅವರು ಈ ಮೊತ್ತದಲ್ಲಿ 12 ಲಕ್ಷವನ್ನು ಮರುಪಾವತಿಸಿದ್ದರೆ, ಬ್ಯಾಂಕಿನ ಬಡ್ಡಿಯು ಬಾಕಿ ಉಳಿದಿರುವ ಮೂರು ಲಕ್ಷದ ಮೊತ್ತದ ಮೇಲೆ ಮಾತ್ರ ಇರುತ್ತದೆ.

ಹೀಗೆ ಬ್ಯಾಂಕ್ ಪಾವತಿಸದ ಸಾಲದ ಬಾಕಿ ಮೊತ್ತದ ಮಟ್ಟಕ್ಕೆ ಆ ಮನೆಯಲ್ಲಿ ಆರ್ಥಿಕವಾಗಿ ವಿಮಾಸಕ್ತಿಯನ್ನು ಹೊಂದಿರುತ್ತದೆ ಮತ್ತು ತನ್ನನ್ನು ಪಾಲಿಸಿಯಲ್ಲಿ ಸಹ ವಿಮಾದಾರರನ್ನಾಗಿ ಮಾಡಲಾಗಿದೆ ಎಂದು ಖಚಿತಪಡಿಸುತ್ತದೆ.

ಶ್ರೀ ಪಟೇಲ್ ಅವರು ಒಂದು ಮನೆಯನ್ನು ಹೊಂದಿದ್ದಾರೆ, ಅದರ ಮೇಲೆ ಅವರು ಬ್ಯಾಂಕಿನಿಂದ ರೂ. 15 ಲಕ್ಷಗಳ ಅಡಮಾನ ಸಾಲವನ್ನು ತೆಗೆದುಕೊಂಡಿದ್ದಾರೆ. ಕೆಳಗಿನ ಪ್ರಶ್ನೆಗಳ ಬಗ್ಗೆ ಯೋಚಿಸಿ:

- ✓ ಅವರು ಮನೆಯಲ್ಲಿ ವಿಮಾಸಕ್ತಿಯನ್ನು ಹೊಂದಿದ್ದಾರೆಯೇ?
- ✓ ಮನೆಯ ಮೇಲೆ ಬ್ಯಾಂಕು ವಿಮಾಸಕ್ತಿಯನ್ನು ಹೊಂದಿದೆಯೇ?
- ✓ ಅವರ ನೆರೆಹೊರೆಯವರ ಬಗ್ಗೆ ಏನು?

ಶ್ರೀ ದಾಸ್ ಅವರ ಕುಟುಂಬವು ಅವರ ಸಂಗಾತಿ, ಇಬ್ಬರು ಮಕ್ಕಳು ಮತ್ತು ವೃದ್ಧ ಪೋಷಕರನ್ನು ಹೊಂದಿದೆ. ಈ ಕೆಳಗಿನ ಪ್ರಶ್ನೆಗಳ ಬಗ್ಗೆ ಯೋಚಿಸಿ:

- ✓ ಶ್ರೀ ದಾಸ್ ಅವರು ಕುಟುಂಬದ ಸದಸ್ಯರ ಯೋಗಕ್ಷೇಮದಲ್ಲಿ ವಿಮಾಸಕ್ತಿಯನ್ನು ಹೊಂದಿದ್ದಾರೆಯೇ?
- ✓ ಅವರಲ್ಲಿ ಯಾರಾದರೂ ಆಸ್ಪತ್ರೆಗೆ ದಾಖಲಾದರೆ ಅವರು ಆರ್ಥಿಕವಾಗಿ ಹಾನಿಗೊಳಗಾಗುತ್ತಾರೆಯೇ?
- ✓ ಅವರ ನೆರೆಹೊರೆಯವರ ಮಕ್ಕಳ ಬಗ್ಗೆ ಏನು? ದಾಸ್ ಅವರಿಗೆ ಅವರಲ್ಲಿ ವಿಮಾಸಕ್ತಿ ಇರುತ್ತದೆಯೇ?

ಇಲ್ಲಿ ವಿಮೆಯ ವಿಷಯವಸ್ತು ಮತ್ತು ವಿಮಾ ಒಪ್ಪಂದದ ವಿಷಯವಸ್ತುವಿನ ನಡುವೆ ವ್ಯತ್ಯಾಸವನ್ನು ಮಾಡುವುದು ಪ್ರಸ್ತುತವಾಗಿದೆ.

ವಿಮೆಯ ವಿಷಯವಸ್ತುವು ತನ್ನದೇ ಆದ ಆಂತರಿಕ ಮೌಲ್ಯವನ್ನು ಹೊಂದಿದ್ದು ವಿಮೆ ಮಾಡಲಾದ ಆಸ್ತಿಗೆ ಸಂಬಂಧಿಸಿದೆ.

ಇನ್ನೊಂದೆಡೆ ವಿಮಾ ಒಪ್ಪಂದದ ವಿಷಯವಸ್ತುವು ಆ ಆಸ್ತಿಯಲ್ಲಿ ವಿಮೆದಾರರಿಗಿರುವ ಆರ್ಥಿಕ ಆಸಕ್ತಿಯಾಗಿದೆ. ವಿಮಾದಾರರಿಗೆ ಆಸ್ತಿಯಲ್ಲಿ ಅಂತಹ ಆರ್ಥಿಕ ಆಸಕ್ತಿಯಿರುವಾಗ ಮಾತ್ರ ಅವನು/ಅವಳು ವಿಮೆ ಮಾಡುವ ಕಾನೂನುಬದ್ಧ ಹಕ್ಕನ್ನು ಹೊಂದಿರುತ್ತಾರೆ. ಕಟ್ಟುನಿಟ್ಟಾದ ಅರ್ಥದಲ್ಲಿ ವಿಮಾ ಪಾಲಿಸಿಯು ಆಸ್ತಿಯಲ್ಲಿಯ ವಿಮಾದಾರರ ಆರ್ಥಿಕ ಆಸಕ್ತಿಯನ್ನು ಒಳಗೊಂಡಿರುತ್ತದೆ ಆಸ್ತಿಯನ್ನಲ್ಲ.

**ಚಿತ್ರ 1: ಸಾಮಾನ್ಯ ಕಾನೂನಿನ ಪ್ರಕಾರ ವಿಮಾಸಕ್ತಿ**




**b) ವಿಮಾಸಕ್ತಿಯು ಅಸ್ತಿತ್ವದಲ್ಲಿರಬೇಕಾದ ಸಮಯ:** ಜೀವ ವಿಮೆಯಲ್ಲಿ, ಪಾಲಿಸಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ವಿಮಾಸಕ್ತಿಯು ಅಸ್ತಿತ್ವದಲ್ಲಿರಬೇಕು. ಕ್ಲೇಮ್ ಸಮಯದಲ್ಲಿ ವಿಮಾಸಕ್ತಿಯು ಅಸ್ತಿತ್ವದಲ್ಲಿರಬೇಕಾದ ಸಾಗರ ಪಾಲಿಸಿಗಳಂತಹ ಕೆಲವು ವಿನಾಯಿತಿಗಳೊಂದಿಗೆ ಸಾಮಾನ್ಯ ವಿಮೆಯಲ್ಲಿ, ಪಾಲಿಸಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಮತ್ತು ಕ್ಲೇಮ್ ಮಾಡುವ ಸಮಯದಲ್ಲಿ ವಿಮಾಸಕ್ತಿಯು ಅಸ್ತಿತ್ವದಲ್ಲಿರಬೇಕು.

ಬೆಂಕಿ ಮತ್ತು ಅಪಘಾತ ವಿಮೆಯ ಸಂದರ್ಭದಲ್ಲಿ, ಪಾಲಿಸಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಮತ್ತು ನಷ್ಟದ ಸಮಯದಲ್ಲಿ ವಿಮಾಸಕ್ತಿ ಅಸ್ತಿತ್ವದಲ್ಲಿರಬೇಕು.

ಆರೋಗ್ಯ ಮತ್ತು ವೈಯಕ್ತಿಕ ಅಪಘಾತ ವಿಮೆಯ ಸಂದರ್ಭದಲ್ಲಿ, ಸ್ವತಃ ಪ್ರಸ್ತಾಪಕರಲ್ಲದೇ ಕುಟುಂಬವು ಅಪಘಾತಕ್ಕೀಡಾದರೆ ಅಥವಾ ಆಸ್ಪತ್ರೆಗೆ ಒಳಗಾದಾಗ ಅವನು/ಅವಳು ಹಣಕಾಸಿನ ನಷ್ಟವನ್ನು ಅನುಭವಿಸುವ ಕಾರಣದಿಂದ ಪ್ರಸ್ತಾಪಕರು ಕುಟುಂಬವನ್ನು ಸಹ ವಿಮೆ ಮಾಡಬಹುದು. ಆದಾಗ್ಯೂ, ಸಾಗರ ಸರಕು ವಿಮೆಯಲ್ಲಿ, ಸಾಗಣೆಯ ಅವಧಿಯಲ್ಲಿ ಸಂಭವಿಸಬಹುದಾದ ಸರಕುಗಳ ಮಾಲೀಕತ್ವವು

ವೆಚ್ಚವನ್ನು ಪಾವತಿಸಿದಾಗ ಕೈಗಳನ್ನು ಬದಲಾಯಿಸುವ ಕಾರಣದಿಂದ ನಷ್ಟದ ಸಮಯದಲ್ಲಿ ಮಾತ್ರ ವಿಮಾಸಕ್ತಿಯ ಅಗತ್ಯವಿರುತ್ತದೆ.

## C. ಅತ್ಯಂತ ಸಮೀಪದ ಕಾರಣ

ಅತ್ಯಂತ ಸಮೀಪದ ಕಾರಣವು ವಿಮೆಯ ಪ್ರಮುಖ ತತ್ವವಾಗಿದೆ ಮತ್ತು ಹೇಗೆ ನಷ್ಟ ಅಥವಾ ಹಾನಿಯು ನಿಜವಾಗಿ ಸಂಭವಿಸಿತು ಮತ್ತು ಅದು ವಿಮೆ ಮಾಡಿದ ಅಪಾಯದ ಪರಿಣಾಮವಾಗಿದೆಯೇ ಎಂಬುದಕ್ಕೆ ಸಂಬಂಧಿಸಿದೆ. ವಿಮೆ ಮಾಡಿದ ಅಪಾಯದಿಂದ ನಷ್ಟ ಉಂಟಾದರೆ, ವಿಮಾಗಾರರು ಜವಾಬ್ದಾರರಾಗಿರುತ್ತಾರೆ. ತಕ್ಷಣದ ಕಾರಣವು ವಿಮೆ ಮಾಡಿದ ಅಪಾಯವಾಗಿದ್ದರೆ, ವಿಮಾಗಾರರು ನಷ್ಟಪರಿಹಾರವನ್ನು ನೀಡಲು ಬದ್ಧರಾಗಿರುತ್ತಾರೆ, ಇಲ್ಲದಿದ್ದರೆ ಅವರು ಬದ್ಧರಾಗಿರುವುದಿಲ್ಲ. ಜೀವೇತರ ವಿಮಾ ಕ್ಲೇಮ್ ಗಳಿಗೆ ಸಂಬಂಧಿಸಿದಂತೆ ಈ ತತ್ವದ ಅನ್ವಯವು ಪ್ರಾಯೋಗಿಕವಾಗಿ ಹೆಚ್ಚಾಗಿರುತ್ತದೆ.

ನಷ್ಟ ಸಂಭವಿಸಿದಾಗ, ಘಟನೆಗೆ ಕಾರಣವಾಗುವ ಅನೇಕ ಘಟನೆಗಳ ಸರಣಿಯು ಸಂಭವಿಸಿರಬಹುದು. ಆದ್ದರಿಂದ ಅತ್ಯಂತ ಹತ್ತಿರದ ಅಥವಾ ಸಮೀಪದ ಕಾರಣವನ್ನು ನಿರ್ಧರಿಸುವುದು ಕೆಲವೊಮ್ಮೆ ಕಷ್ಟವಾಗುತ್ತದೆ. ಈ ನಿಯಮದಡಿಯಲ್ಲಿ, ನಷ್ಟವನ್ನು ಉಂಟುಮಾಡುವ ಘಟನೆಗಳ ಸರಪಳಿಗೆ ಚಾಲನೆ ಕೊಡುವ ಪ್ರಮುಖ ಕಾರಣವನ್ನು ವಿಮಾಗಾರರು ಹುಡುಕುತ್ತಾರೆ. ಅದು ಅಗತ್ಯವಾಗಿ ನಷ್ಟದ ಮೊದಲು ಸಂಭವಿಸಿದ ಕೊನೆಯ ಘಟನೆ. ಹತ್ತಿರದ ಅಥವಾ ನಷ್ಟವನ್ನು ಉಂಟುಮಾಡಿದ ತಕ್ಷಣವೇ ಜವಾಬ್ದಾರವಾಗಿರಬೇಕೆಂದೇನಲ್ಲ. ಉದಾಹರಣೆಗೆ, ಬೆಂಕಿಯು ನೀರಿನ ಪೈಪ್ ನ ಒಡೆಯುವುದಕ್ಕೆ ಕಾರಣವಾಗಬಹುದು. ಪರಿಣಾಮವಾಗಿ ನಷ್ಟವಾಗಲು ನೀರು ಕಾರಣವಾಗಿದ್ದರೂ, ಬೆಂಕಿಯನ್ನು ಇನ್ನೂ ಘಟನೆಯ ಹತ್ತಿರದ ಕಾರಣವೆಂದು ಪರಿಗಣಿಸಲಾಗುತ್ತದೆ. ಇತರ ಕಾರಣಗಳು ಸಮೀಪದ ಕಾರಣಗಳಿಂದ ಪ್ರತ್ಯೇಕವಾಗಿದ್ದು ಅವುಗಳನ್ನು ದೂರಸ್ಥ ಕಾರಣಗಳು ಎಂದು ವರ್ಗೀಕರಿಸಬಹುದು. ದೂರಸ್ಥ ಕಾರಣಗಳು ಉಪಸ್ಥಿತವಾಗಿದ್ದರೂ ಘಟನೆಯನ್ನು ಉಂಟುಮಾಡುವಲ್ಲಿ ಜವಾಬ್ದಾರವಾಗಿರುವುದಿಲ್ಲ.

## ವ್ಯಾಖ್ಯಾನ

ಅತ್ಯಂತ ಸಮೀಪದ ಕಾರಣವನ್ನು ಯಾವುದೇ ಶಕ್ತಿಯ ಹಸ್ತಕ್ಷೇಪವಿಲ್ಲದೆಯೇ ಮತ್ತು ಹೊಸ ಮತ್ತು ಸ್ವತಂತ್ರ ಮೂಲದಿಂದ ಸಕ್ರಿಯವಾಗಿ ಕೆಲಸ ಮಾಡದೆ, ಪರಿಣಾಮವನ್ನುಂಟು ಮಾಡುವ ಘಟನೆಗಳ ಸರಣಿಗೆ ಚಾಲನೆಯನ್ನು ನೀಡುವ ಸಕ್ರಿಯ ಮತ್ತು ಪರಿಣಾಮಕಾರಿ ಕಾರಣವೆಂದು ವ್ಯಾಖ್ಯಾನಿಸಲಾಗಿದೆ.

ಅತ್ಯಂತ ಸಮೀಪದ ಕಾರಣದ ತತ್ವವು ವಿಮಾ ಒಪ್ಪಂದಗಳಿಗೆ ಹೇಗೆ ಅನ್ವಯಿಸುತ್ತದೆ? ವಿಮೆಯು ಸಾವಿನ ಪ್ರಯೋಜನದ ಪಾವತಿಯನ್ನು ಒದಗಿಸುವುದರಿಂದ, ಸಾವಿನ ಕಾರಣವನ್ನು ಲೆಕ್ಕಿಸದೆಯೇ, ಅತ್ಯಂತ ಸಮೀಪದ ಕಾರಣದ ತತ್ವವು ಸಾಮಾನ್ಯವಾಗಿ ವಿಮೆಗೆ ಅನ್ವಯಿಸುವುದಿಲ್ಲ. ಆದಾಗ್ಯೂ ಅನೇಕ ವಿಮಾ ಒಪ್ಪಂದಗಳು ಆಕಸ್ಮಿಕ/ಅಪಘಾತಿಕ ಮರಣದ ಸಂದರ್ಭದಲ್ಲಿ ಹೆಚ್ಚುವರಿ ವಿಮಾ ಮೊತ್ತವನ್ನು ಪಾವತಿಸಲಾಗುವ ಅಪಘಾತದ ಪ್ರಯೋಜನದ ಆಡ್-ಆನ್ ಅನ್ನು ಹೊಂದಿರಬಹುದಾಗಿದೆ. ಅಂತಹ ಪರಿಸ್ಥಿತಿಯಲ್ಲಿ, ಅಪಘಾತದ ಪರಿಣಾಮವಾಗಿಯೇ ಸಾವು ಸಂಭವಿಸಿದೆಯೇ ಎಂದು ಕಾರಣವನ್ನು

ಕಂಡುಹಿಡಿಯುವುದು ಅಗತ್ಯವಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಅತ್ಯಂತ ಸಮೀಪದ ಕಾರಣದ ತತ್ತ್ವವು ಅನ್ವಯಿಸುತ್ತದೆ.

ಅತ್ಯಂತ ಸಮೀಪದ ಕಾರಣದ ತತ್ತ್ವವನ್ನು ಅರ್ಥಮಾಡಿಕೊಳ್ಳಲು, ಈ ಕೆಳಗಿನ ಪರಿಸ್ಥಿತಿಯನ್ನು ಪರಿಗಣಿಸಿ:

**ಉದಾಹರಣೆ**

**ಸನ್ನಿವೇಶ 1:** ಶ್ರೀ ಅಜಯ್ ಅವರು ತಮ್ಮ ಕಾರನ್ನು ಗ್ಯಾರೇಜ್‌ನಲ್ಲಿ ನಿಲ್ಲಿಸಿ ಸುದೀರ್ಘ ರಜೆಯ ಮೇಲೆ ಹೋಗಿದ್ದರು. ಆರು ತಿಂಗಳ ನಂತರ ತಿರುಗಿ ಬಂದು ಕಾರನ್ನು ಸ್ಟಾರ್ಟ್ ಮಾಡಿದಾಗ ಕಾರಿನ ಹವಾನಿಯಂತ್ರಣ ವ್ಯವಸ್ಥೆ ಕೆಲಸ ಮಾಡದೇ ಇರುವುದು ಅವರ ಗಮನಕ್ಕೆ ಬಂದಿತು. ಶ್ರೀ. ಅಜಯ್ ಅವರು ಹವಾನಿಯಂತ್ರಣವನ್ನು ದುರಸ್ತಿ ಮಾಡುವ ವೆಚ್ಚಕ್ಕಾಗಿ ವಿಮಾ ಕಂಪನಿಗೆ ಕ್ಲೇಮ್ ಅನ್ನು ಸಲ್ಲಿಸಿದರು ಮತ್ತು ವಿಮಾ ಕಂಪನಿಯು ಕ್ಲೇಮ್ ಅನ್ನು ತಿರಸ್ಕರಿಸಿತು. ವಿಮಾ ಪಾಲಿಸಿಯಲ್ಲಿ ಹೊರಗಿಡಲಾದ ಅಪಾಯವಾಗಿರುವ ಕಾರಿನ 'ಸವಕಳಿ' ಮತ್ತು ಹವಾನಿಯಂತ್ರಣ ವ್ಯವಸ್ಥೆಯಿಂದ ಹಾನಿಯಾಗಿದೆ ಎಂದು ವಿಮಾ ಕಂಪನಿ ಕಾರಣವನ್ನು ನೀಡಿತು. ಶ್ರೀ ಅಜಯ್ ಅವರು ನ್ಯಾಯಾಲಯವನ್ನು ಸಂಪರ್ಕಿಸಿದರು ಮತ್ತು ಸಮೀಕ್ಷೆಯ ವರದಿಯನ್ನು ಪರಿಶೀಲಿಸಿದ ನಂತರ, ಕಾರು 12 ವರ್ಷ ಹಳೆಯದಾಗಿದ್ದು ಹಿಂದಿನ 6 ವರ್ಷಗಳಲ್ಲಿ ಕಾರು ಅಥವಾ ಹವಾನಿಯಂತ್ರಣವನ್ನು ಸರ್ವಿಸ್ / ರಿಪೇರಿ ಮಾಡಲಾಗಿಲ್ಲ, ಆದ್ದರಿಂದ ಹಾನಿಯು 'ಸಾಮಾನ್ಯ ಸವಕಳಿ'ಯಿಂದಾಗಿದ್ದು ಕ್ಲೇಮ್ ಅನ್ನು ಪಾವತಿಸಲು ವಿಮಾ ಕಂಪನಿಯು ಜವಾಬ್ದಾರರಾಗಿಲ್ಲ ಎಂದು ಸಮೀಕ್ಷೆಯ ವರದಿ ಹೇಳುತ್ತಿತ್ತು.

**ಸನ್ನಿವೇಶ 2:** ಶ್ರೀ ಪಿಂಟೋ ಅವರು ಕುದುರೆ ಸವಾರಿ ಮಾಡುವಾಗ ನೆಲದ ಮೇಲೆ ಬಿದ್ದು ಕಾಲು ಮುರಿದುಕೊಂಡರು, ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮೊದಲು ಅವರು ತೇವವಾದ ನೆಲದ ಮೇಲೆ ಬಹಳ ಹೊತ್ತು ಮಲಗಿದ್ದ ಕಾರಣ, ಅವರಿಗೆ ಜ್ವರ ಬಂದು ಅದು ನ್ಯುಮೋನಿಯಾ ಆಗಿ ಪರಿಣಮಿಸಿ ಕೊನೆಗೆ ಈ ಕಾರಣದಿಂದ ಮರಣಿಸಿದರು. ನ್ಯುಮೋನಿಯಾ ತಕ್ಷಣದ ಕಾರಣವೆಂದು ತೋರುತ್ತಿದ್ದರೂ, ವಾಸ್ತವವಾಗಿ ಅಪಘಾತದಿಂದ ಕೆಳಗೆ ಬೀಳುವುದು ಅತ್ಯಂತ ಹತ್ತಿರದ ಕಾರಣವಾಗಿ ಗೋಚರಿಸುತ್ತದೆ ಮತ್ತು ವೈಯಕ್ತಿಕ ಅಪಘಾತ ವಿಮೆಯಡಿಯಲ್ಲಿ ಕ್ಲೇಮ್ ಅನ್ನು ಪಾವತಿಸಲಾಗುತ್ತದೆ.

ಬೆಂಕಿಯ ಪರಿಣಾಮವಾಗಿ ವಿಮಾದಾರರು ಅನುಭವಿಸುವ ಆದರೆ ಬೆಂಕಿಯಿಂದ ಉಂಟಾಗಿವೆಯೆಂದು ಹೇಳಲಾಗದ ಕೆಲವು ನಷ್ಟಗಳಿವೆ. ಪ್ರಾಯೋಗಿಕವಾಗಿ, ವ್ಯವಹಾರದಿಂದ ಈ ಕೆಲವು ನಷ್ಟಗಳನ್ನು ಸಾಂಪ್ರದಾಯಿಕವಾಗಿ ಬೆಂಕಿ ವಿಮಾ ಪಾಲಿಸಿಗಳಡಿಯಲ್ಲಿ ಪಾವತಿಸಲಾಗುತ್ತದೆ.

---

ಅಂತಹ ನಷ್ಟಗಳ ಉದಾಹರಣೆಗಳು ಈ ಕೆಳಗಿನಂತಿರಬಹುದು -

- ✓ ಬೆಂಕಿಯನ್ನು ನಂದಿಸಲು ಬಳಸುವ ನೀರಿನಿಂದಾದ ಆಸ್ತಿ ಹಾನಿ
- ✓ ಅಗ್ನಿಶಾಮಕ ದಳವು ಅವರ ಕರ್ತವ್ಯ ನಿರ್ವಹಿಸುತ್ತಿರುವಾಗ ಉಂಟಾದ ಆಸ್ತಿ ಹಾನಿ
- ✓ ಸುಡುತ್ತಿರುವ ಕಟ್ಟಡದಿಂದ ಸುರಕ್ಷಿತ ಸ್ಥಳಕ್ಕೆ ಒಯ್ಯುವಾಗ ಆಸ್ತಿಗೆ ಆದ ಹಾನಿ

**ನಿಮ್ಮನ್ನು ಪರೀಕ್ಷಿಸಿ 1**

ಶ್ರೀ ಪಿಂಟೋ ಅವರು ಕುದುರೆ ಸವಾರಿ ಅಪಘಾತದಲ್ಲಿ ನಂತರ ತೇವವಾದ ನೆಲದ ಮೇಲೆ ಬಿದ್ದ ಪರಿಣಾಮವಾಗಿ ನ್ಯುಮೋನಿಯಾಕ್ಕೆ ತುತ್ತಾದರು. ಶ್ರೀ ಪಿಂಟೋ ಅವರ ಮರಣಕ್ಕೆ ನ್ಯುಮೋನಿಯಾ ಕಾರಣವಾಯಿತು. ಹಾಗಾದರೆ ಸಾವಿಗೆ ಸಮೀಪದ ಕಾರಣವೇನು?

**I.** ನ್ಯುಮೋನಿಯಾ

**II.** ಕುದುರೆ

**III.** ಕುದುರೆ ಸವಾರಿ ಅಪಘಾತ

**IV.** ದುರ್ದೈವ

---

## D. ಭರವಸೆ/ ನಷ್ಟ ಪರಿಹಾರ

ಭರವಸೆ/ನಷ್ಟಪರಿಹಾರದ ತತ್ವವು ಜೀವೇತರ ವಿಮಾ ಪಾಲಿಸಿಗಳಿಗೆ ಅನ್ವಯಿಸುತ್ತದೆ. **ಅಂದರೆ ನಷ್ಟವನ್ನು ಅನುಭವಿಸುವ ಪಾಲಿಸಿದಾರರು ನಷ್ಟದ ಘಟನೆ ಸಂಭವಿಸುವ ಮೊದಲು ಅವನು ಅಥವಾ ಅವಳು ಇದ್ದ ಆರ್ಥಿಕ ಸ್ಥಿತಿಯನ್ನೇ ಹೊಂದಲು ಪರಿಹಾರವನ್ನು ನೀಡಲಾಗುತ್ತದೆ ಎಂದರ್ಥ.** ವಿಮಾ ಒಪ್ಪಂದವು ವಿಮಾದಾರರಿಗೆ ನಷ್ಟದ ಮೊತ್ತದವರೆಗೆ ಪರಿಹಾರವನ್ನು ಅಥವಾ ಹಾನಿಯನ್ನು ಭರಿಸಲಾಗುತ್ತದೆ ಮತ್ತು ಹೆಚ್ಚಿನದನ್ನಲ್ಲವೆಂದು ಖಾತರಿಪಡಿಸುತ್ತದೆ.

ಯಾರೂ ಆಸ್ತಿಯನ್ನು ವಿಮೆ ಮಾಡುವುದರ ಮೂಲಕ ಲಾಭವನ್ನು ಗಳಿಸಬಾರದು ಮತ್ತು ನಷ್ಟಕ್ಕಿಂತ ಹೆಚ್ಚಿನದನ್ನು ಮರುಪಡೆಯಬಾರದು ಎಂಬುದು ಇದರಲ್ಲಿನ ತತ್ವವಾಗಿದೆ. ವಿಮಾಗಾರರು ಅನುಭವಿಸಿದ ನಷ್ಟದ ಆರ್ಥಿಕ ಮೌಲ್ಯವನ್ನು ನಿರ್ಣಯಿಸುತ್ತಾರೆ ಮತ್ತು ಅದಕ್ಕೆ ಅನುಗುಣವಾಗಿ ಪರಿಹಾರ ನೀಡುತ್ತಾರೆ.

**ಉದಾಹರಣೆ**

ರಾಮ್ ತನ್ನ ಮನೆಯನ್ನು ರೂ. 10 ಲಕ್ಷಗಳ ಪೂರ್ಣ ಮೊತ್ತಕ್ಕೆ ವಿಮೆ ಮಾಡಿಸಿದ್ದು, ಬೆಂಕಿ ಅಪಘಾತದಿಂದ ಅವರು ರೂ. 70,000ದಷ್ಟು ನಷ್ಟವನ್ನನುಭವಿಸಿದ್ದಾರೆ ಎಂದು ಅಂದಾಜಿಸಲಾಗಿದೆ. ವಿಮಾ ಕಂಪನಿಯು ಅವರಿಗೆ ರೂ. 70,000 ಮೊತ್ತವನ್ನು ನೀಡುತ್ತಾರೆ. ವಿಮಾದಾರರು ಹೆಚ್ಚಿನ ಮೊತ್ತವನ್ನು ಕ್ಲೇಮ್ ಮಾಡಲಾಗುವುದಿಲ್ಲ.

ಪಾವತಿಸಬೇಕಾದ ಪರಿಹಾರವು ತೆಗೆದುಕೊಂಡ ವಿಮೆಯ ಪ್ರಕಾರವನ್ನು ಅವಲಂಬಿಸಿರುತ್ತದೆ. ನಷ್ಟ ಪರಿಹಾರವು ಈ ಕೆಳಗಿನ ಒಂದು ಅಥವಾ ಹೆಚ್ಚು ವಿಧಾನಗಳಲ್ಲಿ ನೀಡಲ್ಪಡಬಹುದು:

- ✓ ನಗದು ಪಾವತಿ

✓ ಹಾನಿಗೊಳಗಾದ ವಸ್ತುವಿನ ದುರಸ್ತಿ

✓ ಕಳೆದುಹೋದ ಅಥವಾ ಹಾನಿಗೊಳಗಾದ ವಸ್ತುವಿನ ಬದಲಿ

✓ ಪುನಃಸ್ಥಾಪನೆ (ಮರುಸ್ಥಾಪನೆ). ಉದಾ. ಬೆಂಕಿಯಿಂದ ನಾಶವಾದ ಮನೆಯನ್ನು ಮರುನಿರ್ಮಾಣ ಮಾಡುವುದು

**ಚಿತ್ರ 2: ನಷ್ಟ ಪರಿಹಾರ**




a) **ಒಪ್ಪಿಕೊಳ್ಳಲಾದ ಮೌಲ್ಯ:** ಆದಾಗ್ಯೂ, ನಷ್ಟದ ಸಮಯದಲ್ಲಿ ಮೌಲ್ಯವನ್ನು ಸುಲಭವಾಗಿ ಅಂದಾಜು ಮಾಡಲು ಅಥವಾ ಕಂಡುಹಿಡಿಯಲಾಗದ ಕೆಲವು ವಿಷಯವಸ್ತುಗಳಿವೆ. ಉದಾಹರಣೆಗೆ, ಕುಟುಂಬದ ಚರಾಸ್ತಿ ಅಥವಾ ಅಪರೂಪದ ಕಲಾಕೃತಿಗಳ ಬೆಲೆ ಕಟ್ಟುವುದು ಕಷ್ಟವಾಗಬಹುದು. ಅದೇ ರೀತಿ ಸಾಗರ ವಿಮಾ ಪಾಲಿಸಿಗಳಲ್ಲಿ ಹಡಗು, ಪ್ರಪಂಚದಾದ್ಯಂತ ಅರ್ಧದಾರಿಯಲ್ಲಿ ಅಪಘಾತದಲ್ಲಿ ಅನುಭವಿಸಿದ ನಷ್ಟದ ಪ್ರಮಾಣವನ್ನು ಅಂದಾಜು ಮಾಡುವುದು ಕಷ್ಟಕರವಾಗಿರುತ್ತದೆ.

ಅಂತಹ ಸಂದರ್ಭಗಳಲ್ಲಿ, ' ಒಪ್ಪಿಕೊಳ್ಳಲಾದ ಮೌಲ್ಯ' ಎಂದು ಕರೆಯಲ್ಪಡುವ ತತ್ವವನ್ನು ಅಳವಡಿಸಿಕೊಳ್ಳಲಾಗುತ್ತದೆ. ವಿಮಾ ಒಪ್ಪಂದದ ಆರಂಭದಲ್ಲಿ, ವಿಮಾಗಾರರು ಮತ್ತು ವಿಮಾದಾರರು ವಿಮೆ ಮಾಡಬೇಕಾದ ಆಸ್ತಿಯ ಮೌಲ್ಯವನ್ನು ಒಪ್ಪಿಕೊಳ್ಳುತ್ತಾರೆ. ಒಟ್ಟು ನಷ್ಟದ ಸಂದರ್ಭದಲ್ಲಿ, ಪಾಲಿಸಿಯ ಒಪ್ಪಿಗೆ ಮೊತ್ತವನ್ನು ಪಾವತಿಸಲು ವಿಮಾಗಾರರು ಒಪ್ಪುತ್ತಾರೆ. ಈ ರೀತಿಯ ನೀತಿಯನ್ನು " **ಒಪ್ಪಿದ ಮೌಲ್ಯ ನೀತಿ** " ಎಂದು ಕರೆಯಲಾಗುತ್ತದೆ.

b) **ಕಡಿಮೆ ವಿಮೆ (ಅಂಡರ್ ಇನ್ಶ್ಯೂರೆನ್ಸ್):** ಆಸ್ತಿಯನ್ನು ಅದರ ಪೂರ್ಣ ಮೌಲ್ಯಕ್ಕೆ ವಿಮೆ ಮಾಡಿಲ್ಲದ ಉದಾಹರಣೆಯನ್ನು ಈಗ ಪರಿಗಣಿಸಿ. ಇಂತಹ ಪರಿಸ್ಥಿತಿಯಲ್ಲಿ ವಿಮಾದಾರರು ವಿಮೆಯ ಅನುಪಾತದಲ್ಲಿ ಮಾತ್ರ ನಷ್ಟಕ್ಕೆ ಪರಿಹಾರವನ್ನು ಪಡೆಯಲು ಅರ್ಹರಾಗಿರುತ್ತಾರೆ.

ರೂ. 10 ಲಕ್ಷಗಳ ಮೊತ್ತದ ಮೌಲ್ಯವನ್ನು ಹೊಂದಿರುವ ಮನೆಯನ್ನು ಕೇವಲ ರೂ. 5 ಲಕ್ಷಗಳಿಗೆ ಮಾತ್ರ ವಿಮೆ ಮಾಡಲಾಗಿದೆ. ಬೆಂಕಿ ಅಪಘಾತದಿಂದ ರೂ. 60,000ಗಳ ನಷ್ಟ ಉದ್ಭವಿಸಿದರೆ, ಸಂಪೂರ್ಣ ಮೊತ್ತವನ್ನು ಪಡೆಯಲು ಸಾಧ್ಯವಿಲ್ಲ. ಮನೆ ಮಾಲೀಕರು ಮನೆಯ ಮೌಲ್ಯದ ಅರ್ಧದಷ್ಟು ಮಾತ್ರ ವಿಮೆ ಮಾಡಿದ್ದಾರೆ ಎಂದು ಪರಿಗಣಿಸಲಾಗುತ್ತದೆ ಮತ್ತು ಹೀಗಾಗಿ ಅವರು ಕೇವಲ ನಷ್ಟದ ಮೊತ್ತದ 50% [ರೂ.

30,000] ನಷ್ಟಪರಿಹಾರಕ್ಕೆ ಮಾತ್ರ ಅರ್ಹರಾಗಿರುತ್ತಾರೆ. ಇದನ್ನು ಕಡಿಮೆ ವಿಮೆ(ಅಂಡರ್ ಇನ್ಶ್ಯೂರೆನ್ಸ್) ಎಂದು ಕರೆಯಲಾಗುತ್ತದೆ.

ಆಸ್ತಿ ಮತ್ತು ಹೊಣೆಗಾರಿಕೆಯ ವಿಮೆಯೊಂದಿಗೆ ವ್ಯವಹರಿಸುವ ಹೆಚ್ಚಿನ ವಿಧದ ಜೀವೇತರ ವಿಮಾ ಪಾಲಿಸಿಗಳಲ್ಲಿ, ವಿಮಾದಾರನಿಗೆ ನಿಜವಾದ ನಷ್ಟದ ಪ್ರಮಾಣಕ್ಕೆ ಪರಿಹಾರವನ್ನು ನೀಡಲಾಗುತ್ತದೆ, ಅಂದರೆ ಕಳೆದುಹೋದ ಅಥವಾ ಹಾನಿಗೊಳಗಾದ ಆಸ್ತಿಯನ್ನು ಬದಲಿಸಲು ಅಗತ್ಯವಿರುವ ಹಣದ ಮೊತ್ತವನ್ನು ಪ್ರಸ್ತುತ ಮಾರುಕಟ್ಟೆ ಬೆಲೆಯಲ್ಲಿ ಸವಕಳಿಯನ್ನು ಕಡಿಮೆ ಮಾಡಿ ನೀಡಲಾಗುತ್ತದೆ.

## E. ಸಬ್ರೋಗೇಶನ್

ಸಬ್ರೊಗೇಶನ್ ಎಂದರೆ ವಿಮೆಯ ವಿಷಯವಸ್ತುವಿಗೆ ಸಂಬಂಧಿಸಿದಂತೆ ಎಲ್ಲ ಹಕ್ಕುಗಳು ಮತ್ತು ಪರಿಹಾರಗಳನ್ನು ವಿಮಾದಾರರಿಂದ ವಿಮಾಗಾರರಿಗೆ ವರ್ಗಾಯಿಸುವುದು. ಸಬ್ರೊಗೇಶನ್ ಇದು ಭರವಸೆ/ನಷ್ಟ ಪರಿಹಾರದ ತತ್ವವನ್ನು ಅನುಸರಿಸುತ್ತದೆ. ಆದ್ದರಿಂದ, ಇದನ್ನು ಸಾಮಾನ್ಯವಾಗಿ ಭರವಸೆ/ನಷ್ಟ ಪರಿಹಾರದ ' ಸಹಭಾಗಿತ್ವ ' ವೆಂದು ಕರೆಯಲಾಗುತ್ತದೆ.

ಬೇರೆ ರೀತಿಯಲ್ಲಿ ಹೇಳುವುದಾದರೆ, ವಿಮಾದಾರನು ನಷ್ಟವನ್ನು ಅನುಭವಿಸಿದರೆ ಮತ್ತು ವಿಮಾಗಾರರಿಂದ ನಷ್ಟವನ್ನು ಸರಿದೂಗಿಸಿದರೆ, ಆ ನಷ್ಟಕ್ಕೆ ಯಾವುದೇ ಮೂರನೇ ವ್ಯಕ್ತಿಯಿಂದ ಪರಿಹಾರವನ್ನು ಪಡೆಯುವ ವಿಮಾದಾರನ ಹಕ್ಕನ್ನು ವಿಮಾಗಾರರಿಗೆ ವರ್ಗಾಯಿಸಲಾಗುತ್ತದೆ. ವಿಮಾ ಕಂಪನಿಯು ಸಂಗ್ರಹಿಸಬಹುದಾದ ಹಾನಿಯ ಮೊತ್ತವು ವಿಮಾ ಕಂಪನಿಯು ಪಾವತಿಸಿದ ಮೊತ್ತದ ಮಟ್ಟಿಗೆ ಮಾತ್ರ ಎಂಬುದನ್ನು ಗಮನಿಸಿ.

### ಪ್ರಮುಖ

**ಸಬ್ರೋಗೇಶನ್:** ಇದು ವಿಮಾ ಕಂಪನಿಯು ಪಾಲಿಸಿದಾರರಿಗೆ ಪಾವತಿಸಿದ ಕ್ಲೇಮ್ ಮೊತ್ತವನ್ನು ಅಜಾಗರೂಕರಾದ ಮೂರನೇ ವ್ಯಕ್ತಿಯಿಂದ ಮರುಪಡೆಯಲು ಬಳಸುವ ಪ್ರಕ್ರಿಯೆಯಾಗಿದೆ.

ಸಬ್ರೋಗೇಶನ್ ವನ್ನು ವಿಮಾದಾರರಿಂದ ಮೂರನೇ ವ್ಯಕ್ತಿಯ ವಿರುದ್ಧ ಕ್ಲೇಮ್ ಅನ್ನು ಪಾವತಿಸಿದ ವಿಮಾ ಕಂಪನಿಗೆ ಹಕ್ಕುಗಳ ಶರಣಾಗತಿ ಎಂದು ಸಹ ವ್ಯಾಖ್ಯಾನಿಸಬಹುದು.

### ಉದಾಹರಣೆ

ಸಿಲ್ವೈನ್ ಸಾರಿಗೆ ಸೇವೆಯಲ್ಲಿ ಶ್ರೀ ಕಿಶೋರ್ ಅವರ ಗೃಹೋಪಯೋಗಿ ಸಾಮಾನುಗಳನ್ನು ಸಾಗಿಸಲಾಗುತ್ತಿತ್ತು. ಚಾಲಕನ ನಿರ್ಲಕ್ಷ್ಯದಿಂದ ಅವು ರೂ. 45,000 ಗಳಷ್ಟು ಹಾನಿಗೊಳಗಾಗಿದ್ದು, ವಿಮಾಗಾರರು ಶ್ರೀ ಕಿಶೋರ್ ಅವರಿಗೆ ರೂ. 30,000 ಗಳನ್ನು ಪಾವತಿಸಿದರು. ವಿಮಾಗಾರರು ಕೇವಲ ರೂ. 30,000 ಗಳವರೆಗಿನ ಮೊತ್ತವನ್ನು ಸಿಲ್ವೈನ್ ಸಾರಿಗೆಯಿಂದ ಸಂಗ್ರಹಿಸಬಹುದು.

ಈ ವಿಷಯವು ವ್ಯಾಜ್ಯಕ್ಕೆ ಹೋದರೆ ಮತ್ತು ಶ್ರೀ. ಕಿಶೋರ್ ಅವರಿಗೆ ಪರಿಹಾರವಾಗಿ ರೂ. 35,000 ಪಾವತಿಸಲು ಸಿಲ್ವೈನ್ ಸಾರಿಗೆಗೆ ನ್ಯಾಯಾಲಯವು ನಿರ್ದೇಶಿಸಿದರೆ, ಆಗ ಕಿಶೋರ್ ಅವರು ವಿಮಾಗಾರರಿಗೆ

ಸಬ್ರೊಗೇಶನ್ ಷರತ್ತಿನಡಿಯಲ್ಲಿ ರೂ. 30000 ಮಾತ್ರ ಕೊಟ್ಟು ಉಳಿದ ರೂ. 5,000 ಗಳನ್ನು ತಾನು ಇಟ್ಟುಕೊಳ್ಳಬೇಕು.

ಸಬ್ರೊಗೇಶನ್ ಷರತ್ತು ವಿಮಾದಾರರು ವಿಮಾ ಕಂಪನಿ ಮತ್ತು ಯಾವುದೇ ಮೂರನೇ ವ್ಯಕ್ತಿಯಿಂದ ನಷ್ಟಕ್ಕಿಂತ ಹೆಚ್ಚಿನ ಮೊತ್ತವನ್ನು ಸಂಗ್ರಹಿಸುವುದನ್ನು ತಡೆಯುತ್ತದೆ. ಸಬ್ರೊಗೇಶನ್ ಕೇವಲ ಭರವಸೆ/ನಷ್ಟ ಪರಿಹಾರದ ಒಪ್ಪಂದಗಳ ಸಂದರ್ಭದಲ್ಲಿ ಮಾತ್ರ ಉಂಟಾಗುತ್ತದೆ ಜೀವವಿಮಾ ಪಾಲಿಸಿ ಅಥವಾ ವೈಯಕ್ತಿಕ ಅಪಘಾತ ಪಾಲಿಸಿಗಳಂತಹ ಪ್ರಯೋಜನದ ಪಾಲಿಸಿಗಳ ಸಂದರ್ಭದಲ್ಲಿ ಅಲ್ಲ.

**ಉದಾಹರಣೆ**

ಶ್ರೀ ಸುರೇಶ್ ಅವರು ವಿಮಾನ ಅಪಘಾತದಲ್ಲಿ ಸಾವನ್ನಪ್ಪುತ್ತಾರೆ. ಅವರ ಕುಟುಂಬವು ಏರ್‌ಲೈನ್ ನಿಂದ ಪಾವತಿಸಲಾದ ಪರಿಹಾರದ ಜೊತೆಗೆ ರೂ 15 ಲಕ್ಷಗಳೊಂದಿಗೆ ವೈಯಕ್ತಿಕ ಅಪಘಾತ ಪಾಲಿಸಿಯನ್ನು ನೀಡಿದ ವಿಮಾಗಾರರಿಂದ ರೂ 50 ಲಕ್ಷಗಳ ಸಂಪೂರ್ಣ ವಿಮಾ ಮೊತ್ತವನ್ನು ಪಡೆಯಲು ಅರ್ಹವಾಗಿದೆ.

## F. ಕೊಡುಗೆ:

ಸಬ್ರೊಗೇಶನ್‌ನಂತೆಯೇ, 'ಕೊಡುಗೆ' ಸಹ ಭರವಸೆ/ನಷ್ಟ ಪರಿಹಾರದ ತತ್ವವನ್ನು ಅನುಸರಿಸುತ್ತದೆ. ಆದ್ದರಿಂದ, ಇದನ್ನು ಸಹ ಭರವಸೆ/ನಷ್ಟಪರಿಹಾರದ ' ಸಹಭಾಗಿತ್ವ'ವೆಂದು ಕರೆಯುತ್ತಾರೆ. ಕೊಡುಗೆಯು ಸಾಮಾನ್ಯ ವಿಮಾ ಒಪ್ಪಂದಗಳಲ್ಲಿ ಉದ್ಭವಿಸುವ ಒಂದು ತತ್ವವಾಗಿದೆ. ವಿಮಾದಾರರು ಒಂದಕ್ಕಿಂತ ಹೆಚ್ಚು ವಿಮಾಗಾರರಿಂದ ವಿಮೆಯನ್ನು ತೆಗೆದುಕೊಂಡಾಗ ಹೊಣೆಗಾರಿಕೆಯನ್ನು ಹೇಗೆ ಪೂರೈಸಬೇಕು ಎಂಬುದನ್ನು ಇದು ನಮಗೆ ತಿಳಿಸುತ್ತದೆ. ಒಂದೇ ಆಸ್ತಿಯನ್ನು ಒಂದಕ್ಕಿಂತ ಹೆಚ್ಚು ವಿಮಾ ಕಂಪನಿಗಳೊಂದಿಗೆ ವಿಮೆ ಮಾಡಿದ್ದರೆ, ಎಲ್ಲ ವಿಮಾಗಾರರು ಒಟ್ಟಾಗಿ ಪಾವತಿಸುವ ಪರಿಹಾರವು ಅನುಭವಿಸಿದ ನಿಜವಾದ ನಷ್ಟವನ್ನು ಮೀರಬಾರದು ಎಂದು ಕೊಡುಗೆಯು ಸೂಚಿಸುತ್ತದೆ. ಪಾಲಿಸಿದಾರರು ಪ್ರತಿ ವಿಮಾಗಾರರಿಂದ ಅವರೊಂದಿಗೆ ವಿಮೆ ಮಾಡಿದ ಮೊತ್ತಕ್ಕೆ ಅನುಗುಣವಾಗಿ ನಷ್ಟದ ಒಂದು ಭಾಗವನ್ನು ಮಾತ್ರ ಕ್ಲೇಮ್ ಮಾಡಬಹುದು.

**ಉದಾಹರಣೆ:** ಶ್ರೀ ಶ್ರೀನಿವಾಸ್ ಅವರು ಎರಡು ವಿಮಾ ಕಂಪನಿಗಳೊಂದಿಗೆ ತಮ್ಮ ಮನೆಯ ಮೇಲೆ ಬೆಂಕಿ ಪಾಲಿಸಿಯನ್ನು ತೆಗೆದುಕೊಂಡಿದ್ದು, ಇಬ್ಬರೂ ವಿಮೆಗಾರರೊಂದಿಗೆ ಅವರು ರೂ.12 ಲಕ್ಷಗಳ ಸಂಪೂರ್ಣ ಮೌಲ್ಯಕ್ಕೆ ವಿಮೆಯನ್ನು ಮಾಡಿದ್ದಾರೆ. ಬೆಂಕಿ ಹತ್ತಿ ಅದರ ಪರಿಣಾಮವಾಗಿ ಅವರು 3 ಲಕ್ಷ ರೂಪಾಯಿಗಳಷ್ಟು ನಷ್ಟವನ್ನು ಅನುಭವಿಸುತ್ತಾರೆಂದು ಭಾವಿಸೋಣ, ಆಗ ಅವರು ಪ್ರತಿ ವಿಮಾಗಾರರಿಂದ 1.5 ಲಕ್ಷ ರೂಪಾಯಿಗಳ ಮೊತ್ತವನ್ನು ಮಾತ್ರ ಕ್ಲೇಮ್ ಮಾಡಬಹುದು.

ಕೊಡುಗೆಯ ತತ್ವವು ನಷ್ಟಪರಿಹಾರ ಪಾಲಿಸಿಗಳಿಗೆ ಮಾತ್ರ ಅನ್ವಯಿಸುತ್ತದೆ. ಜೀವ ವಿಮೆಯ ವಿಷಯದಲ್ಲಿ ಜೀವಹಾನಿ ಉಂಟಾದಾಗ ಅನುಭವಿಸುವ ನಷ್ಟದ ಮೇಲೆ ಯಾವುದೇ ಗರಿಷ್ಠ ಮಿತಿಯನ್ನು ಇರಿಸಲಾಗುವುದಿಲ್ಲವಾದ್ದರಿಂದ ಇದು ಉದ್ಭವಿಸುವುದಿಲ್ಲ.

## ನಿಮ್ಮನ್ನು ಪರೀಕ್ಷಿಸಿ 2

ಈ ಕೆಳಗಿನವುಗಳಲ್ಲಿ ಒತ್ತಾಯದ ಉದಾಹರಣೆ ಯಾವುದು?

I. ರಮೇಶ್ ಸಣ್ಣ ಅಕ್ಷರದಲ್ಲಿನ ಮಹತ್ವದ ಮಾಹಿತಿ (ಫೈನ್ ಪ್ರಿಂಟ್)ಯನ್ನು ತಿಳಿಯದೆ ಒಪ್ಪಂದಕ್ಕೆ ಸಹಿ ಹಾಕುತ್ತಾರೆ

II. ಒಪ್ಪಂದಕ್ಕೆ ಸಹಿ ಹಾಕದಿದ್ದರೆ ಮಹೇಶ್ ನನ್ನು ಕೊಲೆ ಮಾಡುವುದಾಗಿ ರಮೇಶ್ ಬೆದರಿಕೆ ಹಾಕಿದ್ದಾನೆ

III. ರಮೇಶ್ ತನ್ನ ವೃತ್ತಿಪರ ಸ್ಥಾನವನ್ನು ಬಳಸಿಕೊಂಡು ಮಹೇಶನು ಒಪ್ಪಂದಕ್ಕೆ ಸಹಿ ಹಾಕುವಂತೆ ಮಾಡುತ್ತಾನೆ

IV. ಮಹೇಶ್ ಒಪ್ಪಂದಕ್ಕೆ ಸಹಿ ಹಾಕಬೇಕೆಂದು ರಮೇಶ್ ಸುಳ್ಳು ಮಾಹಿತಿ ನೀಡಿದ್ದಾರೆ

## ನಿಮ್ಮನ್ನು ಪರೀಕ್ಷಿಸಿ 3

ಈ ಕೆಳಗಿನ ಆಯ್ಕೆಗಳಲ್ಲಿ ಯಾವ ಆಯ್ಕೆಯು ರಮೇಶ್ ನಿಂದ ವಿಮೆ ಮಾಡಲಾಗುವುದಿಲ್ಲ?

I. ರಮೇಶನ ಮನೆ

II. ರಮೇಶನ ಪತ್ನಿ

III. ರಮೇಶನ ಮಿತ್ರ

IV. ರಮೇಶನ ತಂದೆತಾಯಿ/ಪೋಷಕರು

## ನಿಮ್ಮನ್ನು ಪರೀಕ್ಷಿಸಿ 4

ಕೊಡುಗೆಯ ತತ್ವದ ಮಹತ್ವವೇನು?

I. ವಿಮಾದಾರರು ಸಹ ವಿಮಾಗಾರರ ಜೊತೆಗೆ ಕ್ಲೇಮ್ ನ ನಿರ್ದಿಷ್ಟ ಭಾಗದ ಕೊಡುಗೆಯನ್ನು ನೀಡುತ್ತಾರೆ ಎಂಬುದನ್ನು ಇದು ಖಚಿತಪಡಿಸುತ್ತದೆ

II. ಸಂಚಯನದ ಭಾಗವಾಗಿರುವ ಎಲ್ಲ ವಿಮಾದಾರರು ತಾವು ಪಾವತಿಸಿದ ಕಂತಿನ ಅನುಪಾತದಲ್ಲಿ ಸಂಚಯನದಲ್ಲಿ ಭಾಗವಹಿಸುವವರು ಮಾಡಿದ ಕ್ಲೇಮ್ ಗೆ ಕೊಡುಗೆಯನ್ನು ನೀಡುತ್ತಾರೆಂದು ಇದು ಖಚಿತಪಡಿಸುತ್ತದೆ

III. ಅನೇಕ ವಿಮಾದಾರರು ಒಂದೇ ವಿಷಯವಸ್ತುವನ್ನು ಕವರ್ ಮಾಡುತ್ತಿರುವುದನ್ನು ಇದು ಖಚಿತಪಡಿಸುತ್ತದೆ; ಒಟ್ಟಿಗೆ ಸೇರಿ ವಿಷಯವಸ್ತುವಿನೆಡೆಗೆ ತಮ್ಮ ಒಡ್ಡುವಿಕೆಗೆ ಅನುಗುಣವಾಗಿ ಕ್ಲೇಮ್ ಮೊತ್ತವನ್ನು ಕೊಡುಗೆ ನೀಡುತ್ತಾರೆ.

IV. ಪೂರ್ತಿ ವರ್ಷದಲ್ಲಿ ಸಮಾನ ಕಂತುಗಳಲ್ಲಿ ವಿಮಾದಾರರಿಂದ ಕಂತು ಕೊಡುಗೆಯಾಗಿದೆ ಎಂಬುದನ್ನು ಇದು ಖಚಿತಪಡಿಸುತ್ತದೆ.

---

**ಸಾರಾಂಶ**

- ವಿಮಾ ಪಾಲಿಸಿಗಳ ವಿಶೇಷ ಲಕ್ಷಣಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

  i. ಅತ್ಯಂತ ನಂಬಿಕೆಯ ತತ್ವ (ಉಬೆರ್ರಿಮಾ ಫೈಡ್ಸ್),

  ii. ವಿಮಾಸಕ್ತಿ,

  iii. ಅತ್ಯಂತ ಸಮೀಪದ ಕಾರಣ,

  iv. ಭರವಸೆ/ನಷ್ಟಪರಿಹಾರ

  v. ಸಬ್ರೋಗೇಶನ್

  vi. ಕೊಡುಗೆ

**ಪ್ರಮುಖ ಪದಗಳು**

1. ಬಹಿರಂಗಪಡಿಸದಿರುವುದು
2. ತಪ್ಪುನಿರೂಪಣೆ
3. ವಾಸ್ತವಿಕ ಸಂಗತಿಗಳು
4. ಒಪ್ಪಿಕೊಂಡ ಮೌಲ್ಯ
5. ಕಡಿಮೆ ವಿಮೆ(ಅಂಡರ್ ಇನ್ಶೂರೆನ್ಸ್)

**ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು**

ಉತ್ತರ 1 - ಸರಿಯಾದ ಉತ್ತರ **III** ಆಗಿದೆ

ಉತ್ತರ 2 - ಸರಿಯಾದ ಉತ್ತರ **II** ಆಗಿದೆ

ಉತ್ತರ 3 - ಸರಿಯಾದ ಉತ್ತರ **III** ಆಗಿದೆ

ಉತ್ತರ 4 - ಸರಿಯಾದ ಉತ್ತರ **III** ಆಗಿದೆ

---

# ಅಧ್ಯಾಯ C-04

# ವಿಮಾ ಒಪ್ಪಂದಗಳ ವೈಶಿಷ್ಟ್ಯಗಳು

**ಅಧ್ಯಾಯ ಪರಿಚಯ**

ಈ ಅಧ್ಯಾಯದಲ್ಲಿ, ನಾವು ವಿಮಾ ಒಪ್ಪಂದದ ಕಾರ್ಯವನ್ನು ನಿಯಂತ್ರಿಸುವ ಅಂಶಗಳು ಮತ್ತು ವಿಶೇಷ ವೈಶಿಷ್ಟ್ಯಗಳನ್ನು ನಾವು ಚರ್ಚಿಸಲಿದ್ದೇವೆ.

**ಕಲಿಕೆಯ ಫಲಿತಾಂಶಗಳು**

**A.** ವಿಮಾ ಒಪ್ಪಂದಗಳ ಕಾನೂನು ಅಂಶಗಳು

**B.** ಮಾನ್ಯ ಒಪ್ಪಂದದ ಅಂಶಗಳು

**C.** ಮುಂಗಡವಾಗಿ ಕಂತು ಪಾವತಿ

**D.** ವಿಜ್ಞಾಪನೆ

**E.** ಗ್ರೇಸ್ ಅವಧಿ ಮತ್ತು ಫ್ರೀ ಲುಕ್ ಅವಧಿಯಂತಹ ಸೌಲಭ್ಯಗಳನ್ನು ಸಕ್ರಿಯಗೊಳಿಸುವುದು

## A. ವಿಮಾ ಒಪ್ಪಂದಗಳು - ಕಾನೂನು ಅಂಶಗಳು ಮತ್ತು ವಿಶೇಷ ಲಕ್ಷಣಗಳು.

ಈ ಅಧ್ಯಾಯವು ವಿಮಾ ಒಪ್ಪಂದದ ಕಾನೂನು ಅಂಶಗಳು ಮತ್ತು ವಿಶೇಷ ವೈಶಿಷ್ಟ್ಯಗಳನ್ನು ತಿಳಿಸಿಕೊಡಲಿದೆ.

### 1. ವಿಮಾ ಒಪ್ಪಂದ

ವಿಮೆಯಲ್ಲಿ, ವಿಮಾಗಾರರು ಕಂತು ಎಂದು ಕರೆಯಲ್ಪಡುವ ಬೆಲೆ ಅಥವಾ ಪರಿಗಣನೆಗೆ ಕೆಲವು ನಿರ್ದಿಷ್ಟಪಡಿಸಿದ ಅಪಾಯಗಳ ವಿರುದ್ಧ ಹಣಕಾಸಿನ ರಕ್ಷಣೆಯನ್ನು ಒದಗಿಸಲು ಒಪ್ಪಿಕೊಳ್ಳುವ ಒಂದು ಒಪ್ಪಂದದ ಕರಾರನ್ನು ಒಳಗೊಂಡಿರುತ್ತದೆ. ಒಪ್ಪಂದದ ಕರಾರು ವಿಮಾ ಪಾಲಿಸಿಯ ರೂಪವನ್ನು ತೆಗೆದುಕೊಳ್ಳುತ್ತದೆ.

### 2. ವಿಮಾ ಒಪ್ಪಂದದ ಕಾನೂನು ಅಂಶಗಳು

ಈ ವಿಭಾಗವು ವಿಮಾ ಒಪ್ಪಂದದ ಕೆಲವು ವೈಶಿಷ್ಟ್ಯಗಳನ್ನು ಅವಲೋಕಿಸುತ್ತದೆ ಮತ್ತು ಸಾಮಾನ್ಯವಾಗಿ ವಿಮಾ ಒಪ್ಪಂದಗಳನ್ನು ನಿಯಂತ್ರಿಸುವ ಕಾನೂನು ತತ್ವಗಳನ್ನು ಪರಿಗಣಿಸುತ್ತದೆ.

**ಪ್ರಮುಖ**

ಒಪ್ಪಂದವು ಪಕ್ಷಗಳ ನಡುವಿನ ಕರಾರು ಆಗಿದ್ದು, ಕಾನೂನಿನಡಿಯಲ್ಲಿ ಜಾರಿಗೊಳಿಸಬಹುದಾಗಿದೆ. ಭಾರತೀಯ ಒಪ್ಪಂದ ಕಾಯಿದೆ, **1872** ರ ನಿಬಂಧನೆಗಳು ವಿಮಾ ಒಪ್ಪಂದಗಳು ಸೇರಿದಂತೆ ಭಾರತದಲ್ಲಿನ ಎಲ್ಲ ಒಪ್ಪಂದಗಳನ್ನು ನಿಯಂತ್ರಿಸುತ್ತವೆ.

---

ವಿಮಾ ಪಾಲಿಸಿಯು ವಿಮಾಗಾರರೆಂದು ಕರೆಯಲ್ಪಡುವ ಕಂಪನಿ ಮತ್ತು ವಿಮಾದಾರರೆಂದು ಕರೆಯಲ್ಪಡುವ ಪಾಲಿಸಿದಾರರೆಂಬ ಎರಡು ಪಕ್ಷಗಳ ನಡುವಿನ ಒಪ್ಪಂದವಾಗಿದೆ, ಮತ್ತು ಭಾರತೀಯ ಒಪ್ಪಂದ ಕಾಯಿದೆ, 1872 ರಲ್ಲಿ ಪ್ರತಿಪಾದಿಸಲಾದ ಅವಶ್ಯಕತೆಗಳನ್ನು ಪೂರೈಸುತ್ತದೆ.

**ಚಿತ್ರ 1 ವಿಮಾ ಒಪ್ಪಂದ**



## B. ಮಾನ್ಯ ಒಪ್ಪಂದದ ಅಂಶಗಳು

**ಚಿತ್ರ 2 : ಮಾನ್ಯ ಒಪ್ಪಂದದ ಅಂಶಗಳು**




ಮಾನ್ಯ ಒಪ್ಪಂದದ ಅಂಶಗಳು ಈ ಕೆಳಗಿನಂತಿವೆ:

### 1. ಪ್ರಸ್ತಾವನೆ ಮತ್ತು ಸ್ವೀಕೃತಿ

ಓರ್ವ ವ್ಯಕ್ತಿಯು ಏನನ್ನಾದರೂ ಮಾಡಲು ಅಥವಾ ಮಾಡುವುದರಿಂದ ದೂರವಿರಲು ಇನ್ನೊಬ್ಬರ ಒಪ್ಪಿಗೆಯನ್ನು ಪಡೆಯುವ ಉದ್ದೇಶದಿಂದ ತನ್ನ ಇಚ್ಛೆಯನ್ನು ಇನ್ನೊಬ್ಬರಿಗೆ ಸೂಚಿಸಿದಾಗ, ಅವರು ಪ್ರಸ್ತಾಪವನ್ನು ಅಥವಾ ಪ್ರಸ್ತಾಪನೆಯನ್ನು ಮಾಡುತ್ತಾನೆಂದು ಹೇಳಲಾಗುತ್ತದೆ. ಸಾಮಾನ್ಯವಾಗಿ, ಪ್ರಸ್ತಾಪವನ್ನು ಪ್ರಸ್ತಾಪಕರು ಮಾಡುತ್ತಾರೆ ಮತ್ತು ಸ್ವೀಕೃತಿಯನ್ನು ವಿಮಾಗಾರರು ಮಾಡುತ್ತಾರೆ.

ಪ್ರಸ್ತಾಪನೆಯನ್ನು ಪಡೆದ ವ್ಯಕ್ತಿಯು ಅದಕ್ಕೆ ತನ್ನ ಸಮ್ಮತಿಯನ್ನು ಸೂಚಿಸಿದಾಗ, ಇದನ್ನು ಅಂಗೀಕಾರವೆಂದು ಪರಿಗಣಿಸಲಾಗುತ್ತದೆ. ಹೀಗೆ, ಪ್ರಸ್ತಾಪವನ್ನು ಸ್ವೀಕರಿಸಿದಾಗ, ಅದು ಭರವಸೆಯಾಗಿ ಪರಿಣಮಿಸುತ್ತದೆ. ಒಪ್ಪಂದದ ರಚನೆಗೆ ಕಾರಣವಾಗುವ ಪ್ರಸ್ತಾವನೆಗೆ ಒಪ್ಪಿಗೆಯನ್ನು ಪ್ರಸ್ತಾಪಕರಿಗೆ ತಿಳಿಸಬೇಕು.

ಒಬ್ಬ ಪ್ರಸ್ತಾಪಕರು ವಿಮಾ ಯೋಜನೆಯ ನಿಯಮಗಳನ್ನು ಒಪ್ಪಿಕೊಂಡಾಗ ಮತ್ತು ಠೇವಣಿ ಮೊತ್ತವನ್ನು ಪಾವತಿಸುವ ಮೂಲಕ ಅವನ/ಅವಳ ಸಮ್ಮತಿಯನ್ನು ಸೂಚಿಸಿದಾಗ, ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ, ಮೊದಲ ಕಂತಾಗಿ ಪರಿವರ್ತನೆಯಾಗುತ್ತದೆ, ಪ್ರಸ್ತಾವನೆಯು ಪಾಲಿಸಿಯಾಗಿ ಪರಿಣಮಿಸುತ್ತದೆ. ಯಾವುದೇ ಷರತ್ತನ್ನು ಹಾಕಿದರೆ, ಅದು ವಿರುದ್ಧ ಪ್ರಸ್ತಾವನೆ(ಕೌಂಟರ್ ಆಫರ್)ಯಾಗುತ್ತದೆ. ಪಾಲಿಸಿ ಬಾಂಡ್ ಒಪ್ಪಂದದ ಪುರಾವೆಯಾಗುತ್ತದೆ.

2. **ಸಂಭಾವನೆ**

ಅಂದರೆ ಒಪ್ಪಂದವು ಪಕ್ಷಗಳಿಗೆ ಕೆಲವು ಪರಸ್ಪರ ಪ್ರಯೋಜನಗಳನ್ನು ಹೊಂದಿರಬೇಕೆಂದು ಇದರರ್ಥ. ಕಂತು, ವಿಮಾದಾರರಿಂದ ಸಂಭಾವನೆಯಾಗಿದೆ, ಮತ್ತು ಪರಿಹಾರವನ್ನು ನೀಡುವ ಭರವಸೆಯು ವಿಮಾಗಾರರಿಂದ ನೀಡಲ್ಪಡುವ ಸಂಭಾವನೆಯಾಗಿದೆ.

3. **ಪಕ್ಷಗಳ ನಡುವಿನ ಪರಸ್ಪರ ಒಪ್ಪಂದ (ಕಾನ್ಸೆನ್ಸಸ್ ಆಡ್-ಐಡೆಮ್)**

ವಿಮಾದಾರರು ಮತ್ತು ಪಾಲಿಸಿದಾರರು ಈ ಎರಡೂ ಪಕ್ಷಗಳು, ಒಂದೇ ವಿಷಯವನ್ನು ಒಂದೇ ಅರ್ಥದಲ್ಲಿ ಒಪ್ಪಿಕೊಳ್ಳಬೇಕು. ಬೇರೆ ರೀತಿಯಲ್ಲಿ ಹೇಳುವುದಾದರೆ, ಎರಡೂ ಪಕ್ಷಗಳ ನಡುವೆ " ಪರಸ್ಪರ ಒಪ್ಪಿಗೆ (ಕಾನ್ಸೆನ್ಸಸ್ ಆಡ್-ಐಡೆಮ್ )"ಯಿರಬೇಕು.

4. **ಪೂರ್ಣ ಒಪ್ಪಿಗೆ**

ಒಂದು ಒಪ್ಪಂದವನ್ನು ಪ್ರವೇಶಿಸುವಾಗ ಪೂರ್ಣ ಒಪ್ಪಿಗೆಯಿರಬೇಕು. ಈ ಕೆಳಗಿನವುಗಳ ಕಾರಣದಿಂದ ಮಾಡಲಾಗಿಲ್ಲದ ಒಪ್ಪಿಗೆಯನ್ನು ಪೂರ್ಣ ಒಪ್ಪಿಗೆಯೆಂದು ಹೇಳಲಾಗುತ್ತದೆ

✓ ಬಲವಂತ/ಒತ್ತಾಯದಿಂದ

✓ ಅನುಚಿತ ಪ್ರಭಾವ

✓ ವಂಚನೆ

✓ ತಪ್ಪುನಿರೂಪಣೆ

✓ ತಪ್ಪು

ಒಪ್ಪಂದಕ್ಕೆ ಸಮ್ಮತಿಯು ಬಲವಂತ/ಒತ್ತಾಯ, ವಂಚನೆ ಅಥವಾ ತಪ್ಪು ನಿರೂಪಣೆಯಿಂದ ಉಂಟಾದಾಗ, ಒಪ್ಪಂದವು ಅನೂರ್ಜಿತವಾಗಿರುತ್ತದೆ.

5. **ಪಕ್ಷಗಳ ಸಾಮರ್ಥ್ಯ**

ಒಪ್ಪಂದದ ಎರಡೂ ಪಕ್ಷಗಳು ಒಪ್ಪಂದಕ್ಕೆ ಪ್ರವೇಶಿಸಲು ಕಾನೂನುಬದ್ಧವಾಗಿ ಸಮರ್ಥರಾಗಿರಬೇಕು. ಪ್ರಸ್ತಾವನೆಗೆ ಸಹಿ ಮಾಡುವ ಸಮಯದಲ್ಲಿ ಪಾಲಿಸಿದಾರರು ಕಾನೂನುಬದ್ಧವಾಗಿ ಪ್ರೌಢವಯಸ್ಕರಾಗಿರಬೇಕು ಮತ್ತು ಆರೋಗ್ಯಯುತ ಮನಸ್ಸಿನವರಾಗಿರಬೇಕು ಮತ್ತು ಕಾನೂನಿನಡಿಯಲ್ಲಿ ಅನರ್ಹರಾಗಿರಬಾರದು. ಉದಾಹರಣೆಗೆ, ಅಲ್ಪವಯಸ್ಕರು ವಿಮಾ ಒಪ್ಪಂದಗಳನ್ನು ಪ್ರವೇಶಿಸಲು ಸಾಧ್ಯವಿಲ್ಲ.

### 6. ಕಾನೂನುಬದ್ಧತೆ

ಒಪ್ಪಂದದ ಉದ್ದೇಶವು ಕಾನೂನುಬದ್ಧವಾಗಿರಬೇಕು, ಉದಾಹರಣೆಗೆ, ಕಾನೂನುಬಾಹಿರ ಕೃತ್ಯಗಳಿಗಾಗಿ ಯಾವುದೇ ವಿಮೆಯನ್ನು ಹೊಂದಲು ಸಾಧ್ಯವಿಲ್ಲ. ಉದ್ದೇಶ ಅಥವಾ ಸಂಭಾವನೆಯು ಕಾನೂನುಬಾಹಿರವಾಗಿರುವ ಪ್ರತಿಯೊಂದು ಒಪ್ಪಂದವು ರದ್ದಾಗುತ್ತದೆ. ವಿಮಾ ಒಪ್ಪಂದವು ಒಂದು ಕಾನೂನುಬದ್ಧ ಉದ್ದೇಶವನ್ನು ಹೊಂದಿರುತ್ತದೆ.

ಓರ್ವರ ವಿಮಾ ಒಪ್ಪಂದದಲ್ಲಿಯ ಪ್ರವೇಶವು ಯಾವುದೇ ರೀತಿಯ ಬಲ, ಭಯ ಅಥವಾ ತಪ್ಪುಗಳನ್ನು ಹೊರತುಪಡಿಸಿ ಅವರ ಮುಕ್ತ ಇಚ್ಛೆಯಿಂದ ಮಾಡಲ್ಪಟ್ಟಿರಬೇಕು.

## C. ಮುಂಗಡವಾಗಿ ಕಂತು ಪಾವತಿ ಮಾಡುವುದು

ವಿಮಾಗಾರರು ಕಂತನ್ನು ಮುಂಚಿತವಾಗಿ ಸ್ವೀಕರಿಸದ ಹೊರತು ಅಪಾಯವನ್ನು ಸ್ವೀಕರಿಸುವುದನ್ನು ಭಾರತೀಯ ಕಾನೂನುಗಳ ಪ್ರಕಾರ ಅನುಮತಿಸಲಾಗುವುದಿಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ, ಭಾರತದಲ್ಲಿ ಕೈಗಡ(ಕ್ರೆಡಿಟ್)ದ ಆಧಾರದ ಮೇಲೆ ವಿಮಾ ರಕ್ಷಣೆಯನ್ನು ಮಾರಾಟ ಮಾಡಲಾಗುವುದಿಲ್ಲ.

ವಿಮಾ ಕಾಯಿದೆ 1938 ರ ಸೆಕ್ಷನ್ 64 ವಿಬಿಯ ಪ್ರಕಾರ, "ಮುಂಗಡವಾಗಿ ಕಂತನ್ನು ಸ್ವೀಕರಿಸದ ಹೊರತು ಯಾವುದೇ ಅಪಾಯವನ್ನು ಸ್ವೀಕರಿಸಲಾಗುವುದಿಲ್ಲ". ಕಂತನ್ನು ಮುಂಚಿತವಾಗಿ ಸ್ವೀಕರಿಸುವವರೆಗೆ ಅಥವಾ ಪಾವತಿಸಲಾಗುವುದು ಎಂದು ಖಾತರಿಪಡಿಸುವವರೆಗೆ ಅಥವಾ ನಿಗದಿತ ರೀತಿಯಲ್ಲಿ ಮುಂಚಿತವಾಗಿ ಠೇವಣಿ ಮಾಡದ ಹೊರತು ಯಾವುದೇ ವಿಮಾಗಾರರು ಯಾವುದೇ ಅಪಾಯವನ್ನು ಸ್ವೀಕರಿಸುವುದಿಲ್ಲ. ಇದು ಭಾರತದಲ್ಲಿಯ ವಿಮಾ ಉದ್ಯಮದ ಒಂದು ಪ್ರಮುಖ ಲಕ್ಷಣವಾಗಿದೆ.

ವಿಮಾ ನಿಯಮಗಳು, **1939,** ನಿರ್ದಿಷ್ಟ ವರ್ಗಗಳ ವಿಮೆಗಳಿಗೆ ಸಂಬಂಧಿಸಿದಂತೆ ಕಂತಿನ ಮುಂಗಡ ಪಾವತಿಯ ಈ ಷರತ್ತಿಗೆ ಕೆಲವು ವಿನಾಯಿತಿಗಳನ್ನು ಒದಗಿಸುತ್ತದೆ. ವಿಮಾ ನಿಯಮಗಳ ಸೆಕ್ಷನ್ **59** ಕೆಲವು ಷರತ್ತುಗಳಿಗೊಳಿಗೆ ಒಳಪಟ್ಟಂತೆ ಅನಾರೋಗ್ಯ ವಿಮೆ, ಗುಂಪು ವೈಯಕ್ತಿಕ ಅಪಘಾತ ವಿಮೆ, ವೈದ್ಯಕೀಯ ಪ್ರಯೋಜನಗಳ ವಿಮೆ ಮತ್ತು ಆಸ್ಪತ್ರೆ ದಾಖಲಾತಿ ವಿಮಾ ಯೋಜನೆಗಳಿಗೆ ಸಂಬಂಧಿಸಿದಂತೆ ಕಂತು(ಭಾಗಶಃ ಪಾವತಿ)ಗಳಲ್ಲಿ ಕಂತನ್ನು ಸ್ವೀಕರಿಸಲು ಅನುಮತಿಸುತ್ತದೆ. ವಿಮಾ ನಿಯಮಗಳ ಸೆಕ್ಷನ್ ಸರ್ಕಾರಿ ಮತ್ತು ಅರೆ-ಸರ್ಕಾರಿ ಉದ್ಯೋಗಿಗಳನ್ನು ಒಳಗೊಂಡಿರುವ ನಿಷ್ಠೆಯ ಖಾತರಿ ವಿಮಾ ಪಾಲಿಸಿಗಳು, ಉದ್ಯೋಗಿಗಳ ಪರಿಹಾರ ಪಾಲಿಸಿಗಳು, ಸಾರಿಗೆಯಲ್ಲಿನ ನಗದು ಪಾಲಿಸಿ, ಸರ್ಕಾರಿ ಮತ್ತು ಅರೆ-ಸರ್ಕಾರಿ ಉದ್ಯೋಗಿಗಳು ಮತ್ತು ಕೆಲವು ಇತರ ವರ್ಗಗಳ ವಿಮೆಗಳಿಗೆ ಕೆಲವು ಷರತ್ತುಗಳಿಗೆ ಒಳಪಟ್ಟು ನೀಡಲಾದ ಪಾಲಿಸಿಗಳಿಗೆ ಸಡಿಲಿಕೆಗಳನ್ನು ಅನುಮತಿಸುತ್ತದೆ. .

**ವಿಜ್ಞಾಪನೆ**

ವಿಮೆಯನ್ನು ಯಾವಾಗಲೂ ಕೇವಲ ಸಾಮಾನ್ಯ ಖರೀದಿ/ಮಾರಾಟವಾಗಿ ಅಲ್ಲ ಆದರೆ ಉತ್ಪನ್ನವನ್ನು ಸರಿಯಾಗಿ ಅರ್ಥಮಾಡಿಕೊಂಡ ನಂತರ ಖರೀದಿಸಬೇಕಾದ ವಿಷಯವೆಂದು ಪರಿಗಣಿಸಲಾಗಿದೆ. ಆದ್ದರಿಂದ,

ವಿಮೆಯನ್ನು ಗ್ರಾಹಕರು 'ವಿಚಾರಿಸಬೇಕು' ಅಥವಾ ಕೇಳಬೇಕು. ಸಾಂಪ್ರದಾಯಿಕವಾಗಿ, ವಿಮಾಗಾರರು "ವಿಮೆಯು ವಿಜ್ಞಾಪನೆಯ ವಿಷಯವಾಗಿದೆ" ಎಂದು ಘೋಷಿಸುತ್ತಾರೆ. ಇನ್ನಷ್ಟು ಸ್ಪಷ್ಟಪಡಿಸಲು, ವಿಮೆಯು ಸಾರಾಸಗಟಾಗಿ ಖರೀದಿ/ಮಾರಾಟ ಮಾಡಲು ಬಿಸ್ಕತ್ತುಗಳ ಪ್ಯಾಕೆಟ್ ಅಥವಾ ಚಾಕೊಲೇಟ್ ಬಾರ್ ನಂತೆ ಸಿದ್ಧ ಉತ್ಪನ್ನವಲ್ಲ. ಗ್ರಾಹಕರು ತಮ್ಮ ವಿಮಾ ಅಗತ್ಯತೆಗಳ ಬಗ್ಗೆ ಅರ್ಹತೆ ಹೊಂದಿರುವ ವ್ಯಕ್ತಿಯೊಂದಿಗೆ ಚರ್ಚಿಸಬೇಕು ಮತ್ತು ವೃತ್ತಿಪರ ಸಲಹೆಯ ಆಧಾರದ ಮೇಲೆ ಸರಿಯಾದ ವಿಮಾ ಉತ್ಪನ್ನವನ್ನು ಖರೀದಿಸಬೇಕು. ವಿಮಾ ಉತ್ಪನ್ನವನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಪಾಲಿಸಿ ಕವರೇಜ್, ಹೊರಗಿಡುವಿಕೆಗಳು, ನಿಯಮಗಳು ಮತ್ತು ಷರತ್ತುಗಳ ವಿಷಯದಲ್ಲಿ ಗ್ರಾಹಕರ ನಿರ್ದಿಷ್ಟ ಅಗತ್ಯಗಳು ಮತ್ತು ಅವಶ್ಯಕತೆಗಳಿಗೆ ಹೆಚ್ಚು ಸೂಕ್ತವಾದ ಉತ್ಪನ್ನವನ್ನು ಪರಿಗಣಿಸಬೇಕು.

'ವಿಜ್ಞಾಪನೆ'ಯು ಸಾಮಾನ್ಯವಾಗಿ ವಿಮಾಗಾರರು ಅಥವಾ ಅಧಿಕೃತ ಮಧ್ಯವರ್ತಿಯು ನಿರೀಕ್ಷಿತ ಗ್ರಾಹಕರನ್ನು ಅವನ/ಅವಳ ವಿಮಾ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಮತ್ತು ಸೂಕ್ತವಾದ ವಿಮಾ ಉತ್ಪನ್ನಗಳನ್ನು ಆಯ್ಕೆಮಾಡುವಲ್ಲಿ ವೃತ್ತಿಪರ ಸಲಹೆಯನ್ನು ಒದಗಿಸುವ ಉದ್ದೇಶದಿಂದ ಸಮೀಪಿಸಿದಾಗ ಪ್ರಾರಂಭವಾಗುತ್ತದೆ. ನಿರೀಕ್ಷಿತ ಗ್ರಾಹಕರು ಸರಿಯಾದ ಪರಿಹಾರವನ್ನು ಕೋರುತ್ತಾರೆ ಮತ್ತು ಸಲಹೆಗಾರರಿಗೆ ಅಗತ್ಯವಿರುವ ಎಲ್ಲ ವಿವರಗಳನ್ನು ಒದಗಿಸುತ್ತಾರೆ. ಐಆರ್ ಡಿಎಐ ಯ ನಿಯಮಾವಳಿಗಳ ಪ್ರಕಾರ, ವಿಮಾ ಏಜೆಂಟರನ್ನು ವಿಮಾ ಪಾಲಿಸಿಗಳ ನಿರಂತರತೆ, ನವೀಕರಣ ಅಥವಾ ಪುನರುಜ್ಜೀವನಕ್ಕೆ ಸಂಬಂಧಿಸಿದ ವ್ಯವಹಾರವನ್ನು ಒಳಗೊಂಡಂತೆ ವಿಮಾ ವ್ಯವಹಾರದ ವಿಜ್ಞಾಪನೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಉದ್ದೇಶಕ್ಕಾಗಿ ವಿಮಾದಾರರಿಂದ ನೇಮಿಸಲಾಗುತ್ತದೆ. ವಿಮಾ ಕಂಪನಿಗಳ ಅಧಿಕೃತ ಉದ್ಯೋಗಿಗಳು ಮತ್ತು ಪರವಾನಗಿ ಪಡೆದ ಮಧ್ಯವರ್ತಿಗಳ ನಿರ್ದಿಷ್ಟ ವ್ಯಕ್ತಿಗಳು, ಈ ಉದ್ದೇಶಕ್ಕಾಗಿ ತರಬೇತಿ ಮತ್ತು ಅಧಿಕಾರ ಹೊಂದಿರುವವರು ಮಾತ್ರ ವಿಮೆಯ ವಿಜ್ಞಾಪನೆ ಮತ್ತು ಮಾರಾಟದ ಪ್ರಕ್ರಿಯೆಯ ಭಾಗವಾಗಿರಬಹುದು.

## D. ಸೌಲಭ್ಯಗಳನ್ನು ಸಕ್ರಿಯಗೊಳಿಸಲಾಗುತ್ತಿದೆ

### 1. ಗ್ರೇಸ್ ಪೀರಿಯಡ್

ಗ್ರೇಸ್ ಅವಧಿಯು ಕಂತು ಪಾವತಿಮಾಡಬೇಕಾದ ದಿನಾಂಕದ ನಂತರ ತಕ್ಷಣವೇ ಪ್ರಾರಂಭವಾಗುವ ನಿಗದಿತ ಅವಧಿಯಾಗಿದ್ದು, ಕಾಯುವ ಅವಧಿಗಳು ಮತ್ತು ಪೂರ್ವ ಅಸ್ತಿತ್ವದಲ್ಲಿರುವ ರೋಗಗಳ ವ್ಯಾಪ್ತಿಯಂತಹ ನಿರಂತರತೆಯ ಪ್ರಯೋಜನಗಳನ್ನು ಕಳೆದುಕೊಳ್ಳದೆ ಪಾಲಿಸಿಯನ್ನು ನವೀಕರಿಸಲು ಅಥವಾ ಜಾರಿಯಲ್ಲಿ ಮುಂದುವರಿಸಲು ಪಾವತಿಯನ್ನು ಮಾಡಬಹುದಾದ ಅವಧಿಯಾಗಿದೆ. ಯಾವುದೇ ಕಂತು ಸ್ವೀಕರಿಸದ ಅವಧಿಗೆ ಕವರೇಜ್ ಲಭ್ಯವಿಲ್ಲ. ಕಂತು ಪಾವತಿಗೆ ನಿಗದಿತ ಮಾಡಲಾದ ದಿನಾಂಕದ ನಂತರ ಮರುದಿನದಿಂದ ಗ್ರೇಸ್ ಅವಧಿಯ ದಿನಗಳನ್ನು ಲೆಕ್ಕಹಾಕಲಾಗುತ್ತದೆ.

**ಜೀವ ವಿಮೆಯ ಸಂದರ್ಭದಲ್ಲಿ,** ಯಾವುದೇ ಗ್ರೇಸ್ ಅವಧಿ ಲಭ್ಯವಿಲ್ಲದಿದ್ದರೆ, ಪಾವತಿಯಲ್ಲಿನ ಒಂದು ದಿನದ ವಿಳಂಬವು ಸಹ ಪಾಲಿಸಿ ರದ್ದಾಗಲು ಕಾರಣವಾಗಬಹುದು. ಇದು ಪಾಲಿಸಿದಾರರಿಗೆ, ವಿಮಾಗಾರರಿಗೆ ಮತ್ತು ಸಾಮಾನ್ಯವಾಗಿ ಸಂಪೂರ್ಣ ವಿಮಾ ಉದ್ಯಮಕ್ಕೆ ಹಾನಿಕಾರಕವಾಗಬಹುದಾಗಿದೆ. ಐಆರ್ ಡಿಎಐ

ನಿಯಮಗಳು ಕಂತು ಸಂಗ್ರಹಣೆಯ ಮಾಸಿಕ ವಿಧಾನದ ಸಂದರ್ಭದಲ್ಲಿ 15 ದಿನಗಳ ಗ್ರೇಸ್ ಅವಧಿಯನ್ನು ಮತ್ತು ಇತರ ವಿಧಾನಗಳಲ್ಲಿ 30 ದಿನಗಳನ್ನು ಅನುಮತಿಸುತ್ತವೆ.

ಆರೋಗ್ಯ ವಿಮೆಗೆ ಸಂಬಂಧಿಸಿದಂತೆ ಸಹ ವೈಯಕ್ತಿಕ ಆರೋಗ್ಯ ಪಾಲಿಸಿಗಳ ನವೀಕರಣಕ್ಕಾಗಿ ನಿರ್ದಿಷ್ಟ ಸಂಖ್ಯೆಯ ದಿನಗಳನ್ನು ಗ್ರೇಸ್ ಅವಧಿಯಾಗಿ ಅನುಮತಿಸಲಾಗಿದೆ. ಈ ಅವಧಿಯು ಕಂಪನಿಯ ನೀತಿ ಮತ್ತು ಒದಗಿಸಲಾದ ಉತ್ಪನ್ನವನ್ನಾಧರಿಸಿರುತ್ತದೆ. ಗ್ರೇಸ್ ಅವಧಿಯ ಒಳಗೆ ನವೀಕರಿಸಲಾದ ಪಾಲಿಸಿಯಲ್ಲಿ ನಿರಂತರತೆಯ ಎಲ್ಲ ಪ್ರಯೋಜನಗಳನ್ನು ನಿರ್ವಹಿಸಲಾಗುತ್ತದೆ. ಆದಾಗ್ಯೂ, ವಿರಾಮದ ಅವಧಿಯಲ್ಲಿ ಯಾವುದಾದರೂ ಕ್ಲೇಮ್ ಗಳು ಉದ್ಭವಿಸಿದಲ್ಲಿ ಅವುಗಳನ್ನು ಪರಿಗಣಿಸಲಾಗುವುದಿಲ್ಲ. ಐಆರ್ ಡಿಎಐ ನಿಯಮಾವಳಿಗಳ ಪ್ರಕಾರ, ಕಂತು ಸಂಗ್ರಹಣೆಯ ಮಾಸಿಕ ವಿಧಾನದ ಸಂದರ್ಭದಲ್ಲಿ ಗ್ರೇಸ್ ಅವಧಿಯು 15 ದಿನಗಳು ಮತ್ತು ಇತರ ವಿಧಾನಗಳಲ್ಲಿ 30 ದಿನಗಳು ಇರುತ್ತದೆ.

**ಮೋಟಾರು ಪಾಲಿಸಿಗಳು** ಸಾಮಾನ್ಯವಾಗಿ ಒಂದು ವರ್ಷದ ಅವಧಿಯವರೆಗೆ ಮಾನ್ಯವಾಗಿರುತ್ತವೆ ಮತ್ತು ನಿಗದಿತ ದಿನಾಂಕದ ಮೊದಲು ಅವುಗಳನ್ನು ನವೀಕರಿಸಬೇಕಾಗುತ್ತದೆ. ಇಲ್ಲಿ ಕಂತು ಪಾವತಿಸಲು ಗ್ರೇಸ್ ಅವಧಿಯು ಅನ್ವಯಿಸುವುದಿಲ್ಲ. ಒಂದು ವೇಳೆ **90** ದಿನಗಳಿಗಿಂತ ಹೆಚ್ಚು ಕಾಲ ಸಮಗ್ರ ಪಾಲಿಸಿಯು ರದ್ದಾಗಿದ್ದರೆ, ಸಂಚಿತ ನೋ ಕ್ಲೈಮ್ ಬೋನಸ್ (ಎನ್ ಸಿ ಬಿ**)** ಪ್ರಯೋಜನವೂ ನಷ್ಟವಾಗುತ್ತದೆ.

ಕೋವಿಡ್-19 ಸಾಂಕ್ರಾಮಿಕತೆಯ ಸಮಯದಲ್ಲಿ ವ್ಯವಹಾರಗಳ ಸುಗಮ ಕಾರ್ಯಾಚರಣೆಯ ಹಿತದೃಷ್ಟಿಯಿಂದ, ಐಆರ್ ಡಿಎಐ ಈ ಕೆಳಗಿನ ಸಡಿಲಿಕೆಗಳನ್ನು ಅನುಮತಿಸಿದೆ:

- **i.** ಜೀವ ವಿಮಾ ಪಾಲಿಸಿಗಳ ಸಂದರ್ಭದಲ್ಲಿ, ಪಾಲಿಸಿದಾರರು ಬಯಸಿದಲ್ಲಿ ಹೆಚ್ಚುವರಿ 30 ದಿನಗಳವರೆಗಿನ ಗ್ರೇಸ್ ಅವಧಿಯನ್ನು ಕೊಡುವಂತೆ ವಿಮಾಗಾರರನ್ನು ಕೇಳಲಾಯಿತು.
- **ii.** ಆರೋಗ್ಯ ವಿಮಾ ಪಾಲಿಸಿಗಳ ಸಂದರ್ಭದಲ್ಲಿ, ನವೀಕರಣದಲ್ಲಿಯ ವಿಮಾದಾರರ 30 ದಿನಗಳವರೆಗಿನ ವಿಳಂಬವನ್ನು ಪಾಲಿಸಿಯ ವಿರಾಮವೆಂದು ಪರಿಗಣಿಸದೆ ಕ್ಷಮಿಸಲು ಹೇಳಲಾಯಿತು. ಕವರೇಜ್‌ನಲ್ಲಿಯ ಸ್ಥಗಿತಿಯನ್ನು ತಪ್ಪಿಸಲು ವಿಮಾಗಾರರನ್ನು ಮುಂಚಿತವಾಗಿಯೇ ಪಾಲಿಸಿದಾರರನ್ನು ಸಂಪರ್ಕಿಸಲು ವಿನಂತಿಸಲಾಗಿದೆ.
- **iii.** ಕೋವಿಡ್-19 ಪರಿಸ್ಥಿತಿಯಿಂದಾಗಿ ಕಂತುಗಳನ್ನು ಪಾವತಿಸಲು ಸಾಧ್ಯವಾಗಿಲ್ಲದ ನವೀಕರಣ ಮಾಡಬೇಕಾದ ಮೋಟಾರು ವಾಹನ ತೃತೀಯ ಪಕ್ಷ ವಿಮಾ ಪಾಲಿಸಿಗಳಿಗೆ ಸಂಬಂಧಿಸಿದಂತೆ, ಐಆರ್ ಡಿಎಐ 15. ಮೇ**,** 2020 ರವರೆಗೆ ಗ್ರೇಸ್ ಅವಧಿಯನ್ನು ಅನುಮತಿಸಿದೆ.

## 2. "ಐಆರ್ ಡಿಎಐ"ಯಿಂದ ಪರಿಚಯಿಸಲಾದ ಫ್ರೀ ಲುಕ್ ಅವಧಿ

ವಿಮಾಗಾರರಿಂದ ವಿಮಾ ಒಪ್ಪಂದಗಳು ರಚಿಸಲ್ಪಡುತ್ತದೆ ಮತ್ತು ಇತರ ಪಕ್ಷವು ಅವನು/ಅವಳು ವಿಮೆಮಾಡಲು ಬಯಸುತ್ತಿದ್ದರೆ ಅದಕ್ಕೆ ಬದ್ಧರಾಗಿರಬೇಕು. ಇಂತಹ ಒಪ್ಪಂದವನ್ನು ಹಾಗೆಯೇ ಒಪ್ಪಿಕೊಳ್ಳಬೇಕಾದ ಮತ್ತು ಅದರಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಸಾಧ್ಯವಿಲ್ಲದ ಒಪ್ಪಂದಗಳನ್ನು ಕಾನೂನುಬದ್ಧವಾಗಿ ಅನುಸರಣೆಯ ಒಪ್ಪಂದಗಳೆಂದು ಕರೆಯಲಾಗುತ್ತದೆ. ಇಂಥ ಏಕಪಕ್ಷೀಯ

ಪರಿಸ್ಥಿತಿಯಿಂದಾಗಿ ನ್ಯಾಯಾಲಯಗಳು ಈ ನಿಯಮಗಳು ಮತ್ತು ಷರತ್ತುಗಳನ್ನು ಅರ್ಥೈಸುವಲ್ಲಿ ಉದ್ಭವಿಸಬಹುದಾದ ಯಾವುದೇ ಸಂದಿಗ್ಧತೆ ಅಥವಾ ಗೊಂದಲಗಳಿಗೆ ಯಾವಾಗಲೂ ವಿಮಾಗಾರರನ್ನು ಹೊಣೆಗಾರರನ್ನಾಗಿ ಮಾಡುತ್ತವೆ.

ಈ ಏಕಪಕ್ಷೀಯತೆಯನ್ನು ಕಡಿಮೆ ಮಾಡಲು ಮತ್ತು ವಿಮಾ ವಹಿವಾಟುಗಳನ್ನು ಹೆಚ್ಚು ಗ್ರಾಹಕ ಸ್ನೇಹಿಯನ್ನಾಗಿ ಮಾಡಲು, ಗ್ರಾಹಕರು ಪಾಲಿಸಿಯ ಯಾವುದೇ ನಿಯಮ ಮತ್ತು ಷರತ್ತುಗಳಿಂದ ತೃಪ್ತರಾಗದಿದ್ದರೆ, ಅವನು / ಅವಳು ಅದನ್ನು ರದ್ದು ಮಾಡಬಹುದು ಮತ್ತು ಮರುಪಾವತಿ ಪಡೆಯುವುದು ಸಾಧ್ಯವಾಗುವಂತೆ ಐಆರ್ ಡಿಎಐ ತನ್ನ ನಿಯಮಾವಳಿಗಳಲ್ಲಿ 'ಫ್ರೀ-ಲುಕ್ ಪಿರಿಯಡ್' ಎಂಬ ಗ್ರಾಹಕ-ಸ್ನೇಹಿ ನಿಬಂಧನೆಯನ್ನು ನಿರ್ಮಿಸಿದೆ. ಪಾಲಿಸಿದಾರರು ಪಾಲಿಸಿಯೊಂದಿಗೆ ತೃಪ್ತರಾಗದಿದ್ದರೆ ಪಾಲಿಸಿ ದಾಖಲೆಯನ್ನು ಸ್ವೀಕರಿಸಿದ ನಂತರ 15 ದಿನಗಳೊಳಗೆ (ಎಲೆಕ್ಟ್ರಾನಿಕ್ ಪಾಲಿಸಿಗಳು ಮತ್ತು ದೂರದ ವಿಧಾನದಿಂದ ಸ್ವೀಕರಿಸಿದ ಪಾಲಿಸಿಗಳ ಸಂದರ್ಭದಲ್ಲಿ 30 ದಿನಗಳು) ಪಾಲಿಸಿಯನ್ನು ರದ್ದುಗೊಳಿಸುವ ಈ ಆಯ್ಕೆಯನ್ನು ಜೀವ ವಿಮೆ ಮತ್ತು ಆರೋಗ್ಯ ವಿಮಾ ಪಾಲಿಸಿ(ಕನಿಷ್ಠ ಒಂದು ವರ್ಷದ ಅವಧಿಯನ್ನು ಹೊಂದಿರುವ)ಗಳಿಗೆ ಪರಿಚಯಿಸಲಾಗಿದೆ. ಕಂಪನಿಗೆ ಬರವಣಿಗೆಯಲ್ಲಿ ತಿಳಿಸಬೇಕು ಮತ್ತು ಕಂತನ್ನು ಕವರ್ ಅವಧಿಯವರೆಗೆ ಅನುಪಾತದಲ್ಲಿ ಅಪಾಯದ ಕಂತು ಮತ್ತು ವೆಚ್ಚಗಳು ಮತ್ತು ಶುಲ್ಕಗಳನ್ನು ಕಡಿಮೆ ಮಾಡಿ ಮರುಪಾವತಿ ಮಾಡಲಾಗುತ್ತದೆ.

**ಪಾಲಿಸಿಗಳ ರದ್ದತಿ:** ವಿಮಾದಾರರಿಂದ ಪಾಲಿಸಿಗಳು ರದ್ದುಗೊಳಿಸಲ್ಪಟ್ಟಾಗ, ಪಾಲಿಸಿಯಡಿಯಲ್ಲಿ ಯಾವುದೇ ಕ್ಲೇಮ್ ಅನ್ನು ಪಾವತಿಸಲಾಗಿಲ್ಲವೆಂಬುದಕ್ಕೆ ಒಳಪಟ್ಟು ವಿಮೆಯ ಅವಧಿಗೆ ಅನುಗುಣವಾಗಿ ಕಂತಿನ ಅನುಪಾತವನ್ನು ವಿಮಾಗಾರರಿಂದ ವಿಧಿಸಲಾಗುತ್ತದೆ/ಇರಿಸಕೊಳ್ಳಲಾಗುತ್ತದೆ ಮತ್ತು ವಿಮೆಯ ಅವಧಿ ಮೀರಿದ ಅವಧಿಗೆ ಅನುಗುಣವಾದ ಅನುಪಾತವನ್ನು ವಿಮಾದಾರರಿಗೆ ಹಿಂತಿರುಗಿಸಲಾಗುತ್ತದೆ. ಕಂತಿನ ಅಂತಹ ಅನುಪಾತದ ಲೆಕ್ಕಾಚಾರವನ್ನು ಪ್ರೊ-ರಾಟಾ ಕಂತು ಎಂದು ಕರೆಯಲಾಗುತ್ತದೆ.

ವಾರ್ಷಿಕ ಪಾಲಿಸಿಗಳನ್ನು ವಿಮಾದಾರರು ರದ್ದುಗೊಳಿಸಿದಾಗ, ವಿಮಾಗಾರರು ಸಾಮಾನ್ಯವಾಗಿ ಹೆಚ್ಚಿನ ದರದಲ್ಲಿ ಕಂತುಗಳನ್ನು ವಿಧಿಸುತ್ತಾರೆ/ ಉಳಿಸಿಕೊಳ್ಳುತ್ತಾರೆ ಮತ್ತು ಪ್ರೊ-ರೇಟಾ ಕಂತುಗಳನ್ನು ಲೆಕ್ಕಾಚಾರ ಮಾಡುವ ಬದಲು ಹೆಚ್ಚಿನ ದರಗಳಲ್ಲಿ ಕಂತುಗಳನ್ನು ಮರುಪಾವತಿ ಮಾಡುತ್ತಾರೆ. ಇದು ವಿಮಾಗಾರರಿಗೆ ವಿರುದ್ಧವಾಗಿರುವ ವಿರೋಧಿ ಆಯ್ಕೆಯನ್ನು ತಡೆಯುತ್ತದೆ ಮತ್ತು ವಿಮಾಗಾರರ ಆರಂಭಿಕ ವೆಚ್ಚಗಳನ್ನು ಭರಿಸುತ್ತದೆ. ಅಂತಹ ದರಗಳನ್ನು ವಿಮಾ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳ ಭಾಗವಾಗಿ ಬಹಿರಂಗಪಡಿಸಲಾಗುತ್ತದೆ ಮತ್ತು ಅಲ್ಪಾವಧಿಯ ಮಾಪಕಗಳು ಎಂದು ಉಲ್ಲೇಖಿಸಲಾಗುತ್ತದೆ.

| ಪ್ರಮುಖ |
|---|

i. **ಒತ್ತಾಯ** - ಕಾನೂನುಬಾಹಿರ ವಿಧಾನಗಳ ಮೂಲಕ ಅನ್ವಯಿಸಲಾಗುವ ಒತ್ತಡವನ್ನು ಒಳಗೊಂಡಿರುತ್ತದೆ.

ii. **ಅನುಚಿತ ಪ್ರಭಾವ** - ಇನ್ನೊಬ್ಬ ವ್ಯಕ್ತಿಯ ಇಚ್ಛೆಯ ಮೇಲೆ ಪ್ರಾಬಲ್ಯ ಸಾಧಿಸಲು, ಆ ವ್ಯಕ್ತಿಯ ಅನಗತ್ಯ ಪ್ರಯೋಜನವನ್ನು ಪಡೆಯಲು ತಮ್ಮ ಸ್ಥಾನವನ್ನು ಬಳಸುವುದು.

iii. **ವಂಚನೆ** - ಓರ್ವರು ನಿಜವೆಂದು ನಂಬದ ಪ್ರಾತಿನಿಧ್ಯದಿಂದ ಉಂಟಾದ ಸುಳ್ಳು ನಂಬಿಕೆಯ ಮೇಲೆ ಕಾರ್ಯನಿರ್ವಹಿಸಲು ಅವರನ್ನು ಪ್ರೇರೇಪಿಸುವುದು. ಇದು ಸತ್ಯಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚುವುದರಿಂದ ಅಥವಾ ಅವುಗಳನ್ನು ತಪ್ಪಾಗಿ ನಿರೂಪಿಸುವ ಮೂಲಕ ಉದ್ಭವಿಸಬಹುದು.

iv. **ತಪ್ಪು** - ಓರ್ವರ ಜ್ಞಾನ ಅಥವಾ ನಂಬಿಕೆ ಅಥವಾ ವಿಷಯ ಅಥವಾ ಘಟನೆಯನ್ನು ಅರ್ಥಮಾಡಿಕೊಳ್ಳುವಲ್ಲಿಯ ದೋಷ. ಇದು ಒಪ್ಪಂದದ ವಿಷಯವಸ್ತುವಿನ ಬಗ್ಗೆ ತಿಳುವಳಿಕೆ ಮತ್ತು ಒಪ್ಪಂದದಲ್ಲಿಯ ದೋಷಕ್ಕೆ ಕಾರಣವಾಗಬಹುದು.

**ನಿಮ್ಮನ್ನು ಪರೀಕ್ಷಿಸಿ 1**

ಈ ಕೆಳಗಿನವುಗಳಲ್ಲಿಯ ಯಾವುದು ಮಾನ್ಯ ವಿಮಾ ಒಪ್ಪಂದದಲ್ಲಿ ಅಂಶವಾಗಿರಲಾಗದು?

I. ಪ್ರಸ್ತಾವನೆ ಮತ್ತು ಸ್ವೀಕೃತಿ

II. ಒತ್ತಾಯ

III. ಸಂಭಾವನೆಪರಿಗಣನೆ/

IV. ಕಾನೂನುಬದ್ಧತೆ

---

**ಸಾರಾಂಶ**

i. ವಿಮೆಯು ವಿಮಾಗಾರರು ಕಂತು ಎಂದು ಕರೆಯಲ್ಪಡುವ ಬೆಲೆ ಅಥವಾ ಪರಿಗಣನೆಗೆ ನಿರ್ದಿಷ್ಟ ಅಪಾಯಗಳ ವಿರುದ್ಧ ಹಣಕಾಸಿನ ರಕ್ಷಣೆಯನ್ನು ಒದಗಿಸಲು ಒಪ್ಪುವ ಒಂದು ಕರಾರಿನ ಒಪ್ಪಂದವನ್ನು ಒಳಗೊಂಡಿರುತ್ತದೆ.

ii. ಒಪ್ಪಂದವು ಪಕ್ಷಗಳ ನಡುವಿನ ಒಪ್ಪಂದವಾಗಿದ್ದು, ಕಾನೂನಿನಡಿಯಲ್ಲಿ ಜಾರಿಗೊಳಿಸಬಹುದಾಗಿದೆ.

iii. ಮಾನ್ಯ ಒಪ್ಪಂದದ ಅಂಶಗಳಲ್ಲಿ ಈ ಕೆಳಗೆ ನೀಡಲಾದ ಅಂಶಗಳು ಸೇರಿವೆ:

- ಪ್ರಸ್ತಾವನೆ ಮತ್ತು ಸ್ವೀಕೃತಿ
- ಸಂಭಾವನೆ,
- ಪರಸ್ಪರ ಒಪ್ಪಂದ
- ಉಚಿತ ಒಪ್ಪಿಗೆ
- ಪಕ್ಷಗಳ ಸಾಮರ್ಥ್ಯ ಮತ್ತು
- ಉದ್ದೇಶದ ಕಾನೂನುಬದ್ಧತೆ

**ಪ್ರಮುಖ ಪದಗಳು**

1. ಪ್ರಸ್ತಾವನೆ ಮತ್ತು ಸ್ವೀಕೃತಿ
2. ಕಾನೂನುಬದ್ಧ ಸಂಭಾವನೆ
3. ಪರಸ್ಪರ ಒಪ್ಪಂದ

**ನಿಮ್ಮನ್ನು ಪರೀಕ್ಷಿಸಿ 2**

ಏಜೆಂಟರ ಮೂಲಕ ಪಾಲಿಸಿಯನ್ನು ಖರೀದಿಸಿದ ಪಾಲಿಸಿದಾರರು ಅದರ ಯಾವುದೇ ನಿಯಮಗಳು ಮತ್ತು ಷರತ್ತುಗಳಿಗೆ ಒಪ್ಪಿಗೆಯಾಗದಿದ್ದರೆ, ಅವನು/ಅವಳು ಅದನ್ನು ಫ್ರೀ-ಲುಕ್ ಅವಧಿಯಲ್ಲಿ ಹಿಂತಿರುಗಿಸಬಹುದು ಮತ್ತು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಮರುಪಾವತಿಯನ್ನು ಪಡೆಯಬಹುದು :

I. ಪಾಲಿಸಿ ದಾಖಲೆಯನ್ನು ಸ್ವೀಕರಿಸಿದ 15 ದಿನಗಳಲ್ಲಿ ಅವನು /ಅವಳು ಈ ಆಯ್ಕೆಯನ್ನು ಚಲಾಯಿಸಬಹುದು

II. ಅವನು/ಳುವಅ ಕುಕಂಪನಿಗೆ ಲಿಖಿತವಾಗಿ ತಿಳಿಸಬೇ.

III. ಕಂತು ಮರುಪಾವತಿಯನ್ನು ಕವರ್ ನಲ್ಲಿಯ ಅವಧಿಯ ಅನುಪಾತದಂತೆ ಅಪಾಯದ ಕಂತಿಗೆ, ವೈದ್ಯಕೀಯ ಪರೀಕ್ಷೆಯಲ್ಲಿ ವಿಮಾಗಾರರು ಮಾಡಿದ ವೆಚ್ಚಗಳು ಮತ್ತು ಮುದ್ರಾಂಕ ಶುಲ್ಕಗಳಿಗೆ ಸರಿಹೊಂದಿಸಲಾಗುತ್ತದೆ

IV. ಮೇಲಿನ ಎಲ್ಲವೂ

**ನಿಮ್ಮನ್ನು ಪರೀಕ್ಷಿಸಿ 3**

ಪಾಲಿಸಿದಾರನು ಪಾಲಿಸಿಯನ್ನು ಖರೀದಿಸಿದ್ದು ಅದನ್ನು ಬಯಸದಿದ್ದರೆ, ಅವನು/ಅವಳು ________ ಅವಧಿಯಲ್ಲಿ ಅದನ್ನು ಹಿಂತಿರುಗಿಸಬಹುದು ಮತ್ತು ಮರುಪಾವತಿಯನ್ನು ಪಡೆಯಬಹುದು.

I. ಉಚಿತ ಮೌಲ್ಯಮಾಪನ

II. ಫ್ರೀ ಲುಕ್

III. ರದ್ದತಿ

IV. ಉಚಿತ ಪ್ರಯೋಗ

**ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು**

ಉತ್ತರ **-** 1 ಸರಿಯಾದ ಉತ್ತರ **II** ಆಗಿದೆ

ಉತ್ತರ **- 2** ಸರಿಯಾದ ಉತ್ತರ **IV** ಆಗಿದೆ

ಉತ್ತರ **- 3** ಸರಿಯಾದ ಉತ್ತರ **II** ಆಗಿದೆ

# ಅಧ್ಯಾಯ C-05

# ಅಂಡರ್ ರೈಟಿಂಗ್ ಮತ್ತು ಬೆಲೆನಿರ್ಧಾರ

**ಅಧ್ಯಾಯ ಪರಿಚಯ**

ಈ ಅಧ್ಯಾಯದಲ್ಲಿ ನೀವು ವಿಮಾ ಲೇಖನ(ಅಂಡರ್ ರೈಟಿಂಗ್) ಮತ್ತು ಬೆಲೆನಿರ್ಧಾರ(ರೇಟಿಂಗ್)ದ ಮೂಲಭೂತ ಅಂಶಗಳನ್ನು ಕಲಿಯುವಿರಿ. ಅಪಾಯಗಳ ಬೆಲೆನಿರ್ಧಾರದ ಪ್ರಕ್ರಿಯೆಯಲ್ಲಿ ಅಪಾಯಗಳನ್ನು ಎದುರಿಸುವ ವಿವಿಧ ವಿಧಾನಗಳ ಬಗ್ಗೆ ನೀವು ಕಲಿಯುವಿರಿ. ಅಂಡರ್ ರೈಟಿಂಗ್, ಉತ್ಪನ್ನ ಅನುಮೋದನೆ ಮತ್ತು ಬೆಲೆನಿರ್ಧಾರದ ಸಾಮಾನ್ಯ ಅಂಶಗಳನ್ನು ನೀವು ನಿರ್ಧರಿಸಲು ಸಾಧ್ಯವಾಗುತ್ತದೆ.

**ಕಲಿಕೆಯ ಫಲಿತಾಂಶಗಳು**

**A.** *ಅಂಡರ್ ರೈಟಿಂಗ್ ನ ಮೂಲಭೂತ ಅಂಶಗಳು*

**B.** *ಐಆರ್ ಡಿಎಐಯೊಂದಿಗೆ ಉತ್ಪನ್ನವನ್ನು ದಾಖಲಿಸುವುದು*

**C.** *ಬೆಲೆನಿರ್ಧಾರದ ಮೂಲಭೂತ ಅಂಶಗಳು*

**D.** *ಬೆಲೆನಿರ್ಧರಿಸುವ ಅಂಶಗಳು*

ಈ ಅಧ್ಯಾಯವನ್ನು ಅಧ್ಯಯನ ಮಾಡಿದ ನಂತರ, ನೀವು ಈ ಕೆಳಗಿನವುಗಳನ್ನು ತಿಳಿಯಲು ಸಾಧ್ಯವಾಗುತ್ತದೆ:

1. ವಿಮೆಯ ಮೂಲಭೂತ ಅಂಶಗಳನ್ನು ವಿವರಿಸುವುದು
2. ಭಾರತದಲ್ಲಿ ಉತ್ಪನ್ನ ಅನುಮೋದನೆಗಳ ಮೂಲಭೂತ ಅಂಶಗಳನ್ನು ಅರ್ಥಮಾಡಿಕೊಳ್ಳುವುದು
3. ಬೆಲೆನಿರ್ಧಾರದ ಅಂಶಗಳು ಮತ್ತು ಬೆಲೆನಿರ್ಧಾರದ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದು

## A. ಅಂಡರ್ ರೈಟಿಂಗ್ ನ ಮೂಲಭೂತ ಅಂಶಗಳು

ಹಿಂದಿನ ಅಧ್ಯಾಯಗಳಲ್ಲಿ, ವಿಮೆಯ ಪರಿಕಲ್ಪನೆಯು ಸಂಚಯನದ ಮೂಲಕ ಅಪಾಯವನ್ನು ನಿರ್ವಹಿಸುವುದನ್ನು ಒಳಗೊಂಡಿರುತ್ತದೆ ಎಂದು ನಾವು ನೋಡಿದ್ದೇವೆ. ವಿಮಾಗಾರರು ಹಲವಾರು ವ್ಯಕ್ತಿಗಳು/ವಾಣಿಜ್ಯ/ಕೈಗಾರಿಕಾ ಸಂಸ್ಥೆಗಳು/ಸಂಸ್ಥೆಗಳಿಂದ ಮಾಡಲಾದ ಕಂತುಗಳನ್ನು ಒಳಗೊಂಡಿರುವ ಒಂದು ಸಂಚಯ/ನಿಧಿಯನ್ನು ರಚಿಸುತ್ತಾರೆ.

ಅಪಾಯಗಳನ್ನು ವರ್ಗೀಕರಿಸುವ, ಅವು ಯಾವ ವರ್ಗಕ್ಕೆ ಸೇರುತ್ತವೆ ಎಂಬುದನ್ನು ಗುರುತಿಸುವುದು, ಅಪಾಯವನ್ನು ಸ್ವೀಕರಿಸಬೇಕೆ ಅಥವಾ ಬೇಡವೇ ಎಂಬುದನ್ನು ನಿರ್ಧರಿಸುವುದು ಮತ್ತು ಹಾಗಿದ್ದಲ್ಲಿ, ಅಪಾಯವನ್ನು ಸ್ವೀಕರಿಸಲು ವಿಮಾದಾರರಿಗೆ ಎಷ್ಟು ಕಂತಿನ ಅಗತ್ಯವಿರುತ್ತದೆ ಮತ್ತು ಯಾವುದೇ ಹೆಚ್ಚುವರಿ ಷರತ್ತುಗಳನ್ನು ವಿಧಿಸಬೇಕೆ ಎಂಬುದನ್ನು ಅರ್ಥಮಾಡಿಕೊಳ್ಳುವ ಈ ಪ್ರಕ್ರಿಯೆ - ಎಲ್ಲವೂ **ಅಂಡರ್ ರೈಟಿಂಗ್** ನ ಭಾಗವಾಗಿದೆ.

ಯಾವ ದರವನ್ನು ವಿಧಿಸಬೇಕು ಮತ್ತು ದರಗಳನ್ನು ಹೇಗೆ ಮಾಡಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಸಹ ಮುಖ್ಯವಾಗಿದೆ.

**ವ್ಯಾಖ್ಯಾನ**

ವಿಮೆಗಾಗಿ ಪ್ರಸ್ತಾಪಿಸಲಾದ ಅಪಾಯವು ಸ್ವೀಕಾರಾರ್ಹವೇ, ಮತ್ತು ಹಾಗಿದ್ದಲ್ಲಿ, ಯಾವ ದರಗಳು, ನಿಯಮಗಳು ಮತ್ತು ಷರತ್ತುಗಳಡಿಯಲ್ಲಿ ಎಂಬುದನ್ನು ನಿರ್ಧರಿಸುವ ಪ್ರಕ್ರಿಯೆಯೇ ಅಂಡರ್ ರೈಟಿಂಗ್ ಆಗಿದೆ.

---

ಅಂಡರ್ ರೈಟಿಂಗ್ ಈ ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ:

- **i.** ಆವರ್ತನ ಮತ್ತು ನಷ್ಟದ ತೀವ್ರತೆಗೆ ಸಂಬಂಧಿಸಿದಂತೆ ವಿಪತ್ತು ಮತ್ತು ಅಪಾಯದ ನಿರ್ಧಾರ ಮತ್ತು ಮೌಲ್ಯಮಾಪನ
- **ii.** ಪಾಲಿಸಿಯ ವ್ಯಾಪ್ತಿ ಮತ್ತು ನಿಯಮಗಳು ಮತ್ತು ಷರತ್ತುಗಳ ರಚನೆ
- **iii.** ಕಂತಿನ ದರಗಳನ್ನು ನಿಗದಿಪಡಿಸುವುದು

ಅಂಡರ್ ರೈಟರ್ ರವರು ಅಪಾಯವನ್ನು ಸ್ವೀಕರಿಸಬೇಕೇ ಅಥವಾ ಬೇಡವೇ ಎಂಬುದರ ಕುರಿತು ನಿರ್ಧರಿಸುತ್ತಾರೆ

ಅಪಾಯವನ್ನು ಸ್ವೀಕರಿಸುವಲ್ಲಿಯ ದರಗಳು, ನಿಯಮಗಳು ಮತ್ತು ಷರತ್ತುಗಳನ್ನು ನಿರ್ಧರಿಸುವುದು ಮುಂದಿನ ಹಂತವಾಗಿದೆ.

ಅಂಡರ್ ರೈಟಿಂಗ್ ಕೌಶಲ್ಯಗಳನ್ನು ಸಾಕಷ್ಟು ತರಬೇತಿ, ಕ್ಷೇತ್ರದಲ್ಲಿಯ ಪ್ರಾಯೋಗಿಕ ಕೆಲಸ, ಮತ್ತು ಆಳವಾದ ಒಳನೋಟಗಳನ್ನು ಒಳಗೊಂಡ ನಿರಂತರ ಕಲಿಕೆಯ ಪ್ರಕ್ರಿಯೆಯ ಮೂಲಕ ಪಡೆದುಕೊಳ್ಳಲಾಗುತ್ತದೆ. ಅಗ್ನಿ ವಿಮೆ ಅಂಡರ್ ರೈಟರ್ ರಾಗಲು ಬೆಂಕಿಯ ಸಂಭವನೀಯ ಕಾರಣಗಳು, ವಿವಿಧ ಭೌತಿಕ ವಸ್ತುಗಳು ಮತ್ತು

ಆಸ್ತಿಯ ಮೇಲಿನ ಬೆಂಕಿಯ ಪ್ರಭಾವ, ಒಂದು ಉದ್ಯಮವು ಒಳಗೊಂಡಿರುವ ಪ್ರಕ್ರಿಯೆ, ಭೌಗೋಳಿಕತೆ, ಹವಾಮಾನ ಪರಿಸ್ಥಿತಿಗಳು ಇತ್ಯಾದಿಗಳ ಬಗ್ಗೆ ಉತ್ತಮ ಜ್ಞಾನವನ್ನು ಹೊಂದಿರಬೇಕು.

ಅದೇ ರೀತಿ ಸಾಗರ ವಿಮೆಯ ಅಂಡರ್ ರೈಟರ್ ರು ಬಂದರು/ರಸ್ತೆ ಪರಿಸ್ಥಿತಿಗಳು, ಸರಕು/ಸಾಮಾನುಗಳ ಸಾಗಣೆ ಅಥವಾ ಶೇಖರಣೆಯಲ್ಲಿ ಎದುರಿಸಲಾಗುವ ಸಮಸ್ಯೆಗಳು, ಹಡಗುಗಳು ಮತ್ತು ಅವುಗಳ ಸಮುದ್ರ ಯೋಗ್ಯತೆ ಇತ್ಯಾದಿಗಳ ಬಗ್ಗೆ ತಿಳಿದಿರಬೇಕು.

ಆರೋಗ್ಯ ಅಂಡರ್ ರೈಟರ್ ರು ವಿಮೆದಾರರ ಅಪಾಯದ ವ್ಯಕ್ತಿಚಿತ್ರಣ, ವಯಸ್ಸು, ವೈದ್ಯಕೀಯ ಅಂಶಗಳು, ಆರೋಗ್ಯದ ಮಟ್ಟಗಳು ಮತ್ತು ಕುಟುಂಬದ ಇತಿಹಾಸವನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅಪಾಯದ ಮೇಲೆ ಪರಿಣಾಮ ಬೀರುವ ಪ್ರತಿಯೊಂದು ಅಂಶದ ಪರಿಣಾಮವನ್ನು ಅಳೆಯಬೇಕು.

**ಅಂಡರ್ ರೈಟಿಂಗ್ ಗಾಗಿ ಮಾಹಿತಿಯ ಮೂಲಗಳು**

ಮಾಹಿತಿ(ಡೇಟಾ) ಸಂಗ್ರಹವು ಯಾವುದೇ ಸಂಖ್ಯಾತ್ಮಕ (ಅಥವಾ ಸಂಖ್ಯಾಶಾಸ್ತ್ರೀಯ) ವಿಶ್ಲೇಷಣೆಯ ಮೊದಲ ಹಂತವಾಗಿದೆ. ಅಪಾಯದ ಬೆಲೆಯನ್ನು ನಿರ್ಧರಿಸುವಾಗ, ಅಂಡರ್ ರೈಟರ್ ರು ನಿಖರವಾದ ಮೌಲ್ಯಮಾಪನಕ್ಕೆ ಸಹಾಯವಾಗುವಂತೆ ಸಾಧ್ಯವಾದಷ್ಟು ಮಾಹಿತಿಯನ್ನು ಸಂಗ್ರಹಿಸಬೇಕು.

**ಮಾಹಿತಿಯ ಮೂಲಗಳು ಈ ಕೆಳಗಿನಂತಿವೆ :**

i. **ಪ್ರಸ್ತಾಪದ ನಮೂನೆ ಅಥವಾ ಅಂಡರ್ ರೈಟಿಂಗ್ ಪರಿಚಯ ಪ್ರಸ್ತುತಿ**

ii. **ಅಪಾಯದ ಸರ್ವೇಕ್ಷಣಗಳು**

iii. **ಐತಿಹಾಸಿಕ ಕ್ಲೇಮ್ ಗಳ ಅನುಭವದ ಮಾಹಿತಿ(ಡೇಟಾ):** ವೈಯಕ್ತಿಕ ಮತ್ತು ಮೋಟಾರು ಲೈನ್ ಗಳಂತಹ ಕೆಲವು ವರ್ಗದ ವ್ಯವಹಾರಗಳಿಗೆ, ಭವಿಷ್ಯದಲ್ಲಿಯ ಕ್ಲೇಮ್ ಗಳ ಅನುಭವದ ಸೂಚನೆಯನ್ನು ಒದಗಿಸಲು ಮತ್ತು ಸೂಕ್ತವಾದ ಕಂತನ್ನು ನಿರ್ಧರಿಸಲು ಅಂಡರ್ ರೈಟರ್ ರು ಹೆಚ್ಚಾಗಿ ಐತಿಹಾಸಿಕ ಕ್ಲೇಮ್ ಗಳ ಅನುಭವದ ಮಾಹಿತಿ(ಡೇಟಾ)ಯನ್ನು ಬಳಸುತ್ತಾರೆ.

**ಅಂಡರ್ ರೈಟಿಂಗ್, ಇಕ್ವಿಟಿ ಮತ್ತು ವ್ಯಾಪಾರ ಸಮರ್ಥನೀಯತೆ**

ಎಲ್ಲ ಅಪಾಯಗಳು ಸಮಾನವಾಗಿಲ್ಲ ಎಂಬ ಸರಳ ಅಂಶದಿಂದಾಗಿ ವಿಮೆಯಲ್ಲಿ ಮುಜಾಗ್ರತೆಯ ಅಂಡರ್ ರೈಟಿಂಗ್ ಮತ್ತು ಅಪಾಯದ ವರ್ಗೀಕರಣದ ಅಗತ್ಯವು ಉದ್ಭವಿಸುತ್ತದೆ. ಹೀಗೆ ನಷ್ಟ ಸಂಭವಿಸುವ ಸಾಧ್ಯತೆ ಮತ್ತು ತೀವ್ರತೆಗನುಗುಣವಾಗಿ ಪ್ರತಿಯೊಂದು ಅಪಾಯವನ್ನು ಸೂಕ್ತವಾಗಿ ನಿರ್ಣಯಿಸಬೇಕು ಮತ್ತು ಬೆಲೆಯನ್ನು ನಿಗದಿಪಡಿಸಬೇಕಾಗುತ್ತದೆ.

ಎಲ್ಲ ಅಪಾಯಗಳು ಸಮಾನವಾಗಿಲ್ಲದ ಕಾರಣ, ವಿಮೆ ಮಾಡಬೇಕಾದ ಎಲ್ಲರಿಗೂ ಸಮಾನ ಕಂತನ್ನು ಪಾವತಿಸಲು ಕೇಳುವುದು ಸೂಕ್ತವಲ್ಲ. **ಆದ್ದರಿಂದ ಅಪಾಯಗಳ ಗುಣಲಕ್ಷಣಗಳು ಮತ್ತು ಮಟ್ಟವನ್ನವಲಂಬಿಸಿ, ಸೂಕ್ತವಾದ ಕಂತು ದರವನ್ನು ವಿಧಿಸಲು ಸಾಧ್ಯವಾಗುವಂತೆ ಅಪಾಯಗಳನ್ನು ವರ್ಗೀಕರಿಸುವುದು ಅಂಡರ್**

**ರೈಟಿಂಗ್ ನ ಉದ್ದೇಶವಾಗಿದೆ**. ಅಪಾಯದ ಮೌಲ್ಯಮಾಪನವನ್ನು ಸರಿಯಾಗಿ ಮಾಡಲಾಗಿದೆ ಮತ್ತು ವಿಧಿಸಲಾದ ಕಂತು ಅಪಾಯವನ್ನು ಸರಿದೂಗಿಸಲು ತುಂಬಾ ಕಡಿಮೆಯಿಲ್ಲ ಅಥವಾ ಅದನ್ನು ಸ್ಪರ್ಧಾತ್ಮಕವಲ್ಲದಂತೆ ಮಾಡಲು ತುಂಬಾ ಹೆಚ್ಚಿಲ್ಲವೆಂದು ಖಚಿತಪಡಿಸಿಕೊಳ್ಳುವುದು ಅಂಡರ್ ರೈಟರ್ ಗೆ ಮುಖ್ಯವಾಗಿದೆ.

ಅಂಡರ್ ರೈಟಿಂಗ್ ನ ಮುಖ್ಯ ಲಕ್ಷಣಗಳು ಈ ಕೆಳಗಿನಂತಿವೆ

- **i.** ಗುಣಲಕ್ಷಣಗಳ ಆಧಾರದ ಮೇಲೆ ಅಪಾಯವನ್ನು ಗುರುತಿಸುವುದು
- **ii.** ಪ್ರಸ್ತಾಪಕರು ಪ್ರಸ್ತುತಪಡಿಸಿದ ಅಪಾಯದ ಮಟ್ಟವನ್ನು ನಿರ್ಧರಿಸುವುದು

ಸಂಕ್ಷಿಪ್ತವಾಗಿ, ಸ್ವೀಕಾರಾರ್ಹತೆಯ ಮಟ್ಟ, ಕಂತಿನ ಸಮರ್ಪಕತೆ ಮತ್ತು ಇತರ ಷರತ್ತುಗಳನ್ನು ನಿರ್ಧರಿಸುವ ಮೂಲಕ ಅಂಡರ್ ರೈಟಿಂಗ್ ನ ಉದ್ದೇಶಗಳನ್ನು ಸಾಧಿಸಲಾಗುತ್ತದೆ.

## B. ಐಆರ್ ಡಿಎಐ ಜೊತೆಗೆ ಉತ್ಪನ್ನದ ದಾಖಲಾತಿ

ಪ್ರತಿಯೊಂದು ವಿಮಾ ಉತ್ಪನ್ನವನ್ನು ಮಾರಾಟಕ್ಕೆ ನೀಡುವ ಮೊದಲು ಅನುಮೋದನೆಗಾಗಿ ಐಆರ್ ಡಿಎಐ ಗೆ ಸಲ್ಲಿಸಬೇಕಾಗುತ್ತದೆ. ಐಆರ್ ಡಿಎಐ ಪ್ರತಿ ವಿಮಾ ಉತ್ಪನ್ನಕ್ಕೆ ವಿಶಿಷ್ಟ ಗುರುತಿನ ಸಂಖ್ಯೆ (ಯುಐಎನ್)ಯನ್ನು ನಿಗದಿಪಡಿಸುತ್ತದೆ. ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಪರಿಚಯಿಸಿದ ನಂತರ, ಉತ್ಪನ್ನವನ್ನು ಹಿಂತೆಗೆದುಕೊಳ್ಳಲು ಸಹ ಅನುಸರಿಸಬೇಕಾದ ಮಾರ್ಗಸೂಚಿಗಳಿವೆ.

1. ವಿಮಾಗಾರರ ಮಂಡಳಿಯು ಪಾಲಿಸಿಯಲ್ಲಿನ ಅಪಾಯಗಳನ್ನು ಸ್ವೀಕರಿಸಲು ಸಿದ್ಧರಿದ್ದಾರೆ ಮತ್ತು ಕ್ಲೇಮ್ ಗಳನ್ನು ಪಾವತಿಸಲು ಒಪ್ಪುತ್ತಾರೆಂಬ ಬಗ್ಗೆ ನಿಯಂತ್ರಕರು ಸ್ಪಷ್ಟವಾದ ಬದ್ಧತೆಯನ್ನು ಕೇಳುತ್ತಾರೆ. ಪಾಲಿಸಿಯಲ್ಲಿಯ ಶಬ್ದರಚನೆಯು ಗ್ರಾಹಕರಿಗೆ ನ್ಯಾಯಯುತವಾಗಿದೆ ಮತ್ತು ಬೆಲೆಗಳನ್ನು ವೈಜ್ಞಾನಿಕ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಎಂದು ಸಹ ವಿಮಾಗಾರರನ್ನು ಕೇಳಲಾಗುತ್ತದೆ.
2. ವಿಮಾಗಾರರು ಭವಿಷ್ಯದಲ್ಲಿ ಉತ್ಪನ್ನಗಳ ಹಿಂತೆಗೆದುಕೊಳ್ಳುವಿಕೆಯ ಸಾಧ್ಯತೆ ಮತ್ತು ಉತ್ಪನ್ನವನ್ನು ಹಿಂತೆಗೆದುಕೊಂಡಲ್ಲಿ ಪಾಲಿಸಿದಾರರಿಗೆ ಲಭ್ಯವಿರುವ ಆಯ್ಕೆಗಳಿಗಾಗಿ ಯೋಜಿಸಬೇಕು.
3. ಹಿಂಪಡೆದ ಉತ್ಪನ್ನವನ್ನು ನಿರೀಕ್ಷಿತ ಗ್ರಾಹಕರಿಗೆ ನೀಡಲಾಗುವುದಿಲ್ಲ.

## C. ಬೆಲೆನಿರ್ಧಾರದ ಮೂಲಭೂತ ಅಂಶಗಳು

ವಿಮಾಗಾರರಿಗೆ ಅಪಾಯದ ವರ್ಗಾವಣೆಯನ್ನು ಮಾಡುವುದೇ ವಿಮೆಯ ಮೂಲ ಅಂಶವಾಗಿದೆ. ವಿಮಾದಾರರು ಆಸ್ತಿಯನ್ನು ವಿಮೆ ಮಾಡಲಾದ ಅಪಾಯದಿಂದ ಉಂಟಾಗುವ ಆರ್ಥಿಕ ನಷ್ಟದ ಪರಿಣಾಮವನ್ನು ವಿಮಾ ಪಾಲಿಸಿಯನ್ನು ಖರೀದಿಸುವ ಮೂಲಕ ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಲಾಭಾಂಶ ಸೇರಿದಂತೆ ಭವಿಷ್ಯದ ವಿಮಾ ಕ್ಲೇಮ್ ಗಳು ಮತ್ತು ವೆಚ್ಚಗಳನ್ನು ಸರಿದೂಗಿಸಲು ಬೆಲೆಯನ್ನು ಲೆಕ್ಕಾಚಾರ ಮಾಡುವ ಪ್ರಕ್ರಿಯೆಯನ್ನು ವಿಮಾಗಾರರು ಅಳವಡಿಸಿಕೊಳ್ಳಬೇಕು. ಇದನ್ನು **ದರ/ಬೆಲೆ ನಿರ್ಧಾರ**ವೆಂದು ಕರೆಯಲಾಗುತ್ತದೆ.

**ದರವು ವಿಮೆಯ ನಿರ್ದಿಷ್ಟ ಘಟಕದ ಬೆಲೆಯಾಗಿದೆ**. ಉದಾಹರಣೆಗೆ, ಭೂಕಂಪದ ವ್ಯಾಪ್ತಿಗಾಗಿ ಪ್ರತಿ ಮಿಲ್ಲೆ (1 ಸಾವಿರಕ್ಕೆ) ವಿಮಾ ಮೊತ್ತಕ್ಕೆ ರೂ.1.00 ಎಂದು ದರವನ್ನು ವ್ಯಕ್ತಪಡಿಸಬಹುದು. ಭವಿಷ್ಯದಲ್ಲಿಯ ಸಂಭವನೀಯ ನಷ್ಟಗಳ ಮೇಲೆ ಪರಿಣಾಮ ಬೀರಬಹುದಾದ ವರ್ತಮಾನದ ಪರಿಸರದಲ್ಲಿಯ ಬದಲಾವಣೆಗಳನ್ನು ಮತ್ತು ಹಿಂದಿನ ಪ್ರವೃತ್ತಿಗಳನ್ನು ನೋಡಿದ ನಂತರ ಪ್ರತಿಯೊಂದು ದರ/ಬೆಲೆಯನ್ನು ಹೊಂದಿಸಲಾಗಿದೆ.

**ದರಗಳೆಂದರೆ ಕಂತುಗಳಲ್ಲ ಎಂಬುದನ್ನು ಗಮನಿಸಿ.**

**ಕಂತು = (ವಿಮಾ ಮೊತ್ತ) x (ದರ)**

| **ಉದಾಹರಣೆ** |
|---|

ಆರೋಗ್ಯ ವಿಮೆಯ ಉದಾಹರಣೆಯನ್ನು ತೆಗೆದುಕೊಳ್ಳಲಾಗಿ, ಅಪಾಯದ ಪ್ರತಿಯೊಂದು ಅಂಶದ ಮೇಲೆ ಸಂಖ್ಯಾತ್ಮಕ ಅಥವಾ ಶೇಕಡಾವಾರು ಮೌಲ್ಯಮಾಪನಗಳನ್ನು ಮಾಡಲಾಗುತ್ತದೆ. ವಯಸ್ಸು, ಜನಾಂಗ, ಉದ್ಯೋಗ, ಅಭ್ಯಾಸಗಳು ಇತ್ಯಾದಿ ಅಂಶಗಳನ್ನು ಪೂರ್ವನಿರ್ಧಾರಿತ ಮಾನದಂಡಗಳ ಆಧಾರದ ಮೇಲೆ ಪರಿಶೀಲಿಸಲಾಗುತ್ತದೆ ಮತ್ತು ಸಂಖ್ಯಾತ್ಮಕವಾಗಿ ದಾಖಲಿಸಲಾಗುತ್ತದೆ.

ಪ್ರತಿಯೊಬ್ಬರೂ ಪಾವತಿಸಬೇಕಾದ ಕಂತು ಮೊತ್ತವು ಎರಡು ಅಂಶಗಳಿಂದ ನಿರ್ಧರಿಸಲಾಗುವ ದರವನ್ನವಲಂಬಿಸಿರುತ್ತದೆ;

- ✓ ನಷ್ಟದ ಘಟನೆಯಿಂದ ಉಂಟಾಗುವ ನಷ್ಟ (ವಿಮೆ ಮಾಡಿದ ಅಪಾಯದಿಂದ ಉಂಟಾಗಿರುವ)ದ ಸಂಭವನೀಯತೆ ಮತ್ತು
- ✓ ನಷ್ಟದ ಘಟನೆಯಿಂದ ಉಂಟಾಗಬಹುದಾದ ನಷ್ಟದ ಅಂದಾಜು ಮೊತ್ತ

| **ಉದಾಹರಣೆ** |
|---|

ಬೆಂಕಿಯಿಂದ ನಾಶವಾದ ಮನೆಯ ಸರಾಸರಿ ಮೊತ್ತ 1,00,000 ರೂ. ಎದು ಊಹಿಸಿ

ಬೆಂಕಿಯಿಂದ ಮನೆಯ ನಷ್ಟದ ಸಂಭವನೀಯತೆ 100 ರಲ್ಲಿ 1 [ಅಥವಾ 0.01]. ಅಂದರೆ, 100 ವಿಮೆ ಮಾಡಿದ ಮನೆಗಳಲ್ಲಿ ಒಂದು ಮನೆ ಬೆಂಕಿಯಿಂದ ನಾಶವಾಗುತ್ತದೆ ಎಂಬುದು ಹಿಂದಿನ ಅನುಭವ.

ನಿರೀಕ್ಷಿತ ಸರಾಸರಿ ನಷ್ಟವು ರೂ.1,00,000 **x** 0.01 = ರೂ. **1000**.

ಆದ್ದರಿಂದ, ರೂ.**1,00,000** ಮೌಲ್ಯದ ಮನೆಯನ್ನು ವಿಮೆ ಮಾಡಲು ವಿಮಾಗಾರರು ಕನಿಷ್ಠ ರೂ.**1000** ಶುಲ್ಕವನ್ನು ವಿಧಿಸಬೇಕಾಗುತ್ತದೆ.

---

ವಾಸ್ತವವಾಗಿ ಉಂಟಾದ ನಷ್ಟವನ್ನು ಸರಿದೂಗಿಸಲು ನಿಧಿಯು ಸಾಕಾಗುತ್ತದೆ ಎಂದು ವಿಮಾಗಾರರು ಹೇಗೆ ಖಚಿತಪಡಿಸಿಕೊಳ್ಳಬಹುದು**?**

ಮೊದಲೇ ನೋಡಿದಂತೆ, ವಿಮೆಯ ಸಂಪೂರ್ಣ ಕಾರ್ಯವ್ಯವಸ್ಥೆಯು ನಷ್ಟಗಳ ಸಂಖ್ಯೆಯ ಸಂಭವನೀಯತೆ (ಆವರ್ತನ) ಮತ್ತು ನಷ್ಟದ ಪ್ರಮಾಣ (ತೀವ್ರತೆ)ವನ್ನು ಊಹಿಸಲು ಸಾಧ್ಯವಾಗುವಂತೆ ಒಂದೇ ರೀತಿಯ ಅನೇಕ ಅಪಾಯಗಳ ಒಟ್ಟುಗೂಡಿಸುವಿಕೆಯನ್ನು ಒಳಗೊಂಡಿರುತ್ತದೆ. 'ದೊಡ್ಡ ಸಂಖ್ಯೆಗಳ ನಿಯಮ' ವೆಂದು ಉಲ್ಲೇಖಿಸಲಾದ ಈ ತತ್ವವು ನಮೂನೆ/ಮಾದರಿ(ಸ್ಯಾಂಪಲ್) ಗಾತ್ರವು ಬೆಳೆದಂತೆ, ಫಲಿತಾಂಶಗಳು ನಿರೀಕ್ಷಿತ ಮೌಲ್ಯಕ್ಕೆ ಹತ್ತಿರವಾಗುತ್ತವೆ ಎಂದು ಹೇಳುತ್ತದೆ. ವಿಮಾ ಕಂಪನಿಗಳು ತಮ್ಮ ನಿರೀಕ್ಷೆಗಳನ್ನು/ಮುನ್ಸೂಚನೆಗಳನ್ನು ಕಾರ್ಯಗತಗೊಳಿಸಲು ಹೆಚ್ಚು ಹೆಚ್ಚು ಜನರಿಗೆ ಹೆಚ್ಚಿನ ಪಾಲಿಸಿಗಳನ್ನು ಮಾರಾಟ ಮಾಡಬೇಕಾಗುತ್ತದೆ.

ಒಂದು ಉದಾಹರಣೆಯೆಂದರೆ, ಒಂದು ನಾಣ್ಯವನ್ನು ಮೇಲಕ್ಕೆಸೆದರೆ, 'ಹೆಡ್ಸ್' ಅಥವಾ 'ಟೇಲ್ಸ್' ಪಡೆಯುವ ಸಾಧ್ಯತೆಗಳು **50:50** ರಷ್ಟಾಗಿದೆ. ಆದರೆ, ನಾಣ್ಯವನ್ನು ಒಮ್ಮೆ ಮಾತ್ರ ಎಸೆದರೆ, ಫಲಿತಾಂಶವು 100% 'ಹೆಡ್ಸ್' ಮತ್ತು 0% 'ಟೇಲ್ಸ್' ಅಥವಾ 0% 'ಹೆಡ್ಸ್' ಮತ್ತು 100% 'ಟೇಲ್ಸ್' ಆಗಿರಬಹುದು. ಆದರೆ, ನಾಣ್ಯವನ್ನು ಹಲವು ಬಾರಿ ಎಸೆದರೆ, 'ಹೆಡ್ಸ್' ಮತ್ತು 'ಟೇಲ್ಸ್' ಬರುವ ಸಾಧ್ಯತೆಯ ಸರಾಸರಿ ಎಣಿಕೆ 100% ಮತ್ತು 0% ಆಗುವ ಸಾಧ್ಯತೆಯು ಕಡಿಮೆಯಾಗುತ್ತದೆ ಮತ್ತು 50:50 ರ ಸಾಧ್ಯತೆಗೆ ಹತ್ತಿರವಾಗುತ್ತದೆ.

**ಉದಾಹರಣೆ**

ಆಸ್ತಿ ವಿಮೆಯ ಕ್ಷೇತ್ರದಲ್ಲಿ, ಮರದ ರಚನೆಯು ಬೆಂಕಿಯನ್ನು ಹಿಡಿಯುವ ಸಾಧ್ಯತೆಗಳು ಕಲ್ಲಿನ ರಚನೆಗಳು ಬೆಂಕಿ ಹಿಡಿಯುವ ಸಾಧ್ಯತೆಗಿಂತ ಹೆಚ್ಚು; ಆದ್ದರಿಂದ, ಮರದ ರಚನೆಯನ್ನು ವಿಮೆ ಮಾಡಲು ಹೆಚ್ಚಿನ ಕಂತಿನ ಅಗತ್ಯವಿದೆ.

ಜೀವ ಮತ್ತು ಆರೋಗ್ಯ ವಿಮೆಗೂ ಇದೇ ಪರಿಕಲ್ಪನೆಯು ಅನ್ವಯಿಸುತ್ತದೆ. ಅಧಿಕ ರಕ್ತದೊತ್ತಡ ಅಥವಾ ಮಧುಮೇಹದಿಂದ ಬಳಲುತ್ತಿರುವ ವ್ಯಕ್ತಿಯು ಹೃದಯಾಘಾತದಿಂದ ಬಳಲುತ್ತಿರುವ ಹೆಚ್ಚಿನ ಸಾಧ್ಯತೆಗಳನ್ನು ಹೊಂದಿರುತ್ತಾನೆ.

**ನಿಮ್ಮನ್ನು ಪರೀಕ್ಷಿಸಿ**

ವಿಮೆಯ ಬೆಲೆ ತಯಾರಿಕೆಯ ಮೇಲೆ ಪರಿಣಾಮ ಬೀರುವ ಎರಡು ಅಂಶಗಳನ್ನು ಗುರುತಿಸಿ.

**I.** ಸಂಭವನೀಯತೆ ಮತ್ತು ಅಪಾಯದ ತೀವ್ರತೆ

**II.** ಅಪಾಯದ ಮೂಲ ಮತ್ತು ಸ್ವರೂಪ

**III.** ಅಪಾಯದ ಮೂಲ ಮತ್ತು ಸಮಯ

**IV.** ಅಪಾಯದ ಸ್ವರೂಪ ಮತ್ತು ಪ್ರಭಾವ

**1. ಕಂತಿನ ದರವನ್ನು ನಿರ್ಧರಿಸುವುದು**

ಹಿಂದಿನ ನಷ್ಟದ ಅನುಭವದ ಆಧಾರದ ಮೇಲೆ ಕಂತಿನ ಶುದ್ಧ ದರವನ್ನು ತಲುಪಲಾಗುತ್ತದೆ. ಆದ್ದರಿಂದ, ದರಗಳನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ ಹಿಂದಿನ ನಷ್ಟಗಳಿಗೆ ಸಂಬಂಧಿಸಿದ ಅಂಕಿಅಂಶಗಳ ಮಾಹಿತಿಯು ಅತ್ಯಂತ ಅವಶ್ಯಕವಾಗಿದೆ. ದರಗಳನ್ನು ಸರಿಪಡಿಸಲು, ಅಪಾಯಗಳಿಗೆ 'ಗಣಿತದ ಮೌಲ್ಯ'ವನ್ನು ನೀಡುವುದು ಅವಶ್ಯಕವಾಗಿದೆ.

**ಉದಾಹರಣೆ**

ಹೆಚ್ಚಿನ ಸಂಖ್ಯೆಯ ಮೋಟಾರು ಸೈಕಲ್ ಗಳ ನಷ್ಟದ 10 ವರ್ಷಗಳ ಅವಧಿಯಲ್ಲಿಯ ಅನುಭವವನ್ನು ಸಂಗ್ರಹಿಸಿದರೆ, ವಾಹನಗಳ ಹಾನಿಯಿಂದ ಉಂಟಾಗುವ ನಷ್ಟದ ಒಟ್ಟು ಮೊತ್ತವನ್ನು ನಾವು ಪಡೆಯುತ್ತೇವೆ. ಈ ನಷ್ಟದ ಮೊತ್ತವನ್ನು ಮೋಟಾರು ಸೈಕಲ್ ಗಳ ಒಟ್ಟು ಮೌಲ್ಯದ ಶೇಕಡಾವಾರು ಪ್ರಮಾಣದಲ್ಲಿ ವ್ಯಕ್ತಪಡಿಸುವ ಮೂಲಕ ನಾವು ಅಪಾಯದ 'ಗಣಿತದ ಮೌಲ್ಯ'ವನ್ನು ಸರಿಪಡಿಸಬಹುದು. ಇದನ್ನು ಈ ಕೆಳಗಿನ ಸೂತ್ರದಲ್ಲಿ ವ್ಯಕ್ತಪಡಿಸಬಹುದು:

| | |
|---|---|
| ಎಮ್ = ಎಲ್ X 100 / ವಿ<br>$M = \frac{L \times 100}{V}$ | ಇಲ್ಲಿ **L** ನಷ್ಟಗಳ ಒಟ್ಟು ಮೊತ್ತವನ್ನು ಮತ್ತು **V** ಎಲ್ಲ ಮೋಟಾರು ಸೈಕಲ್ ಗಳ ಒಟ್ಟು ಮೌಲ್ಯಗಳು ಮತ್ತು **M** ಸರಾಸರಿ ನಷ್ಟದ ಶೇಕಡಾವಾರುಗಳನ್ನು ಸೂಚಿಸುತ್ತವೆ. |

ಈಗ ನಾವು ಹೀಗೆ ಊಹಿಸೋಣ :

- ✓ ಮೋಟಾರು ಸೈಕಲ್ ನ ಮೌಲ್ಯ: ರೂ. **50,000/ -**
- ✓ **ನಷ್ಟದ ಅನುಭವ: 10** ವರ್ಷಗಳಲ್ಲಿ **1000** ಮೋಟಾರ್ ಸೈಕಲ್‌ಗಳಲ್ಲಿಂದ, **50** ಮೋಟಾರು ಸೈಕಲ್ ಗಳು ಕಳ್ಳತನವಾಗುತ್ತವೆ
- ✓ ಕಳ್ಳತನದಿಂದ ಪ್ರತಿ ವರ್ಷ ಸರಾಸರಿ **5** ಮೋಟಾರು ಸೈಕಲ್ ಗಳು ಒಟ್ಟು ನಷ್ಟವಾಗುತ್ತದೆ

ಸೂತ್ರವನ್ನು ಅನ್ವಯಿಸುವುದರಿಂದ, ಫಲಿತಾಂಶವು ಹೀಗಿರುತ್ತದೆ:

ವರ್ಷಕ್ಕೆ ನಷ್ಟಗಳು (ರೂ. 50,000 **X** 5) = ರೂ. 2,50,000

**1000 ಮೋಟಾರು ವಾಹನಗಳ ಒಟ್ಟು ಮೌಲ್ಯಗಳು (ರೂ. 50,000 X 1000) = ರೂ. 5,00,00,000**

ಇದರರ್ಥ ಪ್ರತಿ ವಾಹನಕ್ಕೆ ಸರಾಸರಿ ನಷ್ಟದ ಶೇಕಡಾವಾರು (ಎಲ್/ವಿ) **x 100= [2,50,000/ 5,00,00,000] x 100 = 0.5%**

ಆದ್ದರಿಂದ ಮೋಟಾರು ಸೈಕಲ್ ಮಾಲೀಕರು ಪಾವತಿಸುವ ಕಂತು ದರವು ರೂ. 50,000/ - ದ ಅರ್ಧ ಶೇಕಡಾ ಅಂದರೆ ವರ್ಷಕ್ಕೆ ರೂ. 250/-. ಇದನ್ನು **'ಶುದ್ಧ' ಪ್ರೀಮಿಯಂ** ಎಂದು ಕರೆಯಲಾಗುತ್ತದೆ, ಇದನ್ನು **'ಬರ್ನಿಂಗ್ ಕಾಸ್ಟ್'** ಎಂದೂ ಕರೆಯಲಾಗುತ್ತದೆ.

ಪ್ರತಿ ಮೋಟಾರ್ ಸೈಕಲ್‌ಗೆ ರೂ. 250 ಈ ದರದಲ್ಲಿ, ರೂ. **2.5** ಲಕ್ಷಗಳನ್ನು ಸಂಗ್ರಹಿಸಲಾಗುತ್ತದೆ, ಇದನ್ನು **5** ವಾಹನಗಳ ಒಟ್ಟು ನಷ್ಟದ ಮೇಲೆ ಕ್ಲೇಮ್ ಗಳಲ್ಲಿ ಪಾವತಿಸಲಾಗುತ್ತದೆ.

ಮೇಲೆ ಪಡೆಯಲಾದ ಶುದ್ಧ ಕಂತನ್ನು ಸಂಗ್ರಹಿಸಿದರೆ, ಅದು ನಷ್ಟವನ್ನು ಪಾವತಿಸಲು ಮಾತ್ರ ಸಾಕಾಗುವ ನಿಧಿಯನ್ನು ರೂಪಿಸುತ್ತದೆ.

---

ಮೇಲಿನ ಉದಾಹರಣೆಯಲ್ಲಿ ಯಾವುದೇ ಹೆಚ್ಚುವರಿ/ಉಳಿತಾಯವಿಲ್ಲ ಎಂಬುದನ್ನು ನಾವು ನೋಡಬಹುದು. ಆದರೆ ವಿಮಾ ಕಾರ್ಯಾಚರಣೆಗಳು ಆಡಳಿತದ ವೆಚ್ಚಗಳು (ನಿರ್ವಹಣೆಯ ವೆಚ್ಚಗಳು) ಮತ್ತು ವ್ಯವಹಾರದ ಸಂಗ್ರಹಣೆಯ ವೆಚ್ಚ (ಏಜೆನ್ಸಿ ಕಮಿಷನ್) ಗಳನ್ನೊಳಗೊಂಡಿರುತ್ತದೆ. ಅನಿರೀಕ್ಷಿತ ಭಾರೀ ನಷ್ಟಗಳಿಗೆ ಮೊತ್ತವನ್ನು ಒದಗಿಸುವುದು ಸಹ ಅಗತ್ಯವಾಗಿದೆ.

ಕೊನೆಯದಾಗಿ, ವಿಮೆಯು ಇತರ ಯಾವುದೇ ವ್ಯವಹಾರದಂತೆ ವಾಣಿಜ್ಯ ಆಧಾರದ ಮೇಲೆ ವಹಿವಾಟು ನಡೆಸುವುದರಿಂದ, ವ್ಯಾಪಾರದಲ್ಲಿ ಹೂಡಿಕೆ ಮಾಡಿದ ಬಂಡವಾಳದ ಮೇಲೆ ಲಾಭದ ಹಣವನ್ನು ಒದಗಿಸುವುದು ಅವಶ್ಯಕವಾಗಿರುತ್ತದೆ.

ಆದ್ದರಿಂದ, ವೆಚ್ಚಗಳು, ಮೀಸಲು ಮತ್ತು ಲಾಭಗಳನ್ನು ಒದಗಿಸಲು ಶೇಕಡಾವಾರುಗಳನ್ನು ಸೇರಿಸುವ ಮೂಲಕ 'ಶುದ್ಧ ಪ್ರೀಮಿಯಂ' ಅನ್ನು ಯೋಗ್ಯ ರೀತಿಯಿಂದ ಲೋಡ್ ಮಾಡ(ಹೆಚ್ಚಿಸ)ಲಾಗುತ್ತದೆ.

**ಕಂತಿನ ಅಂತಿಮ ದರವು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ :**

- ✓ ನಷ್ಟದ ಪಾವತಿಗಳು
- ✓ ನಷ್ಟದ ವೆಚ್ಚಗಳು (ಉದಾ. ಸರ್ವೇಕ್ಷಣದಾರರ ಶುಲ್ಕಗಳು)
- ✓ ಏಜೆನ್ಸಿ ಕಮಿಷನ್
- ✓ ನಿರ್ವಹಣಾ ವೆಚ್ಚಗಳು
- ✓ ಅನಿರೀಕ್ಷಿತ ಭಾರಿ ಮೊತ್ತದ ನಷ್ಟಗಳಿಗಾಗಿ ಮೀಸಲು ಉದಾ. 5 ನಿರೀಕ್ಷಿತ ಒಟ್ಟು ಹಾನಿಗಳ ವಿರುದ್ಧ 7 ಒಟ್ಟು ಹಾನಿಗಳು
- ✓ ಲಾಭಾಂಶ ಹಣ

ಎಲ್ಲ ಸಂಬಂಧಿತ ಬೆಲೆ ನಿರ್ಧಾರದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಮೂಲಕ, ಒಂದೇ ರೀತಿಯ ಮತ್ತು ಗುಣಮಟ್ಟದ ಅಪಾಯಗಳ ನಡುವೆ ದರಗಳು ಸಾಕಾಗುವಷ್ಟು, ಅತಿಯಾಗಿರುವ ಅಥವಾ ಸರಿಯಾಗಿಲ್ಲದ ತಾರತಮ್ಯವನ್ನು ಖಚಿತಪಡಿಸಿಕೊಳ್ಳಬಹುದು.

**ನಿಮ್ಮನ್ನು ಪರೀಕ್ಷಿಸಿ 2**

ಶುದ್ಧ ಕಂತು ಎಂದರೇನು?

I. ನಷ್ಟವನ್ನು ಮಾತ್ರ ಪಾವತಿಸಲು ಸಾಕಾಗುವಷ್ಟು ದೊಡ್ಡದಾಗಿರುವ ಕಂತು

II. ಸಮಾಜದ ಕನಿಷ್ಠ ಸದಸ್ಯರಿಗೆ ಅನ್ವಯವಾಗುವ ಕಂತು

III. ಆಡಳಿತಾತ್ಮಕ ವೆಚ್ಚಗಳನ್ನು ಸೇರಿಸಿದ ನಂತರದ ಕಂತು

IV. ನಷ್ಟದ ಅನುಭವದ ಇತ್ತೀಚಿನ ಅವಧಿಯಿಂದ ಪಡೆಯಲಾದ ಕಂತು

**2. ಕಡಿತ**

'ಕಡಿತ' ಅಥವಾ 'ಹೆಚ್ಚುವರಿ' ಎಂಬುದು ವಿಮಾಗಾರ ಮತ್ತು ವಿಮಾದಾರರ ನಡುವಿನ ವೆಚ್ಚ-ಹಂಚಿಕೆಯ ನಿಬಂಧನೆಯಾಗಿದೆ. ನಿರ್ದಿಷ್ಟ ಮಿತಿಗಿಂತ ಹೆಚ್ಚಿನ ಕ್ಲೇಮ್ ಗಳು ಮಾತ್ರ ವಿಮಾಗಾರರಿಂದ ಪಾವತಿಸಲ್ಪಡುತ್ತವೆ ಎಂದು ಕಡಿತಗೊಳಿಸುವಿಕೆಗಳು ಖಾತ್ರಿಪಡಿಸುತ್ತವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನಿಗದಿತ ಮಟ್ಟಕ್ಕಿಂತ ಕಡಿಮೆ ಮಟ್ಟದ ಕ್ಲೇಮ್ ಗಳಿಗೆ ವಿಮಾಗಾರರು ಜವಾಬ್ದಾರರಾಗಿರುವುದಿಲ್ಲ. ಮಟ್ಟ ಅಥವಾ ಮಿತಿಯನ್ನು ನಿಗದಿತ ಮೊತ್ತ, ಅಥವಾ ಶೇಕಡಾವಾರು ಅಥವಾ ನಿಗದಿತ ಅವಧಿಯೆಂದು ಹೊಂದಿಸಲಾಗುವುದು (ಅದನ್ನು ಸಮಯ-ಹೆಚ್ಚುವರಿ ಎಂದು ಕರೆಯಲಾಗುತ್ತದೆ.) ಆರೋಗ್ಯ ಪಾಲಿಸಿಗಳ ಸಂದರ್ಭದಲ್ಲಿ, ಆಸ್ಪತ್ರೆಗೆ ದಾಖಲಾತಿಯು ನಿಗದಿತ ಸಂಖ್ಯೆಯ ದಿನಗಳು/ಗಂಟೆಗಳನ್ನು ಮೀರಿದ್ದರೆ ಮಾತ್ರ ಕ್ಲೇಮ್ ಗಳನ್ನು ಪಾವತಿಸುವ ಷರತ್ತು ಇರಬಹುದು. ಕಡಿತಗಳನ್ನು ಜೀವ ವಿಮಾ ಪಾಲಿಸಿಗಳಲ್ಲಿ ಬಳಸಲಾಗುವುದಿಲ್ಲ.

ಆಸ್ತಿ, ಮೋಟಾರು ಮತ್ತು ಗೃಹ ವಿಮೆಗಳಂತಹ ಉತ್ಪನ್ನಗಳಲ್ಲಿ, ಕಡಿತಗಳು ಪೂರ್ವನಿರ್ಧಾರಿತ ಮೊತ್ತವಾಗಿದ್ದು, ನಷ್ಟ ಪರಿಹಾರದ ಕ್ಲೇಮ್ ದೊಂದಿಗೆ ವಿಮಾದಾರರು ಭರಿಸಬೇಕಾಗುತ್ತದೆ. ಕಡಿತಗಳು ಕೆಲವು ಪಾಲಿಸಿಗಳಲ್ಲಿ ಕಡ್ಡಾಯವಾಗಿರಬಹುದು ಅಥವಾ ಸ್ವಯಂಪ್ರೇರಿತವಾಗಿರಬಹುದು. ವಿಮಾದಾರರು ಸ್ವಯಂಪ್ರೇರಣೆಯಿಂದ ಹೆಚ್ಚಿನ ಕಡಿತಗಳನ್ನು ಆಯ್ದುಕೊಂಡಾಗ ವಿಮಾಗಾರರು ಸಾಮಾನ್ಯವಾಗಿ ಕಡಿಮೆ ಮೊತ್ತದ ಕಂತುಗಳನ್ನು ವಿಧಿಸುತ್ತಾರೆ. ಏಜೆಂಟರು ನಿರ್ದಿಷ್ಟ ಕಡಿತಗೊಳಿಸುವಿಕೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಪರೀಕ್ಷಿಸಬೇಕು ಮತ್ತು ಕಡಿತಗೊಳಿಸುವಿಕೆಯು 'ಪ್ರತಿ ವರ್ಷಕ್ಕೆ' ಅಥವಾ 'ಪ್ರತಿ ಘಟನೆ'ಯ ಆಧಾರದ ಮೇಲೆ ಅನ್ವಯಿಸುತ್ತದೆಯೇ ಎಂದು ವಿಮಾದಾರರಿಗೆ ತಿಳಿಸಬೇಕು.

ಕಡಿತಗಳನ್ನು ಹೊಂದಲು ವಿವಿಧ ಕಾರಣಗಳಿವೆ. ಕಾರ್ಖಾನೆಗಳನ್ನು ಕವರ್ ಮಾಡುವ ಸಂಸ್ಥೆ(ಕಾರ್ಪೊರೇಟ್)ಯ ಗ್ರಾಹಕರು, ಬಹು ಸರಕು ರವಾನೆಗಳು, ಉದ್ಯೋಗಿಗಳ ದೊಡ್ಡ ಗುಂಪುಗಳು, ಸಾರ್ವಜನಿಕ ಹೊಣೆ ಮಾನ್ಯತೆ ಇತ್ಯಾದಿಗಳನ್ನು ಒಳಗೊಂಡಿರುವ ಮತ್ತು ಬೃಹತ್ ಮೊತ್ತದ ವಿಮಾ ಮೊತ್ತವನ್ನು ಹೊಂದಿರುವವರು, ಸಣ್ಣ ಕ್ಲೇಮ್ ಗಳನ್ನು ತಾವಾಗಿಯೇ ಹೊರಲು ಬಯಸುತ್ತಾರೆ ಮತ್ತು ಕ್ಲೇಮ್ ಗಳನ್ನು ಸಾಬೀತುಪಡಿಸಲು ಬೇಕಾಗುವ ದಾಖಲೆಗಳನ್ನು ನೀಡುವುದನ್ನು ತಪ್ಪಿಸಬಹುದು. ಉದಾಹರಣೆಗೆ,

ಲಕ್ಷಾಂತರ ರೂಪಾಯಿಗಳ ಕಂತನ್ನು ಪಾವತಿಸುವ ಒಂದು ದೊಡ್ಡ ಕಾರ್ಖಾನೆಯ ಮಾಲೀಕರು, ಸುಮಾರು ರೂ.**2,000** ಮೊತ್ತದ ಯಂತ್ರದ ಸಣ್ಣ ದುರಸ್ತಿ ವೆಚ್ಚದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ.

ಕೆಲವು ವಿಧದ ಪಾಲಿಸಿಗಳಲ್ಲಿ ವಿಮಾದಾರರು ಅವನು/ಅವಳು ಸರಿಯಾದ ಕಾಳಜಿಯನ್ನು ತೆಗೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ನಷ್ಟದ ಸ್ವಲ್ಪ ಭಾಗವನ್ನು ಭರಿಸಬೇಕಾಗಬಹುದು. ಉದಾಹರಣೆಗೆ, ವಿಮೆ ಇದೆ ಎಂಬ ಕಾರಣಕ್ಕೆ ಆರೋಗ್ಯ ವಿಮಾದಾರರು ದುಬಾರಿ ಆಸ್ಪತ್ರೆಯ ಕೊಠಡಿಗಳಲ್ಲಿ ಹೆಚ್ಚು ಖರ್ಚು ಮಾಡಬಾರದೆಂದು ವಿಮಾಗಾರರು ಕಡಿತವನ್ನು ಒತ್ತಾಯಿಸಬಹುದು. ಕೆಲವು ವಿಮಾಗಾರರು ಸಣ್ಣ ಕ್ಲೇಮ್ ಗಳನ್ನು ಪ್ರಕ್ರಿಯೆಗೊಳಿಸಲು ಸಮಯವನ್ನು ಕಳೆಯಬಯಸುವುದಿಲ್ಲ. ಅಲ್ಲದೆ, ಕೆಲವು ಸಂದರ್ಭಗಳಲ್ಲಿ, ವಿಮಾದಾರರು ಒಂದು ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯ ಸಣ್ಣ ನಷ್ಟಗಳ ಗುಂಪಿನಿಂದ ಉಂಟಾಗುವ ಹಣಕಾಸಿನ ಒತ್ತಡಕ್ಕೆ ಒಡ್ಡಿಕೊಳ್ಳಲು ಬಯಸುವುದಿಲ್ಲ. ಉದಾಹರಣೆಗೆ, ಒಂದು ಸಣ್ಣ ಪ್ರವಾಹವು ಕೈಗಾರಿಕಾ ಕ್ಷೇತ್ರ ಪ್ರದೇಶದಲ್ಲಿ ಪ್ರದೇಶದ ಎಲ್ಲ ಗೋದಾಮುಗಳಿಂದ ಅನೇಕ ಕಡಿಮೆ ಮೌಲ್ಯದ ಕ್ಲೇಮ್ ಗಳನ್ನು ಉಂಟುಮಾಡಬಹುದು.

**ಫ್ರ್ಯಾಂಚೈಜ್:** ಫ್ರ್ಯಾಂಚೈಜ್ ಇದು ಸಾಮಾನ್ಯವಾಗಿ ಕಡಿತದ ಸಂದರ್ಭದಲ್ಲಿಯಂತೆ ವಿಮಾ ಮೊತ್ತದ ಶೇಕಡಾವಾರು ಅದಕ್ಕಿಂತ ಕೆಳಗೆ ಯಾವುದೇ ಕ್ಲೇಮ್ ಸ್ವೀಕಾರಾರ್ಹವಾಗದಂತಹ, ಕನಿಷ್ಠ ಮಟ್ಟವನ್ನು ಸೂಚಿಸುತ್ತದೆ. ಆದಾಗ್ಯೂ, ಕ್ಲೇಮ್ ಮೊತ್ತವು ಫ್ರ್ಯಾಂಚೈಜ್ ಮಿತಿಯನ್ನು ಮೀರಿದಾಗ, ಸಂಪೂರ್ಣ ಕ್ಲೇಮ್ ಅನ್ನು ವಿಮಾಗಾರರು ಒಪ್ಪಿಕೊಳ್ಳುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ವಿಮಾ ಕಂಪನಿಗಳ ಹಣಕಾಸಿನ ಜವಾಬ್ದಾರಿಯ ಕನಿಷ್ಠ ಮಿತಿಯನ್ನು ಫ್ರ್ಯಾಂಚೈಜ್ ನಿರ್ಧರಿಸುತ್ತದೆ. ಫ್ರ್ಯಾಂಚೈಜ್ ಮಿತಿಗಿಂತ ಕೆಳಗಿನ ಕ್ಲೇಮ್ ಗಳ ಸಂದರ್ಭದಲ್ಲಿ, ಕಡಿತದಲ್ಲಿಯಂತೆ ಅದೇ ರೀತಿಯಲ್ಲಿ ಮತ್ತು ಅದೇ ಕಾರಣಗಳಿಗಾಗಿ ಪಾಲಿಸಿಗೆ ಅನ್ವಯಿಸುತ್ತದೆ ಆದರೆ ಫ್ರ್ಯಾಂಚೈಜ್ ಮಿತಿಯನ್ನು ಮೀರಿದ ಕ್ಲೇಮ್ ಸಂದರ್ಭದಲ್ಲಿ, ನಷ್ಟದ ಪೂರ್ಣ ಮೊತ್ತವನ್ನು ಪಾವತಿಸಲಾಗುತ್ತದೆ.

## D. ಬೆಲೆನಿರ್ಧಾರದ ಅಂಶಗಳು

ದರಗಳನ್ನು ಸೇರಿಸಲು ಮತ್ತು ಬೆಲೆನಿರ್ಧಾರದ ಯೋಜನೆಯನ್ನು ಮಾಡಲು ಬಳಸಲಾಗುವ ಸಂಬಂಧಿತ ಅಂಶಗಳನ್ನು **ಬೆಲೆನಿರ್ಧಾರದ ಅಂಶ**ಗಳೆಂದು ಉಲ್ಲೇಖಿಸಲಾಗುತ್ತದೆ. ವಿಮಾಗಾರರು ಅಪಾಯವನ್ನು ನಿರ್ಧರಿಸಲು ಮತ್ತು ತಾವು ವಿಧಿಸಬೇಕಾದ ಬೆಲೆಯನ್ನು ನಿರ್ಧರಿಸಲು ' ಬೆಲೆನಿರ್ಧಾರದ ಅಂಶಗಳನ್ನು' ಬಳಸುತ್ತಾರೆ.

- ✓ ಒಂದು ಮೂಲ ದರವನ್ನು ಸ್ಥಾಪಿಸಲು ವಿಮಾಗಾರರು ತಮ್ಮ ಮೌಲ್ಯಮಾಪನಗಳನ್ನು ಬಳಸುತ್ತಾರೆ.
- ✓ ಅಪಾಯದ ಆಸ್ತಿಯ ಮೇಲಿನ ಉತ್ತಮ ಅಗ್ನಿಶಾಮಕ ರಕ್ಷಣೆಯಂತಹ ಸಕಾರಾತ್ಮಕ ವೈಶಿಷ್ಟ್ಯಗಳಿಗೆ ರಿಯಾಯಿತಿಗಳೊಂದಿಗೆ ಮತ್ತು ಆವರಣದಲ್ಲಿ ದಹಿಸುವ ವಸ್ತುಗಳ ಉಪಸ್ಥಿತಿಯಂತಹ ಪ್ರತಿಕೂಲ ವೈಶಿಷ್ಟ್ಯಗಳಿಗೆ ಅನ್ವಯಿಸಲಾದ ಲೋಡಿಂಗ್ ಗಳಿಂದ ವಿಮಾದಾರರು ಈ ದರವನ್ನು ಸರಿಹೊಂದಿಸುತ್ತಾರೆ.

✓ ಜೀವ ವಿಮೆಯಲ್ಲಿ ಪ್ರತಿಕೂಲ ಆರೋಗ್ಯ, ಅಭ್ಯಾಸಗಳು, ಅನುವಂಶಿಕತೆ ಅಥವಾ ಔದ್ಯೋಗಿಕ ಅಂಶಗಳಿಗೆ ಲೋಡಿಂಗ್ ಅನ್ನು ಅನ್ವಯಿಸುವುದು ಸಾಮಾನ್ಯ ಅಭ್ಯಾಸವಾಗಿದೆ.

**ಪ್ರಮುಖ ಪದಗಳು**

- ಕಡಿತಗಳು
- ಫ್ರಾಂಚೈಜ್

**Answers to Test Yourself**

**ನಿಮ್ಮನ್ನು ಪರೀಕ್ಷಿಸಿಯ ಉತ್ತರಗಳು**

**ಉತ್ತರ 1** - ಸರಿಯಾದ ಉತ್ತರ I ಆಗಿದೆ

**ಉತ್ತರ 2** - ಸರಿಯಾದ ಉತ್ತರ I ಆಗಿದೆ

# ಅಧ್ಯಾಯ C-06

# ಕ್ಲೇಮ್ ಗಳ ಪ್ರಕ್ರಿಯೆ

**ಅಧ್ಯಾಯ ಪರಿಚಯ**

ನಷ್ಟಗಳ ಅನುಭವವಾದಾಗ ಮಾತ್ರ ವಿಮಾದಾರರು ವಿಮೆಯ ಪ್ರಯೋಜನವನ್ನು ಅನುಭವಿಸುತ್ತಾರೆ. ಸಂಪೂರ್ಣ ವಿಮಾ ಉದ್ಯಮವು ವಿಮಾದಾರರು ಎದುರಿಸುತ್ತಿರುವ ನಷ್ಟಗಳಿಗೆ ಸಂವೇದನಾಶೀಲವಾಗಿರುತ್ತದೆ ಮತ್ತು ಸಾಧ್ಯವಾದಷ್ಟು ಸೌಹಾರ್ದಯುತವಾಗಿ ಮತ್ತು ಉಂಟಾಗಿರುವ ಕ್ಲೇಮ್ ಗಳನ್ನು ಸಾಧ್ಯವಾದಷ್ಟು ವೇಗವಾಗಿ ಇತ್ಯರ್ಥಗೊಳಿಸಲು ಪ್ರಯತ್ನಿಸುತ್ತದೆ.

**ಕಲಿಕೆಯ ಫಲಿತಾಂಶಗಳು**

A. **ನಷ್ಟದ ಮೌಲ್ಯಮಾಪನ ಮತ್ತು ಕ್ಲೇಮ್ ಇತ್ಯರ್ಥ**

B. **ಕ್ಲೇಮ್ ನ ಪ್ರಕಾರಗಳು**

C. ಮಧ್ಯಸ್ಥಿಕೆ

D. **ವಿವಾದ ನಿವಾರಣೆಯ ಇತರ ಕಾರ್ಯವ್ಯವಸ್ಥೆಗಳು**

ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ, ನೀವು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ:

**1.** ಕ್ಲೇಮ್ ಇತ್ಯರ್ಥ

**2.** ಕ್ಲೇಮ್ ಪ್ರಕ್ರಿಯೆಗಳ ಮಹತ್ವ

## A. ನಷ್ಟದ ಮೌಲ್ಯಮಾಪನ ಮತ್ತು ಕ್ಲೇಮ್ ಇತ್ಯರ್ಥ

ಕ್ಲೇಮ್ ಗಳ ಮೌಲ್ಯಮಾಪನ (ನಷ್ಟ ಮೌಲ್ಯಮಾಪನ) ಎನ್ನುವುದು ವಿಮಾದಾರರು ಅನುಭವಿಸಿದ ನಷ್ಟವನ್ನು ವಿಮಾ ಪಾಲಿಸಿಯಲ್ಲಿ ಸೇರಲ್ಪಟ್ಟಿದೆಯೇ ಮತ್ತು ನಷ್ಟವು ಯಾವುದೇ ಹೊರತುಗಳಡಿಯಲ್ಲಿ ಬರುವುದಿಲ್ಲ ಮತ್ತು ಯಾವುದೇ ಖಾತರಿಯ ಉಲ್ಲಂಘನೆಯಿಲ್ಲ ಎಂದು ನಿರ್ಧರಿಸುವ ಪ್ರಕ್ರಿಯೆಯಾಗಿದೆ.

ಕ್ಲೇಮ್ ಗಳ ಇತ್ಯರ್ಥವು ನ್ಯಾಯಸಮ್ಮತತೆಯ ಪರಿಗಣನೆಗಳನ್ನು ಆಧರಿಸಿರಬೇಕು. ಕ್ಲೇಮ್ ನ ತ್ವರಿತ ಇತ್ಯರ್ಥವು ವಿಮಾ ಕಂಪನಿಯ ಸೇವೆಗಳಲ್ಲಿಯ ದಕ್ಷತೆಯ ಮಾನದಂಡವಾಗಿದೆ. ಪ್ರತಿ ಕಂಪನಿಯು ಕ್ಲೇಮ್ ಗಳ ಪ್ರಕ್ರಿಯೆಯಲ್ಲಿ ತೆಗೆದುಕೊಳ್ಳುವ ಸಮಯದ ಬಗ್ಗೆ ಉದ್ಯೋಗಿಗಳು ಅನುಸರಿಸುವ ಆಂತರಿಕ ಮಾರ್ಗಸೂಚಿಗಳನ್ನು ಹೊಂದಿದೆ,.

ಇದನ್ನು ಸಾಮಾನ್ಯವಾಗಿ "ಟರ್ನಅರೌಂಡ್ ಟೈಮ್" (ಟಿಎಟಿ**)** ಎಂಬ ಪದದಿಂದ ಕರೆಯಲಾಗುತ್ತದೆ. ಕೆಲವು ವಿಮಾಗಾರರು ಆನ್ ಲೈನ್ ನಲ್ಲಿ ಕಾಲಕಾಲಕ್ಕೆ ಕ್ಲೇಮ್ ಸ್ಥಿತಿಯನ್ನು ಪರಿಶೀಲಿಸುವ ಸೌಲಭ್ಯವನ್ನು ಸಹ ಸ್ಥಾಪಿಸಿದ್ದಾರೆ. ಕೆಲವು ವಿಮಾ ಕಂಪನಿಗಳು ಕ್ಲೇಮ್ ಗಳ ತ್ವರಿತ ಪ್ರಕ್ರಿಯೆಗಾಗಿ ಕ್ಲೇಮ್ ಹಬ್ ಅನ್ನು ಸಹ ಸ್ಥಾಪಿಸಿವೆ.

**ವಿಮೆಯ ಕ್ಲೇಮ್ ನಲ್ಲಿಯ ಪ್ರಮುಖ ಅಂಶಗಳು**

ಹೆಚ್ಚಿನ ಕಂಪನಿಗಳು ತಮ್ಮ ಟಿಎಟಿ ಗೆ ಬದ್ಧರಾಗಿದ್ದರೂ, ಕ್ಲೇಮ್‌ಅನ್ನು ಇತ್ಯರ್ಥಪಡಿಸಲು ನೋಡಬೇಕಾದ ಅಂಶಗಳನ್ನು ತಿಳಿದುಕೊಳ್ಳುವುದು ಏಜೆಂಟರಿಗೆ ಮುಖ್ಯವಾಗಿದೆ. ಜೀವೇತರ ಕ್ಲೇಮ್ ಗಳಿಗಾಗಿ ಆರು ಪ್ರಮುಖ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

- **i.** ನಷ್ಟವನ್ನು ಉಂಟುಮಾಡುವ ಘಟನೆಯು ಪಾಲಿಸಿಯ ವ್ಯಾಪ್ತಿಯಲ್ಲಿದೆಯೇ
- **ii.** ವಿಮಾದಾರರು ತಮ್ಮ ಪಾಲಿಸಿ ಷರತ್ತುಗಳನ್ನು ಅನುಸರಿಸಿದ್ದಾನೆಯೇ
- **iii.** ಖಾತರಿಗಳ ಅನುಸರಣೆ. ಸಮೀಕ್ಷೆಯ ವರದಿಯು ಖಾತರಿಗಳನ್ನು ಅನುಸರಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಸೂಚಿಸುತ್ತದೆ.
- **iv.** ಪಾಲಿಸಿಯ ವ್ಯಾಪಕತೆ/ಜಾರಿಯಲ್ಲಿರುವ ಸಮಯದಲ್ಲಿ, ಪ್ರಸ್ತಾಪಕರಿಂದ ಅತ್ಯಂತ ಉತ್ತಮ ನಂಬಿಕೆಯ ಅನುಸರಣೆ.
- **v.** ನಷ್ಟ ಸಂಭವಿಸಿದ ಸಂದರ್ಭದಲ್ಲಿ, ವಿಮಾದಾರರು ತಾವು ವಿಮೆಯನ್ನೇ ಮಾಡಿಲ್ಲವೋ ಎಂಬುವಂತೆ ವರ್ತಿಸುವುದನ್ನು ಅಪೇಕ್ಷಿಸಲಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಅವರು ನಷ್ಟವನ್ನು ಕಡಿಮೆ ಮಾಡಲು ಕ್ರಮಗಳನ್ನು ತೆಗೆದುಕೊಳ್ಳುವ ಕರ್ತವ್ಯವನ್ನು ಹೊಂದಿದ್ದಾರೆ.

**vi.** ಪಾವತಿಸಬೇಕಾದ ಮೊತ್ತದ ನಿರ್ಣಯ. ಪಾವತಿಸಬೇಕಾದ ನಷ್ಟದ ಮೊತ್ತವು ವಿಮಾ ಮೊತ್ತವನ್ನು ಅವಲಂಬಿಸಿರುತ್ತದೆ. ಆದಾಗ್ಯೂ, ಪಾವತಿಸಬೇಕಾದ ಮೊತ್ತವು ಈ ಕೆಳಗಿನವುಗಳನ್ನು ಸಹ ಅವಲಂಬಿಸಿರುತ್ತದೆ:

- ✓ ಬಾಧಿತ ಆಸ್ತಿಯಲ್ಲಿ ವಿಮಾದಾರನ ವಿಮಾಸಕ್ತಿಯ ಪ್ರಮಾಣ
- ✓ ಅವಶೇಷ/ಉಳಿಕೆಯ ಮೌಲ್ಯ
- ✓ ಕಡಿಮೆ ವಿಮೆಯ ಅನ್ವಯಿಸುವಿಕೆ
- ✓ ಕೊಡುಗೆಯ ಅನ್ವಯಿಸುವಿಕೆ ಮತ್ತು ಸಬ್ರೋಗೇಶನ್ ಷರತ್ತುಗಳು

ಜೀವವಿಮೆಗೆ ಸಂಬಂಧಿಸಿದ ಕ್ಲೇಮ್ ಗಳ ಸಂದರ್ಭದಲ್ಲಿ, ವಿಮಾಗಾರರು ಈ ಕೆಳಗಿನವುಗಳನ್ನು ಪರಿಶೀಲಿಸುತ್ತಾರೆ

1) ಪಾಲಿಸಿ ಷರತ್ತುಗಳನ್ನು ಉಲ್ಲಂಘಿಸಲಾಗಿಲ್ಲ
2) ಅತ್ಯುತ್ತಮ ನಂಬಿಕೆಯ ತತ್ವವನ್ನು ಅನುಸರಿಸಲಾಗಿದೆ ಮತ್ತು
3) ಯಾವುದೇ ವಾಸ್ತವಿಕ ಸಂಗತಿಯನ್ನು ಉದ್ದೇಶಪೂರ್ವಕವಾಗಿ ಮತ್ತು ವಂಚನೆಯಿಂದ ಮರೆಮಾಡಲಾಗಿಲ್ಲ

## B. ಕ್ಲೇಮ್ ಗಳ ವರ್ಗಗಳು

ವಿಮೆಯ ಕ್ಲೇಮ್ ಗಳು ಈ ಕೆಳಗಿನ ವರ್ಗಗಳಿಗೆ ಸೇರುತ್ತವೆ:

### i. ಪ್ರಮಾಣಿತ ಕ್ಲೇಮ್ ಗಳು

ಈ ಕ್ಲೇಮ್ ಗಳು ಪಾಲಿಸಿಯ ನಿಯಮಗಳು ಮತ್ತು ಷರತ್ತುಗಳಲ್ಲಿ ಸ್ಪಷ್ಟವಾಗಿರುವ ಕ್ಲೇಮ್ ಗಳಾಗಿವೆ. ಕ್ಲೇಮ್ ನ ಮೌಲ್ಯಮಾಪನವನ್ನು ವ್ಯಾಪ್ತಿ ಮತ್ತು ಆಯ್ಕೆಮಾಡಲಾದ ವಿಮಾ ಮೊತ್ತವನ್ನು ಮತ್ತು ವಿವಿಧ ವರ್ಗಗಳ ವಿಮೆಗಾಗಿ ನಿಗದಿಪಡಿಸಲಾದ ನಷ್ಟಪರಿಹಾರದ ಇತರ ವಿಧಾನಗಳನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತದೆ.

### ii. ಸರಾಸರಿ ಅಥವಾ ಸರಾಸರಿ ವಿಭಾಗದ ಷರತ್ತು

ಈ ಷರತ್ತು ಕೆಲವು ಪಾಲಿಸಿಗಳಲ್ಲಿರುವ ಷರತ್ತಾಗಿದ್ದು, ವಿಮಾದಾರನು ತನ್ನ ಆಸ್ತಿಯನ್ನು ಅದರ ನೈಜ ಮೌಲ್ಯಕ್ಕಿಂತ ಕಡಿಮೆ ಮೊತ್ತಕ್ಕೆ ವಿಮೆ ಮಾಡಿಸಿರುವುದಕ್ಕಾಗಿ ದಂಡ ವಿಧಿಸುತ್ತದೆ. ಕ್ಲೇಮ್ ಸಂದರ್ಭದಲ್ಲಿ ವಿಮಾದಾರರು ವಿಮೆ ಮಾಡಿದ ಮೊತ್ತಕ್ಕೆ ಅನುಗುಣವಾಗಿ ಪ್ರಮಾಣಾನುಗುಣವಾಗಿ ಕಡಿಮೆಯಾದ ತಮ್ಮ ನೈಜ ನಷ್ಟಕ್ಕಿಂತ ಕಡಿಮೆ ಮೊತ್ತವನ್ನು ಪಡೆಯುತ್ತಾನೆ. ಜೀವೇತರ ವಿಮೆಯ ಸಂದರ್ಭದಲ್ಲಿ ಇಂತಹ ಸಂದರ್ಭಗಳು ಹೆಚ್ಚು ಸಂಭವಿಸುತ್ತವೆ.

### iii. ನಿಸರ್ಗಕ್ಷೋಭೆಯ ಗಂಡಾಂತರಗಳು - ದುರಂತದ ನಷ್ಟಗಳು

ಬಿರುಗಾಳಿ, ಚಂಡಮಾರುತ, ಪ್ರವಾಹ, ಮುಳುಗಡೆ ಮತ್ತು ಭೂಕಂಪದಂತಹ ನೈಸರ್ಗಿಕ ಗಂಡಾಂತರಗಳನ್ನು "ನಿಸರ್ಗದ ಕ್ಷೋಭೆ" ಎಂದು ಕರೆಯಲಾಗುತ್ತದೆ. ಈ ಅಪಾಯಗಳು ಪೀಡಿತ ಪ್ರದೇಶದಲ್ಲಿ ವಿಮಾಗಾರರ ಅನೇಕ ಪಾಲಿಸಿಗಳಿಗೆ ನಷ್ಟವನ್ನುಂಟುಮಾಡಬಹುದು. ಜೀವೇತರ ವಿಮೆಯ ಕ್ಲೇಮ್ ಗಳ ಕೆಲವು ವರ್ಗಗಳ ಮೌಲ್ಯಮಾಪನಕ್ಕಾಗಿ ಸರ್ವೇಕ್ಷಣದಾರರನ್ನು ನೇಮಿಸಲಾಗುತ್ತದೆ.

ಅಂತಹ ವ್ಯಾಪಕ ಮತ್ತು ಅನಾಹುತಕಾರಿ ನಷ್ಟಗಳಲ್ಲಿ, ಆರಂಭಿಕ ಮೌಲ್ಯಮಾಪನ ಮತ್ತು ನಷ್ಟವನ್ನು ಕಡಿಮೆಗೊಳಿಸುವ ಪ್ರಯತ್ನಗಳಿಗಾಗಿ ತಕ್ಷಣವೇ ನಷ್ಟದ ಸ್ಥಳಕ್ಕೆ ಹೋಗಲು ಸರ್ವೇಕ್ಷಣದಾರನ್ನು ಕೇಳಲಾಗುತ್ತದೆ. ಅದೇ ಸಮಯದಲ್ಲಿ, ವಿಶೇಷವಾಗಿ ಒಳಗೊಂಡಿರುವ ಮೊತ್ತವು ದೊಡ್ಡದಾಗಿದ್ದರೆ ನಷ್ಟದ ಸ್ಥಳಕ್ಕೆ ವಿಮಾಗಾರರ ಅಧಿಕಾರಿಗಳು ಸಹ ಭೇಟಿ ನೀಡುತ್ತಾರೆ. ಭೇಟಿಯ ಉದ್ದೇಶವು ನಷ್ಟದ ಸ್ವರೂಪ ಮತ್ತು ಪ್ರಮಾಣದ ಬಗ್ಗೆ ತಕ್ಷಣದ ಕಲ್ಪನೆಯನ್ನು ಪಡೆಯುವುದಾಗಿರುತ್ತದೆ.

ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳನ್ನು ಸರ್ವೇಕ್ಷಣದಾರರು ಎದುರಿಸಿದರೆ ಮತ್ತು ವಿಮಾಗಾರರಿಂದ ಮಾರ್ಗದರ್ಶನ ಮತ್ತು ಸೂಚನೆಗಳನ್ನು ಅಪೇಕ್ಷಿಸಿದರೆ ಪ್ರಾಥಮಿಕ ವರದಿಗಳನ್ನು ಸಹ ಸಲ್ಲಿಸಲಾಗುತ್ತದೆ ಮತ್ತು ಅಗತ್ಯವಿದ್ದರೆ ಅವರಿಗೆ ವಿಮಾದಾರರೊಂದಿಗೆ ಸಮಸ್ಯೆಗಳನ್ನು ಚರ್ಚಿಸಲು ಅವಕಾಶವನ್ನು ನೀಡಲಾಗುತ್ತದೆ.

### iv. ಖಾತೆ ಪಾವತಿ(ಯಾವುದೇ ಲೆಕ್ಕಾಚಾರ ಪೂರ್ಣವಾಗುವ ಮೊದಲು ಮಾಡಲಾದ ಅಂದಾಜು ಮೊತ್ತದ ಪಾವತಿ)

ಜೀವೇತರ ವಿಮಾ ಕ್ಲೇಮ್ ಗಳಲ್ಲಿ, ರಿಪೇರಿ ಮತ್ತು/ಅಥವಾ ಬದಲಿಗಳನ್ನು ದೀರ್ಘಕಾಲದವರೆಗೆ ಮಾಡಲಾಗುತ್ತಿರುವಲ್ಲಿ ಪ್ರಾಥಮಿಕ ವರದಿಗಳ ಹೊರತಾಗಿ, ಮಧ್ಯಂತರ ವರದಿಗಳನ್ನು ಕಾಲಕಾಲಕ್ಕೆ ಸಲ್ಲಿಸಬಹುದು. ಮಧ್ಯಂತರ ವರದಿಗಳು ವಿಮಾಗಾರರಿಗೆ ನಷ್ಟದ ಮೌಲ್ಯಮಾಪನದ ಅಭಿವೃದ್ಧಿಯ ಕಲ್ಪನೆಯನ್ನು ನೀಡುತ್ತವೆ. ವಿಮಾದಾರರು ಬಯಸಿದಲ್ಲಿ ಕ್ಲೇಮ್ ನ "ಖಾತೆ ಪಾವತಿ"ಗಾಗಿ ಶಿಫಾರಸು ಮಾಡಲು ಸಹ ಇದು ಸಹಾಯ ಮಾಡುತ್ತದೆ. ಇದು ಸಾಮಾನ್ಯವಾಗಿ ನಷ್ಟವು ದೊಡ್ಡದಾಗಿದ್ದಲ್ಲಿ ಮತ್ತು ಮೌಲ್ಯಮಾಪನವನ್ನು ಪೂರ್ಣಗೊಳಿಸಲು ಹೆಚ್ಚು ಸಮಯ ಬೇಕಾಗುತ್ತಿರುವ ಸಂದರ್ಭದಲ್ಲಿ ಸಂಭವಿಸುತ್ತದೆ.

ಕ್ಲೇಮ್ ವ್ಯವಸ್ಥಿತವಾಗಿದೆ ಎಂದು ಕಂಡುಬಂದರೆ, ವಿಮಾದಾರರಿಗೆ/ಹಕ್ಕುದಾರರಿಗೆ ಪಾವತಿಯನ್ನು ಮಾಡಲಾಗುತ್ತದೆ ಮತ್ತು ಕಂಪನಿಯ ದಾಖಲೆಗಳಲ್ಲಿ ನಮೂದಿಸಲಾಗುತ್ತದೆ. ಸಹ-ವಿಮಾದಾರರು ಮತ್ತು ಮರುವಿಮಾದಾರು ಯಾರಾದರೂ ಇದ್ದರೆ ಅವರಿಂದ ಸೂಕ್ತವಾದ ಮರುಪಡೆಯುವಿಕೆಗಳನ್ನು ಮಾಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ, ಹಣವನ್ನು ಪಾವತಿಸಬೇಕಾದ ವ್ಯಕ್ತಿ ವಿಮಾದಾರರು ಆಗಿರಲಿಕ್ಕಿಲ್ಲ.

### v. ಡಿಸ್ಚಾರ್ಜ್ ವೌಚರ್‌ಗಳು

ಪಾಲಿಸಿಯಡಿಯಲ್ಲಿ ಡಿಸ್ಚಾರ್ಜ್ ವೌಚರ್‌ಅನ್ನು ಪಡೆದ ನಂತರವೇ ಕ್ಲೇಮ್ ಇತ್ಯರ್ಥವನ್ನು ಮಾಡಲಾಗುತ್ತದೆ. ಗಾಯಗಳಿಗೆ ಮಾಡಲಾದ ಕ್ಲೇಮ್ ಗಳಿಗೆ (ವೈಯಕ್ತಿಕ ಅಪಘಾತ ವಿಮೆಯಡಿಯಲ್ಲಿ) ಡಿಸ್ಚಾರ್ಜ್ ವೌಚರ್ ನ ಮಾದರಿ ಈ ಕೆಳಗಿನ ಸಾಲುಗಳಲ್ಲಿಯಂತೆ ಇರುತ್ತದೆ: (ಕಂಪನಿಯಿಂದ ಕಂಪನಿಗೆ ಬದಲಾಗಬಹುದು)

| | |
|---|---|
| ವಿಮಾದಾರರ ಹೆಸರು | |
| ಕ್ಲೇಮ್ ಸಂ. | ಪಾಲಿಸಿ ಸಂ. |
| ಕಂಪನಿ ಲಿಮಿಟೆಡ್‌ನಿಂದ | ಸ್ವೀಕರಿಸಲಾಗಿದೆ. |
| ದಿನಾಂಕದಂದು ಸಂಭವಿಸಿದ ಅಪಘಾತದ ಕಾರಣದಿಂದ ನನಗೆ/ನಮಗೆ ಉಂಟಾದ ಗಾಯಗಳ ಕಾರಣದಿಂದ ನನಗೆ/ನಮಗೆ ಪರಿಹಾರದ ಪೂರ್ಣ ಮತ್ತು ಅಂತಿಮ ಇತ್ಯರ್ಥದಲ್ಲಿ ಒಟ್ಟು ರೂ. __________ ಗಳನ್ನು ಪಡೆದಿದ್ದು ಕಂಪನಿಗೆ ನಾನು/ನಾವು ಈ ಡಿಸ್ಚಾರ್ಜ್ ವೌಚರ್ ಅನ್ನು ಹೇಳಲಾದ ಕ್ಲೇಮ್ ಗೆ ಸಂಬಂಧಿಸಿದಂತೆ ಪ್ರಸ್ತುತ ಅಥವಾ ಭವಿಷ್ಯದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಉದ್ಭವಿಸುವ ಪೂರ್ಣ ಮತ್ತು ಅಂತಿಮ ಇತ್ಯರ್ಥವಾಗಿ ನೀಡುತ್ತೇವೆ.. | |
| ದಿನಾಂಕ | (ಸಹಿ) |

### vi. ಇತ್ಯರ್ಥದ ನಂತರದ ಕ್ರಮ

ಅಂಡರ್ ರೈಟಿಂಗ್ ಗೆ ಸಂಬಂಧಿಸಿದಂತೆ ಜೀವೇತರ ಕ್ಲೇಮ್ ನ ಇತ್ಯರ್ಥದ ನಂತರ ತೆಗೆದುಕೊಂಡ ಕ್ರಮವು ಒಂದು ವರ್ಗದ ವ್ಯವಹಾರದಿಂದ ಇನ್ನೊಂದಕ್ಕೆ ಬದಲಾಗುತ್ತದೆ.

**ಉದಾಹರಣೆ**

ಬೆಂಕಿ ಪಾಲಿಸಿಯಡಿಯಲ್ಲಿ ಪಾವತಿಸಿದ ಕ್ಲೇಮ್ ಮೊತ್ತದ ಮಟ್ಟಿಗೆ ವಿಮಾ ಮೊತ್ತವು ಕಡಿಮೆಯಾಗುತ್ತದೆ. ಆದಾಗ್ಯೂ, ಪಾವತಿಸಿದ ಕ್ಲೇಮ್ ಮೊತ್ತದಿಂದ ಕಡಿತಗೊಳಿಸಲಾಗುವ ಪ್ರೋ-ರೇಟಾ ಕಂತು ಪಾವತಿಯ ಮೂಲಕ ಅದನ್ನು ಮರುಸ್ಥಾಪಿಸಬಹುದು.

ವೈಯಕ್ತಿಕ ಅಪಘಾತ ಪಾಲಿಸಿಯಡಿಯಲ್ಲಿ ವಿಮೆ ಮಾಡಲಾದ ಬಂಡವಾಳ ವಿಮಾ ಮೊತ್ತವನ್ನು ಪಾವತಿಸಿದ ನಂತರ, ಪಾಲಿಸಿಯು ರದ್ದುಗೊಳ್ಳುತ್ತದೆ.

ಅದೇ ರೀತಿಯಾಗಿ, ವೈಯಕ್ತಿಕ ನಿಷ್ಠೆ ಖಾತ್ರಿ ಪಾಲಿಸಿಯಡಿಯಲ್ಲಿ ಕ್ಲೇಮ್ ಪಾವತಿಯು ಅದಾಗಿಯೇ ಪಾಲಿಸಿಯನ್ನು ಕೊನೆಗೊಳಿಸುತ್ತದೆ.

### vii. ಅವಶೇಷ/ಉಳಿಕೆ

**ಅವಶೇಷ/ಉಳಿಕೆ** ಸಾಮಾನ್ಯವಾಗಿ ಹಾನಿಗೊಳಗಾದ ಆಸ್ತಿಯನ್ನು ಸೂಚಿಸುತ್ತದೆ. ನಷ್ಟದ ಪಾವತಿಯನ್ನು ಮಾಡಿದ ಮೇಲೆ, **ಅವಶೇಷ/ಉಳಿಕೆಯು** ವಿಮಾಗಾರರಿಗೆ ಸೇರುತ್ತದೆ.

**ಉದಾಹರಣೆ**

ಮೋಟಾರ್ ಕ್ಲೇಮ್ ಗಳನ್ನು ಒಟ್ಟು ನಷ್ಟದ ಆಧಾರದ ಮೇಲೆ ಇತ್ಯರ್ಥಗೊಳಿಸಿದಾಗ, ಹಾನಿಗೊಳಗಾದ ವಾಹನವನ್ನು ವಿಮಾಗಾರರು ಸ್ವಾಧೀನಪಡಿಸಿಕೊಳ್ಳುತ್ತಾರೆ. ಬೆಂಕಿ ಕ್ಲೇಮ್ ಗಳು, ಸಾಗರ ಸರಕು ಕ್ಲೇಮ್ ಗಳು ಇತ್ಯಾದಿಗಳಂತಹ ಇತರ ಜೀವೇತರ ವಿಮೆಗಳಲ್ಲಿ ಸಹ ಅವಶೇಷ/ಉಳಿಕೆ ಉಂಟಾಗಬಹುದು.

**ಕಂಪನಿಗಳು ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ ಅವಶೇಷವನ್ನು ವಿಲೇವಾರಿ ಮಾಡಲಾಗುತ್ತದೆ. ನಷ್ಟವನ್ನು ನಿರ್ಣಯಿಸಿದ ಸರ್ವೇಕ್ಷಣದಾರರು ವಿಲೇವಾರಿ ವಿಧಾನಗಳನ್ನು ಸಹ ಶಿಫಾರಸು ಮಾಡುತ್ತಾರೆ.**

**viii. ಮರಳಿಪಡೆಯುವಿಕೆ**

ಕ್ಲೇಮ್ ಗಳ ಇತ್ಯರ್ಥದ ನಂತರ, ವಿಮಾ ಒಪ್ಪಂದಗಳಿಗೆ ಅನ್ವಯವಾಗುವ ಸಬ್ರೋಗೇಶನ್ ಹಕ್ಕುಗಳಡಿಯಲ್ಲಿ ವಿಮಾಗಾರರು ವಿಮಾದಾರರ ಹಕ್ಕುಗಳು ಮತ್ತು ಪರಿಹಾರಗಳಿಗೆ ಮತ್ತು ಆಯಾ ಕಾನೂನುಗಳ ಅಡಿಯಲ್ಲಿ ನಷ್ಟಕ್ಕೆ ಜವಾಬ್ದಾರರಾಗಿರುವ ಮೂರನೇ ವ್ಯಕ್ತಿಯಿಂದ ಪಾವತಿಸಿದ ನಷ್ಟವನ್ನು ಮರುಪಡೆಯಲು ಅರ್ಹರಾಗಿರುತ್ತಾರೆ. ಹೀಗೆ, ವಿಮಾಗಾರರು ಹಡಗು ಕಂಪನಿಗಳು, ರೈಲ್ವೆಗಳು, ರಸ್ತೆ ವಾಹಕಗಳು, ವಿಮಾನಯಾನ ಸಂಸ್ಥೆಗಳು, ಪೋರ್ಟ್ ಟ್ರಸ್ಟ್ ಅಧಿಕಾರಿಗಳು ಇತ್ಯಾದಿಗಳಿಂದ ನಷ್ಟವನ್ನು ಮರುಪಡೆಯಬಹುದು.

**ಉದಾಹರಣೆ**

ಸರಕು ಬಟವಾಡೆಯನ್ನು ತಲುಪಿಸದಿದ್ದಲ್ಲಿ, ನಷ್ಟಕ್ಕೆ ವಾಹಕರು ಜವಾಬ್ದಾರರಾಗಿರುತ್ತಾರೆ. ಅದೇ ರೀತಿ, ಸುರಕ್ಷಿತವಾಗಿ ಇಳಿಸಲಾದ ಆದರೆ ತದನಂತರ ಕಾಣೆಯಾದ ಸರಕುಗಳಿಗೆ ಪೋರ್ಟ್ ಟ್ರಸ್ಟ್ ಜವಾಬ್ದಾರವಾಗಿರುತ್ತದೆ. ಈ ಉದ್ದೇಶಕ್ಕಾಗಿ, ಕ್ಲೇಮ್ ನ ಇತ್ಯರ್ಥಕ್ಕೆ ಮೊದಲು ವಿಮಾದಾರರಿಂದ ಸರಿಯಾಗಿ ಮುದ್ರೆಯೊತ್ತಲ್ಪಟ್ಟ ಸಬ್ರೋಗೇಶನ್ ಪತ್ರವನ್ನು ಪಡೆಯಲಾಗುತ್ತದೆ.

**ix. ಕ್ಲೇಮ್ ಗಳಿಗೆ ಸಂಬಂಧಿಸಿದ ವಿವಾದಗಳು**

ಉತ್ತಮ ಪ್ರಯತ್ನಗಳ ಹೊರತಾಗಿಯೂ, ಪಾವತಿ ಮಾಡುವಲ್ಲಿ ವಿಳಂಬವಾಗಬಹುದು, ಕ್ಲೇಮ್ ಅನ್ನು ಪಾವತಿಸದಿರುವುದು (ನಿರಾಕರಣೆ), ಅಥವಾ ಕ್ಲೇಮ್ ಅನ್ನು ಕಡಿಮೆ ಮೊತ್ತಕ್ಕಾಗಿ ಒಪ್ಪಿಕೊಳ್ಳಲಾಗಬಹುದು, ಇದು ವಿಮಾಗಾರ ಮತ್ತು ವಿಮಾದಾರರ ನಡುವೆ ಅಸಮಾಧಾನ ಮತ್ತು ವಿವಾದಕ್ಕೆ ಕಾರಣವಾಗಬಹುದು.

ಇವುಗಳನ್ನು ಹೊರತುಪಡಿಸಿ, ಕೆಲವು ಸಾಮಾನ್ಯ ಕಾರಣಗಳನ್ನು ಹೆಸರಿಸುವುದಾದರೆ:

- ✓ ವಾಸ್ತವಿಕ ಸಂಗತಿಗಳ ಮರೆಮಾಚುವಿಕೆ
- ✓ ವ್ಯಾಪ್ತಿ(ಕವರೇಜ್)ಯ ಕೊರತೆ
- ✓ ಹೊರತುಪಡಿಸಿದ ಗಂಡಾಂತರದಿಂದಾದ ನಷ್ಟ

- ✓ ಸಮರ್ಪಕ ವಿಮಾಮೊತ್ತದ ಕೊರತೆ
- ✓ ಖಾತ್ರಿಗಳ ಉಲ್ಲಂಘನೆ
- ✓ ಕಡಿಮೆ ವಿಮೆ, ಸವಕಳಿ ಇತ್ಯಾದಿಗಳಿಂದ ಒಟ್ಟು ಪ್ರಮಾಣ(ಕ್ವಾಂಟಮ್)ಕ್ಕೆ ಸಂಬಂಧಿಸಿದ ಸಮಸ್ಯೆಗಳು.

ಈಗಾಗಲೇ ಸಂಭವಿಸಿದ ನಷ್ಟದ ಕಾರಣದಿಂದ ಉಂಟಾಗುವ ಹಣಕಾಸಿನ ನಿರ್ಬಂಧಗಳಿಂದ ಬಳಲುತ್ತಿರುವ ಸಮಯದಲ್ಲಿ ವಿಮೆದಾರರಿಗೆ ಇವೆಲ್ಲವೂ ಗಣನೀಯ ದುಃಖವನ್ನು ಉಂಟುಮಾಡಬಹುದು. ಅವನ ಸಂಕಟಗಳನ್ನು ಕಡಿಮೆ ಮಾಡಲು, ಕುಂದುಕೊರತೆ ಪರಿಹಾರ ಮತ್ತು ವಿವಾದ ನಿರ್ವಹಣೆಯ ಕಾರ್ಯವಿಧಾನಗಳನ್ನು ಪಾಲಿಸಿಯಲ್ಲಿಯೇ ಉತ್ತಮವಾಗಿ ರೂಪಿಸಲಾಗಿದೆ. ಬೆಂಕಿ ಅಥವಾ ಆಸ್ತಿಯ ಪಾಲಿಸಿಗಳು "ಆರ್ಬಿಟ್ರೇಶನ್" ಷರತ್ತನ್ನು ಪಾಲಿಸಿಯಲ್ಲಿಯೇ ಹೊಂದಿವೆ.

## C. ಮಧ್ಯಸ್ಥಿಕೆ

ಮಧ್ಯಸ್ಥಿಕೆಯು ಒಪ್ಪಂದಗಳಿಂದ ಉಂಟಾಗುವ ವಿವಾದಗಳನ್ನು ಬಗೆಹರಿಸುವ ಒಂದು ವಿಧಾನವಾಗಿದೆ. 1996 ರ ಮಧ್ಯಸ್ಥಿಕೆ ಮತ್ತು ಸಂಧಾನ ಕಾಯಿದೆಯ ನಿಬಂಧನೆಗಳಿಗನುಗುಣವಾಗಿ ಮಧ್ಯಸ್ಥಿಕೆಯನ್ನು ಮಾಡಲಾಗುತ್ತದೆ. ಒಪ್ಪಂದವನ್ನು ಜಾರಿಗೊಳಿಸುವ ಅಥವಾ ವಿವಾದವನ್ನು ಬಗೆಹರಿಸುವ ಸಾಮಾನ್ಯ ವಿಧಾನವೆಂದರೆ ನ್ಯಾಯಾಲಯಕ್ಕೆ ಹೋಗುವುದಾಗಿದೆ. ಆದಾಗ್ಯೂ, ಇಂತಹ ದಾವೆಯು ಗಣನೀಯ ವಿಳಂಬ ಮತ್ತು ವೆಚ್ಚವನ್ನು ಒಳಗೊಂಡಿರುತ್ತದೆ. ಮಧ್ಯಸ್ಥಿಕೆ ಕಾಯಿದೆಯು ಪಕ್ಷಗಳಿಗೆ ಒಪ್ಪಂದದ ಅಡಿಯಲ್ಲಿ ವಿವಾದಗಳನ್ನು ಹೆಚ್ಚು ಅನೌಪಚಾರಿಕ, ಕಡಿಮೆ ವೆಚ್ಚದ ಮತ್ತು ಖಾಸಗಿ ಮಧ್ಯಸ್ಥಿಕೆಯ ಪ್ರಕ್ರಿಯೆಯನ್ನು ಸಲ್ಲಿಸಲು ಅನುಮತಿಸುತ್ತದೆ.

ಒಬ್ಬನೇ ಮಧ್ಯಸ್ಥಗಾರ ಅಥವಾ ವಿವಾದದ ಪಕ್ಷಗಳು ಸ್ವತಃ ಆಯ್ಕೆಮಾಡಿದ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳಿಂದ ಮಧ್ಯಸ್ಥಿಕೆಯನ್ನು ಮಾಡಬಹುದಾಗಿದೆ. ಒಬ್ಬನೇ ಮಧ್ಯಸ್ಥಗಾರನ ಸಂದರ್ಭದಲ್ಲಿ, ಆ ವ್ಯಕ್ತಿಯನ್ನು ಎರಡೂ ಪಕ್ಷಗಳು ಒಪ್ಪಿಕೊಳ್ಳಬೇಕು. ಅನೇಕ ವಾಣಿಜ್ಯ ವಿಮಾ ಪಾಲಿಸಿಗಳು ವಿವಾದಗಳು ಮಧ್ಯಸ್ಥಿಕೆಗೆ ಒಳಪಟ್ಟಿರುತ್ತವೆಯೆಂದು ಹೇಳುವ **ಮಧ್ಯಸ್ಥಿಕೆಯ ಷರತ್ತ**ನ್ನು ಒಳಗೊಂಡಿರುತ್ತವೆ. ಬೆಂಕಿ ಮತ್ತು ಹೆಚ್ಚಿನ ಇತರ ಅನೇಕ ಪಾಲಿಸಿಗಳು ಕಂಪನಿಯು ಪಾಲಿಸಿಯಡಿಯಲ್ಲಿಯ ಹೊಣೆಗಾರಿಕೆಯನ್ನು ಒಪ್ಪಿಕೊಂಡರೆ ಮತ್ತು ಪಾವತಿಸಬೇಕಾದ ಪ್ರಮಾಣಕ್ಕೆ ಸಂಬಂಧಿಸಿದಂತೆ ವ್ಯತ್ಯಾಸವಿದ್ದರೆ, ಅಂತಹ ವ್ಯತ್ಯಾಸವನ್ನು ಮಧ್ಯಸ್ಥಿಕೆಗೆ ಉಲ್ಲೇಖಿಸಬೇಕೆಂಬ ಮಧ್ಯಸ್ಥಿಕೆಯ ಷರತ್ತನ್ನು ಒಳಗೊಂಡಿರುತ್ತವೆ. ಸಾಮಾನ್ಯವಾಗಿ ಮಧ್ಯಸ್ಥರ ನಿರ್ಧಾರವನ್ನು ಅಂತಿಮವೆಂದು ಪರಿಗಣಿಸಲಾಗುತ್ತದೆ ಮತ್ತು ಎರಡೂ ಪಕ್ಷಗಳಿಗೆ ಬದ್ಧವಾಗಿರುತ್ತದೆ.

ಷರತ್ತಿನಲ್ಲಿಯ ಪದಗಳು ಪಾಲಿಸಿಯಿಂದ ಪಾಲಿಸಿಗೆ ಬದಲಾಗುತ್ತವೆ. ಸಾಮಾನ್ಯವಾಗಿ, ಈ ಕೆಳಗಿನಂತೆ ಇರುತ್ತದೆ:

i. ಪಕ್ಷಗಳಿಂದ ನೇಮಕಗೊಳ್ಳುವ ಏಕೈಕ ಮಧ್ಯಸ್ಥಗಾರರ ನಿರ್ಧಾರಕ್ಕೆ, ಅಥವಾ ಒಬ್ಬರೇ ಮಧ್ಯಸ್ಥಗಾರನ ನೇಮಕಾತಿಯ ಮೇಲೆ ಅವರ ನಡುವೆ ಯಾವುದೇ ಭಿನ್ನಾಭಿಪ್ರಾಯ ಉಂಟಾದಾಗ, ತಲಾ ಒಬ್ಬರಂತೆ ಪಕ್ಷಗಳು ನೇಮಿಸಿದ ಇಬ್ಬರು ಮಧ್ಯಸ್ಥಗಾರರ ನಿರ್ಧಾರಕ್ಕೆ ವಿವಾದವನ್ನು ಸಲ್ಲಿಸಲಾಗುತ್ತದೆ.

ii. ಈ ಇಬ್ಬರು ಮಧ್ಯಸ್ಥಗಾರರು ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವ ನಿರ್ಣಯಕಾರ(ಅಂಪೈರ್)ರನ್ನು ನೇಮಿಸಬೇಕು. ಈ ಸಭೆಗಳ ಕಾರ್ಯವಿಧಾನವು ನ್ಯಾಯಾಲಯವನ್ನು ಹೋಲುತ್ತದೆ. ಪ್ರತಿ ಪಕ್ಷವು ತನ್ನ ಪ್ರಕರಣವನ್ನು ಅಗತ್ಯವಿದ್ದರೆ, ವಕೀಲರ ಸಹಾಯದಿಂದ ಹೇಳುತ್ತದೆ, ಮತ್ತು ಸಾಕ್ಷಿಗಳನ್ನು ಪರೀಕ್ಷಿಸಲಾಗುತ್ತದೆ.

iii. ಇಬ್ಬರು ಮಧ್ಯಸ್ಥಿಕೆದಾರರು ನಿರ್ಧಾರಕ್ಕೆ ಒಪ್ಪದಿದ್ದರೆ, ಆಗ ವಿಷಯವನ್ನು ನಿರ್ಣಾಯಕ(ಅಂಪೈರ್)ರ ಮುಂದೆ ಸಲ್ಲಿಸಲಾಗುತ್ತದೆ, ಅವರು ತೀರ್ಪನ್ನು ನೀಡುತ್ತಾರೆ.

iv. ವೆಚ್ಚವನ್ನು ತೀರ್ಪುನೀಡುವ ಮಧ್ಯಸ್ಥಗಾರ/ಮಧ್ಯಸ್ಥಗಾರರು ಅಥವಾ ನಿರ್ಣಾಯಕ( ಅಂಪೈರ್‌ನ)ರ ವಿವೇಚನೆಯಿಂದ ನೀಡಲಾಗುತ್ತದೆ.

ಹೊಣೆಗಾರಿಕೆಯ ಪ್ರಶ್ನೆಗೆ ಸಂಬಂಧಿಸಿದ ವಿವಾದಗಳನ್ನು ವ್ಯಾಜ್ಯ/ದಾವೆಯ ಮೂಲಕ ಇತ್ಯರ್ಥಗೊಳಿಸಬೇಕು.

**ಉದಾಹರಣೆ**

ನಷ್ಟವು ಪಾಲಿಸಿಯಡಿಯಲ್ಲಿ ಒಳಗೊಂಡಿರುವುದಿಲ್ಲವಾದ್ದರಿಂದ ವಿಮಾಗಾರರು ನಷ್ಟವನ್ನು ಪಾವತಿಸಲಾಗುವುದಿಲ್ಲ ಎಂದು ವಾದಿಸಿದರೆ, ಈ ವಿಷಯವನ್ನು ನ್ಯಾಯಾಲಯವು ನಿರ್ಧರಿಸಬೇಕು. ಅಲ್ಲದೇ, ವಿಮಾಗಾರರು ವಾಸ್ತವಿಕ ಸಂಗತಿಗಳನ್ನು ('ಅತ್ಯಂತ ಉತ್ತಮ ನಂಬಿಕೆ'ಯ ಕಾನೂನು ಕರ್ತವ್ಯದ ಉಲ್ಲಂಘನೆ) ಮೋಸದ ಮೂಲಕ ಮರೆಮಾಚಿ ಪಾಲಿಸಿಯು ಪಡೆಯಲಾಗಿರುವುದರಿಂದ ಅನೂರ್ಜಿತವಾಗಿದೆ ಎಂಬ ಕಾರಣಕ್ಕಾಗಿ ಕ್ಲೇಮ್ ಅನ್ನು ಪಾವತಿಸಲು ನಿರಾಕರಿಸಿದರೆ ಈ ಸಮಸ್ಯೆಯನ್ನು ದಾವೆ ಮೂಲಕ ಪರಿಹರಿಸಬೇಕು.

### D. ಇತರ ವಿವಾದ ಪರಿಹಾರ ಕಾರ್ಯವಿಧಾನ

ಐಆರ್ ಡಿಎಐ ನಿಯಮಾವಳಿಗಳ ಪ್ರಕಾರ, ಯಾವುದೇ ಕಾರಣಕ್ಕಾಗಿ ವಿಮಾದಾರರು ವಿಮಾಗಾರರ ಸೇವೆಯ ಬಗ್ಗೆ ಅತೃಪ್ತರಾಗಿದ್ದರೆ ವಿಮಾದಾರರಿಗೆ ಎಲ್ಲ ಪಾಲಿಸಿಗಳಲ್ಲಿ ಲಭ್ಯವಿರುವ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ಬಗ್ಗೆ ನಮೂದಿಸಬೇಕು.

ವೈಯಕ್ತಿಕ ವ್ಯವಹಾರದಡಿಯಲ್ಲಿಯ ಕ್ಲೇಮ್ ಗಳ ಸಂದರ್ಭದಲ್ಲಿ, ಅತೃಪ್ತ ವಿಮಾದಾರರು ವಿಮಾ ಓಂಬುಡ್ಸ್‌ಮನ್ ಅವರನ್ನು ಸಂಪರ್ಕಿಸಬಹುದು. ಈ ಪ್ರಕ್ರಿಯೆಯನ್ನು ಅಧ್ಯಾಯ 9 ರಲ್ಲಿ ವಿವರವಾಗಿ ಚರ್ಚಿಸಲಾಗಿದೆ. ವಿಮಾ ಓಂಬುಡ್ಸ್‌ಮನ್ ರವರ ಸ್ಥಾನದ ವಿವರಗಳನ್ನು ಪಾಲಿಸಿಯಲ್ಲಿ ನೀಡಲಾಗಿದೆ. ಓಂಬುಡ್ಸ್‌ಮನ್‌ರವರ ನಿರ್ಧಾರವು ವಿಮಾಗಾರರ ಮೇಲೆ ಬದ್ಧವಾಗಿರುತ್ತದೆ ಆದರೆ ವಿಮಾದಾರರ ಮೇಲೆ ಅಲ್ಲ.

ಹಣಕಾಸು ಪ್ರಾಧಿಕಾರ ಮತ್ತು ಓಂಬುಡ್ಸ್‌ಮೆನ್ ರವರ ಮಿತಿಗಳಂತಹ ವಿಷಯಗಳನ್ನು ಅಧ್ಯಾಯ ೨ ರಲ್ಲಿ ವಿವರವಾಗಿ ಚರ್ಚಿಸಲಾಗಿದೆ.

**ನಿಮ್ಮನ್ನು ಪರೀಕ್ಷಿಸಿ 1**

ಈ ಕೆಳಗೆ ಕೊಟ್ಟಿರುವ ಯಾವ ಚಟುವಟಿಕೆಗಳನ್ನು ಕ್ಲೇಮ್ ಗಳ ವೃತ್ತಿಪರ ಪರಿಹಾರದಡಿಯಲ್ಲಿ ವರ್ಗೀಕರಿಸಲಾಗುವುದಿಲ್ಲ**?**

**I.** ನಷ್ಟದ ಕಾರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹುಡುಕುವುದು

**II.** ಪೂರ್ವಾಗ್ರಹದೊಂದಿಗೆ ಕ್ಲೇಮ್ ಅನ್ನು ನೋಡುವುದು

**III.** ನಷ್ಟವು ವಿಮೆ ಮಾಡಿದ ಅಪಾಯದ ಪರಿಣಾಮವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು

**IV.** ಕ್ಲೇಮ್ ಅಡಿಯಲ್ಲಿ ಪಾವತಿಸಬೇಕಾದ ಮೊತ್ತವನ್ನು ಪ್ರಮಾಣೀಕರಿಸುವುದು

**ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು**

ಉತ್ತರ 1 – ಸರಿಯಾದ ಉತ್ತರ **II** ಆಗಿದೆ.

**ಪ್ರಮುಖ ಪದಗಳು**

ಟರ್ನ್ ಅರೌಂಡ್ ಟೈಮ್

ಅವಶೇಷ/ಉಳಿಕೆ

ಮರುಪಡೆಯುವಿಕೆ

ಕ್ಲೇಮ್ ಮೌಲ್ಯಮಾಪನ

# ಅಧ್ಯಾಯ C-07

# ದಾಖಲೆಗಳು

**ಅಧ್ಯಾಯ ಪರಿಚಯ**

ನಾವು ವಿಮಾ ಉದ್ಯಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಮೂನೆ(ಫಾರ್ಮ್)ಗಳು ಮತ್ತು ದಾಖಲೆಗಳೊಂದಿಗೆ ವ್ಯವಹರಿಸುತ್ತೇವೆ. ವಿಮಾಗಾರರು ಮತ್ತು ವಿಮಾದಾರರ ನಡುವಿನ ಸಂಬಂಧದಲ್ಲಿ ಸ್ಪಷ್ಟತೆಯನ್ನು ತರುವ ಉದ್ದೇಶಕ್ಕಾಗಿ ಈ ದಾಖಲೆಗಳ ಅಗತ್ಯವಿರುತ್ತದೆ. ಪ್ರಸ್ತಾವನೆಯ ಹಂತದಲ್ಲಿ ಒಳಗೊಂಡಿರುವ ವಿವಿಧ ದಾಖಲೆಗಳು ಮತ್ತು ಅವುಗಳ ಪ್ರಾಮುಖ್ಯತೆಯೊಂದಿಗೆ ಈ ಅಧ್ಯಾಯದಲ್ಲಿ ನಾವು ವ್ಯವಹರಿಸುತ್ತೇವೆ.

**ಕಲಿಕೆಯ ಫಲಿತಾಂಶಗಳು**

ಈ ಕೆಳಗಿನವುಗಳ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಿ:

**A.** ವಿವರಣ ಪತ್ರ(ಪ್ರಾಸ್ಪೆಕ್ಟಸ್)

**B.** ಪ್ರಸ್ತಾವನೆಯ ನಮೂನೆ (ಪ್ರಪೋಸಲ್ ಫಾರ್ಮ್)

**C.** ನಿಮ್ಮ ಗ್ರಾಹಕರನ್ನು ಅರಿಯಿರಿ (ಕೆವೈಸಿ) ದಾಖಲೆಗಳು

**ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ನಿಮಗೆ ಈ ಕೆಳಗಿನ ವಿಷಯಗಳನ್ನು ಅರಿಯಲು ಸಾಧ್ಯವಾಗುತ್ತದೆ:**

- ಪ್ರಸ್ತಾವನೆಯ ಹಂತದ ದಾಖಲಾತಿ ಮತ್ತು ಅದರ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದು
- ವಿವರಣೆಪತ್ರ(ಪ್ರಾಸ್ಪೆಕ್ಟಸ್)ದ ಉದ್ದೇಶಗಳನ್ನು ತಿಳಿದುಕೊಳ್ಳುವುದು
- ಪ್ರಸ್ತಾವನೆ ನಮೂನೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದು
- ಆಂಟಿ-ಮನಿ ಲಾಂಡರಿಂಗ್ (ಎಎಮ್ಎಲ್**)** ಅನ್ನು ತಿಳಿದುಕೊಳ್ಳುವುದು**,** ನಿಮ್ಮ ಗ್ರಾಹಕರ (ಕೆವೈಸಿ**)** ನಿಯಮಗಳು ಮತ್ತು ಪ್ರಾಯೋಗಿಕವಾಗಿ ಎಲ್ಲ ಪಾಲಿಸಿಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಪ್ರಮುಖ ದಾಖಲೆಗಳನ್ನು ತಿಳಿದುಕೊಳ್ಳುವುದು.
- ವಯಸ್ಸಿನ ಪುರಾವೆ ಮತ್ತು ಸ್ವೀಕಾರಾರ್ಹ ದಾಖಲೆಗಳ ಪ್ರಾಮುಖ್ಯತೆ.

## A. ವ ಿವರಣ ಪತ್ರ(ಪ್ರಾಸ್ಪೆಕ್ಟಸ್)

ವಿವರಣಪತ್ರ(ಪ್ರಾಸ್ಪೆಕ್ಟಸ್)ವು ಪ್ರಸ್ತಾವನೆಯ ಹಂತದ ದಾಖಲೆಯಾಗಿದೆ. ವಿವರಣಪತ್ರ(ಪ್ರಾಸ್ಪೆಕ್ಟಸ್)ವು ವಿಮಾ ಕಂಪನಿಗಳು ಉತ್ಪನ್ನದ ಬಗ್ಗೆ ವಿವರಗಳನ್ನು ಒದಗಿಸಲು ಬಳಸುವ ಔಪಚಾರಿಕ ಕಾನೂನು ದಾಖಲೆಯಾಗಿದೆ.

ವಿಮಾ ಉತ್ಪನ್ನಗಳನ್ನು ಮಾರಾಟ ಮಾಡಲು ಅಥವಾ ಪ್ರಚಾರ ಮಾಡಲು ವಿಮಾಗಾರರು ನೀಡಿದ ಭೌತಿಕ, ಎಲೆಕ್ಟ್ರಾನಿಕ್ ಅಥವಾ ಯಾವುದೇ ಇತರ ಸ್ವರೂಪದಲ್ಲಿಯ ದಾಖಲೆಯನ್ನು ಇದು ಅರ್ಥೈಸಬಹುದು. ವಿಮಾ ಉತ್ಪನ್ನಗಳು ಈ ಉದ್ದೇಶಕ್ಕಾಗಿ, ಯಾವುದಾದರೂ ಇದ್ದರೆ ಆಡ್-ಆನ್ ಕವರ್ ಗಳು/ರೈಡರ್ ಗಳನ್ನು ಸಹ ಒಳಗೊಂಡಿರುತ್ತವೆ. ವಿವರಣಪತ್ರ(ಪ್ರಾಸ್ಪೆಕ್ಟಸ್)ವು ಒಂದು ಪರಿಚಯಾತ್ಮಕ ದಾಖಲೆಯಂತಿದ್ದು ಅದು ನಿರೀಕ್ಷಿತ ಪಾಲಿಸಿದಾರರಿಗೆ ಕಂಪನಿಯ ಉತ್ಪನ್ನಗಳೊಂದಿಗೆ ಪರಿಚಿತರಾಗಲು ಸಹಾಯ ಮಾಡುತ್ತದೆ.

ಐಆರ್ ಡಿಎಐಯ 2017 ರ (ಪಾಲಿಸಿದಾರರ ಹಿತಾಸಕ್ತಿಗಳ ರಕ್ಷಣೆ) ನಿಯಮಗಳ ಪ್ರಕಾರ, ನಿರೀಕ್ಷಿತ ಪಾಲಿಸಿದಾರರಿಗೆ ಪಾಲಿಸಿಯ ಖರೀದಿಗೆ ಸಂಬಂಧಿಸಿದಂತೆ ತಿಳುವಳಿಕೆಯುಳ್ಳ ನಿರ್ಧಾರವನ್ನು ತೆಗೆದುಕೊಳ್ಳಲು ಅಗತ್ಯವಿರುವ ಎಲ್ಲಾ ಸಂಗತಿಗಳನ್ನು ವಿವರಣಪತ್ರ(ಪ್ರಾಸ್ಪೆಕ್ಟಸ್)ವು ಒಳಗೊಂಡಿರಬೇಕು ಮತ್ತು ಪ್ರತಿ ವಿಮಾ ಯೋಜನೆಗೆ ಈ ಕೆಳಗಿನ ಸಂಗತಿಗಳನ್ನು ಒಳಗೊಂಡಿರಬೇಕು:

- ಸಂಬಂಧಿತ ವಿಮಾ ಉತ್ಪನ್ನಕ್ಕಾಗಿ ಪ್ರಾಧಿಕಾರವು ನಿಗದಿಪಡಿಸಿದ ವಿಶಿಷ್ಟ ಗುರುತಿನ ಸಂಖ್ಯೆ (ಯುಐಎನ್)
- ವಿಮಾ ರಕ್ಷಣೆಯ ವ್ಯಾಪ್ತಿ
- ಪ್ರಯೋಜನಗಳು/ಅರ್ಹತೆಗಳ ವ್ಯಾಪ್ತಿ - ಖಾತರಿಯುಕ್ತ ಮತ್ತು ಖಾತರಿರಹಿತ
- ವಿವರಣೆಗಳೊಂದಿಗೆ ವಿಮಾ ರಕ್ಷಣೆಯ ಖಾತರಿಗಳು, ವಿನಾಯಿತಿಗಳು/ ಹೊರತುಗಳು
- ವಿಮಾ ರಕ್ಷಣೆಯ ನಿಯಮಗಳು ಮತ್ತು ಷರತ್ತುಗಳು
- ವಿಮೆಯಿಂದ ಕವರ್ ಮಾಡಬೇಕಾದ ಅನಿಶ್ಚಿತತೆ ಅಥವಾ ಅನಿಶ್ಚಿತತೆಗಳ ವಿವರಣೆ
- ಅಂತಹ ವಿವರಣಾಪತ್ರ(ಪ್ರಾಸ್ಪೆಕ್ಟಸ್)ದ ನಿಯಮಗಳಡಿಯಲ್ಲಿ ವಿಮೆಗೆ ಅರ್ಹವಾದ ಜೀವನ ಅಥವಾ ಆಸ್ತಿಯ ವರ್ಗ ಅಥವಾ ವರ್ಗಗಳು
- ಯೋಜನೆಯು ಭಾಗವಹಿಸುವ ಅಥವಾ ಭಾಗವಹಿಸದ ಯೋಜನೆಯಾಗಿದೆ ಎಂಬುದರ ಬಗ್ಗೆ.

ಉತ್ಪನ್ನದ ಮೇಲೆ ಅನುಮತಿಸಬಹುದಾದ ಆಡ್-ಆನ್ ಕವರ್ ಗಳನ್ನು (ರೈಡರ್ಸ್ ಇನ್ ಲೈಫ್ ಇನ್ಶೂರೆನ್ಸ್ ಎಂದೂ ಕರೆಯುತ್ತಾರೆ) ಮತ್ತು ಅವುಗಳ ಪ್ರಯೋಜನಗಳನ್ನು ಸಹ ಹೇಳಲಾಗಿದೆ.

ವಿವರಣಾ ಪತ್ರ(ಪ್ರಾಸ್ಪೆಕ್ಟಸ್)ವು ಒಳಗೊಂಡಿರುವ ಇತರ ಪ್ರಮುಖವಾದ ಮಾಹಿತಿ:

1. ಕವರ್ ಗಳು ಮತ್ತು ಕಂತಿನಲ್ಲಿಯ ಯಾವುದೇ ವ್ಯತ್ಯಾಸಗಳು. ಉದಾ. ವಿವಿಧ ವಯಸ್ಸಿನ ಗುಂಪುಗಳಿಗೆ ಅಥವಾ ವಿವಿಧ ಪ್ರವೇಶದ ವಯಸ್ಸುಗಳಿಗೆ
2. ಪಾಲಿಸಿಯ ನವೀಕರಣ ನಿಯಮಗಳು
3. ನಿರ್ದಿಷ್ಟ ಸಂದರ್ಭಗಳಡಿಯಲ್ಲಿ ಪಾಲಿಸಿಯ ರದ್ದತಿಯ ನಿಯಮಗಳು

4. ವಿಭಿನ್ನ ಸಂದರ್ಭಗಳಡಿಯಲ್ಲಿ ಅನ್ವಯವಾಗುವ ಯಾವುದೇ ರಿಯಾಯಿತಿಗಳು ಅಥವಾ ಹೇರಿಕೆ(ಲೋಡ್)ಗಳ ವಿವರಗಳು
5. ಕಂತು ಸೇರಿದಂತೆ ಪಾಲಿಸಿಯ ನಿಯಮಗಳಲ್ಲಿ ಯಾವುದೇ ಪರಿಷ್ಕರಣೆ ಅಥವಾ ಬದಲಾವಣೆಯ ಸಾಧ್ಯತೆ
6. ಅದೇ ವಿಮಾಗಾರರೊಂದಿಗೆ ಮುಂಚಿತ ಪ್ರವೇಶ, ಮುಂದುವರಿದ ನವೀಕರಣಗಳು, ಕ್ಲೇಮ್ ಗಳ ಅನುಕೂಲಕರ ಅನುಭವ ಇತ್ಯಾದಿಗಳಿಗೆ ಪಾಲಿಸಿದಾರರಿಗೆ ಬಹುಮಾನ ನೀಡಲು ಪ್ರೋತ್ಸಾಹ.
7. ವಿವರಣಾ ಪತ್ರ(ಪ್ರಾಸ್ಪೆಕ್ಟಸ್) ಅಗತ್ಯವಾಗಿ ಐಆರ್ ಡಿಎಐ ನಿಂದ ನಿಯೋಜಿಸಲಾದ ಉತ್ಪನ್ನದ ಯುಐಎನ್‌ಅನ್ನು ಹೊಂದಿರಬೇಕು
8. ಐಆರ್ ಡಿಎಐ ನಿಯಮಗಳಿಂದ ವಿವರಣಾ ಪತ್ರ(ಪ್ರಾಸ್ಪೆಕ್ಟಸ್)ದಲ್ಲಿ ಸೆಕ್ಷನ್ ***41*** ರ ನಕಲನ್ನು ಕಡ್ಡಾಯಗೊಳಿಸಲಾಗಿದೆ. ಈ ಸೆಕ್ಷನ್ ಭಾರತದಲ್ಲಿನ ಜೀವನ ಅಥವಾ ಆಸ್ತಿಗೆ ಸಂಬಂಧಿಸಿದ ಯಾವುದೇ ರೀತಿಯ ವಿಮೆಯನ್ನು ಮುಂದುವರಿಸಲು ಅಥವಾ ನವೀಕರಿಸಲು ಹೊಸ ವಿಮೆಯನ್ನು ಖರೀದಿಸಲು ಯಾವುದೇ ವ್ಯಕ್ತಿಗೆ ಯಾವುದೇ ನೇರ ಅಥವಾ ಪರೋಕ್ಷ ಪ್ರಚೋದನೆಯನ್ನು ನೀಡಲು ನಿಷೇಧಿಸುತ್ತದೆ.

ವಿಶೇಷವಾಗಿ ವಿವರಣಾ ಪತ್ರ(ಪ್ರಾಸ್ಪೆಕ್ಟಸ್)ವು ನಾಮನಿರ್ದೇಶನಕ್ಕಾಗಿ ಸೌಲಭ್ಯದ ಲಭ್ಯತೆಯ ಬಗ್ಗೆ ಪ್ರಸ್ತಾಪಕರಿಗೆ ತಿಳಿಸುತ್ತದೆ.

**ನಿಮ್ಮನ್ನು ಪರೀಕ್ಷಿಸಿ 1**

ಈ ಕೆಳಗಿನವುಗಳಲ್ಲಿ ಯಾವುದು ಸಾಮಾನ್ಯವಾಗಿ ವಿಮಾ ವಿವರಣಾ ಪತ್ರ(ಪ್ರಾಸ್ಪೆಕ್ಟಸ್)ದ ಭಾಗವಾಗಿರುವುದಿಲ್ಲ**?**

**I.** ಓಂಬುಡ್ಸ್ ಮನ್ ರವರ ಹೆಸರು

**II.** ಪ್ರಯೋಜನೆಗಳ ವ್ಯಾಪ್ತಿಯ ದಿನಾಂಕ

**III.** ಅರ್ಹತೆಗಳು

**IV.** ಹೊರತುಗಳು

---

## B. ಪ್ರಸ್ತಾವನೆಯ ನಮೂನೆ(ಪ್ರಪೋಜಲ್ ಫಾರ್ಮ್)

ವಿಮಾ ಪಾಲಿಸಿಯು ವಿಮಾಗಾರರು ಮತ್ತು ಪಾಲಿಸಿದಾರರ ನಡುವಿನ ನ್ಯಾಯಬದ್ಧ ಒಪ್ಪಂದವಾಗಿದೆ. ಯಾವುದೇ ಒಪ್ಪಂದಕ್ಕೆ ಅಗತ್ಯವಿರುವಂತೆ, ಅದು ಪ್ರಸ್ತಾಪವನ್ನು ಮತ್ತು ಅದರ ಸ್ವೀಕಾರವನ್ನು ಹೊಂದಿದೆ.

"ಪ್ರಸ್ತಾವನೆಯ ನಮೂನೆ(ಫಾರ್ಮ್)" ಎಂಬುದು ಪ್ರಸ್ತಾವನೆಯನ್ನು ಮಾಡಲು ಬಳಸಲಾಗುವ ಅರ್ಜಿಯ ದಾಖಲೆಯಾಗಿದೆ. ಇದು ಪ್ರಸ್ತಾಪಕರಿಂದ ಭರ್ತಿ ಮಾಡಬೇಕಾದ ಲಿಖಿತ ಅಥವಾ ಎಲೆಕ್ಟ್ರಾನಿಕ್ ಅಥವಾ ಪ್ರಾಧಿಕಾರದಿಂದ ಅನುಮೋದಿಸಲಾದ ಯಾವುದೇ ಸ್ವರೂಪದಲ್ಲಿರಬಹುದಾದ ನಮೂನೆ(ಫಾರ್ಮ್)ಯಾಗಿದೆ. ಅಪಾಯವನ್ನು ಸರಿದೂಗಿಸಲು ಒಪ್ಪಿಕೊಳ್ಳಬೇಕೆ ಅಥವಾ ತಿರಸ್ಕರಿಸಬೇಕೆ ಎಂಬುದನ್ನು ನಿರ್ಧರಿಸಲು ವಿಮಾಗಾರರಿಗೆ ಅಗತ್ಯವಿರುವ ಎಲ್ಲ ಮಾಹಿತಿಯನ್ನು ಇದು ಒಳಗೊಂಡಿರುತ್ತದೆ. ಅಪಾಯವನ್ನು ಸ್ವೀಕರಿಸಿದ ಸಂದರ್ಭದಲ್ಲಿ, ಈ ಮಾಹಿತಿಯ ಆಧಾರದ ಮೇಲೆ, ಮಂಜೂರು ಮಾಡಬೇಕಾದ ಕವರ್ ನ ದರಗಳು, ನಿಯಮಗಳು ಮತ್ತು ಷರತ್ತುಗಳನ್ನು ವಿಮಾಗಾರರು ನಿರ್ಧರಿಸಬಹುದು.

ಅತ್ಯುತ್ತಮ ನಂಬಿಕೆಯ ತತ್ವ ಮತ್ತು ವಾಸ್ತವಿಕ ಮಾಹಿತಿಯ ಬಹಿರಂಗಪಡಿಸುವಿಕೆಯ ಕರ್ತವ್ಯವು ವಿಮೆಯ ಪ್ರಸ್ತಾವನೆ ನಮೂನೆಯೊಂದಿಗೆ ಪ್ರಾರಂಭವಾಗುತ್ತದೆ. ಈ ದಾಖಲೆಯು ವಿಮೆಯನ್ನು ನೀಡುವ ಆಧಾರವಾಗಿದ್ದು ಯಾವುದೇ ತಪ್ಪು ಅಥವಾ ಮರೆಮಾಚುವ ಮಾಹಿತಿಯು ಕ್ಲೇಮ್ ನ ನಿರಾಕರಣೆಗೆ ಕಾರಣವಾಗಬಹುದಾದ್ದರಿಂದ ಪ್ರಸ್ತಾಪಕರು ಎಲ್ಲ ಮಾಹಿತಿಯನ್ನು ಸರಿಯಾಗಿ ಮತ್ತು ಸಂಪೂರ್ಣವಾಗಿ ಒದಗಿಸಬೇಕು.

ಬಹಿರಂಗಪಡಿಸುವ ಈ ಕರ್ತವ್ಯವು ಪ್ರಸ್ತಾವನೆಯ ಹಂತವನ್ನು ಮೀರಿ ವಿಮಾ ಒಪ್ಪಂದವನ್ನು ಪೂರ್ಣಗೊಳಿಸಿದ ನಂತರವೂ ಮುಂದುವರಿಯುತ್ತದೆ. ಅಂದರೆ, ವಿಮೆಯ ಅವಧಿಯಲ್ಲಿ ಯಾವುದೇ ಸಮಯದಲ್ಲಿ ಸಂಭವಿಸುವ ಯಾವುದೇ ವಾಸ್ತವಿಕ ಬದಲಾವಣೆಯನ್ನು ಜೀವೇತರ ಪಾಲಿಸಿಗಳಲ್ಲಿ ಬಹಿರಂಗಪಡಿಸಬೇಕಾಗುತ್ತದೆ.

ವಿಮಾ ಪಾಲಿಸಿಯ ಕೋರಿಕೆಯ ಸಮಯದಲ್ಲಿ ಅಥವಾ ವಿಮಾ ಪಾಲಿಸಿಯನ್ನು ನೀಡುವಾಗ ಪ್ರಸ್ತಾವನೆ ನಮೂನೆ(ಫಾರ್ಮ್)ಯಿಂದ ಸಂಗ್ರಹಿಸಲಾದ ಮಾಹಿತಿಯು ಗೌಪ್ಯವಾಗಿರುತ್ತದೆ ಮತ್ತು ಯಾವುದೇ ಮೂರನೇ ವ್ಯಕ್ತಿಯೊಂದಿಗೆ ಹಂಚಿಕೊಳ್ಳಲಾಗುವುದಿಲ್ಲ. ಯಾವುದೇ ಕಾರಣಕ್ಕಾಗಿ ಪ್ರಸ್ತಾವನೆಯ ಠೇವಣಿಯು ನಿರೀಕ್ಷಿತ ಗ್ರಾಹಕರಿಗೆ ಮರುಪಾವತಿಸಬೇಕಾದಲ್ಲಿ, ಅದನ್ನು ಪ್ರಸ್ತಾಪದ ಮೇಲಿನ ಅಂಡರ್ ರೈಟಿಂಗ್ ನಿರ್ಧಾರದ ದಿನಾಂಕದಿಂದ 15 ದಿನಗಳಲ್ಲಿ ಮರುಪಾವತಿಸಲಾಗುತ್ತದೆ.

ಐಆರ್ ಡಿಎಐ ಮಾರ್ಗಸೂಚಿಗಳ ಪ್ರಕಾರ, ವಿಮಾದಾರರು ಸಲ್ಲಿಸಿದ ಪ್ರಸ್ತಾವನೆಯ ಪ್ರತಿಯನ್ನು ಪ್ರಸ್ತಾವನೆಯನ್ನು ಸ್ವೀಕರಿಸಿದ **30** ದಿನಗಳೊಳಗೆ ವಿಮಾದಾರರಿಗೆ ಉಚಿತವಾಗಿ ಒದಗಿಸುವುದು ವಿಮಾಗಾರರ ಕರ್ತವ್ಯವಾಗಿದೆ. ಏಜೆಂಟರು ಈ ಸಮಯದ ಗಡುವುಗಳನ್ನು ಲಕ್ಷದಲ್ಲಿರಿಸುತ್ತಾರೆ, ಆಂತರಿಕವಾಗಿ ಅನುಸರಿಸುತ್ತಾರೆ ಮತ್ತು ಗ್ರಾಹಕ ಸೇವೆಯ ಮೂಲಕ ಮತ್ತು ಅಗತ್ಯವಿದ್ದಾಗ ನಿರೀಕ್ಷಿತ ಗ್ರಾಹಕ/ವಿಮಾದಾರರೊಂದಿಗೆ ಸಂವಹನ ನಡೆಸುತ್ತಾರೆ.

**a) ಪ್ರಸ್ತಾವನೆಯ ನಮೂನೆ(ಫಾರ್ಮ್) - ವಿವರಗಳು**

ಪ್ರಸ್ತಾವನೆಯ ನಮೂನೆ(ಫಾರ್ಮ್)ಯು ದಾಖಲಾತಿಯ ಮೊದಲ ಹಂತವಾಗಿದ್ದು, ಅದರ ಮೂಲಕ ವಿಮಾದಾರರು ಈ ಕೆಳಗಿನ ವಿಷಯಗಳನ್ನು ವಿಮಾಗಾರರಿಗೆ ತಿಳಿಸುತ್ತಾರೆ:

- ✓ ಆತ/ಆಕೆ ಯಾರು
- ✓ ಆತನಿಗೆ/ಆಕೆಗೆ ಯಾವ ರೀತಿಯ ವಿಮೆಯ ಅವಶ್ಯಕತೆಯಿದೆ
- ✓ ಆತ/ಅವಳು ಯಾವ ವಸ್ತುವಿನ ವಿಮೆಯನ್ನು ಮಾಡಬಯಸುತ್ತಾರೆ ಎಂಬುದರ ವಿವರಗಳು ಮತ್ತು
- ✓ ಎಷ್ಟು ಅವಧಿಗಾಗಿ
- ✓ ಅಪಾಯದ ವಿವರಗಳು (ಉದಾ. ಜೀವ ಮತ್ತು ಆರೋಗ್ಯ ವಿಮೆಗಾಗಿ - ಆರೋಗ್ಯದ ಅಥವಾ ಅನುಭವಿಸಿದ ಯಾವುದೇ ಕಾಯಿಲೆಗಳ ವಿವರಗಳನ್ನು ನೀಡಬೇಕು)
- ✓ ವಿವರಗಳು ವಿಮೆಯ ವಿಷಯವಸ್ತುವಿನ ಮೇಲೆ ಪ್ರಸ್ತಾಪಿಸಲಾದ ವಿತ್ತೀಯ ಮೌಲ್ಯ ಮತ್ತು ಪ್ರಸ್ತಾವಿತ ವಿಮೆಗೆ ಸಂಬಂಧಿಸಿದ ಎಲ್ಲ ವಾಸ್ತವಿಕ ಸಂಗತಿಗಳನ್ನು ಒಳಗೊಂಡಿರುತ್ತವೆ.

ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರಸ್ತಾವನೆಯ ನಮೂನೆ(ಫಾರ್ಮ್)ಯು ಹೆಸರು, ತಂದೆಯ ಹೆಸರು, ವಿಳಾಸ ಮತ್ತು ಇತರ ಗುರುತಿಸುವ ವಿವರಗಳಂತಹ ಪ್ರಸ್ತಾವನೆಯ ಗುರುತಿನ ವಿವರಗಳನ್ನು ಸಂಗ್ರಹಿಸುತ್ತದೆ. ತಮ್ಮ ಗ್ರಾಹಕರ ನಿಜವಾದ ಗುರುತನ್ನು ನಿರ್ಧರಿಸಲು, ವಿಳಾಸದ ಪುರಾವೆ, ಪ್ಯಾನ್ ಕಾರ್ಡ್, ಛಾಯಾಚಿತ್ರಗಳು ಮುಂತಾದ ದಾಖಲೆಗಳನ್ನು ಪ್ರಸ್ತಾವನೆಯೊಂದಿಗೆ ಸಂಗ್ರಹಿಸಲಾಗುತ್ತದೆ.

ಜೀವ ಮತ್ತು ಆರೋಗ್ಯ ವಿಮೆಗಳಿಗೆ ಸಂಬಂಧಿಸಿದಂತೆ, ಪ್ರಸ್ತಾಪಕರ ಕುಟುಂಬದ ಸದಸ್ಯರ (ಪೋಷಕರನ್ನು ಒಳಗೊಂಡಂತೆ) ದೀರ್ಘಾಯುಷ್ಯ, ಆರೋಗ್ಯದ ಸ್ಥಿತಿ ಮತ್ತು ಅವರಲ್ಲಿ ಯಾರಾದರೂ ಅನುಭವಿಸಿದ ಕಾಯಿಲೆಗಳನ್ನು ಸೂಚಿಸುವ ವಿವರಗಳನ್ನು ಸಂಗ್ರಹಿಸಲಾಗುತ್ತದೆ. ಉತ್ಪನ್ನವನ್ನು ಅವಲಂಬಿಸಿ, ವಿಮೆಗಾಗಿ ಪ್ರಸ್ತಾಪಿಸಲಾದ ಜೀವನದ ವೈದ್ಯಕೀಯ ವಿವರಗಳು, ವೈಯಕ್ತಿಕ ಗುಣಲಕ್ಷಣಗಳು ಮತ್ತು ಅವನ/ಅವಳ ವೈಯಕ್ತಿಕ ರೋಗದ ಇತಿಹಾಸವನ್ನು ಸಹ ಕೇಳಬಹುದು.

ಪ್ರಸ್ತಾಪಿಸಲಾದ ವಿಮೆಯ ವಿಷಯವಸ್ತುವಿನ ಮೇಲಿನ ವಿತ್ತೀಯ ಮೌಲ್ಯದ ವಿವರಗಳು ಮತ್ತು ಪ್ರಸ್ತಾವಿತ ವಿಮೆಗೆ ಸಂಬಂಧಿಸಿದ ವಾಸ್ತವಿಕ ಸಂಗತಿಗಳನ್ನು ವಿಮೆಯ ಹಲವು ವರ್ಗಗಳಲ್ಲಿ ಸಂಗ್ರಹಿಸಲಾಗುತ್ತದೆ.

ವಿಮಾ ಸಲಹೆಗಾರರ ಶಿಫಾರಸುಗಳು ಅಂತಹ ಶಿಫಾರಸಿನ ಕಾರಣಗಳನ್ನು ಒಳಗೊಂಡಂತೆ ಪ್ರಸ್ತಾವನೆಯ ನಮೂನೆಯ ಭಾಗವಾಗಿರಬಹುದು. ಶಿಫಾರಸು ಮಾಡಲಾದ ಪಾಲಿಸಿಯ ವಿವರಗಳನ್ನು ಪ್ರಸ್ತಾಪಕರಿಗೆ ಸಂಪೂರ್ಣವಾಗಿ ವಿವರಿಸಲಾಗಿದೆ ಮತ್ತು ಅವರು ಅದನ್ನು ಒಪ್ಪಿಕೊಂಡಿದ್ದಾರೆ ಎಂಬ ಘೋಷಣೆ ಇರುತ್ತದೆ.

ವಿಮಾಗಾರರು, ಏಜೆಂಟರು, ಉತ್ಪನ್ನದ ವಿವರಗಳು, ವಿಮಾ ಮೊತ್ತ, ಕಂತು ಪಾವತಿಯ ವಿಧಾನ ಇತ್ಯಾದಿಗಳ ವಿವರಗಳೊಂದಿಗೆ ಪ್ರಾರಂಭವಾಗುವ ಕೆಳಗಿನ ವಿಭಾಗಗಳನ್ನು ಪ್ರಸ್ತಾವನೆಯ ನಮೂನೆಯು ಹೊಂದಿರಬಹುದು.

ಅವನು/ಅವಳು ನಮೂನೆ(ಫಾರ್ಮ್)ಯನ್ನು ಭರ್ತಿ ಮಾಡಿದ್ದಾರೆ ಮತ್ತು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ ಎಂಬುದಕ್ಕೆ ಪುರಾವೆಯಾಗಿ ನಮೂನೆಯು ಪ್ರಸ್ತಾಪಕರ ಸಹಿಯನ್ನು ಒಳಗೊಂಡಿರುತ್ತದೆ.

ಪ್ರಸ್ತಾಪಕರ ಹೆಸರು, ಜನ್ಮ ದಿನಾಂಕ, ಸಂಪರ್ಕ ವಿವರಗಳು, ವೈವಾಹಿಕ ಸ್ಥಿತಿ, ರಾಷ್ಟ್ರೀಯತೆ, ಪೋಷಕರು ಮತ್ತು ಸಂಗಾತಿಯ ಹೆಸರುಗಳು, ಶೈಕ್ಷಣಿಕ ಅರ್ಹತೆಗಳು, ಅಭ್ಯಾಸಗಳು ಮತ್ತು ಗುರುತಿನ(ಐಡಿ) ಪುರಾವೆಗಳು, ಕುಟುಂಬದ ವಿವರಗಳು, ಉದ್ಯೋಗದ ವಿವರಗಳು, ಬ್ಯಾಂಕ್ ವಿವರಗಳು, ನಾಮನಿರ್ದೇಶಿತ/ ನೇಮಕಗೊಂಡವರ ಹೆಸರು; ಅಸ್ತಿತ್ವದಲ್ಲಿರುವ ವಿಮೆಯ ವಿವರಗಳು ಮತ್ತು ಪಾಲಿಸಿಯನ್ನು ಆರಿಸಿಕೊಳ್ಳಲು ಕಾರಣಗಳು ಇವು ಕೇಳಲಾಗುವ ಇತರ ವಿವರಗಳಾಗಿವೆ.

ಉತ್ಪನ್ನವನ್ನು ಅವಲಂಬಿಸಿ, ವಿಮೆಗಾಗಿ ಪ್ರಸ್ತಾಪಿಸಲಾದ ಜೀವದ ವೈದ್ಯಕೀಯ ವಿವರಗಳು, ವೈಯಕ್ತಿಕ ವಿಶೇಷ ಗುಣಗಳು ಮತ್ತು ಅವನ/ಅವಳ ವೈಯಕ್ತಿಕ ರೋಗದ ಇತಿಹಾಸವನ್ನು ಕೇಳಬಹುದು.

ಪ್ರಸ್ತಾಪಕರ ಕೆಲಸದ ಅವಧಿ, ಯೋಜಿತ ಆದಾಯ ಮತ್ತು ವೆಚ್ಚಗಳು, ಹಾಗೆಯೇ ಉಳಿತಾಯ ಮತ್ತು ಹೂಡಿಕೆಯ ಅಗತ್ಯತೆಗಳು, ಆರೋಗ್ಯ, ನಿವೃತ್ತಿ ಮತ್ತು ವಿಮೆ ಸೇರಿದಂತೆ ಪ್ರಸ್ತಾಪಿಸಲಾದ ಜೀವನದ ವೈಯಕ್ತಿಕ ಹಣಕಾಸು ಯೋಜನೆಗೆ ಸಂಬಂಧಿಸಿದ ಅಂಶಗಳನ್ನು ಸಹ ವಿಚಾರಿಸಬಹುದು.

ಏಜೆಂಟರ ಶಿಫಾರಸುಗಳು ಅಂತಹ ಶಿಫಾರಸಿಗೆ ಕಾರಣಗಳನ್ನು ಒಳಗೊಂಡಂತೆ ಪ್ರಸ್ತಾವನೆಯ ನಮೂನೆಯ ಭಾಗವಾಗಿರಬಹುದು. ಮೇಲೆ ತಿಳಿಸಲಾದ ಐಆರ್ ಡಿಎಐ ನಿಯಮಾವಳಿಗಳಿಗನುಸಾರವಾಗಿ, ಶಿಫಾರಸು ಮಾಡಲಾದ ಪಾಲಿಸಿಯ ವಿವರಗಳನ್ನು ಪ್ರಸ್ತಾಪಕರಿಗೆ ಸಂಪೂರ್ಣವಾಗಿ ವಿವರಿಸಲಾಗಿದೆ ಮತ್ತು ಅವರು ಅದನ್ನು ಒಪ್ಪಿಕೊಂಡಿದ್ದಾರೆ ಎಂದು ಏಜೆಂಟರು ಘೋಷಣೆಯನ್ನು ಮಾಡುತ್ತಾರೆ.

ಸಾಮಾನ್ಯವಾಗಿ ವಿಮಾ ಕಂಪನಿಯ ಹೆಸರು, ಲಾಂಛನ(ಲೋಗೋ), ವಿಳಾಸ ಮತ್ತು ವರ್ಗ/ವಿಮೆಯ ಪ್ರಕಾರ/ ಬಳಸಿದ ಉತ್ಪನ್ನ ಮುಂತಾದ ವಿವರಗಳೊಂದಿಗೆ ವಿಮಾಗಾರರಿಂದ ಪ್ರಸ್ತಾವನೆಯ ನಮೂನೆಗಳನ್ನು ಮುದ್ರಿಸಲಾಗುತ್ತದೆ. ಈ ವಿಷಯದಲ್ಲಿ ಯಾವುದೇ ಪ್ರಮಾಣಿತ ಸ್ವರೂಪ ಅಥವಾ ಅಭ್ಯಾಸವಿಲ್ಲದಿದ್ದರೂ ವಿಮಾ ಕಂಪನಿಗಳು ಪ್ರಸ್ತಾವನೆಯ ನಮೂನೆಯಲ್ಲಿ ಮುದ್ರಿತ ಟಿಪ್ಪಣಿಯನ್ನು ಸೇರಿಸುವುದು ವಾಡಿಕೆಯಾಗಿದೆ.

**b) ಪ್ರಸ್ತಾವನೆ ನಮೂನೆಯಲ್ಲಿಯ ಘೋಷಣೆ**

ಸಾಮಾನ್ಯವಾಗಿ ಪ್ರಸ್ತಾಪಕರು ಸಹಿ ಮಾಡಬೇಕಾದ ಘೋಷಣೆಯನ್ನು ವಿಮಾ ಕಂಪನಿಗಳು ಪ್ರಸ್ತಾಪದ ನಮೂನೆಯ ಕೊನೆಯಲ್ಲಿ ಸೇರಿಸುತ್ತವೆ. ಕ್ಲೇಮ್ ಸಮಯದಲ್ಲಿ ಸಂಗತಿಗಳ ತಪ್ಪಾದ ನಿರೂಪಣೆಯ ಕಾರಣದಿಂದಾಗಿ ಭಿನ್ನಾಭಿಪ್ರಾಯಗಳಿಗೆ ಯಾವುದೇ ಅವಕಾಶವಾಗದಂತೆ ವಿಮಾದಾರರು ನಮೂನೆ(ಫಾರ್ಮ್)ಯನ್ನು ನಿಖರವಾಗಿ ತುಂಬುವ ಕಷ್ಟವನ್ನು ತೆಗೆದುಕೊಳ್ಳುತ್ತಾರೆ ಮತ್ತು ಅದರಲ್ಲಿ ನೀಡಲಾದ ಸತ್ಯಗಳನ್ನು ಅರ್ಥಮಾಡಿಕೊಂಡಿದ್ದಾರೆಂಬುದನ್ನು ಇದು ಖಚಿತಪಡಿಸುತ್ತದೆ. ಅಂತಹ ಘೋಷಣೆಯು ಅತ್ಯಂತ ಉತ್ತಮ ನಂಬಿಕೆಯ ಸಾಮಾನ್ಯ ಕಾನೂನು ತತ್ವವನ್ನು ಅತ್ಯಂತ ಉತ್ತಮ ನಂಬಿಕೆಯ ಒಪ್ಪಂದದ ಕರ್ತವ್ಯವನ್ನಾಗಿ ಪರಿವರ್ತಿಸುತ್ತದೆ.

**ಉದಾಹರಣೆ**

**ಅಂತಹ ಘೋಷಣೆಗಳ ಉದಾಹರಣೆಗಳು ಹೀಗಿವೆ:**

'ಮೇಲಿನ ಹೇಳಿಕೆಗಳು ಎಲ್ಲ ರೀತಿಯಲ್ಲೂ ನಿಜವಾಗಿವೆ ಮತ್ತು ಸಂಪೂರ್ಣವಾಗಿವೆ ಮತ್ತು ನಿಮಗೆ ಬಹಿರಂಗಪಡಿಸದಿರುವ ವಿಮೆಯ ಅರ್ಜಿಗೆ ಸಂಬಂಧಿಸಿದ ಯಾವುದೇ ಇತರ ಮಾಹಿತಿಯಿಲ್ಲ ಎಂದು ನಾನು/ ನಾವು ಈ ಮೂಲಕ ಘೋಷಿಸುತ್ತೇವೆ ಮತ್ತು ಖಾತರಿಪಡಿಸುತ್ತೇವೆ.

'ಈ ಪ್ರಸ್ತಾವನೆ ಮತ್ತು ಘೋಷಣೆಗಳು ನನ್ನ/ನಮ್ಮ ಮತ್ತು (ವಿಮಾಗಾರರ ಹೆಸರು) ನಡುವಿನ ಒಪ್ಪಂದದ ಆಧಾರವಾಗಿದೆ ಎಂದು ನಾನು/ ನಾವು ಒಪ್ಪುತ್ತೇವೆ.'

**ನಿಮ್ಮನ್ನು ಪರೀಕ್ಷಿಸಿ 2**

ಪ್ರಸ್ತಾವನೆಯ ನಮೂನೆಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸೂಕ್ತವಾಗಿಲ್ಲ**?**

**I.** ಅತ್ಯಂತ ಉತ್ತಮ ನಂಬಿಕೆ

**II.** ಕ್ಲೇಮ್ ಮಾಡಬಹುದಾದ ನಿರೀಕ್ಷಿತ ಮೊತ್ತ

**III.** ವಾಸ್ತವಿಕ ಸಂಗತಿಗಳನ್ನು ಬಹಿರಂಗ ಪಡಿಸುವ ಕರ್ತವ್ಯ

**IV.** ನೀಡಲಾದ ವಿವರಗಳ ಗೌಪ್ಯತೆ

---

**ಅಂತಹ ಟಿಪ್ಪಣಿಗಳ ಕೆಲವು ಉದಾಹರಣೆಗಳು :**

'ಅಪಾಯದ ಮೌಲ್ಯಮಾಪನಕ್ಕೆ ಸಂಬಂಧಿಸಿದ ಸತ್ಯಾಂಶಗಳನ್ನು ಬಹಿರಂಗಪಡಿಸದಿರುವುದು, ತಪ್ಪುದಾರಿಗೆಳೆಯುವ ಮಾಹಿತಿಯನ್ನು ಒದಗಿಸುವುದು, ವಿಮಾದಾರರಿಂದ ವಂಚನೆ ಅಥವಾ ಅಸಹಕಾರವು ನೀಡಲಾದ ಪಾಲಿಸಿಯಡಿಯಲ್ಲಿಯ ಕವರ್ ಅನ್ನು ರದ್ದುಗೊಳಿಸುತ್ತದೆ'.

'ಕಂಪನಿಯು ಪ್ರಸ್ತಾವನೆಯನ್ನು ಅಂಗೀಕರಿಸುವವರೆಗೆ ಮತ್ತು ಸಂಪೂರ್ಣ ಕಂತನ್ನು ಪಾವತಿಸುವವರೆಗೆ ಕಂಪನಿಯು ಅಪಾಯದಲ್ಲಿರುವುದಿಲ್ಲ'.

---

## C. ನಿಮ್ಮ ಗ್ರಾಹಕರನ್ನು ಅರಿಯಿರಿ(ಕೆವೈಸಿ) - ಇದರ ಕುರಿತು

**ಮನಿ ಲಾಂಡರಿಂಗ್ ವಿರೋಧಿ ಮತ್ತು ಕೆವೈಸಿ ಮಾನದಂಡಗಳು**

ಮನಿ ಲಾಂಡರಿಂಗ್ ಎನ್ನುವುದು ಅಪರಾಧಿಗಳು ಕಾನೂನುಬಾಹಿರ ಚಟುವಟಿಕೆಗಳ ಆದಾಯದ ನಿಜವಾದ ಮೂಲ ಮತ್ತು ಮಾಲೀಕತ್ವವನ್ನು ಮರೆಮಾಡಲು ಹಣವನ್ನು ವರ್ಗಾಯಿಸುವ ಪ್ರಕ್ರಿಯೆಯಾಗಿದೆ. ಅಪರಾಧಿಗಳು ಅಕ್ರಮ ಚಟುವಟಿಕೆಗಳ ಮೂಲಕ ಪಡೆದ ಹಣವನ್ನು ಕಾನೂನುಬದ್ಧವಾಗಿ ಕಾಣುವಂತೆ ಮಾಡಲು ಮನಿ

ಲಾಂಡರಿಂಗ್ ಪ್ರಕ್ರಿಯೆಗಳನ್ನು ಬಳಸುತ್ತಾರೆ. ಈ ಪ್ರಕ್ರಿಯೆಯಲ್ಲಿ, ಅವರು ಹಣದ ಕಾನೂನುಬಾಹಿರ ಮೂಲವನ್ನು ಮುಚ್ಚಿಡಲು ಪ್ರಯತ್ನಿಸುತ್ತಾರೆ ಮತ್ತು ಅದನ್ನು ನ್ಯಾಯಯುತವನ್ನಾಗಿ ಕಾಣುವಂತೆ ಮಾಡುತ್ತಾರೆ.

ಅಪರಾಧಿಗಳು ತಮ್ಮ ಹಣವನ್ನು ಸಾಗಿಸಲು ಮಾಡಲು ಬ್ಯಾಂಕುಗಳು ಮತ್ತು ವಿಮೆ ಸೇರಿದಂತೆ ಹಣಕಾಸು ಸೇವೆಗಳನ್ನು ಬಳಸಲು ಪ್ರಯತ್ನಿಸುತ್ತಾರೆ. ಅವರು ಸುಳ್ಳು ಗುರುತುಗಳನ್ನು ಬಳಸಿಕೊಂಡು ವಹಿವಾಟುಗಳನ್ನು ಮಾಡುತ್ತಾರೆ, ಉದಾಹರಣೆಗೆ, ಕೆಲವು ರೀತಿಯ ವಿಮೆಯನ್ನು ಖರೀದಿಸುವ ಮೂಲಕ ಮತ್ತು ನಂತರ ಆ ಹಣವನ್ನು ಹಿಂಪಡೆಯಲು ನಿರ್ವಹಿಸುವ ಮೂಲಕ ಮತ್ತು ಅವರ ಉದ್ದೇಶವನ್ನು ಪೂರೈಸಿದ ನಂತರ ಕಣ್ಮರೆಯಾಗುತ್ತಾರೆ. ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ಸರ್ಕಾರಗಳು ಇಂತಹ ಮನಿ ಲಾಂಡರಿಂಗ್ ಪ್ರಯತ್ನಗಳನ್ನು ತಡೆಯಲು ನಿರಂತರವಾಗಿ ಪ್ರಯತ್ನಿಸುತ್ತವೆ.

**ವ್ಯಾಖ್ಯಾನ**

ಮನಿ ಲಾಂಡರಿಂಗ್ ಎನ್ನುವುದು ಕಾನೂನುಬಾಹಿರ ಹಣವನ್ನು ಅದರ ಅಕ್ರಮ ಮೂಲವನ್ನು ಮರೆಮಾಚುವ ಮೂಲಕ ಕಾನೂನುಬದ್ಧವಾಗಿ ಸ್ವಾಧೀನಪಡಿಸಿಕೊಂಡಂತೆ ತೋರಿಸುವ ಮೂಲಕ ಆರ್ಥಿಕ ವ್ಯವಸ್ಥೆಗೆ ಅಕ್ರಮ ಹಣವನ್ನು ತರುವ ಪ್ರಕ್ರಿಯೆಯಾಗಿದೆ. ಮನಿ ಲಾಂಡರಿಂಗ್ ಚಟುವಟಿಕೆಗಳನ್ನು ನಿಯಂತ್ರಿಸಲು ಭಾರತ ಸರ್ಕಾರವು ಪಿಎಮ್ಎಲ್ಎ, **2002** ಅನ್ನು ಪ್ರಾರಂಭಿಸಿತು.

---

2002 ರ ಮನಿ ಲಾಂಡರಿಂಗ್ ತಡೆಗಟ್ಟುವಿಕೆ ಕಾಯಿದೆ (ಪಿಎಮ್ಎಲ್ಎ), 2005 ರಿಂದ ಜಾರಿಗೆ ಬಂದಿದ್ದು, ಮನಿ ಲಾಂಡರಿಂಗ್ ಚಟುವಟಿಕೆಗಳನ್ನು ನಿಯಂತ್ರಿಸಲು ಮತ್ತು ಮನಿ ಲಾಂಡರಿಂಗ್ ನಿಂದ ಪಡೆದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದನ್ನು ಒದಗಿಸುತ್ತದೆ.

ಶೀಘ್ರದಲ್ಲೇ ಐಆರ್ ಡಿಎಐ ಹೊರಡಿಸಿದ ಮನಿ ಲಾಂಡರಿಂಗ್ ವಿರೋಧಿ ಮಾರ್ಗಸೂಚಿಗಳು ವಿಮಾ ಸೇವೆಗಳನ್ನು ವಿನಂತಿಸುವ ಗ್ರಾಹಕರ ನಿಜವಾದ ಗುರುತು, ಅನುಮಾನಾಸ್ಪದ ವಹಿವಾಟುಗಳ ವರದಿ ಮತ್ತು ಮನಿ ಲಾಂಡರಿಂಗ್ ಅನ್ನು ಒಳಗೊಂಡಿರುವ ಅಥವಾ ಸಂಶಯಿತ ಪ್ರಕರಣಗಳ ಸರಿಯಾದ ದಾಖಲಾತಿಯನ್ನು ನಿರ್ಧರಿಸಲು ಸೂಕ್ತ ಕ್ರಮಗಳನ್ನು ಸೂಚಿಸಿವೆ. ಯಾವುದೇ ರೀತಿಯ ಮನಿ ಲಾಂಡರಿಂಗ್ ಸಾಧನವಾಗಲು ಉದ್ದೇಶಿಸಿಲ್ಲವೆಂದು ಒಪ್ಪಂದದ ಪ್ರಾರಂಭದಲ್ಲಿಯೇ ಜಾಗರೂಕರಾಗಿರಬೇಕು ಮತ್ತು ಖಚಿತಪಡಿಸಿಕೊಳ್ಳುವುದು ಅವಶ್ಯಕವಾಗಿದೆ.

2002 ರ ಮನಿ ಲಾಂಡರಿಂಗ್ ತಡೆಗಟ್ಟುವಿಕೆ ಕಾಯಿದೆ (ಪಿಎಮ್ಎಲ್ಎ)ಯನ್ನು ಭಾರತ ಸರ್ಕಾರವು 1, ಜುಲೈ 2005 ರಿಂದ ಜಾರಿಗೆ ತಂದಿದೆ. ಕಾಯಿದೆಯ ಪ್ರಕಾರ, ಪ್ರತಿ ಬ್ಯಾಂಕಿಂಗ್ ಕಂಪನಿ, ಹಣಕಾಸು ಸಂಸ್ಥೆ (ವಿಮಾ ಕಂಪನಿಗಳು ಒಳಗೊಂಡಂತೆ) ಮತ್ತು ಮಧ್ಯವರ್ತಿಗಳು, ಪಿಎಮ್ಎಲ್ಎ ಅಡಿಯಲ್ಲಿ ಸೂಚಿಸಲಾದ ಎಲ್ಲ ವಹಿವಾಟುಗಳ ದಾಖಲೆಯನ್ನು ನಿರ್ವಹಿಸಬೇಕು. ಅದೇ ರೀತಿ, ಮನಿ ಲಾಂಡರಿಂಗ್ ವಿರೋಧಿ/ ಭಯೋತ್ಪಾದನೆಯ ವಿರೋಧಿ ಹಣಕಾಸು (ಎಎಮ್ಎಲ್/ ಸಿಎಫ್ ಟಿ)ಗಳ ವಿರುದ್ಧವಾಗಿ ಐಆರ್ ಡಿಎಐ 31, ಮಾರ್ಚ್ 2006 ರಂದು ಮಾರ್ಗಸೂಚಿಗಳನ್ನು ಹೊರಡಿಸಿತು.

ತಮ್ಮ ಗ್ರಾಹಕರ ಗುರುತನ್ನು ಪರಿಶೀಲಿಸಲು ವ್ಯಾಪಾರವು ಬಳಸುವ ಪ್ರಕ್ರಿಯೆಯೇ ನಿಮ್ಮ ಗ್ರಾಹಕರನ್ನು ಅರಿಯಿರಿಯಾಗಿದೆ. ಗುರುತಿನ ಕಳ್ಳತನ, ಹಣಕಾಸು ವಂಚನೆ ಮತ್ತು ಮನಿ ಲಾಂಡರಿಂಗ್ ಗಳನ್ನು ತಡೆಯಲು ವಿವರವಾದ ಮಾಹಿತಿಯನ್ನು ಒದಗಿಸುವಂತೆ ಬ್ಯಾಂಕುಗಳು ಮತ್ತು ವಿಮಾಗಾರರು ತಮ್ಮ ಗ್ರಾಹಕರಿಗೆ ಹೆಚ್ಚು ಬೇಡಿಕೆಯನ್ನಿಡುತ್ತಿದ್ದಾರೆ. ಕೆವೈಸಿ ಮಾರ್ಗಸೂಚಿಗಳ ಉದ್ದೇಶವು ಅಪರಾಧಿಗಳಿಂದ ಹಣಕಾಸು ಸಂಸ್ಥೆಗಳನ್ನು ಮನಿ ಲಾಂಡರಿಂಗ್ ಚಟುವಟಿಕೆಗಳಿಗಾಗಿ ಬಳಸುವುದನ್ನು ತಡೆಯುವುದಾಗಿದೆ.

ಆದ್ದರಿಂದ ವಿಮಾಗಾರರು ತಮ್ಮ ಗ್ರಾಹಕರ ನಿಜವಾದ ಗುರುತನ್ನು ನಿರ್ಧರಿಸುವ ಅಗತ್ಯವಿರುತ್ತದೆ. ಕೆವೈಸಿ ಕಾರ್ಯವಿಧಾನದ ಭಾಗವಾಗಿ ಈ ಕೆಳಗಿನವುಗಳನ್ನು ಪ್ರಸ್ತಾವನೆ ನಮೂನೆ(ಫಾರ್ಮ್)ಯೊಂದಿಗೆ ಪ್ರಸ್ತಾಪಕರು ಸಲ್ಲಿಸುತ್ತಾರೆ ಎಂದು ಏಜೆಂಟರು ಖಚಿತಪಡಿಸಿಕೊಳ್ಳಬೇಕು:

i. ಗುರುತಿನ ಪುರಾವೆ - ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಮತದಾರರ ಗುರುತಿನ ಚೀಟಿ, ಪ್ಯಾನ್ ಕಾರ್ಡ್, ಛಾಯಾಚಿತ್ರಗಳು ಇತ್ಯಾದಿ.
ii. ವಿಳಾಸದ ಪುರಾವೆ - ಡ್ರೈವಿಂಗ್ ಲೈಸೆನ್ಸ್, ಪಾಸ್‌ಪೋರ್ಟ್, ಟೆಲಿಫೋನ್ ಬಿಲ್, ವಿದ್ಯುತ್ ಬಿಲ್, ಬ್ಯಾಂಕ್ ಪಾಸ್ ಬುಕ್ ಇತ್ಯಾದಿ. ವ್ಯಕ್ತಿಗಳು, ಕಾರ್ಪೊರೇಟ್‌ಗಳು, ಪಾಲುದಾರಿಕೆ ಸಂಸ್ಥೆಗಳು, ಟ್ರಸ್ಟ್ ಗಳು ಮತ್ತು ಫೌಂಡೇಶನ್ ಗಳಿಗೆ ವಿಭಿನ್ನ ದಾಖಲಾತಿಗಳನ್ನು ಸೂಚಿಸಲಾಗುತ್ತದೆ
iii. ವಿಶೇಷವಾಗಿ ಹೆಚ್ಚಿನ ಮೌಲ್ಯದ ವಹಿವಾಟುಗಳ ಸಂದರ್ಭದಲ್ಲಿ ಆದಾಯ ಪುರಾವೆ ದಾಖಲೆಗಳು ಮತ್ತು ಆರ್ಥಿಕ ಸ್ಥಾನಮಾನ
iv. ವಿಮಾ ಒಪ್ಪಂದದ ಉದ್ದೇಶ

**a) ವಯಸ್ಸಿನ ಪುರಾವೆ - ವೈಯಕ್ತಿಕ ವಿಮೆಗಳಿಗಾಗಿ**

ಜೀವ, ಆರೋಗ್ಯ, ವೈಯಕ್ತಿಕ ಅಪಘಾತ, ಇತ್ಯಾದಿ, ವ್ಯಕ್ತಿಗೆ ಸಂಬಂಧಿಸಿದ ವಿಮೆಗಳೊಂದಿಗೆ ವ್ಯವಹರಿಸುವಾಗ ವಿಮಾದಾರರ ಅಪಾಯದ ವ್ಯಕ್ತಿಚಿತ್ರಣ(ಪ್ರೊಫೈಲ್)ವನ್ನು ನಿರ್ಧರಿಸಲು ವಿಮಾ ಕಂಪನಿಗಳು ವಯಸ್ಸನ್ನು ಪ್ರಮುಖ ಅಂಶವನ್ನಾಗಿ ಬಳಸುತ್ತವೆ. ಜೀವವಿಮಾ ವ್ಯವಹಾರದಲ್ಲಿ ವಯಸ್ಸು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುವುದರಿಂದ ಜೀವ ವಿಮೆಗಾರರು ವಯಸ್ಸಿಗೆ ಸಂಬಂಧಿಸಿದ ದಾಖಲಾತಿಗಳ ವಿಷಯದಲ್ಲಿ ಹೆಚ್ಚು ವಿವರವಾದ ಮಾನದಂಡಗಳನ್ನು ಅನುಸರಿಸುತ್ತಾರೆ. [ಆದಾಗ್ಯೂ, ಸರ್ಕಾರ, ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಐಆರ್ ಡಿಎಐ ಕೆವೈಸಿ ಮಾನದಂಡಗಳನ್ನು ಅನುಸರಿಸುವ ಬಗ್ಗೆ ಹೆಚ್ಚು ಕಟ್ಟುನಿಟ್ಟಾಗಿವೆ.] ವಯಸ್ಸಿನ ಪುರಾವೆಯನ್ನು ಪರಿಶೀಲಿಸಿದ ನಂತರ ವಯಸ್ಸಿನ ಪ್ರವೇಶವು ವಿಮಾ ಅಂಡರ್ ರೈಟಿಂಗ್ ಪ್ರಕ್ರಿಯೆಯ ಪ್ರಮುಖ ಭಾಗವಾಗಿದೆ.

**i. ಪ್ರಮಾಣಿತ ವಯಸ್ಸಿನ ಪುರಾವೆಗಳು**

ವಿಮಾಗಾರರು ವಯಸ್ಸಿನ ಪುರಾವೆಯಾಗಿ ಪರಿಗಣಿಸುವ ಎರಡು ರೀತಿಯ ವಯಸ್ಸಿನ ಪುರಾವೆಗಳಿವೆ. ಪ್ರಮಾಣಿತ ಅಥವಾ ಅಪ್ರಮಾಣಿತ, ಮಾನ್ಯ ವಯಸ್ಸಿನ ಪುರಾವೆಗಳಾಗಿರಬಹುದು.

- ✓ ಪ್ರಮಾಣಿತ ವಯಸ್ಸಿನ ಪುರಾವೆಗಳನ್ನು ಸಾಮಾನ್ಯವಾಗಿ ಸಾರ್ವಜನಿಕ ಪ್ರಾಧಿಕಾರದಿಂದ ನೀಡಲಾಗುತ್ತದೆ, ಉದಾಹರಣೆಗೆ ಪುರಸಭೆ ಅಥವಾ ಇತರ ಸರ್ಕಾರಿ ಸಂಸ್ಥೆ ನೀಡಿದ ಜನನ ಪ್ರಮಾಣಪತ್ರ, ಶಾಲೆಯನ್ನು ಬಿಡುವ ಪ್ರಮಾಣಪತ್ರ, ಪಾಸ್‌ಪೋರ್ಟ್ ಇತ್ಯಾದಿ.
- ✓ ಪ್ರಮಾಣಿತ ವಯಸ್ಸಿನ ಪುರಾವೆ ಲಭ್ಯವಿಲ್ಲದಿದ್ದಾಗ (ಸಿದ್ಧವಾಗಿ ಸ್ವೀಕರಿಸಲಾಗುವುದಿಲ್ಲ)

ಅಪ್ರಮಾಣಿತ ಕೆಲವು ದಾಖಲೆಗಳನ್ನು ಪ್ರಮಾಣಿತ ವಯಸ್ಸಿನ ಪುರಾವೆಗಳನ್ನಾಗಿ ಪರಿಗಣಿಸಲಾಗುತ್ತದೆ:

i. ಶಾಲೆ ಅಥವಾ ಕಾಲೇಜು ಪ್ರಮಾಣಪತ್ರ

ii. ಪುರಸಭೆಯ ದಾಖಲೆಗಳಿಂದ ಪಡೆಯಲಾದ ಜನನ ಪ್ರಮಾಣಪತ್ರ

iii. ಪಾಸ್ ಪೋರ್ಟ್

iv. ಪ್ಯಾನ್ ಕಾರ್ಡ್

v. ಸೇವೆಯ ದಾಖಲೆಯ ನೋಂದಣಿ

vi. ರಕ್ಷಣಾ ಸಿಬ್ಬಂದಿಯ ಸಂದರ್ಭದಲ್ಲಿ ಗುರುತಿನ ಚೀಟಿ

vii. ಸೂಕ್ತ ಪ್ರಾಧಿಕಾರದಿಂದ ನೀಡಲಾದ ವಿವಾಹದ ಪ್ರಮಾಣಪತ್ರ

**ii. ಪ್ರಮಾಣಿತವಾಲ್ಲದ ವಯಸ್ಸಿನ ಪುರಾವೆಗಳು**

ಮೇಲೆ ಹೇಳಿದಂತೆ ಪ್ರಮಾಣಿತ ವಯಸ್ಸಿನ ಪುರಾವೆಗಳು ಲಭ್ಯವಿಲ್ಲದಿದ್ದಾಗ, ಅಪ್ರಮಾಣಿತ ವಯಸ್ಸಿನ ಪುರಾವೆಯನ್ನು ಸಲ್ಲಿಸಲು ಜೀವ ವಿಮಾಗಾರರು ಅನುಮತಿಸಬಹುದು. ಅಪ್ರಮಾಣಿತ ವಯಸ್ಸಿನ ಪುರಾವೆಗಳೆಂದು ಪರಿಗಣಿಸಲಾಗುವ ಕೆಲವು ದಾಖಲೆಗಳು ಈ ಕೆಳಗಿನಂತಿವೆ:

i. ಕುಂಡಲಿ/ ಜಾತಕ

ii. ಪಡಿತರ ಚೀಟಿ/ರೇಷನ್ ಕಾರ್ಡ್

iii. ಸ್ವಯಂ ಘೋಷಣೆಯ ಮೂಲಕ ಶಪಥಪತ್ರ(ಅಫಿಡವಿಟ್)

iv. ಗ್ರಾಮ ಪಂಚಾಯತಿಯ ಪ್ರಮಾಣಪತ್ರ

| ನಿಮ್ಮನ್ನು ಪರೀಕ್ಷಿಸಿ 3 |
|---|

ಈ ಕೆಳಗಿನವುಗಳಲ್ಲಿ ಯಾವುದು ಮಾನ್ಯ ವಯಸ್ಸಿನ ಪುರಾವೆಯಾಗಿ ಸ್ವೀಕಾರಾರ್ಹವಾಗುವುದಿಲ್ಲ?

**I.** ಪುರಸಭೆಯ ದಾಖಲೆಗಳಿಂದ ಪಡೆಯಲಾದ ಜನನ ಪ್ರಮಾಣಪತ್ರ

**II.** ವಿಧಾನಸಭೆಯ ಸದಸ್ಯರು ನೀಡಿದ ಜನನ ಪ್ರಮಾಣಪತ್ರ

**III.** ಪಾಸ್ ಪೋರ್ಟ್

**IV.** ಪ್ಯಾನ್ ಕಾರ್ಡ್

## ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು

ಉತ್ತರ 1 - ಸರಿಯಾದ ಆಯ್ಕೆ I ಆಗಿದೆ

ಉತ್ತರ 2 - ಸರಿಯಾದ ಆಯ್ಕೆ II ಆಗಿದೆ

ಉತ್ತರ 3 - ಸರಿಯಾದ ಆಯ್ಕೆ II ಆಗಿದೆ

## ಸಾರಾಂಶ

- ವಿವರಣಾಪತ್ರ (ಪ್ರಾಸ್ಪೆಕ್ಟಸ್) ಎನ್ನುವುದು ಉತ್ಪನ್ನದ ಬಗ್ಗೆ ವಿವರಗಳನ್ನು ಒದಗಿಸುವ ವಿಮಾ ಕಂಪನಿಗಳು ಬಳಸುವ ಔಪಚಾರಿಕ ಕಾನೂನು ದಾಖಲೆಯಾಗಿದೆ.
- ಪ್ರಸ್ತಾವನೆಯನ್ನು ಮಾಡಲು ಬಳಸುವ ಅರ್ಜಿ ದಾಖಲೆಯನ್ನು ಸಾಮಾನ್ಯವಾಗಿ 'ಪ್ರಸ್ತಾಪನೆಯ ನಮೂನೆ'ಯೆಂದು ಕರೆಯಲಾಗುತ್ತದೆ.
- ಪ್ರಮಾಣಿತ ವಯಸ್ಸಿನ ಪುರಾವೆಗಳಾಗಿ ಪರಿಗಣಿಸಲಾದ ಕೆಲವು ದಾಖಲೆಗಳು ಶಾಲೆ ಅಥವಾ ಕಾಲೇಜು ಪ್ರಮಾಣಪತ್ರ, ಪುರಸಭೆಯ ದಾಖಲೆಗಳಿಂದ ಪಡೆಯಲಾದ ಜನನ ಪ್ರಮಾಣಪತ್ರ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.
- ವಿಮಾಗಾರರು ತಮ್ಮ ಗ್ರಾಹಕರ ನಿಜವಾದ ಗುರುತನ್ನು ನಿರ್ಧರಿಸುವ ಅಗತ್ಯವಿದೆ. ಕೆವೈಸಿ ದಾಖಲೆಗಳಾದ ವಿಳಾಸದ ಪುರಾವೆ, ಪ್ಯಾನ್ ಕಾರ್ಡ್ ಮತ್ತು ಛಾಯಾಚಿತ್ರಗಳು ಇತ್ಯಾದಿಗಳನ್ನು ಕೆವೈಸಿ ಕಾರ್ಯವಿಧಾನದ ಭಾಗವಾಗಿ ಸಂಗ್ರಹಿಸಬೇಕಾಗುತ್ತದೆ.

## ಪ್ರಮುಖ ಪದಗಳು

1. ವಿವರಣಾ ಪತ್ರ(ಪ್ರಾಸ್ಪೆಕ್ಟಸ್)
2. ಪ್ರಸ್ತಾಪನೆಯ ನಮೂನೆ
3. ನೈತಿಕ ಅಪಾಯ
4. ನಿಮ್ಮ ಗ್ರಾಹಕರನ್ನು ಅರಿಯಿರಿ(ಕೆವೈಸಿ)
5. ವಯಸ್ಸಿನ ಪುರಾವೆ
6. ಪ್ರಮಾಣಿತ ಮತ್ತು ಅಪ್ರಮಾಣಿತ ವಯಸ್ಸಿನ ಪುರಾವೆಗಳು
7. ಫ್ರೀ ಲುಕ್ ಅವಧಿ

# ಅಧ್ಯಾಯ C-08

# ಗ್ರಾಹಕ ಸೇವೆ

**ಅಧ್ಯಾಯ ಪರಿಚಯ**

ಈ ಅಧ್ಯಾಯದಲ್ಲಿ ನೀವು ಗ್ರಾಹಕ ಸೇವೆಯ ಪ್ರಾಮುಖ್ಯತೆಯನ್ನು ಕಲಿಯುವಿರಿ. ಗ್ರಾಹಕರಿಗೆ ಸೇವೆಯನ್ನು ಒದಗಿಸುವಲ್ಲಿ ಏಜೆಂಟರ ಪಾತ್ರವನ್ನು ನೀವು ಕಲಿಯುವಿರಿ. ಗ್ರಾಹಕರೊಂದಿಗೆ ಹೇಗೆ ಸಂವಹನ ನಡೆಸಬೇಕು ಮತ್ತು ಸಂಬಂಧ ಹೊಂದಬೇಕು ಎಂಬುದನ್ನು ಸಹ ನೀವು ಕಲಿಯಲಿರುವಿರಿ.

**ಕಲಿಕೆಯ ಫಲಿತಾಂಶಗಳು**

**A.** ಗ್ರಾಹಕ ಸೇವೆ - ಸಾಮಾನ್ಯ ಪರಿಕಲ್ಪನೆಗಳು

**B.** ಗ್ರಾಹಕ ಸೇವೆಯನ್ನು ಒದಗಿಸುವಲ್ಲಿ ಏಜೆಂಟರ ಪಾತ್ರ

**C.** ಗ್ರಾಹಕ ಸೇವೆಯಲ್ಲಿ ಸಂವಹನ ಕೌಶಲ್ಯ

**D.** ಅಮೌಖಿಕ(ಮಾತಿಲ್ಲದ) ಸಂವಹನ

**E.** ನೈತಿಕ ನಡವಳಿಕೆ

ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ನೀವು ಈ ಕೆಳಗೆ ನೀಡಿದ ವಿಷಯಗಳನ್ನು ತಿಳಿದುಕೊಳ್ಳಬಹುದು:

ಗ್ರಾಹಕ ಸೇವೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದು

1. ಸೇವೆಯ ಗುಣಮಟ್ಟವನ್ನು ವಿವರಿಸುವುದು
2. ವಿಮಾ ಉದ್ಯಮದಲ್ಲಿ ಸೇವೆಯ ಪ್ರಾಮುಖ್ಯತೆಯನ್ನು ಪರೀಕ್ಷಿಸುವುದು
3. ಉತ್ತಮ ಸೇವೆಯನ್ನು ಒದಗಿಸುವಲ್ಲಿ ವಿಮಾ ಏಜೆಂಟರ ಪಾತ್ರವನ್ನು ಚರ್ಚಿಸುವುದು
4. ಸಂವಹನದ ಪ್ರಕ್ರಿಯೆಯನ್ನು ವಿವರಿಸುವುದು
5. ಅಮೌಖಿಕ(ಮಾತಿಲ್ಲದ) ಸಂವಹನದ ಪ್ರಾಮುಖ್ಯತೆಯನ್ನು ಪ್ರದರ್ಶಿಸುವುದು
6. ನೈತಿಕ ನಡವಳಿಕೆಯನ್ನು ಶಿಫಾರಸು ಮಾಡುವುದು

## A. ಗ್ರಾಹಕ ಸೇವೆ – ಸಾಮಾನ್ಯ ಪರಿಕಲ್ಪನೆಗಳು

**1. ಗ್ರಾಹಕ ಸೇವೆ ಏಕೆ ಬೇಕು?**

ಗ್ರಾಹಕರು ಯಾವುದೇ ಉದ್ಯಮದ ಒಂದು ಪ್ರಮುಖ ಭಾಗವಾಗಿದ್ದಾರೆ ಮತ್ತು ಯಾವುದೇ ಉದ್ಯಮವು ಅವರನ್ನು ಅಸಡ್ಡೆಯಿಂದ ಪರಿಗಣಿಸುವುದನ್ನು ತಾಳಿಕೊಳ್ಳಲು ಶಕ್ತರಾಗುವುದಿಲ್ಲ. ಸೇವಾ ವಲಯದಲ್ಲಿ ಅದರಲ್ಲೂ ವಿಮೆಗೆ ಗ್ರಾಹಕ ಸೇವೆ ಮತ್ತು ಸಂಬಂಧಗಳ ಪಾತ್ರವು ಹೆಚ್ಚು ಮುಖ್ಯವಾಗಿದೆ.

ಪ್ರತಿಯೊಂದು ಉದ್ಯಮವು ತನ್ನ ಗ್ರಾಹಕರನ್ನು ಸಂತೋಷಪಡಿಸುವ ಗುರಿಯನ್ನು ಹೊಂದಿರುತ್ತದೆ. ಇದನ್ನು ವಿಮೆಯನ್ನು ಖರೀದಿಸುವುದು ಕಾರನ್ನು ಖರೀದಿಸುವುದಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಪರಿಶೀಲಿಸುವ ಮೂಲಕ ವಿವರಿಸಬಹುದು.

ಕಾರನ್ನು ನೋಡಬಹುದು, ಸ್ಪರ್ಶಿಸಬಹುದು, ಪರೀಕ್ಷಿಸಬಹುದು ಮತ್ತು ಅನುಭವಿಸಬಹುದು, ಆದರೆ ಕಾರಿನ ವಿಮೆಯು ಅಪಘಾತದಿಂದ ಕಾರಿಗೆ ನಷ್ಟ ಅಥವಾ ಹಾನಿಯಾಗಿದ್ದರೆ ಪಾವತಿಸುವ ಕೇವಲ ಭರವಸೆಯಾಗಿದೆ. ಈ ಭರವಸೆಯು ಅಮೂರ್ತವಾಗಿದೆ - ಇದನ್ನು ನೋಡಲಾಗುವುದಿಲ್ಲ, ಸ್ಪರ್ಶಿಸಲಾಗುವುದಿಲ್ಲ ಅಥವಾ ಅನುಭವಿಸಲಾಗುವುದಿಲ್ಲ.

ಕಾರನ್ನು ಅರ್ಥಮಾಡಿಕೊಳ್ಳಲು ಮತ್ತು ಅನುಭವಿಸಲು ಕಾರಿನ ಗ್ರಾಹಕರಿಗೆ ಸುಲಭವಾಗಿ ಸಾಧ್ಯವಾಗುತ್ತದೆ, ವಿಮೆಯ ಗ್ರಾಹಕರು ನಷ್ಟ ಸಂಭವಿಸಿದಾಗ ಮತ್ತು ವಿಮಾ ಕಂಪನಿಯು ಕ್ಲೇಮ್ ಅನ್ನು ಇತ್ಯರ್ಥಪಡಿಸಿದಾಗ ಮಾತ್ರ ಅವರು ಖರೀದಿಸುವ ವಿಮಾ ರಕ್ಷಣೆಯನ್ನು ಮೌಲ್ಯಮಾಪನವನ್ನು ಮಾಡಬಹುದು ಮತ್ತು ಅನುಭವಿಸಬಹುದು. ಎಲ್ಲ ಗ್ರಾಹಕರು ಇದನ್ನು ಅನುಭವಿಸುವ ಅವಕಾಶವನ್ನು ಪಡೆಯುವುದಿಲ್ಲ. ವಿಮೆಯಲ್ಲಿ, ಅಂತಹ ಪರಿಸ್ಥಿತಿಯು ಉದ್ಭವಿಸಿದಾಗ, ಸೇವೆಯು ನಿರೀಕ್ಷೆಗಳನ್ನು ಮೀರಿಸಿದರೆ, ಗ್ರಾಹಕರು ಸಂತೋಷಪಡುತ್ತಾರೆ.

**2. ಸೇವೆಯ ಗುಣಮಟ್ಟ**

ವಿಮಾ ಕಂಪನಿಗಳು ಮತ್ತು ಅವರ ಏಜೆಂಟರನ್ನೊಳಗೊಂಡಿರುವ ಅವರ ಸಿಬ್ಬಂದಿಗಳು ಉತ್ತಮ ಗುಣಮಟ್ಟದ ಸೇವೆಯನ್ನು ಸಲ್ಲಿಸುವುದು ಮತ್ತು ಗ್ರಾಹಕರನ್ನು ಸಂತೋಷಪಡಿಸುವುದು ಅವಶ್ಯಕವಾಗಿದೆ.

**ಆದರೆ ಉತ್ತಮ ಗುಣಮಟ್ಟದ ಸೇವೆಯೆಂದರೇನು? ಅದರ ವೈಶಿಷ್ಟ್ಯತೆಗಳೇನು?**

ಜೀತಮ್ಲ್, ಪರಶುರಾಮನ್ ಮತ್ತು ಬೆರ್ರಿಯ ಸೇವೆಯ ಗುಣಮಟ್ಟಕ್ಕೆ ಪ್ರಸಿದ್ಧವಾದ ಸರ್ವಕ್ವಾಲ್ ವಿಧಾನವು ಸೇವಾ ಗುಣಮಟ್ಟದ 5 ಪ್ರಮುಖ ಸೂಚಕಗಳನ್ನು ಎತ್ತಿ ತೋರಿಸುತ್ತದೆ:

a) **ವಿಶ್ವಾಸಾರ್ಹತೆ:** ಭರವಸೆ ನೀಡಲಾದ ಸೇವೆಯನ್ನು ವಿಶ್ವಾಸಾರ್ಹವಾಗಿ ಮತ್ತು ನಿಖರವಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಉತ್ತಮ ಸೇವೆಯ ಪ್ರಮುಖ ಸೂಚಕವೆಂದು ಪರಿಗಣಿಸಲಾಗುತ್ತದೆ. ಇದು ನಂಬಿಕೆಯ ನಿರ್ಮಾಣದ ಅಡಿಪಾಯವಾಗಿದೆ.

b) **ತ್ವರಿತವಾಗಿ ಸ್ಪಂದಿಸುವಿಕೆ:** ಗ್ರಾಹಕರಿಗೆ ಸಹಾಯ ಮಾಡಲು ಮತ್ತು ಗ್ರಾಹಕರ ಅಗತ್ಯಗಳಿಗೆ ತ್ವರಿತ ಪ್ರತಿಕ್ರಿಯೆಯನ್ನು ಒದಗಿಸುವಲ್ಲಿಯ ಸೇವಾ ಸಿಬ್ಬಂದಿಯ ಇಚ್ಛೆ ಮತ್ತು ಸಾಮರ್ಥ್ಯವನ್ನು ಇದು ಸೂಚಿಸುತ್ತದೆ. ಸೇವೆಯನ್ನು ನೀಡುವಾಗ ವೇಗ, ನಿಖರತೆ ಮತ್ತು ಮನೋವೃತ್ತಿಯಂತಹ ಸೂಚಕಗಳಿಂದ ಇದನ್ನು ಅಳೆಯಬಹುದು.

c) **ಭರವಸೆ:** ಇದು ಗ್ರಾಹಕರ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಪೂರೈಸುವಲ್ಲಿ ಉದ್ಯೋಗಿ ಅಥವಾ ಏಜೆಂಟರು ಪ್ರದರ್ಶಿಸುವ ಜ್ಞಾನ, ಸಾಮರ್ಥ್ಯ ಮತ್ತು ಸೌಜನ್ಯವನ್ನು ಸೂಚಿಸುತ್ತದೆ, ಮತ್ತು ಅಪರೋಕ್ಷವಾಗಿ ನಂಬಿಕೆ ಮತ್ತು ವಿಶ್ವಾಸವನ್ನು ಸಂಕೇತಿಸುತ್ತದೆ.

d) **ಸಹಾನುಭೂತಿ:** ಸಹಾನುಭೂತಿಯನ್ನು ಮಾನವ ಸ್ಪರ್ಶವೆಂದು ವಿವರಿಸಲಾಗಿದೆ. ಇದು ಗ್ರಾಹಕರಿಗೆ ಒದಗಿಸಿದ ಸೌಮ್ಯ ವರ್ತನೆ ಮತ್ತು ವೈಯಕ್ತಿಕ ಗಮನದಲ್ಲಿ ಪ್ರತಿಫಲಿಸುತ್ತದೆ.

e) **ಮೂರ್ತರೂಪಗಳು:** ಇದು ಸ್ಥಳ, ರಚನೆ ಮತ್ತು ಸ್ವಚ್ಛತೆಯಂತಹ ಭೌತಿಕ ಪರಿಸರದ ಅಂಶಗಳನ್ನು ಪ್ರತಿನಿಧಿಸುತ್ತದೆ ಅಲ್ಲದೇ ಸೇವಾ ಪೂರೈಕೆದಾರರನ್ನು ಸಂಪರ್ಕಿಸುವಾಗ ಗ್ರಾಹಕರು ಅನುಭವಿಸುವ ವೃತ್ತಿಪರತೆಯ ಪ್ರಜ್ಞೆಯನ್ನು ಸಹ ಪ್ರತಿನಿಧಿಸುತ್ತದೆ. ಮೊದಲ ಅನಿಸಿಕೆಗಳು ದೀರ್ಘಕಾಲ ಉಳಿಯುತ್ತವೆ.

### 3. ಗ್ರಾಹಕ ಸೇವೆ ಮತ್ತು ವಿಮೆ

ವಿಮಾ ಉದ್ಯಮದಲ್ಲಿ ಉನ್ನತ ಸ್ಥಾನವನ್ನು ತಲುಪುವದು ಮತ್ತು ಅಲ್ಲಿಯೇ ಉಳಿಯುವ ರಹಸ್ಯವು ಹೆಚ್ಚಿನ ಸಂಖ್ಯೆಯಲ್ಲಿ ಅಸ್ತಿತ್ವದಲ್ಲಿರುವ ಗ್ರಾಹಕರ ಪ್ರೋತ್ಸಾಹ ಮತ್ತು ಬೆಂಬಲವನ್ನು ಪಡೆಯುವುದರಲ್ಲಿದೆ ಎಂದು ವಿಮಾ ಉದ್ಯಮದಲ್ಲಿಯ ಪ್ರಮುಖ ಮಾರಾಟ ಉತ್ಪಾದಕರು ಹೇಳುತ್ತಾರೆ. ಈ ಗ್ರಾಹಕರು ಅಸ್ತಿತ್ವದಲ್ಲಿರುವ ಒಪ್ಪಂದಗಳ ನವೀಕರಣದಿಂದ ಕಮಿಷನ್ ಗಳ ಮೂಲವಾಗಿದೆ. ಇವುಗಳು ಹೊಸ ಗ್ರಾಹಕರನ್ನು ಪಡೆದುಕೊಳ್ಳುವಲ್ಲಿ ಪ್ರಮುಖ ಮೂಲವಾಗಬಹುದು.

ವಿಮಾ ಮಾರಾಟದಲ್ಲಿ ಯಶಸ್ಸಿನ ಒಂದು ವಿಶೇಷ ಮಂತ್ರವೆಂದರೆ ತಮ್ಮ ಖರೀದಿದಾರರನ್ನು ತಮ್ಮ ಗ್ರಾಹಕರನ್ನಾಗಿ ಪರಿವರ್ತಿಸಲು ಸಾಧ್ಯವಾಗುತ್ತದೆ. ಖರೀದಿದಾರರು ಉತ್ಪನ್ನವನ್ನು ಖರೀದಿಸುವವರು. ಮತ್ತೊಂದೆಡೆ, ಗ್ರಾಹಕರೆಂದರೆ ಏಜೆಂಟರು ಜೀವನಕ್ಕೆ ಸಂಬಂಧಿಸಿರುವ ಜನರಾಗಿದ್ದು, ಆತ / ಆಕೆಯಿಂದ ವಿಮೆಯನ್ನು ಖರೀದಿಸುವುದನ್ನು ಮುಂದುವರಿಸುತ್ತಾರೆ ಮತ್ತು ಪ್ರಾಯಶಃ ಇತರ ಗ್ರಾಹಕರನ್ನು ತಲುಪುವಲ್ಲಿ ಮತ್ತು ಮಾರಾಟ ಮಾಡುವಲ್ಲಿ ಏಜೆಂಟರಗೆ ಸಹಾಯ ಮಾಡುತ್ತಾರೆ.

ತಮ್ಮ ಗ್ರಾಹಕರಿಗೆ ಸೇವೆ ಸಲ್ಲಿಸುವಲ್ಲಿನ ಆಳವಾದ ಬದ್ಧತೆಯಿಂದ ಕೆಲಸ ಮಾಡುವ ಮೂಲಕ ಗ್ರಾಹಕರನ್ನು ನಿರ್ಮಿಸಲಾಗುತ್ತದೆ. ಗ್ರಾಹಕರನ್ನು ಸಂತೋಷವಾಗಿರಿಸುವುದು ಏಜೆಂಟರು ಮತ್ತು ಕಂಪನಿಗೆ ಹೇಗೆ ಪ್ರಯೋಜನವನ್ನು ನೀಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು, ಗ್ರಾಹಕರ ಜೀವಮಾನದ ಮೌಲ್ಯದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಬೇಕು.

ಗ್ರಾಹಕರ ಜೀವಮಾನದ ಮೌಲ್ಯವನ್ನು ದೀರ್ಘಾವಧಿಯಲ್ಲಿ ಗ್ರಾಹಕರೊಂದಿಗೆ ಉತ್ತಮ ಸಂಬಂಧವನ್ನು ನಿರ್ಮಿಸುವುದರಿಂದ ಪಡೆಯಬಹುದಾದ ಆರ್ಥಿಕ ಪ್ರಯೋಜನಗಳ ಮೊತ್ತವೆಂದು ವ್ಯಾಖ್ಯಾನಿಸಬಹುದು.

**ಚಿತ್ರ 1: ಗ್ರಾಹಕರ ಜೀವಮಾನದ ಮೌಲ್ಯ**




ಸೇವೆಯನ್ನು ಸಲ್ಲಿಸುವ ಮತ್ತು ತನ್ನ ಗ್ರಾಹಕರೊಂದಿಗೆ ನಿಕಟ ಸಂಬಂಧಗಳನ್ನು ನಿರ್ಮಿಸುವ ಏಜೆಂಟರು ವ್ಯವಹಾರವನ್ನು ವಿಸ್ತರಿಸಲು ಸಹಾಯ ಮಾಡುವ ಸದ್ಭಾವನೆ ಮತ್ತು ವ್ಯಾಪಾರ(ಬ್ರಾಂಡ್)ದ ಮೌಲ್ಯವನ್ನು ನಿರ್ಮಿಸುತ್ತಾರೆ.

| **ನಿಮ್ಮನ್ನು ಪರೀಕ್ಷಿಸಿ 1** |
|---|

ಗ್ರಾಹಕರ ಜೀವಿತಾವಧಿಯ ಮೌಲ್ಯದ ಅರ್ಥವೇನು?

**I.** ಗ್ರಾಹಕರ ಜೀವಿತಾವಧಿಯಲ್ಲಿ ಸೇವೆ ಸಲ್ಲಿಸುವಾಗ ಉಂಟಾದ ವೆಚ್ಚಗಳ ಮೊತ್ತ

**II.** ಪಡೆಯಲಾದ ವ್ಯಾಪಾರದ ಆಧಾರದ ಮೇಲೆ ಗ್ರಾಹಕರಿಗೆ ನೀಡಲಾದ ಶ್ರೇಣಿ

**III.** ಗ್ರಾಹಕರೊಂದಿಗೆ ದೀರ್ಘಾವಧಿಯ ಸಂಬಂಧವನ್ನು ನಿರ್ಮಿಸುವ ಮೂಲಕ ಸಾಧಿಸಬಹುದಾದ ಆರ್ಥಿಕ ಪ್ರಯೋಜನಗಳ ಮೊತ್ತ

**IV.** ಗ್ರಾಹಕರಿಗೆ ನೀಡಬಹುದಾದ ಗರಿಷ್ಠ ವಿಮೆ

---

## 4. ಗ್ರಾಹಕ ಸಂಬಂಧಗಳು ಮತ್ತು ಸೇವೆ

ತೃಪ್ತಿಕರ ಮತ್ತು ನಿಷ್ಠಾವಂತ ಗ್ರಾಹಕರನ್ನು ರಚಿಸುವಲ್ಲಿ ಗ್ರಾಹಕ ಸೇವೆಯು ಪ್ರಮುಖ ಅಂಶವಾಗಿದ್ದರೂ, ಅವರೊಂದಿಗೆ ಬಲವಾದ ಸಂಬಂಧವನ್ನು ನಿರ್ಮಿಸುವುದು ಸಹ ಅಗತ್ಯವಾಗಿದೆ. ವಿಮಾಗಾರರ ಬಗ್ಗೆ ಗ್ರಾಹಕರ ಅಭಿಪ್ರಾಯಗಳು ವಿಮಾಗಾರರು ನೀಡುವ ಸೇವೆ ಮತ್ತು ಸಂಬಂಧಗಳ ಅನುಭವವನ್ನು ಅವಲಂಬಿಸಿರುತ್ತದೆ.

ಆರೋಗ್ಯಕರ ಸಂಬಂಧವನ್ನುಂಟುಮಾಡಲು ಏನು ಬೇಕಾಗುತ್ತದೆ? ಸಹಜವಾಗಿ ಹೃದಯದಲ್ಲಿ ನಂಬಿಕೆ ಇದ್ದರೆ ಸಾಧ್ಯ. ಅದೇ ಸಮಯದಲ್ಲಿ, ಆ ನಂಬಿಕೆಯನ್ನು ಬಲಪಡಿಸುವ ಮತ್ತು ಗಟ್ಟಿಗೊಳಿಸುವ ಇತರ ಅಂಶಗಳಿವೆ. ನಾವು ಕೆಲವು ಅಂಶಗಳನ್ನು ಇಲ್ಲಿ ವಿವರಿಸೋಣ.

**ಚಿತ್ರ 2: ನಂಬಿಕೆಯ ಅಂಶಗಳು**




i. ಪ್ರತಿಯೊಂದು ಸಂಬಂಧವು **ಆಕರ್ಷಣೆ**ಯೊಂದಿಗೆ ಪ್ರಾರಂಭವಾಗುತ್ತದೆ: ಆಕರ್ಷಣೆ ಎಂದರೆ ಇಷ್ಟವಾಗುವುದು ಮತ್ತು ಗ್ರಾಹಕರೊಂದಿಗೆ ಬಾಂಧವ್ಯವನ್ನು ಬೆಳೆಸಿಕೊಳ್ಳುವುದು, ಉತ್ತಮವಾದ ಮೊದಲ ಪ್ರಭಾವವನ್ನು ಸೃಷ್ಟಿಸುವುದಾಗಿದೆ. ಆಕರ್ಷಣೆಯನ್ನು ಪ್ರತಿಯೊಂದು ಹೃದಯದ ಬೀಗವನ್ನು ತೆಗೆಯುವ ಕೀಲಿಕೈಯ್ಯೆಂದು ಪರಿಗಣಿಸಲಾಗುತ್ತದೆ. ಅದಿಲ್ಲದೆ, ಸಂಬಂಧವು ಅಸಾಧ್ಯವೇ ಸರಿ. ಓರ್ವ ಮಾರಾಟಗಾರರು ಗ್ರಾಹಕರಿಗೆ ಇಷ್ಟವಾಗದಿದ್ದಲ್ಲಿ ಹೆಚ್ಚು ಮುನ್ನಡೆ ಸಾಧಿಸಲು ಸಾಧ್ಯವಿಲ್ಲ.

ii. ಸಂಬಂಧದ ಎರಡನೇ ಅಂಶವೆಂದರೆ ಉಪಸ್ಥಿತಿ, ಅಗತ್ಯವಿದ್ದಾಗ ಅಲ್ಲಿ ಇರುವುದಾಗಿದೆ

iii. **ಸಂವಹನ:** ಸಂಪೂರ್ಣವಾಗಿ ಉಪಸ್ಥಿತರಾಗಿಲ್ಲದಿದ್ದರೂ ಮತ್ತು ತಮ್ಮ ಗ್ರಾಹಕರ ಎಲ್ಲ ನಿರೀಕ್ಷೆಗಳಿಗೆ ಪೂರ್ಣ ನ್ಯಾಯವನ್ನು ನೀಡಲು ಸಾಧ್ಯವಾಗದಿದ್ದರೂ ಸಹ, **ಭರವಸೆ ನೀಡುವ ರೀತಿಯಲ್ಲಿ ಸಂವಹನ ಮಾಡುವ ಮೂಲಕ, ಸಹಾನುಭೂತಿಯಿಂದ ತುಂಬಿರುವ ಮತ್ತು ಜವಾಬ್ದಾರಿಯ ಪ್ರಜ್ಞೆಯನ್ನು ತಿಳಿಸುವ ಮೂಲಕ ಬಲವಾದ ಸಂಬಂಧವನ್ನು ಕಾಪಾಡಿಕೊಳ್ಳಬಹುದು**.

ಮೇಲೆ ತಿಳಿಸಿದ ಸಂವಹನದ ಆಯಾಮಗಳು ಶಿಸ್ತು ಮತ್ತು ಕೌಶಲ್ಯಗಳ ಅವಶ್ಯಕತೆಯನ್ನು ಕೇಳುತ್ತವೆ. ಅಂತಿಮವಾಗಿ ಓರ್ವರು ಹೇಗೆ ಯೋಚಿಸಬಹುದು ಮತ್ತು ನೋಡಬಹುದು ಎಂಬುದನ್ನು ಅವು ಪ್ರತಿಬಿಂಬಿಸುತ್ತವೆ.

ಗ್ರಾಹಕರನ್ನು ಉಳಿಸಿಕೊಳ್ಳುವ ವೆಚ್ಚವು ಹೊಸ ಗ್ರಾಹಕರನ್ನು ಪಡೆದುಕೊಳ್ಳುವುದಕ್ಕಿಂತ ಕಡಿಮೆಯಾಗಿರುವುದರಿಂದ ಕಂಪನಿಗಳು ಗ್ರಾಹಕ ಸಂಬಂಧದ ನಿರ್ವಹಣೆಯ ಮೇಲೆ ಒತ್ತು ನೀಡುತ್ತವೆ. ಗ್ರಾಹಕರೊಂದಿಗಿನ ಸಂಬಂಧದ ಅವಕಾಶವು ಉದಾ. ಗ್ರಾಹಕರ ವಿಮೆ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವಾಗ, ವ್ಯಾಪ್ತಿಯನ್ನು ವಿವರಿಸುವಾಗ, ನಮೂನೆ(ಫಾರ್ಮ್)ಗಳನ್ನು ಹಸ್ತಾಂತರಿಸುವಾಗ ಇತ್ಯಾದಿ ವಿವಿಧ ಸಂದರ್ಭಗಳಲ್ಲಿ ಉದ್ಭವಿಸುತ್ತದೆ.

## B. ಗ್ರಾಹಕ ಸೇವೆಯನ್ನು ಒದಗಿಸುವಲ್ಲಿ ವಿಮಾ ಏಜೆಂಟರ ಪಾತ್ರ

ಒಬ್ಬ ಏಜೆಂಟರು ಗ್ರಾಹಕರಿಗೆ ಉತ್ತಮ ಸೇವೆಯನ್ನು ಹೇಗೆ ಸಲ್ಲಿಸಬಹುದು ಎಂಬುದನ್ನು ನಾವು ಈಗ ಪರಿಗಣಿಸೋಣ. ಗ್ರಾಹಕರು ಮಾರಾಟಗಾರರಿಂದ ಸಂಪರ್ಕಿಸಲ್ಪಟ್ಟ ಕ್ಷಣದಿಂದ ಕ್ಲೇಮ್ ನ ಇತ್ಯರ್ಥದ ಅಂತಿಮ ಹಂತದವರೆಗೆ ಗ್ರಾಹಕರು ಒಂದು ಅನುಭವದ ಪ್ರಯಾಣವನ್ನು ಮಾಡುತ್ತಾರೆ, ಅದನ್ನು ನಾವು 'ಗ್ರಾಹಕ ಪ್ರಯಾಣ'ವೆಂದು ಕರೆಯುತ್ತೇವೆಂಬುದನ್ನು ಅರಿತುಕೊಳ್ಳುವುದು ಮುಖ್ಯವಾಗಿದೆ. ಏಜೆಂಟರು ಒಪ್ಪಂದದ ಸಂಪೂರ್ಣ ಅವಧಿಯ ಮೂಲಕ ಗ್ರಾಹಕರೊಂದಿಗೆ ಜೊತೆಯಾಗಿರಬೇಕು, ಪ್ರತಿಯೊಂದು ಹಂತದಲ್ಲೂ ಸ್ಮರಣೀಯ ಅನುಭವಗಳನ್ನು ಸೃಷ್ಟಿಸಲು ಪ್ರಯಾಣದ ಪ್ರತಿ ಹಂತದಲ್ಲಿ ಅವನಿಗೆ/ಅವಳಿಗೆ ಸಹಾಯಹಸ್ತ ನೀಡಬೇಕು.

ಪ್ರಯಾಣದಲ್ಲಿನ ಕೆಲವು ಮೈಲಿಗಲ್ಲುಗಳು ಮತ್ತು ಪ್ರತಿ ಹಂತದಲ್ಲೂ ನಿರ್ವಹಿಸಲಾಗುವ ಪಾತ್ರವನ್ನು ನೋಡೋಣ.

### 1. ಮಾರಾಟ

ಮಾರಾಟ ಮಾಡುವುದು ಒಂದು ಕಲೆಯೂ ಹೌದು, ವಿಜ್ಞಾನವೂ ಹೌದು ಎನ್ನಲಾಗುತ್ತದೆ. ಸತತವಾಗಿ ಮತ್ತು ಸರಿಯಾಗಿ ಅನುಸರಿಸಿದರೆ, ಯಶಸ್ಸಿಗೆ ಕಾರಣವಾಗಬಹುದಾದಂತಹ  ಒಂದು ಸರಣಿ ಪ್ರಕ್ರಿಯೆಯನ್ನು ನೀಡುತ್ತದಾದ್ದರಿಂದ ಇದು ಒಂದು ವಿಜ್ಞಾನವಾಗಿದೆ. ಪ್ರತಿಯೊಬ್ಬ ಮಾರಾಟಗಾರನು ಅವನ ಅಥವಾ ಅವಳ ವಿಶಿಷ್ಟ ನಂಬಿಕೆಗಳು, ಶೈಲಿ ಮತ್ತು ವ್ಯಕ್ತಿತ್ವವನ್ನು ಪ್ರಕ್ರಿಯೆಯಲ್ಲಿ ತರುತ್ತಾನೆ ಮತ್ತು ಫಲಿತಾಂಶಗಳು ಪ್ರತಿಯೊಬ್ಬ ವ್ಯಕ್ತಿಯು ಪ್ರಕ್ರಿಯೆಯಲ್ಲಿ ಉಪಯೋಗಿಸುವ ಅವನ ಕೌಶಲ್ಯದ ಮೇಲೆ ಅವಲಂಬಿತವಾಗಿರುತ್ತವೆ ಎಂಬ ಅರ್ಥದಲ್ಲಿ ಇದು ಒಂದು ಕಲೆಯಾಗಿದೆ.

- **ನಿರೀಕ್ಷಣೆ:** ಮಾರಾಟದ ಪ್ರಕ್ರಿಯೆಯು ನಿರೀಕ್ಷಣೆಯೊಂದಿಗೆ ಪ್ರಾರಂಭವಾಗುತ್ತದೆ, ಅಕ್ಷರಶಃ ಇದರರ್ಥ ನಿರೀಕ್ಷಿತ ಗ್ರಾಹಕರಿಗಾಗಿ 'ಹುಡುಕಾಟ' ಎಂದಾಗುತ್ತದೆ. 'ಹುಡುಕುವವರೆಗೂ ಸಿಗುವುದಿಲ್ಲ'ವಾದ್ದರಿಂದ ಹುಡುಕುವುದು ಮುಖ್ಯವಾಗಿದೆ, ಇದು ಪ್ರಕ್ರಿಯೆಯಲ್ಲಿಯ ಪ್ರಮುಖ ಹಂತವಾಗಿದೆ. ಒಬ್ಬ ಏಜೆಂಟರು ಅವರಿಗೆ ತಿಳಿದಿರುವ ಮತ್ತು ಸುಲಭವಾಗಿ ತಲುಪಬಹುದಾದ ಜನರಿಂದ ಮಾಡಲ್ಪಟ್ಟ ವಿಶಿಷ್ಟವಾಗಿ ಅವನ ಅಥವಾ ಅವಳ ನೈಸರ್ಗಿಕ ಮಾರುಕಟ್ಟೆಯೊಂದಿಗೆ ಪ್ರಾರಂಭ ಮಾಡುತ್ತಾರೆ. ತಮ್ಮ ತಕ್ಷಣದ ವಲಯದಿಂದ ಹೊರಗಿರುವ ಜನರ ಹೆಚ್ಚಿನ ನೆಟ್‌ವರ್ಕ್ ಗಳಿಗೆ ಹೋಗುವುದು, ಅವರನ್ನು ತಿಳಿದುಕೊಳ್ಳುವುದು ಮತ್ತು ಅವರಿಗೆ ಪರಿಚಿತರಾಗುವುದರಲ್ಲಿ ಸ್ಪರ್ಧೆಯಿರುತ್ತದೆ.

  ಏಜೆಂಟರಿಗೆ ಗೊತ್ತಿರುವ ಮತ್ತು ಅವರು ಸಂಪರ್ಕಿಸುವ ಎಲ್ಲ ಜನರು ವಿಮೆಗಾಗಿ ಸರಿಯಾದ ಅಭ್ಯರ್ಥಿಗಳಾಗಿಲ್ಲದಿರಬಹುದು ಅಥವಾ ಅವರು ಖರೀದಿಸಲು ಆಸಕ್ತಿಯನ್ನು ಹೊಂದಿಲ್ಲದಿರಬಹುದು. ಆದ್ದರಿಂದ ವಿಮೆಯನ್ನು ಖರೀದಿಸುವ ಸಾಧ್ಯತೆಯಿರುವ ಅರ್ಹತೆಯುಳ್ಳವರನ್ನು ಮಾತ್ರ ಗುರಿ ಮಾಡುವಂತೆ ಅವರ **ಅರ್ಹತೆ**ಯನ್ನು ಪಡೆಯುವುದು ಅವಶ್ಯಕವಾಗಿರುತ್ತದೆ. ಏಜೆಂಟರು ನಿರೀಕ್ಷಿತ ಗ್ರಾಹಕರೊಂದಿಗೆ ಬಲವಾದ ಸಂಬಂಧಗಳನ್ನು ನಿರ್ಮಿಸಲು ಸಾಧ್ಯವಾದಾಗ ಮಾತ್ರ ನಿರೀಕ್ಷಿತ

ಪ್ರಕ್ರಿಯೆಯು ಯಶಸ್ವಿಯಾಗುತ್ತದೆ. ಹೀಗೆ ನಂಬಿಕೆಯನ್ನು ಮಾರಾಟ ಮಾಡುವುದು ಮತ್ತು ಆತ್ಮವಿಶ್ವಾಸವನ್ನು ಬೆಳೆಸುವುದು ಯಾವುದೇ ಮಾರಾಟಗಾರರ ಮೊದಲ ಕಾರ್ಯವಾಗಿದೆ.

- **ಸಂದರ್ಶನಕ್ಕೆ ಆಹ್ವಾನಿಸಿ:** ವೈಯಕ್ತಿಕ ಸಂಬಂಧಗಳು ವಿಮಾ ವ್ಯವಹಾರವನ್ನು ನಿರ್ಮಿಸುವ ಅಡಿಪಾಯವಾಗಿದ್ದರೂ, ತಾವು ಗಳಿಸುವ ಒಳ್ಳೆಯ ಹೆಸರನ್ನು ಮಾರಾಟವನ್ನಾಗಿ ಪರಿವರ್ತಿಸುವುದು ಅವಶ್ಯಕವಾಗಿರುತ್ತದೆ. ವಿವರವಾದ ಮಾರಾಟ ಸಂದರ್ಶನಕ್ಕಾಗಿ ಮಾರಾಟಗಾರನು ಔಪಚಾರಿಕ ಸಂದರ್ಶನವನ್ನು ಹೊಂದಿಸಿದಾಗ ಇದು ಪ್ರಾರಂಭವಾಗುತ್ತದೆ. ಒಬ್ಬರ ವೃತ್ತಿಪರ ಅರ್ಹತೆಗಳನ್ನು ಸಿದ್ಧಮಾಡಲು ಮತ್ತು ಸಾಮಾನ್ಯ ಚರ್ಚೆಗಳಿಂದ ವ್ಯಾಪಾರವನ್ನು ಪ್ರತ್ಯೇಕಿಸಲು ಈ ಹಂತವು ನಿರ್ಣಾಯಕವಾಗಿದೆ.
- ***ಅಗತ್ಯಗಳನ್ನು ನಿರ್ಧರಿಸುವುದು ಮತ್ತು ಪರಿಹಾರವನ್ನು ಶಿಫಾರಸು ಮಾಡುವುದು:*** ಮಾರಾಟದ ಏಜೆಂಟರು ನಿರ್ಧರಿಸುವ ಹಂತಗಳು ಮತ್ತು ನಿರೀಕ್ಷಿತ ಗ್ರಾಹಕರಿಗೆ ವಿಮೆಯು ಪರಿಹಾರವಾಗಿರುವ ನಿಖರವಾದ ಅಗತ್ಯಗಳ ಬಗ್ಗೆ ಅರಿವು ಮೂಡಿಸುವದು ಮಾರಾಟದ ಸಂದರ್ಶನದ ಕೇಂದ್ರಭಾಗವಾಗಿದೆ. ಸೌಮ್ಯವಾದ ಪ್ರಶ್ನೆಗಳನ್ನು ಕೇಳುವ ಮೂಲಕ, ವಿಮೆಯ ಅಗತ್ಯಗಳಿಗೆ ಕಾರಣವಾಗುವ ರಕ್ಷಣೆಯಲ್ಲಿನ ಅಂತರವನ್ನು ಅರ್ಥಮಾಡಿಕೊಳ್ಳುವಲ್ಲಿ ನಿರೀಕ್ಷಿತ ಗ್ರಾಹಕರಿಗೆ ಮಾರ್ಗದರ್ಶನ ಮಾಡುವ ಅವನ/ಅವಳ ಕೌಶಲ್ಯದಿಂದ ನಿಪುಣ ಮಾರಾಟದ ವ್ಯಕ್ತಿಯನ್ನು ಗುರುತಿಸಲಾಗುತ್ತದೆ.

ನಿರೀಕ್ಷಿತ ಗ್ರಾಹಕರಿಗೆ ಅವನ/ಅವಳ ಅಗತ್ಯಗಳನ್ನು ಪೂರೈಸಲು ಸರಿಯಾದ ರೀತಿಯ ವಿಮಾ ಪರಿಹಾರಗಳ ಬಗ್ಗೆ ಉತ್ತಮ ಸಲಹೆಯನ್ನು ನೀಡುವ ಜವಾಬ್ದಾರಿಯನ್ನು ಏಜೆಂಟರು ಹೊಂದಿರುತ್ತಾರೆ. ಮೊದಲನೆಯದಾಗಿ, ವಿಮೆಯು ಪರಿಹಾರವಾಗಿರುವ ನಿಖರವಾದ ಅಗತ್ಯತೆಗಳ ಬಗ್ಗೆ ನಿರೀಕ್ಷಿತ ಗ್ರಾಹಕರು ನಿರ್ಧರಿಸುವಂತೆ ಅರಿವು ಮೂಡಿಸಬೇಕು. ಖರೀದಿಸಬೇಕಾದ ವಿಮಾಮೊತ್ತದ ಬಗ್ಗೆ ಸರಿಯಾದ ಸಲಹೆ ನೀಡುವುದನ್ನು ಸಹ ಇದು ಒಳಗೊಂಡಿದೆ. ಉದಾಹರಣೆಗೆ ಒಬ್ಬ ವ್ಯಕ್ತಿಯು ಖರೀದಿಸಬೇಕಾದ ಜೀವ ವಿಮೆಯ ಮೊತ್ತವನ್ನು ಅವನ/ಅವಳ ಆದಾಯ ಮತ್ತು ಪಾವತಿಸುವ ಸಾಮರ್ಥ್ಯಕ್ಕೆ ಹೊಂದಾಣಿಕೆ ಮಾಡಬೇಕಾಗುತ್ತದೆ.

ವಿಶೇಷವಾಗಿ ಜೀವೇತರ ವಿಮೆಯನ್ನು ಖರೀದಿಸುವಾಗ ಮೂಲಭೂತ ಗ್ರಹಿಕೆಯನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವುದು ಸಹ ಮುಖ್ಯವಾಗಿದೆ: ಅಪಾಯವನ್ನು ಬೇರೆ ರೀತಿಯಲ್ಲಿ ನಿರ್ವಹಿಸಬಹುದಾದ ಸಂದರ್ಭದಲ್ಲಿ ವಿಮೆ ಮಾಡುವುದನ್ನು ಶಿಫಾರಸು ಮಾಡಬೇಡಿ.

ವಿಮೆ ಅಗತ್ಯವಿದೆಯೇ ಅಥವಾ ಇಲ್ಲವೇ ಎಂಬುದು ಸಂದರ್ಭಗಳ ಮೇಲೆ ಅವಲಂಬಿತವಾಗಿರುತ್ತದೆ. ಒಳಗೊಂಡಿರುವ ನಷ್ಟಕ್ಕೆ ಹೋಲಿಸಿದರೆ ಕಂತು ಪಾವತಿ ಮೊತ್ತವು ಅಧಿಕವಾಗಿದ್ದರೆ, ತಾವೇ ಅಪಾಯವನ್ನು ಭರಿಸುವಂತೆ ಸಲಹೆ ನೀಡಬಹುದು. ಇನ್ನೊಂದೆಡೆ, ಅಪಾಯದ ನಷ್ಟದ ಪರಿಣಾಮಗಳು ತೀವ್ರವಾಗಿದ್ದರೆ, ಅದರ ವಿರುದ್ಧ ವಿಮೆಯನ್ನು ಮಾಡುವುದು ಬುದ್ಧಿವಂತಿಕೆಯಾಗಿದೆ.

**ಉದಾಹರಣೆ**

ಪ್ರವಾಹ ಪೀಡಿತ ಪ್ರದೇಶದಲ್ಲಿ ವಾಸಿಸುವ ಓರ್ವ ಮನೆಯ ಮಾಲೀಕರಿಗೆ, ಪ್ರವಾಹದ ವಿರುದ್ಧ ಆಡ್-ಆನ್ ಕವರ್ ಅನ್ನು ಖರೀದಿಸುವುದು ಸಹಾಯಕವಾಗಿದೆ ಎಂದು ಸಾಬೀತುಪಡಿಸುತ್ತದೆ. ಮತ್ತೊಂದೆಡೆ, ಮನೆಯ ಮಾಲೀಕರು ಪ್ರವಾಹದ ಅಪಾಯವು ಅತ್ಯಲ್ಪವಾಗಿರುವ ಸ್ಥಳದಲ್ಲಿ ಮನೆಯನ್ನು ಹೊಂದಿದ್ದರೆ ಅಂತಹ ಕವರ್ ಅನ್ನು ಪಡೆಯುವ ಅಗತ್ಯವಿರುವುದಿಲ್ಲ.

---

ಖರ್ಚು ಮಾಡಿದ ಪ್ರತಿಯೊಂದು ರೂಪಾಯಿಗೆ ಗರಿಷ್ಠ ಮೊತ್ತದ ವಿಮೆಯನ್ನು ಪಡೆಯುವ ಬಗ್ಗೆ ಅನೇಕ ಗ್ರಾಹಕರು ಹೆಚ್ಚು ಕಾಳಜಿ ವಹಿಸದಿರಬಹುದು, ಆದರೆ ಅಪಾಯವನ್ನು ನಿಭಾಯಿಸುವ ವೆಚ್ಚವನ್ನು ಕಡಿಮೆ ಮಾಡುವಲ್ಲಿ ಮಾತ್ರ ನಿಶ್ಚಿತವಾಗಿ ಆಸಕ್ತಿಯನ್ನು ಹೊಂದಿರುತ್ತಾರೆ. ಗುರುತಿಸಿದ ಅಪಾಯಗಳನ್ನು ಗ್ರಾಹಕರು ಉಳಿಸಿಕೊಳ್ಳಲಾಗದ ಬಗ್ಗೆ ಕಾಳಜಿ ಇರುತ್ತದಾದ್ದದ್ದರಿಂದ ವಿಮೆಯನ್ನು ಮಾಡಬೇಕಾಗುತ್ತದೆ.

ಏಜೆಂಟರು ಉತ್ತಮ ಸಲಹೆಯನ್ನು ಒದಗಿಸಿದಾಗ ಯಶಸ್ವಿಯಾಗುತ್ತಾರೆ. ಏಜೆಂಟರು ಗ್ರಾಹಕರೊಂದಿಗೆ ಪರಸ್ಪರ ತಮ್ಮ ಪಾತ್ರದ ಬಗ್ಗೆ ನಿರಂತರವಾಗಿ ಕೇಳಿಕೊಳ್ಳಬೇಕಾಗುತ್ತದೆ. ಅವನು/ಅವಳು ಕೇವಲ ಮಾರಾಟವನ್ನು ಮಾಡಲು ಗ್ರಾಹಕರ ಬಳಿಗೆ ಹೋಗದೇ ಗ್ರಾಹಕರಿಗೆ ಅವನ/ಅವಳ ಅಪಾಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯ ಮಾಡುವ ಒಬ್ಬ ತರಬೇತುದಾರ ಮತ್ತು ಪಾಲುದಾರರಾಗಿ ಸಂಬಂಧವನ್ನು ಬೆಳೆಸಬೇಕು**?**

- **ಅಡಚಣೆ/ಆಕ್ಷೇಪಣೆಗಳನ್ನು ನಿರ್ವಹಿಸುವುದು ಮತ್ತು ಮಾರಾಟವನ್ನು ಮುಕ್ತಾಯಗೊಳಿಸುವುದು:** ಸರಿಯಾದ ಉತ್ಪನ್ನಗಳನ್ನು ಖರೀದಿಸುವ ಬಗ್ಗೆ ಗ್ರಾಹಕರಿಗೆ ಉತ್ತಮ ಸಲಹೆ ಮತ್ತು ಶಿಫಾರಸುಗಳನ್ನು ನೀಡುವುದು ಸಾಕಾಗುವುದಿಲ್ಲ. ಖರೀದಿಸುವ ನಿರ್ಧಾರವನ್ನು ತೆಗೆದುಕೊಳ್ಳಲು ಅವನ/ಅವಳ ಮನವೊಲಿಸುವ ಅಗತ್ಯವಿರುತ್ತದೆ. ಹೆಚ್ಚಾಗಿ ಗ್ರಾಹಕರು ಹಲವಾರು ಪ್ರಶ್ನೆಗಳನ್ನು ಹೊಂದಿರಬಹುದು ಮತ್ತು ಅವರು / ಅವಳು ಖರೀದಿಗೆ ಬದ್ಧರಾಗುವುದನ್ನು ನಿರ್ಧರಿಸುವ ಮೊದಲು ತಿಳಿಸಿಹೇಳಬೇಕಾದ ಆಕ್ಷೇಪಣೆಗಳನ್ನು ಎತ್ತಬಹುದು. ಈ ಆಕ್ಷೇಪಣೆಗಳನ್ನು ನಿರ್ವಹಿಸುವಾಗ, ಗ್ರಾಹಕರಿಂದ ಎತ್ತಲಾದ ಆಕ್ಷೇಪಣೆಗಳು ಗುರುತಿಸಬೇಕಾದ ಮತ್ತು ಪರಿಹರಿಸಬೇಕಾದ ಮಹತ್ವದ ಕಳವಳಗಳನ್ನು ಪ್ರತಿಬಿಂಬಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾಗಿರುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ, ಬರಿಯ ಮಾರಾಟಗಾರನ ಪಾತ್ರಕ್ಕಿಂತ ವಿಮಾ ಏಜೆಂಟರ ಪಾತ್ರವು ಹೆಚ್ಚಾಗಿರುತ್ತದೆ. ಅವನು/ಅವಳು ಅಪಾಯದ ಮೌಲ್ಯಮಾಪಕ, ಅಂಡರ್ ರೈಟರ್, ಅಪಾಯ ನಿರ್ವಹಣಾ ಸಲಹಾಗಾರ, ವೈಯಕ್ತಿಕ(ಕಸ್ಟಮೈಸ್)ಗೊಳಿಸಿದ ಪರಿಹಾರಗಳ ವಿನ್ಯಾಸಕ ಮತ್ತು ಸಂಬಂಧವನ್ನು ನಿರ್ಮಿಸುವ (ನಂಬಿಕೆ ಮತ್ತು ದೀರ್ಘಾವಧಿಯ ಸಂಬಂಧಗಳನ್ನು ನಿರ್ಮಿಸುವಲ್ಲಿ ಕುಶಲರಾದ)ವವರಾಗಿರಬೇಕು.

## 2. ಪ್ರಸ್ತಾವನೆಯ ಹಂತ

ಗ್ರಾಹಕರಿಗೆ ವಿಮೆಯ ಪ್ರಸ್ತಾವನೆಯನ್ನು ಭರ್ತಿ ಮಾಡುವಲ್ಲಿ ಏಜೆಂಟರು ಸಹಾಯ ಮಾಡಬೇಕು. ಅದರಲ್ಲಿಯ ಹೇಳಿಕೆಗಳಿಗೆ ವಿಮಾದಾರರು ಜವಾಬ್ದಾರರಾಗಿರುತ್ತಾರೆ. ಪ್ರಸ್ತಾವನೆಯ ನಮೂನೆಯ ಪ್ರಮುಖ ಅಂಶಗಳನ್ನು ನಂತರದ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಏಜೆಂಟರು ಪ್ರಸ್ತಾವನೆಯ ನಮೂನೆಯಲ್ಲಿಯ ಪ್ರತಿಯೊಂದು ಪ್ರಶ್ನೆಗಳಿಗೆ ಉತ್ತರವಾಗಿ ಭರ್ತಿ ಮಾಡಬೇಕಾದ ವಿವರಗಳನ್ನು ಪ್ರಸ್ತಾಪಕರಿಗೆ ವಿವರಿಸಬೇಕು ಮತ್ತು ಸ್ಪಷ್ಟಪಡಿಸಬೇಕು. ಸರಿಯಾದ ಮತ್ತು ಸಂಪೂರ್ಣ ಮಾಹಿತಿಯನ್ನು ನೀಡುವಲ್ಲಿ ವಿಫಲವಾದರೆ ಗ್ರಾಹಕರ ಕ್ಲೇಮ್ ಅಪಾಯಕ್ಕೆ ತಳ್ಳಲ್ಪಡಬಹುದು.

ಕೆಲವೊಮ್ಮೆ ಪಾಲಿಸಿಯನ್ನು ಪೂರ್ಣಗೊಳಿಸುವಲ್ಲಿ ಹೆಚ್ಚುವರಿ ಮಾಹಿತಿಯ ಅಗತ್ಯವಿದ್ದರೆ, ಕಂಪನಿಯು ಗ್ರಾಹಕರಿಗೆ ನೇರವಾಗಿ ಅಥವಾ ಏಜೆಂಟರು/ಸಲಹೆಗಾರರ ಮೂಲಕ ತಿಳಿಸಬಹುದು. ಅವುಗಳ ಅಗತ್ಯವನ್ನು ವಿವರಿಸಿ ಅಂತಹ ಔಪಚಾರಿಕತೆಗಳನ್ನು ಪೂರ್ಣಗೊಳಿಸಲು ಏಜೆಂಟರು ಗ್ರಾಹಕರಿಗೆ ಸಹಾಯ ಮಾಡಬೇಕು.

ಐಆರ್ ಡಿಎಐ (ಇ-ವಿಮಾ ಪಾಲಿಸಿಗಳ ವಿತರಣೆ) ನಿಯಮಗಳು, 2016, ಭೌತಿಕ ಪ್ರಸ್ತಾವನೆಯ ನಮೂನೆಯನ್ನು ಹೋಲುವ ಪ್ರಸ್ತಾಪನೆಯ ಇ- ನಮೂನೆಗಳನ್ನು ಒದಗಿಸುತ್ತದೆ ಮತ್ತು ಪ್ರಸ್ತಾವನೆಗೆ ಒಂದು ಬಾರಿಯ ಪಾಸ್ ವರ್ಡ್(ಮೊಬೈಲ್ ಫೋನ್ ಓಟಿಪಿ) ನಿಂದ ಮೌಲ್ಯೀಕರಿಸಬಹುದಾದ ತನ್ನ ಒಪ್ಪಿಗೆಯನ್ನು ನೀಡಲು ಭಾವೀ ಗ್ರಾಹಕರಿಗೆ ಅವಕಾಶವಿರುತ್ತದೆ.

## 3. ಸ್ವೀಕತಿಯ ಹಂತ

### a) ಕವರ್ ನೋಟ್‌ಗಳು/ವಿಮೆಯ ಪ್ರಮಾಣಪತ್ರಗಳು

ಅಂಡರ್ ರೈಟಿಂಗ್ ಪೂರ್ಣಗೊಂಡ ನಂತರ ಪಾಲಿಸಿಯನ್ನು ಜಾರಿಗೊಳಿಸಲು ಸ್ವಲ್ಪ ಸಮಯ ಬೇಕಾಗಬಹುದು. ಪಾಲಿಸಿಯ ತಯಾರಿಕೆಯು ಬಾಕಿಯಿರುವಾಗ ಅಥವಾ ವಿಮೆಯ ಮಾತುಕತೆಗಳು ಪ್ರಗತಿಯಲ್ಲಿರುವಾಗ ಮತ್ತು ತಾತ್ಕಾಲಿಕ ಆಧಾರದ ಮೇಲೆ ರಕ್ಷಣೆಯನ್ನು ಒದಗಿಸುವುದು ಅವಶ್ಯಕವಾಗಿರುವಾಗ ಅಥವಾ ಅನ್ವಯಿಸುವ ವಾಸ್ತವಿಕವಾದ ದರವನ್ನು ನಿರ್ಧರಿಸಲು ಆವರಣದ ಪರಿಶೀಲನೆ ಜಾರಿಯಲ್ಲಿರುವಾಗ, ಪಾಲಿಸಿಯಡಿಯಲ್ಲಿ ರಕ್ಷಣೆಯನ್ನು ಖಚಿತಪಡಿಸಲು ಕವರ್ ನೋಟ್ ಅನ್ನು ನೀಡಲಾಗುತ್ತದೆ.

ಪ್ರಾಮುಖ್ಯವಾಗಿ ವ್ಯಾಪಾರದ ಸಾಗರ ಮತ್ತು ಮೋಟಾರು ವರ್ಗಗಳಲ್ಲಿ ಕವರ್ ನೋಟ್ ಗಳು ಮತ್ತು ವಿಮೆಯ ಪ್ರಮಾಣಪತ್ರಗಳನ್ನು ಬಳಸಲಾಗುತ್ತಿರುವುದರಿಂದ, ಸಾಮಾನ್ಯ ವಿಮಾ ವಿಭಾಗದಡಿಯಲ್ಲಿ ಕವರ್ ನೋಟ್ ಅನ್ನು ವಿವರವಾಗಿ ಚರ್ಚಿಸಲಾಗಿದೆ.

ಅನ್ವಯವಾಗುವಲ್ಲಿ ಕಂಪನಿಯು ವಿಮಾದಾರರಿಗೆ ಕವರ್ ನೋಟ್ ಅನ್ನು ನೀಡಿದೆ ಎಂದು ಖಚಿತಪಡಿಸಿಕೊಳ್ಳುವುದು ಏಜೆಂಟರ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿಯ ಶೀಘ್ರತೆಯು ಗ್ರಾಹಕರಿಗೆ ತಮ್ಮ ಆಸಕ್ತಿಗಳು ಏಜೆಂಟರು ಮತ್ತು ಕಂಪನಿಯ ಕೈಯಲ್ಲಿ ಸುರಕ್ಷಿತವಾಗಿದೆ ಎಂದು ತಿಳಿಸುತ್ತದೆ.

**b) ಪಾಲಿಸಿ ದಾಖಲೆ**

ಪಾಲಿಸಿಯು ವಿಮೆಯ ಒಪ್ಪಂದದ ಪುರಾವೆಯನ್ನು ಒದಗಿಸುವ ಔಪಚಾರಿಕ ದಾಖಲೆಯಾಗಿದೆ. ಈ ದಾಖಲೆಯನ್ನು 1899 ರ ಭಾರತೀಯ ಮುದ್ರಾಂಕ ಕಾಯಿದೆ(ಇಂಡಿಯನ್ ಸ್ಟ್ಯಾಂಪ್ ಆಕ್ಟ್)ಯ ನಿಬಂಧನೆಗಳಿಗನುಸಾರವಾಗಿ ಮುದ್ರಾಂಕ(ಸ್ಟ್ಯಾಂಪ್) ಮಾಡಬೇಕು. ವಿಮಾಗಾರರು ವಿಮಾದಾರರಿಗೆ ಪಾಲಿಸಿ ದಾಖಲೆಯನ್ನು ನೀಡಲು ಕರ್ತವ್ಯ ಬದ್ಧರಾಗಿದ್ದಾರೆ.

**4. ಕಂತುಪಾವತಿ**

ಕಂತು ಎನ್ನುವುದು ವಿಮಾ ಒಪ್ಪಂದದ ಅಡಿಯಲ್ಲಿ ವಿಮೆಯ ವಿಷಯವಸ್ತುವನ್ನು ವಿಮೆಮಾಡವುದಕ್ಕಾಗಿ ವಿಮಾದಾರರಿಂದ ವಿಮಾಗಾರರಿಗೆ ಪಾವತಿಸಿದ ಪರಿಗಣನೆ ಅಥವಾ ಮೊತ್ತವಾಗಿದೆ.

ಉತ್ತಮ ಏಜೆಂಟರು, ವಿಮಾದಾರನು ತನ್ನ ಪಾಲಿಸಿಯನ್ನು ತೆಗೆದುಕೊಳ್ಳಲು ಅಥವಾ ಮುಂದುವರಿಸಲು ಅಥವಾ ನವೀಕರಿಸಲು ಕಂತು ಮೊತ್ತವನ್ನು ಪಾವತಿಸುತ್ತಾನೆಂದು ಖಚಿತಪಡಿಸಲು ಮತ್ತು ಕಂತು ಪಾವತಿಗೆ ಲಭ್ಯವಿರುವ ವಿವಿಧ ಆಯ್ಕೆಗಳ ಬಗ್ಗೆ ಗ್ರಾಹಕರಲ್ಲಿ ಅರಿವು ಮೂಡಿಸಲು ಸಕ್ರಿಯ ಆಸಕ್ತಿಯನ್ನು ತೆಗೆದುಕೊಳ್ಳುತ್ತಾರೆ.

**5. ಕಂತು ಪಾವತಿ ವಿಧಾನ**

ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಲು ಪ್ರಸ್ತಾಪಿಸುವ ಯಾವುದೇ ವ್ಯಕ್ತಿಯಿಂದ ಅಥವಾ ಪಾಲಿಸಿದಾರರಿಂದ ವಿಮಾಗಾರರಿಗೆ ಪಾವತಿಸಬೇಕಾದ ಕಂತಿನ ಪಾವತಿಯನ್ನು ಈ ಕೆಳಗೆ ನೀಡಿದ ಯಾವುದೇ ಒಂದು ಅಥವಾ ಹೆಚ್ಚಿನ ವಿಧಾನಗಳಲ್ಲಿ ಮಾಡಬಹುದು:

**a)** ನಗದು

**b)** ಚೆಕ್ ಗಳು, ಡಿಮ್ಯಾಂಡ್ ಡ್ರಾಫ್ಟ್ ಗಳು, ಪೇ ಆರ್ಡರ್, ಬ್ಯಾಂಕರ್ಸ್ ಚೆಕ್ ಗಳಂತಹ ಭಾರತದಲ್ಲಿಯ ಯಾವುದೇ ಶೆಡ್ಯೂಲ್ ಬ್ಯಾಂಕ್ ಮೇಲೆ ಡ್ರಾ ಮಾಡಲಾದ ಯಾವುದೇ ಮಾನ್ಯತೆ ಪಡೆದ ಬ್ಯಾಂಕಿಂಗ್ ನೆಗೋಶಬಲ್ ಉಪಕರಣ;

**c)** ಅಂಚೆ ಧನಾದೇಶ(ಮನಿ ಆರ್ಡರ್)

**d)** ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ಗಳು

**e)** ಬ್ಯಾಂಕ್ ಭರವಸೆ ಅಥವಾ ನಗದು ಠೇವಣಿ

**f)** ಇಂಟರ್ ನೆಟ್

**g)** ಇ-ವರ್ಗಾವಣೆ

**h)** ಪ್ರಸ್ತಾಪಕರು ಅಥವಾ ಪಾಲಿಸಿದಾರರು ಅಥವಾ ಜೀವ ವಿಮೆ ಮಾಡಿದವರ ಸ್ಥಾಯಿ ಸೂಚನೆಯ ಮೂಲಕ ನೇರ ಕ್ರೆಡಿಟ್ ಗಳು ಅಥವಾ ಬ್ಯಾಂಕ್ ವರ್ಗಾವಣೆಗಳ ಮೂಲಕ;

i) ಕಾಲಕಾಲಕ್ಕೆ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ಯಾವುದೇ ಇತರ ವಿಧಾನ ಅಥವಾ ಪಾವತಿ;

ಐಆರ್ ಡಿಎ ನಿಯಮಾವಳಿಗಳ ಪ್ರಕಾರ, ಪ್ರಸ್ತಾಪಕರು/ಪಾಲಿಸಿದಾರರು ನೆಟ್ ಬ್ಯಾಂಕಿಂಗ್ ಅಥವಾ ಕ್ರೆಡಿಟ್/ಡೆಬಿಟ್ ಕಾರ್ಡ್ ಮೂಲಕ ಕಂತಿನ ಪಾವತಿಯನ್ನು ಆಯ್ಕೆ ಮಾಡಿಕೊಂಡರೆ, ಅಂತಹ ಪ್ರಸ್ತಾಪಕರು /ಪಾಲಿಸಿದಾರರ ಹೆಸರಿನಲ್ಲಿ ನೀಡಲಾದ ನೆಟ್ ಬ್ಯಾಂಕಿಂಗ್ ಖಾತೆ ಅಥವಾ ಕ್ರೆಡಿಟ್/ಡೆಬಿಟ್ ಕಾರ್ಡ್ ಮೂಲಕ ಮಾತ್ರ ಪಾವತಿಯನ್ನು ಮಾಡಬೇಕು.

## 6. ಪಾಲಿಸಿ ದಾಖಲೆಯ ಜಾರಿ ಮತ್ತು ಕಂತು ಪಾವತಿಗಾಗಿ ರಸೀದಿ ನೀಡಿದ ನಂತರದ ಸೇವೆ

ಗ್ರಾಹಕರಿಂದ ಕಂತು ಪಾವತಿಯಾದ ನಂತರ, ವಿಮಾಗಾರರು ರಶೀದಿಯನ್ನು ನೀಡಲು ಬದ್ಧರಾಗಿರುತ್ತಾರೆ. ಮುಂಗಡವಾಗಿ ಕಂತನ್ನು ಪಾವತಿಸಿದ್ದರೂ ಸಹ ರಸೀದಿಯನ್ನು ನೀಡಬೇಕು.

ಏಜೆಂಟರು ವಿಮಾದಾರರನ್ನು ಸಂಪರ್ಕಿಸಬಹುದು ಮತ್ತು ವಿಮಾ ಕಂಪನಿಯಿಂದ ಪಾಲಿಸಿ ದಾಖಲೆಯನ್ನು ಸ್ವೀಕರಿಸಲಾಗಿದೆಯೇ ಎಂದು ವಿಚಾರಿಸಬಹುದು. ಗ್ರಾಹಕರೊಂದಿಗೆ ಸಂಪರ್ಕ ಸಾಧಿಸಲು ಏಜೆಂಟರಿಗೆ ಇದೊಂದು ಉತ್ತಮ ಅವಕಾಶವನ್ನು ಒದಗಿಸುತ್ತದೆ. ಏಜೆಂಟರು ಯಾವುದೇ ಸಂದೇಹಗಳನ್ನು ಸ್ಪಷ್ಟಗೊಳಿಸಲು ಸಾಧ್ಯವಾಗುತ್ತದೆ ಮತ್ತು ಪಾಲಿಸಿಯ ವಿವಿಧ ನಿಬಂಧನೆಗಳು ಮತ್ತು ಪಾಲಿಸಿದಾರರ ಹಕ್ಕುಗಳು ಮತ್ತು ಸವಲತ್ತುಗಳನ್ನು ವಿವರಿಸಲು ಸಾಧ್ಯವಾಗುತ್ತದೆ. ಇದು ಗ್ರಾಹಕರಿಗೆ ಬದ್ಧತೆಯನ್ನು ತೋರಿಸುತ್ತದೆ ಮತ್ತು ನಿರಂತರ ಬೆಂಬಲ ಮತ್ತು ಸೇವೆಯ ಪ್ರತಿಜ್ಞೆಯನ್ನು ಮಾಡಲು ಅವಕಾಶವನ್ನೊದಗಿಸುತ್ತದೆ. ಪಾಲಿಸಿಯನ್ನು ಹಿಂತಿರುಗಿಸಬಹುದಾದ ಮತ್ತು ಕಂತು ಮೊತ್ತದ ಮರುಪಾವತಿಯನ್ನು ಪಡೆಯಬಹುದಾದ ಫ್ರೀ ಲುಕ್ ಅವಧಿಯ ನಿಬಂಧನೆಯ ಬಗ್ಗೆಯೂ ಸಹ ಗ್ರಾಹಕರಿಗೆ ತಿಳಿಸಬೇಕು.

ಖರೀದಿಸಿದ ಪಾಲಿಸಿಯು ಎಲೆಕ್ಟ್ರಾನಿಕ್ ವಿಮಾ ಪಾಲಿಸಿ ಆಗಿದ್ದರೆ, ಗ್ರಾಹಕರಿಗೆ ನೋಂದಾಯಿತ ವಿಮಾ ರೆಪೊಸಿಟರಿಯ ಮೂಲಕ ಇ-ವಿಮಾ ಖಾತೆಯನ್ನು (ಇ-ಐ-ಎ) ತೆರೆಯಲು ಏಜೆಂಟರು ಸಹಾಯ ಮಾಡಬಹುದು.

ಇದು ಗ್ರಾಹಕರಿಗೆ ಅವನು/ಅವಳು ತಿಳಿದಿರುವ ಪ್ರಾಯಶಃ ಏಜೆಂಟರ ಸೇವೆಗಳ ಪ್ರಯೋಜನ ಪಡೆಯಬಹುದಾದ ಇತರ ವ್ಯಕ್ತಿಗಳ ಹೆಸರುಗಳು ಮತ್ತು ವಿವರಗಳನ್ನು ಕೇಳುವ ಮುಂದಿನ ಹಂತಕ್ಕೆ ದಾರಿ ಮಾಡಿಕೊಡುತ್ತದೆ. ಗ್ರಾಹಕರು ಸ್ವತಃ ಈ ಜನರನ್ನು ಸಂಪರ್ಕಿಸಿ ಮತ್ತು ಅವರಿಗೆ ಏಜೆಂಟರನ್ನು ಪರಿಚಯಿಸಿದರೆ ಅದು ಇನ್ನೂ ಉತ್ತಮವಾಗಿರುತ್ತದೆ.

## 7. ಪಾಲಿಸಿ ನವೀಕರಣ

ಹೆಚ್ಚಿನ ಸಾಮಾನ್ಯ ವಿಮಾ ಪಾಲಿಸಿಗಳನ್ನು ಪ್ರತಿ ವರ್ಷ ನವೀಕರಿಸಬೇಕಾಗುತ್ತದೆ. ಸಾಮಾನ್ಯ ವಿಮಾ ಪಾಲಿಸಿಗಳಿಗಾಗಿ, ಪ್ರತಿ ನವೀಕರಣದ ಸಮಯದಲ್ಲಿ, ಗ್ರಾಹಕರು ಅದೇ ಕಂಪನಿಯೊಂದಿಗೆ ವಿಮೆಯನ್ನು ಮುಂದುವರಿಸುವ ಅಥವಾ ಇನ್ನೊಂದು ಕಂಪನಿಗೆ ಬದಲಾಯಿಸುವ ಆಯ್ಕೆಯನ್ನು ಹೊಂದಿರುತ್ತಾರೆ. ಜೀವ

ವಿಮೆಯ ಸಂದರ್ಭದಲ್ಲಿ, ಗ್ರಾಹಕರು ಕಂತು ಪಾವತಿ ಅವಧಿಯನ್ನು ಆಧರಿಸಿ ನಿಯಮಿತ ಮಧ್ಯಂತರಗಳಲ್ಲಿ ಕಂತನ್ನು ಪಾವತಿಸಿದಾಗ ಪಾಲಿಸಿಯು ಜಾರಿಯಲ್ಲಿರುತ್ತದೆ. ಇದು ಏಕೈಕ ಕಂತು ಪಾವತಿಗಳಿಗೆ ಅನ್ವಯಿಸುವುದಿಲ್ಲ.

ಸಾಮಾನ್ಯವಾಗಿ ಸಾಮಾನ್ಯ ವಿಮಾಗಾರರು ಕಂತು ಪಾವತಿಸುವ ಅವಧಿಯ ಮುಕ್ತಾಯದ ದಿನಾಂಕಕ್ಕಿಂತ ಮುಂಚಿತವಾಗಿ, ಪಾಲಿಸಿಯ ನವೀಕರಣವನ್ನು ಆಹ್ವಾನಿಸುವ ನವೀಕರಣದ ಸೂಚನೆಯನ್ನು ಕಳುಹಿಸುತ್ತಾರೆ.

ಪಾಲಿಸಿಯನ್ನು ನವೀಕರಿಸುವ ಅಥವಾ ಮುಂದುವರಿಸುವ ಗ್ರಾಹಕರ ಆಯ್ಕೆಯು ಸಾಮಾನ್ಯವಾಗಿ ಏಜೆಂಟರು ಮತ್ತು ಕಂಪನಿಯಿಂದ ಸೃಷ್ಟಿಸಲ್ಪಟ್ಟ ನಂಬಿಕೆ ಮತ್ತು ಅಭಿಮಾನದ ಮೇಲೆ ಅವಲಂಬಿತವಾಗಿರುತ್ತದೆ ಮತ್ತು ಏಜೆಂಟರು ನಿಗದಿತ ದಿನಾಂಕದ ಮೊದಲು ಪಾಲಿಸಿಯ ನವೀಕರಣ ಅಥವಾ ನಿರಂತರತೆಯ ಬಗ್ಗೆ ಗ್ರಾಹಕರಿಗೆ ನೆನಪಿಸಲು ಅವರ ಸಂಪರ್ಕದಲ್ಲಿರುವ ಅವಶ್ಯಕತೆಯಿರುತ್ತದೆ.

ಹೆಚ್ಚಿನ ಉತ್ಪಾದಕ ಏಜೆಂಟರು ನಿರಂತರವಾಗಿ ತಮ್ಮ ಗ್ರಾಹಕರೊಂದಿಗೆ ಸಂಪರ್ಕದಲ್ಲಿರುತ್ತಾರೆ ಮತ್ತು ಹಬ್ಬಗಳು ಅಥವಾ ಕುಟುಂಬ ಕಾರ್ಯಕ್ರಮಗಳಂತಹ ವಿವಿಧ ಸಂದರ್ಭಗಳಲ್ಲಿ ತಮ್ಮ ಗ್ರಾಹಕರಿಗೆ ಶುಭಾಶಯ ಕೋರುವುದು ಮತ್ತು ಅವರ ಸಂತೋಷ ಮತ್ತು ದುಃಖಗಳನ್ನು ಹಂಚಿಕೊಳ್ಳಲು ಅವರೊಂದಿಗೆ ಉಪಸ್ಥಿತರಿರುವುದು ಮುಂತಾದ ವಿವಿಧ ಸೇವೆಗಳು ಮತ್ತು ಒಳ್ಳೆಯ ಸಂಬಂಧದ ಮೂಲಕ ಅವರ ನಂಬಿಕೆ ಮತ್ತು ನಿಷ್ಠೆಯನ್ನು ಗೆಲ್ಲುತ್ತಾರೆ.

**8. ಕ್ಲೇಮ್ ಹಂತ**

ನಿರ್ಣಾಯಕ ಪರೀಕ್ಷೆಯು ಕ್ಲೇಮ್ ಇತ್ಯರ್ಥದ ಸಮಯದಲ್ಲಿ ಬರುತ್ತದೆ. ಕ್ಲೇಮ್ ಗೆ ಕಾರಣವಾಗುವ ಘಟನೆಯನ್ನು ತಕ್ಷಣವೇ ವಿಮಾಗಾರರಿಗೆ ತಿಳಿಸಲಾಗಿದೆ ಮತ್ತು ಗ್ರಾಹಕರು ಎಲ್ಲ ಔಪಚಾರಿಕತೆಗಳನ್ನು ಎಚ್ಚರಿಕೆಯಿಂದ ಅನುಸರಿಸುತ್ತಾರೆ ಎಂಬುದನ್ನು ಏಜೆಂಟರು ಖಚಿತಪಡಿಸಿಕೊಳ್ಳಬೇಕು. ಏಜೆಂಟರು ನಷ್ಟವನ್ನು ನಿರ್ಣಯಿಸಲು ಮಾಡಬೇಕಾದ ಎಲ್ಲ ತನಿಖೆಗಳಲ್ಲಿ ಸಹ ಸಹಾಯವನ್ನು ಮಾಡಬಹುದು. ಉತ್ತಮ ಏಜೆಂಟರು ಕ್ಲೇಮ್ ಸಲ್ಲಿಕೆಯ ಔಪಚಾರಿಕತೆಗಳನ್ನು ತ್ವರಿತವಾಗಿ, ಸರಿಯಾಗಿ ಮತ್ತು ಸಂಪೂರ್ಣವಾಗಿ ಪೂರೈಸುವಲ್ಲಿ ಗ್ರಾಹಕರು ಅಥವಾ ಅವರ ಪ್ರತಿನಿಧಿಗಳಿಗೆ ಸಹಾಯ ಮಾಡುತ್ತಾರೆ.

**ನಿಮ್ಮನ್ನು ಪರೀಕ್ಷಿಸಿ 2**

ವಿಮೆಯ ಅಗತ್ಯತೆಯ ಕುರಿತು ಚರ್ಚೆಯ ಅಗತ್ಯವಿಲ್ಲದ ಸನ್ನಿವೇಶವನ್ನು ಗುರುತಿಸಿ.

**I.** ಆಸ್ತಿ ವಿಮೆ

**II.** ವ್ಯಾಪಾರ ಹೊಣೆಗಾರಿಕೆ ವಿಮೆ

**III.** ಮೂರನೇ ವ್ಯಕ್ತಿಯ ಹೊಣೆಗಾರಿಕೆಗಾಗಿ ಮೋಟಾರ್ ವಿಮೆ

**IV.** ಬೆಂಕಿ ವಿಮೆ

## C. ಗ್ರಾಹಕ ಸೇವೆಯಲ್ಲಿ ಸಂವಹನ ಕೌಶಲ್ಯಗಳು

ಕೆಲಸದ ಸ್ಥಳದಲ್ಲಿ ಪರಿಣಾಮಕಾರಿಯಾದ ಕಾರ್ಯಕ್ಷಮತೆಗಾಗಿ ಏಜೆಂಟರು ಮೃದು ಕೌಶಲ್ಯಗಳನ್ನು ಹೊಂದಿರಬೇಕು.

**ಕೆಲಸದಲ್ಲಿ ಮತ್ತು ಹೊರಗೆ ಇತರರೊಂದಿಗೆ ಪರಿಣಾಮಕಾರಿಯಾಗಿ ಸಂವಹನ ನಡೆಸುವ ಸಾಮರ್ಥ್ಯಕ್ಕೆ ಮೃದು ಕೌಶಲ್ಯಗಳು ಸಂಬಂಧಿಸಿವೆ. ಈ ಮೃದು ಕೌಶಲ್ಯಗಳಲ್ಲಿ ಸಂವಹನ ಕೌಶಲ್ಯಗಳು ಹೆಚ್ಚು ಪ್ರಮುಖವಾಗಿವೆ.**

### 1. ಸಂವಹನದ ಪ್ರಕ್ರಿಯೆ

ಸಂವಹನವೆಂದರೇನು?

ಎಲ್ಲ ಸಂವಹನಗಳಲ್ಲಿ ಸಂದೇಶವನ್ನು ಕಳುಹಿಸುವವರು ಇರಬೇಕು ಮತ್ತು ಆ ಸಂದೇಶವನ್ನು ಸ್ವೀಕರಿಸುವ ವ್ಯಕ್ತಿಯ ಅಗತ್ಯವಿರುತ್ತದೆ. ಕಳುಹಿಸುವವರ ಸಂದೇಶವನ್ನು ಸ್ವೀಕರಿಸುವವರು ಅರ್ಥಮಾಡಿಕೊಂಡ ನಂತರ ಪ್ರಕ್ರಿಯೆಯು ಪೂರ್ಣಗೊಳ್ಳುತ್ತದೆ.

**ಚಿತ್ರ 3: ಸಂವನದ ರೂಪಗಳು**




ಸಂವಹನವು ಮುಖಾಮುಖಿಯಾಗಿರಬಹುದು, ಫೋನ್ ಮೂಲಕ ಅಥವಾ ಮೇಲ್ ಅಥವಾ ಇಂಟರ್ನೆಟ್ ಮೂಲಕವಾಗಿರಬಹುದು. ಅದು ಔಪಚಾರಿಕ ಅಥವಾ ಅನೌಪಚಾರಿಕವಾಗಿರಬಹುದು. ಸಂದೇಶದ ವಿಷಯ ಅಥವಾ ರೂಪ ಅಥವಾ ಕಳುಹಿಸಲು ಬಳಸಿದ ಮಾಧ್ಯಮವನ್ನು ಯಾವುದೇ ಆಗಿರಲಿ, ಸಂವಹನ ಮಾಡಬಯಸಿದ್ದನ್ನು ಸ್ವೀಕರಿಸುವವರು ಅರ್ಥಮಾಡಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಮೇಲೆ ಸಂವಹನದ ಪರಿಣಾಮಕಾರಿತ್ವವು ಅವಲಂಬಿತವಾಗಿರುತ್ತದೆ.

ಮೂಲಭೂತವಾಗಿ ವಿಮಾ ಪಾಲಿಸಿಯು ಒಂದು ಭರವಸೆಯಾಗಿರುವುದರಿಂದ, ವಿಮಾಗಾರರಿಂದ ಏನು ಭರವಸೆ ನೀಡಲ್ಪಟ್ಟಿದೆ ಎಂಬುದನ್ನು ವಿಮಾದಾರರು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ಮಧ್ಯವರ್ತಿಯಾಗಿ ಏಜೆಂಟರು ಗ್ರಾಹಕರಿಗೆ ವಿಮೆಯ ನಿಯಮಗಳ ಸಂಪೂರ್ಣ, ನಿಖರವಾದ ಮತ್ತು ನಿಸ್ಸಂದಿಗ್ಧವಾದ ಮಾಹಿತಿಯನ್ನು ಒದಗಿಸುವುದು ಮಾತ್ರವಲ್ಲದೆ, ಗ್ರಾಹಕರು ಹೊಂದಿರಬಹುದಾದ ಸಂದೇಹಗಳು ಅಥವಾ ಪ್ರಶ್ನೆಗಳನ್ನು ಶೋಧಿಸುವುದು ಮತ್ತು ಸ್ಪಷ್ಟಪಡಿಸುವ ಕೆಲಸ ಮಾಡಬೇಕು.

**2. ಪರಿಣಾಮಕಾರಿ ಸಂವಹನಕ್ಕೆ ಅಡೆತಡೆಗಳು**

ಮೇಲಿನ ಸಂವಹನದ ಪ್ರಕ್ರಿಯೆಯಲ್ಲಿಯ ಪ್ರತಿಯೊಂದು ಹಂತದಲ್ಲೂ ಪರಿಣಾಮಕಾರಿ ಸಂವಹನವು ವಿಕೃತಗೊಳ್ಳುವಂತೆ ವಿವಿಧ ರೀತಿಯ ಅಡೆತಡೆಗಳು ಉಂಟಾಗಬಹುದು. ಅಡೆತಡೆಗಳನ್ನು ದೃಶ್ಯೀಕರಿಸುವುದು, ಅರ್ಥಮಾಡಿಕೊಳ್ಳುವುದು ಮತ್ತು ತೆಗೆದುಹಾಕುವುದು ಸವಾಲಾಗಿರುತ್ತದೆ.

**ನಿಮ್ಮನ್ನು ಪರೀಕ್ಷಿಸಿ 3**

ಆರೋಗ್ಯಕರ ಸಂಬಂಧವನ್ನು ಹೊಂದಲು ಯಾವುದು ಬೇಕಾಗಿಲ್ಲ?

**I.** ಆಕರ್ಷಣೆ

**II.** ನಂಬಿಕೆ

**III.** ಸಂವಹನ

**IV.** ಇಷ್ಟವಿಲ್ಲದಿರುವುದು/ದ್ವೇಷ

---

## D. ಅಮೌಖಿಕ ಸಂವಹನ

ಏಜೆಂಟರು ಅರ್ಥಮಾಡಿಕೊಳ್ಳಬೇಕಾದ ಕೆಲವು ಪರಿಕಲ್ಪನೆಗಳನ್ನು ನಾವು ಈಗ ನೋಡೋಣ.

**ಪ್ರಮುಖ**

**1. ಉತ್ತಮವಾದ ಮೊದಲ ಪ್ರಭಾವವನ್ನುಂಟು ಮಾಡುವುದು**

ನಿರೀಕ್ಷಿತ ಗ್ರಾಹಕರು ಏಜೆಂಟರನ್ನು ಅವರ ತೋರಿಕೆ, ದೇಹ ಭಾಷೆ, ನಡವಳಿಕೆ, ಉಡುಗೆ ಮತ್ತು ಮಾತಿನ ಆಧಾರದ ಮೇಲೆ ನಿರ್ಣಯಿಸುತ್ತಾರೆ. ಆಕರ್ಷಣೆಯು ಸಂಬಂಧದ ಮೊದಲ ಸ್ತಂಭವಾಗಿರುವುದರಿಂದ ಮತ್ತು ಮೊದಲ ಅನಿಸಿಕೆಗಳು ದೀರ್ಘಕಾಲ ಉಳಿಯುವುದರಿಂದ, ಉತ್ತಮವಾದ ಮೊದಲ ಪ್ರಭಾವವನ್ನುಂಟು ಮಾಡಲು ಕೆಲವು ಸಲಹೆಗಳನ್ನು ಈ ಕೆಳಗೆ ನೀಡಲಾಗಿದೆ:

i. **ಯಾವಾಗಲೂ ಸಮಯಪಾಲನೆ ಮಾಡಿರಿ**. ಎಲ್ಲಾ ರೀತಿಯ ಸಂಭವನೀಯ ವಿಳಂಬಗಳನ್ನು ತಪ್ಪಿಸಲು ಪ್ರಯತ್ನಿಸುವ ಮೂಲಕ ಕೆಲವು ನಿಮಿಷಗಳ ಮುಂಚಿತವಾಗಿಯೇ ಆಗಮಿಸಲು ಯೋಜನೆ ಮಾಡಿ.

ii. **ನಿಮ್ಮನ್ನು ಸೂಕ್ತವಾಗಿ ಪ್ರಸ್ತುತಪಡಿಸಿ**.

- ✓ **ನಿಮ್ಮ ತೋರಿಕೆ(ಬಾಹ್ಯರೂಪ)ಯು ಸರಿಯಾದ ಮೊದಲ ಪ್ರಭಾವವನ್ನು ಸೃಷ್ಟಿಸಬೇಕು**
- ✓ ನಿಮ್ಮ ಉಡುಗೆಯು ಭೇಟಿ ಅಥವಾ ಸಂದರ್ಭಕ್ಕೆ ಸೂಕ್ತವಾಗಿರಬೇಕು

- ✓ ಉತ್ತಮ ಕೇಶಕರ್ತನ ಮತ್ತು ಕ್ಷೌರ, ಸ್ವಚ್ಛ ಮತ್ತು ಅಚ್ಚುಕಟ್ಟಾದ ಬಟ್ಟೆ, ಸರಿಯಾದ ಮತ್ತು ಅಚ್ಚುಕಟ್ಟಾದ ಅಲಂಕಾರ ಜೊತೆಗೆ ನಿಮ್ಮ ತೋರಿಕೆಯು ಸ್ವಚ್ಛ ಮತ್ತು ಅಚ್ಚುಕಟ್ಟಾಗಿರಬೇಕು.

**iii.** ಬೆಚ್ಚಗಿನ, ಆತ್ಮವಿಶ್ವಾಸ ಮತ್ತು ಗೆಲುವಿನ ನಗು ಒಬ್ಬ ವ್ಯಕ್ತಿಯನ್ನು ಮತ್ತು ಅವನ/ಅವಳ ಪ್ರೇಕ್ಷಕರನ್ನು ತಕ್ಷಣವೇ ಪರಸ್ಪರರನ್ನು ಸುಲಭವಾಗಿ ಸಂಪರ್ಕಸಾಧ್ಯರನ್ನಾಗಿಸುತ್ತದೆ.

**iv. ಮುಕ್ತ ಮನಸ್ಸಿನ, ಆತ್ಮವಿಶ್ವಾಸಯುಕ್ತ ಮತ್ತು ಸಕಾರಾತ್ಮಕರಾಗಿರುವುದು**

- ✓ ದೇಹ ಭಾಷೆಯು ನಂಬಿಕೆ ಮತ್ತು ಆತ್ಮವಿಶ್ವಾಸವನ್ನು ಪ್ರಕ್ಷೇಪಿಸಬೇಕು
- ✓ ವಿಶ್ವಾಸದಿಂದ ನಿಂತುಕೊಳ್ಳಿ, ನಗು, ಕಣ್ಣಿನ ನೇರ ಸಂಪರ್ಕವನ್ನು ಮಾಡಿ, ದೃಢವಾದ ಹಸ್ತಲಾಘವದಿಂದ ಸ್ವಾಗತಿಸಿ
- ✓ ಕೆಲವು ಟೀಕೆಗಳ ಎದುರು ಅಥವಾ ಭೇಟಿಯು ನಿರೀಕ್ಷಿತ ದಿಶೆಯಲ್ಲಿ ನಡೆಯದಿದ್ದರೂ ಸಹ ಸಕಾರಾತ್ಮಕವಾಗಿ ಉಳಿಯಿರಿ
- ✓ **ಇತರ ವ್ಯಕ್ತಿಯಲ್ಲಿ ಆಸಕ್ತಿ -** ಇತರ ವ್ಯಕ್ತಿಯಲ್ಲಿ ಪ್ರಾಮಾಣಿಕವಾಗಿ ಆಸಕ್ತಿಯನ್ನು ತೋರುವುದು ಅತ್ಯಂತ ಮುಖ್ಯವಾದ ವಿಷಯವಾಗಿದೆ.
- ✓ ಒಬ್ಬ ವ್ಯಕ್ತಿಯಾಗಿ ಗ್ರಾಹಕರ ಬಗ್ಗೆ ತಿಳಿದುಕೊಳ್ಳಲು ಸ್ವಲ್ಪ ಸಮಯವನ್ನು ತೆಗೆದುಕೊಳ್ಳಿ
- ✓ ಅವನು ಅಥವಾ ಅವಳು ಏನು ಹೇಳುತ್ತಾರೆಂದು ಕಾಳಜೀಪೂರ್ವಕವಾಗಿ ಮತ್ತು ಗಮನದಿಂದ ಕೇಳಿ
- ✓ ನಿಮ್ಮ ಗ್ರಾಹಕರಿಗೆ ಸಂಪೂರ್ಣವಾಗಿ ಉಪಸ್ಥಿತಿಯನ್ನು ನೀಡಿ ಮತ್ತು ನಿಮ್ಮ ಲಭ್ಯತೆಯನ್ನು ನೀಡಿ
- ✓ ಭೇಟಿಯ ಸಮಯದಲ್ಲಿ ತಮ್ಮ ಮೊಬೈಲ್ ಫೋನ್ ನಲ್ಲಿ ತೊಡಗಿಸಿಕೊಳ್ಳಕೂಡದು.

---

## 2. ದೇಹಭಾಷೆ

ಚಲನೆಗಳು, ಸನ್ನೆಗಳು, ಮುಖದ ಅಭಿವ್ಯಕ್ತಿಗಳನ್ನು ದೇಹ ಭಾಷೆ ಸೂಚಿಸುತ್ತದೆ. ನಾವು ಮಾತನಾಡುವ, ನಡೆಯುವ, ಕುಳಿತುಕೊಳ್ಳುವ ಮತ್ತು ನಿಲ್ಲುವ ರೀತಿ, ಎಲ್ಲವೂ ನಮ್ಮ ಬಗ್ಗೆ ಮತ್ತು ನಮ್ಮ ಆಂತರ್ಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಹೇಳುತ್ತದೆ.

ವಾಸ್ತವವಾಗಿ ಹೇಳಿದ್ದರಲ್ಲಿ ಸ್ವಲ್ಪ ಶೇಕಡಾವಾರು ಮಾತ್ರ ಜನರು ಕೇಳುತ್ತಾರೆ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ನಾವು ಹೇಳದಿರುವ ವಿಷಯವೇ ನಮ್ಮ ಬಗ್ಗೆ ಹೆಚ್ಚು ಗಟ್ಟಿಯಾಗಿ ಬಹಳ ಮಾತನಾಡಬಹುದು. ನಿಸ್ಸಂಶಯವಾಗಿ, ತಮ್ಮ ದೇಹ ಭಾಷೆಯ ಬಗ್ಗೆ ಬಹಳ ಜಾಗರೂಕರಾಗಿರಬೇಕು.

### a) ವಿಶ್ವಾಸ

ನಂಬಿಕೆ ಮತ್ತು ಆತ್ಮವಿಶ್ವಾಸದಿಂದ ಕಾಣಿಸಿಕೊಳ್ಳುವುದು ಹೇಗೆ ಎಂಬುದರ ಕುರಿತು ಕೆಲವು ಸಲಹೆಗಳು ಇಲ್ಲಿವೆ, ಕೆಲವರನ್ನು ಗಂಭೀರವಾಗಿ ಆಲಿಸಬೇಕು ಎಂಬ ಅನಿಸಿಕೆಯನ್ನು ನೀಡುತ್ತದೆ:

- ✓ ನಿಲುವು/ಭಂಗಿ - ಭುಜಗಳನ್ನು ಹಿಂದಕ್ಕೆ ಹಿಡಿದುಕೊಂಡು ಎತ್ತರವಾಗಿ ನಿಲ್ಲುವುದು.
- ✓ "ಮುಗುಳ್ನಗೆಯ" ಮುಖದೊಂದಿಗೆ ನೇರವಾದ ಕಣ್ಣಿನ ಸಂಪರ್ಕ

- ✓ ಉದ್ದೇಶಪೂರ್ವಕ ಮತ್ತು ಬೇಕೆಂದೇ ಮಾಡಿದ ಸನ್ನೆಗಳು

**b) ನಂಬಿಕೆ**

- ✓ ಮೇಲಿಂದ ಮೇಲೆ, ಪ್ರೇಕ್ಷಕರು ಅವನನ್ನು / ಅವಳನ್ನು ನಂಬುವುದಿಲ್ಲವಾದ್ದರಿಂದ ಮಾರಾಟಗಾರರ ಮಾತುಗಳು ಕಿವುಡು ಕಿವಿಗಳ ಮೇಲೆ ಬೀಳುತ್ತವೆ ಅವನ / ಅವಳ ದೇಹ ಭಾಷೆಯು ಅವನು / ಅವಳು ಏನು ಹೇಳುತ್ತಾನೆ/ಳೆ ಎಂಬುದರ ಬಗ್ಗೆ ಅವನು / ಅವಳು ಪ್ರಾಮಾಣಿಕವಾಗಿರುವ ಬಗ್ಗೆ ಭರವಸೆಯನ್ನು ನೀಡುವುದಿಲ್ಲ.

**3. ಆಲಿಸುವ ಕೌಶಲ್ಯಗಳು**

ಒಬ್ಬ ವ್ಯಕ್ತಿಯು ತಿಳಿದಿರಬೇಕಾದ ಮತ್ತು ಬೆಳೆಸಿಕೊಳ್ಳಬೇಕಾದ ಮೂರನೇ ಸಂವಹನ ಕೌಶಲ್ಯವೆಂದರೆ ಆಲಿಸುವ ಕೌಶಲ್ಯವಾಗಿದೆ. ಇವುಗಳು ವೈಯಕ್ತಿಕ ಪರಿಣಾಮಕಾರಿತ್ವದ ಸುಪರಿಚಿತ ತತ್ವವನ್ನು ಅನುಸರಿಸುತ್ತದೆ - 'ಇತರರಿಂದ ಅರ್ಥೈಸಿಕೊಳ್ಳಲ್ಪಡುವ ಮೊದಲು ಇತರರನ್ನು ಅರ್ಥಮಾಡಿಕೊಳ್ಳಲು ಮೊದಲು ಪ್ರಯತ್ನಿಸಿ'.

**ಸಕ್ರಿಯ ಆಲಿಸುವಿಕೆಯಲ್ಲಿ ಈ ಕೆಳಗಿನವುಗಳ ಅವಶ್ಯಕತೆಯಿರುತ್ತದೆ:**

- ✓ ಪ್ರಶ್ನೆಗಳನ್ನು ಕೇಳುವ ಮೊದಲು ಪ್ರತಿಯೊಂದು ಅಂಶವನ್ನು ಪೂರ್ತಿಗೊಳಿಸಲು ಮಾತನಾಡುವವರಿಗೆ ಅವಕಾಶವನ್ನು ನೀಡುವುದು
- ✓ ಯಾವುದೇ ಪ್ರತಿವಾದಗಳೊಂದಿಗೆ ಮಾತನಾಡುವವರನ್ನು ಅಡ್ಡಿಪಡಿಸದಿರುವುದು
- ✓ ನಾವು ಸಂದೇಶವನ್ನು ಪ್ರತಿಬಿಂಬಿಸಲು ಮತ್ತು ಏನು ಹೇಳಲಾಗಿದೆ ಎಂಬುದನ್ನು ಸ್ಪಷ್ಟಪಡಿಸಲು ಪ್ರಶ್ನೆಗಳನ್ನು ಕೇಳುವ ಅಗತ್ಯವಿರಬಹುದು
- ✓ ಪ್ರತಿಕ್ರಿಯೆಯನ್ನೊದಗಿಸುವ ಇನ್ನೊಂದು ವಿಧಾನವೆಂದರೆ ಮಾತನಾಡುವವರ ಶಬ್ದಗಳ ಸಾರಾಂಶವನ್ನು ನಡುನಡುವೆ ಅಥವಾ ಸಂಭಾಷಣೆಯ ಕೊನೆಯಲ್ಲಿ ಅವನಿಗೆ ಅಥವಾ ಅವಳಿಗೆ ಪುನರಾವರ್ತಿಸಿ ತಿಳಿಸುವುದು.

**ಸಕ್ರಿಯ ಆಲಿಸುವಿಕೆಗೆ ಅಗತ್ಯವಿರುವ ಕೌಶಲ್ಯಗಳನ್ನು ನೋಡೋಣ:**

**a) ತಾವು ಕೇಳುತ್ತಿರುವುದಾಗಿ ತೋರಿಸುವುದು:**

- ✓ **ಉದಾಹರಣೆಗೆ ಒಬ್ಬರು ಈ ಕೆಳಗಿನವುಗಳನ್ನು ಅನುಸರಿಸಬಹುದು:**
- ✓ ಸಾಂದರ್ಭಿಕವಾಗಿ ತಲೆಯನ್ನಲ್ಲಾಡಿಸಿ ಮತ್ತು ಮುಗುಳ್ನಕ್ಕು
- ✓ ಇತರರನ್ನು ಮುಕ್ತವಾಗಿ ಮಾತನಾಡಲು ಉದ್ಯುಕ್ತ ಮಾಡುವ ಭಂಗಿಯನ್ನು ಅಳವಡಿಸಿಕೊಳ್ಳಿ
- ✓ "ನಾನು ಅರ್ಥಮಾಡಿಕೊಂಡಿದ್ದೇನೆ", "ನಾನು ನೋಡುತ್ತಿದ್ದೇನೆ", "ಹೌದು" ಮತ್ತು "ಉಹ್" ದಂತಹ ಸಣ್ಣ ಮೌಖಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ.

**b) ಗಮನವನ್ನು ಕೊಡುವುದು**

ಮಾತನಾಡುವವರಿಗೆ ತಮ್ಮ ಅವಿಭಜಿತ ಗಮನವನ್ನು ನೀಡಬೇಕು ಮತ್ತು ಅವರ ಮಾತುಗಳನ್ನು ಸಮ್ಮತಿಸಬೇಕು. ಗಮನ ಕೊಡುವ ಕೆಲವು ಅಂಶಗಳು ಈ ಕೆಳಕಂಡಂತಿವೆ:

ಮಾತನಾಡುವವರನ್ನು ನೇರವಾಗಿ ನೋಡಿ

- ✓ ಚಿತ್ತವನ್ನು ವಿಕ್ಷೇಪಗೊಳಿಸುವ ಆಲೋಚನೆಗಳನ್ನು ಬದಿಗಿರಿಸಿ
- ✓ ಮಾನಸಿಕವಾಗಿ ಖಂಡನೆಯನ್ನು ಸಿದ್ಧಪಡಿಸಬೇಡಿ
- ✓ ಎಲ್ಲ ಬಾಹ್ಯ ಗೊಂದಲಗಳನ್ನು ತಪ್ಪಿಸಿ [ಉದಾಹರಣೆಗೆ, ನಿಮ್ಮ ಮೊಬೈಲ್ ಅನ್ನು ಸೈಲೆಂಟ್ ಮೋಡ್ ನಲ್ಲಿ ಇರಿಸಿ]
- ✓ ಮಾತನಾಡುವವರ ದೇಹ ಭಾಷೆಯನ್ನು "ಆಲಿಸಿ"

**c) ಫಿಲ್ಟರ್ ಗಳನ್ನು ತೆಗೆದುಹಾಕುವುದು:**

ನಾವು ಇತರರ ಬಗ್ಗೆ ಕೇಳುವ ಬಹಳಷ್ಟು ಸಂಗತಿಗಳು ಅವರ ವೈಯಕ್ತಿಕ ಫಿಲ್ಟರ್ ಗಳಿಂದಲೂ ನಮ್ಮ ಊಹೆಗಳು, ತೀರ್ಪುಗಳು ಮತ್ತು ನಂಬಿಕೆಗಳಂತಹ ಬದಲಾಗಬಹುದು.

**ವಿಮರ್ಶಾತ್ಮಕವಾಗದಿರುವುದು: ಕೇಳುಗರು ವಿಮರ್ಶಾತ್ಮಕವಾಗಿದ್ದರೆ,** ಮಾತನಾಡುವವರು ಹೇಳುವುದನ್ನು ಕೇಳಿದರೂ, ಅವರು ತಮ್ಮ ಪೂರ್ವಗ್ರಹಿಕೆಯಂತೆಯೇ ಅರ್ಥೈಸಿಕೊಳ್ಳುತ್ತಾರೆ.

**d) ಸಹಾನುಭೂತಿಯ ಆಲಿಸುವಿಕೆ:**

ತಾವು ಇನ್ನೊಬ್ಬ ವ್ಯಕ್ತಿಯ ಹೇಳಿಕೆಗಳನ್ನು ಒಪ್ಪದಿದ್ದರೂ ಇತರ ವ್ಯಕ್ತಿಯು ಏನು ಹೇಳಬೇಕೆಂದಿರುವ ವಿಷಯವನ್ನು ತಾಳ್ಮೆಯಿಂದ ಮತ್ತು ಸಂಪೂರ್ಣ ಗಮನದಿಂದ ಕೇಳುವುದು ಮತ್ತು ಆಲಿಸುವುದು ಎಂಬುದು ನಮ್ಮ ಸಹಾನುಭೂತಿಯು ಸೂಚಿಸುತ್ತದೆ. ಒಪ್ಪಿಗೆಯ ಅಗತ್ಯವಿಲ್ಲದಿದ್ದರೂ ಮಾತನಾಡುವವರಿಗೆ ಸ್ವೀಕಾರವನ್ನು ತೋರಿಸುವುದು ಮುಖ್ಯ.

**e) ಸೂಕ್ತವಾಗಿ ಪ್ರತಿಕ್ರಿಯಿಸುವುದು:**

ಸಕ್ರಿಯ ಆಲಿಸುವಿಕೆಯು ಕೇವಲ ಮಾತನಾಡುವವರು ಹೇಳುವುದನ್ನು ಕೇಳುವುದಕ್ಕಿಂತ ಹೆಚ್ಚಿನದನ್ನು ಸೂಚಿಸುತ್ತದೆ. ಕೇಳುಗರು ಮಾತು ಅಥವಾ ಕ್ರಿಯೆಯ ಮೂಲಕ ಕೆಲವು ರೀತಿಯಲ್ಲಿ ಪ್ರತಿಕ್ರಿಯಿಸಿದಾಗ ಮಾತ್ರ ಸಂವಹನವನ್ನು ಪೂರ್ಣಗೊಳಿಸಬಹುದು. ಮಾತನಾಡುವವರಿಗೆ ಅಪಮಾನವಾಗದಂತೆ ಗೌರವದಿಂದ ನಡೆಸಿಕೊಳ್ಳಲಾಗುವುದನ್ನು ಖಚಿತಪಡಿಸಿಕೊಳ್ಳಲು ಕೆಲವು ನಿಯಮಗಳನ್ನು ಅನುಸರಿಸಬೇಕು.

**ಇವುಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ:**

- ✓ ನಿಮ್ಮ ಪ್ರತಿಕ್ರಿಯೆಯು ಬಿಚ್ಚು ಮನಸ್ಸಿನ, ಮುಕ್ತ ಮತ್ತು ಪ್ರಾಮಾಣಿಕವಾಗಿರುವುದು
- ✓ ತಮ್ಮ ಅಭಿಪ್ರಾಯಗಳನ್ನು ಗೌರವಯುತವಾಗಿ ಪ್ರತಿಪಾದಿಸುವುದು
- ✓ ತಮ್ಮನ್ನು ಇನ್ನೊಬ್ಬರು ನಡೆಸಿಕೊಳ್ಳಬೇಕೆಂದು ಬಯಸುವಂತೆಯೇ ಇನ್ನೊಬ್ಬ ವ್ಯಕ್ತಿಯನ್ನು ನಡೆಸಿಕೊಳ್ಳುವುದು

**ಉದಾಹರಣೆ**

**ಸ್ಪಷ್ಟತೆಗಾಗಿ ಕೇಳುವುದು –** "ನಮ್ಮ ಕೆಲವು ಆರೋಗ್ಯ ಯೋಜನೆಗಳ ಪ್ರಯೋಜನಗಳ ಬಗ್ಗೆ ಸ್ಪಷ್ಟಪಡಿಸಲು ಸಾಧ್ಯವಾಗುತ್ತಿಲ್ಲ ಎಂದು ನನಗೆ ಅನ್ನಿಸುತ್ತದೆ ನಿಮ್ಮ ಸಂದೇಹಗಳನ್ನು ಕೇಳುವ ಮೂಲಕ ನಿಮ್ಮ ಸಂದೇಹಗಳನ್ನು ದೂರಮಾಡಲು ನೀವು ನಮಗೆ ಸಹಾಯ ಮಾಡಬಹುದೇ? "

**ಮಾತನಾಡುವವರ ನಿಖರವಾದ ಪದಗಳನ್ನು ಅನುವಾದ ಮಾಡುವುದು -** "ಹಾಗಾದರೆ, 'ನಮ್ಮ ಆರೋಗ್ಯ ಯೋಜನೆಗಳು ಸಾಕಷ್ಟು ಆಕರ್ಷಕವಾಗಿಲ್ಲ'ವೆಂದು ನೀವು ಹೇಳುತ್ತಿದ್ದೀರಿ - ನಾನು ನಿಮ್ಮನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆಯೇ?"

**ನಿಮ್ಮನ್ನು ಪರೀಕ್ಷಿಸಿ 4**

ಈ ಕೆಳಗಿನವುಗಳಲ್ಲಿ ಯಾವುದು ಸಕ್ರಿಯ ಆಲಿಸುವಿಕೆಯ ಅಂಶವಲ್ಲ?

**I.** ಉತ್ತಮ ಗಮನವನ್ನು ನೀಡುವುದು

**II.** ಅತ್ಯಂತ ವಿಮರ್ಶಾತ್ಮಕರಾಗಿರುವುದು

**III.** ಸಹಾನುಭೂತಿಯಿಂದ ಆಲಿಸುವಿಕೆ

**IV.** ಸೂಕ್ತವಾಗಿ ಪ್ರತಿಕ್ರಿಯಿಸುವುದು

---

## E. ನೈತಿಕ ನಡವಳಿಕೆ

ಇತ್ತೀಚಿನ ವರ್ಷಗಳಲ್ಲಿ, ಅಸಮರ್ಪಕ ನಡವಳಿಕೆಯ ಬಗ್ಗೆ ಅನೇಕ ವರದಿಗಳಿವೆ ಮತ್ತು ನಂಬಿಕೆಯ ದ್ರೋಹಕ್ಕೆ ಕಾರಣವಾಗುವ ವ್ಯವಹಾರದಲ್ಲಿಯ ನೈತಿಕ ನಡವಳಿಕೆಯ ಬಗ್ಗೆ ಗಂಭೀರ ಕಾಳಜಿಯನ್ನು ವ್ಯಕ್ತಪಡಿಸಲಾಗಿದೆ.

ಇದು ಹೊಣೆಗಾರಿಕೆ ವ್ಯವಹಾರದಲ್ಲಿ "ನೈತಿಕತೆ"ಯ ಭಾಗವಾಗಿರುವ ಸಾಂಸ್ಥಿಕ(ಕಾರ್ಪೊರೇಟ್) ಆಡಳಿತ ಮತ್ತು ವಿಮೆಯಲ್ಲಿ ಗ್ರಾಹಕರನ್ನು ನ್ಯಾಯಯುತವಾಗಿ ಪರಿಗಣಿಸುವಂತಹ ಪರಿಕಲ್ಪನೆಗಳ ಬಗೆಗಿನ ಚರ್ಚೆಗಳಿಗೆ ಕಾರಣವಾಗಿದೆ.

ತಮ್ಮ ತಮ್ಮ ಹಿತಾಸಕ್ತಿಗಳನ್ನು ನೋಡಿಕೊಳ್ಳುವುದು ತಪ್ಪಲ್ಲ. ಆದರೆ ಇತರರ ಹಿತಾಸಕ್ತಿಗಳ ವಿರುದ್ಧ ಹಾಗೆ ಮಾಡುವುದು ತಪ್ಪು. ಇತರರ ಬಗ್ಗೆ ಕಾಳಜಿ ಇಲ್ಲದಿದ್ದಾಗ ಮತ್ತು ತಮ್ಮ ಬಗ್ಗೆ ಹೆಚ್ಚಿನ ಕಾಳಜಿ ಇದ್ದಾಗ ಅನೈತಿಕ ನಡವಳಿಕೆ ಉಂಟಾಗುತ್ತದೆ.

**ವಿಮೆಯು ನಂಬಿಕೆಯ ವ್ಯವಹಾರವಾಗಿದೆ.** ನಂಬಿಕೆಯ ಉಲ್ಲಂಘನೆಯು ಮೋಸಕ್ಕೆ ಸಮಾನವಾಗಿರುತ್ತದೆ. ವಿಮೆಯನ್ನು ಖರೀದಿಸಲು ಪ್ರೇರೇಪಿಸುವದಕ್ಕಾಗಿ ನಿರೀಕ್ಷಿತ ಗ್ರಾಹಕರಿಗೆ ತಪ್ಪು ಮಾಹಿತಿಯನ್ನು ನೀಡಿದಾಗ ಅಥವಾ ನೀಡಿದ ವಿಮೆಯು ನಿರೀಕ್ಷಿತ ಗ್ರಾಹಕರ ನಿರ್ದಿಷ್ಟ ಅಗತ್ಯಗಳನ್ನು ಪೂರೈಸದಿದ್ದರೆ, ಅದು ತಪ್ಪಾಗುತ್ತದೆ.

ವಿವಿಧ ನಿಬಂಧನೆಗಳಲ್ಲಿ ಐಆರ್ ಡಿಎಐ ಯಿಂದ ನೀಡಲಾದ ನೀತಿ ಸಂಹಿತೆಯು ನೈತಿಕ ನಡವಳಿಕೆಯ ಕಡೆಗೆ ನಿರ್ದೇಶಿಸಲ್ಪಟ್ಟಿದೆ. ಕೋಡ್ ಅನ್ನು ಕೇವಲ ತಿಳಿದುಕೊಳ್ಳುವುದು ಸಾಕಾಗುವುದಿಲ್ಲ. ವಿಮಾಗಾರರು ಮತ್ತು ಅವರ ಪ್ರತಿನಿಧಿಗಳಿಗೆ ಯಾವಾಗಲೂ ನಿರೀಕ್ಷಿತ ಗ್ರಾಹಕರ/ ಪಾಲಿಸಿದಾರರ ಹಿತಾಸಕ್ತಿಗಳಿಗೆ ಪ್ರಾಥಮಿಕ ಮಹತ್ವವನ್ನು ಕೊಡುವುದು ಹೆಚ್ಚು ಮುಖ್ಯವಾದುದಾಗಿದೆ.

**ಗುಣಲಕ್ಷಣಗಳು: ನೈತಿಕ ನಡವಳಿಕೆಯ ಕೆಲವು ಗುಣಲಕ್ಷಣಗಳು ಈ ಕೆಳಗಿನಂತಿವೆ:**

**a)** ತಮ್ಮ ಸ್ವಂತ ನೇರ ಅಥವಾ ಪರೋಕ್ಷ ಪ್ರಯೋಜನಗಳಿಗಿಂತ ಗ್ರಾಹಕರ ಉತ್ತಮ ಹಿತಾಸಕ್ತಿಗಳಿಗೆ ಮಹತ್ವವನ್ನು ನೀಡುವುದು

**b)** ಗ್ರಾಹಕರ ವ್ಯವಹಾರಗಳಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರ ಮತ್ತು ವೈಯಕ್ತಿಕ ಮಾಹಿತಿಯನ್ನು ಕಟ್ಟುನಿಟ್ಟಾದ ವಿಶ್ವಾಸವನ್ನು ಹಿಡಿದಿಟ್ಟುಕೊಳ್ಳುವುದು ಮತ್ತು ಸವಲತ್ತು ಎಂದು ಪರಿಗಣಿಸುವುದು

**c)** ಗ್ರಾಹಕರು ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುವಂತೆ ಎಲ್ಲ ಸತ್ಯಗಳನ್ನು ಪೂರ್ಣವಾಗಿ ಮತ್ತು ಸಮರ್ಪಕವಾಗಿ ಬಹಿರಂಗಪಡಿಸುವುದು

ಕೆಳಗಿನ ಸಂದರ್ಭಗಳಲ್ಲಿ ನೈತಿಕತೆಯ ಬಗ್ಗೆ ರಾಜಿ ಮಾಡಿಕೊಳ್ಳುವ ಸಾಧ್ಯತೆಯಿದೆ:

**a)** ಒಂದು ಅತಿ ಕಡಿಮೆ ಕಂತು ಅಥವಾ ಕಮಿಷನ್ ನೀಡುವ ಎರಡು ಯೋಜನೆಗಳ ನಡುವೆ ಆಯ್ಕೆ ಮಾಡಬೇಕಾಗಿರುವುದು

**b)** ಅಸ್ತಿತ್ವದಲ್ಲಿರುವ ಪಾಲಿಸಿಯನ್ನು ಸ್ಥಗಿತಗೊಳಿಸಲು ಮತ್ತು ಹೊಸದನ್ನು ತೆಗೆದುಕೊಳ್ಳಲು ಶಿಫಾರಸು ಮಾಡುವ ಪ್ರಲೋಭನೆ

**c)** ವಿಮಾಗಾರರಿಗೆ ತಿಳಿದಿದ್ದರೆ, ಗ್ರಾಹಕರು ಅಥವಾ ಕ್ಲೇಮ್ ನ ಫಲಾನುಭವಿಗಳ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಂದರ್ಭಗಳ ಬಗ್ಗೆ ತಿಳಿದಿರುವುದು.

| **ನಿಮ್ಮನ್ನು ಪರೀಕ್ಷಿಸಿ 5** |
|---|

ಕೆಳಗಿನವುಗಳಲ್ಲಿ ಯಾವುದು ನೈತಿಕ ನಡವಳಿಕೆಯ ಲಕ್ಷಣವಲ್ಲ?

I. ಗ್ರಾಹಕರು ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುವಂತೆ ಎಲ್ಲ ಸತ್ಯಗಳನ್ನು

ಪೂರ್ಣವಾಗಿ ಮತ್ತು ಸಮರ್ಪಕವಾಗಿ ಬಹಿರಂಗಪಡಿಸುವುದು.

II. ಗ್ರಾಹಕರ ವ್ಯವಹಾರದ ಮತ್ತು ವೈಯಕ್ತಿಕ ಮಾಹಿತಿಯ ಗೌಪ್ಯತೆಯನ್ನು ಕಾಪಾಡಿಕೊಳ್ಳುವುದು

III. ಗ್ರಾಹಕರ ಹಿತಾಸಕ್ತಿಗಳಿಗಿಂತ ಸ್ವಂತ-ಹಿತಾಸಕ್ತಿಯನ್ನು ಮುಂದಿಡುವುದು

IV. ಸ್ವಹಿತಾಸಕ್ತಿಗಿಂತ ಗ್ರಾಹಕರ ಆಸಕ್ತಿಗೆ ಹೆಚ್ಚು ಮಹತ್ವವನ್ನು ಕೊಡುವುದು

## ಸಾರಾಂಶ

a) ಇತರ ಉತ್ಪನ್ನಗಳಿಗಿಂತ ವಿಮೆಯ ಸಂದರ್ಭದಲ್ಲಿ ಗ್ರಾಹಕ ಸೇವೆ ಮತ್ತು ಸಂಬಂಧಗಳ ಪಾತ್ರವು ಹೆಚ್ಚು ನಿರ್ಣಾಯಕವಾಗಿರುತ್ತದೆ.

b) ವಿಶ್ವಾಸಾರ್ಹತೆ, ಸ್ಪಂದಿಸುವಿಕೆ, ಭರವಸೆ, ಸಹಾನುಭೂತಿ ಮತ್ತು ಸ್ಪಷ್ಟತೆ ಇವು ಸೇವೆಯ ಗುಣಮಟ್ಟದ ಐದು ಪ್ರಮುಖ ಸೂಚಕಗಳಾಗಿವೆ.

c) ಗ್ರಾಹಕರ ಜೀವಿತಾವಧಿಯ ಮೌಲ್ಯವನ್ನು ಗ್ರಾಹಕರೊಂದಿಗೆ ದೀರ್ಘಾವಧಿಯ ಉತ್ತಮ ಸಂಬಂಧವನ್ನು ನಿರ್ಮಿಸುವುದರಿಂದ ಪಡೆಯಬಹುದಾದ ಆರ್ಥಿಕ ಪ್ರಯೋಜನಗಳ ಮೊತ್ತವೆಂದು ವ್ಯಾಖ್ಯಾನಿಸಬಹುದು.

d) ಗ್ರಾಹಕ ಸೇವೆಯ ಕ್ಷೇತ್ರದಲ್ಲಿ ವಿಮಾ ಏಜೆಂಟರ ಪಾತ್ರವು ನಿಸ್ಸಂಶಯವಾಗಿ ನಿರ್ಣಾಯಕವಾಗಿದೆ.

e) ಸಕ್ರಿಯ ಆಲಿಸುವಿಕೆಯು ಗಮನ ಕೊಡುವುದು, ಸಲಹೆ ನೀಡುವುದು ಮತ್ತು ಸೂಕ್ತವಾಗಿ ಪ್ರತಿಕ್ರಿಯಿಸುವುದನ್ನು ಒಳಗೊಂಡಿರುತ್ತದೆ.

f) ತಮ್ಮ ಸ್ವಂತ ಆಸಕ್ತಿಗಿಂತ ಗ್ರಾಹಕರ ಆಸಕ್ತಿಗೆ ಹೆಚ್ಚು ಮಹತ್ವ ಕೊಡುವುದನ್ನು ನೈತಿಕ ನಡವಳಿಕೆಯು ಒಳಗೊಂಡಿರುತ್ತದೆ.

## ಪ್ರಮುಖ ಪದಗಳು

a) ಸೇವೆಯ ಗುಣಮಟ್ಟ

b) ಸಹಾನುಭೂತಿ

c) ದೇಹಭಾಷೆ

d) ಸಕ್ರಿಯ ಆಲಿಸುವಿಕೆ

**e)** ನೈತಿಕ ನಡವಳಿಕೆ

| ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು |
|---|

ಉತ್ತರ 1 - ಸರಿಯಾದ ಆಯ್ಕೆ **III** ಆಗಿದೆ

ಉತ್ತರ 2 - ಸರಿಯಾದ ಆಯ್ಕೆ **III** ಆಗಿದೆ

ಉತ್ತರ 3 - ಸರಿಯಾದ ಆಯ್ಕೆ **IV** ಆಗಿದೆ

ಉತ್ತರ 4 - ಸರಿಯಾದ ಆಯ್ಕೆ **II** ಆಗಿದೆ

ಉತ್ತರ 5 - ಸರಿಯಾದ ಆಯ್ಕೆ **III** ಆಗಿದೆ

# ಅಧ್ಯಾಯ C-09

# ದೂರು ನಿವಾರಣಾ ವ್ಯವಸ್ಥೆ

## ಅಧ್ಯಾಯ ಪರಿಚಯ

ವಿಮಾ ಉದ್ಯಮವು ಮೂಲಭೂತವಾಗಿ ಸೇವಾ ಉದ್ಯಮವಾಗಿದ್ದು, ಗ್ರಾಹಕರ ನಿರೀಕ್ಷೆಗಳು ನಿರಂತರವಾಗಿ ಹೆಚ್ಚುತ್ತಿರುತ್ತವೆ. ಸೇವೆಗಳ ಗುಣಮಟ್ಟದಲ್ಲಿ ಅಸಮಾಧಾನವಿರುತ್ತದೆ. ನಿರಂತರ ಉತ್ಪನ್ನ ನಾವೀನ್ಯತೆ ಮತ್ತು ಆಧುನಿಕ ತಂತ್ರಜ್ಞಾನದ ಸಹಾಯದಿಂದ ಗ್ರಾಹಕರ ಸೇವೆಯ ಮಟ್ಟದಲ್ಲಿ ಗಮನಾರ್ಹ ಸುಧಾರಣೆಯ ಹೊರತಾಗಿಯೂ, ಉದ್ಯಮವು ಗ್ರಾಹಕರ ಅತೃಪ್ತಿ ಮತ್ತು ದೋಷಪೂರಿತ ನಿಲುವುಗಳ ವಿಷಯದಲ್ಲಿ ಬಹಳ ಶೋಚನೀಯವಾಗಿದೆ. ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರ ಮತ್ತು ನಿಯಂತ್ರಕರು ಹಲವಾರು ಉಪಕ್ರಮಗಳನ್ನು ಕೈಗೊಂಡಿದ್ದಾರೆ.

ಪ್ರತಿ ವಿಮಾಗಾರರು ಪಾಲಿಸಿದಾರರ ಹಿತಾಸಕ್ತಿಗಳ ರಕ್ಷಣೆಗಾಗಿ ತಮ್ಮದೇ ಆದ ಮಂಡಳಿಯ ಅನುಮೋದಿತ ನೀತಿಯನ್ನು ಹೊಂದಿರಬೇಕೆಂದು ಪಾಲಿಸಿದಾರರ ಹಿತಾಸಕ್ತಿಗಳ ರಕ್ಷಣೆಯ ಬಗೆಗಿನ ಐಆರ್ ಡಿಎಐ ನಿಯಮಗಳು 2017 ಕಡ್ಡಾಯ ಮಾಡಿವೆ.

i. ಸಲ್ಲಿಸಿದ ವಿವಿಧ ಸೇವೆಗಳಿಗೆ ಬೇಕಾಗುವ ಸಂಪೂರ್ಣ ಸಮಯವು ಸೇರಿದಂತೆ ಸೇವಾ ನಿಯತಾಂಕಗಳು.

ii. ದೂರುಗಳ ತ್ವರಿತ ಪರಿಹಾರಕ್ಕಾಗಿ ಕಾರ್ಯವಿಧಾನ.

## ಕಲಿಕೆಯ ಫಲಿತಾಂಶಗಳು

A. ದೂರು ನಿವಾರಣಾ ವ್ಯವಸ್ಥೆ

B. ಸಮಗ್ರ ದೂರು ನಿವಾರಣಾ ವ್ಯವಸ್ಥೆ (ಐಜಿಎಮ್ಎಸ್)

C. ಗ್ರಾಹಕ ನ್ಯಾಯಾಲಯಗಳು

D. ಗ್ರಾಹಕ ವಿವಾದಗಳ ಪರಿಹಾರ ಏಜೆನ್ಸಿಗಳು

E. ವಿಮಾ ಓಂಬುಡ್ಸ್ ಮನ್

F. ಮಾಹಿತಿಯ ಹಕ್ಕು

## A. ದೂರು ನಿವಾರಣೆ

ಗ್ರಾಹಕರು ದೂರನ್ನು ಹೊಂದಿರುವಾಗ ವಿಮಾಗಾರರು ಹೆಚ್ಚಿನ ಆದ್ಯತೆಯಿಂದ ಕ್ರಮವನ್ನು ತೆಗೆದುಕೊಳ್ಳಬೇಕಾದ ಅಗತ್ಯವಿದೆ. ದೂರಿನ ಸಂದರ್ಭದಲ್ಲಿ, ಸೇವೆಯ ವೈಫಲ್ಯದಿಂದಾಗಿ ಗ್ರಾಹಕರು ಕೋಪಗೊಳ್ಳುತ್ತಾರೆ ಎಂಬುದನ್ನು ನೆನಪಿನಲ್ಲಿಡಿ. ಇದು ಈ ವಿಷಯದ ಒಂದು ಭಾಗ ಮಾತ್ರವಾಗಿದೆ.

ಸಾಮಾನ್ಯವಾಗಿ, ಗ್ರಾಹಕರು ಪರಿಸ್ಥಿತಿಯನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವುದರಿಂದ ಅಸಮಾಧಾನಗೊಳ್ಳುತ್ತಾರೆ. ಎಲ್ಲ ಸೇವಾ ವೈಫಲ್ಯಗಳು ಎರಡು ರೀತಿಯ ಭಾವನೆಗಳನ್ನುಂಟುಮಾಡುತ್ತವೆ:

1. ವಿಮಾಗಾರರು ಅನ್ಯಾಯ ಮಾಡಿದ್ದಾರೆಂಬ ಭಾವನೆ (ವಂಚನೆಗೊಳಗಾದ ಭಾವನೆ)
2. ಅಹಂಕಾರಕ್ಕೆ ಧಕ್ಕೆಯುಂಟಾದ ಭಾವನೆ (ತಾವು ಮಹತ್ವವಿಲ್ಲದಂತೆ ಮತ್ತು ಚಿಕ್ಕ ವ್ಯಕ್ತಿಗಳಾಗಿ ಕಾಣುತ್ತಿದ್ದೇವೆ ಎಂಬ ಭಾವನೆ)

ಗ್ರಾಹಕರು ಗೌರವಯುತವಾಗಿರಲು ಬಯಸುತ್ತಾರೆ ಮತ್ತು ಈ ಪರಿಸ್ಥಿತಿಯಲ್ಲಿ ಮಾನವ ಸ್ಪರ್ಶವು ನಿರ್ಣಾಯಕವಾಗಿರುತ್ತದೆ. ಮೊದಲನೆಯದಾಗಿ ಅಂತಹ ದೂರು ಪರಿಸ್ಥಿತಿ ಸಂಭವಿಸಲು ವೃತ್ತಿಪರ ವಿಮಾ ಸಲಹೆಗಾರರಾಗಿ ಏಜೆಂಟರು ಅನುಮತಿಸುವುದಿಲ್ಲ. ಅವರು ಕಂಪನಿಯ ಸೂಕ್ತ ಅಧಿಕಾರಿಗಳ ಎದುರು ವಿಷಯವನ್ನು ಮಂಡಿಸುತ್ತಾರೆ.

ಒಂದು ದೂರು, ಗ್ರಾಹಕ ಸಂಬಂಧದಲ್ಲಿ ನಿರ್ಣಾಯಕವಾದಂಥ **"ಸತ್ಯದ ಕ್ಷಣ"**ವಾಗಿದೆ. ಏಜೆಂಟರು/ಕಂಪನಿಯು ಸ್ಥಿತಿಯನ್ನು ಸ್ಪಷ್ಟಪಡಿಸಲು ಇಂಥ ಪರಿಸ್ಥಿತಿಯನ್ನು ಬಳಸಲು ಸಾಧ್ಯವಾದರೆ ನಿಜವಾಗಿ ಪರಿಸ್ಥಿತಿಯು ಗ್ರಾಹಕರ ನಿಷ್ಠೆಯನ್ನು ಸುಧಾರಿಸಬಹುದು.

ಒಬ್ಬ ಏಜೆಂಟರು ಹೊಂದಿರುವಷ್ಟು ಗ್ರಾಹಕರ ಸಮಸ್ಯೆಗಳ ಸ್ವಾಮಿತ್ವವನ್ನು ಕಂಪನಿಯಲ್ಲಿ ಬೇರೆ ಯಾರೂ ಹೊಂದಿರುವುದಿಲ್ಲವೆಂಬುವುದನ್ನು ನೆನಪಿಡಿ.

ಗ್ರಾಹಕರ ಹಿತಾಸಕ್ತಿಗಳಿಗೆ ನಾವು ಎಷ್ಟು ಕಾಳಜಿ ವಹಿಸುತ್ತೇವೆ ಎಂಬುದನ್ನು ತೋರಿಸಲು ದೂರುಗಳು/ ಕುಂದುಕೊರತೆಗಳು ನಮಗೆ ಅವಕಾಶವನ್ನು ನೀಡುತ್ತದೆ. ವಾಸ್ತವವಾಗಿ ವಿಮಾ ಏಜೆಂಟರು ಒಳ್ಳೆಯ ಹೆಸರು ಮತ್ತು ವ್ಯವಹಾರವನ್ನು ನಿರ್ಮಿಸುವಲ್ಲಿ ಅವು ಆಧಾರಸ್ತಂಭಗಳಾಗಿವೆ. **ಮುಖ ಪ್ರಚಾರ (ಒಳ್ಳೆಯದು/ಕೆಟ್ಟದ್ದು) ಮಾರಾಟ ಮತ್ತು ಸೇವೆ ನೀಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.**

ಪ್ರತಿ ಪಾಲಿಸಿ ದಾಖಲೆಯ ಕೊನೆಯಲ್ಲಿ ದೂರು ನಿವಾರಣೆಯ ಕಾರ್ಯವಿಧಾನವನ್ನು ವಿವರಿಸಲಾಗಿದೆ. ಇದನ್ನು ಗ್ರಾಹಕರ ಗಮನಕ್ಕೆ ತರಬೇಕು. ನಿಯಮಾವಳಿಗಳ ಪ್ರಕಾರ, ಪಾಲಿಸಿದಾರರ ಯಾವುದೇ ದೂರುಗಳು ಮೊದಲು ವಿಮಾಗಾರರ ದೂರು ಘಟಕ(**Insurer's Grievances Cell**)ಕ್ಕೆ ಸೂಚಿಸಲ್ಪಡಬೇಕು. ಇದು ತೃಪ್ತಿಕರವಾಗಿ ಪರಿಹರಿಸಲ್ಪಡದಿದ್ದರೆ, ದೂರುದಾರರು ಸಮಗ್ರ ದೂರು ನಿವಾರಣಾ ವ್ಯವಸ್ಥೆಯ ಮೂಲಕ ನಿಯಂತ್ರಕರನ್ನು ಸಂಪರ್ಕಿಸಬಹುದು.**(Integrated Grievance Management System)**

## B. ಸಮಗ್ರ ದೂರು ನಿವಾರಣಾ ವ್ಯವಸ್ಥೆ (ಐಜಿಎಮ್‌ಎಸ್)

ಪ್ರತಿ ವಿಮಾಗಾರರು ತಮ್ಮದೇ ಆದ ದೂರು ನಿವಾರಣಾ ಕಾರ್ಯವಿಧಾನವನ್ನು ಹೊಂದಿರುತ್ತಾರೆ. ವಿಮಾ ಕಂಪನಿಗಳ ಎಲ್ಲ ಕಾರ್ಯಾಚರಣೆಯ / ನಿಯಂತ್ರಣ / ಸಾಂಘಿಕ ಕಚೇರಿಗಳು ದೂರು ನಿವಾರಣಾ ಅಧಿಕಾರಿಗಳನ್ನು ಹೊಂದಿರುತ್ತವೆ. ಪಾಲಿಸಿದಾರರು ಯಾವುದೇ ದೂರುಗಳಿಗೆ ನೇರವಾಗಿ ಅವರನ್ನು ಸಂಪರ್ಕಿಸಬಹುದು.

ಗ್ರಾಹಕ ದೂರುಗಳ ಆನ್‌ಲೈನ್ ನೋಂದಣಿ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುವ ಸಮಗ್ರ ದೂರು ನಿರ್ವಹಣಾ ವ್ಯವಸ್ಥೆ(ಇಂಟಿಗ್ರೇಟೆಡ್ ಗ್ರೀವೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್) (ಐಜಿಎಮ್‌ಎಸ್)ಯನ್ನು ಐಆರ್ ಡಿಎಐ ಪ್ರಾರಂಭಿಸಿದೆ. ಐಆರ್ ಡಿಎಐಯ ಐಜಿಎಮ್‌ಎಸ್ ನೊಂದಿಗೆ ಸಂಯೋಜಿತವಾಗಿರುವ ವ್ಯವಸ್ಥೆಯಲ್ಲಿ ಸ್ವೀಕರಿಸುವ ಎಲ್ಲ ದೂರುಗಳನ್ನು ವಿಮಾಗಾರರು ನೋಂದಾಯಿಸಿಕೊಳ್ಳಬೇಕು. ಐಜಿಎಮ್‌ಎಸ್ ಉದ್ಯಮದಲ್ಲಿನ ಕುಂದುಕೊರತೆ ಪರಿಹಾರವನ್ನು ಮೇಲ್ವಿಚಾರಣೆ ಮಾಡಲು ಐಆರ್ ಡಿಎಐಗೆ ಸಹಾಯ ಮಾಡುತ್ತದೆ ಮತ್ತು ವಿಮಾ ದೂರುಗಳ ಮಾಹಿತಿ ಕೇಂದ್ರ ಭಂಡಾರವಾಗಿಯೂ ಕಾರ್ಯನಿರ್ವಹಿಸುತ್ತದೆ.

ಪಾಲಿಸಿದಾರರು ಯಾವುದೇ ದೂರಿಗಾಗಿ ಮೊದಲು ಆಯಾ ವಿಮಾಗಾರರನ್ನು ಸಂಪರ್ಕಿಸಬಹುದು. ಅವರು ವಿಮಾಗಾರರಿಂದ ಯಾವುದೇ ಪ್ರತಿಕ್ರಿಯೆಯನ್ನು ಪಡೆಯಲು ಸಾಧ್ಯವಾಗದಿದ್ದರೆ ಅಥವಾ ಸ್ವೀಕರಿಸಿದ ಪ್ರತಿಕ್ರಿಯೆ / ನಿರ್ಣಯವು ಅವರಿಗೆ ತೃಪ್ತಿಕರವಾಗಿಲ್ಲದಿದ್ದರೆ, ಅವರು ಐಜಿಎಮ್‌ಎಸ್ ಅಡಿಯಲ್ಲಿಯ ನಿಯಂತ್ರಕರನ್ನು ಸಂಪರ್ಕಿಸಬಹುದು. ದೂರು ನೋಂದಣಿ ಪ್ರಕ್ರಿಯೆಯು ಎರಡು ಹಂತಗಳನ್ನು ಒಳಗೊಂಡಿರುತ್ತದೆ - **(i)** ತಮ್ಮ ಪಾಲಿಸಿ ವಿವರಗಳನ್ನು ನಮೂದಿಸುವ ಮೂಲಕ ಮತ್ತು **(ii)** ತಮ್ಮ ದೂರುಗಳನ್ನು ನೋಂದಾಯಿಸುವುದು ಮತ್ತು ದೂರುಗಳ ಸ್ಥಿತಿಯನ್ನು ನೋಡುವುದು. ನಂತರ ದೂರುಗಳನ್ನು ಆಯಾ ವಿಮಾ ಕಂಪನಿಗಳಿಗೆ ರವಾನಿಸಲಾಗುತ್ತದೆ ಮತ್ತು ಐಆರ್ ಡಿಎಐ ದೂರುಗಳ ವಿಲೇವಾರಿಯನ್ನು ಸುಗಮಗೊಳಿಸುತ್ತದೆ.

ಐಜಿಎಮ್‌ಎಸ್ ದೂರುಗಳು ಮತ್ತು ಅವುಗಳ ಪರಿಹಾರಕ್ಕಾಗಿ ತೆಗೆದುಕೊಂಡ ಸಮಯವನ್ನು ಪತ್ತೆ ಮಾಡುತ್ತದೆ. ದೂರುಗಳನ್ನು ಈ ಕೆಳಗಿನ ಯುಆರ್ ಎಲ್ ನಲ್ಲಿ ನೋಂದಾಯಿಸಿಕೊಳ್ಳಬಹುದು: **http://www.policyholder.gov.in/Integrated_ Grievance_Management.aspx**

## C. ಗ್ರಾಹಕ ರಕ್ಷಣೆ

**ಗ್ರಾಹಕ ಸಂರಕ್ಷಣಾ ಕಾಯಿದೆ, 2019:** "ಗ್ರಾಹಕರ ಹಿತಾಸಕ್ತಿಗಳ ಉತ್ತಮ ರಕ್ಷಣೆಗಾಗಿ ಮತ್ತು ಗ್ರಾಹಕರ ವಿವಾದಗಳ ಇತ್ಯರ್ಥಕ್ಕಾಗಿ ಗ್ರಾಹಕ ಮಂಡಳಿಗಳು ಮತ್ತು ಇತರ ಪ್ರಾಧಿಕಾರಗಳ ಸ್ಥಾಪನೆಗೆ ಅವಕಾಶವನ್ನು ಕಲ್ಪಿಸಲು" **1986** ರ ಮೂಲ ಕಾಯಿದೆಯನ್ನು ಅಂಗೀಕರಿಸಲಾಗಿದೆ. ಈ ಕಾಯಿದೆಯನ್ನು ಗ್ರಾಹಕ ಸಂರಕ್ಷಣಾ (ತಿದ್ದುಪಡಿ) ಕಾಯಿದೆ, **2002** ಮತ್ತು ನಂತರ **2019** ರಲ್ಲಿ ತಿದ್ದುಪಡಿ ಮಾಡಲಾಗಿದೆ. ಕಾಯಿದೆಯಲ್ಲಿ ಒದಗಿಸಲಾದ ಕೆಲವು ವ್ಯಾಖ್ಯೆಗಳು ಈ ಕೆಳಗಿನಂತಿವೆ:

"**ಸೇವೆ**" ಎಂದರೆ ಸಂಭಾವ್ಯ ಬಳಕೆದಾರರಿಗೆ ಲಭ್ಯವಿರುವ ಬ್ಯಾಂಕಿಂಗ್, ಹಣಕಾಸು, **ವಿಮೆ**, ಸಾರಿಗೆ, ಸಂಸ್ಕರಣೆ, ವಿದ್ಯುತ್ ಅಥವಾ ಇತರ ಶಕ್ತಿಯ ಪೂರೈಕೆ, ಭೋಜನ ಅಥವಾ ವಸತಿ ಅಥವಾ ಎರಡಕ್ಕೂ ಸಂಬಂಧಿಸಿದಂತೆ ಸೌಲಭ್ಯಗಳನ್ನು ಒದಗಿಸುವುದು, ವಸತಿ ನಿರ್ಮಾಣ, ಮನರಂಜನೆ ಇತ್ಯಾದಿಗಳು ಸೇರಿದಂತೆ ಯಾವುದೇ ವಿವರಣೆಯ ಸೇವೆಎಂದರ್ಥ. ವಿಮೆಯನ್ನು ಸೇವೆಯಾಗಿ ಸೇರಿಸಲಾಗಿದೆ. ಆದಾಗ್ಯೂ, "**ಸೇವೆ**"ಯು ಯಾವುದೇ ಉಚಿತವಾಗಿ ಅಥವಾ ವೈಯಕ್ತಿಕ ಸೇವೆಯ ಒಪ್ಪಂದದ ಅಡಿಯಲ್ಲಿ ಸಲ್ಲಿಸಲಾಗುವ ಸೇವೆಯನ್ನು ಒಳಗೊಂಡಿರುವುದಿಲ್ಲ.

"**ಗ್ರಾಹಕ**"ರೆಂದರೆ ಈ ಕೆಳಗೆ ನೀಡಿದ ಅಂಶಗಳನ್ನು ಪೂರೈಸುವ ಯಾವುದೇ ವ್ಯಕ್ತಿ

- ✓ ಬೆಲೆಗೆ ಸರಕುಗಳನ್ನು ಖರೀದಿಸುವವರು. ಇದು ಅಂತಹ ಸರಕುಗಳ ಯಾವುದೇ ಬಳಕೆದಾರರನ್ನು ಒಳಗೊಂಡಿರುತ್ತದೆ. (ಇದು ಮರುಮಾರಾಟಕ್ಕಾಗಿ ಅಥವಾ ಯಾವುದೇ ವಾಣಿಜ್ಯ ಉದ್ದೇಶಕ್ಕಾಗಿ ಸರಕುಗಳನ್ನು ಕೊಂಡುಕೊಳ್ಳುವ ವ್ಯಕ್ತಿಯನ್ನು ಒಳಗೊಂಡಿರುವುದಿಲ್ಲ) ಅಥವಾ
- ✓ ಒಂದು ಬೆಲೆಗೆ ಯಾವುದೇ ಸೇವೆಗಳನ್ನು ಬಾಡಿಗೆಗೆ ತೆಗೆದುಕೊಳ್ಳುವವರು ಅಥವಾ ಪಡೆದುಕೊಳ್ಳುವವರು. ಇದು ಅಂತಹ ಸೇವೆಗಳ ಫಲಾನುಭವಿಯನ್ನು ಒಳಗೊಂಡಿರುತ್ತದೆ. (ಯಾವುದೇ ವಾಣಿಜ್ಯ ಉದ್ದೇಶಕ್ಕಾಗಿ ಅಂತಹ ಸೇವೆಯನ್ನು ಪಡೆಯುವ ಯಾವುದೇ ವ್ಯಕ್ತಿಯನ್ನು ಇದು ಒಳಗೊಂಡಿರುವುದಿಲ್ಲ.)

"ದೋಷ"ವೆಂದರೆ ಯಾವುದೇ ಕಾನೂನಿನ ಮೂಲಕ ಅಥವಾ ಕಾನೂನಿನಡಿಯಲ್ಲಿ ಯಾವುದೇ ಸೇವೆಗೆ ಸಂಬಂಧಿಸಿದಂತೆ ನಿರ್ವಹಿಸಬೇಕಾದ ಅಥವಾ ಒಪ್ಪಂದದ ಅನುಸಾರವಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ವ್ಯಕ್ತಿಯಿಂದ ನಿರ್ವಹಿಸಲ್ಪಡಬೇಕಾದ ಯಾವುದೇ ದೋಷ, ಅಪೂರ್ಣತೆ, ನ್ಯೂನತೆ, ಗುಣಮಟ್ಟದಲ್ಲಿಯ ಅಭಾವ, ಸ್ವರೂಪ ಮತ್ತು ಕಾರ್ಯಕ್ಷಮತೆಯ ಅಸಮರ್ಪಕತೆ ಎಂದರ್ಥ.

"**ದೂರು**" ಎಂದರೆ ದೂರುದಾರರಿಂದ ಲಿಖಿತ ರೂಪದಲ್ಲಿ ಮಾಡಲ್ಪಟ್ಟ ಯಾವುದೇ ಆರೋಪ:

- ✓ ಅನ್ಯಾಯದ ವ್ಯಾಪಾರ ಪದ್ಧತಿ ಅಥವಾ ನಿರ್ಬಂಧಿತ ವ್ಯಾಪಾರ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ
- ✓ ಅವರು ಖರೀದಿಸಿದ ಸರಕುಗಳು ಒಂದು ಅಥವಾ ಹೆಚ್ಚಿನ ದೋಷಗಳಿಂದ ಕೂಡಿರುತ್ತವೆ
- ✓ ಬಾಡಿಗೆಗೆ ತೆಗೆದುಕೊಂಡ ಅಥವಾ ಪಡೆದ ಸೇವೆಗಳು ಯಾವುದೇ ವಿಷಯದಲ್ಲಿ ಕೊರತೆಯಿಂದ ಕೂಡಿವೆ
- ✓ ವಿಧಿಸಲಾದ ಬೆಲೆಯು ಕಾನೂನಿನಿಂದ ನಿಗದಿಪಡಿಸಿದ ಅಥವಾ ಪ್ಯಾಕೇಜ್ ನಲ್ಲಿ ಪ್ರದರ್ಶಿಸಲಾದ ಬೆಲೆಗಿಂತ ಹೆಚ್ಚಾಗಿರುತ್ತದೆ
- ✓ ಬಳಸಿದಾಗ ಜೀವನ ಮತ್ತು ಸುರಕ್ಷತೆಗೆ ಅಪಾಯಕಾರಿಯಾದ ಸರಕುಗಳನ್ನು ಅಂತಹ ಸರಕುಗಳ ಬಳಕೆಯ ವಿಷಯಗಳು, ವಿಧಾನ ಮತ್ತು ಪರಿಣಾಮದ ಬಗ್ಗೆ ಮಾಹಿತಿಯನ್ನು ಪ್ರದರ್ಶಿಸಲು ವ್ಯಾಪಾರಿ

ಅಗತ್ಯವಿರುವ ಯಾವುದೇ ಕಾನೂನಿನ ನಿಬಂಧನೆಗಳಿಗೆ ವಿರುದ್ಧವಾಗಿ ಸಾರ್ವಜನಿಕರಿಗೆ ಮಾರಾಟ ಮಾಡಲಾಗುತ್ತಿದೆ.

"**ಗ್ರಾಹಕರ ವಿವಾದ**"ವೆಂದರೆ ಯಾರ ವಿರುದ್ಧ ದೂರು ನೀಡಲಾಗಿದೆಯೋ ಆ ವ್ಯಕ್ತಿಯು ದೂರಿನಲ್ಲಿ ಒಳಗೊಂಡಿರುವ ಆರೋಪಗಳನ್ನು ನಿರಾಕರಿಸುವ ಮತ್ತು ವಾದ ಮಾಡುವ ವಿವಾದವೆಂದರ್ಥ.

## D. ಗ್ರಾಹಕ ವ್ಯಾಜ್ಯಗಳ ಪರಿಹಾರ ಏಜೆನ್ಸಿಗಳು

ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಗ್ರಾಹಕ ವಿವಾದಗಳ ನಿವಾರಣಾ ಏಜೆನ್ಸಿಗಳನ್ನು ಸ್ಥಾಪಿಸಲಾಗಿದೆ.

### i. ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ

- ✓ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ (ಜಿಲ್ಲಾ ಆಯೋಗ), ರೂ. 1 ಕೋಟಿಗಿಂತ ಕಡಿಮೆ ಮೊತ್ತದ ಸರಕು ಅಥವಾ ಸೇವೆಗಳ ಬಗೆಗಿನ ದೂರುಗಳನ್ನು ಪರಿಹಾರ ಮಾಡುವ ನ್ಯಾಯವ್ಯಾಪ್ತಿಯನ್ನು ಹೊಂದಿದೆ. ಜಿಲ್ಲಾ ಆಯೋಗವು ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿದೆ.

### ii. ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ

- ✓ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ(ರಾಜ್ಯ ಆಯೋಗ)ವು ರೂ. 1 ಕೋಟಿಗಿಂತ ಹೆಚ್ಚು ಆದರೆ ರೂ.10 ಕೋಟಿಗಳನ್ನು ಮೀರಿಲ್ಲದ ಮೌಲ್ಯದ ಸರಕು/ಸೇವೆ ಮತ್ತು ಯಾವುದೇ ಕ್ಲೇಮ್ ಮಾಡಿದ್ದರೆ ಅದರ ಪರಿಹಾರದ ಬಗೆಗಿನ, ದೂರುಗಳನ್ನು ಪರಿಹರಿಸಲು ಮೂಲ ನ್ಯಾಯವ್ಯಾಪ್ತಿಯನ್ನು ಹೊಂದಿದೆ.
- ✓ ಇದು ಜಿಲ್ಲಾ ಆಯೋಗದಿಂದ ಬರುವ ಮನವಿಗಳನ್ನು ಪರಿಗಣಿಸಲು ಮೇಲ್ಮನವಿ ಮತ್ತು ಮೇಲ್ವಿಚಾರಣಾ ನ್ಯಾಯವ್ಯಾಪ್ತಿಯನ್ನು ಹೊಂದಿದೆ
- ✓ ರಾಜ್ಯ ಆಯೋಗಕ್ಕೆ ಜಿಲ್ಲಾ ಆಯೋಗದಂತೆಯೇ ಇತರ ಅಧಿಕಾರಗಳಿರುತ್ತವೆ.

### iii. ರಾಷ್ಟ್ರೀಯ ಗ್ರಾಹಕ ವಿವಾದಗಳ ಪರಿಹಾರ ಆಯೋಗ

- ✓ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ (ರಾಷ್ಟ್ರೀಯ ಆಯೋಗ)ವು ಕಾಯಿದೆಯಡಿಯಲ್ಲಿ ಸ್ಥಾಪಿಸಲಾದ ಅಂತಿಮ ಅಧಿಕಾರವಾಗಿದೆ.
- ✓ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ (ಜಿಲ್ಲಾ ಆಯೋಗ)ವು ರೂ. 10 ಕೋಟಿಗಳನ್ನು ಮೀರಿದ ಮೊತ್ತದ ಸರಕು ಅಥವಾ ಸೇವೆಗಳು ಮತ್ತು ಪರಿಹಾರದ ಬಗೆಗಿನ ದೂರುಗಳನ್ನು ಪರಿಹಾರ ಮಾಡುವ ನ್ಯಾಯವ್ಯಾಪ್ತಿಯನ್ನು ಹೊಂದಿದೆ.
- ✓ ಇದು ರಾಜ್ಯ ಆಯೋಗದಿಂದ ಹೊರಡಿಸಲಾದ ಆದೇಶಗಳ ವಿರುದ್ಧ ಬಂದ ಮೇಲ್ಮನವಿಗಳನ್ನು ಆಲಿಸುವ ಮೇಲ್ಮನವಿ ಮತ್ತು ಮೇಲ್ವಿಚಾರಣಾ ನ್ಯಾಯವ್ಯಾಪ್ತಿಯನ್ನು ಹೊಂದಿದೆ

ನ್ಯಾಯಾಲಯವು ತನ್ನ ಮುಂದಿರುವ ದಾವೆಯಲ್ಲಿ ಮಾಡಿದ ಆದೇಶದಂತೆಯೇ ಜಿಲ್ಲಾ ಆಯೋಗ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗವು ಮಾಡಿದ ಪ್ರತಿಯೊಂದು ಆದೇಶವನ್ನು ಜಾರಿಗೊಳಿಸಲಾಗುತ್ತದೆ. ರಾಷ್ಟ್ರೀಯ ಆಯೋಗದ ಆದೇಶದ ವಿರುದ್ಧ ಮೇಲ್ಮನವಿಯನ್ನು ಸರ್ವೋಚ್ಚ ನ್ಯಾಯಾಲಯ(ಸುಪ್ರೀಂ ಕೋರ್ಟ್)ದಲ್ಲಿ ಮಾತ್ರ ಸಲ್ಲಿಸಬಹುದು.

**ಚಿತ್ರ 1: ಗ್ರಾಹಕ ವಿವಾದಗಳ ಪರಿಹಾರಕ್ಕಾಗಿ ಸಂಪರ್ಕದಾರಿ(ಚಾನಲ್)ಗಳು**

ನ್ಯಾಯಾಂಗ ಚಾನೆಲ್‌ಗಳು

| ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ | ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ | ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ |
|---|---|---|
| ಕೇಂದ್ರ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿದೆ | ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿದೆ | ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿದೆ |
| ರೂ.10 ಕೋಟಿಗಿಂತ ಹೆಚ್ಚು ಮೌಲ್ಯವಿರುವ ಸರಕು ಅಥವಾ ಸೇವೆಗಳ ದೂರುಗಳನ್ನು ಪರಿಹರಿಸುವ ನ್ಯಾಯವ್ಯಾಪ್ತಿಯನ್ನು ಹೊಂದಿದೆ | ರೂ. 1 ಕೋಟಿಮತ್ತು ರೂ.10 ಕೋಟಿಗಳ ನಡುವಿನ ಮೌಲ್ಯವಿರುವ ಸರಕು ಅಥವಾ ಸೇವೆಗಳ ದೂರುಗಳನ್ನು ಪರಿಹರಿಸುವ ನ್ಯಾಯವ್ಯಾಪ್ತಿಯನ್ನು ಹೊಂದಿದೆ | ರೂ.1 ಕೋಟಿಗಿಂತ ಕಡಿಮೆ ಮೌಲ್ಯವಿರುವ ಸರಕು ಅಥವಾ ಸೇವೆಗಳ ದೂರುಗಳನ್ನು ಪರಿಹರಿಸುವ ನ್ಯಾಯವ್ಯಾಪ್ತಿಯನ್ನು ಹೊಂದಿದೆ |
| ರಾಜ್ಯ ಆಯೋಗದ ಆದೇಶಗಳ ವಿರುದ್ಧ ಮೇಲ್ಮನವಿಗಳನ್ನು ಸ್ವೀಕರಿಸುತ್ತದೆ | ಜಿಲ್ಲಾ ಆಯೋಗದ ಆದೇಶಗಳ ವಿರುದ್ಧ ಮೇಲ್ಮನವಿಗಳನ್ನು ಸ್ವೀಕರಿಸುತ್ತದೆ | |

**a) ದೂರು ಸಲ್ಲಿಸುವ ವಿಧಾನ**

ಮೇಲಿನ ಎಲ್ಲ ಮೂರು ಏಜೆನ್ಸಿಗಳಲ್ಲಿ ದೂರು ಸಲ್ಲಿಸುವ ವಿಧಾನವು ತುಂಬಾ ಸರಳವಾಗಿದೆ. ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗಕ್ಕೆ ದೂರು ಅಥವಾ ಮೇಲ್ಮನವಿಯನ್ನು ಸಲ್ಲಿಸಲು ಯಾವುದೇ ಶುಲ್ಕವಿಲ್ಲ. ದೂರುದಾರರು ಸ್ವತಃ ಅಥವಾ ತಮ್ಮ ಅಧಿಕೃತ ಏಜೆಂಟರ ಮೂಲಕ ದೂರು ಸಲ್ಲಿಸಬಹುದು. ಇದನ್ನು ವೈಯಕ್ತಿಕವಾಗಿ ಸಲ್ಲಿಸಬಹುದು ಅಥವಾ ಅಂಚೆ ಮೂಲಕವಾಗಿಯೂ ಕಳುಹಿಸಬಹುದು. ದೂರು ಸಲ್ಲಿಸುವ ಉದ್ದೇಶಕ್ಕಾಗಿ ಯಾವುದೇ ವಕೀಲರ ಅಗತ್ಯವಿಲ್ಲವೆಂಬುದನ್ನು ಗಮನಿಸಬಹುದು.

**b) ಗ್ರಾಹಕ ಆಯೋಗದ ಆದೇಶಗಳು**

ಪ್ರಶ್ನೆಯಲ್ಲಿರುವ ಸರಕುಗಳು ದೂರಿನಲ್ಲಿ ನಿರ್ದಿಷ್ಟಪಡಿಸಿದ ದೋಷಗಳನ್ನು ಹೊಂದಿರುವ ಅಥವಾ ಸೇವೆಗಳ ಬಗ್ಗೆ ಆರೋಪಗಳು ಸಾಬೀತಾಗಿರುವ ಬಗ್ಗೆ ಆಯೋಗವು ತೃಪ್ತಿದಾಯಕವಾಗಿದ್ದರೆ; ಆಯೋಗವು ಈ ಕೆಳಗೆ ನೀಡಿದ ಅಂಶಗಳಲ್ಲಿ ಯಾವುದನ್ನಾದರೂ ಮಾಡಲು ಎದುರು ಪಕ್ಷವನ್ನು ನಿರ್ದೇಶಿಸುವ ಆದೇಶಗಳನ್ನು ನೀಡಬಹುದು:

i. ದೂರುದಾರರಿಗೆ **ಬೆಲೆ** (ಅಥವಾ ವಿಮೆಯ ಸಂದರ್ಭದಲ್ಲಿ ಕಂತು) ಮತ್ತು/ಅಥವಾ ದೂರುದಾರರು ಪಾವತಿಸಿದ ಶುಲ್ಕಗಳನ್ನು ಹಿಂದಿರುಗಿಸಲು

ii. ಎದುರು ಪಕ್ಷದ ನಿರ್ಲಕ್ಷ್ಯದಿಂದ ಗ್ರಾಹಕರು ಅನುಭವಿಸಿದ ಯಾವುದೇ ನಷ್ಟ ಅಥವಾ ಗಾಯಕ್ಕೆ ಪರಿಹಾರವಾಗಿ ಒಂದು ಮೊತ್ತವನ್ನು ಗ್ರಾಹಕರಿಗೆ ನೀಡುವುದು

iii. ಪ್ರಶ್ನೆಯಲ್ಲಿರುವ ಸೇವೆಗಳಲ್ಲಿನ **ದೋಷಗಳು** ಅಥವಾ **ನ್ಯೂನತೆಗಳನ್ನು** ತೆಗೆದುಹಾಕಲು.

iv. ಅನ್ಯಾಯದ ವ್ಯಾಪಾರದ ಅಭ್ಯಾಸ ಅಥವಾ ನಿರ್ಬಂಧಿತ ವ್ಯಾಪಾರದ ಅಭ್ಯಾಸವನ್ನು ನಿಲ್ಲಿಸುವುದು ಅಥವಾ ಅವುಗಳನ್ನು ಪುನರಾವರ್ತಿಸದಿರುವುದು

v. ದೂರುದಾರರಿಗೆ ಸೂಕ್ತ ವೆಚ್ಚಗಳನ್ನು ಒದಗಿಸುವುದು.

**c) ದೂರುಗಳ ಸ್ವರೂಪ**

ವಿಮಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಮೂರು ಆಯೋಗಗಳೊಂದಿಗಿನ ಹೆಚ್ಚಿನ ಗ್ರಾಹಕ ವಿವಾದಗಳು ಮುಖ್ಯವಾಗಿ ಈ ಕೆಳಗೆ ನೀಡಿದ ವರ್ಗಗಳಲ್ಲಿರುತ್ತವೆ:

i. ಕ್ಲೇಮ್ ಗಳ ಇತ್ಯರ್ಥದಲ್ಲಿ ವಿಳಂಬ

ii. ಕ್ಲೇಮ್ ಗಳು ಇತ್ಯರ್ಥವಾಗದಿರುವುದು

iii. ಕ್ಲೇಮ್ ಗಳ ನಿರಾಕರಣೆ

iv. ನಷ್ಟದ ಮೊತ್ತ ಅಥವಾ ಪ್ರಮಾಣ

v. ಪಾಲಿಸಿ ನಿಯಮಗಳು ಮತ್ತು ಷರತ್ತುಗಳು ಇತ್ಯಾದಿ.

## E. ವಿಮಾ ಓಂಬುಡ್ಸ್ ಮನ್

ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯಿದೆ, 1999 ರ ಅಧಿಕಾರದಡಿಯಲ್ಲಿ ಕೇಂದ್ರ ಸರ್ಕಾರವು 25, ಏಪ್ರಿಲ್ **2017** ರಂದು ಅಧಿಕೃತ ಗೆಜೆಟ್ ನಲ್ಲಿ ಪ್ರಕಟವಾದ ಅಧಿಸೂಚನೆಯ ಮೂಲಕ **2017** ರ ವಿಮಾ ಓಂಬುಡ್ಸ್ ಮನ್ ನಿಯಮಗಳನ್ನು ಮಾಡಿದೆ.

ಎಲ್ಲ ವೈಯಕ್ತಿಕ ವಿಮೆ, ಗುಂಪು ವಿಮಾ ಪಾಲಿಸಿಗಳು, ಏಕಮಾತ್ರ ಮಾಲೀಕತ್ವ ಮತ್ತು ಸೂಕ್ಷ್ಮ ಉದ್ಯಮಗಳಿಗೆ ನೀಡಲಾದ ಪಾಲಿಸಿಗಳ ಮೇಲಿನ ದೂರುಗಳಿಗೆ ಸಂಬಂಧಿಸಿದಂತೆ ಎಲ್ಲ ವಿಮಾದಾರರು ಮತ್ತು ಅವರ ಏಜೆಂಟರು ಮತ್ತು ಮಧ್ಯವರ್ತಿಗಳಿಗೆ ವಿಮಾ ಓಂಬುಡ್ಸ್ ಮನ್ ರಿಗೆ ಸಂಬಂಧಿಸಿದ ನಿಯಮಗಳು ಅನ್ವಯಿಸುತ್ತವೆ. [ಇಲ್ಲಿ 'ವೈಯಕ್ತಿಕ ಪಾಲಿಸಿಗಳು' ಎಂದರೆ ಸಾಂಘಿಕ(ಕಾರ್ಪೊರೇಟ್) ಘಟಕಗಳಿಗೆ ಮಾರಾಟವಾಗುವ ವಿಮೆಗಳಿಗೆ ವಿರುದ್ಧವಾಗಿ ವೈಯಕ್ತಿಕ ಸಾಮರ್ಥ್ಯದಲ್ಲಿ ತೆಗೆದುಕೊಳ್ಳಲಾದ ವಿಮೆಗಳು ಎಂದರ್ಥ.] (ಎ) ಐಆರ್ ಡಿಎಐಯಿಂದ ನಿರ್ದಿಷ್ಟಪಡಿಸಲಾದ ಸಮಯವನ್ನು ಮೀರಿ ಕ್ಲೇಮ್ ಗಳ ಇತ್ಯರ್ಥದಲ್ಲಿ ವಿಳಂಬ, **(**ಬಿ) ವಿಮಾಗಾರರಿಂದ ಕ್ಲೇಮ್ ಗಳ ಭಾಗಶಃ ಅಥವಾ ಸಂಪೂರ್ಣ ನಿರಾಕರಣೆಗೆ ಸಂಬಂಧಿಸಿದ ದೂರುಗಳು, **(**ಸಿ) ವಿಮಾ ಪಾಲಿಸಿಯ ವಿಷಯದಲ್ಲಿ ಪಾವತಿಸಿದ ಅಥವಾ ಪಾವತಿಸಬೇಕಾದ ಕಂತಿನ ಬಗ್ಗೆ ವಿವಾದಗಳು, **(**ಡಿ) ಯಾವುದೇ ಸಮಯದಲ್ಲಿ ಪಾಲಿಸಿ ದಾಖಲೆ ಅಥವಾ ಪಾಲಿಸಿ ಒಪ್ಪಂದದಲ್ಲಿ ಪಾಲಿಸಿ ನಿಯಮಗಳು ಮತ್ತು ಷರತ್ತುಗಳನ್ನು ತಪ್ಪಾಗಿ ನಿರೂಪಿಸುವುದು, **(**ಇ) ಕ್ಲೇಮ್ ಗಳ ಮೇಲೆ ಪರಿಣಾಮ ಬೀರುವ ವಿಮಾ ಪಾಲಿಸಿಗಳ ಕಾನೂನು ನಿರ್ಮಾಣ; ಮತ್ತು (ಎಫ್) ವಿಮಾದಾರರು ಮತ್ತು ಅವರ ಏಜೆಂಟರು ಮತ್ತು ಮಧ್ಯವರ್ತಿಗಳ ವಿರುದ್ಧ ಪಾಲಿಸಿ ಸೇವೆ ಮತ್ತು ಸಂಬಂಧಿತ ಕುಂದುಕೊರತೆಗಳು.

- **a)** ಜಾರಿಗೊಳಿಸಲಾದ ಜೀವ ವಿಮೆ, ಆರೋಗ್ಯ ವಿಮೆ ಪಾಲಿಸಿ ಸೇರಿದಂತೆ ಸಾಮಾನ್ಯ ವಿಮಾ ಪಾಲಿಸಿಯು ಪ್ರಸ್ತಾಪಕರು ಸಲ್ಲಿಸಿದ ಪ್ರಸ್ತಾವನಾ ನಮೂನೆಗೆ ಅನುಗುಣವಾಗಿಲ್ಲ.
- **b)** ಜೀವ ವಿಮೆ ಸೇರಿದಂತೆ ಆರೋಗ್ಯ ವಿಮೆ ಸಾಮಾನ್ಯ ವಿಮೆಯಲ್ಲಿ ಕಂತು ಪಡೆದ ನಂತರವೂ ವಿಮಾ ಪಾಲಿಸಿಯನ್ನು ನೀಡದಿರುವುದು ಮತ್ತು
- **c)** ವಿಮಾ ಕಾಯಿದೆ, **1938** ರ ನಿಬಂಧನೆಗಳ ಉಲ್ಲಂಘನೆ ಅಥವಾ ಐಆರ್ ಡಿಎಐಯಿಂದ ಕಾಲಕಾಲಕ್ಕೆ ಜಾರಿಮಾಡಲ್ಪಟ್ಟ ನಿಯಮಗಳು, ಸುತ್ತೋಲೆಗಳು, ಮಾರ್ಗಸೂಚಿಗಳು ಅಥವಾ ಸೂಚನೆಗಳು ಅಥವಾ (ಎ) ಯಿಂದ (ಎಫ್) ತನಕ ಉಲ್ಲೇಖಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಪಾಲಿಸಿ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳ ಉಲ್ಲಂಘನೆಯಿಂದ ಉಂಟಾಗುವ ಯಾವುದೇ ಇತರ ವಿಷಯ.

ಮೇಲೆ ತಿಳಿಸಲಾದ ಎಲ್ಲ ರೀತಿಯ ದೂರುಗಳನ್ನು ವೆಚ್ಚ ಪರಿಣಾಮಕಾರಿಯಾದ ಮತ್ತು ನಿಷ್ಪಕ್ಷಪಾತವಾದ ರೀತಿಯಲ್ಲಿ ಪರಿಹರಿಸುವುದು ಈ ನಿಯಮಗಳ ಉದ್ದೇಶವಾಗಿದೆ.

**ವಿಮಾದಾರ ಮತ್ತು ವಿಮಾಗಾರರ ಪರಸ್ಪರ ಒಪ್ಪಂದದ ಮೂಲಕ ಓಂಬುಡ್ಸ್ ಮನ್ ರವರು ಉಲ್ಲೇಖದ ನಿಯಮಗಳೊಳಗೆ ಮಧ್ಯಸ್ಥರಾಗಿ ಮತ್ತು ಸಲಹೆಗಾರರಾಗಿ ಕಾರ್ಯನಿರ್ವಹಿಸಬಹುದು.**

**ದೂರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವಲ್ಲಿ ಓಂಬುಡ್ಸ್ ಮನ್ ರವರ ನಿರ್ಧಾರವು ಅಂತಿಮವಾಗಿರುತ್ತದೆ.**

**a) ಓಂಬುಡ್ಸ್ ಮನ್ ರವರಿಗೆ ದೂರು**

ಓಂಬುಡ್ಸ್ ಮನ್ ರವರಿಗೆ ಮಾಡಲಾದ ಯಾವುದೇ ದೂರು ಲಿಖಿತರೂಪದಲ್ಲಿರಬೇಕು ಮತ್ತು ವಿಮಾದಾರರು ಅಥವಾ ಅವರ ಕಾನೂನು ಉತ್ತರಾಧಿಕಾರಿಗಳು, ನಾಮನಿರ್ದೇಶಿತರು ಅಥವಾ ನಿಯೋಜಿತರಿಂದ ಸಹಿ ಮಾಡಲ್ಪಟ್ಟಿರಬೇಕು ಮತ್ತು ವಿಮಾಗಾರರು ಶಾಖೆ/ಕಚೇರಿಯನ್ನು ಹೊಂದಿರುವ ಅಧಿಕಾರ ವ್ಯಾಪ್ತಿಯಲ್ಲಿರುವ ಓಂಬುಡ್ಸ್ ಮನ್ ರವರಿಗೆ ನಿರ್ದೇಶಿಸಿರಬೇಕು. ಅದು ದಾಖಲೆಗಳಿಂದ ಬೆಂಬಲಿತವಾಗಿದ್ದು, ದೂರುದಾರರಿಗೆ ಉಂಟಾದ ನಷ್ಟದ ಸ್ವರೂಪ ಮತ್ತು ಪ್ರಮಾಣ ಮತ್ತು ಕೋರಲಾಗಿರುವ ಪರಿಹಾರದ ಜೊತೆಗೆ ದೂರಿಗೆ ಕಾರಣವಾದ ಸಂಗತಿಗಳನ್ನು ಒಳಗೊಂಡಿರಬೇಕು.

**ಈ ಕೆಳಗಿನ ಸಂದರ್ಭಗಳಲ್ಲಿ ಓಂಬುಡ್ಸ್ ಮನ್ ರವರಿಗೆ ದೂರು ನೀಡಬಹುದು:**

i. ವಿಮಾ ಕಂಪನಿಗೆ ದೂರುದಾರರು ಈ ಮೊದಲೇ ಲಿಖಿತ ನಿರೂಪಣೆಯನ್ನು ಮಾಡಿದ್ದ ಮತ್ತು:

- ✓ ವಿಮಾ ಕಂಪನಿಯು ದೂರನ್ನು ತಿರಸ್ಕರಿಸಿದರೆ ಅಥವಾ
- ✓ ವಿಮಾಗಾರರಿಗೆ ದೂರು ತಲುಪಿದ ನಂತರ ಒಂದು ತಿಂಗಳೊಳಗೆ ದೂರುದಾರರು ಯಾವುದೇ ಉತ್ತರವನ್ನು ಪಡೆದಿಲ್ಲವಾದರೆ.

ii. ದೂರುದಾರರು ವಿಮಾಗಾರರು ನೀಡಿದ ಉತ್ತರದಿಂದ ತೃಪ್ತರಾಗಿಲ್ಲವಾದರೆ

iii. ವಿಮಾ ಕಂಪನಿಯು ತಿರಸ್ಕರಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ದೂರನ್ನು ದಾಖಲಿಸಿದರೆ,

iv. ಯಾವುದೇ ನ್ಯಾಯಾಲಯ ಅಥವಾ ಗ್ರಾಹಕ ಆಯೋಗ ಅಥವಾ ಮಧ್ಯಸ್ಥಿಕೆಯಲ್ಲಿ ದೂರು ಬಾಕಿ ಉಳಿದಿಲ್ಲವಾದರೆ

v. ಕ್ಲೇಮ್ ಮಾಡಿದ ವೆಚ್ಚಗಳು ಸೇರಿದಂತೆ ಕ್ಲೇಮ್ ನ ಮೌಲ್ಯವು ರೂ **30** ಲಕ್ಷಕ್ಕಿಂತ ಹೆಚ್ಚಿಲ್ಲದಿದ್ದರೆ.

**b) ಓಂಬುಡ್ಸ್ ಮನ್ ರವರಿಂದ ಶಿಫಾರಸುಗಳು**

ಓಂಬುಡ್ಸ್ ಮನ್ ರವರು ದೂರುಗಳ ಪ್ರತಿಗಳನ್ನು ದೂರುದಾರ ಮತ್ತು ವಿಮಾ ಕಂಪನಿ ಇಬ್ಬರಿಗೂ ಕಳುಹಿಸುತ್ತಾರೆ. ದೂರನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಓಂಬುಡ್ಸ್ ಮನ್ ರವರು ತಮ್ಮ ಶಿಫಾರಸುಗಳನ್ನು ಮಾಡುತ್ತಾರೆ.

**c) ತೀರ್ಪು**

ಮಧ್ಯಸ್ಥಿಕೆಯಿಂದ ವಿವಾದವನ್ನು ಇತ್ಯರ್ಥಪಡಿಸಬಹುದು. ಅದು ಸಾಧ್ಯವಾಗದಿದ್ದರೆ, ದೂರುದಾರರಿಂದ ಎಲ್ಲ ಅಗತ್ಯತೆಗಳನ್ನು ಸ್ವೀಕರಿಸಿದ ದಿನಾಂಕದಿಂದ 3 ತಿಂಗಳ ಅವಧಿಯೊಳಗೆ ಓಂಬುಡ್ಸ್ ಮನ್ ರವರು ನ್ಯಾಯಯುತವೆಂದು ಭಾವಿಸುವ ತೀರ್ಪನ್ನು ವಿಮಾದಾರರಿಗೆ ರವಾನಿಸುತ್ತಾರೆ ಮತ್ತು ತೀರ್ಪಿನ ಪ್ರತಿಯನ್ನು ದೂರುದಾರರಿಗೆ ಮತ್ತು ವಿಮಾಗಾರರಿಗೆ ಕಳುಹಿಸುತ್ತಾರೆ. .

ವಿಮಾಗಾರರು ತೀರ್ಪನ್ನು ಸ್ವೀಕರಿಸಿದ 30 ದಿನಗಳೊಳಗೆ ತೀರ್ಪನ್ನು ಅನುಸರಿಸಬೇಕು ಮತ್ತು ಅನುಸರಣೆಯನ್ನು ಒಂಬುಡ್ಸ್ ಮನ್ ರವರಿಗೆ ಸೂಚಿಸಬೇಕು. ಒಂಬುಡ್ಸ್ ಮನ್ ರವರ ತೀರ್ಪು ವಿಮಾಗಾರರೆ ಬಂಧನಕಾರಕವಾಗಿರುತ್ತದೆ.

## F. ಮಾಹಿತಿಯ ಹಕ್ಕು

ವಿಮೆಯಲ್ಲಿಯ ದೂರು ನಿವಾರಣೆಗೆ ನಿರ್ದಿಷ್ಟವಾಗಿರುವ ನಿಯಮಗಳು ಮತ್ತು ನಿಬಂಧನೆಗಳ ಜೊತೆಗೆ, ದೇಶದಲ್ಲಿ ಎಲ್ಲರಿಗೂ ಸಮಾನವಾದ ಕೆಲವು ಸಾಮಾನ್ಯ ಕಾನೂನುಗಳಿವೆ. ಭಾರತ ಸರ್ಕಾರದಿಂದ **2005** ರಲ್ಲಿ ಜಾರಿಗೊಳಿಸಲಾದ ಮಾಹಿತಿ ಹಕ್ಕು (ಆರ್ ಟಿಐ) ಕಾಯಿದೆಯು ಈ ಸಂಸ್ಥೆಗಳಲ್ಲಿ ಪಾರದರ್ಶಕತೆ ಮತ್ತು ಬಾಧ್ಯತೆಯನ್ನು ಉತ್ತೇಜಿಸುವಂತೆ ಸಾರ್ವಜನಿಕ ಅಧಿಕಾರಿಗಳೊಂದಿಗೆ ಲಭ್ಯವಿರುವ ಮಾಹಿತಿಗೆ ಭಾರತದ ನಾಗರಿಕರಿಗೆ ಪ್ರವೇಶಸಾಧ್ಯತೆಯನ್ನು ನೀಡುವ ಭಾರತದ ಪ್ರಮುಖ ಕಾನೂನಾಗಿದೆ. ಈ ಕಾಯಿದೆಯು ಮಾಹಿತಿಗಾಗಿ ಬರುವ ವಿನಂತಿಗಳೊಂದಿಗೆ ವ್ಯವಹರಿಸಲು ಮುಖ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ(ಸಿಪಿಐಒ)ಯ ನೇಮಕವನ್ನು ಒದಗಿಸುತ್ತದೆ. ಈ ಕಾಯಿದೆಯ ನಿಬಂಧನೆಗಳಿಗನುಗುಣವಾಗಿ ಸಾರ್ವಜನಿಕ ಸದಸ್ಯರಿಗೆ ಮಾಹಿತಿಯನ್ನು ಒದಗಿಸಲು ಐಆರ್ ಡಿಎಐ ಬದ್ಧವಾಗಿದೆ. ಆರ್ ಟಿಐ ಕಾಯಿದೆಯ ಪ್ರಕಾರ, ಐಆರ್ ಡಿಎಐ ಮತ್ತು ವಿಮಾ ಕಂಪನಿಗಳು ಗ್ರಾಹಕರು ಮತ್ತು ಇತರರಿಗೆ ಕೆಲವು ಮಾಹಿತಿಯನ್ನು ಬಹಿರಂಗಪಡಿಸಬೇಕಾಗಬಹುದು ಎಂದು ಏಜೆಂಟರು ತಿಳಿದಿರಬೇಕು; ಅಲ್ಲದೇ ಕೆಲಸ, ದಾಖಲೆ, ಕಾಗದಪತ್ರಗಳು, ಆಯ್ದ ಭಾಗಗಳು ಅಥವಾ ದಾಖಲೆಗಳು/ಕಾಗದಪತ್ರಗಳ ಪ್ರಮಾಣೀಕೃತ ಪ್ರತಿಗಳು ಮತ್ತು ಎಲೆಕ್ಟ್ರಾನಿಕ್ ರೂಪದಲ್ಲಿ ಸಂಗ್ರಹಿಸಲಾದ ಮಾಹಿತಿಯನ್ನು ಪರಿಶೀಲಿಸಲು ಅವರಿಗೆ ಅವಕಾಶ ನೀಡುತ್ತದೆ. ಆದಾಗ್ಯೂ, ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದ ಕೆಲವು ಮಾಹಿತಿಗಳ ವರ್ಗಗಳಿವೆ.

## ನಿಮ್ಮನ್ನು ಪರೀಕ್ಷಿಸಿ 1

ರೂ.20 ಲಕ್ಷಗಳವರೆಗೆ ಮೌಲ್ಯದ ಮತ್ತು ಪರಿಹಾರದ ಸರಕು ಅಥವಾ ಸೇವೆಗಳಿರುವ ದೂರುಗಳನ್ನು ಪರಿಹರಿಸಲು ____________ ನ್ಯಾಯವ್ಯಾಪ್ತಿಯನ್ನು ಹೊಂದಿದೆ.

I. ಜಿಲ್ಲಾ ಆಯೋಗ

II. ರಾಜ್ಯ ಆಯೋಗ

III. ಜಿಲ್ಲಾ ಪರಿಷತ್ತು

IV. ರಾಷ್ಟ್ರೀಯ ಆಯೋಗ

---

## ಸಾರಾಂಶ

- ಐಆರ್ ಡಿಎಐ ಯು ವಿಮಾ ದೂರುಗಳ ಮಾಹಿತಿಯ ಕೇಂದ್ರ ಭಂಡಾರವಾಗಿ ಮತ್ತು ಉದ್ಯಮದಲ್ಲಿನ ಕುಂದುಕೊರತೆ ಪರಿಹಾರವನ್ನು ಮೇಲ್ವಿಚಾರಣೆ ಮಾಡುವ ಸಾಧನವಾಗಿ ಕಾರ್ಯನಿರ್ವಹಿಸುವ ಸಮಗ್ರ

ದೂರು ನಿರ್ವಹಣಾ ವ್ಯವಸ್ಥೆ(ಇಂಟಿಗ್ರೇಟೆಡ್ ಗ್ರೀವೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್) (ಐಜಿಎಮ್‌ಎಸ್)ಯನ್ನು ಪ್ರಾರಂಭಿಸಿದೆ.

- ಗ್ರಾಹಕ ವಿವಾದಗಳ ಪರಿಹಾರದ ಏಜೆನ್ಸಿಗಳನ್ನು ಪ್ರತಿ ಜಿಲ್ಲೆ ಮತ್ತು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸ್ಥಾಪಿಸಲಾಗಿದೆ.
- ವಿಮಾ ವ್ಯವಹಾರಕ್ಕೆ ಸಂಬಂಧಿಸಿದಂತೆ, ಹೆಚ್ಚಿನ ಗ್ರಾಹಕ ವಿವಾದಗಳು ಕ್ಲೇಮ್ ಗಳ ಇತ್ಯರ್ಥದಲ್ಲಿಯ ವಿಳಂಬ, ಕ್ಲೇಮ್ ಗಳನ್ನು ಇತ್ಯರ್ಥಗೊಳಿಸದಿರುವುದು, ಕ್ಲೇಮ್ ಗಳ ನಿರಾಕರಣೆ, ನಷ್ಟದ ಪ್ರಮಾಣ ಮತ್ತು ಪಾಲಿಸಿ ನಿಯಮಗಳು, ಷರತ್ತುಗಳು ಇತ್ಯಾದಿಗಳಂತಹ ವರ್ಗಗಳಲ್ಲಿ ಬರುತ್ತವೆ.
- ಓಂಬುಡ್ಸ್ ಮನ್, ವಿಮಾದಾರರ ಮತ್ತು ವಿಮಾಗಾರರ ಪರಸ್ಪರ ಒಪ್ಪಂದದ ಮೂಲಕ ಉಲ್ಲೇಖದ ನಿಯಮಗಳೊಳಗೆ ಮಧ್ಯವರ್ತಿಯಾಗಿ ಮತ್ತು ಸಲಹೆಗಾರರಾಗಿ ಕಾರ್ಯನಿರ್ವಹಿಸಬಹುದು.
- ವಿವಾದವು ಮಧ್ಯಸ್ಥಿಕೆಯಿಂದ ಇತ್ಯರ್ಥವಾಗದಿದ್ದರೆ, ಓಂಬುಡ್ಸ್ ಮನ್ ರವರು ವಿಮಾದಾರರಿಗೆ ನ್ಯಾಯಯುತವಾಗಿದ್ದು ಮತ್ತು ವಿಮಾದಾರರ ನಷ್ಟವನ್ನು ಸರಿದೂಗಿಸಲು ಅಗತ್ಯಕ್ಕಿಂತ ಹೆಚ್ಚಿಲ್ಲವೆಂದು ಅವರು ಭಾವಿಸುವ ತೀರ್ಪನ್ನು ನೀಡುತ್ತಾರೆ.

**ಪ್ರಮುಖ ಪದಗಳು**

1. ಸಮಗ್ರ ದೂರು ನಿರ್ವಹಣಾ ವ್ಯವಸ್ಥೆ(ಇಂಟಿಗ್ರೇಟೆಡ್ ಗ್ರೀವೆನ್ಸ್ ಮ್ಯಾನೇಜ್ ಮೆಂಟ್) (ಐಜಿಎಮ್‌ಎಸ್)
2. ಗ್ರಾಹಕ ಸಂರಕ್ಷಣಾ ಕಾಯಿದೆ, 2019
3. ಜಿಲ್ಲಾ ಆಯೋಗ
4. ರಾಜ್ಯ ಆಯೋಗ
5. ರಾಷ್ಟ್ರೀಯ ಆಯೋಗ
6. ವಿಮಾ ಓಂಬುಡ್ಸ್ ಮನ್

**ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು**

ಉತ್ತರ 1 - ಸರಿಯಾದ ಉತ್ತರ I ಆಗಿದೆ.

# ಅಧ್ಯಾಯ C-10

# ಜಾಲ ಸಂಗ್ರಾಹಕರಿಗೋಸ್ಕರ ನಿಯಂತ್ರಣಾಂಶಗಳು

## ಅಧ್ಯಾಯದ ಪರಿಚಯ

ಈ ಅಧ್ಯಾಯದಲ್ಲಿ ಜಾಲ ಸಂಗ್ರಾಹಕರಿಗೆ ಸಂಬಂಧಪಟ್ಟ ನಿಯಂತ್ರಣಗಳ ಬಗ್ಗೆ ಚರ್ಚಿಸಲಿದ್ದೇವೆ.

## ಕಲಿಕೆಯ ಫಲಿತಾಂಶಗಳು

### A. ಜಾಲ ಸಂಗ್ರಾಹಕರ ನಿಯಂತ್ರಣಗಳು

## A. ಜಾಲ ಸಂಗ್ರಾಹಕರು:

**ಜಾಲ ಸಂಗ್ರಾಹಕರ ನಿಯಮಗಳು 3ನೇ ಡಿಸೆಂಬರ್ 2013 ರಿಂದ ಜಾರಿಗೆ ಬಂದಿದೆ.**

ಈ ಕೆಳಕಂಡ ವ್ಯಾಖ್ಯಾನಗಳು ಪ್ರಾಸಂಗಿಕ

### 1. ವ್ಯಾಖ್ಯಾನಗಳು:

a. ''ಕಾಯಿದೆ'' ಎಂದರೆ ಕಾಲಕಾಲಕ್ಕೆ ತಿದ್ದುಪಡಿಗೊಂಡ ಇನ್ಸುರೆನ್ಸ್ ಆಕ್ಟ್ 1938 (4ನೇ 1938) ವಿಮಾ ಕಾಯಿದೆ, 1938.

b. ''ಒಪ್ಪಂದ ಎಂದರೆ, ಈ ನಿಯಮಗಳು ಅನ್ವಯದಲ್ಲಿ, ಜಾಲ ಸಂಗ್ರಾಹಕರು ಮತ್ತು ವಿಮಾ ಕಂಪನಿಯೊಂದಿಗೆ ಏರ್ಪಟ್ಟ ಕರಾರು

c. 'ಅಧಿಕೃತ ಪರಿಶೀಲಕ': ಈ ನಿಯಮಗಳ ಅನ್ವಯ, ಅಧಿಕೃತ ಪರಿಶೀಲಕ ಎಂದರೆ ಜಾಲ ಸಂಗ್ರಾಹಕ ಅಥವಾ ದೂರವಾಣಿ ಮಾರಾಟಗಾರ ನೇಮಕ ಮಾಡಿಕೊಂಡ ವ್ಯಕ್ತಿ, ಈತನು ತರಬೇತಿಯನ್ನು ಪಡೆದುಕೊಂಡು ಮತ್ತು ನಿರ್ದಿಷ್ಟ ಪ್ರಾಧಿಕಾರದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ದೂರವಾಣಿ ಮಾರಾಟಗಾರಿಕೆ ಮತ್ತು ದೂರ ಮಾರುಕಟ್ಟೆ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಮಾಧ್ಯಮದ ಮೂಲಕ ವಿಮಾ ಉತ್ಪನ್ನಗಳನ್ನು ಕೊಳ್ಳುವಂತೆ ವಿಜ್ಞಾಪನೆ ಮಾಡಿ, ಸಂಪಾದನೆ ಮಾಡುವವನು

d. 'ಪ್ರಾಧಿಕಾರ' ಎಂದರೆ ವಿಮಾ ನಿಯಂತ್ರಣೆ ಮತ್ತು ವಿಕಾಸ ಪ್ರಾಧಿಕಾರ ಕಾಯಿದೆ 1999 (41 / 1999) ಯ ಸೆಕ್ಷನ್ 3ರ ನಿಬಂಧನೆಗಳ ಅಡಿಯಲ್ಲಿ ಸ್ಥಾಪಿತವಾದ ವಿಮಾ ನಿಯಂತ್ರಣೆ ಮತ್ತು ವಿಕಾಸ ಪ್ರಾಧಿಕಾರ.

e. 'ದೂರ ಮಾರಾಟ'' ಎಂದರೆ ಈ ನಿಯಂತ್ರಣಗಳ ಅನ್ವಯ ವಿಮಾ ಉತ್ಪನ್ನಗಳ ಅಥವಾ ಸೇವೆಗಳ ಮಾರಾಟ ಪ್ರಕ್ರಿಯೆ. ಇದರಲ್ಲಿ ಮಾರಾಟ ಮಾಡುವ ಸ್ಥಳದಲ್ಲಿ ಗ್ರಾಹಕ ಭೌತಿಕವಾಗಿ ಇರುವುದಿಲ್ಲ ಮತ್ತು ಪ್ರಕ್ರಿಯೆಯನ್ನು ದೂರವಾಣಿ ಮೂಲಕ ಅಥವಾ ಮೊಬೈಲ್ ಮೂಲಕ ಎಸ್‌ಎಂಎಸ್ ಸಂದೇಶ, ಅಥವಾ ಇಂಟರ್‌ನೆಟ್ ಅಥವಾ ಜಾಲ ಸೇವೆಗಳ ಮೂಲಕ ಸಾಧಿಸಲಾಗವುದು.

f. 'ಪ್ರಮುಖ ನಿರ್ವಹಣಾ ಸಿಬ್ಬಂದಿ' ಎಂದರೆ, ಈ ನಿಯಂತ್ರಣಗಳ ಅನ್ವಯ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಮುಖ್ಯ ಕಾರ್ಯಕಾರಿ ಅಧಿಕಾರಿ, ಮುಖ್ಯ ಮಾರ್ಕೆಟಿಂಗ್ ಅಧಿಕಾರಿ, ಮುಖ್ಯ ಹಣಕಾಸಿನ ಅಧಿಕಾರಿ, ತಾಂತ್ರಿಕ ಇಲಾಖೆಯ ಮುಖ್ಯಸ್ಥ, ಮಾಹಿತಿ ತಂತ್ರಜ್ಞಾನದ ಮುಖ್ಯಸ್ಥ.

g. 'ಲೀಡ್' ಈ ನಿಯಂತ್ರಣಗಳ ಅನ್ವಯ ಎಂದರೆ ಜಾಲ ಸಂಗ್ರಾಹಕನ ಜಾಲತಾಣವನ್ನು ಪ್ರವೇಶಿಸಿರುವ ವ್ಯಕ್ತಿಯ ವಿವರಗಳು ಮತ್ತು ವಿಮಾ ಉತ್ಪನ್ನಗಳ ಬೆಲೆ, ಲಕ್ಷಣಗಳು, ಫಲಗಳ ಬಗ್ಗೆ ಮಾಹಿತಿ ಪಡೆಯುವುದರಲ್ಲಿ ತನ್ನ ಸಂಪರ್ಕದ ವಿವರಗಳನ್ನು ಸಲ್ಲಿಸಿದವ'ನು.

h. 'ಲೀಡ್ ಜನರೇಶನ್' ಈ ನಿಯಂತ್ರಗಳ ಅನುಸಾರ ಎಂದರೆ ವಿಮಾ ಉತ್ಪನ್ನಗಳ ಮಾರಾಟ ಮಾಡುವುದಕ್ಕೆ ಮೊದಲು, ಸಂಭಾವ್ಯ-ಗ್ರಾಹಕನ ವಿವರಗಳನ್ನು ಮತ್ತು ವಿಮೆ ಕೊಳ್ಳಲು ಆತನಿಗಿರುವ ಇಚ್ಛೆ ತಿಳಿದುಕೊಳ್ಳುವಂತಹ ಪ್ರಕ್ರಿಯೆ.

i. 'ಲೀಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್' (ಎಲ್.ಎಮ್.ಎನ್) ಎಂದರೆ, ಈ ನಿಯಂತ್ರಣಗಳ ಅನ್ವಯ, ಜಾಲ ಸಂಗ್ರಾಹಕನ ಜಾಲತಾಣದಿಂದ ಬಂದ ಲೀಡನ್ನು ದಾಖಲಿಸಲು, ಶೋಧಿಸಲು, ಮೌಲ್ಯೀಕರಿಸಲು, ಶ್ರೇಣೀಕರಿಸಲು, ವಿತರಿಸಲು, ಅನುಸರಿಸಲು ಮತ್ತು ಅಂತಿಮಗೊಳಿಸಲು ಬಳಸುವ ತಂತ್ರಾಂಶ.

j. 'ಹೊರಗುತ್ತಿಗೆ' ಎಂದರೆ, ಈ ನಿಯಂತ್ರಗಳ ಅನುಸಾರ, ಪ್ರಾಧಿಕಾರ ನಿಗದಿಪಡಿಸಿದ ಮಿತಿಯವರೆಗೆ ಜಾಲ ಸಂಗ್ರಾಹಕರು ಮಾಡಬಹುದಾದ ಕಾರ್ಯ ಚಟುವಟಿಕೆಗಳು.

k. **'ವ್ಯಕ್ತಿ' ಎಂದರೆ**

1. **ಕಂಪನಿ ಕಾಯಿದೆ, 2013 (2013 ರ 18ನೆ ಯದು)** ಅಡಿಯಲ್ಲಿ ರಚಿಸಿದ ಕಂಪನಿ,

   ಅಥವಾ

   ಸೀಮಿತ ಹೊಣೆಗಾರಿಕೆ ಹೊಣೆಗಾರಿಕೆ ಪಾಲುದಾರಿಕೆ ಕಾಯಿದೆ, 2008 (2009 ರ 6ನೆಯದು) ಅಡಿಯಲ್ಲಿ ರಚಿಸಲಾದ ಸೀಮಿತ ಹೊಣೆಗಾರಿಗೆ ಪಾಲುದಾರಿಕೆ, ಆದರೆ ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999 (1999 ರ 42ನೆ ಯದು) ಫೆಮಾ ಸೆಕ್ಷನ್ 2 ರ ಅಡಿಯಲ್ಲಿ ವಿದೇಶದಲ್ಲಿ ನೋಂದಾಯಿತ ವಿದೇಶಿ ಸೀಮಿತ ಹೊಣೆಗಾರಿಕೆ ಪಾಲುದಾರಿಕೆ ಸಂಸ್ಥೆಯಾಗಿರಬಾರದು

ಮತ್ತು ಯಾವುದೇ ಪಾಲುದಾರ ಅನಿವಾಸಿ ಆಗಿರಬಾರದು ಮತ್ತು ಭಾರತದ ಹೊರಗಿನ ನಿವಾಸಿಯಾಗಿರಬಾರದು,
ಅಥವಾ

2. ಪ್ರಾಧಿಕಾರದಿಂದ ಗುರುತಿಸಲ್ಪಟ್ಟ ವ್ಯಕ್ತಿಯೊಬ್ಬನು ಜಾಲಸಂಗ್ರಾಹಕನಾಗಿರುವವನು.

l. 'ಪ್ರಧಾನ ಅಧಿಕಾರಿ' ಎಂದರೆ
   1. ಕಾರ್ಪೊರೇಟ್ ಸಂಸ್ಥೆಯ ನಿರ್ದೇಶಕ / ಪಾಲದಾರ, ಜಾಲ ಸಂಗ್ರಾಹಕನ ಚಟುವಟಿಕೆಗಳಿಗೆ ಜವಾಬ್ದಾರಿಯಾಗಿರುತ್ತಾನೆ.
   2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಾಲ ಸಂಗ್ರಾಹಕನ ಕಾರ್ಯಗಳನ್ನು ಪ್ರತ್ಯೇಕವಾಗಿ ಕೈಗೊಳ್ಳುವುದು.

m. 'ವಿಜ್ಞಾಪನೆ' ಈ ನಿಯಂತ್ರಣಗಳಿಗನುಗಣವಾಗಿ ವಿಜ್ಞಾಪನೆ ಎಂದರೆ ವಿಮಾ ಕÀಂಪನಿಯವರು ಅಥವಾ ಮಧ್ಯವರ್ತಿ ಸಂಭಾವ್ಯಗ್ರಾಹಕನನ್ನು ಸಂಪರ್ಕಿಸಿ ವಿಮಾ ಪಾಲಿಸಿಯನ್ನು ಕೊಳ್ಳುವಂತೆ ಮನದಟ್ಟು ಮಾಡುವುದು

n. 'ದೂರವಾಣಿ ಮಾರಾಟಗಾರ' ಎಂದರೆ, ಈ ನಿಯಂತ್ರಣಗಳ ಪ್ರಕಾರ, ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ ಘಟಕವಾಗಿದ್ದು, ದೂರಸಂಪರ್ಕ ವಾಣಿಜ್ಯ ಸಂದೇಶಗಳ ಗ್ರಾಹಕರ ಆಧ್ಯತೆಯ ನಿಯಮಗಳು, 2010 (ಕಾಲ ಕಾಲಕ್ಕೆ ನವೀಕೃತಗೊಂಡದ್ದು) ಅಡಿಯಲ್ಲಿ ನೋಂದಾಯಿತವಾಗಿದೆ.

o. 'ಜಾಲ ಸಂಗ್ರಾಹಕ' ಎಂದರೆ, ಈ ನಿಯಂತ್ರಣಗಳ ಅನ್ವಯ, ಪ್ರಾಧಿಕಾರದಿಂದ ಈ ನಿಯಂತ್ರಣಗಳ ಅಡಿಯಲ್ಲಿ ಪರವನಾಗಿ ಪಡೆದ ವ್ಯಕ್ತಿ.

p. 'ಜಾಲ ತಾಣ' ಎಂದರೆ ಒಂದು ಜಾಲ ಕ್ಷೇತ್ರದಿಂದ ಒದಗಿಸುವ ಜಾಲ ಪುಟಗಳ ಗುಂಪು. ಜಾಲತಾಣವು ಒಂದು ವೆಬ್ ಸರ್ವರ್‌ನ ಆತಿಥ್ಯದಲ್ಲಿದ್ದು, ಇಂಟರ್‌ನೆಟ್ ವಿಳಾಸದ ಮೂಲಕ ಪ್ರವೇಶ ಪಡೆಯಬಹುದು, ಜಾಲತಾಣ ವೆಬ್‌ಪೋರ್ಟಲ್, ಮತ್ತು / ಅಥವಾ ಮೊಬೈಲ್ ತಾಣಗಳನ್ನು, ಈ ನಿಯಂತ್ರಗಳನುಸಾರವಾಗಿ, ಒಳಗೊಂಡಿರುತ್ತದೆ.

q. 'ಗುರುತಿಸಲಾದ ಜಾಲತಾಣ' ಎಂದರೆ, ಈ ನಿಯಂತ್ರಣಗಳನ್ವಯ, ಜಾಲಕ್ಷೇತ್ರವನ್ನು ನೋಂದಾಯಿಸಿ, ಮಾಲೀಕತ್ವವನ್ನು ಹೊಂದಿ ಜಾಲಸಂಗ್ರಾಹಕರ ಕಾರ್ಯಕ್ಕಾಗಿ ಏಕೈಕವಾಗಿ ಉಪಯೋಗಕ್ಕಿಡುವುದು.

r. ಈ ನಿಯಂತ್ರಣ ನಿಯಮಗಳಲ್ಲಿ ವ್ಯಾಖ್ಯಾನಿಸದ ಪದಗಳು ಮತ್ತು ಅಭಿವ್ಯಕ್ತಿಗಳು ವಿಮಾ ಕಾಯಿದೆ, 1938 (1938 ರ 4ನೇಯದು) ಯಲ್ಲಿ, ಭಾರತೀಯ ವಿಮಾ ನಿಯಂತ್ರಣ ಮತ್ತು ವಿಕಾಸ ಪ್ರಾಧಿಕಾರ ಕಾಯಿದೆ, 1999 ಅಥವಾ ಬೇರಾವುದೇ ನಿಯಂತ್ರಣಗಳಲ್ಲಿ ವ್ಯಾಖ್ಯಾನಿಸಿದ್ದರೆ ಆಯಾ ಕಾಯಿದೆ ಅಥವಾ ನಿಯಂತ್ರಣಗಳಲ್ಲಿರುವ ಅರ್ಥಗಳನ್ನು ಪಡೆದುಕೊಳ್ಳುತ್ತದೆ.

## 2. ಜಾಲ ಸಂಗ್ರಾಹಕರ ಪರವನಾಗಿ ಅರ್ಹತಾ ಮಾನದಂಡಗಳು

a. ಜಾಲಸಂಗ್ರಾಹಕರ ಪರವಾನಗಿ ನೀಡುವದಕ್ಕೆ / ನವೀಕರಿಸುವದಕ್ಕೆ, ಅರ್ಜಿದಾರನು ಕೆಳಕಂಡದ್ದಕ್ಕೆ ಸೀಮಿತವಾಗದಂತೆ, ಷರತ್ತುಗಳನ್ನು ಪೂರಯಿಸುವದನ್ನು ಖಾತರಿಪಡಿಸಬೇಕು.

   i. ನಿಯಂತ್ರಣ ಸಂಖ್ಯೆ 1(j)ರಲ್ಲಿ ವ್ಯಾಖ್ಯಾನಿಸಿದಂತೆ ಅರ್ಜಿದಾರ ವ್ಯಕ್ತಿಯಾಗಿರಬೆಕು
   ii. ಸಂಘದ ಮನವಿ ಪತ್ರ ಮತ್ತು ಇತರೆ ದಾಖಲೆಗಳಲ್ಲಿ ವಿಮಾ ಉತ್ಪನ್ನಗಳ ಜಾಲ ಸಂಗ್ರಹಣೆ ಮಾತ್ರ ಅರ್ಜಿದಾರನ ಮುಖ್ಯ ವಹಿವಾಟು ಆಗಿರಬೇಕು.
   iii. ಮುಖ್ಯ ವ್ಯವಹಾರವಾದ ವಿಮಾ ಉತ್ಪನ್ನಗಳ ಜಾಲ ಸಂಗ್ರಹಣೆ ಬಿಟ್ಟು, ಅರ್ಜಿದಾರನು ಬೇರಾವುದೇ ವಹಿವಾಟಿನಲ್ಲಿ ತೊಡಗುವಂತಿಲ್ಲ.
   iv. ಪ್ರಾಧಿಕಾರ ರೂಪಿಸಿದ ಸಂಬಂಧಿತ ನಿಯಂತ್ರಣಗಳ ಅನ್ವಯ, ಅರ್ಜಿದಾರನು ಪರವನಾಗಿಯನ್ನು ವಿಮಾ ಏಜಂಟ್, ಕಾರ್ಪೊರೇಟ್ ಏಜಂಟ್, ಮೈಕ್ರೋ ವಿಮಾ ಏಜಂಟ್, ಟಿ.ಪಿ.ಏ, ಸರ್ವೆಯರ್, ಲಾ ಆಸೆಸರ್ ಆಗುವುದಕ್ಕೆ ಅಥವಾ ಬೇರಾವುದೇ ಮಧ್ಯವರ್ತಿ ಆಗುವುದಕ್ಕೆ ಹೊಂದುವಂತಿಲ್ಲ.
   v. ಅರ್ಜಿದಾರನು ವಿಮಾ ಕಂಪನಿ ಜೊತೆ ರೆಫರಲ್ ವ್ಯವಸ್ಥೆ ಹೊಂದಬಾರದು.

vi. ಅರ್ಜಿದಾರ ವಿಮಾ ಕಂಪನಿಗೆ, ವಿಮಾ ಬ್ರೋಕರ್, ಕಾರ್ಪೋರೇಟ್ ಏಜಂಟ್, ಮೈಕ್ರೋ ವಿಮಾ ಏಜಂಟ್, ಟಿಪಿ.ಎ, ಸರ್ವೇಯರ್, ಅಥವಾ ಲಾ ಆಸೆಸರ್ ಮತ್ತಾವುದೇ ವಿಮಾ ಮಧ್ಯವರ್ತಿಯೊಡನೆ ಯಾವುದೇ ಸಮಯದಲ್ಲೂ ಸಂಬಂಧಿತನಾಗಬಾರದು.

b. ಪ್ರಧಾನ ಅಧಿಕಾರಿಗಳು ನಿಯಂತ್ರಕರು ನಿಗದಿಪಡಿಸಿರುವ ಅರ್ಹತೆಗಳನ್ನು ಹೊಂದಿರಬೇಕು

c. ಜಾಲಸಂಗ್ರಾಹಕನ ಪ್ರಧಾನ ಅಧಿಕಾರಿಯು ಪ್ರಾರಂಭದಲ್ಲಿ 50 ಗಂಟೆಗಳ ತರಬೇತಿ ಪಡೆದಿರಬೇಕು ಮತ್ತು ಪ್ರತಿ 3 ವರ್ಷಕ್ಕೊಮ್ಮೆ 25 ಗಂಟೆಗಳ ನವೀಕರಣ ತರಬೇತಿ ಹೊಂದಿರಬೇಕು.

d. ಪ್ರಧಾನ ಅಧಿಕಾರಿ / ನಿರ್ದೇಶಕರು/ಪ್ರವರ್ತಕರು / ಷೇರುದಾರರು / ಪಾಲುದಾರರು / ಮುಖ್ಯವ್ಯವಸ್ಥಾಪಕ ಸಿಬ್ಬಂದಿಯವರು ಫಿಟ್ ಅಂಡ್ ಪ್ರಾಪರ್ (ಪ್ರಾಮಾಣಿಕತೆ ಮತ್ತು ಸಮಗ್ರತೆ) ಮಾನದಂಡದ ಷರತ್ತನ್ನು ಕಾಲಕಾಲಕ್ಕೆ ಪ್ರಾಧಿಕರ ಸೂಚಿಸಿದಂತೆ ಪೂರಯಿಸಬೇಕು.

e. ಅಧಿಕೃತ ಪರಿಶೀಲಕನು ಪ್ರಾಧಿಕಾರ ನಿರ್ದಿಷ್ಟಪಡಿಸಿದಂತೆ ನಿಗದಿತ ತರಬೇತಿ ಪಡೆದು ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು.

f. ನಿಯಂತ್ರಕರು ನಿರ್ದಿಷ್ಟಪಡಿಸಿದಂತೆ, ಜಾಲ ಸಂಗ್ರಾಹಕ, ಬಾಧ್ಯತೆಗಳನ್ನು ಮತ್ತು ನೀತಿ ಸಂಹಿತೆಯನ್ನೂ ಉಲ್ಲಂಘಿಸರಬಾರದು.

g. ಪ್ರಾಧಿಕಾರದ ಅಭಿಪ್ರಾಯದಲ್ಲಿ ಪರವಾನಗಿ ನೀಡುವುದು ಪಾಲಿಸಿದಾರರ ಹಿತಾಸಕ್ತಿಗೆ ಅನುಗುಣವಾಗತ್ತದೆ.

**೩. ಪರವಾನಗಿಗಾಗಿ ಅರ್ಜಿ ಸಲ್ಲಿಸುವುದು.**

a. ಸಂಗ್ರಾಹಕನಾಗಲು ಪರವಾನಗಿಗಾಗಿ, ಅರ್ಜಿದಾರನು, ಈ ನಿಯಂತ್ರಗಳ ಷೆಡ್ಯೂಲ್, ರ ಫಾರ್ಮ್ ಎ(ಜಾಲ ಸಂಗ್ರಹಕನಾಗಲು ಪ್ರಮಾಣ ಪತ್ರ ನೊಂದಾವಣಿಗಾಗಿ ಅರ್ಜಿ) ನಲ್ಲಿ ಅರ್ಜಿ ಸಲ್ಲಿಸಬೇಕು.

b. ಅರ್ಜಿ ಜೊತೆಯಲ್ಲಿ ಹಿಂತಿರುಗಿಸಲಾಗದ 10 ಸಾವಿರ ರೂಪಾಯಿ ಮತ್ತು ಅನ್ವಯಿಸುವ ತೆರಿಗೆಗಳೊಡನೆ ಶುಲ್ಕವನ್ನು 'ಭಾರತೀಯ ನಿಯಂತ್ರಣ ಮತ್ತು ವಿಕಾಸ ಪ್ರಾಧಿಕಾರ' ದ ಹೆಸರಲ್ಲಿ ಡಿಮಾಂಡ್ ಡ್ರಾಫ್ಟ್ ಲಗತ್ತಿಸಬೇಕು ಅಥವಾ ಭಾರತೀಯ ನಿಯಂತ್ರಣ ಮತ್ತು ವಿಕಾಸ ಪ್ರಾಧಿಕಾರಕ್ಕೆ ವಿದ್ಯುನ್ಮಾನ ನಿಧಿ ವರ್ಗಾವಣೆ ಮೂಲಕ ಶುಲ್ಕ ಭರಿಸಬೇಕು..

**ಯಾವುದೇ ಅರ್ಜಿಯನ್ನು ಶುಲ್ಕವಿಲ್ಲದೇ ಪರಿಶೀಲಿಸಲಾಗುವುದಿಲ್ಲ**

ಅರ್ಜಿದಾರರು ಹೊರಗುತ್ತಿಗೆಗಾಗಿ ಅನುಮತಿ ಬೇಡುವವರು ಮತ್ತು ದೂರವಾಣಿ ಮಾರಾಟಗಾರ ಸೇವೆ ಬಯಸುವವರು, ನಿರ್ದಿಷ್ಟವಾಗಿ ಅರ್ಜಿಯಲ್ಲಿ ನಮೂದಿಸಿರಬೇಕು.

**ವಿಮಾ ಜಾಲ ಸಂಗ್ರಾಹನಾಗಲು ನೊಂದಾವಣೆ ಪ್ರಮಾಣ ಪತ್ರಕ್ಕೆ ಅರ್ಜಿಯೊಡನೆ ಸಲ್ಲಿಸಬೇಕಾದ ದಾಖಲೆಗಳನ್ನು, ಈ ನಿಯಂತ್ರಣಗಳ ಷೆಡ್ಯೂಲ್ 1 ರ ಫಾರ್ಮ್ ಬಿ (ಫಾರ್ಮ್ ಎ ನೊಂದಿಗೆ ಲಗತ್ತಿಸಬೇಕಾದ ಫಾರ್ಮಗಳು) ಯಲ್ಲಿ ನಮೂದಿಸಲಾಗಿದೆ.**

c. **ವಿಮಾ ಜಾಲಸಂಗ್ರಾಹಕನಾಗಲು ನೊಂದಾವಣೆ ಪ್ರಮಾಣಪತ್ರ ಇಚ್ಛಿಸುವನು, ನಿಯಂತ್ರಣ ಸಂಖ್ಯೆ 7ರಲ್ಲಿ ನಮೂದಿಸಿರುವಂತೆ ಪರಿಗಣನೆಗೆ, ಎಲ್ಲಾ ಅವಶ್ಯಕತೆಗಳನ್ನೂ ಮತ್ತು ಷರತ್ತುಗಳನ್ನು ಪೂರಯಿಸಬೇಕು.**

d. ಜಾಲ ಸಂಗ್ರಹಕನಾಗಲು ಪರವಾನಗಿ ಬಯಸಿ ಬಂದ ಅರ್ಜಿಗಳನ್ನು ಪ್ರಾಧಿಕಾರವು ಈ ನಿಯಂತ್ರಣಗಳ ಅಡಿಯಲ್ಲಿರುವ ಅನ್ವಯವಾಗುವ ನಿಂಬಂಧನೆಗಳ ಪ್ರಕಾರ ವ್ಯವಹರಿಸಲಾಗುತ್ತದೆ.

e. ಅರ್ಜಿದಾರ ಈ ನಿಯಂತ್ರಣಗಳಲ್ಲಿ ನಮೂದಿಸಿರುವ ಅರ್ಹತೆಯ ಮಾನದಂಡಗಳನ್ನು ಮತ್ತು ಅವಶ್ಯಕತೆಗಳನ್ನೂ ಪೂರಯಿಸಿದ ಮೇಲೆ, ಪ್ರಾಧಿಕಾರವು ಜಾಲ ಸಂಗ್ರಾಹಕನಾಗಲು ಪರವನಾಗಿಯನ್ನು ನೀಡಲಾಗುವುದು.

f. ಪರವಾನಗಿ ಒಮ್ಮೆ ನೀಡಿದ ಮೇಲೆ, ಆ ದಿನಾಂಕದಿಂದ ಮೂರು ವರ್ಷಗಳವರೆಗೆ ಈ ನಿಯಂತ್ರಣಗಳ ಪ್ರಕಾರ ಅಮಾನತು ಅಥವಾ ರದ್ದತಿ ಮಾಡದಿದ್ದರೆ, ಮಾನ್ಯವಾಗಿರುತ್ತದೆ.

g. ಅರ್ಜಿಯು, ಎಲ್ಲಾ ವಿಷಯದಲ್ಲೂ ಅಸಂಪೂರ್ಣವಾಗಿದ್ದರೆ, ತಿರಸ್ಕರಿಸಲಾಗುತ್ತದೆ.

**4. ಪರವಾನಗಿಯ ನವೀಕರಣಕ್ಕಾಗಿ ಅರ್ಜಿ**

a. ವಹಿವಾಟಿನಲ್ಲಿ ಮುಂದುವರೆಯಲು ಆಸಕ್ತಿಯಿರುವ ಜಾಲಸಂಗ್ರಾಹಕರು, ಹಿಂದಿನ ಪರವಾನಗಿ ಕೊನೆಗೊಳ್ಳುವ 30 ದಿನಗಳ ಒಳಗೆ, ನವೀಕರಣಕ್ಕಾಗಿ ಅರ್ಜಿ ಸಲ್ಲಿಸಬೇಕು ನವೀಕರಣದ

ಅರ್ಜಿಯೊಡನೆ 10,000 ರೂ ಶುಲ್ಕವಿರಬೇಕು, ಹೊರಗುತ್ತಿಗೆಗೆ ಅನುಮತಿ ಬೇಡುವ ಮತ್ತು ದೂರವಾಣಿ ಮಾರಾಟಗಾರರ ಸೇವೆ ಪಡೆಯಲಿಚ್ಛಿಸುವ ಅರ್ಜಿದಾರರು ಅರ್ಜಿಯಲ್ಲಿ ನಿರ್ದಿಷ್ಟವಾಗಿ ನಮೂದಿಸಿರಬೇಕು.

b. ಪರವಾಗಿಯ ಅವಧಿ ಮುಕ್ತಾಯವಾದ ಮೇಲೆ, ಯಾವ ಜಾಲ ಸಂಗ್ರಾಹಕನಿಗೂ ಅವನ ಕಾರ್ಯಗಳನ್ನು ಮುಂದುವರಿಸಲು ಅನುಮತಿಸಲಾಗುವುದಿಲ್ಲ.
ಸೂಚನೆ: ಜಾಲಸಂಗ್ರಾಹಕನು ನವೀಕರಣದ ಅರ್ಜಿಯನ್ನು ಪರವಾನಗಿ ಮುಕ್ತಾಯವಾಗುವ 90 ದಿನಗಳ ಒಳಗೆ ಸಲ್ಲಿಸಬಹುದು.

c. ನವೀಕರಣಕ್ಕಾಗಿ ಸಲ್ಲಿಸಿದ ಜಾಲ ಸಂಗ್ರಾಹಕನ ಅರ್ಜಿಯನ್ನು, ಪ್ರಾಧಿಕಾರ ಈ ನಿಯಂತ್ರಣಗಳ ಅಡಿಯಲ್ಲಿ ಬರುವ ನಿಬಂಧನೆಗಳ ಅನ್ವಯ ಪರಿಗಣಿಸಲಾಗುತ್ತದೆ.

d. ಜಾಲ ಸಂಗ್ರಾಹಕನು, ಪರವಾನಗಿ ನವೀಕರಣ ಬಯಸುವ ಮುನ್ನ, ಅವನ ಪ್ರಧಾನ ಅಧಿಕಾರಿ ಕನಿಷ್ಠ 25 ಗಂಟೆಗಳ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ತರಬೇತಿ, ಕಾಲ ಕಾಲಕ್ಕೆ ಪ್ರಾಧಿಕಾರದಿಂದ ಗುರುತಿಸಲಾದ ಸಂಸ್ಥೆಯಿಂದ ಪಡೆದಿರಬೇಕು

e. ಪ್ರಾಧಿಕಾರವು, ಅರ್ಜಿದಾರನು ಪರವಾನಗಿ ನವೀಕರಣಕ್ಕಾಗಿ ಷರತ್ತುಗಳೆಲ್ಲಾ ಪೂರಯಿಸಿದ್ದಾನೆಂದು ತೃಪ್ತಿಯಾಗಿದ್ದರೆ, ಪರವಾನಗಿಯನ್ನು ಮೂರು ವರ್ಷಗಳ ಅವಧಿಯವರೆಗೆ ನವೀಕರಿಸಿ, ಅರ್ಜಿದಾರನಿಗೆ ಸೂಚನೆ ನೀಡುತ್ತದೆ.

f. ಎಲ್ಲಿ ಜಾಲಸಂಗ್ರಾಹಕನು, ಹಿಂದಿನ ಪರವಾನಗಿ ಅವಧಿಯಲ್ಲಿ ಪೂರ್ಣವಾಗಿ ಅಥವಾ ಭಾಗಶಃ ವಹಿವಾಟು ನಡೆಸುತ್ತಿಲ್ಲವೆಂದು ತಿಳಿದುಬಂದರೆ, ಪ್ರಾಧಿಕಾರ ನವೀಕರಣವನ್ನು ನಿರಾಕರಿಸಬಹುದು.

## 5. ಜಾಲ ಸಂಗ್ರಾಹಕನ ಉದ್ಯೋಗಿಗಳು:

a. ವಿಮಾ ವಿಜ್ಞಾಪನೆ ಮತ್ತು ಪರಿಶೀಲನೆಯಲ್ಲಿ ತೊಡಗಿರುವ ಜಾಲ ಸಂಗ್ರಾಹಕನ ಉದ್ಯೋಗಿಗಳು ಪ್ರಾಧಿಕಾರದಿಂದ ಕಾಲ ಕಾಲಕ್ಕೆ ಗುರುತಿಸಲ್ಪಟ್ಟ ಸಂಸ್ಥೆಯಿಂದ 50 ಗಂಟೆಗಳ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ತರಬೇತಿಯನ್ನು ಪೂರ್ಣಗೊಳಿಸಿ, ತರಬೇತಿಯ ಅಂತ್ಯದಲ್ಲಿ ನ್ಯಾಷನಲ್ ಇನ್ಸೂರೆನ್ಸ್ ಅಕಾಡೆಮಿ, ಪುಣೆ, ಅಥವಾ ಪ್ರಾಧಿಕಾರದಿಂದ ಗುರುತಿಸಲ್ಪಟ್ಟ ಬೇರಾವುದೇ ಪರೀಕ್ಷಾ ಸಂಸ್ಥೆ ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

b. ಜಾಲಸಂಗ್ರಾಹಕ ವಿಮಾ ಉತ್ಪನ್ನಗಳನ್ನು ವಿಜ್ಞಾಪನೆ ಮಾಡಲು ನಿಯೋಜಿಸಿದ ಟೆಲಿಕಾಲರ್‌ಗಳು, ಜಾಲ ಸಂಗ್ರಾಹಕನ ಉದ್ಯೋಗಿಗಳು ಪಟ್ಟಿಯಲ್ಲಿರಬೇಕು ಮತ್ತು ಪ್ರಾಧಿಕಾರದಿಂದ ನಿಗದಿಪಡಿಸಲಾದ ತರಬೇತಿಯ್ನು ಪಡೆದಿರಬೇಕು.

c. ಜಾಲ ಸಂಗ್ರಾಹಕರು, ತಮ್ಮೆಲ್ಲಾ ಉದ್ಯೋಗಿಗಳು ತಪ್ಪು, ಒಪ್ಪುಗಳಿಗೆ ಜವಾಬ್ದಾರಿಯಾಗಿರುತ್ತಾರೆ.

## 6. ವಾರ್ಷಿಕ ಶುಲ್ಕ:

a. ಪ್ರತಿಯೊಬ್ಬ ಜಾಲ ಸಂಗ್ರಾಹಕನು ರೂ. 5000 ವಾರ್ಷಿಕ ಶುಲ್ಕ ಪಾವತಿಸಬೇಕು.

b. ಜಾಲ ಸಂಗ್ರಾಹಕನ ವಾರ್ಷಿಕ ಲೆಕ್ಕ ಪತ್ರ ಆಡಿಟ್ ಅಂತಿಮವಾದ 15 ದಿನಗಳಲ್ಲಿ ಅಥವಾ 30ನೇ ಸೆಪ್ಟೆಂಬರ್, ಯಾವುದೋ ಮೊದಲು, ಅದರ ಪ್ರಕಾರ, ವಾರ್ಷಿಕ ಶುಲ್ಕ ಪಾವತಿಸಬೇಕು.

c. ಅಕೌಂಟ್ ಪೇಯಿ ಡ್ರಾಫ್ಟ್ 'ಭಾರತೀಯ ವಿಮಾ ನಿಯಂತ್ರಣ ಮತ್ತು ವಿಕಾಸ ಅಧಿಕಾರ' ಹೈದರಾಬಾದ್‌ನಲ್ಲಿ ಪಾವತಿಯಾಗುವಂತೆ ಪಾವತಿಸಬೇಕು.

## 7. ಬಂಡವಾಳ ಮತ್ತು ನಿವ್ವಳ ಮೌಲ್ಯದ ಅವಶ್ಯಕತೆಗಳು.

### a. ಬಂಡವಾಳದ ಅವಶ್ಯಕತೆಗಳು

i. ಈ ನಿಯಂತ್ರಣಗಳ ಅಡಿಯಲ್ಲಿ ಜಾಲ ಸಂಗ್ರಾಹಕನಾಗ ಬಯಸುವ ಅರ್ಜಿದಾರನು ಇಪ್ಪತ್ತೈದು ಲಕ್ಷ ರೂಪಾಯಿಗಳ ಬಂಡವಾಳ ಹೊಂದಿರಬೇಕು.

ii. ಜಾಲ ಸಂಗ್ರಾಹಕನು ಕಂಪನಿ ಕಾಯ್ದೆ 2013ರ ಅಡಿಯಲ್ಲಿ ನೊಂದಾಯಿತವಾದ ಕಂಪನಿಯಾದರೆ ಬಂಡವಾಳವನ್ನು ಷೇರು ರೂಪದಲ್ಲಿ ಬಿಡುಗಡೆ ಮಾಡಿ ಚಂದಾದಾರರು ಕೊಂಡಿರಬೇಕು.

iii. ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯಲ್ಲಿ, ಪಾಲುದಾರರ ಕೊಡುಗೆ ನಗದು ರೂಪದಲ್ಲಿರಬೇಕು.

iv. ಭಾರತೀಯ ಮಾಲಿಕತ್ವ ಹೊಂದಿರುವ ಮತ್ತು ಸ್ವಾಮ್ಯದಲ್ಲಿರುವ ಜಾಲ ಸಂಗ್ರಾಹಕನು ಎಲ್ಲಾ ನಿಯಮಗಳು, ನಿಯಂತ್ರಗಳು, ಸುತ್ತೋಲೆಗಳು, ಮಾರ್ಗಸೂಚಿ ಇತ್ಯಾದಿಗಳನ್ನು ಪಾಲಿಸಬೇಕು.

v. ಬಂಡವಾಳ ರೂಪದಲ್ಲಿರುವ ಜಾಲ ಸಂಗ್ರಾಹಕನ ಷೇರುಗಳನ್ನು ಯಾವುದೇ ರೂಪದಲ್ಲಿ ಯಾವುದೇ ರೀತಿಯಲ್ಲಿ ಸಾಲ ಪಡೆಯುವುದಕ್ಕಾಗಿ ಒತ್ತೆಯಾಗಿಡಬಾರದು ಮತ್ತು ಋಣರಹಿತವಾಗಿರಬೇಕು.

b. **ವಿದೇಶಿ ಹೂಡಿಕೆದಾರರು ಹೊಂದಿರುವ ಬಂಡವಾಳವನ್ನು ಲೆಕ್ಕ ಹಾಕುವ ರೀತಿ:**
ಈಕ್ವಿಟಿ ಷೇರುಗಳ ಒಟ್ಟು ಹಿಡುವಳಿಗಳು ಅಥವಾ ವಿಮಾ ಜಾಲಸಂಗ್ರಾಹಕರಿಗಾಗಿ ವಿದೇಶಿ ಹೂಡಿದಾರರ ಕೊಡುಗೆ, ಬಂಡವಾಳ ಹೂಡಿಕೆದಾರರನ್ನೂ ಒಳಗೊಂಡಂತೆ, ಎಂತಹ ಸಮಯದಲ್ಲೂ ವಿಮಾಜಾಲ ಸಂಗ್ರಾಹಕನು ಪಾವತಿಸಿದ ಬಂಡವಾಳ್ ಶೇಖಡಾ 49 ಮೀರಬಾರದು ಮತ್ತು ಕೇಂದ್ರ ಸರಕಾರ ವಿದೇಶಿ ಹೂಡಿಕೆಗೆ ವಿಧಿಸಿದ ಮಿತಿಯನ್ನು ಮೀರಬಾರದು.

6

c. **ನಿವ್ವಳ ಮೌಲ್ಯದ ಅವಶ್ಯಕತೆಗಳು:**

i. ಒಬ್ಬ ಜಾಲ ಸಂಗ್ರಾಹಕನ ನಿವ್ವಳ ಮೌಲ್ಯ ನೊಂದಾವಣಿ ಪ್ರಮಾಣ ಪತ್ರದ ಅವಧಿಯಲ್ಲಿ ಕನಿಷ್ಠ ಬಂಡಾವಾಳದ ಅವಶ್ಯಕತೆಯ ಶೇಖಡ 100ಕ್ಕಿಂತ ಕೆಳಗೆ ಇಳಿಯಬಾರದು ಅಥವಾ ಉಪ ನಿಯಂತ್ರಣ ಸಂಖ್ಯೆ (ಚಿ) ()ದಲ್ಲಿ ನಿಗದಿಪಡಿಸಿದ ಕೊಡುಗೆ.

*(ವಿವರಣೆ: ಈ ನಿಯಂತ್ರಣಗಳ ಅನ್ವಯ 'ನಿವ್ವಳ ಮೌಲ್ಯ'ದ ಅರ್ಥ ಕಾಲಕಾಲಕ್ಕೆ ನವೀಕೃತಗೊಂಡ ಕಂಪನಿ ಕಾಯಿದೆ 2013)*

ii. ಪ್ರತಿಯೊಬ್ಬ ಜಾಲ ಸಂಗ್ರಾಹಕನು, ಉಪ ನಿಯಂತ್ರಣ ()ನಿರ್ದಿಷ್ಟಪಡಿಸಿದ ಹಾಗೆ, 30ನೇ ಸೆಪ್ಟೆಂಬರ್ ಕೊನೆಗೊಳ್ಳುವ ಅರ್ಧ ವಾರ್ಷಿಕಕ್ಕೆ ಮತ್ತು 31ನೇ ಮಾರ್ಚ್‌ಗೆ ಕೊನೆಗಳ್ಳುವ ವರ್ಷಕ್ಕೆ ನಿವ್ವಳ ಮೌಲ್ಯದ ಪರಾಮರ್ಷೆ ಮಾಡಿ, ಅನನುಪಾಲನೆಯಾದಲ್ಲಿ, 15 ದಿವಸದ ಒಳಗಾಗಿ ಪ್ರಾಧಿಕಾರಕ್ಕೆ ವರದಿ ನೀಡಿ ನಂತರ 30 ದಿನಗಳ ಒಳಗಾಗಿ, ಪೂರ್ವ ಸ್ಥಿತಿಗೆ ತಂದು, ಪ್ರಾಧಿಕಾರಕ್ಕೆ ಅನುಪಾಲನೆಯಾದದ್ದಕ್ಕೂ ಖಚಿತಪಡಿಸಬೇಕು.

iii. ಜಾಲ ಸಂಗ್ರಾಹಕನು ತನ್ನ ನಿವ್ವಳ ಮೌಲ್ಯವನ್ನು 30 ದಿನಗಳ ಒಳಗಾಗಿ ಸುಸ್ಥಿತಿಯಲ್ಲಿ ಇಡಲಾಗದಿದ್ದರೆ, ತತ್‌ಕ್ಷಣ ವಿಮಾ ಸಂಬಂಧಿತ ಬಿಸಿನೆಸ್ ಚಟುವಟಿಕೆಯನ್ನು ನಿಲ್ಲಿಸಬಿಡಬೇಕು.

iv. ಜಾಲ ಸಂಗ್ರಾಹಕನು, ಪ್ರತಿವರ್ಷ ಲೆಕ್ಕ ಪತ್ರದ ಪುಸ್ತಕಗಳನ್ನು ಅಂತಿಮಗೊಳಿಸಿದ ಮೇಲೆ, ಚಾಟರ್ಡ್ ಅಕೌಂಟೆಂಟ್‌ನಿಂದ ಪ್ರಮಾಣೀಕರಿಸಿದ ನಿವ್ವಳ ಮೌಲ್ಯದ ಪ್ರಮಾಣ ಪತ್ರವನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕು.

d. **ಷೇರುಗಳ ವರ್ಗಾವಣೆ**

i. ಲಾಭಕಾರಿ ಸ್ವಾಮ್ಯ ಮತ್ತು ಷೇರುಗಳ ನಿಯಂತ್ರಣ ಅಥವಾ ಕೊಡುಗೆ ಸಮಗ್ರವಾಗಿ ಮತ್ತು ಸಂಪೂರ್ಣವಾಗಿ ಪ್ರಾಧಿಕಾರ ಅನುಮೋದಿಸಿದ ಘಟಕ / ವ್ಯಕ್ತಿಯೊಂದಿಗಿರಬೇಕು

ii. ಜಾಲ ಸಂಗ್ರಾಹಕನ ಷೇರುಗಳ ವರ್ಗಾವಣೆಯ ಪ್ರಕ್ರಿಯೆ ಈ ನಿಯಂತ್ರಣಗಳ ಷೆಡ್ಯೂಲ್ ಫಿಟಟ ನಲ್ಲಿ ನಮೂದಿಸಿದ ಫಾರ್ಮ ಂಃ (ಷೇರುಗಳ ವರ್ಗಾವಣೆ)ಯನ್ನು ಅನ್ವಯಿಸುತ್ತದೆ.

೮. **ಐಆರ್‌ಡಿಎ ದಿಂದ ಪ್ರಮಾಣ ಪತ್ರ ನೀಡುವಿಕೆ**

i. ಎಲ್ಲಾ ಷರತ್ತುಗಳನ್ನು ಪೂರಯಿಸಿದ ಮೇಲೆ ಅರ್ಜಿಯನ್ನು ಸಲ್ಲಿಸಿದರೆ ಮತ್ತು ಎಲ್ಲಾ ಅವಶ್ಯ ದಾಖಲೆಗಳನ್ನು ಸಲ್ಲಿಸಿದರೆ, ಐಆರ್‌ಡಿಎ ಅರ್ಜಿಯನ್ನು ಸ್ವೀಕರಿಸಿ ಅರ್ಜಿದಾರನಿಗೆ ನೊಂದಾವಣೆ ಪ್ರಮಾಣಪತ್ರ ನೀಡುತ್ತದೆ.

ii. ನೊಂದಾವಣೆ ಪ್ರಮಾಣಪತ್ರ ವಿತರಣಾ ದಿನಾಂಕದಿಂದ ಮೂರು ವರ್ಷ ಮಾನ್ಯವಾಗಿರುತ್ತದೆ, ಎ.ಆರ್.ಡಿ.ಎ ಅಮಾನತು ಮಾಡದಿದ್ದಲ್ಲಿ.

iii. ಅಸಂಪೂರ್ಣ ಅರ್ಜಿ ನಿರಾಕರಣೆಗೆ ಒಳಗಾಗುತ್ತದೆ. ಆದರೂ, ನಿರಾಕರಿಸುವ ಮುನ್ನ, 30 ದಿನಗಳ ವಾಯಿದೆಯೊಳಗೆ ಸಂಪೂರ್ಣಗೊಳಿಸಲು ಅವಕಾಶ ನೀಡಲಾಗುತ್ತದೆ, 30 ದಿನಗಳ ಒಳಗೆ ಯಾವುದೇ ಸೂಚನೆ ಬರದಿದ್ದರೆ, ಅರ್ಜಿ ನಿರಾಕರಿಸಲಾಗುತ್ತದೆ.

9. **ಬೋರ್ಡ್‌ನ ನೀತಿಗಳು:**
ಪ್ರತಿಯೊಬ್ಬ ಜಾಲ ಸಂಗ್ರಾಹಕನು, ಬೋರ್ಡ್‌ನಿಂದ ಅನುಮೋದಿತವಾದ 'ವಿಮಾ ಉತ್ಪನ್ನಗಳ ವಿಜ್ಞಾಪನಾ ಮಾದರಿ ನೀತಿಯನ್ನು ಹೊಂದಿರಬೇಕು ಮತ್ತು ಮೂರು ವರ್ಷಗಳಿಗೊಮ್ಮೆ ಪರಾಮರ್ಶಿಸುತ್ತಿರಬೇಕು.

10. **ಪ್ರೊಫೆಷನಲ್ ಇಂಡೆಮ್ನಿಟಿ ವಿಮೆ:**
ಪ್ರತಿಯೊಬ್ಬ ಜಾಲ ಸಂಗ್ರಾಹಕನೂ ಸದಾ ಪ್ರೊಫೆಷನಲ್ ಇಂಡೆಮ್ನಿಟಿ ವಿಮೆಯನ್ನು ಖರೀದಿಸಿ ಪ್ರಾಧಿಕಾರ ನೀಡಿದ ಪರವಾನಗಿಯ ಪೂರ್ಣಾವಧಿಯವರೆಗೆ ಚಾಲ್ತಿಯಲ್ಲಿಡಬೇಕು. ಪ್ರೊಫೆಷನಲ್ ಇಂಡೆಮ್ನಿಟಿ ವಿಮೆಯನ್ನು ಪ್ರಾಧಿಕಾರದಿಂದ ಪರವಾನಗಿ ಪಡೆದ ವಿಮಾ ಕಂಪನಿಯಿಂದ ಪಡೆದಿರಬೇಕು.

ಹೊಸದಾಗಿ ಪರವಾನಗಿ ಪಡೆದ ವೆಬ್ ಅಗ್ರಿಗೇಟರ್ ರಿಗೆ ಮೂಲ ಪರವಾನಗಿಯನ್ನು ನೀಡಿದ ದಿನಾಂಕದಿಂದ ಆರು ತಿಂಗಳೊಳಗೆ ಅಂತಹ ಖಾತರಿಯನ್ನು ನೀಡಲು ಪ್ರಾಧಿಕಾರವು ಸೂಕ್ತ ಸಂದರ್ಭಗಳಲ್ಲಿ ಅವಕಾಶ ನೀಡುತ್ತದ್ದರೆ

11. **ಜಾಲ ಸಂಗ್ರಾಹಕನ ಹೆಸರಲ್ಲಿ ಬದಲಾವಣೆ:**
ವಿಮಾ ಜಾಲಸಂಗ್ರಾಹಕ ಹೆಸರು ಬದಲಿಸುವ ಮೊದಲು ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರಬೇಕು.

12. **ಉತ್ಪನ್ನಗಳ ವಿತರಣೆಗೆ ವಿಮಾ ಕಂಪನಿಗಳೊಂದಿಗೆ ವ್ಯವಸ್ಥೆ**
ಪಾಲಿಸಿದಾರರ ಹಿತಾಸಕ್ತಿಗೆ ವಿರುದ್ಧವಾಗಿ ಜಾಲ ಸಂಗ್ರಾಹಕರು ವಿಮಾ ಕಂಪನಿಗಳ ಜೊತೆ ವ್ಯವಸ್ಥೆ ಮಾಡಿಕೊಂಡಿರಬಾರದು.

13. **ಹಿತಾಸಕ್ತಿಯ ಸಂಘರ್ಷ:**
ವಿಮಾ ವ್ಯವಹಾರದಲ್ಲಿ ವಿಜ್ಞಾಪನೆ ಮತ್ತು ಸಂಪಾದನೆ ಮಾಡುವಾಗ, ಜಾಲ ಸಂಗ್ರಾಹಕನು, ಈ ಕೆಳಗಿನವುದನ್ನು ಪಾಲಿಸಬೇಕು.

(a) ಜಾಲ ಸಂಗ್ರಾಹಕನು ಒಂದಕ್ಕಿಂತ ಹೆಚ್ಚಿನ ವಿಮಾ ಕಂಪನಿಗಳೊಂದಿಗೆ ನಿರ್ದಿಷ್ಟ ವಿಮಾ ವರ್ಗದ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಬದ್ಧನಾಗಿದ್ದಾಗ, ಸಂಭಾವ್ಯ ಗ್ರಾಹಕನಿಗೆ ಯಾವ ಕಂಪನಿಗಳ ವಿಮಾ ಉತ್ಪನ್ನಗಳನ್ನು ವಿತರಣೆ ಮಾಡುವ ಏರ್ಪಾಡು ಆಗಿದೆಯೊ, ಆ ವಿಮಾ ಕಂಪನಿಗಳ ಪಟ್ಟಿಯನ್ನು ಭಾವೀ ಗ್ರಾಹಕರ ಮುಂದೆ ಪ್ರದರ್ಶಿಸಬೇಕು ಮತ್ತು ವಿಮಾ ರಕ್ಷಣೆಯ ವ್ಯಾಪ್ತಿ, ಪಾಲಿಸಿಯ ನಿಯಮಗಳು, ಪಾವತಿಸಬೇಕಾದ ಪ್ರೀಮಿಯಂ, ಪ್ರೀಮಿಯಂ ನಿಯಮಗಳು ಮತ್ತು ಗ್ರಾಹಕ ಉತ್ಪನ್ನಗಳ ಮೇಲೆ ಬಯಸುವ ಇನ್ಯಾವುದೇ ವಿವರಗಳನ್ನು ಒದಗಿಸಬೇಕು.

(b) ಸಂಭಾವ್ಯ ಗ್ರಾಹಕನ ಅಗತ್ಯತೆಗಳ ವಿಶ್ಲೇಷಣೆಯ ಆಧಾರದ ಮೇಲೆ ಉತ್ಪನ್ನಗಳನ್ನು ಮಾರಾಟ ಮಾಡಬೇಕು.

(c) ಯಾವ ಜಾಲ ಸಂಗ್ರಾಹಕನು ತನ್ನ ಜಾಲ ತಾಣಗಳ ಮೂಲಕ ಅಥವಾ ದೂರ ಮಾರಾಟ ವಿಧಾನದಲ್ಲಿ ನಿರ್ದಿಷ್ಟ ವಿಮಾ ಕಂಪನಿಯ, ನಿರ್ದಿಷ್ಟ ಉತ್ಪನ್ನಗಳನ್ನು ಪ್ರೋತ್ಸಾಹಿಸಬಾರದು.

14. **ಅಧಿಕೃತ ಪರಿಶೀಲಕನ ಪಾತ್ರ ಮತ್ತು ಜವಾಬ್ದಾರಿಗಳು**

a. ವಿಮಾ ಸಂಗ್ರಾಹಕನು ತನ್ನ ಅಧಿಕೃತ ಪರೀಶಿಲಕನ ತಪ್ಪು ಒಪ್ಪುಗಳಿಗೆ ಜವಾಬ್ದಾರಿಯಾಗಿರುತ್ತಾನೆ.

b. ಅಧಿಕೃತ ಪರಿಶೀಲಕನು;

**i.** ವಿಮಾ ಜಾಲ ಸಂಗ್ರಾಹಕರ ಅಥವಾ ದೂರ ಮಾರಾಟಗಾರರ ಉದ್ಯೋಗಿಗಳ ಪಟ್ಟಿಯಲ್ಲಿರಬೇಕು.

**ii.** ವಿಮಾ ವ್ಯವಹಾರವನ್ನು ದೂರವಾಣಿ ಮಾರಾಟದ ಮೂಲಕ ಮಾತ್ರ ವಿಜ್ಞಾಪನೆ ಮಾಡಬೇಕು.

**iii.** ತಾವು ಕೊಳ್ಳಬೇಕೆಂದಿರುವ ಉತ್ಪನ್ನಗಳ ಬಗ್ಗೆ ಸಹಾಯ ಅಥವಾ ಸ್ಪಷ್ಟಿಕರಣ ಬಯಸಿ ಸಂಭಾವ್ಯ ಗ್ರಾಹಕರು ಪಾಲಿಸಿದಾರರಿಂದ ಬರುವ ಒಳ ಕರೆಗಳನ್ನು ಸ್ವೀಕರಿಸಬೇಕು.

**iv.** ಸಂಭಾವ್ಯ ಗ್ರಾಹಕರ ಅವಶ್ಯಕತೆಗಳ ವಿಶ್ಲೇಷಣೆಯ ಆಧಾರದ ಮೇಲೆ ವಿಮಾ ಉತ್ಪನ್ನವನ್ನು ಮಾರಾಟ ಮಾಡಬೇಕು.

**v.** ಬೇರೆ ವಿಮಾ ಕಂಪನಿಗಳ ಉತ್ಪನ್ನಗಳ ಮುಖ್ಯ ಲಕ್ಷಣಗಳನ್ನು ವಿವರಿಸಿ ಗ್ರಾಹಕರು ಆಯ್ಕೆ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡಬೇಕು.

**vi.** ವಿಮಾ ಉತ್ಪನ್ನಗಳ ಮನವಿಗಾಗಿ ಯಾವುದೇ ಹೊರಹೋಗುವ ಬೇಡದ ದೂರವಾಣಿ ಕರೆಗಳನ್ನು ಮಾಡಬೇಡಿ

**vii.** ವಿಮಾ ಉತ್ಪನ್ನದ ಅಡಿಯಲ್ಲಿ ಪ್ರಯೋಜನಗಳನ್ನು ಉತ್ಪ್ರೇಕ್ಷಿಸುವ ಮೂಲಕ ಸುಳ್ಳು ಭರವಸೆ ನೀಡಬೇಡಿ ಅಥವಾ ನಿರೀಕ್ಷಿತ ಗ್ರಾಹಕರಿಗೆ ಆಸೆ ತೋರಿಸಬೇಡಿ.

c. ವಿಮಾ ಜಾಲ ಸಂಗ್ರಾಹಕನು, ಅಧಿಕೃತ ಪರಿಶೀಲಕನಿಂದ ಮಾರಲ್ಪಟ್ಟ ಪ್ರತಿ ವಿಮಾ ಪಾಲಿಸಿಗೆ ಗುರುತಿನ ಲೇಬಲ್ ಆಳವಡಿಸಿ ಮಾರಾಟ ಮತ್ತು ದೂರಗಳನ್ನು ಅನುಸರಿಸಲು ಮತ್ತು ಪ್ರಾಧಿಕಾರಕ್ಕೆ ದೂರದಿಂದ (ವಿದ್ಯುನ್ಮಾನ ಮೂಲಕ) ಪ್ರವೇಶಿಸುವುದಕ್ಕೆ ವ್ಯವಸ್ಥೆ ಇರಬೇಕು.

d. ಅಧಿಕೃತ ಪರಿಶೀಲಕನು ಒಬ್ಬ ವಿಮಾ ಸಂಗ್ರಾಹಕ / ದೂರ ಮಾರಾಗಾರನಿಂದ ಮತ್ತೊಬ್ಬರಿಗೆ ಬದಲಾವಣೆ, ತಮ್ಮ ಪೂರ್ವ ಉದ್ಯೋಗದಾತನಿಂದ ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ಪಡೆದು ನಂತರ ಅಥವಾ ಅದಕ್ಕಾಗಿ ಮನವಿ ಮಾಡಿದ 30 ದಿನಗಳ ನಂತರ, ಯಾವುದು ಮೊದಲೋ ಅದರ ಅನ್ವಯ ಹೊಂದಬಹುದು.

## 15. ಜಾಲ ಸಂಗ್ರಾಹಕರ ಕರ್ತವ್ಯಗಳು ಅಥವಾ ಕಾರ್ಯಗಳು

### a. ಜಾಲ ಸಂಗ್ರಾಹಕ

i. ವಿಮಾ ಕಂಪನಿಗಳೊಂದಿಗೆ ಜಾಲ ಸಂಗ್ರಾಹಕ ಮಾಡಿಕೊಂಡ ಒಪ್ಪಂದದ ವಿವರಗಳನ್ನು ಪ್ರದರ್ಶಿಸಬೇಕು.

ii. ವಿಮಾ ಕಂಪನಿಗಳಿಗಾಗಿ ಸಂಭಾವ್ಯ ಗ್ರಾಹಕರಲ್ಲಿ ಉತ್ಪನ್ನಗಳ ಬಗ್ಗೆ ಆಸಕ್ತಿ ಮೂಡಿಸುವ ಕಾರ್ಯ ಚಟುವಟಿಕೆಗಳನ್ನು ಮಾಡುತ್ತಿರಬೇಕು.

iii. ವಿಷಯ ಸಂಗ್ರಾಹಕ ಜಾಲತಾಣಗಳು / ಪೋರ್ಟಲ್ಗಳು, ಲೀಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ಗಳು, ಜಾಲತಾಣಗಳು, ಪೋರ್ಟಲ್‌ಗಳು ಮತ್ತು ಲೀಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ಗಳನ್ನು ಹೋಸ್ಟ್ ಮಾಡುವ ಡೇಟಾ ಸೆಂಟರ್‌ಗಳನ್ನು ಒಳಗೊಂಡಂತೆ, ಮಾಹಿತಿ ವ್ಯವಸ್ಥೆ (ಯಂತ್ರಾಂಶ ಮತ್ತು ತಂತ್ರಾಂಶ) ಭರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸುವ ಮಾಹಿತಿ ಭದ್ರತೆ ಮಾನದಂಡ, ಕಾಲಕಾಲಕ್ಕೆ ಅನ್ವಯವಾಗುವಂತೆ ಅನುಸರಿಸಲಾಗುತ್ತಿದೆಯೆಂದು ಖಚಿತ ಪಡಿಸಿಕೊಳ್ಳಬೇಕು.

iv. ಲೀಡ್ಸ್ ಮತ್ತು ಇತರ ಮಾಹಿತಿಗಳು, ವಿಮಾ ಕಂಪನಿಗಳಿಗೆ ಮತ್ತು ಇತರರಿಗೆ ರವಾನಿಸುವಾಗ 128 ಬಿಟ್ ಸಂಕೇತ ಭಾಷೆಯಂತಹ ಭದ್ರತೆಯ ಪದರಗಳುಳ್ಳ ಸಂಕೇತ ಭಾಷೆ ತಂತ್ರಜ್ಞಾನ ಉಪಯೋಗ ಮಾಡಲಾಗಿದೆಯೆಂದು ಖಚಿತ ಪಡಿಸಿಕೊಳ್ಳಬೇಕು.

v. ವಿಮಾ ಕಂಪನಿಗಳ ಪರವಾಗಿ ಪ್ರೀಮಿಯಂ ಹಣ ಸಂಗ್ರಹಿಸಲು ಜಾಲ ಸಂಗ್ರಾಹಕನಿಗೆ ಅಧಿಕಾರ ನೀಡಿದಾಗ, ಹಣವನ್ನು ಸಂಗ್ರಹಿಸಿ ವಿಮಾ ಕಂಪನಿಗಳಿಗೆ ವರ್ಗಾವಣೆ ಮಾಡುವಾಗ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪರವಾನಗಿ ಪಡೆದ ಪೇಮೆಂಟ್ ಗೇಟ್‌ವೇಗಳನ್ನು ಉಪಯೋಗಿಸಬೇಕು.

vi. ವಿಷಯ ಸಂಗ್ರಾಹಕ ಜಾಲತಾಣಗಳ / ಪೋರ್ಟಲ್‌ಗಳು, ಲೀಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ಗಳು ಜಾಲತಾಣಗಳು, ಪೋರ್ಟಲ್‌ಗಳು ಮತ್ತು ಲೀಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ಗಳನ್ನು ಹೋಸ್ಟ್ ಮಾಡುವ ಡೇಟಾ ಸೆಂಟರ್‌ಗಳನ್ನೂ ಒಳಗೊಂಡಂತೆ ಮಾಹಿತಿ ವ್ಯವಸ್ಥೆ (ಯಂತ್ರಾಂಶ ಮತ್ತು ತಂತ್ರಾಂಶ) ಯನ್ನು ಅಇಖಖಿ-ಟಿ ಪ್ಯಾನೆಲ್‌ನಲ್ಲಿರುವ ಮಾಹಿತಿ ಭದ್ರತೆ ಆಡಿಟ್ ಸಂಸ್ಥೆಗಳ ಮೂಲಕ ಪ್ರತಿ ಆರ್ಥಿಕ ವರ್ಷ, ಆಡಿಟ್ ಮಾಡಿಸಬೇಕು ಮತ್ತು ಆಡಿಟ್ ಪ್ರಮಾಣ ಪತ್ರ/ವರದಿ ಬಂದ 15 ದಿನಗಳೊಳಗೆ ಅದರ ಒಂದು ಪ್ರತಿಯನ್ನು ಖಖಆಂ ಗೆ ಮತ್ತು ಜಾಲ ಸಂಗ್ರಾಹಕನು ಒಪ್ಪಂದ ಮಾಡಿಕೊಂಡ ವಿಮಾ ಕಂಪನಿಗೆ ಸಲ್ಲಿಸಬೇಕು.

**b. ಜಾಲ ಸಂಗ್ರಾಹಕನು ಈ ಕೆಳಗಿನವುಗಳನ್ನು ಮಾಡಲೇಕೂಡದು:**

i. ಬೇರೆ ಆರ್ಥಿಕ ಸಂಸ್ಥೆಗಳ ಉತ್ಪನ್ನಗಳು ಅಥವಾ ಸೇವೆಗಳು / ವೇಗವಾಗಿ ಚಲಿಸುವ ಗ್ರಾಹಕ ಸರಕುಗಳ ಬಗ್ಗೆ ಮಾಹಿತಿಯನ್ನು ಪ್ರದರ್ಶಿಸುವುದು ಅಥವಾ ಉತ್ಪನ್ನ ಅಥವಾ ಸೇವೆಗಳಲ್ಲಿ ಜಾಲತಾಣದಲ್ಲಿ ಪ್ರದರ್ಶಿಸುವುದು.

ii. ಉತ್ಪನ್ನಗಳು ಅಥವಾ ಸೇವೆಗಳು, ವಿಮಾ ಉತ್ಪನ್ನಗಳು ಮತ್ತು ಸೇವೆಗಳು, ಬೇರೆ ಆರ್ಥಿಕ ಉತ್ಪನ್ನಗಳು ಮತ್ತು ಸೇವೆಗಳು ಬಗ್ಗೆ ಯಾವುದೇ ಜಾಹಿರಾತನ್ನು ಪ್ರದರ್ಶಿಸುವುದು ಮತ್ತು ಜಾಲ ಸಂಗ್ರಾಹಕರ ಜಾಲತಾಣದಲ್ಲಿ ಯಾವುದೇ ಉತ್ಪನ್ನಗಳು ಮತ್ತು ಸೇವೆಗಳ ಬಗ್ಗೆ ಪ್ರದರ್ಶಿಸುವುದು.

iii. ಅನೇಕ ಜಾಲತಾಣಗಳನ್ನು ಚಲಾಯಿಸುವುದು, ಅಥವಾ ಲೀಡ್ ಜನರೇಶನ್ ಮತ್ತು ಉತ್ಪನ್ನಗಳ ಹೋಲಿಕೆಗಾಗಿ ಅನು ಮೋದಿತ / ಅನನುಮೋದಿತ / ಪರವಾನಗಿ ರಹಿತ/ ಪರವಾನಗಿಯುಳ್ಳ ಘಟಕಗಳ / ಜಾಲ ತಾಣಗಳ ಜೊತೆಗೆ ಕೂಡುವುದು, ಕೆಲವೊಂದನ್ನು ವಿನಾಯಿತಿಸಿ.

iv. ಉತ್ಪನ್ನಗಳ ತುಲನೆಗೋಸ್ಕರ, ಅನ್ಯ ಆರ್ಥಿಕ / ವಾಣಿಜ್ಯಕ / ಮಾರ್ಕೆಟಿಂಗ್ ಅಥವಾ ಮಾರಾಟ ಅಥವಾ / ಸೇವಾ ಘಟಕಗಳ ಜಾಲತಾಣಗಳನ್ನು ನಡೆಸುವುದು ಅಥವಾ ಸಾಮಾಜಿಕ ಮಾಧ್ಯಮ ತಾಣಗಳನ್ನು ಉಪಗೋಗಿಸುವುದು.

v. ಈ ನಿಯಂತ್ರಗಳನ್ನು ಬಿಟ್ಟು, ಬೇರೆ ರೀತಿಯಲ್ಲಿ ಲೀಡ್ಸ್‌ಗಳನ್ನು ವಿಮಾ ವ್ಯವಹಾರ ನಡೆಸುತ್ತಿರುವ ಅನ್ಯ ಘಟಕಗಳಿಗೆ, ರವಾನೆ ಮಾಡುವುದು.

**c. ಜಾಲ ಸಂಗ್ರಾಹಕರ ನಾಮಕರಣ ಪದ್ದತಿ:**

i) ಸಾರ್ವಜನಿಕರು ಐಆರ್‌ಡಿಎಐ ಯಿಂದ ಪರವಾನಗಿ ಪಡೆದ ವಿಮಾ ಜಾಲ ಸಂಗ್ರಾಹಕರು ಮತ್ತು ಪರವಾನಗಿ ರಹಿತ ವಿಮಾ ಸಂಬಂಧದ ಘಟಕಗಳು ಪ್ರತ್ಯೇಕಿಸಲು ಅನುಕೂಲವಾಗುವಂತೆ, ಎಲ್ಲ ಜಾಲ ಸಂಗ್ರಾಹಕರು ತಮ್ಮ ವಿಮಾ ಬ್ರೋಕಿಂಗ್ ಕಂಪನಿಯ ಹೆಸರಿನಲ್ಲಿ 'ವಿಮಾ ಜಾಲಸಂಗ್ರಾಹಕ' ಅಥವಾ 'ವಿಮಾ ಜಾಲ ಸಂಗ್ರಾಹಕರು' ಎಂಬ ಪದವನ್ನು ಸೇರಿಸಿಕೊಳ್ಳಬೇಕು.
ಜಾಲ ಸಂಗ್ರಾಹಕನಾಗಿ ಕಾರ್ಯ ನಿರ್ವಹಿಸಲು ಪರವಾನಗಿಗಾಗಿ ಹೊಸ ಅರ್ಜಿದಾರ ಕಂಪನಿಗಳು ಅರ್ಜಿ ಸಲ್ಲಿಸದರೆ, ಮೇಲೆ ತಿಳಿಸಿದ ನಾಮಕರಣ ಪದ್ಧತಿ ಅನುಸರಿಸದಿದ್ದರೆ ಅರ್ಜಿಯನ್ನು ಪರಿಗಣಿಸುವುದಿಲ್ಲ.

ii) ಪ್ರತಿಯೊಬ್ಬ ಪರವಾನಗಿ ಹೊಂದಿದ ವಿಮಾ ಜಾಲ ಸಂಗ್ರಾಹಕನು ತನ್ನ ಸಂಬಂಧಿತರೊಡನೆ ಪತ್ರವ್ಯವಹಾರ ನಡೆಸುವಾಗ ಪ್ರಾಧಿಕಾರದಲ್ಲಿ ನೊಂದಾಯಿತವಾದ ಹೆಸರನ್ನು, ನೊಂದಾಯಿತ ಮತ್ತು ಕಾರ್ಪೊರೇಟ್ ಕಛೇರಿ ವಿಳಾಸ, ಐಆರ್‌ಡಿಎಐ ಪರವಾನಗಿ ಸಂಖ್ಯೆ ಮತ್ತು ಮಾನ್ಯತಾ ಅವಧಿಯನ್ನು ಪ್ರದರ್ಶಿಸಬೇಕು.

iii) ವಿಮಾ ಜಾಲ ಸಂಗ್ರಾಹಕರು, ಪ್ರಾಧಿಕಾರದ ಅನುಮತಿ ಇಲ್ಲದೆ, ತಮ್ಮ ಪತ್ರಾಚಾರದಲ್ಲಿ, ಪ್ರಚಾರ ಸಾಹಿತ್ಯದಲ್ಲಿ ಮತ್ತು ಲೆಟರ್‌ಹೆಡ್‌ಗಳಲ್ಲಿ ಬೇರೆಯ ಹೆಸರು ಬಳಸುವಂತಿಲ್ಲ.

**16. ಜಾಲ ಸಂಗ್ರಾಹಕರ ವಿಮಾ ಕಂಪನಿಯ ಒಪ್ಪಂದ:**

a. ಜಾಲ ಸಂಗ್ರಾಹಕನಿಂದ ಲೀಡ್ಸ್‌ಗಳನ್ನು ಪಡೆಯಲಿಚ್ಛಿಸುವ ವಿಮಾ ಕಂಪನಿಯು, ಪ್ರಾಧಿಕಾರದಿಂದ ಜಾಲ ಸಂಗ್ರಾಹಕನೊಂದಿಗೆ, ಈ ಕೆಳಕಂಡ ವಿವರಗಳನ್ನೊಳಗೊಂಡ, ಆದರೆ ಅಷ್ಟಕ್ಕೆ ಸೀಮಿತವಾಗದಂತೆ, 'ಒಪ್ಪಂದ' ಮಾಡಿಕೊಳಬೇಕು.

i. ಲೀಡ್ಸ್‌ಗಳನ್ನು ರವಾನೆ ಮಾಡುವುದಕ್ಕೆ ಕಾಲಮಿತಿ ಮತ್ತು ಮಾಧ್ಯಮವನ್ನು ಹಂಚಿಕೊಳ್ಳಬೇಕು

ii. ನಿಯಂತ್ರಕರ ಮತ್ತು ಕಾನೂನಿನ ಅವಶ್ಯಕತೆಗಳನ್ನು ಅನುಸರಿಸುವ ಜಾವಬ್ದಾರಿ ಒಪ್ಪಂದದಲ್ಲಿರುವ ಎರಡೂ ಪಕ್ಷಗಳ ಮೇಲಿರಬೇಕು.

iii. ಹಂಚಿಕೊಳ್ಳಬಹುದಾದ ಮಾಹಿತಿಯ ಭಾಗಗಳನ್ನು ಗುರುತಿಸುವುದು (ಉದಾ: ಸಂಭಾವ್ಯ ಗ್ರಾಹಕನ ಹೆಸರು / ಕಕ್ಷಿದಾರನ ಹೆಸರು (ಜಾಲತಾಣ ಭೇಟಿ ಮಾಡಿದ ವ್ಯಕ್ತಿ), ಸಂಪರ್ಕದ ವಿವರ ಇತ್ಯಾದಿ)

iv. ಒಪ್ಪಂದವಾದ ಮೇಲೆ ಜಾಲ ಸಂಗ್ರಾಹಕನಿಗೆ ಎಷ್ಟು ಕಾಲಮಿತಿಯಲ್ಲಿ ಉತ್ಪನ್ನಗಳ ಪ್ರೀಮಿಯಂ ಮತ್ತು ಲಕ್ಷಣಗಳ ಟೇಬಲ್ ಒದಗಿಸಲಾಗುತ್ತದೆ ಮತ್ತು ಕಾಲಕಾಲಕ್ಕೆ ನವೀಕರಿಸಲಾಗುತ್ತದೆ.

b. ಜಾಲ ಸಂಗ್ರಾಹಕನ ಪರವಾನಗಿ ಮಾನ್ಯವಾಗಿದ್ದಲ್ಲಿ, ವಿಮಾ ಕಂಪನಿ ಮತ್ತು ಜಾಲಸಂಗ್ರಾಹಕರ ನಡುವೆ ಒಪ್ಪಂದ ಮೂರು ವರ್ಷಗಳವರೆಗೆ ಸಿಂಧುವಾಗಿರುತ್ತದೆ.

c. ಒಪ್ಪಂದವಾದ 15 ದಿವಸಗಳೊಳಗಡೆ, ಜಾಲ ಸಂಗ್ರಾಹಕನು, ಒಪ್ಪಂದವನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕು

**17. ಜಾಲತಾಣದಲ್ಲಿ ಉತ್ಪನ್ನಗಳ ಹೋಲಿಕೆಗಳ ಪ್ರದರ್ಶನವಾಗಬೇಕು:**

a. ಜಾಲಸಂಗ್ರಾಹಕನು ಮುಖಪುಟದಲ್ಲಿ ಎದ್ದು ಕಾಣುವಂತೆ, ಈ ಕೆಳಗಿನಂತೆ ಸೂಚನೆಯನ್ನು ಬಹಿರಂಗಪಡಿಸಬೇಕು.

i. ಸಂಭಾವ್ಯ ಗ್ರಾಹಕನ / ಸಂದರ್ಶಕನ ವಿವರಗಳನ್ನು ವಿಮಾ ಕಂಪನಿಗಳೊಂದಿಗೆ ಹಂಚಿಕೊಳ್ಳಬಹುದು.

ii. 'ವಿಮೆಯು ವಿಜ್ಞಾಪನೆಯ ವಿಷಯವಾಗಿದೆ.'

iii. 'ಈ ಜಾಲತಾಣದಲ್ಲಿ ಪ್ರದರ್ಶಿಸಿಸಲಾದ ಮಾಹಿತಿ, ನಾವು ಒಪ್ಪಂದ ಮಾಡಿಕೊಂಡ ವಿಮಾ ಕಂಪನಿಗಳದ್ದ'

b. ಜಾಲ ಸಂಗ್ರಾಹಕನು ಪ್ರದರ್ಶಿಸಿದ ಉತ್ಪನ್ನಗಳ ಮಾಹಿತಿ ಅಧಿಕೃತವಾಗಿರಬೇಕು ಮತ್ತು ವಿಮಾ ಕಂಪನಿಗಳಿಂದ ಬಂದ ಮಾಹಿತಿಯನ್ನು ಆಧರಿಸಿರಬೇಕು.

c. ಜಾಲ ಸಂಗ್ರಾಹಕರು ತಮ್ಮ ಜಾಲತಾಣಗಳಲ್ಲಿ ರೇಟಿಂಗ್, ಶ್ರೇಯಾಂಕ, ಅನುಮೋದನೆಗಳು ಮತ್ತು ಉತ್ಪನ್ನಗಳಲ್ಲಿ ಅತ್ಯುತ್ತಮ ಮಾರಾಟವಾಗಿದ್ದನ್ನು ಪ್ರದರ್ಶಿಸಬಾರದು. ಜಾಲ ಸಂಗ್ರಾಹಕರ ಜಾಲತಾಣಗಳಲ್ಲಿರುವ ವಿಷಯ ಪಕ್ಷಪಾತ ರಹಿತವಾಗಿರಬೇಕು ಮತ್ತು ವಾಸ್ತವಿಕವಾಗಿರಬೇಕು, ಅವು ತಮ್ಮ ಸಂಪಾದಕೀಯದಲ್ಲಿ ವಿಮಾ ಕಂಪನಿಗಳು ಮತ್ತು ಉತ್ಪನ್ನಗಳ ಬಗ್ಗೆ ಟೀಕಿಸಬಾರದು ಬೇರಾವುದೇ ಸ್ಥಳದಲ್ಲಿರುವ ಜಾಲತಾಣಗಳೂ ಇದನ್ನು ಪಾಲಿಸಬೇಕು.

**18. ಸಂಭಾವನೆ:**
**ಈ ಕೆಳಗಿನ ನಿಬಂಧನೆಗಳಿಗನುಗುಣವಾಗಿ ವಿಮಾ ಕಂಪನಿಗಳು ಜಾಲ ಸಂಗ್ರಾಹಕರ ಸಂಭಾವನೆಯನ್ನು ಯಾವುದೇ ರೂಪದಲ್ಲಿ ಪಾವತಿಸಬಹುದು:**

a. ನಿಯಂತ್ರಣ ಸಂಖ್ಯೆ 14ರ ಪ್ರಕಾರ, ಜಾಲ ಸಂಗ್ರಾಹಕನು ದೃಢವಾದ ಕಲಿಕಾನಿರ್ವಹಣಾ ವ್ಯವಸ್ಥೆ (ಐಒಖ)ಯನ್ನು ವಿಮಾ ಕಂಪನಿಗಳಿಗೆ ಲೀಡ್ಸ್ ರವಾನೆ ಮಾಡುವುದಕ್ಕೆ, ಸ್ಥಾಪಿಸಬೇಕು ವಿಮಾ ಕಂಪನಿಗಳು ಈ ಲೀಡ್ಸ್‌ಗಳಿಗಾಗಿ ಶುಲ್ಕ ಪಾವತಿಸುವಂತಿಲ್ಲ.

b. ಜಾಲಸಂಗ್ರಾಹಕನ ಜಾಲತಾಣಗಳ ಹೋಲಿಕೆ ಪಟ್ಟಿಯಲ್ಲಿ, ಪ್ರತಿ ಉತ್ಪನ್ನಕ್ಕೆ ವಾರ್ಷಿಕ ಏಕರೂಪ ಶುಲ್ಕ ಐವತ್ತು ಸಾವಿರ ಮೀರದಂತೆ, ಪ್ರದರ್ಶಿಸಬೇಕು.

c. ಜಾಲಸಂಗ್ರಾಹಕನು ತಾನು ಸಂಪಾದಿಸಿದ ವಿಮಾ ಪಾಲಿಸಿಗಳಿಗೆ ಸಂಬಂಧಿಸಿದಂತೆ 'ವಿಮಾ ಸೇವೆಗಳನ್ನು' ಹೊರಗುತ್ತಿಗೆ ಕಾರ್ಯವಾಗಿ ಕೈಗೊಳ್ಳಬಹುದು, ಅಂತಹ ಸಂದರ್ಭಗಳಲ್ಲಿ ವಿಮಾ ಕಂಪನಿಯು, ಜಾಲ ಸಂಗ್ರಾಹಕರಿಗೆ ಸಮಂಜಸವಾದ ಸೇವಾ ಶುಲ್ಕವನ್ನು, ಜಾಲ ಸಂಗ್ರಾಹಕರೊಂದಿಗೆ ಮಾಡಿಕೊಂಡ ಸೇವಾ ಒಪ್ಪಂದದ ದರದಂತೆ ಪಾವತಿಸಬಹುದು.

d. ಜಾಲ ಸಂಗ್ರಾಹಕ್', ತಮ್ಮ ಸಂಗ್ರಾಹಕ ಜಾಲತಾಣಗಳಿಂದ ಜನಿತವಾದ ಲೀಡ್ಸ್‌ನ ಆಧರಿಸಿ ವಿಜ್ಞಾಪನೆ ಮಾಡುವುದಕ್ಕೆ, ದೂರವಾಣಿ ಮಾರ್ಕೆಟಿಂಗ್/ ದೂರ ಮಾರುಕಟ್ಟೆ ಮಾಧ್ಯಮವನ್ನು ಪ್ರಾಧಿಕಾರದ ಸೂಚನೆಗಳಂತೆ ಉಪಯೋಗಿಸಬಹುದು. ವಿಮಾ ಕಂಪನಿಯು ಆ ರೀತಿಯ ಜಾಲ ಸಂಗ್ರಾಹಕನ ಸೇವೆಗಳಿಂದ ಗಳಿಸಿದ ಪಾಲಿಸಿಗೆ ಪಾವತಿಸುವ ಸಂಭಾವನೆ, ವಿಮಾ ಕಂಪನಿಯು ನಿಯೋಜಿಸಿದ ಬೇರಾವುದೇ ವಿಮಾ ಮಧ್ಯವರ್ತಿ ಗಳಿಸಿದ ಪಾಲಿಸಿಗೆ ಪಾವತಿಸುವ ಸಂಭಾವನೆ ಸೇರಿದಂತೆ, ಸೆಕ್ಷನ್ 42-ಇ ವಿಮಾ ಕಾಯಿದೆ, 1938 ಅಡಿ ಪ್ರಾಧಿಕಾರವು ಕಾಲಕಾಲಕ್ಕೆ ವಿಧಿಸುವ ಮಿತಿಗಳನ್ನು ಮೀರಬಾರದು.

**19. ಪರವಾನಗಿಯನ್ನು ಸೂಚನೆ ಕೊಟ್ಟು ರದ್ದು ಮಾಡುವುದು ಅಥವಾ ಅಮಾನತು ಮಾಡುವುದು**

a. ಜಾಲ ಸಂಗ್ರಾಹಕನ ಪರಾವಾನಗಿಯನ್ನು, ಸಾಕಷ್ಟು ಸೂಚನೆ ಕೊಟ್ಟ ನಂತರ ಮತ್ತು ವಿವರಣೆ ಕೊಡುವುದಕ್ಕೆ ಸಮಂಜಸವಾದ ಅವಕಾಶ ಕೊಟ್ಟ ಮೇಲೆ, ಈ ಕೆಳಕಂಡ ಸಂದಭೃಗಳಲ್ಲಿ ರದ್ದು ಮಾಡಬಹುದು ಅಥವಾ ಅಮಾನತು ಮಾಡಬಹುದು.

i. ವಿಮಾ ಕಾಯಿದೆ, 1938 (1938 ರ 4ನೇಯದು) ಭಾರತೀಯ ನಿಯಂತ್ರಣ ಮತ್ತು ವಿಕಾಸ ಪ್ರಾಧಿಕಾರ ಕಾಯಿದೆ, 1999 (1999ರ 4ನೇ ಯದು) ಅಥವಾ ಅಲ್ಲಿ ಮಾಡಿದ ನಿಯಮಗಳು ಮತ್ತು ನಿಯಂತ್ರಣಗಳು.

ii. ಜಾಲ ಸಂಗ್ರಾಹಕರು ಕಟ್ಟು ಪಾಡುಗಳನ್ನು ಅನುಸರಿಸುವುದರಲ್ಲಿ ಮತ್ತು ದೂರವಾಣಿ ಮಾರಾಟ ಮತ್ತು ದೂರ ಮಾರಾಟ ಕಾರ್ಯ ನಡೆಸುವುದರಲ್ಲಿ ವಿಫಲರಾಗುತ್ತಾರೆ.

iii. ಮೇಲೆ ತಿಳಿಸಿದ ನೀತಿ ಸಂಹಿತೆಗೆ ಬದ್ಧನಾಗಿರದಿದ್ದರೆ.

iv. ಪರವಾನಗಿ ಪಡೆಯುವುದಕ್ಕೆ ತಪ್ಪು ಮಾಹಿತಿ ನೀಡುವುದು ಅಥವಾ ಪರವಾನಗಿ ಪಡೆಯುವುದಕ್ಕೆ ವಾಸ್ತವಿಕ ಸಂಗತಿಗಳನ್ನು ಮರೆಮಾಚುವುದು ವಸ್ತು ಸ್ಥಿತಿಯನ್ನು ಪ್ರಾಧಿಕಾರಕ್ಕೆ ಪರವಾನಗಿಯ ಸಿಂಧುತ್ವದ ಅವಧಿಯಲ್ಲಿ ಬಹಿರಂಗ ಪಡಿಸುವುದಕ್ಕೆ ವಿಫಲನಾಗುವುದು.

v. ಪ್ರಾಧಿಕಾರದ ಅವಶ್ಯಕತೆಗಳಂತೆ ವಿಮಾ ಸಂಗ್ರಾಹಕ ತನ್ನ ಕಾರ್ಯ ವ್ಯವಹಾರಗಳ ಬಗ್ಗೆ ಮಾಹಿತಿ ಕೊಡುವುದಕ್ಕೆ ವಿಫಲನಾಗುತ್ತಾನೆ ಅಥವಾ ತಪ್ಪು ಮಾಹಿತಿಯನ್ನು ಸಲ್ಲಿಸುತ್ತಾನೆ ಅಥವಾ ಮರೆಮಾಚುತ್ತಾನೆ ಅಥವಾ ಪ್ರಾಧಿಕಾರಕ್ಕೆ ಪರವಾನಗಿಯ ಸಿಂಧುತ್ವದ ಅವಧಿಯಲ್ಲಿ ವಸ್ತು ಸ್ಥಿತಿಯನ್ನು ಬಹಿರಂಗ ಪಡಿಸುವುದಕ್ಕೆ ವಿಫಲನಾಗುತ್ತಾನೆ.

vi. ಪ್ರಾಧಿಕಾರದ ಅವಶ್ಯಕತೆಗಳಂತೆ ಕಾಲಕಾಲಕ್ಕೆ ವರದಿಗಳನ್ನು ಸಲ್ಲಿಸುವುದಿಲ್ಲ.

vii. ಪ್ರಾಧಿಕಾರ ನಡೆಸುವ ತಪಾಸಣೆ ಅಥವಾ ವಿಚಾರಣೆಗೆ ಸಹಕಾರ ನೀಡುವುದಿಲ್ಲ.

viii. ಪಾಲಿಸಿದಾರರ ದೂರುಗಳನ್ನು ಪರಿಹರಿಸಲು ವಿಫಲನಾಗುತ್ತಾನೆ ಅಥವಾ ಈ ವಿಷಯದಲ್ಲಿ ಪ್ರಾಧಿಕಾರಕ್ಕೆ ತೃಪ್ತಿಕರವಾದ ಉತ್ತರ ನೀಡುವುದಕ್ಕೆ ವಿಫಲನಾಗುತ್ತಾನೆ.

ix. ಸಂಭಾವ್ಯ ಗ್ರಾಹಕನಿಗೆ ನಗದು ಅಥವಾ ವಸ್ತುರೂಪದಲ್ಲಿ ರಿಯಾಯಿತಿ ಅಥವಾ ಆಮಿಷದಲ್ಲಿ ತೊಡಗುವುದು ಅಥವಾ ಸಂಭಾವ್ಯ ಗ್ರಾಹಕನ ನಿರ್ದೇಶಕ ಅಥವಾ ಅವರ ಉದ್ಯೋಗಿಗಳಿಗೆ ಅಥವಾ ಪರಿಚಯ ಮಾಡಿಕೊಟ್ಟ ವ್ಯಕ್ತಿಗೆ ಆಮಿಷ ಒಡ್ಡುವುದು.

x. ಪ್ರಾಧಿಕಾರ ನಿಗದಿಪಡಿಸಿದ ಶುಲ್ಕ ಪಾವತಿಸುವುದರಲ್ಲಿ ವಿಫಲನಾಗುವುದು.

xi. ಪ್ರಾಧಿಕಾರದ ನಿಬಂಧನೆಗಳಂತೆ ಬಂಡವಾಳದ ಅವಶ್ಯಕತೆಗಳನ್ನು ಸುಸ್ಥಿರವಾಗಿ ನಿರ್ವಹಿಸಲು ವಿಫಲನಾಗುತ್ತಾನೆ.

xii. ಪ್ರಧಾನ ಅಧಿಕಾರಿ ನಿಯಂತ್ರಣಗಳಲ್ಲಿರುವಂತೆ ಷರತ್ತುಗಳನ್ನು ಪೂರಯಿಸದಿದ್ದರೆ.

xiii. ಜಾಲ ಸಂಗ್ರಾಹಕನು ತನ್ನ ಶ್ರಮದಿಂದ ಅಥವಾ ಕಾಲ್ ಸೆಂಟರ್‌ನಿಂದ ಸಂಪಾದಿಸಿದ ಬಿಸಿನೆಸ್ಸನ್ನು, ನಕಲಿ ಕರೆಗಳು ಅಥವಾ ದಾರಿ ತಪ್ಪಿಸುವ ಕರೆಗಳ ಮೂಲಕ ಬೇರೆಡೆಗೆ ತಿರುಗಿಸುವುದು.

b. ಯಾವ ಸಂದರ್ಭದಲ್ಲಿ, ಪ್ರಾಧಿಕಾರ, ಜಾಲ ಸಂಗ್ರಾಹಕನ ಸ್ಥಾಪನೆ ಕಂಪನಿಯ ಗುಂಪುಗಳಲ್ಲಿ ಅಥವಾ ಸಹಾಯಕ ಸಂಸ್ಥೆಗಳಲ್ಲಿ ನಿಧಿಯನ್ನು ಬೇರೆಡೆ ತಿರುಗಿಸುವುದಕ್ಕೆಂದು ಭಾವಿಸುತ್ತದೆಯೋ ಆ ಸಂದರ್ಭದಲ್ಲಿ ವಿಚಾರಣೆ ನಡೆಸಿ ಜಾಲ ಸಂಗ್ರಾಹಕನ ಪರವಾನಗಿಯನ್ನು ರದ್ದು ಪಡಿಸಬಹುದು.

c. ಯಾವ ಜಾಲ ಸಂಗ್ರಾಹಕನ ಪರವಾನಗಿ, ಸೂಚನೆ ನೀಡಿ ವಿವರಣೆ ಸಲ್ಲಿಸುವುದಕ್ಕೆ ಅವಕಾಶ ನೀಡಿದ ಮೇಲೆ ಅಮಾನತು ಮಾಡಲಾಗಿದೆಯೋ, ಅವನು ಹೊಸ ಬಿಸಿನೆಸ್‌ಗೋಸ್ಕರ ವಿಜ್ಞಾಪನೆ ಮಾಡಬಾರದು ಮತ್ತು ಅಮಾನತು ಆದೇಶದ ತಾರೀಖಿನಿಂದ ಅಮಾನತು ರದ್ದುಗೊಳಿಸುವವರೆಗೆ ಹೊಸ ಬಿಸಿನೆಸ್‌ಗೆ ವಿಜ್ಞಾಪಿಸಬಾರದು ಮತ್ತು ಜಾಲಸಂಗ್ರಾಹಕನು ಪರವಾನ್ಗೆ ಸಂಬಂಧಿಸಿದ ಯಾವುದೇ ಕಾರ್ಯಗಳಲ್ಲಿ ತೊಡಗಬಾರದು.

## ೨೦. ಲೆಕ್ಕಪತ್ರ ಪುಸ್ತಕ ಮತ್ತು ದಾಖಲೆಗಳ ನಿರ್ವಹಣೆ, ಇತ್ಯಾದಿ

a. ಪ್ರತಿಯೊಬ್ಬ ಜಾಲ ಸಂಗ್ರಾಹಕನು, ಪ್ರತಿ ಹಣಕಾಸು ವರ್ಷಕ್ಕಾಗಿ ಈ ಕೆಳಗಿನವುಗಳನ್ನು ತಯಾರಿಸಬೇಕು

i. ಹಣಕಾಸು ವರ್ಷದ ಕೊನೆಯಲ್ಲಿ ಬ್ಯಾಲೆನ್ಸ್ ಷೀಟ್, ವ್ಯವಹಾರದ ವರದಿ

ii. ಲಾಭ, ನಷ್ಟಗಳ ಲೆಕ್ಕ

iii. ಹಣ / ನಿಧಿಯ ಹರಿವಿನ ವರದಿ

iv. ಪ್ರಾಧಿಕಾರದ ಅವಶ್ಯಕತೆಯಂತೆ ಜಾಲಸಂಗ್ರಾಹಕನ ವಹಿವಾಟಿನ ಬಗ್ಗೆ ಹೆಚ್ಚುವರಿ ವರದಿಗಳು

**ಸೂಚನೆ:** ಈ ನಿಯಂತ್ರಣಗಳಿಗೆ ಅನ್ವಯಿಸುವಂತೆ ಹಣಕಾಸು ವರ್ಷ 12 ತಿಂಗಳ ಅವಧಿ 1ನೇ ಏಪ್ರಿಲ್‌ಗೆ ಪ್ರಾರಂಭವಾಗಿ (1ನೇ ಏಪ್ರಿಲ್ ನಂತರ ವಹಿವಾಟು ಪ್ರಾರಂಭವಾದರೆ 12 ತಿಂಗಳಿಗಿಂತ ಕಡಿಮೆ ಅವಧಿ) ಮುಂದಿನ ವರ್ಷದ 31ನೇ ಮಾರ್ಚ್‌ಗೆ ಕೊನೆಗೊಳ್ಳುತ್ತದೆ ಮತ್ತು ಲೆಕ್ಕ ಪತ್ರವನ್ನು ಸಂಚಯದ ಆಧಾರದ ಮೇಲೆ ತಯಾರು ಮಾಡಬೇಕು.

b. ಪ್ರತಿ ಜಾಲ ಸಂಗ್ರಾಹಕನು ಆಡಿಟ್ ಆದ ಹಣಕಾಸಿನ ಒಕ್ಕಣೆಯನ್ನು, ಆಡಿಟರ್ ವರದಿಯೊಂದಿಗೆ ಹಣಕಾಸು ವರ್ಷಕೊನೆಗೊಂಡ 90 ದಿನಗಳ ಒಳಗೆ, ಪ್ರಾಧಿಕಾರಕ್ಕೆ ಬಿಸಿನೆಸ್ ನಡೆಸುವ ರೀತಿ ಮತ್ತು ಲೆಕ್ಕ ಪತ್ರದ ಸ್ಥಿತಿ ಇತ್ಯಾದಿಗಳ ಬಗ್ಗೆ ಆಡಿಟ್‌ರವರ ಟೀಕೆ, ಟಿಪ್ಪಣಿ ಏನಾದರೂ ಇದ್ದರೆ ಒಪ್ಪಿಸಬೇಕು ಮತ್ತು ಟೀಕೆ, ಟಿಪ್ಪಣಿ ಬಗ್ಗೆ ವಿವರಣೆಯನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕು.

c. ಪ್ರತಿಯೊಬ್ಬ ಜಾಲ ಸಂಗ್ರಾಹಕ, ಆಡಿಟರ್ ವರದಿಯ ದಿನಾಂಕದಿಂದ ತೊಂಬತ್ತು ದಿನಗಳ ಒಳಗೆ, ವರದಿಯಲ್ಲಿ ಉಲ್ಲೇಖಿಸಿರುವ ತಪ್ಪುಗಳನ್ನು ಸರಿಪಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಪ್ರಾಧಿಕಾರಕ್ಕೆ ತಿಳಿಸಬೇಕು.

d. ಎಲ್ಲಾ ಲೆಕ್ಕ ಪತ್ರದ ಪುಸ್ತಕಗಳು, ಒಕ್ಕಣೆಗಳು, ದಾಖಲೆಗಳು ಇತ್ಯಾದಿಗಳನ್ನು ಜಾಲ ಸಂಗ್ರಾಹಕರ ಪ್ರಧಾನ ಕಾರ್ಯಲಯದಲ್ಲಿ, ಅಥವಾ ಪ್ರಾಧಿಕಾರ ಗೊತ್ತು ಪಡಿಸಲಾದ ಮತ್ತು ತಿಳಿಸಲಾದ ಶಾಖಾ ಕಛೇರಿಯಲ್ಲಿ ಇಟ್ಟಿರಬೇಕು ಮತ್ತು ಪ್ರಾಧಿಕಾರದಿಂದ ತಪಾಸಣೆಗೆ ಬಂದ ಅಧಿಕೃತ ಅಧಿಕಾರಿಗಳಿಗೆ ಎಲ್ಲಾ ಕೆಲಸದ ದಿನಗಳಲ್ಲಿ ಒದಗಿಸಬೇಕು.

e. ಎಲ್ಲಾ ವಿದ್ಯುನ್ಮಾನ ದಾಖಲೆಗಳು, ಪುಸ್ತಕಗಳು ಮತ್ತು ದಾಖಲೆಗಳು, ಒಕ್ಕಣೆಗಳು, ಒಪ್ಪಂದಗಳು ಇತ್ಯಾದಿಗಳು ಈ ನಿಯಂತ್ರಣಗಳಲ್ಲಿ ಉಲ್ಲೇಖಿಸಿರುವಂತೆ ಜಾಲ ಸಂಗ್ರಾಹಕನು ನಿರ್ವಹಣೆ ಮಾಡುತ್ತಿರುವನೊ, ಅವುಗಳನ್ನು ಯಾವ ಹಣಕಾಸು ವರ್ಷಕ್ಕೆ ಸಂಬಂಧಿಸಿದೆಯೋ ಆ ವರ್ಷದ ಅಂತ್ಯದಿಂದ ಕನಿಷ್ಠ ಹತ್ತು ವರ್ಷಗಳವರೆಗೆ ಉಳಿಸಿಕೊಂಡಿರಬೇಕು. ಆದರೆ ಡಿಜಿಟಲ್ ದಾಖಲೆಗಳು ಯಾವುದಾದರೂ ಕಾನೂನಿನ ವ್ಯಾಜ್ಯಕ್ಕೆ ಸಂಬಂಧಿಸಿದ್ದಾದರೆ ಮತ್ತು ನ್ಯಾಯಲಯದಲ್ಲಿ ಇತ್ಯಾರ್ಥವಾಗದಿರುವ ಕೇಸ್‌ಗೆ ಸಂಬಂಧಿಸಿದ್ದರೆ, ನ್ಯಾಯಾಲಯದ ತೀರ್ಪು ಬರುವವರೆಗೂ ಸಂರಕ್ಷಿಸಿಟ್ಟಿರಬೇಕು.

f. ಪ್ರತಿ ಜಾಲ ಸಂಗ್ರಾಹಕನು ವಿಮಾ ಕಂಪನಿಗಳಿಗನುಗುಣವಾಗಿ, ಈ ಕೆಳಗಿನ ದಾಖಲೆಗಳು ಇಟ್ಟಿರಬೇಕು:

   i. ಲೀಡ್ಸ್‌ಗಳ ಗಳಿಕೆ ಮತ್ತು ರವಾನೆ
   ii. ಲೀಡ್ಸ್‌ಗಳನ್ನು ಪಾಲಿಸಿಗಳಾಗಿ ಪರಿವರ್ತಿಸಿರುವ ವಿವರ
   iii. ದೂರುಗಳ ಸ್ವೀಕೃತಿ ಮತ್ತು ವಿಲೇವಾರಿ
   iv. ಜಾಲತಾಣಗಳಲ್ಲಿ ಉತ್ಪನ್ನಗಳ ಪ್ರದರ್ಶನ ಮತ್ತು ಹೋಲಿಕೆಗಳು
   v. ಪ್ರದರ್ಶಿಸಿರುವ ಉತ್ಪನ್ನಗಳಿಗೆ ಸಂಭಾವನೆ ಪಡೆದಿರುವುದು
   vi. ಪ್ರದರ್ಶಿಸಿರುವ ಉತ್ಪನ್ನಗಳಿಗೆ ಸಂಭಾವನೆ ಪಡೆದಿರುವುದು
   vii. ಲೀಡ್ಸ್‌ಗಳನ್ನು ಪಾಲಿಸಿಗಳಿಗಾಗಿ ಪರಿವರ್ತಿಸಿರುವುದಕ್ಕೆ ಪಡೆದ ಸಂಭಾವನೆ
   viii. ಹೊರಗುತ್ತಿಗೆ ಕಾರ್ಯಗಳಿಗಾಗಿ ಪಡೆದ ಸಂಭಾವನೆ
   ix. ವಿಮಾ ಕಂಪನಿಗಳಿಂದ ಪಡೆದ ಬೇರಾವುದೇ ಸಂಭಾವನೆ (ವಿವರಿಸಿ)

## 21. ಪರವಾನಗಿ ಇಲ್ಲದೆ ಜಾಲ ಸಂಗ್ರಾಹಕನಾಗಿ ವ್ಯವಹರಿಸುತ್ತಿರುವ ವ್ಯಕ್ತಿಯ ಮೇಲೆ ಕ್ರಮ

i) ಈ ನಿಯಂತ್ರಗಳು ಜಾರಿಗೆ ಬಂದ ದಿನಾಂಕದಿಂದ, ಪ್ರಾಧಿಕಾರದಿಂದ ಪರವಾನಗಿ ಇಲ್ಲದೆ ಯಾವ ವ್ಯಕ್ತಿಯು ಜಾಲ ಸಂಗ್ರಾಹಕನಾಗಿ ವರ್ತಿಸಬಾರದು.

ii) ಪ್ರಾಧಿಕಾರವು ಯಾವ ವ್ಯಕ್ತಿ ಪರವಾನಗಿ ಇಲ್ಲದೆ ಜಾಲ ಸಂಗ್ರಾಹಕನಾಗಿ ಕಾರ್ಯ ನಿರ್ವಹಿಸುತ್ತಾನೊ ಅವನ ಮೇಲೆ ಕ್ರಿಮಿನಲ್ ಕೇಸ್ ನಡೆಯುತ್ತಿದ್ದರೂ, ಯಾವುದೇ ಪೂರ್ವಾ ಗ್ರಹವಿಲ್ಲದೇ, ವಿಮಾ ಕಾಯಿದೆಯ ಅಡಿಯಲ್ಲಿ ದಂಡದ ಕ್ರಮ ಕೈಗೊಳ್ಳಬಹುದು.

## 22. ಅನುಸರಣೆಯ ಪ್ರಮಾಣ ಪತ್ರ

ಪ್ರತಿ ಹಣಕಾಸು ವರ್ಷದ ಕೊನೆಯಲ್ಲಿ ಜಾಲ ಸಂಗ್ರಾಹಕನ ಪ್ರಧಾನ ಅಧಿಕಾರಿಯು, ಪ್ರಾಧಿಕಾರಕ್ಕೆ, ಜಾಲ ಸಂಗ್ರಾಹಕನು ಹಣಕಾಸು ವರ್ಷದಲ್ಲಿ ನಿಯಂತ್ರಣಗಳ ನಿಬಂಧನೆಗನ್ನು ಅನುಸರಿಸಿದ್ದಾನೆ ಎಂದು ಪ್ರಮಾಣಪತ್ರ ಸಲ್ಲಿಸಬೇಕು.

# ವಿಭಾಗ

# ಜೀವವಿಮೆ

# ಅಧ್ಯಾಯ L-01

# ಜೀವವಿಮೆ ಏನನ್ನು ಒಳಗೊಂಡಿರುತ್ತದೆ

**ಅಧ್ಯಾಯ ಪರಿಚಯ**

ವಿಮೆಗೆ ಸಂಬಂಧಿಸಿದ ಕೆಲವು ಅಂಶಗಳನ್ನು ನಾವು ಸಾಮಾನ್ಯ ಅಧ್ಯಾಯಗಳಲ್ಲಿ ನೋಡಿದ್ದೇವೆ. ಆದರೆ, ಜೀವ ವಿಮೆಯ ವಿಷಯಕ್ಕೆ ಬಂದಾಗ, ನಾವು ಅವುಗಳನ್ನು ಹೆಚ್ಚು ಆಳವಾಗಿ ನೋಡಬೇಕಾಗಿದೆ.

- ✓ ಆಸ್ತಿ
- ✓ ವಿಮೆಮಾಡಲ್ಪಟ್ಟ ಅಪಾಯ
- ✓ ಸಂಚಯನದ ಸಿದ್ಧಾಂತ
- ✓ ಒಪ್ಪಂದ

ಜೀವ ವಿಮೆಯ ವೈಶಿಷ್ಟ್ಯಗಳನ್ನು ಈಗ ಪರಿಶೀಲಿಸೋಣ. ಮೇಲೆ ತಿಳಿಸಲಾದ ಜೀವ ವಿಮೆಯ ವಿವಿಧ ಘಟಕಗಳ ಸಂಕ್ಷಿಪ್ತ ನೋಟವನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ.

**ಕಲಿಕೆಯ ಫಲಿತಾಂಶಗಳು**

A. *ಜೀವ ವಿಮಾ ವ್ಯವಹಾರ - ಘಟಕಗಳು, ಮಾನವ ಜೀವದ ಮೌಲ್ಯ, ಪರಸ್ಪರತೆ*

B. *ಅಪಾಯಗಳು ಮತ್ತು ಜೀವ ವಿಮೆ*

## A. ಜೀವ ವಿಮಾ ವ್ಯವಹಾರ - ಘಟಕಗಳು, ಮಾನವ ಜೀವದ ಮೌಲ್ಯ, ಪರಸ್ಪರತೆ

### a) ಆಸ್ತಿ - ಮಾನವ ಜೀವದ ಮೌಲ್ಯ (ಎಚ್ಎಲ್ ವಿ)

ಆಸ್ತಿಯೆಂದರೆ ಮೌಲ್ಯ ಅಥವಾ ಆದಾಯವನ್ನು ನೀಡುವ ಒಂದು ರೀತಿಯ ಸ್ವತ್ತು ಎಂದು ನಾವು ಈಗಾಗಲೇ ನೋಡಿದ್ದೇವೆ. ಹೆಚ್ಚಿನ ರೀತಿಯ ಆಸ್ತಿಗಳ ಮೌಲ್ಯ ಮತ್ತು ನಷ್ಟದ ಮೌಲ್ಯ ಈ ಎರಡನ್ನೂ ನಿಖರವಾದ ವಿತ್ತೀಯ ಪರಿಭಾಷೆಯಲ್ಲಿ ಅಳೆಯಬಹುದು.

**ಉದಾಹರಣೆ**

ಅಪಘಾತಕ್ಕೊಳಗಾದ ಕಾರಿನ ಅಂದಾಜು ಹಾನಿ ರೂ. 50000 ವಾಗಿದ್ದರೆ, ವಿಮಾಗಾರರು ಈ ನಷ್ಟಕ್ಕಾಗಿ ಮಾಲೀಕರಿಗೆ ಪರಿಹಾರ ನೀಡುತ್ತಾರೆ.

ಒಬ್ಬ ವ್ಯಕ್ತಿಯು ಮರಣ ಹೊಂದಿದಾಗ ನಷ್ಟದ ಪ್ರಮಾಣವನ್ನು ನಾವು ಹೇಗೆ ಅಂದಾಜು ಮಾಡುವುದು**?**

ಅವನ ಮೌಲ್ಯ ರೂ. **50,000** ವೇ ಅಥವಾ ರೂ. **5,00,000?**

---

ಗ್ರಾಹಕರನ್ನು ಭೇಟಿಯಾದಾಗ ಏಜೆಂಟರು ಮೇಲಿನ ಪ್ರಶ್ನೆಗೆ ಉತ್ತರಿಸಲು ಶಕ್ತರಾಗಿರಬೇಕು. ಇದರ ಆಧಾರದ ಮೇಲೆ ಗ್ರಾಹಕರಿಗೆ ಎಷ್ಟು ವಿಮೆಯನ್ನು ಶಿಫಾರಸು ಮಾಡಬೇಕೆಂದು ಏಜೆಂಟರು ನಿರ್ಧರಿಸಬಹುದು. ವಾಸ್ತವವಾಗಿ ಜೀವ ವಿಮಾ ಏಜೆಂಟರು ಕಲಿಯಬೇಕಾದ ಮೊದಲ ಪಾಠ ಇದಾಗಿದೆ.

ಅದೃಷ್ಟದಿಂದ ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಪ್ರೊ. ಹುಬೆನರ್ ರಿಂದ ಅಭಿವೃದ್ಧಿಪಡಿಸಲಾದ ಅಳತೆಯನ್ನು ನಾವು ಹೊಂದಿದ್ದೇವೆ. ಇದನ್ನು ಮಾನವ ಜೀವದ ಮೌಲ್ಯ (ಎಚ್ಎಲ್ ವಿ**)** ಎಂದು ಕರೆಯಲಾಗುತ್ತದೆ ಮತ್ತು ಇದನ್ನು ಪ್ರಪಂಚದಾದ್ಯಂತ ಬಳಸಲಾಗುತ್ತದೆ.

ಮಾನವ ಜೀವವನ್ನು ಆದಾಯ ಗಳಿಸುವ ಒಂದು ರೀತಿಯ ಆಸ್ತಿ ಅಥವಾ ಸ್ವತ್ತು ಎಂದು ಎಚ್ಎಲ್ ವಿ ಪರಿಕಲ್ಪನೆಯು ಪರಿಗಣಿಸುತ್ತದೆ. ಹೀಗೆ ಇದು ವ್ಯಕ್ತಿಯ ಭವಿಷ್ಯದ ನಿರೀಕ್ಷಿತ ನಿವ್ವಳ ಗಳಿಕೆಯ ಆಧಾರದ ಮೇಲೆ ಮಾನವ ಜೀವದ ಮೌಲ್ಯವನ್ನು ಅಳೆಯುತ್ತದೆ. ನಿವ್ವಳ ಗಳಿಕೆ ಎಂದರೆ ಒಬ್ಬ ವ್ಯಕ್ತಿಯು ಭವಿಷ್ಯದಲ್ಲಿ ಸ್ವಂತಕ್ಕಾಗಿ ಮಾಡುವ ಖರ್ಚಿನ ಮೊತ್ತವನ್ನು ವಜಾ ಮಾಡಿ ಪ್ರತಿ ವರ್ಷ ಗಳಿಸಬಹುದಾದ ಆದಾಯವೆಂದರ್ಥ. ಹೀಗೆ ಇದು ವೇತನ ಗಳಿಸುವವರು ಅಕಾಲಿಕವಾಗಿ ಮರಣಹೊಂದಿದರೆ ಅವರ ಕುಟುಂಬವು ಅನುಭವಿಸುವ ಆರ್ಥಿಕ ನಷ್ಟವನ್ನು ಸೂಚಿಸುತ್ತದೆ. ಈ ಗಳಿಕೆಗಳನ್ನು ಕಡಿಮೆ ಮಾಡಲು ಸೂಕ್ತವಾದ ಬಡ್ಡಿದರವನ್ನು ಬಳಸಿ ಬಂಡವಾಳೀಕರಿಸಲಾಗುತ್ತದೆ.

ಬೆಲೆ ಏರಿಕೆ /ಹಣದುಬ್ಬರ, ವೇತನದಲ್ಲಿಯ ಹೆಚ್ಚಳ, ಗಳಿಕೆಯ ಭವಿಷ್ಯದಲ್ಲಿಯ ಸಾಮರ್ಥ್ಯ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು ಎಚ್ಎಲ್ ವಿಯನ್ನು ಲೆಕ್ಕಾಚಾರ ಮಾಡಲು ಹಲವಾರು ನಿಯತಾಂಕಗಳನ್ನು ಬಳಸಲಾಗಿದ್ದರೂ,

ಎಚ್‌ಎಲ್ ವಿಯನ್ನು ಲೆಕ್ಕಾಚಾರ ಮಾಡಲು ಸರಳವಾದ ಅನುಭವಾಧಾರಿತ ನಿಯಮ(ಥಂಬ್ ರೂಲ್)ವೆಂದರೆ ಕುಟುಂಬಕ್ಕೆ ಅಗತ್ಯವಿರುವ ವಾರ್ಷಿಕ ಆದಾಯವನ್ನು ಬಡ್ಡಿಯ ರೂಪದಲ್ಲಿ ಉತ್ಪಾದಿಸುವ ಮೊತ್ತವನ್ನು ನಿರ್ಧರಿಸುವುದು. ಬೇರೆ ರೀತಿಯಲ್ಲಿ ಹೇಳುವುದಾದರೆ, ಎಚ್‌ಎಲ್ ವಿಯೆಂಬುದು ಚಾಲ್ತಿಯಲ್ಲಿರುವ ಬಡ್ಡಿದರದಿಂದ ಭಾಗಿಸಲಾದ ಕುಟುಂಬ ಪ್ರಮುಖರಿಂದ ಕುಟುಂಬಕ್ಕೆ ನೀಡಲಾಗುವ ವಾರ್ಷಿಕ ಕೊಡುಗೆಯಾಗಿದೆ.

**ಉದಾಹರಣೆ**

ಶ್ರೀ ರಾಜನ್ ರವರು ವರ್ಷಕ್ಕೆ ರೂ. 1,20,000 ಗಳಿಸುತ್ತಾರೆ ಮತ್ತು ಅದರಲ್ಲಿಂದ ಸ್ವಂತಕ್ಕಾಗಿ ರೂ. 24,000 ಖರ್ಚು ಮಾಡುತ್ತಾರೆ. ಅವರು ಅಕಾಲಿಕವಾಗಿ ಮರಣ ಹೊಂದಿದರೆ ಕುಟುಂಬವು ಕಳೆದುಕೊಳ್ಳುವ ನಿವ್ವಳ ಆದಾಯ ವರ್ಷಕ್ಕೆ ರೂ. 96,000. ಬಡ್ಡಿಯ ದರವು 8% ಇದೆಯೆಂದು ಭಾವಿಸೋಣ (0.08 ಎಂದು ವ್ಯಕ್ತಪಡಿಸಲಾಗಿದೆ).

**ಮಾನವ-ಜೀವದ-ಮೌಲ್ಯ (ಎಚ್‌ಎಲ್ ವಿ) = ಅವಲಂಬಿತರಿಗಾಗಿ ವಾರ್ಷಿಕ ಕೊಡುಗೆ ÷ ಬಡ್ಡಿ ದರ**

**ಎಚ್‌ಎಲ್ ವಿ = 96000/ 0.08 = Rs. 12,00,000**

ಒಬ್ಬರು ಸಂಪೂರ್ಣ ರಕ್ಷಣೆಗಾಗಿ ಎಷ್ಟು ಮೊತ್ತದ ವಿಮೆಯನ್ನು ಹೊಂದಿರಬೇಕು ಎಂಬುದನ್ನು ನಿರ್ಧರಿಸಲು ಎಚ್‌ಎಲ್ ವಿ ಸಹಾಯ ಮಾಡುತ್ತದೆ. ಜೀವ ವಿಮೆಯನ್ನು ಒದಗಿಸಲು ಸಮಂಜಸವಲ್ಲದ ಗರಿಷ್ಠ ಮಿತಿಯನ್ನು ಸಹ ಇದು ನಮಗೆ ಹೇಳುತ್ತದೆ.

ಸಾಮಾನ್ಯವಾಗಿ, ವಿಮೆಯ ಮೊತ್ತವು ಒಬ್ಬರ ವಾರ್ಷಿಕ ಆದಾಯದ ಸುಮಾರು 10 ರಿಂದ 15 ಪಟ್ಟಿನಷ್ಟು ಇರಬೇಕು. ಶ್ರೀ ರಾಜನ್ ಅವರು ವರ್ಷಕ್ಕೆ ಕೇವಲ ರೂ. 1.2 ಲಕ್ಷಗಳನ್ನು ಗಳಿಸುತ್ತಿದ್ದು ರೂ. 2 ಕೋಟಿಗಳ ವಿಮೆಯನ್ನು ಕೇಳಿದರೆ ಅನುಮಾನಪಡಬೇಕು. ಒಬ್ಬರು ಎಷ್ಟು ವಿಮೆಯನ್ನು ನಿಭಾಯಿಸಬಹುದು ಮತ್ತು ಖರೀದಿಸಬಯಸುತ್ತಾರೆ ಮುಂತಾದ ಅಂಶಗಳ ಮೇಲೆ ಖರೀದಿಸಿದ ವಿಮೆಯ ನಿಜವಾದ ಮೊತ್ತವು ಅವಲಂಬಿತವಾಗಿರುತ್ತದೆ.

## B. ಅಪಾಯ ಮತ್ತು ಜೀವವಿಮೆ

ನಾವು ಮೇಲಿನ ಉದಾಹರಣೆಯಲ್ಲಿ ನೋಡಿದಂತೆ, ಜೀವ ವಿಮೆಯು ಮಾನವ ಜೀವನದ ಮೌಲ್ಯವನ್ನು ಆಸ್ತಿಯನ್ನಾಗಿ ನಾಶಪಡಿಸುವ ಅಥವಾ ಅದರ ಮೌಲ್ಯವನ್ನು ಕಡಿಮೆ ಮಾಡುವ ಅಪಾಯದ ಘಟನೆಗಳ ವಿರುದ್ಧ ರಕ್ಷಣೆಯನ್ನು ನೀಡುತ್ತದೆ. ಅಂತಹ ನಷ್ಟ ಸಂಭವಿಸುವ ಮೂರು ರೀತಿಯ ಸಂದರ್ಭಗಳಿರುತ್ತವೆ. ಅವು ಸಾಮಾನ್ಯ ಜನರು ಎದುರಿಸುವ ವಿಶಿಷ್ಟ ಚಿಂತೆಗಳಾಗಿವೆ.

**ಚಿತ್ರ 1: ಸಾಮಾನ್ಯ ಜನರು ಎದುರಿಸುವ ವಿಶಿಷ್ಟ ಚಿಂತೆಗಳು**

ಸಾಮಾನ್ಯ ಜನರು ಎದುರಿಸುವ ವಿಶಿಷ್ಟ ಚಿಂತೆಗಳು

- ಬಹಳ ಬೇಗ ಮರಣಿಸುವುದು
- ಬಹಳ ಕಾಲ ಬದುಕುಳಿಯುವುದು
- ಅಂಗವೈಕಲ್ಯದೊಂದಿಗೆ ಬದುಕುವುದು

ಮತ್ತೊಂದೆಡೆ ಸಾಮಾನ್ಯ ವಿಮೆಯು ಸಾಮಾನ್ಯವಾಗಿ ಬೆಂಕಿ, ಸಮುದ್ರದಲ್ಲಿರುವಾಗ ಸರಕುಗಳ ನಷ್ಟ, ಕಳ್ಳತನ ಮತ್ತು ದರೋಡೆ ಮತ್ತು ಮೋಟಾರು ಅಪಘಾತಗಳುಂತಹ ಆಸ್ತಿಯ ಮೇಲೆ ಪರಿಣಾಮ ಬೀರುವ ಅಪಾಯಗಳೊಂದಿಗೆ ವ್ಯವಹರಿಸುತ್ತದೆ. ಅದು ಕೀರ್ತಿ ಮತ್ತು ಒಳ್ಳೆಯ ಹೆಸರಿನ ನಷ್ಟಕ್ಕೆ ಕಾರಣವಾಗುವ ಘಟನೆಗಳನ್ನು ಸಹ ಒಳಗೊಂಡಿರುತ್ತದೆ. ಇವುಗಳನ್ನು ಹೊಣೆಗಾರಿಕೆಯ ವಿಮೆಯಡಿ ಕವರ್ ಮಾಡಲಾಗುತ್ತದೆ.

ಅಂತಿಮವಾಗಿ ವ್ಯಕ್ತಿಯ ಮೇಲೆ ಪರಿಣಾಮ ಬೀರುವ ವೈಯಕ್ತಿಕ ಅಪಾಯಗಳು ಎಂದು ಹೇಳಲಾಗುವ ಅಪಾಯಗಳಿವೆ, ಇವುಗಳನ್ನು ಸಾಮಾನ್ಯ ವಿಮೆಯಿಂದ ಕೂಡ ಕವರ್ ಮಾಡಬಹುದು.

**ಉದಾಹರಣೆ**

ಅಪಘಾತದ ಕಾರಣದಿಂದಾಗಿ ಅನುಭವಿಸುವ ನಷ್ಟದಿಂದ ರಕ್ಷಿಸುವ ಅಪಘಾತ ವಿಮೆ.

---

**a) ನಿಖರವಾಗಿ ಜೀವ ವಿಮೆಯು ಸಾಮಾನ್ಯ ವಿಮೆಯಿಂದ ಹೇಗೆ ಭಿನ್ನವಾಗಿದೆ?**

| ಸಾಮಾನ್ಯ ವಿಮೆ | ಜೀವವಿಮೆ |
|---|---|
| • **ನಷ್ಟ ಪರಿಹಾರ:** ವೈಯಕ್ತಿಕ ಅಪಘಾತ ವಿಮೆಯನ್ನು ಹೊರತುಪಡಿಸಿ ಸಾಮಾನ್ಯ ವಿಮಾ ಪಾಲಿಸಿಗಳು, ಸಾಮಾನ್ಯವಾಗಿ ನಷ್ಟ ಪರಿಹಾರದ ಒಪ್ಪಂದಗಳಾಗಿವೆ ಅಂದರೆ, ಬೆಂಕಿಯಂತಹ ಘಟನೆಯ ನಂತರ, ವಿಮಾಗಾರರು ಸಂಭವಿಸಿದ ನಷ್ಟದ ನಿಖರವಾದ ಮೊತ್ತವನ್ನು ನಿರ್ಣಯಿಸುತ್ತಾರೆ ಮತ್ತು ನಷ್ಟದ ಮೊತ್ತವನ್ನು ಮಾತ್ರ ಸರಿದೂಗಿಸುತ್ತಾರೆ - ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲ. | • **ಭರವಸೆ:** ಜೀವ ವಿಮಾ ಪಾಲಿಸಿಗಳು ಭರವಸೆಯ ಒಪ್ಪಂದಗಳಾಗಿವೆ. <br> • ಮರಣ ಸಂಭವಿಸಿದ ಸಂದರ್ಭದಲ್ಲಿ ಪಾವತಿಸಬೇಕಾದ ಪ್ರಯೋಜನದ ಮೊತ್ತವನ್ನು ಒಪ್ಪಂದದ ಆರಂಭದಲ್ಲಿಯೇ ನಿರ್ಧರಿಸಲಾಗಿರುತ್ತದೆ <br> • ವಿಮಾದಾರರು ಮರಣಿಸಿದಾಗ ಅವರ ನಾಮನಿರ್ದೇಶಿತರಿಗೆ ಅಥವಾ ಫಲಾನುಭವಿಗಳಿಗೆ ಭರವಸೆಯ ಮೊತ್ತವನ್ನು ನೀಡಲಾಗುತ್ತದೆ |
| • **ಅವಧಿ:** ಸಾಮಾನ್ಯವಾಗಿ ಅಲ್ಪಾವಧಿಯ ಅಥವಾ ಒಂದು ವರ್ಷದ ನಂತರ ನವೀಕರಿಸಬಹುದಾದ | • ಕೆಲವು ಪ್ರತಿ ವರ್ಷ ನವೀಕರಿಸಬಹುದಾದ ಒಪ್ಪಂದಗಳು ಸಹ ಪ್ರಚಲಿತವಾಗಿದ್ದರೂ |

| | |
|---|---|
| ಆಧಾರದ ಮೇಲಿನ ಒಪ್ಪಂದವಾಗಿದೆ | ಸಾಮಾನ್ಯವಾಗಿ ದೀರ್ಘಕಾಲದ ಒಪ್ಪಂದವಾಗಿದೆ |
| • **ಅನಿಶ್ಚಿತತೆ:** ಸಾಮಾನ್ಯ ವಿಮಾ ಒಪ್ಪಂದಗಳಲ್ಲಿ, ಸಂಬಂಧಪಟ್ಟ ಅಪಾಯ ಘಟನೆಯು ಅನಿಶ್ಚಿತವಾಗಿರುತ್ತದೆ. ಮನೆಯು ಬೆಂಕಿಯನ್ನು ಹಿಡಿಯುವುದು ಅಥವಾ ಕಾರು ಅಪಘಾತಕ್ಕೆ ಒಳಗಾಗುವ ಬಗ್ಗೆ ಯಾರೂ ನಿಶ್ಚಿತವಾಗಿರಲಾರರು. | • ಒಬ್ಬ ವ್ಯಕ್ತಿ ಹುಟ್ಟಿದ ನಂತರ ಸಾವು ನಿಶ್ಚಿತವಾಗಿದೆ ಎಂಬ ಬಗ್ಗೆ ಪ್ರಶ್ನೆಯೇ ಇಲ್ಲ. ಅನಿಶ್ಚಿತತೆ ಕೇವಲ ಸಮಯದ ಬಗ್ಗೆ ಇರುತ್ತದೆ. ಜೀವ ವಿಮೆಯು ಅಕಾಲಿಕ ಸಾವಿನ ಅಪಾಯದ ವಿರುದ್ಧ ರಕ್ಷಣೆಯನ್ನು ನೀಡುತ್ತದೆ. |
| • **ಸಂಭವನೀಯತೆಯಲ್ಲಿ ಹೆಚ್ಚಳ:** ಬೆಂಕಿ ಅಥವಾ ಭೂಕಂಪದಂತಹ ಸಾಮಾನ್ಯ ವಿಮಾ ಅಪಾಯಗಳ ಸಂದರ್ಭದಲ್ಲಿ, ಸಮಯದೊಂದಿಗೆ ಘಟನೆ ನಡೆಯುತ್ತಿರುವ ಸಂಭವನೀಯತೆಯು ಹೆಚ್ಚಾಗುವುದಿಲ್ಲ. | • ಜೀವ ವಿಮೆಯಲ್ಲಿ ವಯಸ್ಸಿನೊಂದಿಗೆ ಸಾವಿನ ಸಂಭವನೀಯತೆಯು ಹೆಚ್ಚಾಗುತ್ತದೆ. |

### b) ಜೀವವಿಮಾ ಅಪಾಯದ ಸ್ವರೂಪ

ವಯಸ್ಸಿನೊಂದಿಗೆ ಸಾವಿನ ಸಂಭವನೀಯತೆಯು ಹೆಚ್ಚಾಗುತ್ತದೆಯಾದ್ದರಿಂದ, ಯುವ ವಯಸ್ಸಿನವರಿಗೆ ಮತ್ತು ಕಡಿಮೆ ಕಂತು ಮತ್ತು ಹೆಚ್ಚು ವಯಸ್ಸಿನವರಿಗೆ ಹೆಚ್ಚಿನ ಕಂತುಗಳನ್ನು ವಿಧಿಸಲಾಗುತ್ತದೆ. ಒಂದು ಸಂದರ್ಭದಲ್ಲಿ ಆರೋಗ್ಯಕರವಾಗಿದ್ದ ವಯಸ್ಕ ವ್ಯಕ್ತಿಗಳು ಹಿಂತೆಗೆದುಕೊಳ್ಳುವಲ್ಲಿ ಒಲವು ತೋರಿದರೆ, ಅನಾರೋಗ್ಯಕರ ಸದಸ್ಯರು ಯೋಜನೆಯಲ್ಲಿ ಉಳಿಯುತ್ತಾರೆ. ಪರಿಣಾಮವಾಗಿ ವಿಮಾ ಕಂಪನಿಗಳು ಗಂಭೀರ ಸಮಸ್ಯೆಗಳನ್ನು ಎದುರಿಸುವರು. ಜನರಿಗೆ ಕೈಗೆಟುಕುವ ಜೀವ ವಿಮಾ ಪಾಲಿಸಿಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳು ಮಟ್ಟದ ಕಂತುಗಳ ಬೆಳವಣಿಗೆಗೆ ಕಾರಣವಾದವು.(ಒಂದೇ ಪ್ರಮಾಣದ ಕಂತುಗಳು)

### c) ಮಟ್ಟದ ಕಂತುಗಳ

ವಯಸ್ಸಿನೊಂದಿಗೆ ಹೆಚ್ಚಾಗದೇ ಮತ್ತು ಒಪ್ಪಂದದ ಸಂಪೂರ್ಣ ಅವಧಿಯಲ್ಲಿ ಸ್ಥಿರವಾಗಿರುವ ಮಟ್ಟದ ಕಂತನ್ನು ನಿಗದಿಪಡಿಸಲಾಗಿದೆ. ಇದರರ್ಥ ಆರಂಭಿಕ ವರ್ಷಗಳಲ್ಲಿ ಸಂಗ್ರಹಿಸಿದ ಕಂತುಗಳು ಚಿಕ್ಕ ವಯಸ್ಸಿನಲ್ಲಿ ಸಾಯುವವರ ಸಾವಿನ ಕ್ಲೇಮ್ ಗಳನ್ನು ಸರಿದೂಗಿಸಲು ಬೇಕಾದ ಮೊತ್ತಕ್ಕಿಂತ ಹೆಚ್ಚಾಗಿರುತ್ತವೆ, ಆದರೆ ನಂತರದ ವರ್ಷಗಳಲ್ಲಿ ಸಂಗ್ರಹಿಸಿದ ಕಂತುಗಳು ಹೆಚ್ಚಿನ ವಯಸ್ಸಿನಲ್ಲಿ ಸಾಯುವವರ ಕ್ಲೇಮ್ ಗಳನ್ನು ಪೂರೈಸಲು ಬೇಕಾಗುವುದಕ್ಕಿಂತ ಕಡಿಮೆಯಾಗಿರುತ್ತವೆ. ಮಟ್ಟದ ಕಂತು ಈ ಎರಡರ ಸರಾಸರಿಯಾರುತ್ತದೆ. ಆರಂಭಿಕ ವಯಸ್ಸಿನಲ್ಲಿ ಸಂಗ್ರಹಿಸಿದ ಹೆಚ್ಚುವರಿ ಕಂತುಗಳು ನಂತರದ ವಯಸ್ಸಿನಲ್ಲಿಯ ಕಂತುಗಳ ಕೊರತೆಯನ್ನು ಸರಿದೂಗಿಸುತ್ತದೆ. ಮಟ್ಟದ ಕಂತಿನ ವೈಶಿಷ್ಟ್ಯವನ್ನು ಈ ಕೆಳಗೆ ವಿವರಿಸಲಾಗಿದೆ.

**ಚಿತ್ರ 2: ಮಟ್ಟದ ಕಂತು**




ಜೀವ ವಿಮಾ ಒಪ್ಪಂದಗಳು **10, 20** ಅಥವಾ ಅದಕ್ಕಿಂತಲೂ ಹೆಚ್ಚು ವರ್ಷಗಳವರೆಗೆ ನಡೆಯುವ ದೀರ್ಘಾವಧಿಯ ವಿಮಾ ಒಪ್ಪಂದಗಳಾಗಿರುವುದರಿಂದ ಮಟ್ಟದ ಕಂತುಗಳು ಅಗತ್ಯವಿರುತ್ತದೆ. ಸಾಮಾನ್ಯವಾಗಿ ಅಲ್ಪಾವಧಿಯ ಮತ್ತು ವಾರ್ಷಿಕವಾಗಿ ಮುಕ್ತಾಯಗೊಳ್ಳುವ ಸಾಮಾನ್ಯ ವಿಮಾ ಪಾಲಿಸಿಗಳಲ್ಲಿ ಮಟ್ಟದ ಕಂತುಗಳ ಪರಿಕಲ್ಪನೆಯು ಉದ್ಭವಿಸುವುದಿಲ್ಲ.

**ಉದಾಹರಣೆ**

ಪ್ರತಿ ವರ್ಷ ವಿಮಾದಾರರ ವಯಸ್ಸು ಹೆಚ್ಚಾಗುವುದರಿಂದ ಪಾಲಿಸಿಯ ಅವಧಿಯಲ್ಲಿ ಮರಣದ ಸಂಭವನೀಯತೆ (ಸಾವಿನ ಸಂಭವನೀಯತೆ)ಯ ಆಧಾರದ ಮೇಲೆ ವಿಮಾದಾರರು ಮಟ್ಟದ ಕಂತು ದರವನ್ನು ಲೆಕ್ಕಹಾಕುತ್ತಾರೆ. ಒಮ್ಮೆ ನಿರ್ಧರಿಸಿದ ದರವು ಪಾಲಿಸಿಯ ಸಂಪೂರ್ಣ ಅವಧಿವರೆಗೆ ಸ್ಥಿರವಾಗಿರುತ್ತದೆ.

### d) ಅಪಾಯ ಸಂಚಯನದ ತತ್ವ ಮತ್ತು ಜೀವ ವಿಮೆ

ಈಗಾಗಲೇ ಸಂಚಯನ ಮತ್ತು ಪರಸ್ಪರತೆಯ ತತ್ವವನ್ನು ನಾವು ಚರ್ಚಿಸಿದ್ದೇವೆ. ಜೀವ ವಿಮೆಯಲ್ಲಿ ಸಂಚಯನದ ತತ್ವವು ಎರಡು ಪ್ರಮುಖ ಪಾತ್ರಗಳನ್ನು ವಹಿಸುತ್ತದೆ.

i. **ತಮ್ಮ ಅಕಾಲಿಕ ಮರಣದ ಪರಿಣಾಮವಾಗಿ ಉಂಟಾಗಬಹುದಾದ ಆರ್ಥಿಕ ನಷ್ಟದ ವಿರುದ್ಧ ಇದು ರಕ್ಷಣೆಯನ್ನು ನೀಡುತ್ತದೆ**. ಜೀವ ವಿಮಾ ಒಪ್ಪಂದವನ್ನು ಖರೀದಿಸಿದ ಅನೇಕರ ಕೊಡುಗೆಗಳನ್ನು ಸಂಗ್ರಹಿಸಿ ನಿಧಿಯನ್ನು ರಚಿಸುವ ಮೂಲಕ ಇದು ಸಾಧ್ಯವಾಗುತ್ತದೆ.

### e) ಜೀವವಿಮಾ ಒಪ್ಪಂದ

ಪಾಲಿಸಿ ದಾಖಲೆಯು ವಿಮಾ ಒಪ್ಪಂದದ ಪುರಾವೆಯಾಗಿದ್ದು ವಿಮೆಯ ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ವಿವರಿಸುತ್ತದೆ.

ಒಪ್ಪಂದವು ಜೀವ ವಿಮಾ ಪಾಲಿಸಿಯ ವಿಮಾ ಮೊತ್ತವನ್ನು ಸ್ಪಷ್ಟಪಡಿಸುತ್ತದೆ. ಒಪ್ಪಂದದ ಮೂಲಕ ವಿಮಾ ಮೊತ್ತವು ಖಾತರಿಪಡಿಸುವುದರಿಂದ ಜೀವ ವಿಮೆಯನ್ನು ಆರ್ಥಿಕ ಭದ್ರತೆ ಎಂದು ಪರಿಗಣಿಸಲಾಗುತ್ತದೆ. ಜೀವ ವಿಮೆಯನ್ನು ಸಮರ್ಥವಾಗಿ ಮತ್ತು ಸುರಕ್ಷಿತವಾಗಿ ನಿರ್ವಹಿಸಲಾಗುತ್ತದೆ; ಬಲವಾಗಿ ನಿಯಂತ್ರಿಸಲಾಗುತ್ತದೆ ಮತ್ತು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆಯೆಂದು ಖಾತರಿ ಸೂಚಿಸುತ್ತದೆ.

ಅಪಾಯದ ಕವರ್ ಮತ್ತು ಉಳಿತಾಯ ಎರಡನ್ನೂ ಜೀವ ವಿಮಾ ಒಪ್ಪಂದಗಳು ಒಳಗೊಂಡಿರುವುದರಿಂದ, ಅವುಗಳನ್ನು ಸಾಮಾನ್ಯವಾಗಿ ಹಣಕಾಸಿನ ಉತ್ಪನ್ನಗಳೊಂದಿಗೆ ಹೋಲಿಸಲಾಗುತ್ತದೆ. ಅವುಗಳನ್ನು ರಕ್ಷಣೆಗಿಂತ ಸಂಪತ್ತನ್ನು ಹಿಡಿದಿಟ್ಟುಕೊಳ್ಳುವ ಮಾರ್ಗವನ್ನಾಗಿಯೂ ನೋಡಲಾಗುತ್ತದೆ. ಅನೇಕ ಜೀವ ವಿಮಾ ಉತ್ಪನ್ನಗಳು ವಾಸ್ತವವಾಗಿ ಹೆಚ್ಚಿನ ನಗದು ಮೌಲ್ಯ ಅಥವಾ ಉಳಿತಾಯ ಘಟಕವನ್ನು ಹೊಂದಿದ್ದು ವ್ಯಕ್ತಿಯ ಉಳಿತಾಯದ ಗಮನಾರ್ಹ ಭಾಗವನ್ನು ರೂಪಿಸಬಹುದು. ವಿಮಾ ಕಂಪನಿಯಿಂದ ಕೇವಲ ಅವಧಿ ವಿಮೆಯನ್ನು ಖರೀದಿಸುವುದು ಮತ್ತು ಹೆಚ್ಚಿನ ಆದಾಯವನ್ನು ನೀಡುವ ಸಾಧನಗಳಲ್ಲಿ ಉಳಿದ ಕಂತು ಹಣವನ್ನು ಹೂಡಿಕೆ ಮಾಡುವುದು ಹೆಚ್ಚು ಉತ್ತಮವೆಂದು ಕೆಲವರು ವಾದಿಸುತ್ತಾರೆ.

ಸಾಂಪ್ರದಾಯಿಕ ನಗದು ಮೌಲ್ಯದ ವಿಮಾ ಒಪ್ಪಂದಗಳ ಪರವಾಗಿ ಮತ್ತು ವಿರುದ್ಧವಾದ ವಾದಗಳನ್ನು ನಾವು ಪರಿಗಣಿಸೋಣ.

**a) ಪ್ರಯೋಜನಗಳು**

i. ವಿಮೆಯು ಒಪ್ಪಂದದ ಅವಧಿಯೊಂದಿಗೆ ಹೆಚ್ಚಾಗಬಹುದಾದ ಕನಿಷ್ಟ ದರದ ಲಾಭದ ಖಾತರಿಯನ್ನು ನೀಡುವ **ಸುರಕ್ಷಿತ ಮತ್ತು ಭದ್ರ**ವಾದ ಹೂಡಿಕೆಯೆಂದು ಐತಿಹಾಸಿಕವಾಗಿ ಸಾಬೀತಾಗಿದೆ.

ii. ಕಂತಿನ ಪಾವತಿಯಲ್ಲಿಯ ನಿಯಮಿತತೆಗೆ ಉಳಿತಾಯದ ಕಡ್ಡಾಯ ಯೋಜನೆಯ ಅಗತ್ಯವಿರುತ್ತದೆ ಮತ್ತು ಉಳಿತಾಯದ **ಶಿಸ್ತಿ**ನಲ್ಲಿ ಪ್ರತಿಫಲಿಸುತ್ತದೆ.

iii. ವಿಮಾಗಾರರು ವೃತ್ತಿಪರ ಹೂಡಿಕೆ ನಿರ್ವಹಣೆಯನ್ನು ನೋಡಿಕೊಳ್ಳುತ್ತಾರೆ ಮತ್ತು ಈ ಜವಾಬ್ದಾರಿಯಿಂದ **ವ್ಯಕ್ತಿ**ಯನ್ನು **ಮುಕ್ತಗೊಳಿಸುತ್ತಾರೆ.**

iv. ವಿಮೆಯು **ನಗದಿನಲ್ಲಿ ಪರಿವರ್ತಿಸುವಲ್ಲಿಯ ಸುಲಭತೆಯನ್ನು ಒದಗಿಸುತ್ತದೆ**. ವಿಮಾದಾರರು ಪಾಲಿಸಿಯ ಮೇಲೆ ಸಾಲವನ್ನು ತೆಗೆದುಕೊಳ್ಳಬಹುದು ಅಥವಾ ಪಾಲಿಸಿ ಶರಣಾಗತಿಯನ್ನು ಮಾಡಿ ಅದನ್ನು ನಗದಾಗಿ ಪರಿವರ್ತಿಸಬಹುದು.

v. ನಗದು ಮೌಲ್ಯ ಪ್ರಕಾರದ ಜೀವ ವಿಮೆ ಮತ್ತು ವರ್ಷಾಶನದ ಪ್ರಕಾರಗಳೆರಡೂ ಕೆಲವು **ಆದಾಯ ತೆರಿಗೆ ಪ್ರಯೋಜನಗಳನ್ನು** ಹೊಂದಬಹುದು.

vi. ಸಾಮಾನ್ಯವಾಗಿ ವಿಮಾದಾರರ ದಿವಾಳಿತನ ಅಥವಾ ಮರಣದ ಸಂದರ್ಭದಲ್ಲಿ, ವಿಮೆಯು **ಸಾಲಗಾರರ ಕ್ಲೇಮ್** ಗಳಿಂದ ಸುರಕ್ಷಿತವಾಗಿರಬಹುದು.

**b) ಅನಾನುಕೂಲತೆಗಳು**

i. ವಿಮೆಯು ತುಲನಾತ್ಮಕವಾಗಿ ಸ್ಥಿರ ಮತ್ತು ಅಚಲವಾದ ಆದಾಯವನ್ನು ನೀಡುವುದರಿಂದ, ಬೆಲೆ ಏರಿಕೆ/ಹಣದುಬ್ಬರದಿಂದ ಇದು ಗಂಭೀರವಾಗಿ ಪರಿಣಾಮ ಹೊಂದಬಹುದು.

ii. ಜೀವ ವಿಮಾ ಪಾಲಿಸಿಗಳ ಹಿಂದಿನ ವರ್ಷಗಳಲ್ಲಿ ಸಂಗ್ರಹವಾದ ನಗದು ಮೌಲ್ಯದ ಮೊತ್ತವನ್ನು ಹೆಚ್ಚಿನ ಜಾಹಿರಾತು ಮತ್ತು ಇತರ ಆರಂಭಿಕ ವೆಚ್ಚಗಳು ಕಡಿಮೆ ಮಾಡುತ್ತದೆ.

iii. ಇತರ ಹಣಕಾಸು ಸಾಧನಗಳಿಗಿಂತ ಖಾತರಿಯ ಇಳುವರಿಯು ಕಡಿಮೆಯಿರಬಹುದು

**ನಿಮ್ಮನ್ನು ಪರೀಕ್ಷಿಸಿ 1**

ವೈವಿಧ್ಯೀಕರಣವು ಹಣಕಾಸಿನ ಮಾರುಕಟ್ಟೆಗಳಲ್ಲಿನ ಅಪಾಯಗಳನ್ನು ಹೇಗೆ ಕಡಿಮೆ ಮಾಡುತ್ತದೆ?

I. ಬಹು ಮೂಲಗಳಿಂದ ಹಣವನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಒಂದೇ ಸ್ಥಳದಲ್ಲಿ ಹೂಡಿಕೆ ಮಾಡುವುದು

II. ವಿವಿಧ ಸ್ವತ್ತುಗಳ ವರ್ಗಗಳಲ್ಲಿ ಹಣವನ್ನು ಹೂಡಿಕೆ ಮಾಡುವುದು

III. ಹೂಡಿಕೆಗಳ ನಡುವಿನ ಸಮಯದ ವ್ಯತ್ಯಾಸವನ್ನು ನಿರ್ವಹಿಸುವುದು

IV. ಸುರಕ್ಷಿತ ಸ್ವತ್ತುಗಳಲ್ಲಿ ಹೂಡಿಕೆಯನ್ನು ಮಾಡುವುದು

**ಸಾರಾಂಶ**

**a)** ಆಸ್ತಿಯು ಮೌಲ್ಯ ಅಥವಾ ಲಾಭವನ್ನು ನೀಡುವ ಒಂದು ರೀತಿಯ ಸ್ವತ್ತಾಗಿದೆ.

**b)** ಎಚ್ ಎಲ್ ವಿ ಪರಿಕಲ್ಪನೆಯು ಮಾನವ ಜೀವ ಆದಾಯವನ್ನು ಗಳಿಸುವ ಒಂದು ರೀತಿಯ ಆಸ್ತಿ ಅಥವಾ ಸ್ವತ್ತು ಎಂದು ಪರಿಗಣಿಸುತ್ತದೆ. ಇದು ವ್ಯಕ್ತಿಯ ಭವಿಷ್ಯದಲ್ಲಿಯ ನಿರೀಕ್ಷಿತ ನಿವ್ವಳ ಗಳಿಕೆಯ ಆಧಾರದ ಮೇಲೆ ಮಾನವ ಜೀವದ ಮೌಲ್ಯವನ್ನು ಅಳೆಯುತ್ತದೆ.

**c)** ಮಟ್ಟದ ಕಂತು ವಯಸ್ಸಿನೊಂದಿಗೆ ಹೆಚ್ಚಾಗದೇ ಒಪ್ಪಂದದ ಸಂಪೂರ್ಣ ಅವಧಿಯಲ್ಲಿ ಸ್ಥಿರವಾಗಿರುವ ನಿಗದಿಪಡಿಸಲಾದ ಕಂತಾಗಿರುತ್ತದೆ.

**d)** ಹಣಕಾಸಿನ ಮಾರುಕಟ್ಟೆಗಳಲ್ಲಿನ ಅಪಾಯವನ್ನು ಕಡಿಮೆ ಮಾಡಲು ಪರಸ್ಪರತೆಯು ಒಂದು ಪ್ರಮುಖ ಮಾರ್ಗವಾಗಿದ್ದು, ಇನ್ನೊಂದು ವೈವಿಧ್ಯೀಕರಣವಾಗಿದೆ.

**e)** ಜೀವ ವಿಮೆಯು ಕಠಿಣ ನಿಯಂತ್ರಣ ಮತ್ತು ಕಟ್ಟುನಿಟ್ಟಾದ ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆಯೆಂದು ಜೀವ ವಿಮಾ ಒಪ್ಪಂದದಲ್ಲಿನ ಖಾತ್ರಿಯ ಅಂಶವು ಸೂಚಿಸುತ್ತದೆ.

## ಪ್ರಮುಖ ಪದಗಳು

1. ಆಸ್ತಿ
2. ಮಾನವ ಜೀವದ ಮೌಲ್ಯ
3. ಮಟ್ಟದ ಕಂತು
4. ಪರಸ್ಪರತೆ
5. ವೈವಿಧ್ಯೀಕರಣ

## ನಿಮ್ಮನ್ನು ಪರೀಕ್ಷಿಸಿಯ ಉತ್ತರಗಳು

ಉತ್ತರ 1 - ಸರಿಯಾದ ಉತ್ತರ II ಆಗಿದೆ.

# ಅಧ್ಯಾಯ L-02

# ಆರ್ಥಿಕ ಯೋಜನೆ

**ಅಧ್ಯಾಯ ಪರಿಚಯ**

ಈ ಹಿಂದಿನ ಅಧ್ಯಾಯಗಳಲ್ಲಿ ನಾವು ಜೀವ ವಿಮೆ ಮತ್ತು ಆರ್ಥಿಕ ರಕ್ಷಣೆಯನ್ನು ಒದಗಿಸುವಲ್ಲಿ ಅದರ ಪಾತ್ರವನ್ನು ಚರ್ಚಿಸಿದ್ದೇವೆ. ತಮ್ಮ ವರ್ತಮಾನದ ಮತ್ತು ಭವಿಷ್ಯದಲ್ಲಿಯ ವಿವಿಧ ಅಗತ್ಯಗಳನ್ನು ಪೂರೈಸಲು ತಮ್ಮ ಆದಾಯ ಮತ್ತು ಸಂಪತ್ತನ್ನು ನಿಯೋಜಿಸಬಯಸುವ ವ್ಯಕ್ತಿಗಳ ಕಾಳಜಿಗಳಲ್ಲಿ ಭದ್ರತೆಯು ಕೇವಲ ಒಂದಾಗಿದೆ. "ವೈಯಕ್ತಿಕ ಆರ್ಥಿಕ ಯೋಜನೆ"ಯ ವಿಶಾಲ ಸಂದರ್ಭದಲ್ಲಿ ಜೀವ ವಿಮೆಯನ್ನು ಅರ್ಥೈಸಿಕೊಳ್ಳಬೇಕು. ಈ ಅಧ್ಯಾಯದ ಉದ್ದೇಶವು ಆರ್ಥಿಕ ಯೋಜನೆಯ ವಿಷಯವನ್ನು ಪರಿಚಯಿಸುವುದಾಗಿದೆ.

**ಕಲಿಕೆಯ ಫಲಿತಾಂಶಗಳು**

A. ಆರ್ಥಿಕ ಯೋಜನೆ ಮತ್ತು ವೈಯಕ್ತಿಕ ಜೀವನ ಚಕ್ರ

B. ಆರ್ಥಿಕ ಯೋಜನೆ

C. ಆರ್ಥಿಕ ಯೋಜನೆ - ಪ್ರಕಾರಗಳು

## A. ಆರ್ಥಿಕ ಯೋಜನೆ ಮತ್ತು ವೈಯಕ್ತಿಕ ಜೀವನ ಚಕ್ರ

### 1. ಆರ್ಥಿಕ ಯೋಜನೆ ಎಂದರೇನು ?

ನಮ್ಮಲ್ಲಿ ಹೆಚ್ಚಿನವರು ನಮ್ಮ ಜೀವನದ ಬಹುಪಾಲು ಭಾಗವನ್ನು ಹಣವನ್ನು ಗಳಿಸುವ ಕೆಲಸದಲ್ಲೇ ಖರ್ಚು ಮಾಡುತ್ತಾರೆ. ಆರ್ಥಿಕ ಯೋಜನೆಯು ಹಣವು ನಮ್ಮ ಸಲುವಾಗಿ ಕೆಲಸ ಮಾಡುವಂತೆ ಮಾಡುವ ಒಂದು ಉತ್ತಮ ಮಾರ್ಗವಾಗಿದೆ.

### ವ್ಯಾಖ್ಯಾನ

ಹಣಕಾಸಿನ ಯೋಜನೆಯು ಒಬ್ಬರ ಜೀವನದ ಗುರಿಗಳನ್ನು ಗುರುತಿಸುವ ಪ್ರಕ್ರಿಯೆಯಾಗಿದ್ದು, ಈ ಗುರಿಗಳನ್ನು ಹಣಕಾಸಿನ ಗುರಿಗಳಾಗಿ ಪರಿವರ್ತಿಸುವುದು ಮತ್ತು ಆ ಗುರಿಗಳನ್ನು ಸಾಧಿಸಲು ಒಬ್ಬರ ಹಣಕಾಸಿನ ನಿರ್ವಹಣೆ ಮಾಡುವುದಾಗಿದೆ.

ಹಣಕಾಸಿನ ಯೋಜನೆಯು ಅನಿರೀಕ್ಷಿತವಾಗಿರಬಹುದಾದ ವರ್ತಮಾನ ಮತ್ತು ಭವಿಷ್ಯದ ಅಗತ್ಯಗಳನ್ನು ಪೂರೈಸಲು ಮಾರ್ಗಸೂಚಿಯನ್ನು ಸಿದ್ಧಪಡಿಸುವುದನ್ನು ಒಳಗೊಂಡಿರುತ್ತದೆ. ಕಡಿಮೆ ಚಿಂತೆಯೊಂದಿಗೆ ಜೀವನವನ್ನು ನಿರ್ಮಿಸುವಲ್ಲಿ ಇದು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಎಚ್ಚರಿಕೆಯಿಂದ ಮಾಡಲಾದ ಯೋಜನೆಯು ಒಬ್ಬರ ಆದ್ಯತೆಗಳನ್ನು ಹೊಂದಿಸಲು ಮತ್ತು ವಿವಿಧ ಗುರಿಗಳನ್ನು ಸಾಧಿಸಲು ಕೆಲಸ ಮಾಡುತ್ತದೆ.

**ಚಿತ್ರ 1 ಗುರಿಗಳ ಪ್ರಕಾರಗಳು**




i. ಗುರಿಗಳು ಅಲ್ಪಾವಧಿಯದ್ದಾಗಿರಬಹುದು: ಎಲ್ ಸಿ ಡಿ ಟಿವಿ ಸೆಟ್ ಖರೀದಿಸುವುದು ಅಥವಾ ಕುಟುಂಬಕ್ಕಾಗಿ ರಜೆಯನ್ನು ತೆಗೆದುಕೊಳ್ಳುವುದು.

ii. ಅವು ಮಧ್ಯಮ ಅವಧಿಯದ್ದಾಗಿರಬಹುದು: ಮನೆಯನ್ನು ಖರೀದಿಸುವುದು ಅಥವಾ ವಿದೇಶದಲ್ಲಿ ವಿಹಾರಕ್ಕಾಗಿ ತೆರಳುವುದು.

iii. ದೀರ್ಘಾವಧಿಯ ಗುರಿಗಳು: ತಮ್ಮ ಮಗುವಿನ ಶಿಕ್ಷಣ ಅಥವಾ ಮದುವೆ ಅಥವಾ ನಿವೃತ್ತಿಯ ನಂತರದ ಸಿದ್ಧತೆಯನ್ನು ಒಳಗೊಂಡಿರಬಹುದು

## 2. ವ್ಯಕ್ತಿಯ ಜೀವನ ಚಕ್ರ

ಒಬ್ಬ ವ್ಯಕ್ತಿಯು ಹುಟ್ಟಿದ ದಿನದಿಂದ ಅವನ / ಅವಳ ಮರಣದ ದಿನದವರೆಗೆ, ಅವನು / ಅವಳು ಜೀವನದಲ್ಲಿ ವಿವಿಧ ಹಂತಗಳನ್ನು ಹಾದು ಹೋಗುತ್ತಾರೆ, ಈ ಸಮಯದಲ್ಲಿ ಅವನು / ಅವಳು ಅನೇಕ ಪಾತ್ರಗಳ ಸರಣಿಯನ್ನು ನಿರ್ವಹಿಸುವ ನಿರೀಕ್ಷೆಯಿರುತ್ತದೆ ಈ ಹಂತಗಳನ್ನು ಕೆಳಗೆ ನೀಡಲಾದ ರೇಖಾಚಿತ್ರದಲ್ಲಿ ವಿವರಿಸಲಾಗಿದೆ.

**ಚಿತ್ರ 2 ಆರ್ಥಿಕ ಜೀವನ ಚಕ್ರ**




ಜೀವನದ ಹಂತಗಳು ಮತ್ತು ಆದ್ಯತೆಗಳು

a) **ವಿದ್ಯಾರ್ಥಿ (ವಯಸ್ಸು 20 -25 ರವರೆಗೆ):** ಒಬ್ಬರು ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ವೃದ್ಧಿಸುವ ಮೂಲಕ ತನ್ನ ಭವಿಷ್ಯಕ್ಕಾಗಿ ತಯಾರಿ ನಡೆಸುತ್ತಿರುವ ಹಂತ. ತಮ್ಮ ಶಿಕ್ಷಣಕ್ಕೆ ಆರ್ಥಿಕ ಒದಗಿಸಲು ಹಣದ ಅಗತ್ಯವಿರುತ್ತದೆ. ಉದಾಹರಣೆಗೆ, ವೈದ್ಯಕೀಯ ಅಥವಾ ನಿರ್ವಹಣೆ(ಮ್ಯಾನೇಜ್ ಮೆಂಟ್)ಯ ಶಿಕ್ಷಣಕ್ಕಾಗಿ ಶುಲ್ಕದ ಹೆಚ್ಚಿನ ವೆಚ್ಚವನ್ನು ಪೂರೈಸುವುದು.

b) **ಗಳಿಸುವವ (25 ರಿಂದ):** ಒಬ್ಬರು ಉದ್ಯೋಗವನ್ನು ಕಂಡುಕೊಂಡಾಗ ಮತ್ತು ಬಹುಶಃ ಅವನ ಅಥವಾ ಅವಳ ಅಗತ್ಯಗಳನ್ನು ಪೂರೈಸಲು ಸಾಕಷ್ಟು ಸಂಪಾದಿಸುತ್ತಿರುವಾಗ ಮತ್ತು ಸ್ವಲ್ಪ ಹೆಚ್ಚುವರಿಯನ್ನು ಉಳಿಸಲು ಶಕ್ಯವಾದಾಗ. ಕೌಟುಂಬಿಕ ಜವಾಬ್ದಾರಿಗಳಿರುತ್ತವೆ ಮತ್ತು ತಕ್ಷಣದ ಭವಿಷ್ಯದಲ್ಲಿ ಉದ್ಭವಿಸಬಹುದಾದ ಅಗತ್ಯತೆಗಳನ್ನು ಪೂರೈಸಲು ಹಣವನ್ನು ಹೊಂದಲು ಅವರು ಉಳಿತಾಯ ಮತ್ತು ಹೂಡಿಕೆಯನ್ನು ಸಹ ಮಾಡಬಹುದು. ಉದಾಹರಣೆಗೆ, ಒಬ್ಬ ಯುವಕ ಮನೆ(ಹೌಸಿಂಗ್) ಸಾಲವನ್ನು ತೆಗೆದುಕೊಳ್ಳುತ್ತಾನೆ ಮತ್ತು ಮನೆಯಲ್ಲಿ ಹೂಡಿಕೆ ಮಾಡುತ್ತಾನೆ.

c) **ಜೊತೆಗಾರ (28 - 30 ಕ್ಕೆ ಮದುವೆಯಾದ ಮೇಲೆ):** ಇದು ಒಬ್ಬರು ಮದುವೆಯಾಗಿ ತಮ್ಮದೇ ಆದ ಕುಟುಂಬವನ್ನು ಹೊಂದಿರುವ ಹಂತವಾಗಿದೆ. ಇದು ಸ್ವಂತ ಮನೆ, ಬಹುಶಃ ಕಾರು,

ದೀರ್ಘಭಾಳಿಕೆಯ ವಸ್ತುಗಳು, ಮಕ್ಕಳ ಭವಿಷ್ಯದ ಯೋಜನೆಗಳು ಇತ್ಯಾದಿಗಳಂತಹ ಹೊಸ ಅಗತ್ಯಗಳನ್ನು ಸೃಷ್ಟಿಸುತ್ತದೆ.

d) **ಪೋಷಕರು (28 ರಿಂದ 35 ರವರೆಗೆ):** ಒಬ್ಬರು ಒಂದು ಅಥವಾ ಹೆಚ್ಚಿನ ಮಕ್ಕಳ ಪೋಷಕರಾಗುವ ವರ್ಷಗಳು. ಒಬ್ಬರು ಈಗ ಅವರ ಆರೋಗ್ಯ ಮತ್ತು ಶಿಕ್ಷಣದ ಬಗ್ಗೆ ಚಿಂತಿಸಬೇಕಾಗಿದೆ - ಅವರನ್ನು ಉತ್ತಮ ಶಾಲೆಗಳಿಗೆ ಸೇರಿಸುವುದು ಇತ್ಯಾದಿ.

e) **ಒದಗಿಸುವವರು(ವಯಸ್ಸು 35 ರಿಂದ 55):** ಮಕ್ಕಳು ಹದಿಹರೆಯದವರಾಗಿ ಬೆಳೆದ ಮತ್ತು ಅವರ ಪ್ರೌಢಶಾಲೆ ಮತ್ತು ಕಾಲೇಜು ವರ್ಷಗಳನ್ನು ಒಳಗೊಂಡಿರುವ ಹಂತ. ಪ್ರತಿಯೊಬ್ಬರು ತಮ್ಮ ಮಕ್ಕಳು ಜೀವನದ ಸವಾಲುಗಳನ್ನು ಎದುರಿಸಲು ಅವರನ್ನು ಅರ್ಹರನ್ನಾಗಿ ಮಾಡಲು ಬೇಕಾಗುವ ಶಿಕ್ಷಣದ ಹೆಚ್ಚಿನ ವೆಚ್ಚದ ಬಗ್ಗೆ ಕಾಳಜಿ ವಹಿಸುತ್ತಾರೆ. ಉದಾಹರಣೆಗೆ, ಐದು ವರ್ಷಗಳವರೆಗೆ ನಡೆಯುವ ವೈದ್ಯಕೀಯ ಅಭ್ಯಾಸಕ್ರಮಕ್ಕಾಗಿ ಹಣಕಾಸು ಒದಗಿಸಲು ಹೊಂದಿಸಬೇಕಾದ ಮೊತ್ತವನ್ನು ಪರಿಗಣಿಸಿ. ಅನೇಕ ಭಾರತೀಯ ಮನೆಗಳಲ್ಲಿ, ಹೆಣ್ಣು ಮಕ್ಕಳ ಮದುವೆ ಮತ್ತು ನಿಶ್ಚಿತಾರ್ಥಕ್ಕೆ ಮಾಡಬೇಕಾಗುವ ಪೂರ್ವಸಿದ್ಧತೆಯು ಕಾಳಜಿಯ ಒಂದು ವಿಷಯವಾಗಿದೆ. ವಾಸ್ತವವಾಗಿ, ಇಂದು ಹೆಚ್ಚಿನ ಭಾರತೀಯ ಕುಟುಂಬಗಳಿಗೆ ಮದುವೆ ಮತ್ತು ಮಕ್ಕಳ ಶಿಕ್ಷಣಗಳು ಉಳಿತಾಯದ ಪ್ರಮುಖ ಉದ್ದೇಶವಾಗಿವೆ.

f) **ಖಾಲಿ ಮನೆಯಲ್ಲಿರುವವ(ಮಕ್ಕಳು ಹೊರಹೋಗಿದ್ದಾರೆ) (ವಯಸ್ಸು 55 ರಿಂದ 65):** 'ಖಾಲಿ ಮನೆಯಲ್ಲಿರುವವ(ಎಂಪ್ಟಿ ನೆಸ್ಟರ್)' ಎಂಬ ಪದವು ಸಂತತಿಯು ಗೂಡ[ಮನೆ]ನ್ನು ಖಾಲಿ ಬಿಟ್ಟು ಹಾರಿಹೋಗಿದೆ ಎಂದು ಸೂಚಿಸುತ್ತದೆ. ಇದು ಮಕ್ಕಳು ಮದುವೆಯಾಗಿರುವ ಮತ್ತು ಕೆಲವೊಮ್ಮೆ ಕೆಲಸಕ್ಕಾಗಿ ಬೇರೆ ಸ್ಥಳಗಳಿಗೆ ಪೋಷಕರನ್ನು ಬಿಟ್ಟು ವಲಸೆ ಹೋಗಿರುವ ಅವಧಿಯಾಗಿದೆ. ಈ ಹಂತದಲ್ಲಿ ಆಶಾದಾಯಕವಾಗಿ, ಒಬ್ಬರು ತಮ್ಮ ಹೊಣೆಗಾರಿಕೆಗಳನ್ನು [ಹೌಸಿಂಗ್ ಲೋನ್ ಮತ್ತು ಇತರ ಅಡಮಾನಗಳಂತಹ] ಪೂರ್ತಿಗೊಳಿಸಿರುತ್ತಾರೆ ಮತ್ತು ನಿವೃತ್ತಿಗಾಗಿ ನಿಧಿಯನ್ನು ನಿರ್ಮಿಸಿದ್ದಾನೆ. ಇದು ಬಿಪಿ ಮತ್ತು ಮಧುಮೇಹದಂತಹ ಕಾಯಿಲೆಗಳು ಪ್ರಕಟಗೊಳ್ಳಲು ಮತ್ತು ಒಬ್ಬರನ್ನು ಪೀಡಿಸಲು ಪ್ರಾರಂಭಿಸುವ ಸಹ ಅವಧಿಯಾಗಿದೆ. ಈ ಹಂತದಲ್ಲಿ ಜೀವನ. ಆರೋಗ್ಯ ರಕ್ಷಣೆ, ಆರ್ಥಿಕ ಸ್ವಾತಂತ್ರ್ಯ ಮತ್ತು ಆದಾಯದ ಭದ್ರತೆಗಳು ಬಹಳ ಮುಖ್ಯವಾಗುತ್ತವೆ.

g) **ನಿವೃತ್ತಿ - ಜೀವನದ ಸಂಧ್ಯೆಯ ವರ್ಷಗಳು (ವಯಸ್ಸು 60 ಮತ್ತು ಅದಕ್ಕಿಂತ ಹೆಚ್ಚಿನ):** ಸಕ್ರಿಯ ಕೆಲಸದಿಂದ ನಿವೃತ್ತರಾಗಿದ್ದಾರೆ ಮತ್ತು ಜೀವನದ ಅಗತ್ಯಗಳನ್ನು ಪೂರೈಸಲು ತಮ್ಮ ಉಳಿತಾಯವನ್ನು ಖರ್ಚು ಮಾಡುವ ವಯಸ್ಸು. ಇಬ್ಬರೂ ಜೀವಂತವಾಗಿರುವವರೆಗೆ ಪತಿ ಮತ್ತು ಪತ್ನಿಯ ಜೀವನದ ಅಗತ್ಯಗಳೆಡೆಗೆ ಗಮನವಿರುತ್ತದೆ. ಆರೋಗ್ಯ ಸಮಸ್ಯೆಗಳು, ಸಾಕಷ್ಟು ಆದಾಯ ಮತ್ತು ಒಂಟಿತನದ ಬಗ್ಗೆ ಚಿಂತಿಸುತ್ತಾರೆ. ಇದು ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಹವ್ಯಾಸವನ್ನು ಅನುಸರಿಸುವುದು ಅಥವಾ ಪ್ರವಾಸ ಅಥವಾ ತೀರ್ಥಯಾತ್ರೆಗೆ ಹೋಗುವಂತಹ ಕನಸು ಕಂಡ ಆದರೆ ಸಾಧಿಸಲು ಸಾಧ್ಯವಾಗದ ಅನೇಕ ವಿಷಯಗಳನ್ನು

ಆನಂದಿಸಲು ಪ್ರಯತ್ನಿಸುವ ಅವಧಿಯಾಗಿದೆ. ಒಬ್ಬರು ಆಕರ್ಷಕವಾಗಿ ಅಥವಾ ಬಡತನದಲ್ಲಿ ವೃದ್ಧರಾಗುತ್ತಾರೆಯೇ ಎಂಬುವುದು ಈ ವರ್ಷಗಳಿಗಾಗಿ ಅವರು ಎಷ್ಟು ಪೂರ್ವಸಿದ್ಧತೆಯನ್ನು ಮಾಡಿದ್ದಾರೆಯೆಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ನಾವು ಈ ಮೇಲೆ ನೋಡುವಂತೆ, ಆರ್ಥಿಕ ಜೀವನ ಚಕ್ರವು ಮೂರು ಹಂತಗಳನ್ನು ಹೊಂದಿದೆ: ವಿದ್ಯಾರ್ಥಿ ಅಥವಾ ಉದ್ಯೋಗ ಪೂರ್ವ ಹಂತ; ಕೆಲಸದ ಹಂತವು 18 ರಿಂದ 25 ವರ್ಷಗಳ ನಡುವೆ ಪ್ರಾರಂಭವಾಗುತ್ತದೆ ಮತ್ತು 35 ರಿಂದ 40 ವರ್ಷಗಳವರೆಗೆ ಇರುತ್ತದೆ; ಮತ್ತು ಒಬ್ಬರು ಕೆಲಸ ಮಾಡುವುದನ್ನು ನಿಲ್ಲಿಸಿದ ನಂತರ ನಿವೃತ್ತಿಯ ವರ್ಷಗಳು ಪ್ರಾರಂಭವಾಗುತ್ತವೆ.

**3. ಏಕೆ ಉಳಿತಾಯ ಮಾಡಬೇಕು ಮತ್ತು ವಿವಿಧ ಹಣಕಾಸು ಸ್ವತ್ತುಗಳನ್ನು ಏಕೆ ಖರೀದಿಸಬೇಕು?**

ಕಾರಣವೇನೆಂದರೆ, ಓರ್ವ ವ್ಯಕ್ತಿಯ ಜೀವನದ ಪ್ರತಿಯೊಂದು ಹಂತದಲ್ಲಿ, ನಿರ್ದಿಷ್ಟ ಪಾತ್ರವನ್ನು ನಿರ್ವಹಿಸಿದಾಗ, ಹಣವನ್ನು ಒದಗಿಸಬೇಕಾಗುವ ಹಲವಾರು ಅಗತ್ಯಗಳು ಉದ್ಭವಿಸುತ್ತವೆ.

**ಉದಾಹರಣೆ**

ಒಬ್ಬ ವ್ಯಕ್ತಿಯು ಮದುವೆಯಾಗಿ ತನ್ನದೇ ಆದ ಕುಟುಂಬವನ್ನು ಪ್ರಾರಂಭಿಸಿದಾಗ, ಅವರು ತಮ್ಮ ಸ್ವಂತ ಮನೆಯನ್ನು ಹೊಂದಬೇಕಾಗಬಹುದು. ಮಕ್ಕಳು ಬೆಳೆದಂತೆ ಅವರ ಉನ್ನತ ಶಿಕ್ಷಣಕ್ಕೆ ಹಣದ ಅವಶ್ಯಕತೆ ಇರುತ್ತದೆ. ಒಬ್ಬ ವ್ಯಕ್ತಿಯು ಮಧ್ಯವಯಸ್ಸನ್ನು ದಾಟಿದಂತೆ, ಆರೋಗ್ಯದ ವೆಚ್ಚಗಳನ್ನು ಪೂರೈಸಲು ಮತ್ತು ಮಕ್ಕಳ ಮೇಲೆ ಅವಲಂಬಿತರಾಗದೇ ಮತ್ತು ಹೊರೆಯಾಗದಂತೆ ನಿವೃತ್ತಿಯ ನಂತರದ ಉಳಿತಾಯವನ್ನು ಪೂರೈಸಲು ಹಣವನ್ನು ಹೊಂದುವ ಚಿಂತೆಯಿರುತ್ತದೆ. ಸ್ವಾತಂತ್ರ್ಯ ಮತ್ತು ಘನತೆಯಿಂದ ಬದುಕುವುದು ಮುಖ್ಯವಾಗಿರುತ್ತದೆ.

ಉಳಿತಾಯಗಳು - ಹೂಡಿಕೆ ಪ್ರಕ್ರಿಯೆಯು ಎರಡು ನಿರ್ಧಾರಗಳಿಂದ ಮಾಡಲ್ಪಟ್ಟಿದೆ ಎಂದು ಪರಿಗಣಿಸಬಹುದು.

i. **ಬಳಕೆಗಳ ಮುಂದೂಡಿಕೆ:** ವರ್ತಮಾನದ ಮತ್ತು ಭವಿಷ್ಯದ ಬಳಕೆಗಳ ನಡುವಿನ ಸಂಪನ್ಮೂಲಗಳ ಹಂಚಿಕೆ.

ii. ಕಡಿಮೆ ದ್ರವ್ಯತೆಯ ಆಸ್ತಿಗಳಿಗೆ ಬದಲಾಗಿ ದ್ರವ್ಯತೆ (ಅಥವಾ ತಾತ್ಕಾಲ ಕೊಳ್ಳುವ ಶಕ್ತಿ/ನಗದು ಪರಿವರ್ತನೆ) ಯೊಂದಿಗೆ ಅಗಲುವಿಕೆ. ಉದಾಹರಣೆಗೆ, ಜೀವ ವಿಮಾ ಪಾಲಿಸಿಯ ಖರೀದಿಯೆಂದರೆ ಕಡಿಮೆ ದ್ರವ್ಯತೆಯ ಒಪ್ಪಂದಕ್ಕೆ ಹಣವನ್ನು ವಿನಿಮಯ ಮಾಡಿಕೊಳ್ಳುವುದು ಎಂದರ್ಥಾಗಬಹುದು.

ಎರಡೂ ರೀತಿಯ ನಿರ್ಧಾರಗಳನ್ನು ಆರ್ಥಿಕ ಯೋಜನೆಯು ಒಳಗೊಂಡಿರುತ್ತದೆ. ಭವಿಷ್ಯಕ್ಕಾಗಿ ಉಳಿತಾಯ ಮಾಡಲು ಯೋಜನೆ ಮಾಡುವ ಅಗತ್ಯವಿದೆ ಮತ್ತು ಭವಿಷ್ಯದಲ್ಲಿ ಉದ್ಭವಿಸುವ ವಿವಿಧ ಅಗತ್ಯಗಳನ್ನು ಪೂರೈಸಲು ಸೂಕ್ತವಾದ ಸ್ವತ್ತುಗಳಲ್ಲಿ ಬುದ್ಧಿವಂತಿಕೆಯಿಂದ ಹೂಡಿಕೆ ಮಾಡಬೇಕು.

## 4. ವೈಯಕ್ತಿಕ ಅಗತ್ಯಗಳು

ಈ ಮೇಲೆ ಚರ್ಚಿಸಿದ ಜೀವನ ಚಕ್ರದ ಹಂತಗಳನ್ನು ನೋಡಲಾಗಿ, ಮೂರು ರೀತಿಯ ಅಗತ್ಯಗಳು ಉದ್ಭವಿಸಬಹುದು ಎಂದು ನಾವು ನೋಡಬಹುದು. ಇವು ಮೂರು ವಿಧದ ಹಣಕಾಸು ಉತ್ಪನ್ನಗಳನ್ನು ಸೃಷ್ಟಿಸುತ್ತವೆ.

### a) ಭವಿಷ್ಯದ ವಹಿವಾಟುಗಳನ್ನು ಸಕ್ರಿಯಗೊಳಿಸುವುದು

ಜೀವನ ಚಕ್ರದ ವಿವಿಧ ಹಂತಗಳಲ್ಲಿ ಉದ್ಭವಿಸಬಹುದಾದ ನಿರೀಕ್ಷಿತ ವೆಚ್ಚಗಳ ವ್ಯಾಪ್ತಿಯನ್ನು ಪೂರೈಸುವ ನಿಧಿಯಿಂದ ಮೊದಲ ಅಗತ್ಯತೆಗಳು ಉದ್ಭವಿಸುತ್ತವೆ. ಅಂತಹ ವಿಧದ ಎರಡು ಅಗತ್ಯಗಳಿವೆ:

i. **ನಿರ್ದಿಷ್ಟ ವಹಿವಾಟಿನ ಅಗತ್ಯತೆಗಳು:** ಸಂಪನ್ಮೂಲಗಳ ಬದ್ಧತೆಯ ಅಗತ್ಯವಿರುವ ನಿರ್ದಿಷ್ಟ ಜೀವನ ಘಟನೆಗಳಿಗೆ ಸಂಬಂಧಿಸಿದ ಅಗತ್ಯಗಳು. ಉದಾಹರಣೆಗೆ ಅವಲಂಬಿತರ ಉನ್ನತ ಶಿಕ್ಷಣ/ವಿವಾಹಕ್ಕಾಗಿ ಹೊಂದಾಣಿಕೆಯನ್ನು ಕಲ್ಪಿಸುವುದು; ಅಥವಾ ಮನೆ ಅಥವಾ ಬೆಲೆಬಾಳುವ ವಸ್ತುಗಳ ಖರೀದಿ.

ii. **ಸಾಮಾನ್ಯ ವಹಿವಾಟಿನ ಅಗತ್ಯಗಳು:** ಯಾವುದೇ ನಿರ್ದಿಷ್ಟ ಉದ್ದೇಶಗಳಿಗಾಗಿ ಮೀಸಲಾಗಿಡದೆ ಪ್ರಸ್ತುತ ಬಳಕೆಯಿಂದ ತೆಗೆದಿಡಲಾಗುವ ಮೊತ್ತಗಳು - ಜನಪ್ರಿಯವಾಗಿ ಇವುಗಳನ್ನು 'ಭವಿಷ್ಯದ ನಿಬಂಧನೆಗಳು' ಎಂದು ಕರೆಯಲಾಗುತ್ತದೆ.

### b) ಅನಿಶ್ಚಿತತೆಗಳನ್ನು ಪೂರೈಸುವುದು

ಅನಿಶ್ಚಿತತೆಗಳು ಜೀವನದ ಅನಿರೀಕ್ಷಿತ ಘಟನೆಗಳಾಗಿದ್ದು, ಅವುಗಳಿಗಾಗಿ ದೊಡ್ಡ ಮೊತ್ತದ ಹಣ ಬೇಕಾಗಬಹುದು. ಇವುಗಳನ್ನು ಪೂರೈಸಲು ಪೂರ್ವನಿಯೋಜಿತ ನಿಧಿಯ ಅಗತ್ಯವಿದ್ದು ಪ್ರಸ್ತುತ ಆದಾಯದಿಂದ ಪೂರೈಸಲಾಗುವುದಿಲ್ಲ. ಸಾವು ಮತ್ತು ಅಂಗವೈಕಲ್ಯ ಅಥವಾ ನಿರುದ್ಯೋಗದಂತಹ ಕೆಲವು ಘಟನೆಗಳು ಆದಾಯದ ನಷ್ಟಕ್ಕೆ ಕಾರಣವಾಗುತ್ತವೆ. ಬೆಂಕಿಯಂತಹ ಇತರ ಅನಿಶ್ಚಿತತೆಗಳು ಸಂಪತ್ತಿನ ನಷ್ಟಕ್ಕೆ ಕಾರಣವಾಗಬಹುದು.

ಇಂತಹ ಅಗತ್ಯಗಳು ಉಂಟಾಗುವ ಸಂಭವನೀಯತೆ ಕಡಿಮೆಯಾಗಿದ್ದರೂ ವೆಚ್ಚದ ಪ್ರಭಾವವು ಅಧಿಕವಾಗಿದ್ದರೆ ಅವುಗಳನ್ನು ವಿಮೆಯ ಮೂಲಕ ಪರಿಹರಿಸಬಹುದು. ಪರ್ಯಾಯವಾಗಿ ಒಂದು ದೊಡ್ಡ ಪ್ರಮಾಣದ ನಗದೀಕರಣ ಸುಲಭ ಸ್ವತ್ತುಗಳನ್ನು ಮೀಸಲು ಎಂದು ಹೊಂದಿಸುವ ಮೂಲಕ ಅವುಗಳನ್ನು ಪೂರೈಸಬಹುದು.

### c) ಸಂಪತ್ತು ಸಂಚಯನ

ಸಂಚಯನದ ಉದ್ದೇಶವು, ಸಂಪತ್ತನ್ನು ಸಂಗ್ರಹಿಸುವುದಕ್ಕಾಗಿ ಹೂಡಿಕೆ ಮಾಡುವ ಮತ್ತು ಮಾರುಕಟ್ಟೆಲ್ಲಿಯ ಅನುಕೂಲಕರ ಅವಕಾಶಗಳ ಲಾಭವನ್ನು ಪಡೆದುಕೊಳ್ಳುವ ವ್ಯಕ್ತಿಯ ಬಯಕೆಯನ್ನು ಸೂಚಿಸುತ್ತದೆ. ಹೂಡಿಕೆಯನ್ನು ಮಾಡುವಾಗ ಕೆಲವರು ಎಚ್ಚರಿಕೆಯ ವಿಧಾನವನ್ನು ಆಯ್ದುಕೊಳ್ಳಬಹುದು,

ಆದರೆ ಇನ್ನು ಕೆಲವರು ಹೆಚ್ಚಿನ ಲಾಭವನ್ನು ಗಳಿಸುವ ದೃಷ್ಟಿಯಿಂದ ಹೆಚ್ಚಿನ ಅಪಾಯಗಳನ್ನು ತೆಗೆದುಕೊಳ್ಳಲು ಸಿದ್ಧರಾಗಿರಬಹುದು. ಓರ್ವರ ಸಂಪತ್ತು ಅಥವಾ ಸಂಪತ್ತಿನ ಒಟ್ಟು ಮೌಲ್ಯವನ್ನು ಹೆಚ್ಚು ವೇಗವಾಗಿ ಹೆಚ್ಚಿಸಲು ಸಹಾಯ ಮಾಡುತ್ತದಾದ್ದರಿಂದ ಹೆಚ್ಚಿನ ಆದಾಯವು ಅಪೇಕ್ಷಣೀಯವಾಗಿದೆ. ಸಂಪತ್ತು ಸ್ವಾತಂತ್ರ್ಯ, ಉದ್ಯಮ, ಶಕ್ತಿ ಮತ್ತು ಪ್ರಭಾವದೊಂದಿಗೆ ಸಂಬಂಧವನ್ನು ಹೊಂದಿರುತ್ತದೆ.

## 5. ಆರ್ಥಿಕ ಉತ್ಪನ್ನಗಳು

ಮೇಲಿನ ಅಗತ್ಯಗಳ ಗುಂಪುಗಳಿಗನುಗುಣವಾಗಿ ಆರ್ಥಿಕ ಮಾರುಕಟ್ಟೆಯಲ್ಲಿ ಮೂರು ರೀತಿಯ ಉತ್ಪನ್ನಗಳಿವೆ:

| | |
|---|---|
| **ವಹಿವಾಟು ಉತ್ಪನ್ನಗಳು** | ಸರಿಯಾದ ಸಮಯ ಮತ್ತು ಪ್ರಮಾಣದಲ್ಲಿ ಸಾಕಷ್ಟು ಕೊಳ್ಳುವ ಶಕ್ತಿ (ನಗದೀಕರಣ ಸಾಧ್ಯತೆ)ಯನ್ನು ಹೊಂದಲು ಅನುವು ಮಾಡಿಕೊಡುವ ಬ್ಯಾಂಕ್ ಠೇವಣಿಗಳು ಮತ್ತು ಇತರ ಉಳಿತಾಯ ಸಾಧನಗಳು. |
| **ವಿಮೆಯಂತಹ ತುರ್ತು ಉತ್ಪನ್ನಗಳು** | ಅಕಸ್ಮಾತಾದ ಅನಿರೀಕ್ಷಿತ ಘಟನೆಗಳ ಸಂದರ್ಭದಲ್ಲಿ ಅನುಭವಿಸಬಹುದಾದ ದೊಡ್ಡ ಮೊತ್ತದ ನಷ್ಟಗಳ ವಿರುದ್ಧ ಇವು ರಕ್ಷಣೆಯನ್ನು ನೀಡುತ್ತವೆ. |
| **ಸಂಪತ್ತು ಸಂಚಯನ ಉತ್ಪನ್ನಗಳು** | ಷೇರುಗಳು ಮತ್ತು ಹೆಚ್ಚಿನ ಇಳುವರಿ ನೀಡುವ ಬಾಂಡ್ ಗಳು ಅಥವಾ ಭೌತಿಕ ಆಸ್ತಿಗಳು ಇಂತಹ ಉತ್ಪನ್ನಗಳ ಉದಾಹರಣೆಗಳಾಗಿವೆ. ಇಲ್ಲಿ ಹೂಡಿಕೆಯನ್ನು ಹೆಚ್ಚಿನ ಹಣವನ್ನು ಗಳಿಸುವ ಉದ್ದೇಶದಿಂದ ಮಾಡಲಾಗುತ್ತದೆ. |

ಸಾಮಾನ್ಯವಾಗಿ ಓರ್ವ ವ್ಯಕ್ತಿಯು ಮೇಲಿನ ಎಲ್ಲ ಅಗತ್ಯಗಳ ಮಿಶ್ರಣವನ್ನು ಹೊಂದಿರುತ್ತಾರೆ ಮತ್ತು ಹೀಗಾಗಿ ಎಲ್ಲ ಮೂರೂ ರೀತಿಯ ಉತ್ಪನ್ನಗಳನ್ನು ಹೊಂದಿರುವುದು ಅವಶ್ಯಕವಾಗಿರುತ್ತದೆ. ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಹೇಳಬಹುದು:

i. ಉಳಿತಾಯದ ಅವಶ್ಯಕತೆ - ನಗದು ಅವಶ್ಯಕತೆಗಳಿಗಾಗಿ

ii. ವಿಮೆ ಮಾಡುವ ಅವಶ್ಯಕತೆ - ಅನಿಶ್ಚಿತತೆಗಳ ವಿರುದ್ಧ

iii. ಹೂಡಿಕೆಯ ಅವಶ್ಯಕತೆ - ಸಂಪತ್ತು ಸಂಚಯನಕ್ಕೆ

## 6. ಅಪಾಯದ ವ್ಯಕ್ತಿಚಿತ್ರಣ ಮತ್ತು ಹೂಡಿಕೆಗಳು

ಓರ್ವ ವ್ಯಕ್ತಿಯು, ಯುವ ಸಂಪಾದನೆಗಾರ ಹಂತದಿಂದ ಮಧ್ಯವಯಸ್ಸಿನ ಕಡೆಗೆ ಮತ್ತು ನಂತರ ತಮ್ಮ ವೃತ್ತಿ ಜೀವನದ ಅಂತಿಮ ವರ್ಷಗಳೆಡೆಗೆ ಚಲಿಸುತ್ತಿರುವಂತೆ ಅವರ ಅಪಾಯದ ವ್ಯಕ್ತಿಚಿತ್ರಣ ಅಥವಾ ಅಪಾಯಗಳನ್ನು ತೆಗೆದುಕೊಳ್ಳುವ ದೃಷ್ಟಿಕೋನವೂ ಬದಲಾಗುತ್ತದೆ.

ಯುವಾವಸ್ಥೆಯಲ್ಲಿರುವಾಗ ಓರ್ವರು ಸಾಧ್ಯವಾದಷ್ಟು ಸಂಪತ್ತನ್ನು ಸಂಗ್ರಹಿಸಲು ಸಾಕಷ್ಟು ಆಕ್ರಮಣಕಾರಿ ಮತ್ತು ಅಪಾಯಗಳನ್ನು ತೆಗೆದುಕೊಳ್ಳಲು ಸಿದ್ಧರಾಗಿರಬಹುದು. ವರ್ಷಗಳು ಕಳೆದಂತೆ, ತಮ್ಮ ಹೂಡಿಕೆಯ ಬಗ್ಗೆ

ಹೆಚ್ಚು ವಿವೇಕಯುತ ಮತ್ತು ಜಾಗರೂಕರಾಗಬಹುದು. ತಮ್ಮ ಹೂಡಿಕೆಗಳನ್ನು ಸುರಕ್ಷಿತಗೊಳಿಸಲು ಮತ್ತು ಒಟ್ಟುಗೂಡಿಸಲು ಈಗ ಚಿಂತಿಸುತ್ತಿರುತ್ತಾರೆ.

ಕೊನೆಯದಾಗಿ, ಓರ್ವರು ನಿವೃತ್ತಿಯ ಸಮೀಪದಲ್ಲಿ ಹೆಚ್ಚು ಉಳಿತಾಯವಾದಿಯಾಗಬಹುದು. ನಿವೃತ್ತಿಯ ನಂತರದ ವರ್ಷಗಳಲ್ಲಿ ತಾವು ಖರ್ಚು ಮಾಡಲು ನಿಧಿಯನ್ನು ಹೊಂದುವ ಕಡೆಗೆ ಈಗ ಗಮನಹರಿಸುತ್ತಾರೆ. ತಮ್ಮ ಮಕ್ಕಳಿಗಾಗಿ ದೇಣಿಗೆ ನೀಡುವುದು, ದಾನಕ್ಕಾಗಿ ಕೊಡುಗೆ ನೀಡುವುದು ಇತ್ಯಾದಿಗಳ ಬಗ್ಗೆ ಸಹ ಯೋಚಿಸಬಹುದು.

**ಅಪಾಯದ ವ್ಯಕ್ತಿಚಿತ್ರಣಕ್ಕನುಗುಣವಾಗಿ ಒಬ್ಬರ ಹೂಡಿಕೆಯ ಶೈಲಿಯು ಸಹ ಬದಲಾಗುತ್ತದೆ.** ಇದನ್ನು ಕೆಳಗೆ ಸೂಚಿಸಲಾಗಿದೆ:

**ಚಿತ್ರ 3 : ಅಪಾಯದ ವ್ಯಕ್ತಿಚಿತ್ರಣ ಮತ್ತು ಹೂಡಿಕೆಯ ಶೈಲಿ**




**ನಿಮ್ಮನ್ನು ಪರೀಕ್ಷಿಸಿ 1**

ಈ ಕೆಳಗಿನವುಗಳಲ್ಲಿ ಯಾವುದು ಅನಿರೀಕ್ಷಿತ ಘಟನೆಗಳ ವಿರುದ್ಧ ನಿರ್ದಿಷ್ಟವಾದ ರಕ್ಷಣೆಯನ್ನು ನೀಡುತ್ತದೆ?

I. ವಿಮೆ

II. ಬ್ಯಾಂಕ್ ಸ್ಥಿರ ಠೇವಣಿಗಳಂತಹ ವಹಿವಾಟು ಉತ್ಪನ್ನಗಳು

III. ಷೇರುಗಳು

IV. ಸಾಲಪತ್ರಗಳು(ಡಿಬೆಂಚರ್ಸ್)

## B. ಆರ್ಥಿಕ ಯೋಜನೆಯ ಪಾತ್ರ

### 1. ಆರ್ಥಿಕ ಯೋಜನೆ

ಆರ್ಥಿಕ ಯೋಜನೆ ಎನ್ನುವುದು ಗ್ರಾಹಕರ ಪ್ರಸ್ತುತ ಮತ್ತು ಭವಿಷ್ಯದ ಅಗತ್ಯಗಳನ್ನು ಅವನ ಅಥವಾ ಅವಳ ಅಪಾಯದ ವ್ಯಕ್ತಿಚಿತ್ರಣ ಮತ್ತು ಆದಾಯದೊಂದಿಗೆ ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯಾಗಿದ್ದು ಸೂಕ್ತವಾದ ಆರ್ಥಿಕ ಉತ್ಪನ್ನಗಳನ್ನು ಶಿಫಾರಸು ಮಾಡುವ ಮೂಲಕ ವಿವಿಧ ನಿರೀಕ್ಷಿತ / ಅನಿರೀಕ್ಷಿತ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಯೋಜನೆಯನ್ನು ರೂಪಿಸುವುದಾಗಿದೆ.

ಆರ್ಥಿಕ ಯೋಜನೆಯ ಅಂಶಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ:

- ✓ ಹೂಡಿಕೆ - ಒಬ್ಬರ ಅಪಾಯವನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಆಧರಿಸಿ ಸ್ವತ್ತುಗಳನ್ನು ಹಂಚುವುದು,
- ✓ ಅಪಾಯ ನಿರ್ವಹಣೆ,
- ✓ ನಿವೃತ್ತಿಯ ಯೋಜನೆ
- ✓ ತೆರಿಗೆ ಮತ್ತು ಆಸ್ತಿ ಯೋಜನೆ, ಮತ್ತು
- ✓ ತಮ್ಮ ಅಗತ್ಯಗಳಿಗೆ ಹಣಕಾಸು ಒದಗಿಸುವುದು

ಸಂಕ್ಷಿಪ್ತವಾಗಿ ಹೇಳುವುದಾದರೆ ಆರ್ಥಿಕ ಯೋಜನೆಯು **360** ಡಿಗ್ರಿ ಯೋಜನೆಯನ್ನು ಒಳಗೊಂಡಿರುತ್ತದೆ.

**ಚಿತ್ರ 4: ಆರ್ಥಿಕ ಯೋಜನೆಯ ಅಂಶಗಳು**



## 2. ಆರ್ಥಿಕ ಯೋಜನೆಯ ಪಾತ್ರ

ಆರ್ಥಿಕ ಯೋಜನೆಯು ಹೊಸ ವಿಷಯವಲ್ಲ. ನಮ್ಮ ಪೂರ್ವಜರು ಇದನ್ನು ಸರಳ ರೂಪದಲ್ಲಿ ಅಭ್ಯಾಸ ಮಾಡಿದರು. ಆಗ ಹೂಡಿಕೆಯ ಆಯ್ಕೆಗಳು ಸೀಮಿತವಾಗಿದ್ದವು. ಕೆಲವು ದಶಕಗಳ ಹಿಂದೆ ಅನೇಕರು ಷೇರು(ಇಕ್ವಿಟಿ)ಗಳಲ್ಲಿಯ ಹೂಡಿಕೆಯನ್ನು ಜೂಜಿನಂತೆಯೇ ಪರಿಗಣಿಸುತ್ತಿದ್ದರು. ಹೆಚ್ಚಾಗಿ ಉಳಿತಾಯವನ್ನು ಬ್ಯಾಂಕ್ ಠೇವಣಿಗಳು, ಅಂಚೆ ಉಳಿತಾಯ ಯೋಜನೆಗಳು ಮತ್ತು ಇತರ ಸ್ಥಿರ ಆದಾಯದ ಸಾಧನಗಳಲ್ಲಿ ಹೂಡಿಕೆ ಮಾಡಲಾಗುತ್ತಿತ್ತು. ಇಂದು ನಮ್ಮ ಸಮಾಜ ಮತ್ತು ನಮ್ಮ ಗ್ರಾಹಕರು ಎದುರಿಸುತ್ತಿರುವ ಸವಾಲುಗಳು ಬಹಳ ವಿಭಿನ್ನವಾಗಿವೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ:

### i. ಅವಿಭಕ್ತ ಕುಟುಂಬದ ವಿಘಟನೆ

ಅವಿಭಕ್ತ ಕುಟುಂಬವು ತಂದೆ, ತಾಯಿ ಮತ್ತು ಮಕ್ಕಳನ್ನು ಒಳಗೊಂಡಿರುವ ವಿಭಕ್ತ ಕುಟುಂಬಕ್ಕೆ ದಾರಿ ಮಾಡಿಕೊಟ್ಟಿದೆ. ಈ ಕುಟುಂಬದ ಸಾಮಾನ್ಯ ಮುಖ್ಯಸ್ಥ ಮತ್ತು ಗಳಿಸುವ ಸದಸ್ಯರು ಸ್ವತಃ ತಮ್ಮ ಮತ್ತು ತಮ್ಮ ಹತ್ತಿರದ ಕುಟುಂಬವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ತಾವೇ ಹೊರಬೇಕಾಗುತ್ತದೆ. ಇದಕ್ಕಾಗಿ ವೃತ್ತಿಪರ ಆರ್ಥಿಕ ಯೋಜನೆ ಮಾಡುವವರಿಂದ ಸರಿಯಾದ ಯೋಜನೆ ಮತ್ತು ಸಲಹೆಯ ಅಗತ್ಯ ಬೇಕಾಗಬಹುದು.

### ii. ಬಹು ಹೂಡಿಕೆ ಆಯ್ಕೆಗಳು

ಪ್ರತಿಯೊಂದೂ ವಿಭಿನ್ನ ಮಟ್ಟದ ಅಪಾಯ ಮತ್ತು ಲಾಭವನ್ನು ನೀಡುವ ಹೆಚ್ಚಿನ ಸಂಖ್ಯೆಯ ಹೂಡಿಕೆ ಸಾಧನಗಳು ಇಂದು ಸಂಪತ್ತು ಸೃಷ್ಟಿಗಾಗಿ ಲಭ್ಯವಿರುತ್ತವೆ. ಹಣಕಾಸಿನ ಗುರಿಗಳನ್ನು ಸಾಧಿಸಲು, ಬುದ್ಧಿವಂತಿಕೆಯಿಂದ ಆಯ್ಕೆ ಮಾಡಬೇಕು ಮತ್ತು ತಮ್ಮ ಅಪಾಯವನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಆಧರಿಸಿ ಸರಿಯಾದ ಹೂಡಿಕೆಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಹಣಕಾಸಿನ ಯೋಜನೆಯು ಆಸ್ತಿಯ ಹಂಚಿಕೆಗೆ ಸಹಾಯ ಮಾಡುತ್ತದೆ.

### iii. ಬದಲಾಗುತ್ತಿರುವ ಜೀವನಶೈಲಿ

ತತ್ಕ್ಷಣದ ಆನಂದವು ಇಂದಿನ ನಿಲುವಾಗಿ ತೋರುತ್ತದೆ. ವ್ಯಕ್ತಿಗಳು ಆಧುನಿಕ ಮೊಬೈಲ್ ಫೋನ್‌ಗಳು, ಕಾರುಗಳು, ದೊಡ್ಡ ಮನೆಗಳು, ಪ್ರತಿಷ್ಠಿತ ಕ್ಲಬ್ ಗಳ ಸದಸ್ಯತ್ವಗಳು ಇತ್ಯಾದಿಗಳನ್ನು ಹೊಂದಲು ಬಯಸುತ್ತಾರೆ. ಈ ಆಸೆಗಳನ್ನು ಪೂರೈಸಲು, ಜನರು ಹೆಚ್ಚಾಗಿ ಸಾಲವನ್ನು ತೆಗೆದುಕೊಳ್ಳುತ್ತಾರೆ ಮತ್ತು ಉಳಿತಾಯ ಮಾಡಲು ಕಠಿಣವಾಗುತ್ತಿದ್ದಂತೆ, ತಮ್ಮ ಆದಾಯದ ಹೆಚ್ಚಿನ ಭಾಗವನ್ನು ಸಾಲಗಳನ್ನು ತೀರಿಸಲು ಖರ್ಚು ಮಾಡುತ್ತಾರೆ. ಹಣಕಾಸಿನ ಯೋಜನೆಯು ಒಬ್ಬರ ಪ್ರಸ್ತುತ ಜೀವನಮಟ್ಟವನ್ನು ಕಾಲಾನಂತರದಲ್ಲಿ ನವೀಕರಿಸಲು ಸಾಧ್ಯವಾಗುವಂತೆ ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸುವಂತೆ ವೆಚ್ಚವನ್ನು ಯೋಜನೆ ಮಾಡುವಲ್ಲಿ ಸಹಾಯ ಮಾಡುತ್ತದೆ.

iv. **ಹಣದುಬ್ಬರ/ಬೆಲೆ ಏರಿಕೆ**

ಹಣದುಬ್ಬರವು ಒಂದು ನಿರ್ದಿಷ್ಟ ಅವಧಿಯಲ್ಲಿ ಆರ್ಥಿಕತೆಯಲ್ಲಿಯ ಸರಕು ಮತ್ತು ಸೇವೆಗಳ ಬೆಲೆಗಳ ಸಾಮಾನ್ಯ ಮಟ್ಟದಲ್ಲಿ ಉಂಟಾಗುವ ಏರಿಕೆಯಾಗಿದೆ. ಇದು ಹಣದ ಮೌಲ್ಯದಲ್ಲಿಯ ಕುಸಿತಕ್ಕೆ ಕಾರಣವಾಗುತ್ತದೆ. ಪರಿಣಾಮವಾಗಿ, ಹಣದ ಕೊಳ್ಳುವ ಶಕ್ತಿಯು ಕಡಿಮೆಯಾಗುತ್ತದೆ. ನಿವೃತ್ತಿಯ ನಂತರ ಹಣದುಬ್ಬರವು ವಿಪತ್ತಿಯನ್ನುಂಟುಮಾಡುತ್ತದೆ. ಹಣಕಾಸಿನ ಯೋಜನೆಯು ಹಣದುಬ್ಬರವನ್ನು ವಿಶೇಷವಾಗಿ ನಂತರದ ವರ್ಷಗಳಲ್ಲಿ ಎದುರಿಸಲು ಸಜ್ಜುಗೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ.

v. **ಇತರ ತುರ್ತು ಪರಿಸ್ಥಿತಿಗಳು ಮತ್ತು ಅಗತ್ಯಗಳು**

ಹಣಕಾಸಿನ ಯೋಜನೆಯು ವೈದ್ಯಕೀಯ ತುರ್ತುಸ್ಥಿತಿಗಳು ಮತ್ತು ತೆರಿಗೆ ಹೊಣೆಗಾರಿಕೆಗಳಂತಹ ಹಲವಾರು ಇತರ ಅಗತ್ಯಗಳು ಮತ್ತು ಸವಾಲುಗಳನ್ನು ಪೂರೈಸಲು ವ್ಯಕ್ತಿಗಳಿಗೆ ಅನುವು ಮಾಡಿಕೊಡುತ್ತದೆ. ವ್ಯಕ್ತಿಗಳು ತಮ್ಮ ಸಂಪತ್ತು ಮತ್ತು ಆಸ್ತಿಗಳನ್ನು ಒಳಗೊಂಡಿರುವ ಆಸ್ತಿಯು ತಮ್ಮ ಮರಣದ ನಂತರ ತಮ್ಮ ಪ್ರೀತಿಪಾತ್ರರಿಗೆ ಸರಾಗವಾಗಿ ರವಾನಿಸಲ್ಪಡುವುದನ್ನು ಖಚಿತಪಡಿಸಿಕೊಳ್ಳುವ ಅವಶ್ಯಕತೆಯಿದೆ. ಒಬ್ಬರ ಜೀವಿತಾವಧಿಯಲ್ಲಿ ಮತ್ತು ತದನಂತರವೂ ದಾನ ಮಾಡುವ ಅಥವಾ ಕೆಲವು ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳನ್ನು ಪೂರೈಸುವ ಅಗತ್ಯಗಳಂತಹ ಇತರ ಅವಶ್ಯಕತೆಗಳೂ ಇರುತ್ತವೆ. ಈ ಎಲ್ಲ ಅಂಶಗಳನ್ನು ಸಾಧಿಸಲು ಆರ್ಥಿಕ ಯೋಜನೆಯು ಸಾಧನವಾಗಿದೆ.

3. **ಆರ್ಥಿಕ ಯೋಜನೆಯನ್ನು ಪ್ರಾರಂಭಿಸಲು ಸರಿಯಾದ ಸಮಯ ಯಾವುದು?**

**ಆರ್ಥಿಕ ಯೋಜನೆ** ಶ್ರೀಮಂತರಿಗೆ ಮಾತ್ರ ಮೀಸಲಾಗಿರುವುದಿಲ್ಲ. ವಾಸ್ತವವಾಗಿ, ಆದರ್ಶಪ್ರಾಯವಾಗಿ ಆರ್ಥಿಕ ಯೋಜನೆಯನ್ನು ಒಬ್ಬರ ಮೊದಲ ಸಂಬಳವನ್ನು ಗಳಿಸಿದ ಕೂಡಲೇ ಪ್ರಾರಂಭಿಸಬೇಕು. ಒಬ್ಬರು ಯಾವಾಗ ಯೋಜನೆಯನ್ನು ಪ್ರಾರಂಭಿಸಬೇಕು ಎಂದು ಹೇಳಲು ಯಾವುದೇ ಪ್ರಚೋದಕ ಅಂಶವಿರುವುದಿಲ್ಲ.

**ಆದಾಗ್ಯೂ ನಮಗೆ ಮಾರ್ಗದರ್ಶನ ನೀಡುವ ಒಂದು ಪ್ರಮುಖ ತತ್ವವಿದೆ - ನಮ್ಮ ಹೂಡಿಕೆಗಳ ಅವಧಿಯು ಹೆಚ್ಚಾದಷ್ಟು, ಅವುಗಳು ಹೆಚ್ಚು ಗುಣಿಸ್ಪಡುತ್ತವೆ.**

ಆದ್ದರಿಂದ, ಓರ್ವರು ಬೇಗನೆ ಪ್ರಾರಂಭಿಸಿದರೆ ಹೂಡಿಕೆಯು ಸಮಯದ ಗರಿಷ್ಠ ಲಾಭವನ್ನು ಪಡೆಯುತ್ತದೆ. ಅಲ್ಲದೇ, ಯೋಜನೆ ಶ್ರೀಮಂತ ವ್ಯಕ್ತಿಗಳಿಗೆ ಮಾತ್ರವಿರುವುದಿಲ್ಲ. ಇದು ಎಲ್ಲರಿಗೂ ಇರುತ್ತದೆ. ತಮ್ಮ ಆರ್ಥಿಕ ಗುರಿಗಳನ್ನು ಸಾಧಿಸಲು, ಶಿಸ್ತಿನ ವಿಧಾನವನ್ನು ಅನುಸರಿಸಬೇಕು. ಹಣಕಾಸಿನ ಯೋಜನೆಯೆಡೆಗೆ ಯೋಜನೆಯಿಲ್ಲದ, ದುಡುಕಿನ ಪ್ರವೃತ್ತಿಯು ವ್ಯಕ್ತಿಗಳಿಗೆ ಉಂಟಾಗುವ ಆರ್ಥಿಕ ಸಂಕಷ್ಟದ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

## ನಿಮ್ಮನ್ನು ಪರೀಕ್ಷಿಸಿ 2

ಆರ್ಥಿಕ  ಯೋಜನೆಯನ್ನು ಪ್ರಾರಂಭಿಸಲು ಉತ್ತಮ ಸಮಯ ಯಾವುದು?

I. ನಿವೃತ್ತಿಯ ನಂತರ

II. ಮೊದಲ ಸಂಬಳ ಸಿಕ್ಕ ಕೂಡಲೇ

III. ಮದುವೆಯಾದ ನಂತರ

IV. ಶ್ರೀಮಂತರಾದ ನಂತರವೇ

---

## C. ಆರ್ಥಿಕ  ಯೋಜನೆ - ಪ್ರಕಾರಗಳು

ಒಬ್ಬ ವ್ಯಕ್ತಿಯು ಮಾಡಬೇಕಾದ ವಿವಿಧ ರೀತಿಯ ಆರ್ಥಿಕ  ಯೋಜನೆಯ ಪ್ರಯತ್ನಗಳನ್ನು ಈಗ ನೋಡೋಣ.

**ಚಿತ್ರ 5: ಆರ್ಥಿಕ  ಯೋಜನೆ ಸಲಹಾ ಸೇವೆಗಳು**




ಒದಗಿಸಲ್ಪಡಬಹುದಾದ ವಿವಿಧ ಸಲಹಾ ಸೇವೆಗಳನ್ನು ಪರಿಗಣಿಸಿ. ಅಂತಹ ಆರು ಕ್ಷೇತ್ರಗಳಿದ್ದು ಅವುಗಳನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ

- ✓ ನಗದು ಯೋಜನೆ
- ✓ ಹೂಡಿಕೆ ಯೋಜನೆ
- ✓ ವಿಮಾ ಯೋಜನೆ
- ✓ ನಿವೃತ್ತಿ ಯೋಜನೆ
- ✓ ಆಸ್ತಿ ಯೋಜನೆ
- ✓ ತೆರಿಗೆ ಯೋಜನೆ

## 1. ನಗದು ಯೋಜನೆ

ನಗದು ಹರಿವುಗಳನ್ನು ನಿರ್ವಹಿಸುವುದರಲ್ಲಿ ಎರಡು ಉದ್ದೇಶಗಳಿರುತ್ತವೆ.

i. ಅನಿರೀಕ್ಷಿತ ಅಗತ್ಯಗಳನ್ನು ಪೂರೈಸಲು ನಗದೀಕರಣಸಾಧ್ಯ ಆಸ್ತಿಗಳ ಮೀಸಲನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದನ್ನು ಸೇರಿದಂತೆ ಆದಾಯ ಮತ್ತು ವೆಚ್ಚಗಳ ಹರಿವನ್ನು ನಿರ್ವಹಿಸುವುದು.

ii. ಬಂಡವಾಳ ಹೂಡಿಕೆಗಾಗಿ ಹೆಚ್ಚುವರಿ ನಗದು ಹಣವನ್ನು ವ್ಯವಸ್ಥಿತವಾಗಿ ರಚಿಸುವುದು ಮತ್ತು ನಿರ್ವಹಿಸುವುದು.

ನಗದು ಯೋಜನೆಯು ಹಲವಾರು ಹಂತಗಳನ್ನು ಒಳಗೊಂಡಿರುತ್ತದೆ. ಆಯವ್ಯಯ ಪತ್ರ( ಬಜೆಟ್)ವನ್ನು ಸಿದ್ಧಪಡಿಸಬೇಕು ಮತ್ತು ನಿಯಮಿತವಾದ ಮತ್ತು ಒಟ್ಟು ಮೊತ್ತದ ವೆಚ್ಚಗಳಾವುವು ಎಂಬುದನ್ನು ಪರಿಶೀಲಿಸಲು ತಮ್ಮ ಆದಾಯ ಮತ್ತು ವೆಚ್ಚದ ಹರಿವನ್ನು ವಿಶ್ಲೇಷಿಸಬೇಕು. ಸ್ಥಿರ ವೆಚ್ಚಗಳನ್ನು ಸುಲಭವಾಗಿ ನಿಯಂತ್ರಿಸಲು ಸಾಧ್ಯವಾಗದಿದ್ದರೂ, ಬದಲಾಗುವ ವೆಚ್ಚಗಳನ್ನು ಕಡಿಮೆ ಮಾಡಬಹುದು, ಮುಂದೂಡಬಹುದು ಮತ್ತು ನಿರ್ವಹಿಸಬಹುದು. ಇಡೀ ವರ್ಷದಲ್ಲಿ ಭವಿಷ್ಯದ ಮಾಸಿಕ ಆದಾಯ ಮತ್ತು ವೆಚ್ಚಗಳನ್ನು ಊಹಿಸುವುದು ಮತ್ತು ಈ ನಗದು ಹರಿವುಗಳನ್ನು ನಿರ್ವಹಿಸುವ ಯೋಜನೆಯನ್ನು ವಿನ್ಯಾಸಗೊಳಿಸುವುದು ಮುಂದಿನ ಹಂತವಾಗಿದೆ.

ಜಾಗರೂಕತೆಯಿಂದ ಆದಾಯವನ್ನು ಹೆಚ್ಚಿಸುವ ತಂತ್ರಗಳನ್ನು ವಿನ್ಯಾಸಗೊಳಿಸುವುದು ನಗದು ಯೋಜನೆ ಪ್ರಕ್ರಿಯೆಯ ಇನ್ನೊಂದು ಭಾಗವಾಗಿದೆ.

**ಉದಾಹರಣೆ**

ಓರ್ವರು ತಮ್ಮ ಬಾಕಿ ಇರುವ ಸಾಲಗಳನ್ನು ಪುನರ್‌ರಚಿಸಬಹುದು.

ಬಾಕಿ ಉಳಿದಿರುವ ಕ್ರೆಡಿಟ್ ಕಾರ್ಡ್ ಸಾಲಗಳನ್ನು ಏಕೀಕರಿಸುವ ಮತ್ತು ಕಡಿಮೆ ಬಡ್ಡಿಯ ಬ್ಯಾಂಕ್ ಸಾಲದ ಮೂಲಕ ಪಾವತಿಸುವ ಮೂಲಕ ಪೂರೈಸಬಹುದು.

ಹೆಚ್ಚಿನ ಆದಾಯವನ್ನು ಗಳಿಸುವಂತೆ ಹೂಡಿಕೆಗಳನ್ನು ಮರುಹಂಚಿಕೆ ಮಾಡಬಹುದು.

## 2. ವಿಮಾ ಯೋಜನೆ

ತಮ್ಮ ವೈಯಕ್ತಿಕ ಹಣಕಾಸಿನ ಗುರಿಗಳನ್ನು ಸಾಧಿಸುವುದನ್ನು ತಡೆಯುವಂತಹ ಕೆಲವು ಅಪಾಯಗಳಿಗೆ ವ್ಯಕ್ತಿಗಳು ಒಡ್ಡಿಕೊಂಡಿರುತ್ತಾರೆ. ಅಂತಹ ಅಪಾಯಗಳ ವಿರುದ್ಧ ಸಾಕಷ್ಟು ವಿಮೆಯನ್ನು ಒದಗಿಸುವ ಯೋಜನೆಯ ನಿರ್ಮಿತಿಯನ್ನು ವಿಮಾ ಯೋಜನೆಯು ಒಳಗೊಂಡಿರುತ್ತದೆ.

ವಿಮೆಯ ಅಗತ್ಯವೆಷ್ಟು ಎಂಬುದನ್ನು ಅಂದಾಜು ಮಾಡುವುದು ಮತ್ತು ಯಾವ ರೀತಿಯ ಪಾಲಿಸಿಯು ಸೂಕ್ತವಾಗಿರುತ್ತದೆ ಎಂಬುದನ್ನು ನಿರ್ಧರಿಸುವುದು ಇಲ್ಲಿಯ ಕೆಲಸವಾಗಿದೆ.

**i.** ಮನೆಯ ಕರ್ತೃ ವ್ಯಕ್ತಿಯ ಅಕಾಲಿಕ ಮರಣದ ಸಂದರ್ಭದಲ್ಲಿ ಅವಲಂಬಿತರ ಆದಾಯ ಮತ್ತು ವೆಚ್ಚದ ಅವಶ್ಯಕತೆಗಳನ್ನು ಅಂದಾಜು ಮಾಡುವ ಮೂಲಕ ಜೀವ ವಿಮೆಯನ್ನು ನಿರ್ಧರಿಸಬಹುದು.

**ii.** ಸಾಧ್ಯತೆಯಿರುವ ಯಾವುದೇ ಕೌಟುಂಬಿಕ ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ಉಂಟಾಗುವ ಆಸ್ಪತ್ರೆ ದಾಖಲಾತಿ ವೆಚ್ಚಗಳ ಪರಿಭಾಷೆಯಲ್ಲಿ ಆರೋಗ್ಯ ವಿಮೆಯ ಅವಶ್ಯಕತೆಗಳನ್ನು ನಿರ್ಣಯಿಸಬಹುದು.

**iii.** ಕೊನೆಯದಾಗಿ ತಮ್ಮ ಮನೆ/ವಾಹನ/ಕಾರ್ಖಾನೆ ಇತ್ಯಾದಿಗಳನ್ನು ನಷ್ಟದ ಅಪಾಯದಿಂದ ರಕ್ಷಿಸಲು ಅಗತ್ಯವಿರುವ ಕವರ್ ಪ್ರಕಾರ ಮತ್ತು ಪ್ರಮಾಣಕ್ಕೆ ಅನುಗುಣವಾಗಿ ತಮ್ಮ ಸ್ವತ್ತುಗಳ ವಿಮೆಯನ್ನು ಪರಿಗಣಿಸಬಹುದು.

### 3. ಹೂಡಿಕೆಯ ಯೋಜನೆ

ಹೂಡಿಕೆ ಮಾಡಲು ಒಂದೇ ಸರಿಯಾದ ಮಾರ್ಗವಿರುವುದಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಸೂಕ್ತತೆಯು ಬದಲಾಗುತ್ತದೆ. ಹೂಡಿಕೆ ಯೋಜನೆಯು ವ್ಯಕ್ತಿಯ ಅಪಾಯವನ್ನು ತೆಗೆದುಕೊಳ್ಳುವ ಸಾಮರ್ಥ್ಯ, ಹಣಕಾಸಿನ ಗುರಿಗಳು ಮತ್ತು ಆ ಗುರಿಗಳನ್ನು ಪೂರೈಸಲು ಲಭ್ಯವಿರುವ ಅವಧಿಯನ್ನಾಧರಿಸಿ ಅತ್ಯಂತ ಸೂಕ್ತವಾದ ಹೂಡಿಕೆ ಮತ್ತು ಆಸ್ತಿ ಹಂಚಿಕೆಯ ತಂತ್ರಗಳನ್ನು ನಿರ್ಧರಿಸುವ ಪ್ರಕ್ರಿಯೆಯಾಗಿದೆ.

#### a) ಹೂಡಿಕೆಯ ಮಾನದಂಡಗಳು

**ಚಿತ್ರ 6- ಹೂಡಿಕೆಯ ಮಾನದಂಡಗಳು**




ಹೂಡಿಕೆಯ ಕೆಲವು ಮಾನದಂಡಗಳನ್ನು ವ್ಯಾಖ್ಯಾನಿಸುವುದು ಇಲ್ಲಿ ಮೊದಲ ಹಂತವಾಗಿದೆ. ಅವುಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ:

i. **ಪ್ರತಿಫಲ/ಲಾಭಗಳು:** ಜನರು ತಮ್ಮ ಹಣವನ್ನು ಹೂಡಿಕೆ ಮಾಡುವಾಗ ನೋಡುವ ಪ್ರಮುಖ ನಿಯತಾಂಕ ಹೂಡಿಕೆಯ ಮೇಲಿನ ಲಾಭವಾಗಿದೆ. ಲಾಭದ ದರವು ಹೂಡಿಕೆಯಿಂದ ಒಬ್ಬರ ಸಂಪತ್ತು ಕಾಲಾಂತರದಲ್ಲಿ ಎಷ್ಟು ವೇಗವಾಗಿ ಬೆಳೆಯುತ್ತದೆ ಎಂಬುದನ್ನು ನಿರ್ಧರಿಸುತ್ತದೆ. 'ಪವರ್ ಆಫ್ ಕಾಂಪೌಂಡಿಂಗ್' ಅನ್ನು ಪರಿಗಣಿಸಿದಾಗ ಲಾಭದ ಪಾತ್ರವು ಹೆಚ್ಚಾಗಬಹುದು. ಉದಾಹರಣೆಗೆ, ಇಂದು **8%** ಬಡ್ಡಿ ದರದಲ್ಲಿ ರೂ **1000** ಹೂಡಿಕೆ ಮಾಡಿದರೆ, ಐದು ವರ್ಷಗಳ ಕೊನೆಯಲ್ಲಿ ರೂ **1469** ಮೊತ್ತ ಸಂಗ್ರಹವಾಗುತ್ತದೆ ಮತ್ತು **10** ವರ್ಷಗಳ ಕೊನೆಯಲ್ಲಿ ರೂ **2159** ಎರಡು ಪಟ್ಟಿಗಿಂತ ಹೆಚ್ಚಾಗುತ್ತದೆ. ಸಂಪತ್ತನ್ನು ಸಂಗ್ರಹಿಸಲು ಸಹಾಯ ಮಾಡುವ ನಿರೀಕ್ಷಿತ ಲಾಭವು ಹೂಡಿಕೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಅದೇ ಸಮಯದಲ್ಲಿ, ಹೆಚ್ಚಿನ ಲಾಭದ ದರಗಳು ಸಾಮಾನ್ಯವಾಗಿ ಹೆಚ್ಚಿನ ಮಟ್ಟದ ಅಪಾಯದೊಂದಿಗೆ ಇರಬಹುದೆಂದು ಗಮನಿಸಬೇಕು. ಲಾಭ ಮತ್ತು ಅಪಾಯಗಳ ನಡುವೆ ವ್ಯಾಪಾರ-ನಿಲ್ಲುವಿಕೆಯನ್ನು ಮಾಡಬೇಕು. ಇದು ವ್ಯಕ್ತಿಯ ಅಪಾಯದ ಸಹಿಷ್ಣುತೆಯನ್ನು ಅವಲಂಬಿಸಿರುತ್ತದೆ.

ii. **ಅಪಾಯ ಸಹಿಷ್ಣುತೆ:** ಹೂಡಿಕೆಯನ್ನು ಖರೀದಿಸಲು ಎಷ್ಟು ಅಪಾಯವನ್ನು ತೆಗೆದುಕೊಳ್ಳಲು ಸಿದ್ಧರಿದ್ದಾರೆ ಎಂಬುದರ ಅಳತೆ.

iii. **ಸಮಯದ ಕಾಲಾವಧಿ:** ಇದು ಹಣಕಾಸಿನ ಉದ್ದೇಶವನ್ನು ಸಾಧಿಸಲು ಲಭ್ಯವಿರುವ ಸಮಯವಾಗಿದೆ. ಸಮಯದ ಕಾಲಾವಧದಿ ಹೆಚ್ಚಿದ್ದಷ್ಟು, ಅಲ್ಪಾವಧಿಯ ಹೊಣೆಗಾರಿಕೆಯ ಬಗ್ಗೆ ಕಡಿಮೆ ಕಾಳಜಿ ಇರುತ್ತದೆ. ಹೆಚ್ಚಿನ ಆದಾಯವನ್ನು ಗಳಿಸುವ ಕಡಿಮೆ ನಗದೀಕರಣ ಸಾಧ್ಯ. ಆಸ್ತಿಗಳಲ್ಲಿ ದೀರ್ಘಾವಧಿಯ ಹೂಡಿಕೆಯನ್ನು ಮಾಡಬಹುದು.

iv. **ನಗದೀಕರಣ ಸಾಧ್ಯತೆ:** ಸೀಮಿತ ಹೂಡಿಕೆ ಸಾಮರ್ಥ್ಯ, ಅಥವಾ ಅನಿಶ್ಚಿತ ಆದಾಯ ಮತ್ತು ಖರ್ಚುಗಳ ಹರಿವನ್ನು ಹೊಂದಿರುವ ವ್ಯಕ್ತಿಗಳು ಅಥವಾ ನಿರ್ದಿಷ್ಟ ವೈಯಕ್ತಿಕ ಅಥವಾ ವ್ಯಾಪಾರದ ವೆಚ್ಚವನ್ನು ಪೂರೈಸಲು ಹೂಡಿಕೆ ಮಾಡುವವರು ನಗದೀಕರಣ ಸಾಧ್ಯತೆಯ ಬಗ್ಗೆ ಕಾಳಜಿ ವಹಿಸುತ್ತಾರೆ [ಇದು ಮೌಲ್ಯದ ನಷ್ಟವಿಲ್ಲದೆ ಹೂಡಿಕೆಯನ್ನು ನಗದು ರೂಪದಲ್ಲಿ ಪರಿವರ್ತಿಸುವ ಸಾಮರ್ಥ್ಯವನ್ನು ಸೂಚಿಸುತ್ತದೆ.]

v. **ಮಾರಾಟ ಸಾಧ್ಯತೆ:** ಒಂದು ಸ್ವತ್ತನ್ನು ಖರೀದಿಸುವ ಅಥವಾ ಮಾರಾಟ ಮಾಡುವಲ್ಲಿನ ಸುಲಭತೆ.

vi. **ವೈವಿಧ್ಯೀಕರಣ:** ಅಪಾಯಗಳನ್ನು ಕಡಿಮೆ ಮಾಡಲು ಓರ್ವರು ಮಾಡಬಹುದಾದ ಹೂಡಿಕೆಗಳಲ್ಲಿಯ ವೈವಿಧ್ಯತೆ ಅಥವಾ ಹರಡುವಿಕೆಯ ಪ್ರಮಾಣ.

vii. **ತೆರಿಗೆಗಳು:** ಅನೇಕ ಹೂಡಿಕೆಗಳು ಕೆಲವು ಆದಾಯ ತೆರಿಗೆ ಪ್ರಯೋಜನಗಳನ್ನು ನೀಡುತ್ತವೆ ಮತ್ತು ವಿವಿಧ ಹೂಡಿಕೆಗಳ ನಂತರದ ತೆರಿಗೆ ನಂತರದ ಲಾಭಗಳನ್ನು ಪರಿಗಣಿಸಲು ಕೆಲವರು ಬಯಸಬಹುದು.

**b) ಸೂಕ್ತ ಹೂಡಿಕೆ ಪ್ರಕಾರಗಳ ಆಯ್ಕೆ**

ಮೇಲಿನ ಮಾನದಂಡಗಳ ಆಧಾರದ ಮೇಲೆ ಸೂಕ್ತವಾದ ಹೂಡಿಕೆಯ ಪ್ರಕಾರಗಳ ಆಯ್ಕೆ ಮುಂದಿನ ಹಂತವಾಗಿದೆ. ನಿಜವಾದ ಆಯ್ಕೆಯು ಲಾಭ ಮತ್ತು ಅಪಾಯದ ಬಗ್ಗೆ ವ್ಯಕ್ತಿಯ ನಿರೀಕ್ಷೆಗಳನ್ನು ಅವಲಂಬಿಸಿರುತ್ತದೆ.

**ಭಾರತದಲ್ಲಿ ಹೂಡಿಕೆಯ ಉದ್ದೇಶಕ್ಕಾಗಿ ಪರಿಗಣಿಸಬಹುದಾದ ವಿವಿಧ ಉತ್ಪನ್ನಗಳಿವೆ. ಅವುಗಳು ಈ ಕೆಳಗಿನವುಗಳನ್ನೊಳಗೊಂಡಿವೆ:**

- ✓ ಬ್ಯಾಂಕ್ ಗಳು/ಸಾಂಸ್ಥಿಕ(ಕಾರ್ಪೊರೇಟ್) ಸ್ಥಿರ ಠೇವಣಿಗಳು,
- ✓ ಅಂಚೆ ಕಛೇರಿಯ ಸಣ್ಣ ಉಳಿತಾಯ ಯೋಜನೆಗಳು,
- ✓ ಷೇರುಗಳ ಸಾರ್ವಜನಿಕ ಸಂಚಿಕೆಗಳು,
- ✓ ಸಾಲಪತ್ರ(ಡಿಬೆಂಚರ್)ಗಳು ಅಥವಾ ಇತರ ಭದ್ರತೆ/ ಕರಾರುಪತ್ರಗಳು,
- ✓ ಮ್ಯೂಚುವಲ್ ಫಂಡ್ ಗಳು
- ✓ ಜೀವ ವಿಮಾ ಕಂಪನಿಗಳಿಂದ ನೀಡಲಾಗುವ ಯುನಿಟ್ ಲಿಂಕ್ಡ್ ಪಾಲಿಸಿಗಳು ಇತ್ಯಾದಿ.

**4. ನಿವೃತ್ತಿ ಯೋಜನೆ**

ಒಬ್ಬ ವ್ಯಕ್ತಿಯು ನಿವೃತ್ತಿಯ ನಂತರದ ತನ್ನ ಅಗತ್ಯಗಳನ್ನು ಪೂರೈಸಲು ಬೇಕಾಗಿರುವ ಹಣದ ಮೊತ್ತವನ್ನು ಮತ್ತು ಅವು ಗಳನ್ನು ಪೂರೈಸಲು ವಿವಿಧ ನಿವೃತ್ತಿ ಆಯ್ಕೆಗಳನ್ನು ನಿರ್ಧರಿಸುವ ಪ್ರಕ್ರಿಯೆಯಾಗಿದೆ. ನಿವೃತ್ತಿ ಯೋಜನೆ ಮೂರು ಹಂತಗಳನ್ನು ಒಳಗೊಂಡಿರುತ್ತದೆ

**a) ಸಂಚಯನ:** ಹೂಡಿಕೆಗಾಗಿ ಈ ಉದ್ದೇಶದಿಂದ ಹಣವನ್ನು ಮೀಸಲಿಡಲು ವಿವಿಧ ರೀತಿಯ ತಂತ್ರಗಳ ಮೂಲಕ ನಿಧಿಯ ಸಂಚಯನವನ್ನು ಮಾಡಲಾಗುತ್ತದೆ.

**b) ಸಂರಕ್ಷಣೆ:** ಮೂಲಮೊತ್ತವು ವ್ಯಕ್ತಿಯ ಕೆಲಸದ ವರ್ಷಗಳಲ್ಲಿ ಗರಿಷ್ಠಗೊಳಿಸಲಾಗುವಂತೆ ಒಬ್ಬರ ಹೂಡಿಕೆಗಳು ಕಠಿಣ ಪರಿಶ್ರಮಕ್ಕೆ ಒಳಪಡಿಸುವುದನ್ನು ಖಚಿತಪಡಿಸಿಕೊಳ್ಳಲು ಮಾಡಿದ ಪ್ರಯತ್ನಗಳನ್ನು ಸಂರಕ್ಷಣೆ ಸೂಚಿಸುತ್ತದೆ.

**c) ವಿತರಣೆ:** ನಿವೃತ್ತಿಯ ನಂತರ ಆದಾಯದ ಅಗತ್ಯಗಳನ್ನು ಪೂರೈಸಲು ನಿಧಿ ಅಥವಾ ಮೂಲ ಮೊತ್ತವನ್ನು ಹಿಂತೆಗೆದುಕೊಳ್ಳುವಿಕೆ / ವರ್ಷಾಶನ ಪಾವತಿಗಳಾಗಿ ಪರಿವರ್ತಿಸುವ ಅತ್ಯುತ್ತಮ ವಿಧಾನವನ್ನು ವಿತರಣೆಯು ಉಲ್ಲೇಖಿಸುತ್ತದೆ.

### 5. ಆಸ್ತಿ ಯೋಜನೆ

ಇದು ಒಬ್ಬರ ಮರಣದ ನಂತರ ಅವರ ಆಸ್ತಿಯ ಅಧಿಕಾರದ ಹಂಚಿಕೆ ಮತ್ತು ವರ್ಗಾವಣೆಯ ಯೋಜನೆಯಾಗಿದೆ. ನಾಮನಿರ್ದೇಶನ ಮತ್ತು ನಿಯೋಜನೆ ಅಥವಾ ಉಯಿಲಿನ ತಯಾರಿಕೆಯಂತಹ ವಿವಿಧ ಪ್ರಕ್ರಿಯೆಗಳಿರುತ್ತವೆ. ಒಬ್ಬರ ಆಸ್ತಿ ಮತ್ತು ಸ್ವತ್ತುಗಳು ಸರಾಗವಾಗಿ ಹಂಚಿಕೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅವರು ಮರಣಿಸಿದ ನಂತರ ಅವರ ಇಚ್ಛೆಗನುಗುಣವಾಗಿ ಬಳಸಿಕೊಳ್ಳುವುದು ಮೂಲ ಕಲ್ಪನೆಯಾಗಿದೆ.

### 6. ತೆರಿಗೆ ಯೋಜನೆ

ಅಸ್ತಿತ್ವದಲ್ಲಿರುವ ತೆರಿಗೆ ಕಾನೂನುಗಳಿಂದ ಗರಿಷ್ಠ ತೆರಿಗೆ ಲಾಭವನ್ನು ಹೇಗೆ ಪಡೆಯುವುದು ಮತ್ತು ಆದಾಯ, ವೆಚ್ಚಗಳು ಮತ್ತು ಹೂಡಿಕೆಗಳ ಯೋಜನೆಗಾಗಿ ತೆರಿಗೆ ವಿನಾಯಿತಿಗಳ ಸಂಪೂರ್ಣ ಪ್ರಯೋಜನವನ್ನು ಹೇಗೆ ಪಡೆಯುವುದು ಎಂಬುದನ್ನು ನಿರ್ಧರಿಸಲು ತೆರಿಗೆ ಯೋಜನೆಯನ್ನು ಮಾಡಲಾಗುತ್ತದೆ. ಭಾರತದಲ್ಲಿನ ತೆರಿಗೆ ಕಾನೂನುಗಳ ಪ್ರಕಾರ, ಒಬ್ಬ ವ್ಯಕ್ತಿಯು ಅವನ/ಅವಳ ಸ್ವಂತ ಜೀವದ ಮೇಲೆ, ಅವನ/ಅವಳ ಸಂಗಾತಿಯ ಮತ್ತು ಮಕ್ಕಳ ಜೀವದ ಮೇಲೆ ತೆಗೆದುಕೊಂಡ ಜೀವ ವಿಮಾ ಪಾಲಿಸಿಯ ಮೇಲೆ ಪಾವತಿಸಲಾದ ಜೀವ ವಿಮಾ ಕಂತುಗಳು ತೆರಿಗೆಯೋಗ್ಯ ಆದಾಯವನ್ನು ಲೆಕ್ಕಾಚಾರ ಮಾಡುವಲ್ಲಿ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಸಿಯಡಿಯಲ್ಲಿ ಕಡಿತಕ್ಕೆ ಅರ್ಹವಾಗಿವೆ. ಪ್ರಸ್ತುತದಲ್ಲಿ, ಈ ಕಡಿತವನ್ನು ಷರತ್ತುಗಳಿಗೆ ಒಳಪಟ್ಟು ರೂ.1,50,000 ಗಳವರೆಗೆ ಅನುಮತಿಸಲಾಗಿದೆ. ಅಂತಹ ಪಾಲಿಸಿಗಳ ಪರಿಪಕ್ವತೆ(ಮೆಚ್ಯೂರಿಟಿ)ಯ ವೇಳೆಯ ಆದಾಯ (ವಿಮಾಮೊತ್ತ ಮತ್ತು ಬೋನಸ್)ವನ್ನು ಸಹ ಸೆಕ್ಷನ್ 10 (10ಡಿ) ಅಡಿಯಲ್ಲಿ ವಿನಾಯಿತಿಯನ್ನು ನೀಡಲಾಗುತ್ತದೆ. ಅದೇ ರೀತಿ, ಸಾವಿನ ನಂತರದ ಕ್ಲೇಮ್ ಮೊತ್ತವು ಸ್ವೀಕರಿಸುವವರ ಕೈಯಲ್ಲಿ ಆದಾಯ ತೆರಿಗೆಯಿಂದ ವಿನಾಯಿತಿಗೆ ಅರ್ಹವಾಗಿರುತ್ತದೆ. ತೆರಿಗೆಗಳನ್ನು ಕಡಿಮೆ ಮಾಡುವುದು ಇಲ್ಲಿ ಉದ್ದೇಶವಾಗಿದ್ದು ತಪ್ಪಿಸಿಕೊಳ್ಳುವುದಲ್ಲ ಎಂಬುದನ್ನು ಗಮನಿಸಬೇಕು.

ಜೀವ ವಿಮಾ ಏಜೆಂಟರು ಆಗಾಗ್ಗೆ ತಮ್ಮ ಗ್ರಾಹಕರು ಮತ್ತು ನಿರೀಕ್ಷಿತ ಗ್ರಾಹಕರಿಗೆ ಅವರ ವಿಮಾ ಅಗತ್ಯತೆಗಳನ್ನು ಪೂರೈಸುವ ಬಗ್ಗೆ ಮಾತ್ರವಲ್ಲದೆ ಅವರ ಇತರ ಹಣಕಾಸಿನ ಅಗತ್ಯಗಳನ್ನು ಪೂರೈಸುವಲ್ಲಿ ಸಹ ಬೆಂಬಲಕ್ಕಾಗಿ ಸಲಹೆ ನೀಡುವ ಅಗತ್ಯವಿರುತ್ತದೆ. ಆರ್ಥಿಕ ಯೋಜನೆಯ ಉತ್ತಮ ಜ್ಞಾನವು ಯಾವುದೇ ವಿಮಾ ಏಜೆಂಟರಿಗೆ ಹೆಚ್ಚಿನ ಬೆಲೆಯನ್ನು ನೀಡುತ್ತದೆ.

**ನಿಮ್ಮನ್ನು ಪರೀಕ್ಷಿಸಿ 3**

ಈ ಕೆಳಗಿನವುಗಳಲ್ಲಿ ಯಾವುದು ತೆರಿಗೆ ಯೋಜನೆಯ ಉದ್ದೇಶವಲ್ಲ?

I. ಗರಿಷ್ಠ ತೆರಿಗೆ ಪ್ರಯೋಜನ

II. ವಿವೇಕಯುತ ಹೂಡಿಕೆಯ ಪರಿಣಾಮವಾಗಿ ಕಡಿಮೆಯಾದ ತೆರಿಗೆಯ ಹೊರೆ

III. ತೆರಿಗೆಯ ವಂಚನೆ

**ಸಾರಾಂಶ**

- ಆರ್ಥಿಕ ಯೋಜನೆಯು ಈ ಕೆಳಗಿನ ಅಂಶಗಳ ಪ್ರಕ್ರಿಯೆಯಾಗಿದೆ:
  - ✓ ಒಬ್ಬರ ಜೀವನದ ಗುರಿಗಳನ್ನು ಗುರುತಿಸುವುದು,
  - ✓ ಈ ಗುರುತಿಸಲಾದ ಗುರಿಗಳನ್ನು ಆರ್ಥಿಕ ಗುರಿಗಳನ್ನಾಗಿ ರೂಪಾಂತರಿಸುವುದು ಮತ್ತು
  - ✓ ಆ ಗುರಿಗಳನ್ನು ಸಾಧಿಸಲು ಸಹಾಯ ಮಾಡುವ ರೀತಿಯಲ್ಲಿ ಒಬ್ಬರ ಹಣಕಾಸಿನ ನಿರ್ವಹಣೆ
- ವೈಯಕ್ತಿಕ ಜೀವನ ಚಕ್ರವನ್ನಾಧರಿಸಿ ಮೂರು ವಿಧದ ಆರ್ಥಿಕ ಉತ್ಪನ್ನಗಳ ಅಗತ್ಯವಿದೆ. ಅವುಗಳುಈ ಕೆಳಗಿನ ಸಹಾಯ ಮಾಡುತ್ತವೆ:
  - ✓ ಭವಿಷ್ಯದ ವಹಿವಾಟುಗಳನ್ನು ಸಕ್ರಿಯಗೊಳಿಸುವುದು,
  - ✓ ಅನಿಶ್ಚಿತತೆಗಳನ್ನು ಎದುರಿಸುವುದು ಮತ್ತು
  - ✓ ಸಂಪತ್ತು ಸಂಚಯನ
- ಅವಿಭಕ್ತ ಕುಟುಂಬದ ವಿಘಟನೆ, ಇಂದು ಲಭ್ಯವಿರುವ ಬಹು ಹೂಡಿಕೆಯ ಆಯ್ಕೆಗಳು ಮತ್ತು ಬದಲಾಗುತ್ತಿರುವ ಜೀವನಶೈಲಿ ಇತ್ಯಾದಿಗಳಂತಹ ಬದಲಾಗುತ್ತಿರುವ ಸಾಮಾಜಿಕ ಬದಲುಗಳಿಂದ ಆರ್ಥಿಕ ಯೋಜನೆಯ ಅಗತ್ಯವು ಮತ್ತಷ್ಟು ಹೆಚ್ಚಾಗುತ್ತದೆ.
- ಒಬ್ಬರು ಮೊದಲ ಸಂಬಳವನ್ನು ಪಡೆದ ನಂತರ ಆರ್ಥಿಕ ಯೋಜನೆಯನ್ನು ಪ್ರಾರಂಭಿಸಲು ಉತ್ತಮ ಸಮಯ.
- **ಆರ್ಥಿಕ ಯೋಜನೆಗಳು ಸಲಹಾ ಸೇವೆಗಳನ್ನೊಳಗೊಂಡಿವೆ:**
  - ✓ ನಗದು ಯೋಜನೆ,
  - ✓ ಹೂಡಿಕಕೆಯ ಯೋಜನೆ,
  - ✓ ವಿಮಾ ಯೋಜನೆ,
  - ✓ ನಿವೃತ್ತಿ ಯೋಜನೆ,
  - ✓ ಆಸ್ತಿ ಯೋಜನೆ
  - ✓ ತೆರಿಗೆ ಯೋಜನೆ

**ಪ್ರಮುಖ ಪದಗಳು**

1. ಆರ್ಥಿಕ ಯೋಜನೆ
2. ಜೀವನದ ಹಂತಗಳು
3. ಅಪಾಯದ ವ್ಯಕ್ತಿಚಿತ್ರಣ
4. ನಗದು ಯೋಜನೆ
5. ಹೂಡಿಕೆ ಯೋಜನೆ
6. ವಿಮಾ ಯೋಜನೆ
7. ನಿವೃತ್ತಿ ಯೋಜನೆ
8. ಆಸ್ತಿ ಯೋಜನೆ
9. ಸೂಕ್ತತೆಯ ಮಾಹಿತಿ
10. ತೆರಿಗೆ ಯೋಜನೆ

---

**ನಿಮ್ಮನ್ನು ಪರೀಕ್ಷಿಸಿಯ ಉತ್ತರಗಳು**

ಉತ್ತರ 1 – ಸರಿಯಾದ ಉತ್ತರ **I** ಆಗಿದೆ

ಉತ್ತರ 2 – ಸರಿಯಾದ ಉತ್ತರ **II** ಆಗಿದೆ

ಉತ್ತರ 3 – ಸರಿಯಾದ ಉತ್ತರ **III** ಆಗಿದೆ

---

# ಅಧ್ಯಾಯ L-03

# ಜೀವ ವಿಮಾ ಉತ್ಪನ್ನಗಳು: ಸಾಂಪ್ರದಾಯಿಕ

**ಅಧ್ಯಾಯ ಪರಿಚಯ**

ಈ ಅಧ್ಯಾಯವು ಜೀವ ವಿಮಾ ಉತ್ಪನ್ನಗಳ ಜಗತ್ತನ್ನು ನಿಮಗೆ ಪರಿಚಯಿಸುತ್ತದೆ. ಇದು ಸಾಮಾನ್ಯವಾಗಿ ಉತ್ಪನ್ನಗಳ ಬಗ್ಗೆ ಮಾತನಾಡುವ ಮೂಲಕ ಪ್ರಾರಂಭವಾಗುತ್ತದೆ ಮತ್ತು ನಂತರ ಜೀವ ವಿಮಾ ಉತ್ಪನ್ನಗಳ ಅಗತ್ಯತೆ ಮತ್ತು ವಿವಿಧ ಜೀವನ ಗುರಿಗಳನ್ನು ಸಾಧಿಸುವಲ್ಲಿ ಅವು ವಹಿಸುವ ಪಾತ್ರವನ್ನು ಚರ್ಚಿಸುತ್ತ ಮುಂದುವರಿಯುತ್ತದೆ. ಅಂತಿಮವಾಗಿ ನಾವು ಕೆಲವು ಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳನ್ನು ನೋಡುತ್ತೇವೆ.

**ಕಲಿಕೆಯ ಫಲಿತಾಂಶಗಳು**

A. ಜೀವ ವಿಮಾ ಉತ್ಪನ್ನಗಳ ಅವಲೋಕನ

B. ಸಾಂಪ್ರದಾಯಿಕ ವಿಮಾ ಉತ್ಪನ್ನಗಳು

## A. ಜೀವ ವಿಮಾ ಉತ್ಪನ್ನಗಳ ಅವಲೋಕನ

### 1. ಉತ್ಪನ್ನವೆಂದರೇನು?

ಮೊದಲಿಗೆ, 'ಉತ್ಪನ್ನ'ವೆಂದರೆ ಏನು ಎಂದು ಅರ್ಥಮಾಡಿಕೊಳ್ಳೋಣ. ಜನಪ್ರಿಯ ಪರಿಭಾಷೆಯಲ್ಲಿ ಸಾಮಾನ್ಯವಾಗಿ ಉತ್ಪನ್ನವೆಂದರೆ ಮಾರುಕಟ್ಟೆಯಲ್ಲಿ ತಂದು ಮಾರಾಟ ಮಾಡುವ ವಸ್ತು ಅಥವಾ ಸರಕು ಎಂದು ಪರಿಗಣಿಸಲಾಗುತ್ತದೆ.

ಪ್ರತಿಯೊಂದು ಉತ್ಪನ್ನವು ಕೆಲವು ಪ್ರಯೋಜನಗಳನ್ನು ನೀಡುವ ವೈಶಿಷ್ಟ್ಯಗಳು ಅಥವಾ ಗುಣಲಕ್ಷಣಗಳ ಒಂದು ಗುಂಪಾಗಿರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವಾಗಿದೆ.

ಎಲ್ಲ ಕಂಪನಿಗಳು ವಿವಿಧ ರೀತಿಯ ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳನ್ನು ನೀಡುವ ಮೂಲಕ ತಮ್ಮ ಉತ್ಪನ್ನಗಳನ್ನು ಗ್ರಾಹಕರಿಗೆ ಹೆಚ್ಚು ಆಕರ್ಷಕವಾಗಿ ಮಾಡಲು ಮತ್ತು ಅವುಗಳನ್ನು ಇತರ ಉತ್ಪನ್ನಗಳಿಂದ ಪ್ರತ್ಯೇಕಿಸಲು ಪ್ರಯತ್ನಿಸುತ್ತವೆ. ತಮ್ಮ ಕಂಪನಿಯ ಉತ್ಪನ್ನಗಳನ್ನು ಇತರರಿಗೆ ಹೋಲಿಸಿದರೆ ಅನನ್ಯ ಮತ್ತು ಆಕರ್ಷಕವಾಗಿಸಲು ಈ ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವುಗಳನ್ನು ತಿಳಿಸಿ ಹೇಳುವುದು ಜೀವ ವಿಮಾ ಏಜೆಂಟರ ಪಾತ್ರವಾಗಿದೆ.

**ಉದಾಹರಣೆ**

ಕೋಲ್ಗೇಟ್, ಕ್ಲೋಸ್ ಅಪ್ ಮತ್ತು ಪ್ರಾಮಿಸ್ ಇವೆಲ್ಲವೂ ಟೂತ್ ಪೇಸ್ಟ್ ಗಳ ವಿಭಿನ್ನ ಬ್ರ್ಯಾಂಡ್ ಗಳಾಗಿವೆ. ಆದರೆ ಪ್ರತಿಯೊಂದು ಬ್ರ್ಯಾಂಡ್ ನ ವೈಶಿಷ್ಟ್ಯಗಳು ಇನ್ನೊಂದಕ್ಕಿಂತ ಭಿನ್ನವಾಗಿರುತ್ತವೆ.

---

ಉತ್ಪನ್ನಗಳು ಈ ಕೆಳಗೆ ನೀಡಿದ ಪ್ರಕಾರದವುಗಳಾಗಿರಬಹುದು:

i. **ಮೂರ್ತ/ಕಾಣಬಹುದಾದ:** ಸ್ಪರ್ಶದಿಂದ ಅನುಭವಿಸಬಹುದಾದ ಅಥವಾ ನೇರವಾಗಿ ನೋಡಬಹುದಾದ ಭೌತಿಕ ವಸ್ತುಗಳನ್ನು ಇದು ಸೂಚಿಸುತ್ತದೆ (ಉದಾಹರಣೆಗೆ ಕಾರು ಅಥವಾ ದೂರದರ್ಶನದ ಸೆಟ್)

ii. **ಅಮೂರ್ತ/ಕಾಣಲಾಗದ:** ಇದು ಪರೋಕ್ಷವಾಗಿ ಮಾತ್ರ ಗ್ರಹಿಸಬಹುದಾದ ಉತ್ಪನ್ನಗಳನ್ನು ಸೂಚಿಸುತ್ತದೆ.

ಜೀವ ವಿಮೆಯು ಅಮೂರ್ತವಾದ ಉತ್ಪನ್ನವಾಗಿದೆ.

### 2. ವಿಮಾ ಉತ್ಪನ್ನಗಳ ಉದ್ದೇಶ

ಮಾನವರು **ಇದು ನಮ್ಮ ಉತ್ಪಾದಕ ಗಳಿಕೆಯ ಸಾಮರ್ಥ್ಯದ ಮೂಲವಾಗಿರುವ - ಮಾನವ ಬಂಡವಾಳವೆಂಬ - ಅಪಾರವಾದ ಮೌಲ್ಯಯುತವಾದ ಆಸ್ತಿಯನ್ನು** ಹೊಂದಿದ್ದಾರೆ. ಆದಾಗ್ಯೂ, ಜೀವ ಮತ್ತು ಮಾನವನ ಯೋಗಕ್ಷೇಮದ ಬಗ್ಗೆ ಅನಿಶ್ಚಿತತೆಯಿರುತ್ತದೆ. ಸಾವು ಮತ್ತು ಕಾಯಿಲೆಯಂತಹ ಘಟನೆಗಳು ನಮ್ಮ ಗಳಿಕೆಯ ಸಾಮರ್ಥ್ಯ ಮತ್ತು ಜೀವನದ ಉಳಿತಾಯವನ್ನು ನಾಶಪಡಿಸಬಹುದು. ಅಂತಹ ಸಂದರ್ಭಗಳಿಗೆ ವಿಮೆ ರಕ್ಷಣೆಯನ್ನು ನೀಡುತ್ತದೆ.

ಜೀವ ವಿಮಾ ಉತ್ಪನ್ನಗಳು ಸಾವು ಅಥವಾ ಅಂಗವೈಕಲ್ಯದ ಪರಿಣಾಮವಾಗಿ ಉಂಟಾಗುವ ವ್ಯಕ್ತಿಯ ಉತ್ಪಾದಕ ಸಾಮರ್ಥ್ಯಗಳ ಆರ್ಥಿಕ ಮೌಲ್ಯದ ನಷ್ಟದ ವಿರುದ್ಧ ರಕ್ಷಣೆಯನ್ನು ನೀಡುತ್ತವೆ. ಒಬ್ಬ ವ್ಯಕ್ತಿಯು ಜೀವ ವಿಮಾ ಪಾಲಿಸಿಯನ್ನು ತೆಗೆದುಕೊಂಡು ಮೊದಲ ಕಂತನ್ನು ಪಾವತಿಸಿದ ಕ್ಷಣದಲ್ಲಿ, ಅವನ/ಅವಳ ಹೆಸರಿನಲ್ಲಿ **ತಕ್ಷಣದ ಆಸ್ತಿಯನ್ನು ರಚಿಸಲಾಗುತ್ತದೆ** ಮತ್ತು ಅದರ ಆದಾಯವು ಅವನ/ಅವಳ ಅವಲಂಬಿತರಿಗೆ ಅಥವಾ ಪ್ರೀತಿಪಾತ್ರರಿಗೆ ಲಭ್ಯವಿರುತ್ತದೆ.

ಒಬ್ಬ ವ್ಯಕ್ತಿಯ ದುರದೃಷ್ಟಕರ ಮರಣದ ಸಂದರ್ಭದಲ್ಲಿ, ವ್ಯಕ್ತಿಯ ಹತ್ತಿರದ ಮತ್ತು ಆತ್ಮೀಯರಿಗೆ ಮನಸ್ಸಿನ ಶಾಂತಿ ಮತ್ತು ರಕ್ಷಣೆಯನ್ನು ಜೀವ ವಿಮೆಯು ಒದಗಿಸುತ್ತದೆ. ಅಂತಹ ರಕ್ಷಣೆಯನ್ನು ಒದಗಿಸುವುದರ ಹೊರತಾಗಿ, ಈ ಪಠ್ಯಕ್ರಮದಲ್ಲಿ ಚರ್ಚಿಸದ ಉಳಿತಾಯ, ಸಂಪತ್ತು ಸಂಗ್ರಹಣೆ, ಸುರಕ್ಷತೆ ಮತ್ತು ಹೂಡಿಕೆಯ ಭದ್ರತೆ ಮತ್ತು ನಿಶ್ಚಿತ ಆದಾಯದ ದರಗಳು ಮುಂತಾದವುಗಳಂತಹ ಮಾರುಕಟ್ಟೆಯ ಇತರ ಅಗತ್ಯಗಳನ್ನು ಜೀವ ವಿಮೆಯು ಪೂರೈಸುತ್ತದೆ.

ಕಳೆದ ಎರಡು ಶತಮಾನಗಳಲ್ಲಿ ಜೀವ ವಿಮಾ ಉದ್ಯಮವು ಉತ್ಪನ್ನಗಳ ಕೊಡುಗೆಯಲ್ಲಿ ಅಗಾಧವಾದ ಆವಿಷ್ಕಾರಗಳನ್ನು ಕಂಡಿದೆ. ಸಾವಿನ ಪ್ರಯೋಜನ ಉತ್ಪನ್ನಗಳೊಂದಿಗೆ ಈ ಪ್ರವಾಸ ಪ್ರಾರಂಭವಾಯಿತು ಆದರೆ ಕಾಲಾಂತರದಲ್ಲಿ, ದತ್ತಿ, ಅಂಗವೈಕಲ್ಯ ಪ್ರಯೋಜನಗಳು, ಭಯಂಕರ ಕಾಯಿಲೆಯ ಕವರ್ ಗಳು ಮತ್ತು ಮುಂತಾದ ಬಹು ಜೀವನ ಪ್ರಯೋಜನಗಳನ್ನು ಸೇರಿಸಲಾಯಿತು.

ವಿಮಾದಾರರನ್ನು ತಮ್ಮ ಹೂಡಿಕೆಯ ಸ್ವತ್ತುಗಳನ್ನು ಆಯ್ಕೆಮಾಡಲು ಮತ್ತು ನಿರ್ವಹಿಸುವಲ್ಲಿ ಭಾಗವಹಿಸಲು ಆಹ್ವಾನಿಸಲಾಗುವ ಮಾರುಕಟ್ಟೆ ಸಂಬಂಧಿತ ಪಾಲಿಸಿಗಳ ರಚನೆಯು ಇತ್ತೀಚಿನ ವರ್ಷಗಳಲ್ಲಿನ ಪ್ರಮುಖ ಆವಿಷ್ಕಾರಗಳಲ್ಲಿ ಒಂದಾಗಿದೆ. ಮತ್ತೊಂದು ಪ್ರಮುಖ ಆವಿಷ್ಕಾರವೆಂದರೆ ವಿವಿಧ ಪ್ರಯೋಜನಗಳು ಮತ್ತು ವೆಚ್ಚದ ಘಟಕಗಳು ಬದಲಾಗುತ್ತಿರುವ ಅಗತ್ಯತೆಗಳು, ಕೈಗೆಟುಕುವಿಕೆ ಮತ್ತು ಜೀವನ-ಹಂತಗಳಿಗನುಗುಣವಾಗಿ ಪಾಲಿಸಿದಾರರಿಂದ ಬದಲಾಗಬಹುದಾದ ಹೊಂದಿಕೊಳ್ಳುವ ಅನ್ ಬಂಡಲ್ಡ್ ಉತ್ಪನ್ನಗಳ ವಿಕಸನವಾಗಿದೆ

### 3. ಸೂಕ್ತತೆಯ ಮಾಹಿತಿ

ಏಜೆಂಟರು ಮತ್ತು ಬ್ರೋಕರ್ ಗಳನ್ನು ಒಳಗೊಂಡಂತೆ ವಿಮಾ ಮಧ್ಯವರ್ತಿಗಳನ್ನು ಹೆಚ್ಚು ಹೊಣೆಗಾರರನ್ನಾಗುವಂತೆ ಮಾಡಲು ಮತ್ತು ತಪ್ಪು-ಮಾರಾಟದ ನಿದರ್ಶನಗಳನ್ನು ಕಡಿಮೆ ಮಾಡಲು, ಐಆರ್ ಡಿಎಐ 'ಉತ್ಪನ್ನ ಸೂಕ್ತತೆ' ಎಂಬ ಪರಿಕಲ್ಪನೆಯನ್ನು ಸೃಷ್ಟಿಸಿದೆ. 'ಸೂಕ್ತತೆಯ ಮಾಹಿತಿ' ಎನ್ನುವುದು ವಯಸ್ಸು, ಆದಾಯ, ಕುಟುಂಬದ ಸ್ಥಿತಿ, ಜೀವನದ ಹಂತ, ಹಣಕಾಸು ಮತ್ತು ಕುಟುಂಬದ ಗುರಿಗಳು, ಹೂಡಿಕೆ ಉದ್ದೇಶಗಳು, ಈಗಾಗಲೇ ಹೊಂದಿರುವ ವಿಮೆಯ ಪೋರ್ಟ್ ಫೋಲಿಯೊ ಇತ್ಯಾದಿಗಳ ಮೇಲಿನ ನಿರೀಕ್ಷಿತ ಗ್ರಾಹಕರ ಮಾಹಿತಿಯಾಗಿದೆ. ಅಂದರೆ, ಗ್ರಾಹಕರಿಗೆ, ವಿಮಾ ಪಾಲಿಸಿಯನ್ನು ಮಾರಾಟ ಮಾಡುವ ಮೊದಲು ಗ್ರಾಹಕರ ಅಗತ್ಯತೆಗಳಿಗೆ ಉತ್ಪನ್ನದ ಸೂಕ್ತತೆಯನ್ನು ಸಮರ್ಥಿಸಲು ಏಜೆಂಟರು ಶಕ್ತರಾಗಿರಬೇಕು.

ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಏಜೆಂಟರು ನಿರ್ದಿಷ್ಟ ನಿರೀಕ್ಷಿತ ಗ್ರಾಹಕರ ವಯಸ್ಸು, ಆದಾಯ, ಕುಟುಂಬದ ಸ್ಥಿತಿ, ಜೀವನದ ಹಂತ, ಹಣಕಾಸು ಮತ್ತು ಕುಟುಂಬದ ಗುರಿಗಳು, ಹೂಡಿಕೆಯ ಉದ್ದೇಶಗಳು, ಈಗಾಗಲೇ

ಹೊಂದಿರುವ ವಿಮಾ ಬಂಡವಾಳ, ವಿಮಾ ಅಗತ್ಯತೆಗಳು ಇತ್ಯಾದಿಯನ್ನೊಳಗೊಂಡ ಅಪಾಯದ ವ್ಯಕ್ತಿಚಿತ್ರಣವನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ ಮತ್ತು ಉತ್ಪನ್ನವು ನಿರೀಕ್ಷಿತ ಗ್ರಾಹಕರಿಗಾಗಿ ಸೂಕ್ತವಾಗಿದೆಯೇ ಎಂಬುದನ್ನು ನಿರ್ಧರಿಸುತ್ತಾರೆ. ಉತ್ಪನ್ನದ ಸ್ವರೂಪ, ಕಂತಿನ ಮೊತ್ತ, ಕಂತು ಪಾವತಿಯ ವಿಧಾನ ಮತ್ತು ಪಾಲಿಸಿಯ ಅವಧಿ ಮತ್ತು ಕಂತು ಪಾವತಿಯ ರೀತಿಯೂ ಸಹ 'ಸೂಕ್ತತೆ'ಯ ನಿಯತಾಂಕಗಳ ಭಾಗವಾಗಿದೆ.

ಸಂಗ್ರಹಿಸಿದ ಸೂಕ್ತ ಮಾಹಿತಿಯು ನಿರೀಕ್ಷಿತ ಗ್ರಾಹಕರು ಮತ್ತು ಏಜೆಂಟರಿಂದ ಸಹಿ ಮಾಡಲ್ಪಟ್ಟಿರಬೇಕೆಂದು; ಮತ್ತು ಪಾಲಿಸಿ ದಾಖಲೆಗಳ ಭಾಗವಾಗಿ ವಿಮಾದಾರರಿಂದ ಸಂರಕ್ಷಿಸಲ್ಪಟ್ಟಿದೆ ಮತ್ತು ಪ್ರಾಧಿಕಾರದಿಂದ ತಪಾಸಣೆಗೆ ಲಭ್ಯವಾಗುವಂತೆ ಮಾಡಲ್ಪಡುವುದನ್ನು ಐಆರ್ ಡಿಎಐ ಕಡ್ಡಾಯಮಾಡಿದೆ.

### 4. ಜೀವ ವಿಮಾ ಉತ್ಪನ್ನಗಳಲ್ಲಿ ರೈಡರ್ ಗಳು

ರೈಡರ್ ಎನ್ನುವುದು ಒಪ್ಪಂದದ ಭಾಗವಾಗುವ ಸಾಮಾನ್ಯವಾಗಿ ಧೃಡೀಕರಣದ ಮೂಲಕ ಸೇರಿಸಲಾದ ನಿಬಂಧನೆಯಾಗಿದೆ. ಪಾಲಿಸಿಯಡಿಯಲ್ಲಿ ಅಪಘಾತದಿಂದಾದ ಸಾವಿನ ಪ್ರಯೋಜನದ ಪ್ರಮಾಣವನ್ನು ಹೆಚ್ಚಿಸುವಂತಹ ಪೂರಕ ಪ್ರಯೋಜನಗಳನ್ನು ಒದಗಿಸಲು ರೈಡರ್ ಗಳನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ಕೊಡುಗೆಗಳ ಮೌಲ್ಯವನ್ನು ವರ್ಧಿಸುವ ರೈಡರ್ ಗಳು ವ್ಯಕ್ತಿಯ ವಿವಿಧ ಅವಶ್ಯಕತೆಗಳನ್ನು ಒಂದೇ ಯೋಜನೆಗೆ ಕಸ್ಟಮೈಸ್ ಮಾಡಲು ಸಹಾಯ ಮಾಡುವ ಹಲವಾರು ರೈಡರ್ ಗಳನ್ನು ಜೀವ ವಿಮಾ ಕಂಪನಿಗಳು ನೀಡುತ್ತವೆ.

ವಿಶಿಷ್ಟ ಜೀವವಿಮಾ ಒಪ್ಪಂದದಲ್ಲಿ ಹೆಚ್ಚುವರಿ ಪ್ರಯೋಜನಗಳಾಗಿ ಅಂಗವೈಕಲ್ಯ ರಕ್ಷಣೆ, ಅಪಘಾತದ ಕವರ್ ಮತ್ತು ಗಂಭೀರ ರೋಗಗಳ ಕವರ್ ನಂತಹ ಪ್ರಯೋಜನಗಳನ್ನು ಒದಗಿಸುವ ವಿಧಾನವನ್ನು ರೈಡರ್ ಒದಗಿಸುತ್ತವೆ. ಹೆಚ್ಚುವರಿ ಕಂತನ್ನು ಪಾವತಿಸುವ ಮೂಲಕ ಪಾಲಿಸಿದಾರರು ಅವುಗಳನ್ನು ಪಡೆಯಬಹುದು.

**ನಿಮ್ಮನ್ನು ಪರೀಕ್ಷಿಸಿ 1**

ಈ ಕೆಳಗಿನವುಗಳಲ್ಲಿ ಯಾವುದು ಅಮೂರ್ತ ಉತ್ಪನ್ನವಾಗಿದೆ**?**

I. ಕಾರು

II. ಮನೆ

III. ಜೀವವಿಮೆ

IV. ಸಾಬೂನು

## E. ಸಾಂಪ್ರದಾಯಿಕ ಜೀವವಿಮಾ ಉತ್ಪನ್ನಗಳು

ಈಗ ನಾವು ಜೀವ ವಿಮಾ ಉತ್ಪನ್ನಗಳ ಕೆಲವು ಸಾಂಪ್ರದಾಯಿಕ ಪ್ರಕಾರಗಳ ಬಗ್ಗೆ ಕಲಿಯೋಣ.

**ಚಿತ್ರ 1 - ಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳು**




### 1. ಅವಧಿ ವಿಮಾ ಯೋಜನೆಗಳು

ಅವಧಿ ವಿಮೆಯು ಒಂದು ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಮಾನ್ಯವಾಗಿರುವ ಒಪ್ಪಂದವಾಗಿದೆ. ಅದು ಒಂದು ವಿಮಾನ ಪ್ರಯಾಣವನ್ನು ಪೂರ್ಣಗೊಳಿಸಲು ಅಗತ್ಯವಿರುವ ಕಡಿಮೆ ಸಮಯದಿಂದ ಹಿಡಿದು ಬಹು ವರ್ಷಗಳವರೆಗೆ ಸಹ ಇರಬಹುದು. 65 ಅಥವಾ 70 ವರ್ಷಗಳವರೆಗೆ ಇದರ ರಕ್ಷಣೆಯು ವಿಸ್ತರಿಸಬಹುದು. ಒಂದು ವರ್ಷದ ಅವಧಿಯ ಪಾಲಿಸಿಗಳು ಆಸ್ತಿ ಮತ್ತು ಅಪಘಾತ ವಿಮಾ ಒಪ್ಪಂದಗಳನ್ನು ಹೋಲುತ್ತವೆ. ಈ ಪಾಲಿಸಿಯಲ್ಲಿ ಯಾವುದೇ ಉಳಿತಾಯ ಅಥವಾ ನಗದು ಮೌಲ್ಯದ ಅಂಶಗಳಿರುವುದಿಲ್ಲ.

ಅಕ್ಟೋಬರ್ 2020 ರಲ್ಲಿ, ಲಿಂಕ್ ಮಾಡಿಲ್ಲದ ಭಾಗವಹಿಸದ ವೈಯಕ್ತಿಕ ಶುದ್ಧ ಅಪಾಯದ ಕಂತಿನ ಜೀವ ವಿಮಾ ಯೋಜನೆಯಾಗಿರುವ, ಪಾಲಿಸಿ ಅವಧಿಯಲ್ಲಿ ಜೀವ ವಿಮಾದಾರರ ದುರದೃಷ್ಟಕರ ಮರಣ ಸಂಭವಿಸಿದ ಸಂದರ್ಭದಲ್ಲಿ ನಾಮನಿರ್ದೇಶಿತರಿಗೆ ವಿಮಾ ಮೊತ್ತವನ್ನು ಒಟ್ಟು ಮೊತ್ತದಲ್ಲಿ ಪಾವತಿಸಲು ಒದಗಿಸುವ "ಸರಲ್ ಜೀವನ್ ಬಿಮಾ" (ವಿಮಾಗಾರರ ಹೆಸರನ್ನು ಉತ್ಪನ್ನದ ಹೆಸರಿನ ಹಿಂದೆ ಜೋಡಿಸಬೇಕು) ಎಂಬ ಪ್ರಮಾಣಿತ ವೈಯಕ್ತಿಕ ಅವಧಿ ಜೀವ ವಿಮಾ ಉತ್ಪನ್ನ(ಸ್ಟ್ಯಾಂಡರ್ಡ್ ಇಂಡಿವಿಜುವಲ್ ಟರ್ಮ್ ಲೈಫ್ ಇನ್ಶುರೆನ್ಸ್ ಪ್ರಾಡಕ್ಟ್ )ವನ್ನು ಐಆರ್ ಡಿಎಐ ಪರಿಚಯಿಸಿದೆ.

ನಿಯಂತ್ರಕರು ನಿರ್ದಿಷ್ಟಪಡಿಸಿದ ಕೆಲವು ಪ್ರಯೋಜನಗಳು ಮತ್ತು ರೈಡರ್ ಗಳನ್ನು ಹೊರತುಪಡಿಸಿ, ಯಾವುದೇ ಇತರ ರೈಡರ್ ಗಳು/ ಪ್ರಯೋಜನಗಳು/ ಆಯ್ಕೆಗಳು/ ರೂಪಾಂತರಗಳನ್ನು ನೀಡಲು ಅನುಮತಿಸಲಾಗುವುದಿಲ್ಲ. ಅಲ್ಲದೆ, ಆತ್ಮಹತ್ಯೆಯ ಹೊರತನ್ನು ಹೊರತುಪಡಿಸಿ ಉತ್ಪನ್ನದಡಿಯಲ್ಲಿ ಯಾವುದೇ ಹೊರತುಗಳು ಇರಬಾರದು. ಸರಳ ಜೀವನ ಬಿಮಾ ಪಾಲಿಸಿಯನ್ನು ವ್ಯಕ್ತಿಗಳಿಗೆ ಲಿಂಗ, ವಾಸಸ್ಥಳ, ಪ್ರಯಾಣ, ಉದ್ಯೋಗ ಅಥವಾ ಶೈಕ್ಷಣಿಕ ಅರ್ಹತೆಗಳ ಮೇಲೆ ನಿರ್ಬಂಧಗಳಿಲ್ಲದೆ ನೀಡಲಾಗುವುದು.

**a) ಉದ್ದೇಶ**

ಅವಧಿ ಜೀವ ವಿಮಾ ಯೋಜನೆಯು ಜೀವ ವಿಮೆಯ ಮುಖ್ಯ ಮತ್ತು ಮೂಲಭೂತವಾದ ಕಲ್ಪನೆಯನ್ನು ಪೂರೈಸುತ್ತದೆ, ಇದು ವಿಮಾದಾರರ ಮರಣದ ಸಂದರ್ಭದಲ್ಲಿ ಅವರ ಅವಲಂಬಿತರಿಗೆ ಭರವಸೆ ಮೊತ್ತವನ್ನು ಒದಗಿಸುತ್ತದೆ.

ಪಾಲಿಸಿಯು ಪ್ರತಿ ಆದಾಯದ ಯೋಜನೆಯಾಗಿಯೂ ಕಾರ್ಯನಿರ್ವಹಿಸುತ್ತದೆ. ಇಲ್ಲಿ ಒಟ್ಟು ಮೊತ್ತದ ಪಾವತಿಯನ್ನು ಅವಲಂಬಿತ ಫಲಾನುಭವಿಗಳಿಗೆ ಮಾಸಿಕ, ತ್ರೈಮಾಸಿಕ ಅಥವಾ ಅಂತಹುದೇ ನಿಯತಕಾಲಿಕ ಪಾವತಿಗಳ ಸರಣಿಯಿಂದ ಬದಲಾಯಿಸಲಾಗುತ್ತದೆ.

**b) ಅಂಗವೈಕಲ್ಯ**

ಸಾಮಾನ್ಯವಾಗಿ ಅವಧಿ ವಿಮಾ ಪಾಲಿಸಿಯು ಸಾವನ್ನು ಮಾತ್ರ ಒಳಗೊಂಡಿರುತ್ತದೆ. ಆದಾಗ್ಯೂ, ಮುಖ್ಯ ಪಾಲಿಸಿಯಲ್ಲಿ ಅಂಗವೈಕಲ್ಯ ರಕ್ಷಣೆಯ ರೈಡರ್ ಅನ್ನು ಖರೀದಿಸಲು ಸಾಧ್ಯವಿದೆ. ಅಂತಹ ಸಂದರ್ಭದಲ್ಲಿ, ವಿಮಾದಾರರು ಒಪ್ಪಂದದ ಅವಧಿಯಲ್ಲಿ ನಿರ್ದಿಷ್ಟಪಡಿಸಿದ ಅಂಗವೈಕಲ್ಯದಿಂದ ಬಳಲುತ್ತಿದ್ದರೆ, ಫಲಾನುಭವಿಗಳಿಗೆ/ವಿಮಾದಾರರಿಗೆ ಅಂಗವೈಕಲ್ಯ ಪ್ರಯೋಜನವನ್ನು ಪಾವತಿಸಲಾಗುತ್ತದೆ. ವಿಮಾದಾರರ ಮರಣದವರೆಗೂ ಈ ಪ್ರಯೋಜನಗಳು ಮುಂದುವರಿಯುತ್ತವೆ.

**ಚಿತ್ರ 3 - ಅಂಗವೈಕಲ್ಯ**



**c) ರೈಡರ್ ನಂತೆ ಅವಧಿವಿಮೆ**

ಅವಧಿ ಜೀವವಿಮೆಯಡಿಯಲ್ಲಿ ರಕ್ಷಣೆಯನ್ನು ಸಾಮಾನ್ಯವಾಗಿ ಅದ್ವಿತೀಯ ಪಾಲಿಸಿಯಾಗಿ ಒದಗಿಸಲಾಗುತ್ತದೆ ಆದರೆ ಪಾಲಿಸಿಯಲ್ಲಿ ರೈಡರ್ ಮೂಲಕವೂ ಅದನ್ನು ಒದಗಿಸಬಹುದು.

| **ಉದಾಹರಣೆ** |
| --- |

ಪಿಂಚಣಿ ಯೋಜನೆಯ ರೈಡರ್ ಪಿಂಚಣಿ ಪ್ರಾರಂಭವಾಗುವ ದಿನಾಂಕದ ಮೊದಲು ಒಬ್ಬರು ಮರಣಹೊಂದಿದರೆ ಮರಣದ ಪ್ರಯೋಜನವನ್ನು ಪಾವತಿಸುವುದನ್ನು ಒದಗಿಸುತ್ತದೆ.

**d) ಪರಿವರ್ತನ ಸಾಧ್ಯತೆ**

ಪರಿವರ್ತಿಸಬಹುದಾದ ಅವಧಿ ವಿಮಾ ಪಾಲಿಸಿಗಳು ಪಾಲಿಸಿದಾರರಿಗೆ ಅವಧಿ ವಿಮಾ ಪಾಲಿಸಿಯನ್ನು ವಿಮಾ ಸಾಧ್ಯತೆಯ ತಾಜಾ ಪುರಾವೆಗಳನ್ನು ಒದಗಿಸದೆಯೇ "ಸಂಪೂರ್ಣ ಜೀವನ(ಹೋಲ್ ಲೈಫ್)" ದಂತಹ ಶಾಶ್ವತ ಯೋಜನೆಯನ್ನಾಗಿ ಬದಲಾಯಿಸಲು ಅಥವಾ ಪರಿವರ್ತಿಸಲು ಅನುಮತಿಸುತ್ತವೆ. ಶಾಶ್ವತ ನಗದು ಮೌಲ್ಯದ ವಿಮೆಯನ್ನು ಹೊಂದಲು ಬಯಸುವ ಆದರೆ ಅದರ ಹೆಚ್ಚಿನ ಕಂತುಗಳನ್ನು ನೀಡಲು ಸಾಧ್ಯವಾಗದವರಿಗೆ ಈ ಸವಲತ್ತು ಸಹಾಯ ಮಾಡುತ್ತದೆ. ಅವಧಿ ಪಾಲಿಸಿಯನ್ನು ಶಾಶ್ವತ ವಿಮೆಯಾಗಿ ಪರಿವರ್ತಿಸಿದಾಗ ಹೊಸ ಕಂತು ದರವು ಹೆಚ್ಚಾಗಿರುತ್ತದೆ.

**e) ಅನನ್ಯ ಮಾರಾಟದ ಯೋಜನೆ (ಯುಎಸ್ ಪಿ)[ಯುನಿಕ್ ಸೆಲ್ಲಿಂಗ್ ಪ್ರೊಪೊಸಿಶನ್]**

ಅನನ್ಯ ಮಾರಾಟದ ಯೋಜನೆ (ಯುಎಸ್ ಪಿ)ಯು ಅವಧಿ ಭರವಸೆಯ ಕಡಿಮೆ ಬೆಲೆಯಾಗಿದ್ದು, ಸೀಮಿತ ಬಜೆಟ್ ನಲ್ಲಿ ತುಲನಾತ್ಮಕವಾಗಿ ದೊಡ್ಡ ಪ್ರಮಾಣದ ಜೀವ ವಿಮೆಯನ್ನು ಖರೀದಿಸಲು ಅನುವು ಮಾಡಿಕೊಡುತ್ತದೆ.

**f) ರೂಪಾಂತರಗಳು**

ಅವಧಿಯ ಭರವಸೆಯ ಹಲವಾರು ರೂಪಾಂತರಗಳು ಸಾಧ್ಯವಾಗಿರುತ್ತದೆ.

**ಚಿತ್ರ 3: ಅವಧಿ ಭರವಸೆಯ ರೂಪಾಂತರಗಳು**

**ಅವಧಿ ಭರವಸೆಯ ರೂಪಾಂತರಗಳು**

- ಕಡಿಮೆಯಾಗುವ ಅವಧಿ ಭರವಸೆ
- ಹೆಚ್ಚಾಗುವ ಅವಧಿ ಭರವಸೆ
- ಕಂತುಗಳ ವಾಪಸಾತಿಯೊಂದಿಗೆ ಅವಧಿ ವಿಮೆ

**i. ಕಡಿಮೆಯಾಗುವ ಅವಧಿ ಭರವಸೆ**

ಈ ಯೋಜನೆಗಳು ಸಾಲವನ್ನು ಪಾವತಿಸುವ ಮೊದಲು ಸಾಲಗಾರರು ಮರಣಹೊಂದಿದರೆ ಸಾಲದ ಮೇಲಿನ ಬಾಕಿಗೆ ಸಮಾನವಾದ ಮರಣದ ಪ್ರಯೋಜನವನ್ನು ಒದಗಿಸುವ ವಿಶಿಷ್ಟವಾಗಿ ಕಡಿಮೆಗೊಳ್ಳುವ ಅವಧಿ ವಿಮೆಯನ್ನು ಒಳಗೊಂಡಿರುತ್ತವೆ. ಇವುಗಳನ್ನು ಸಾಮಾನ್ಯವಾಗಿ ಅಡಮಾನ ವಿಮೋಚನೆ(ಮಾರ್ಟ್ಗೇಜ್ ರಿಡೆಂಪ್ಶನ್) (ಅಧ್ಯಾಯ 15 ರಲ್ಲಿ ಚರ್ಚಿಸಲಾಗಿದೆ) ಅಥವಾ ಸಾಲದ ಜೀವವಿಮೆ(ಕ್ರೆಡಿಟ್ ಲೈಫ್ ಇನ್ಶುರೆನ್ಸ್)ಯೆಂದು ಮಾರಾಟ ಮಾಡಲಾಗುತ್ತದೆ. ಸಾಮಾನ್ಯವಾಗಿ ಯೋಜನೆಗಳನ್ನು ಸಾಲ ನೀಡುವ ಸಂಸ್ಥೆಗಳಿಗೆ ತಮ್ಮ ಸಾಲಗಾರರ ಜೀವನವನ್ನು ಕವರ್ ಮಾಡಲು ಗುಂಪು ವಿಮೆಯ ರೂಪದಲ್ಲಿ ಮಾರಾಟ ಮಾಡಲಾಗುತ್ತದೆ. ಅಡಮಾನ ವಿಮೋಚನೆ ವಿಮೆಯ ಖರೀದಿಯು ಸಾಮಾನ್ಯವಾಗಿ ಅಡಮಾನ ಸಾಲದ ಷರತ್ತಾಗಿರುತ್ತದೆ. ಇಂತಹ ಯೋಜನೆಗಳು ಮೋಟಾರು ಅಥವಾ ಇತರ ವೈಯಕ್ತಿಕ ಸಾಲಗಳಿಗೂ ಲಭ್ಯವಿರಬಹುದು.

**ii. ಹೆಚ್ಚಾಗುವ ಅವಧಿ ಭರವಸೆ**

ಹೆಸರೇ ಸೂಚಿಸುವಂತೆ, ಯೋಜನೆಯು ಪಾಲಿಸಿಯ ಅವಧಿಯೊಂದಿಗೆ ಹೆಚ್ಚಾಗುವ ಮರಣದ ಪ್ರಯೋಜನವನ್ನು ಒದಗಿಸುತ್ತದೆ. ಕವರೇಜ್ ಹೆಚ್ಚಾದಂತೆ ಕಂತು ಸಹ ಸಾಮಾನ್ಯವಾಗಿ ಹೆಚ್ಚಾಗುತ್ತದೆ.

**iii. ಕಂತುಗಳ ವಾಪಸಾತಿಯೊಂದಿಗೆ ಅವಧಿ ವಿಮೆ**

ಕಂತುಗಳ ವಾಪಸಾತಿಯೊಂದಿಗಿನ ಅವಧಿ ವಿಮೆಯು ಮತ್ತೊಂದು ವಿಧದ (ಭಾರತದಲ್ಲಿ ಸಾಕಷ್ಟು ಜನಪ್ರಿಯವಾಗಿದೆ) ಪಾಲಿಸಿಯಾಗಿದೆ. ಕಂತುಗಳ ವಾಪಸಾತಿಯಿಲ್ಲದ ಇದೇ ರೀತಿಯ ಅವಧಿ ವಿಮಾ ಯೋಜನೆಗೆ ಪಾವತಿಸಿದ ಕಂತಿಗಿಂದ ಈ ಪಾಲಿಸಿಯ ಕಂತಿನ ಮೊತ್ತ ಹೆಚ್ಚು ಹೆಚ್ಚಿದ್ದರೂ, ಕೆಲವು ಗ್ರಾಹಕರಿಗೆ ಇಂತಹ ಪಾಲಿಸಿಗಳ ಅವಶ್ಯಕತೆಯಿರಬಹುದು.

**g) ಸಂಬಂಧಿತ ಸನ್ನಿವೇಶಗಳು**

ಈ ಕೆಳಗಿನ ಸಂದರ್ಭಗಳಲ್ಲಿ ಅವಧಿ ವಿಮೆ ಸೂಕ್ತತೆಯನ್ನು ಹೊಂದಿರಬಹುದು:

**i.** ಅಡಮಾನ ವಿಮೋಚನೆಯ ಸಂದರ್ಭದಲ್ಲಿ ವಿಮಾ ರಕ್ಷಣೆಯ ಅಗತ್ಯವು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ

**ii.** ಒಂದು ಉಳಿತಾಯ ಯೋಜನೆಗೆ ಹೆಚ್ಚುವರಿ ಪೂರಕವಾಗಿ.

**iii.** "ಅವಧಿ ವಿಮೆಯನ್ನು ಖರೀದಿಸಿ ಮತ್ತು ಉಳಿದ ಹಣವನ್ನು ಹೂಡಿಕೆ ಮಾಡಿ" ತತ್ವದ ಭಾಗವಾಗಿ, ಒಬ್ಬರು ವಿಮಾ ಕಂಪನಿಯಿಂದ ಕೇವಲ ಅಗ್ಗದ ಅವಧಿಯ ವಿಮಾ ರಕ್ಷಣೆಯನ್ನು ಬಯಸುತ್ತಾರೆ ಮತ್ತು ಇತರ ಆಕರ್ಷಕ ಹೂಡಿಕೆಗಳಲ್ಲಿ ಕಂತುಗಳಲ್ಲಿಯ ವ್ಯತ್ಯಾಸವನ್ನು ಹೂಡಿಕೆ ಮಾಡಬಯಸುತ್ತಾರೆ.

| ಪ್ರಮುಖ |
|---|

**ಅವಧಿ ಯೋಜನೆಗಳ ಮಿತಿಗಳು:** ಅವಧಿ ವಿಮಾ ಯೋಜನೆಗಳು ನಿರ್ದಿಷ್ಟ ಅವಧಿಗಳಿಗೆ ಮಾತ್ರ ಲಭ್ಯವಿರುತ್ತವೆ ಮತ್ತು ಒಂದು ನಿರ್ದಿಷ್ಟ ವಯಸ್ಸಿನ ನಂತರ ಅಂದರೆ 65 ಅಥವಾ 70 ವರ್ಷಗಳ ನಂತರ ಕವರೇಜ್ ಅನ್ನು ಮುಂದುವರಿಸಲು ಸಾಧ್ಯವಾಗದೇ ಇರಬಹುದು.

**2. ಸಂಪೂರ್ಣ ಜೀವವಿಮೆ**

ಸಂಪೂರ್ಣ ಜೀವ ವಿಮೆಯು ಶಾಶ್ವತ ಜೀವ ವಿಮಾ ಪಾಲಿಸಿಯ ಒಂದು ಉದಾಹರಣೆಯಾಗಿದೆ. ಇದರಲ್ಲಿ, ಜೀವ ವಿಮಾಗಾರರು ವಿಮಾದಾರರು ಮರಣಹೊಂದಿದಾಗ, ಮರಣವು ಯಾವಾಗ ಸಂಭವಿಸಬಹುದು ಎಂಬುದನ್ನು ಲೆಕ್ಕಿಸದೆ, ಒಪ್ಪಿದ ಮರಣದ ಪ್ರಯೋಜನವನ್ನು ಪಾವತಿಸಲು ಕೊಡುಗೆ ನೀಡುತ್ತಾರೆ. ಕಂತುಗಳನ್ನು ಒಬ್ಬರ ಜೀವನದುದ್ದಕ್ಕೂ ಅಥವಾ ನಿರ್ದಿಷ್ಟಪಡಿಸಿದಂತೆ ಸೀಮಿತ ಅವಧಿಯವರೆಗೆ ಪಾವತಿಸಬಹುದು.

ಸಂಪೂರ್ಣ ಜೀವವಿಮಾ ಪಾಲಿಸಿಗಳು ವಿಮೆದಾರರ ಮರಣದವರೆಗೂ ಜಾರಿಯಲ್ಲಿರುತ್ತವೆ ಮತ್ತು ಯಾವುದೇ ಸಮಯದಲ್ಲಿ ಸಾವಿನ ಪ್ರಯೋಜನವನ್ನು ಪಾವತಿಸುವಂತೆ ವಿನ್ಯಾಸಗೊಳಿಸಲಾಗಿರುವುದರಿಂದ ಸಂಪೂರ್ಣ ಜೀವಿತಾವಧಿ ವಿಮೆಯ ಕಂತುಗಳು ಅವಧಿ ವಿಮೆಯ ಕಂತುಗಳಿಗಿಂತ ಹೆಚ್ಚಾಗಿರುತ್ತವೆ. ಯೋಜನೆಯು ಪಾಲಿಸಿದಾರರ ಖಾತೆಯಲ್ಲಿ ನಗದು ಮೌಲ್ಯವನ್ನು ಸಹ ಒದಗಿಸುತ್ತದೆ. ಅವನು/ಅವಳು ಈ ನಗದು ಮೌಲ್ಯದಿಂದ ಪಾಲಿಸಿ ಸಾಲದ ರೂಪದಲ್ಲಿ ಹಣವನ್ನು ಹಿಂಪಡೆಯಬಹುದು ಅಥವಾ ಅದರ ನಗದು ಮೌಲ್ಯಕ್ಕಾಗಿ ಪಾಲಿಸಿಯನ್ನು ಒಪ್ಪಿಸುವ ಮೂಲಕ ಅದನ್ನು ಮರುಪಡೆಯಬಹುದು.

ಬಾಕಿ ಉಳಿದಿರುವ ಸಾಲಗಳ ಸಂದರ್ಭದಲ್ಲಿ, ಮರಣದ ನಂತರ ಫಲಾನುಭವಿಗಳಿಗೆ ಮಾಡಬೇಕಾದ ಪಾವತಿಯಿಂದ ಸಾಲ ಮತ್ತು ಬಡ್ಡಿಯ ಮೊತ್ತವನ್ನು ಕಡಿತಗೊಳಿಸಲಾಗುತ್ತದೆ.

ಅಕಾಲಿಕ ಮರಣದ ಸಂದರ್ಭದಲ್ಲಿ ಮತ್ತು ಮಾರಣಾಂತಿಕ ಕಾಯಿಲೆಯಂತಹ ವಿವಿಧ ಘಟನೆಗಳಿಂದಾಗುವ ತಮ್ಮ ಬಂಡವಾಳದ ಸವೆತದ ವಿರುದ್ಧ ತಮ್ಮ ಪ್ರೀತಿಪಾತ್ರರನ್ನು ರಕ್ಷಿಸಲು ಬಯಸುವ ಕುಟುಂಬದ ಮುಖ್ಯ ಆದಾಯದಾರರಿಗೆ ಸಂಪೂರ್ಣ ಜೀವನ ಪಾಲಿಸಿಯು ಉತ್ತಮ ಯೋಜನೆಯಾಗಿದೆ. ಅಗತ್ಯವಿದ್ದರೆ, ನಿವೃತ್ತಿಯ ಅಗತ್ಯಗಳಿಗಾಗಿ ಸಹ ಸಂಪೂರ್ಣ ಜೀವ ವಿಮಾ ಪಾಲಿಸಿಯ ನಗದು ಮೌಲ್ಯವನ್ನು ಬಳಸಬಹುದು. ಹೀಗೆ ಸಂಪೂರ್ಣ ಜೀವ ವಿಮೆಯು ಮನೆಯ ಉಳಿತಾಯ ಮತ್ತು ಸಂಪತ್ತನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

### 3. ದತ್ತಿ ಭರವಸೆ

ಪಾಲಿಸಿಯ ಅವಧಿಯಲ್ಲಿ ವಿಮಾದಾರರ ಮರಣ ಸಂಭವಿಸಿದ ಸಂದರ್ಭದಲ್ಲಿ ವಿಮಾದಾರರ ನಾಮನಿರ್ದೇಶಿತರಿಗೆ ವಿಮಾ ಮೊತ್ತವನ್ನು ಪಾವತಿಸಲಾಗುವ ಇದು ಒಂದು ಒಪ್ಪಂದವಾಗಿದೆ. ವಿಮಾದಾರರು ಅವಧಿಯಲ್ಲಿ ಜೀವಿತವಾಗಿ ಉಳಿದುಕೊಂಡರೆ ವಿಮಾದಾರರಿಗೆ ವಿಮಾ ಮೊತ್ತವನ್ನು ಪಾವತಿಸಲಾಗುತ್ತದೆ.

ಉತ್ಪನ್ನವು ಸಾವು ಮತ್ತು ಬದುಕುಳಿಯುವಿಕೆಯ ಲಾಭದ ಎರಡೂ ಅಂಶಗಳನ್ನು ಹೊಂದಿದೆ. ದತ್ತಿ ಭರವಸೆಯು ಉಳಿತಾಯದ ಸಂಚಯನದ ಸುರಕ್ಷಿತ ಮತ್ತು ಕಡ್ಡಾಯ ವಿಧಾನವನ್ನು ನೀಡುವ ಮೂಲಕ ಒಬ್ಬರ ವಿಮೆ ಮತ್ತು ಉಳಿತಾಯ ಯೋಜನೆಗಳನ್ನು ಜೋಡಿಸುತ್ತದೆ.

ದತ್ತಿ ಯೋಜನೆಗಳನ್ನು ಜನರು ವೃದ್ಧಾಪ್ಯದ ವಿರುದ್ಧ ಒದಗಿಸುವ ಖಚಿತವಾದ ಉಪಾಯದ ವಿಧಾನವಾಗಿ ಅಥವಾ (ಎ) ಶೈಕ್ಷಣಿಕ ಉದ್ದೇಶಗಳಿಗಾಗಿ ನಿಧಿಯನ್ನು ಹೊಂದಲು, (ಬಿ) ಮಕ್ಕಳ ಮದುವೆ ವೆಚ್ಚಗಳನ್ನು ಪೂರೈಸಲು ಅಥವಾ (ಸಿ) ಅಡಮಾನ (ವಸತಿ) ಸಾಲವನ್ನು ಪಾವತಿಸುವಂತಹ ನಿರ್ದಿಷ್ಟ ಉದ್ದೇಶಗಳಿಗಾಗಿ ಖರೀದಿಸುತ್ತಾರೆ.

ಸರ್ಕಾರವು ಸಾಮಾನ್ಯವಾಗಿ ಪಾವತಿಸಿದ ಕಂತುಗಳ ಮೇಲೆ ಆಕರ್ಷಕವಾದ ತೆರಿಗೆಯ ಪ್ರಯೋಜನಗಳನ್ನು ನೀಡುತ್ತದೆ. ಅನೇಕ ದತ್ತಿ ಪಾಲಿಸಿಗಳು ವಿಮಾದಾರರು ಅವನ/ಅವಳ ನಿವೃತ್ತಿಗಾಗಿ ಯೋಜಿಸುತ್ತಿರುವಾಗ 55 ರಿಂದ 65 ರ ವಯಸ್ಸಿನಲ್ಲಿ ಪಕ್ವವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಇಂತಹ ಪಾಲಿಸಿಗಳು ನಿವೃತ್ತಿ ಉಳಿತಾಯಗಳಿಗೆ ಪೂರಕವಾಗಬಹುದು.

**ರೂಪಾಂತರಗಳು:** ದತ್ತಿ ಭರವಸೆಯು ಕೆಳಗೆ ಚರ್ಚಿಸಲಾದ ಕೆಲವು ರೂಪಾಂತರಗಳನ್ನು ಹೊಂದಿದೆ -

### 4. ಹಣ ಹಿಂತಿರುಗಿಸುವ ಪಾಲಿಸಿ(ಮನಿ ಬ್ಯಾಕ್ ಪಾಲಿಸಿ)

ಭಾರತದಲ್ಲಿ ಹಣ ಹಿಂತಿರುಗಿಸುವ (ಮನಿ ಬ್ಯಾಕ್) ಪಾಲಿಸಿಯು ಜನಪ್ರಿಯ ದತ್ತಿ ಯೋಜನೆಯಾಗಿದೆ. ಈ ಪಾಲಿಸಿಯು ಅವಧಿಯ ಸಮಯದಲ್ಲಿ ವಿಮಾದಾರರು ಬದುಕಿ ಉಳಿದಿದ್ದರೆ ವಿಮಾ ಮೊತ್ತದ ಕೆಲವು ಭಾಗವನ್ನು ಕಂತುಗಳ ರೂಪದಲ್ಲಿ ಹಿಂದಿರುಗಿಸಲು ಮತ್ತು ಅವಧಿಯ ಕೊನೆಯಲ್ಲಿ ಬಾಕಿ ಮೊತ್ತವನ್ನು ಹಿಂದಿರುಗಿಸುವ ನಿಬಂಧನೆಯನ್ನು ಹೊಂದಿದೆ.

| **ಉದಾಹರಣೆ** |
|---|

**20** ವರ್ಷಗಳ ಹಣ ಹಿಂತಿರುಗಿಸುವ (ಮನಿ ಬ್ಯಾಕ್) ಪಾಲಿಸಿಯು **5**ನೇ, **10**ನೇ ಮತ್ತು **15**ನೇ ವರ್ಷಗಳ ಕೊನೆಯಲ್ಲಿ ವಿಮಾ ಮೊತ್ತದ **20%**ವನ್ನು ಮತ್ತು ಉಳಿದ **40%** ಮೊತ್ತವನ್ನು **20** ವರ್ಷಗಳ ಪೂರ್ಣ ಅವಧಿಯ ಅಂತ್ಯದಲ್ಲಿ ಬದುಕುಳಿಯುವ ಪ್ರಯೋಜನಗಳ ರೂಪದಲ್ಲಿ ಪಾವತಿಸಬಹುದು. ಜೀವ ವಿಮಾದಾರರು **18** ವರ್ಷಗಳ ಅಂತ್ಯದಲ್ಲಿ ಮರಣಹೊಂದಿದರೆ, ಈಗಾಗಲೇ ಹಣ ಹಿಂತಿರುಗಿಸುವ ಮೌಲ್ಯದ ಪ್ರಕಾರ ವಿಮಾದಾರರಿಗೆ ನೀಡಬೇಕಾದ ಲಾಭವು **60%** ರಷ್ಟು ಆಗಿದ್ದರೂ ಸಹ, ಸಂಪೂರ್ಣ ವಿಮಾ ಮೊತ್ತ ಮತ್ತು ಬೋನಸ್ ಗಳನ್ನು (ಮುಂದಿನ ವಿಭಾಗದಲ್ಲಿ ವಿವರಿಸಲಾಗಿದೆ) ಮರಣದ ಲಾಭವಾಗಿ ಪಾವತಿಸಲಾಗುತ್ತದೆ.

ಹಣ ಹಿಂತಿರುಗಿಸುವ(ಮನಿ ಬ್ಯಾಕ್) ಯೋಜನೆಗಳು ಅಲ್ಪ ಮತ್ತು ಮಧ್ಯಮ ಅವಧಿಯ ಅಗತ್ಯಗಳನ್ನು ಪೂರೈಸಲು ಆಕರ್ಷಕವಾಗಿದ್ದು ಅವುಗಳ ನಗದೀಕರಣ ಸಾಧ್ಯತೆ(ಕ್ಯಾಶ್ ಬ್ಯಾಕ್)ಯ ಅಂಶದಿಂದಾಗಿ ಜನಪ್ರಿಯವಾಗಿವೆ. ಪಾಲಿಸಿಯ ಅವಧಿಯಲ್ಲಿ ವ್ಯಕ್ತಿಯು ಯಾವುದೇ ಹಂತದಲ್ಲಿ ಮರಣಹೊಂದಿದರೆ ಅಂತಹ ಯೋಜನೆಗಳು ಸಂಪೂರ್ಣ ಸಾವಿನ ರಕ್ಷಣೆಯನ್ನು ಸಹ ಒದಗಿಸುತ್ತವೆ.

### 5. ಭಾಗವಹಿಸುವಿಕೆಯ (ಪಾರ್) ಮತ್ತು ಭಾಗವಹಿಸದ (ನಾನ್-ಪಾರ್) ಯೋಜನೆಗಳು

ಜೀವ ವಿಮಾ ಉತ್ಪನ್ನಗಳನ್ನು ಭಾಗವಹಿಸುವ (ಪಾರ್) ಮತ್ತು ಭಾಗವಹಿಸದ (ನಾನ್-ಪಾರ್) ಉತ್ಪನ್ನಗಳೆಂದು ಸಹ ವರ್ಗೀಕರಿಸಬಹುದು. "ಪಾರ್" ಎಂಬ ಪದವು ಜೀವ ವಿಮಾದಾರರ ಲಾಭದಲ್ಲಿ ಭಾಗವಹಿಸುವ ಪಾಲಿಸಿಗಳನ್ನು ಸೂಚಿಸುತ್ತದೆ. ಮತ್ತೊಂದೆಡೆ, "ನಾನ್-ಪಾರ್" ಲಾಭದಲ್ಲಿ ಭಾಗವಹಿಸದ ಪಾಲಿಸಿಗಳನ್ನು ಪ್ರತಿನಿಧಿಸುತ್ತದೆ. ಸಾಂಪ್ರದಾಯಿಕ ಜೀವ ವಿಮೆಯಲ್ಲಿ ಎರಡೂ ವಿಧಗಳಿವೆ. ಎಲ್ಲ ಸಾಂಪ್ರದಾಯಿಕ ಯೋಜನೆಗಳಡಿಯಲ್ಲಿ, ಪಾಲಿಸಿದಾರರ ಕಂತುಗಳಿಂದ ಪಡೆಯಲಾದ ಸಂಚಯನ ಮಾಡಿದ ಜೀವ ನಿಧಿಗಳನ್ನು ನಿಯಂತ್ರಕ ಮಾನದಂಡಗಳ ಪ್ರಕಾರ ಹೂಡಿಕೆ ಮಾಡಲಾಗುತ್ತದೆ. 'ಪಾರ್ ಪ್ರಾಡಕ್ಟ್'ಗಳನ್ನು ಆಯ್ಕೆ ಮಾಡಿಕೊಳ್ಳುವ ಪಾಲಿಸಿದಾರರು ಖಾತ್ರಿ ಮೊತ್ತದ ಜೊತೆಗೆ ವಿಮಾಗಾರರಿಂದ ಉತ್ಪತ್ತಿಯಾಗುವ ಹೆಚ್ಚುವರಿ(ಬೋನಸ್ ಗಳು) ಗಳಲ್ಲಿ ಪಾಲನ್ನು ಪಡೆಯಲು ಅರ್ಹರಾಗಿರುತ್ತಾರೆ. ಇವುಗಳನ್ನು 'ಲಾಭಸಹಿತ(ವಿತ್ ಪ್ರಾಫಿಟ್)' ಯೋಜನೆಗಳೆಂದು ಕರೆಯಲಾಗುತ್ತದೆ.

## 6. ಭಾಗವಹಿಸದ ಉತ್ಪನ್ನಗಳು

ಲಾಭರಹಿತ ಲಿಂಕ್ ಮಾಡದ [ನಾನ್-ಪಾರ್] ಯೋಜನೆಗಳನ್ನು ಖರೀದಿಸುವ ಪಾಲಿಸಿದಾರರಿಗೆ ಒಪ್ಪಂದದ ಪ್ರಾರಂಭದಲ್ಲಿ ಖಾತರಿಪಡಿಸಲಾದ ಮತ್ತು ಅದಕ್ಕಿಂತ ಹೆಚ್ಚಿಲ್ಲದ ಲಾಭವನ್ನು ಪಾವತಿಸಲಾಗುತ್ತದೆ. ಭಾಗವಹಿಸದ ಉತ್ಪನ್ನಗಳನ್ನು 'ಲಿಂಕ್ಡ್ ಪ್ಲಾಟ್‌ಫಾರ್ಮ್' ಅಥವಾ 'ಲಿಂಕ್ ಮಾಡದ ಪ್ಲಾಟ್‌ಫಾರ್ಮ್' ಅಡಿಯಲ್ಲಿ ನೀಡಬಹುದು. ಇವುಗಳನ್ನು 'ಲಾಭರಹಿತ' ಯೋಜನೆಗಳೆಂದು ಕರೆಯಲಾಗುತ್ತದೆ.

| ಉದಾಹರಣೆ |
|---|

ಇಪ್ಪತ್ತು ವರ್ಷಗಳ ಪ್ರತಿ ವರ್ಷ ಅವಧಿಯ ವಿಮಾ ಮೊತ್ತದ **2%** ರಷ್ಟು ಖಾತರಿಯ ಸೇರ್ಪಡೆಯನ್ನು ಒದಗಿಸುತ್ತ ಪರಿಪಕ್ವತೆ(ಮೆಚ್ಯೂರಿಟಿ )ಯ ಸಮಯದ ಲಾಭವು ವಿಮಾ ಮೊತ್ತದ ಒಟ್ಟು **40%** ಸೇರ್ಪಡೆಯಾಗುವ ದತ್ತಿ ಪಾಲಿಸಿಯನ್ನು ಹೊಂದಿರಬಹುದು.

---

ಐಆರ್ ಡಿಎಐಯ ಮಾರ್ಗಸೂಚಿಗಳಡಿಯಲ್ಲಿ ನಿರ್ದಿಷ್ಟಪಡಿಸಿದ ಘಟನೆ ಸಂಭವಿಸಿದಾಗ ಪಾವತಿಸಬೇಕಾದ ಸಾಂಪ್ರದಾಯಿಕ ನಾನ್-ಪಾರ್ ಪಾಲಿಸಿಗಳ ಮೇಲಿನ ಪ್ರಯೋಜನಗಳನ್ನು ಆರಂಭದಲ್ಲಿಯೇ ಸ್ಪಷ್ಟವಾಗಿ ಹೇಳಬೇಕು ಮತ್ತು ಇಂಡೆಕ್ಸ್ ಅಥವಾ ಬೆಂಚ್ ಮಾರ್ಕ್ ಗೆ ಲಿಂಕ್ ಮಾಡಬಾರದು. ನಿಯಮಿತ ಮಧ್ಯಂತರದಲ್ಲಿ ಸಂಗ್ರಹವಾಗುವ ಹೆಚ್ಚುವರಿ ಪ್ರಯೋಜನಗಳಿಗೆ ಸಹ ಇದು ಅನ್ವಯಿಸುತ್ತದೆ. ಈ ಪಾಲಿಸಿಗಳ ಮೇಲಿನ ಆದಾಯವನ್ನು ಪಾಲಿಸಿಯನ್ನು ತೆಗೆದುಕೊಳ್ಳುವ ಸಮಯದಲ್ಲಿಯೇ ಬಹಿರಂಗಪಡಿಸಬೇಕು ಎಂದು ಇದರರ್ಥ.

| ಪ್ರಮುಖ |
|---|

**ಸಾವಿನ ಪ್ರಯೋಜನಗಳು ಕಾಲಕಾಲಕ್ಕೆ ನೀಡಲಾದ ಐಆರ್ ಡಿಎಐ ನಿಯಮಗಳಿಗೆ ಒಳಪಟ್ಟಿರುತ್ತವೆ. ಪ್ರಸ್ತುತ, ಸಾಂಪ್ರದಾಯಿಕ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಐಆರ್ ಡಿಎಐ (ನಾನ್-ಲಿಂಕ್ಡ್) ಉತ್ಪನ್ನಗಳ ನಿಯಂತ್ರಣ, 2019 ರ ಹೊಸ ನಿಯಮಾವಳಿ 9 ರ ಪ್ರಕಾರ, ಸಾವಿನ ಕನಿಷ್ಠ ಕವರ್ ಈ ಕೆಳಗಿನಂತಿದೆ:**

ಎಲ್ಲ ನಾನ್-ಲಿಂಕ್ಡ್ ವೈಯಕ್ತಿಕ ಜೀವ ವಿಮಾ ಉತ್ಪನ್ನಗಳ ಸಂದರ್ಭದಲ್ಲಿ, ಪಾಲಿಸಿಯ ಸಂಪೂರ್ಣ ಅವಧಿಯಲ್ಲಿ ಮರಣದ ಮೇಲಿನ ಕನಿಷ್ಠ ವಿಮಾ ಮೊತ್ತವು ವಾರ್ಷಿಕ ಕಂತಿನ, ಸೀಮಿತ ಅಥವಾ ನಿಯಮಿತ ಕಂತಿನ ಉತ್ಪನ್ನಗಳಿಗೆ 7 ಪಟ್ಟುಗಳಿಗಿಂತ ಕಡಿಮೆಯಾಗಿರಬಾರದು ಮತ್ತು ಏಕ ಕಂತಿನ ಸಂದರ್ಭದಲ್ಲಿ ಕಂತಿನ 1.25 ಪಟ್ಟು ಹೆಚ್ಚಾಗಿರಬೇಕು.

ಭಾಗವಹಿಸುವ ಉತ್ಪನ್ನಗಳ ಸಂದರ್ಭದಲ್ಲಿ, ಮರಣದ ಮೇಲಿನ ವಿಮಾ ಮೊತ್ತಕ್ಕೆ ಹೆಚ್ಚುವರಿಯಾಗಿ, ಪಾಲಿಸಿಯಲ್ಲಿ ಹೇಳಲಾದ ಮತ್ತು ಮೊದಲೇ ಪಾವತಿಸಿಲ್ಲದಿದ್ದರೆ ಮರಣದ ದಿನಾಂಕದವರೆಗೆ ಸಂಚಿತವಾದ ಬೋನಸ್ ಮತ್ತು ಹೆಚ್ಚುವರಿ ಪ್ರಯೋಜನಗಳನ್ನು ಮರಣದ ಪ್ರಯೋಜನದ ಭಾಗವಾಗಿ ಮರಣದ ನಂತರ ಪಾವತಿಸಬೇಕಾಗುತ್ತದೆ. ಮೂಲಭೂತವಾಗಿ, ಭಾಗವಹಿಸುವ ಮತ್ತು ಭಾಗವಹಿಸದ ಯೋಜನೆಗಳೆಂಬ ಎರಡು ರೂಪಾಂತರಗಳಿವೆ.

i. ಭಾಗವಹಿಸುವ ಪಾಲಿಸಿಗಳಿಗೆ ಬೋನಸ್‌ಅನ್ನು ನಿಧಿಯ ಹೂಡಿಕೆಯ ಕಾರ್ಯಕ್ಷಮತೆಯೊಂದಿಗೆ ಲಿಂಕ್ ಮಾಡಲಾಗಿರುತ್ತದೆ ಮತ್ತು ಮೊದಲೇ ಘೋಷಿತ ಅಥವಾ ಖಾತರಿಪಡಿಸಲಾಗಿರುವುದಿಲ್ಲ. ಬೋನಸ್ ಅನ್ನು ಘೋಷಿಸಿದ ನಂತರ ಅದು ಖಾತರಿಯಾಗಿ ಪರಿಣಮಿಸುತ್ತದೆ. ಪಾಲಿಸಿದಾರರ ಮರಣ ಅಥವಾ ಪಾಲಿಸಿ ಪರಿಪಕ್ವತೆ(ಮೆಚ್ಯೂರಿಟಿ)ಯ ಲಾಭದ ಸಂದರ್ಭದಲ್ಲಿ ಇದನ್ನು ಸಾಮಾನ್ಯವಾಗಿ ಪಾವತಿಸಲಾಗುತ್ತದೆ. ಈ ಬೋನಸ್ ಅನ್ನು ರಿವರ್ಷನರಿ ಬೋನಸ್ ಎಂದೂ ಕರೆಯುತ್ತಾರೆ.

ii. ಭಾಗವಹಿಸದ ಪಾಲಿಸಿಗಳ ಸಂದರ್ಭದಲ್ಲಿ, ಪಾಲಿಸಿಯ ಮೇಲಿನ ಆದಾಯವನ್ನು ಪಾಲಿಸಿಯ ಪ್ರಾರಂಭದಲ್ಲಿಯೇ

ಬಹಿರಂಗಪಡಿಸಲಾಗುತ್ತದೆ.

## 7. ಪಿಂಚಣಿ ಯೋಜನೆಗಳು ಮತ್ತು ವರ್ಷಾಶನಗಳು

ಪಿಂಚಣಿ ಯೋಜನೆಯು ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಉದ್ಯೋಗದಲ್ಲಿರುವಾಗಿನ ವರ್ಷಗಳಲ್ಲಿ ಹಣವನ್ನು ಪಾವತಿಸುವ ನಿಧಿಯಾಗಿದೆ ಮತ್ತು ಆವರ್ತಕ ಪಾವತಿಗಳ ರೂಪದಲ್ಲಿ ಕೆಲಸದಿಂದ ನಿವೃತ್ತಿ ಹೊಂದಿದ ನಂತರ ವ್ಯಕ್ತಿಯನ್ನು ಬೆಂಬಲಿಸಲು ಹಣವನ್ನು ಹಿಂಪಡೆಯಲಾಗುತ್ತದೆ.

ಪಿಂಚಣಿ ಯೋಜನೆಗಳನ್ನು ಗುಂಪು (ಸಾಮಾನ್ಯವಾಗಿ ಉದ್ಯೋಗದಾತರಿಂದ ಚಾಲಿತ) ಅಥವಾ ವೈಯಕ್ತಿಕ ಆಧಾರದ ಮೇಲೆ ವಿನ್ಯಾಸಗೊಳಿಸಲಾಗಿದೆ. ಒಂದು ಗುಂಪು ಪಿಂಚಣಿಯು ಒಬ್ಬ ವ್ಯಕ್ತಿಗೆ ಸ್ಥಿರ ಮೊತ್ತವನ್ನು ನಿಯಮಿತವಾಗಿ ಪಾವತಿಸಲಾಗುವ "ಸ್ಪಷ್ಟಪಡಿಸಿದ ಪ್ರಯೋಜನ ಯೋಜನೆ"ಯಾಗಿರಬಹುದು ಅಥವಾ ನಿಶ್ಚಿತ ಮೊತ್ತವನ್ನು ಹೂಡಿಕೆ ಮಾಡಲಾದ ಮತ್ತು ನಿವೃತ್ತಿಯ ವಯಸ್ಸಿನಲ್ಲಿ ಲಭ್ಯವಾಗುವ "ನಿರ್ಧರಿತ ಕೊಡುಗೆ ಯೋಜನೆ"ಯಾಗಿರಬಹುದು. ಹೀಗೆ ಪಿಂಚಣಿಗಳು ಮೂಲಭೂತವಾಗಿ ದೀರ್ಘಾಯುಷ್ಯದ ಅಪಾಯದ ವಿರುದ್ಧ ವಿಮೆ ಮಾಡುವ ಖಾತರಿಪಡಿಸುವ ಜೀವನ ವರ್ಷಾಶನಗಳಾಗಿವೆ. ಉದ್ಯೋಗಿಯ ಪ್ರಯೋಜನಕ್ಕಾಗಿ ಉದ್ಯೋಗದಾತರಿಂದ ರಚಿಸಲ್ಪಟ್ಟ ಪಿಂಚಣಿಯನ್ನು ಸಾಮಾನ್ಯವಾಗಿ ಔದ್ಯೋಗಿಕ ಅಥವಾ ಉದ್ಯೋಗದಾತರ ಪಿಂಚಣಿ ಎಂದು ಕರೆಯಲಾಗುತ್ತದೆ.

ನಿವೃತ್ತಿಯ ನಂತರ, ಸಾಮಾನ್ಯವಾಗಿ ಸದಸ್ಯರ ಖಾತೆಯಲ್ಲಿರುವ ಹಣವನ್ನು ನಿಯಮಿತ ಆದಾಯವನ್ನು ನೀಡುವ ವರ್ಷಾಶನವನ್ನು ಖರೀದಿಸುವ ಮೂಲಕ ನಿವೃತ್ತಿ ಪ್ರಯೋಜನಗಳನ್ನು ಒದಗಿಸಲು ಬಳಸಲಾಗುತ್ತದೆ. ವರ್ಷಾಶನವು ಆದಾಯವು ಮುಗಿದ ಮೇಲೆ ಜೀವಿಸುವ ಅಪಾಯದಿಂದ ವ್ಯಕ್ತಿಯನ್ನು ರಕ್ಷಿಸುವಲ್ಲಿ ಸಹಾಯವಾಗುವಂತೆ ವಿನ್ಯಾಸಗೊಳಿಸಲಾದ ವಿಮಾ ಕಂಪನಿಯಿಂದ ನೀಡಲಾದ ದೀರ್ಘಾವಧಿಯ ಹೂಡಿಕೆಯಾಗಿದೆ. ವರ್ಷಾಶನದ ಮೂಲಕ, ಒಬ್ಬರ ಕೊಡುಗೆಗಳನ್ನು ಜೀವನಪರ್ಯಂತ ಉಳಿಯಬಹುದಾದ ಆವರ್ತಕ ಪಾವತಿಗಳನ್ನಾಗಿ ಪರಿವರ್ತಿಸಲಾಗುತ್ತದೆ.

ವಿಮಾ ಕಂಪನಿಗಳಿಂದ ಪಿಂಚಣಿ ಯೋಜನೆಗಳನ್ನು ಖರೀದಿಸುವ ಮೂಲಕ ವ್ಯಕ್ತಿಗಳು ಪಿಂಚಣಿ ಪ್ರಯೋಜನಗಳನ್ನು ಪಡೆಯಬಹುದು. ಪಿಂಚಣಿ ಯೋಜನೆಗಳು ಒಬ್ಬ ವ್ಯಕ್ತಿಗೆ **ಸಂಚಯ ಅಥವಾ**

**ಮುಂದೂಡಲ್ಪಟ್ಟ ಆಧಾರ**ದ ಮೇಲೆ ಎರಡು ರೀತಿಯಲ್ಲಿ ಕೊಡುಗೆಯನ್ನು ನೀಡಲು ಅನುವು ಮಾಡಿಕೊಡುತ್ತವೆ **(i)** ಒಟ್ಟು ಮೊತ್ತದಲ್ಲಿ, ಅಥವಾ **(ii)** ಕಾಲಾಂತರದಲ್ಲಿ; ಇದರಿಂದ ಅವನು/ಅವಳು ಬಯಸಿದ ವಯಸ್ಸು/ದಿನಾಂಕ('ವೆಸ್ಟಿಂಗ್' ದಿನಾಂಕ ಎಂದು ಕರೆಯಲಾಗುತ್ತದೆ)ದಿಂದ ಪಿಂಚಣಿಯನ್ನು ಪಡೆಯಬಹುದು. ವ್ಯಕ್ತಿಯು ಮಾಸಿಕ, ತ್ರೈಮಾಸಿಕ, ಅರ್ಧವಾರ್ಷಿಕ ಅಥವಾ ವಾರ್ಷಿಕ ವಿಧಾನಗಳಲ್ಲಿ ಪಿಂಚಣಿ/ವರ್ಷಾಶನಗಳನ್ನು ಸ್ವೀಕರಿಸುವುದನ್ನು ಆಯ್ಕೆ ಮಾಡಬಹುದು. ಪಿಂಚಣಿ ಯೋಜನೆಗಳು ತಕ್ಷಣದ ವರ್ಷಾಶನ ಎಂದು ಕರೆಯಲ್ಪಡುವ ಒಟ್ಟು ಮೊತ್ತದ ಪಾವತಿಯ ಮೇಲೆ ಖರೀದಿಯ ಮುಂದಿನ ತಿಂಗಳಿನಿಂದ ತಕ್ಷಣದ ಆಧಾರದ ಮೇಲೆ ಸಹ ಲಭ್ಯವಿರುತ್ತವೆ,.

ಭಾರತೀಯ ವಿಮಾ ಉದ್ಯಮವು ಜೀವ ವಿಮಾಗಾರರ ಮುಖಾಂತರ ಹಲವಾರು ಕಾಲಾಂತರದ ಮತ್ತು ತಕ್ಷಣದ ವರ್ಷಾಶನ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ. ಪ್ರತಿಯೊಂದು ಉತ್ಪನ್ನವು ತನ್ನದೇ ಆದ ವೈಶಿಷ್ಟ್ಯಗಳು, ನಿಯಮಗಳು, ಷರತ್ತುಗಳು ಮತ್ತು ವರ್ಷಾಶನದ ಆಯ್ಕೆಗಳನ್ನು ಹೊಂದಿರುತ್ತದೆ.

**ಸರಳ ಪಿಂಚಣಿ:** ವಿಮಾಗಾರರಾದ್ಯಂತ ಏಕರೂಪತೆಯನ್ನು ಒದಗಿಸಲು, ವರ್ಷಾಶನ ಯೋಜನೆಗಳ ಬಗ್ಗೆ ಮಾರುಕಟ್ಟೆಯಲ್ಲಿ ಗೊಂದಲವನ್ನು ಕಡಿಮೆ ಮಾಡಲು ಮತ್ತು ಸರಾಸರಿ ಗ್ರಾಹಕರ ಅಗತ್ಯಗಳನ್ನು ವಿಶಾಲವಾಗಿ ಪೂರೈಸುವ ಉತ್ಪನ್ನವನ್ನು ಲಭ್ಯವಾಗುವಂತೆ ಮಾಡಲು, ಜನವರಿ 2021 ರಲ್ಲಿ, ಐಆರ್ ಡಿಎಐ ಎಲ್ಲ ಜೀವ ವಿಮಾಗಾರರನ್ನು ವೈಯಕ್ತಿಕ (ಗುಂಪು ಅಲ್ಲ) ಆಧಾರದ ಮೇಲೆ ಸರಳ ವೈಶಿಷ್ಟ್ಯಗಳು ಮತ್ತು ಪ್ರಮಾಣಿತ ನಿಯಮಗಳು ಮತ್ತು ಷರತ್ತುಗಳೊಂದಿಗೆ ತಕ್ಷಣದ ವರ್ಷಾಶನದ ಒಂದು ಪ್ರಮಾಣಿತ ಉತ್ಪನ್ನವನ್ನು ಪರಿಚಯಿಸಲು ಕಡ್ಡಾಯಗೊಳಿಸಿತು. ಅಂತಹ ಪ್ರಮಾಣಿತ ಉತ್ಪನ್ನವು ಗ್ರಾಹಕರಿಗೆ ತಿಳುವಳಿಕೆಯುಳ್ಳ ಆಯ್ಕೆಯನ್ನು ಮಾಡಲು, ವಿಮಾಗಾರರು ಮತ್ತು ವಿಮಾದಾರರ ನಡುವಿನ ನಂಬಿಕೆಯನ್ನು ಹೆಚ್ಚಿಸಲು ಮತ್ತು ತಪ್ಪು-ಮಾರಾಟ ಮತ್ತು ಸಂಭಾವ್ಯ ವಿವಾದಗಳನ್ನು ಕಡಿಮೆ ಮಾಡುವುದನ್ನು ಸುಲಭಗೊಳಿಸುತ್ತದೆ.

ಪ್ರಮಾಣಿತ ವೈಯಕ್ತಿಕ ತಕ್ಷಣ ವರ್ಷಾಶನದ ಉತ್ಪನ್ನವನ್ನು "ಸರಳ ಪಿಂಚಣಿ" ಎಂದು ಕರೆಯಲಾಗುತ್ತದೆ, ಇದನ್ನು ವಿಮಾದಾರರ ಹೆಸರಿನ ಪೂರ್ವದಲ್ಲಿ ಜೋಡಿಸಲಾಗಿದೆ. ಉತ್ಪನ್ನವು ಈ ಕೆಳಗೆ ತೋರಿಸಿದಂತೆ ಎರಡು (ಮತ್ತು ಕೇವಲ ಎರಡು) ವರ್ಷಾಶನದ ಆಯ್ಕೆಗಳನ್ನು ನೀಡುತ್ತದೆ:

- **a)** 100% ಖರೀದಿ ಬೆಲೆಯ ಮರುಪಾವತಿಯೊಂದಿಗೆ ಜೀವಿತ ವರ್ಷಾಶನ; ಮತ್ತು
- **b)** ಜಂಟಿ ಜೀವ ವರ್ಷಾಶನವು ಪ್ರಾಥಮಿಕ ವರ್ಷಾಶನದಾರರ ಮರಣದ ನಂತರ ದ್ವಿತೀಯ ವರ್ಷಾಶನದಾರರಿಗೆ 100% ವರ್ಷಾಶನವನ್ನು ಒದಗಿಸುವುದರೊಂದಿಗೆ ಮತ್ತು ಕೊನೆಯವರೆಗೆ ಬದುಕುಳಿದವರ ಮರಣದ ನಂತರ 100% ಖರೀದಿ ಬೆಲೆಯನ್ನು ಹಿಂತಿರುಗಿಸುತ್ತದೆ.

ವರ್ಷಾಶನ ಪಾವತಿಯ ವಿಧಾನವು ಮಾಸಿಕ, ತ್ರೈಮಾಸಿಕ, ಅರ್ಧ-ವಾರ್ಷಿಕ ಮತ್ತು ವಾರ್ಷಿಕವಾಗಿರುತ್ತದೆ. ಐಆರ್ ಡಿಎಐ ವೆಬ್‌ಸೈಟ್‌ನ ಈ ಕೆಳಗಿನ ಲಿಂಕ್ ನಲ್ಲಿ ವಿವರಗಳು ಲಭ್ಯವಾಗಿರುತ್ತವೆ - https://www.irdai.gov.in/ADMINCMS/cms/whatsNew_Layout.aspx?page=PageNo4353&flag=1

**ನಿಮ್ಮನ್ನು ಪರೀಕ್ಷಿಸಿ 2**

ಸಂಪೂರ್ಣ ಜೀವ ವಿಮೆಗೆ ಪಾವತಿಸಿದ ಕಂತು ಅವಧಿಯ ಭರವಸೆಗಾಗಿ ಪಾವತಿಸಿದ ಕಂತಿಗಿಂತ ___________ ಆಗಿದೆ.

I. ಹೆಚ್ಚು

II. ಕಡಿಮೆ

III. ಸಮಾನ

IV. ಗಣನೀಯವಾಗಿ ಹೆಚ್ಚಾಗಿದೆ

---

**ಸಾರಾಂಶ**

- ಜೀವ ವಿಮಾ ಉತ್ಪನ್ನಗಳು ಅವನ/ಅವಳ ಅವಲಂಬಿತರಿಗೆ ಅಥವಾ ಸ್ವತಃ ಅವರಿಗೆ ಲಭ್ಯವಿರುವ ವ್ಯಕ್ತಿಯ ಉತ್ಪಾದಕ ಸಾಮರ್ಥ್ಯಗಳ ಆರ್ಥಿಕ ಮೌಲ್ಯದ ನಷ್ಟದ ವಿರುದ್ಧ ರಕ್ಷಣೆಯನ್ನು ನೀಡುತ್ತವೆ.
- ಒಂದು ಜೀವ ವಿಮಾ ಪಾಲಿಸಿಯು, ಮುಖ್ಯವಾಗಿ ವ್ಯಕ್ತಿಗೆ ಏನಾದರೂ ದುರದೃಷ್ಟಕರ ಸಂಭವಿಸಿದಲ್ಲಿ ಅವರ ಆತ್ಮೀಯರಿಗೆ ಮನಸ್ಸಿನ ಶಾಂತಿ ಮತ್ತು ರಕ್ಷಣೆಯನ್ನು ಒದಗಿಸುತ್ತದೆ.
- ಅವಧಿ ವಿಮಾ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಮಾನ್ಯವಾದ ರಕ್ಷಣೆಯನ್ನು ಒದಗಿಸಲಾಗುತ್ತದೆ.
- ಅವಧಿ ಭರವಸೆಯ ವಿಶಿಷ್ಟ ಮಾರಾಟದ ಯೋಜನೆ (ಯುಎಸ್ ಪಿ)ಯ ಬೆಲೆ ಕಡಿಮೆಯಾಗಿದ್ದು, ಸೀಮಿತವಾದ ಬಜೆಟ್‌ನಲ್ಲಿ ತುಲನಾತ್ಮಕವಾಗಿ ದೊಡ್ಡ ಪ್ರಮಾಣದ ಜೀವ ವಿಮೆಯನ್ನು ಖರೀದಿಸಲು ಅನುವು ಮಾಡಿಕೊಡುತ್ತದೆ.
- ಅವಧಿ ಭರವಸೆ ಪಾಲಿಸಿಗಳು ತಾತ್ಕಾಲಿಕ ಅವಧಿಗೆ ರಕ್ಷಣೆಯನ್ನು ನೀಡುವ ತಾತ್ಕಾಲಿಕ ಭರವಸೆಯ ಉದಾಹರಣೆಗಳಾಗಿದ್ದರೆ, ಸಂಪೂರ್ಣ ಜೀವ ವಿಮೆಯು ಶಾಶ್ವತ ಜೀವ ವಿಮಾ ಪಾಲಿಸಿಯ ಉದಾಹರಣೆಯಾಗಿದೆ.

---

**ಪ್ರಮುಖ ಪದಗಳು**

1. ಅವಧಿ ವಿಮೆ
2. ಸಂಪೂರ್ಣ ಜೀವವಿಮೆ
3. ದತ್ತಿ ಭರವಸೆ
4. ಹಣದ ಮರುಪಾವತಿ(ಮನಿ ಬ್ಯಾಕ್) ಪಾಲಿಸಿ
5. ಪಾರ್ ಮತ್ತು ನಾನ್ ಪಾರ್ ಯೋಜನೆಗಳು

| ನಿಮ್ಮನ್ನು ಪರೀಕ್ಷಿಸಿಯ ಉತ್ತರಗಳು | |
|---|---|
| ಉತ್ತರ 1 | - ಸರಿಯಾದ ಆಯ್ಕೆ **III** ಆಗಿದೆ. |
| ಉತ್ತರ **2** | - ಸರಿಯಾದ ಆಯ್ಕೆ **I** ಆಗಿದೆ. |

# ಅಧ್ಯಾಯ L-04

# ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳು

**ಅಧ್ಯಾಯ ಪರಿಚಯ**

ಈ ಅಧ್ಯಾಯವು ನಿಮಗೆ ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳ ಜಗತ್ತನ್ನು ಪರಿಚಯಿಸುತ್ತದೆ. ಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳ ಮಿತಿಗಳನ್ನು ಪರೀಕ್ಷಿಸುವ ಮೂಲಕ ನಾವು ಪ್ರಾರಂಭಿಸುತ್ತೇವೆ ಮತ್ತು ನಂತರ ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳ ಬಗ್ಗೆ ನೋಡೋಣ. ಅಂತಿಮವಾಗಿ ನಾವು ಮಾರುಕಟ್ಟೆಯಲ್ಲಿ ಲಭ್ಯವಿರುವ ಕೆಲವು ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳನ್ನು ನೋಡುತ್ತೇವೆ.

**ಕಲಿಕೆಯ ಫಲಿತಾಂಶಗಳು**

A. *ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳ ಅವಲೋಕನ*

B. *ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳು*

## A. ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳ ಅವಲೋಕನ

### 1. ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳು - ಉದ್ದೇಶ ಮತ್ತು ಅಗತ್ಯ

ಹಿಂದಿನ ಅಧ್ಯಾಯಗಳಲ್ಲಿ ನಾವು ವಿಮೆ ಮತ್ತು ಉಳಿತಾಯದ ಅಂಶವನ್ನು ಹೊಂದಿರುವ ಕೆಲವು ಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನಗಳನ್ನು ಪರಿಗಣಿಸಿದ್ದೇವೆ.

ಹಣಕಾಸು ಮಾರುಕಟ್ಟೆಯಲ್ಲಿನ ಇತರ ಆಸ್ತಿಗಳಿಗೆ ಹೋಲಿಸಿಬಹುದಾದ ಆದಾಯದ ದರವನ್ನು ಒದಗಿಸಲು ಸಾಂಪ್ರದಾಯಿಕ ಜೀವ ವಿಮಾ ಪಾಲಿಸಿಗಳ ಸಾಮರ್ಥ್ಯವನ್ನು ಜನರು ಪ್ರಶ್ನಿಸುತ್ತಿದ್ದಾರೆ. ಪ್ರಯೋಜನಗಳು ಮತ್ತು ಕಂತುಗಳ ಒಂದೇ ಪ್ಯಾಕೇಜ್ ಆಗಿ ಅವುಗಳನ್ನು ರಚಿಸುವ ವಿಧಾನದ ಬಗ್ಗೆಯೂ ಸಹ ಸಮಸ್ಯೆಗಳನ್ನು ಎತ್ತಲಾಗಿದೆ.

### 2. ಸಾಂಪ್ರದಾಯಿಕ ಉತ್ಪನ್ನಗಳ ಮಿತಿಗಳು

ವಿಮರ್ಶಾತ್ಮಕ ಪರೀಕ್ಷೆಯು ಈ ಕೆಳಗಿನ ಕಾಳಜಿಯ ಪ್ರಶ್ನೆಗಳನ್ನು ಬಹಿರಂಗಪಡಿಸುತ್ತದೆ:

**ನಗದು ಮೌಲ್ಯದ ಘಟಕ:** ಸಾಂಪ್ರದಾಯಿಕ ಪಾಲಿಸಿಗಳಲ್ಲಿಯ ಉಳಿತಾಯ ಅಥವಾ ನಗದು ಮೌಲ್ಯದ ಅಂಶವನ್ನು ಸರಿಯಾಗಿ ವ್ಯಾಖ್ಯಾನಿಸಲಾಗಿಲ್ಲ. ಇದು ಈ ಪಾಲಿಸಿಯನ್ನು ಮರಣಸಾಧ್ಯತೆ, ಬಡ್ಡಿದರಗಳು, ವೆಚ್ಚಗಳು ಮತ್ತು ಮಾಡಲಾದ ಇತರ ನಿಯತಾಂಕಗಳ ಬಗ್ಗೆ ಕಡಿಮೆ ಪಾರದರ್ಶಕವಾಗಿರುತ್ತದೆ.

ಮೌಲ್ಯವನ್ನು, ಒಪ್ಪಂದವು ಕೊನೆಗೊಂಡಾಗ ಮಾತ್ರ ತಿಳಿಯಬಹುದಾದ್ದರಿಂದ ಸಾಂಪ್ರದಾಯಿಕ ಪಾಲಿಸಿಗಳ ಮೇಲಿನ ಆದಾಯದ ದರವನ್ನು ಖಚಿತಪಡಿಸಿಕೊಳ್ಳುವುದು ಸುಲಭವಾಗಿರುವುದಿಲ್ಲ. ಇದರಿಂದಾಗಿ ಈ ಪಾಲಿಸಿಗಳನ್ನು ಇತರ ಹಣಕಾಸು ಸಾಧನಗಳೊಂದಿಗೆ ಹೋಲಿಸಲು ಕಷ್ಟಕರವಾಗುತ್ತದೆ.

**ಶರಣಾಗತಿ ಮೌಲ್ಯ:** ನಗದು ಮತ್ತು ಶರಣಾಗತಿ ಮೌಲ್ಯಗಳನ್ನು (ಯಾವುದೇ ಸಮಯದಲ್ಲಿ) ತಲುಪುವ ವಿಧಾನವು ಜೀವ ವಿಮಾಗಾರರಿಂದ ಹೊಂದಿಸಲ್ಪಡುತ್ತದೆ ಮತ್ತು ಪಾರದರ್ಶಕವಾಗಿರುವುದಿಲ್ಲ.

**ಪ್ರತಿಫಲ:** ಈ ಪಾಲಿಸಿಗಳ ಮೇಲಿನ ಪ್ರತಿಫಲವು ಇತರ ಹೂಡಿಕೆಗಳಿಗಿಂತ ತುಂಬಾ ಕಡಿಮೆಯಾಗಿದೆ.

3. **ಅಸಾಂಪ್ರದಾಯಿಕ ಪಾಲಿಸಿಗಳ ವೈಶಿಷ್ಟ್ಯಗಳು:** ಜೀವ ವಿಮಾ ಕಂಪನಿಗಳು ಕೆಲವು ನವೀನ ವೈಶಿಷ್ಟ್ಯಗಳೊಂದಿಗೆ ಪಾಲಿಸಿಗಳನ್ನು ವಿನ್ಯಾಸಗೊಳಿಸಲು ಪ್ರಾರಂಭಿಸಿದವು, ಅವುಗಳಲ್ಲಿ ಕೆಲವುಗಳನ್ನು ಈ ಕೆಳಗೆ ನೀಡಲಾಗಿದೆ:

    a) **ಹೂಡಿಕೆಯ ಲಾಭಗಳೊಂದಿಗೆ ನೇರ ಸಂಪರ್ಕ:** ಹೂಡಿಕೆಯ ಲಾಭಗಳನ್ನು ಮಾಡುವ ಪ್ರಯತ್ನದಲ್ಲಿ ಬಂಡವಾಳ ಮಾರುಕಟ್ಟೆಯೊಂದಿಗೆ ನೇರ ಸಂಪರ್ಕ ಹೊಂದಿರುವ ಪಾಲಿಸಿಗಳನ್ನು ವಿನ್ಯಾಸಗೊಳಿಸಲಾಗಿದೆ.

    b) **ಬೆಲೆ ಏರಿಕೆ/ಹಣದುಬ್ಬರವನ್ನು ತೊಡೆದು ಹಾಕಲು ಪಾಲಿಸಿಗಳು:** ಬೆಲೆ ಏರಿಕೆ/ಹಣದುಬ್ಬರದ ದರಗಳಿಗೆ ಹತ್ತಿರವಾದ ಆದಾಯವನ್ನು ನೀಡಲು ಪಾಲಿಸಿಗಳನ್ನು ವಿನ್ಯಾಸಗೊಳಿಸಲಾಗಿದೆ. ಬೆಲೆ

ಏರಿಕೆ/ಹಣದುಬ್ಬರವನ್ನು ತೊಡೆದು ಹಾಕದಿದ್ದರೂ ಜೀವ ವಿಮಾ ಪಾಲಿಸಿಗಳು ಅದಕ್ಕೆ ಹೊಂದಿಕೆಯಾಗಬೇಕೆಂದು ವಿಮಾಗಾರರು ಯೋಚಿಸತೊಡಗಿದರು.

c) **ನಮ್ಯತೆಯೊಂದಿಗೆ ಪಾಲಿಸಿಗಳು:** ಗ್ರಾಹಕರು ಪಾವತಿಸಲು ಬಯಸುವ ಕಂತು ಮೊತ್ತವನ್ನು ನಿರ್ಧರಿಸಲು (ಕೆಲವು ಮಿತಿಗಳಲ್ಲಿ) ಅನುಮತಿಸುವ ಪಾಲಿಸಿಗಳು; ಮತ್ತು ಅವರು ಬಯಸಿದ ಸಾವಿನ ಪ್ರಯೋಜನಗಳ ಮೊತ್ತ ಮತ್ತು ನಗದು ಮೌಲ್ಯಗಳನ್ನು ವಿನ್ಯಾಸಗೊಳಿಸಲಾಗಿದೆ.

d) **ಶರಣಾಗತಿ ಮೌಲ್ಯ:** ಸಾಂಪ್ರದಾಯಿಕ ಪಾಲಿಸಿಗಳಡಿಯಲ್ಲಿ ಲಭ್ಯವಿರುವ ಶರಣಾಗತಿ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯಗಳನ್ನು ನೀಡುವ ಪಾಲಿಸಿಗಳನ್ನು ಸಹ ವಿಮಾಗಾರರು ವಿನ್ಯಾಸಗೊಳಿಸಿದ್ದಾರೆ.

ಈ ಪಾಲಿಸಿಗಳು ಬಹಳ ಜನಪ್ರಿಯವಾದವು ಮತ್ತು ಭಾರತ ಸೇರಿದಂತೆ ಅನೇಕ ದೇಶಗಳಲ್ಲಿ ಸಾಂಪ್ರದಾಯಿಕ ಉತ್ಪನ್ನಗಳನ್ನು ಹಿಂದೆ ಹಾಕಲು ಪ್ರಾರಂಭಿಸಿತು.

**ನಿಮ್ಮನ್ನು ಪರೀಕ್ಷಿಸಿ 1**

ಕೆಳಗಿನವುಗಳಲ್ಲಿ ಯಾವುದು ಅಸಾಂಪ್ರದಾಯಿಕ ಜೀವ ವಿಮಾ ಉತ್ಪನ್ನವಾಗಿದೆ**?**

I. ಅವಧಿ ವಿಮೆ

II. ಸಾರ್ವತ್ರಿಕ ಜೀವವಿಮೆ

III. ದತ್ತಿ ವಿಮೆ

IV. ಸಂಪೂರ್ಣ ಜೀವವಿಮೆ

## B. ಅಸಾಂಪ್ರದಾಯಿಕ ಜೀವವಿಮೆ

**ಕೆಲವು ಅಸಾಂಪ್ರದಾಯಿಕ ಉತ್ಪನ್ನಗಳು**

ಭಾರತೀಯ ಮಾರುಕಟ್ಟೆಯಲ್ಲಿ ಮತ್ತು ಇತರೆಡೆಗಳಲ್ಲಿ ಗೋಚರಿಸುವ ಕೆಲವು ಅಸಾಂಪ್ರದಾಯಿಕ ಉತ್ಪನ್ನಗಳನ್ನು ನಾವು ಚರ್ಚಿಸೋಣ.

### 1. ಸಾರ್ವತ್ರಿಕ ಜೀವನ(ಯುನಿವರ್ಸಲ್ ಲೈಫ್) ಮತ್ತು ಬದಲಾಗಬಹುದಾದ ಜೀವನ(ವೇರಿಯಬಲ್ ಲೈಫ್)

ಸಾರ್ವತ್ರಿಕ ಜೀವ (ಯುನಿವರ್ಸಲ್ ಲೈಫ್) ಪಾಲಿಸಿಯನ್ನು 1979 ರಲ್ಲಿ ಯುನೈಟೆಡ್ ಸ್ಟೇಟ್ಸ್ ನಲ್ಲಿ ಪರಿಚಯಿಸಲಾಯಿತು ಮತ್ತು ಶೀಘ್ರವೇ ಜನಪ್ರಿಯವಾಯಿತು. ಹೊಂದಿಕೊಳ್ಳುವ ಕಂತುಗಳು, ಹೊಂದಿಕೊಳ್ಳುವ ಮುಖ ಬೆಲೆ ಮತ್ತು ಸಾವಿನ ಪ್ರಯೋಜನದ ಮೊತ್ತಗಳು ಇದರ ವೈಶಿಷ್ಟ್ಯಗಳಾಗಿವೆ. ಒಪ್ಪಂದವನ್ನು ಜಾರಿಯಲ್ಲಿಡಲು ನಿಯತಕಾಲಿಕವಾಗಿ ಸ್ಥಿರವಾದ ಕಂತುಗಳನ್ನು ಪಾವತಿಸಬೇಕಾಗುವ ಸಾಂಪ್ರದಾಯಿಕ

ಪಾಲಿಸಿಗಳಿಗಿಂತ ಭಿನ್ನವಾಗಿ, ಸಾರ್ವತ್ರಿಕ ಜೀವ ಪಾಲಿಸಿಗಳು ಪಾಲಿಸಿದಾರರಿಗೆ (ಮಿತಿಯಲ್ಲಿ) ಅವರು ಕವರೇಜ್ ಗಾಗಿ ಪಾವತಿಸಲು ಬಯಸುವ ಕಂತುಗಳ ಮೊತ್ತವನ್ನು ನಿರ್ಧರಿಸುವ ಅವಕಾಶವನ್ನು ನೀಡುತ್ತವೆ.

ಬದಲಾಗಬಹುದಾದ ಜೀವ ಪಾಲಿಸಿ(ವೇರಿಯಬಲ್ ಲೈಫ್)ಯನ್ನು 1977 ರಲ್ಲಿ ಯುನೈಟೆಡ್ ಸ್ಟೇಟ್ಸ್ ನಲ್ಲಿ ಪರಿಚಯಿಸಲಾಯಿತು. ಇದು ಕಂತುಗಳನ್ನು ಜಮಾ ಮಾಡಲಾಗುವ ವಿಶೇಷ ಹೂಡಿಕೆ, ಖಾತೆಯ ಹೂಡಿಕೆಯ ಕಾರ್ಯಕ್ಷಮತೆಗೆನುಗುಣವಾಗಿ ಪಾಲಿಸಿಯ ಮರಣ ಪ್ರಯೋಜನ ಮತ್ತು ನಗದು ಮೌಲ್ಯವು ಏರಿಳಿತಗೊಳ್ಳುವ ಒಂದು ವಿಧದ "ಸಂಪೂರ್ಣ ಜೀವನ" ಪಾಲಿಸಿಯಾಗಿದೆ.

ಮೇಲಿನ ಎರಡು ರೀತಿಯ ಉತ್ಪನ್ನಗಳ ವಿನ್ಯಾಸ ಮತ್ತು ಮಾರಾಟವನ್ನು ಬದಲಾಗಬಹುದಾದ ವಿಮಾ(ವೇರಿಯಬಲ್ ಇನ್ಶ್ಯುರೆನ್ಸ್) ಉತ್ಪನ್ನಗಳೆಂದು ಕರೆಯಲಾಗುತ್ತಿದ್ದ ಇವುಗಳನ್ನು ಭಾರತದಲ್ಲಿ 2019 ರಿಂದ ನಿಲ್ಲಿಸಲಾಗಿದೆ ಮತ್ತು ಐಆರ್ ಡಿಎಐ **(ಯುಲಿಪ್),** 2019 ರ ನಿಯಮಗಳಿಗನುಗುಣವಾಗಿ ಇವುಗಳ ಜಾರಿಯನ್ನು ಅನುಮತಿಸುವುದಿಲ್ಲ.

## 2. ಯುನಿಟ್ ಲಿಂಕ್ಡ್ ವಿಮೆ

ಯುಲಿಪ್ಸ್ ಎಂದೂ ಕರೆಯಲ್ಪಡುವ ಯುನಿಟ್ ಲಿಂಕ್ಡ್ ಯೋಜನೆಗಳನ್ನು **1960** ರ ದಶಕದಲ್ಲಿ ಯು.ಕೆ.ಯಲ್ಲಿ ಮೊದಲ ಬಾರಿಗೆ ಪರಿಚಯಿಸಲಾಯಿತು. ಅವು ಇಂದು ಮಾರುಕಟ್ಟೆಗಳಲ್ಲಿಯ ಅನೇಕ ಸಾಂಪ್ರದಾಯಿಕ ಯೋಜನೆಗಳನ್ನು ಹಿಮ್ಮೆಟ್ಟಿಸಿ ಅತ್ಯಂತ ಜನಪ್ರಿಯ ಮತ್ತು ಮಹತ್ವದ ಉತ್ಪನ್ನಗಳಲ್ಲಿ ಒಂದಾಗಿ ಗೋಚರಿಸುತ್ತವೆ.

ಯುನಿಟ್ ಲಿಂಕ್ಡ್ ಪಾಲಿಸಿಗಳು ಸಾಂಪ್ರದಾಯಿಕ ಉತ್ಪನ್ನಗಳ ದೋಷ/ಮಿತಿಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ.

ಪಾಲಿಸಿದಾರರು ಪಾವತಿಸಿದ ಕಂತನ್ನು ಎರಡು ಪ್ರಮುಖ ಭಾಗಗಳಾಗಿ ವಿಂಗಡಿಸಲಾಗಿದೆ

- ವಿಮಾ ರಕ್ಷಣೆಯನ್ನು ಒದಗಿಸಲು ಬಳಸಲಾಗುವ ಮೊದಲ ಭಾಗ, ಮತ್ತು
- ವಿಮಾದಾರರು ಆಯ್ಕೆ ಮಾಡಿದ ನಿಧಿಯಲ್ಲಿ ಹೂಡಿಕೆ ಮಾಡಲಾಗುವ ಎರಡನೇ ಭಾಗ.

ಅಂತಹ ಒಪ್ಪಂದಗಳಡಿಯಲ್ಲಿಯ ಪ್ರಯೋಜನಗಳನ್ನು ಪಾವತಿಸಬೇಕಾದ ದಿನಾಂಕದಂದು ಪಾಲಿಸಿದಾರರ ಖಾತೆಗೆ ಜಮಾ ಮಾಡಲಾದ ಯುನಿಟ್(ಘಟಕ)ಗಳ ಮೌಲ್ಯದಿಂದ ಸಂಪೂರ್ಣವಾಗಿ ಅಥವಾ ಭಾಗಶಃ ನಿರ್ಧರಿಸಲಾಗುತ್ತದೆ.

ಅನೇಕ ಮಾರುಕಟ್ಟೆಗಳಲ್ಲಿ ಈ ಪಾಲಿಸಿಗಳನ್ನು ಲಗತ್ತಿಸಲಾದ ವಿಮಾ ಘಟಕದೊಂದಿಗೆ ಹೂಡಿಕೆಯ ಮಾಧ್ಯಮಗಳಾಗಿ ಪರಿಗಣಿಸಲಾಗುತ್ತದೆ ಮತ್ತು ಮಾರಾಟ ಮಾಡಲಾಗುತ್ತದೆ.

ಶುಲ್ಕಗಳನ್ನು ನಿರ್ಧರಿಸಲಾದ ಸಾಂಪ್ರದಾಯಿಕ ಉಳಿತಾಯ ಪಾಲಿಸಿಗಳಿಗಿಂತ ಭಿನ್ನವಾಗಿ, ಯುನಿಟ್ ಲಿಂಕ್ಡ್ ಕರಾರುಗಳು ಹೆಚ್ಚುವರಿ ಶುಲ್ಕಗಳನ್ನು ಹೊಂದಿರುತ್ತವೆ. ವಿಮೆ ಮತ್ತು ವೆಚ್ಚಗಳ ಘಟಕವನ್ನು ಪಾವತಿಸಲು ಶುಲ್ಕಗಳು ಸ್ಪಷ್ಟವಾಗಿ ನಿರ್ದಿಷ್ಟಪಡಿಸಲಾಗಿದ್ದು ಅವುಗಳ ರಚನೆಯು ಪಾರದರ್ಶಕವಾಗಿರುತ್ತದೆ.

**ಚಿತ್ರ 1: ಕಂತುಗಳ ರಚನೆ( ಬ್ರೇಕ್-ಅಪ್)**




ಕಂತಿನಿಂದ ಶುಲ್ಕವನ್ನು ಕಡಿತಗೊಳಿಸಿದ ನಂತರ, ಖಾತೆಯ ಬಾಕಿ ಮತ್ತು ಆದಾಯವನ್ನು ಯುನಿಟ್(ಘಟಕ)ಗಳಲ್ಲಿ ಹೂಡಿಕೆ ಮಾಡಲಾಗುತ್ತದೆ.

**ಯುನಿಟ್(ಘಟಕ)ಗಳ ಮೌಲ್ಯ**

ಯುನಿಟ್(ಘಟಕ)ಗಳ ಮೌಲ್ಯವನ್ನು ಮುಂಚಿತವಾಗಿಯೇ ವಿವರಿಸಲಾದ ನಿಯಮ ಅಥವಾ ಸೂತ್ರದಿಂದ ವ್ಯಾಖ್ಯಾನಿಸಲಾಗಿದೆ. ವಿಶಿಷ್ಟವಾಗಿ ಯೂನಿಟ್ ಗಳ ಮೌಲ್ಯ, ನಿಧಿಯನ್ನು ಹೂಡಿಕೆ ಮಾಡಿದ ಆಸ್ತಿಗಳ ಮಾರುಕಟ್ಟೆ ಮೌಲ್ಯವನ್ನು ಪ್ರತಿಬಿಂಬಿಸುವ ನಿವ್ವಳ ಆಸ್ತಿ ಮೌಲ್ಯ (ಎನ್ಎವಿ)ದಿಂದ ನೀಡಲಾಗುತ್ತದೆ. ಈ ಕೆಳಗೆ ನೀಡಿದ ಸೂತ್ರವನ್ನು ಅನುಸರಿಸುವ ಮೂಲಕ ವಿಭಿನ್ನ ವ್ಯಕ್ತಿಗಳು ಪಾವತಿಸಬೇಕಾದ ಒಂದೇ ಪ್ರಯೋಜನಗಳನ್ನು ಪಡೆಯಬಹುದು.

ಸೂತ್ರವು ಈ ಕೆಳಗಿನಂತಿದೆ:

ನಿವ್ವಳ ಆಸ್ತಿ ಮೌಲ್ಯ [ಎನ್ಎವಿ] = ನಿಧಿಯಲ್ಲಿಯ ಆಸ್ತಿಗಳ ಮಾರುಕಟ್ಟೆ ಮೌಲ್ಯ/ ನಿಧಿಗಳ ಯುನಿಟ್(ಘಟಕ)ಗಳ ಸಂಖ್ಯೆ

ಹೀಗೆ, ಪಾಲಿಸಿದಾರರ ಪ್ರಯೋಜನಗಳು ಜೀವ ವಿಮಾ ಕಂಪನಿಯ ಊಹೆಗಳನ್ನು ಅವಲಂಬಿಸಿರುವುದಿಲ್ಲ.

ಯುನಿಟ್ ಲಿಂಕ್ಡ್ ಪಾಲಿಸಿಗಳು ಪಾಲಿಸಿದಾರರಿಗೆ ವಿವಿಧ ರೀತಿಯ ಫಂಡ್ ಗಳ ನಡುವೆ ಆಯ್ಕೆ ಮಾಡಲು ಅವಕಾಶವನ್ನು ನೀಡುತ್ತದೆ. ಪ್ರತಿಯೊಂದು ನಿಧಿಯು ವಿಭಿನ್ನ ಪೋರ್ಟ್ ಫೋಲಿಯೊ(ಒಟ್ಟು ಹೂಡಿಕೆ)ವನ್ನು ಹೊಂದಿರುತ್ತದೆ. ಹೂಡಿಕೆದಾರರು ಈ ಕೆಳಗೆ ವಿವರಿಸಿದಂತೆ ಡೆಬ್ಟ್(ಸಾಲ), ಸಮತೋಲಿತ ಮತ್ತು ಇಕ್ವಿಟಿ ಫಂಡ್ ಗಳ ವಿಶಾಲವಾದ ಆಯ್ಕೆಯ ನಡುವೆ ಆಯ್ಕೆಯನ್ನು ಮಾಡಿಕೊಳ್ಳುತ್ತಾರೆ. ಈ ವಿಶಾಲ ವರ್ಗಗಳಲ್ಲಿಯೂ ಸಹ ಇತರ ರೀತಿಯ ಆಯ್ಕೆಗಳು ಇರಬಹುದು.

| ಇಕ್ವಿಟಿ ಫಂಡ್ | ಡೆಬ್ಟ್(ಸಾಲ) ಫಂಡ್ | ಸಮತೋಲಿತ ಫಂಡ್ | ಮನಿ ಮಾರ್ಕೆಟ್ ಫಂಡ್ |
|---|---|---|---|
| ಈ ನಿಧಿಯು ಹಣದ ಹೆಚ್ಚಿನ ಭಾಗವನ್ನು ಇಕ್ವಿಟಿ ಮತ್ತು ಇಕ್ವಿಟಿ ಸಂಬಂಧಿತ ಸಾಧನಗಳಲ್ಲಿ ಹೂಡಿಕೆಯನ್ನು | ಈ ನಿಧಿಯು ಹಣದ ಹೆಚ್ಚಿನ ಭಾಗವನ್ನು ಸರ್ಕಾರದ ಬಾಂಡ್‌ಗಳು, ಕಾರ್ಪೊರೇಟ್ ಬಾಂಡ್‌ಗಳು, ಫಿಕ್ಸೆಡ್ ಡೆಪಾಸಿಟ್ ಗಳು | ಈ ನಿಧಿಯು ಇಕ್ವಿಟಿ ಮತ್ತು ಸಾಲದ ಉಪಕರಣಗಳ ಮಿಶ್ರಣದಲ್ಲಿ ಹೂಡಿಕೆಯನ್ನು | ಈ ನಿಧಿಯು ಮುಖ್ಯವಾಗಿ ಟ್ರೆಜರಿ ಬಿಲ್ ಗಳು, ಠೇವಣಿ ಪ್ರಮಾಣಪತ್ರಗಳು, ಕಮರಿಶಿಯಲ್ ಪೇಪರ್ |

| | | | |
|---|---|---|---|
| **ಮಾಡುತ್ತದೆ.** | **ಇತ್ಯಾದಿಗಳಲ್ಲಿ ಹೂಡಿಕೆಯನ್ನು ಮಾಡುತ್ತದೆ.** | **ಮಾಡುತ್ತದೆ** | **ಮುಂತಾದ ಸಾಧನಗಳಲ್ಲಿ ಹಣವನ್ನು ಹೂಡಿಕೆ ಮಾಡುತ್ತದೆ.** |

ಒಂದು ಅಥವಾ ಹೆಚ್ಚಿನ ಫಂಡ್ ಗಳ ಕಾರ್ಯಕ್ಷಮತೆಯು ಅಪೇಕ್ಷೆಯಂತೆ ಎತ್ತರವನ್ನು ತಲುಪದಿದ್ದರೆ ಒಂದು ಪ್ರಕಾರದ ನಿಧಿಯಿಂದ ಇನ್ನೊಂದು ಪ್ರಕಾರಕ್ಕೆ ಬದಲಾಯಿಸಲು(ಸ್ವಿಚ್ ಮಾಡಲು) ಸಹ ಅವಕಾಶವಿರುತ್ತದೆ.

ಯುಲಿಪ್ ಪಾಲಿಸಿಗಳ ಕೆಲವು ನಿರ್ದಿಷ್ಟ ವೈಶಿಷ್ಟ್ಯಗಳನ್ನು ಈ ಕೆಳಗೆ ನೀಡಲಾಗಿದೆ:

**i. ಏಕೀಕರಣ**

ಯುಲಿಪ್ ಪಾಲಿಸಿಗಳ ಅಡಿಯಲ್ಲಿನ ಪ್ರಯೋಜನಗಳನ್ನು ಕ್ಲೇಮ್ ಪಾವತಿಯನ್ನು ಮಾಡಬೇಕಾದ ದಿನಾಂಕದಂದು ಪಾಲಿಸಿದಾರರ ಖಾತೆಗೆ ಜಮಾ ಮಾಡಲಾದ ಯುನಿಟ್(ಘಟಕ)ಗಳ ಮೌಲ್ಯದಿಂದ ನಿರ್ಧರಿಸಲಾಗುತ್ತದೆ. ಯುನಿಟ್ ಅನ್ನು ಹೂಡಿಕೆ ನಿಧಿಯನ್ನು ಹಲವಾರು ಸಮಾನ ಭಾಗಗಳಾಗಿ ವಿಭಜಿಸುವ ಮೂಲಕ ರಚಿಸಲಾಗಿದೆ.

**ii. ಪಾರದರ್ಶಕ ರಚನೆ**

ಯುಲಿಪ್ ಗಳಲ್ಲಿನ ವಿಮಾ ರಕ್ಷಣೆ ಮತ್ತು ವೆಚ್ಚಗಳ ಶುಲ್ಕಗಳನ್ನು ಸ್ಪಷ್ಟವಾಗಿ ನಿರ್ದಿಷ್ಟಪಡಿಸಲಾಗಿದೆ. ಈ ಶುಲ್ಕಗಳನ್ನು ಕಂತಿನೊಳಗಿಂದ ಕಡಿತಗೊಳಿಸಿದ ನಂತರ, ಖಾತೆಯಲ್ಲಿಯ ಬಾಕಿ ಮತ್ತು ಅದರಿಂದ ಬರುವ ಆದಾಯವನ್ನು ಯುನಿಟ್(ಘಟಕ)ಗಳಲ್ಲಿ ಹೂಡಿಕೆ ಮಾಡಲಾಗುತ್ತದೆ.

**iii. ಬೆಲೆ ನಿಗದಿ ಮಾಡುವಿಕೆ**

ಯುಲಿಪ್ ಗಳ ಅಡಿಯಲ್ಲಿ, ವಿಮಾದಾರರು ತಾವು ನಿಯಮಿತ ಮಧ್ಯಂತರದಲ್ಲಿ ಕೊಡುಗೆ ನೀಡಬಹುದಾದ ಕಂತಿನ ಮೊತ್ತವನ್ನು ನಿರ್ಧರಿಸುತ್ತಾರೆ.

ಎಲ್ಲ ಜೀವ ವಿಮಾ ಪಾಲಿಸಿಗಳಲ್ಲಿ, ಆರಂಭಿಕ ವೆಚ್ಚಗಳು ತುಂಬಾ ಹೆಚ್ಚಾಗಿರುತ್ತವೆ. ಸಾಂಪ್ರದಾಯಿಕ ಪಾಲಿಸಿಗಳಡಿಯಲ್ಲಿ, ಈ ವೆಚ್ಚಗಳನ್ನು ಪೂರೈಸಲು ಕಂತು ಶುಲ್ಕಗಳು ಪಾಲಿಸಿ ಅವಧಿಯುದ್ದಕ್ಕೂ ಹರಡಿರುತ್ತವೆ.

ಯುಲಿಪ್ ಗಳ ಸಂದರ್ಭದಲ್ಲಿ, ವೆಚ್ಚಗಳನ್ನು ಆರಂಭಿಕ ಕಂತುಗಳಿಂದಲೇ ಕಡಿತಗೊಳಿಸಲಾಗುತ್ತದೆ. ಇದು ಹೂಡಿಕೆಗೆ ನಿಗದಿಪಡಿಸಿದ ಮೊತ್ತವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಆದುದರಿಂದಲೇ ಪಾವತಿಸಿದ ಕಂತುಗಳಿಗೆ ಹೋಲಿಸಿದರೆ ಪ್ರಯೋಜನಗಳ ಮೌಲ್ಯವು ತುಂಬಾ ಕಡಿಮೆಯಿರುತ್ತದೆ ಮತ್ತು ಒಪ್ಪಂದದ ಆರಂಭಿಕ ವರ್ಷಗಳಲ್ಲಿ ಪಾವತಿಸಿದ ಕಂತುಗಳಿಗಿಂತ ಕಡಿಮೆಯಾಗಿರುತ್ತದೆ.

**iv. ಸಾವಿನ ಪ್ರಯೋಜನ(ಡೆತ್ ಬೆನಿಫಿಟ್)**

ಸಾಂಪ್ರದಾಯಿಕ ಪಾಲಿಸಿಗಳಲ್ಲಿ ಭಿನ್ನವಾಗಿ, ಯುಲಿಪ್ ಪಾಲಿಸಿಗಳಲ್ಲಿನ ಸಾವಿನ ಪ್ರಯೋಜನದ ಮೊತ್ತವು ಪಾವತಿಸಿದ ಕಂತುಗಳ ಗುಣಾಕಾರವಾಗಿರುತ್ತದೆ. ಪಾಲಿಸಿಯ ಅವಧಿಯಲ್ಲಿ ಮರಣ ಸಂಭವಿಸಿದಲ್ಲಿ,

ಫಲಾನುಭವಿಯು ವಿಮಾ ಮೊತ್ತ (ಇದು ಕಂತಿನ ಗುಣಾಕಾರವಾಗಿದೆ) ಅಥವಾ ಖಾತೆಯಲ್ಲಿಯ ನಿಧಿಯ ಮೌಲ್ಯ (ಯುನಿಟ್ ಬೆಲೆಯನ್ನು ಯುನಿಟ್ ಗಳ ಸಂಖ್ಯೆಯಿಂದ ಗುಣಿಸಿದಾಗ) ಇವೆರಡರಲ್ಲಿ ಹೆಚ್ಚಿನ ಮೊತ್ತವನ್ನು ಅವನು ಅಥವಾ ಅವಳಿಗೆ ಪಾವತಿಸಲಾಗುತ್ತದೆ..

**v. ಹೂಡಿಕೆಯ ಅಪಾಯದ ಸಹಿಸುವಿಕೆ**

ಯುನಿಟ್ ಗಳ ಮೌಲ್ಯವು ಜೀವ ವಿಮಾದಾರರ ಖಾತರಿಯಿಲ್ಲದ ಹೂಡಿಕೆಗಳ ಮೌಲ್ಯವನ್ನು ಅವಲಂಬಿಸಿರುತ್ತದೆ.

ಜೀವ ವಿಮಾಗಾರರು, ಪೋರ್ಟ್ ಫೋಲಿಯೊವನ್ನು ಸಮರ್ಥವಾಗಿ ನಿರ್ವಹಿಸುವ ನಿರೀಕ್ಷೆಯಿದ್ದರೂ, ಯುನಿಟ್ ಮೌಲ್ಯಗಳ ಬಗ್ಗೆ ಯಾವುದೇ ಖಾತರಿಯನ್ನು ನೀಡಲಾಗುವುದಿಲ್ಲವಾದ್ದರಿಂದ, ಹೂಡಿಕೆಯ ಅಪಾಯವನ್ನು ಪಾಲಿಸಿದಾರ/ಯುನಿಟ್ ಹೊಂದಿರುವವರು ಭರಿಸುತ್ತಾರೆ.

**ನಿಮ್ಮನ್ನು ಪರೀಕ್ಷಿಸಿ *2***

ಈ ಕೆಳಗೆ ನೀಡಲಾದ ಯಾವ ಹೇಳಿಕೆ/ಗಳು ತಪ್ಪಾಗಿದೆ/ವೆ**?**

I. ಬದಲಾಗುವ(ವೇರಿಯಬಲ್) ಜೀವ ವಿಮೆಯು ತಾತ್ಕಾಲಿಕ ಜೀವ ವಿಮಾ ಪಾಲಿಸಿಯಾಗಿದೆ

II. ಬದಲಾಗುವ (ವೇರಿಯಬಲ್) ಜೀವ ವಿಮೆಯು ಶಾಶ್ವತ ಜೀವ ವಿಮಾ ಪಾಲಿಸಿಯಾಗಿದೆ

III. ಪಾಲಿಸಿಯು ನಗದು ಮೌಲ್ಯದ ಖಾತೆಯನ್ನು ಹೊಂದಿದೆ

IV. ಪಾಲಿಸಿಯು ಕನಿಷ್ಠ ಸಾವಿನ ಪ್ರಯೋಜನದ ಖಾತರಿಯನ್ನು ಒದಗಿಸುತ್ತದೆ

**ಸಾರಾಂಶ**

- ಜೀವ ವಿಮಾ ಪಾಲಿಸಿಗಳಿಗೆ ಸಂಬಂಧಿಸಿದಂತೆ ಹಣಕಾಸಿನ ಮಾರುಕಟ್ಟೆಯಲ್ಲಿರುವ ಇತರ ಸ್ವತ್ತುಗಳಿಗೆ ಹೋಲಿಸದಾಗ ಸ್ಪರ್ಧಾತ್ಮಕ ದರದ ಲಾಭವನ್ನು ನೀಡುವುದು ನಿರ್ಣಾಯಕ ಕಾಳಜಿಯಾಗಿದೆ.
- ಅಸಾಂಪ್ರದಾಯಿಕ ಜೀವವಿಮಾ ಉತ್ಪನ್ನಗಳ ಹೆಚ್ಚಳಕ್ಕೆ ಕಡಿಮೆ ಶುಲ್ಕಗಳು, ಹೂಡಿಕೆ ಜೋಡಣೆ ಮತ್ತು ಪಾರದರ್ಶಕತೆಯಂ ಕೆಲವು ಪ್ರವೃತ್ತಿಗಳು ಕಾರಣವಾಗಿವೆ.
- ಸಾರ್ವತ್ರಿಕ ಜೀವ ವಿಮೆಯು ಶಾಶ್ವತ ಜೀವ ವಿಮೆಯ ಒಂದು ರೂಪವಾಗಿದ್ದು, ಅದರ ಹೊಂದಿಕೊಳ್ಳುವ ಕಂತುಗಳು, ಹೊಂದಿಕೊಳ್ಳುವ ಮುಖಬೆಲೆ ಮತ್ತು ಸಾವಿನ ಪ್ರಯೋಜನದ ಮೊತ್ತಗಳು ಮತ್ತು ಅದರ ಬೆಲೆ ಅಂಶಗಳ ಕಡಿಮೆ ವೆಚ್ಚಗಳಿಂದ ನಿರೂಪಿಸಲ್ಪಟ್ಟಿದೆ.
- ಯುಲಿಪ್ ಗಳು ಅನೇಕ ಮಾರುಕಟ್ಟೆಗಳಲ್ಲಿ ಸಾಂಪ್ರದಾಯಿಕ ಯೋಜನೆಗಳ ಜನಪ್ರಿಯತೆಯನ್ನು ಬದಲಿಸಿ, ಅತ್ಯಂತ ಜನಪ್ರಿಯ ಮತ್ತು ಮಹತ್ವದ ಉತ್ಪನ್ನಗಳಲ್ಲಿ ಒಂದಾದವು.

- ಯುಲಿಪ್ ಗಳು ಜೀವ ವಿಮಾದಾರರ ಹೂಡಿಕೆಯ ಕಾರ್ಯಕ್ಷಮತೆಯ ಪ್ರಯೋಜನಗಳನ್ನು ನೇರವಾಗಿ ಮತ್ತು ತಕ್ಷಣವೇ ನಗದೀಕರಿಸುವ ಸಾಧನಗಳನ್ನು ಒದಗಿಸುತ್ತವೆ.

**ಪ್ರಮುಖ ಪದಗಳು**

1. ಸಾರ್ವತ್ರಿಕ ಜೀವವಿಮೆ
2. ಬದಲಾಗುವ(ವೇರಿಯೇಬಲ್) ಜೀವವಿಮೆ
3. ಯುನಿಟ್ ಲಿಂಕ್ಡ್ ವಿಮೆ
4. ನಿವ್ವಳ ಆಸ್ತಿ ಮೌಲ್ಯ

**ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು**

ಉತ್ತರ 1 - ಸರಿಯಾದ ಉತ್ತರ II ಆಗಿದೆ.

ಉತ್ತರ 2 - ಸರಿಯಾದ ಉತ್ತರ I ಆಗಿದೆ.

# ಅಧ್ಯಾಯ L-05

# ಜೀವವಿಮೆಯ ಅನ್ವಯಗಳು

**ಅಧ್ಯಾಯ ಪರಿಚಯ**

ಜೀವ ವಿಮೆಯು ಕೇವಲ ವ್ಯಕ್ತಿಗಳನ್ನು ಅಕಾಲಿಕ ಮರಣದಿಂದ ರಕ್ಷಿಸಲು ಪ್ರಯತ್ನಿಸುವುದಷ್ಟೇ ಅಲ್ಲ. ಅದು ಇತರ ಅನ್ವಯಗಳನ್ನು ಸಹ ಹೊಂದಿದೆ. ಫಲಿತಾಂಶದ ವಿಮಾ ಪ್ರಯೋಜನಗಳೊಂದಿಗೆ ಟ್ರಸ್ಟ್ ಗಳ ರಚನೆಗೆ ಇದನ್ನು ಅನ್ವಯಿಸಬಹುದು; ಕೈಗಾರಿಕೆಗಳ ಪ್ರಮುಖ ಸಿಬ್ಬಂದಿಯನ್ನು ಒಳಗೊಂಡ ಪಾಲಿಸಿಯನ್ನು ರಚಿಸಲು ಮತ್ತು ಅಡಮಾನಗಳನ್ನು ಪಡೆದುಕೊಳ್ಳಲು ಇದನ್ನು ಅನ್ವಯಿಸಬಹುದು. ಜೀವ ವಿಮೆಯ ಈ ವಿವಿಧ ಅನ್ವಯಗಳನ್ನು ನಾವು ಸಂಕ್ಷಿಪ್ತವಾಗಿ ವಿವರಿಸುತ್ತೇವೆ.

**ಕಲಿಕೆಯ ಫಲಿತಾಂಶಗಳು**

A. **ವಿವಾಹಿತ ಮಹಿಳೆಯರ ಆಸ್ತಿ ಕಾಯಿದೆ, 1874**

B. **ಪ್ರಮುಖ ವ್ಯಕ್ತಿಯ ವಿಮೆ**

C. **ಅಡಮಾನ ವಿಮೋಚನೆ ವಿಮೆ**

## A. ಜೀವವಿಮೆಯ ಅನ್ವಯಗಳು

### 1. ವಿವಾಹಿತ ಮಹಿಳೆಯರ ಆಸ್ತಿ ಕಾಯಿದೆ, 1874

1874 ರ ವಿವಾಹಿತ ಮಹಿಳೆಯರ ಆಸ್ತಿ ಕಾಯಿದೆಯ ಸೆಕ್ಷನ್ 6, ಜೀವ ವಿಮಾ ಪಾಲಿಸಿಯಡಿಯಲ್ಲಿಯ ಪ್ರಯೋಜನಗಳು ಹೆಂಡತಿ ಮತ್ತು ಮಕ್ಕಳಿಗೆ ಸುರಕ್ಷಿತ ರೀತಿಯಲ್ಲಿ ರವಾನಿಸಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಉದ್ದೇಶಕ್ಕಾಗಿ ಟ್ರಸ್ಟ್ ಅನ್ನು ರಚಿಸುವ ಮೂಲಕ ಪ್ರಯತ್ನಿಸುತ್ತದೆ.

**ಚಿತ್ರ 1: ಎಮ್ ಡಬ್ಲ್ಯೂ ಪಿ ಕಾಯಿದೆಯಡಿಯಲ್ಲಿ ಫಲಾನುಭವಿಗಳು**




ವಿವಾಹಿತ ಪುರುಷನು ತನ್ನ ಸ್ವಂತ ಜೀವದ ಬಗ್ಗೆ ಪಾಲಿಸಿಯನ್ನು ತೆಗೆದುಕೊಂಡಾಗ ಮತ್ತು ಅಂತಹ ನೀತಿಯ ಮುಖದ ಮೇಲೆ ಅದು ತನ್ನ ಹೆಂಡತಿ ಅಥವಾ ಅವನ ಹೆಂಡತಿ ಮತ್ತು ಮಕ್ಕಳ ಪ್ರಯೋಜನಕ್ಕಾಗಿ ಮತ್ತು ಅವರ ಪ್ರಯೋಜನಕ್ಕಾಗಿ ಮಾತ್ರ ಟ್ರಸ್ಟ್‌ನಲ್ಲಿ ಇಡಬೇಕು ಎಂದು ಈ ವಿಭಾಗವು ಒದಗಿಸುತ್ತದೆ. , ಅಂತಹ ಪಾಲಿಸಿಯ ಆದಾಯವು ಟ್ರಸ್ಟ್‌ನ ವಸ್ತುಗಳು ಉಳಿದಿರುವವರೆಗೆ, ಪತಿ ಅಥವಾ ಅವನ ಸಾಲಗಾರರ ನಿಯಂತ್ರಣಕ್ಕೆ ಒಳಪಟ್ಟಿರುವುದಿಲ್ಲ ಅಥವಾ ಅವನ ಎಸ್ಟೇಟ್‌ನ ಭಾಗವಾಗಿರುವುದಿಲ್ಲ.

**ಎಮ್ ಡಬ್ಲ್ಯೂ ಪಿ ಕಾಯಿದೆಯಡಿಯಲ್ಲಿ. ಪಾಲಿಸಿಯ ವೈಶಿಷ್ಟ್ಯಗಳು**

i. ಪ್ರತಿಯೊಂದು ಪಾಲಿಸಿಯು ಒಂದು ಪ್ರತ್ಯೇಕ ಟ್ರಸ್ಟ್ ಆಗಿ ಉಳಿಯುತ್ತದೆ. ಹೆಂಡತಿ ಅಥವಾ ಮಕ್ಕಳು (18 ವರ್ಷಕ್ಕಿಂತ ಮೇಲ್ಪಟ್ಟವರು) ಟ್ರಸ್ಟಿಯಾಗಬಹುದು.

ii. ಪಾಲಿಸಿಯು ನ್ಯಾಯಾಲಯದ ಉಪಬಂಧ/ಸವಲತ್ತುಗಳು, ಸಾಲಗಾರರು ಮತ್ತು ಜೀವ ವಿಮಾದಾರರ ನಿಯಂತ್ರಣವನ್ನು ಮೀರಿರುತ್ತದೆ.

iii. ಕ್ಲೇಮ್ ಹಣವನ್ನು ಟ್ರಸ್ಟಿಗಳಿಗೆ ಪಾವತಿಸಲಾಗುತ್ತದೆ.

iv. ಪಾಲಿಸಿಯನ್ನು ಶರಣಾಗತಿ ಮಾಡಲಾಗುವುದಿಲ್ಲ ಮತ್ತು ನಾಮನಿರ್ದೇಶನ ಅಥವಾ ನಿಯೋಜನೆಯನ್ನು ಅನುಮತಿಸಲಾಗುವುದಿಲ್ಲ.

v. ಪಾಲಿಸಿದಾರರು ಪಾಲಿಸಿಯಡಿಯಲ್ಲಿ ಪ್ರಯೋಜನಗಳನ್ನು ಸ್ವೀಕರಿಸಲು ಮತ್ತು ನಿರ್ವಹಿಸಲು ವಿಶೇಷ ಟ್ರಸ್ಟಿಯನ್ನು ನೇಮಿಸದಿದ್ದರೆ, ಪಾಲಿಸಿಯಡಿಯಲ್ಲಿ ಪಡೆದ ಪ್ರಯೋಜನದ ಮೊತ್ತವನ್ನು ವಿಮೆ ಜಾರಿಗಳಿಸಿದ ಕಚೇರಿಯಿರುವ ರಾಜ್ಯದ ಅಧಿಕೃತ ಟ್ರಸ್ಟಿಗೆ ಪಾವತಿಸಬೇಕಾಗುತ್ತದೆ.

**ಲಾಭ/ಪ್ರಯೋಜನಗಳು**

ಹಿಂತೆಗೆದುಕೊಳ್ಳಲು ಅಥವಾ ತಿದ್ದುಪಡಿ ಮಾಡಲು ಸಾಧ್ಯವಾಗದ ಕರಾರುಪತ್ರದಡಿಯಲ್ಲಿ ಟ್ರಸ್ಟ್ ಅನ್ನು ಸ್ಥಾಪಿಸಲಾಗಿದೆ. ಅದು ಒಂದು ಅಥವಾ ಹೆಚ್ಚು ವಿಮಾ ಪಾಲಿಸಿಗಳನ್ನು ಒಳಗೊಂಡಿರಬಹುದು. ಫಲಾನುಭವಿಗಳ ಪರವಾಗಿ ವಿಮಾ ಆದಾಯವನ್ನು ಹೂಡಿಕೆ ಮಾಡುವುದನ್ನು ಒಳಗೊಂಡಂತೆ ಟ್ರಸ್ಟ್ಆಸ್ತಿಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುವ ಟ್ರಸ್ಟಿಯನ್ನು ನೇಮಿಸುವುದು ಬಹಳ ಮುಖ್ಯವಾಗಿದೆ. ಈ ಪ್ರಯೋಜನಗಳನ್ನು ಭವಿಷ್ಯದ ಸಾಲಗಾರರಿಗೆ ಹೋಗುವುದರಿಂದ ಸುರಕ್ಷಿತಗೊಳಿಸಲಾಗುತ್ತದೆ

**2. ಪ್ರಮುಖ ವ್ಯಕ್ತಿ ವಿಮೆ**

ಪ್ರಮುಖ ವ್ಯಕ್ತಿ ವಿಮೆಯು ವ್ಯಾಪಾರ ವಿಮೆಯ ಪ್ರಮುಖ ರೂಪವಾಗಿದೆ.

| **ವ್ಯಾಖ್ಯಾನ** |
|---|

ವ್ಯವಹಾರದ ಪ್ರಮುಖ ವ್ಯಕ್ತಿ/ಸದಸ್ಯರ ಸಾವು ಅಥವಾ ವಿಸ್ತೃತ ಅಸಮರ್ಥತೆಯಿಂದ ಉಂಟಾಗುವ ಹಣಕಾಸಿನ ನಷ್ಟಗಳಿಗೆ ವ್ಯವಹಾರವನ್ನು ಸರಿದೂಗಿಸಲು ಒಂದು ವಿಮಾ ಪಾಲಿಸಿ ಎಂದು ಪ್ರಮುಖ ವ್ಯಕ್ತಿ ವಿಮೆಯನ್ನು ವಿವರಿಸಬಹುದು.

ಅನೇಕ ಉದ್ಯಮಗಳು ಅವುಗಳ ಲಾಭದ ಪ್ರಮುಖ ಭಾಗಕ್ಕೆ ಜವಾಬ್ದಾರರಾಗಿರುವ ಅಥವಾ ಸಂಸ್ಥೆಗೆ ಪ್ರಮುಖವಾದ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವ ಮತ್ತು ಬದಲಾಯಿಸಲು ಕಷ್ಟಕರವಾದ ಪ್ರಮುಖ ವ್ಯಕ್ತಿಗಳನ್ನು ಹೊಂದಿರುತ್ತವೆ. ವ್ಯವಹಾರದ ನಿರಂತರತೆಯನ್ನು ಸುಲಭಗೊಳಿಸಲು ಮತ್ತು ಪ್ರಮುಖ ವ್ಯಕ್ತಿಯ ನಷ್ಟದ ಸಂದರ್ಭದಲ್ಲಿ ಅನುಭವಿಸಬಹುದಾದ ವೆಚ್ಚಗಳು ಮತ್ತು ನಷ್ಟಗಳನ್ನು ಸರಿದೂಗಿಸಲು ಪ್ರಮುಖ ವ್ಯಕ್ತಿಯ ವಿಮೆಯನ್ನು ಉದ್ಯೋಗದಾತರು ಅಂತಹ ಪ್ರಮುಖ ವ್ಯಕ್ತಿಗಳ ಜೀವದ ಮೇಲೆ ತೆಗೆದುಕೊಳ್ಳುತ್ತಾರೆ. ಪ್ರಮುಖ ವ್ಯಕ್ತಿಯ ವಿಮೆಯು ಉಂಟಾದ ನಿಜವಾದ ನಷ್ಟಗಳಿಗೆ ಪರಿಹಾರವನ್ನು ನೀಡುವುದಿಲ್ಲ ಆದರೆ ವಿಮಾ ಪಾಲಿಸಿಯಲ್ಲಿ ನಿರ್ದಿಷ್ಟಪಡಿಸಿದ ಸ್ಥಿರ ವಿತ್ತೀಯ ಮೊತ್ತದ ಪರಿಹಾರ ನೀಡುತ್ತದೆ.

ವಿಮಾ ಮೊತ್ತವು ಪ್ರಮುಖ ವ್ಯಕ್ತಿಯ ಸ್ವಂತ ಆದಾಯಕ್ಕಿಂತ ಹೆಚ್ಚಾಗಿ ಕಂಪನಿಯ ಲಾಭದಾಯಕತೆಗೆ ಸಂಬಂಧಿಸಿರುವ ಅವಧಿ ವಿಮಾ ಪಾಲಿಸಿಯಾಗಿ ಪ್ರಮುಖ ವ್ಯಕ್ತಿಯ ವಿಮೆಯನ್ನು ಅನುಮತಿಸಲಾಗಿದೆ. ಕಂತನ್ನು ಕಂಪನಿಯು ಪಾವತಿಸುತ್ತದೆ. ಪ್ರಮುಖ ವ್ಯಕ್ತಿ ಮರಣ ಹೊಂದಿದರೆ, ಲಾಭವನ್ನು ಕಂಪನಿಗೆ ಪಾವತಿಸಲಾಗುತ್ತದೆ. ಪ್ರಮುಖ ವ್ಯಕ್ತಿಯ ವಿಮೆಯ ಆದಾಯವು ಕಂಪನಿಯ ಕೈಯಲ್ಲಿ ತೆರಿಗೆಗೆ ಒಳಪಟ್ಟಿರುತ್ತದೆ.

**a) ಒಬ್ಬ ಪ್ರಮುಖ ವ್ಯಕ್ತಿ ಯಾರಾಗಬಹುದು**

ಒಬ್ಬ ಪ್ರಮುಖ ವ್ಯಕ್ತಿಯ ನಷ್ಟವು ವ್ಯವಹಾರಕ್ಕೆ ಆರ್ಥಿಕ ಒತ್ತಡವನ್ನು ಉಂಟುಮಾಡಬಹುದಾದ ವ್ಯಾಪಾರದೊಂದಿಗೆ ನೇರವಾಗಿ ಸಂಬಂಧ ಹೊಂದಿರುವ ಯಾವುದೇ ವ್ಯಕ್ತಿಯಾಗಿರಬಹುದು. ಉದಾಹರಣೆಗೆ, ಪ್ರಮುಖ ವ್ಯಕ್ತಿಯು ಕಂಪನಿಯ ನಿರ್ದೇಶಕ, ಪಾಲುದಾರ, ಪ್ರಮುಖ ಮಾರಾಟದ ವ್ಯಕ್ತಿ, ಪ್ರಮುಖ ಪ್ರಾಜೆಕ್ಟ್ ಮ್ಯಾನೇಜರ್ ಅಥವಾ ಕಂಪನಿಗೆ ವಿಶೇಷವಾಗಿ ಮೌಲ್ಯಯುತವಾದ ನಿರ್ದಿಷ್ಟ ಕೌಶಲ್ಯ ಅಥವಾ ಜ್ಞಾನವನ್ನು ಹೊಂದಿರುವ ವ್ಯಕ್ತಿಯಾಗಿರಬಹುದು.

**b) ವಿಮೆ ಮಾಡಬಹುದಾದ ನಷ್ಟಗಳು**

ಪ್ರಮುಖ ವ್ಯಕ್ತಿ ವಿಮೆಯು ಪರಿಹಾರವನ್ನು ಒದಗಿಸಬಹುದಾದ ನಷ್ಟಗಳು ಈ ಕೆಳಗಿನಂತಿವೆ:

i. ಪ್ರಮುಖ ವ್ಯಕ್ತಿಗೆ ಕೆಲಸ ಮಾಡಲು ಸಾಧ್ಯವಾಗದಿದ್ದಾಗ, ತಾತ್ಕಾಲಿಕ ಸಿಬ್ಬಂದಿಯನ್ನು ಒದಗಿಸಲು ಮತ್ತು ಅಗತ್ಯವಿದ್ದರೆ ನೇಮಕಾತಿ ಮತ್ತು ಬದಲಿ ತರಬೇತಿಗೆ ಹಣಕಾಸು ಒದಗಿಸಲು ಹಾಗೂ ವಿಸ್ತೃತ ಅವಧಿಗೆ ಸಂಬಂಧಿಸಿದ ನಷ್ಟಗಳನ್ನು ಒದಗಿಸಲು.

ii. ಲಾಭಗಳನ್ನು ರಕ್ಷಿಸಲು ವಿಮೆ. ಉದಾಹರಣೆಗೆ, ಕಳೆದುಹೋದ ಮಾರಾಟದಿಂದ ಕಳೆದುಹೋದ ಆದಾಯವನ್ನು ಸರಿದೂಗಿಸುವುದು, ಪ್ರಮುಖ ವ್ಯಕ್ತಿ ತೊಡಗಿಸಿಕೊಂಡಿರುವ ಯಾವುದೇ ವ್ಯವಹಾರ ಯೋಜನೆಯ ವಿಳಂಬ ಅಥವಾ ರದ್ದತಿಯಿಂದ ಉಂಟಾಗುವ ನಷ್ಟಗಳು, ವಿಸ್ತರಿಸುವ ಅವಕಾಶದಲ್ಲಿಯ ನಷ್ಟ, ವಿಶೇಷ ಕೌಶಲ್ಯ ಅಥವಾ ಜ್ಞಾನದಲ್ಲಿ ಉಂಟಾಗುವ ನಷ್ಟ

**3. ಅಡಮಾನ ವಿಮೋಚನೆ ವಿಮೆ (ಎಮ್ಆರ್ ಐ)**

ಆಸ್ತಿಯನ್ನು ಖರೀದಿಸಲು ಸಾಲವನ್ನು ತೆಗೆದುಕೊಳ್ಳುವ ವ್ಯಕ್ತಿಯು ಸಾಲದ ವ್ಯವಸ್ಥೆಯ ಭಾಗವಾಗಿ ಬ್ಯಾಂಕಿನಿಂದ ಅಡಮಾನ ವಿಮೋಚನೆಯ ವಿಮೆಯನ್ನು ತೆಗೆದುಕೊಳ್ಳಬೇಕಾಗಬಹುದು. "ಅಡಮಾನ ವಿಮೋಚನೆ ವಿಮೆ"ಯನ್ನು ಜನಪ್ರಿಯವಾಗಿ "ಕ್ರೆಡಿಟ್ ಲೈಫ್ ಇನ್ಶುರೆನ್ಸ್ ಪಾಲಿಸಿ" ಎಂದು ಉಲ್ಲೇಖಿಸಲಾಗುತ್ತದೆ.

**a) ಎಮ್ಆರ್ ಐ ಎಂದರೇನು?**

ಇದು ಗೃಹ ಸಾಲದ ಸಾಲಗಾರರಿಗೆ ಆರ್ಥಿಕ ರಕ್ಷಣೆಯನ್ನು ಒದಗಿಸುವ ವಿಮಾ ಪಾಲಿಸಿಯಾಗಿದೆ. ಅಡಮಾನ ಸಾಲದ ಸಂಪೂರ್ಣ ಮರುಪಾವತಿಯ ಮೊದಲು ಅವನು/ಅವಳು ಮರಣಿಸಿದರೆ ಅದರ ಮೇಲಿನ ಬಾಕಿಯನ್ನು ಮರುಪಾವತಿಸಲು ಅಡಮಾನದಾರ ತೆಗೆದುಕೊಳ್ಳುವ ಕಡಿಮೆಯಾಗುತ್ತ ಹೋಗುವ ಅವಧಿಯ ಜೀವ ವಿಮಾ ಪಾಲಿಸಿಯಾಗಿದೆ. ಇದನ್ನು ಸಾಲ ಸುರಕ್ಷಾ(ಲೋನ್ ಪ್ರೊಟೆಕ್ಟರ್) ಪಾಲಿಸಿ ಎಂದು ಕರೆಯಬಹುದು. ಪಾಲಿಸಿದಾರರ ಅನಿರೀಕ್ಷಿತ ಮರಣದ ಸಂದರ್ಭದಲ್ಲಿ ಅವರ ಸಾಲವನ್ನು ಮರುಪಾವತಿಸಲು ಸಹಾಯದ ಅಗತ್ಯವಿರುವ ಅವರ ಅವಲಂಬಿತರಿಗೆ ಈ ಯೋಜನೆ ಸೂಕ್ತವಾಗಿದೆ.

**b) ವೈಶಿಷ್ಟ್ಯಗಳು**

ಪಾಲಿಸಿಯ ಅವಧಿಯಲ್ಲಿ ವಿಮಾ ರಕ್ಷಣೆಯು ಸ್ಥಿರವಾಗಿರುವ ಅವಧಿ ವಿಮಾ ಪಾಲಿಸಿಯಂತಲ್ಲದೆ ಈ ಪಾಲಿಸಿಗಿಂತ ಭಿನ್ನವಾಗಿ ಈ ಪಾಲಿಸಿಯಡಿಯಲ್ಲಿ ವಿಮಾ ಕವರ್ ಪ್ರತಿ ವರ್ಷವೂ ಕಡಿಮೆಯಾಗುತ್ತದೆ.

**ನಿಮ್ಮನ್ನು ಪರೀಕ್ಷಿಸಿ 1**

ಅಡಮಾನ ವಿಮೋಚನೆ ವಿಮೆಯ ಹಿಂದಿನ ಉದ್ದೇಶವೇನು?

I. ಅಗ್ಗದ ಅಡಮಾನ ದರಗಳನ್ನು ಸುಗಮಗೊಳಿಸುವುದು

II. ಗೃಹ ಸಾಲದ ಸಾಲಗಾರರಿಗೆ ಆರ್ಥಿಕ ರಕ್ಷಣೆಯನ್ನು ಒದಗಿಸುವುದು

III. ಅಡಮಾನ ಮಾಡಿದ ಆಸ್ತಿಯ ಮೌಲ್ಯವನ್ನು ರಕ್ಷಿಸುವುದು

IV. ತಪ್ಪಿದ ಸಂದರ್ಭದಲ್ಲಿ ಹೊರಹಾಕುವಿಕೆಯನ್ನು ತಪ್ಪಿಸುವುದು

---

**ಸಾರಾಂಶ**

- 1874 ರ ವಿವಾಹಿತ ಮಹಿಳೆಯರ ಆಸ್ತಿ ಕಾಯಿದೆಯ ಸೆಕ್ಷನ್ 6, ಜೀವ ವಿಮಾ ಪಾಲಿಸಿಯಡಿಯಲ್ಲಿಯ ಪ್ರಯೋಜನಗಳು ಹೆಂಡತಿ ಮತ್ತು ಮಕ್ಕಳಿಗೆ ಸುರಕ್ಷಿತತೆಯನ್ನು ಖಾತ್ರಿ ಪಡಿಸುತ್ತದೆ.
- ಪಾಲಿಸಿಯು ನ್ಯಾಯಾಲಯದ ಉಪಬಂಧ/ಸವಲತ್ತುಗಳು, ಸಾಲಗಾರರು ಮತ್ತು ಜೀವ ವಿಮಾದಾರರ ನಿಯಂತ್ರಣವನ್ನು ಮೀರಿರುತ್ತದೆ.
- ಪ್ರಮುಖ ವ್ಯಕ್ತಿ ವಿಮೆಯು ವ್ಯಾಪಾರ ವಿಮೆಯ ಪ್ರಮುಖ ರೂಪವಾಗಿದೆ. ವ್ಯವಹಾರದ ಪ್ರಮುಖ ವ್ಯಕ್ತಿ/ಸದಸ್ಯರ ಸಾವು ಅಥವಾ ವಿಸ್ತೃತ ಅಸಮರ್ಥತೆಯಿಂದ ಉಂಟಾಗುವ ಹಣಕಾಸಿನ ನಷ್ಟಗಳಿಗೆ ವ್ಯವಹಾರವನ್ನು ಸರಿದೂಗಿಸಲು ಒಂದು ಉದ್ಯಮದಿಂದ ತೆಗೆದುಕೊಳ್ಳಲಾದ ವಿಮಾ ಪಾಲಿಸಿ ಎಂದು ಪ್ರಮುಖ ವ್ಯಕ್ತಿ ವಿಮೆಯನ್ನು ವಿವರಿಸಬಹುದು.
- ಅಡಮಾನ ವಿಮೋಚನೆ ವಿಮೆಯು ಮೂಲಭೂತವಾಗಿ ಅಡಮಾನದಾರನು ತನ್ನ ಸಂಪೂರ್ಣ ಮರುಪಾವತಿಯ ಮೊದಲು ಮರಣಹೊಂದಿದರೆ ಅಡಮಾನ ಸಾಲದ ಮೇಲಿನ ಬಾಕಿಯನ್ನು ಮರುಪಾವತಿಸಲು ತೆಗೆದುಕೊಳ್ಳುವ ಕಡಿಮೆಯಾಗುತ್ತ ಹೋಗುವ ಅವಧಿಯ ಜೀವ ವಿಮಾ ಪಾಲಿಸಿಯಾಗಿದೆ.

---

**ಪ್ರಮುಖ ಪದಗಳು**

1. ವಿವಾಹಿತ ಮಹಿಳೆಯರ ಆಸ್ತಿ ಕಾಯಿದೆ
2. ಪ್ರಮುಖ ವ್ಯಕ್ತಿಯ ವಿಮೆ
3. ಅಡಮಾನ ವಿಮೋಚನೆ ವಿಮೆ

---

**ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು**

**ಉತ್ತರ 1** - ಸರಿಯಾದ ಉತ್ತರ **II** ಆಗಿದೆ.

---

# ಅಧ್ಯಾಯ L-06

# ಜೀವವಿಮೆಯ ಬೆಲೆನಿರ್ಧಾರ ಮತ್ತು ಮೌಲ್ಯಮಾಪನ

ಅಧ್ಯಾಯ ಪರಿಚಯ

ಬೆಲೆನಿರ್ಧಾರದಲ್ಲಿ ಒಳಗೊಂಡಿರುವ ಮೂಲಭೂತ ಅಂಶಗಳು ಮತ್ತು ಜೀವ ವಿಮಾ ಒಪ್ಪಂದಗಳ ಪ್ರಯೋಜನಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು ಈ ಅಧ್ಯಾಯದ ಉದ್ದೇಶವಾಗಿದೆ. ಮೊದಲು ನಾವು ಇದರಲ್ಲಿ ಒಳಗೊಂಡಿರುವ ಅಂಶಗಳನ್ನು ಚರ್ಚಿಸೋಣ ಮತ್ತು ನಂತರ ಹೆಚ್ಚುವರಿ ಮತ್ತು ಬೋನಸ್ ಗಳ ಪರಿಕಲ್ಪನೆಯನ್ನು ಚರ್ಚಿಸೋಣ.

ಕಲಿಕೆಯ ಫಲಿತಾಂಶಗಳು

A. **ವಿಮಾ ಬೆಲೆನಿರ್ಧಾರ - ಮೂಲಭೂತ ಅಂಶಗಳು**

B. **ಹೆಚ್ಚುವರಿ ಮತ್ತು ಬೋನಸ್**

## A. ವಿಮಾ ಬೆಲೆನಿರ್ಧಾರ – ಮೂಲಭೂತ ಅಂಶಗಳು

### 1. ಕಂತು

ಕಂತು ಎಂಬ ಪದವು ಸಾಮಾನ್ಯ ಭಾಷೆಯಲ್ಲಿ, ವಿಮಾ ಪಾಲಿಸಿಯನ್ನು ಖರೀದಿಸಲು ವಿಮಾದಾರರಿಂದ ಪಾವತಿಸಲಾಗುವ ಬೆಲೆಯನ್ನು ಸೂಚಿಸುತ್ತದೆ. ಇದನ್ನು ಸಾಮಾನ್ಯವಾಗಿ ಪ್ರತಿ ಸಾವಿರ ರೂಪಾಯಿಗಳ ವಿಮಾ ಮೊತ್ತಕ್ಕೆ ಕಂತು ದರವೆಂದು ವ್ಯಕ್ತಪಡಿಸಲಾಗುತ್ತದೆ. ಕಂತು ದರಗಳು ನಿರೀಕ್ಷಿತ ಗ್ರಾಹಕರ ವಯಸ್ಸು ಮತ್ತು ಯೋಜನೆಯ ಮೇಲೆ ಅವಲಂಬಿತವಾಗಿರುತ್ತದೆ.

ಈ ಕಂತು ದರಗಳು ವಿಮಾ ಕಂಪನಿಗಳಲ್ಲಿ ಲಭ್ಯವಿರುವ ದರಗಳ ಕೋಷ್ಟಕಗಳ ರೂಪದಲ್ಲಿ ಲಭ್ಯವಿರುತ್ತವೆ.

**ಚಿತ್ರ 1: ಕಂತು**




ಈ ಕೋಷ್ಟಕಗಳಲ್ಲಿ ಮುದ್ರಿಸಲಾದ ದರಗಳನ್ನು "ಕಚೇರಿ ಕಂತು(ಆಫೀಸ್ ಪ್ರೀಮಿಯಂ)ಗಳು" ಎಂದು ಕರೆಯಲಾಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಈ ದರಗಳು ಅವಧಿಯುದ್ದಕ್ಕೂ ಒಂದೇ ಆಗಿರುತ್ತವೆ ಮತ್ತು ವಾರ್ಷಿಕ ದರವಾಗಿ ವ್ಯಕ್ತಪಡಿಸಲಾಗುತ್ತದೆ.

**ಉದಾಹರಣೆ**

ಒಂದು ನಿರ್ದಿಷ್ಟ ವಯಸ್ಸಿಗೆ ಇಪ್ಪತ್ತು ವರ್ಷಗಳ ದತ್ತಿ(ಎಂಡೋಮೆಂಟ್) ಪಾಲಿಸಿಯ ಕಂತು ರೂ. **4,800** ಆಗಿದ್ದರೆ ಇಪ್ಪತ್ತು ವರ್ಷಗಳವರೆಗೆ ಪ್ರತಿ ವರ್ಷ ರೂ. **4,800** ಗಳನ್ನು ಪಾವತಿಸಬೇಕಾಗುತ್ತದೆ ಎಂದರ್ಥ.

---

ಆದಾಗ್ಯೂ ಮೊದಲ ಕೆಲವು ವರ್ಷಗಳಲ್ಲಿ ಮಾತ್ರ ಕಂತುಗಳನ್ನು ಪಾವತಿಸಬೇಕಾದ ಕೆಲವು ಪಾಲಿಸಿಗಳನ್ನು ಹೊಂದುವುದು ಸಾಧ್ಯವಿದೆ. ಒಪ್ಪಂದದ ಪ್ರಾರಂಭದಲ್ಲಿ ಕೇವಲ ಒಂದು ಕಂತನ್ನು ಮಾತ್ರ ಪಾವತಿಸಲಾಗುವ ಒಂದೇ ಕಂತಿನ ಒಪ್ಪಂದಗಳನ್ನು ಕಂಪನಿಗಳು ಹೊಂದಿರುತ್ತವೆ. ಈ ಪಾಲಿಸಿಗಳು ಸಾಮಾನ್ಯವಾಗಿ ಹೂಡಿಕೆಗಳನ್ನು ಬೆಂಬಲಿಸುತ್ತವೆ.

## 2. ರಿಯಾಯಿತಿಗಳು

ಜೀವ ವಿಮಾ ಕಂಪನಿಗಳು ಪಾವತಿಸಬೇಕಾದ ಕಂತಿನಲ್ಲಿ ಕೆಲವು ರೀತಿಯ ರಿಯಾಯಿತಿಗಳನ್ನು ಸಹ ನೀಡಬಹುದು. ಅಂತಹ ರಿಯಾಯಿತಿಗಳ ಎರಡು ವಿಧಗಳು ಈ ಕೆಳಗಿನಂತಿವೆ:

- ✓ ವಿಮಾ ಮೊತ್ತಕ್ಕೆ
- ✓ ಕಂತು ಪಾವತಿಯ ವಿಧಾನಕ್ಕೆ

a) **ವಿಮಾ ಮೊತ್ತಕ್ಕೆ ನೀಡಲಾಗುವ ರಿಯಾಯಿತಿ**

ಹೆಚ್ಚಿನ ವಿಮಾ ಮೊತ್ತದದೊಂದಿಗಿನ ಪಾಲಿಸಿಗಳನ್ನು ಖರೀದಿಸುವವರಿಗೆ **ವಿಮಾ ಮೊತ್ತ**ದ ರಿಯಾಯಿತಿಯನ್ನು ನೀಡಲಾಗುತ್ತದೆ. ಹೆಚ್ಚಿನ ಮೌಲ್ಯದ ಪಾಲಿಸಿಗಳಿಗೆ ಸೇವೆ ಸಲ್ಲಿಸುವಾಗ ವಿಮಾಗಾರರು ಗಳಿಸಬಹುದಾದ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸುವ ಒಂದು ಮಾರ್ಗವಾಗಿ ಇದನ್ನು ನೀಡಲಾಗುತ್ತದೆ. 50,000 ಅಥವಾ 5,00,000 ರೂಪಾಯಿಗಳ ಪಾಲಿಸಿಯನ್ನು ಪ್ರಕ್ರಿಯೆಗೊಳಿಸಲು ಬೇಕಾಗುವ ಶ್ರಮ ಮತ್ತು ವೆಚ್ಚ ಒಂದೇ ಆಗಿರುತ್ತದೆ ಎಂಬುದು ಇದರಲ್ಲಿಯ ತರ್ಕ. ಆದರೆ ಹೆಚ್ಚಿನ ಮೊತ್ತದ ವಿಮಾ ಪಾಲಿಸಿಗಳು ಹೆಚ್ಚು ಕಂತು ಮತ್ತು ಪರಿಣಾಮವಾಗಿ ಹೆಚ್ಚು ಲಾಭವನ್ನು ನೀಡುತ್ತವೆ.

ಕಂತಿನ ಮೇಲೆ ನೀಡಲಾಗುವ ರಿಯಯಾಯಿತಿ

ಅದೇ ರೀತಿಯಾಗಿ ಕಂತುಪಾವತಿಯ ವಿಧಾನಕ್ಕೆ ರಿಯಾಯಿತಿಯನ್ನು ನೀಡಬಹುದು. ಜೀವ ವಿಮಾ ಕಂಪನಿಗಳು ವಾರ್ಷಿಕ, ಅರ್ಧ ವಾರ್ಷಿಕ, ತ್ರೈಮಾಸಿಕ ಅಥವಾ ಮಾಸಿಕ ಆಧಾರದ ಮೇಲೆ ಕಂತುಗಳನ್ನು ಪಾವತಿಸಲು ಅನುಮತಿಸಬಹುದು. ಕಂತುಪಾವತಿಯ ಸಂಖ್ಯೆಗಳು ಹೆಚ್ಚಾದಂತೆ, ಕಂತನ್ನು ಸಂಗ್ರಹಿಸುವ ಮತ್ತು ಲೆಕ್ಕಹಾಕುವ ಆಡಳಿತಾತ್ಮಕ ವೆಚ್ಚಗಳು ಹೆಚ್ಚಾಗುತ್ತವೆ. ಅಲ್ಲದೇ, ವಾರ್ಷಿಕ ವಿಧಾನದಲ್ಲಿ, ವಿಮಾಗಾರರು ಇಡೀ ವರ್ಷದಲ್ಲಿ ಈ ಮೊತ್ತವನ್ನು ಬಳಸಿಕೊಂಡು ಅದರ ಮೇಲೆ ಬಡ್ಡಿಯನ್ನು ಗಳಿಸಬಹುದು. ಆದ್ದರಿಂದ ವಿಮಾಗಾರರು ರಿಯಾಯಿತಿಯನ್ನು ಅನುಮತಿಸುವ ಮೂಲಕ ವಾರ್ಷಿಕ ಮತ್ತು ಅರ್ಧ ವಾರ್ಷಿಕ ವಿಧಾನಗಳ ಮೂಲಕ ಪಾವತಿಯನ್ನು ಪ್ರೋತ್ಸಾಹಿಸುತ್ತಾರೆ. ಒಳಗೊಂಡಿರುವ ಹೆಚ್ಚುವರಿ ಆಡಳಿತಾತ್ಮಕ ವೆಚ್ಚಗಳನ್ನು ಸರಿದೂಗಿಸಲು ಮಾಸಿಕ ಪಾವತಿ ವಿಧಾನಗಳಿಗೆ ಸ್ವಲ್ಪ ಹೆಚ್ಚುವರಿ ಶುಲ್ಕವನ್ನು ಸಹ ಅವರು ವಿಧಿಸಬಹುದು.

## 3. ಹೆಚ್ಚುವರಿ ಶುಲ್ಕಗಳು

ಹೆಚ್ಚುವರಿ ಅಪಾಯವನ್ನು ಉಂಟುಮಾಡುವ ಯಾವುದೇ ಮಹತ್ವದ ಅಂಶಗಳಿಗೆ ಒಳಪಟ್ಟಿಲ್ಲದ ವ್ಯಕ್ತಿಗಳಿಗೆ ಕೋಷ್ಟಕ ಕಂತನ್ನು ವಿಧಿಸಲಾಗುತ್ತದೆ. ಅವುಗಳನ್ನು ಸಾಮಾನ್ಯ ಜೀವಗಳು(ಸ್ಟ್ಯಾಂಡರ್ಡ್ ಲೈವ್ಸ್) ಎಂದು ಕರೆಯಲಾಗುತ್ತದೆ ಮತ್ತು ವಿಧಿಸುವ ದರಗಳನ್ನು ಸಾಮಾನ್ಯ ದರಗಳೆಂದು ಕರೆಯಲಾಗುತ್ತದೆ.

ವಿಮೆಗಾಗಿ ಪ್ರಸ್ತಾಪಿಸುವ ವ್ಯಕ್ತಿಯು ಅವರ ಜೀವಕ್ಕೆ ಅಪಾಯವನ್ನುಂಟುಮಾಡುವಂತಹ ಹೃದಯದ ಕಾಯಿಲೆಗಳು ಅಥವಾ ಮಧುಮೇಹದಂತಹ ಕೆಲವು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರೆ, ಅವನು

ಅಥವಾ ಅವಳನ್ನು ಕಡಿಮೆ/ಕೆಳಮಟ್ಟವೆಂದು ಪರಿಗಣಿಸಲಾಗುತ್ತದೆ. ವಿಮಾಗಾರರು ಆರೋಗ್ಯದ ಹೆಚ್ಚುವರಿಯ ಮೂಲಕ ಹೆಚ್ಚುವರಿ ಕಂತನ್ನು ವಿಧಿಸಲು ನಿರ್ಧರಿಸಬಹುದು. ಅದೇ ರೀತಿ ಸರ್ಕಸ್ ಅಕ್ರೋಬ್ಯಾಟ್ ನಂತಹ ಅಪಾಯಕಾರಿ ಉದ್ಯೋಗದಲ್ಲಿ ತೊಡಗಿರುವವರ ಮೇಲೆ ಔದ್ಯೋಗಿಕ ಹೆಚ್ಚುವರಿಯನ್ನು ವಿಧಿಸಬಹುದು. ಈ ಹೆಚ್ಚುವರಿಗಳು ಕಂತುಗಳು ಕೋಷ್ಟಕ ಕಂತಿಗಿಂತ ಹೆಚ್ಚಿನ ಕಂತಿನ ಮೊತ್ತಕ್ಕೆ ಕಾರಣವಾಗುತ್ತದೆ.

ಅಲ್ಲದೇ, ವಿಮಾಗಾರರು ಹೆಚ್ಚುವರಿ ಕಂತು ಪಾವತಿಯ ಮೇಲೆ ಲಭ್ಯವಿರುವ ಕೆಲವು ಹೆಚ್ಚುವರಿ ಪ್ರಯೋಜನಗಳನ್ನು ಪಾಲಿಸಿಯಡಿಯಲ್ಲಿ ನೀಡಬಹುದು.

**ಉದಾಹರಣೆ**

ಜೀವ ವಿಮಾಗಾರರು ಡಬಲ್ ಆಕ್ಸಿಡೆಂಟ್ ಬೆನಿಫಿಟ್ ಅಥವಾ ಡಿಎಬಿಯನ್ನು (ಅದರಲ್ಲಿ ಅಪಘಾತದ ಪರಿಣಾಮವಾಗಿ ಸಾವು ಸಂಭವಿಸಿದಲ್ಲಿ ವಿಮಾ ಮೊತ್ತದ ಎರಡು ಪಟ್ಟು ಮೊತ್ತವನ್ನು ಕ್ಲೇಮ್ ಆಗಿ ಪಾವತಿಸಲಾಗುತ್ತದೆ)ನೀಡಬಹುದು. ಇದಕ್ಕಾಗಿ ಪ್ರತಿ ಒಂದು ಸಾವಿರ ವಿಮಾ ಮೊತ್ತಕ್ಕೆ ಒಂದು ರೂಪಾಯಿ ಹೆಚ್ಚುವರಿ ಕಂತನ್ನು ವಿಧಿಸಬಹುದು.

ಅದೇ ರೀತಿ ಶಾಶ್ವತ ಅಂಗವೈಕಲ್ಯತೆಯ ಪ್ರಯೋಜನ(ಪರ್ಮನೆಂಟ್ ಡಿಸಾಬಿಲಿಟಿ ಬೆನಿಫಿಟ್) (ಪಿಡಿಬಿ)ವೆಂದು ಕರೆಯಲ್ಪಡುವ ಪ್ರಯೋಜನವನ್ನು ಪ್ರತಿ ಸಾವಿರ ವಿಮಾ ಮೊತ್ತಕ್ಕೆ ಹೆಚ್ಚುವರಿಯಾಗಿ ಕಂತನ್ನು ಪಾವತಿಸುವ ಮೂಲಕ ಪಡೆಯಬಹುದು.

4. **ಕಂತನ್ನು ನಿರ್ಧರಿಸುವುದು**

ಜೀವ ವಿಮಾಗಾರರು ಕಂತಿನ ಕೋಷ್ಟಕಗಳಲ್ಲಿ ಪ್ರಸ್ತುತಪಡಿಸಲಾದ ದರಗಳನ್ನು ಹೇಗೆ ಪಡೆಯುತ್ತಾರೆಂಬುದನ್ನು ಈಗ ನಾವು ಪರಿಶೀಲಿಸೋಣ. ಈ ಕಾರ್ಯವನ್ನು ವಿಮಾಗಣಕ(ಆಕ್ಚುರಿ)ರಿಂದ ನಿರ್ವಹಿಸಲಾಗುತ್ತದೆ. ಅವಧಿ ವಿಮೆ, ಸಂಪೂರ್ಣ ಜೀವ ಮತ್ತು ದತ್ತಿಗಳಂತಹ ಸಾಂಪ್ರದಾಯಿಕ ಜೀವ ವಿಮಾ ಪಾಲಿಸಿಗಳ ಸಂದರ್ಭದಲ್ಲಿ ಕಂತನ್ನು ನಿರ್ಧರಿಸುವ ಪ್ರಕ್ರಿಯೆಯು ಈ ಕೆಳಗೆ ನೀಡಲಾದ ಅಂಶಗಳನ್ನು ಪರಿಗಣಿಸುತ್ತದೆ:

- ✓ ಮರಣಸಾಧ್ಯತೆ
- ✓ ಬಡ್ಡಿ/ಆಸಕ್ತಿ
- ✓ ನಿರ್ವಹಣೆಯ ವೆಚ್ಚಗಳು
- ✓ ಮೀಸಲುಗಳು
- ✓ ಹೆಚ್ಚುವರಿ ಬೋನಸ್

**ಚಿತ್ರ 2: ಕಂತಿನ ಘಟಕಗಳು**




ಮೊದಲಿನ ಎರಡು ಅಂಶಗಳು ನಮಗೆ ನಿವ್ವಳ ಕಂತನ್ನು ನೀಡುತ್ತವೆ. ನಿವ್ವಳ ಕಂತಿಗೆ ಇತರ ಅಂಶಗಳನ್ನು ಸೇರಿಸುವ ಮೂಲಕ ನಾವು ಒಟ್ಟು ಅಥವಾ ಕಚೇರಿ ಕಂತನ್ನು ಪಡೆಯುತ್ತೇವೆ

**a)** ಮರಣಸಾಧ್ಯತೆ ಮತ್ತು ಬಡ್ಡಿ/ಆಸಕ್ತಿ

ಕಂತುಗಳಲ್ಲಿ ಮರಣ ಸಾಧ್ಯತೆಯು ಮೊದಲ ಅಂಶವಾಗಿದೆ. ಇದು ಒಂದು ನಿರ್ದಿಷ್ಟ ವರ್ಷದಲ್ಲಿ ಒಬ್ಬ ನಿರ್ದಿಷ್ಟ ವಯಸ್ಸಿನ ವ್ಯಕ್ತಿಯು ಸಾಯುವ ಅವಕಾಶ ಅಥವಾ ಸಂಭವನೀಯತೆಯಾಗಿದೆ. ವ್ಯಕ್ತಿಯ ನಿರೀಕ್ಷಿತ ಮರಣವನ್ನು ಕಂಡುಹಿಡಿಯಲು, "ಮರಣ ಸಾಧ್ಯೆತೆಯ ಕೋಷ್ಟಕ(ಮೊರ್ಟ್ಯಾಲಿಟಿ ಟೇಬಲ್ಸ್)ಗಳನ್ನು" ಬಳಸಲಾಗುತ್ತದೆ.

| **ಉದಾಹರಣೆ** |
|---|

35 ವರ್ಷ ವಯಸ್ಸಿಗೆ ಮರಣ ಹೊಂದುವ ಸಾಧ್ಯತೆಯ ಪ್ರಮಾಣವು 0.0035 ಆಗಿದ್ದರೆ, 35 ವರ್ಷ ವಯಸ್ಸಿನವರೆಗೆ ಜೀವಂತವಾಗಿರುವ ಪ್ರತಿ 1000 ಜನರಲ್ಲಿ 3.5 (ಅಥವಾ 10,000 ರಲ್ಲಿ 35) 35 ಮತ್ತು 36 ವರ್ಷ ವಯಸ್ಸಿನ ನಡುವೆ ಸಾಯುವ ನಿರೀಕ್ಷೆಯಿದೆ ಎಂದು ಸೂಚಿಸುತ್ತದೆ.

ವಿವಿಧ ವಯಸ್ಸಿನವರಿಗೆ ಮರಣ ಸಾಧ್ಯತೆಯ ವೆಚ್ಚವನ್ನು ಲೆಕ್ಕಾಚಾರ ಮಾಡಲು ಕೋಷ್ಟಕವನ್ನು ಬಳಸಬಹುದು. ಉದಾಹರಣೆಗೆ 35 ವರ್ಷಕ್ಕೆ 0.0035 ದರವು 0.0035 **x** 1000 (ವಿಮಾ ಮೊತ್ತ) = 3.50 ರೂ.ಗಳ ಪ್ರತಿ ಸಾವಿರ ವಿಮಾ ಮೊತ್ತಕ್ಕೆ ವಿಮೆಯ ವೆಚ್ಚವನ್ನು ಸೂಚಿಸುತ್ತದೆ.

ಮೇಲಿನ ವೆಚ್ಚವನ್ನು "ಅಪಾಯದ ಕಂತು(ರಿಸ್ಕ್ ಪ್ರೀಮಿಯಂ)" ಎಂದೂ ಕರೆಯಬಹುದು. ಹೆಚ್ಚಿನ ವಯಸ್ಸಿನವರಿಗೆ ಅಪಾಯದ ಕಂತು ಹೆಚ್ಚಾಗಿರುತ್ತದೆ.

**ಉದಾಹರಣೆ**

ನಮ್ಮ ಬಳಿ ವರ್ಷಗಳ ನಂತರ ವಿಮೆಯ ವೆಚ್ಚವನ್ನು ಪೂರೈಸಲು ಪ್ರತಿ ಸಾವಿರಕ್ಕೆ ಐದು ರೂ. ಗಳ ಅವಶ್ಯಕತೆಯಿದ್ದರೆ 5 ಮತ್ತು ಬಡ್ಡಿದರವನ್ನು ನಾವು 6% ಎಂದು ಊಹಿಸಿದ್ದರೆ, ಐದು ವರ್ಷಗಳ ನಂತರ ಪಾವತಿಸಬೇಕಾದ ಪ್ರಸ್ತುತ 5 ರೂಗಳ ಮೌಲ್ಯ 5 **x** 1/ (1.06)5 = 3.74 ಆಗಿರುತ್ತದೆ.

6% ಬದಲಿಗೆ ನಾವು 10% ಎಂದು ಭಾವಿಸಿದರೆ, ಪ್ರಸ್ತುತ ಮೌಲ್ಯವು ಕೇವಲ 3.10 ಆಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಹೆಚ್ಚಿನ ಬಡ್ಡಿದರವನ್ನು ಊಹಿಸಲಾದಂತೆ, ಪ್ರಸ್ತುತ ಮೌಲ್ಯವು ಕಡಿಮೆಯಾಗುತ್ತದೆ.

---

ಮರಣ ಸಾಧ್ಯತೆ ಮತ್ತು ಬಡ್ಡಿ/ಆಸಕ್ತಿಯ ಬಗೆಗಿನ ನಮ್ಮ ಅಧ್ಯಯನದಿಂದ ಎರಡು ಪ್ರಮುಖ ತೀರ್ಮಾನಗಳನ್ನು ನಾವು ಪಡೆಯಬಹುದು

- ✓ ಮರಣ ಸಾಧ್ಯತೆಯ ಕೋಷ್ಟಕದಲ್ಲಿಯ ಮರಣ ದರವು ಹೆಚ್ಚಾದಂತೆ, ಕಂತುಗಳು ಹೆಚ್ಚಾಗುತ್ತವೆ
- ✓ ಊಹಿಸಲಾದ ಬಡ್ಡಿದರವು ಹೆಚ್ಚಾದಷ್ಟು, ಕಂತು ಕಡಿಮೆಯಾಗುತ್ತದೆ

**ನಿವ್ವಳ ಕಂತು**

ಮರಣ ಸಾಧ್ಯತೆ ಮತ್ತು ಬಡ್ಡಿಯ ಅಂದಾಜುಗಳು "ನಿವ್ವಳ ಕಂತ"ನ್ನು ನೀಡುತ್ತವೆ

**ಒಟ್ಟು ಕಂತು**

ಒಟ್ಟು ಕಂತು ನಿವ್ವಳ ಕಂತಿನ ಮತ್ತು ಹೆಚ್ಚುವರಿ ಹೇರಿಕೆ( ಲೋಡಿಂಗ್)ಯೆಂದು ಕರೆಯಲ್ಪಡುವ ಮೊತ್ತದ ಒಟ್ಟು ಮೊತ್ತವಾಗಿದೆ. ಹೆಚ್ಚುವರಿ ಹೇರಿಕೆ( ಲೋಡಿಂಗ್)ಯ ಪ್ರಮಾಣವನ್ನು ನಿರ್ಧರಿಸುವಾಗ ಮೂರು ಪರಿಗಣನೆಗಳು ಅಥವಾ ಮಾರ್ಗದರ್ಶಿ ತತ್ವಗಳನ್ನು ಲಕ್ಷ್ಯಲ್ಲಿಟ್ಟುಕೊಳ್ಳಬೇಕು:

b) **ವೆಚ್ಚಗಳು ಮತ್ತು ಮೀಸಲುಗಳು**

ಜೀವ ವಿಮಾಗಾರರು ಈ ಕೆಳಗಿನವುಗಳು ಸೇರಿದಂತೆ ವಿವಿಧ ರೀತಿಯ ನಿರ್ವಹಣಾ ವೆಚ್ಚಗಳನ್ನು ಭರಿಸಬೇಕಾಗುತ್ತದೆ:

- ✓ ಏಜೆಂಟರ ತರಬೇತಿ ಮತ್ತು ನೇಮಕಾತಿ,
- ✓ ಏಜೆಂಟರ ಕಮಿಷನ್
- ✓ ಸಿಬ್ಬಂದಿ ವೇತನಗಳು,
- ✓ ಕಚೇರಿ ವ್ಯವಸ್ಥೆ,
- ✓ ಕಚೇರಿಯಲ್ಲಿಯ ಲೇಖನಸಾಮಗ್ರಿ

- ✓ ವಿದ್ಯುತ್ ಶುಲ್ಕಗಳು
- ✓ ಇತರ ವಿವಿಧ ವೆಚ್ಚಗಳು ಇತ್ಯಾದಿ

ಈ ಎಲ್ಲ ವೆಚ್ಚವನ್ನೂ ವಿಮಾಗಾರರು ಸಂಗ್ರಹಿಸಿದ ಕಂತುಗಳಿಂದ ಪಾವತಿಸಬೇಕಾಗುತ್ತದೆ. ಈ ವೆಚ್ಚಗಳನ್ನು ನಿವ್ವಳ ಕಂತಿಗೆ ಸೂಕ್ತವಾಗಿ ಹೆಚ್ಚುವರಿ ಹೇರಿಕೆ(ಲೋಡ್)ಯನ್ನು ಮಾಡಲಾಗುತ್ತದೆ.

c) **ವಿಳಂಬಗಳು ಮತ್ತು ಆಕಸ್ಮಿಕಗಳು**

ವೆಚ್ಚಗಳ ಜೊತೆಗೆ, ಜೀವ ವಿಮಾಗಾರರ ಲೆಕ್ಕಾಚಾರಗಳನ್ನು ತಪ್ಪಾಗಿಸುವ ಇತರ ಅಂಶಗಳಿವೆ.

ಅಪಾಯದ ಒಂದು ಮೂಲವೆಂದರೆ ವಿಳಂಬಗಳು ಮತ್ತು ಹಿಂಪಡೆಯುವಿಕೆಗಳು. ವಿಳಂಬವೆಂದರೆ ಪಾಲಿಸಿದಾರರು ಕಂತುಗಳ ಪಾವತಿಯನ್ನು ನಿಲ್ಲಿಸುತ್ತಾರೆ. ಹಿಂಪಡೆಯುವಿಕೆಗಳ ಸಂದರ್ಭದಲ್ಲಿ, ಪಾಲಿಸಿದಾರರು ಪಾಲಿಸಿಯನ್ನು ಮರಳಿ ಒಪ್ಪಿಸುತ್ತಾರೆ ಮತ್ತು ಪಾಲಿಸಿಯ ಸ್ವಾಧೀನಪಡಿಸಿಕೊಂಡ ನಗದು ಮೌಲ್ಯದಿಂದ ಮೊತ್ತವನ್ನು ಪಡೆಯುತ್ತಾರೆ.

ವಿಳಂಬಗಳು ಸಾಮಾನ್ಯವಾಗಿ ಮೊದಲ ಮೂರು ವರ್ಷಗಳಲ್ಲಿ ವಿಶೇಷವಾಗಿ ಒಪ್ಪಂದದ ಮೊದಲ ವರ್ಷದಲ್ಲಿ ಸಂಭವಿಸುತ್ತವೆ.

d) **ಲಾಭ(ಭಾಗವಹಿಸುವ)ಸಹಿತ ಪಾಲಿಸಿಗಳು ಮತ್ತು ಬೋನಸ್ ಹೆಚ್ಚುವರಿ ಹೇರಿಕೆ(ಲೋಡಿಂಗ್)ಯೊಂದಿಗೆ**

ಪ್ರತಿಕೂಲ ಸಂದರ್ಭಗಳಲ್ಲಿಯೂ ಸಹ ತಮ್ಮನ್ನು ಸುರಕ್ಷಿತವಾಗಿಡಲು ಹೆಚ್ಚುವರಿಯನ್ನು ರಚಿಸಲು ಜೀವ ವಿಮಾದಾರರು ಹೆಚ್ಚಿನ ಹೇರಿಕೆ(ಲೋಡಿಂಗ್)ಯನ್ನು ಮುಂಚಿತವಾಗಿಯೇ ವಿಧಿಸುವ ಅಭ್ಯಾಸವನ್ನು ಪ್ರಾರಂಭಿಸಿದಾಗ 'ಲಾಭಸಹಿತ' ಪಾಲಿಸಿಗಳ ಪರಿಕಲ್ಪನೆಯು ಹುಟ್ಟಿಕೊಂಡಿತು. ನಂತರದ ಅನುಭವವು ಹೆಚ್ಚು ಅನುಕೂಲಕರವೆಂದು ಸಾಬೀತಾದರೆ, ಜೀವ ವಿಮಾಗಾರರು ಬೋನಸ್ ಮೂಲಕ ಪಾಲಿಸಿದಾರರೊಂದಿಗೆ ಕೆಲವು ಲಾಭಗಳನ್ನು ಹಂಚಿಕೊಳ್ಳುತ್ತಾರೆ.

ಒಟ್ಟಾರೆಯಾಗಿ ನಾವು ಹೀಗೆ ಹೇಳಬಹುದು:

**ಒಟ್ಟು ಕಂತು = ನಿವ್ವಳ ಕಂತು + ವೆಚ್ಚಗಳ ಹೆಚ್ಚುವರಿ ಹೇರಿಕೆ(ಲೋಡಿಂಗ್) + ಆಕಸ್ಮಿಕಗಳ ಹೆಚ್ಚುವರಿ ಹೇರಿಕೆ(ಲೋಡಿಂಗ್) + ಬೋನಸ್ ಗಾಗಿ ಹೆಚ್ಚುವರಿ ಹೇರಿಕೆ(ಲೋಡಿಂಗ್)**

**ನಿಮ್ಮನ್ನು ಪರೀಕ್ಷಿಸಿ 1**

ಪಾಲಿಸಿ ವಿಳಂಬ/ರದ್ದತಿ ಎಂದರೆ ಏನು?

I. ಪಾಲಿಸಿದಾರರು ಪಾಲಿಸಿಯ ಕಂತು ಪಾವತಿಯನ್ನು ಪೂರ್ಣಗೊಳಿಸುತ್ತಾರೆ
II. ಪಾಲಿಸಿದಾರರು ಪಾಲಿಸಿಗಾಗಿ ಕಂತು ಪಾವತಿಯನ್ನು ನಿಲ್ಲಿಸುತ್ತಾರೆ
III. ಪಾಲಿಸಿಯು ಅವಧಿಯ ಪರಿಪಕ್ವತೆ(ಮೆಚ್ಯೂರಿಟಿ)ಯನ್ನು ಪಡೆಯುತ್ತದೆ

IV. ಪಾಲಿಸಿಯನ್ನು ಮಾರುಕಟ್ಟೆಯಿಂದ ಹಿಂಪಡೆಯಲಾಗಿದೆ

## B. ಹೆಚ್ಚುವರಿ ಮತ್ತು ಬೋನಸ್

### 1. ಹೆಚ್ಚುವರಿ ಮತ್ತು ಬೋನಸ್ ನಿರ್ಣಯ

ಪ್ರತಿ ಜೀವ ವಿಮಾ ಕಂಪನಿಯು ತನ್ನ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಆವರ್ತಕ ಮೌಲ್ಯಮಾಪನವನ್ನು ಕೈಗೊಳ್ಳುವ ನಿರೀಕ್ಷೆಯಿದೆ. ಅಂತಹ ಮೌಲ್ಯಮಾಪನವು ಎರಡು ಉದ್ದೇಶಗಳನ್ನು ಹೊಂದಿದೆ:

i. ಜೀವ ವಿಮಾಗಾರರ ಆರ್ಥಿಕ ಸ್ಥಿತಿಯನ್ನು ನಿರ್ಣಯಿಸಲು ಮತ್ತು ಅದು ಆರ್ಥಿಕವಾಗಿ ಸದೃಢವಾಗಿದೆಯೇ ಅಥವಾ ದಿವಾಳಿಯಾಗಿದೆಯೇ ಎಂಬುದನ್ನು ನಿರ್ಧರಿಸಲು

ii. ಪಾಲಿಸಿದಾರರು/ ಷೇರುದಾರರ ನಡುವೆ ವಿತರಣೆಗೆ ಲಭ್ಯವಿರುವ ಹೆಚ್ಚುವರಿಯನ್ನು ನಿರ್ಧರಿಸಲು

**ವ್ಯಾಖ್ಯಾನ**

ಹೊಣೆಗಾರಿಕೆಗಳ ಮೌಲ್ಯಕ್ಕಿಂತ ಆಸ್ತಿಗಳ ಮೌಲ್ಯ ಹೆಚ್ಚಾಗಿರುವುದನ್ನು ಹೆಚ್ಚುವರಿ ಎನ್ನುತ್ತಾರೆ. ಅದು ನಕಾರಾತ್ಮಕವಾಗಿದ್ದರೆ, ಅದನ್ನು ಒತ್ತಡ(ಸ್ಟ್ರೇನ್)ವೆಂದು ಕರೆಯಲಾಗುತ್ತದೆ.

ಜೀವ ವಿಮೆಯಲ್ಲಿಯ ಹೆಚ್ಚುವರಿ ಪರಿಕಲ್ಪನೆಯು ಸಂಸ್ಥೆಯ ಲಾಭಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಈಗ ನೋಡೋಣ.

ಸಾಮಾನ್ಯವಾಗಿ ಸಂಸ್ಥೆಗಳು ಲಾಭವನ್ನು ಎರಡು ರೀತಿಯಲ್ಲಿ ನೋಡುತ್ತವೆ. ಮೊದಲನೆಯದಾಗಿ, ಲಾಭವು ನಿರ್ದಿಷ್ಟ ಲೆಕ್ಕಪತ್ರದ ಅವಧಿಯಲ್ಲಿಯ ಲಾಭ ಮತ್ತು ನಷ್ಟದ ಖಾತೆಯಲ್ಲಿ ಕಂಡುಬರುವ **ವೆಚ್ಚಗಳ ಮೇಲಿನ ಆದಾಯದ ಹೆಚ್ಚಳ**ವಾಗಿದೆ. ಲಾಭವು ಸಂಸ್ಥೆಯ ಆಯವ್ಯಯ ಪಟ್ಟಿ(ಬ್ಯಾಲೆನ್ಸ್ ಶೀಟ್)ಯ ಭಾಗವಾಗಿದೆ - ಅದನ್ನು **ಹೊಣೆಗಾರಿಕೆಗಳ ಮೇಲೆ ಆಸ್ತಿಗಳ ಹೆಚ್ಚುವರಿ**ಯೆಂದು ವ್ಯಾಖ್ಯಾನಿಸಬಹುದು. ಎರಡೂ ಸಂದರ್ಭಗಳಲ್ಲಿ, ಲಾಭವನ್ನು ಲೆಕ್ಕಪತ್ರದ ಅವಧಿಯ ಕೊನೆಯಲ್ಲಿ ನಿರ್ಧರಿಸಲಾಗುತ್ತದೆ.

**ಹೆಚ್ಚುವರಿ = ಸ್ವತ್ತುಗಳು - ಹೊಣೆಗಾರಿಕೆಗಳು**

ಜೀವ ವಿಮೆಯಲ್ಲಿ ಹೊಣೆಗಾರಿಕೆಗಳ ಅರ್ಥವೇನು ಎಂಬುದನ್ನು ನಾವು ಅರ್ಥಮಾಡಿಕೊಳ್ಳೋಣ. ಜೀವ ವಿಮಾ ಪಾಲಿಸಿಗಳ ನಿರ್ದಿಷ್ಟ ಅಡಚಣೆಗಾಗಿ, ಭವಿಷ್ಯದ ಕ್ಲೇಮ್ ಗಳು, ವೆಚ್ಚಗಳು ಮತ್ತು ಉದ್ಭವಿಸಬಹುದಾದ ಇತರ ನಿರೀಕ್ಷಿತ ಪಾವತಿಗಳನ್ನು ಪೂರೈಸಲು ಜೀವ ವಿಮಾದಾರರು ಪೂರ್ವಸಿದ್ಧತೆಗಳನ್ನು ಮಾಡಬೇಕು. ಈ ಪಾಲಿಸಿಗಳಿಗಾಗಿ ವಿಮಾಗಾರರು ಭವಿಷ್ಯದಲ್ಲಿ ಸಹ ಕಂತುಗಳನ್ನು ಸ್ವೀಕರಿಸಲು ನಿರೀಕ್ಷಿಸುತ್ತಾರೆ.

ಹೊಣೆಗಾರಿಕೆಗಳು ಎಲ್ಲ ಪಾವತಿಗಳ ಪ್ರಸ್ತುತ ಮೌಲ್ಯವಾಗಿದ್ದು, ಈ ಪಾಲಿಸಿಗಳಲ್ಲಿ ಸ್ವೀಕರಿಸಲು ನಿರೀಕ್ಷಿಸಲಾದ ಕಂತುಗಳ ಪ್ರಸ್ತುತ ಮೌಲ್ಯಕ್ಕಿಂತ ಕಡಿಮೆ ಮಾಡಬೇಕಾಗಿದೆ. ಸೂಕ್ತವಾದ ರಿಯಾಯಿತಿ[ಬಡ್ಡಿ ದರ] ದರವನ್ನು ಅನ್ವಯಿಸುವ ಮೂಲಕ ಪ್ರಸ್ತುತ ಮೌಲ್ಯವನ್ನು ತಲುಪಲಾಗುತ್ತದೆ

ಜೀವ ವಿಮಾಗಾರರ ವಾಸ್ತವಿಕ ಅನುಭವವು ಊಹಿಸಿದ್ದಕ್ಕಿಂತ ಉತ್ತಮವಾಗಿರುವುದರ ಪರಿಣಾಮವಾಗಿ ಹೆಚ್ಚುವರಿಯು ಉಂಟಾಗುತ್ತದೆ. ಜೀವ ವಿಮಾಗಾರರು ತಮ್ಮ ಲಾಭದ ಪಾಲಿಸಿಗಳನ್ನು ಹೊಂದಿರುವವರೊಂದಿಗೆ ಅದರ ಪರಿಣಾಮವಾಗಿ ಉಂಟಾಗುವ ಪ್ರಯೋಜನಗಳನ್ನು ಹಂಚಿಕೊಳ್ಳಲು ಬಂಧನಕಾರಕವಾಗಿರುತ್ತದೆ.

**ಉದಾಹರಣೆ**

31ನೇ ಮಾರ್ಚ್ 2013 ರಂದು **XYZ** ಸಂಸ್ಥೆಯ ಲಾಭವನ್ನು ಅದರ ವೆಚ್ಚಗಳನ್ನು ಹೊರತುಪಡಿಸಿದ ಆದಾಯ ಅಥವಾ ಆ ದಿನಾಂಕದಂದು ಅದರ ಹೊಣೆಗಾರಿಕೆಗಳನ್ನು ಹೊರತುಪಡಿಸಿದ ಆಸ್ತಿಗಳು ಎಂದು ನೀಡಲಾಗುತ್ತದೆ.

ಎರಡೂ ನಿದರ್ಶನಗಳಲ್ಲಿ, ಲಾಭವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿದೆ ಮತ್ತು ತಿಳಿದಿದೆ.

## 2. ಬೋನಸ್

ವಿಮಾಗಾರರು ತಮ್ಮ ಹಂಚಿಕೊಳ್ಳಬಹುದಾದ ಹೆಚ್ಚುವರಿಯನ್ನು ಕಂಪನಿಯ ಪಾಲಿಸಿದಾರರು ಮತ್ತು ಷೇರುದಾರ(ಯಾರಾದರೂ ಇದ್ದರೆ)ರ ನಡುವೆ ಬೋನಸ್ ರೂಪದಲ್ಲಿ ಘೋಷಿಸಬೇಕು ಮತ್ತು ವಿತರಿಸಬೇಕು. ಭಾರತ, ಯುನೈಟೆಡ್ ಕಿಂಗ್‌ಡಮ್ ಮತ್ತು ಇತರ ಹಲವು ದೇಶಗಳಲ್ಲಿ, ಹೆಚ್ಚುವರಿ ವಿತರಣೆಯು ಜನಪ್ರಿಯವಾಗಿದೆ.

ಒಪ್ಪಂದದಡಿಯಲ್ಲಿ ಪಾವತಿಸಬೇಕಾದ ಮೂಲ ಪ್ರಯೋಜನಕ್ಕೆ ಹೆಚ್ಚುವರಿಯಾಗಿ ಬೋನಸ್ ಅನ್ನು ಪಾವತಿಸಲಾಗುತ್ತದೆ. ವಿಶಿಷ್ಟವಾಗಿ ಇದು ಮೂಲ ವಿಮಾ ಮೊತ್ತ ಅಥವಾ ಮೂಲ ವಾರ್ಷಿಕ ಪಿಂಚಣಿಗೆ ಹೆಚ್ಚುವರಿಯಾಗಿ ಗೋಚರಿಸಬಹುದು. ಉದಾಹರಣೆಗೆ ಇದನ್ನು ಪ್ರತಿ ಒಂದು ಸಾವಿರ ವಿಮಾ ಮೊತ್ತಕ್ಕೆ ರೂ. **60** ಎಂದು ವ್ಯಕ್ತಪಡಿಸಲಾಗಿದೆ

**ಹಿಂತಿರುಗಿಸುವ (ರಿವರ್ಷನರಿ) ಬೋನಸ್** ಇದು ಬೋನಸ್ ನ ಸಾಮಾನ್ಯ ರೂಪವಾಗಿದೆ. ಪ್ರತಿ ವರ್ಷ ಮಾಡಲಾಗುವ ಈ ಬೋನಸ್ ಸೇರ್ಪಡೆಗಳನ್ನು ಘೋಷಿಸಿದ ಮೇಲೆ ಪಾಲಿಸಿಗೆ ಸೇರ್ಪಡೆ ಮಾಡಲಾಗುತ್ತದೆ ಮತ್ತು ಅದನ್ನು ಕಸಿದುಕೊಳ್ಳಲಾಗುವುದಿಲ್ಲ. ಮರಣ ಅಥವಾ ಅವಧಿ ಮುಕ್ತಾಯದ ಕ್ಲೇಮ್ ಸಮಯದಲ್ಲಿ ಮಾತ್ರ ಸ್ವೀಕರಿಸಲಾಗುತ್ತದಾದ್ದರಿಂದ ಅವುಗಳನ್ನು **' ಹಿಂತಿರುಗಿಸುವ (ರಿವರ್ಷನರಿ)'** ಬೋನಸ್‌ಗಳು ಎಂದು ಕರೆಯಲಾಗುತ್ತದೆ. ಒಪ್ಪಂದವು ಕನಿಷ್ಟ ಅವಧಿಯವರೆಗೆ ಚಾಲ್ತಿಯಲ್ಲಿರುವ ಮೂಲಕ [5 ವರ್ಷಗಳು] ಅರ್ಹವಾಗಿದ್ದರೆ ಶರಣಾಗತಿಯ ವೇಳೆ ಸಹ ಬೋನಸ್‌ಗಳನ್ನು ಪಾವತಿಸಬಹುದು

**ಹಿಂತಿರುಗಿಸುವ (ರಿವರ್ಷನರಿ) ಬೋನಸ್ ಗಳ ವಿಧಗಳು**

ಚಿತ್ರ **3: ಹಿಂತಿರುಗಿಸುವ (ರಿವರ್ಷನರಿ) ಬೋನಸ್ ಗಳ ವಿಧಗಳು**




**i. ಸರಳ ಹಿಂತಿರುಗಿಸುವ (ರಿವರ್ಷನರಿ) ಬೋನಸ್**

ಇದು ಒಪ್ಪಂದದಡಿಯಲ್ಲಿ ಮೂಲ ನಗದು ಲಾಭದ ಶೇಕಡಾವಾರು ಪ್ರಮಾಣದಲ್ಲಿ ವ್ಯಕ್ತಪಡಿಸಲಾದ ಬೋನಸ್ ಆಗಿದೆ. ಉದಾಹರಣೆಗೆ ಭಾರತದಲ್ಲಿ, ಇದನ್ನು ಪ್ರತಿ ಸಾವಿರ ವಿಮಾ ಮೊತ್ತಕ್ಕೆ ಇಂತಿಷ್ಟು ಎಂದು ಘೋಷಿಸಲಾಗುತ್ತದೆ.

ii. **ಕಂಪೌಂಡ್ ಬೋನಸ್**

ಇಲ್ಲಿ ಕಂಪನಿಯು ಮೂಲ ಲಾಭದ ಶೇಕಡಾವಾರು ರೂಪದಲ್ಲಿ ಮತ್ತು ಈಗಾಗಲೇ ಸೇರಿಸಲಾದ ಬೋನಸ್ ಗಳ ಮೇಲೆ ಬೋನಸ್ ಅನ್ನು ವ್ಯಕ್ತಪಡಿಸುತ್ತದೆ. ಹೀಗೆ ಇದು ಬೋನಸ್ ಮೇಲೆ ಬೋನಸ್ ಆಗಿದೆ. ಅದನ್ನು @ 8% ಮೂಲ ವಿಮಾ ಮೊತ್ತ ಮತ್ತು ಲಗತ್ತಿಸಲಾದ ಬೋನಸ್ ಎಂದು ವ್ಯಕ್ತಪಡಿಸಬಹುದು.

**iii. ಅಂತಿಮ(ಟರ್ಮಿನಲ್) ಬೋನಸ್**

ಹೆಸರೇ ಸೂಚಿಸುವಂತೆ, ಈ ಬೋನಸ್ ಒಪ್ಪಂದಕ್ಕೆ ಅದರ ಮುಕ್ತಾಯದ [ಸಾವು ಅಥವಾ ಅವಧಿ ಮುಕ್ತಾಯದ ಮೂಲಕ] ಸಮಯದಲ್ಲಿ ಮಾತ್ರ ಸೇರಿಸಲಾಗುತ್ತದೆ. ಇದು ಮುಂದಿನ ವರ್ಷದಲ್ಲಿ ಉದ್ಭವಿಸುವ ಕ್ಲೇಮ್ ಗಳಿಗೆ ಮಾತ್ರ ಅನ್ವಯಿಸುತ್ತದೆ. ಹೀಗೆ 2013 ರಲ್ಲಿ ಘೋಷಿಸಲಾದ ಅಂತಿಮ(ಟರ್ಮಿನಲ್) ಬೋನಸ್ 2013-14 ರ ಅವಧಿಯಲ್ಲಿ ಉದ್ಭವಿಸಿದ ಕ್ಲೇಮ್ ಗಳಿಗೆ ಮಾತ್ರ ಅನ್ವಯಿಸುತ್ತದೆ ಮತ್ತು ನಂತರದ ವರ್ಷಗಳಲ್ಲಿ ಉದ್ಭವಿಸುವ ಕ್ಲೇಮ್ ಗಳಿಗಲ್ಲ. ಅಂತಿಮ(ಟರ್ಮಿನಲ್) ಬೋನಸ್ ಗಳು ಒಪ್ಪಂದದ ಸಮಯದ ಅವಧಿಯನ್ನು ಅವಲಂಬಿಸಿರುತ್ತದೆ ಮತ್ತು ಅದರೊಂದಿಗೆ ಹೆಚ್ಚಾಗುತ್ತದೆ. 25 ವರ್ಷಗಳ ಕಾಲ ಜಾರಿಯಲ್ಲಿರುವ ಒಪ್ಪಂದವು 15 ವರ್ಷಗಳ ಕಾಲ ಜಾರಿಯಲ್ಲಿರುವ ಒಪ್ಪಂದಕ್ಕಿಂತ ಹೆಚ್ಚಿನ ಅಂತಿಮ(ಟರ್ಮಿನಲ್) ಬೋನಸ್ ಅನ್ನು ಹೊಂದಿರುತ್ತದೆ.

### 3. ಕೊಡುಗೆಯ ವಿಧಾನ

ಉತ್ತರ ಅಮೆರಿಕಾದಲ್ಲಿ ಅಳವಡಿಸಿಕೊಂಡ ಹೆಚ್ಚುವರಿ ವಿತರಣೆಯ ಇನ್ನೊಂದು ವಿಧಾನವೆಂದರೆ "ಕೊಡುಗೆ"ಯ ವಿಧಾನ. ಇದರಲ್ಲಿ, ಹೆಚ್ಚುವರಿ ಅಂದರೆ ಮರಣಸಾಧ್ಯತೆ, ಬಡ್ಡಿ ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ವರ್ಷದಲ್ಲಿ ಏನಾಗಬಹುದೆಂದು ನಿರೀಕ್ಷಿಸಲಾಗಿತ್ತು ಮತ್ತು ನಿಜವಾಗಿ ಏನು ನಡೆಯಿತು ಎಂಬುದರ ನಡುವಿನ ವ್ಯತ್ಯಾಸವನ್ನು ಘೋಷಿಸಲಾಗುತ್ತದೆ ಮತ್ತು ಡಿವಿಡೆಂಡ್ ರೂಪದಲ್ಲಿ ವಿತರಿಸಲಾಗುತ್ತದೆ.

ಲಾಭಾಂಶಗಳನ್ನು ನಗದು, ಭವಿಷ್ಯದ ಕಂತುಗಳಲ್ಲಿನ ಹೊಂದಾಣಿಕೆಗಳು/ಕಡಿತಗಳ, ಪಾಲಿಸಿಗೆ ಮುಟ್ಟುಗೋಲು ಹಾಕಿಲ್ಲದ ಪಾವತಿಸಿ ಸೇರ್ಪಡೆಗಳನ್ನು ಖರೀದಿಸಲು ಅನುಮತಿಸುವ ಮೂಲಕ ಅಥವಾ ಪಾಲಿಸಿಯ ಕ್ರೆಡಿಟ್ ಗೆ ಸಂಚಯನಗಳ ರೂಪದಲ್ಲಿ ಪಾವತಿಸಬಹುದು.

### 4. ಯುನಿಟ್ ಲಿಂಕ್ಡ್ ಪಾಲಿಸಿಗಳು

ಯುಲಿಪ್ ಪಾಲಿಸಿಗಳ ಬೆಲೆ ನಿರ್ಧಾರ ಮತ್ತು ಇತರ ವೈಶಿಷ್ಟ್ಯಗಳ ತತ್ವಗಳನ್ನು ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ.

**ಸಾರಾಂಶ**

- ಕಂತು ಎಂಬ ಪದವು ಸಾಮಾನ್ಯ ಭಾಷೆಯಲ್ಲಿ, ವಿಮಾ ಪಾಲಿಸಿಯನ್ನು ಖರೀದಿಸಲು ವಿಮಾದಾರರಿಂದ ಪಾವತಿಸಲಾಗುವ ಬೆಲೆಯನ್ನು ಸೂಚಿಸುತ್ತದೆ.
- ಜೀವ ವಿಮಾ ಪಾಲಿಸಿಗಳಿಗೆ ಕಂತನ್ನು ಹೊಂದಿಸುವ ಪ್ರಕ್ರಿಯೆಯು ಮರಣಸಾಧ್ಯತೆ, ಬಡ್ಡಿ/ಆಸಕ್ತಿಗಳು, ನಿರ್ವಹಣಾ ವೆಚ್ಚ ಮತ್ತು ಮೀಸಲುಗಳ ಪರಿಗಣನೆಯನ್ನು ಒಳಗೊಂಡಿರುತ್ತದೆ.
- ಒಟ್ಟು ಕಂತು ಎಂದರೆ ನಿವ್ವಳ ಕಂತು ಮತ್ತು ಲೋಡಿಂಗ್ ಎಂದು ಕರೆಯಲ್ಪಡುವ ಮೊತ್ತದ ಒಟ್ಟು ಮೊತ್ತವಾಗಿದೆ.
- ವಿಳಂಬವೆಂದರೆ ಪಾಲಿಸಿದಾರರು ಕಂತುಗಳ ಪಾವತಿಯನ್ನು ನಿಲ್ಲಿಸುತ್ತಾರೆ. ಹಿಂಪಡೆಯುವಿಕೆಗಳ ಸಂದರ್ಭದಲ್ಲಿ, ಪಾಲಿಸಿದಾರರು ಪಾಲಿಸಿಯನ್ನು ಮರಳಿ ಒಪ್ಪಿಸುತ್ತಾರೆ ಮತ್ತು ಪಾಲಿಸಿಯ ಸ್ವಾಧೀನಪಡಿಸಿಕೊಂಡ ನಗದು ಮೌಲ್ಯದಿಂದ ಮೊತ್ತವನ್ನು ಪಡೆಯುತ್ತಾರೆ
- ಜೀವ ವಿಮಾಗಾರರ ವಾಸ್ತವಿಕ ಅನುಭವವು ಊಹಿಸಿದ್ದಕ್ಕಿಂತ ಉತ್ತಮವಾಗಿರುವುದರ ಪರಿಣಾಮವಾಗಿ ಹೆಚ್ಚುವರಿಯು ಉಂಟಾಗುತ್ತದೆ.
- ಹೆಚ್ಚುವರಿಯ ಹಂಚಿಕೆಯು ಆರ್ಥಿಕ ಸದೃಢತೆಯ ಅವಶ್ಯಕತೆಗಳನ್ನು ನಿರ್ವಹಿಸುವುದು, ಉಚಿತ ಸ್ವತ್ತುಗಳನ್ನು ಹೆಚ್ಚಿಸುವುದು ಇತ್ಯಾದಿಗಳ ಕಡೆಗೆ ಇರಬಹುದು.
- ಬೋನಸ್ ನ ಸಾಮಾನ್ಯ ರೂಪವೆಂದರೆ ಹಿಂತಿರುಗಿಸುವ (ರಿವರ್ಷನರಿ) ಬೋನಸ್.

## ಪ್ರಮುಖ ಪದಗಳು

1. ಕಂತು
2. ರಿಯಾಯಿತಿ
3. ಬೋನಸ್
4. ಹೆಚ್ಚುವರಿ
5. ಮೀಸಲು
6. ಹೇರಿಕೆ
7. ಹಿಂತಿರುಗಿಸುವ (ರಿವರ್ಷನರಿ)  ಬೋನಸ್

## ನಿಮ್ಮನ್ನು ಪರೀಕ್ಷಿಸಿಯ ಉತ್ತರಗಳು

**ಉತ್ತರ 1** – ಸರಿಯಾದ ಉತ್ತರ **II** ಆಗಿದೆ.

---

# ಅಧ್ಯಾಯ L-07

# ಜೀವವಿಮಾ ದಾಖಲೆಗಳು

| ಅಧ್ಯಾಯ ಪರಿಚಯ |
|---|

ವಿಮಾ ಉದ್ಯಮವು ಹೆಚ್ಚು ಸಂಖ್ಯೆಯ ನಮೂನೆಗಳು ಮತ್ತು ದಾಖಲೆಗಳೊಂದಿಗೆ ವ್ಯವಹಾರ ನಡೆಸುತ್ತದೆಯೆಂದು 7 ನೇ ಅಧ್ಯಾಯದಲ್ಲಿ ನಾವು ನೋಡಿದ್ದೇವೆ. ಜೀವವಿಮೆಗೆ ಸಂಬಂಧಿಸಿದ ವಿಶಿಷ್ಟ ದಾಖಲೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇಲ್ಲಿ ನಾವು ಪಾಲಿಸಿ ದಾಖಲೆಯಲ್ಲಿ ದಾಖಲಿಸಲಾದ ಮಹತ್ವದ ನಿಬಂಧನೆಗಳನ್ನು ಸಹ ಚರ್ಚಿಸುತ್ತೇವೆ. ಗ್ರೇಸ್ ಅವಧಿಗೆ, ಪಾಲಿಸಿ ವಿಳಂಬ/ರದ್ದತಿ, ಮುಟ್ಟುಗೋಲು ಹಾಕದಿರುವುದು ಮತ್ತು ಇತರ ಕೆಲವು ಸವಲತ್ತುಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ಸಹ ಚರ್ಚಿಸಲಾಗಿದೆ.

| ಕಲಿಕೆಯ ಫಲಿತಾಂಶಗಳು |
|---|

**A.** **ಪ್ರಸ್ತಾವನೆಯ ಹಂತದ ದಾಖಲೆಗಳು**

**B.** **ಪಾಲಿಸಿ ಹಂತದ ದಾಖಲೆಗಳು**

C. **ಪಾಲಿಸಿ ಷರತ್ತುಗಳು ಮತ್ತು ಸವಲತ್ತುಗಳು**

## A. ಪ್ರಸ್ತಾವನೆಯ ಹಂತದ ದಾಖಲೆಗಳು

ಅಧ್ಯಾಯ 7 ರಲ್ಲಿ ವಿವರಣ ಪತ್ರ(ಪ್ರಾಸ್ಪೆಕ್ಟಸ್) ಮತ್ತು ಪ್ರಸ್ತಾವನೆಯ ನಮೂನೆಯನ್ನು ಕುರಿತು ಚರ್ಚಿಸಲಾದ ಸಾಮಾನ್ಯ ಅಂಶಗಳ ಜೊತೆಗೆ, ಜೀವ ವಿಮಾಗಾರರು ಅರ್ಥಮಾಡಿಕೊಳ್ಳಬೇಕಾದ ಕೆಲವು ಹೆಚ್ಚುವರಿ ಅಂಶಗಳಿವೆ.

**ವಿವರಣ ಪತ್ರ(ಪ್ರಾಸ್ಪೆಕ್ಟಸ್):** ವಿಮೆಯಲ್ಲಿ, ' ವಿವರಣ ಪತ್ರ(ಪ್ರಾಸ್ಪೆಕ್ಟಸ್)'ವೆಂದರೆ ವಿಮಾ ಉತ್ಪನ್ನವನ್ನು ಮಾರಾಟ ಮಾಡಲು ಅಥವಾ ಪ್ರಚಾರ ಮಾಡಲು ವಿಮಾಗಾರರು ನೀಡಿದ ಭೌತಿಕ, ಎಲೆಕ್ಟ್ರಾನಿಕ್ ಅಥವಾ ಯಾವುದೇ ಇತರ ಸ್ವರೂಪದ ದಾಖಲೆ. ವಿಮಾ ಉತ್ಪನ್ನದ ಪ್ರಾಸ್ಪೆಕ್ಟಸ್ ಈ ಕೆಳಗಿನ ವಿಷಯಗಳನ್ನು ಸ್ಪಷ್ಟವಾಗಿ ಹೇಳಬೇಕು

- **(a)** ಸಂಬಂಧಪಟ್ಟ ವಿಮಾ ಉತ್ಪನ್ನಕ್ಕಾಗಿ ಪ್ರಾಧಿಕಾರವು ನಿಗದಿಪಡಿಸಿದ ವಿಶಿಷ್ಟ ಗುರುತಿನ ಸಂಖ್ಯೆ (ಯುಐಎನ್**):**
- **(b)** ಪ್ರಯೋಜನಗಳ ವ್ಯಾಪ್ತಿ;
- **(c)** ವಿಮಾ ಕವರ್ ನ ಪ್ರಮಾಣ;
- **(d)** ವಿವರಣೆಗಳೊಂದಿಗೆ ವಿಮಾ ಕವರ್ ನ ಖಾತರಿಗಳು, ಹೊರತುಗಳು/ವಿನಾಯತಿಗಳು ಮತ್ತು ಷರತ್ತುಗಳು.

ವಿವರಣ ಪತ್ರ(ಪ್ರಾಸ್ಪೆಕ್ಟಸ್)ವು ಈ ಕೆಳಗಿನ ವಿಷಯಗಳನ್ನು ಸಹ ಒದಗಿಸಬೇಕು:

- **(a)** ವಿಮೆಯಿಂದ ಕವರ್ ಮಾಡಲ್ಪಡಬೇಕಾದ ಆಕಸ್ಮಿಕ ಅಥವಾ ಆಕಸ್ಮಿಕಗಳ ವಿವರಣೆ;
- **(b)** ವಿವರಣ ಪತ್ರ(ಪ್ರಾಸ್ಪೆಕ್ಟಸ್)ದ ನಿಯಮಗಳಡಿಯಲ್ಲಿ ವಿಮೆಗೆ ಅರ್ಹವಾದ ಜೀವ ಅಥವಾ ಆಸ್ತಿಯ ವರ್ಗ ಅಥವಾ ವರ್ಗಗಳು.

ಜೀವ ವಿಮೆಯಲ್ಲಿ, ವಿವರಣ ಪತ್ರ(ಪ್ರಾಸ್ಪೆಕ್ಟಸ್)ವು ಉತ್ಪನ್ನ ಮತ್ತು ಅವರ ಪ್ರಯೋಜನಗಳ ಮೇಲೆ ಅನುಮತಿಸಲಾಗುವ ರೈಡರ್ಸ್ (ಆರೋಗ್ಯ ಮತ್ತು ಸಾಮಾನ್ಯ ವಿಮೆಯಲ್ಲಿ ಆಡ್-ಆನ್ ಕವರ್ ಗಳೆಂದೂ ಕರೆಯುತ್ತಾರೆ)ಗಳ ಬಗ್ಗೆ ಸಹ ಉಲ್ಲೇಖಿಸಬೇಕು.

**ಪ್ರಸ್ತಾವನೆಯ ನಮೂನೆ:** ಜೀವ ವಿಮೆಗೆ ಸಂಬಂಧಿಸಿದಂತೆ ಪ್ರಸ್ತಾವನೆದಾರರ ಕುಟುಂಬದ ಸದಸ್ಯ(ಪೋಷಕರನ್ನು ಒಳಗೊಂಡಂತೆ)ರ ದೀರ್ಘಾಯುಷ್ಯ, ಆರೋಗ್ಯದ ಸ್ಥಿತಿ ಮತ್ತು ಅವರಲ್ಲಿ ಯಾರಾದರೂ ಅನುಭವಿಸಿದ ಕಾಯಿಲೆಗಳನ್ನು ಸೂಚಿಸುವ ವಿವರಗಳನ್ನು ಪ್ರಸ್ತಾವನೆಯ ನಮೂನೆಯ ಮೂಲಕ ಸಂಗ್ರಹಿಸಲಾಗುತ್ತದೆ. ಉತ್ಪನ್ನವನ್ನವಲಂಬಿಸಿ, ವಿಮೆಗಾಗಿ ಪ್ರಸ್ತಾಪಿಸಲಾದ ಜೀವ/ವ್ಯಕ್ತಿಯ ವೈದ್ಯಕೀಯ ವಿವರಗಳು, ಅವನ/ಅವಳ ವೈಯಕ್ತಿಕ ರೋಗದ ಇತಿಹಾಸ ಮತ್ತು ವೈಯಕ್ತಿಕ ವಿಶೇಷ ಗುಣಲಕ್ಷಣಗಳನ್ನು ಸಹ

ಕೇಳಬಹುದು. ಪ್ರಸ್ತಾವನೆ ನಮೂನೆಯು ವಿಮಾಗಾರರು ತಮಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ನಿರೀಕ್ಷಿತ ಗ್ರಾಹಕರಿಂದ ಪಡೆಯುವ ದಾಖಲೆಯಾಗಿರುತ್ತದೆ.

ಮೂರು ವರ್ಷಗಳ ನಂತರ ತಪ್ಪು ಹೇಳಿಕೆಯ ಆಧಾರದ ಮೇಲೆ ಪಾಲಿಸಿಯನ್ನು ಪ್ರಶ್ನಿಸಲಾಗುವುದಿಲ್ಲ ಎಂದು ವಿಮಾ ಕಾಯಿದೆಯ ಸೆಕ್ಷನ್ 45 ಒದಗಿಸುತ್ತದೆ. ಪ್ರಸ್ತಾವನೆಯ ನಮೂನೆ/ವೈದ್ಯಕೀಯ ನಮೂನೆಗಳು ಇತ್ಯಾದಿಗಳಲ್ಲಿನ ಎಲ್ಲ ಪ್ರಶ್ನೆಗಳಿಗೆ ಸತ್ಯವಾಗಿ ಉತ್ತರಗಳನ್ನು ನೀಡಲು ಮತ್ತು ಸೆಕ್ಷನ್ 45 ರ ಪ್ರಕಾರ ಹಾಗೆ ಮಾಡದಿದ್ದಲ್ಲಿ ಆಗುವ ಪರಿಣಾಮಗಳ ಬಗ್ಗೆ ಅವರಿಗೆ ಸಲಹೆ ನೀಡುವಲ್ಲಿ ಏಜೆಂಟರು ಪ್ರಮುಖ ಪಾತ್ರವನ್ನು ಹೊಂದಿದ್ದಾರೆ.

ಜೀವ ವಿಮೆಯ ಪ್ರಸ್ತಾವನೆಯ ನಮೂನೆಗಳು ಕಾಯಿದೆಯ ಸೆಕ್ಷನ್ 45 ರ ಅವಶ್ಯಕತೆಗಳನ್ನು ಹೇಳಬೇಕು. ಜೀವ ವಿಮಾ ಕವರ್ ಅನ್ನು ಪಡೆಯಲು ಪ್ರಸ್ತಾವನೆಯ ನಮೂನೆಯಲ್ಲಿಯ ಪ್ರಶ್ನೆಗಳಿಗೆ ಉತ್ತರಿಸುವಾಗ, ಕಾಯಿದೆಯ ಸೆಕ್ಷನ್ 45 ರ ನಿಬಂಧನೆಗಳ ಬಗ್ಗೆ ಭಾವೀ ಗ್ರಾಹಕರಿಗೆ ಮಾರ್ಗದರ್ಶನ ನೀಡಬೇಕು.

ಅದೇ ರೀತಿಯಾಗಿ, ಕಾಯಿದೆಯ ಸೆಕ್ಷನ್ 39 ನಾಮನಿರ್ದೇಶನದ ನಿಬಂಧನೆಗೆ ಸಂಬಂಧಿಸಿದೆ. ನಾಮನಿರ್ದೇಶನದ ಸೌಲಭ್ಯವು ಲಭ್ಯವಿದ್ದ ಎಲ್ಲ ವಿಭಾಗದಲ್ಲಿ, ಏಜೆಂಟರು ಅವನಿಗೆ/ಆಕೆಗೆ ಕಾಯಿದೆಯ ಸೆಕ್ಷನ್ 39 ರ ನಿಬಂಧನೆಗಳ ಬಗ್ಗೆ ತಿಳಿಸಬೇಕು ಮತ್ತು ನಾಮನಿರ್ದೇಶನದ ಸೌಲಭ್ಯವನ್ನು ಪಡೆಯಲು ಪ್ರಸ್ತಾಪಕರನ್ನು ಪ್ರೋತ್ಸಾಹಿಸಬೇಕು.

ಕೆಲಸದ ಅವಧಿಯನ್ನೊಳಗೊಂಡಂತೆ ಅವನ/ಅವಳ ಯೋಜಿಸಲಾದ ಆದಾಯ ಮತ್ತು ವೆಚ್ಚಗಳು, ಹಾಗೆಯೇ ಉಳಿತಾಯ ಮತ್ತು ಹೂಡಿಕೆ, ಆರೋಗ್ಯ, ನಿವೃತ್ತಿ ಮತ್ತು ವಿಮೆಯ ಬಗ್ಗೆಸಹ ಪ್ರಸ್ತಾಪಿಸಲಾದ ಜೀವ/ವ್ಯಕ್ತಿಯ ವೈಯಕ್ತಿಕ ಹಣಕಾಸು ಯೋಜನೆಗೆ ಸಂಬಂಧಿಸಿದ ಅಂಶಗಳನ್ನು ಜೀವ ವಿಮಾ ಪ್ರಸ್ತಾವನೆಯ ನಮೂನೆಯಲ್ಲಿ ಕೇಳಬಹುದು.

**ವಯಸ್ಸಿನ ಪುರಾವೆ:** ವಿಮೆ ಮಾಡಬೇಕಾದ ಜೀವ/ವ್ಯಕ್ತಿಯ ಅಪಾಯದ ವ್ಯಕ್ತಿಚಿತ್ರಣ(ಪ್ರೊಫೈಲ್)ವನ್ನು ನಿರ್ಣಯಿಸಲು ವಯಸ್ಸು ಒಂದು ಪ್ರಮುಖವಾದ ಅಂಶವಾಗಿದ್ದು, ಜೀವ ವಿಮಾಗಾರರು ಸರಿಯಾದ ವಯಸ್ಸನ್ನು ಪರಿಶೀಲಿಸಲು ದಾಖಲೆಗಳ ಪುರಾವೆಗಳನ್ನು ಸಂಗ್ರಹಿಸುತ್ತಾರೆ. ಅಧ್ಯಾಯ 7 ರಲ್ಲಿ ಚರ್ಚಿಸಿದಂತೆ ಮಾನ್ಯ ವಯಸ್ಸಿನ ಪುರಾವೆಗಳು ಪ್ರಮಾಣಿತ ಅಥವಾ ಅಪ್ರಮಾಣಿತಗಳಾಗಿರಬಹುದು.

ಜೀವ ವಿಮಾಗಾರರು ಈ ಕೆಳಗೆ ನೀಡಲಾದ ದಾಖಲೆಗಳನ್ನು ಸಹ ಪರಿಶೀಲಿಸುತ್ತಾರೆ.

**a) ಏಜೆಂಟರ ಗೌಪ್ಯ ವರದಿ**

ಏಜೆಂಟರು ಪ್ರಾಥಮಿಕ ಅಂಡರ್ ರೈಟರ್ ರಾಗಿರುತ್ತಾರೆ. ಅಪಾಯದ ಮೌಲ್ಯಮಾಪನಕ್ಕೆ ಸಂಬಂಧಿಸಿದ ಪಾಲಿಸಿದಾರರ ಕುರಿತ ಎಲ್ಲ ವಸ್ತು ಸಂಗತಿಗಳು ಮತ್ತು ವಿವರಗಳನ್ನು ಏಜೆಂಟರು ಅವನ/ಅವಳ ವರದಿಯಲ್ಲಿ ಬಹಿರಂಗಪಡಿಸಬೇಕು. ಅಂದರೆ ಆರೋಗ್ಯ, ಅಭ್ಯಾಸ/ಚಟ, ಉದ್ಯೋಗ, ಆದಾಯ ಮತ್ತು ಕುಟುಂಬದ ವಿವರಗಳನ್ನು ವರದಿಯಲ್ಲಿ ನಮೂದಿಸಬೇಕಾಗುತ್ತದೆ.

**b) ವೈದ್ಯಕೀಯ ಪರೀಕ್ಷಕರ ವರದಿ**

ಅನೇಕ ಸಂದರ್ಭಗಳಲ್ಲಿ, ವಿಮಾ ಕಂಪನಿಯ ಪಟ್ಟಿಗೆ ಸೇರಿದ( ಎಂಪ್ಯಾನೆಲ್ಡ್) ವೈದ್ಯರಿಂದ ವಿಮೆ ಮಾಡಬೇಕಾದ ಜೀವ/ವ್ಯಕ್ತಿಯನ್ನು ವೈದ್ಯಕೀಯವಾಗಿ ಪರೀಕ್ಷಿಸಬೇಕಾಗುತ್ತದೆ. ಎತ್ತರ, ತೂಕ, ರಕ್ತದೊತ್ತಡ, ಹೃದಯದ ಸ್ಥಿತಿ ಮುಂತಾದ ದೈಹಿಕ ಲಕ್ಷಣಗಳ ವಿವರಗಳನ್ನು ವೈದ್ಯರು ದಾಖಲಿಸುತ್ತಾರೆ ಮತ್ತು ಅದನ್ನು ವೈದ್ಯಕೀಯ ಪರೀಕ್ಷಕರ ವರದಿಯೆಂದು ಕರೆಯುತ್ತಾರೆ. ಆ ಮೂಲಕ ವಿಮಾ ಕಂಪನಿಯ ಅಂಡರ್ ರೈಟರ್ ರು ವಿಮೆ ಮಾಡಬೇಕಾದ ಜೀವ/ವ್ಯಕ್ತಿಯ ಪ್ರಸ್ತುತ ಆರೋಗ್ಯದ ಸ್ಥಿತಿಯ ವಿವರವನ್ನು ಪಡೆಯುತ್ತಾರೆ.

ವೈದ್ಯಕೀಯ ಪರೀಕ್ಷೆಯನ್ನು ಮಾಡದೆಯೇ ಅನೇಕ ಪ್ರಸ್ತಾಪಗಳನ್ನು ಅಂಡರ್ ರೈಟ್ ಮಾಡಲಾಗುತ್ತದೆ ಮತ್ತು ಸ್ವೀಕರಿಸಲಾಗುತ್ತದೆ. ಅವುಗಳನ್ನು ವೈದ್ಯಕೀಯೇತರ ಪ್ರಕರಣಗಳೆಂದು ಗುರುತಿಸಲಾಗುತ್ತದೆ. ಪ್ರಸ್ತಾವಿತ ಮೊತ್ತ ಅಥವಾ ಪ್ರಸ್ತಾವಿತ ಜೀವ/ವ್ಯಕ್ತಿಯ ವಯಸ್ಸು ಹೆಚ್ಚಾಗಿರುವ ಕಾರಣ ಅಥವಾ ಪ್ರಸ್ತಾವನೆಯಲ್ಲಿ ಬಹಿರಂಗಪಡಿಸಿದ ಕೆಲವು ಲಕ್ಷಣಗಳಿಂದ ವೈದ್ಯಕೀಯೇತರ ವಿಮೆಯಡಿಯಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಲು ಶಕ್ಯವಿಲ್ಲದಿದ್ದಾಗ ವೈದ್ಯಕೀಯ ಪರೀಕ್ಷಕರಿಂದ ವೈದ್ಯಕೀಯ ಪರೀಕ್ಷಕರ ವರದಿಯು ಸಾಮಾನ್ಯವಾಗಿ ಅಗತ್ಯವಾಗಿರುತ್ತದೆ.

**c) ನೈತಿಕ ಅಪಾಯದ ವರದಿ**

ನೈತಿಕ ಅಪಾಯವೆಂದರೆ ಜೀವ ವಿಮಾ ಪಾಲಿಸಿಯನ್ನು ಖರೀದಿಸಿದ ಪರಿಣಾಮವಾಗಿ ಗ್ರಾಹಕರ ನಡವಳಿಕೆಯು ಬದಲಾಗಬಹುದು ಮತ್ತು ಅಂತಹ ಬದಲಾವಣೆಯು ನಷ್ಟದ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಇದು ಜೀವ ವಿಮಾ ವಿಮಾಗಾರರು ಅಪಾಯವನ್ನು ನಿರ್ಣಯಿಸುವಾಗ ಗಂಭೀರವಾಗಿ ಪರಿಗಣಿಸುವ ಒಂದು ಅಂಶವಾಗಿದೆ.

ವ್ಯಕ್ತಿಗಳು ಜೀವ ವಿಮೆಯ ಖರೀದಿಯಿಂದ ತಮ್ಮ ಸ್ವಂತ ಜೀವ ಅಥವಾ ಇನ್ನೊಬ್ಬರ ಜೀವವನ್ನು ಅಂತ್ಯಗೊಳಿಸುವಂತಹ ಕ್ರಿಯೆಗಳ ಮೂಲಕ ಲಾಭವನ್ನು ಗಳಿಸಲು ಬಯಸುವ ಸಾಧ್ಯತೆಯ ವಿರುದ್ಧ ತಮ್ಮನ್ನು ರಕ್ಷಿಸಲು ಜೀವ ವಿಮಾ ಕಂಪನಿಗಳು ಪ್ರಯತ್ನಿಸುತ್ತವೆ. ಅಂತಹ ಅಪಾಯವನ್ನು ಸೂಚಿಸುವ ಯಾವುದೇ ಅಂಶಗಳನ್ನು ಜೀವ ವಿಮಾ ಅಂಡರ್ ರೈಟರ್ ರು ಹುಡುಕುತ್ತಾರೆ. ಈ ಉದ್ದೇಶಕ್ಕಾಗಿ, ಕಂಪನಿಯು ವಿಮಾ ಕಂಪನಿಯ ಅಧಿಕಾರಿಯಿಂದ ನೈತಿಕ ಅಪಾಯದ ವರದಿಯನ್ನು ಸಲ್ಲಿಸಬೇಕಾಗುತ್ತದೆ.

| ಉದಾಹರಣೆ |
|---|

ವಿಕಾಸ್ ಇತ್ತೀಚೆಗೆ ಜೀವ ವಿಮಾ ಪಾಲಿಸಿಯನ್ನು ಖರೀದಿಸಿದ್ದಾರೆ. ನಂತರ ಅವರು ಭೂಮಿಯ ಮೇಲಿನ ಅತ್ಯಂತ ಅಪಾಯಕಾರಿ ಸ್ಕೀಯಿಂಗ್ ಸ್ಥಳಗಳಲ್ಲಿ ಒಂದೆಂದು ಹೇಳಲಾದ ಸ್ಥಳದಲ್ಲಿ ಸ್ಕೀಯಿಂಗ್ ಪ್ರವಾಸಕ್ಕೆ ಹೋಗಲು ನಿರ್ಧರಿಸಿದರು. ಇದಕ್ಕಿಂತ ಮುಂಚೆ ಅವರು ಇಂತಹ ಅಪಾಯಕಾರಿ ಪ್ರವಾಸಗಳನ್ನು ಕೈಗೊಳ್ಳಲು ನಿರಾಕರಿಸಿದ್ದರು.

## B. ಪಾಲಿಸಿ ಹಂತದ ದಾಖಲೆಗಳು

### 1. ಮೊದಲ ಕಂತು ರಸೀದಿ

ಜೀವ ವಿಮಾ ಕಂಪನಿಯು ಮೊದಲ ಕಂತು ರಸೀದಿ(ಎಫ್ ಪಿ ಆರ್)ಯನ್ನು ನೀಡಿದಾಗ ವಿಮಾ ಒಪ್ಪಂದವು ಪ್ರಾರಂಭವಾಗುತ್ತದೆ.

ಪಾಲಿಸಿ ಒಪ್ಪಂದವು ಪ್ರಾರಂಭವಾಗಿದೆ ಎಂಬುದಕ್ಕೆ ಎಫ್ ಪಿ ಆರ್ ಸಾಕ್ಷಿಯಾಗಿದೆ. ಮೊದಲ ಕಂತು ರಶೀದಿಯು ಈ ಕೆಳಗಿನ ಮಾಹಿತಿಯನ್ನು ಒಳಗೊಂಡಿರುತ್ತದೆ:

i. ಜೀವ ವಿಮಾದಾರರ ಹೆಸರು ಮತ್ತು ವಿಳಾಸ
ii. ಪಾಲಿಸಿ ಸಂಖ್ಯೆ
iii. ಪಾವತಿಸಿದ ಕಂತು ಮೊತ್ತ
iv. ಕಂತು ಪಾವತಿಯ ವಿಧಾನ ಮತ್ತು ಆವರ್ತನೆ
v. ಮುಂದಿನ ಕಂತು ಪಾವತಿಯ ದಿನಾಂಕ
vi. ಅಪಾಯ  ಪ್ರಾರಂಭವಾದ ದಿನಾಂಕ
vii. ಪಾಲಿಸಿಯ ಅಂತಿಮ ಅವಧಿ ಮುಕ್ತಾಯದ ದಿನಾಂಕ
viii. ಹಿಂದಿನ ಕಂತು ಪಾವತಿಯಾದ ದಿನಾಂಕ
ix. ವಿಮಾಮೊತ್ತ

ಎಫ್ ಪಿ ಆರ್ ನೀಡಿದ ನಂತರ, ವಿಮಾ ಕಂಪನಿಯು ಪ್ರಸ್ತಾಪಕರಿಂದ ಮುಂದಿನ ಕಂತುಗಳನ್ನು ಪಡೆದಾಗ ನಂತರದ ಕಂತು ರಸೀದಿಗಳನ್ನು ನೀಡುತ್ತದೆ. ಈ ರಶೀದಿಗಳನ್ನು ನವೀಕರಣ ಕಂತು ರಶೀದಿಗಳು (ಆರ್ ಪಿ ಆರ್) ಎಂದು ಕರೆಯಲಾಗುತ್ತದೆ. ಕಂತು ಪಾವತಿಗೆ ಸಂಬಂಧಿಸಿದ ಯಾವುದೇ ವಿವಾದಗಳ ಸಂದರ್ಭದಲ್ಲಿ ಆರ್ ಪಿ ಆರ್ ಗಳು ಪಾವತಿಯ ಪುರಾವೆಯಾಗಿ ಕಾರ್ಯನಿರ್ವಹಿಸುತ್ತವೆ.

### 2. ಪಾಲಿಸಿ ದಾಖಲೆ

ಪಾಲಿಸಿ ದಾಖಲೆಯು ವಿಮೆಗೆ ಸಂಬಂಧಿಸಿದ ಪ್ರಮುಖ ದಾಖಲೆಯಾಗಿದೆ. **ಇದು ವಿಮಾ ಕಂಪನಿ ಮತ್ತು ವಿಮಾದಾರರ ನಡುವಿನ ಒಪ್ಪಂದಕ್ಕೆ ಸಾಕ್ಷಿಯಾಗಿದೆ**. ಇದುವೇ ಒಪ್ಪಂದವಲ್ಲ. ಪಾಲಿಸಿದಾರರಿಂದ ಪಾಲಿಸಿ ದಾಖಲೆ ಕಳೆದು ಹೋದರೆ, ಅದು ವಿಮಾ ಒಪ್ಪಂದದ ಮೇಲೆ ಪರಿಣಾಮ ಬೀರುವುದಿಲ್ಲ. ವಿಮಾ ಕಂಪನಿಯು ಒಪ್ಪಂದದಲ್ಲಿ ಯಾವುದೇ ಬದಲಾವಣೆಗಳನ್ನು ಮಾಡದೆ ನಕಲಿ ಪಾಲಿಸಿಯನ್ನು ನೀಡುತ್ತದೆ. ಪಾಲಿಸಿ ದಾಖಲೆಯು ಸೂಕ್ತ ಪ್ರಾಧಿಕಾರದಿಂದ ಸಹಿ ಮಾಡಲ್ಪಟ್ಟಿರಬೇಕು ಮತ್ತು ಭಾರತೀಯ ಮುದ್ರಾಂಕ ಕಾಯಿದೆ(ಸ್ಟ್ಯಾಂಪ್ ಆಕ್ಟ್)ಯ ಪ್ರಕಾರ ಸ್ಟ್ಯಾಂಪ್ ಮಾಡಲ್ಪಟ್ಟಿರಬೇಕು. ಪಾಲಿಸಿ ದಾಖಲೆಯನ್ನು ವಿನ್ಯಾಸಗೊಳಿಸುವಾಗ ಅದರ ಪದಗಳ ವ್ಯಾಖ್ಯಾನದಲ್ಲಿ ಉದ್ಭವಿಸಬಹುದಾದ ಯಾವುದೇ ಅಸ್ಪಷ್ಟತೆ ಅಥವಾ ಗೊಂದಲಗಳಿಗೆ ಜೀವ ವಿಮಾಗಾರರು ಜವಾಬ್ದಾರರಾಗಿರುತ್ತಾರೆ ಆದ್ದರಿಂದ ಅವರು ಪಾಲಿಸಿ ದಾಖಲೆಯನ್ನು ವಿನ್ಯಾಸಗೊಳಿಸುವಾಗ ಬಹಳ ಎಚ್ಚರಿಕೆಯಿಂದ ಇರುತ್ತಾರೆ.

ಪ್ರಮಾಣಿತ ಪಾಲಿಸಿ ದಾಖಲೆಯು ಸಾಮಾನ್ಯವಾಗಿ ಮೂರು ಭಾಗಗಳನ್ನು ಹೊಂದಿರುತ್ತದೆ:

**a) ಪಾಲಿಸಿ ಅನುಬಂಧ**

ಪಾಲಿಸಿ ಅನುಬಂಧವು ಮೊದಲ ಭಾಗವನ್ನು ರೂಪಿಸುತ್ತದೆ. ಸಾಮಾನ್ಯವಾಗಿ ಇದು ಪಾಲಿಸಿಯ ಮುಖಪುಟದಲ್ಲಿ ಕಂಡುಬರುತ್ತದೆ. ಜೀವ ವಿಮಾ ಒಪ್ಪಂದಗಳ ಅನುಬಂಧಗಳು ಸಾಮಾನ್ಯವಾಗಿ ಒಂದೇ ಸಮನಾಗಿರುತ್ತವೆ. ಅವು ಸಾಮಾನ್ಯವಾಗಿ ಈ ಕೆಳಗಿನ ಮಾಹಿತಿಯನ್ನು ಒಳಗೊಂಡಿರುತ್ತವೆ:

**ಚಿತ್ರ 1: ಪಾಲಿಸಿ ದಾಖಲೆಯ ಘಟಕಗಳು**




i. ವಿಮಾ ಕಂಪನಿಯ ಹೆಸರು

ii. ಪಾಲಿಸಿಯ ಕೆಲವು ಸಾಮಾನ್ಯ ವಿವರಗಳು ಈ ಕೆಳಗಿನಂತಿವೆ:

- ✓ ಪಾಲಿಸಿದಾರರ ಹೆಸರು ಮತ್ತು ವಿಳಾಸ
- ✓ ಜನ್ಮದಿನಾಂಕ ಮತ್ತು ಕಳೆದ ಜನ್ಮದಿನದಂದಿನ ವಯಸ್ಸು
- ✓ ಪಾಲಿಸಿ ಒಪ್ಪಂದದ ಯೋಜನೆ ಮತ್ತು ಅವಧಿ
- ✓ ವಿಮಾ ಮೊತ್ತ
- ✓ ಕಂತು ಮೊತ್ತ
- ✓ ಕಂತು ಪಾವತಿಯ ಅವಧಿ
- ✓ ಪ್ರಾರಂಭದ, ಅವಧಿಮುಕ್ತಾಯದ ಮತ್ತು ಕೊನೆಯ ಕಂತಿನ ದಿನಾಂಕ
- ✓ ಪಾಲಿಸಿಯು ಲಾಭಸಹಿತವಾಗಿದೆಯೇ ಅಥವಾ ಲಾಭರಹಿತವಾಗಿದೆಯೇ
- ✓ ನಾಮನಿರ್ದೇಶಿತರ ಹೆಸರು
- ✓ ಕಂತು ಪಾವತಿಯ ವಿಧಾನ - ವಾರ್ಷಿಕ; ಅರ್ಧವಾರ್ಷಿಕ; ತ್ರೈಮಾಸಿಕ; ಮಾಸಿಕ; ಸಂಬಳದಿಂದ ನೇರ ಕಡಿತದೊಂದಿಗೆ

✓ ಪಾಲಿಸಿ ಸಂಖ್ಯೆ - ಪಾಲಿಸಿ ಒಪ್ಪಂದದ ಅನನ್ಯ ಗುರುತಿನ ಸಂಖ್ಯೆಯಾಗಿರುತ್ತದೆ

iii. ಒಪ್ಪಿದ ಘಟನೆಗಳು ಸಂಭವಿಸಿದ ನಂತರ ಮತ್ತು ಪಾವತಿಸುವ ಭರವಸೆ ನೀಡಿದ ಮೊತ್ತಗಳನ್ನು ವಿಮಾದಾರರು ಪಾವತಿಸುವ ಭರವಸೆಯನ್ನು ನೀಡುತ್ತಾರೆ. ಇದು ವಿಮಾ ಒಪ್ಪಂದದ ಕೇಂದ್ರವನ್ನು ರೂಪಿಸುತ್ತದೆ

iv. ಅಧಿಕೃತ ಸಹಿ ಮತ್ತು ಪಾಲಿಸಿ ಮುದ್ರೆ

v. ಸ್ಥಳೀಯ ವಿಮಾ ಓಂಬುಡ್ಸ್ ಮನ್ ರ ವಿಳಾಸ.

**b) ಪ್ರಮಾಣಿತ ನಿಬಂಧನೆಗಳು**

ಪಾಲಿಸಿ ದಾಖಲೆಯಲ್ಲಿಯ ಎರಡನೇ ಅಂಶವು ಎಲ್ಲ ಜೀವ ವಿಮಾ ಒಪ್ಪಂದಗಳಲ್ಲಿ ಸಾಮಾನ್ಯವಾಗಿರುವ ವಯಸ್ಸಿನ ಪುರಾವೆ, ಕಂತು ಪಾವತಿಯ ಗ್ರೇಸ್ ಅವಧಿ ಇತ್ಯಾದಿಗಳಿಗೆ ಸಂಬಂಧಿಸಿದ ಪ್ರಮಾಣಿತ ಪಾಲಿಸಿ ನಿಬಂಧನೆಗಳಿಂದ ಮಾಡಲ್ಪಟ್ಟಿದೆ. ಈ ಕೆಲವು ನಿಬಂಧನೆಗಳು ಅವಧಿ, ಏಕ ಕಂತೀಯ ಅಥವಾ ಭಾಗವಹಿಸದ (ಲಾಭದೊಂದಿಗೆ) ಪಾಲಿಸಿಗಳಂತಹ ಕೆಲವು ರೀತಿಯ ಒಪ್ಪಂದಗಳ ಸಂದರ್ಭದಲ್ಲಿ ಅನ್ವಯಿಸುವುದಿಲ್ಲ. ಈ ಪ್ರಮಾಣಿತ ನಿಬಂಧನೆಗಳು ಒಪ್ಪಂದದ ಅಡಿಯಲ್ಲಿ ಅನ್ವಯವಾಗುವ ಹಕ್ಕುಗಳು ಮತ್ತು ಸವಲತ್ತುಗಳು ಮತ್ತು ಇತರ ಷರತ್ತುಗಳನ್ನು ವ್ಯಾಖ್ಯಾನಿಸುತ್ತವೆ.

**c) ವಿಶಿಷ್ಟ ಪಾಲಿಸಿ ನಿಬಂಧನೆಗಳು**

ಪಾಲಿಸಿ ದಾಖಲೆಯ ಮೂರನೇ ಅಂಶವು ವೈಯಕ್ತಿಕ ಪಾಲಿಸಿ ಒಪ್ಪಂದಕ್ಕೆ ನಿರ್ದಿಷ್ಟವಾದ ವಿಶಿಷ್ಟ ಪಾಲಿಸಿ ನಿಬಂಧನೆಗಳನ್ನು ಒಳಗೊಂಡಿರುತ್ತದೆ. ಇವುಗಳನ್ನು ದಾಖಲೆಯ ಮುಖಪುಟದ ಮೇಲೆ ಮುದ್ರಿಸಬಹುದು ಅಥವಾ ಲಗತ್ತಿನ ರೂಪದಲ್ಲಿ ಪ್ರತ್ಯೇಕವಾಗಿ ಸೇರಿಸಬಹುದು.

ಗ್ರೇಸ್ ದಿನಗಳು ಅಥವಾ ತಪ್ಪಿಹೋದ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಳ್ಳದಿರುವಂತಹ ಪ್ರಮಾಣಿತ ಪಾಲಿಸಿ ನಿಬಂಧನೆಗಳು ಒಪ್ಪಂದದಡಿಯಲ್ಲಿ ಸಾಮಾನ್ಯವಾಗಿ ಶಾಸನಬದ್ಧವಾಗಿ ಒದಗಿಸಲಾಗುತ್ತವೆ, ವಿಶಿಷ್ಟ ನಿಬಂಧನೆಗಳು ಸಾಮಾನ್ಯವಾಗಿ ವಿಮಾಗಾರ ಮತ್ತು ವಿಮೆದಾರರ ನಡುವಿನ ನಿರ್ದಿಷ್ಟ ಒಪ್ಪಂದಕ್ಕೆ ಜೋಡಿಸಲ್ಪಟ್ಟಿರುತ್ತವೆ.

| ಉದಾಹರಣೆ |
|---|

ಒಪ್ಪಂದವನ್ನು ಬರೆಯುವ ಸಮಯದಲ್ಲಿ ಗರ್ಭಿಣಿಯಾಗಿರುವ ಮಹಿಳೆಯ ಗರ್ಭಾವಸ್ಥೆಯ ಕಾರಣದಿಂದಾಗಿ ಉಂಟಾಗಬಹುದಾದ ಮರಣವನ್ನು ಹೊರತುಪಡಿಸುವ ಷರತ್ತು.

| **ನಿಮ್ಮನ್ನು ಪರೀಕ್ಷಿಸಿ** |
|---|

ಮೊದಲ ಕಂತು ರಶೀದಿ (ಎಫ್ ಪಿ ಆರ್) ಏನನ್ನು ಸೂಚಿಸುತ್ತದೆ? ಹೆಚ್ಚು ಸೂಕ್ತವಾದ ಆಯ್ಕೆಯನ್ನು ಆರಿಸಿ.

I. ಫ್ರೀ ಲುಕ್ ಅವಧಿ ಮುಕ್ತಾಯವಾಗಿದೆ

II. ಅದು ಪಾಲಿಸಿ ಒಪ್ಪಂದ ಆರಂಭವಾಗಿರುವ ಪುರಾವೆಯಾಗಿದೆ

III. ಈಗ ಪಾಲಿಸಿಯನ್ನು ರದ್ದುಗೊಳಿಸಲು ಸಾಧ್ಯವಿಲ್ಲ

IV. ಪಾಲಿಸಿ ನಗದು ಮೌಲ್ಯವನ್ನು ಪಡೆದಿದೆ

## C. ಪಾಲಿಸಿ ಷರತ್ತುಗಳು ಮತ್ತು ಸವಲತ್ತುಗಳು

### ಗ್ರೇಸ್ ಅವಧಿ

ಅಧ್ಯಾಯ 4 ರಲ್ಲಿ ಉಲ್ಲೇಖಿಸಿದಂತೆ, ಗ್ರೇಸ್ ಅವಧಿಯ ನಿಬಂಧನೆಯು ಕಂತನ್ನು ಪಾವತಿಸದಿದ್ದಕ್ಕಾಗಿ ರದ್ದಾಗುವ ಪಾಲಿಸಿಯನ್ನು ಗ್ರೇಸ್ ಅವಧಿಯಲ್ಲಿ ಪಾವತಿಮಾಡಿ ಮುಂದುವರಿಸಲು ಅನುವು ಮಾಡಿಕೊಡುತ್ತದೆ. ಪ್ರತಿಯೊಂದು ಜೀವ ವಿಮಾ ಒಪ್ಪಂದವು ಕಂತುಗಳನ್ನು ಕಾಲಕಾಲಕ್ಕೆ ಸರಿಯಾಗಿ ಪಾವತಿಸಲಾಗಿದೆ ಮತ್ತು ಪಾಲಿಸಿಯು ಜಾರಿಯಲ್ಲಿರುವ ಷರತ್ತಿನ ಮೇಲೆ ಮರಣ ಪ್ರಯೋಜನವನ್ನು ಪಾವತಿಸಲು ಒಪ್ಪಿಕೊಳ್ಳುತ್ತದೆ. "ಗ್ರೇಸ್ ಅವಧಿ"ಯ ಷರತ್ತು ಪಾಲಿಸಿದಾರರಿಗೆ ಕಂತು ಪಾವತಿಸಲು ಹೆಚ್ಚುವರಿ ಅವಧಿಯನ್ನು ನೀಡುತ್ತದೆ.

ಆದಾಗ್ಯೂ ಕಂತು ಬಾಕಿ ಉಳಿದಿದ್ದರೆ ಮತ್ತು ಈ ಅವಧಿಯಲ್ಲಿ ಪಾಲಿಸಿದಾರರು ಮರಣಹೊಂದಿದರೆ, ವಿಮಾಗಾರರು ಮರಣದ ಪ್ರಯೋಜನದಿಂದ ಕಂತನ್ನು ಕಡಿತಗೊಳಿಸುತ್ತಾರೆ. ಗ್ರೇಸ್ ಅವಧಿ ಮುಗಿದ ನಂತರವೂ ಕಂತುಗಳನ್ನು ಪಾವತಿಸದೇ ಇದ್ದರೆ, ಪಾಲಿಸಿಯನ್ನು ರದ್ದಾಗಿದೆ(ಲ್ಯಾಪ್ಸ್)ಯೆಂದು ಪರಿಗಣಿಸಲಾಗುತ್ತದೆ ಮತ್ತು ಕಂಪನಿಯು ಮರಣದ ಪ್ರಯೋಜನವನ್ನು ಪಾವತಿಸಲು ಬಾಧ್ಯತೆಯನ್ನು ಹೊಂದಿರುವುದಿಲ್ಲ. ಈ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಳ್ಳದ ನಿಬಂಧನೆಗಳಡಿಯಲ್ಲಿ ಅನ್ವಯಿಸುವ ಮೊತ್ತವು ಮಾತ್ರ ಪಾವತಿಸಬೇಕಾದ ಮೊತ್ತವಾಗಿದೆ.

## ಪ್ರಮುಖ

### ರದ್ದತಿ ಮತ್ತು ಮರುಸ್ಥಾಪನೆ/ ಪುನರುಜ್ಜೀವನ

ಗ್ರೇಸ್ ದಿನಗಳಲ್ಲಿಯೂ ಸಹ ಕಂತನ್ನು ಪಾವತಿಸದಿದ್ದರೆ ಪಾಲಿಸಿಯು ರದ್ದಾದ(ಲ್ಯಾಪ್ಸ್) ಸ್ಥಿತಿಯಲ್ಲಿದೆಯೆಂದು ನಾವು ಈಗಾಗಲೇ ನೋಡಿದ್ದೇವೆ. ಒಳ್ಳೆಯ ಸುದ್ದಿಯೇನೆಂದರೆ, ರದ್ದಾದ ಹೆಚ್ಚಿನ ಜೀವ ವಿಮಾ ಪಾಲಿಸಿಗಳನ್ನು ಮರುಸ್ಥಾಪಿಸಬಹುದು [ಪುನರುಜ್ಜೀವನಗೊಳಿಸಬಹುದು]. ಐಆರ್ ಡಿಎಐ ಉತ್ಪನ್ನ ನಿಯಮಗಳ ಪ್ರಕಾರ, ಕಂತು ಪಾವತಿಸದ ದಿನಾಂಕದಿಂದ 5 ವರ್ಷಗಳೊಳಗೆ ಲಿಂಕ್ ಮಾಡದ ಪಾಲಿಸಿಯನ್ನು ಪುನರುಜ್ಜೀವನಗೊಳಿಸಬಹುದು, ಆದರೆ ಲಿಂಕ್ಡ್ ಪಾಲಿಸಿಯನ್ನು 3 ವರ್ಷಗಳಲ್ಲಿ ಮಾತ್ರ ಪುನರುಜ್ಜೀವನಗೊಳಿಸಬಹುದು.

**ವ್ಯಾಖ್ಯಾನ**

ಮರುಸ್ಥಾಪನೆಯು ಜೀವ ವಿಮಾ ಕಂಪನಿಯು ಕಂತುಗಳನ್ನು ಪಾವತಿಸದ ಕಾರಣದಿಂದ ಕೊನೆಗೊಂಡ ಅಥವಾ ಮುಟ್ಟುಗೋಲು ಹಾಕಿಕೊಳ್ಳದ ನಿಬಂಧನೆಗಳಡಿಯಲ್ಲಿ ಮುಂದುವರಿಸಲಾದ ಪಾಲಿಸಿಯನ್ನು ಪುನಃ ಜಾರಿಗೆ ತರುವ ಪ್ರಕ್ರಿಯೆಯಾಗಿದೆ.

ಆದಾಗ್ಯೂ ಪಾಲಿಸಿಯ ಪುನರುಜ್ಜೀವನವು ವಿಮಾದಾರನ ಷರತ್ತುರಹಿತ ಹಕ್ಕಾಗಿರುವುದಿಲ್ಲ. ಕೆಲವು ಷರತ್ತುಗಳಡಿಯಲ್ಲಿ ಮಾತ್ರ ಇದನ್ನು ಸಾಧಿಸಬಹುದು:

i. **ನಿರ್ದಿಷ್ಟ ಅವಧಿಯೊಳಗೆ ಪುನರುಜ್ಜೀವನದ ಅರ್ಜಿ:** ಪಾಲಿಸಿಯ ಮಾಲೀಕರು ಮರುಸ್ಥಾಪನೆಗಾಗಿ ನಿಬಂಧನೆಯಲ್ಲಿ ತಿಳಿಸಲಾದ ಸಮಯದ ಚೌಕಟ್ಟಿನೊಳಗೆ ಅಂದರೆ ರದ್ದಾದ ದಿನಾಂಕದಿಂದ ಐದು ವರ್ಷಗಳೊಳಗೆ ಪುನರುಜ್ಜೀವನದ ಅರ್ಜಿಯನ್ನು ಪೂರ್ಣಗೊಳಿಸಬೇಕು.

ii. **ಮುಂದುವರಿದ ವಿಮೆಯ ತೃಪ್ತಿದಾಯಕ ಪುರಾವೆಗಳು:** ವಿಮಾದಾರರ ಮುಂದುವರಿದ ವಿಮೆಯ ಬಗ್ಗೆ ತೃಪ್ತಿಕರ ಪುರಾವೆಗಳನ್ನು ವಿಮಾದಾರರು ವಿಮಾ ಕಂಪನಿಗೆ ಪ್ರಸ್ತುತಪಡಿಸಬೇಕು. ಅವರ ಆರೋಗ್ಯವು ತೃಪ್ತಿಕರವಾಗಿರಬೇಕಷ್ಟೇ ಅಲ್ಲದೇ ಹಣಕಾಸಿನ ಆದಾಯ ಮತ್ತು ನೈತಿಕತೆಯಂತಹ ಇತರ ಅಂಶಗಳು ಗಣನೀಯವಾಗಿ ಕಡಿಮೆಯಾಗಿರಬಾರದು.

iii. **ಅವಧಿ ಮೀರಿ ಬಾಕಿ ಉಳಿದ ಕಂತುಗಳನ್ನು ಬಡ್ಡಿಯೊಂದಿಗೆ ಪಾವತಿ:** ಪಾಲಿಸಿ ಮಾಲೀಕರು ಪ್ರತಿ ಕಂತಿನ ನಿಗದಿತ ದಿನಾಂಕದಿಂದ ಬಡ್ಡಿಯೊಂದಿಗೆ ಎಲ್ಲ ಅವಧಿ ಮೀರಿದ ಕಂತುಗಳನ್ನು ಪಾವತಿಸಬೇಕಾಗುತ್ತದೆ.

iv. ಮುಂದುವರಿದ ವಿಮಾ ಸಾಧ್ಯತೆಯ ಪುರಾವೆಗಳನ್ನು ಮೌಲ್ಯಮಾಪನ ಮಾಡಿದ ನಂತರ ವಿಮಾಗಾರರು ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ಕಂತಿನ ಪ್ರಕಾರ ಪಾಲಿಸಿಯನ್ನು ಪುನರುಜ್ಜೀವನಗೊಳಿಸಲು ನಿರ್ಧರಿಸಬಹುದು ಅಥವಾ ಕಂತಿನ ಹೆಚ್ಚಳ ಅಥವಾ ಕಡಿಮೆ ಅಪಾಯದ ಕವರ್ ಅಥವಾ ಎರಡರೊಂದಿಗೆ ಪುನರುಜ್ಜೀವನವನ್ನು ನೀಡಬಹುದು.

**ಪುನರುಜ್ಜೀವನದ ಸಮಯದಲ್ಲಿ ವಿಮೆಯ ಪುರಾವೆಗಳ ಅಗತ್ಯವು ಮೇಲಿನ ಷರತ್ತುಗಳಲ್ಲಿ ಬಹುಶಃ ಅತ್ಯಂತ ಗಮನಾರ್ಹವಾದದ್ದಾಗಿದೆ**. ಪ್ರತಿಯೊಂದು ಪಾಲಿಸಿಯ ಸಂದರ್ಭಗಳನ್ನು ಅವಲಂಬಿಸಿ ಸಾಕ್ಷ್ಯದ ಪ್ರಕಾರವನ್ನು ಕೇಳಲಾಗುತ್ತದೆ. ಪಾಲಿಸಿಯು ಬಹಳ ಕಡಿಮೆ ಅವಧಿಯವರೆಗೆ ರದ್ದಾದ ಸ್ಥಿತಿಯಲ್ಲಿದ್ದರೆ, ವಿಮಾಗಾರರು ವಿಮೆಯ ಯಾವುದೇ ಪುರಾವೆಗಳಿಲ್ಲದೆ ಅಥವಾ ವಿಮಾದಾರರಿಂದ ಅವರು ಉತ್ತಮ ಆರೋಗ್ಯವನ್ನು ಹೊಂದಿದ್ದಾನೆ ಎಂದು ಪ್ರಮಾಣೀಕರಿಸುವ ಸರಳ ಹೇಳಿಕೆಯೊಂದಿಗೆ ಪಾಲಿಸಿಯನ್ನು ಮರುಸ್ಥಾಪಿಸಬಹುದು.

ಈ ಕೆಳಗೆ ನೀಡಿದ ಕೆಲವು ಸಂದರ್ಭಗಳಲ್ಲಿ ಕಂಪನಿಯು ವೈದ್ಯಕೀಯ ಪರೀಕ್ಷೆ ಅಥವಾ ವಿಮಾಸಾಧ್ಯತೆಯ ಇತರ ಪುರಾವೆಗಳನ್ನು ಕಡ್ಡಾಯ ಮಾಡಬಹುದು:

i. ಗ್ರೇಸ್ ಅವಧಿಯು ಬಹಳ ಸಮಯದಿಂದ ಅಂದರೆ ಸುಮಾರು ಒಂದು ವರ್ಷದಿಂದ ಮುಕ್ತಾಯಗೊಂಡಿದ್ದರೆ ಮತ್ತು ಪಾಲಿಸಿಯು ರದ್ದಾದ ಸ್ಥಿತಿಯಲ್ಲಿದ್ದರೆ.

ii. ಆರೋಗ್ಯ ಸಮಸ್ಯೆ ಅಥವಾ ಇತರ ಸಮಸ್ಯೆ ಇರಬಹುದೆಂದು ಅನುಮಾನಿಸಲು ಕಾರಣವನ್ನು ವಿಮಾಗಾರರು ಹೊಂದಿದ್ದರೆ. ಪಾಲಿಸಿಯ ವಿಮಾ ಮೊತ್ತ ಅಥವಾ ಮುಖ ಮೊತ್ತವು ದೊಡ್ಡದಾಗಿದ್ದರೆ ತಾಜಾ ವೈದ್ಯಕೀಯ ಪರೀಕ್ಷೆಯು ಕಡ್ಡಾಯವಾಗಬಹುದು.

**ಪ್ರಮುಖ**

ರದ್ದಾದ ಪಾಲಿಸಿಗಳ ಪುನರುಜ್ಜೀವನವು ಒಂದು ಪ್ರಮುಖ ಸೇವಾ ಕಾರ್ಯವಾಗಿದ್ದು, ರದ್ದಾದ ಸ್ಥಿತಿಯಲ್ಲಿರುವ ಪಾಲಿಸಿಗಳು ವಿಮಾಗಾರ ಅಥವಾ ಪಾಲಿಸಿದಾರರಿಗೆ ಇಬ್ಬರಿಗೂ ಹೆಚ್ಚೇನು ಒಳ್ಳೆಯದನ್ನು ಮಾಡುವುದಿಲ್ಲವಾದ್ದರಿಂದ ಜೀವ ವಿಮಾಗಾರರು ಅವುಗಳ ಪುನರುಜ್ಜೀವನ್ನು ಸಕ್ರಿಯವಾಗಿ ಪ್ರೋತ್ಸಾಹಿಸಬಯಸುತ್ತಾರೆ.

---

**ಮುಟ್ಟುಗೋಲು ಹಾಕದ ನಿಬಂಧನೆಗಳು**

ವಿಮಾ ಕಾಯಿದೆ, 1938 (ಸೆಕ್ಷನ್ 113) ಪಾಲಿಸಿ(ಶರಣಾಗತಿ ಮೌಲ್ಯವನ್ನು ಪಡೆದುಕೊಂಡಿರುವ)ಗಳನ್ನು ರದ್ದತಿಯಿಂದ ರಕ್ಷಿಸುತ್ತದೆ, ಮುಂದಿನ ಕಂತುಗಳನ್ನು ಪಾವತಿಸದೆಯೇ ಪಾವತಿಸಿದ ಮೊತ್ತದ ಮಟ್ಟಿಗೆ ಜಾರಿಯಲ್ಲಿರಿಸುತ್ತದೆ. ಏಕೆಂದರೆ ಪಾಲಿಸಿದಾರನು ಪಾಲಿಸಿಯಡಿಯಲ್ಲಿ ಸಂಗ್ರಹವಾದ ನಗದು ಮೌಲ್ಯಕ್ಕೆ ಕ್ಲೇಮ್ ಅನ್ನು ಹೊಂದಿರುತ್ತಾರೆ.

**a) ಶರಣಾಗತಿ ಮೌಲ್ಯಗಳು**

ಶರಣಾಗತಿ ಮೌಲ್ಯವು ನೀವು ಯೋಜನೆಯಿಂದ ಅಕಾಲಿಕ ನಿರ್ಗಮಿಸಲು ಅಂದರೆ ನೀವು ಪಾಲಿಸಿಯನ್ನು ಅದರ ಮುಕ್ತಾಯದ ಅವಧಿಯ ಮೊದಲು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲು ಅಥವಾ ಮುಕ್ತಾಯಗೊಳಿಸಲು ನಿರ್ಧರಿಸಿದಾಗ ನೀವು ಪಡೆಯುವ ಮೊತ್ತವಾಗಿದೆ.

ಸಾಮಾನ್ಯವಾಗಿ ಜೀವ ವಿಮಾಗಾರರು ವಿವಿಧ ಸಮಯಗಳಲ್ಲಿ ಶರಣಾಗತಿ ಮೌಲ್ಯಗಳನ್ನು ಪಟ್ಟಿ ಮಾಡುವ ಕೋಷ್ಟಕವನ್ನು ಮತ್ತು ಶರಣಾಗತಿ ಮೌಲ್ಯಗಳನ್ನು ಲೆಕ್ಕಾಚಾರ ಮಾಡಲು ಬಳಸುವ ವಿಧಾನವನ್ನು ಸಹ ಹೊಂದಿರುತ್ತಾರೆ. ಈ ಲೆಕ್ಕಾಚಾರದ ಸೂತ್ರವು ವಿಮೆಯ ಪ್ರಕಾರ ಮತ್ತು ಯೋಜನೆ, ಪಾಲಿಸಿಯ ವಯಸ್ಸು ಮತ್ತು ಪಾಲಿಸಿ ಕಂತು-ಪಾವತಿಯ ಅವಧಿಯ ಉದ್ದವನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ಶರಣಾಗತಿಯಲ್ಲಿ ಒಬ್ಬ ವ್ಯಕ್ತಿಯು ಪಡೆಯುವ ನಿಜವಾದ ನಗದು ಮೊತ್ತವು ಯಾವುದೇ ಸಂಚಿತ ಬೋನಸ್ ಗಳು, ವಸೂಲಾತಿಗಳು ಇತ್ಯಾದಿಗಳಿಂದಾಗಿ ಪಾಲಿಸಿಯಲ್ಲಿ ಸೂಚಿಸಲಾದ ಶರಣಾಗತಿ ಮೌಲ್ಯದ ಮೊತ್ತಕ್ಕಿಂತ ನಿಜವಾದ ಮೊತ್ತವು ಭಿನ್ನವಾಗಿರಬಹುದು.

**ಖಾತರಿಪಡಿಸಿದ ಶರಣಾಗತಿ ಮೌಲ್ಯ [ಜಿ ಎಸ್ ವಿ]:** ಐಆರ್ ಡಿಎಐ ಮಾರ್ಗಸೂಚಿಗಳ ಪ್ರಕಾರ (2019 ರಲ್ಲಿ ಪರಿಷ್ಕರಿಸಲಾದ) ಭಾರತದಲ್ಲಿನ ಕಾನೂನು ಕನಿಷ್ಠ ಎರಡು ವರ್ಷಗಳವರೆಗೆ ಎಲ್ಲ ಕಂತುಗಳನ್ನು ಪಾವತಿಸಿದ್ದರೆ

ಖಾತರಿಪಡಿಸಿದ ಶರಣಾಗತಿ ಮೌಲ್ಯ [ಜಿಎಸ್ ವಿ]ವನ್ನು ಪಾವತಿಸುವುದನ್ನು ಒದಗಿಸುತ್ತದೆ. ಪಾವತಿಸಿದ ಕಂತುಗಳ ಶೇಕಡಾವಾರು (30% ಎಂದು ಹೇಳಬಹುದು) ಎಂದು ಪಡೆಯಲಾದ ಈ ಮೌಲ್ಯವು ಖಾತರಿಪಡಿಸಿದ ಶರಣಾಗತಿ ಮೌಲ್ಯವೆಂದು ಕರೆಯಲ್ಪಡುತ್ತದೆ. ಮೌಲ್ಯವು ಕಂತು ಪಾವತಿಸಿದ ಅವಧಿಯನ್ನು ಅವಲಂಬಿಸಿರುತ್ತದೆ. ಪಾಲಿಸಿ ದಾಖಲೆಯಲ್ಲಿ ಜಿಎಸ್ ವಿಯನ್ನು ನಮೂದಿಸುವ ಅಗತ್ಯವಿದೆ.

**b) ಪಾಲಿಸಿ ಸಾಲಗಳು**

ನಗದು ಮೌಲ್ಯವನ್ನು ಸಂಗ್ರಹಿಸಿದ ಜೀವ ವಿಮಾ ಪಾಲಿಸಿಗಳು ಪಾಲಿಸಿಯ ನಗದು ಮೌಲ್ಯವನ್ನು ಸಾಲದ ಭದ್ರತೆಯಾಗಿ ಬಳಸಿಕೊಂಡು ವಿಮಾಗಾರರಿಂದ ಸಾಲವಾಗಿ ಹಣವನ್ನು ಪಡೆಯುವ ಹಕ್ಕನ್ನು ಸಹ ಪಾಲಿಸಿದಾರರಿಗೆ ನೀಡುವ ನಿಬಂಧನೆಯನ್ನು ಹೊಂದಿರುತ್ತವೆ. ಪಾಲಿಸಿ ಸಾಲವು ಸಾಮಾನ್ಯವಾಗಿ ಪಾಲಿಸಿಯ ಶರಣಾಗತಿ ಮೌಲ್ಯದ ಶೇಕಡಾವಾರು ಪ್ರಮಾಣಕ್ಕೆ ಸೀಮಿತವಾಗಿರುತ್ತದೆ (**90%** ಎಂದು ಹೇಳಬಹುದು). ಪಾಲಿಸಿದಾರನು ತನ್ನ ಸ್ವಂತ ಖಾತೆಯಿಂದ ಸಾಲವನ್ನು ಪಡೆಯುತ್ತಾನೆಂಬುದನ್ನು ಗಮನಿಸಬೇಕು. ಪಾಲಿಸಿಯನ್ನು ಶರಣಾಗತಿ ಮಾಡಿದ್ದರೆ ಅವನು ಅಥವಾ ಅವಳು ಮೊತ್ತವನ್ನು ಪಡೆಯಲು ಅರ್ಹರಾಗಿರುತ್ತಾರೆ. ಆ ಸಂದರ್ಭದಲ್ಲಿ ವಿಮೆಯನ್ನು ಕೊನೆಗೊಳಿಸಲಾಗುತ್ತದೆ.

ವಿಮಾಗಾರರು ಪಾಲಿಸಿ ಸಾಲಗಳ ಮೇಲೆ ಅರೆ-ವಾರ್ಷಿಕವಾಗಿ ಅಥವಾ ವಾರ್ಷಿಕವಾಗಿ ಪಾವತಿಸಲಾಗುವ ಬಡ್ಡಿಯನ್ನು ವಿಧಿಸುತ್ತಾರೆ. ಸಾಲ ಮತ್ತು ಬಡ್ಡಿಯನ್ನು ನಿಯತಕಾಲಿಕವಾಗಿ ಮರುಪಾವತಿಸಬೇಕಾಗಿದ್ದರೂ, ಸಾಲವನ್ನು ಮರುಪಾವತಿ ಮಾಡದಿದ್ದರೆ, ವಿಮಾಗಾರರು ಪಾವತಿಸಬೇಕಾದ ಪಾಲಿಸಿ ಪ್ರಯೋಜನದಿಂದ ಬಾಕಿ ಇರುವ (ಪಾವತಿಸದ) ಸಾಲ ಮತ್ತು ಬಡ್ಡಿಯ ಮೊತ್ತವನ್ನು ಕಡಿತಗೊಳಿಸುತ್ತಾರೆ. ಸಾಲವು ವಿಮೆಯನ್ನು ಜಾರಿಯಾಗಿಟ್ಟುಕೊಂಡು ಹಣಕಾಸಿನ ತುರ್ತು ಸಂದರ್ಭಗಳಲ್ಲಿ ಪಾಲಿಸಿದಾರರಿಗೆ ಪರಿಹಾರವನ್ನು ನೀಡುತ್ತದೆ.

ಭದ್ರತೆಯಾಗಿ ಇರಿಸಲಾಗಿರುವ ಪಾಲಿಸಿಯ ಮೇಲೆ ಸಾಲವನ್ನು ನೀಡಲಾಗಿರುವುದರಿಂದ, ವಿಮಾಗಾರರ ಪರವಾಗಿ ಪಾಲಿಸಿಯನ್ನು ನಿಯೋಜಿಸಬೇಕಾಗುತ್ತದೆ (ನಂತರದ ಪ್ಯಾರಾದಲ್ಲಿ ವಿವರಿಸಲಾಗಿದೆ). ವಿಮಾದಾರನ ಮರಣದ ಸಂದರ್ಭದಲ್ಲಿ ಹಣವನ್ನು ಸ್ವೀಕರಿಸಲು ಪಾಲಿಸಿದಾರರು ಯಾರನ್ನಾದರೂ ನಾಮನಿರ್ದೇಶನ ಮಾಡಿದರೆ (ನಂತರದ ಪ್ಯಾರಾದಲ್ಲಿ ವಿವರಿಸಲಾಗಿದೆ), ಈ ನಾಮನಿರ್ದೇಶನವನ್ನು ರದ್ದುಗೊಳಿಸಲಾಗುವುದಿಲ್ಲ ಆದರೆ ಪಾಲಿಸಿಯಲ್ಲಿ ವಿಮಾಗಾರರ ಆಸಕ್ತಿಯ ಮಟ್ಟಿಗೆ ನಾಮಿನಿಯ ಹಕ್ಕಿನ ಮೇಲೆ ಪರಿಣಾಮ ಬೀರುತ್ತದೆ.

| ಉದಾಹರಣೆ |
|---|

ಅರ್ಜುನ್ ಅವರು ಜೀವ ವಿಮಾ ಪಾಲಿಸಿಯನ್ನು ಖರೀದಿಸಿದರು, ಅದರಲ್ಲಿ ಪಾಲಿಸಿಯಡಿಯಲ್ಲಿ ಪಾವತಿಸಬೇಕಾದ ಒಟ್ಟು ಮರಣದ ಕ್ಲೇಮ್ ರೂ. **2.5** ಲಕ್ಷ. ಅರ್ಜುನ್ ಅವರ ಒಟ್ಟು ಬಾಕಿ ಸಾಲ ಮತ್ತು ಪಾಲಿಸಿಯಡಿಯಲ್ಲಿ ಬಡ್ಡಿಯ ಮೊತ್ತ ರೂ. **1.5** ಲಕ್ಷ. ಆದ್ದರಿಂದ ಅರ್ಜುನ್ ಅವರ ಸಾವಿನ ಸಂದರ್ಭದಲ್ಲಿ, ನಾಮಿನಿಯು ರೂ. **1** ಲಕ್ಷವನ್ನು ಪಡೆಯುತ್ತಾರೆ.

**ವಿಶೇಷ ಪಾಲಿಸಿ ನಿಬಂಧನೆಗಳು ಮತ್ತು ಅನುಮೋದನೆಗಳು**

a) **ನಾಮನಿರ್ದೇಶನ**

i. ವಿಮಾ ಕಾಯಿದೆ **1938** ರ ಸೆಕ್ಷನ್ **39** ರಡಿಯಲ್ಲಿ, ತಮ್ಮ ಸ್ವಂತ ಜೀವದ ಮೇಲೆ ಪಾಲಿಸಿ ಹೊಂದಿರುವವರು ತಮ್ಮ ಮರಣದ ಸಂದರ್ಭದಲ್ಲಿ ಪಾಲಿಸಿಯಿಂದ ಪಡೆಯಬಹುದಾದ ಹಣವನ್ನು ಪಾವತಿಸಬೇಕಾದ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಬಹುದು.

ii. ಜೀವ ವಿಮಾದಾರರು **ಒಬ್ಬರು ಅಥವಾ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳನ್ನು** ನಾಮನಿರ್ದೇಶಿತರೆಂದು ನಾಮನಿರ್ದೇಶನ ಮಾಡಬಹುದು.

iii. ನಾಮನಿರ್ದೇಶಿತರು **ಮಾನ್ಯ ಪಾವತಿ ಬಿಡುಗಡೆಗೆ** ಮತ್ತು ಹಣವನ್ನು ಅರ್ಹರ **ಪರವಾಗಿ ಟ್ರಸ್ಟಿಯಾಗಿ ಹಿಡಿದಿಟ್ಟುಕೊಳ್ಳಲು** ಅರ್ಹರಾಗಿರುತ್ತಾರೆ.

iv. ನಾಮನಿರ್ದೇಶನವನ್ನು **ಪಾಲಿಸಿಯನ್ನು ಖರೀದಿಸುವ ಸಮಯದಲ್ಲಿ ಅಥವಾ ನಂತರ** ಪಾಲಿಸಿಯ ಮುಕ್ತಾಯದ ಮೊದಲು ಯಾವುದೇ ಸಮಯದಲ್ಲಿ ಮಾಡಬಹುದು.

v. ನಾಮನಿರ್ದೇಶನವನ್ನು ಪಾಲಿಸಿ ದಾಖಲೆಯಲ್ಲಿ ಅಥವಾ ಪಾಲಿಸಿಯ ಮೇಲಿನ ಅನುಬಂಧದ ಮೂಲಕ ಸಂಯೋಜಿಸಬಹುದು. ನಾಮನಿರ್ದೇಶನಗಳನ್ನು ವಿಮಾಗಾರರಿಗೆ ತಿಳಿಸಬೇಕು ಮತ್ತು ವಿಮಾಗಾರರು ಪಾಲಿಸಿಗೆ ಸಂಬಂಧಿಸಿದ ದಾಖಲೆಗಳಲ್ಲಿ ನೋಂದಾಯಿಸಿಕೊಳ್ಳಬೇಕು.

vi. ನಾಮನಿರ್ದೇಶನವನ್ನು ಪಾಲಿಸಿಯ ಅವಧಿ ಮುಕ್ತಾಯಕ್ಕೆ ಮೊದಲು ಯಾವುದೇ ಸಮಯದಲ್ಲಿ, ಅನುಬಂಧ ಅಥವಾ ಮುಂದಿನ ಅನುಮೋದನೆ ಅಥವಾ ಉಯಿಲಿನ ಮೂಲಕ ಸಂದರ್ಭಕ್ಕನುಸರಿಸಿ ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.

**ಪ್ರಮುಖ**

ನಾಮನಿರ್ದೇಶನವು ಜೀವ ವಿಮಾದಾರರ ಮರಣದ ಸಂದರ್ಭದಲ್ಲಿ ವಿಮಾಗಾರರಿಂದ ಪಾಲಿಸಿ ಹಣವನ್ನು ಪಡೆಯುವ ಹಕ್ಕನ್ನು ಮಾತ್ರ ನಾಮನಿರ್ದೇಶಿತರಿಗೆಗೆ ನೀಡುತ್ತದೆ. ಆದಾಗ್ಯೂ, ಹಣವು ಕಾನೂನುಬದ್ಧ ಉತ್ತರಾಧಿಕಾರಿಗೆ ಮಾತ್ರ ಸೇರಿರುತ್ತದೆ. **ನಾಮನಿರ್ದೇಶಿತರು ಕ್ಲೇಮ್ ನ ಸಂಪೂರ್ಣ ಅಥವಾ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ.** ಆದಾಗ್ಯೂ, ವಿಮಾ ಕಾಯಿದೆ, **1938** ರ ಸೆಕ್ಷನ್ **39(7)** ರ ಪ್ರಕಾರ, **26**ನೇ ಡಿಸೆಂಬರ್, **2014** ರ ನಂತರ ಪಾವತಿಗಾಗಿ ಅವಧಿ ಮುಕ್ತಾಯ(ಮೆಚ್ಯೂರ್)ವಾಗುವ ಎಲ್ಲ ಪಾಲಿಸಿಗಳಿಗೆ ಸಂಬಂಧಿಸಿದಂತೆ, ಪೋಷಕರು, ಸಂಗಾತಿ, ಮಕ್ಕಳು ಅಥವಾ ಸಂಗಾತಿಯ ಮತ್ತು ಮಕ್ಕಳ ಪರವಾಗಿ ಪಾಲಿಸಿದಾರರಿಂದ ಮಾಡಲಾದ ನಾಮನಿರ್ದೇಶನವು ನಾಮನರ್ದೇಶಿತರನ್ನು ವಿಮಾ ಕಂಪನಿಯಿಂದ ಪಾವತಿಸಬೇಕಾದ ಮೊತ್ತದ ಪ್ರಯೋಜನಕ್ಕೆ ಅರ್ಹತೆಯನ್ನು ನೀಡುತ್ತದೆ.

ನಾಮನಿರ್ದೇಶಿತರು ಅಪ್ರಾಪ್ತ ವಯಸ್ಕರಾಗಿದ್ದರೆ, ಪಾಲಿಸಿದಾರರು ನಿಯೋಜಿತರನ್ನು ನೇಮಿಸಬೇಕಾಗುತ್ತದೆ. ನಿಯೋಜಿತರು ನಿಯೋಜಕರಾಗಿ ಕಾರ್ಯನಿರ್ವಹಿಸಲು ತಮ್ಮ ಒಪ್ಪಿಗೆಯನ್ನು ತೋರಿಸಲು ಪಾಲಿಸಿ ದಾಖಲೆಗೆ ಸಹಿ ಮಾಡಬೇಕಾಗುತ್ತದೆ. ನಾಮನಿರ್ದೇಶಿತರು ಪ್ರಾಪ್ತ ವಯಸ್ಸನ್ನು ತಲುಪಿದಾಗ ನಿಯೋಜಿತರು ತಮ್ಮ ಹೊಣೆ/ಸ್ಥಾನವನ್ನು ಕಳೆದುಕೊಳ್ಳುತ್ತಾರೆ. ಪಾಲಿಸಿದಾರರು ಯಾವುದೇ ಸಮಯದಲ್ಲಿ ನೇಮಕಾತಿಯನ್ನು ಬದಲಾಯಿಸಬಹುದು. ಯಾವುದೇ ನೇಮಕಾತಿಯನ್ನು ನೀಡದಿದ್ದಲ್ಲಿ ಮತ್ತು ನಾಮನಿರ್ದೇಶಿತರು ಅಪ್ರಾಪ್ತ ವಯಸ್ಕರಾಗಿದ್ದರೆ, ಜೀವ ವಿಮಾದಾರರ ಮರಣದ ಸಭವಿಸಿದರೆ, ಮರಣದ ಕ್ಲೇಮ್ ಅನ್ನು ಪಾಲಿಸಿದಾರರ ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಪಾವತಿಸಲಾಗುತ್ತದೆ.

ಒಂದಕ್ಕಿಂತ ಹೆಚ್ಚು ನಾಮನಿರ್ದೇಶಿತರನ್ನು ನೇಮಿಸಿದ್ದರೆ, ಮರಣದ ಕ್ಲೇಮ್ ಅನ್ನು ಅವರಿಗೆ ಜಂಟಿಯಾಗಿ ಅಥವಾ ಬದುಕುಳಿದವನಿಗೆ ಅಥವಾ ಬದುಕುಳಿದವರಿಗೆ ಪಾವತಿಸಲಾಗುತ್ತದೆ. ಪಾಲಿಸಿಯ ಪ್ರಾರಂಭದ ನಂತರ ಮಾಡಲಾದ ನಾಮನಿರ್ದೇಶನಗಳು ಪರಿಣಾಮಕಾರಿಯಾಗಿರಲು ವಿಮಾಗಾರರಿಗೆ ತಿಳಿಸಬೇಕು.

ವಿಮಾ ಕಾಯಿದೆಯ ಸೆಕ್ಷನ್ 39(11) ಹೇಳುವಂತೆ ಪಾಲಿಸಿದಾರರು ಪಾಲಿಸಿಯ ಅವಧಿ ಮುಕ್ತಾಯದ ನಂತರ ಮತ್ತು ಅವರ ಮರಣದ ಕಾರಣದಿಂದಾಗಿ ಅವರಿಗೆ ಪಾಲಿಸಿಯ ಮೊತ್ತ ಮತ್ತು ಲಾಭವನ್ನು ಅವರಿಗೆ ಪಾವತಿ ಮಾಡುವ ಮೊದಲು ಮರಣಹೊಂದಿದರೆ, ನಾಮನಿರ್ದೇಶಿತರು ಪಾಲಿಸಿಮೊತ್ತ ಮತ್ತು ಪ್ರಯೋಜನಕ್ಕೆ ಅರ್ಹರಾಗಿರುತ್ತಾರೆ.

**ನಾಮನಿರ್ದೇಶನಕ್ಕೆ ಸಂಬಂಧಿಸಿದ ನಿಬಂಧನೆಗಳು**




## b) ನಿಯೋಜನೆ

ಜೀವ ವಿಮಾ ಪಾಲಿಸಿಯು ವಿಮಾ ಕಂಪನಿಯು ವಿಮಾದಾರನಿಗೆ ನೀಡಬೇಕಾದ ಭರವಸೆ ಅಥವಾ ಸಾಲವನ್ನು ಪ್ರತಿನಿಧಿಸುವುದರಿಂದ, ಅದನ್ನು ಹಣ ಅಥವಾ ಆಸ್ತಿಗೆ ಭದ್ರತೆಯೆಂದು ಪರಿಗಣಿಸಲಾಗುತ್ತದೆ. ಪಾಲಿಸಿಯ ಶರಣಾಗತಿ ಮೌಲ್ಯದ ವಿರುದ್ಧ ವಿಮಾಗಾರರಿಂದ ಮುಂಗಡ ಸಾಲವನ್ನು

ತೆಗೆದುಕೊಳ್ಳುವುದನ್ನು ನಾವು ನೋಡಿದ್ದೇವೆ. ಅದೇ ರೀತಿಯಾಗಿ, ಬ್ಯಾಂಕುಗಳು ಸೇರಿದಂತೆ ಹಲವು ಹಣಕಾಸು ಸಂಸ್ಥೆಗಳು ವಿಮಾ ಪಾಲಿಸಿಯ ಭದ್ರತೆಯ ವಿರುದ್ಧ ಸಾಲವನ್ನು ಮುಂಗಡವಾಗಿ ನೀಡುತ್ತವೆ.

ನಿಯೋಜನೆ ಎಂಬ ಪದವು ಸಾಮಾನ್ಯವಾಗಿ ಇನ್ನೊಬ್ಬ ವ್ಯಕ್ತಿಯ ಪರವಾಗಿ ಬರೆದುಕೊಡುವ ಮೂಲಕ ಆಸ್ತಿಯನ್ನು ವರ್ಗಾಯಿಸುವುದನ್ನು ಸೂಚಿಸುತ್ತದೆ.

ಜೀವ ವಿಮಾ ಪಾಲಿಸಿಯ ನಿಯೋಜನೆಯು ಹಕ್ಕುಗಳು, ಶೀರ್ಷಿಕೆ/ಹೆಸರು ಮತ್ತು ಪಾಲಿಸಿಯಲ್ಲಿಯ ಆಸಕ್ತಿಯನ್ನು (ಆಸ್ತಿಯಂತೆ) ಒಬ್ಬ ವ್ಯಕ್ತಿಯಿಂದ ಇನ್ನೊಬ್ಬರಿಗೆ ವರ್ಗಾಯಿಸುವ ಕ್ರಿಯೆಯನ್ನು ಸೂಚಿಸುತ್ತದೆ. ಹಕ್ಕುಗಳನ್ನು ವರ್ಗಾಯಿಸುವ ವ್ಯಕ್ತಿಯನ್ನು **ನಿಯೋಜಕ(ಅಸೈನರ್)** ಎಂದು ಕರೆಯಲಾಗುತ್ತದೆ ಮತ್ತು ಆಸ್ತಿಯನ್ನು ಯಾರಿಗೆ ವರ್ಗಾಯಿಸಲಾಗುತ್ತದೆಯೋ ಆ ವ್ಯಕ್ತಿಯನ್ನು **ನಿಯೋಜಿತ(ಅಸೈನೀ)** ಎಂದು ಕರೆಯಲಾಗುತ್ತದೆ. ನಿಯೋಜನೆಯಿಂದಾಗಿ ಪಾಲಿಸಿಯ ಮಾಲೀಕತ್ವವು ಬದಲಾಗುತ್ತದೆ ಮತ್ತು ಆದ್ದರಿಂದ ಪಾಲಿಸಿ ಸಾಲಕ್ಕಾಗಿ ವಿಮಾ ಕಂಪನಿಗೆ ನಿಯೋಜಿಸಿರುವುದನ್ನು ಹೊರತುಪಡಿಸಿ ನಾಮನಿರ್ದೇಶನವು ರದ್ದುಗೊಳಿಸಲ್ಪಡುತ್ತದೆ.

ನಿಯೋಜನೆಗಳು ಎರಡು ರೀತಿಯಲ್ಲಿರುತ್ತವೆ.

**ಚಿತ್ರ 2: ನಿಯೋಜನೆಯ ವಿಧಗಳು**




| ಷರತ್ತುಬದ್ಧ ನಿಯೋಜನೆ | ಸಂಪೂರ್ಣ ನಿಯೋಜನೆ |
|---|---|
| ಷರತ್ತುಬದ್ಧ ನಿಯೋಜನೆಯು ಪಾಲಿಸಿಯು ಪಾಲಿಸಿದಾರರು ಅವಧಿ ಮುಕ್ತಾಯದ ದಿನಾಂಕದಂದು ಜೀವಿತವಾಗಿದ್ದರೆ ಅಥವಾ ನಿಯೋಜಿತರ ಮರಣದ ನಂತರ ಹಿಂತಿರುಗಿಸಬೇಕೆಂಬುದನ್ನು ಒದಗಿಸುತ್ತದೆ. | • ನಿಯೋಜಕರು ಪಾಲಿಸಿಯಲ್ಲಿ ಹೊಂದಿರುವ ಎಲ್ಲ ಹಕ್ಕುಗಳು, ಶೀರ್ಷಿಕೆ/ಹೆಸರು ಮತ್ತು ಆಸಕ್ತಿಯನ್ನು ಯಾವುದೇ ಸಂದರ್ಭದಲ್ಲಿ ಅವರಿಗೆ ಅಥವಾ ಅವನ/ಅವಳ ಆಸ್ತಿಗೆ ಹಿಂತಿರುಗಿಸದಂತೆ ನಿಯೋಜಕರಿಗೆ ವರ್ಗಾಯಿಸಲಾಗುತ್ತದೆ ಎಂಬುದನ್ನು ಸಂಪೂರ್ಣ ನಿಯೋಜನೆಯು ಒದಗಿಸುತ್ತದೆ.<br>• ಈ ರೀತಿ ಪಾಲಿಸಿಯು ನಿಯೋಜಿತರಿಗೆ ಸಂಪೂರ್ಣವಾಗಿ ವರ್ಗಾಯಿಸಲಾಗುತ್ತದೆ. ನಿಯೋಜಕರ ಒಪ್ಪಿಗೆಯಿಲ್ಲದೆ ಅವನು ಅಥವಾ ಅವಳು ಇಷ್ಟಪಡುವ ಯಾವುದೇ ರೀತಿಯಲ್ಲಿ ಪಾಲಿಸಿಯನ್ನು ನಿಭಾಯಿಸಬಹುದು. |

ಸಂಪೂರ್ಣ ನಿಯೋಜನೆಯು ಸಾಮಾನ್ಯವಾಗಿ ಅನೇಕ ವಾಣಿಜ್ಯ ಸಂದರ್ಭಗಳಲ್ಲಿ ಕಂಡುಬರುತ್ತದೆ, ಅಲ್ಲಿ ಪಾಲಿಸಿಯು ಸಾಮಾನ್ಯವಾಗಿ ವಸತಿ ಸಾಲದಂತಹ ಪಾಲಿಸಿದಾರರಿಂದ ಊಹಿಸಲಾದ ಸಾಲದ ವಿರುದ್ಧ ಅಡಮಾನವಾಗಿರುತ್ತದೆ.

**ಮಾನ್ಯವಾದ ನಿಯೋಜನೆಗಾಗಿ ಷರತ್ತುಗಳು**

ಈಗ ಮಾನ್ಯವಾದ ನಿಯೋಜನೆಗೆ ಅಗತ್ಯವಾದ ಷರತ್ತುಗಳನ್ನು ನೋಡೋಣ.

i. ನಿಯೋಜನೆ ಮಾಡುವ ಪಾಲಿಸಿಯ ಸಂಪೂರ್ಣ ಹಕ್ಕು ಮತ್ತು ಶೀರ್ಷಿಕೆ/ಹೆಸರು ಅಥವಾ ನಿಯೋಜಿಸಬಹುದಾದ ಆಸಕ್ತಿಯನ್ನು ನಿಯೋಜಕರು ಹೊಂದಿರಬೇಕು.

ii. ನಿಯೋಜನೆಯು ಜಾರಿಯಲ್ಲಿರುವ ಯಾವುದೇ ಕಾನೂನಿಗೆ ವಿರುದ್ಧವಾಗಿರಬಾರದು.

iii. ನಿಯೋಜಿತರು ಮತ್ತೊಂದು ನಿಯೋಜನೆಯನ್ನು ಮಾಡಬಹುದು, ಆದರೆ ನಿಯೋಜಿತರು ಸ್ವತಃ ಜೀವ ವಿಮಾದಾರರಾಗಿರುವುದಿಲ್ಲವಾದ್ದರಿಂದ ನಾಮನಿರ್ದೇಶನವನ್ನು ಮಾಡಲು ಸಾಧ್ಯವಿಲ್ಲ.

**ಪ್ರಮುಖ:**

- ಜೀವ ವಿಮಾ ಪಾಲಿಸಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ನಿಯೋಜಿಸಬಹುದು
- ನಿಯೋಜನೆಯು ವರ್ಗಾವಣೆದಾರರು ಅಥವಾ ನಿಯೋಜಕರು ಅಥವಾ ಸರಿಯಾಗಿ ಅಧಿಕೃತರಾದ ಏಜೆಂಟರಿಂದ ಸಹಿ ಮಾಡಲ್ಪಟ್ಟಿರಬೇಕು ಮತ್ತು ಕನಿಷ್ಠ ಒಬ್ಬ ಸಾಕ್ಷಿಯಿಂದ ದೃಢೀಕರಿಸಲ್ಪಟ್ಟಿರಬೇಕು.
- ಶೀರ್ಷಿಕೆ/ಹೆಸರಿನ ವರ್ಗಾವಣೆಯನ್ನು ನಿರ್ದಿಷ್ಟವಾಗಿ ಪಾಲಿಸಿಯಲ್ಲಿ ಅನುಮೋದನೆ(ಎಂಡಾರ್ಸ್ ಮೆಂಟ್)ಯಾಗಿ ಅಥವಾ ಪ್ರತ್ಯೇಕ ಸಾಧನದ ಮೂಲಕ ಸೂಚಿಸಬೇಕು.
- ಪಾಲಿಸಿದಾರರು ವಿಮಾಗಾರರಿಗೆ ನಿಯೋಜನೆಯ ಸೂಚನೆಯನ್ನು ನೀಡಬೇಕು, ವಿಮಾಗಾರರಿಗೆ ಸೂಚಿಸದೇ ನಿಯೋಜನೆಯು ಮಾನ್ಯವಾಗಿರುವುದಿಲ್ಲ.
- ವಿಮಾಗಾರರು ಅಂತಹ ನಿಯೋಜನೆಯನ್ನು ಸ್ವೀಕರಿಸಬಹುದು ಅಥವಾ ಅದು ಪ್ರಾಮಾಣಿಕವಾಗಿಲ್ಲ ಅಥವಾ ಪಾಲಿಸಿದಾರರ ಹಿತಾಸಕ್ತಿ ಅಥವಾ ಸಾರ್ವಜನಿಕ ಹಿತಾಸಕ್ತಿಯಲ್ಲಿಲ್ಲ ಅಥವಾ ವಿಮಾ ಪಾಲಿಸಿಯ ವ್ಯಾಪಾರದ ಉದ್ದೇಶವನ್ನು ಹೊಂದಿದೆಯೆಂದು ನಂಬಲು ಸಾಕಷ್ಟು ಕಾರಣಗಳಿದ್ದರೆ ಅದನ್ನು ನಿರಾಕರಿಸಬಹುದು ಎಂದು ಸೆಕ್ಷನ್ **38(2)** ನಿರ್ದಿಷ್ಟಪಡಿಸುತ್ತದೆ.
- ಆದಾಗ್ಯೂ, ವಿಮಾಗಾರರು ಅನುಮೋದನೆ(ಎಂಡಾರ್ಸ್ ಮೆಂಟ್)ಯ ಮೇಲೆ ಕಾರ್ಯನಿರ್ವಹಿಸಲು ನಿರಾಕರಿಸುವ ಮೊದಲು, ಅಂತಹ ನಿರಾಕರಣೆಯ ಕಾರಣಗಳನ್ನು ಲಿಖಿತವಾಗಿ ದಾಖಲಿಸಬೇಕು ಮತ್ತು ಪಾಲಿಸಿದಾರರಿಗೆ ಅಂತಹ ವರ್ಗಾವಣೆ ಅಥವಾ

ನಿಯೋಜನೆಯ ಸೂಚನೆಯನ್ನು ನೀಡುವ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಪಾಲಿಸಿದಾರರಿಗೆ ತಿಳಿಸಬೇಕು.

**ಚಿತ್ರ 3: ವಿಮಾ ಪಾಲಿಸಿಗಳ ನಿಯೋಜನೆಗೆ ಸಂಬಂಧಿಸಿದ ನಿಬಂಧನೆಗಳು**




ಪಾಲಿಸಿಧಾರಕರಿಗೆ ಸಾಮಾನ್ಯವಾಗಿ ವಿಸ್ತೃತ ವಿಶೇಷಾಧಿಕಾರಗಳು

**a) ನಕಲಿ ಪಾಲಿಸಿ:**

ಜೀವ ವಿಮಾ ಪಾಲಿಸಿ ದಾಖಲೆಯು ಕೇವಲ ಭರವಸೆಯ ಪುರಾವೆಯಾಗಿದೆ. ಪಾಲಿಸಿ ದಾಖಲೆಯ ಹಾನಿ ಅಥವಾ ನಾಶವು ಯಾವುದೇ ರೀತಿಯಲ್ಲಿ ಒಪ್ಪಂದದಡಿಯಲ್ಲಿಯ ಅದರ ಹೊಣೆಗಾರಿಕೆಯಿಂದ ಕಂಪನಿಯನ್ನು ಮುಕ್ತಗೊಳಿಸುವುದಿಲ್ಲ. ಸಾಮಾನ್ಯವಾಗಿ ಪಾಲಿಸಿ ದಾಖಲೆಯ ನಷ್ಟದ ಸಂದರ್ಭದಲ್ಲಿ ಅನುಸರಿಸಬೇಕಾದ ಪ್ರಮಾಣಿತ ಕಾರ್ಯವಿಧಾನಗಳನ್ನು ವಿಮಾ ಕಂಪನಿಗಳು ಹೊಂದಿರುತ್ತವೆ.

ಸಾಮಾನ್ಯವಾಗಿ ಕಛೇರಿಯು ಆಪಾದಿತ ನಷ್ಟವನ್ನು ಅನುಮಾನಿಸಲು ಯಾವುದೇ ಕಾರಣವಿದೆಯೇ ಎಂದು ನೋಡಲು ಪ್ರಕರಣವನ್ನು ಪರಿಶೀಲಿಸುತ್ತದೆ. ಪಾಲಿಸಿ ಕಳೆದುಹೋಗಿದೆ ಮತ್ತು ಯಾವುದೇ ಬೇರೆ ರೀತಿಯಲ್ಲಿ ವ್ಯವಹರಿಸಲಾಗಿಲ್ಲವೆಂಬುದಕ್ಕೆ ತೃಪ್ತಿಕರ ಪುರಾವೆಯನ್ನು ಒದಗಿಸಬೇಕಾಗಬಹುದು. ಸಾಮಾನ್ಯವಾಗಿ ಹಕ್ಕುದಾರರು ಜಾಮೀನಿನೊಂದಿಗೆ ಅಥವಾ ಇಲ್ಲದೆ ಒಂದು ಇಂಡೆಮ್ನಿಟಿ ಬಾಂಡ್ ಅನ್ನು ಒದಗಿಸಿದ ಮೇಲೆ ಕ್ಲೇಮ್‌ಅನ್ನು ಇತ್ಯರ್ಥಗೊಳಿಸಬಹುದು.

ಪಾವತಿಯು ಶೀಘ್ರದಲ್ಲೇ ಬಾಕಿಯಿದ್ದರೆ ಮತ್ತು ಪಾವತಿಸಬೇಕಾದ ಮೊತ್ತವು ಅಧಿಕವಾಗಿದ್ದರೆ, ನಷ್ಟದ ಬಗ್ಗೆ ವ್ಯಾಪಕ ಚಲಾವಣೆಯಲ್ಲಿರುವ ರಾಷ್ಟ್ರೀಯ ಪತ್ರಿಕೆಯಲ್ಲಿ ನಷ್ಟವನ್ನು ವರದಿ ಮಾಡುವ ಜಾಹೀರಾತನ್ನು ನೀಡಲು ಕಛೇರಿಯು ಒತ್ತಾಯಿಸಬಹುದು. ಬೇರೆಯವರಿಂದ ಯಾವುದೇ ಆಕ್ಷೇಪಣೆಯಿಲ್ಲವೆಂದು ಖಚಿತವಾದ ಮೇಲೆ ನಕಲಿ ಪಾಲಿಸಿಯನ್ನು ನೀಡಬಹುದು.

**b) ಬದಲಾವಣೆ**

ಪಾಲಿಸಿದಾರರು ಪಾಲಿಸಿ ನಿಯಮಗಳು ಮತ್ತು ಷರತ್ತುಗಳಲ್ಲಿ ಬದಲಾವಣೆಗಳನ್ನು ಮಾಡಲು ಪ್ರಯತ್ನಿಸಬಹುದು. ವಿಮಾದಾರ ಮತ್ತು ವಿಮಾಗಾರರ ಒಪ್ಪಿಗೆಗೆ ಒಳಪಟ್ಟು ಅಂತಹ ಬದಲಾವಣೆಗಳನ್ನು

ಮಾಡಲು ಅವಕಾಶವಿರುತ್ತದೆ. ಸಾಮಾನ್ಯವಾಗಿ ಪಾಲಿಸಿಯ ಮೊದಲ ವರ್ಷದಲ್ಲಿ ಕಂತು ಪಾವತಿಯ ವಿಧಾನದಲ್ಲಿಯ ಬದಲಾವಣೆ ಅಥವಾ ಈ ಕೆಳಗೆ ನೀಡಿದಂತಹ ಕಡ್ಡಾಯ ಸ್ವಭಾವದ ಬದಲಾವಣೆಗಳನ್ನು ಹೊರತುಪಡಿಸಿ ಬದಲಾವಣೆಗಳನ್ನು ಅನುಮತಿಸಲಾಗುವುದಿಲ್ಲ.

- ✓ ಹೆಸರು ಅಥವಾ/ವಿಳಾಸದಲ್ಲಿ ಬದಲಾವಣೆ;
- ✓ ವಯಸ್ಸು ಹೆಚ್ಚು ಅಥವಾ ಕಡಿಮೆ ಎಂದು ಸಾಬೀತಾದರೆ ಅದನ್ನು ಮತ್ತೆ ಸೇರಿಸುವುದು;
- ✓ ಇಮ್ಮಡಿ ಅಪಘಾತ ಪ್ರಯೋಜನ(ಡಬಲ್ ಅಕ್ಸಿಡೆಂಟ್ ಬೆನೆಫಿಟ್) ಅಥವಾ ಶಾಶ್ವತ ಅಂಗವೈಕಲ್ಯ ಪ್ರಯೋಜನ ಇತ್ಯಾದಿಗಳ ಮಂಜೂರಾತಿಗಾಗಿ ವಿನಂತಿ.

ಮುಂಬರುವ ವರ್ಷಗಳಲ್ಲಿ ಬದಲಾವಣೆಗಳನ್ನು ಅನುಮತಿಸಬಹುದು. ಪಾಲಿಸಿಯ ಮೇಲೆ ಅಥವಾ ಪ್ರತ್ಯೇಕ ಕಾಗದದ ಮೇಲೆ ಸೂಕ್ತವಾದ ಅನುಮೋದನೆ(ಎಂಡಾರ್ಸ್ ಮೆಂಟ್)ಯನ್ನು ಇರಿಸುವ ಮೂಲಕ ಇವುಗಳಲ್ಲಿಯ ಕೆಲವು ಬದಲಾವಣೆಗಳು ಪರಿಣಾಮ ಬೀರಬಹುದು. ಪಾಲಿಸಿ ಷರತ್ತುಗಳಲ್ಲಿ ವಾಸ್ತವಿಕ ಬದಲಾವಣೆಯ ಅಗತ್ಯವಿರುವ ಇತರ ಬದಲಾವಣೆಗಳಿಗೆ, ಅಸ್ತಿತ್ವದಲ್ಲಿರುವ ಪಾಲಿಸಿಗಳನ್ನು ರದ್ದುಗೊಳಿಸುವುದು ಮತ್ತು ಹೊಸ ಪಾಲಿಸಿಗಳನ್ನು ನೀಡುವುದು ಅಗತ್ಯವಾಗಬಹುದು.

ಅನುಮತಿಸಲಾದ ಕೆಲವು ಪ್ರಮುಖ ರೀತಿಯ ಬದಲಾವಣೆಗಳು ಈ ಕೆಳಗಿನಂತಿವೆ

i. ವಿಮೆ ಅಥವಾ ಅವಧಿಯ ಕೆಲವು ವರ್ಗಗಳಲ್ಲಿ ಬದಲಾವಣೆ [ಅಪಾಯದ ಮೊತ್ತವನ್ನು ಹೆಚ್ಚು ಮಾಡದೇ]
ii. ವಿಮಾ ಮೊತ್ತದಲ್ಲಿ ಕಡಿತ
iii. ಕಂತು ಪಾವತಿ ವಿಧಾನದಲ್ಲಿ ಬದಲಾವಣೆ
iv. ಪಾಲಿಸಿ ಪ್ರಾರಂಭವಾದ ದಿನಾಂಕದಲ್ಲಿ ಬದಲಾವಣೆ
v. ಪಾಲಿಸಿಯನ್ನು ಎರಡು ಅಥವಾ ಹೆಚ್ಚಿನ ಪಾಲಿಸಿಗಳನ್ನಾಗಿ ವಿಭಜಿಸುವುದು
vi. ಹೆಚ್ಚುವರಿ ಕಂತು ಅಥವಾ ನಿರ್ಬಂಧಿತ ಷರತ್ತನ್ನು ತೆಗೆದು ಹಾಕುವುದು
vii. ಲಾಭರಹಿತ ಯೋಜನೆಯಿಂದ ಲಾಭಸಹಿತ ಯೋಜನೆಗೆ ಬದಲಾವಣೆ
viii. ಹೆಸರಿನಲ್ಲಿ ತಿದ್ದುಪಡಿ
ix. ಕ್ಲೇಮ್ ಪಾವತಿ ಮತ್ತು ಇಮ್ಮಡಿ ಅಪಘಾತ ಪ್ರಯೋಜನದ ಅನುದಾನಕ್ಕಾಗಿ ಇತ್ಯರ್ಥದ ಆಯ್ಕೆ

ಈ ಬದಲಾವಣೆಗಳು ಸಾಮಾನ್ಯವಾಗಿ ಅಪಾಯದ ಹೆಚ್ಚಳವನ್ನು ಒಳಗೊಂಡಿರುವುದಿಲ್ಲ. ಪಾಲಿಸಿಯಲ್ಲಿ ಅನುಮತಿಸಲಾಗದ ಇತರ ಬದಲಾವಣೆಗಳಿವೆ. ಇವುಗಳು ಕಂತನ್ನು ಕಡಿಮೆ ಮಾಡುವ ಪರಿಣಾಮವನ್ನು ಹೊಂದಿರುವ ಬದಲಾವಣೆಗಳಾಗಿರಬಹುದು. ಅಪಾಯವನ್ನು ಹೆಚ್ಚಿಸುವ ಉದಾಹರಣೆಗಳು ಕಂತು

ಪಾವತಿಸುವ ಅವಧಿಯ ವಿಸ್ತರಣೆ; ಲಾಭಸಹಿತ ಯೋಡನೆಯಿಂದ ಲಾಭರಹಿತ ಯೋಜನೆಗಳಿಗೆ ಬದಲಾವಣೆ; ಒಂದು ವರ್ಗದ ವಿಮೆಯಿಂದ ಇನ್ನೊಂದಕ್ಕೆ ವರ್ಗಕ್ಕೆ ಬದಲಾವಣೆ: ಮತ್ತು ವಿಮಾ ಮೊತ್ತದಲ್ಲಿಯ ಹೆಚ್ಚಳ.

**ನಿಮ್ಮನ್ನು ಪರೀಕ್ಷಿಸಿ 2**

ಯಾವ ಸಂದರ್ಭಗಳಲ್ಲಿ ಪಾಲಿಸಿದಾರನು ನೇಮಕಾತಿಯನ್ನು ಮಾಡಬೇಕಾಗುತ್ತದೆ**?**

I. ವಿಮಾದಾರರು ಅಪ್ರಾಪ್ತ ವಯಸ್ಕದವರಾಗಿದ್ದಾಗ

II. ನಾಮನಿರ್ದೇಶಿತರು ಅಪ್ರಾಪ್ತ ವಯಸ್ಕದವರಾಗಿದ್ದಾಗ

III. ಪಾಲಿಸಿದಾರರ ಮನಃಸ್ಥಿತಿ ಸರಿಯಾಗಿಲ್ಲದಿದ್ದಾಗ

IV. ಪಾಲಿಸಿದಾರರು ಅವಿವಾಹಿತರಾಗಿದ್ದಾಗ

ಸಾರಾಂಶ

- ಆರೋಗ್ಯ, ಅಭ್ಯಾಸ/ಚಟ, ಉದ್ಯೋಗ, ಆದಾಯ ಮತ್ತು ಕುಟುಂಬದ ವಿವರಗಳನ್ನು ಏಜೆಂಟರ ವರದಿಯಲ್ಲಿ ಏಜೆಂಟರು ನಮೂದಿಸಬೇಕಾಗುತ್ತದೆ.
- ಎತ್ತರ, ತೂಕ, ರಕ್ತದೊತ್ತಡ, ಹೃದಯದ ಸ್ಥಿತಿ ಮುಂತಾದ ದೈಹಿಕ ಲಕ್ಷಣಗಳ ವಿವರಗಳನ್ನು ದಾಖಲಿಸಿದ ವೈದ್ಯರು ತಮ್ಮ ದಾಖಲೆಯಲ್ಲಿ ನಮೂದಿಸುತ್ತಾರೆ ಮತ್ತು ಅದನ್ನು ವೈದ್ಯಕೀಯ ಪರೀಕ್ಷಕರ ವರದಿಯೆಂದು ಕರೆಯುತ್ತಾರೆ.
- ನೈತಿಕ ಅಪಾಯವೆಂದರೆ ಜೀವ ವಿಮಾ ಪಾಲಿಸಿಯನ್ನು ಖರೀದಿಸಿದ ಪರಿಣಾಮವಾಗಿ ಗ್ರಾಹಕರ ನಡವಳಿಕೆಯು ಬದಲಾಗಬಹುದು ಮತ್ತು ಅಂತಹ ಬದಲಾವಣೆಯು ನಷ್ಟದ ಸಾಧ್ಯತೆಯನ್ನು ಹೆಚ್ಚಿಸುತ್ತದೆ.
- ಜೀವ ವಿಮಾ ಕಂಪನಿಯು ಮೊದಲ ಕಂತು ರಸೀದಿ(ಎಫ್ ಪಿ ಆರ್**)**ಯನ್ನು ನೀಡಿದಾಗ ವಿಮಾ ಒಪ್ಪಂದವು ಪ್ರಾರಂಭವಾಗುತ್ತದೆ. ಪಾಲಿಸಿ ಒಪ್ಪಂದವು ಪ್ರಾರಂಭವಾಗಿದೆ ಎಂಬುದಕ್ಕೆ ಎಫ್ ಪಿ ಆರ್ ಸಾಕ್ಷಿಯಾಗಿದೆ
- ಪಾಲಿಸಿ ದಾಖಲೆಯು ವಿಮೆಗೆ ಸಂಬಂಧಿಸಿದ ಅತ್ಯಂತ ಪ್ರಮುಖ ದಾಖಲೆಯಾಗಿದೆ. ಇದು ವಿಮಾದಾರರು ಮತ್ತು ವಿಮಾ ಕಂಪನಿಯ ನಡುವಿನ ಒಪ್ಪಂದಕ್ಕೆ ಸಾಕ್ಷಿಯಾಗಿದೆ.
- ಪ್ರಮಾಣಿತ ಪಾಲಿಸಿ ದಾಖಲೆಯು ಸಾಮಾನ್ಯವಾಗಿ ಪಾಲಿಸಿ ವಿವರಪಟ್ಟಿ, ಪ್ರಮಾಣಿತ ನಿಬಂಧನೆಗಳು ಮತ್ತು ಪಾಲಿಸಿಯ ನಿರ್ದಿಷ್ಟ ನಿಬಂಧನೆಗಳೆಂಬ ಮೂರು ಭಾಗಗಳನ್ನು ಹೊಂದಿರುತ್ತದೆ.
- ಗ್ರೇಸ್ ಅವಧಿಯ ಷರತ್ತು ಪಾಲಿಸಿದಾರರಿಗೆ ಕಂತು ಪಾವತಿಸಲು ಹೆಚ್ಚುವರಿ ಅವಧಿಯನ್ನು ನೀಡುತ್ತದೆ.

- ಮರುಸ್ಥಾಪನೆಯು ವಿಮಾದಾರರು ಕಂತುಗಳನ್ನು ಪಾವತಿಸದ ಕಾರಣದಿಂದ ಕೊನೆಗೊಂಡ ಅಥವಾ ಮುಟ್ಟುಗೋಲು ಹಾಕಿಕೊಳ್ಳದ ನಿಬಂಧನೆಗಳ ಅಡಿಯಲ್ಲಿ ಮುಂದುವರಿಸಲಾದ ಪಾಲಿಸಿಯನ್ನು ಜೀವ ವಿಮಾ ಕಂಪನಿಯು ಪುನಃ ಜಾರಿಗೆ ತರುವ ಪ್ರಕ್ರಿಯೆಯಾಗಿದೆ.
- ಪಾಲಿಸಿ ಸಾಲವು ಸಾಮಾನ್ಯ ವಾಣಿಜ್ಯ ಸಾಲಕ್ಕಿಂತ ಎರಡು ವಿಷಯಗಳಲ್ಲಿ ಭಿನ್ನವಾಗಿದೆ, ಮೊದಲನೆಯದಾಗಿ ಪಾಲಿಸಿ ಮಾಲೀಕರು ಸಾಲವನ್ನು ಮರುಪಾವತಿಸಲು ಕಾನೂನುಬದ್ಧವಾಗಿ ಬಾಧ್ಯತೆ ಹೊಂದಿರುವುದಿಲ್ಲ ಮತ್ತು ವಿಮಾಗಾರರು ವಿಮಾದಾರರ ಆರ್ಥಿಕ ಸ್ಥಿತಿಯ ಪರಿಶೀಲನೆಯನ್ನು ಮಾಡಬೇಕಾಗಿಲ್ಲ.
- ಜೀವ ವಿಮಾದಾರರು ತಮ್ಮ ಮರಣದ ನಂತರ ವಿಮಾ ಕಂಪನಿಯಿಂದ ಪಡೆಯಬೇಕಾದ ವಿಮಾ ಮೊತ್ತವನ್ನು ಪಾವತಿಸಬೇಕಾದ ವ್ಯಕ್ತಿ(ಗಳ) ಹೆಸರನ್ನು ಪ್ರಸ್ತಾಪಿಸುವುದೆಂದರೆ ನಾಮನಿರ್ದೇಶನವಾಗಿದೆ.
- ಜೀವ ವಿಮಾ ಪಾಲಿಸಿಯ ನಿಯೋಜನೆಯು ಹಕ್ಕು, ಶೀರ್ಷಿಕೆ/ಹೆಸರು ಮತ್ತು ಪಾಲಿಸಿಯಲ್ಲಿನ ಆಸಕ್ತಿಯನ್ನು (ಆಸ್ತಿಯಂತೆ) ಒಬ್ಬ ವ್ಯಕ್ತಿಯಿಂದ ಇನ್ನೊಬ್ಬರಿಗೆ ವರ್ಗಾಯಿಸುವ ಕ್ರಿಯೆಯನ್ನು ಸೂಚಿಸುತ್ತದೆ. ಹಕ್ಕುಗಳನ್ನು ವರ್ಗಾಯಿಸುವ ವ್ಯಕ್ತಿಯನ್ನು ನಿಯೋಜಕ(ಅಸ್ಸೈನರ್) ಎಂದು ಕರೆಯಲಾಗುತ್ತದೆ ಮತ್ತು ಆಸ್ತಿಯನ್ನು ಯಾರಿಗೆ ವರ್ಗಾಯಿಸಲಾಗುತ್ತದೆಯೋ ಆ ವ್ಯಕ್ತಿಯನ್ನು ನಿಯೋಜಿತ(ಅಸ್ಸೈನೀ) ಎಂದು ಕರೆಯಲಾಗುತ್ತದೆ.
- ಬದಲಾವಣೆಯು ವಿಮಾಗಾರರು ಮತ್ತು ವಿಮಾದಾರರ ಒಪ್ಪಿಗೆಗೆ ಒಳಪಟ್ಟಿರುತ್ತದೆ. ಕೆಲವು ಸರಳವಾದ ಬದಲಾವಣೆಗಳನ್ನು ಹೊರತುಪಡಿಸಿ, ಪಾಲಿಸಿಯ ಮೊದಲ ವರ್ಷದಲ್ಲಿ ಸಾಮಾನ್ಯವಾಗಿ ಬದಲಾವಣೆಗಳನ್ನು ಅನುಮತಿಸಲಾಗುವುದಿಲ್ಲ.

---

ಪ್ರಮುಖ ಪದಗಳು

1. ಏಜೆಂಟರ ಗೌಪ್ಯತಾ ವರದಿ
2. ವೈದ್ಯರ ಪರೀಕ್ಷಣಾ ವರದಿ
3. ನೈತಿಕ ಅಪಾಯದ ವರದಿ
4. ಮೊದಲ ಕಂತು ಪಾವತಿ ರಶೀದಿ (ಎಫ್ ಪಿ ಆರ್)
5. ಪಾಲಿಸಿ ದಾಖಲೆ
6. ಪಾಲಿಸಿ ವಿವರಪಟ್ಟಿ
7. ಪ್ರಮಾಣಿತ ನಿಬಂಧನೆಗಳು

**8.** ವಿಶೇಷ ನಿಬಂಧನೆಗಳು

**9.** ಗ್ರೇಸ್ ಅವಧಿ

**10.** ಪಾಲಿಸಿ ರದ್ದತಿ

**11.** ಪಾಲಿಸಿ ಪುನರುಜ್ಜೀವಿತಗೊಳಿಸುವುದು

**12.** ಶರಣಾಗತಿ ಮೌಲ್ಯ

**13.** ನಾಮನಿರ್ದೇಶನ

**14.** ನಿಯೋಜನೆ

**ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು**

**ಉತ್ತರ 1** - ಸರಿಯಾದ ಉತ್ತರ **II** ಆಗಿದೆ.

**ಉತ್ತರ 2** - ಸರಿಯಾದ ಉತ್ತರ **II** ಆಗಿದೆ.

# ಅಧ್ಯಾಯ L-08

# ಜೀವವಿಮಾ ಅಂಡರ್ ರೈಟಿಂಗ್

**ಅಧ್ಯಾಯ ಪರಿಚಯ**

ನಿರೀಕ್ಷಿತ ಗ್ರಾಹಕರಿಂದ ಪ್ರಸ್ತಾಪವನ್ನು ಪಡೆದುಕೊಂಡ ನಂತರ ಜೀವ ವಿಮಾ ಏಜೆಂಟರ ಕೆಲಸವು ಮುಗಿಯುವುದಿಲ್ಲ. ಪ್ರಸ್ತಾವನೆಯನ್ನು ವಿಮಾ ಕಂಪನಿಯು ಒಪ್ಪಿಕೊಳ್ಳಬೇಕು ಮತ್ತು ಪಾಲಿಸಿಯಾಗಿ ಪ್ರತಿಫಲಿಸಬೇಕು.

ಪ್ರತಿ ಜೀವ ವಿಮಾ ಪ್ರಸ್ತಾವನೆಯು ಜೀವ ವಿಮಾದಾರರು ಪ್ರಸ್ತಾವನೆಯನ್ನು ಸ್ವೀಕರಿಸುವ ಬಗ್ಗೆ ಮತ್ತು ಸ್ವೀಕರಿಸುವ ಹಾಗಿದ್ದಲ್ಲಿ, ಯಾವ ನಿಯಮಗಳ ಮೇಲೆ ಆಧಾರದ ಮೇಲೆ ಎಂದು ನಿರ್ಧರಿಸುವ ಒಂದು ವಿಶಿಷ್ಟ ಚೌಕಟ್ಟಿನ ಮೂಲಕ ಹಾದುಹೋಗಬೇಕು. ಈ ಅಧ್ಯಾಯದಲ್ಲಿ ನಾವು ಅಂಡರ್ ರೈಟಿಂಗ್ ಪ್ರಕ್ರಿಯೆ ಮತ್ತು ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಅಂಶಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುತ್ತೇವೆ.

**ಕಲಿಕೆಯ ಫಲಿತಾಂಶಗಳು**

A. *ಅಂಡರ್ ರೈಟಿಂಗ್ ಮೂಲಭೂತ ಪರಿಕಲ್ಪನೆಗಳು*

B. *ವೈದ್ಯಕೀಯವಲ್ಲದ ಅಂಡರ್ ಕೈಟಿಂಗ್*

C. *ವೈದ್ಯಕೀಯ ಅಂಡರ್ ರೈಟಿಂಗ್*

## A. ಅಂಡರ್ ರೈಟಿಂಗ್ - ಮೂಲಭೂತ ಪರಿಕಲ್ಪನೆಗಳು

### 1. ಅಂಡರ್ ರೈಟಿಂಗ್ ನ ಉದ್ದೇಶ

ಅಂಡರ್ ರೈಟಿಂಗ್ ಎರಡು ಉದ್ದೇಶಗಳನ್ನು ಹೊಂದಿರುತ್ತದೆ

i. ಅಪಾಯವನ್ನು ನಿರ್ಣಯಿಸಲು, ವರ್ಗೀಕರಣ ಮತ್ತು ಸ್ವೀಕಾರದ ಅಥವಾ ನಿರಾಕರಣೆಯ ನಿಯಮಗಳನ್ನು ನಿರ್ಧರಿಸುವುದು

ii. ವಿಮಾದಾರರಿಗೆ ವಿರೋಧಪರವಾದ ಆಯ್ಕೆಯನ್ನು ತಡೆಗಟ್ಟಲು

**ವ್ಯಾಖ್ಯಾನ**

**ಅಂಡರ್ ರೈಟಿಂಗ್** ಎಂಬ ಪದವು ಜೀವ ವಿಮೆಯ ಪ್ರತಿ ಪ್ರಸ್ತಾವನೆಯನ್ನು ಅದು ಪ್ರತಿನಿಧಿಸುವ ಅಪಾಯದ ಮಟ್ಟಕ್ಕೆ ಅನುಗುಣವಾಗಿ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯನ್ನು ಸೂಚಿಸುತ್ತದೆ ಮತ್ತು ನಂತರ ವಿಮೆಯನ್ನು ನೀಡುವ ಅಥವಾ ನಿರಾಕರಿಸುವ ಮತ್ತು ಯಾವ ನಿಯಮಗಳ ಅನುಸಾರ ನೀಡಬೇಕೆಂಬುದನ್ನು ನಿರ್ಧರಿಸುತ್ತದೆ.

**ವಿರೋಧಪರ-ಆಯ್ಕೆಯೆಂದರೆ ತಮ್ಮ ನಷ್ಟವನ್ನು ಅನುಭವಿಸುವ ಸಾಧ್ಯತೆ ಹೆಚ್ಚಾಗಿರುವುದರ ಬಗ್ಗೆ ಅನುಮಾನಿಸುವ ಅಥವಾ ತಿಳಿದಿರುವ ಜನರು, ಪ್ರಕ್ರಿಯೆಯಲ್ಲಿ ಲಾಭ ಪಡೆಯುವ ದೃಷ್ಟಿಯಿಂದ ವಿಮೆಯನ್ನು ಹುಡುಕುವ ಪ್ರವೃತ್ತಿಯಾಗಿದೆ.**

---

**ಉದಾಹರಣೆ**

ಜೀವ ವಿಮಾದಾರರು ತಾವು ಯಾರಿಗೆ ವಿಮೆಯನ್ನು ನೀಡುತ್ತೇವೆ ಎಂಬುದರ ಕುರಿತು ಆಯ್ಕೆ ಮಾಡದಿದ್ದರೆ, ದೀರ್ಘಾವಧಿಯವರೆಗೆ ಬದುಕುವ ನಿರೀಕ್ಷೆಯಿಲ್ಲದ ಹೃದಯ ಸಮಸ್ಯೆಗಳು ಅಥವಾ ಕ್ಯಾನ್ಸರ್ ನಂತಹ ಗಂಭೀರ ಕಾಯಿಲೆಗಳಿರುವ ಜನರು ವಿಮೆಯನ್ನು ಖರೀದಿಸಲು ಪ್ರಯತ್ನಿಸುವ ಸಾಧ್ಯತೆಯಿದೆ.

**ಬೇರೆ ರೀತಿಯಲ್ಲಿ ಹೇಳುವುದಾದರೆ, ವಿಮಾಗಾರರು ಅಂಡರ್ ರೈಟಿಂಗ್ ನ ವಿವೇಚನೆಯನ್ನು ಚಲಾಯಿಸದಿದ್ದರೆ, ವಿರುದ್ಧವಾಗಿ ಆಯ್ಕೆ ಮಾಡಲಾಗುತ್ತದೆ ಮತ್ತು ಪ್ರಕ್ರಿಯೆಯಲ್ಲಿ ನಷ್ಟವನ್ನು ಅನುಭವಿಸಬಹುದಾಗಿದೆ.**

---

### 2. ಅಪಾಯಗಳ ನಡುವೆ ಸಮಾನತೆ

"ಸಮಾನತೆ" ಎಂಬ ಪದದ ಅರ್ಥವೇನೆಂದರೆ, ಅಪಾಯದ ಒಂದೇ ರೀತಿಯ ಮಟ್ಟಕ್ಕೆ ಒಡ್ಡಿಕೊಂಡ ಅರ್ಜಿದಾರರನ್ನು ಒಂದೇ ಪ್ರಕಾರದ ಕಂತುಗಳ ವರ್ಗದಲ್ಲಿರಿಸಬೇಕು. ಕಂತುಗಳನ್ನು ನಿರ್ಧರಿಸಲು ಬಳಸಲಾಗುವ ಮರಣಸಾಧ್ಯತೆಯ ಕೋಷ್ಟಕವು ಸಾಮಾನ್ಯ ಜೀವಗಳ ಮರಣದ ಅನುಭವವನ್ನು ಅಥವಾ

ಸರಾಸರಿ ಅಪಾಯಗಳನ್ನು ಪ್ರತಿನಿಧಿಸುತ್ತದೆ. ಜೀವ ವಿಮೆಯನ್ನು ತೆಗೆದುಕೊಳ್ಳಲು ಪ್ರಸ್ತಾಪಿಸುವ ಬಹುಪಾಲು ವ್ಯಕ್ತಿಗಳನ್ನು ಅದು ಒಳಗೊಂಡಿರುತ್ತದೆ.

a) **ಅಪಾಯದ ವರ್ಗೀಕರಣ**

ಸಮಾನತೆಗೆ ಅವಕಾಶ ನೀಡಲು, ಅಂಡರ್ ರೈಟರ್ ರು **ಅಪಾಯದ ವರ್ಗೀಕರಣ** ಎಂದು ಕರೆಯಲ್ಪಡುವ, ಅಂದರೆ ವೈಯಕ್ತಿಕ ಜೀವವನ್ನು ವರ್ಗೀಕರಿಸುವ ಮತ್ತು ಒಡ್ಡಲ್ಪಡುವ ಅಪಾಯಗಳ ಮಟ್ಟವನ್ನವಲಂಬಿಸಿ ವಿಭಿನ್ನ ಅಪಾಯದ ವರ್ಗಗಳಿಗೆ ನಿಯೋಜಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತಾರೆ. ಈ ಅಪಾಯದ ನಾಲ್ಕು ವರ್ಗಗಳಿವೆ.

**ಚಿತ್ರ 1: ಅಪಾಯದ ವರ್ಗೀಕರಣ**




i. **ಸಾಮಾನ್ಯ/ಪ್ರಮಾಣಿತ ಜೀವಗಳು**

ಮರಣಸಾಧ್ಯತೆಯ ಕೋಷ್ಟಕದಲ್ಲಿಯ ನಿರೀಕ್ಷಿತ ಮರಣಸಾಧ್ಯತೆಯನ್ನು ಪ್ರತಿನಿಧಿಸುವ ಪ್ರಮಾಣಿತ ಜೀವಕ್ಕೆ ಅನುರೂಪವಾಗಿರುವವರನ್ನು ಇವು ಒಳಗೊಂಡಿರುತ್ತವೆ.

ii. **ಆದ್ಯತೆಯ ಅಪಾಯಗಳು**

ಇವುಗಳಲ್ಲಿ ನಿರೀಕ್ಷಿತ ಮರಣಸಾಧ್ಯತೆಯ ಪ್ರಮಾಣವು ಸಾಮಾನ್ಯ/ಪ್ರಮಾಣಿತ ಜೀವಗಳಿಗಿಂತ ಗಮನಾರ್ಹವಾಗಿ ಕಡಿಮೆಯಾಗಿರುತ್ತದೆ ಮತ್ತು ಆದ್ದರಿಂದ ಇವುಗಳಿಗೆ ಕಡಿಮೆ ಕಂತನ್ನು ವಿಧಿಸಬಹುದು.

iii. **ಕೆಳದರ್ಜೆಯ ಜೀವಗಳು**

ಇವುಗಳಲ್ಲಿ ನಿರೀಕ್ಷಿತ ಮರಣಸಾಧ್ಯತೆಯ ಪ್ರಮಾಣವು ಸರಾಸರಿ ಅಥವಾ ಸಾಮಾನ್ಯ/ಪ್ರಮಾಣಿತ ಜೀವಗಳಿಗಿಂತ ಗಮನಾರ್ಹವಾಗಿ ಹೆಚ್ಚಾಗಿರುತ್ತದೆಯಾದರೂ ವಿಮೆ ಮಾಡಬಹುದೆಂದು ಪರಿಗಣಿಸಲಾಗುತ್ತವೆ. ಅವುಗಳನ್ನು ಹೆಚ್ಚಿನ (ಅಥವಾ ಹೆಚ್ಚುವರಿ) ಕಂತುಗಳೊಂದಿಗೆ ಅಥವಾ ಕೆಲವು ನಿರ್ಬಂಧಗಳಿಗೆ ಒಳಪಟ್ಟು ಸ್ವೀಕರಿಸಬಹುದು.

iv. **ನಿರಾಕರಿಸಲಾದ ಜೀವಗಳು**

ಈ ವರ್ಗದಲ್ಲಿ ದುರ್ಬಲತೆಗಳು ಮತ್ತು ನಿರೀಕ್ಷಿತ ಹೆಚ್ಚುವರಿ ಮರಣಸಾಧ್ಯತೆಯು ತುಂಬಾ ದೊಡ್ಡದಾಗಿರುವುದರಿಂದ ಅವರಿಗೆ ಕೈಗೆಟುಕುವ ವೆಚ್ಚದಲ್ಲಿ ವಿಮಾ ರಕ್ಷಣೆಯನ್ನು ಒದಗಿಸಲಾಗುವುದಿಲ್ಲ. ಕೆಲವೊಮ್ಮೆ ಅವನು ಅಥವಾ ಅವಳು ಇತ್ತೀಚೆಗೆ ಶಸ್ತ್ರಕ್ರಿಯೆಯಂತಹ ವೈದ್ಯಕೀಯ ಘಟನೆಗೆ ಒಡ್ಡಿಕೊಂಡಿದ್ದರೆ ವ್ಯಕ್ತಿಯ ಪ್ರಸ್ತಾಪವನ್ನು ತಾತ್ಕಾಲಿಕವಾಗಿ ನಿರಾಕರಿಸಬಹುದು,.

## 3. ಅಂಡರ್ ರೈಟಿಂಗ್ ಪ್ರಕ್ರಿಯೆ

ಅಂಡರ್ ರೈಟಿಂಗ್ ಪ್ರಕ್ರಿಯೆಯು ಎರಡು ಮಟ್ಟಗಳಲ್ಲಿ ನಡೆಯುತ್ತದೆ:

- ✓ ಕ್ಷೇತ್ರ ಮಟ್ಟದಲ್ಲಿ
- ✓ ಅಂಡರ್ ರೈಟಿಂಗ್ ವಿಭಾಗದ ಮಟ್ಟದಲ್ಲಿ

a) **ಕ್ಷೇತ್ರ ಅಥವಾ ಪ್ರಾಥಮಿಕ ಮಟ್ಟ**

ಕ್ಷೇತ್ರ ಮಟ್ಟದ ಅಂಡರ್ ರೈಟಿಂಗ್ ಅನ್ನು **ಪ್ರಾಥಮಿಕ ಅಂಡರ್ ರೈಟಿಂಗ್** ಎಂದೂ ಕರೆಯಲಾಗುತ್ತದೆ. ಇದರಲ್ಲಿ ವಿಮಾ ರಕ್ಷಣೆಯನ್ನು ನೀಡಲು ಅರ್ಜಿದಾರರು ಸೂಕ್ತರೇ ಎಂಬುದನ್ನು ನಿರ್ಧರಿಸಲು ಏಜೆಂಟರು ಅಥವಾ ಕಂಪನಿಯ ಪ್ರತಿನಿಧಿಯಿಂದ ಮಾಹಿತಿ ಸಂಗ್ರಹಣೆಯು ಒಳಗೊಂಡಿರುತ್ತದೆ. ಏಜೆಂಟರು ಪ್ರಾಥಮಿಕ ಅಂಡರ್ ರೈಟರ್ ರಾಗಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ವಿಮೆ ಮಾಡಬೇಕಾದ ಜೀವ/ವ್ಯಕ್ತಿಯ ಬಗ್ಗೆ ಅವರು ಅತ್ಯುತ್ತಮವಾಗಿ ತಿಳಿದುಕೊಳ್ಳಲು ಸಾಧ್ಯವಿರುತ್ತದೆ.

ಅನೇಕ ವಿಮಾ ಕಂಪನಿಗಳಲ್ಲಿ ಪ್ರಸ್ತಾಪಿಸಲಾದ ಜೀವ/ವ್ಯಕ್ತಿಗೆ ಸಂಬಂಧಿಸಿದಂತೆ ಏಜೆಂಟರು ನಿರ್ದಿಷ್ಟ ಮಾಹಿತಿಯನ್ನು ಮತ್ತು ಅಭಿಪ್ರಾಯ ಮತ್ತು ಶಿಫಾರಸುಗಳನ್ನು ಒದಗಿಸುವ ಗೌಪ್ಯ ವರದಿಯನ್ನು ಅಥವಾ ಹೇಳಿಕೆಯನ್ನು ಪೂರ್ಣಗೊಳಿಸುವ ಅಗತ್ಯವಿರುತ್ತದೆ.

**ವಂಚನೆಯ ಮೇಲ್ವಿಚಾರಣೆ ಮತ್ತು ಪ್ರಾಥಮಿಕ ಅಂಡರ್ ರೈಟರ್ ರಾಗಿ ಏಜೆಂಟರ ಪಾತ್ರ**

ಅಪಾಯದ ಸ್ವೀಕಾರಕ್ಕೆ ಸಂಬಂಧಿಸಿದಂತೆ ಹೆಚ್ಚಿನ ನಿರ್ಧಾರವು ಪ್ರಸ್ತಾಪದಾರರಿಂದ ಪ್ರಸ್ತಾಪದ ನಮೂನೆಯಲ್ಲಿ ಬಹಿರಂಗಪಡಿಸಿದ ಸಂಗತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ಸಂಗತಿಗಳು ಸುಳ್ಳು ಮತ್ತು ಮೋಸಗೊಳಿಸುವ ಉದ್ದೇಶದಿಂದ ವಂಚನೆಯಿಂದ ತಪ್ಪಾಗಿ ನಿರೂಪಿಸಲಾಗಿದೆಯೇ ಎಂದು ಅಂಡರ್ ರೈಟಿಂಗ್ ವಿಭಾಗದಲ್ಲಿ ಕುಳಿತಿರುವ ಅಂಡರ್ ರೈಟರ್ ಗೆ ತಿಳಿಯುವುದು ಕಷ್ಟವಾಗಬಹುದು.

ಇಲ್ಲಿ ಏಜೆಂಟರು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಪ್ರಸ್ತಾಪಿಸಲಾದ ಜೀವ/ವ್ಯಕ್ತಿಯೊಂದಿಗೆ ಏಜೆಂಟರ ನೇರ ಮತ್ತು ವೈಯಕ್ತಿಕ ಸಂಪರ್ಕವಿರುವುದದಿಂದಾಗಿ ಪ್ರತಿನಿಧಿಸಲಾದ ಸತ್ಯಗಳನ್ನು ನಿಜವೆಂದು ಖಚಿತಪಡಿಸಿಕೊಳ್ಳಲು ಅವನು ಅಥವಾ ಅವಳು ಅತ್ಯುತ್ತಮ ಸ್ಥಾನದಲ್ಲಿರುತ್ತಾರೆ.

b) **ವಿಭಾಗೀಯ ಮಟ್ಟದಲ್ಲಿ ಅಂಡರ್ ರೈಟಿಂಗ್**

ಅಂಡರ್ ರೈಟಿಂಗ್ ನ ಮುಖ್ಯ ಹಂತವು ವಿಭಾಗ ಅಥವಾ ಕಚೇರಿ ಮಟ್ಟದಲ್ಲಿರುತ್ತದೆ. ಇದು ಜೀವ ವಿಮೆಯ ಪ್ರಸ್ತಾಪವನ್ನು ಸ್ವೀಕರಿಸುವ ಬಗ್ಗೆ ಮತ್ತು ಸ್ವೀಕರಿಸುವುದಾದರೆ ಯಾವ ನಿಯಮಗಳ ಮೇಲೆ ಎಂಬುದನ್ನು ನಿರ್ಧರಿಸಲು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಪರಿಗಣಿಸುವ ತಜ್ಞರು ಮತ್ತು ವ್ಯಕ್ತಿಗಳನ್ನು ಒಳಗೊಂಡಿರುತ್ತದೆ.

## 4. ಅಂಡರ್ ರೈಟಿಂಗ್ ನ ವಿಧಾನಗಳು

**ಚಿತ್ರ 2 : ಅಂಡರ್ ರೈಟಿಂಗ್ ನ ವಿಧಾನಗಳು**

**ಅಂಡರ್ ರೈಟಿಂಗ್ ವಿಧಾನಗಳು**

- ನಿರ್ಣಯ ವಿಧಾನ
- ಸಂಖ್ಯಾತ್ಮಕ ವಿಧಾನ

ಅಂಡರ್ ರೈಟರ್ ರು ಈ ಉದ್ದೇಶಕ್ಕಾಗಿ ಎರಡು ರೀತಿಯ ವಿಧಾನಗಳನ್ನು ಬಳಸಬಹುದು:

| ನಿರ್ಣಯ ವಿಧಾನ | ಸಂಖ್ಯಾತ್ಮಕ ವಿಧಾನ |
|---|---|
| ಈ ವಿಧಾನದಡಿಯಲ್ಲಿ, ವಿಶೇಷವಾಗಿ ಸಂಕೀರ್ಣವಾದ ಪ್ರಕರಣವನ್ನು ನಿರ್ಧರಿಸುವಾಗ ವ್ಯಕ್ತಿನಿಷ್ಠ ನಿರ್ಣಯವನ್ನು ಬಳಸಲಾಗುತ್ತದೆ. | ಈ ವಿಧಾನದಡಿಯಲ್ಲಿ ಅಂಡರ್ ರೈಟರ್ ರು ಎಲ್ಲ ಋಣಾತ್ಮಕ ಅಥವಾ ಪ್ರತಿಕೂಲ ಅಂಶಗಳಿಗೆ ಧನಾತ್ಮಕ ರೇಟಿಂಗ್ ಅಂಕಗಳನ್ನು ನೀಡುತ್ತಾರೆ (ಯಾವುದೇ ಧನಾತ್ಮಕ ಅಥವಾ ಅನುಕೂಲಕರ ಅಂಶಗಳಿಗೆ ಋಣಾತ್ಮಕ ಅಂಕಗಳು). |
| **ಉದಾಹರಣೆ:** ತೊಂದರೆಗೊಳಗಾದ ದೇಶ/ಪ್ರದೇಶದಲ್ಲಿ ತಂಗಿರುವ ವ್ಯಕ್ತಿಗೆ ಜೀವ ವಿಮೆಯನ್ನು ನೀಡಬಹುದೇ ಎಂದು ನಿರ್ಧರಿಸುವುದು. | **ಉದಾಹರಣೆ:** ಹೃದಯ ಸಂಬಂಧಿ ಕಾಯಿಲೆಗಳ ಮತ್ತು/ಅಥವಾ ಕುಟುಂಬದಲ್ಲಿಯ ಕಡಿಮೆ ವಯಸ್ಸಿನಲ್ಲಿಯ ಸಾವುಗಳ ಇತಿಹಾಸವನ್ನು ಹೊಂದಿರುವ ವ್ಯಕ್ತಿಗೆ ಧನಾತ್ಮಕ ಅಂಕಗಳನ್ನು ನಿಗದಿಪಡಿಸಬಹುದು. ಹೀಗೆ ನಿಯೋಜಿಸಲಾದ ಅಂಕಗಳ ಒಟ್ಟು ಸಂಖ್ಯೆಯು ಒಳಗೊಂಡಿರುವ ಅಪಾಯದ ಪ್ರಮಾಣವನ್ನು ನಿರ್ಧರಿಸುವಲ್ಲಿ ಅಂಡರ್ ರೈಟರ್ ರಿಗೆ ಸಹಾಯ ಮಾಡುತ್ತದೆ. |
| ಇಂತಹ ಸಂದರ್ಭಗಳಲ್ಲಿ, ವಿಭಾಗವು ವೈದ್ಯಕೀಯ ತೀರ್ಪುಗಾರ(ರೆಫರಿ)ರೆಂದು ಕರೆಯಲ್ಪಡುವ ವೈದ್ಯಕೀಯ ವೈದ್ಯ ತಜ್ಞರ ಅಭಿಪ್ರಾಯವನ್ನು ಪಡೆಯಬಹುದು. | ಈ ಧನಾತ್ಮಕ / ಋಣಾತ್ಮಕ ಅಂಶಗಳ ಒಟ್ಟು ಮೊತ್ತವನ್ನು ಮತ್ತು/ಅಥವಾ ಹೆಚ್ಚಿನ ಮರಣಸಾಧ್ಯತೆಯ ಬೆಲೆ(ಎಕ್ಸ್ಟ್ರಾ ಮಾರ್ಟಾಲಿಟಿ ರೇಟಿಂಗ್) (ಈಎಮ್ಆರ್) ಎಂದು ಉಲ್ಲೇಖಿಸಲಾಗುತ್ತದೆ. ಹೆಚ್ಚಿನ ಈಎಮ್ಆರ್ ಹೊಂದಿರುವ ಜೀವ/ವ್ಯಕ್ತಿಯು ವಿಮೆಗಾಗಿ ಕೆಳದರ್ಜೆಯದ್ದಾಗಿದೆ ಎಂದು ಸೂಚಿಸುತ್ತದೆ. |

### ಅಂಡರ್ ರೈಟಿಂಗ್ ನಿರ್ಧಾರಗಳು

ಈಗ ವಿಮಾದಾರರು ಅಂಡರ್ ರೈಟಿಂಗ್ ಗಾಗಿ ಪ್ರಸ್ತಾಪಿಸಲಾದ ಜೀವ/ವ್ಯಕ್ತಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬಹುದಾದ ವಿವಿಧ ರೀತಿಯ ನಿರ್ಧಾರಗಳನ್ನು ನಾವು ಪರಿಗಣಿಸೋಣ.

a) **ಸಾಮಾನ್ಯ ದರ(ಓಆರ್)(ಆರ್ಡಿನರಿ ರೇಟ್)ಗಳಲ್ಲಿ ಸ್ವೀಕಾರವು** ಅತ್ಯಂತ ಸಾಮಾನ್ಯ ನಿರ್ಧಾರವಾಗಿದೆ. ಸಾಮಾನ್ಯ ಅಥವಾ ಪ್ರಮಾಣಿತ ಜೀವ/ವ್ಯಕ್ತಿಗೆ ಅನ್ವಯಿಸುವ ಅದೇ ಕಂತು ದರದಲ್ಲಿ ಅಪಾಯವನ್ನು ಸ್ವೀಕರಿಸಲಾಗುತ್ತದೆ ಎಂದು ಈ ಬೆಲೆ ಸೂಚಿಸುತ್ತದೆ.

**ಚಿತ್ರ 3: ಅಂಡರ್ ರೈಟಿಂಗ್ ನಿರ್ಧಾರಗಳು**




b) **ಹೆಚ್ಚುವರಿಯೊಂದಿಗೆ ಸ್ವೀಕಾರ:** ಇದು ಹೆಚ್ಚಿನ ಉಪ-ಪ್ರಮಾಣಿತ ಅಪಾಯಗಳೊಂದಿಗೆ ವ್ಯವಹರಿಸುವ ಸಾಮಾನ್ಯ ಮಾರ್ಗವಾಗಿದೆ. ಇದು ಕಂತಿನ ಕೋಷ್ಟಕದ ದರಕ್ಕಿಂತ ಹೆಚ್ಚುವರಿ ಶುಲ್ಕವನ್ನು ಒಳಗೊಂಡಿರುತ್ತದೆ.

c) **ವಿಮಾಮೊತ್ತದ ಮೇಲೆ ಅಡಮಾನದೊಂದಿಗೆ ಸ್ವೀಕಾರ:** ಅಡಮಾನವೆಂದರೆ ಕ್ಲೇಮ್ ನ ಸಂದರ್ಭದಲ್ಲಿ ಪಾವತಿಸಬೇಕಾದ ಪ್ರಯೋಜನದ ಮೊತ್ತದ ಮೇಲೆ (ಭಾಗಶಃ ಅಥವಾ ಸಂಪೂರ್ಣ) ಜೀವ ವಿಮಾ ಕಂಪನಿಯು ಹಿಡಿತವನ್ನು ಜಾರಿ ಮಾಡಬಹುದು.

**ಉದಾಹರಣೆ :** ಕ್ಷಯ(ಟಿಬಿ)ದಂತಹ ಕಾಯಿಲೆಯಿಂದ ಬಳಲುತ್ತಿರುವ ಮತ್ತು ಚೇತರಿಸಿಕೊಂಡಿರುವ **ವಿಮಾದಾರರ ಪ್ರಕರಣವನ್ನು ಪರಿಗಣಿಸಿ**. ಈ ವ್ಯಕ್ತಿಯು ಒಂದು ನಿರ್ದಿಷ್ಟ ಅವಧಿಯೊಳಗೆ ಕ್ಷಯ(ಟಿಬಿ)ದ ಮರುಕಳಿಸುವಿಕೆಯಿಂದ ಮರಣಹೊಂದಿದರೆ, ಮರಣದ ಲಾಭದ ಕಡಿಮೆ ಮಾಡಲಾದ ಮೊತ್ತವನ್ನು ಮಾತ್ರ ಪಾವತಿಸಬಹುದು ಎಂದು ಅಡಮಾನದೊಂದಿಗಿನ ಸ್ವೀಕಾರವು ಸೂಚಿಸುತ್ತದೆ.

**d) ನಿರ್ಬಂಧಾತ್ಮಕ ಷರತ್ತಿನೊಂದಿಗೆ ಸ್ವೀಕಾರ:** ಕೆಲವು ರೀತಿಯ ಅಪಾಯಗಳಿಗೆ ಕೆಲವು ಸಂದರ್ಭಗಳಡಿಯಲ್ಲಿಯ ಸಾವಿನ ಸಂದರ್ಭದಲ್ಲಿ ಸಾವಿನ ಪ್ರಯೋಜನವನ್ನು ಮಿತಿಗೊಳಿಸುವ ನಿರ್ಬಂಧಾತ್ಮಕ ಷರತ್ತು ಅನ್ವಯಿಸಬಹುದು.

**ಉದಾಹರಣೆಗೆ,** ಹೆರಿಗೆಯಾದ ಮೂರು ತಿಂಗಳೊಳಗೆ ಸಂಭವಿಸುವ ಗರ್ಭಧಾರಣೆಯ ಸಂಬಂಧಿತ ಸಾವುಗಳ ಸಂದರ್ಭದಲ್ಲಿ ಪಾವತಿಸಬೇಕಾದ ವಿಮೆಯನ್ನು ಮಿತಿಗೊಳಿಸುವ ಗರ್ಭಿಣಿ ಮಹಿಳೆಯರಿಗೆ ವಿಧಿಸಲಾದ ಗರ್ಭಧಾರಣೆಯ ಷರತ್ತು.

**e) ನಿರಾಕರಣೆ ಅಥವಾ ಮುಂದೂಡುವಿಕೆ :** ಕೊನೆಯದಾಗಿ, ಜೀವ ವಿಮಾ ಅಂಡರ್ ರೈಟರ್ ರು ವಿಮೆಯ ಪ್ರಸ್ತಾಪವನ್ನು ನಿರಾಕರಿಸಲು ಅಥವಾ ತಿರಸ್ಕರಿಸಲು ನಿರ್ಧರಿಸಬಹುದು. ಕೆಲವು ಆರೋಗ್ಯ/ಇತರ ವೈಶಿಷ್ಟ್ಯಗಳು ತುಂಬಾ ಪ್ರತಿಕೂಲವಾಗಿದ್ದು ಅವು ಅಪಾಯವನ್ನು ಗಣನೀಯವಾಗಿ ಹೆಚ್ಚಿಸಿದಾಗ ಇದು ಸಂಭವಿಸುತ್ತದೆ.

**ಉದಾಹರಣೆ :** ಕ್ಯಾನ್ಸರ್ ನಿಂದ ಬಳಲುತ್ತಿರುವ ಮತ್ತು ಉಪಶಮನದ ಸಾಧ್ಯತೆ ಕಡಿಮೆಯಿರುವ ವ್ಯಕ್ತಿ, ನಿರಾಕರಣೆ ಪಡೆಯುಬಹುದಾದ ಅಭ್ಯರ್ಥಿಯಾಗಿರುತ್ತಾರೆ,

ಅದೇ ರೀತಿಯಾಗಿ, ಕೆಲವು ಸಂದರ್ಭಗಳಲ್ಲಿ ಪರಿಸ್ಥಿತಿ ಸುಧಾರಿಸಿ ಹೆಚ್ಚು ಅನುಕೂಲಕರವಾಗುವವರೆಗೆ ಅಪಾಯದ ಸ್ವೀಕಾರವನ್ನು ಮುಂದೂಡುವುದು ವಿವೇಕಯುತವಾಗಿರುತ್ತದೆ.

ಉದಾಹಕರಣೆ

ಗರ್ಭಾಶಯದ ಶಸ್ತ್ರಚಿಕಿತ್ಸೆಯನ್ನು ಹೊಂದಿರುವ ಮಹಿಳೆಗೆ ಅವಳ ಜೀವದ ಮೇಲೆ ಜೀವ ವಿಮೆಯನ್ನು ಅನುಮತಿಸುವ ಮೊದಲು ಶಸ್ತ್ರಚಿಕಿತ್ಸೆಯ ನಂತರದ ಯಾವುದೇ ತೊಡಕುಗಳು ಕಣ್ಮರೆಯಾಗಲು ಅವಕಾಶ ನೀಡಲು ಕೆಲವು ತಿಂಗಳುಗಳವರೆಗೆ ಕಾಯುವಂತೆ ಕೇಳಬಹುದು.

**ನಿಮ್ಮನ್ನು ಪರೀಕ್ಷಿಸಿ 1**

ಈ ಕೆಳಗೆ ನೀಡಲಾದ ಯಾವ ಪ್ರಕರಣಗಳನ್ನು ಜೀವ ವಿಮಾಗಾರರು ನಿರಾಕರಿಸುವ ಅಥವಾ ಮುಂದೂಡುವ ಸಾಧ್ಯತೆಯಿದೆ**?**

I. ಒಬ್ಬ ಆರೋಗ್ಯವಂತ 18 ವರ್ಷದ ವ್ಯಕ್ತಿ

II. ಒಬ್ಬ ಆಟಗಾರ

III. ಏಡ್ಸ್ ನಿಂದ ಬಳಲುತ್ತಿರುವ ಒಬ್ಬ ವ್ಯಕ್ತಿ

IV. ತನ್ನ ಸ್ವಂತದ ಆದಾಯವನ್ನು ಹೊಂದಿಲ್ಲದ ಒಬ್ಬ ಗೃಹಿಣಿ

## B. ವೈದ್ಯಕೀಯವಲ್ಲದ ಅಂಡರ್ ರೈಟಿಂಗ್

### 1. ವೈದ್ಯಕೀಯವಲ್ಲದ ಅಂಡರ್ ರೈಟಿಂಗ್

ಸಾಮಾನ್ಯವಾಗಿ ವಿಮೆ ಮಾಡಬೇಕಾದ ಜೀವ/ವ್ಯಕ್ತಿಯ ವಿಮಾ ಸಾಧ್ಯತೆಯನ್ನು ಪರೀಕ್ಷಿಸಲು ವೈದ್ಯಕೀಯ ಪರೀಕ್ಷೆಯನ್ನು ನಡೆಸದೆಯೇ ಹೆಚ್ಚಿನ ಸಂಖ್ಯೆಯ ಜೀವ/ವ್ಯಕ್ತಿಗಳ ವಿಮಾ ಪ್ರಸ್ತಾಪಗಳನ್ನು ವಿಮೆಗಾಗಿ ಆಯ್ಕೆ ಮಾಡಬಹುದು. ಅಂತಹ ಪ್ರಕರಣಗಳನ್ನು **ವೈದ್ಯಕೀಯವಲ್ಲದ ಪ್ರಸ್ತಾವನೆಗಳೆಂದು** ಕರೆಯಲಾಗುತ್ತದೆ.

ಕೆಲವು ವಿಧದ ಪಾಲಿಸಿಗಳಲ್ಲಿ ಒಳಗೊಂಡಿರುವ ವೆಚ್ಚಗಳನ್ನೊಳಗೊಂಡತೆ ಅನೇಕ ಕಾರಣಗಳ ದೃಷ್ಟಿಯಿಂದ ಜೀವ ವಿಮಾಗಾರರು ವೈದ್ಯಕೀಯ ಪರೀಕ್ಷೆಗೆ ಒತ್ತಾಯಿಸದೆ ವಿಮೆಯನ್ನು ನೀಡುತ್ತಾರೆ

### 2. ವೈದ್ಯಕೀಯವಲ್ಲದ ಅಂಡರ್ ರೈಟಿಂಗ್ ಗಾಗಿ ಷರತ್ತುಗಳು

ಆದಾಗ್ಯೂ ವೈದ್ಯಕೀಯವಲ್ಲದ ಅಂಡರ್ ರೈಟಿಂಗ್ ಕೆಲವು ವರ್ಗದ ಜೀವಗಳಿಗೆ ಅನ್ವಯವಾಗುವಂತಹ ಷರತ್ತುಗಳು, ವಿಮೆಯ ಕೆಲವು ಯೋಜನೆಗಳು, ವಿಮಾ ಮೊತ್ತದ ಕೆಲವು ಹೆಚ್ಚಿನ ಮಿತಿಗಳು, ಪ್ರವೇಶ ವಯಸ್ಸಿನ ಮಿತಿಗಳು, ವಿಮೆಯ ಗರಿಷ್ಠ ಅವಧಿ ಇತ್ಯಾದಿಗಳನ್ನು ಅನುಸರಿಸಲು ಕೇಳುತ್ತದೆ.

### 3. ಅಂಡರ್ ರೈಟಿಂಗ್ ಅನ್ನು ನಿರ್ಧರಿಸುವ ಅಂಶಗಳು

ನಿರ್ಧರಿಸುವ ಅಂಶಗಳು ಹಣಕಾಸಿನ ಪರಿಸ್ಥಿತಿ, ಜೀವನ ಶೈಲಿ, ಅಭ್ಯಾಸಗಳು, ಕುಟುಂಬದ ಇತಿಹಾಸ, ಆರೋಗ್ಯದ ವೈಯಕ್ತಿಕ ಇತಿಹಾಸ ಮತ್ತು ನಿರೀಕ್ಷಿತ ವಿಮಾದಾರರ ಜೀವನದಲ್ಲಿ ಅಪಾಯವನ್ನುಂಟುಮಾಡುವ ಮತ್ತು ಅಪಾಯವನ್ನು ಹೆಚ್ಚಿಸುವ ಇತರ ವೈಯಕ್ತಿಕ ಸಂದರ್ಭಗಳಿಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಉಲ್ಲೇಖಿಸುತ್ತವೆ. ಅಂಡರ್ ರೈಟಿಂಗ್ ಈ ಅಪಾಯಗಳನ್ನು ಮತ್ತು ಅವುಗಳ ಸಂಭಾವ್ಯ ಪ್ರಭಾವವನ್ನು ಗುರುತಿಸುವುದನ್ನು ಒಳಗೊಂಡಿರುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ಅಪಾಯವನ್ನು ವರ್ಗೀಕರಿಸುತ್ತದೆ.

ನಿರ್ಧರಿಸುವ ಅಂಶಗಳನ್ನು ನೈತಿಕ ಅಪಾಯಕ್ಕೆ ಕೊಡುಗೆ ನೀಡುವ ಮತ್ತು ದೈಹಿಕ [ವೈದ್ಯಕೀಯ] ಅಪಾಯಗಳಿಗೆ ಕೊಡುಗೆ ನೀಡುವ ಅಂಶಗಳೆಂದು ಸ್ಥೂಲವಾಗಿ ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಜೀವ ವಿಮಾ ಕಂಪನಿಗಳು ಸಾಮಾನ್ಯವಾಗಿ ತಮ್ಮ ಅಂಡರ್ ರೈಟಿಂಗ್ ಅನ್ನು ಅದಕ್ಕೆ ಅನುಗುಣವಾಗಿ ವರ್ಗಗಳಲ್ಲಿ ವಿಂಗಡಿಸುತ್ತವೆ. ನೈತಿಕ ಅಪಾಯಕ್ಕೆ ಕಾರಣವಾಗುವ ಆದಾಯ, ಉದ್ಯೋಗ, ಜೀವನಶೈಲಿ ಮತ್ತು ಅಭ್ಯಾಸಗಳಂತಹ ಅಂಶಗಳನ್ನು ಹಣಕಾಸಿನ ಅಂಡರ್ ರೈಟಿಂಗ್ ನ ಭಾಗವಾಗಿ ನಿರ್ಣಯಿಸಲಾಗುತ್ತದೆ, ಆದರೆ ಆರೋಗ್ಯದ ವೈದ್ಯಕೀಯ ಅಂಶಗಳು ವೈದ್ಯಕೀಯ ಅಂಡರ್ ರೈಟಿಂಗ್ ಅಡಿಯಲ್ಲಿ ಬರುತ್ತವೆ.

#### a) ಸ್ತ್ರೀ ವಿಮೆ

ಸಾಮಾನ್ಯವಾಗಿ ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಆಯುಷ್ಯವನ್ನು ಹೊಂದಿರುತ್ತಾರೆ. ಆದಾಗ್ಯೂ ಅವರು ನೈತಿಕ ಅಪಾಯಕ್ಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳನ್ನು ಎದುರಿಸಬಹುದು. ಏಕೆಂದರೆ ಭಾರತೀಯ ಸಮಾಜದಲ್ಲಿ ಅನೇಕ ಮಹಿಳೆಯರು ಪುರುಷ ಪ್ರಾಬಲ್ಯ ಮತ್ತು ಸಾಮಾಜಿಕ ಶೋಷಣೆಗೆ

ಬಲಿಯಾಗುತ್ತಾರೆ. ವರದಕ್ಷಿಣೆ ಸಾವಿನಂತಹ ಅನಿಷ್ಟಗಳು ಇಂದಿಗೂ ಇವೆ. ಗರ್ಭಧಾರಣೆಯೊಂದಿಗೆ ಸಂಬಂಧಿಸಿದ ಸಮಸ್ಯೆಗಳಿಂದ ಸಹ ಮಹಿಳೆಯರ ಆಯುಷ್ಯದ ಮೇಲೆ ಪರಿಣಾಮ ಬೀರಬಹುದು.

ಮಹಿಳೆಯರ ವಿಮೆಯನ್ನು ವಿಮೆಯ ಅಗತ್ಯತೆ ಮತ್ತು ಕಂತುಗಳನ್ನು ಪಾವತಿಸುವ ಸಾಮರ್ಥ್ಯದಿಂದ ನಿಯಂತ್ರಿಸಲಾಗುತ್ತದೆ. ವಿಮಾ ಕಂಪನಿಗಳು ತಮ್ಮ ಸ್ವಂತ ಆದಾಯವನ್ನು ಗಳಿಸಿದ ಮಹಿಳೆಯರಿಗೆ ಮಾತ್ರ ಪೂರ್ಣ ವಿಮೆಯನ್ನು ನೀಡಲು ನಿರ್ಧರಿಸಬಹುದು ಮತ್ತು ಇತರ ವರ್ಗದ ಮಹಿಳೆಯರಿಗೆ ಮಿತಿಗಳನ್ನು ವಿಧಿಸಬಹುದು. ಅದೇ ರೀತಿ ಗರ್ಭಿಣಿಯರಿಗೆ ಕೆಲವು ಷರತ್ತುಗಳನ್ನು ವಿಧಿಸಬಹುದು.

### b) ಅಪ್ರಾಪ್ತ ವಯಸ್ಕರು

ಅಪ್ರಾಪ್ತ ವಯಸ್ಕರಿಗೆ ಒಪ್ಪಂದ ಮಾಡುವ ಅಧಿಕಾರವಿರುವುದಿಲ್ಲ. ಆದ್ದರಿಂದ ಅಪ್ರಾಪ್ತ ವಯಸ್ಕರ ಜೀವವನ್ನು ಕುರಿತು ವಿಮೆಯ ಪ್ರಸ್ತಾವನೆಯನ್ನು ಅವರ ಪೋಷಕರು ಅಥವಾ ಕಾನೂನು ಪಾಲಕರ ಸ್ಥಾನದಲ್ಲಿರುವ ಅಪ್ರಾಪ್ತ ವಯಸ್ಕರಿಗೆ ಸಂಬಂಧಿಸಿದ ಇನ್ನೊಬ್ಬ ವ್ಯಕ್ತಿ ಸಲ್ಲಿಸಬೇಕು. ಸಾಮಾನ್ಯವಾಗಿ ಅಪ್ರಾಪ್ತ ವಯಸ್ಕರು ತಮ್ಮದೇ ಆದ ಆದಾಯವನ್ನು ಹೊಂದಿರುವುದಿಲ್ಲವಾದ್ದರಿಂದ ವಿಮೆಯ ಅಗತ್ಯವನ್ನು ಖಚಿತಪಡಿಸಿಕೊಳ್ಳುವುದು ಸಹ ಅಗತ್ಯವಾಗಿದೆ. ಅಪ್ರಾಪ್ತ ವಯಸ್ಕರಿಗೆ ವಿಮೆಯನ್ನು ನೀಡುವುದನ್ನು ಪರಿಗಣಿಸುವಾಗ ಸಾಮಾನ್ಯವಾಗಿ ಈ ಕೆಳಗೆ ನೀಡಿದ ಮೂರು ಷರತ್ತು ಪೂರೈಸಬೇಕಾಗುತ್ತದೆ:

**i. ಅವರು ಸರಿಯಾಗಿ ಅಭಿವೃದ್ಧಿ ಹೊಂದಿದ ದೇಹರಚನೆ/ದೇಹಸ್ಥಿತಿಯನ್ನು ಹೊಂದಿದ್ದಾರೆಯೇ**

ಸರಿಯಾಗಲ್ಲದ ದೇಹರಚನೆ/ದೇಹಸ್ಥಿತಿಯು ಕುಪೋಷಣೆ(ಸರಿಯಾಗಿ ಪೋಷಣೆ ಇಲ್ಲದಿರುವುದು) ಅಥವಾ ಇತರ ಆರೋಗ್ಯ ಸಮಸ್ಯೆಗಳ ಪರಿಣಾಮವಾಗಿ ಗಂಭೀರ ಅಪಾಯಗಳನ್ನುಂಟುಮಾಡಬಹುದು.

**ii. ಸರಿಯಾದ ಕೌಟುಂಬಿಕ ಮತ್ತು ವೈಯಕ್ತಿಕ ಇತಿಹಾಸ.**

ಇಲ್ಲಿ ಪ್ರತಿಕೂಲ ಸೂಚ್ಯಾಂಕಗಳಿದ್ದರೆ, ಅದು ಅಪಾಯಗಳನ್ನುಂಟುಮಾಡಬಹುದು.

**iii. ಕುಟುಂಬವು ಸಮರ್ಪಕವಾಗಿ ವಿಮೆ ಮಾಡಲ್ಪಟ್ಟಿದೆಯೇ**

ಕುಟುಂಬವು ವಿಮೆ ಮಾಡುವ ಸಂಸ್ಕೃತಿಯನ್ನು ಹೊಂದಿದೆಯೇ ಎಂದು ಪರಿಶೀಲಿಸುವುದು ಅವಶ್ಯಕವಾಗಿದೆ. ಅಪ್ರಾಪ್ತರ ಕುಟುಂಬದ ಯಾವುದೇ ಇತರ ಸದಸ್ಯರು ವಿಮೆ ಮಾಡಿರದಿದ್ದರೆ ಅಂಡರ್ ರೈಟರ್ ರು ಜಾಗರೂಕರಾಗಿರಬೇಕು. ವಿಮೆಯ ಮೊತ್ತವು ಸಾಮಾನ್ಯವಾಗಿ ಪೋಷಕರ ವಿಮಾಮೊತ್ತಕ್ಕೆ ಜೋಡಿಸಲ್ಪಡುತ್ತದೆ.

### c) ದೊಡ್ಡದಾದ ವಿಮಾಮೊತ್ತ

ಪ್ರಸ್ತಾಪಿಸಲ್ಪಟ್ಟ ವಿಮಾದಾರರ ವಾರ್ಷಿಕ ಆದಾಯಕ್ಕೆ ಹೋಲಿಸಿದರೆ ವಿಮೆಯ ಮೊತ್ತವು ತುಂಬಾ ದೊಡ್ಡದಾಗಿದ್ದರೆ ಅಂಡರ್ ರೈಟರ್ ರು ಜಾಗರೂಕರಾಗಿರಬೇಕು. ಸಾಮಾನ್ಯವಾಗಿ ವಿಮಾ ಮೊತ್ತವು ಒಬ್ಬರ ವಾರ್ಷಿಕ ಆದಾಯದ ಹತ್ತರಿಂದ ಹನ್ನೆರಡು ಪಟ್ಟು ಹೆಚ್ಚು ಎಂದು ಊಹಿಸಬಹುದು. ಅನುಪಾತವು

ಇದಕ್ಕಿಂತ ಹೆಚ್ಚಿನದಾಗಿದ್ದರೆ, ಅದು ವಿಮಾಗಾರರ ವಿರುದ್ಧ ನಡೆಯಬಹುದಾದ ಆಯ್ಕೆಯ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

| ಉದಾಹರಣೆ |
|---|

ಒಬ್ಬ ವ್ಯಕ್ತಿಯ ವಾರ್ಷಿಕ ಆದಾಯ ರೂ. 5 ಲಕ್ಷಗಳಾಗಿದ್ದು ರೂ. 3 ಕೋಟಿಗಳ ಜೀವ ವಿಮಾ ರಕ್ಷಣೆಗೆ ಪ್ರಸ್ತಾಪಿಸಿದ್ದರೆ ಇದು ಆತಂಕಕ್ಕೆ ಕಾರಣವಾಗುತ್ತದೆ.

ಆತ್ಮಹತ್ಯೆಯ ನಿರೀಕ್ಷೆ ಅಥವಾ ಆರೋಗ್ಯದಲ್ಲಿ ನಿರೀಕ್ಷಿತ ಕ್ಷೀಣಿಸುವಿಕೆಯ ಪರಿಣಾಮವಾಗಿ ಅಂತಹ ದೊಡ್ಡ ಮೊತ್ತದ ವಿಮೆಯನ್ನು ಪ್ರಸ್ತಾಪಿಸುವ ಸಾಧ್ಯತೆಯ ಕಾರಣದಿಂದಾಗಿ ವಿಶಿಷ್ಟವಾಗಿ ಅಂತಹ ಸಂದರ್ಭಗಳು ಚಿಂತೆಗೆ ಕಾರಣವಾಗಬಹುದು. ಅಂತಹ ದೊಡ್ಡ ಮೊತ್ತಕ್ಕೆ ಮೂರನೇ ಕಾರಣವೆಂದರೆ ಮಾರಾಟಗಾರರಿಂದ ಅತಿಯಾದ ತಪ್ಪು ಮಾರಾಟವಾಗಿರಬಹುದು.

ದೊಡ್ಡ ಮೊತ್ತದ ವಿಮೆಯೆಂದರೆ ಅನುಪಾತದಲ್ಲಿ ಕಂತುಗಳು ಸಹ ಹೆಚ್ಚಾಗುತ್ತವೆ ಮತ್ತು ಅಂತಹ ಕಂತುಗಳ ಪಾವತಿಯನ್ನು ಮುಂದುವರಿಸಲಾಗುತ್ತದೆಯೇ ಎಂಬ ಪ್ರಶ್ನೆಯು ಹುಟ್ಟುತ್ತದೆ. ಸಾಮಾನ್ಯವಾಗಿ, ಪಾವತಿಸಬೇಕಾದ ಕಂತು ವ್ಯಕ್ತಿಯ ವಾರ್ಷಿಕ ಆದಾಯದ ಮೂರನೇ ಒಂದು ಭಾಗದಷ್ಟಿರಬೇಕು

**d) ವಯಸ್ಸು**

ಮರಣ ಸಾಧ್ಯತೆಯ ಅಪಾಯವು ವಯಸ್ಸಿನೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದೆ. ಹೆಚ್ಚು ವಯಸ್ಸಿನ ಜನರಿಗೆ ವಿಮೆ ನೀಡುವುದನ್ನು ಪರಿಗಣಿಸುವಾಗ ಅಂಡರ್ ರೈಟರ್ ರು ಜಾಗರೂಕರಾಗಿರಬೇಕು.

| **ಉದಾಹರಣೆ** |
|---|

50 ವರ್ಷ ವಯಸ್ಸಿನ ನಂತರ ಮೊದಲ ಬಾರಿಗೆ ವಿಮೆಯನ್ನು ಪ್ರಸ್ತಾಪಿಸಿದ್ದರೆ, ನೈತಿಕ ಅಪಾಯವನ್ನು ಅನುಮಾನಿಸುವ ಮತ್ತು ವಿಮೆಯನ್ನು ಮೊದಲೇ ಏಕೆ ತೆಗೆದುಕೊಳ್ಳಲಿಲ್ಲ ಎಂದು ವಿಚಾರಿಸುವ ಅವಶ್ಯಕತೆಯಿದೆ.

ಹೃದಯ ಮತ್ತು ಮೂತ್ರಪಿಂಡ ವೈಫಲ್ಯದಂತಹ ಕ್ಷೀಣಗೊಳ್ಳುವ ಕಾಯಿಲೆಗಳ ಸಂಭವವು ವಯಸ್ಸಾದಂತೆ ಹೆಚ್ಚಾಗುತ್ತದೆ ಮತ್ತು ಹೆಚ್ಚು ವಯಸ್ಸಿನವರಲ್ಲಿ ಹೆಚ್ಚಾಗುತ್ತದೆ ಎಂಬುದನ್ನು ನಾವು ಗಮನಿಸಬೇಕು. ಹೆಚ್ಚಿನ ಮೊತ್ತದ ವಿಮೆ/ಹೆಚ್ಚು ವಯಸ್ಸಿನ ಅಥವಾ ಈ ಎರಡರ ಸಂಯೋಜನೆಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸಿದಾಗ ಜೀವ ವಿಮಾಗಾರರು ಕೆಲವು ವಿಶೇಷ ವರದಿಗಳನ್ನು ಸಹ ಕೇಳಬಹುದು.

| **ಉದಾಹರಣೆ** |
|---|

ಇಸಿಜಿ; ಇಇಜಿ; ಎದೆಯ ಎಕ್ಸ್-ರೇ ಮತ್ತು ರಕ್ತದಲ್ಲಿನ ಸಕ್ಕರೆ ಪರೀಕ್ಷೆ ಅಂತಹ ವರದಿಗಳ ಉದಾಹರಣೆಗಳಾಗಿವೆ. ಈ ಪರೀಕ್ಷೆಗಳು ಪ್ರಸ್ತಾವಿತ ಜೀವ/ವ್ಯಕ್ತಿಯ ಆರೋಗ್ಯದ ಬಗ್ಗೆ ಪ್ರಸ್ತಾವನೆಯಲ್ಲಿ

ನೀಡಲಾದ ಉತ್ತರಗಳು ಅಥವಾ ಸಾಮಾನ್ಯ ವೈದ್ಯಕೀಯ ಪರೀಕ್ಷೆಗಿಂತ ಆಳವಾದ ಒಳನೋಟಗಳನ್ನು ಒದಗಿಸಬಹುದು.

**ಉದಾಹರಣೆ**

ಪ್ರಸ್ತಾವಿತ ವಿಮಾದಾರನ ನಿವಾಸದ ಸ್ಥಳದಿಂದ ದೂರದಲ್ಲಿರುವ ಶಾಖೆಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದಾಗ ಸಂಶಯಿಸಬೇಕಾಗುತ್ತದೆ.

ಓರ್ವರ ವಾಸಸ್ಥಳದ ಬಳಿ ಅರ್ಹ ವೈದ್ಯಕೀಯ ಪರೀಕ್ಷಕರು ಲಭ್ಯವಿದ್ದಾಗಲೂ ಬೇರೆಡೆ ವೈದ್ಯಕೀಯ ಪರೀಕ್ಷೆಯನ್ನು ಮಾಡಿದಾಗ ಸಂಶಯಿಸಬೇಕಾಗುತ್ತದೆ.

ಮೂರನೆಯ ಪ್ರಕರಣವೆಂದರೆ ಸ್ಪಷ್ಟವಾದ ವಿಮಾಸಕ್ತಿಯಿಲ್ಲದ ಇನ್ನೊಬ್ಬರ ಜೀವದ ಮೇಲೆ ವಿಮಾ ಪ್ರಸ್ತಾಪವನ್ನು ಮಾಡಿದಾಗ ಅಥವಾ ನಾಮನಿರ್ದೇಶಿತರು ಪ್ರಸ್ತಾಪಿಸಲಾದ ಜೀವ/ವ್ಯಕ್ತಿಯ ಸಮೀಪದ ಅವಲಂಬಿತರಾಗಿಲ್ಲದಿದ್ದಾಗ.

ಅಂತಹ ಪ್ರತಿಯೊಂದು ಪ್ರಕರಣದಲ್ಲಿ ವಿಚಾರಣೆಯನ್ನು ನಡೆಸಬಹುದು. ಕೊನೆಯದಾಗಿ, ಏಜೆಂಟರು ಜೀವ ವಿಮಾದಾರರಿಗೆ ಸಂಬಂಧಿಸಿದ್ದರೆ, ಏಜೆನ್ಸಿ ಮ್ಯಾನೇಜರ್/ಅಭಿವೃದ್ಧಿ ಅಧಿಕಾರಿಯಂತಹ ಶಾಖೆಯ ಅಧಿಕಾರಿಯಿಂದ ನೈತಿಕ ಅಪಾಯದ ವರದಿಯನ್ನು ಕೇಳಬಹುದು.

### e) ವೃತ್ತಿ

ಔದ್ಯೋಗಿಕ ಅಪಾಯಗಳು ಮೂರು ಮೂಲಗಳಿಂದ ಉಂಟಾಗಬಹುದು:

- ✓ ಅಪಘಾತ
- ✓ ಆರೋಗ್ಯದ ಅಪಾಯ
- ✓ ನೈತಿಕ ಅಪಾಯ

**ಚಿತ್ರ 4: ಔದ್ಯೋಗಿಕ ಅಪಾಯಗಳ ಮೂಲಗಳು**



ಅಪಾಯ

i. ಕೆಲವು ರೀತಿಯ ಉದ್ಯೋಗಗಳು ವ್ಯಕ್ತಿಯನ್ನು ಅಪಘಾತದ ಅಪಾಯಕ್ಕೆ ಒಡ್ಡುವುದರಿಂದ **ಅಪಘಾತದ ಅಪಾಯಗಳು** ಉಂಟಾಗುತ್ತವೆ. ಈ ವರ್ಗದಲ್ಲಿ - ಸರ್ಕಸ್ ಕಲಾವಿದರು, ಸ್ಕ್ಯಾಫೋಲ್ಡಿಂಗ್(ಹೊಸ ಕಟ್ಟಡಗಳ ಕಟ್ಟಡ ಕೆಲಸದಲ್ಲಿ ಹಂದರ ಕಟ್ಟುವವರು) ಕೆಲಸಗಾರರು, ಡೆಮಾಲಿಷನ್(ಕಟ್ಟಡ ಕೆಡುವುವ) ತಜ್ಞರು ಮತ್ತು ಚಲನಚಿತ್ರ ಸಾಹಸ ಕಲಾವಿದರು ಇತ್ಯಾದಿಯಾಗಿ ಅನೇಕ ಸಂಖ್ಯೆಯ ಉದ್ಯೋಗಗಳಿರುತ್ತವೆ.

ii. ಕೆಲಸದ ಸ್ವರೂಪವು ವೈದ್ಯಕೀಯ ದೌರ್ಬಲ್ಯದ ಸಾಧ್ಯತೆಗೆ ಕಾರಣವಾಗುವಂತಹದ್ದಿರುವಾಗ **ಆರೋಗ್ಯದ ಅಪಾಯಗಳು** ಉದ್ಭವಿಸುತ್ತವೆ. ಆರೋಗ್ಯ ಅಪಾಯಗಳಲ್ಲಿ ವಿವಿಧ ರೀತಿಯ ಅಪಾಯಗಳಿರುತ್ತವೆ.

- ✓ **ರಿಕ್ಷಾ ಎಳೆಯುವಂತಹ** ಕೆಲವರ ಕೆಲಸಗಳು ಬಹಳಷ್ಟು ದೈಹಿಕ ಒತ್ತಡವನ್ನು ಒಳಗೊಂಡಿರುತ್ತವೆ ಮತ್ತು ಉಸಿರಾಟದ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತವೆ.
- ✓ ಗಣಿಗಾರಿಕೆ ಧೂಳಿನಂತಹ **ವಿಷಕಾರಿ ಪದಾರ್ಥಗಳು** ಅಥವಾ ರಾಸಾಯನಿಕಗಳು ಮತ್ತು ಪರಮಾಣು ವಿಕಿರಣದಂತಹ ಕ್ಯಾನ್ಸರ್ ಕಾರಕ(ಕ್ಯಾನ್ಸರ್ ರೋಗಕ್ಕೆ ಕಾರಣವಾಗುವ) ಪದಾರ್ಥಗಳು ಒಬ್ಬ ವ್ಯಕ್ತಿಗೆ ಒಡ್ಡಿಕೊಳ್ಳಬಹುದಾದ ಸಂದರ್ಭಗಳು.
- ✓ ಭೂಗತ ಸುರಂಗಗಳು ಅಥವಾ ಆಳವಾದ ಸಮುದ್ರದಂತಹ **ಹೆಚ್ಚಿನ ಒತ್ತಡದ ಪರಿಸರದಲ್ಲಿ** ಕೆಲಸ ಮಾಡುವುದು ತೀವ್ರವಾದ ಡಿಕಂಪ್ರೆಷನ್(ಒತ್ತಡ ಕಡಿತ) ಕಾಯಿಲೆಗೆ ಕಾರಣವಾಗಬಹುದು.
- ✓ ಕೊನೆಯದಾಗಿ, ಕೆಲವು ಕೆಲಸದ ಸಂದರ್ಭಗಳಿಗೆ **ಅತಿಯಾಗಿ ಒಡ್ಡಿಕೊಳ್ಳುವುದು** (ಕಂಪ್ಯೂಟರ್‌ನ ಮುಂದೆ ಇಕ್ಕಟ್ಟಾಗಿ ಕುಳಿತುಕೊಳ್ಳುವುದು ಅಥವಾ ಹೆಚ್ಚು ಧ್ವನಿ ಸ್ಥಳದಲ್ಲಿ ಕೆಲಸ ಮಾಡುವುದು) ದೀರ್ಘಾವಧಿಯಲ್ಲಿ ದೇಹದ ಕೆಲವು ಭಾಗಗಳ ಕಾರ್ಯನಿರ್ವಹಣೆಯನ್ನು ದುರ್ಬಲಗೊಳಿಸಬಹುದು.

iii. ಕೆಲಸವು ಸಾಮೀಪ್ಯವನ್ನು ಒಳಗೊಂಡಿರುವಾಗ ಅಥವಾ ಅಪರಾಧಿ ಅಂಶಗಳ ಕಡೆಗೆ ಅಥವಾ ಮಾದಕವಸ್ತುಗಳು ಮತ್ತು ಮದ್ಯದ ಪ್ರವೃತ್ತಿಯನ್ನು ಉಂಟುಮಾಡುತ್ತಿದ್ದರೆ ನೈತಿಕ ಅಪಾಯವು ಉದ್ಭವಿಸಬಹುದು. ಉದಾಹರಣೆಯೆಂದರೆ ನೈಟ್ ಕ್ಲಬ್ ನಲ್ಲಿರುವ ನರ್ತಕಿ ಅಥವಾ ಮದ್ಯದ ಬಾರ್ ನಡೆಸುವವರು ಅಥವಾ ಅಪರಾಧಿಗಳೊಂದಿಗೆ ಸಂಶಯಿತ ಸಂಬಂಧಗಳನ್ನು ಹೊಂದಿರುವ ಉದ್ಯಮಿಯ 'ಅಂಗರಕ್ಷಕ'. ಸೂಪರ್ ಸ್ಟಾರ್ ಎಂಟರ್ ಟೈನರ್ ರಂತಹ ಕೆಲವು ವ್ಯಕ್ತಿಗಳ ಉದ್ಯೋಗದ ಜೀವನಶೈಲಿಗಳು ಕೆಲವೊಮ್ಮೆ ದುರಂತ ಅಂತ್ಯಗಳಿಗೆ ಕಾರಣವಾಗುವ ಅಮಲೇರಿಸುವ ಜೀವನಶೈಲಿಗೆ ಕಾರಣವಾಗಬಹುದು.

ಉದ್ಯೋಗವು ಅಂತಹ ಅಪಾಯಕಾರಿ ವರ್ಗಕ್ಕೆ ಸೇರಿರುವಾಗ, ವಿಮೆಯ ಅರ್ಜಿದಾರರು ಅವರ ಉದ್ಯೋಗವು ಒಳಗೊಂಡಿರುವ ಕರ್ತವ್ಯಗಳು ಮತ್ತು ಒಡ್ಡಲ್ಪಟ್ಟ ಅಪಾಯಗಳ ಬಗ್ಗೆ ಕೆಲವು ನಿರ್ದಿಷ್ಟ ವಿವರಗಳನ್ನು ಕೇಳುವ ಔದ್ಯೋಗಿಕ ಪ್ರಶ್ನಾವಳಿಯನ್ನು ಪೂರ್ಣಗೊಳಿಸಬೇಕಾಗಬಹುದು. ಒಂದು ಹೆಚ್ಚುವರಿ(ಫ್ಲಾಟ್ ಎಕ್ಸ್ ಟ್ರಾ) (ಉದಾಹರಣೆಗೆ ಪ್ರತಿ ಸಾವಿರ ವಿಮಾ ಮೊತ್ತಕ್ಕೆ ಎರಡು ರೂಪಾಯಿಗಳು)ಯ ರೂಪದಲ್ಲಿ ಉದ್ಯೋಗಕ್ಕೆ ಬೆಲೆಯನ್ನು ವಿಧಿಸಬಹುದು. ವಿಮಾದಾರರ ಉದ್ಯೋಗ ಬದಲಾದಾಗ ಅಂತಹ ಹೆಚ್ಚುವರಿಗಳನ್ನು ಕಡಿಮೆ ಮಾಡಬಹುದು ಅಥವಾ ತೆಗೆದುಹಾಕಬಹುದು.

**f) ಜೀವನಶೈಲಿ ಮತ್ತು ಅಭ್ಯಾಸ(ಚಟ)ಗಳು**

ಜೀವನಶೈಲಿ ಮತ್ತು ಅಭ್ಯಾಸ(ಚಟ)ಗಳು, ವೈಯಕ್ತಿಕ ಜೀವನಶೈಲಿಯ ಗುಣಲಕ್ಷಣಗಳ ವ್ಯಾಪಕ ಶ್ರೇಣಿಯನ್ನು ಒಳಗೊಂಡಿರುವ, ಏಜೆಂಟರ ಗೌಪ್ಯ ವರದಿಗಳು ಮತ್ತು ನೈತಿಕ ಅಪಾಯದ ವರದಿಗಳಲ್ಲಿ ಪಡೆಯಬಹುದಾದ ಅಪಾಯಕ್ಕೆ ಒಡ್ಡಿಕೊಳ್ಳುವುದನ್ನು ಸೂಚಿಸುವ ಪದಗಳಾಗಿವೆ. ವಿಶಿಷ್ಟವಾಗಿ ಮೂರು ಪ್ರಮುಖ ವೈಶಿಷ್ಟ್ಯಗಳಿವೆ:

**ಧೂಮಪಾನ ಮತ್ತು ತಂಬಾಕು ಬಳಕೆ:** ತಂಬಾಕಿನ ಬಳಕೆಯು ಸ್ವತಃ ಅಪಾಯವನ್ನು ಮಾತ್ರವಲ್ಲದೆ ಇತರ ವೈದ್ಯಕೀಯ ಅಪಾಯಗಳನ್ನು ಹೆಚ್ಚಿಸುವಲ್ಲಿ ಕಾರಣವಾಗುತ್ತದೆ. ಕಂಪನಿಗಳು ಇಂದು ಧೂಮಪಾನಿಗಳಿಗೆ ಮತ್ತು ಧೂಮಪಾನ ಮಾಡದವರಿಗೆ ಮತ್ತು ಗುಟ್ಕಾ ಮತ್ತು ಪಾನ್ ಮಸಾಲಾಗಳಂತಹ ಇತರ ರೀತಿಯ ತಂಬಾಕು ಉತ್ಪನ್ನಗಳ ಬಳಕೆದಾರರಿಗೆ ವಿಭಿನ್ನ ದರಗಳನ್ನು ವಿಧಿಸುತ್ತವೆ.

**ಮದ್ಯಪಾನ:** ಕೆಲವು ಸಂದರ್ಭಗಳಲ್ಲಿ ಅಥವಾ ಸಾಧಾರಣ ಪ್ರಮಾಣದಲ್ಲಿ ಮದ್ಯಪಾನ ಮಾಡುವುದನ್ನು ಅಪಾಯವೆಂದು ಪರಿಗಣಿಸಲಾಗುವುದಿಲ್ಲ. ಆದಾಗ್ಯೂ, ದೀರ್ಘಕಾಲದ ಅತಿಯಾದ ಮದ್ಯಪಾನವು ಯಕೃತ್ತಿನ ಕಾರ್ಯನಿರ್ವಹಣೆಯನ್ನು ದುರ್ಬಲಗೊಳಿಸುತ್ತದೆ, ಜೀರ್ಣಾಂಗ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಮಾನಸಿಕ ಅಸ್ವಸ್ಥತೆಗಳಿಗೆ ಕಾರಣವಾಗಬಹುದು. ಮದ್ಯಪಾನವು ಅಪಘಾತಗಳು, ಹಿಂಸೆ, ಕೌಟುಂಬಿಕ ಹಿಂಸೆ, ಖಿನ್ನತೆ ಮತ್ತು ಆತ್ಮಹತ್ಯೆಗಳೊಂದಿಗೆ ಕೂಡ ಸಂಬಂಧ ಹೊಂದಿದೆ.

**ಮಾದಕದ್ರವ್ಯದ ದುರ್ಬಳಕೆ:** ಮಾದಕದ್ರವ್ಯದ ದುರ್ಬಳಕೆಯು ಮಾದಕ ವಸ್ತು ಅಥವಾ ಮಾದಕ ದ್ರವ್ಯಗಳು, ನಿದ್ರೆ ಬರಿಸುವ ಔಷಧಿಗಳು ಮತ್ತು ಇತರ ರೀತಿಯ ಉತ್ತೇಜಕಗಳಂತಹ ವಿವಿಧ ರೀತಿಯ ವಸ್ತುಗಳ ಬಳಕೆಯನ್ನು ಸೂಚಿಸುತ್ತದೆ. ಇವುಗಳಲ್ಲಿ ಕೆಲವು ಕಾನೂನುಬಾಹಿರವಾಗಿವೆ ಮತ್ತು ಅವುಗಳ ಬಳಕೆಯು ಅಪರಾಧಿ ಮನೋಭಾವ ಮತ್ತು ನೈತಿಕ ಅಪಾಯವನ್ನು ಸೂಚಿಸುತ್ತದೆ.

| **ನಿಮ್ಮನ್ನು ಪರೀಕ್ಷಿಸಿ 2** |
|---|

ಈ ಕೆಳಗಿನವುಗಳಲ್ಲಿ ಯಾವುದು ನೈತಿಕ ಅಪಾಯದ ಉದಾಹರಣೆಯಾಗಿದೆ**?**

I. ಸಾಹಸ ಕಲಾವಿದರು ಸಾಹಸವನ್ನು ಮಾಡುವಾಗ ಸಾಯುತ್ತಾರೆ

II. ಒಬ್ಬ ವ್ಯಕ್ತಿಯು ವಿಮೆ ಮಾಡಲ್ಪಟ್ಟಿರುವ ಕಾರಣ ಹೆಚ್ಚಿನ ಪ್ರಮಾಣದಲ್ಲಿ ಮದ್ಯಪಾನ ಮಾಡುತ್ತಾನೆ

III. ವಿಮಾದಾರರು ಕಂತು ಪಾವತಿಗಳಲ್ಲಿ ಮಾಡಿದ ಉಪೇಕ್ಷೆ

IV. ಪ್ರಸ್ತಾಪಕರಿಂದ ಪಾಲಿಸಿ ದಾಖಲೆಯನ್ನು ಕಳೆದುಕೊಳ್ಳುವಿಕೆ

## C. ವೈದ್ಯಕೀಯ ಅಂಡರ್ ರೈಟಿಂಗ್

### 1. ವೈದ್ಯಕೀಯ ಅಂಡರ್ ರೈಟಿಂಗ್

ಈಗ ವಿಮಾಗಾರರ ನಿರ್ಧಾರದ ಮೇಲೆ ಪ್ರಭಾವ ಬೀರುವ ಕೆಲವು ವೈದ್ಯಕೀಯ ಅಂಶಗಳನ್ನು ನಾವು ಪರಿಗಣಿಸೋಣ. ಸಾಮಾನ್ಯವಾಗಿ ಇವುಗಳ ಮೌಲ್ಯಮಾಪನವನ್ನು ವೈದ್ಯಕೀಯ ಅಂಡರ್ ರೈಟಿಂಗ್ ಮೂಲಕ ಮಾಡಲಾಗುತ್ತದೆ. ಅವು ಸಾಮಾನ್ಯವಾಗಿ ವೈದ್ಯಕೀಯ ಪರೀಕ್ಷಕರ ವರದಿಗಾಗಿ ಕೇಳಬಹುದು. ಪರಿಶೀಲಿಸಲಾಗುವ ಕೆಲವು ಅಂಶಗಳನ್ನು ನಾವು ನೋಡೋಣ.

**ಚಿತ್ರ 5: ಅಂಡರ್ ರೈಟರ್ ರ ನಿರ್ಧಾರದ ಮೇಲೆ ಪ್ರಭಾವ ಬೀರುವ ವೈದ್ಯಕೀಯ ಅಂಶಗಳು**




**a)** ಕುಟುಂಬದ ಇತಿಹಾಸ

ಮರಣಸಾಧ್ಯತೆಯ ಅಪಾಯದ ಮೇಲೆ ಕುಟುಂಬದ ಇತಿಹಾಸದ ಪ್ರಭಾವವನ್ನು ಮೂರು ಕೋನಗಳಿಂದ ಅಧ್ಯಯನ ಮಾಡಲಾಗಿದೆ.

i. **ಆನುವಂಶಿಕತೆ:** ಕೆಲವು ರೋಗಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ-ಉದಾಹರಣೆಗೆ ಪೋಷಕರಿಂದ ಮಕ್ಕಳಿಗೆ ಹರಡಬಹುದು.

ii. **ಕುಟುಂಬದ ಸರಾಸರಿ ಆಯುಷ್ಯ:** ಹೃದಯದ ತೊಂದರೆ ಅಥವಾ ಕ್ಯಾನ್ಸರ್ ನಂತಹ ಕೆಲವು ಕಾಯಿಲೆಗಳಿಂದ ಪೋಷಕರು ಬೇಗನೆ ಮರಣಹೊಂದಿದ್ದರೆ, ಅವರ ಸಂತಾನವು ಸಹ ಹೆಚ್ಚು ಕಾಲ ಬದುಕುವುದಿಲ್ಲ ಎಂದು ಸೂಚಿಸುತ್ತದೆ.

iii. **ಕುಟುಂಬದ ವಾತಾವರಣ:** ಮೂರನೆಯದಾಗಿ, ಕುಟುಂಬವು ವಾಸಿಸುವ ಪರಿಸರವು ಸೋಂಕು ಮತ್ತು ಇತರ ಅಪಾಯಗಳಿಗೆ ಒಡ್ಡಿಕೊಂಡಿರಬಹುದು.

ಕುಟುಂಬದ ಪ್ರತಿಕೂಲ ಇತಿಹಾಸವನ್ನು ಹೊಂದಿರುವ ವ್ಯಕ್ತಿಗಳ ಪ್ರಕರಣಗಳನ್ನು ಪರಿಗಣಿಸುವಾಗ ಜೀವ ವಿಮಾಗಾರರು ಜಾಗರೂಕರಾಗಿರಬೇಕು. ಅವರು ಇತರ ವರದಿಗಳನ್ನು ಕೇಳಬಹುದು ಮತ್ತು ಅಂತಹ ಸಂದರ್ಭಗಳಲ್ಲಿ ಹೆಚ್ಚುವರಿ ಮರಣಸಾಧ್ಯತೆಯ ಹೆಚ್ಚುವರಿಯನ್ನು ವಿಧಿಸಬಹುದು.

**b) ವೈಯಕ್ತಿಕ ಇತಿಹಾಸ**

ವೈಯಕ್ತಿಕ ಇತಿಹಾಸವು ವಿಮೆ ಮಾಡಬೇಕಾದ ಜೀವ/ವ್ಯಕ್ತಿಯು ಹಿಂದೆ ಅನುಭವಿಸಿದ ಮಾನವ ಶರೀರದ ವಿವಿಧ ವ್ಯವಸ್ಥೆಗಳಲ್ಲಿಯ ದುರ್ಬಲತೆಗಳನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಜೀವ ವಿಮೆಯ ಪ್ರಸ್ತಾವನೆಯ ನಮೂನೆಯು ವಿಮೆ ಮಾಡಬೇಕಾದ ಜೀವ/ವ್ಯಕ್ತಿಯು ಇವುಗಳಲ್ಲಿ ಯಾವುದಾದರೂ ಚಿಕಿತ್ಸೆಗೊಳಗಾಗಿದ್ದಾರೆಯೇ ಎಂದು ವಿಚಾರಿಸುವ ಪ್ರಶ್ನೆಗಳ ಗುಂಪನ್ನು ಒಳಗೊಂಡಿರುತ್ತದೆ.

ಹೃದಯನಾಳದ ಕಾಯಿಲೆಗಳು, ಉಸಿರಾಟದ ವ್ಯವಸ್ಥೆಯ ಕಾಯಿಲೆಗಳು, ಮಾರಣಾಂತಿಕ ಗೆಡ್ಡೆಗಳು / ಕ್ಯಾನ್ಸರ್, ಮೂತ್ರಪಿಂಡ ವ್ಯವಸ್ಥೆಯ ಕಾಯಿಲೆಗಳು, ಅಂತಃಸ್ರಾವಕ ವ್ಯವಸ್ಥೆಯ ದುರ್ಬಲತೆಗಳು, ಜಠರ(ಗ್ಯಾಸ್ಟ್ರಿಕ್)ದ ವ್ರಣ(ಅಲ್ಸರ್)ಗಳು ಮತ್ತು ಯಕೃತ್ತಿನ ಸಿರೋಸಿಸ್ ನಂತಹ ಜೀರ್ಣಾಂಗ ವ್ಯವಸ್ಥೆಯ ಕಾಯಿಲೆಗಳು ಮತ್ತು ನರಮಂಡಲದ ರೋಗಗಳು ಅಂಡರ್ ರೈಟರ್ ರು ಪರಿಗಣಿಸುವ ಪ್ರಮುಖ ಕಾಯಿಲೆಗಳಾಗಿವೆ.

**c) ವೈಯಕ್ತಿಕ ವೈಶಿಷ್ಟ್ಯಗಳು**

ಇವುಗಳು ರೋಗದ ಪ್ರವೃತ್ತಿಯ ಗಮನಾರ್ಹ ಸೂಚಕಗಳು ಸಹ ಆಗಿರಬಹುದು.

**i. ಮೈಕಟ್ಟು/ಶರೀರಯಷ್ಟಿ**

ವ್ಯಕ್ತಿಯ ಮೈಕಟ್ಟು/ಶರೀರಯಷ್ಟಿಯು ಅವನ ಎತ್ತರ, ತೂಕ, ಎದೆ ಮತ್ತು ಹೊಟ್ಟೆಯ ಸುತ್ತಳತೆಯನ್ನು ಒಳಗೊಂಡಿರುತ್ತದೆ. ನಿರ್ದಿಷ್ಟ ವಯಸ್ಸು ಮತ್ತು ಎತ್ತರಕ್ಕೆ, ಒಂದು ಪ್ರಮಾಣಿತ ತೂಕವನ್ನು ವ್ಯಾಖ್ಯಾನಿಸಲಾಗಿದೆ ಮತ್ತು ಈ ಪ್ರಮಾಣಿತ ತೂಕಕ್ಕೆ ಸಂಬಂಧಿಸಿದಂತೆ ತೂಕವು ತುಂಬಾ ಹೆಚ್ಚು ಅಥವಾ ಕಡಿಮೆಯಿದ್ದರೆ, ವ್ಯಕ್ತಿಯು ಅಧಿಕ ತೂಕ ಅಥವಾ ಕಡಿಮೆ ತೂಕವನ್ನು ಹೊಂದಿದ್ದಾನೆ ಎಂದು ನಾವು ಹೇಳಬಹುದು.

ಅದೇ ರೀತಿ, ಸಾಮಾನ್ಯ ವ್ಯಕ್ತಿಯಲ್ಲಿ ಎದೆಯು ಕನಿಷ್ಠ ನಾಲ್ಕು ಸೆಂಟಿಮೀಟರ್ ಗಳಷ್ಟು ವಿಸ್ತರಿಸಲ್ಪಡಬೇಕು ಮತ್ತು ಕಿಬ್ಬೊಟ್ಟೆಯ ಸುತ್ತಳತೆ ಒಬ್ಬರ ವಿಸ್ತರಿಸಿದ ಎದೆಗಿಂತ ಹೆಚ್ಚಿರಬಾರದು ಎಂದು ನಿರೀಕ್ಷಿಸಲಾಗಿದೆ.

**ii. ರಕ್ತದೊತ್ತಡ**

ವ್ಯಕ್ತಿಯ ರಕ್ತದೊತ್ತಡವು ಮತ್ತೊಂದು ಸೂಚ್ಯಾಂಕವಾಗಿದೆ. ಇದರಲ್ಲಿ ಎರಡು ಕ್ರಮಗಳಿವೆ

- ✓ ಸಿಸ್ಟೋಲಿಕ್(ಸಂಕುಚನ)
- ✓ ಡಯಾಸ್ಟೋಲಿಕ್(ವಿಸ್ತಾರ)

ನಿಜವಾದ ಪರಿಣಾಮಗಳು ಸಾಮಾನ್ಯ ಮೌಲ್ಯಗಳಿಗಿಂತ ಹೆಚ್ಚಾಗಿದ್ದರೆ, ವ್ಯಕ್ತಿಯು ಅಧಿಕ ರಕ್ತದೊತ್ತಡ ಅಥವಾ ಅಧಿಕ ರಕ್ತದೊತ್ತಡ(ಹೈಪರ್ಟೆನ್ಷನ್)ವನ್ನು ಹೊಂದಿದ್ದಾನೆ ಎಂದು ನಾವು ಹೇಳುತ್ತೇವೆ. ಮತ್ತು ತುಂಬಾ ಕಡಿಮೆಯಾದಾಗ, ಅದನ್ನು ಕಡಿಮೆ ರಕ್ತದೊತ್ತಡ(ಹೈಪೊಟೆನ್ಷನ್)ವೆಂದು ಕರೆಯಲಾಗುತ್ತದೆ. ಮೊದಲನೆಯದ್ದು(ರಕ್ತದೊತ್ತಡ(ಹೈಪರ್ಟೆನ್ಷನ್) ಗಂಭೀರ ಪರಿಣಾಮಗಳನ್ನು ಉಂಟುಮಾಡಬಹುದು.

**iii. ಮೂತ್ರ - ನಿರ್ದಿಷ್ಟ ಗುರುತ್ವಾಕರ್ಷಣೆ**

ಕೊನೆಯದಾಗಿ, ಒಬ್ಬರ ಮೂತ್ರದ ನಿರ್ದಿಷ್ಟ ಗುರುತ್ವಾಕರ್ಷಣೆಯ ಪರಿಣಾಮಗಳು ಮೂತ್ರ ವ್ಯವಸ್ಥೆಯಲ್ಲಿಯ ವಿವಿಧ ಲವಣಗಳ ನಡುವಿನ ಸಮತೋಲನವನ್ನು ಸೂಚಿಸುತ್ತದೆ. ಇದು ವ್ಯವಸ್ಥೆಯ ಯಾವುದೇ ಅಸಮರ್ಪಕ ಕಾರ್ಯವನ್ನು ಸೂಚಿಸುತ್ತದೆ.

**d) ಹಿಂದಿನ ದಿನಾಂಕ(ಬ್ಯಾಕ್ ಡೇಟಿಂಗ್) :**

ಹಿಂದಿನ ದಿನಾಂಕ(ಬ್ಯಾಕ್ ಡೇಟಿಂಗ್)ಕ್ಕೆ ಬದಲಾಯಿಸುವೆಕೆಯೆಂದರೆ ಪಾಲಿಸಿಯ ಪ್ರಾರಂಭ ದಿನಾಂಕವನ್ನು ಹಿಂದಿನ ದಿನಾಂಕಕ್ಕೆ ಬದಲಾಯಿಸುವುದು ಎಂದರ್ಥ. ಉದಾಹರಣೆಗೆ, ನೀವು ಜೂನ್ 1, 2013 ರಂದು ಜೀವ ವಿಮಾ ಪಾಲಿಸಿಯನ್ನು ಖರೀದಿಸಿದ್ದೀರಿ ಆದರೆ ನಂತರ ನೀವು ಏಪ್ರಿಲ್ 2013 ರಲ್ಲಿ ಖರೀದಿಸಿದ್ದರೆ ಪಾಲಿಸಿಯು ಉತ್ತಮ ಆದಾಯವನ್ನು ನೀಡುತ್ತಿತ್ತು ಎಂದು ನೀವು ಭಾವಿಸುತ್ತೀರಿ. ನೀವು ಮತ್ತು ನಿಮ್ಮ ವಿಮಾ ಕಂಪನಿಯು ಅಧಿಕೃತವಾಗಿ ಅದನ್ನು ಏಪ್ರಿಲ್, 2013ರಿಂದ ಪ್ರಾರಂಭಿಸಲು ಪಾಲಿಸಿಯನ್ನು ಬದಲಾಯಿಸಲು ಒಪ್ಪುತ್ತೀರಿ. ಈ ಸಂದರ್ಭದಲ್ಲಿ, ನೀವು ಪಾಲಿಸಿಯನ್ನು ಹಿಂದಿನ ದಿನಾಂಕ(ಬ್ಯಾಕ್ ಡೇಟ್)ಕ್ಕೆ ಬದಲಾಯಿಸುತ್ತೀರಿ. ಸಾಮಾನ್ಯವಾಗಿ, ಪಾಲಿಸಿಯು ಒಂದು ತಿಂಗಳಿಗಿಂತ ಕಡಿಮೆ ಅವಧಿಗೆ ಹಿಂದಿನ ದಿನಾಂಕ(ಬ್ಯಾಕ್ ಡೇಟ್)ಕ್ಕೆ ಬದಲಾಗಿದ್ದರೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

ಹಿಂದಿನ ದಿನಾಂಕ(ಬ್ಯಾಕ್ ಡೇಟಿಂಗ್)ವನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಮಾಡಲಾಗುತ್ತದೆ:

**(i) ವಯಸ್ಸಿನ ಆಧಾರದ ಮೇಲೆ ಕಂತಿನ ಬೆಲೆಯನ್ನು ಕಡಿಮೆ ಮಾಡುವುದು:** ಪಾಲಿಸಿಯನ್ನು ನೀಡುವಾಗ, ವಿಮಾದಾರರು ಪಾಲಿಸಿದಾರರ ಹತ್ತಿರದ ವಯಸ್ಸನ್ನು ಪರಿಗಣಿಸುತ್ತಾರೆ. ಅಂದರೆ ನೀವು 32 ವರ್ಷ ಮತ್ತು 7 ತಿಂಗಳ ವಯಸ್ಸಿನವರಾಗಿದ್ದರೆ, ವಿಮಾದಾರರು ನಿಮ್ಮ ವಯಸ್ಸನ್ನು 33 ವರ್ಷ ಎಂದು ಪರಿಗಣಿಸುತ್ತಾರೆ. ಈ ಹತ್ತಿರದ ವಯಸ್ಸು ನಿಮ್ಮನ್ನು ಹೆಚ್ಚಿನ ಕಂತಿನ ಸ್ಲ್ಯಾಬ್ ಗೆ ಸೇರಿಸಬಹುದು. ಆದಾಗ್ಯೂ, ನೀವು ಪಾಲಿಸಿಯನ್ನು 2 ತಿಂಗಳವರೆಗೆ ಹಿಂದಿನ ದಿನಾಂಕ(ಬ್ಯಾಕ್ ಡೇಟ್)ಕ್ಕೆ ಬದಲಾಯಿಸಿದರೆ, ವಿಮಾಗಾರರು ನಿಮ್ಮ ವಯಸ್ಸನ್ನು 32 ವರ್ಷಗಳು ಮತ್ತು 5 ತಿಂಗಳು ಎಂದು ಮಾತ್ರ ಪರಿಗಣಿಸುತ್ತಾರೆ. ಈಗ ನೀವು 32 ವರ್ಷ ವಯಸ್ಸಿನವರ ಯೋಜನೆಯನ್ನು ಆಧರಿಸಿ ಕಡಿಮೆ ಕಂತುಗಳನ್ನು ಪಾವತಿಸುತ್ತೀರಿ.

**(ii) ಪಾವತಿಯ ಸಮಯವನ್ನು ಹೊಂದಿಸುವುದು:** ಆದಾಯದ ಹರಿವು ಸ್ಥಿರವಾಗಿರದ ನಿರ್ದಿಷ್ಟ ವೃತ್ತಿಗಳಿವೆ. ಅಂತಹ ಸನ್ನಿವೇಶದಲ್ಲಿ ವ್ಯಕ್ತಿಯು ಆಕಸ್ಮಿಕವಾಗಿ ತನ್ನ ಆಫ್-ಸೀಸನ್ ನಲ್ಲಿ ಜೀವ ವಿಮಾ

ಪಾಲಿಸಿಯನ್ನು ಖರೀದಿಸಿದ್ದರೆ, ಪಾಲಿಸಿಯನ್ನು ಗರಿಷ್ಠ ಗಳಿಕೆಯ ಅವಧಿಯ ಹಿಂದಿನ ದಿನಾಂಕ(ಬ್ಯಾಕ್ ಡೇಟ್)ಕ್ಕೆ ಬದಲಾಯಿಸಬಹುದು. ಉದಾಹರಣೆಗೆ, ಒಬ್ಬ ರೈತ ಋತುಮಾನದ ಆದಾಯವನ್ನು ಹೊಂದಿರಬಹುದು. ಅವರು ತಮ್ಮ ಬೆಳೆಯ ಆದಾಯಗಳನ್ನು ಸ್ವೀಕರಿಸಿದ ನಂತರವೇ ವಿಮೆ ಪಾವತಿಗಳನ್ನು ಮಾಡಲು ಬಯಸುತ್ತಾರೆ. ಈ ಸಂದರ್ಭದಲ್ಲಿ, ಸುಗ್ಗಿಯ ಋತುವಿನಲ್ಲಿ ಅದನ್ನು ಪ್ರಾರಂಭಿಸಲು ರೈತನು ಪಾಲಿಸಿಯನ್ನು ಹಿಂದಿನ ದಿನಾಂಕ(ಬ್ಯಾಕ್‌ಡೇಟ್)ಕ್ಕೆ ಬದಲಾಯಿಸಬಹುದು.

**(iii) ವಿಶೇಷ ದಿನಾಂಕಗಳೊಂದಿಗೆ ಹೊಂದಿಕೆಯಾಗಲು:** ಜನ್ಮದಿನ ಮತ್ತು ವಾರ್ಷಿಕೋತ್ಸವದಂತಹ ನಿಮ್ಮ ಪ್ರಮುಖ ದಿನಾಂಕಗಳೊಂದಿಗೆ ಹೊಂದಿಕೆಯಾಗುವಂತೆ ನೀವು ಪಾಲಿಸಿಯನ್ನು ಹಿಂದಿನ ದಿನಾಂಕ(ಬ್ಯಾಕ್‌ಡೇಟ್)ಕ್ಕೆ ಬದಲಾಯಿಸಬಹುದು. ನಿಮ್ಮ ಕಂತು ಪಾವತಿ ಮಾಡಬೇಕಾದ ದಿನಾಂಕವನ್ನು ನೆನಪಿಟ್ಟುಕೊಳ್ಳುವುದು ನಿಮಗೆ ಸುಲಭವಾಗುತ್ತದೆ.

**(iv) ಶೀಘ್ರ ಅವಧಿ ಮುಕ್ತಾಯ(ಮೆಚುರಿಟಿ)ಯ ಕ್ಲೇಮ್ ಗಳು:** ಪಾಲಿಸಿಯನ್ನು ಹಿಂದಿನ ದಿನಾಂಕ (ಬ್ಯಾಕ್ ಡೇಟಿಂಗ್)ಕ್ಕೆ ಬದಲಾಯಿಸುವುದು ಪಾಲಿಸಿಯ ಅವಧಿಯನ್ನು ಕಡಿಮೆ ಮಾಡುತ್ತದೆ ಮತ್ತು ಶೀಘ್ರ ಮುಕ್ತಾಯವನ್ನು ಸುಗಮಗೊಳಿಸುತ್ತದೆ. ಉದಾಹರಣೆಗೆ, ಮಾರ್ಚ್ 2000 ರಂದು ಖರೀದಿಸಿದ 30-ವರ್ಷಗಳ ಜೀವ ವಿಮಾ ರಕ್ಷಣೆಯು ಏಪ್ರಿಲ್ 1999 ಗೆ ಹಿಂದಿನ ದಿನಾಂಕ(ಬ್ಯಾಕ್ ಡೇಟ್)ಕ್ಕೆ ಬದಲಾಯಿಸಲ್ಪಟ್ಟಿದ್ದರೆ, ಮಾರ್ಚ್ 2030 ರ ಬದಲಿಗೆ ಏಪ್ರಿಲ್, 2029 ರಂದು ಪಾಲಿಸಿಯು ಅವಧಿ ಮುಕ್ತಾಯ (ಮೆಚ್ಯೂರಿಟಿ)ವಾಗುತ್ತದೆ. ದತ್ತಿ(ಎಂಡೋಮೆಂಟ್) ಪಾಲಿಸಿಗಳ ಸಂದರ್ಭದಲ್ಲಿ, ಅವಧಿ ಮುಕ್ತಾಯ (ಮೆಚ್ಯೂರಿಟಿ)ಯ ಪ್ರಯೋಜನಗಳನ್ನು ಮೊದಲೇ ಪಡೆಯುವುದರಿಂದ ಇದು ಪ್ರಯೋಜನಕಾರಿಯಾಗಿದೆ.

**ನಿಮ್ಮನ್ನು ಪರೀಕ್ಷಿಸಿ 3**

ವೈದ್ಯಕೀಯ ಅಂಡರ್ ರೈಟಿಂಗ್ ನಲ್ಲಿ ಆನುವಂಶಿಕತೆಯ ಇತಿಹಾಸವು ಏಕೆ ಪ್ರಾಮುಖ್ಯತೆಯನ್ನು ಹೊಂದಿದೆ?

I. ಶ್ರೀಮಂತ ಪೋಷಕರು ಆರೋಗ್ಯವಂತ ಮಕ್ಕಳನ್ನು ಹೊಂದಿರುತ್ತಾರೆ

II. ಕೆಲವು ರೋಗಗಳು ಪೋಷಕರಿಂದ ಮಕ್ಕಳಿಗೆ ಮುಂದೆ ದಾಟಿಸಲ್ಪಡಬಹುದು

III. ಬಡ ಪೋಷಕರು ಕುಪೋಷಣದಿಂದ ಬಳಲುತ್ತಿರುವ ಮಕ್ಕಳನ್ನು ಹೊಂದಿರುತ್ತಾರೆ

IV. ಕುಟುಂಬದ ವಾತಾವರಣವು ನಿರ್ಣಾಯಕ ಅಂಶವಾಗಿದೆ

## ಸಾರಾಂಶ

- ಸಮಾನತೆಗೆ ಅವಕಾಶ ನೀಡಲು, ಅಂಡರ್ ರೈಟರ್ ರು ಅಪಾಯದ ವರ್ಗೀಕರಣವೆಂದು ಕರೆಯಲ್ಪಡುವ, ಅಂದರೆ ವೈಯಕ್ತಿಕ ಜೀವನವನ್ನು ವರ್ಗೀಕರಿಸುವ ಮತ್ತು ಒಡ್ಡಲ್ಪಡುವ ಅಪಾಯಗಳ ಮಟ್ಟವನ್ನವಲಂಬಿಸಿ ವಿಭಿನ್ನ ಅಪಾಯದ ವರ್ಗಗಳಿಗೆ ನಿಯೋಜಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತಾರೆ.
- ಅಂಡರ್ ರೈಟಿಂಗ್ ಪ್ರಕ್ರಿಯೆಯು ಎರಡು ಮಟ್ಟಗಳಲ್ಲಿ ನಡೆಯುತ್ತದೆ:
  - ✓ ಕ್ಷೇತ್ರ ಮಟ್ಟದಲ್ಲಿ
  - ✓ ಅಂಡರ್ ರೈಟಿಂಗ್ ವಿಭಾಗದ ಮಟ್ಟದಲ್ಲಿ
- ಅಂಡರ್ ರೈಟರ್ ರು ಮಾಡಿದ ಅಂಡರ್ ರೈಟಿಂಗ್ ನಿರ್ಧಾರಗಳು ಪ್ರಮಾಣಿತ ದರಗಳಲ್ಲಿ ಪ್ರಮಾಣಿತ ಅಪಾಯದ ಸ್ವೀಕಾರ ಅಥವಾ ಉಪ-ಪ್ರಮಾಣಿತ ಅಪಾಯಗಳಿಗೆ ಹೆಚ್ಚುವರಿ ಶುಲ್ಕವನ್ನು ಒಳಗೊಂಡಿರುತ್ತದೆ. ಕೆಲವೊಮ್ಮೆ ವಿಮಾ ಮೊತ್ತದ ಮೇಲಿನ ಅಡಮಾನದೊಂದಿಗೆ ಅಥವಾ ನಿರ್ಬಂಧಿತ ಷರತ್ತುಗಳನ್ನಾಧರಿಸಿ ಸ್ವೀಕಾರವಿರುತ್ತದೆ. ಅಪಾಯವು ದೊಡ್ಡದಾಗಿದ್ದರೆ ಪ್ರಸ್ತಾಪವನ್ನು ನಿರಾಕರಿಸಲಾಗುತ್ತದೆ ಅಥವಾ ಮುಂದೂಡಲಾಗುತ್ತದೆ.
- ಸಾಮಾನ್ಯವಾಗಿ ವಿಮೆ ಮಾಡಬೇಕಾದ ಜೀವ/ವ್ಯಕ್ತಿಯ ವಿಮಾ ಸಾಧ್ಯತೆಯನ್ನು ಪರೀಕ್ಷಿಸಲು ವೈದ್ಯಕೀಯ ಪರೀಕ್ಷೆಯನ್ನು ನಡೆಸದೆಯೇ ಹೆಚ್ಚಿನ ಸಂಖ್ಯೆಯ ಜೀವ/ವ್ಯಕ್ತಿಗಳ ವಿಮಾ ಪ್ರಸ್ತಾಪಗಳನ್ನು ವಿಮೆಗಾಗಿ ಆಯ್ಕೆ ಮಾಡಬಹುದು. ಅಂತಹ ಪ್ರಕರಣಗಳನ್ನು ವೈದ್ಯಕೀಯವಲ್ಲದ ಪ್ರಸ್ತಾವನೆಗಳೆಂದು ಕರೆಯಲಾಗುತ್ತದೆ.
- ವೈದ್ಯಕೀಯವಲ್ಲದ ವಿಮೆಗಾಗಿ ಕೆಲವು ರೇಟಿಂಗ್ ಅಂಶಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ
  - ✓ ವಯಸ್ಸು
  - ✓ ದೊಡ್ಡದಾದ ವಿಮಾಮೊತ್ತ
  - ✓ ನೈತಿಕ ಅಪಾಯಗಳು ಇತ್ಯಾದಿ
- ವೈದ್ಯಕೀಯ ವಿಮೆಯಲ್ಲಿ ಪರಿಗಣಿಸಲಾದ ಕೆಲವು ಅಂಶಗಳು ಈ ಕೆಳಗಿನಂತಿವೆ
  - ✓ ಕುಟುಂಬದ ಇತಿಹಾಸ,
  - ✓ ಆನುವಂಶಿಕತೆ ಮತ್ತು ವೈಯಕ್ತಿಕ ಇತಿಹಾಸ ಇತ್ಯಾದಿ

**ಪ್ರಮುಖ ಪದಗಳು**

1. ಅಂಡರ್ ರೈಟಿಂಗ್
2. ಸಾಮಾನ್ಯ/ಪ್ರಮಾಣಿತ ಜೀವ
3. ವೈದ್ಯಕೀಯವಲ್ಲದ ಅಂಡರ್ ರೈಟಿಂಗ್
4. ಬೆಲೆನಿರ್ಧಾರದ ಅಂಶಗಳು
5. ವೈದ್ಯಕೀಯ ಅಂಡರ್ ರೈಟಿಂಗ್
6. ವಿರುದ್ಧ ಆಯ್ಕೆ(ಆಂಟಿ ಸೆಲೆಕ್ಷನ್)

**ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು**

**ಉತ್ತರ 1** - ಸರಿಯಾದ ಉತ್ತರ **III** ಆಗಿದೆ.

**ಉತ್ತರ 2** - ಸರಿಯಾದ ಉತ್ತರ **II** ಆಗಿದೆ.

**ಉತ್ತರ 3** - ಸರಿಯಾದ ಉತ್ತರ **II** ಆಗಿದೆ.

# ಅಧ್ಯಾಯ L-09

# ಜೀವವಿಮಾ ಕ್ಲೇಮ್ ಗಳು

**ಅಧ್ಯಾಯ ಪರಿಚಯ**

ಈ ಅಧ್ಯಾಯವು ಕ್ಲೇಮ್ ನ ಪರಿಕಲ್ಪನೆಯನ್ನು ಮತ್ತು ಕ್ಲೇಮ್ ಗಳನ್ನು ಹೇಗೆ ನಿರ್ಧರಿಸಲಾಗುತ್ತದೆಂಬುದನ್ನು ವಿವರಿಸುತ್ತದೆ. ನಂತರ ಅಧ್ಯಾಯವು ಕ್ಲೇಮ್ ಗಳ ಪ್ರಕಾರಗಳನ್ನು ವಿವರಿಸುತ್ತದೆ. ಕೊನೆಯಲ್ಲಿ ಮರಣದ ಕ್ಲೇಮ್ ಗಾಗಿ ಸಲ್ಲಿಸಬೇಕಾದ ನಮೂನೆಗಳ ಬಗ್ಗೆ ಮತ್ತು ವಿಮಾದಾರರು ಯಾವುದೇ ವಾಸ್ತವಿಕ ಮಾಹಿತಿಯನ್ನು ಮಾಡದಿದ್ದಾಗ ವಿಮಾಗಾರರಿಂದ ಮಾಡಬಹುದಾದ ಕ್ಲೇಮ್ ನಿರಾಕರಣೆಯಿಂದ ಫಲಾನುಭವಿಯನ್ನು ರಕ್ಷಿಸುವುದಕ್ಕಾಗಿ ಇರುವ ಸುರಕ್ಷತೆಗಳ ಬಗ್ಗೆ ನೀವು ಕಲಿಯುವಿರಿ.

**ಕಲಿಕೆಯ ಫಲಿತಾಂಶಗಳು**

**A.** ಕ್ಲೇಮ್ ಗಳ ವಿಧಗಳು ಮತ್ತು ಕ್ಲೇಮ್ ಗಳ ಕಾರ್ಯವಿಧಾನ

**B.** ಕ್ಲೇಮ್ ಪರಿಸ್ಥಿತಿ ಸಂಭವಿಸಿದೆಯೇ ಎಂಬ ಬಗ್ಗೆ ಖಚಿತಪಡಿಸಿಕೊಳ್ಳುವುದು

**C.** ಜೀವ ವಿಮಾ ಪಾಲಿಸಿಗಳಿಗೆ ಕ್ಲೇಮ್ ಗಳ ಕಾರ್ಯವಿಧಾನ

## A. ಕ್ಲೇಮ್ ಗಳ ವಿಧಗಳು ಮತ್ತು ಕ್ಲೇಮ್ ಕಾರ್ಯವಿಧಾನ

**ಕ್ಲೇಮ್ ಗಳ ಪರಿಕಲ್ಪನೆ**

ಪಾಲಿಸಿಯಲ್ಲಿ ಕ್ಲೇಮ್ ಉದ್ಭವಿಸಿದಾಗ ವಿಮಾ ಕಂಪನಿ ಮತ್ತು ವಿಮಾ ಪಾಲಿಸಿಯ ನಿಜವಾದ ಪರೀಕ್ಷೆಯಿರುತ್ತದೆ. ಜೀವ ವಿಮೆಯ ನಿಜವಾದ ಮೌಲ್ಯವನ್ನು ಕ್ಲೇಮ್ ಇತ್ಯರ್ಥಪಡಿಸುವ ಮತ್ತು ಪ್ರಯೋಜನಗಳನ್ನು ಪಾವತಿಸುವ ವಿಧಾನದಿಂದ ನಿರ್ಣಯಿಸಲಾಗುತ್ತದೆ.

ಐಆರ್ ಡಿಎಐಯ 2017 ರ ಪಾಲಿಸಿದಾರರ ಹಿತಾಸಕ್ತಿ ನಿಯಮಗಳ ಪ್ರಕಾರ ಜೀವ ವಿಮಾದಾರರು ಸಾವಿನ ಕ್ಲೇಮ್ ಗಳನ್ನು ವಿಳಂಬವಿಲ್ಲದೆ ಪ್ರಕ್ರಿಯೆಗೊಳಿಸಬೇಕು ಮತ್ತು ಸಾವಿನ ಸೂಚನೆಯನ್ನು ಸ್ವೀಕರಿಸಿದ 15 ದಿನಗಳೊಳಗೆ ಎಲ್ಲ ಅಗತ್ಯತೆಗಳನ್ನು ಒಟ್ಟಿಗೆ ಪೂರೈಸಬೇಕು.

ಎಲ್ಲ ಸಂಬಂಧಿತ ದಾಖಲೆಗಳು/ಸ್ಪಷ್ಟೀಕರಣಗಳನ್ನು ಸ್ವೀಕರಿಸಿದ ದಿನಾಂಕದಿಂದ **30** ದಿನಗಳೊಳಗೆ ಎಲ್ಲ ಸಂಬಂಧಿತ ಕಾರಣಗಳನ್ನು ನೀಡುವ ಮೂಲಕ ಮರಣದ ಕ್ಲೇಮ್ ಅನ್ನು ಪಾವತಿಸಲಾಗುತ್ತದೆ, ತಿರಸ್ಕರಿಸಲಾಗುತ್ತದೆ ಅಥವಾ ನಿರಾಕರಿಸಲಾಗುತ್ತದೆ.

ಕ್ಲೇಮ್ ಗೆ ತನಿಖೆಯ ಅವಶ್ಯಕತೆಯು ವಿಮಾಗಾರರ ಅಭಿಪ್ರಾಯದಲ್ಲಿ ಸಮರ್ಥಿಸಲ್ಪಡುತ್ತಿದ್ದರೆ, ಅದನ್ನು ಮಾಹಿತಿ ನೀಡಿದ ದಿನಾಂಕದಿಂದ ೯೦ ದಿನಗಳಲ್ಲಿ ತ್ವರಿತವಾಗಿ ಪೂರ್ಣಗೊಳ್ಳಬೇಕು ಮತ್ತು ನಂತರ 30 ದಿನಗಳಲ್ಲಿ ಕ್ಲೇಮ್ ಅನ್ನು ಇತ್ಯರ್ಥಪಡಿಸಬೇಕು.

ಅವಧಿ ಮುಕ್ತಾಯ(ಮೆಚ್ಯೂರಿಟಿ)ದ ಕ್ಲೇಮ್ ಗಳು, ಬದುಕುಳಿದ(ಸರ್ವೈವಲ್) ಪ್ರಯೋಜನದ ಕ್ಲೇಮ್ ಗಳು ಮತ್ತು ವರ್ಷಾಶನಗಳಿಗೆ ಸಂಬಂಧಿಸಿದಂತೆ, ಜೀವ ವಿಮಾಗಾರರು ಕ್ಲೇಮ್ ಅನ್ನು ನಿಗದಿತ ದಿನಾಂಕದಂದು ಅಥವಾ ಮೊದಲು ಪಾವತಿಸಲು ಮುಂಗಡ ಸೂಚನೆಯನ್ನು ಕಳುಹಿಸುವ ಮೂಲಕ, ಮುಂದಿನ ದಿನಾಂಕವನ್ನು ಹೊಂದಿರುವ ಚೆಕ್ ಅನ್ನು ಕಳುಹಿಸುವ ಮೂಲಕ ಅಥವಾ ಆರ್ ಬಿಐನಿಂದ ಅನುಮೋದಿಸಲಾದ ಯಾವುದೇ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಹಕ್ಕುದಾರರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡುವ ಮೂಲಕ ಕ್ಲೇಮ್ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕೆಂದು ಐಆರ್ ಡಿಎಐ ನಿರ್ದಿಷ್ಟಪಡಿಸುತ್ತದೆ.

**ವ್ಯಾಖ್ಯಾನ**

ಕ್ಲೇಮ್ ಎಂದರೆ ವಿಮಾಗಾರರು ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಭರವಸೆಯನ್ನು ಪೂರೈಸಬೇಕೆಂಬ ಬೇಡಿಕೆಯಾಗಿದೆ.

---

ವಿಮಾ ಒಪ್ಪಂದದಡಿಯಲ್ಲಿ ಒಳಗೊಂಡಿರುವ ಒಂದು ಅಥವಾ ಹೆಚ್ಚಿನ ಘಟನೆಗಳ ಸಂಭವಿಸುವಿಕೆಯಿಂದ ಜೀವ ವಿಮಾ ಒಪ್ಪಂದದಡಿಯಲ್ಲಿಯ ಕ್ಲೇಮ್ ಪ್ರಚೋದಿತವಾಗುತ್ತದೆ. ಕೆಲವು ಕ್ಲೇಮ್ ಗಳಲ್ಲಿ, ಒಪ್ಪಂದವು ಮುಂದುವರಿಯುತ್ತದೆ, ಅದೇ ಇನ್ನು ಕೆಲವು ಸಂದರ್ಭಗಳಲ್ಲಿ ಒಪ್ಪಂದವನ್ನು ಕೊನೆಗೊಳಿಸಲಾಗುತ್ತದೆ.

ಕ್ಲೇಮ್ ಗಳು ಎರಡು ವಿಧಗಳದ್ದಾಗಿರಬಹುದು:

i. ಜೀವ ವಿಮಾದಾರರು ಜೀವಂತವಾಗಿದ್ದಾಗ ಪಾವತಿಸಬೇಕಾದ ಬದುಕುಳಿಯುವ ಕ್ಲೇಮ್ ಗಳು ಮತ್ತು

ii. ಸಾವಿನ ಕ್ಲೇಮ್

**ಚಿತ್ರ 1 ಕ್ಲೇಮ್ ಗಳ ವಿಧಗಳು**




ಜೀವ ವಿಮಾದಾರರ ಮರಣ ಸಂಭವಿಸಿದ ಮೇಲೆ ಮಾತ್ರ **ಮರಣದ ಕ್ಲೇಮ್** ಉಂಟಾಗುತ್ತದೆ, ಪಾಲಿಸಿಯಲ್ಲಿ ನಿರ್ದಿಷ್ಟಪಡಿಸಿದ ಘಟನೆಗಳ ಸಂಭವಿಸುವಿಕೆಯ ನಂತರ **ಬದುಕುಳಿಯುವ ಕ್ಲೇಮ್** ಗಳನ್ನು ಪಾವತಿಸಲಾಗುತ್ತದೆ.

| **ಪ್ರಮುಖ** |
|---|

ಕೆವೈಸಿ ಮಾನದಂಡಗಳ ಪ್ರಕಾರ ಹಕ್ಕುದಾರರ ಗುರುತನ್ನು ಸಾಬೀತುಪಡಿಸಲಾಗಿದೆ ಮತ್ತು ಸೂಕ್ತವಾಗಿ ದಾಖಲಿಸಲಾಗಿದೆ ಎಂದು ಎಲ್ಲ ಕ್ಲೇಮ್ ಗಳ ಸಂದರ್ಭಗಳಲ್ಲಿ ವಿಮಾಗಾರರು ಖಚಿತಪಡಿಸಿಕೊಳ್ಳಬೇಕು.

| **ಉದಾಹರಣೆ** |
|---|

ವಿಮಾದಾರರಿಗೆ ಕ್ಲೇಮ್ ಗಳನ್ನು ಪಾವತಿಸುವ ಅಂತಹ ನಿರ್ದಿಷ್ಟ ಘಟನೆಗಳು ಈ ಕೆಳಗಿನಂತಿವೆ.

i. ಪಾಲಿಸಿಯ ಅವಧಿ ಮುಕ್ತಾಯ(ಮೆಚ್ಯೂರಿಟಿ)ಯನ್ನು ತಲುಪುತ್ತಿರುವ ವಿಮಾದಾರರು;

ii. ಮನಿ-ಬ್ಯಾಕ್ ಪಾಲಿಸಿಯಡಿಯಲ್ಲಿ ಕಂತು(ಗಳು) ಪಾವತಿಸಬೇಕಾದಾಗ ಅಥವಾ ವರ್ಷಾಶನ ಯೋಜನೆಗಳಡಿಯಲ್ಲಿ, ವಿಮಾದಾರನು ಪೂರ್ವ-ನಿರ್ಧಾರಿತ ಅವಧಿ(ಗಳನ್ನು) ತಲುಪುತ್ತಾರೆ;.

iii. ಪಾಲಿಸಿಯಡಿಯಲ್ಲಿ ಒಳಗೊಂಡಿರುವ ಗಂಭೀರ ಕಾಯಿಲೆಗಳ ಸಂಭವಿಸುವಿಕೆಗಳು (ರೈಡರ್ ಪ್ರಯೋಜನವಾಗಿ ಅಥವಾ ಬೇರೆ ರೀತಿಯಲ್ಲಿ);

iv. ಪಾಲಿಸಿದಾರರಿಂದ ಅಥವಾ ನಿಯೋಜಿತರಿಂದ ಪಾಲಿಸಿಯ ಶರಣಾಗತಿ;

## B. ಕ್ಲೇಮ್ ಪರಿಸ್ಥಿತಿ ಸಂಭವಿಸಿದೆಯೇ ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳುವುದು

i. ಅವಧಿ ಮುಕ್ತಾಯ(ಮೆಚ್ಯೂರಿಟಿ)ವನ್ನು ತಲುಪಿದಾಗ ಅಥವಾ ಪಾಲಿಸಿಯಲ್ಲಿ ನಿಗದಿಪಡಿಸಿದ ಷರತ್ತುಗಳನ್ನು ಪೂರೈಸಿದ ಮೇಲೆ ವಿಮಾದಾರರಿಗೆ **ಬದುಕುಳಿಯುವ(ಸರ್ವೈವಲ್) ಕ್ಲೈಮ್** ಅನ್ನು ಪಾವತಿಸಲಾಗುತ್ತದೆ.

ii. **ಅವಧಿ ಮುಕ್ತಾಯ(ಮೆಚ್ಯೂರಿಟಿ)ದ ಕ್ಲೇಮ್ ಗಳು ಮತ್ತು ಹಣ-ಹಿಂತಿರುಗಿಸುವ(ಮನಿ ಬ್ಯಾಕ್) ಕಂತು ಕ್ಲೇಮ್** ಗಳು ಒಪ್ಪಂದದ ಪ್ರಾರಂಭದಲ್ಲಿಯೇ ನಿರ್ಧರಿಸಲಾದ ದಿನಾಂಕಗಳನ್ನು ಆಧರಿಸಿರುವುದರಿಂದ ಸುಲಭವಾಗಿ ಪಾವತಿಸಲಾಗುತ್ತದೆ. ಉದಾಹರಣೆಗೆ, ಮುಕ್ತಾಯದ ದಿನಾಂಕ ಮತ್ತು ಹಣ ಹಿಂತಿರುಗಿಸುವಿಕೆ(ಮನಿ ಬ್ಯಾಕ್)ಯ ಪಾಲಿಸಿಯಡಿಯಲ್ಲಿ ಬದುಕುಳಿಯುವ ಪ್ರಯೋಜನಗಳ ಕಂತುಗಳನ್ನು ಪಾವತಿಸಬಹುದಾದ ದಿನಾಂಕಗಳನ್ನು ಒಪ್ಪಂದವನ್ನು ಸಿದ್ಧಪಡಿಸುವ ಸಮಯದಲ್ಲಿಯೇ ಸ್ಪಷ್ಟವಾಗಿ ನಿಗದಿಪಡಿಸಲಾಗಿರುತ್ತದೆ.

iii. **ಶರಣಾಗತಿ ಮೌಲ್ಯದ ಪಾವತಿಗಳು** ಇತರ ಕ್ಲೇಮ್ ಪಾವತಿಗಳಿಗಿಂತ ಭಿನ್ನವಾಗಿರುತ್ತವೆ. ಇದರಲ್ಲಿ, ಇತರ ಕ್ಲೇಮ್ ಗಳಿಗಿಂತ ಭಿನ್ನವಾಗಿ, ಒಪ್ಪಂದವನ್ನು ರದ್ದುಗೊಳಿಸಲು ಮತ್ತು ಒಪ್ಪಂದದಡಿಯಲ್ಲಿ ಅವನಿಗೆ ಅಥವಾ ಅವಳಿಗೆ ಪಾವತಿಸಬೇಕಾದುದನ್ನು ಹಿಂತೆಗೆದುಕೊಳ್ಳಲು ಪಾಲಿಸಿದಾರರು ಅಥವಾ ನಿಯೋಜಿತರ ನಿರ್ಧಾರದಿಂದ ಘಟನೆಯನ್ನು ಪ್ರಚೋದಿಸಲಾಗುತ್ತದೆ. ಅಕಾಲಿಕ ವಾಪಸಾತಿಗೆ ಸಾಮಾನ್ಯವಾಗಿ ದಂಡವಿರುತ್ತದೆ. ಪಾವತಿಸಿದ ಮೊತ್ತವು ಪೂರ್ಣ ಕ್ಲೇಮ್ ಅಡಿಯಲ್ಲಿ ಪಾವತಿಸಬೇಕಾದ ಮೊತ್ತಕ್ಕಿಂತ ಕಡಿಮೆಯಿರುತ್ತದೆ ಆದ್ದರಿಂದ ಪೂರ್ಣ ಕ್ಲೇಮ್ ಪಾವತಿಸಬೇಕಾಗಿದ್ದರೆ ಬಾಕಿಯಿರಬಹುದಾದ ಮೊತ್ತಕ್ಕಿಂತ ಕಡಿಮೆಯಾಗಿರುತ್ತದೆ.

iv. ತನ್ನ ಕ್ಲೇಮ್ ಗೆ ಬೆಂಬಲವಾಗಿ ಪಾಲಿಸಿದಾರರು ಒದಗಿಸಿದ ವೈದ್ಯಕೀಯ ಮತ್ತು ಇತರ ದಾಖಲೆಗಳ ಆಧಾರದ ಮೇಲೆ **ಗಂಭೀರ ಅನಾರೋಗ್ಯದ ಕ್ಲೇಮ್** ಗಳನ್ನು ಕಂಡುಹಿಡಿಯಲಾಗುತ್ತದೆ.

v. **ವರ್ಷಾಶನಗಳು:** ವರ್ಷಾಶನ ಪಾವತಿಗಳ ಸಂದರ್ಭದಲ್ಲಿ (ಪಿಂಚಣಿ ಯೋಜನೆಗಳು), ವಿಮಾದಾರರು ನಿಯತಕಾಲಿಕವಾಗಿ ಜೀವಂತವಿರುವ ಪ್ರಮಾಣಪತ್ರಗಳನ್ನು ಒದಗಿಸಬೇಕಾಗುತ್ತದೆ.

ಗಂಭೀರವಾದ ಅನಾರೋಗ್ಯದ ಸಂದರ್ಭದಲ್ಲಿ ತಮ್ಮ ವೆಚ್ಚಗಳನ್ನು ಭರಿಸಲು ಪಾಲಿಸಿದಾರರನ್ನು ಸಕ್ರಿಯಗೊಳಿಸುವುದು ಗಂಭೀರವಾದ ಅನಾರೋಗ್ಯದ ಪ್ರಯೋಜನದ ಉದ್ದೇಶವಾಗಿದೆ. ಈ ಪಾಲಿಸಿಯನ್ನು ನಿಯೋಜಿಸಲಾಗಿದ್ದರೆ, ಎಲ್ಲ ಪ್ರಯೋಜನಗಳನ್ನು ನಿಯೋಜಿತರಿಗೆ ಪಾವತಿಸಲಾಗುವುದು ಮತ್ತು ಇದು ಗಂಭೀರ ಅನಾರೋಗ್ಯದ ಪ್ರಯೋಜನದ ಉದ್ದೇಶಿತ ಉದ್ದೇಶವನ್ನು ಪೂರೈಸುವುದಿಲ್ಲ. ಈ ಪರಿಸ್ಥಿತಿಯನ್ನು ತಪ್ಪಿಸಲು, ಷರತ್ತುಬದ್ಧ ನಿಯೋಜನೆಯ ಮೂಲಕ ಅವರು ನಿಯೋಜಿಸಬಹುದಾದ ಪ್ರಯೋಜನಗಳ ವ್ಯಾಪ್ತಿಯ ಬಗ್ಗೆ ಪಾಲಿಸಿದಾರರಿಗೆ ಮಾಹಿತಿಯನ್ನು ನೀಡಬೇಕು.

**ಅವಧಿ ಮುಕ್ತಾಯ ಅಥವಾ ಮರಣದ ಕ್ಲೇಮ್** ಅಥವಾ ಶರಣಾಗತಿಯು ಒಪ್ಪಂದದಡಿಯಲ್ಲಿಯ ವಿಮಾ ರಕ್ಷಣೆಯ ಮುಕ್ತಾಯಕ್ಕೆ ಕಾರಣವಾಗುತ್ತದೆ ಮತ್ತು ಮುಂದೆ ಯಾವುದೇ ವಿಮಾ ರಕ್ಷಣೆ ಲಭ್ಯವಿರುವುದಿಲ್ಲ.

**ಕ್ಲೇಮ್ ಗಳ ವಿಧಗಳು:** ಪಾಲಿಸಿಯ ಅವಧಿಯಲ್ಲಿ ಈ ಕೆಳಗಿನ ಪಾವತಿಗಳು ಸಂಭವಿಸಬಹುದು:

a) **ಬದುಕುಳಿಯುವ ಪ್ರಯೋಜನದ ಪಾವತಿ**

ಪಾಲಿಸಿಯ ಅವಧಿಯಲ್ಲಿ ನಿರ್ದಿಷ್ಟ ಸಮಯದಲ್ಲಿ ವಿಮಾಗಾರರಿಂದ ವಿಮಾದಾರರಿಗೆ ನಿಯತಕಾಲಿಕ ಪಾವತಿಗಳನ್ನು ಮಾಡಲಾಗುತ್ತದೆ.

I. **ಪಾಲಿಸಿ ಶರಣಾಗತಿ**

ಶರಣಾಗತಿ ಮೌಲ್ಯವು ವಿಮಾ ಮೊತ್ತ, ಬೋನಸ್ ಗಳು, ಪಾಲಿಸಿ ಅವಧಿ ಮತ್ತು ಪಾವತಿಸಿದ ಕಂತುಗಳಂತಹ ವಿವಿಧ ಅಂಶಗಳನ್ನು ಅವಲಂಬಿಸಿದ್ದು ಹೂಡಿಕೆಯ ಮೌಲ್ಯವನ್ನು ಪ್ರತಿಬಿಂಬಿಸುತ್ತದೆ. ಜೀವ ವಿಮಾ ಪಾಲಿಸಿಯನ್ನು ಅಕಾಲಿಕವಾಗಿ ಮುಕ್ತಾಯಗೊಳಿಸುವುದು ಪಾಲಿಸಿ ಒಪ್ಪಂದದ ಸ್ವಯಂಪ್ರೇರಿತ ಸಮಾಪ್ತಿಯಾಗಿದೆ. ಪಾವತಿಸಿದ ಮೌಲ್ಯ(ಪೇಡ್ ಅಪ್)ವನ್ನು ಪಡೆದಿದ್ದರೆ ಮಾತ್ರ ಪಾಲಿಸಿಯನ್ನು ಶರಣಾಗತಿ ಮಾಡಬಹುದು. ವಿಮಾದಾರರಿಗೆ ಪಾವತಿಸಬೇಕಾದ ಮೊತ್ತವು **ಶರಣಾಗತಿ ಮೌಲ್ಯವಾಗಿದ್ದು** ಸಾಮಾನ್ಯವಾಗಿ ಪಾವತಿಸಿದ ಕಂತುಗಳ ಶೇಕಡಾವಾರು ಆಗಿರುತ್ತದೆ. ವಿಮಾದಾರರಿಗೆ ಪಾವತಿಸಿದ ವಾಸ್ತವಿಕ ಶರಣಾಗತಿ ಮೌಲ್ಯವು ಖಾತರಿಯ ಶರಣಾಗತಿ ಮೌಲ್ಯಕ್ಕಿಂತ (ಜಿಎಸ್ ವಿ) ಹೆಚ್ಚಾಗಿರುತ್ತದೆ.

II. **ರೈಡರ್ ಪ್ರಯೋಜನ**

ನಿಯಮಗಳು ಮತ್ತು ಷರತ್ತುಗಳ ಪ್ರಕಾರ ವಿಮಾ ಕಂಪನಿಯಿಂದ ರೈಡರ್ ಅಡಿಯಲ್ಲಿಯ ಪಾವತಿಯನ್ನು ನಿಗದಿತ ಘಟನೆ ಸಂಭವಿಸಿದಾಗ ಮಾಡಲಾಗುತ್ತದೆ.

ನಿಯಮಗಳ ಪ್ರಕಾರ **ಗಂಭೀರ ಅನಾರೋಗ್ಯದ ರೈಡರ್** ಅಡಿಯಲ್ಲಿ, ಗಂಭೀರ ಅನಾರೋಗ್ಯದ ರೋಗನಿರ್ಣಯದ ಸಂದರ್ಭದಲ್ಲಿ ನಿರ್ದಿಷ್ಟ ಮೊತ್ತವನ್ನು ಪಾವತಿಸಲಾಗುತ್ತದೆ. ಅನಾರೋಗ್ಯವು ವಿಮಾ ಕಂಪನಿಯು ನಿರ್ದಿಷ್ಟಪಡಿಸಿದ ಗಂಭೀರ ಕಾಯಿಲೆಗಳ ಪಟ್ಟಿಯಲ್ಲಿ ಒಳಗೊಂಡಿರಬೇಕು.

ಆಸ್ಪತ್ರೆಯ ಕಾಳಜಿ(ಹಾಸ್ಪಿಟಲ್ ಕೇರ್) ರೈಡರ್ ಅಡಿಯಲ್ಲಿ, ವಿಮಾದಾರರು ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಚಿಕಿತ್ಸಾ ವೆಚ್ಚವನ್ನು ಪಾವತಿಸಲಾಗುತ್ತದೆ.

ರೈಡರ್ ಪಾವತಿಗಳನ್ನು ಮಾಡಿದ ನಂತರವೂ ಪಾಲಿಸಿ ಒಪ್ಪಂದವು ಮುಂದುವರಿಯುತ್ತದೆ.

ವಿಮಾ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಪಾಲಿಸಿ ಅವಧಿಯ ಕೊನೆಯಲ್ಲಿ ಈ ಕೆಳಗಿನ ಕ್ಲೇಮ್ ಪಾವತಿಗಳನ್ನು ಮಾಡಲಾಗುತ್ತದೆ.

III. **ಅವಧಿ ಮುಕ್ತಾಯ(ಮೆಚ್ಯೂರಿಟಿ) ಕ್ಲೇಮ್**

ಈ ಕ್ಲೇಮ್ ಗಳಲ್ಲಿ, ವಿಮಾದಾರರು ಯೋಜನೆಯ ಸಂಪೂರ್ಣ ಅವಧಿಯನ್ನು ಬದುಕಿ ಉಳಿದುಕೊಂಡರೆ, ಅವಧಿಯ ಅಂತ್ಯದಲ್ಲಿ ವಿಮಾದಾರರಿಗೆ ನಿರ್ದಿಷ್ಟ ಮೊತ್ತವನ್ನು ಪಾವತಿಸಲು ವಿಮಾಗಾರರು ಭರವಸೆಯನ್ನು ನೀಡುತ್ತಾರೆ. ಇದನ್ನು **ಅವಧಿ ಮುಕ್ತಾಯ(ಮೆಚ್ಯೂರಿಟಿ) ಕ್ಲೇಮ್** ಎಂದು ಕರೆಯಲಾಗುತ್ತದೆ.

i. **ಭಾಗವಹಿಸುವ ಯೋಜನೆ:** ಭಾಗವಹಿಸುವ ಯೋಜನೆಯಡಿಯಲ್ಲಿ ಪಾವತಿಸಬೇಕಾದ ಅವಧಿ ಮುಕ್ತಾಯ(ಮೆಚ್ಯೂರಿಟಿ)ದ ಕ್ಲೇಮ್ ಮೊತ್ತವು ಬಾಕಿ ಇರುವ ಕಂತು ಮತ್ತು ಪಾಲಿಸಿ ಸಾಲಗಳು ಮತ್ತು ಅದರ ಮೇಲಿನ ಬಡ್ಡಿಗಳಂತಹ ಬಾಕಿಮೊತ್ತಗಳನ್ನು ಕಡಿಮೆ ಮಾಡಿ ಮೊತ್ತ ಮತ್ತು ಸಂಚಿತ ಬೋನಸ್ ಗಳ ಒಟ್ಟು ಮೊತ್ತವಾಗಿರುತ್ತದೆ.

**ii. ಕಂತಿನ ಮರುಪಾವತಿ(ರಿಟರ್ನ್ ಆಫ್ ಪ್ರೀಮಿಯಂ) (ಆರ್ ಓ ಪಿ) ಯೋಜನೆ:** ಕೆಲವು ಸಂದರ್ಭಗಳಲ್ಲಿ ಪಾಲಿಸಿಯು ಅವಧಿ ಮಾಕ್ತಾಯ(ಮೆಚ್ಯೂರಿಟಿ)ವಾದಾಗ ಅವಧಿಯಲ್ಲಿ ಪಾವತಿಸಿದ ಕಂತುಗಳನ್ನು ಹಿಂತಿರುಗಿಸಲಾಗುತ್ತದೆ.

**iii. ಯುನಿಟ್ ಲಿಂಕ್ಡ್ ಇನ್ಶ್ಯುರೆನ್ಸ್ ಪ್ಲಾನ್ (ಯುಲಿಪ್):** ಯುಲಿಪ್ ಗಳ ಸಂದರ್ಭದಲ್ಲಿ, ವಿಮಾದಾರರು ಅವಧಿ ಮುಕ್ತಾಯ(ಮೆಚ್ಯೂರಿಟಿ)ದ ಕ್ಲೇಮ್ ರೂಪದಲ್ಲಿ ಫಂಡ್ ಮೌಲ್ಯವನ್ನು ಪಾವತಿಸುತ್ತಾರೆ.

**iv. ಹಣ ಹಿಂತಿರುಗಿಸುವಿಕೆ(ಮನಿ-ಬ್ಯಾಕ್)ಯ ಯೋಜನೆ:** ಹಣ ಹಿಂತಿರುಗಿಸುವಿಕೆ(ಮನಿ-ಬ್ಯಾಕ್)ಯ ಪಾಲಿಸಿಯ ಸಂದರ್ಭದಲ್ಲಿ, ವಿಮಾಗಾರರು ಪಾಲಿಸಿಯ ಅವಧಿಯಲ್ಲಿ ಈಗಾಗಲೇ ಪಾವತಿಸಿದ ಬದುಕುಳಿಯುವ ಪ್ರಯೋಜನಗಳನ್ನು ಕಳೆದು ಅವಧಿ ಮುಕ್ತಾಯ(ಮೆಚ್ಯೂರಿಟಿ)ದ ಕ್ಲೇಮ್ ಅನ್ನು ಪಾವತಿಸುತ್ತಾರೆ.

ಕ್ಲೇಮ್ ಅನ್ನು ಪಾವತಿಸಿದ ನಂತರ ವಿಮಾ ಒಪ್ಪಂದವು ಸಮಾಪ್ತಗೊಳ್ಳುತ್ತದೆ.

**b) ಸಾವಿನ ಕ್ಲೇಮ್**

ವಿಮಾದಾರನು ತಮ್ಮ ಪಾಲಿಸಿಯ ಅವಧಿಯ ಅವಧಿಯಲ್ಲಿ, ಆಕಸ್ಮಿಕವಾಗಿ ಅಥವಾ ಇನ್ಯಾವುದೇ ರೀತಿಯಲ್ಲಿ ಮರಣ ಹೊಂದಿದರೆ, ಭಾಗವಹಿಸುವ ಪಾಲಿಸಿಯಾಗಿದ್ದ ಸಂದರ್ಭದಲ್ಲಿ, ವಿಮಾದಾರರಿಂದ ವಸೂಲಿ ಮಾಡಬೇಕಾದ ಬಾಕಿ ಮೊತ್ತಗಳನ್ನು [ಉದಾ. ಬಾಕಿ ಇರುವ ಪಾಲಿಸಿ ಸಾಲ ಮತ್ತು ಬಡ್ಡಿ ಅಥವಾ ಕಂತುಗಳು ಮತ್ತು ಬಡ್ಡಿ] ಕಡಿತಗೊಳಿಸಿ ವಿಮಾಗಾರರು ಮೊತ್ತವನ್ನು ಮತ್ತು ಸಂಚಿತ ಬೋನಸ್ ಗಳನ್ನು ಪಾವತಿಸುತ್ತಾರೆ. ಇದು ಸಾವಿನ ಕ್ಲೇಮ್ ಆಗಿದ್ದು, ಸಂದರ್ಭಕ್ಕನುಸರಿಸಿ ನಾಮನಿರ್ದೇಶಿತರು ಅಥವಾ ನಿಯೋಜಿತರು ಅಥವಾ ಕಾನೂನು ಉತ್ತರಾಧಿಕಾರಿಗೆ ಪಾವತಿಸಲಾಗುತ್ತದೆ. ಸಾವಿನ ಕ್ಲೇಮ್ ಸಾಮಾನ್ಯವಾಗಿ ಸಾವಿನ ಪರಿಣಾಮವಾಗಿ ಒಪ್ಪಂದದ ಅಂತ್ಯವನ್ನು ಸೂಚಿಸುತ್ತದೆ.

ಸಾವಿನ ಕ್ಲೇಮ್:

- ✓ ತುಂಬ ಬೇಗ(ಮೂರು ವರ್ಷಕ್ಕಿಂತ ಕಡಿಮೆ ಪಾಲಿಸಿ ಅವಧಿ)ವಾಗಿರಬಹುದು ಅಥವಾ
- ✓ ಅತಿಬೇಗವಲ್ಲದ (ಮೂರು ವರ್ಷಗಳಿಗಿಂತ ಹೆಚ್ಚು)

ನಾಮನಿರ್ದೇಶಿತರು ಅಥವಾ ನಿಯೋಜಿತರು ಅಥವಾ ಕಾನೂನು ಉತ್ತರಾಧಿಕಾರಿ ಸಾವಿನ ಕಾರಣ, ದಿನಾಂಕ ಮತ್ತು ಸ್ಥಳದ ವಿಮೆದಾರರಿಗೆ ತಿಳಿಸಬೇಕು.

**i. ಮರಣದ ಕ್ಲೇಮ್ ಗಾಗಿ ಸಲ್ಲಿಸಬೇಕಾದ ನಮೂನೆಗಳು**

ಸಾಮಾನ್ಯವಾಗಿ, ಕ್ಲೈಮ್ ಅನ್ನು ಪ್ರಕ್ರಿಯೆಗೊಳಿಸಲು ಅನುಕೂಲವಾಗುವಂತೆ ಫಲಾನುಭವಿಯು ಈ ಕೆಳಗಿನ ನಮೂನೆಗಳನ್ನು ವಿಮಾಗಾರರಿಗೆ ಸಲ್ಲಿಸಬೇಕು:

- ✓ ನಾಮನಿರ್ದೇಶಿತರ ಮೂಲಕ ಕ್ಲೇಮ್ ಫಾರ್ಮ್

- ✓ ಹೂಳುವ ಅಥವಾ ಶವಸಂಸ್ಕಾರದ ಪ್ರಮಾಣಪತ್ರ
- ✓ ಚಿಕಿತ್ಸೆ ಮಾಡಿದ ವೈದ್ಯರ ಪ್ರಮಾಣಪತ್ರ
- ✓ ಆಸ್ಪತ್ರೆಯ ಪ್ರಮಾಣಪತ್ರ
- ✓ ಉದ್ಯೋಗದಾತರ ಪ್ರಮಾಣಪತ್ರ
- ✓ ಮರಣದ ಪುರಾವೆಯಾಗಿ ಮುನಿಸಿಪಲ್ ಅಧಿಕಾರಿಗಳು ಜಾರಿಪಡಿಸಿದ ಮರಣ ಪ್ರಮಾಣಪತ್ರ ಇತ್ಯಾದಿ.
- ✓ ಅಪಘಾತದಿಂದ ಮರಣ ಹೊಂದಿದ ಸಂದರ್ಭದಲ್ಲಿ ಪ್ರಥಮ ಮಾಹಿತಿ ವರದಿ (ಎಫ್ಐಆರ್), ವಿಚಾರಣಾ ವರದಿ, ಶವಪರೀಕ್ಷೆ ಮತ್ತು ಅಂತಿಮ ವರದಿಯಂತಹ ಪೊಲೀಸ್ ವರದಿಗಳ ಪ್ರಮಾಣೀಕೃತ ನ್ಯಾಯಾಲಯದ ಪ್ರತಿಗಳು - ಈ ವರದಿಗಳ ಅಗತ್ಯವಿರುತ್ತದೆ.

**ಚಿತ್ರ 2: ಸಾವಿನ ಕ್ಲೇಮ್ ಗಾಗಿ ಸಲ್ಲಿಸಬೇಕಾದ ನಮೂನೆಗಳು**




### ii. ಸಾವಿನ ಕ್ಲೇಮ್ ನ ನಿರಾಕರಣೆ

ಮರಣದ ಕ್ಲೇಮ್ ಪಾವತಿಸಲ್ಪಡಬಹುದು ಅಥವಾ ತಿರಸ್ಕರಿಸಲ್ಪಡಬಹುದು. ಕ್ಲೇಮ್ ಅನ್ನು ಪ್ರಕ್ರಿಯೆಗೊಳಿಸುವಾಗ, ಪ್ರಸ್ತಾಪಕರು ಯಾವುದೇ ತಪ್ಪಾದ ಹೇಳಿಕೆಗಳನ್ನು ನೀಡಿದ್ದ ಅಥವಾ ಪಾಲಿಸಿಗೆ ಸಂಬಂಧಿಸಿದ ವಾಸ್ತವಿಕ ಸಂಗತಿಗಳನ್ನು ನಿಗ್ರಹಿಸಿದ್ದ ವಿಮಾಗಾರರು ಪತ್ತೆ ಮಾಡಿದರೆ, ಒಪ್ಪಂದವನ್ನು ಅಮಾನ್ಯವೆಂದು ಘೋಷಿಸಲಾಗುತ್ತದೆ. ಪಾಲಿಸಿಯಡಿಯಲ್ಲಿಯ ಎಲ್ಲ ಪ್ರಯೋಜನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

### iii. ಸೆಕ್ಷನ್ 45: ನಿರ್ವಿವಾದತೆಯ ಷರತ್ತು

ಆದಾಗ್ಯೂ ಈ ದಂಡವು ವಿಮಾ ಕಾಯಿದೆ, 1938 ರ **ಸೆಕ್ಷನ್ 45** ಗೆ ಒಳಪಟ್ಟಿರುತ್ತದೆ.

| ಪ್ರಮುಖ |
|---|

**ಸೆಕ್ಷನ್ 45 ಹೀಗೆ ಹೇಳುತ್ತದೆ:**

"ಪಾಲಿಸಿಯ ದಿನಾಂಕದಿಂದ ಅಂದರೆ ಪಾಲಿಸಿಯನ್ನು ನೀಡಿದ ದಿನಾಂಕ ಅಥವಾ ಅಪಾಯದ ಪ್ರಾರಂಭದ ದಿನಾಂಕ ಅಥವಾ ಪುನರುಜ್ಜೀವನದ ದಿನಾಂಕ ಅಥವಾ ಪಾಲಿಸಿಗೆ ರೈಡರ್ ಗಳಲ್ಲಿ ಇತ್ತೀಚಿನ ದಿನಾಂಕದಿಂದ ಮೂರು ವರ್ಷಗಳ ಅವಧಿ ಮುಗಿದ ನಂತರ, ಯಾವುದೇ ಆಧಾರದ ಮೇಲೆ ಜೀವ ವಿಮೆಯ ಯಾವುದೇ ಪಾಲಿಸಿಯನ್ನು ಪ್ರಶ್ನಿಸಲಾಗುವುದಿಲ್ಲ".

## C. ಜೀವ ವಿಮಾ ಪಾಲಿಸಿಗಾಗಿ ಕ್ಲೇಮ್ ಪ್ರಕ್ರಿಯೆ

**ಎಲ್ಲ ವಿಮಾಗಾರರಿಗೆ ಯಾವುದೇ ಪ್ರಮಾಣಿತ ಕ್ಲೇಮ್ ಕಾರ್ಯವಿಧಾನಗಳಿಲ್ಲದಿದ್ದರೂ, ಐಆರ್ ಡಿಎಐ ಕ್ಲೇಮ್ ಇತ್ಯರ್ಥದ ವಿಷಯದಲ್ಲಿ ವಿಮಾದಾರರಿಗೆ ಮಾರ್ಗಸೂಚಿಗಳನ್ನು ನೀಡಿದೆ.**

**ನಿಯಮ 8: ಜೀವ ವಿಮಾ ಪಾಲಿಸಿಗೆ ಸಂಬಂಧಿಸಿದಂತೆ ಕ್ಲೇಮ್ ಗಳ ಕಾರ್ಯವಿಧಾನ**

i. ಕ್ಲೇಮ್ ಜೊತೆಗೆ ಬೆಂಬಲವಾಗಿ ಹಕ್ಕುದಾರರಿಂದ ಸಾಮಾನ್ಯವಾಗಿ ಸಲ್ಲಿಸಬೇಕಾದ **ಪ್ರಾಥಮಿಕ ದಾಖಲೆ**ಗಳನ್ನು ಜೀವ ವಿಮಾ ಪಾಲಿಸಿಯು ಸೂಚಿಸುತ್ತದೆ.

ii. ಜೀವ ವಿಮಾ ಕಂಪನಿಯು ಕ್ಲೇಮ್ ಅನ್ನು ಸ್ವೀಕರಿಸಿದ ನಂತರ, ವಿಳಂಬವಿಲ್ಲದೆ ಕ್ಲೇಮ್ ಅನ್ನು ಪ್ರಕ್ರಿಯೆಗೊಳಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ ಕ್ಲೇಮ್ ಅನ್ನು ಸ್ವೀಕರಿಸಿದ **15** ದಿನಗಳ ಅವಧಿಯೊಳಗೆ ಕಂತು ಕಂತಿನಲ್ಲಿ ಕೇಳದೇ ಒಂದೇ ಬಾರಿಗೆ ಯಾವುದೇ ಪ್ರಶ್ನೆಗಳು ಅಥವಾ ಹೆಚ್ಚುವರಿ ದಾಖಲೆಗಳ ಅಗತ್ಯತೆಗಳನ್ನು ಕೇಳಬೇಕು.

iii. ಐಆರ್ ಡಿಎಐ **(**ಪಾಲಿಸಿದಾರರ ಹಿತಾಸಕ್ತಿಗಳ ರಕ್ಷಣೆ) ನಿಯಮಗಳು, **2017** ರ ಪ್ರಕಾರ ಎಲ್ಲ ಸಂಬಂಧಿತ ದಾಖಲೆಗಳು ಮತ್ತು ಅವಶ್ಯಕ ಸ್ಪಷ್ಟೀಕರಣಗಳನ್ನು ಸ್ವೀಕರಿಸಿದ ದಿನಾಂಕದಿಂದ **30** ದಿನಗಳೊಳಗೆ ಜೀವ ವಿಮಾ ಪಾಲಿಸಿಯಡಿಯಲ್ಲಿ ಮರಣದ ಕ್ಲೇಮ್ ಅನ್ನು ಪಾವತಿಸಲಾಗುತ್ತದೆ, ತಿರಸ್ಕರಿಸಲಾಗುತ್ತದೆ ಅಥವಾ ನಿರಾಕರಿಸಲಾಗುತ್ತದೆ. ಆದಾಗ್ಯೂ, ವಿಮಾಗಾರರು ಕ್ಲೇಮ್ ತನಿಖೆಯು ಅಗತ್ಯವೆನಿಸಿದರೆ, ಯಾವುದೇ ಸಂದರ್ಭದಲ್ಲಿ ಕ್ಲೇಮ್ ಸೂಚನೆಯ ಸ್ವೀಕೃತಿಯ ದಿನಾಂಕದಿಂದ **90** ದಿನಗಳಿಗಿಂತ ಹೆಚ್ಚಿಲ್ಲದಂತೆ ತನಿಖೆಯನ್ನು ಶೀಘ್ರವಾಗಿ ಪ್ರಾರಂಭಿಸುತ್ತಾರೆ ಮತ್ತು ಪೂರ್ಣಗೊಳಿಸಬೇಕು. ತನಿಖೆಯನ್ನು ಪೂರ್ಣಗೊಳಿಸಿದ **30** ದಿನಗಳಲ್ಲಿ ಕ್ಲೇಮ್ ಅನ್ನು ಇತ್ಯರ್ಥಗೊಳಿಸಬೇಕು.

iv. ಒಂದು ಕ್ಲೇಮ್ ಪಾವತಿಗೆ ಸಿದ್ಧವಾಗಿದೆ ಆದರೆ ಪಾವತಿಸುವವರ ಸರಿಯಾದ ಗುರುತಿನ ಯಾವುದೇ ಕಾರಣಗಳಿಂದ ಪಾವತಿಯನ್ನು ಮಾಡಲಾಗದಿದ್ದರೆ, ಜೀವ ವಿಮಾಗಾರರು ಪಾವತಿಸುವವರ ಪ್ರಯೋಜನಕ್ಕಾಗಿ ಮೊತ್ತವನ್ನು ಹೊಂದಿರುತ್ತಾರೆ ಮತ್ತು ಆ ಮೊತ್ತವು ಬ್ಯಾಂಕ್ ಉಳಿತಾಯ ಖಾತೆಗೆ ಅನ್ವಯವಾಗುವ ನಿಗದಿತ ದರದಲ್ಲಿ ಬಡ್ಡಿಯನ್ನು ಗಳಿಸುತ್ತದೆ. (ಎಲ್ಲಾ ದಾಖಲೆಗಳು ಮತ್ತು ಮಾಹಿತಿಯನ್ನು ಸಲ್ಲಿಸಿದ ನಂತರ **30** ದಿನಗಳಿಂದ ಜಾರಿಗೆ ಬರುತ್ತದೆ).

v. ಉಪ-ನಿಬಂಧನೆ(**iv**)ಯ ವ್ಯಾಪ್ತಿಯಲ್ಲಿ ಕವರ್ ಮಾಡಿಲ್ಲದ ಕಾರಣಕ್ಕಾಗಿ ಕ್ಲೇಮ್ ಅನ್ನು ಪ್ರಕ್ರಿಯೆಗೊಳಿಸಲು ವಿಮಾಗಾರರ ಕಡೆಯಿಂದ ವಿಳಂಬವಾದರೆ, ಜೀವ ವಿಮಾ ಕಂಪನಿಯು ಕ್ಲೇಮ್ ಮೊತ್ತದ ಮೇಲೆ **ಹಣಕಾಸು ವರ್ಷದ ಆರಂಭದಲ್ಲಿ ಪ್ರಚಲಿತದಲ್ಲಿರುವ ಬ್ಯಾಂಕ್ ದರಕ್ಕಿಂತ 2% ಹೆಚ್ಚಿನ ದರದಲ್ಲಿ ಬಡ್ಡಿ**ಯನ್ನು ಪಾವತಿಸಬೇಕು. ಇದರಲ್ಲಿ ಕ್ಲೇಮ್ ಅನ್ನು ಪರಿಶೀಲಿಸಲಾಗುತ್ತದೆ.

**ಏಜೆಂಟರ ಪಾತ್ರ**

ಒಬ್ಬ ಏಜೆಂಟರು ನಾಮನಿರ್ದೇಶಿತರು/ಕಾನೂನು ಉತ್ತರಾಧಿಕಾರಿ ಅಥವಾ ಫಲಾನುಭವಿಗೆ ಕ್ಲೇಮ್ ನಮೂನೆಗಳನ್ನು ನಿಖರವಾಗಿ ಭರ್ತಿ ಮಾಡುವಲ್ಲಿ ಮತ್ತು ವಿಮಾಗಾರರ ಕಛೇರಿಯಲ್ಲಿ ಇವುಗಳನ್ನು ಸಲ್ಲಿಸಲು ಸಹಾಯ ಮಾಡುವಲ್ಲಿ ಸಾಧ್ಯವಿರುವ ಎಲ್ಲ ಸೇವೆಯನ್ನು ಸಲ್ಲಿಸಬೇಕು.

ಕರ್ತವ್ಯಗಳನ್ನು ನಿರ್ವಹಿಸುವುದರ ಹೊರತಾಗಿ, ಇಂಥ ಪರಿಸ್ಥಿತಿಯಿಂದ ಒಳ್ಳೆಯ ಹೆಸರು ಉಂಟಾಗುತ್ತದೆಯಲ್ಲದೇ ಸತ್ತವರ ಕುಟುಂಬದಿಂದ ಭವಿಷ್ಯದಲ್ಲಿ ವ್ಯಾಪಾರ ಅಥವಾ ಉಲ್ಲೇಖಗಳನ್ನು ಸಂಗ್ರಹಿಸಲು ಏಜೆಂಟರಿಗೆ ಸಾಕಷ್ಟು ಅವಕಾಶವಿರುತ್ತದೆ.

**ನಿಮ್ಮನ್ನು ಪರೀಕ್ಷಿಸಿ 1**

ಈ ಕೆಳಗಿನ ಯಾವ ಹೇಳಿಕೆಯು ಕ್ಲೇಮ್ ಪರಿಕಲ್ಪನೆಯನ್ನು ಉತ್ತಮವಾಗಿ ವಿವರಿಸುತ್ತದೆ**?** ಹೆಚ್ಚು ಸೂಕ್ತವಾದ ಆಯ್ಕೆಯನ್ನು ಆರಿಸಿ.

I. ಕ್ಲೇಮ್ ಎನ್ನುವುದು ವಿಮಾಗಾರರು ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಭರವಸೆಯನ್ನು ಪೂರೈಸಸಬೇಕು ಎಂಬ ವಿನಂತಿಯಾಗಿದೆ

II. ವಿಮಾಗಾರರು ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಭರವಸೆಯನ್ನು ಪೂರೈಸಸಬೇಕು ಎಂಬ ಬೇಡಿಕೆಯೇ ಕ್ಲೇಮ್ ಆಗಿದೆ

III. ಕ್ಲೇಮ್ ಎನ್ನುವುದು ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಬದ್ಧತೆಯನ್ನು ಪೂರೈಸಬೇಕೆಂದು ವಿಮಾದಾರರು ಮಾಡಬೇಕಾದ ಬೇಡಿಕೆಯಾಗಿದೆ

IV. ಕ್ಲೇಮ್ ಎನ್ನುವುದು ವಿಮಾದಾರರು ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಭರವಸೆಯನ್ನು ಪೂರೈಸಬೇಕೆಂಬ ವಿನಂತಿಯಾಗಿದೆ**a**

## ಸಾರಾಂಶ

- ಕ್ಲೇಮ್ ಎನ್ನುವುದು ವಿಮಾದಾರರು ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ ಭರವಸೆಯನ್ನು ಪೂರೈಸಬೇಕು ಎಂಬ ಬೇಡಿಕೆಯಾಗಿದೆ.
- ಕ್ಲೇಮ್ ಬದುಕುಳಿಯುವ ಅಥವಾ ಸಾವಿನ ಕ್ಲೇಮ್ ಆಗಿರಬಹುದು. ಜೀವ ವಿಮಾದಾರರ ಮರಣದ ಮೇಲೆ ಮಾತ್ರ ಸಾವಿನ ಕ್ಲೇಮ್ ಉದ್ಭವಿಸುತ್ತದೆ, ಬದುಕುಳಿಯುವ ಹಕ್ಕುಗಳು ಒಂದು ಅಥವಾ ಹೆಚ್ಚಿನ ಘಟನೆಗಳಿಂದ ಉಂಟಾಗಬಹುದು
- ಬದುಕುಳಿಯುವ ಕ್ಲೇಮ್ ನ ಪಾವತಿಗಾಗಿ, ಪಾಲಿಸಿಯಲ್ಲಿ ನಿಗದಿಪಡಿಸಿದ ಷರತ್ತುಗಳ ಪ್ರಕಾರ ಘಟನೆಯು ಸಂಭವಿಸಿದೆ ಎಂದು ವಿಮಾಗಾರರು ಖಚಿತಪಡಿಸಿಕೊಳ್ಳಬೇಕು.
- ಪಾಲಿಸಿಯ ಅವಧಿಯಲ್ಲಿ ಈ ಕೆಳಗಿನ ಪಾವತಿಗಳು ಸಂಭವಿಸಬಹುದು:
  - ✓ **ಬದುಕುಳಿಸುವ ಪ್ರಯೋಜನ ಪಾವತಿಗಳು**
  - ✓ **ಪಾಲಿಸಿಯ ಶರಣಾಗತಿ**
  - ✓ **ರೈಡರ್ ಪ್ರಯೋಜನೆ**
  - ✓ **ಅವಧಿ ಮುಕ್ತಾಯ(ಮೆಚ್ಯೂರಿಟಿ)ದ ಕ್ಲೇಮ್**
  - ✓ **ಸಾವಿನ ಕ್ಲೇಮ್**
- ವಿಮಾ ಕಾಯಿದೆಯ ಸೆಕ್ಷನ್ **45 (**ನಿರ್ವಿವಾದತೆಯ ಷರತ್ತು) ಒದಗಿಸಿದ ದುರ್ಬಲ ಆಧಾರದ ಮೇಲೆ ವಿಮಾಗಾರರಿಂದ ಕ್ಲೇಮ್ ನಿರಾಕರಣೆಯ ವಿರುದ್ಧ ರಕ್ಷಣೆ ನೀಡುತ್ತದೆ ಮತ್ತು ಪಾಲಿಸಿಯನ್ನು ಪ್ರಶ್ನಿಸಲು ವಿಮಾಗಾರರಿಗೆ **3** ವರ್ಷಗಳ ಕಾಲದ ಮಿತಿಯನ್ನು ನಿಗದಿಪಡಿಸುತ್ತದೆ.
- ಐಆರ್ ಡಿಎಐ **(**ಪಾಲಿಸಿದಾರರ ಹಿತಾಸಕ್ತಿಗಳ ರಕ್ಷಣೆ) ನಿಯಮಗಳು**, 2017** ರ ಅಡಿಯಲ್ಲಿ**,** ಕ್ಲೇಮ್ ಗಳ ಸಂದರ್ಭದಲ್ಲಿ ವಿಮಾದಾರ ಅಥವಾ ಫಲಾನುಭವಿಯನ್ನು ರಕ್ಷಣೆ ನೀಡಲು/ರಕ್ಷಿಸಲು ಐಆರ್ ಡಿಎಐ ನಿಯಮಗಳನ್ನು ರೂಪಿಸಿದೆ.

## ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು

**ಉತ್ತರ 1** ಸರಿಯಾದ ಉತ್ತರ **II** ಆಗಿದೆ.

# ವಿಭಾಗ

# ಆರೋಗ್ಯ ವಿಭಾಗ

# ಅಧ್ಯಾಯ H-01

# ಆರೋಗ್ಯ ವಿಮೆಯ ಪರಿಚಯ

**ಅಧ್ಯಾಯ ಪರಿಚಯ**

ಈ ಅಧ್ಯಾಯವು ಕಾಲಾಂತರದಲ್ಲಿ ವಿಮೆಯು ಹೇಗೆ ವಿಕಸನಗೊಂಡಿತು ಎಂಬುದರ ಕುರಿತು ನಿಮಗೆ ತಿಳಿಸುತ್ತದೆ. ಆರೋಗ್ಯ ರಕ್ಷಣೆ ಎಂದರೇನು, ಆರೋಗ್ಯ ರಕ್ಷಣೆಯ ಮಟ್ಟಗಳು ಮತ್ತು ಆರೋಗ್ಯ ರಕ್ಷಣೆಯ ವಿಧಗಳನ್ನು ಸಹ ಈ ಅಧ್ಯಾಯವು ವಿವರಿಸುತ್ತದೆ. ಭಾರತದಲ್ಲಿಯ ಆರೋಗ್ಯ ವ್ಯವಸ್ಥೆ ಮತ್ತು ಅದರ ಮೇಲೆ ಪ್ರಭಾವ ಬೀರುವ ಅಂಶಗಳ ಬಗ್ಗೆಯೂ ನೀವು ಕಲಿಯುವಿರಿ. ಕೊನೆಯದಾಗಿ, ಭಾರತದಲ್ಲಿ ಆರೋಗ್ಯ ವಿಮೆ ಹೇಗೆ ವಿಕಸನಗೊಂಡಿತು ಮತ್ತು ಭಾರತದಲ್ಲಿಯ ಆರೋಗ್ಯ ವಿಮಾ ಮಾರುಕಟ್ಟೆಯಲ್ಲಿನ ವಿವಿಧ ಸ್ಪರ್ಧಕರ ಬಗ್ಗೆ ಸಹ ವಿವರಿಸುತ್ತದೆ.

**ಕಲಿಕೆಯ ಫಲಿತಾಂಶಗಳು**

**A.** ಆರೋಗ್ಯ ರಕ್ಷಣೆಯನ್ನು ತಿಳಿದುಕೊಳ್ಳುವುದು

**B.** ಆರೋಗ್ಯ ರಕ್ಷಣೆಯ ಮಟ್ಟಗಳು

**C.** ಆರೋಗ್ಯ ರಕ್ಷಣೆಯ ವಿಧಗಳು

**D.** ಭಾರತದಲ್ಲಿ ಆರೋಗ್ಯ ವಿಮೆಯ ವಿಕಸನ

**E.** ಆರೋಗ್ಯ ವಿಮಾ ಮಾರುಕಟ್ಟೆ

ಈ ಅಧ್ಯಾಯವನ್ನು ಅಧ್ಯಯನ ಮಾಡಿದ ನಂತರ ಈ ಕೆಳಗೆ ನೀಡಲಾದ ಸಂಗತಿಗಳು ನಿಮಗೆ ಶಕ್ಯವಾಗುತ್ತವೆ:

**a)** ವಿಮೆಯು ಹೇಗೆ ವಿಕಸನಗೊಂಡಿತು ಎಂಬುದನ್ನು ಅರ್ಥಮಾಡಿಕೊಳ್ಳುವುದು.

**b)** ಆರೋಗ್ಯ ರಕ್ಷಣೆಯ ಪರಿಕಲ್ಪನೆ ಮತ್ತು ಆರೋಗ್ಯ ರಕ್ಷಣೆಯ ವಿಧಗಳು ಮತ್ತು ಮಟ್ಟಗಳನ್ನು ವಿವರಿಸುವುದು.

**c)** ಭಾರತದಲ್ಲಿ ಆರೋಗ್ಯ ರಕ್ಷಣೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಮತ್ತು ಸ್ವಾತಂತ್ರ್ಯದ ನಂತರ ಮಾಡಿದ ಪ್ರಗತಿಯನ್ನು ಮೆಚ್ಚುವುದು.

**d)** ಭಾರತದಲ್ಲಿ ಆರೋಗ್ಯ ವಿಮೆಯ ವಿಕಾಸವನ್ನು ಚರ್ಚಿಸುವುದು.

**e)** ಭಾರತದಲ್ಲಿಯ ಆರೋಗ್ಯ ವಿಮಾ ಮಾರುಕಟ್ಟೆಯನ್ನು ಅರಿತುಕೊಳ್ಳುವುದು.

## A. ಆರೋಗ್ಯ ರಕ್ಷಣೆಯನ್ನು ತಿಳಿಯುವುದು

'ಆರೋಗ್ಯ(ಹೆಲ್ತ್)' ಎಂಬ ಪದವು 'ದೇಹದ ಸದೃಢತೆ'ಎಂಬ ಅರ್ಥವಿರುವ 'ಹೋಲ್ತ್' ಎಂಬ ಪದದಿಂದ ಬಂದಿದೆ.

ಹಿಂದಿನ ಕಾಲದಲ್ಲಿ, ಆರೋಗ್ಯವನ್ನು 'ದೈವಿಕ ಕೊಡುಗೆ' ಎಂದು ಪರಿಗಣಿಸಲಾಗುತ್ತಿತ್ತು ಮತ್ತು ಸಂಬಂಧಿತ ವ್ಯಕ್ತಿ ಮಾಡಿದ ಪಾಪಗಳಿಂದ ಅನಾರೋಗ್ಯ ಉಂಟಾಗುತ್ತದೆಯೆಂದು ನಂಬಲಾಗುತ್ತಿತ್ತು. ಹಿಪ್ಪೊಕ್ರೇಟ್ಸ್ (**460** ರಿಂದ **370 BC)** ಅವರು ಅನಾರೋಗ್ಯದ ಹಿಂದಿನ ಕಾರಣಗಳನ್ನು ಮೊದಲು ಗುರುತಿಸಿದರು. ಅವರ ಪ್ರಕಾರ ಅನಾರೋಗ್ಯವು, ಪರಿಸರ, ನೈರ್ಮಲ್ಯ, ವೈಯಕ್ತಿಕ ನೈರ್ಮಲ್ಯ ಮತ್ತು ಆಹಾರಕ್ರಮಕ್ಕೆ ಸಂಬಂಧಿಸಿದ ವಿವಿಧ ಅಂಶಗಳಿಂದ ಉಂಟಾಗುತ್ತದೆ. ಪ್ರಾಚೀನ ಭಾರತದ ವೈದಿಕ ಗ್ರಂಥಗಳು 'ಆರೋಗ್ಯಮೇ ಮಹಾಭಾಗ್ಯ' ಎಂದರೆ 'ಆರೋಗ್ಯವೇ ಮಹಾಭಾಗ್ಯ' ಅಥವಾ ಬೇರೆ ರೀತಿಯಲ್ಲಿ ಹೇಳುವುದಾದರೆ, 'ಆರೋಗ್ಯವೇ ಸಂಪತ್ತು' ಎಂದು ಹೇಳುತ್ತವೆ. ಅಥರ್ವವೇದ, ಚರಕ ಸಂಹಿತೆ, ಸುಶ್ರುತ ಸಂಹಿತೆ, ಅಷ್ಟಾಂಗಹೃದಯಂ, ಅಷ್ಟಾಂಗಸಂಗ್ರಹ, ಭೇಲ ಸಂಹಿತೆ ಮತ್ತು ಕಶ್ಯಪ ಸಂಹಿತೆಯಂತಹ ಪ್ರಾಚೀನ ಭಾರತದ ಅನೇಕ ಗ್ರಂಥಗಳು ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಅಭ್ಯಾಸ ಮಾಡಲಾದ ಚಿಕಿತ್ಸಾ ಸಂಪ್ರದಾಯಗಳನ್ನು ಚರ್ಚಿಸುತ್ತವೆ.

### ವ್ಯಾಖ್ಯಾನ

ವ್ಯಾಪಕವಾಗಿ ಅಂಗೀಕರಿಸಲ್ಪಟ್ಟ ಆರೋಗ್ಯದ ವ್ಯಾಖ್ಯೆಯನ್ನು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂ ಎಚ್‌ಓ) ನೀಡಿದೆ - ಆರೋಗ್ಯವು ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿಯಾಗಿದ್ದು ಕೇವಲ ರೋಗ ಅಥವಾ ದುರ್ಬಲತೆಯ ಅನುಪಸ್ಥಿತಿಯಲ್ಲ.'

---

### ಆರೋಗ್ಯದ ನಿರ್ಧಾರಕಗಳು

ಸಾಮಾನ್ಯವಾಗಿ ಈ ಕೆಳಗಿನ ಅಂಶಗಳು ಯಾವುದೇ ವ್ಯಕ್ತಿಯ ಆರೋಗ್ಯವನ್ನು ನಿರ್ಧರಿಸುತ್ತವೆ ಎಂದು ನಂಬಲಾಗಿದೆ:

**a) ಜೀವನಶೈಲಿಯ ಅಂಶಗಳು**

ಜೀವನಶೈಲಿಯ ಅಂಶಗಳು ಹೆಚ್ಚಾಗಿ ಸಂಬಂಧಪಟ್ಟ ವ್ಯಕ್ತಿಯ ನಿಯಂತ್ರಣದಲ್ಲಿರುತ್ತವೆ ಉದಾ. ಉತ್ತಮ ಆರೋಗ್ಯವನ್ನು ಹೊಂದಲು ಕಾರಣವಾಗುವ ವ್ಯಾಯಾಮ ಮತ್ತು ಮಿತಿಯಾದ ಆಹಾರ; ಕ್ಯಾನ್ಸರ್, ಏಡ್ಸ್, ಅಧಿಕ ರಕ್ತದೊತ್ತಡ ಮತ್ತು ಮಧುಮೇಹದಂತಹ ಮುಂತಾದ ಕೆಲವು ಕಾಯಿಲೆಗಳಿಗೆ ಕಾರಣವಾಗುವ ಚಿಂತೆಯನ್ನು ತಪ್ಪಿಸುವುದು.

**b) ಪರಿಸರದ ಅಂಶಗಳು**

ಇನ್‌ಫ್ಲುಯೆಂಜಾ ಮತ್ತು ಚಿಕನ್ ಪಾಕ್ಸ್ ನಂತಹ ಸಾಂಕ್ರಾಮಿಕ ರೋಗಗಳು ಅಸ್ವಚ್ಛತೆಯಿಂದ ಹರಡುತ್ತವೆ, ಮಲೇರಿಯಾ ಮತ್ತು ಡೆಂಗ್ಯೂ ಮುಂತಾದ ರೋಗಗಳು ಪರಿಸರದಲ್ಲಿಯ ಅಸ್ವಚ್ಛತೆಯಿಂದ ಹರಡುತ್ತವೆ, ಅದೇ ಕೆಲವು ರೋಗಗಳು ಪರಿಸರದ ಅಂಶಗಳಿಂದ ಕೂಡ ಉಂಟಾಗುತ್ತವೆ.

**c) ಆನುವಂಶಿಕ ಅಂಶಗಳು**

ರೋಗಗಳು ವಂಶವಾಹಿ(ಜೀನ್ಸ್)ಗಳ ಮೂಲಕ ಪೋಷಕರಿಂದ ಮಕ್ಕಳಿಗೆ ಹರಡಬಹುದು. ಇಂತಹ ಆನುವಂಶಿಕ ಅಂಶಗಳು ಜನಾಂಗ, ಭೌಗೋಳಿಕ ಸ್ಥಳ ಮತ್ತು ಸಮುದಾಯಗಳ ಆಧಾರದ ಮೇಲೆ ಪ್ರಪಂಚದಾದ್ಯಂತ ಹರಡಿರುವ ಜನಸಂಖ್ಯೆಯ ನಡುವೆ ವಿಭಿನ್ನ ಆರೋಗ್ಯ ಪ್ರವೃತ್ತಿಗಳಿಗೆ ಕಾರಣವಾಗುತ್ತವೆ.

ದೇಶದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯು ಅದರ ಜನರ ಆರೋಗ್ಯದ ಮೇಲೆ ಅವಲಂಬಿತವಾಗಿದೆ ಎಂಬುದು ಸ್ಪಷ್ಟವಾಗಿದೆ. ವಿಭಿನ್ನ ಸಂದರ್ಭಗಳಲ್ಲಿ ವಿವಿಧ ರೀತಿಯ ಆರೋಗ್ಯ ರಕ್ಷಣೆಯ ಅಗತ್ಯವಿದೆಯೇ ಎಂಬ ಪ್ರಶ್ನೆಯನ್ನು ಇದು ಹುಟ್ಟು ಹಾಕುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ಕೆಳಗಿನ ಯಾವ ರೋಗಗಳು ಜೀವನಶೈಲಿಯ ಅಂಶಗಳಿಗೆ ಕಾರಣವಾಗುವುದಿಲ್ಲ (ಅಂದರೆ ವ್ಯಕ್ತಿಯ ನಿಯಂತ್ರಣದಲ್ಲಿಲ್ಲ)**?**

**I.** ಕ್ಯಾನ್ಸರ್

**II.** ಏಡ್ಸ್

**III.** ಮಲೇರಿಯಾ

**IV.** ಅಧಿಕ ರಕ್ತದೊತ್ತಡ(ಹೈಪರ್ಟೆನ್ಷನ್)

---

## B. ಆರೋಗ್ಯ ರಕ್ಷಣೆಯ ಮಟ್ಟಗಳು

ಆರೋಗ್ಯ ರಕ್ಷಣೆಯು ಜನರ ಆರೋಗ್ಯ ಸುಧಾರಣೆಯನ್ನು ಉತ್ತೇಜಿಸಲು, ನಿರ್ವಹಿಸಲು, ಮೇಲ್ವಿಚಾರಣೆ ಮಾಡಲು ಅಥವಾ ಪುನಃಸ್ಥಾಪಿಸಲು ಸರ್ಕಾರ ಸೇರಿದಂತೆ ವಿವಿಧ ಏಜೆನ್ಸಿಗಳು ಮತ್ತು ಪೂರೈಕೆದಾರರು ಒದಗಿಸುವ ಸೇವೆಗಳ ಒಂದು ಗುಂಪಾಗಿದೆ. ಆರೋಗ್ಯ ರಕ್ಷಣೆಯು ಪರಿಣಾಮಕಾರಿಯಾಗಬೇಕಾದರೆ:

- ಜನರ ಅಗತ್ಯಗಳಿಗೆ ಸೂಕ್ತವಾಗಿರಬೇಕು
- ವ್ಯಾಪಕವಾಗಿರಬೇಕು
- ಸಮರ್ಪಕವಾಗಿರಬೇಕು
- ಸುಲಭವಾಗಿ ಲಭ್ಯವಾಗಿರಬೇಕು
- ಕೈಗೆಟುಕುವಂತಿರಬೇಕು

ಆರೋಗ್ಯ ರಕ್ಷಣೆಯ ಸೌಲಭ್ಯಗಳು ಜನಸಂಖ್ಯೆಗೆ ಉಂಟಾಗಬಹುದಾದ ರೋಗಸಂಭವದ ಸಂಭವನೀಯತೆಯನ್ನು ಆಧರಿಸಿರಬೇಕು. ಉದಾಹರಣೆಗೆ, ಒಬ್ಬ ವ್ಯಕ್ತಿಯು ವರ್ಷಕ್ಕೆ ಹಲವು ಬಾರಿ ಜ್ವರ, ಶೀತ, ಕೆಮ್ಮು, ಚರ್ಮದ ಅಲರ್ಜಿಗಳು ಇತ್ಯಾದಿಗಳನ್ನು ಪಡೆಯಬಹುದು, ಆದರೆ ಅವನು/ಅವಳು ಯಕೃತ್ತಿನ ಉರಿಯೂತ(ಹೆಪಟೈಟಿಸ್ ಬಿ)ದಿಂದ ಬಳಲುತ್ತಿರುವ ಸಂಭವನೀಯತೆಯು ಶೀತ ಮತ್ತು ಕೆಮ್ಮಿಗೆ ಹೋಲಿಸಿದರೆ ಕಡಿಮೆಯಾಗಿರುತ್ತದೆ.

ಆದ್ದರಿಂದ, ಗ್ರಾಮ ಅಥವಾ ಜಿಲ್ಲೆ ಅಥವಾ ರಾಜ್ಯ ಯಾವುದೇ ಪ್ರದೇಶದಲ್ಲಿ ಆರೋಗ್ಯ ಸೌಲಭ್ಯಗಳನ್ನು ಸ್ಥಾಪಿಸುವ ಅಗತ್ಯವು ಆ ಪ್ರದೇಶದ ಸೂಚಕಗಳು ಎಂದು ಕರೆಯಲ್ಪಡುವ ವಿವಿಧ ಆರೋಗ್ಯ ಅಂಶಗಳನ್ನು ಆಧರಿಸಿರುತ್ತದೆ:

- ✓ ಜನಸಂಖ್ಯೆಯ ಪ್ರಮಾಣ
- ✓ ಮರಣದ ದರ
- ✓ ಅನಾರೋಗ್ಯದ ದರ
- ✓ ಅಂಗವಿಕಲತೆಯ ದರ
- ✓ ಜನರ ಸಾಮಾಜಿಕ ಮತ್ತು ಮಾನಸಿಕ ಆರೋಗ್ಯ
- ✓ ಜನರ ಸಾಮಾನ್ಯ ಪೋಷಣೆಯ ಸ್ಥಿತಿ
- ✓ ಗಣಿಗಾರಿಕೆ ಪ್ರದೇಶ ಅಥವಾ ಕೈಗಾರಿಕಾ ಪ್ರದೇಶದಂತಹ ಪರಿಸರದ ಅಂಶಗಳು
- ✓ ಸಂಭವನೀಯ ಆರೋಗ್ಯ ರಕ್ಷಣೆ ಒದಗಿಸುವ ವ್ಯವಸ್ಥೆ ಉದಾ. ಹೃದ್ರೋಗ ತಜ್ಞ ವೈದ್ಯರು ಹಳ್ಳಿಯಲ್ಲಿ ಸುಲಭವಾಗಿ ಲಭ್ಯವಿಲ್ಲದಿರಬಹುದು ಆದರೆ ಜಿಲ್ಲೆಯ ಪಟ್ಟಣದಲ್ಲಿ ಇರಬಹುದು
- ✓ ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು ಎಷ್ಟು ಪ್ರಮಾಣದಲ್ಲಿ ಬಳಸಿಕೊಳ್ಳಲ್ಪಡಬಹುದು
- ✓ ಕೈಗೆಟಕುವಿಕೆಯಂತಹ ಸಾಮಾಜಿಕ-ಆರ್ಥಿಕ ಅಂಶಗಳು

ಸರ್ಕಾರವು ಮೇಲಿನ ಅಂಶಗಳ ಆಧಾರದ ಮೇಲೆ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ಮಟ್ಟದ ಆರೋಗ್ಯ ರಕ್ಷಣೆಗಾಗಿ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸುತ್ತದೆ ಮತ್ತು ಆರೋಗ್ಯ ಸೇವೆಯನ್ನು ಕೈಗೆಟುಕುವ ಮತ್ತು ಜನಸಂಖ್ಯೆಗೆ ಪ್ರವೇಶಸಾಧ್ಯವನ್ನಾಗಿಸಲು ಸೂಕ್ತವಾದ ಇತರ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

---

## C. ಆರೋಗ್ಯ ರಕ್ಷಣೆಯ ವಿಧಗಳು

ಆರೋಗ್ಯ ರಕ್ಷಣೆಯನ್ನು ಒಟ್ಟಾರೆಯಾಗಿ ಈ ಕೆಳಗಿನಂತೆ ವರ್ಗೀಕರಿಸಲಾಗಿದೆ:

### 1. ಪ್ರಾಥಮಿಕ ಆರೋಗ್ಯ ರಕ್ಷಣೆ

ಪ್ರಾಥಮಿಕ ಆರೋಗ್ಯ ಸೇವೆಯು ಯಾವುದೇ ಕಾಯಿಲೆಗಾಗಿ ರೋಗಿಯು ಮೊದಲು ಸಂಪರ್ಕಿಸುವ, ಅಂದರೆ ಆರೋಗ್ಯ ವ್ಯವಸ್ಥೆಯಲ್ಲಿಯ ಎಲ್ಲ ರೋಗಿಗಳಿಗೆ ಸಂಪರ್ಕದ ಮೊದಲ ಬಿಂದು ಎಂದು ಹೇಳಬಹುದಾದ ಪ್ರಾಥಮಿಕ ಆರೋಗ್ಯ ಪೂರೈಕೆದಾರರು, ವೈದ್ಯರು, ದಾದಿಯರು ಮತ್ತು ಇತರ ಸಣ್ಣ ಚಿಕಿತ್ಸಾಲಯಗಳು ಒದಗಿಸುವ ಸೇವೆಗಳನ್ನು ಸೂಚಿಸುತ್ತದೆ.

ಉದಾಹರಣೆಗೆ, ಒಬ್ಬ ವ್ಯಕ್ತಿಯು ಜ್ವರಕ್ಕಾಗಿ ಓರ್ವ ವೈದ್ಯರನ್ನು ಭೇಟಿ ಮಾಡಿದರೆ ಮತ್ತು ಪ್ರಾಥಮಿಕ ರೋಗನಿರ್ಣಯವು ಡೆಂಗ್ಯೂ ಜ್ವರವನ್ನು ಸೂಚಿಸಿದರೆ, ಪ್ರಾಥಮಿಕ ಆರೋಗ್ಯ ರಕ್ಷಣೆ ನೀಡುವವರು ಕೆಲವು ಔಷಧಿಗಳನ್ನು ಸೂಚಿಸುತ್ತಾರೆ ಆದರೆ ವಿಶೇಷ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವಂತೆ ಸಹ ರೋಗಿಯನ್ನು ನಿರ್ದೇಶಿಸುತ್ತಾರೆ.

ದೇಶದ ಮಟ್ಟದಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಂದ ಸ್ಥಾಪಿಸಲಾಗಿದೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಜನಸಂಖ್ಯೆಯ ಗಾತ್ರವನ್ನವಲಂಬಿಸಿ ಸ್ಥಾಪಿಸಲಾಗಿದೆ ಮತ್ತು ಕೆಲವು ರೂಪದಲ್ಲಿ ಅಥವಾ ಇನ್ನೊಂದರಲ್ಲಿ ಗ್ರಾಮ ಮಟ್ಟದವರೆಗೂ ಇರುತ್ತವೆ.

**2. ಮಾಧ್ಯಮಿಕ ಆರೋಗ್ಯ ರಕ್ಷಣೆ**

ಮಾಧ್ಯಮಿಕ ಆರೋಗ್ಯ ರಕ್ಷಣೆಯೆನ್ನುವುದು ಸಾಮಾನ್ಯವಾಗಿ ರೋಗಿಗಳೊಂದಿಗೆ ಮೊದಲ ಸಂಪರ್ಕವನ್ನು ಹೊಂದಿರದ ವೈದ್ಯಕೀಯ ತಜ್ಞರು ಮತ್ತು ಇತರ ಆರೋಗ್ಯ ವೃತ್ತಿಪರರು ಒದಗಿಸುವ ಆರೋಗ್ಯ ಸೇವೆಗಳನ್ನು ಸೂಚಿಸುತ್ತದೆ. ಇದು ತೀವ್ರ ನಿಗಾ ಸೇವೆಗಳು, ಆಂಬ್ಯುಲೆನ್ಸ್ ಸೌಲಭ್ಯಗಳು, ರೋಗನಿರ್ಣಯಶಾಸ್ತ್ರ(ಪ್ಯಾಥಾಲಾಜಿ), ರೋಗನಿರ್ಣಯ ಮತ್ತು ಇತರ ಸಂಬಂಧಿತ ವೈದ್ಯಕೀಯ ಸೇವೆಗಳನ್ನು ಒಳಗೊಂಡಂತೆ ಗಂಭೀರವಾದ ಅನಾರೋಗ್ಯಕ್ಕೆ ಆಗಾಗ್ಗೆ (ಆದರೆ ಅನಿವಾರ್ಯವಲ್ಲದ) ಒಳರೋಗಿಯಾಗಿ ಅಲ್ಪಾವಧಿಗೆ ಚಿಕಿತ್ಸೆಯ ಅಗತ್ಯವಿರುವ ತೀವ್ರವಾದ ಆರೈಕೆಯನ್ನು ಒಳಗೊಂಡಿರುತ್ತದೆ.

**3. ತೃತೀಯ ಆರೋಗ್ಯ ರಕ್ಷಣೆ**

ತೃತೀಯ ಆರೋಗ್ಯ ರಕ್ಷಣೆಯು, ಸಾಮಾನ್ಯವಾಗಿ ಒಳರೋಗಿಗಳಿಗೆ ಮತ್ತು ಪ್ರಾಥಮಿಕ/ಮಾಧ್ಯಮಿಕ ಆರೈಕೆ ಒದಗಿಸುವವರಿಂದ ಶಿಫಾರಸಿನೊಂದಿಗೆ ಪಡೆಯುವ ವಿಶೇಷ ಸಲಹಾ ಆರೋಗ್ಯ ರಕ್ಷಣೆಯಾಗಿದೆ.

ದ್ವಿತೀಯ ಆರೋಗ್ಯ ರಕ್ಷಣೆ ಒದಗಿಸುವವರ ವ್ಯಾಪ್ತಿಯನ್ನು ಮೀರಿ ಮುಂದುವರಿದ ವೈದ್ಯಕೀಯ ಸೌಲಭ್ಯಗಳು ಮತ್ತು ವೈದ್ಯಕೀಯ ವೃತ್ತಿಪರರನ್ನು ಹೊಂದಿರುವವರು ತೃತೀಯ ಆರೋಗ್ಯ ರಕ್ಷಣೆ ಒದಗಿಸುವವರ ಉದಾಹರಣೆಗಳು ಉದಾ. ಆಂಕೊಲಾಜಿ (ಕ್ಯಾನ್ಸರ್ ಚಿಕಿತ್ಸೆ), ಅಂಗ ಕಸಿ ಸೌಲಭ್ಯಗಳು, ಹೆಚ್ಚಿನ ಅಪಾಯದ ಗರ್ಭಧಾರಣೆಯ ತಜ್ಞರು ಇತ್ಯಾದಿ.

ಆರೈಕೆಯ ಮಟ್ಟವು ಹೆಚ್ಚಾದಂತೆ, ಆರೈಕೆಗೆ ಸಂಬಂಧಿಸಿದ ವೆಚ್ಚಗಳು ಸಹ ಹೆಚ್ಚಾಗುತ್ತವೆ ಎಂಬುದನ್ನು ಗಮನಿಸಬೇಕು. ವಿವಿಧ ಹಂತದ ಆರೈಕೆಗಾಗಿ ಮೂಲಸೌಕರ್ಯವು ದೇಶದಿಂದ ದೇಶಕ್ಕೆ, ಗ್ರಾಮೀಣ-ನಗರ ಪ್ರದೇಶಗಳಿಗೆ ಬದಲಾಗುತ್ತದೆ, ಅಲ್ಲದೇ ಸಾಮಾಜಿಕ-ಆರ್ಥಿಕ ಅಂಶಗಳು ಸಹ ಅವುಗಳ ಮೇಲೆ ಪ್ರಭಾವ ಬೀರುತ್ತವೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 2**

ಈ ಕೆಳಗಿನವುಗಳಲ್ಲಿ ಯಾವುದು ಪ್ರಾಥಮಿಕ ಆರೋಗ್ಯದ ಭಾಗವಾಗಿದೆ?

I. ಜ್ವರ

II. ಕ್ಯಾನ್ಸರ್

III. ಅಂಗ ಕಸಿ

IV. ಹೆಚ್ಚಿನ ಅಪಾಯದ ಗರ್ಭಧಾರಣೆ

---

## D. ಭಾರತದಲ್ಲಿ ಆರೋಗ್ಯ ವಿಮೆಯ ವಿಕಸನ

ಸರ್ಕಾರವು ಆರೋಗ್ಯ ರಕ್ಷಣೆಯ ಬಗ್ಗೆ ತನ್ನ ನೀತಿ ನಿರ್ಧಾರಗಳಲ್ಲಿ ನಿರತವಾಗಿದ್ದಾಗ, ಆರೋಗ್ಯ ವಿಮಾ ಯೋಜನೆಗಳನ್ನು ಜಾರಿಗೆ ಸಹ ತಂದಿತು. ವಿಮಾ ಕಂಪನಿಗಳು ತಮ್ಮ ಆರೋಗ್ಯ ವಿಮಾ ಪಾಲಿಸಿಗಳೊಂದಿಗೆ ನಂತರ ಬಂದವು. ಭಾರತದಲ್ಲಿ ಆರೋಗ್ಯ ವಿಮೆಯನ್ನು ಹೇಗೆ ಅಭಿವೃದ್ಧಿಪಡಿಸಲಾಗಿದೆ ಎಂಬುದು ಇಲ್ಲಿದೆ:

### 1. ಉದ್ಯೋಗಿಗಳ ರಾಜ್ಯ ವಿಮಾ ಯೋಜನೆ

ಭಾರತದಲ್ಲಿ ಆರೋಗ್ಯ ವಿಮೆಯು ಔಪಚಾರಿಕವಾಗಿ 1947 ರಲ್ಲಿ ದೇಶದ ಸ್ವಾತಂತ್ರ್ಯದ ನಂತರ ಈಎಸ್ಐ ಕಾಯಿದೆ, 1948 ರ ಪ್ರಕಾರ ಪರಿಚಯಿಸಲಾದ ಉದ್ಯೋಗಿಗಳ ರಾಜ್ಯ ವಿಮಾ ಯೋಜನೆಯ ಪ್ರಾರಂಭದೊಂದಿಗೆ ಪ್ರಾರಂಭವಾಯಿತು. ಈ ಯೋಜನೆಯನ್ನು ಔಪಚಾರಿಕ ಖಾಸಗಿ ವಲಯದಲ್ಲಿ ಉದ್ಯೋಗದಲ್ಲಿರುವ ನೀಲಿ ಕಾಲರ್ ಕಾರ್ಮಿಕರಿಗಾಗಿ ಪರಿಚಯಿಸಲಾಯಿತು ಮತ್ತು ತನ್ನದೇ ಆದ ಔಷಧಾಲಯಗಳು ಮತ್ತು ಆಸ್ಪತ್ರೆಗಳ ಜಾಲದ ಮೂಲಕ ಸಮಗ್ರ ಆರೋಗ್ಯ ಸೇವೆಗಳುನ್ನು ಒದಗಿಸುತ್ತದೆ.

ಈಎಸ್ಐಸಿ (ಉದ್ಯೋಗಿಗಳ ರಾಜ್ಯ ವಿಮಾ ನಿಗಮ) ತನ್ನದೇ ಆದ ಆಸ್ಪತ್ರೆಗಳು ಮತ್ತು ಔಷಧಾಲಯಗಳನ್ನು ನಡೆಸುತ್ತಿರುವ ಅನುಷ್ಠಾನ ಮಾಡುವ ಸಂಸ್ಥೆಯಾಗಿದೆ ಮತ್ತು ತನ್ನದೇ ಆದ ಸೌಲಭ್ಯಗಳು ಅಸಮರ್ಪಕವಾಗಿರುವಲ್ಲಿ ಸಾರ್ವಜನಿಕ/ಖಾಸಗಿ ಪೂರೈಕೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತದೆ.

### 2. ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ

ಈಎಸ್ಐಎಸ್ ನಂತರ ಶೀಘ್ರದಲ್ಲೇ 1954 ರಲ್ಲಿ ಪಿಂಚಣಿದಾರರು ಮತ್ತು ನಾಗರಿಕ ಉದ್ಯೋಗಗಳಲ್ಲಿ ಕೆಲಸ ಮಾಡುವ ಅವರ ಕುಟುಂಬದ ಸದಸ್ಯರು ಸೇರಿದಂತೆ ಕೇಂದ್ರ ಸರ್ಕಾರಿ ನೌಕರರಿಗೆ ಪರಿಚಯಿಸಲಾದ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ (ಸಿಜಿಎಚ್ಎಸ್)ಯಿಂದ ಅನುಸರಿಸಲಾಯಿತು. ಇದು ಉದ್ಯೋಗಿಗಳು ಮತ್ತು ಅವರ ಕುಟುಂಬಗಳಿಗೆ ಸಮಗ್ರ ವೈದ್ಯಕೀಯ

ಆರೈಕೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ ಮತ್ತು ಭಾಗಶಃ ಉದ್ಯೋಗಿಗಳಿಂದ ಮತ್ತು ಹೆಚ್ಚಾಗಿ ಉದ್ಯೋಗದಾತರಿಂದ (ಕೇಂದ್ರ ಸರ್ಕಾರ) ಇದಕ್ಕೆ ಬಂಡವಾಳ ಸಂಗ್ರಹಮಾಡಲಾಗುತ್ತದೆ.

**3. ವಾಣಿಜ್ಯ ಆರೋಗ್ಯ ವಿಮೆ**

ವಾಣಿಜ್ಯ ಆರೋಗ್ಯ ವಿಮೆಯನ್ನು ವಿಮಾ ಉದ್ಯಮದ ರಾಷ್ಟ್ರೀಕರಣದ ಮೊದಲು ಮತ್ತು ನಂತರ ಸಹ ಕೆಲವು ಜೀವೇತರ ವಿಮಾದಾರರು ನೀಡುತ್ತಿದ್ದರು.

1986 ರಲ್ಲಿ, ವ್ಯಕ್ತಿಗಳು ಮತ್ತು ಅವರ ಕುಟುಂಬಗಳಿಗಾಗಿ ಎಲ್ಲ ನಾಲ್ಕು ರಾಷ್ಟ್ರೀಕೃತ ಜೀವೇತರ ವಿಮಾ ಕಂಪನಿ(ಇವುಗಳು ಆಗ ಜನರಲ್ ಇನ್ಶುರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾದ ಅಂಗಸಂಸ್ಥೆಗಳಾಗಿದ್ದವು)ಗಳು ಭಾರತೀಯ ಮಾರುಕಟ್ಟೆಯಲ್ಲಿ ಮೊದಲ ಪ್ರಮಾಣಿತ ಆರೋಗ್ಯ ವಿಮಾ ಉತ್ಪನ್ನವನ್ನು ಪ್ರಾರಂಭಿಸಿದವು. ಮೆಡಿಕ್ಲೇಮ್ ಎಂಬ ಈ ಉತ್ಪನ್ನವನ್ನು ನಿರ್ದಿಷ್ಟ ವಾರ್ಷಿಕ ಮಿತಿಯ ನಷ್ಟ ಪರಿಹಾರದವರೆಗಿನ ಆಸ್ಪತ್ರೆಯ ವೆಚ್ಚಗಳಿಗೆ ಪ್ರಸೂತಿ ಚಿಕಿತ್ಸೆ, ಮೊದಲೇ ಅಸ್ತಿತ್ವದಲ್ಲಿರುವ ರೋಗಗಳು ಮುಂತಾದ ಕೆಲವು ಹೊರತುಗಳೊಂದಿಗೆ ಕವರೇಜ್ ಒದಗಿಸಲು ಪರಿಚಯಿಸಲಾಗಿದೆ.

ಇಂದು ಭಾರತದಲ್ಲಿ ಆಸ್ಪತ್ರೆಗೆ ದಾಖಲಾತಿಯ ಪರಿಹಾರ-ಆಧಾರಿತ ವಾರ್ಷಿಕ ಒಪ್ಪಂದವು ಖಾಸಗಿ ಆರೋಗ್ಯ ವಿಮೆಯ ಅತ್ಯಂತ ಜನಪ್ರಿಯ ರೂಪವಾಗಿದೆ. 2001 ರಲ್ಲಿ ಖಾಸಗಿ ಕಂಪನಿಗಳು ವಿಮಾ ಕ್ಷೇತ್ರಕ್ಕೆ ಬರುವುದರೊಂದಿಗೆ, ಆರೋಗ್ಯ ವಿಮೆಯು ಮಹತ್ತರವಾಗಿ ಬೆಳೆದಿದೆ. ಆದರೆ, ಇಂದಿಗೂ ದೊಡ್ಡ ಪ್ರಮಾಣದ ಮಾರುಕಟ್ಟೆ ಬಳಕೆಯಾಗದೇ ಉಳಿದಿದೆ.

ಆರೋಗ್ಯ ವಿಮಾ ಪಾಲಿಸಿಗಳನ್ನು ಖರೀದಿಸಲು ಸರ್ಕಾರವು ವ್ಯಕ್ತಿಗಳನ್ನು ಪ್ರೋತ್ಸಾಹಿಸುತ್ತದೆ. ವ್ಯಕ್ತಿಗಳು ಸ್ವಂತ, ಸಂಗಾತಿಯ ಮತ್ತು ಕುಟುಂಬದ ಸದಸ್ಯರ ಆರೋಗ್ಯ ವಿಮೆಗಾಗಿ ಪಾವತಿಸಿದ ಕಂತುಗಳನ್ನು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 ಡಿ ಅಡಿಯಲ್ಲಿ ತೆರಿಗೆಯ ಆದಾಯದಿಂದ ಕಡಿತಗೊಳಿಸಲು ಅನುಮತಿಸಲಾಗಿದೆ. 60 ವರ್ಷಕ್ಕಿಂತ ಮೇಲ್ಪಟ್ಟ ಪೋಷಕರು / ಅತ್ತೆ ಮಾವ(ಸಂಗಾತಿಯ ಪೋಷಕರು)ರಿಗಾಗಿ ಪಾವತಿಸಿದ ಕಂತುಗಳಿಗೆ ಸೆಕ್ಷನ್ ಹೆಚ್ಚಿನ ಮಿತಿಗಳನ್ನು ಅನುಮತಿಸುತ್ತದೆ.

ಕವರ್ ಗಳಲ್ಲಿ ಗಣನೀಯ ವ್ಯತ್ಯಾಸಗಳು, ಹೊರತುಗಳು ಮತ್ತು ಹೊಸ ಆಡ್-ಆನ್ ಕವರ್ ಗಳನ್ನು ಪರಿಚಯಿಸಲಾಗಿದೆ ಅದನ್ನು ನಂತರದ ಅಧ್ಯಾಯಗಳಲ್ಲಿ ಚರ್ಚಿಸಲಾಗುವುದು.

ವ್ಯಕ್ತಿಗಳು ಮತ್ತು ಅವರ ಕುಟುಂಬಗಳಿಗೆ ಮೊದಲ ಗುಣಮಟ್ಟದ ಆರೋಗ್ಯ ವಿಮಾ ಉತ್ಪನ್ನವನ್ನು ಎಲ್ಲ ನಾಲ್ಕು ರಾಷ್ಟ್ರೀಕೃತ ಜೀವೇತರ ವಿಮಾ ಕಂಪನಿಗಳಿಂದ _____ ವರ್ಷದಲ್ಲಿ ಭಾರತೀಯ ಮಾರುಕಟ್ಟೆಯಲ್ಲಿ ಪ್ರಾರಂಭಿಸಲಾಯಿತು.

I. **1948**

II. **1954**

III. **1986**

IV. **2001**

## E. ಆರೋಗ್ಯ ವಿಮಾ ಮಾರುಕಟ್ಟೆ

ಆರೋಗ್ಯ ವಿಮಾ ಮಾರುಕಟ್ಟೆಯು ಇಂದು ಹಲವಾರು ಸ್ಪರ್ಧಕರನ್ನು ಒಳಗೊಂಡಿದೆ, ಕೆಲವರು ಆರೋಗ್ಯ ರಕ್ಷಣೆ ಸೌಲಭ್ಯಗಳನ್ನು ಒದಗಿಸುವವರು, ಇತರರು ವಿಮಾ ಸೇವೆಗಳು ಮತ್ತು ವಿವಿಧ ಮಧ್ಯವರ್ತಿಗಳನ್ನು ಸಹ ಒದಗಿಸುತ್ತಾರೆ. ಕೆಲವರು ಮೂಲಭೂತ ಮೂಲಸೌಕರ್ಯಗಳನ್ನು ರೂಪಿಸಿದರೆ ಇತರರು ಬೆಂಬಲ ಸೌಲಭ್ಯಗಳನ್ನು ಒದಗಿಸುತ್ತಾರೆ. ಕೆಲವು ಸರ್ಕಾರಿ ವಲಯದಲ್ಲಿದ್ದರೆ ಇನ್ನು ಕೆಲವು ಖಾಸಗಿ ವಲಯದಲ್ಲಿವೆ.

### 1. ಖಾಸಗಿ ವಲಯದ ಆರೋಗ್ಯ ಸೇವೆ ಒದಗಿಸುವವರು

ಎಲ್ಲಾ ಮೂರು ರೀತಿಯ - ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ಆರೋಗ್ಯ ಸೇವೆಗಳನ್ನು ಒದಗಿಸುವ ಅತ್ಯಂತ ದೊಡ್ಡ ಖಾಸಗಿ ಆರೋಗ್ಯ ಕ್ಷೇತ್ರವನ್ನು ಭಾರತವು ಹೊಂದಿದೆ. ಸ್ವಯಂಪ್ರೇರಿತ, ಲಾಭೋದ್ದೇಶವಿಲ್ಲದ ಸಂಸ್ಥೆಗಳು ಮತ್ತು ವ್ಯಕ್ತಿಗಳಿಂದ ಹಿಡಿದು ಲಾಭೋದ್ದೇಶವಿಲ್ಲದ ಕಾರ್ಪೊರೇಟ್, ಟ್ರಸ್ಟ್ ಗಳು, ಏಕವ್ಯಕ್ತಿ ವೈದ್ಯರು, ಸ್ವತಂತ್ರ/ಪ್ರತ್ಯೇಕ ತಜ್ಞ ಸೇವೆಗಳು, ರೋಗನಿರ್ಣಯ ಪ್ರಯೋಗಾಲಯಗಳು, ಔಷಧಾಲಯ ಅಂಗಡಿಗಳು ಮತ್ತು ಅರ್ಹತೆಯಿಲ್ಲದ ಕಪಟ ವೈದ್ಯ(ಕ್ವಾಕ್ಸ್)ರನ್ನು ಸಹ ಇದು ಒಳಗೊಂಡಿರುತ್ತದೆ.

ಭಾರತವು ಇತರ ವೈದ್ಯಕೀಯ ಪದ್ಧತಿ(ಆಯುರ್ವೇದ/ ಸಿದ್ಧ/ ಯುನಾನಿ/ ಹೋಮಿಯೋಪತಿ)ಗಳಲ್ಲಿ ಸಹ 7 ಲಕ್ಷಕ್ಕೂ ಹೆಚ್ಚು ಹೆಚ್ಚಿನ ಸಂಖ್ಯೆಯ ಅರ್ಹತೆಯುಳ್ಳ ವೈದ್ಯರನ್ನು ಹೊಂದಿದೆ. ಇವು ಸಾರ್ವಜನಿಕ ಹಾಗೂ ಖಾಸಗಿ ವಲಯದಲ್ಲಿ ಸಹ ನೆಲೆಗೊಂಡಿವೆ. ಆರೋಗ್ಯ ಸೇವೆಯ ಲಾಭೋದ್ದೇಶಿತ ಖಾಸಗಿ ಪೂರೈಕೆದಾರರಲ್ಲದೆ, ಎನ್ ಜಿಒಗಳು ಮತ್ತು ಸ್ವಯಂಸೇವಾ ವಲಯವು ಸಹ ಸಮುದಾಯಕ್ಕೆ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ತೊಡಗಿಸಿಕೊಂಡಿದೆ.

ಸಾಮಾನ್ಯ ವಿಮಾ ವಲಯದ ವಿಮಾ ಕಂಪನಿಗಳು ಆರೋಗ್ಯ ವಿಮಾ ಸೇವೆಗಳ ಬಹುಪಾಲನ್ನು ಒದಗಿಸುತ್ತವೆ. ಸ್ವತಂತ್ರ/ಪ್ರತ್ಯೇಕ ಆರೋಗ್ಯ ವಿಮಾ (ಸ್ಟ್ಯಾಂಡ್ ಅಲೋನ್ ಹೆಲ್ತ್ ಇನ್ಶ್ಯುರೆನ್ಸ್ (ಸಹಿ)) ಕಂಪನಿಗಳಿಗೆ ಎಲ್ಲ ರೀತಿಯ ಆರೋಗ್ಯ ವಿಮೆಗಳನ್ನು ವಹಿವಾಟು ಮಾಡಲು ಅನುಮತಿಸಲಾಗಿದ್ದರೆ ಜೀವ ವಿಮಾ ಕಂಪನಿಗಳಿಗೆ ಸಹ ಕೆಲವು ರೀತಿಯ ಆರೋಗ್ಯ ವಿಮೆಗಳನ್ನು ವಹಿವಾಟು ಮಾಡಲು ಅನುಮತಿಸಲಾಗಿದೆ.

### 2. ಮಧ್ಯವರ್ತಿಗಳು:

ವಿಮಾ ಉದ್ಯಮದ ಭಾಗವಾಗಿ ಸೇವೆಗಳನ್ನು ಒದಗಿಸುವ ಹಲವಾರು ಜನರು ಮತ್ತು ಸಂಸ್ಥೆಗಳು ಸಹ ಆರೋಗ್ಯ ವಿಮಾ ಮಾರುಕಟ್ಟೆಯ ಭಾಗವಾಗಿವೆ. ಐಆರ್ ಡಿಎಐ ಕಾಯಿದೆ, **1999** ರ ಸೆಕ್ಷನ್ **2** ರಡಿಯಲ್ಲಿ ವಿಮಾ ಮಧ್ಯವರ್ತಿಗಳನ್ನು ವ್ಯಾಖ್ಯಾನಿಸಲಾಗಿದೆ. ಇವುಗಳಲ್ಲಿ ವಿಮಾ ದಲ್ಲಾಳಿಗಳು, ಮರುವಿಮಾ ದಲ್ಲಾಳಿಗಳು, ವಿಮಾ ಸಲಹೆಗಾರರು, ಸರ್ವೇಕ್ಷಣದಾರರು ಮತ್ತು ನಷ್ಟ ಮೌಲ್ಯಮಾಪಕರು ಹಾಗೂ ಮೂರನೇ ಪಕ್ಷದ ನಿರ್ವಾಹಕರು ಸಹ ಸೇರಿದ್ದಾರೆ.

ಮೂರನೇ ಪಕ್ಷದ ಆಡಳಿತಗಾರ(ಅಡ್ಮಿನಿಸ್ಟ್ರೇಟರ್) (ಟಿಪಿಎ)ರು ಎಂಬುದು ಐಆರ್ ಡಿಎಐನಲ್ಲಿ ನೋಂದಾಯಿಸಲಾದ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸಲು ಶುಲ್ಕಕ್ಕಾಗಿ ವಿಮಾಗಾರರಿಂದ

ನೇಮಿಸಿಕೊಂಡಿರುವ ಕಂಪನಿಯಾಗಿದೆ. ಆರೋಗ್ಯ ವಿಮಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಪ್ಪಂದದಡಿಯಲ್ಲಿ ವಿಮಾಗಾರರಿಗೆ ಓರ್ವ ಟಿಪಿಎ ಈ ಕೆಳಗೆ ನೀಡಲಾದ ಸೇವೆಗಳನ್ನು ಒದಗಿಸಬಹುದು:

**a.** ಆಯಾ ಪಾಲಿಸಿಗೆ ಆಧಾರವಾಗಿರುವ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ವಿಮಾಗಾರರು ನೀಡಿದ ಮಾರ್ಗಸೂಚಿಗಳ ಚೌಕಟ್ಟಿನೊಳಗೆ ವಿಮಾಗಾರರಿಂದ ಮೊದಲೇ ಅಧಿಕೃತರಾಗಿ ನಗದುರಹಿತ ಚಿಕಿತ್ಸೆ ಅಥವಾ ನಗದುರಹಿತ ಕ್ಲೇಮ್ ಗಳನ್ನು ಹೊರತುಪಡಿಸಿ ಕ್ಲೇಮ್ ಗಳ ಇತ್ಯರ್ಥ ಅಥವಾ ಎರಡನ್ನೂ ಮಾಡುವ ಮೂಲಕ ಆರೋಗ್ಯ ವಿಮಾ ಪಾಲಿಸಿಗಳಡಿಯಲ್ಲಿ ಕ್ಲೇಮ್ ಗಳಿಗೆ ಸೇವೆ ಸಲ್ಲಿಸುವುದು.

**b.** ವೈಯಕ್ತಿಕ ಅಪಘಾತ ಪಾಲಿಸಿ ಮತ್ತು ದೇಶೀಯ ಪ್ರವಾಸದ ಪಾಲಿಸಿಯಡಿಯಲ್ಲಿ ಆಸ್ಪತ್ರೆ ಚಿಕಿತ್ಸೆಯ ರಕ್ಷಣೆ ಯಾವುದಾದರೂ ಇದ್ದರೆ ಅದರ ಕ್ಲೇಮ್ ಗಳಿಗೆ ಸೇವೆ ಸಲ್ಲಿಸುವುದು.

**c.** ಆರೋಗ್ಯ ವಿಮಾ ಪಾಲಿಸಿಗಳ ಅಂಡರ್ ರೈಟಿಂಗ್ ಗೆ ಸಂಬಂಧಿಸಿದಂತೆ ವಿಮಾ ಪೂರ್ವ ವೈದ್ಯಕೀಯ ಪರೀಕ್ಷೆಗಳನ್ನು ಕೈಗೊಳ್ಳಲು ಅನುಕೂಲ ಮಾಡುವುದು.

**ಸಾರಾಂಶ**

a) ಹಲವು ಶತಮಾನಗಳ ಹಿಂದೆ ವಿಮೆಯು ಕೆಲವು ಅಥವಾ ಇತರ ಸ್ವರೂಪದಲ್ಲಿ ಅಸ್ತಿತ್ವದಲ್ಲಿತ್ತು ಆದರೆ ಅದರ ಆಧುನಿಕ ಸ್ವರೂಪವು ಮಾತ್ರ ಕೆಲವೇ ಶತಮಾನಗಳಷ್ಟು ಹಳೆಯದಾಗಿದೆ. ವಿಮೆಯು ಭಾರತದಲ್ಲಿ ಸರ್ಕಾರದ ನಿಯಂತ್ರಣದೊಂದಿಗೆ ಹಲವು ಹಂತಗಳನ್ನು ದಾಟಿದೆ.

b) ನಾಗರಿಕರ ಆರೋಗ್ಯವು ಬಹಳ ಮುಖ್ಯವಾಗಿರುವುದರಿಂದ ಸೂಕ್ತವಾದ ಆರೋಗ್ಯ ವ್ಯವಸ್ಥೆಯನ್ನು ರಚಿಸುವಲ್ಲಿ ಸರ್ಕಾರಗಳು ಪ್ರಮುಖ ಪಾತ್ರವಹಿಸುತ್ತವೆ.

c) ಒದಗಿಸಲಾದ ಆರೋಗ್ಯ ರಕ್ಷಣೆಯ ಮಟ್ಟವು ದೇಶದ ಜನಸಂಖ್ಯೆಗೆ ಸಂಬಂಧಿಸಿದ ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ.

d) ಅಗತ್ಯವಿರುವ ವೈದ್ಯಕೀಯ ಆರೈಕೆಯ ಮಟ್ಟವನ್ನು ಅವಲಂಬಿಸಿ ಆರೋಗ್ಯ ರಕ್ಷಣೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯವೆಂಬ ಮೂರು ವಿಧಗಳಿವೆ. ಪ್ರತಿ ಹಂತದೊಂದಿಗೆ ಆರೋಗ್ಯದ ವೆಚ್ಚವು ಹೆಚ್ಚಾಗುತ್ತದೆ ಮತ್ತು ತೃತೀಯ ಆರೈಕೆಯು ದುಬಾರಿಯಾಗಿದೆ.

e) ಭಾರತವು ತನ್ನದೇ ಆದ ಜನಸಂಖ್ಯೆಯ ಬೆಳವಣಿಗೆ ಮತ್ತು ನಗರೀಕರಣಕ್ಕೆ ಸರಿಯಾದ ಆರೋಗ್ಯ ರಕ್ಷಣೆಯ ಅಗತ್ಯಗಳಂತಹ ವಿಶಿಷ್ಟವಾದ ಸವಾಲುಗಳನ್ನು ಹೊಂದಿದೆ.

f) ಆರೋಗ್ಯ ವಿಮೆಗಾಗಿ ಯೋಜನೆಗಳನ್ನು ಮೊದಲು ಸಾರ್ವಜನಿಕ ವಲಯದ ವಿಮಾ ಕಂಪನಿಗಳು ತಂದವು ಮತ್ತು ನಂತರ ಖಾಸಗಿ ವಿಮಾ ಕಂಪನಿಗಳಿಂದ ವಾಣಿಜ್ಯ ವಿಮೆಯನ್ನು ಅನುಸರಿಸಲಾಯಿತು.

g) ಕೆಲವು ಮೂಲಸೌಕರ್ಯಗಳನ್ನು ಒದಗಿಸುವ ಅನೇಕ ಸ್ಪರ್ಧಕರಿಂದ, ವಿಮಾ ಸೇವೆಗಳನ್ನು ಒದಗಿಸುವ ಇತರರು, ಮಧ್ಯವರ್ತಿಗಳಾದ ದಲ್ಲಾಳಿಗಳು, ಏಜೆಂಟರು ಮತ್ತು ಆರೋಗ್ಯ ವಿಮಾ ವ್ಯವಹಾರಕ್ಕೆ ಸೇವೆ

ಸಲ್ಲಿಸುವ ಮೂರನೇ ಪಕ್ಷದ ಆಡಳಿತಗಾರರು ಮತ್ತು ಇತರ ನಿಯಂತ್ರಕರು, ತಮ್ಮ ಪಾತ್ರವಹಿಸುವ ಶೈಕ್ಷಣಿಕ ಮತ್ತು ಕಾನೂನು ಘಟಕಗಳಿಂದ ಆರೋಗ್ಯ ವಿಮಾ ಮಾರುಕಟ್ಟೆಯು ಮಾಡಲ್ಪಟ್ಟಿದೆ.

| ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು |
|---|

ಉತ್ತರ 1 ಸರಿಯಾದ ಆಯ್ಕೆ **III** ಆಗಿದೆ.

ಉತ್ತರ 2 ಸರಿಯಾದ ಆಯ್ಕೆ **I** ಆಗಿದೆ.

ಉತ್ತರ 3 ಸರಿಯಾದ ಆಯ್ಕೆ **III** ಆಗಿದೆ.

| ಪ್ರಮುಖ ಪದಗಳು |
|---|

**a)** ಆರೋಗ್ಯ ರಕ್ಷಣೆ

**b)** ವಾಣಿಜ್ಯ ವಿಮೆ

**c)** ರಾಷ್ಟ್ರೀಕರಣ

**d)** ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ಆರೋಗ್ಯ ರಕ್ಷಣೆ

**e)** ಮೂರನೇ ಪಕ್ಷದ ಆಡಳಿತಗಾರರು

# ಅಧ್ಯಾಯ H-02

# ಆರೋಗ್ಯ ವಿಮೆಯ ದಾಖಲೆಗಳು

| ಅಧ್ಯಾಯ ಪರಿಚಯ |
|---|

ವಿಮಾ ಉದ್ಯಮದಲ್ಲಿ, ನಾವು ಹೆಚ್ಚಿನ ಸಂಖ್ಯೆಯ ನಮೂನೆಗಳು, ದಾಖಲೆಗಳು ಇತ್ಯಾದಿಗಳೊಂದಿಗೆ ವ್ಯವಹರಿಸುತ್ತೇವೆ. ಈ ಈ ಅಧ್ಯಾಯವು ನಮಗೆ ದಾಖಲೆಗಳು ಮತ್ತು ಆರೋಗ್ಯ ವಿಮಾ ಒಪ್ಪಂದದಲ್ಲಿ ಅವುಗಳ ಪ್ರಾಮುಖ್ಯತೆಯ ಬಗ್ಗೆ ಪರಿಚಯಿಸುತ್ತದೆ.

| ಕಲಿಕೆಯ ಫಲಿತಾಂಶಗಳು |
|---|

**A. ಪ್ರಸ್ತಾವನೆಯ ನಮೂನೆ**

**B. ಪ್ರಸ್ತಾಪದ(ಪ್ರಪೋಸಲ್) ಸ್ವೀಕೃತಿ (ಅಂಡರ್ ರೈಟಿಂಗ್)**

**C. ವಿವರಣಾ ಪತ್ರ (ಪ್ರಾಸ್ಪೆಕ್ಟಸ್)**

**D. ಪಾಲಿಸಿ ದಾಖಲೆ**

**E. ನಿಯಮಗಳು ಮತ್ತು ಷರತ್ತುಗಳು**

ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ನಿಮಗೆ ಈ ಕೆಳಗಿನ ವಿಷಯಗಳನ್ನು ಅರಿಯಲು ಸಾಧ್ಯವಾಗುತ್ತದೆ:

a) ಪ್ರಸ್ತಾವನೆಯ ನಮೂನೆಯನ್ನು ವಿವರಿಸುವುದು

b) ವಿವರಣಾ ಪತ್ರದ ಪ್ರಾಮುಖ್ಯತೆಯನ್ನು ವಿವರಿಸುವುದು

c) ವಿಮಾ ಪಾಲಿಸಿ ದಾಖಲೆಯಲ್ಲಿನ ನಿಯಮಗಳು ಮತ್ತು ಶಬ್ದಾರ್ಥಗಳನ್ನು ವಿವರಿಸುವುದು.

d) ಪಾಲಿಸಿ ನಿಯಮ (ಕಂಡಿಷನ್) ಗಳು ಮತ್ತು ಷರತ್ತು(ವಾರಂಟಿ)ಗಳನ್ನು ಚರ್ಚಿಸುವುದು.

e) ಅನುಮೋದನೆ(ಎಂಡಾರ್ಸ್ ಮೆಂಟ್)ಗಳನ್ನು ಏಕೆ ಜಾರಿಗೊಳಿಸಲಾಗುತ್ತದೆ ಎಂಬುದನ್ನು ಗೌರವಿಸುವುದು.

f) ಕಂತು(ಪ್ರೀಮಿಯಂ) ರಸೀದಿಯನ್ನು ಅರ್ಥಮಾಡಿಕೊಳ್ಳುವುದು.

g) ನವೀಕರಣ ಸೂಚನೆಗಳನ್ನು ಏಕೆ ನೀಡಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವುದು.

## A. ಪ್ರಸ್ತಾವನೆಯ ನಮೂನೆಗಳು

### 1. ಆರೋಗ್ಯ ವಿಮೆಯ ಪ್ರಸ್ತಾವನೆ ನಮೂನೆಗಳು

ಸಾಮಾನ್ಯ ಅಧ್ಯಾಯಗಳಲ್ಲಿ ಚರ್ಚಿಸಿದಂತೆ ಪ್ರಸ್ತಾವನೆಯ ನಮೂನೆಗಳು ವಿಮಾ ಕಂಪನಿಗೆ ಪ್ರಸ್ತಾಪಿಸಲ್ಪಟ್ಟ ಅಪಾಯವನ್ನು ಒಪ್ಪಿಕೊಳ್ಳಬೇಕೇ ಎಂಬುದನ್ನು ನಿರ್ಧರಿಸಲು ವಿಮಾಗಾರರಿಗೆ ಅಗತ್ಯವಿರುವ ಎಲ್ಲ ಮಾಹಿತಿಯನ್ನು ಒಳಗೊಂಡಿರುತ್ತದೆ. ಆರೋಗ್ಯ ವಿಮಾ ಪಾಲಿಸಿಗಾಗಿರುವ ಪ್ರಸ್ತಾವನೆಯ ನಮೂನೆಯು ಒಳಗೊಂಡಿರುವ ಕೆಲವು ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

1. ಪ್ರಸ್ತಾವನೆ ನಮೂನೆಯು ವಿವರಣಾಪತ್ರವನ್ನು ಒಳಗೊಂಡಿದ್ದು ವ್ಯಾಪ್ತಿ, ಹೊರತುಗಳು, ನಿಬಂಧನೆಗಳು ಇತ್ಯಾದಿಗಳಂತಹ ಕವರ್ ನ ವಿವರಗಳನ್ನು ನೀಡುವ ವಿವರಗಳನ್ನು ಹೊಂದಿರುತ್ತದೆ. ಪ್ರಸ್ತಾವನೆಯ ನಮೂನೆಯು ವಿವರಣಾಪತ್ರದ ಭಾಗವಾಗಿದ್ದು ಪ್ರಸ್ತಾಪಕರು ಅದರ ವಿಷಯಗಳನ್ನು ಗಮನಿಸಿದ ಬಗ್ಗೆ ಸಹಿ ಮಾಡಿ ಘೋಷಿಸಬೇಕು.

2. ಪ್ರಸ್ತಾವನೆ ನಮೂನೆಯು ಹೆಸರು, ವಿಳಾಸ, ಉದ್ಯೋಗ, ಹುಟ್ಟಿದ ದಿನಾಂಕ, ಲಿಂಗ ಮತ್ತು ಪ್ರತಿ ವಿಮಾದಾರರ ಪ್ರಸ್ತಾಪಕರೊಂದಿಗಿನ ಸಂಬಂಧ, ಸರಾಸರಿ ಮಾಸಿಕ ಆದಾಯ ಮತ್ತು ಆದಾಯ ತೆರಿಗೆ ಪ್ಯಾನ್ ಸಂಖ್ಯೆ, ವೈದ್ಯಕೀಯ ವೈದ್ಯರ ಹೆಸರು ಮತ್ತು ವಿಳಾಸಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುತ್ತದೆ, ಅವರ ವಿದ್ಯಾರ್ಹತೆಗಳು ಮತ್ತು ನೋಂದಣಿ ಸಂಖ್ಯೆಯನ್ನು ಸಂಗ್ರಹಿಸುತ್ತದೆ. ಇತ್ತೀಚೆಗೆ ಬ್ಯಾಂಕ್ ವರ್ಗಾವಣೆಯ ಮೂಲಕ ನೇರವಾಗಿ ಕ್ಲೇಮ್ ಹಣವನ್ನು ಪಾವತಿಸಲು ವಿಮಾದಾರರ ಬ್ಯಾಂಕ್ ವಿವರಗಳನ್ನು ಸಹ ಸಂಗ್ರಹಿಸಲಾಗುತ್ತವೆ.

3. ಅದಲ್ಲದೇ, ವಿಮೆ ಮಾಡಿದ ವ್ಯಕ್ತಿಯ ವೈದ್ಯಕೀಯ ಸ್ಥಿತಿಗೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ. ನಮೂನೆಯಲ್ಲಿಯ ಈ ವಿವರವಾದ ಪ್ರಶ್ನೆಗಳು ಹಿಂದಿನ ಕ್ಲೇಮ್ ಗಳ ಅನುಭವವನ್ನು ಆಧರಿಸಿರುತ್ತವೆ ಮತ್ತು ಅಪಾಯದ ಸರಿಯಾದ ಅಂಡರ್ ರೈಟಿಂಗ್ ಅನ್ನು ಸಾಧಿಸುವುದು ಇವುಗಳ ಉದ್ದೇಶವಾಗಿದೆ.

4. ವಿಮಾದಾರರು ಯಾವುದೇ ನಿರ್ದಿಷ್ಟ ರೋಗಗಳಿಂದ ಬಳಲುತ್ತಿದ್ದರೆ ಸಂಪೂರ್ಣ ವಿವರಗಳನ್ನು ನಮೂನೆಯಲ್ಲಿ ತಿಳಿಸುವ ಅಗತ್ಯವಿರುತ್ತದೆ.

5. ಅಲ್ಲದೆ, ಅನುಭವಿಸಿದ ಯಾವುದೇ ಇತರ ಅನಾರೋಗ್ಯ ಅಥವಾ ಕಾಯಿಲೆ ಅಥವಾ ಅಪಘಾತಕ್ಕೊಳಗಾದ ವಿವರಗಳನ್ನು ಈ ಕೆಳಗಿನಂತೆ ಕೇಳಲಾಗುತ್ತದೆ:

   a. ಅನಾರೋಗ್ಯ/ಗಾಯ ಮತ್ತು ಚಿಕಿತ್ಸೆಯ ಸ್ವರೂಪ

   b. ಮೊದಲ ಚಿಕಿತ್ಸೆಯ ದಿನಾಂಕ

   c. ಚಿಕಿತ್ಸೆ ನೀಡುವ ವೈದ್ಯರ ಹೆಸರು ಮತ್ತು ವಿಳಾಸ

   d. ಸಂಪೂರ್ಣ ಗುಣಮುಖರಾಗಿದ್ದಾರೆಯೇ

6. ಯಾವುದೇ ಹೆಚ್ಚುವರಿ ಸಂಗತಿಗಳನ್ನು ಪ್ರಸ್ತಾಪಿಸಲು ಪ್ರಸ್ತಾಪಿಸುವವರು ಮತ್ತು ಅವರು ಯಾವುದೇ ಸಕಾರಾತ್ಮಕ ಅಸ್ತಿತ್ವ ಅಥವಾ ವೈದ್ಯಕೀಯ ಆರೈಕೆಯ ಅಗತ್ಯವಿರುವ ಯಾವುದೇ ಅನಾರೋಗ್ಯ ಅಥವಾ ಗಾಯದ ಉಪಸ್ಥಿತಿಯ ಬಗ್ಗೆ ಯಾವುದೇ ಜ್ಞಾನವನ್ನು ಹೊಂದಿದ್ದರೆ ವಿಮಾದಾರರು ಬಹಿರಂಗಪಡಿಸಬೇಕು.

7. ನಮೂನೆಯು, ಮುಂಚಿನ ವಿಮೆ ಮತ್ತು ಕ್ಲೇಮ್ ಗಳ ಇತಿಹಾಸ ಮತ್ತು ಯಾವುದೇ ಇತರ ವಿಮಾಗಾರರೊಂದಿಗಿನ ಹೆಚ್ಚುವರಿ ಪ್ರಸ್ತುತ ವಿಮೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಸಹ ಒಳಗೊಂಡಿರುತ್ತದೆ.

8. ಸಹಿ ಮಾಡಬೇಕಾದ ಘೋಷಣೆಯ ವಿಶೇಷ ವೈಶಿಷ್ಟ್ಯಗಳನ್ನು ಪ್ರಸ್ತಾಪಕರು ಗಮನಿಸಬೇಕು.

9. ವಿಮಾದಾರರು ತಮ್ಮ ದೈಹಿಕ ಅಥವಾ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವ ಯಾವುದೇ ಕಾಯಿಲೆಗೆ ಸಂಬಂಧಿಸಿದಂತೆ ಯಾವುದೇ ಸಮಯದಲ್ಲಿ ಚಿಕಿತ್ಸೆಗೆ ಒಳಗಾದ /ಒಳಪಡಬಹುದಾದ ಯಾವುದೇ ಆಸ್ಪತ್ರೆ/ ವೈದ್ಯರಿಂದ ವೈದ್ಯಕೀಯ ಮಾಹಿತಿಯನ್ನು ಪಡೆಯಲು ವಿಮಾಗಾರರಿಗೆ ಒಪ್ಪುತ್ತಾರೆ ಮತ್ತು ಅಧಿಕಾರ ನೀಡುತ್ತಾರೆ

10. ವಿಮಾದಾರರು ನಮೂನೆಯ ಭಾಗವಾಗಿರುವ ವಿವರಣ ಪತ್ರವನ್ನು ಓದಿದ್ದಾರೆ ಮತ್ತು ನಿಯಮಗಳು ಮತ್ತು ಷರತ್ತುಗಳನ್ನು ಸ್ವೀಕರಿಸಲು ಸಿದ್ಧರಾಗಿದ್ದಾರೆಂಬ ಬಗ್ಗೆ ಖಚಿತಪಡಿಸುತ್ತಾರೆ.

11. ಘೋಷಣೆಯು, ಹೇಳಿಕೆಗಳು ಸತ್ಯವಾಗಿರುವ ಬಗ್ಗೆ ಸಾಮಾನ್ಯ ಖಾತರಿ ಮತ್ತು ಪ್ರಸ್ತಾವನೆಯನ್ನು ಒಪ್ಪಂದದ ಆಧಾರವಾಗಿ ಒಳಗೊಂಡಿರುತ್ತದೆ.

## 2. ವೈದ್ಯಕೀಯ ಪ್ರಶ್ನಾವಳಿ

ಪ್ರಸ್ತಾವನೆಯ ನಮೂನೆಯಲ್ಲಿ ಪ್ರತಿಕೂಲವಾದ ವೈದ್ಯಕೀಯ ಇತಿಹಾಸವಿದ್ದಲ್ಲಿ, ಮಧುಮೇಹ, ಅಧಿಕ ರಕ್ತದೊತ್ತಡ, ಎದೆ ನೋವು ಅಥವಾ ಪರಿಧಮನಿಯ ಕೊರತೆ(ಕೊರೊನರಿ ಇನ್ ಸಫಿಶಿಯೆನ್ಸಿ) ಅಥವಾ ಹೃದಯಾಘಾತ(ಮಯೋಕಾರ್ಡಿಯಲ್ ಇನ್ ಫಾರ್ಕ್ಷನ್)ದಂತಹ ರೋಗಗಳಿಗೆ ಸಂಬಂಧಿಸಿದ ವಿವರವಾದ ಪ್ರಶ್ನಾವಳಿಯನ್ನು ವಿಮೆ ಮಾಡಿದ ವ್ಯಕ್ತಿಯು ಪೂರ್ಣಗೊಳಿಸಬೇಕು.

ಸಮಾಲೋಚನಾ ವೈದ್ಯರು ಪೂರ್ಣಗೊಳಿಸಿದ ನಮೂನೆಯ ಮೂಲಕ ಇವುಗಳನ್ನು ಬೆಂಬಲಿಸಬೇಕು. ಈ ನಮೂನೆಯನ್ನು ಪ್ಯಾನಲ್ ವೈದ್ಯರು ಪರಿಶೀಲಿಸಿ ನೀಡುವ ಅಭಿಪ್ರಾಯದ ಮೇಲೆ ಕಂಪನಿಯ ಸ್ವೀಕಾರ, ಹೊರತುಗಳು ಇತ್ಯಾದಿಗಳನ್ನು ನಿರ್ಧರಿಸಲಾಗುತ್ತದೆ.

### ಪ್ರಮಾಣಿತ ಘೋಷಣೆಯ ನಮೂನೆ

ಆರೋಗ್ಯ ವಿಮಾ ಪ್ರಸ್ತಾವನೆಯಲ್ಲಿ ಪ್ರಮಾಣಿತ ಘೋಷಣೆಯ ಸ್ವರೂಪವನ್ನು ಐಆರ್ ಡಿಎಐಯಿಂದ ಈ ಕೆಳಗಿನಂತೆ ನಿರ್ದಿಷ್ಟಪಡಿಸಲಾಗಿದೆ:

1. ನಾನು/ನಾವು ಈ ಮೂಲಕ, ನನ್ನ ಮತ್ತು ವಿಮೆ ಮಾಡಿಸಲು ಉದ್ದೇಶಿಸಿರುವ ಎಲ್ಲ ವ್ಯಕ್ತಿಗಳ ಪರವಾಗಿ, ನಾನು ನೀಡಿದ ಮೇಲಿನ ಹೇಳಿಕೆಗಳು, ಉತ್ತರಗಳು ಮತ್ತು/ಅಥವಾ ವಿವರಗಳು ನನಗೆ ತಿಳಿದಿರುವಂತೆ

ಎಲ್ಲ ರೀತಿಯಲ್ಲೂ ಸತ್ಯ ಮತ್ತು ಸಂಪೂರ್ಣವೆಂದು ಘೋಷಿಸುತ್ತೇನೆ/ವೆ ಮತ್ತು ಈ ಇತರ ವ್ಯಕ್ತಿಗಳ ಪರವಾಗಿ ಪ್ರಸ್ತಾಪಿಸಲು ನಾನು/ನಾವು ಅಧಿಕಾರ ಹೊಂದಿದ್ದೇನೆ/ವೆ.

2. ನಾನು ಒದಗಿಸಿದ ಮಾಹಿತಿಯು ವಿಮಾ ಪಾಲಿಸಿಗೆ ಆಧಾರವಾಗಿದೆ, ಪಾಲಿಸಿಯು ವಿಮಾ ಕಂಪನಿಯ ಬೋರ್ಡ್ ಅನುಮೋದಿತ ಅಂಡರ್ ರೈಟಿಂಗ್ ಗೆ ಒಳಪಟ್ಟಿರುತ್ತದೆ ಮತ್ತು ವಿಧಿಸಲ್ಪಟ್ಟ ಕಂತಿನ ಸಂಪೂರ್ಣ ಸ್ವೀಕೃತಿಯ ನಂತರವೇ ಜಾರಿಗೆ ಬರುತ್ತದೆ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ.

3. ಅಲ್ಲದೇ ನಾನು/ನಾವು ಪ್ರಸ್ತಾವನೆಯನ್ನು ಸಲ್ಲಿಸಿದ ನಂತರ ಆದರೆ ಕಂಪನಿಯಿಂದ ಅಪಾಯದ ಸ್ವೀಕೃತಿಯ ಸಂವಹನದ ಮೊದಲು, ವಿಮೆ ಮಾಡಬೇಕಾದ / ಪ್ರಸ್ತಾಪಿಸುವವರ ಜೀವ/ವ್ಯಕ್ತಿಯ ಉದ್ಯೋಗ ಅಥವಾ ಸಾಮಾನ್ಯ ಆರೋಗ್ಯದಲ್ಲಿ ಸಂಭವಿಸುವ ಯಾವುದೇ ಬದಲಾವಣೆಯನ್ನು ನಾನು/ನಾವು ಲಿಖಿತವಾಗಿ ತಿಳಿಸುತ್ತೇವೆ ಎಂದು ಘೋಷಿಸುತ್ತೇವೆ.

4. ನಾನು/ ನಾವು ವಿಮೆ ಮಾಡಬೇಕಾದ / ಪ್ರಸ್ತಾಪಿಸುವವರಿಗೆ ಚಿಕಿತ್ಸೆ ನೀಡಿದ ಯಾವುದೇ ವೈದ್ಯರು ಅಥವಾ ಆಸ್ಪತ್ರೆಯಿಂದ ವೈದ್ಯಕೀಯ ಮಾಹಿತಿಯನ್ನು ಪಡೆಯಲು ಅಥವಾ ವಿಮೆ ಮಾಡಬೇಕಾದ / ಪ್ರಸ್ತಾಪಿಸುವವರ ದೈಹಿಕ ಅಥವಾ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವ ಯಾವುದೇ ವಿಷಯದ ಬಗ್ಗೆ ಅವರ ಹಿಂದಿನ ಅಥವಾ ಇಂದಿನ ಉದ್ಯೋಗದಾತರಿಂದ ಮಾಹಿತಿಯನ್ನು ಸಂಗ್ರಹಿಸಲು ಮತ್ತು ವಿಮೆ ಮಾಡಬೇಕಾದ / ಪ್ರಸ್ತಾಪಿಸುವವರು ಯಾವುದೇ ವಿಮಾ ಕಂಪನಿಗೆ ವಿಮೆಗಾಗಿ, ಪ್ರಸ್ತಾವನೆ ಮತ್ತು/ಅಥವಾ ಕ್ಲೇಮ್ ಗಾಗಿ ಅರ್ಜಿ ಮಾಡಿದ ಯಾವುದೇ ವಿಮಾ ಕಂಪನಿಯಿಂದ ಮಾಹಿತಿಯನ್ನು ಪಡೆಯಲು ಕಂಪನಿಗೆ ಸಮ್ಮತಿಸುತ್ತಿರುವ ಬಗ್ಗೆ ಘೋಷಿಸುತ್ತೇವೆ.

5. ಪ್ರಸ್ತಾವನೆಯ ಅಂಡರ್ ರೈಟಿಂಗ್ ಮತ್ತು/ಅಥವಾ ಕ್ಲೇಮ್ ಗಳ ಇತ್ಯರ್ಥಕ್ಕಾಗಿ ಮತ್ತು ಯಾವುದೇ ಸರ್ಕಾರಿ ಮತ್ತು/ಅಥವಾ ನಿಯಂತ್ರಕ ಪ್ರಾಧಿಕಾರದೊಂದಿಗೆ ವೈದ್ಯಕೀಯ ದಾಖಲೆಗಳನ್ನು ಒಳಗೊಂಡಂತೆ ನನ್ನ ಪ್ರಸ್ತಾವನೆಗೆ ಸಂಬಂಧಿಸಿದ ಮಾಹಿತಿಯನ್ನು ಹಂಚಿಕೊಳ್ಳಲು ನಾನು/ನಾವು ಕಂಪನಿಗೆ ಅಧಿಕಾರ ನೀಡುತ್ತೇವೆ.

### 3. ಪ್ರಸ್ತಾವನೆಯ ನಮೂನೆಯಲ್ಲಿಯ ಪ್ರಶ್ನೆಗಳ ಸ್ವರೂಪ

ಸಂಬಂಧಪಟ್ಟ ವಿಮೆಯ ಪ್ರಕಾರಕ್ಕನುಗುಣವಾಗಿ ಪ್ರಸ್ತಾವನೆಯ ನಮೂನೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಸ್ವರೂಪವು ಬದಲಾಗುತ್ತದೆ. ವಿಮಾ ಮೊತ್ತವು ಪಾಲಿಸಿಯಡಿಯಲ್ಲಿಯ ವಿಮಾಗಾರರ ಹೊಣೆಗಾರಿಕೆಯ ಮಿತಿಯನ್ನು ಸೂಚಿಸುತ್ತದೆ ಮತ್ತು ಅದನ್ನು ಪ್ರಸ್ತಾವನೆಯ ಎಲ್ಲ ನಮೂನೆಗಳಲ್ಲಿ ಸೂಚಿಸಬೇಕು.

ಆರೋಗ್ಯ, ವೈಯಕ್ತಿಕ ಅಪಘಾತ ಮತ್ತು ಪ್ರಯಾಣ ವಿಮೆಯಂತಹ **ವೈಯಕ್ತಿಕ ವಿಮಾ ಪ್ರಕಾರಗಳಲ್ಲಿ,** ಪ್ರಸ್ತಾವನೆಯ ನಮೂನೆಗಳನ್ನು ಪ್ರಸ್ತಾಪಿಸುವವರ ಪ್ರಸ್ತಾಪಿಸುವವರ ಅಪಾಯದ ಮೇಲೆ ವಾಸ್ತವಿಕ ಮಹತ್ವವನ್ನು ಹೊಂದಿರಬಹುದಾದ ವೃತ್ತಿ, ಉದ್ಯೋಗ ಅಥವಾ ವ್ಯವಹಾರದೊಂದಿಗೆ ಅವರ ಆರೋಗ್ಯ, ಜೀವನಶೈಲಿ ಮತ್ತು ಅಭ್ಯಾಸಗಳು, ಮೊದಲೇ ಅಸ್ತಿತ್ವದಲ್ಲಿರುವ ಆರೋಗ್ಯದ ಸ್ಥಿತಿಗಳು, ವೈದ್ಯಕೀಯ

ಇತಿಹಾಸ, ಆನುವಂಶಿಕ ಲಕ್ಷಣಗಳು, ಹಿಂದಿನ ಆರೋಗ್ಯ-ವಿಮೆಯ ಅನುಭವ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಪಡೆಯಲು ವಿನ್ಯಾಸಗೊಳಿಸಲಾಗಿರುತ್ತದೆ.

| ಉದಾಹರಣೆ 1 |
|---|

- ✓ ತಮ್ಮ ಗ್ರಾಹಕರಿಗೆ ಆಹಾರವನ್ನು ತಲುಪಿಸಲು ಹೆಚ್ಚಿನ ವೇಗದಲ್ಲಿ ಮೋಟಾರು ಬೈಕುಗಳಲ್ಲಿ ಆಗಾಗ್ಗೆ ಪ್ರಯಾಣಿಸಬೇಕಾದ ಫಾಸ್ಟ್-ಫುಡ್ ರೆಸ್ಟೋರೆಂಟ್ ನ ವಿತರಕ ವ್ಯಕ್ತಿ(ಡೆಲಿವರಿ ಮ್ಯಾನ್)ಯು, ಅದೇ ರೆಸ್ಟೋರೆಂಟ್ ನ ಅಕೌಂಟೆಂಟ್ ಗಿಂತ ಹೆಚ್ಚು ಅಪಘಾತಗಳಿಗೆ ಒಳಗಾಗಬಹುದು.
- ✓ ಕಲ್ಲಿದ್ದಲು ಗಣಿ ಅಥವಾ ಸಿಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡುವ ವ್ಯಕ್ತಿಯು ಧೂಳಿನ ಕಣಗಳಿಗೆ ಒಡ್ಡಿಕೊಳ್ಳುವುದರಿಂದ ಶ್ವಾಸಕೋಶದ ಕಾಯಿಲೆಗಳಿಗೆ ಕಾರಣವಾಗಬಹುದು.

| ಉದಾಹರಣೆ 2 |
|---|

- ✓ ಸಾಗರೋತ್ತರ ಪ್ರಯಾಣ ವಿಮೆಯ ಉದ್ದೇಶಕ್ಕಾಗಿ, ಪ್ರಸ್ತಾಪಿಸುವವರು (ಯಾರು, ಯಾವಾಗ, ಯಾವ ದೇಶಕ್ಕೆ, ಯಾವ ಉದ್ದೇಶಕ್ಕಾಗಿ ಪ್ರಯಾಣಿಸುತ್ತಾರೆ) ಎಂಬುದನ್ನು ಸ್ಪಷ್ಟಪಡಿಸಬೇಕು ಅಥವಾ
- ✓ ಸಂದರ್ಭವನ್ನು ಅವಲಂಬಿಸಿ ಆರೋಗ್ಯ ವಿಮೆಯ ಉದ್ದೇಶಕ್ಕಾಗಿ, ಪ್ರಸ್ತಾಪಕರನ್ನು ಅವರ ಆರೋಗ್ಯದ ಬಗ್ಗೆ (ವ್ಯಕ್ತಿಯ ಹೆಸರು, ವಿಳಾಸ ಮತ್ತು ಗುರುತಿನ ಜೊತೆಗೆ) ಕೇಳಲಾಗುತ್ತದೆ.

| ಉದಾಹರಣೆ 3 |
|---|

- ✓ ಆರೋಗ್ಯ ವಿಮೆಯ ಸಂದರ್ಭದಲ್ಲಿ, ಇದು ಆಸ್ಪತ್ರೆಯ ಚಿಕಿತ್ಸೆಯ ವೆಚ್ಚವಾಗಿರಬಹುದು, ಆದರೆ ವೈಯಕ್ತಿಕ ಅಪಘಾತ ವಿಮೆಗೆ ಇದು ಜೀವಹಾನಿ, ಅವಯವದ ನಷ್ಟ ಅಥವಾ ಅಪಘಾತದಿಂದಾಗಿ ದೃಷ್ಟಿ ನಷ್ಟಕ್ಕೆ ಪರಿಹಾರದ ನಿಗದಿತ ಮೊತ್ತವಾಗಿರಬಹುದು.

**a) ಹಿಂದಿನ ಮತ್ತು ಪ್ರಸ್ತುತ ವಿಮೆ**

ಪ್ರಸ್ತಾವಕರು ತಮ್ಮ ಹಿಂದಿನ ವಿಮೆಗಳ ವಿವರಗಳನ್ನು ವಿಮಾಗಾರರಿಗೆ ತಿಳಿಸುವ ಅಗತ್ಯವಿದೆ. ಇದು ಅವರ ವಿಮಾ ಇತಿಹಾಸವನ್ನು ಅರ್ಥಮಾಡಿಕೊಳ್ಳುವುದಕ್ಕಾಗಿರುತ್ತದೆ. ಕೆಲವು ಮಾರುಕಟ್ಟೆಗಳಲ್ಲಿ ವಿಮಾಗಾರರು ವಿಮೆದಾರರ ಬಗೆಗಿನ ಮಾಹಿತಿಯನ್ನು ಗೌಪ್ಯವಾಗಿ ಹಂಚಿಕೊಳ್ಳುವ ವ್ಯವಸ್ಥೆಗಳಿವೆ.

ಯಾವುದೇ ವಿಮಾಗಾರರು ತಮ್ಮ ಪ್ರಸ್ತಾವನೆಯನ್ನು ನಿರಾಕರಿಸಿದ, ವಿಶೇಷ ಷರತ್ತುಗಳನ್ನು ವಿಧಿಸಿದ, ನವೀಕರಣದ ಸಮಯದಲ್ಲಿ ಹೆಚ್ಚಿದ ಕಂತನ್ನು ವಿಧಿಸಿದ ಅಥವಾ ಪಾಲಿಸಿಯನ್ನು ನವೀಕರಿಸಲು ಅಥವಾ ರದ್ದುಗೊಳಿಸಲು ನಿರಾಕರಿಸಿದ ಬಗ್ಗೆ ಪ್ರಸ್ತಾಪಿಸುವವರು ತಿಳಿಸಬೇಕಾಗುತ್ತದೆ. ವಿಮಾದಾರರ ಹೆಸರುಗಳನ್ನು

ಒಳಗೊಂಡಂತೆ ಯಾವುದೇ ಇತರ ವಿಮಾಗಾರರೊಂದಿಗೆ ಪ್ರಸ್ತುತ ವಿಮೆಯ ವಿವರಗಳನ್ನು ಬಹಿರಂಗಪಡಿಸುವುದು ಸಹ ಅಗತ್ಯವಿರುತ್ತದೆ. ಇದಲ್ಲದೆ, ವೈಯಕ್ತಿಕ ಅಪಘಾತ ವಿಮೆಯಲ್ಲಿ ವಿಮಾದಾರರು ಅದೇ ವಿಮಾಗಾರರಿಂದ ತೆಗೆದುಕೊಂಡ ಇತರ ವೈಯಕ್ತಿಕ ಅಪಘಾತ ಪಾಲಿಸಿಗಳಡಿಯಲ್ಲಿಯ ವಿಮಾ ಮೊತ್ತವನ್ನು ಅವಲಂಬಿಸಿ ಕವರೇಜ್ ಮೊತ್ತ (ವಿಮಾ ಮೊತ್ತ)ವನ್ನು ನಿರ್ಬಂಧಿಸಬಯಸುತ್ತಾರೆ.

**b) ಕ್ಲೇಮ್ ಅನುಭವ**

ಪ್ರಸ್ತಾಪಕರನ್ನು ಅವರು ಅನುಭವಿಸಿದ ವಿಮೆ ಮಾಡಿದ ಅಥವಾ ವಿಮೆ ಮಾಡಿಲ್ಲದ ಎಲ್ಲ ನಷ್ಟಗಳ ಸಂಪೂರ್ಣ ವಿವರಗಳನ್ನು ಘೋಷಿಸಲು ಕೇಳಲಾಗುತ್ತದೆ. ಇದು ವಿಮಾಗಾರರಿಗೆ ವಿಮೆಯ ವಿಷಯವಸ್ತುವಿನ ಬಗ್ಗೆ ಮತ್ತು ವಿಮಾದಾರರು ಈ ಹಿಂದೆ ಅಪಾಯವನ್ನು ಹೇಗೆ ನಿರ್ವಹಿಸಿದ್ದಾರೆಂಬ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ವಿಮಾ ಕಂಪನಿಯು ಮೌಖಿಕವಾಗಿಯೂ ಸಹ ಸ್ವೀಕರಿಸಿದ ಎಲ್ಲ ಮಾಹಿತಿಯನ್ನು ದಾಖಲಿಸುವ ಕರ್ತವ್ಯವನ್ನು ಹೊಂದಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವ ಮೂಲಕ ಏಜೆಂಟರು ಅನುಸರಿಸಬೇಕೆಂದು ಇದರರ್ಥ.

## B. ಪ್ರಸ್ತಾವನೆಯ ಸ್ವೀಕೃತಿ (ಅಂಡರ್ ರೈಟಿಂಗ್)

ಪೂರ್ಣಗೊಂಡ ಪ್ರಸ್ತಾವನೆಯ ನಮೂನೆಯು ಈ ಕೆಳಗಿನ ಮಾಹಿತಿಯನ್ನು ವಿವರವಾಗಿ ನೀಡುತ್ತದೆ:

- ✓ ವಿಮಾದಾರರ ವಿವರಗಳು
- ✓ ವಿಷಯವಸ್ತುವಿನ ವಿವರಗಳು
- ✓ ಅಗತ್ಯವಿರುವ ಕವರ್ ಪ್ರಕಾರ
- ✓ ಭೌತಿಕ ವೈಶಿಷ್ಟ್ಯಗಳ ಧನಾತ್ಮಕ ಮತ್ತು ಋಣಾತ್ಮಕ ವಿವರಗಳು
- ✓ ಹಿಂದಿನ ವಿಮೆಯ ಇತಿಹಾಸ ಮತ್ತು ಕ್ಲೇಮ್ ಅನುಭವ

ಆರೋಗ್ಯ ವಿಮಾ ಪ್ರಸ್ತಾಪದ ಸಂದರ್ಭದಲ್ಲಿ, ವಿಮಾಗಾರರು ನಿರೀಕ್ಷಿತ ಗ್ರಾಹಕರನ್ನು, ಉದಾ. 45 ವರ್ಷಕ್ಕಿಂತ ಮೇಲ್ಪಟ್ಟವರನ್ನು ವೈದ್ಯರಿಗೆ ಮತ್ತು/ಅಥವಾ ವೈದ್ಯಕೀಯ ತಪಾಸಣೆಗಾಗಿ ಸಹ ಶಿಫಾರಸು ಮಾಡಬಹುದು. ಪ್ರಸ್ತಾವನೆಯಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಮತ್ತು ವೈದ್ಯಕೀಯ ತಪಾಸಣೆಗೆ ಸಲಹೆ ನೀಡಿದಾಗ, ವೈದ್ಯಕೀಯ ವರದಿ ಮತ್ತು ವೈದ್ಯರ ಶಿಫಾರಸಿನ ಆಧಾರದ ಮೇಲೆ, ವಿಮಾಗಾರರು ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ಕೆಲವೊಮ್ಮೆ, ವೈದ್ಯಕೀಯ ಇತಿಹಾಸವು ತೃಪ್ತಿಕರವಾಗಿಲ್ಲದಿದ್ದರೆ, ಹೆಚ್ಚಿನ ಮಾಹಿತಿಯನ್ನು ಪಡೆಯಲು ಹೆಚ್ಚುವರಿ ಪ್ರಶ್ನಾವಳಿಯನ್ನು ನಿರೀಕ್ಷಿತ ಗ್ರಾಹಕರಿಂದ ಪಡೆಯಬೇಕಾಗುತ್ತದೆ. ನಂತರ ವಿಮಾಗಾರರು ಅಪಾಯದ ಅಂಶಕ್ಕೆ ಅನ್ವಯಿಸಬೇಕಾದ ದರವನ್ನು ನಿರ್ಧರಿಸುತ್ತಾರೆ ಮತ್ತು ವಿವಿಧ ಅಂಶಗಳ ಆಧಾರದ ಮೇಲೆ ಕಂತನ್ನು ಲೆಕ್ಕಾಚಾರ ಮಾಡುತ್ತಾರೆ ಮತ್ತು ನಂತರ ಅದನ್ನು ವಿಮಾದಾರರಿಗೆ ತಿಳಿಸಲಾಗುತ್ತದೆ.

## C. ವಿವರಣೆ ಪತ್ರ(ಪ್ರಾಸ್ಪೆಕ್ಟಸ್)

ವಿವರಣೆ ಪತ್ರ(ಪ್ರಾಸ್ಪೆಕ್ಟಸ್) ಎನ್ನುವುದು ವಿಮಾಗಾರರಿಂದ ಅಥವಾ ಅವರ ಪರವಾಗಿ ವಿಮೆಯ ನಿರೀಕ್ಷಿತ ಖರೀದಿದಾರರಿಗೆ ನೀಡಿದ ದಾಖಲೆಯಾಗಿರುತ್ತದೆ. ಇದು ಸಾಮಾನ್ಯವಾಗಿ ಕೈಪಿಡಿ ಅಥವಾ ಕರಪತ್ರದ ರೂಪದಲ್ಲಿರುತ್ತದೆ ಅಥವಾ ಎಲೆಕ್ಟ್ರಾನಿಕ್ ಸ್ವರೂಪದಲ್ಲಿರಬಹುದಾಗಿದ್ದು ನಿರೀಕ್ಷಿತ ಖರೀದಿದಾರರಿಗೆ ಉತ್ಪನ್ನವನ್ನು ಪರಿಚಯಿಸುವ ಉದ್ದೇಶವನ್ನು ಪೂರೈಸುತ್ತದೆ. ವಿವರಣೆ ಪತ್ರ(ಪ್ರಾಸ್ಪೆಕ್ಟಸ್)ದ ವಿತರಣೆಯನ್ನು ವಿಮಾ ಕಾಯಿದೆ, 1938 ಮತ್ತು ಪಾಲಿಸಿದಾರರ ಹಿತಾಸಕ್ತಿ ನಿಯಮಗಳ ರಕ್ಷಣೆ 2017 ಮತ್ತು ಐಆರ್ ಡಿಎಐ ಯ ಆರೋಗ್ಯ ವಿಮಾ ನಿಯಮಗಳು 2016 ರಿಂದ ನಿರ್ವಹಿಸಲಾಗುತ್ತದೆ. ಆರೋಗ್ಯ ಪಾಲಿಸಿಗಳ ವಿಮಾಗಾರರು ಸಾಮಾನ್ಯವಾಗಿ ತಮ್ಮ ಆರೋಗ್ಯ ವಿಮಾ ಉತ್ಪನ್ನಗಳ ಬಗ್ಗೆ ವಿವರಣೆ ಪತ್ರ(ಪ್ರಾಸ್ಪೆಕ್ಟಸ್)ಗಳನ್ನು ಪ್ರಕಟಿಸುತ್ತಾರೆ. ಅಂತಹ ಸಂದರ್ಭಗಳಲ್ಲಿ ಪ್ರಸ್ತಾವನೆಯ ನಮೂನೆಯು ಗ್ರಾಹಕರು ವಿವರಣೆ ಪತ್ರ(ಪ್ರಾಸ್ಪೆಕ್ಟಸ್)ವನ್ನು ಓದಿದ್ದಾರೆ ಮತ್ತು ಅದನ್ನು ಒಪ್ಪುತ್ತಾರೆ ಎಂಬ ಘೋಷಣೆಯನ್ನು ಒಳಗೊಂಡಿರುತ್ತದೆ.

ಅಧ್ಯಾಯ 4 ರಲ್ಲಿ ಚರ್ಚಿಸಿದಂತೆ, 1938 ರ ವಿಮಾ ಕಾಯಿದೆಯ ಸೆಕ್ಷನ್ 64 ವಿಬಿ ಕಂತುಗಳನ್ನು ಮುಂಚಿತವಾಗಿ ಸಂಗ್ರಹಿಸಬೇಕು ಎಂದು ಷರತ್ತನ್ನು ವಿಧಿಸುತ್ತದೆ. ಆದಾಗ್ಯೂ, ಕೋವಿಡ್-19 ನಿಂದಾಗಿ ಉಂಟಾದ ಪರಿಸ್ಥಿತಿಗಳ ದೃಷ್ಟಿಯಿಂದ ಆರೋಗ್ಯ ವಿಮಾ ಕಂತುಗಳ ಪಾವತಿಯನ್ನು ಸರಾಗಗೊಳಿಸುವ ಅಗತ್ಯವನ್ನು ಪರಿಗಣಿಸಿ, ಐಆರ್ ಡಿಎಐ ವೈಯಕ್ತಿಕ ಆರೋಗ್ಯ ವಿಮಾ ಉತ್ಪನ್ನಗಳ ಕಂತುಗಳನ್ನು ಕಂತುಗಳಲ್ಲಿ ಸಂಗ್ರಹಿಸಲು ವಿಮಾದಾರರಿಗೆ ಅವಕಾಶ ಮಾಡಿಕೊಟ್ಟಿತು. ವಿಮಾ ಕಂಪನಿಗಳು ಕಂತುಗಳಲ್ಲಿ ಕಂತುಗಳನ್ನು ಪಾವತಿಸುವ ಸೌಲಭ್ಯದ ಲಭ್ಯತೆ ಮತ್ತು ಅದರ ಷರತ್ತುಗಳನ್ನು ತಮ್ಮ ವೆಬ್ ಸೈಟ್ ಗಳಲ್ಲಿ ಪ್ರಕಟಿಸಬೇಕು ಎಂದು ಕಡ್ಡಾಯಗೊಳಿಸಲಾಗಿದೆ. ಯಾವುದೇ ತಾರತಮ್ಯವಿಲ್ಲದೆ ಎಲ್ಲ ಪಾಲಿಸಿದಾರರಿಗೆ ಈ ಸೌಲಭ್ಯವನ್ನು ನೀಡಲಾಗುವುದು.

## D. ಪಾಲಿಸಿ ದಾಖಲೆ

ಆರೋಗ್ಯ ವಿಮಾ ಪಾಲಿಸಿ ದಾಖಲೆಯು ಈ ಕೆಳಗಿನ ವಿಷಯಗಳನ್ನು ಒಳಗೊಂಡಿರಬೇಕೆಂದು 2017 ರ ಪಾಲಿಸಿದಾರರ ಹಿತಾಸಕ್ತಿ ರಕ್ಷಣೆಗಾಗಿ ಐಆರ್ ಡಿಎಐ ಕಾಯಿದೆ ನಿಯಮಗಳು ಸ್ಪಷ್ಟಪಡಿಸಿತು:

- **a)** ವಿಮಾದಾರರ ಮತ್ತು ವಿಷಯವಸ್ತುವಿನಲ್ಲಿ ವಿಮಾಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಗಳ ಹೆಸರು(ಗಳು) ಮತ್ತು ವಿಳಾಸ(ಗಳು)
- **b)** ವಿಮೆ ಮಾಡಿದ ವ್ಯಕ್ತಿಗಳು ಅಥವಾ ವಿಮೆ ಮಾಡಿದ ಆಸಕ್ತಿಯ ಸಂಪೂರ್ಣ ವಿವರಣೆ
- **c)** ಪಾಲಿಸಿಯಡಿಯಲ್ಲಿಯ ವ್ಯಕ್ತಿ ಮತ್ತು/ಅಥವಾ ಅಪಾಯಕ್ಕೆ ಸಂಬಂಧಿಸಿದಂತೆ ವಿಮಾ ಮೊತ್ತ
- **d)** ಉತ್ಪನ್ನದ ಯುಐಎನ್, ಹೆಸರು, ಕೋಡ್ ಸಂಖ್ಯೆ, ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿರುವ ವ್ಯಕ್ತಿಯ ಸಂಪರ್ಕದ ವಿವರಗಳು;
- **e)** ವಿಮೆ ಮಾಡಿದವರ ಜನ್ಮ ದಿನಾಂಕ ಮತ್ತು ಪೂರ್ಣಗೊಂಡ ವರ್ಷಗಳಲ್ಲಿ ಅನುಗುಣವಾದ ವಯಸ್ಸು;

f) ವಿಮೆಯ ಅವಧಿ ಮತ್ತು ಪಾಲಿಸಿದಾರರು ಭಾರತದಲ್ಲಿ ಯಾವುದೇ ವಿಮಾದಾರರಿಂದ ವಿರಾಮವಿಲ್ಲದೆ ನಿರಂತರವಾಗಿ ಆರೋಗ್ಯ ವಿಮಾ ರಕ್ಷಣೆಯನ್ನು ಪಡೆದ ದಿನಾಂಕ

g) ಸಂಬಂಧಿತ ಪಾಲಿಸಿ ವಿಭಾಗಕ್ಕೆ ಅಡ್ಡ ಉಲ್ಲೇಖದೊಂದಿಗೆ ಯಾವುದಾದರೂ ಅಸ್ತಿತ್ವದಲ್ಲಿರುವ ಉಪ-ಮಿತಿಗಳು, ಅನುಪಾತದ ಕಡಿತಗಳು ಮತ್ತು ಪ್ಯಾಕೇಜ್ ದರಗಳ ಅಸ್ತಿತ್ವ;

h) ಸಹ-ಪಾವತಿ ಮಿತಿಗಳು ಯಾವುದಾದರೂ ಇದ್ದರೆ;

i) ಪೂರ್ವ ಅಸ್ತಿತ್ವದಲ್ಲಿರುವ ಕಾಯಿಲೆ(ಪಿಈಡಿ)ಗಾಗಿ ಕಾಯುವ ಅವಧಿ, ಅನ್ವಯಿಸುತ್ತಿದ್ದರೆ;

j) ಅನ್ವಯವಾಗುವಂತೆ ನಿರ್ದಿಷ್ಟ ಕಾಯುವ ಅವಧಿಗಳು;

k) ಅನ್ವಯವಾಗುವಂತೆ ಕಡಿತಗಳು - ಸಾಮಾನ್ಯ ಮತ್ತು ನಿರ್ದಿಷ್ಟ, ಯಾವುದೇ ಅಪಾಯ ಮತ್ತು ಹೊರತುಗಳನ್ನು ಒಳಗೊಂಡಿದ್ದರೆ

l) ಪಾವತಿಸಬೇಕಾದ ಕಂತು ಮತ್ತು ಕಂತು ತಾತ್ಕಾಲಿಕವಾಗಿ ಹೊಂದಾಣಿಕೆಗೆ ಒಳಪಟ್ಟಿದ್ದರೆ ಹೊಂದಾಣಿಕೆಯ ಆಧಾರದ ಜೊತೆಗೆ ಕಂತುಗಳ ಆವರ್ತಕತೆಗಳು, ಯಾವುದಾದರೂ ಇದ್ದರೆ

m) ಪಾಲಿಸಿ ನಿಯಮಗಳು, ಷರತ್ತುಗಳು ಮತ್ತು ಖಾತರಿಗಳು

n) ಪಾಲಿಸಿಯಡಿಯಲ್ಲಿ ಕ್ಲೇಮ್ ಗೆ ಕಾರಣವಾಗುವ ಸಾಧ್ಯತೆಯಿರುವ ಆಕಸ್ಮಿಕ ಸಂಭವಿಸಿದ ಮೇಲೆ ವಿಮಾದಾರರಿಂದ ತೆಗೆದುಕೊಳ್ಳಬೇಕಾದ ಕ್ರಮ

o) ಕ್ಲೇಮ್ ಗೆ ಕಾರಣವಾಗುವ ಘಟನೆ ಸಂಭವಿಸಿದ ಸಂದರ್ಭದಲ್ಲಿ ವಿಮೆಯ ವಿಷಯವಸ್ತುವಿಗೆ ಸಂಬಂಧಿಸಿದಂತೆ ವಿಮಾದಾರರ ಬಾಧ್ಯತೆಗಳು ಮತ್ತು ವಿಮಾ ಕಂಪನಿಯ ಹಕ್ಕುಗಳು

p) ಯಾವುದೇ ವಿಶೇಷ ಷರತ್ತುಗಳು

q) ತಪ್ಪು ನಿರೂಪಣೆ, ವಂಚನೆ, ವಾಸ್ತವಿಕ ಸಂಗತಿಗಳನ್ನು ಬಹಿರಂಗಪಡಿಸದಿರುವುದು ಅಥವಾ ವಿಮಾದಾರರ ಅಸಹಕಾರದ ಆಧಾರದ ಮೇಲೆ ಪಾಲಿಸಿಯನ್ನು ರದ್ದುಪಡಿಸುವ ಅವಕಾಶ

r) ಆಡ್-ಆನ್ ಕವರ್‌ಗಳ ವಿವರಗಳು, ಯಾವುದಾದರೂ ಇದ್ದರೆ

s) ದೂರು ಪರಿಹಾರ ಕಾರ್ಯವಿಧಾನದ ವಿವರಗಳು ಮತ್ತು ಓಂಬುಡ್ಸ್ ಮನ್ ರ ವಿಳಾಸ

t) ವಿಮಾಗಾರರ ದೂರು ಪರಿಹಾರ ಕಾರ್ಯವಿಧಾನದ ವಿವರಗಳು;

u) ಫ್ರೀ ಲುಕ್ ಅವಧಿಯ ಸೌಲಭ್ಯ ಮತ್ತು ಪೋರ್ಟಬಿಲಿಟಿ ಷರತ್ತುಗಳು;

v) ಪಾಲಿಸಿಯ ಸ್ಥಳಾಂತರ ಸೌಲಭ್ಯ ಮತ್ತು ಅನ್ವಯವಾಗುವಲ್ಲಿ ಷರತ್ತುಗಳು.

## E. ಷರತ್ತುಗಳು ಮತ್ತು ಖಾತರಿಗಳು

ಇಲ್ಲಿ, ಪಾಲಿಸಿ ಪದಗಳಲ್ಲಿ ಬಳಸಲಾದ ಎರಡು ಪ್ರಮುಖ ಪದಗಳನ್ನು ವಿವರಿಸುವುದು ಮುಖ್ಯವಾಗಿದೆ. ಇವುಗಳನ್ನು ಷರತ್ತುಗಳು ಮತ್ತು ಖಾತರಿಗಳು ಎಂದು ಕರೆಯಲಾಗುತ್ತದೆ.

1. **ಷರತ್ತುಗಳು:** ಷರತ್ತು ಎಂದರೆ ಒಪ್ಪಂದದ ಆಧಾರವನ್ನು ರೂಪಿಸುವ ವಿಮಾ ಒಪ್ಪಂದದಲ್ಲಿಯ ಷರತ್ತು.

### ಉದಾಹರಣೆಗಳು

a. **ಹೆಚ್ಚಿನ ವಿಮಾ ಪಾಲಿಸಿಗಳಲ್ಲಿಯ ಪ್ರಮಾಣಿತ ಷರತ್ತುಗಳಲ್ಲಿಯ ಒಂದು ಷರತ್ತು ಈ ಕೆಳಗಿನಂತಿರುತ್ತದೆ:**

ಕ್ಲೇಮ್ ವಿಷಯದಲ್ಲಿ ಯಾವುದೇ ಮೋಸವಾಗಿದ್ದರೆ, ಅಥವಾ ಯಾವುದೇ ತಪ್ಪು ಘೋಷಣೆಯನ್ನು ಮಾಡಿದರೆ ಅಥವಾ ಅದನ್ನು ಬೆಂಬಲಿಸಲು ಬಳಸಿದರೆ ಅಥವಾ ಯಾವುದೇ ಮೋಸದ ವಿಧಾನಗಳು ಅಥವಾ ಸಾಧನಗಳನ್ನು ವಿಮಾದಾರರು ಅಥವಾ ಅವರ ಪರವಾಗಿ ಕಾರ್ಯನಿರ್ವಹಿಸುವ ಯಾರಾದರೂ ಪಾಲಿಸಿಯಡಿಯಲ್ಲಿ ಯಾವುದೇ ಪ್ರಯೋಜನವನ್ನು ಪಡೆಯಲು ಬಳಸಿದರೆ ಅಥವಾ ನಷ್ಟ ಅಥವಾ ಹಾನಿಯನ್ನು ಉದ್ದೇಶಪೂರ್ವಕ ಕ್ರಿಯೆಯಿಂದ ಅಥವಾ ವಿಮಾದಾರರ ಸಹಕಾರದೊಂದಿಗೆ, ಈ ಪಾಲಿಸಿಯಡಿಯಲ್ಲಿ ಎಲ್ಲ ಪ್ರಯೋಜನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

b. **ಆರೋಗ್ಯ ಪಾಲಿಸಿಯಲ್ಲಿಯ ಕ್ಲೇಮ್ ಸೂಚನೆಯ ಷರತ್ತು ಈ ಕೆಳಗಿನಂತೆ ಹೇಳಬಹುದು :**

ಆಸ್ಪತ್ರೆಯಿಂದ ಬಿಡುಗಡೆಯಾದ ದಿನಾಂಕದಿಂದ ಕೆಲವು ದಿನಗಳಲ್ಲಿ ಕ್ಲೇಮ್ ಅನ್ನು ಸಲ್ಲಿಸಬೇಕು. ಆದಾಗ್ಯೂ, ಕಷ್ಟದ ತೀವ್ರ ಸಂದರ್ಭಗಳಲ್ಲಿ ಈ ಷರತ್ತಿನ ಮನ್ನಾವನ್ನು ಪರಿಗಣಿಸಬಹುದು.

ಷರತ್ತಿನ ಉಲ್ಲಂಘನೆಯು ವಿಮಾಗಾರರ ಆಯ್ಕೆಯಿಂದ ಪಾಲಿಸಿಯನ್ನು ಅನೂರ್ಜಿತಪಡಿಸಬಹುದು.

2. **ವಾರಂಟಿಗಳು:** ವಾರಂಟಿಯು ವಿಮಾಗಾರರು ಮತ್ತು ವಿಮೆದಾರರ ನಡುವಿನ ಒಪ್ಪಂದವಾಗಿದ್ದು ಅದನ್ನು ಸಂಪೂರ್ಣವಾಗಿ ಕೈಗೊಳ್ಳಬೇಕು. ಇದು ಪಾಲಿಸಿ ದಾಖಲೆಯ ಒಂದು ಭಾಗವಾಗಿದೆ. ಉದಾಹರಣೆಗೆ, ವಿಮಾದಾರರು ವಿಶೇಷ ತಜ್ಞರೊಂದಿಗೆ ತ್ರೈಮಾಸಿಕ ಸಮಾಲೋಚನೆಗಳನ್ನು ಮಾಡುವ ಷರತ್ತಿನ ಮೇಲೆ ನಿರ್ದಿಷ್ಟ ಕಾಯಿಲೆಯ ಅಪಾಯವನ್ನು ವಿಮಾಗಾರರು ಕವರ್ ಮಾಡಬಹುದು. ಮೇಲಿನ ಉದಾಹರಣೆಯಲ್ಲಿ, ವಿಮಾದಾರರು ಒಪ್ಪಂದದ ತನ್ನ ಭಾಗವನ್ನು ಪೂರೈಸಲು ವಿಫಲರಾದರೆ ಆ ನಿರ್ದಿಷ್ಟ ವಿಭಾಗ/ಖಾತರಿಗಳಿಗೆ ಸಂಬಂಧಿಸಿದಂತೆ ಹೊಣೆಗಾರಿಕೆಯನ್ನು ನಿರಾಕರಿಸಬಹುದು ಅಥವಾ ಕಡಿತಗೊಳಿಸಬಹುದು.

ಅಪಾಯಕ್ಕೆ ಸಂಬಂಧಿಸಿದ್ದರೂ ಅಥವಾ ಇಲ್ಲದಿದ್ದರೂ ಖಾತರಿ ಕರಾರುಗಳನ್ನು ಗಮನಿಸಬೇಕು ಮತ್ತು ಕಟ್ಟುನಿಟ್ಟಾಗಿ ಮತ್ತು ಅಕ್ಷರಶಃ ಅನುಸರಿಸಬೇಕು.

### ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1

ಖಾತರಿಗೆ ಸಂಬಂಧಿಸಿದಂತೆ ಈ ಕೆಳಗೆ ನೀಡಿದ ಯಾವ ಹೇಳಿಕೆಯು ಸರಿಯಾಗಿದೆ?

I. ಖಾತರಿ ಎನ್ನುವುದು ಪಾಲಿಸಿಯಲ್ಲಿ ಹೇಳದೆ ಸೂಚಿಸಲಾದ ಷರತ್ತಾಗಿದೆ

II. ಖಾತರಿಯು ಪಾಲಿಸಿ ದಾಖಲೆಯ ಭಾಗವಾಗಿದೆ

III. ಖಾತರಿಯನ್ನು ಯಾವಾಗಲೂ ವಿಮಾದಾರರಿಗೆ ಪ್ರತ್ಯೇಕವಾಗಿ ತಿಳಿಸಲಾಗುತ್ತದೆ ಮತ್ತು ಪಾಲಿಸಿ ದಾಖಲೆಯ ಭಾಗವಾಗಿರಲಾಗದು

IV. ಖಾತರಿಯನ್ನು ಉಲ್ಲಂಘಿಸಿದರೂ ಕ್ಲೇಮ್ ಗಳನ್ನು ಪಾವತಿಸಬೇಕಾಗುತ್ತದೆ

---

**ಆರೋಗ್ಯ ವಿಮೆಯಲ್ಲಿ ಅನುಮೋದನೆಗಳು**

ಕೆಲವು ಅಪಾಯಗಳನ್ನು ಒಳಗೊಂಡು ಮತ್ತು ಕೆಲವು ಇತರ ಅಪಾಯಗಳನ್ನು ಹೊರತುಪಡಿಸಿ ಪ್ರಮಾಣಿತ ನಮೂನೆಯಲ್ಲಿ ಪಾಲಿಸಿಗಳನ್ನು ನೀಡುವುದು ವಿಮಾ ಕಂಪನಿಗಳ ಅಭ್ಯಾಸವಾಗಿದೆ;

| ವ್ಯಾಖ್ಯಾನ |
| --- |

ನೀಡಿಕೆಯ ಸಮಯದಲ್ಲಿ ಪಾಲಿಸಿಯ ಕೆಲವು ನಿಯಮಗಳು ಮತ್ತು ಷರತ್ತುಗಳನ್ನು ಬದಲಾಯಿಸಬೇಕಾದರೆ, ಅನುಮೋದನೆ ಎಂಬ ದಾಖಲೆಯ ಮೂಲಕ ತಿದ್ದುಪಡಿಗಳನ್ನು/ಬದಲಾವಣೆಗಳನ್ನು ಹೊಂದಿಸುವ ಮೂಲಕ ಮಾಡಲಾಗುತ್ತದೆ.

---

**ಇದನ್ನು ಪಾಲಿಸಿಗೆ ಲಗತ್ತಿಸಲಾಗುತ್ತದೆ ಮತ್ತು ಅದರ ಭಾಗವಾಗಿದೆ. ಪಾಲಿಸಿ ಮತ್ತು ಅನುಮೋದನೆ ಒಟ್ಟಿಗೆ ಒಪ್ಪಂದವನ್ನು ರೂಪಿಸುತ್ತವೆ. ಬದಲಾವಣೆಗಳು/ತಿದ್ದುಪಡಿಗಳನ್ನು ದಾಖಲಿಸಲು ಪಾಲಿಸಿಯ ಜಾರಿಯ ಸಮಯದಲ್ಲಿ ಸಹ ಅನುಮೋದನೆಗಳನ್ನು ನೀಡಬಹುದು.**

ವಾಸ್ತವಿಕ ಮಾಹಿತಿಯು ಬದಲಾದಾಗ, ವಿಮಾದಾರರು ವಿಮಾ ಕಂಪನಿಗೆ ಸೂಚನೆಯನ್ನು ನೀಡಬೇಕು, ಕಂಪನಿಯು ಇದನ್ನು ಗಮನಿಸುತ್ತಾರೆ ಮತ್ತು ಅನುಮೋದನೆಯ ಮೂಲಕ ವಿಮಾ ಒಪ್ಪಂದದ ಭಾಗವಾಗಿ ಅದನ್ನು ಸಂಯೋಜಿಸುತ್ತಾರೆ.

ಪಾಲಿಸಿಯಡಿಯಲ್ಲಿ ಸಾಮಾನ್ಯವಾಗಿ ಅಗತ್ಯವಿರುವ ಅನುಮೋದನೆಗಳು:

**a)** ವಿಮಾ ಮೊತ್ತದಲ್ಲಿಯ ಪರಿವರ್ತನೆಗಳು/ ಬದಲಾವಣೆಗಳು

**b)** ವಿಮೆ ಮಾಡಿದ ಕುಟುಂಬದಲ್ಲಿಯ ಸದಸ್ಯರ ಹೆಸರು ಸೇರ್ಪಡೆ ಮತ್ತು ಅಳಿಸಿ ಹಾಕುವಿಕೆ

**c)** ಸಾಲವನ್ನು ತೆಗೆದುಕೊಳ್ಳುವ ಮೂಲಕ ಮತ್ತು ಬ್ಯಾಂಕಿಗೆ ಪಾಲಿಸಿಯನ್ನು ಅಡಮಾನ ಮಾಡುವ ಮೂಲಕ ವಿಮಾಸಕ್ತಿಯಲ್ಲಿಯ ಬದಲಾವಣೆ.

**d)** ಹೆಚ್ಚುವರಿ ಅಪಾಯಗಳನ್ನು ಸರಿದೂಗಿಸಲು ವಿಮೆಯ ವಿಸ್ತರಣೆ/ ಪಾಲಿಸಿ ಅವಧಿಯ ವಿಸ್ತರಣೆ

**e)** ಅಪಾಯದಲ್ಲಿಯ ಬದಲಾವಣೆ, ಉದಾ. ಸಾಗರೋತ್ತರ ಪ್ರಯಾಣ ಪಾಲಿಸಿ ಸಂದರ್ಭದಲ್ಲಿ ಗಮ್ಯಸ್ಥಾನಗಳ ಬದಲಾವಣೆ

**f)** ವಿಮೆಯ ರದ್ದತಿ

**g)** ಹೆಸರು, ವಿಳಾಸ ಇತ್ಯಾದಿಗಳಲ್ಲಿಯ ಬದಲಾವಣೆ

---

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 2**

ನೀಡಿಕೆಯ ಸಮಯದಲ್ಲಿ ಪಾಲಸಿಯ ಕೆಲವು ನಿಯಮಗಳು ಮತ್ತು ಷರತ್ತುಗಳನ್ನು ಮಾರ್ಪಡಿಸಬೇಕಾದರೆ, __________ ಮೂಲಕ ತಿದ್ದುಪಡಿಗಳನ್ನು ಹೊಂದಿಸುವ ಮೂಲಕ ಮಾಡಲಾಗುತ್ತದೆ.

**I.** ಖಾತರಿ

**II.** ಅನುಮೋದನೆ

**III.** ಮಾರ್ಪಾಡು

**IV.** ಮಾರ್ಪಾಡುಗಳು ಸಾಧ್ಯವಿಲ್ಲ

ನಿಮ್ಮನ್ನು ಪರೀಕ್ಷಿಸಿಗೆ ಉತ್ತರಗಳು

ಉತ್ತರ 1 - ಸರಿಯಾದ ಉತ್ತರ **II** ಆಗಿದೆ

ಉತ್ತರ 1 - ಸರಿಯಾದ ಉತ್ತರ **II** ಆಗಿದೆ

---

# ಅಧ್ಯಾಯ H-03

# ಆರೋಗ್ಯ ವಿಮಾ ಉತ್ಪನ್ನಗಳು

| ಅಧ್ಯಾಯ ಪರಿಚಯ |
| --- |

ಈ ಅಧ್ಯಾಯವು ಭಾರತದಲ್ಲಿ ವಿಮಾ ಕಂಪನಿಗಳು ನೀಡುವ ವಿವಿಧ ಆರೋಗ್ಯ ವಿಮಾ ಉತ್ಪನ್ನಗಳ ಒಟ್ಟಾರೆ ಒಳನೋಟವನ್ನು ನೀಡುತ್ತದೆ. ಗ್ರಾಹಕರು ಕೇವಲ ಒಂದು ಉತ್ಪನ್ನ - ಮೆಡಿಕ್ಲೇಮ್ ನಿಂದ ವಿವಿಧ ರೀತಿಯ ನೂರಾರು ಉತ್ಪನ್ನಗಳವರೆಗೆ, ಸೂಕ್ತವಾದ ಕವರ್ ಅನ್ನು ಆಯ್ಕೆ ಮಾಡಲು ವ್ಯಾಪಕವಾದ ಶ್ರೇಣಿಯನ್ನು ಹೊಂದಿದ್ದಾರೆ. ವ್ಯಕ್ತಿಗಳು, ಕುಟುಂಬ ಮತ್ತು ಗುಂಪನ್ನು ಒಳಗೊಂಡಿರುವ ವಿವಿಧ ಆರೋಗ್ಯ ಉತ್ಪನ್ನಗಳ ವೈಶಿಷ್ಟ್ಯಗಳನ್ನು ಅಧ್ಯಾಯವು ವಿವರಿಸುತ್ತದೆ.

| ಕಲಿಕೆಯ ಫಲಿತಾಂಶಗಳು |
| --- |

**A.** **ಆರೋಗ್ಯ ವಿಮಾ ಉತ್ಪನ್ನಗಳ ವರ್ಗೀಕರಣ**

**B.** **ಆರೋಗ್ಯ ವಿಮೆಯಲ್ಲಿ ಪ್ರಮಾಣೀಕರಣದ ಕುರಿತು ಐಆರ್ ಡಿಎಐ ಮಾರ್ಗಸೂಚಿಗಳು**

**C.** **ಆಸ್ಪತ್ರೆ ಒಳರೋಗಿ ಚಿಕಿತ್ಸೆಯ ಪರಿಹಾರದ ಉತ್ಪನ್ನ**

**D.** **ಟಾಪ್-ಅಪ್ ಕವರ್ ಗಳು ಅಥವಾ ಹೆಚ್ಚಿನ ಕಡಿತಗಳ ವಿಮಾ ಯೋಜನೆಗಳು**

**E.** **ಹಿರಿಯ ನಾಗರಿಕ ಪಾಲಿಸಿ**

**F.** **ಸ್ಥಿರ ಪ್ರಯೋಜನೆ(ಫಿಕ್ಸಡ್ ಬೆನಿಫಿಟ್)ಯ ಕವರ್‌ಗಳು - ಆಸ್ಪತ್ರೆ ನಗದು, ಗಂಭೀರ ಕಾಯಿಲೆ**

**G.** **ಸಂಯುಕ್ತ(ಕಾಂಬೊ)-ಉತ್ಪನ್ನಗಳು**

**H.** **ಬಡ ವರ್ಗಗಳಿಗೆ ಮೈಕ್ರೋ ವಿಮೆ ಮತ್ತು ಆರೋಗ್ಯ ವಿಮೆ**

**I.** **ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆ**

**J.** **ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ**

**K.** **ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ**

**L.** **ವೈಯಕ್ತಿಕ ಅಪಘಾತಮತ್ತು ಅಂಗವೈಕಲ್ಯತೆಯ ಕವರ್**

**M.** **ಸಾಗರೋತ್ತರ ಪ್ರಯಾಣ ವಿಮೆ**

**N.** **ಗುಂಪು ಆರೋಗ್ಯ ವಿಮೆ**

**O. ವಿಶೇಷ ಉತ್ಪನ್ನಗಳು**

**P. ಆರೋಗ್ಯ ಪಾಲಿಸಿಗಳಲ್ಲಿ ಪ್ರಮುಖ ಪದಗಳು**

ಈ ಅಧ್ಯಾಯವನ್ನು ಅಭ್ಯಸಿಸಿದ ಮೇಲೆ ನೀವು ಈ ಕೆಳಗಿನ ವಿಷಯಗಳನ್ನು ಮಾಡಲು ಸಾಧ್ಯವಾಗುತ್ತದೆ:

**a)** ಆರೋಗ್ಯ ವಿಮೆಯ ವಿವಿಧ ವರ್ಗಗಳನ್ನು ವಿವರಿಸುವುದು

**b)** ಆರೋಗ್ಯ ವಿಮೆಯಲ್ಲಿ ಪ್ರಮಾಣೀಕರಣದ ಕುರಿತು ಐಆರ್‌ ಡಿಎಐ ಮಾರ್ಗಸೂಚಿಗಳನ್ನು ವಿವರಿಸುವುದು

**c)** ಭಾರತೀಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಆರೋಗ್ಯವಿಮೆಯ ಉತ್ಪನ್ನಗಳ ವಿವಿಧ ಪ್ರಕಾರಗಳನ್ನು ಚರ್ಚಿಸುವುದು

**d)** ವೈಯಕ್ತಿಕ ಅಪಘಾತ ವಿಮೆಯನ್ನು ವಿವರಿಸುವುದು

**e)** ಸಾಗರೋತ್ತರ ಪ್ರವಾಸ ವಿಮೆಯನ್ನು ಚರ್ಚಿಸುವುದು

**f)** ಆರೋಗ್ಯ ಪಾಲಿಸಿಗಳಲ್ಲಿಯ ಪ್ರಮುಖ ನಿಯಮಗಳು ಮತ್ತು ಉಪವಾಕ್ಯಗಳನ್ನು ಅರಿತುಕೊಳ್ಳುವುದು

## A. ಆರೋಗ್ಯವಿಮೆಯ ಉತ್ಪನ್ನಗಳ ವರ್ಗೀಕರಣ

1. ಆರೋಗ್ಯವಿಮೆಯ ಉತ್ಪನ್ನಗಳ ಪರಿಚಯ

### ವ್ಯಾಖ್ಯಾನ

**1938** ರ ವಿಮಾ ಕಾಯಿದೆಯ ಸೆಕ್ಷನ್ **2(6ಸಿ)** ಅಡಿಯಲ್ಲಿ **"**ಆರೋಗ್ಯ ವಿಮಾ ವ್ಯವಹಾರ"ವನ್ನು "ಅನಾರೋಗ್ಯದ ಪ್ರಯೋಜನಗಳು ಅಥವಾ ವೈದ್ಯಕೀಯ, ಶಸ್ತ್ರಚಿಕಿತ್ಸಾ ಅಥವಾ ಆಸ್ಪತ್ರೆ ವೆಚ್ಚದ ಪ್ರಯೋಜನಗಳನ್ನು, ಒಳರೋಗಿ ಅಥವಾ ಹೊರರೋಗಿ ಪ್ರಯಾಣ ರಕ್ಷಣೆ ಮತ್ತು ವೈಯಕ್ತಿಕ ಅಪಘಾತ ಕವರ್ ಅನ್ನು ಒದಗಿಸುವ ಒಪ್ಪಂದಗಳ ಪರಿಣಾಮ"ವೆಂದು ವಿವರಿಸಿದೆ. ಐಆರ್ ಡಿಎಐ ಆರೋಗ್ಯ ವಿಮಾ ವ್ಯವಹಾರದ ಈ ವ್ಯಾಖ್ಯೆಯನ್ನು ಅನುಸರಿಸುತ್ತದೆ.

---

ಭಾರತೀಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಆರೋಗ್ಯ ವಿಮಾ ಉತ್ಪನ್ನಗಳು ಹೆಚ್ಚಾಗಿ **ಆಸ್ಪತ್ರೆ ದಾಖಲಾತಿಯ ಉತ್ಪನ್ನಗಳ** ಸ್ವರೂಪದಲ್ಲಿರುತ್ತವೆ. ಈ ಉತ್ಪನ್ನಗಳು ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ಒಬ್ಬ ವ್ಯಕ್ತಿಯಿಂದ ಉಂಟಾಗುವ ವೆಚ್ಚಗಳನ್ನು ಕವರ್ ಮಾಡುತ್ತವೆ.

ಆದ್ದರಿಂದ, ಮುಖ್ಯವಾಗಿ ಎರಡು ಕಾರಣಗಳಿಗಾಗಿ ಆರೋಗ್ಯ ವಿಮೆಯು ಮುಖ್ಯವಾಗಿದೆ:

- ✓ ಯಾವುದೇ ಅನಾರೋಗ್ಯದ ಸಂದರ್ಭದಲ್ಲಿ **ವೈದ್ಯಕೀಯ ಸೌಲಭ್ಯಗಳನ್ನು ಪಾವತಿಸಲು ಹಣಕಾಸಿನ ನೆರವು ಒದಗಿಸುವುದು.**
- ✓ ಅನಾರೋಗ್ಯದ ಕಾರಣದಿಂದ ನಾಶವಾಗಬಹುದಾದ **ವ್ಯಕ್ತಿಯ ಉಳಿತಾಯವನ್ನು ಸಂರಕ್ಷಿಸುವುದು**

ಬಹುತೇಕ ಎಲ್ಲ ಸಾಮಾನ್ಯ ವಿಮಾ ಕಂಪನಿಗಳು, ಸ್ವತಂತ್ರ ಆರೋಗ್ಯ ವಿಮೆಗಾರರು ಮತ್ತು ಜೀವ ವಿಮಾದಾರರು ಒದಗಿಸುವ ನೂರಾರು ಉತ್ಪನ್ನಗಳಿಂದಾಗಿ ಇಂದು, ಆರೋಗ್ಯ ವಿಮಾ ವಿಭಾಗವು ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿಗೊಂಡಿದೆ. ಆದಾಗ್ಯೂ, ಮೆಡಿಕ್ಲೇಮ್ ಪಾಲಿಸಿಯ ಮೂಲಭೂತ ಪ್ರಯೋಜನದ ರಚನೆಯು ಅಂದರೆ ಆಸ್ಪತ್ರೆ ದಾಖಲಾತಿಯ ವೆಚ್ಚಗಳ ವಿರುದ್ಧದ ಕವರ್ ಇನ್ನೂ ವಿಮೆಯ ಅತ್ಯಂತ ಜನಪ್ರಿಯ ರೂಪವಾಗಿ ಉಳಿದಿದೆ.

2. ಆರೋಗ್ಯ ವಿಮಾ ಉತ್ಪನ್ನಗಳ ಸ್ಥೂಲ ವರ್ಗೀಕರಣ

ಉತ್ಪನ್ನಗಳ ವಿನ್ಯಾಸವೇನೇ ಇರಲಿ, ಆರೋಗ್ಯ ವಿಮಾ ಉತ್ಪನ್ನಗಳನ್ನು ಸ್ಥೂಲವಾಗಿ ಎರಡು ವರ್ಗಗಳಲ್ಲಿ ವಿಂಗಡಿಸಬಹುದು:

**a) ನಷ್ಟ ಪರಿಹಾರದ ಕವರ್ ಗಳು**

ಈ ಉತ್ಪನ್ನಗಳು ಆರೋಗ್ಯ ವಿಮಾ ಮಾರುಕಟ್ಟೆಯ ಬಹುಭಾಗವನ್ನು ಒಳಗೊಂಡಿದ್ದು ಆಸ್ಪತ್ರೆಗೆ ದಾಖಲಾದ ಕಾರಣದಿಂದ ಉಂಟಾಗುವ ನಿಜವಾದ ವೈದ್ಯಕೀಯ ವೆಚ್ಚಗಳನ್ನು ಪಾವತಿಸುತ್ತವೆ.

b) ಸ್ಥಿರ ಪ್ರಯೋಜನದ ಕವರ್ ಗಳು

**'ಆಸ್ಪತ್ರೆ ನಗದು'** ಎಂದೂ ಕರೆಯಲ್ಪಡುವ ಈ ಉತ್ಪನ್ನಗಳು ಆಸ್ಪತ್ರೆಗೆ ದಾಖಲಾದ ಅವಧಿಯವರೆಗೆ ದಿನಕ್ಕೆ ನಿಗದಿತ ಮಾಡಲಾದ ಮೊತ್ತವನ್ನು ಪಾವತಿಸುತ್ತವೆ. ಕೆಲವು ಉತ್ಪನ್ನಗಳು ವಿವಿಧ ಶಸ್ತ್ರಚಿಕಿತ್ಸೆಗಳಿಗೆ ಪೂರ್ವ-ನಿರ್ಧಾರಿತ ಮೊತ್ತವನ್ನು ಸಹ ಒದಗಿಸುತ್ತವೆ.

3. ಗ್ರಾಹಕ ವಿಭಾಗವನ್ನಾಧರಿಸಿ ವರ್ಗೀಕರಣ

ಉದ್ದೇಶಿತ ಗ್ರಾಹಕರ ವಿಭಾಗದ ಆಧಾರದ ಮೇಲೆ ಸಹ ಉತ್ಪನ್ನಗಳನ್ನು ವರ್ಗೀಕರಿಸಬಹುದು. ಗ್ರಾಹಕರ ವಿಭಾಗಗಳ ಆಧಾರದ ಮೇಲೆ ಉತ್ಪನ್ನಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ:

a) ಚಿಲ್ಲರೆ ಗ್ರಾಹಕರು ಮತ್ತು ಅವರ ಕುಟುಂಬದ ಸದಸ್ಯರಿಗೆ **ವೈಯಕ್ತಿಕ ಕವರ್** ಅನ್ನು ನೀಡಲಾಗುತ್ತದೆ

b) ಸಂಸ್ಥೆಯ(ಕಾರ್ಪೊರೇಟ್) ಗ್ರಾಹಕರಿಗೆ ನೀಡಲಾಗುವ **ಗುಂಪು ಕವರ್**, ಉದ್ಯೋಗಿಗಳು ಮತ್ತು ಗುಂಪುಗಳನ್ನು ಅದರ ಸದಸ್ಯರನ್ನು ಕವರ್ ಮಾಡುವ ಮೂಲಕ ಕವರ್ ಮಾಡುವುದು

c) ಸರ್ಕಾರದ ಯೋಜನೆಗಳಾದ/ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ/ ಜನಸಂಖ್ಯೆಯ ಅತ್ಯಂತ ಬಡ ವರ್ಗಗಳನ್ನು ಒಳಗೊಂಡ ವಿವಿಧ ರಾಜ್ಯ ಆರೋಗ್ಯ ವಿಮಾ ಯೋಜನೆಗಳಂತಹ **ಸಾಮೂಹಿಕ ಪಾಲಿಸಿಗಳು.**

ಪ್ರತಿ ವಿಭಾಗದ ಲಾಭದ ರಚನೆಗಳು, ಬೆಲೆ, ಅಂಡರ್ ರೈಟಿಂಗ್ ಮತ್ತು ಮಾರ್ಕೆಟಿಂಗ್ ನಲ್ಲಿ ಸಾಕಷ್ಟು ವಿಭಿನ್ನತೆಯಿರುತ್ತದೆ.

**ಆರೋಗ್ಯ ವಿಮೆಗೆ ಸಂಬಂಧಿಸಿದ ನಿಯಮಗಳು:** ಆರೋಗ್ಯ ಉತ್ಪನ್ನಗಳಿಗೆ ಸಂಬಂಧಿಸಿದಂತೆ 2016 ರ ಆರೋಗ್ಯ ನಿಯಮಾವಳಿಗಳಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ತರಲಾಗಿದೆ, ಅವುಗಳಲ್ಲಿ ಕೆಲವನ್ನು ಈ ಕೆಳಗೆ ನೀಡಲಾಗಿದೆ:

1. ಜೀವ ವಿಮಾ ಜೀವವಿಮಾ ಕಂಪನಿಗಳು ದೀರ್ಘಾವಧಿಯ ಆರೋಗ್ಯ ಉತ್ಪನ್ನಗಳನ್ನು ನೀಡಬಹುದು ಆದರೆ ಅಂತಹ ಉತ್ಪನ್ನಗಳ ಕಂತು ಪ್ರತಿ ಕನಿಷ್ಠ ಮೂರು ವರ್ಷಗಳ ಅವಧಿಯವರೆಗೆ ಬದಲಾಗದೆ ಉಳಿಯುತ್ತದೆ, ನಂತರ ಕಂತನ್ನು ಪರಿಶೀಲಿಸಬಹುದು ಮತ್ತು ಅಗತ್ಯವಿರುವಂತೆ ಮಾರ್ಪಡಿಸಬಹುದು.

2. ಜೀವೇತರ ಮತ್ತು ಸ್ವತಂತ್ರ ಆರೋಗ್ಯ ವಿಮಾ ಕಂಪನಿಗಳು ವೈಯಕ್ತಿಕ ಆರೋಗ್ಯ ಉತ್ಪನ್ನಗಳನ್ನು ಕನಿಷ್ಠ ಒಂದು ವರ್ಷ ಮತ್ತು ಗರಿಷ್ಠ ಮೂರು ವರ್ಷಗಳ ಅವಧಿಯೊಂದಿಗೆ ನೀಡಬಹುದು, ಕಂತು ಅವಧಿಯುದ್ದಕ್ಕೂ ಬದಲಾಗದೆ ಉಳಿಯುತ್ತದೆ.

3. ಮಾ ಕಂಪನಿಗಳು ನವೀನ 'ಪ್ರಾಯೋಗಿಕ(ಪೈಲಟ್)-ಉತ್ಪನ್ನಗಳನ್ನು' ನೀಡಬಹುದು. ಈ ಉತ್ಪನ್ನಗಳನ್ನು ಸಾಮಾನ್ಯ-ವಿಮಾಗಾರರು ಮತ್ತು ಆರೋಗ್ಯ-ವಿಮಾಗಾರರು, 1 ವರ್ಷದ ಆದರೆ 5 ವರ್ಷಗಳನ್ನು ಮೀರದ ಪಾಲಿಸಿ ಅವಧಿಗೆ ನೀಡಬಹುದು. ಗುಂಪು ಆರೋಗ್ಯ ಪಾಲಿಸಿಗಳನ್ನು ಯಾವುದೇ ವಿಮಗಾರರು ಅವಧಿಯನ್ನು ಐದು ವರ್ಷಗಳನ್ನು ಮೀರದ ಸಾಲದ ಅವಧಿಯವರೆಗೆ ವಿಸ್ತರಿಸಬಹುದಾದ ಕ್ರೆಡಿಟ್ ಲಿಂಕ್ ಮಾಡಿದ ಉತ್ಪನ್ನಗಳನ್ನು ಹೊರತುಪಡಿಸಿ ಒಂದು ವರ್ಷದ ಅವಧಿಗೆ ನೀಡಬಹುದು.

4. ವಿಮೆಯನ್ನು ಪಡೆಯುವ ಮುಖ್ಯ ಉದ್ದೇಶದಿಂದಲೇ ರಚನೆಯಾದ ಯಾವುದೇ ಗುಂಪಿಗೆ ಆರೋಗ್ಯ ವಿಮಾ ಪಾಲಿಸಿಯನ್ನು ನೀಡಲಾಗುವುದಿಲ್ಲ. ವಿಮಾಗಾರರು ನಿರ್ಧರಿಸಿದಂತೆ ಗುಂಪಿನ ಎಲ್ಲ ಪಾಲಿಸಿಗಳಿಗೆ ಅನ್ವಯಿಸುವಂತೆ ಕನಿಷ್ಠ 7 ರ ಸಂಖ್ಯೆಗೆ ಒಳಪಟ್ಟಿರುವ ಗಾತ್ರವನ್ನು ಹೊಂದಿರಬೇಕು.

5. ಸಾಮಾನ್ಯ ವಿಮಾದಾರರು ಮತ್ತು ಆರೋಗ್ಯ ವಿಮಾಗಾರರು ಐದು ವರ್ಷಗಳನ್ನು ಮೀರದ ಸಾಲದ ಅವಧಿಯವರೆಗೆ ವಿಸ್ತರಿಸಿದ ಕ್ರೆಡಿಟ್ ಲಿಂಕ್ಡ್ ಗ್ರೂಪ್ ಪರ್ಸನಲ್ ಆಕ್ಸಿಡೆಂಟ್ ಪಾಲಿಸಿಗಳನ್ನು ನೀಡಬಹುದು.

6. **ಬಹು ಪಾಲಿಸಿಗಳು**-ಒಂದು ವೇಳೆ ವಿಮಾದಾರರು ಸ್ಥಿರ ಪ್ರಯೋಜನಗಳನ್ನು ನೀಡುವ ಒಂದಕ್ಕಿಂತ ಹೆಚ್ಚು ವಿಮಾ ಕಂಪನಿಗಳಿಂದ ಆರೋಗ್ಯ ಪಾಲಿಸಿಗಳನ್ನು ತೆಗೆದುಕೊಂಡಿದ್ದರೆ, ಪ್ರತಿ ವಿಮಾಗಾರರು ವಿಮೆ ಮಾಡಿದ ಘಟನೆ ಸಂಭವಿಸಿದ ಸಂದರ್ಭದಲ್ಲಿ ಅದೇ ರೀತಿಯ ಇತರ ಪಾಲಿಸಿಗಳಿಂದ ಪಡೆದ ಪಾವತಿಗಳಿಂದ ಸ್ವತಂತ್ರವಾಗಿ ಪಾಲಿಸಿಗಳ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕ್ಲೇಮ್ ಅನ್ನು ಪಾವತಿಯನ್ನು ಮಾಡುತ್ತಾರೆ.

   ಚಿಕಿತ್ಸೆಯ ವೆಚ್ಚವನ್ನು ಸರಿದೂಗಿಸಲು ಒಂದು ಅಥವಾ ಹೆಚ್ಚು ವಿಮಾಗಾರರಿಂದ ಎರಡು ಅಥವಾ ಹೆಚ್ಚಿನ ಪಾಲಿಸಿಗಳನ್ನು ವಿಮಾದಾರರು ತೆಗೆದುಕೊಂಡಿದ್ದರೆ, ಪಾಲಿಸಿದಾರರು ಅವನ/ಅವಳ ಯಾವುದೇ ಪಾಲಿಸಿಗಳ ಸಂದರ್ಭದಲ್ಲಿ ಅವನ/ಅವಳ ಕ್ಲೇಮ್ ನ ಇತ್ಯರ್ಥವನ್ನು ಕೇಳುವ ಹಕ್ಕನ್ನು ಹೊಂದಿರುತ್ತಾರೆ. ಕ್ಲೇಮ್ ಮಾಡಲ್ಪಟ್ಟ ವಿಮಾಗಾರರು ಕ್ಲೇಮ್ ಪಾವತಿ ಮಾಡುತ್ತಾರೆ ಮತ್ತು ಮೊದಲೇ ಆಯ್ಕೆ ಮಾಡಿದ ಪಾಲಿಸಿ / ಪಾಲಿಸಿಗಳಡಿಯಲ್ಲಿಯ ವಿಮಾ ಮೊತ್ತವು ಖಾಲಿಯಾಗದಿದ್ದರೂ ಮೊದಲು ಆಯ್ಕೆ ಮಾಡಿದ ಪಾಲಿಸಿ / ಪಾಲಿಸಿಗಳಡಿಯಲ್ಲಿಯ ಬಾಕಿ ಕ್ಲೇಮ್ ಅಥವಾ ಅನುಮತಿಸದ ಕ್ಲೇಮ್ ಗಳನ್ನು ಇತರ ಪಾಲಿಸಿ / ಪಾಲಿಸಿಗಳಿಂದ ಪಾವತಿ ಮಾಡಬಹುದಾಗಿದೆ.

## B. *ಆರೋಗ್ಯ ವಿಮೆಯಲ್ಲಿ ಪ್ರಮಾಣೀಕರಣದ ಕುರಿತು ಐಆರ್ ಡಿಎಐ ಮಾರ್ಗಸೂಚಿಗಳು*

ಹಲವಾರು ವಿಮಾದಾರರು ವಿಭಿನ್ನ ವ್ಯಾಖ್ಯೆಗಳೊಂದಿಗೆ ಮತ್ತು ವಿವಿಧ ನಿಯಮಗಳು ಮತ್ತು ಹೊರತುಗಳೊಂದಿಗೆ ಹಲವಾರು ವಿಭಿನ್ನ ಉತ್ಪನ್ನಗಳನ್ನು ಒದಗಿಸುವುದರೊಂದಿಗೆ ಮಾರುಕಟ್ಟೆಯಲ್ಲಿ ಗೊಂದಲವು ಹುಟ್ಟಿಕೊಂಡಿತು. ಗ್ರಾಹಕರಿಗೆ ಉತ್ಪನ್ನಗಳನ್ನು ಹೋಲಿಸುವುದು ಮತ್ತು ಜಾಗರೂಕ

ನಿರ್ಧಾರವನ್ನು ತೆಗೆದುಕೊಳ್ಳುವುದು ಕಷ್ಟಕರವಾಯಿತು. ಇದಲ್ಲದೆ, ಗಂಭೀರ ಅನಾರೋಗ್ಯದ ಪಾಲಿಸಿಗಳಲ್ಲಿ, ಗಂಭೀರ ಅನಾರೋಗ್ಯದ ಅರ್ಥವೇನು ಮತ್ತು ಯಾವುದು ಗಂಭೀರ ಅನಾರೋಗ್ಯವಲ್ಲ ಎಂಬುದರ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇರುವುದಿಲ್ಲ.

ವಿಮಾದಾರರು, ಸೇವಾ ಪೂರೈಕೆದಾರರು, ಟಿಪಿಎಗಳು ಮತ್ತು ಆಸ್ಪತ್ರೆಗಳಲ್ಲಿಯ ಗೊಂದಲವನ್ನು ತೆಗೆದುಹಾಕಲು ಮತ್ತು ವಿಮೆ ಮಾಡುವ ಸಾರ್ವಜನಿಕರ ದೂರುಗಳನ್ನು ನಿವಾರಿಸಲು, ನಿಯಂತ್ರಕರು ಆರೋಗ್ಯ ವಿಮೆಯಲ್ಲಿ ಕೆಲವು ರೀತಿಯ ಪ್ರಮಾಣೀಕರಣವನ್ನು ಒದಗಿಸಲು ಪ್ರಯತ್ನಿಸಿದರು. ಸಾಮಾನ್ಯ ತಿಳುವಳಿಕೆಯ ಆಧಾರದ ಮೇಲೆ, ಐಆರ್ ಡಿಎ 2016 ರಲ್ಲಿ ಆರೋಗ್ಯ ವಿಮೆಯಲ್ಲಿ ಪ್ರಮಾಣೀಕರಣದ ಕುರಿತು ಮುಂದೆ 2020 ರಲ್ಲಿ ಮತ್ತಷ್ಟು ತಿದ್ದುಪಡಿ ಮಾಡಲಾದ ಮಾರ್ಗಸೂಚಿಗಳನ್ನು ಹೊರಡಿಸಿತು. ನಷ್ಟ ಪರಿಹಾರ ಆಧಾರಿತ ಆರೋಗ್ಯ ವಿಮೆ (ಪಿಎ ಮತ್ತು ದೇಶೀಯ/ ಸಾಗರೋತ್ತರ ಪ್ರಯಾಣ ವಿಮೆಯನ್ನು ಹೊರತುಪಡಿಸಿ) ಉತ್ಪನ್ನ(ಎರಡೂ ವೈಯಕ್ತಿಕ ಮತ್ತು ಗುಂಪು)ಗಳನ್ನು ನೀಡುವ ಎಲ್ಲ ಸಾಮಾನ್ಯ ಮತ್ತು ಆರೋಗ್ಯ ವಿಮೆದಾರರಿಗೆ ಇವು ಅನ್ವಯಿಸುತ್ತವೆ.

ಈಗ ಮಾರ್ಗಸೂಚಿಗಳು ಈ ಕೆಳಗಿನವುಗಳ ಪ್ರಮಾಣೀಕರಣಕ್ಕಾಗಿ ಒದಗಿಸುತ್ತವೆ:

1. ಸಾಮಾನ್ಯವಾಗಿ ಬಳಸಲಾಗುವ ವಿಮಾ ಪದಗಳ ವ್ಯಾಖ್ಯೆಗಳು
2. ಗಂಭೀರ ಕಾಯಿಲೆಗಳ ವ್ಯಾಖ್ಯೆಗಳು
3. ಆಸ್ಪತ್ರೆ ದಾಖಲಾತಿಯ ನಷ್ಟ ಪರಿಹಾರದ ಪಾಲಿಸಿಗಳಲ್ಲಿಯ ವೆಚ್ಚಗಳ ಐಚ್ಛಿಕ ವಿಷಯಗಳ ಪಟ್ಟಿ
4. ಕ್ಲೇಮ್ ನಮೂನೆಗಳು ಮತ್ತು ಪೂರ್ವ-ಅಧಿಕಾರ ನಮೂನೆಗಳು
5. ಬಿಲ್ಲಿಂಗ್ ಸ್ವರೂಪಗಳು
6. ಆಸ್ಪತ್ರೆಗಳ ಡಿಸ್ಚಾರ್ಜ್ ಸಾರಾಂಶ
7. ಟಿಪಿಎಗಳು, ವಿಮಾಗಾರರು ಮತ್ತು ಆಸ್ಪತ್ರೆಗಳ ನಡುವಿನ ಪ್ರಮಾಣಿತ ಒಪ್ಪಂದಗಳು
8. ಹೊಸ ಪಾಲಿಸಿಗಳಿಗಾಗಿ ಐಆರ್ ಡಿಎಐ ಪಡೆಯಲು ಪ್ರಮಾಣಿತ ಫೈಲ್ ಮತ್ತು ಬಳಕೆ ಸ್ವರೂಪ
9. ಹೊರತುಗಳ ಪ್ರಮಾಣೀಕರಣ
10. ಅನುಮತಿಸಲಾಗದ ಹೊರತುಗಳು

## C. ಆಸ್ಪತ್ರೆ ದಾಖಲಾತಿಯ ಪರಿಹಾರದ ಉತ್ಪನ್ನ

ವ್ಯಕ್ತಿಗಳು ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿ ಅವರು ಮಾಡಬೇಕಾದ ವೆಚ್ಚದಿಂದ ಆಸ್ಪತ್ರೆ ದಾಖಲಾತಿಯ ಪರಿಹಾರದ ಉತ್ಪನ್ನಗಳು ರಕ್ಷಿಸುತ್ತವೆ. ಹೆಚ್ಚಿನ ಸಂದರ್ಭಗಳಲ್ಲಿ, ಆದರೆ ಆಸ್ಪತ್ರೆಗೆ ಒಳರೋಗಿಯಾಗಿ ಸೇರದ ಯಾವುದೇ ಚಿಕಿತ್ಸಾ ವೆಚ್ಚಗಳನ್ನು ಹೊರತುಪಡಿಸಲಾಗುತ್ತದೆ. ಆಸ್ಪತ್ರೆಗೆ ಸೇರಿಸುವ ಮೊದಲು ಮತ್ತು ನಂತರದ ನಿರ್ದಿಷ್ಟ ಸಂಖ್ಯೆಯ ದಿನಗಳನ್ನು ಸಹ ಕವರ್ ಮಾಡುತ್ತವೆ.

**ಮೆಡಿಕ್ಲೇಮ್ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಆಸ್ಪತ್ರೆ ದಾಖಲಾತಿ ಪರಿಹಾರ ಪಾಲಿಸಿಯು 'ಭದ್ರತೆ(ಇನ್ಡೆಮ್ನಿಟಿ)'ಯ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ.** ಆಸ್ಪತ್ರೆಗೆ ದಾಖಲಾದ **ಸಮಯದಲ್ಲಿ ವೆಚ್ಚವನ್ನು ಭರಿಸುವ ಮೂಲಕ ಇದು ಪಾಲಿಸಿದಾರರಿಗೆ ನಷ್ಟಪರಿಹಾರವನ್ನು ನೀಡುತ್ತದೆ. ಕವರ್ ಮಾಡಿಲ್ಲದ ಕೆಲವು ವೆಚ್ಚಗಳನ್ನು ಪಾಲಿಸಿ ದಾಖಲೆಯಲ್ಲಿ ನಿರ್ದಿಷ್ಟಪಡಿಸಲಾಗಿರುತ್ತದೆ.**

| **ಉದಾಹರಣೆ** |
|---|

ರಘು ಅವರು ಪತ್ನಿ ಮತ್ತು **14** ವರ್ಷದ ಮಗನನ್ನು ಒಳಗೊಂಡ ಸಣ್ಣ ಕುಟುಂಬವನ್ನು ಹೊಂದಿದ್ದಾರೆ. ಅವರು ಮೆಡಿಕ್ಲೇಮ್ ಪಾಲಿಸಿಯನ್ನು ತೆಗೆದುಕೊಂಡಿದ್ದಾರೆ, ಅವರ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಆರೋಗ್ಯ ವಿಮಾ ಕಂಪನಿಯಿಂದ ತಲಾ ರೂ.**1** ಲಕ್ಷಗಳ ಕವರ್ ತೆಗೆದುಕೊಂಡಿದ್ದಾರೆ. ಆಸ್ಪತ್ರೆಗೆ ದಾಖಲಾದರೆ ಅವರಲ್ಲಿ ಪ್ರತಿಯೊಬ್ಬರೂ ರೂ. **1** ಲಕ್ಷಗಳವರೆಗೆ ವೈದ್ಯಕೀಯ ವೆಚ್ಚವನ್ನು ಮರುಪಡೆಯಬಹುದು.

ರಘು ಹೃದಯಾಘಾತದಿಂದ ಆಸ್ಪತ್ರೆಗೆ ದಾಖಲಾಗಿದ್ದು, ಶಸ್ತ್ರಚಿಕಿತ್ಸೆಯ ಅಗತ್ಯವಿತ್ತು. ವೈದ್ಯಕೀಯ ವೆಚ್ಚ ರೂ. **1.25** ಲಕ್ಷಗಳ ವರೆಗೆ ಬೆಳೆಯಿತು. ವಿಮಾ ಕಂಪನಿಯು ಯೋಜನಾ ವ್ಯಾಪ್ತಿಗೆ ಅನುಗುಣವಾಗಿ **1** ಲಕ್ಷ ರೂ.ಗಳನ್ನು ಪಾವತಿಸಿತು ಮತ್ತು ರಘು ಅವರು ಉಳಿದ ರೂ. **25,000** ಗಳನ್ನು ಸ್ವಂತ ಜೇಬಿನಿಂದ ಕೊಡಬೇಕಾಯಿತು.

**ಪರಿಹಾರ ಆಧಾರಿತ ಮೆಡಿಕ್ಲೈಮ್ ಪಾಲಿಸಿಯ ಮುಖ್ಯ ಲಕ್ಷಣಗಳನ್ನು ಈ ಕೆಳಗೆ ವಿವರಿಸಲಾಗಿದೆ, ಆದರೂ ಪ್ರತಿ ವಿಮಾದಾರರಿಂದ ಮಾರಾಟವಾಗುವ ಉತ್ಪನ್ನಗಳಿಗೆ ಕವರ್ ನ ಮಿತಿಗಳಲ್ಲಿಯ ವ್ಯತ್ಯಾಸಗಳು, ಹೆಚ್ಚುವರಿ ಹೊರತುಗಳು ಅಥವಾ ಪ್ರಯೋಜನಗಳು ಅಥವಾ ಕೆಲವು ಆಡ್-ಆನ್ ಗಳು ಅನ್ವಯಿಸಬಹುದು.**

**1. ಒಳರೋಗಿ ಆಸ್ಪತ್ರೆ ವೆಚ್ಚಗಳು**

ಅನಾರೋಗ್ಯ/ಅಪಘಾತದ ಕಾರಣದಿಂದ ಉಂಟಾಗುವ ಆಸ್ಪತ್ರೆಯ ವೆಚ್ಚವನ್ನು ಪಾಲಿಸಿಯು ವಿಮಾದಾರರಿಗೆ ಪಾವತಿಸುತ್ತದೆ. ಪಾಲಿಸಿ ನಿಬಂಧನೆಗಳು ಜಾರಿಗೆ ಬರಲು ಪಾಲಿಸಿಯು ಆಸ್ಪತ್ರೆಗೆ ದಾಖಲಾಗಬೇಕಾದ ಕನಿಷ್ಠ ಅವಧಿಯನ್ನು ಹೊಂದಿರುತ್ತದೆ (ಸಾಮಾನ್ಯವಾಗಿ 24 ಗಂಟೆಗಳು). ಆದಾಗ್ಯೂ ಒಮ್ಮೆ ಈ ಅವಧಿಯನ್ನು ತಲುಪಿದ ನಂತರ ಸಂಪೂರ್ಣ ಅವಧಿಯ ವೆಚ್ಚಗಳನ್ನು ಪಾವತಿಸಬೇಕಾಗುತ್ತದೆ.

ಚಿಕಿತ್ಸೆಗೆ ಸಂಬಂಧಿಸಿದ ಹೆಚ್ಚಿನ ವೆಚ್ಚಗಳನ್ನು ಪಾವತಿಸಲಾಗುತ್ತದೆ, ಆದರೆ ಸೌಂದರ್ಯವರ್ಧಕ ಶಸ್ತ್ರಚಿಕಿತ್ಸೆಗಳಂತಹ ವೈಯಕ್ತಿಕ ಸೌಕರ್ಯದ ವಸ್ತುಗಳನ್ನೊಳಗೊಂಡಿರುವ ಕೆಲವು ವೆಚ್ಚಗಳನ್ನು ಪಾವತಿಸಲಾಗುವುದಿಲ್ಲ. ಆದ್ದರಿಂದ ಗ್ರಾಹಕರು ಪಾಲಿಸಿಯಡಿಯಲ್ಲಿ ಒಳಗೊಂಡಿರದ ವೆಚ್ಚಗಳ ಹೊರತುಗಳ ಬಗ್ಗೆ ತಿಳಿದುಕೊಳ್ಳುವುದು ಮುಖ್ಯವಾಗಿದೆ.

**i.** ಆಸ್ಪತ್ರೆ/ ನರ್ಸಿಂಗ್ ಹೋಮ್ ಒದಗಿಸಿದ ಕೊಠಡಿ, ಬೋರ್ಡಿಂಗ್ ಮತ್ತು ಶುಶ್ರೂಷೆಯ ವೆಚ್ಚಗಳು. ಇದು ಶುಶ್ರೂಷಾ ಆರೈಕೆ, ಆರ್ ಎಮ್ ಓ ಶುಲ್ಕಗಳು, ಐವಿ ದ್ರವಗಳು/ ರಕ್ತ ವರ್ಗಾವಣೆ/ ಇಂಜೆಕ್ಷನ್ ಆಡಳಿತ ಶುಲ್ಕಗಳು ಮತ್ತು ಅಂತಹುದೇ ವೆಚ್ಚಗಳನ್ನು ಒಳಗೊಂಡಿರುತ್ತವೆ

ii. ತೀವ್ರ ನಿಗಾ ಘಟಕ/ಅತಿ ದಕ್ಷತಾ ವಿಭಾಗ (ಐಸಿಯು) ವೆಚ್ಚಗಳು

iii. ಶಸ್ತ್ರಚಿಕಿತ್ಸಕ, ಅರಿವಳಿಕೆ ತಜ್ಞರು, ವೈದ್ಯರು, ಸಲಹೆಗಾರರು, ತಜ್ಞರ ಶುಲ್ಕಗಳು

iv. ಅರಿವಳಿಕೆ, ರಕ್ತ, ಆಮ್ಲಜನಕ, ಆಪರೇಷನ್ ಥಿಯೇಟರ್ ಶುಲ್ಕಗಳು, ಶಸ್ತ್ರಚಿಕಿತ್ಸಾ ಉಪಕರಣಗಳು,

v. ಔಷಧಗಳು ಮತ್ತು ಮದ್ದು,

vi. ಡಯಾಲಿಸಿಸ್, ಕೀಮೋಥೆರಪಿ, ರೇಡಿಯೊಥೆರಪಿ

vii. ಪೇಸ್‌ಮೇಕರ್, ಮೂಳೆಚಿಕಿತ್ಸೆ ಇಂಪ್ಲಾಂಟ್ ಗಳು, ಇನ್‌ಫ್ರಾ ಕಾರ್ಡಿಯಾಕ್ ವಾಲ್ವ್ ರಿಪ್ಲೇಸ್ ಮೆಂಟ್ ಗಳು, ವ್ಯಾಸ್ಕ್ಯುಲರ್ ಸ್ಟೆಂಟ್ ಗಳಂತಹ ಶಸ್ತ್ರಚಿಕಿತ್ಸಾ ವಿಧಾನದ ಸಮಯದಲ್ಲಿ ಅಳವಡಿಸಲಾದ ಪ್ರಾಸ್ಥೆಟಿಕ್ ಸಾಧನಗಳ ವೆಚ್ಚ

viii. ಸೂಕ್ತ ಪ್ರಯೋಗಾಲಯ/ರೋಗನಿರ್ಣಯ ಪರೀಕ್ಷೆಗಳು ಮತ್ತು ಚಿಕಿತ್ಸೆಗೆ ಸಂಬಂಧಿಸಿದ ಇತರ ವೈದ್ಯಕೀಯ ವೆಚ್ಚಗಳು

ix. ವಿಮಾದಾರರಿಗೆ ಅಂಗಾಂಗ ಕಸಿ ಮಾಡುವುದಕ್ಕೆ ಸಂಬಂಧಿಸಿದಂತೆ ದಾನಿಯ ಮೇಲೆ ಮಾಡಲಾದ ಆಸ್ಪತ್ರೆಯ ವೆಚ್ಚಗಳು (ಅಂಗಗಳ ವೆಚ್ಚವನ್ನು ಹೊರತುಪಡಿಸಿ)..

**2. ಡೇ ಕೇರ್ ಕಾರ್ಯವಿಧಾನಗಳು**

ವಿಶೇಷ ಆಸ್ಪತ್ರೆಗಳಲ್ಲಿ ನಡೆಸುವ ಅಗತ್ಯವಿಲ್ಲದ ಅನೇಕ ಶಸ್ತ್ರಚಿಕಿತ್ಸೆಗಳಿವೆ. ಕಣ್ಣಿನ ಶಸ್ತ್ರಚಿಕಿತ್ಸೆಗಳು, ಕೀಮೋಥೆರಪಿಯಂತಹ ಚಿಕಿತ್ಸೆಗಳು; ಡಯಾಲಿಸಿಸ್ ಇತ್ಯಾದಿಗಳನ್ನು ಡೇ-ಕೇರ್ ಸರ್ಜರಿಗಳಡಿಯಲ್ಲಿ ವರ್ಗೀಕರಿಸಬಹುದು ಮತ್ತು ಇವುಗಳ ಪಟ್ಟಿಯು ಬೆಳೆಯುತ್ತಲೇ ಇದೆ. ಇವು ಕೂಡ ಪಾಲಿಸಿಯ ವ್ಯಾಪ್ತಿಗೆ ಒಳಪಡುತ್ತವೆ.

**3. ಓಪಿಡಿ ಕವರ್**

ಭಾರತದಲ್ಲಿ ಹೊರರೋಗಿ ವೆಚ್ಚಗಳ ಕವರೇಜ್ ಈಗಲೂ ಬಹಳ ಸೀಮಿತವಾಗಿದೆ, ಅಂತಹ ಕೆಲವು ಉತ್ಪನ್ನಗಳು ಓಪಿಡಿ ಕವರ್ ಗಳನ್ನು ನೀಡುತ್ತವೆ. ಆದಾಗ್ಯೂ ಹೊರರೋಗಿಯಾಗಿ ಕವರ್ ಚಿಕಿತ್ಸೆಯನ್ನು ಮತ್ತು ವೈದ್ಯರ ಭೇಟಿಗಳು, ನಿಯಮಿತ ವೈದ್ಯಕೀಯ ಪರೀಕ್ಷೆಗಳು, ದಂತ ಮತ್ತು ಫಾರ್ಮಸಿ ವೆಚ್ಚಗಳಿಗೆ ಸಂಬಂಧಿಸಿದ ಆರೋಗ್ಯ ಆರೈಕೆ ವೆಚ್ಚಗಳನ್ನು ಒದಗಿಸುವ ಕೆಲವು ಯೋಜನೆಗಳಿವೆ.

**4. ಆಸ್ಪತ್ರೆಯ ಪೂರ್ವ ಮತ್ತು ನಂತರದ ವೆಚ್ಚಗಳು**

**i. ಆಸ್ಪತ್ರೆಯ ಪೂರ್ವ ವೆಚ್ಚಗಳು**

ಆಸ್ಪತ್ರೆ ದಾಖಲಾತಿಯು ತುರ್ತು ದಾಖಲೆ ಅಥವಾ ಯೋಜಿತವಾಗಿರಬಹುದು. ರೋಗಿಯು ಯೋಜಿತ ಶಸ್ತ್ರಚಿಕಿತ್ಸೆಗೆ ಹೋದರೆ, ಆಸ್ಪತ್ರೆಗೆ ಸೇರಿಸುವ ಮೊದಲು ಅವರಿಗೆ ವೆಚ್ಚವಾಗಿರುತ್ತದೆ. ಅಂತಹ ವೆಚ್ಚಗಳನ್ನು ಆಸ್ಪತ್ರೆಯ ಪೂರ್ವ ವೆಚ್ಚಗಳು ಎಂದು ಕರೆಯಲಾಗುತ್ತದೆ

| ವ್ಯಾಖ್ಯಾನ |
| --- |

ವಿಮಾದಾರ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲು ಮಾಡುವ ಮೊದಲು ಈ ವೆಚ್ಚಗಳನ್ನು ವಿಮೆ ಮಾಡಿದ ವ್ಯಕ್ತಿಯನ್ನು ಆಸ್ಪತ್ರೆಗೆ ಸೇರಿಸುವ ಪೂರ್ವದಲ್ಲಿ ಮಾಡಿರುವುದಕ್ಕೆ ಒಳಪಟ್ಟಂತೆ ಪೂರ್ವನಿರ್ಧರಿತ ಸಂಖ್ಯೆಯ ದಿನಗಳಲ್ಲಿ ಭರಿಸಲ್ಪಟ್ಟ ವೈದ್ಯಕೀಯ ವೆಚ್ಚಗಳೆಂದು ಇದರ ಅರ್ಥ ಮತ್ತು

**a)** ವಿಮಾದಾರರ ಆಸ್ಪತ್ರೆ ದಾಖಲಾತಿಗೆ ಅಗತ್ಯವಿರುವ ಅದೇ ಸ್ಥಿತಿಗೆ ಅಂತಹ ವೈದ್ಯಕೀಯ ವೆಚ್ಚಗಳು ಭರಿಸಲ್ಪಟ್ಟಿವೆ ಮತ್ತು

**b)** ಅಂತಹ ಒಳರೋಗಿ ಆಸ್ಪತ್ರೆ ದಾಖಲಾತಿಯ ಆಸ್ಪತ್ರೆ ದಾಖಲಾತಿಯ ಕ್ಲೇಮ್ ಅನ್ನು ವಿಮಾ ಕಂಪನಿಯು ಒಪ್ಪಿಕೊಳ್ಳುತ್ತದೆ.

ಆಸ್ಪತ್ರೆಗೆ ದಾಖಲಾತಿಯ ಪೂರ್ವ ವೆಚ್ಚಗಳು ಪರೀಕ್ಷೆಗಳು, ಔಷಧಿಗಳು, ವೈದ್ಯರ ಶುಲ್ಕಗಳು ಇತ್ಯಾದಿಗಳ ರೂಪದಲ್ಲಿರಬಹುದು. ಆಸ್ಪತ್ರೆ ದಾಖಲಾತಿಗೆ ಸೂಕ್ತ ಮತ್ತು ಸಂಬಂಧಿತವಾದ ಇಂತಹ ವೆಚ್ಚಗಳು ಆರೋಗ್ಯ ಪಾಲಿಸಿಗಳಡಿಯಲ್ಲಿ ಕವರ್ ಮಾಡಲ್ಪಡುತ್ತವೆ.

**ii. ಆಸ್ಪತ್ರೆ ಬಿಡುಗಡೆಯ ನಂತರದ ವೆಚ್ಚಗಳು**

ಆಸ್ಪತ್ರೆಯಲ್ಲಿ ದಾಖಲಾದ ನಂತರ, ಹೆಚ್ಚಿನ ಸಂದರ್ಭಗಳಲ್ಲಿ ವಿಮಾದಾರರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ತಕ್ಷಣ ಚೇತರಿಕೆ ಮತ್ತು ಅನುಸರಣೆಗೆ ಸಂಬಂಧಿಸಿದ ವೆಚ್ಚಗಳು ಇರುತ್ತವೆ.

ಈ ಕೆಳಗಿನ ಅಂಶಗಳಿಗೆ ಒಳಪಟ್ಟು ಈ ಎರಡೂ ರೀತಿಯ ವೆಚ್ಚಗಳು ಸ್ವೀಕಾರಾರ್ಹವಾಗಿರುತ್ತವೆ

**a)** ವಿಮಾದಾರರ ಆಸ್ಪತ್ರೆ ದಾಖಲಾತಿಗೆ ಅಗತ್ಯವಿರುವ ಅದೇ ಪರಿಸ್ಥಿತಿಗೆ ಆ ವೆಚ್ಚಗಳನ್ನು ಮಾಡಲಾಗಿದೆ, ಮತ್ತು

**b)** ಅಂತಹ ಆಸ್ಪತ್ರೆ ದಾಖಲಾತಿಯ ಒಳರೋಗಿ ಆಸ್ಪತ್ರೆಯ ಕ್ಲೇಮ್ ಅನ್ನು ವಿಮಾ ಕಂಪನಿಯು ಒಪ್ಪಿಕೊಳ್ಳುತ್ತದೆ.

ಆಸ್ಪತ್ರೆ ಬಿಡುಗಡೆಯ ನಂತರ ವ್ಯಾಖ್ಯಾನಿಸಲಾದ ದಿನಗಳವರೆಗಿನ ಅವಧಿಯಲ್ಲಿ ಭರಿಸಲಾದ ಆಸ್ಪತ್ರೆಯ ನಂತರದ ವೆಚ್ಚಗಳು ಸಂಬಂಧಿತ ವೈದ್ಯಕೀಯ ವೆಚ್ಚಗಳಾಗಿವೆ ಮತ್ತು ಅದನ್ನು ಕ್ಲೇಮ್ ನ ಭಾಗವಾಗಿ ಪರಿಗಣಿಸಲಾಗುತ್ತದೆ.

ಔಷಧಗಳು, ಮದ್ದು, ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ವೈದ್ಯರ ಭೇಟಿ ಇತ್ಯಾದಿಗಳ ರೂಪದಲ್ಲಿ ಆಸ್ಪತ್ರೆಯ ನಂತರದ ವೆಚ್ಚಗಳಿರಬಹುದು. ಅಂತಹ ವೆಚ್ಚಗಳು ಆಸ್ಪತ್ರೆಯಲ್ಲಿ ತೆಗೆದುಕೊಂಡ ಚಿಕಿತ್ಸೆಗೆ ಸಂಬಂಧಿಸಿರಬೇಕು ಮತ್ತು ಆರೋಗ್ಯ ಪಾಲಿಸಿಗಳಡಿಯಲ್ಲಿ ಕವರ್ ಮಾಡಲ್ಪಟ್ಟಿರಬೇಕು.

ಆಸ್ಪತ್ರೆ ದಾಖಲಾತಿಯ ಪೂರ್ವ ಮತ್ತು ನಂತರದ ವೆಚ್ಚಗಳ ಕವರ್ ನ ಅವಧಿಯು ಪಾಲಿಸಿಯಲ್ಲಿ ವ್ಯಾಖ್ಯಾನಿಸಲಾಗಿದ್ದು ವಿಮಾಗಾರಿಂದ ವಿಮಾಗಾರರಿಗೆ ಬದಲಾಗುತ್ತದೆ, **ಆಸ್ಪತ್ರೆ ದಾಖಲಾತಿಯ ಮೂವತ್ತು ದಿನಗಳ ಪೂರ್ವ ಮತ್ತು ನಂತರದ ಅರವತ್ತು ದಿನಗಳ ಕವರ್** ಅತ್ಯಂತ ಸಾಮಾನ್ಯವಾಗಿದೆ.

ಆಸ್ಪತ್ರೆ ದಾಖಲಾತಿಯ ಪೂರ್ವ ಮತ್ತು ನಂತರದ ವೆಚ್ಚಗಳು ಒಟ್ಟಾರೆ ವಿಮಾ ಮೊತ್ತದ ಭಾಗವಾಗಿದ್ದು, ಇವುಗಳನ್ನು ಪಾಲಿಸಿಯಡಿಯಲ್ಲಿ ಕವರ್ ನೀಡಲಾಗುತ್ತದೆ.

**iii. ವಾಸಸ್ಥಾನ(ಡೊಮಿಸಿಲಿಯರಿ)ದಲ್ಲಿಯೇ ಆಸ್ಪತ್ರೆ**

**iv.** ಆಸ್ಪತ್ರೆಗೆ ದಾಖಲು ಮಾಡಬೇಕಾದ ಆದರೆ ಆಸ್ಪತ್ರೆಗಳಲ್ಲಿ ವಸತಿಗಾಗಿ ಅಥವಾ ಆಸ್ಪತ್ರೆಗೆ ಸ್ಥಳಾಂತರಿಸಲು ಸಾಧ್ಯವಾಗದ ಸ್ಥಿತಿಯಲ್ಲಿರುವ ರೋಗಿಗಳ ಅನಾರೋಗ್ಯಕ್ಕೆ ಸಹ ಮನೆಯಲ್ಲಿಯೇ ಚಿಕಿತ್ಸೆಯನ್ನು ಪಡೆಯುವ ಪ್ರಯೋಜನವಿರುತ್ತದೆ.

ನಿಬಂಧನೆಯ ದುರುಪಯೋಗವನ್ನು ತಡೆಗಟ್ಟಲು, ಈ ಕವರ್ ಸಾಮಾನ್ಯವಾಗಿ ಮೊದಲ ಮೂರರಿಂದ ಐದು ದಿನಗಳ ಚಿಕಿತ್ಸೆಯ ವೆಚ್ಚವನ್ನು ವಿಮೆದಾರರು ಭರಿಸಬೇಕಾಗುವ **ಮೂರರಿಂದ ಐದು ದಿನಗಳ ಹೆಚ್ಚುವರಿ ಷರತ್ತುಗಳನ್ನು** ಹೊಂದಿರುತ್ತದೆ. ಆಸ್ತಮಾ, ಬ್ರಾಂಕೈಟಿಸ್, ಡಯಾಬಿಟಿಸ್ ಮೆಲ್ಲಿಟಸ್, ಅಧಿಕ ರಕ್ತದೊತ್ತಡ, ಇನ್ಫ್ಲುಯೆನ್ಜಾ ಕೆಮ್ಮು, ಶೀತ ಮತ್ತು ಜ್ವರಗಳಂತಹ ಕೆಲವು ದೀರ್ಘಕಾಲದ ಅಥವಾ ಸಾಮಾನ್ಯ ಕಾಯಿಲೆಗಳಿಗೆ ನಿವಾಸದ ಚಿಕಿತ್ಸೆಯನ್ನು ಕವರ್ ಹೊರತುಪಡಿಸುತ್ತದೆ.

**ಉದಾಹರಣೆ**

ಮೀರಾ ಅವರು ಆಸ್ಪತ್ರೆ ದಾಖಲಾತಿಯ ಸಂದರ್ಭದಲ್ಲಿ ವೆಚ್ಚದ ಕವರೇಜ್ ಗಾಗಿ ಆರೋಗ್ಯ ವಿಮಾ ಪಾಲಿಸಿಯನ್ನು ತೆಗೆದುಕೊಂಡಿದ್ದರು. ಪಾಲಿಸಿಯು 30 ದಿನಗಳ ಆರಂಭಿಕ ಕಾಯುವ ಅವಧಿಯ ಷರತ್ತನ್ನು ಹೊಂದಿದೆ. ದುರದೃಷ್ಟವಶಾತ್, ಅವರು ಪಾಲಿಸಿಯನ್ನು ತೆಗೆದುಕೊಂಡ 20 ದಿನಗಳ ನಂತರ, ಮೀರಾ ಮಲೇರಿಯಾಕ್ಕೆ ತುತ್ತಾದರು ಮತ್ತು 5 ದಿನಗಳವರೆಗೆ ಆಸ್ಪತ್ರೆಯಲ್ಲಿದ್ದರು. ಆಕೆಗೆ ಆಸ್ಪತ್ರೆಯ ಭಾರೀ ಬಿಲ್ ಗಳನ್ನು ಪಾವತಿಸಬೇಕಾಯಿತು.

ಆಕೆ ವಿಮಾ ಕಂಪನಿಯಿಂದ ಮರುಪಾವತಿಯನ್ನು ಕೇಳಿದಾಗ, ಪಾಲಿಸಿ ತೆಗೆದುಕೊಂಡ 30 ದಿನಗಳ ಕಾಯುವ ಅವಧಿಯೊಳಗೆ ಆಸ್ಪತ್ರೆ ದಾಖಲಾತಿಯ ಘಟನೆ ಸಂಭವಿಸಿದ ಕಾರಣದಿಂದ ಅವರು ಕ್ಲೇಮ್ ನ ಪಾವತಿಯನ್ನು ನಿರಾಕರಿಸಿದರು.

**a) ಲಭ್ಯವಿರುವ ಕವರೇಜ್ ಆಯ್ಕೆಗಳು**

**i. ವೈಯಕ್ತಿಕ ಕವರೇಜ್:** ಒಬ್ಬ ವ್ಯಕ್ತಿಯು ತನ್ನ ಸಂಗಾತಿ, ಅವಲಂಬಿತ ಮಕ್ಕಳು, ಅವಲಂಬಿತ ಪೋಷಕರು, ಕಾನೂನಿನಲ್ಲಿ ಅವಲಂಬಿತ ಪೋಷಕರು, ಅವಲಂಬಿತ ಒಡಹುಟ್ಟಿದವರು ಮುಂತಾದ ತನ್ನ ಕುಟುಂಬದ ಸದಸ್ಯರೊಂದಿಗೆ ಕವರ್ ಅನ್ನು ಪಡೆಯಬಹುದು. ಕೆಲವು ವಿಮಾಗಾರರು ಅವಲಂಬಿತರನ್ನು ಪಾಲಿಸಿಯಡಿಯಲ್ಲಿ ಕವರ್ ಮಾಡಲು ಯಾವುದೇ ನಿರ್ಬಂಧವನ್ನು ಹೊಂದಿರುವುದಿಲ್ಲ. ಅಂತಹ

ಅವಲಂಬಿತ ವಿಮಾದಾರರನ್ನು ಒಂದೇ ಪಾಲಿಸಿಯಡಿಯಲ್ಲಿ ಪ್ರತಿ ವಿಮಾದಾರರಿಗೆ ಪ್ರತ್ಯೇಕ ವಿಮಾ ಮೊತ್ತವನ್ನು ಆಯ್ಕೆ ಮಾಡಲು ಸಾಧ್ಯವಿರುತ್ತದೆ. ಅಂತಹ ಕವರ್ ಗಳಲ್ಲಿ ಪಾಲಿಸಿಯಡಿಯಲ್ಲಿ ವಿಮೆ ಮಾಡಲಾದ ಪ್ರತಿಯೊಬ್ಬ ವ್ಯಕ್ತಿಯು ಪಾಲಿಸಿಯ ಅವಧಿಯ ಸಮಯದಲ್ಲಿ ತನ್ನ ವಿಮಾ ಮೊತ್ತದ ಗರಿಷ್ಠ ಮೊತ್ತದವರೆಗೆ ಕ್ಲೇಮ್ ಮಾಡಬಹುದು. ವಿಮೆ ಮಾಡಿದ ಪ್ರತಿಯೊಬ್ಬ ವ್ಯಕ್ತಿಗೆ ಅವರ ವಯಸ್ಸು ಮತ್ತು ಆಯ್ಕೆ ಮಾಡಿದ ವಿಮಾ ಮೊತ್ತ ಮತ್ತು ಯಾವುದೇ ಇತರ ರೇಟಿಂಗ್ ಅಂಶಕ್ಕನುಗುಣವಾಗಿ ಕಂತನ್ನು ವಿಧಿಸಲಾಗುತ್ತದೆ.

ii. **ಫ್ಯಾಮಿಲಿ ಫ್ಲೋಟರ್:** ಫ್ಯಾಮಿಲಿ ಫ್ಲೋಟರ್ ಪಾಲಿಸಿ ಎಂದು ಕರೆಯಲ್ಪಡುವ ಪ್ರಕಾರದಲ್ಲಿ, ಸಂಗಾತಿ, ಅವಲಂಬಿತ ಮಕ್ಕಳು ಮತ್ತು ಅವಲಂಬಿತ ಪೋಷಕರನ್ನು ಒಳಗೊಂಡಿರುವ ಕುಟುಂಬಕ್ಕೆ ಇಡೀ ಕುಟುಂಬಕ್ಕೆ ಅನ್ವಯಿಸುವ ಒಂದೇ ವಿಮಾ ಮೊತ್ತವನ್ನು ನೀಡಲಾಗುತ್ತದೆ.

| ಉದಾಹರಣೆ |
|---|

ರೂ. 5 ಲಕ್ಷಗಳ ಫ್ಲೋಟರ್ ಪಾಲಿಸಿಯನ್ನು ನಾಲ್ಕು ಜನರ ಕುಟುಂಬಕ್ಕೆ ತೆಗೆದುಕೊಂಡಿದ್ದರೆ ಪಾಲಿಸಿಯ ಅವಧಿಯಲ್ಲಿ ಕುಟುಂಬದ ಒಂದಕ್ಕಿಂತ ಹೆಚ್ಚು ಸದಸ್ಯರಿಗೆ ಅಥವಾ ಕುಟುಂಬದ ಒಬ್ಬ ಸದಸ್ಯರ ಬಹು ಕ್ಲೇಮ್ ಗಳನ್ನು ಪಾವತಿಸಲಾಗುತ್ತದೆ. ಇವೆಲ್ಲವೂ ಸೇರಿ ಒಟ್ಟು ಕವರೇಜ್ ನ ರೂ. 5 ಲಕ್ಷಗಳನ್ನು ಮೀರುವಂತಿಲ್ಲ. ವಿಮೆಗಾಗಿ ಪ್ರಸ್ತಾಪಿಸಲಾದ ಕುಟುಂಬದ ಹಿರಿಯ ಸದಸ್ಯರ ವಯಸ್ಸಿನ ಆಧಾರದ ಮೇಲೆ ಸಾಮಾನ್ಯವಾಗಿ ಕಂತನ್ನು ವಿಧಿಸಲಾಗುತ್ತದೆ

ಈ ಎರಡೂ ಪಾಲಿಸಿಗಳಡಿಯಲ್ಲಿಯ ಕವರ್ ಗಳು ಮತ್ತು ಹೊರತುಗಳು ಒಂದೇ ಆಗಿರುತ್ತವೆ. ಸಮಂಜಸವಾದ ಕಂತಿನಲ್ಲಿ ಹೆಚ್ಚಿನ ಮಟ್ಟದಲ್ಲಿ ಆಯ್ಕೆ ಮಾಡಬಹುದಾದ ಒಟ್ಟಾರೆ ವಿಮಾ ಮೊತ್ತಕ್ಕೆ ಇಡೀ ಕುಟುಂಬವು ಕವರೇಜ್ ಪಡೆಯುವುದರಿಂದ ಫ್ಯಾಮಿಲಿ ಫ್ಲೋಟರ್ ಪಾಲಿಸಿಗಳು ಮಾರುಕಟ್ಟೆಯಲ್ಲಿ ಜನಪ್ರಿಯವಾಗುತ್ತಿವೆ.

**ಮೊದಲೇ ಅಸ್ತಿತ್ವದಲ್ಲಿರುವ ರೋಗಗಳು**

ಅನಿರೀಕ್ಷಿತವಾಗಿ ಸಂಭವಿಸುವ ಅಪಘಾತಗಳು/ ರೋಗಗಳು ಇತ್ಯಾದಿಗಳನ್ನು ಕವರ್ ಮಾಡಲು ವಿಮೆಯನ್ನು ವಿನ್ಯಾಸಗೊಳಿಸಲಾಗಿದೆ. ಇತರರ ಅಸ್ತಿತ್ವದಲ್ಲಿರುವ ಕಾಯಿಲೆಗಳಿಗೆ ಪಾವತಿಸಬೇಕಾಗುವುದರಿಂದ ಆರೋಗ್ಯವಂತ ಜನರ ಮೇಲೆ ಅನ್ಯಾಯವಾಗುವುದರಿಂದ ಅಸ್ತಿತ್ವದಲ್ಲಿರುವ ವೈದ್ಯಕೀಯ ಪರಿಸ್ಥಿತಿಗಳಿಗೆ ಚಿಕಿತ್ಸೆ ನೀಡುವ ವೆಚ್ಚವನ್ನು ವಿಮೆಯ ಭಾಗವಾಗುವುದಿಲ್ಲ. ಒಂದೇ ರೀತಿಯ ಅಪಾಯಗಳನ್ನು ಒಳಗೊಂಡಿರುವ ಅಪಾಯದ ಸಂಚಯನಗಳನ್ನು ರಚಿಸುವ ತತ್ವಕ್ಕೆ ಅದು ವಿರುದ್ಧವಾಗಿದೆ. ಆದ್ದರಿಂದ, ಆರೋಗ್ಯ ಪಾಲಿಸಿಯನ್ನು ನೀಡುವ ಮೊದಲು ಪ್ರತಿ ವಿಮಾದಾರರ ಅಸ್ತಿತ್ವದಲ್ಲಿರುವ ಕಾಯಿಲೆಗಳು/ಗಾಯಗಳ ವಿವರಗಳನ್ನು ಸಂಗ್ರಹಿಸುವುದು ಬಹಳ ಮುಖ್ಯವಾಗಿರುತ್ತದೆ. ಇದು ವಿಮಾಗಾರರಿಗೆ ವಿಮೆಯ ಪ್ರಸ್ತಾವನೆಯನ್ನು ಸ್ವೀಕರಿಸಲು, ಸರಿಯಾದ ಕಂತುಗಳನ್ನು ವಿಧಿಸಲು ಮತ್ತು/ಅಥವಾ ಕ್ಲೇಮ್ ಗಳನ್ನು ಮಾಡುವ ಹೆಚ್ಚು ಸಾಧ್ಯತೆಯಿರುವವರಿಗೆ ಹೆಚ್ಚುವರಿ ಷರತ್ತುಗಳನ್ನು ಒದಗಿಸುವುದನ್ನು ನಿರ್ಧರಿಸಲು ಅನುವು ಮಾಡಿಕೊಡುತ್ತದೆ.

**ಮೊದಲೇ ಅಸ್ತಿತ್ವದಲ್ಲಿರುವ ರೋಗವೆಂದರೇನು?**

ಪಾಲಿಸಿಯನ್ನು ಪ್ರಾರಂಭಿಸುವ ಮೊದಲು 48 ತಿಂಗಳೊಳಗೆ ವಿಮಾದಾರರು ಅನುಭವಿಸಿದ ರೋಗಗಳನ್ನು ಮೊದಲೇ ಅಸ್ತಿತ್ವದಲ್ಲಿರುವ ರೋಗಗಳೆಂದು ಪರಿಗಣಿಸಲಾಗುತ್ತದೆ. ಅದೇ ತರ್ಕದ ಆಧಾರದ ಮೇಲೆ, ವಿಮಾದಾರರು 48 ತಿಂಗಳುಗಳವರೆಗೆ ನಿರಂತರವಾಗಿ ವಿಮೆಗೆ ಒಳಪಟ್ಟ ನಂತರ ಮೊದಲೇ ಅಸ್ತಿತ್ವದಲ್ಲಿರುವ ರೋಗಗಳನ್ನು ಹೊರತುಪಡಿಸಲು ವಿಮಾಗಾರರನ್ನು ಅನುಮತಿಸಲಾಗುವುದಿಲ್ಲ.

**ನವೀಕರಣ ಸಾಧ್ಯತೆ:** ಆರೋಗ್ಯ ಪಾಲಿಸಿಗಳು ಒಂದು ವರ್ಷದ ಒಪ್ಪಂದದ ಅವಧಿಯನ್ನು ಹೊಂದಿದ್ದರೂ ಮತ್ತು ಪ್ರತಿ ವರ್ಷ ಹೊಸ ಪಾಲಿಸಿಯನ್ನು ಜಾರಿ ಮಾಡಬೇಕಾಗಿದ್ದರೂ, ಎಲ್ಲ ಪಾಲಿಸಿಗಳಿಗೆ ಐಆರ್ ಡಿಎಐಯಿಂದ ಜೀವಮಾನ ಪೂರ್ತಿ ನವೀಕರಣ ಸಾಧ್ಯತೆಯನ್ನು ಕಡ್ಡಾಯಗೊಳಿಸಲಾಗಿದೆ.

**ವಿಶೇಷ ವೈಶಿಷ್ಟ್ಯಗಳು**

ಉತ್ಪನ್ನದಲ್ಲಿ ಹೊಸ ವೈಶಿಷ್ಟ್ಯಗಳನ್ನು ಒದಗಿಸಲು ಮತ್ತು ಬೆಲೆಯನ್ನು ಕಾಪಾಡಿಕೊಳ್ಳಲು, ವಿಮಾ ಕಂಪನಿಗಳು ಉತ್ಪನ್ನಗಳಲ್ಲಿ ನವೀನ ಮಾರ್ಪಾಡುಗಳನ್ನು ಹೊರತಂದಿವೆ. ಉದಾಹರಣೆಗೆ, ಸನ್ 2000ಕ್ಕಿಂತ ಮೊದಲು ಅತ್ಯಂತ ಜನಪ್ರಿಯ ಪಾಲಿಸಿಯಾಗಿದ್ದ ಮೆಡಿಕ್ಲೇಮ್ ಪಾಲಿಸಿಯು ಹಲವು ಬದಲಾವಣೆಗಳಿಗೆ ಒಳಗಾಗಿದೆ ಮತ್ತು ಅದರ ವ್ಯಾಪ್ತಿಗೆ ಹೊಸ ವಿಶೇಷ ವೈಶಿಷ್ಟ್ಯಗಳನ್ನು ಸೇರಿಸಲಾಗಿದೆ. ಕೆಲವು ವೈಶಿಷ್ಟ್ಯಗಳನ್ನು ಮೂಲ ಪರಿಹಾರದ ಕವರ್ ಗೆ ಸೇರಿಸಲಾಗಿದೆ. ಈ ವೈಶಿಷ್ಟ್ಯಗಳು ವಿಮಾಗಾರರಿಂದ ವಿಮೆಗಾರರಿಗೆ ಮತ್ತು ಉತ್ಪನ್ನದಿಂದ ಉತ್ಪನ್ನಕ್ಕೆ ಬದಲಾಗಬಹುದು ಮತ್ತು ಎಲ್ಲ ಉತ್ಪನ್ನಗಳಿಗೆ ಏಕರೂಪತೆಯಲ್ಲಿ ಲಭ್ಯವಿಲ್ಲದಿರಬಹುದು.

***i.*** **ಉಪ ಮಿತಿಗಳು ಮತ್ತು ರೋಗ ನಿರ್ದಿಷ್ಟ ಕವರ್(ಕ್ಯಾಪಿಂಗ್)**

ಕೆಲವು ಉತ್ಪನ್ನಗಳು ರೋಗ-ನಿರ್ದಿಷ್ಟ ಕ್ಯಾಪಿಂಗ್ ಅನ್ನು ಹೊಂದಿವೆ ಉದಾ. ಕ್ಯಾಟರಾಕ್ಟ್. ಕೆಲವು ಕೊಠಡಿ ಬಾಡಿಗೆಯ ಮೇಲಿನ ಉಪ ಮಿತಿಗಳನ್ನು ವಿಮಾ ಮೊತ್ತಕ್ಕೆ ಲಿಂಕ್ ಮಾಡುತ್ತವೆ ಉದಾ. ಪ್ರತಿ ದಿನದ ಕೊಠಡಿ ಬಾಡಿಗೆಯನ್ನು ವಿಮಾ ಮೊತ್ತದ 1% ಮತ್ತು ಐಸಿಯು ಶುಲ್ಕಗಳನ್ನು ವಿಮಾ ಮೊತ್ತದ 2% ಗೆ ನಿರ್ಬಂಧಿಸಲಾಗುತ್ತದೆ. ಐಸಿಯು ಶುಲ್ಕಗಳು, ಓಟಿ ಶುಲ್ಕಗಳು ಮತ್ತು ಶಸ್ತ್ರಚಿಕಿತ್ಸಕರ ಶುಲ್ಕಗಳಂತಹ ಇತರ ಶೀರ್ಷಿಕೆಯಡಿಯಲ್ಲಿಯ ವೆಚ್ಚಗಳು ಆಯ್ಕೆಮಾಡಿದ ಕೋಣೆಯ ಪ್ರಕಾರಕ್ಕೆ ಲಿಂಕ್ ಮಾಡಲ್ಪಟ್ಟಿರುವುದರಿಂದ, ಕೊಠಡಿ ಬಾಡಿಗೆ ಕ್ಯಾಪಿಂಗ್ ಇತರ ಶೀರ್ಷಿಕೆಯಡಿಯಲ್ಲಿ ವೆಚ್ಚಗಳನ್ನು ಮತ್ತು ತನ್ಮೂಲಕ ಒಟ್ಟಾರೆ ಆಸ್ಪತ್ರೆ ವೆಚ್ಚಗಳನ್ನು ನಿರ್ಬಂಧಿಸಲು ಸಹಾಯ ಮಾಡುತ್ತವೆ.

**ii. ಸಹ-ಪಾವತಿ (ಜನಪ್ರಿಯವಾಗಿ ಕೋ-ಪೇ ಎಂದು ಕರೆಯಲಾಗುತ್ತದೆ)**

ಐಆರ್ ಡಿಎಐ ಯಿಂದ ಸಹ-ಪಾವತಿಯನ್ನು ಪಾಲಿಸಿದಾರ/ವಿಮಾದಾರರು ಸ್ವೀಕಾರಾರ್ಹ ಕ್ಲೇಮ್ ಗಳ ನಿರ್ದಿಷ್ಟ ಶೇಕಡಾವಾರು ಮೊತ್ತವನ್ನು ಭರಿಸುವ ಆರೋಗ್ಯ ವಿಮಾ ಪಾಲಿಸಿಯಡಿಯಲ್ಲಿಯ ವೆಚ್ಚ ಹಂಚಿಕೆಯ ಅವಶ್ಯಕತೆಯೆಂದು ವ್ಯಾಖ್ಯಾನಿಸಲಾಗಿದೆ. ಸಹ-ಪಾವತಿಯು ವಿಮಾ ಮೊತ್ತವನ್ನು ಕಡಿಮೆ ಮಾಡುವುದಿಲ್ಲ.

ಸಹ-ಪಾವತಿಯು ಆರೋಗ್ಯ ಪಾಲಿಸಿಯಡಿಯಲ್ಲಿ ಪ್ರತಿಯೊಂದು ಕ್ಲೇಮ್ ನ ಒಂದು ಭಾಗವನ್ನು ಭರಿಸುವ ವಿಮಾದಾರರ ಪರಿಕಲ್ಪನೆಯಾಗಿದೆ. ಉತ್ಪನ್ನವನ್ನವಲಂಬಿಸಿ ಇವುಗಳು ಕಡ್ಡಾಯ ಅಥವಾ ಸ್ವಯಂಪ್ರೇರಿತವಾಗಿರಬಹುದು. ವಿಮಾದಾರರಲ್ಲಿ ಅನಗತ್ಯವಾದ ಆಸ್ಪತ್ರೆಯನ್ನು ತಪ್ಪಿಸಲು ಸಹ-ಪಾವತಿಯು ಒಂದು ನಿರ್ದಿಷ್ಟ ಶಿಸ್ತನ್ನು ತರುತ್ತದೆ. ವಿಮಾದಾರರು ತಮ್ಮ ಆರೋಗ್ಯ ರಕ್ಷಣೆಯ ಆಯ್ಕೆಗಳನ್ನು ಆಯ್ಕೆಮಾಡುವಲ್ಲಿ ಎಚ್ಚರಿಕೆ ವಹಿಸುತ್ತಾರೆ ಮತ್ತು ಐಷಾರಾಮಿ ಆಯ್ಕೆಗಳನ್ನು ತಪ್ಪಿಸುತ್ತಾರೆಂಬುದನ್ನು ಇದು ಖಚಿತಪಡಿಸುತ್ತದೆ.

ಅನೇಕ ಆರೋಗ್ಯ ಪಾಲಿಸಿಗಳಲ್ಲಿ, ವಿಮೆ ಮಾಡಿದ ಘಟನೆ ಸಂಭವಿಸಿದಾಗ ವಿಮಾದಾರರು ವಿಮೆ ಮಾಡಿದ ನಷ್ಟದ ಒಂದು ಭಾಗವನ್ನು ಹಂಚಿಕೊಳ್ಳಲು ಅಗತ್ಯವಿರುತ್ತದೆ. ಉದಾ. ವಿಮೆ ಮಾಡಿದ ನಷ್ಟವು ರೂ. 20000 ಆಗಿದ್ದರೆ ಮತ್ತು ಸಹ-ಪಾವತಿಯ ಮೊತ್ತವು ಪಾಲಿಸಿಯಲ್ಲಿ 10% ಆಗಿದ್ದರೆ, ವಿಮಾದಾರರು ರೂ. 2000 ಗಳನ್ನು ಪಾವತಿಸುತ್ತಾರೆ.

**iii. ಕಡಿತ/ ಹೆಚ್ಚುವರಿ**

ಅಧ್ಯಾಯ 5 ರಲ್ಲಿ ವಿವರಿಸಿದಂತೆ ವೆಚ್ಚ-ಹಂಚಿಕೆಯ ನಿಬಂಧನೆಯಾದ 'ಕಡಿತ', ಇದನ್ನು 'ಹೆಚ್ಚುವರಿ' ಎಂದೂ ಕರೆಯುತ್ತಾರೆ. ಆರೋಗ್ಯ ವಿಮಾ ಪಾಲಿಸಿಯಡಿಯಲ್ಲಿ, ವಿಮಾಗಾರರು ಪಾವತಿಸುವ ಮೊದಲು ಅನ್ವಯಿಸುವ ಯಾವುದೇ ಪ್ರಯೋಜನಗಳಿಗೆ ಇನ್ಡೆಮ್ನಿಟಿ ಪಾಲಿಸಿಗಳ ಸಂದರ್ಭದಲ್ಲಿ ನಿರ್ದಿಷ್ಟಪಡಿಸಿದ ರೂಪಾಯಿ ಮೊತ್ತಕ್ಕೆ ಮತ್ತು ಆಸ್ಪತ್ರೆ ದಾಖಲಾತಿಯ ನಗದು ಪಾಲಿಸಿಗಳ ಸಂದರ್ಭದಲ್ಲಿ ನಿರ್ದಿಷ್ಟ ಸಂಖ್ಯೆಯ ದಿನಗಳು / ಗಂಟೆಗಳವರೆಗೆ ವಿಮಾಗಾರರು ಜವಾಬ್ದಾರರಾಗಿರುವುದಿಲ್ಲ. ಆರೋಗ್ಯ ಪಾಲಿಸಿಗಳಲ್ಲಿ, ಇದು ವಿಮಾಗಾರರಿಂದ ಕ್ಲೇಮ್ ಪಾವತಿಯಾಗುವ ಮೊದಲು ವಿಮಾದಾರರು ಪಾವತಿಸಬೇಕಾದ ನಿಗದಿತ ಮೊತ್ತವಾಗಿದೆ, ಉದಾಹರಣೆಗೆ. ಪಾಲಿಸಿಯಲ್ಲಿ ಕಡಿತದ ಮೊತ್ತ ರೂ. 10,000, ಆಗಿದ್ದರೆ ಕ್ಲೇಮ್ ಮಾಡಿದ ಪ್ರತಿ ವಿಮೆ ಮಾಡಿದ ನಷ್ಟಕ್ಕೆ ವಿಮಾದಾರರು ಮೊದಲು ರೂ. 10,000ಗಳನ್ನು ಪಾವತಿಸುತ್ತಾರೆ. ವಿವರಿಸಿ ಹೇಳಬೇಕೆಂದರೆ, ಕ್ಲೇಮ್ ಮೊತ್ತ ರೂ. 80,000 ಆಗಿದ್ದರೆ ವಿಮಾದಾರರು ಮೊದಲ ರೂ. 10,000 ಗಳನ್ನು ಭರಿಸುತ್ತಾರೆ ಮತ್ತು ವಿಮಾಗಾರರು ರೂ. 70,000ಗಳನ್ನು ಭರಿಸುತ್ತಾರೆ. ಕಡಿತಗಳು ವಿಮಾ ಮೊತ್ತವನ್ನು ಕಡಿಮೆ ಮಾಡುವುದಿಲ್ಲ.

ಆಸ್ಪತ್ರೆ ದಾಖಲಾತಿಯ ನಗದು ಪಾಲಿಸಿಗಳ ಸಂದರ್ಭದಲ್ಲಿ ಕಡಿತಗಳು ವಿಮಾದಾರರಿಂದ ಯಾವುದೇ ಪ್ರಯೋಜನಗಳನ್ನು ಪಾವತಿಸುವ ಮೊದಲು ಅನ್ವಯಿಸುವ ನಿರ್ದಿಷ್ಟ ಸಂಖ್ಯೆಯ ದಿನಗಳು/ಗಂಟೆಗಳಾಗಿರಬಹುದು.

ಏಜೆಂಟರು ಅನ್ವಯಿಸಬೇಕಾದ ನಿರ್ದಿಷ್ಟ ಕಳೆಯಬಹುದಾದ ಕಡಿತವು ಪ್ರತಿ ವರ್ಷ, ಪ್ರತಿ ಜೀವ/ವ್ಯಕ್ತಿ ಅಥವಾ ಪ್ರತಿ ಘಟನೆಗೆ ಮತ್ತು ಅನ್ವಯಿಸುತ್ತದೆಯೇ ಎಂಬುದನ್ನು ಪರೀಕ್ಷಿಸಬೇಕು ಮತ್ತು ವಿಮಾದಾರರಿಗೆ ತಿಳಿಸಬೇಕು.

### iv. ಕಾಯುವ ಅವಧಿ

ಸಾಮಾನ್ಯವಾಗಿ ಹೆಚ್ಚಿನ ಪಾಲಿಸಿಗಳಲ್ಲಿ ಯಾವುದೇ ಕ್ಲೇಮ್ ಮಾಡಲು ಪಾಲಿಸಿಯು ಪ್ರಾರಂಭದಿಂದ ೩೦ ದಿನಗಳ ಕಾಯುವ ಅವಧಿಯು ಅನ್ವಯಿಸುತ್ತದೆ. ಆದಾಗ್ಯೂ, ಅಪಘಾತದಿಂದಾಗಿ ಆಸ್ಪತ್ರೆ ದಾಖಲಾತಿಗೆ ಇದನ್ನು ಅನ್ವಯಿಸಲಾಗುವುದಿಲ್ಲ.

### v. ನಿರ್ದಿಷ್ಟ ರೋಗಗಳಿಗೆ ಕಾಯುವ ಅವಧಿಗಳು

ಇದು ಚಿಕಿತ್ಸೆಯನ್ನು ವಿಳಂಬಗೊಳಿಸಬಹುದಾದ ಮತ್ತು ಯೋಜಿಸಬಹುದಾದ ರೋಗಗಳಿಗೆ ಅನ್ವಯಿಸುತ್ತದೆ. ಒಂದು/ಎರಡು/ನಾಲ್ಕು ವರ್ಷಗಳ ಉತ್ಪನ್ನದ ಕಾಯುವ ಅವಧಿಯನ್ನವಲಂಬಿಸಿ ಅವಧಿಯನ್ನು ವಿಮಾ ಕಂಪನಿಗಳು ವಿಧಿಸುತ್ತವೆ ಮತ್ತು ಕೇವಲ ಈ ಅವಧಿಯ ಮುಕ್ತಾಯದ ನಂತರ ಸಂಭವಿಸಿದ ಈ ಕಾಯಿಲೆಗಳಿಗೆ ಕ್ಲೇಮ್ ಗಳನ್ನು ಪಾವತಿಸಲಾಗುತ್ತದೆ. ಉದಾಹಣೆಗೆ ಕಣ್ಣಿನ ಪೊರೆ(ಕ್ಯಾಟರಾಕ್ಟ್), ಪ್ರೊಸ್ಟೇಟ್ ಗ್ರಂಥಿಯ ಬೆಳವಣಿಗೆ(ಬೆನಿಗ್ನ್ ಪ್ರೊಸ್ಟಾಟಿಕ್ ಹೈಪರ್ಟ್ರೋಫಿ), ಅತಿಯಾದ ಋತುಸ್ರಾವ(ಮೆನೊರ್ಹೇಜಿಯಾ) ಅಥವಾ ಗರ್ಭಾಶಯದ ಗಡ್ಡೆ(ಫೈಬ್ರೊಮಿಯೊಮಾ), ಅಂಡವಾಯು(ಹರ್ನಿಯಾ), ದ್ರವಸಂಚಯ(ಹೈಡ್ರೋಸಿಲ್), ಜನ್ಮಜಾತ ಆಂತರಿಕ ಕಾಯಿಲೆ, ಗುದದ್ವಾರದಲ್ಲಿ ಭಗಂದರ(ಫಿಸ್ಚುಲಾ), ಮೂಲವ್ಯಾಧಿ(ಪೈಲ್ಸ್), ಸೈನಸ್ ಉದ್ರೇಕ(ಸೈನುಟಿಸ್) ಮತ್ತು ಸಂಬಂಧಿತ ಅಸ್ವಸ್ಥತೆಗಳು ಇತ್ಯಾದಿ ಕೆಲವು ರೋಗಗಳು.

### vi. ಒಂದು ದಿನದ(ಡೇ ಕೇರ್) ಕಾರ್ಯವಿಧಾನದ ಕವರೇಜ್

ಈಗಾಗಲೇ ಮೊದಲೇ ಚರ್ಚಿಸಿದಂತೆ ವೈದ್ಯಕೀಯ ವಿಜ್ಞಾನದ ಪ್ರಗತಿಯು ಒಂದು ದಿನದ (ಡೇ ಕೇರ್) ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಯವಿಧಾನಗಳನ್ನು ಸೇರಿಸುವುದನ್ನು ಒಳಗೊಂಡಿದೆ

### vii. ಪಾಲಿಸಿ ಪೂರ್ವ ಪರಿಶೀಲನೆಯ ವೆಚ್ಚ

ಮೊದಲು ವೈದ್ಯಕೀಯ ಪರೀಕ್ಷೆಯ ವೆಚ್ಚವನ್ನು ನಿರೀಕ್ಷಿತ ಗ್ರಾಹಕರು ಭರಿಸುತ್ತಿದ್ದರು. ಈಗ ಪ್ರಸ್ತಾವನೆಯನ್ನು ಅಂಡರ್ ರೈಟಿಂಗ್ ಗಾಗಿ ಸ್ವೀಕರಿಸಿದರೆ, **50%** ರಿಂದ **100%** ವರೆಗೆ ಬದಲಾಗುವ ವೆಚ್ಚವನ್ನು ವಿಮಾಗಾರರು ಮರುಪಾವತಿಸುತ್ತಾರೆ. ಈಗ ವಿಮಾಗಾರರು ಆರೋಗ್ಯ ತಪಾಸಣೆ ವೆಚ್ಚದ ಕನಿಷ್ಠ **50%** ವನ್ನು ಭರಿಸುವುದನ್ನು ಐಆರ್ ಡಿಎಐ ಯಿಂದ ಕಡ್ಡಾಯಗೊಳಿಸಲಾಗಿದೆ.

### viii. ಆಡ್ ಆನ್ ಕವರ್ ಗಳು

**ಕೆಲವು ವಿಮಾಗಾರರಿಂದ ಆಡ್-ಆನ್ ಕವರ್ ಗಳೆಂದು ಕರೆಯಲ್ಪಡುವ ವಿವಿಧ ಹೊಸ ಹೆಚ್ಚುವರಿ ಕವರ್ ಗಳನ್ನು ಪರಿಚಯಿಸಲಾಗಿದೆ. ಅವುಗಳಲ್ಲಿ ಕೆಲವುಗಳು ಈ ಕೆಳಗಿನಂತಿವೆ:**

- ✓ **ಹೆರಿಗೆ ಕವರ್:** ಮೊದಲು ಚಿಲ್ಲರೆ ಪಾಲಿಸಿಗಳಡಿಯಲ್ಲಿ ಹೆರಿಗೆಯ ಕವರ್ ಅನ್ನು ನೀಡಲಾಗುತ್ತಿರಲಿಲ್ಲ ಆದರೆ ಈಗ ಹೆಚ್ಚಿನ ವಿಮೆಗಾರರು ವಿವಿಧ ಕಾಯುವ ಅವಧಿಗಳೊಂದಿಗೆ ಹೆರಿಗೆಯ ಕವರ್ ಅನ್ನು ನೀಡುತ್ತಾರೆ.

- ✓ **ಗಂಭೀರ ಕಾಯಿಲೆಯ ಕವರ್:** ಜೀವಕ್ಕೆ ಅಪಾಯಕಾರಿಯಾದ ಮತ್ತು ದುಬಾರಿ ಚಿಕಿತ್ಸೆಯ ಅವಶ್ಯಕತೆಯಿರುವ ಕೆಲವು ಕಾಯಿಲೆಗಳಿಗಾಗಿ ಉನ್ನತ ಆವೃತ್ತಿಯ ಉತ್ಪನ್ನಗಳಡಿಯಲ್ಲಿ ಒಂದು ಆಯ್ಕೆಯಾಗಿ ಕವರ್ ಲಭ್ಯವಿದೆ.
- ✓ **ವಿಮಾ ಮೊತ್ತದ ಮರುಸ್ಥಾಪನೆ:** ಕ್ಲೇಮ್ ನ ಪಾವತಿಯ ನಂತರ, ಹೆಚ್ಚುವರಿ ಕಂತನ್ನು ಪಾವತಿಸುವ ಮೂಲಕ ವಿಮಾ ಮೊತ್ತವನ್ನು (ಇದು ಕ್ಲೇಮ್ ಪಾವತಿಯ ನಂತರ ಕಡಿಮೆಯಾಗುತ್ತದೆ) ಮೂಲ ಮಿತಿಗೆ ಮರುಸ್ಥಾಪಿಸಬಹುದು.
- ✓ **ಆಯುಷ್ - ಆಯುರ್ವೇದ - ಯೋಗ - ಯುನಾನಿ - ಸಿದ್ಧ - ಹೋಮಿಯೋಪತಿಗೆ ಕವರೇಜ್:** ಕೆಲವು ಪಾಲಿಸಿಗಳು ಆಯುಷ್ ಚಿಕಿತ್ಸೆಯ ವೆಚ್ಚವನ್ನು ಆಸ್ಪತ್ರೆ ದಾಖಲಾತಿ ವೆಚ್ಚದ ನಿರ್ದಿಷ್ಟ ಶೇಕಡಾವಾರುಗಳವರೆಗೆ ಕವರ್ ಮಾಡುತ್ತವೆ.

### *ix.* ಮೌಲ್ಯವರ್ಧಿತ ಕವರ್ ಗಳು

ಕೆಲವು ನಷ್ಟ ಪರಿಹಾರದ ಉತ್ಪನ್ನಗಳು ಕೆಳಗೆ ಪಟ್ಟಿ ಮಾಡಲಾದ ಮೌಲ್ಯವರ್ಧಿತ ಕವರ್ ಗಳನ್ನು ಒಳಗೊಂಡಿರುತ್ತವೆ. ಪ್ರಯೋಜನಗಳನ್ನು ಪಾಲಿಸಿಯ ವಿವರಪಟ್ಟಿಯಲ್ಲಿ ಪ್ರತಿ ಕವರ್ ನ ವಿರುದ್ಧ ನಿರ್ದಿಷ್ಟಪಡಿಸಿದ ವಿಮಾ ಮೊತ್ತದ ಮಿತಿಯವರೆಗೆ ಪಾವತಿಸಲಾಗುತ್ತದೆ, ಆದರೆ ಒಟ್ಟಾರೆಯಾಗಿ ವಿಮಾ ಮೊತ್ತವನ್ನು ಮೀರುವುದಿಲ್ಲ.

- ✓ **ಹೊರರೋಗಿ ಕವರ್:** ಭಾರತದಲ್ಲಿ ಆರೋಗ್ಯ ವಿಮಾ ಉತ್ಪನ್ನಗಳು ಹೆಚ್ಚಾಗಿ ಒಳರೋಗಿ ಆಸ್ಪತ್ರೆ ದಾಖಲಾತಿಯ ವೆಚ್ಚಗಳನ್ನು ಮಾತ್ರ ಕವರ್ ಮಾಡುತ್ತವೆ. ಈಗ ಕೆಲವು ಕಂಪನಿಗಳು ಕೆಲವು ಉನ್ನತ-ಮಟ್ಟದ ಯೋಜನೆಗಳಡಿಯಲ್ಲಿ ಹೊರರೋಗಿ ವೆಚ್ಚಗಳಿಗೆ ಸೀಮಿತ ರಕ್ಷಣೆಯನ್ನು ನೀಡುತ್ತವೆ.
- ✓ **ಆಸ್ಪತ್ರೆಯ ನಗದು:** ಇದು ನಿಗದಿತ ಅವಧಿಗೆ ಆಸ್ಪತ್ರೆಗೆ ದಾಖಲಾತಿಯ ಪ್ರತಿಯೊಂದು ದಿನಕ್ಕೆ ನಿಗದಿತ ಮಾಡಲಾದ ಮೊತ್ತದ ಪಾವತಿಯನ್ನು ಒದಗಿಸುತ್ತದೆ. ಸಾಮಾನ್ಯವಾಗಿ **2/3** ದಿನಗಳ ಕಡಿತದ ಪಾಲಿಸಿಗಳನ್ನು ಹೊರತುಪಡಿಸಿ **7** ದಿನಗಳವರೆಗೆ ಅವಧಿಯನ್ನು ಮಾನ್ಯ ಮಾಡಲಾಗುತ್ತದೆ. ಹೀಗೆ, ಆಸ್ಪತ್ರೆಯ ಅವಧಿಯು ಕಡಿತದ ಅವಧಿಯನ್ನು ಮೀರಿದ್ದರೆ ಮಾತ್ರ ಪ್ರಯೋಜನವನ್ನು ಪಡೆಯುವುದು ಸಾಧ್ಯವಾಗುತ್ತದೆ. ಇದು ಆಸ್ಪತ್ರೆ ದಾಖಲಾತಿಯ ಕ್ಲೇಮ್ ಗೆ ಪಾಲಿಸಿಯ ಒಟ್ಟಾರೆ ವಿಮಾ ಮೊತ್ತದೊಳಗೆ ಹೆಚ್ಚುವರಿಯಾಗಿರುತ್ತದೆ ಅಥವಾ ಪ್ರತ್ಯೇಕ ಉಪ-ಮಿತಿಯೊಂದಿಗೆ ಇರಬಹುದು.
- ✓ **ಚೇತರಿಕೆಯ ಪ್ರಯೋಜನ:** ಅನಾರೋಗ್ಯ ಮತ್ತು/ಅಥವಾ ಅಪಘಾತದಿಂದಾಗಿ ಆಸ್ಪತ್ರೆಯಲ್ಲಿ ಉಳಿಯುವ ಒಟ್ಟು ಅವಧಿಯು 10 ದಿನಗಳಿಗಿಂತ ಕಡಿಮೆಯಿಲ್ಲದಿದ್ದರೆ ಪ್ರಯೋಜನದ ಒಟ್ಟು ಮೊತ್ತವನ್ನು ಪಾವತಿಸಲಾಗುತ್ತದೆ.
- ✓ **ದಾನಿಯ ವೆಚ್ಚಗಳು:** ಪಾಲಿಸಿಯಲ್ಲಿ ವ್ಯಾಖ್ಯಾನಿಸಲಾದ ನಿಯಮಗಳು ಮತ್ತು ಷರತ್ತಿನ ಪ್ರಕಾರ ಪ್ರಮುಖ ಅಂಗಾಂಗ ಕಸಿಯ ಸಂದರ್ಭದಲ್ಲಿ ದಾನಿಗಳ ಮೇಲೆ ಮಾಡಲ್ಪಟ್ಟ ವೆಚ್ಚವನ್ನು ಮರುಪಾವತಿಸುವುದನ್ನು ಪಾಲಿಸಿ ಒದಗಿಸುತ್ತದೆ.

✓ **ಆಂಬ್ಯುಲೆನ್ಸ್ ನ ಮರುಪಾವತಿ:** ವಿಮಾದಾರ/ವಿಮಾದಾರ ವ್ಯಕ್ತಿಯಿಂದ ಆಂಬ್ಯುಲೆನ್ಸ್ ಗೆ ತಗಲುವ ವೆಚ್ಚವನ್ನು ಪಾಲಿಸಿಯ ವಿವರಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ನಿರ್ದಿಷ್ಟ ಮಿತಿಯವರೆಗೆ ಮರುಪಾವತಿಸಲಾಗುತ್ತದೆ.

✓ **ಜೊತೆಗಿರುವ ವ್ಯಕ್ತಿಗೆ ವೆಚ್ಚಗಳು:** ಇದು ಆಸ್ಪತ್ರೆಗೆ ದಾಖಲಾದ ಅವಧಿಯಲ್ಲಿ ವಿಮೆ ಮಾಡಲಾದ ರೋಗಿಯ ಮೇಲೆ ನಿಗಾ ಇಡುವ ಆಹಾರ, ಸಾರಿಗೆಗಾಗಿ ಜೊತೆಯಲ್ಲಿರುವ ವ್ಯಕ್ತಿಗೆ ಮಾಡುವ ವೆಚ್ಚವನ್ನು ಸರಿದೂಗಿಸುವ ಉದ್ದೇಶವನ್ನು ಹೊಂದಿರುತ್ತದೆ. ಪಾಲಿಸಿಯ ನಿಯಮಗಳ ಪ್ರಕಾರ ಪಾಲಿಸಿಯ ವಿವರಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಮಿತಿಯವರೆಗೆ ಒಟ್ಟು ಮೊತ್ತದ ಪಾವತಿ ಅಥವಾ ಮರುಪಾವತಿಯನ್ನು ಪಾವತಿಸಲಾಗುತ್ತದೆ.

✓ **ಕುಟುಂಬದ ವ್ಯಾಖ್ಯೆ:** ಕೆಲವು ಆರೋಗ್ಯ ಉತ್ಪನ್ನಗಳಲ್ಲಿ ಕುಟುಂಬದ ವ್ಯಾಖ್ಯೆಯು ಬದಲಾವಣೆಗೆ ಒಳಗಾಗಿದೆ. ಮೊದಲು, ಪ್ರಾಥಮಿಕ ವಿಮಾದಾರ, ಸಂಗಾತಿ, ಅವಲಂಬಿತ ಮಕ್ಕಳಿಗೆ ಕವರ್ ನೀಡಲಾಗುತ್ತಿತ್ತು. ಈಗ ಅದೇ ಪಾಲಿಸಿಯಡಿಯಲ್ಲಿ ಪೋಷಕರು ಮತ್ತು ಅತ್ತೆಮಾವಂದಿರಿಗೂ ಕವರ್ ಅನ್ನು ನೀಡಬಹುದಾದ ಪಾಲಿಸಿಗಳಿವೆ.

*x.* **ವೈದ್ಯಕೀಯ ಸಲಹೆಯನ್ನು ಪಡೆಯಲು ಅಥವಾ ಅನುಸರಿಸಲು ವಿಫಲವಾದರೆ ಅಥವಾ ಚಿಕಿತ್ಸೆಯನ್ನು ಅನುಸರಿಸಲು ವಿಫಲವಾಗಿದೆ**

ಆರಂಭದಲ್ಲಿ ಅಸ್ತಿತ್ವದಲ್ಲಿರುವ ಕಾಯಿಲೆಗಳಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಆರೋಗ್ಯ ವಿಮಾ ರಕ್ಷಣೆಯನ್ನು ನಿರಾಕರಿಸಲಾಯಿತು. ಅಂತಹ ಪ್ರಕರಣಗಳಿಗೆ ಈಗ ಅಂತಹ ಕಾಯಿಲೆಗಳನ್ನು ಹೊರತುಪಡಿಸಿ ರಕ್ಷಣೆಯನ್ನು ನೀಡಲಾಗುತ್ತಿದೆ.

**ಪ್ರಮಾಣಿತ ಆರೋಗ್ಯ ಉತ್ಪನ್ನ - ಆರೋಗ್ಯ ಸಂಜೀವನಿ:** ಕೋವಿಡ್-**19** ಸಾಂಕ್ರಾಮಿಕದ ಹಿನ್ನೆಲೆಯಲ್ಲಿ, ಐಆರ್ ಡಿಎಐ ಎಲ್ಲ ವಿಮಾ ಕಂಪನಿಗಳನ್ನು ಆರೋಗ್ಯ ಸಂಜೀವನಿ ಎಂಬ ಗುಣಮಟ್ಟದ ಮತ್ತು ನಿಯಮಗಳು ಮತ್ತು ಷರತ್ತುಗಳಲ್ಲಿ ಯಾವುದೇ ವ್ಯತ್ಯಾಸಗಳಿಲ್ಲದೇ ಅರ್ಥಮಾಡಿಕೊಳ್ಳಲು ಸುಲಭವಾದ ಆರೋಗ್ಯ ಉತ್ಪನ್ನವನ್ನು ಹೊರತರುವಂತೆ ಕೇಳಿದೆ. ಪ್ರತಿಯೊಂದು ಕಂಪನಿಯ ಬೆಲೆ ನೀತಿಯ ಪ್ರಕಾರ ಕಂತಿನಲ್ಲಿ ಬದಲಾವಣೆಯಾಗಬಹುದು. ಮಾರುಕಟ್ಟೆಯಲ್ಲಿ ಆರೋಗ್ಯ ವಿಮೆಯ ಉತ್ತಮ ಪ್ರವೇಶವನ್ನು ಖಚಿತಪಡಿಸಿಕೊಳ್ಳುವುದು ಇದರ ಉದ್ದೇಶವಾಗಿದೆ. ಎಲ್ಲ ವಿಮಾಗಾರರು ಆರೋಗ್ಯ ಸಂಜೀವನಿ ಎಂಬ ಈ ಉತ್ಪನ್ನವನ್ನು ನೀಡುವ ಅಗತ್ಯವಿದೆ. [ಮಾರುಕಟ್ಟೆಯಲ್ಲಿ ವಿವಿಧ ಆರೋಗ್ಯ ವಿಮೆಗಳು ಲಭ್ಯವಿದ್ದು ಗ್ರಾಹಕರು ಅವುಗಳನ್ನು ಹೋಲಿಸಲು ಸಾಧ್ಯವಾಗದೇ ಗೊಂದಲವುಂಟಾದ ಸಂದರ್ಭವು ಈ ಚಾಲನೆಗೆ ಕಾರಣವಾಗಿದೆ.]

**ಆರೋಗ್ಯ ಸಂಜೀವನಿ ವಿಮಾ ಪಾಲಿಸಿಯಡಿಯಲ್ಲಿ ಈ ಕೆಳಗಿನ ಎರಡು ರೀತಿಯ ಯೋಜನೆಗಳು ಲಭ್ಯವಿರುತ್ತವೆ:**

- **ವೈಯಕ್ತಿಕ ಯೋಜನೆ: ಒಬ್ಬರೇ ಪಾಲಿಸಿದಾರರು ಆರೋಗ್ಯ ಸಂಜೀವನಿ ಪಾಲಿಸಿಯ ಫಲಾನುಭವಿಯಾಗುತ್ತಾರೆ.**

- **ಫ್ಯಾಮಿಲಿ ಫ್ಲೋಟರ್ ಯೋಜನೆ: ಪಾಲಿಸಿದಾರರ ಕುಟುಂಬದ ಅನೇಕ ಸದಸ್ಯರು ಆರೋಗ್ಯ ಸಂಜೀವನಿ ಯೋಜನೆಯ ಫಲಾನುಭವಿಗಳಾಗಬಹುದು.**

ಈ ಉತ್ಪನ್ನವು ಕೊಠಡಿ ಬಾಡಿಗೆ ಮತ್ತು ಐಸಿಯು ಶುಲ್ಕದ ಮೇಲೆ ನಿರ್ಬಂಧದೊಂದಿಗೆ ಬರುತ್ತದೆ ಆದರೆ ಇದು ಆಧುನಿಕ ರೀತಿಯ ಚಿಕಿತ್ಸೆ ಮತ್ತು 50% ನಿರ್ಬಂಧದೊಂದಿಗೆ ಸ್ಟೆಮ್ ಸೆಲ್ ಚಿಕಿತ್ಸೆಯನ್ನು ಸಹ ಒಳಗೊಂಡಿದೆ.

## D. ಟಾಪ್-ಅಪ್ ಕವರ್‌ಗಳು ಅಥವಾ ಅತಿ ಕಡಿತದ ವಿಮಾ ಯೋಜನೆಗಳು

ಟಾಪ್-ಅಪ್ ಕವರ್ ಅನ್ನು ಹೆಚ್ಚಿನ ಕಡಿತದ ಪಾಲಿಸಿ ಎಂದೂ ಕರೆಯಲಾಗುತ್ತದೆ. ವಿಮಾಗಾರರಿಂದ ಟಾಪ್-ಅಪ್ ಪಾಲಿಸಿಗಳು, ನಿಗದಿತ ಮೊತ್ತ(ಥ್ರೆಶೋಲ್ಡ್ ಎಂದು ಕರೆಯಲಾಗುತ್ತದೆ)ಕ್ಕಿಂತ ಹೆಚ್ಚಿನ ಮೊತ್ತದ ವಿಮಾ ಮೊತ್ತಗಳಿಗೆ ರಕ್ಷಣೆಯನ್ನು ಒದಗಿಸುತ್ತವೆ. ಈ ಪಾಲಿಸಿಯು ಮೂಲಭೂತ ಆರೋಗ್ಯ ರಕ್ಷಣೆಯೊಂದಿಗೆ ಕಾರ್ಯನಿರ್ವಹಿಸುತ್ತದ್ದು ಕಡಿಮೆ ಮೊತ್ತದ ವಿಮಾ ಮೊತ್ತವನ್ನು ಹೊಂದಿದೆ ಮತ್ತು ತುಲನಾತ್ಮಕವಾಗಿ ಸಮಂಜಸವಾದ ಕಂತಿನಲ್ಲಿ ಬರುತ್ತದೆ. ಉದಾಹರಣೆಗೆ, ತಮ್ಮ ಉದ್ಯೋಗದಾತರಿಂದ ಕವರ್ ಮಾಡಲ್ಪಟ್ಟಿರುವ ವ್ಯಕ್ತಿಗಳು ಹೆಚ್ಚುವರಿ ರಕ್ಷಣೆಗಾಗಿ ಟಾಪ್-ಅಪ್ ಕವರ್ ಅನ್ನು ಸಹ ಆಯ್ಕೆ ಮಾಡಬಹುದು (ಮೊದಲ ಪಾಲಿಸಿಯ ವಿಮಾ ಮೊತ್ತವನ್ನು ಥ್ರೆಶೋಲ್ಡ್ ಆಗಿ ಇಟ್ಟುಕೊಳ್ಳುವುದು).

ಟಾಪ್-ಅಪ್ ಪಾಲಿಸಿಯಡಿಯಲ್ಲಿ ಕ್ಲೇಮ್ ಪಡೆಯಲು ಅರ್ಹರಾಗಲು, ವೈದ್ಯಕೀಯ ವೆಚ್ಚಗಳು ಯೋಜನೆಯಡಿಯಲ್ಲಿ ಆಯ್ಕೆ ಮಾಡಲಾದ ಕಡಿತದ (ಅಥವಾ ಥ್ರೆಶೋಲ್ಡ್) ಮಟ್ಟಕ್ಕಿಂತ ಹೆಚ್ಚಾಗಿರಬೇಕು ಮತ್ತು ಮರುಪಾವತಿಯು ಹೆಚ್ಚಿನ ಕಡಿತದ ಯೋಜನೆಯಡಿಯಲ್ಲಿ ಖರ್ಚು ಮಾಡಿದ ವೆಚ್ಚದ ಮೊತ್ತವಾಗಿರುತ್ತದೆ ಅಂದರೆ ಕಡಿತದ ಮೊತ್ತಕ್ಕಿಂತ ಹೆಚ್ಚಾಗಿರುತ್ತದೆ.

### ಉದಾಹರಣೆ

ಒಬ್ಬ ವ್ಯಕ್ತಿಯನ್ನು ಅವರ ಉದ್ಯೋಗದಾತರಿಂದ ವಿಮಾ ಮೊತ್ತ ರೂ. 3 ಲಕ್ಷಗಳಿಗೆ ವಿಮೆ ಮಾಡಲಾಗಿದೆ. ಅವರು ರೂ. ಮೂರು ಲಕ್ಷಗಳಿಗೆ ಹೆಚ್ಚುವರಿಯಾಗಿ ರೂ 10 ಲಕ್ಷ ಗಳ ಟಾಪ್-ಅಪ್ ಪಾಲಿಸಿಯನ್ನು ಆರಿಸಿಕೊಳ್ಳಬಹುದು. ಒಂದು ಆಸ್ಪತ್ರೆ ದಾಖಲಾತಿಯ ವೆಚ್ಚವು ರೂ. 5 ಲಕ್ಷಗಳಾಗಿದ್ದರೆ, ಮೂಲ ಪಾಲಿಸಿಯು ಕೇವಲ ರೂ. ಮೂರು ಲಕ್ಷಗಳನ್ನು ಕವರ್ ಮಾಡುತ್ತದೆ. ಟಾಪ್-ಅಪ್ ಕವರ್‌ನೊಂದಿಗೆ, ಬಾಕಿ ಮೊತ್ತ ರೂ. ಎರಡು ಲಕ್ಷಗಳನ್ನು ಟಾಪ್-ಅಪ್ ಪಾಲಿಸಿಯಿಂದ ಪಾವತಿಸಲಾಗುವುದು.

ಟಾಪ್-ಅಪ್ ಪಾಲಿಸಿಗಳು ಅಗ್ಗವಾಗಿ ಬರುತ್ತವೆ ಮತ್ತು ರೂ. 10 ಲಕ್ಷಗಳ ಒಂದೇ ಪಾಲಿಸಿಯ ವೆಚ್ಚವು ಮೂರು ಲಕ್ಷಗಳನ್ನು ಮೀರಿದ ರೂ 10 ಲಕ್ಷಗಳ ಟಾಪ್-ಅಪ್ ಪಾಲಿಸಿಗಿಂತ ಹೆಚ್ಚಿನದಾಗಿರುತ್ತದೆ.

ಈ ಕವರ್ ಗಳು ವೈಯಕ್ತಿಕ ಮತ್ತು ಕುಟುಂಬದ ಆಧಾರದ ಮೇಲೆ ಲಭ್ಯವಿರುತ್ತವೆ. ಟಾಪ್-ಅಪ್ ಯೋಜನೆಯಲ್ಲಿ ಆಸ್ಪತ್ರೆಗೆ ದಾಖಲಾದ ಪ್ರತಿಯೊಂದು ಘಟನೆಯಲ್ಲೂ ಕಡಿತದ ಮೊತ್ತವನ್ನು ಮೀರಿರಬೇಕಾಗುತ್ತದೆ. ಆದಾಗ್ಯೂ ಪಾಲಿಸಿ ಅವಧಿಯಲ್ಲಿ ಆಸ್ಪತ್ರೆ ದಾಖಲಾತಿಯ ಸರಣಿಯ ನಂತರ ಕಡಿತದ ಮೊತ್ತವನ್ನು ದಾಟಲು ಅನುಮತಿಸುವ ಕೆಲವು ಟಾಪ್-ಅಪ್ ಯೋಜನೆಗಳನ್ನು ಒಟ್ಟು ಆಧಾರಿತ ಹೆಚ್ಚಿನ

ಕಡಿತದ ಯೋಜನೆ(ಅಗ್ರಿಗೇಟ್ ಬೇಸ್ಡ್ ಹೈ ಡಿಡಕ್ಟಿಬಲ್ ಪ್ಲಾನ್)ಗಳು ಅಥವಾ ಸೂಪರ್ ಟಾಪ್-ಅಪ್ ಕವರ್ ಗಳೆಂದು ಭಾರತೀಯ ಮಾರುಕಟ್ಟೆಯಲ್ಲಿ ಕರೆಯಲಾಗುತ್ತದೆ. ಒಂದು ಸೂಪರ್ ಟಾಪ್-ಅಪ್ ಯೋಜನೆಯು ಕಡಿತದ ಮೊತ್ತಕ್ಕಿಂತ ಹೆಚ್ಚಿನ ಆಸ್ಪತ್ರೆಯ ಎಲ್ಲ ವೆಚ್ಚಗಳನ್ನು (ಸೂಪರ್ ಟಾಪ್-ಅಪ್ ಪ್ಲಾನ್ ಮಿತಿಯವರೆಗೆ) ಒಳಗೊಂಡಿರುತ್ತದೆ. ಅಂದರೆ, ಕಡಿತದ ಮೊತ್ತವನ್ನು ಒಂದು ವರ್ಷದಲ್ಲಿ ಒಟ್ಟು ಕ್ಲೇಮ್ ಗಳಿಗೆ ಅನ್ವಯಿಸಲಾಗುತ್ತದೆ. ಆದ್ದರಿಂದ, ಕಡಿತದ ಮೊತ್ತವನ್ನು ಪಾವತಿಸಿದ ನಂತರ, ಯೋಜನೆಯು ನಂತರದ ಕ್ಲೇಮ್ ಗಳಿಗೆ ಸಕ್ರಿಯವಾಗುತ್ತದೆ.

## E. ಹಿರಿಯ ನಾಗರಿಕರ ಪಾಲಿಸಿ

ನಿರ್ದಿಷ್ಟ ವಯಸ್ಸಿನ ನಂತರ (ಉದಾಹರಣೆಗೆ 60 ವರ್ಷಕ್ಕಿಂತ ಮೇಲ್ಪಟ್ಟ ಜನರು) ಕವರೇಜ್ ಅನ್ನು ನಿರಾಕರಿಸಲಾದ ವಯಸ್ಸಾದ ಜನರಿಗೆ ಕವರ್ ಅನ್ನು ನೀಡಲು ಈ ಯೋಜನೆಗಳನ್ನು ವಿನ್ಯಾಸಗೊಳಿಸಲಾಗಿದೆ. ವ್ಯಾಪ್ತಿ ಮತ್ತು ಹೊರತುಗಳ ರಚನೆಯು ಆಸ್ಪತ್ರೆ ದಾಖಲಾತಿಯ ಪಾಲಿಸಿಯಂತೆಯೇ ಇರುತ್ತದೆ.

ವ್ಯಾಪ್ತಿ ಮತ್ತು ಕಾಯುವ ಅವಧಿಯನ್ನು ಹೊಂದಿಸುವಲ್ಲಿ ವಯಸ್ಸಾದವರ ಕಾಯಿಲೆಗಳಿಗೆ ವಿಶೇಷ ಗಮನವನ್ನು ನೀಡಲಾಗುತ್ತದೆ. ಪ್ರವೇಶದ ವಯಸ್ಸು ಹೆಚ್ಚಾಗಿ 60 ವರ್ಷಗಳ ನಂತರ ಮತ್ತು ಜೀವಮಾನದವರೆಗೆ ನವೀಕರಿಸಬಹುದಾಗಿರುತ್ತದೆ. ವಿಮಾ ಮೊತ್ತವು ರೂ. 50,000 ರಿಂದ ರೂ. 5,00,000. ಕೆಲವು ಕಾಯಿಲೆಗಳಿಗೆ ಅನ್ವಯವಾಗುವ ಕಾಯುವ ಅವಧಿಯಲ್ಲಿ ವ್ಯತ್ಯಾಸವಿರುತ್ತದೆ.

**ಉದಾಹರಣೆ:** ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಗಾಗಿ ಒಬ್ಬ ವಿಮಾದಾರನಿಗೆ **1** ವರ್ಷ ಮತ್ತು ಇತರ ಕೆಲವು ವಿಮಾದಾರರಿಗೆ **2** ವರ್ಷಗಳ ಕಾಯುವ ಅವಧಿಯನ್ನು ಹೊಂದಿರಬಹುದು.

**ಉದಾಹರಣೆ:** ಸೈನಟಿಸ್ ಕೆಲವು ವಿಮಾಗಾರರ ಕಾಯುವ ಅವಧಿಯ ಷರತ್ತಿನಲ್ಲಿ ಇರುವುದಿಲ್ಲ ಆದರೆ ಇನ್ನು ಕೆಲವು ವಿಮಾಗಾರರು ಅದನ್ನು ತಮ್ಮ ಕಾಯುವ ಅವಧಿಯ ಷರತ್ತುಗಳಲ್ಲಿ ಸೇರಿಸುತ್ತಾರೆ.

ಕೆಲವು ಪಾಲಿಸಿಗಳು ಕಾಯುವ ಅವಧಿಯನ್ನು ಅಥವಾ ಮೊದಲೇ ಅಸ್ತಿತ್ವದಲ್ಲಿರುವ ರೋಗಗಳಿಗೆ ಸಂಬಂಧಿಸಿದಂತೆ ಮಿತಿಗಳನ್ನು ಹೊಂದಿರುತ್ತವೆ. ಆಸ್ಪತ್ರೆ ದಾಖಲಾತಿಯ ಪೂರ್ವ-ನಂತರದ ವೆಚ್ಚಗಳನ್ನು ಆಸ್ಪತ್ರೆಯ ಹಕ್ಕುಗಳ ಶೇಕಡಾವಾರು ಅಥವಾ ಉಪ ಮಿತಿಗಳಲ್ಲಿ ಹೆಚ್ಚಾಗಿರುವುದನ್ನು ಪಾವತಿಸಲಾಗುತ್ತದೆ. ಕೆಲವು ಪಾಲಿಸಿಗಳಲ್ಲಿ ಅವುಗಳನ್ನು **30/ 60** ದಿನಗಳು ಅಥವಾ **60/ 90** ದಿನಗಳ ನಿರ್ದಿಷ್ಟ ಅವಧಿಯಲ್ಲಿ ಭರಿಸಲ್ಪಡುವ ವೆಚ್ಚಗಳಂತಹ ವಿಶಿಷ್ಟವಾದ ನಷ್ಟ ಪರಿಹಾರ ಯೋಜನೆಗಳನ್ನು ಅನುಸರಿಸಲಾಗುತ್ತದೆ.

ಎಲ್ಲ ಆರೋಗ್ಯ ವಿಮೆಗಾರರು ಮತ್ತು ಟಿಪಿಎ ಗಳು ಹಿರಿಯ ನಾಗರಿಕರ ಆರೋಗ್ಯ ವಿಮೆಗೆ ಸಂಬಂಧಿತ ಕ್ಲೇಮ್ ಗಳು ಮತ್ತು ದೂರುಗಳನ್ನು ಪರಿಹರಿಸಲು ಪ್ರತ್ಯೇಕ ಚಾನಲ್ ಅನ್ನು ಸ್ಥಾಪಿಸಬೇಕು ಎಂದು ಐಆರ್ ಡಿಎಐ ಕಡ್ಡಾಯಗೊಳಿಸಿದೆ..

## F. ಸ್ಥಿರ ಪ್ರಯೋಜನ(ಫಿಕ್ಸೆಡ್ ಬೆನಿಫಿಟ್) ಕವರ್‌ಗಳು – ಆಸ್ಪತ್ರೆಯ ನಗದು, ಗಂಭೀರ ಕಾಯಿಲೆ

ಈ ಕವರ್ ಅಡಿಯಲ್ಲಿ, ವಿಮಾದಾರರು ಹೆಸರಿಸಿದ ಚಿಕಿತ್ಸೆಗಾಗಿ ಅವರು ಖರ್ಚು ಮಾಡಿದ ಮೊತ್ತವನ್ನು ಲೆಕ್ಕಿಸದೆ ಕ್ಲೇಮ್ ಮೊತ್ತವಾಗಿ ಒಂದು ಸ್ಥಿರವಾದ ಮೊತ್ತವನ್ನು ಪಡೆಯುತ್ತಾರೆ. ಈ ಉತ್ಪನ್ನದಲ್ಲಿ, ಈಎನ್ ಟಿ, ನೇತ್ರಶಾಸ್ತ್ರ, ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ, ಇತ್ಯಾದಿ ವಿಭಾಗಗಳ ಅಡಿಯಲ್ಲಿಯ ಸಾಮಾನ್ಯವಾಗಿ ಸಂಭವಿಸುವ ಚಿಕಿತ್ಸೆಗಳನ್ನು ಪಟ್ಟಿಮಾಡಲಾಗಿದೆ ಮತ್ತು ಇವುಗಳಲ್ಲಿ ಪ್ರತಿಯೊಂದಕ್ಕೂ ಗರಿಷ್ಠ ಪಾವತಿಯನ್ನು ಪಾಲಿಸಿಯಲ್ಲಿ ವಿವರಿಸಲಾಗಿದೆ.

ಕ್ಲೇಮ್ ಅನ್ನು ಪ್ರಕ್ರಿಯೆಗೊಳಿಸಲು ಆಸ್ಪತ್ರೆಗೆ ದಾಖಲಾದ ಪುರಾವೆ ಮತ್ತು ಪಾಲಿಸಿಯಡಿಯಲ್ಲಿ ಅನಾರೋಗ್ಯದ ಕವರೇಜ್ ಮಾತ್ರ ಸಾಕಾಗುವುದರಿಂದ ಈ ಪಾಲಿಸಿಗಳು ಸರಳವಾಗಿದೆ. ಕೆಲವು ಉತ್ಪನ್ನಗಳು ಸ್ಥಿರ ಪ್ರಯೋಜನದ ಕವರ್ ಜೊತೆಗೆ ದೈನಂದಿನ ನಗದು ಪ್ರಯೋಜನವನ್ನು ಪ್ಯಾಕೇಜ್ ಮಾಡುತ್ತವೆ.

ಪಾಲಿಸಿಯಲ್ಲಿ ಹೆಸರಿಸಲಾದ ಪಟ್ಟಿಯಲ್ಲಿ ಸ್ಥಾನ ಪಡೆಯದ ಶಸ್ತ್ರಚಿಕಿತ್ಸೆಗಳು/ಚಿಕಿತ್ಸೆಗೆ ನಿಗದಿತ ಮೊತ್ತವನ್ನು ಪಾವತಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಪಾಲಿಸಿಯ ಅವಧಿಯಲ್ಲಿ ವಿವಿಧ ಚಿಕಿತ್ಸೆಗಳಿಗೆ ಅನೇಕ ಕ್ಲೇಮ್ ಗಳು ಉಂಟಾಗುವುದು ಸಾಧ್ಯವಾಗಿದೆ. ಆದಾಗ್ಯೂ ಕ್ಲೇಮ್ ಗಳು ಅಂತಿಮವಾಗಿ ಪಾಲಿಸಿಯಡಿಯಲ್ಲಿ ಆಯ್ಕೆಮಾಡಿದ ವಿಮಾ ಮೊತ್ತಕ್ಕೆ ಸೀಮಿತವಾಗಿರುತ್ತದೆ.

**ಕೆಲವು ನಿಶ್ಚಿತ ಲಾಭದ ವಿಮಾ ಯೋಜನೆಗಳು ಈ ಕೆಳಗಿನಂತಿವೆ:**

- ✓ **ಆಸ್ಪತ್ರೆಯ ದೈನಂದಿನ ನಗದು ವಿಮಾ ಯೋಜನೆಗಳು**
- ✓ **ಗಂಭೀರ ಕಾಯಿಲೆ ವಿಮಾ ಯೋಜನೆಗಳು**

### 1. ಆಸ್ಪತ್ರೆಯ ದೈನಂದಿನ ನಗದು ವಿಮಾ ಯೋಜನೆಗಳು

#### a) ಪ್ರತಿದಿನಕ್ಕೆ ಮೊತ್ತದ ಮಿತಿ

ಆಸ್ಪತ್ರೆಯ ನಗದು ಕವರೇಜ್ ವಿಮಾದಾರರಿಗೆ ಆಸ್ಪತ್ರೆಗೆ ದಾಖಲಾದ ಪ್ರತಿ ದಿನಕ್ಕೆ ನಿಗದಿತ ಮೊತ್ತವನ್ನು ಒದಗಿಸುತ್ತದೆ. ಪ್ರತಿದಿನದ (ಉದಾಹರಣೆಗೆ) ದಿನಕ್ಕೆ ರೂ. **1,500** ದಿಂದ ರೂ. ದಿನಕ್ಕೆ **5,000** ಅಥವಾ ಅದಕ್ಕಿಂತ ಹೆಚ್ಚು ನಗದು ಕವರೇಜ್ ಬದಲಾಗಬಹುದು. ಪ್ರತಿ ಅನಾರೋಗ್ಯಕ್ಕೆ ದೈನಂದಿನ ನಗದು ಪಾವತಿ ಮತ್ತು ಪಾಲಿಸಿಯ ಸಾಮಾನ್ಯವಾಗಿ ವಾರ್ಷಿಕ ಪಾಲಿಸಿಯಾಗಿರುವ ಅವಧಿಗೆ ಹೆಚ್ಚಿನ ಮಿತಿಯನ್ನು ಒದಗಿಸಲಾಗುತ್ತದೆ.

#### b) ಪಾವತಿ ದಿನಗಳ ಸಂಖ್ಯೆ

ಈ ಪಾಲಿಸಿಯ ಕೆಲವು ರೂಪಾಂತರಗಳಲ್ಲಿ, ಅನುಮತಿಸಲಾದ ದೈನಂದಿನ ನಗದಿನ ಸಂಖ್ಯೆಯು ಚಿಕಿತ್ಸೆ ತೆಗೆದುಕೊಳ್ಳುತ್ತಿರುವ ಕಾಯಿಲೆಗೆ ಸಂಬಂಧಿಸಿರುತ್ತದೆ. ಪ್ರತಿ ವಿಧದ ಕಾರ್ಯವಿಧಾನ/ಅನಾರೋಗ್ಯಕ್ಕೆ

ಅನುಮತಿಸುವ ದೈನಂದಿನ ನಗದು ಪ್ರಯೋಜನವನ್ನು ಮಿತಿಗೊಳಿಸುವ ಚಿಕಿತ್ಸೆಗಳ ವಿವರವಾದ ಪಟ್ಟಿ ಮತ್ತು ಪ್ರತಿಯೊಂದಕ್ಕೂ ತಗಲುವ ಅವಧಿಯನ್ನು ನಿಗದಿಪಡಿಸಲಾಗಿದೆ.

**c) ಸ್ವತಂತ್ರ ಕವರ್ ಅಥವಾ ಆಡ್-ಆನ್ ಕವರ್**

ಇತರ ಸಂದರ್ಭಗಳಲ್ಲಿ, ನಿಯಮಿತ ನಷ್ಟ ಪರಿಹಾರದ ಪಾಲಿಸಿಗೆ ಆಡ್-ಆನ್ ಕವರ್ ರೂಪದಲ್ಲಿರುವ ಆಸ್ಪತ್ರೆಯ ದೈನಂದಿನ ನಗದು ಪಾಲಿಸಿಯು ಕೆಲವು ವಿಮಾಗಾರರು ನೀಡುವ ಸ್ವತಂತ್ರ ಪಾಲಿಸಿಯಾಗಿ ಲಭ್ಯವಿದೆ. ಈ ಪಾಲಿಸಿಗಳ ಪಾವತಿಯು ಚಿಕಿತ್ಸೆಯ ನಿಜವಾದ ವೆಚ್ಚಕ್ಕೆ ಸಂಬಂಧಿಸಿರದೇ ಒಂದು ಸ್ಥಿರವಾದ ಮೊತ್ತವಾಗಿರುವುದರಿಂದ ವಿಮಾದಾರರಿಗೆ ಪ್ರಾಸಂಗಿಕ ವೆಚ್ಚಗಳನ್ನು ಭರಿಸಲು ಸಹಾಯ ಮಾಡುತ್ತವೆ. ಇದು ನಷ್ಟ ಪರಿಹಾರ ಆಧಾರಿತ ಆರೋಗ್ಯ ವಿಮಾ ಯೋಜನೆಯಡಿಯಲ್ಲಿ ಪಡೆದ ಯಾವುದೇ ಕವರ್ ಗೆ ಹೆಚ್ಚುವರಿಯಾಗಿ ಪಾಲಿಸಿಯಡಿಯಲ್ಲಿ ಪಾವತಿಯನ್ನು ಒದಗಿಸಲು ಸಹ ಅನುಮತಿಸುತ್ತದೆ.

**d) ಪೂರಕವಾದ ಕವರ್**

ಈ ಪಾಲಿಸಿಗಳು ವೆಚ್ಚದ ಪರಿಣಾಮಕಾರಿಯಾಗಿರುವುದರಿಂದ ಮತ್ತು ನಷ್ಟ ಪರಿಹಾರದ ಪಾಲಿಸಿಯಡಿಯಲ್ಲಿ ಪಾವತಿಸಲಾಗದ ವೆಚ್ಚಗಳಾದ ಹೊರಗಿಡುವಿಕೆಗಳು, ಸಹ-ಪಾವತಿ ಇತ್ಯಾದಿಗಳಂತಹ ಪ್ರಾಸಂಗಿಕ ವೆಚ್ಚಗಳಿಗೆ ಪರಿಹಾರವನ್ನು ಒದಗಿಸುವುದರಿಂದ ಆಸ್ಪತ್ರೆ ವೆಚ್ಚಗಳ ಪಾಲಿಸಿಗೆ ಪೂರಕವಾಗಬಹುದು.

**e) ಕವರ್ ನ ಇತರ ಪ್ರಯೋಜನಗಳು**

ಗ್ರಾಹಕರಿಗೆ ವಿವರಿಸಲು ಸುಲಭವಾಗಿದೆ ಮತ್ತು ಆದ್ದರಿಂದ ಹೆಚ್ಚು ಸುಲಭವಾಗಿ ಮಾರಾಟ ಮಾಡಬಹುದಾದ್ದರಿಂದ ವಿಮಾಗಾರರ ದೃಷ್ಟಿಕೋನದಿಂದ ಈ ಯೋಜನೆಯು ಹಲವಾರು ಪ್ರಯೋಜನಗಳನ್ನು ಹೊಂದಿದೆ. ಆಸ್ಪತ್ರೆಗೆ ಸೇರಿಸುವ ಅವಧಿಗೆ ವಾಸ್ತವಿಕ ವೆಚ್ಚವೆಷ್ಟೇ ಆಗಿದ್ದರೂ ದಿನಕ್ಕೆ ಒಂದು ನಿಗದಿತ ಮೊತ್ತವನ್ನು ಪಾವತಿಸುವುದರಿಂದ ವೈದ್ಯಕೀಯ ಹಣದುಬ್ಬರವನ್ನು ಮೀರಿಸುತ್ತದೆ. ಅಲ್ಲದೆ, ಅಂತಹ ವಿಮಾ ಕವರ್ ಗಳ ಸ್ವೀಕಾರವನ್ನು ಮತ್ತು ಕ್ಲೇಮ್ ಗಳ ಇತ್ಯರ್ಥವನ್ನು ನಿಜವಾಗಿಯೂ ಸರಳಗೊಳಿಸಲಾಗಿದೆ.

**2. ಗಂಭೀರ ಕಾಯಿಲೆ ಪಾಲಿಸಿ**

ವೈದ್ಯಕೀಯ ವಿಜ್ಞಾನದ ಪ್ರಗತಿಯೊಂದಿಗೆ, ಜನರು ಹಿಂದಿನ ಕಾಲದಲ್ಲಿ ಸಾವಿಗೆ ಕಾರಣವಾಗುತ್ತಿದ್ದ ಕ್ಯಾನ್ಸರ್, ಪಾರ್ಶ್ವವಾಯು ಮತ್ತು ಹೃದಯಾಘಾತದಂತಹ ಕೆಲವು ಪ್ರಮುಖ ಕಾಯಿಲೆಗಳಿಂದ ಬದುಕುಳಿಯುತ್ತಿದ್ದಾರೆ. ಆದಾಗ್ಯೂ, ಒಂದು ದೊಡ್ಡ ಕಾಯಿಲೆಯಿಂದ ಬದುಕುಳಿಯುವುದು ಚಿಕಿತ್ಸೆಗಾಗಿ ಮತ್ತು ಚಿಕಿತ್ಸೆಯ ನಂತರದ ಜೀವನ ವೆಚ್ಚಗಳಿಗಾಗಿ ದೊಡ್ಡ ವೆಚ್ಚವನ್ನು ಒಳಗೊಳ್ಳುತ್ತದೆ. ಗಂಭೀರ ಅನಾರೋಗ್ಯದ ಆರಂಭವು ವ್ಯಕ್ತಿಯ ಆರ್ಥಿಕ ಭದ್ರತೆಯನ್ನು ಅಲುಗಾಡಿಸುತ್ತದೆ. ಅಂತಹ ಸಂದರ್ಭಗಳಲ್ಲಿ ಎಲ್ಲ ವೈದ್ಯಕೀಯ ವೆಚ್ಚಗಳನ್ನು ಸರಿದೂಗಿಸಲು ಮೂಲಭೂತ ಆರೋಗ್ಯ ವಿಮಾ ಪಾಲಿಸಿಯು ಸಾಕಾಗುವುದಿಲ್ಲ.

ಗಂಭೀರ ಅನಾರೋಗ್ಯದ ಪಾಲಿಸಿಯು ನಿರ್ದಿಷ್ಟವಾಗಿ ಹೆಸರಿಸಲಾದ ನಿರ್ಣಾಯಕ ಅನಾರೋಗ್ಯದ ರೋಗನಿರ್ಣಯದ ಮೇಲೆ ಒಂದು ದೊಡ್ಡ ಮೊತ್ತವನ್ನು ಪಾವತಿಸುವ ಅವಕಾಶವನ್ನು ಹೊಂದಿದೆ. ದೊಡ್ಡ ವೆಚ್ಚಗಳನ್ನು ಭರಿಸಲು ವಿಮಾ ಮೊತ್ತವು ಸಾಕಷ್ಟಾಗಿರುತ್ತದೆ.

ಭಾರತದಲ್ಲಿ, ಗಂಭೀರ ಕಾಯಿಲೆ (ಸಿಐ) ಪ್ರಯೋಜನಗಳನ್ನು ಸಾಮಾನ್ಯವಾಗಿ ಜೀವ ವಿಮಾಗಾರರು ಜೀವವಿಮಾ ಪಾಲಿಸಿಗಳಿಗೆ ರೈಡರ್ ಗಳ ರೂಪದಲ್ಲಿ ಮಾರಾಟ ಮಾಡುತ್ತಾರೆ ಮತ್ತು - ವೇಗವರ್ಧಿತ ಸಿಐ ಪ್ರಯೋಜನ ಯೋಜನೆ ಮತ್ತು ಸ್ವತಂತ್ರ ಸಿಐ ಪ್ರಯೋಜನ ಯೋಜನೆಯೆಂಬ ಎರಡು ರೀತಿಯ ಕವರ್ ಗಳನ್ನು ನೀಡುತ್ತಾರೆ. ಗೊಂದಲವನ್ನು ತಪ್ಪಿಸಲು, ಐಆರ್ ಡಿಎ ಆರೋಗ್ಯ ವಿಮಾ ಪ್ರಮಾಣೀಕರಣ ಮಾರ್ಗಸೂಚಿಗಳಡಿಯಲ್ಲಿ 22 ಸಾಮಾನ್ಯವಾದ ಗಂಭೀರ ಕಾಯಿಲೆಗಳ ವ್ಯಾಖ್ಯೆಗಳನ್ನು ಪ್ರಮಾಣೀಕರಿಸಲಾಗಿದೆ.

ಕವರ್ ಮಾಡಲ್ಪಟ್ಟ ಗಂಭೀರ ಕಾಯಿಲೆಗಳು ವಿಮಾಗಾರರು ಮತ್ತು ಉತ್ಪನ್ನಗಳಾದ್ಯಂತ ಬದಲಾಗುತ್ತವೆ. ಸಾಮಾನ್ಯವಾಗಿ 100% ವಿಮಾ ಮೊತ್ತವನ್ನು ಗಂಭೀರವಾದ ಅನಾರೋಗ್ಯದ ರೋಗನಿರ್ಣಯದ ಮೇಲೆ ಪಾವತಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಪರಿಹಾರವು ಪಾಲಿಸಿ ನಿಯಮಗಳು ಮತ್ತು ಷರತ್ತುಗಳು ಮತ್ತು ಅನಾರೋಗ್ಯದ ತೀವ್ರತೆಯನ್ನವಲಂಬಿಸಿ ವಿಮಾ ಮೊತ್ತದ 25% ರಿಂದ 100% ವರೆಗೆ ಬದಲಾಗಬಹುದು.

ಯಾವುದೇ ಪ್ರಯೋಜನವನ್ನು ಪಾವತಿಸಲು ಪಾಲಿಸಿಯ ಪ್ರಾರಂಭದಿಂದ 90 ದಿನಗಳ ಕಾಯುವ ಅವಧಿ ಮತ್ತು ಕಾಯಿಲೆಯ ರೋಗನಿರ್ಣಯದ ನಂತರ 30 ದಿನಗಳ ಬದುಕುಳಿಯುವ ಷರತ್ತಿಗೆ ಒಳಪಟ್ಟಿರುತ್ತದೆ. ವಿಶೇಷವಾಗಿ 45 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಕಠಿಣ ವೈದ್ಯಕೀಯ ಪರೀಕ್ಷೆಗಳಿಗೆ ಒಳಗಾಗಬೇಕಾಗುತ್ತದೆ.

ಯಾವುದೇ ವಿಮಾದಾರ ವ್ಯಕ್ತಿಗೆ ಸಂಬಂಧಿಸಿದಂತೆ ಪಾಲಿಸಿಯಡಿಯಲ್ಲಿಯ ಪರಿಹಾರವನ್ನು ಒಮ್ಮೆ ಪಾವತಿಸಿದ ನಂತರ ಪಾಲಿಸಿ ಕೊನೆಗೊಳ್ಳುತ್ತದೆ. ಈ ಪಾಲಿಸಿಯನ್ನು ಗುಂಪುಗಳಿಗೆ ವಿಶೇಷವಾಗಿ ತಮ್ಮ ಉದ್ಯೋಗಿಗಳಿಗೆ ಪಾಲಿಸಿಗಳನ್ನು ತೆಗೆದುಕೊಳ್ಳುವ ಕಾರ್ಪೊರೇಟ್ ಗಳಿಗೆ ಸಹ ನೀಡಲಾಗುತ್ತದೆ.

**ನಿರ್ದಿಷ್ಟ ರೋಗದ ಉತ್ಪನ್ನಗಳು- ಕರೋನಾ ಕವಚ**

ಜೂನ್ 2020 ರಲ್ಲಿ, ದೇಶವು ಕರೋನಾ ವೈರಸ್ ಸೋಂಕಿನ (ಕೋವಿಡ್ -19) ಅನೇಕ ಪ್ರಕರಣಗಳನ್ನು ಎದುರಿಸುತ್ತಿರುವಾಗ, ಕೋವಿಡ್ -19 ಧನಾತ್ಮಕ ರೋಗನಿರ್ಣಯದ ಮೇಲೆ ಒಟ್ಟು ಪಾವತಿಯನ್ನು ಒದಗಿಸುವ ಅನೇಕ ಪ್ರಯೋಜನ ಆಧಾರಿತ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಪರಿಚಯಿಸಲಾಯಿತು. ನಂತರ ಕೆಲವು ಕಂಪನಿಗಳು ನಷ್ಟ ಪರಿಹಾರ ಆಧಾರಿತ ಉತ್ಪನ್ನಗಳನ್ನು ಸಹ ಪರಿಚಯಿಸಿದವು. ಆದಾಗ್ಯೂ, ಪಿಪಿಇ ಕಿಟ್ ಗಳು, ಆಕ್ಸಿಮೀಟರ್ ಇತ್ಯಾದಿಗಳಂತಹ ಅನೇಕ ಉಪಭೋಗ್ಯ ವಸ್ತುಗಳು ಮತ್ತು ಕ್ವಾರಂಟೈನ್ ವೆಚ್ಚಗಳ ಬಗ್ಗೆ ಈ ಉತ್ಪನ್ನಗಳಲ್ಲಿ ಕಾಳಜಿ ವಹಿಸಲಾಗಿದ್ದಿಲ್ಲ.

ಕರೋನಾ ಕವಚ್ ಮತ್ತು ಕರೋನಾ ರಕ್ಷಕ್ (ಜೀವ ವಿಮಾ ವಿಭಾಗದಡಿಯಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗಿದೆ) ಎಂಬ ಎರಡು ಪ್ರಮಾಣಿತ ಆರೋಗ್ಯ ವಿಮಾ ಪಾಲಿಸಿಗಳನ್ನು ಐಆರ್ ಡಿಎಐ ಪರಿಚಯಿಸಿತು. ನಷ್ಟ ಪರಿಹಾರ

ಆಧಾರಿತ ಪ್ರಮಾಣಿತ ಕೋವಿಡ್-19 ಉತ್ಪನ್ನವಾಗಿ ಕರೋನಾ ಕವಚವನ್ನು ಒದಗಿಸುವುದು ಸಾಮಾನ್ಯ ಮತ್ತು ಆರೋಗ್ಯ ವಿಮಾಗಾರರಿಗೆ ಕಡ್ಡಾಯವಾಗಿದ್ದರೂ, ಪ್ರಯೋಜನ-ಆಧಾರಿತ ಉತ್ಪನ್ನವನ್ನು ಒದಗಿಸುವ ಕರೋನಾ ರಕ್ಷಕ್, ಅನ್ನು ಒದಗಿಸುವುದು ಎಲ್ಲ ವಿಮಾಗಾರರಿಗೆ ಐಚ್ಛಿಕವಾಗಿರುತ್ತದೆ. ಎರಡೂ ಉತ್ಪನ್ನಗಳು 15 ದಿನಗಳ ಕಾಯುವ ಅವಧಿಯನ್ನು ಹೊಂದಿವೆ.

ಕರೋನಾ ರಕ್ಷಕ್ ಎಂಬುದು ಪ್ರಮಾಣಿತ ಪ್ರಯೋಜನ ಆಧಾರಿತ ಆರೋಗ್ಯ ವಿಮೆಯಾಗಿದ್ದು, ಕೋವಿಡ್-**19** ನಿಂದ ಪೀಡಿತರಾದ ಮತ್ತು ಕನಿಷ್ಠ ನಿರಂತರ **72** ಗಂಟೆಗಳ ಕಾಲ ಆಸ್ಪತ್ರೆಗೆ ದಾಖಲಾಗುವ ಅಗತ್ಯವಿರುವ ವಿಮಾದಾರರಿಗೆ ಒಟ್ಟು ಮೊತ್ತದ ಪ್ರಯೋಜನವನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ. ಯೋಜನೆಯು **18** ವರ್ಷ ಮತ್ತು **65** ವರ್ಷ ವಯಸ್ಸಿನ ಜನರಿಗೆ **3.5** ತಿಂಗಳುಗಳು, **6.5** ತಿಂಗಳುಗಳು ಮತ್ತು **9.5** ತಿಂಗಳುಗಳ ವಿವಿಧ ಪಾಲಿಸಿ ಅವಧಿಗೆ ವೈಯಕ್ತಿಕ ಆಧಾರದ ಮೇಲೆ ಮತ್ತು ವಿವಿಧ ಪಾಲಿಸಿ ನಿಯಮಗಳೊಂದಿಗೆ ಒಂದು-ಬಾರಿಯ ಪ್ರಯೋಜನ ಪಾಲಿಸಿಯಾಗಿ ಕವರೇಜ್ ಅನ್ನು ನೀಡುತ್ತದೆ ಮತ್ತು ಪ್ರಯೋಜನದ ಪಾವತಿಯ ನಂತರ ಕೊನೆಗೊಳ್ಳುತ್ತದೆ. ಕರೋನಾ ರಕ್ಷಕ್ ರೂ. **50,000** ರಿಂದ ರೂ. **2.5** ಲಕ್ಷ, **50,000** ಗುಣಕಗಳಲ್ಲಿ ಮೊತ್ತದ ವಿಮಾ ಆಯ್ಕೆಗಳನ್ನು ನೀಡುತ್ತದೆ. ಪಾಲಿಸಿಯು (**i)** ಸಂಪೂರ್ಣ ವಿಮಾ ಮೊತ್ತದ ಪ್ರಯೋಜನ, **(ii)** ಕೈಗೆಟುಕುವ ಕಂತು, **(iii)** ಕ್ಲೇಮ್ ನ ಒಟ್ಟು ಮೊತ್ತ, **(iv) 15** ದಿನಗಳ ಕಡಿಮೆ ಕಾಯುವ ಅವಧಿ ಮತ್ತು (**v)** ತೆರಿಗೆಯನ್ನು ಪ್ರಯೋಜನಗಳನ್ನು ಒದಗಿಸುತ್ತದೆ.

**ಕರೋನಾ ಕವಚ್ ಜೂನ್ 2020 ರಲ್ಲಿ ಐಆರ್ ಡಿಎಐ ಹೊರಡಿಸಿದ ಮಾರ್ಗಸೂಚಿಗಳ ಮೂಲಕ ಈ ಕೆಳಗೆ ನೀಡಿದ ಕವರೇಜ್ ಅನ್ನು ನೀಡುತ್ತದೆ:**

1. ಈ ಕೆಳಗಿನವುಗಳನ್ನು ಒಳಗೊಂಡಿರುವ ಸರ್ಕಾರಿ ಅಧಿಕೃತ ಡಯಾಗ್ನೋಸ್ಟಿಕ್ ಸೆಂಟರ್‌ನಲ್ಲಿ ಕೋವಿಡ್-**19** ನ ಧನಾತ್ಮಕ ರೋಗನಿರ್ಣಯದ ಮೇಲೆ ಕೋವಿಡ್-**19** ಚಿಕಿತ್ಸೆಗಾಗಿ ಭರಿಸಲಾದ ವೆಚ್ಚಗಳು: (ಕನಿಷ್ಠ **24** ಗಂಟೆಗಳ ಕಾಲ ಆಸ್ಪತ್ರೆಗೆ ದಾಖಲಾದ ವೆಚ್ಚಗಳು ಸ್ವೀಕಾರಾರ್ಹ.)

   **a.** ಆಸ್ಪತ್ರೆ / ನರ್ಸಿಂಗ್ ಹೋಮ್ ಒದಗಿಸಿದಂತೆ ಕೊಠಡಿ, ಊಟ, ನರ್ಸಿಂಗ್ ವೆಚ್ಚಗಳು..

   **b.** ಶಸ್ತ್ರಚಿಕಿತ್ಸಕ, ಅರಿವಳಿಕೆ ತಜ್ಞ, ವೈದ್ಯರು, ಸಲಹೆಗಾರರು, ತಜ್ಞರ ಶುಲ್ಕಗಳು

   **c.** ಅರಿವಳಿಕೆ, ರಕ್ತ, ಆಮ್ಲಜನಕ, ಆಪರೇಷನ್ ಥಿಯೇಟರ್ ಶುಲ್ಕಗಳು, ಶಸ್ತ್ರಚಿಕಿತ್ಸಾ ಉಪಕರಣಗಳು, ವೆಂಟಿಲೇಟರ್ ಶುಲ್ಕಗಳು, ಔಷಧಿಗಳು ಮತ್ತು ಮದ್ದುಗಳು, ರೋಗನಿರ್ಣಯದ ವೆಚ್ಚಗಳು, ರೋಗನಿರ್ಣಯದ ಇಮೇಜಿಂಗ್ ವಿಧಾನಗಳು, ಪಿಪಿಈ ಕಿಟ್, ಕೈಗವಸುಗಳು, ಮಾಸ್ಕ್ ಮತ್ತು ಇತರ ರೀತಿಯ ವೆಚ್ಚಗಳು

   **d.** ತೀವ್ರ ನಿಗಾ ಘಟಕ (ಐಸಿಯು**) /** ತೀವ್ರ ಹೃದಯ ನಿಗಾ ಘಟಕ (ಐಸಿಸಿಯು**)**ದ ವೆಚ್ಚಗಳು.

   **e.** ರೋಡ್ ಆಂಬ್ಯುಲೆನ್ಸ್ ಗೆ ತಗಲುವ ವೆಚ್ಚಗಳು ಪ್ರತಿ ಆಸ್ಪತ್ರೆಗೆ ಗರಿಷ್ಠ ರೂ.**2000/-** ಕ್ಕೆ ಒಳಪಟ್ಟಿರುತ್ತವೆ.

2. ಪ್ರತಿ ಘಟನೆಗೆ ಗರಿಷ್ಟ 14 ದಿನಗಳವರೆಗೆ ಕೆಳಗೆ ತಿಳಿಸಲಾದ ಷರತ್ತುಗಳಿಗೆ ಒಳಪಟ್ಟು ಮನೆಯಲ್ಲಿಯ ಆರೈಕೆಯ ಚಿಕಿತ್ಸಾ ವೆಚ್ಚಗಳು (ಸಮಗ್ರವಾಗಿಲ್ಲ):

   a. ವಿಮಾದಾರರಿಗೆ ಮನೆಯಲ್ಲಿಯೇ ಚಿಕಿತ್ಸೆಗೆ ಒಳಗಾಗಲು ವೈದ್ಯರು ಸಲಹೆ ನೀಡುತ್ತಾರೆ.

   b. ನಿರ್ವಹಿಸಿದ ಚಿಕಿತ್ಸೆಯ ದಾಖಲೆಗಳನ್ನು ಒಳಗೊಂಡಂತೆ ಪ್ರತಿ ದಿನವೂ ವೈದ್ಯಕೀಯ ಅಭ್ಯಾಸಕಾರರಿಂದ ಆರೋಗ್ಯ ಸ್ಥಿತಿಯ ನಿರಂತರ ಮೇಲ್ವಿಚಾರಣೆ ಇರುತದೆ.

3. ಚಿಕಿತ್ಸಕ ವೈದ್ಯರು ಸೂಚಿಸಿದ ಕವರ್ ಮಾಡಲ್ಪಟ್ಟ ಮತ್ತು ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದ ಇತರ ವೆಚ್ಚಗಳು,

   a. ಮನೆಯಲ್ಲಿ ಅಥವಾ ರೋಗನಿರ್ಣಯ ಕೇಂದ್ರದಲ್ಲಿ ನಡೆಸಲಾದ ರೋಗನಿರ್ಣಯ ಪರೀಕ್ಷೆಗಳು

   b. ಲಿಖಿತವಾಗಿ ಶಿಫಾರಸು ಮಾಡಲಾದ ಔಷಧಗಳು

   c. ವೈದ್ಯರ ಸಮಾಲೋಚನೆ ಶುಲ್ಕಗಳು

   d. ವೈದ್ಯಕೀಯ ಸಿಬ್ಬಂದಿಗೆ ಸಂಬಂಧಿಸಿದ ನರ್ಸಿಂಗ್ ಶುಲ್ಕಗಳು

   e. ಔಷಧಿಗಳ ಪ್ಯಾರೆಂಟರಲ್ ಅಡ್ಮಿನಿಸ್ಟ್ರೇಷನ್ ಕ್ಕೆ ಸೀಮಿತವಾದ ವೈದ್ಯಕೀಯ ವಿಧಾನಗಳು

   f. ಪಲ್ಸ್ ಆಕ್ಸಿಮೀಟರ್, ಆಕ್ಸಿಜನ್ ಸಿಲಿಂಡರ್ ಮತ್ತು ನೆಬ್ಯುಲೈಸರ್ ವೆಚ್ಚ

**ಹೆಚ್ಚುವರಿ ಕವರ್ - ಆಸ್ಪತ್ರೆ ದೈನಂದಿನ ನಗದು:** ಈ ಪಾಲಿಸಿಯಡಿಯಲ್ಲಿ ಸ್ವೀಕಾರಾರ್ಹ ಆಸ್ಪತ್ರೆ ದಾಖಲಾತಿ ಕ್ಲೇಮ್ ಗಾಗಿ ಕೋವಿಡ್ ಚಿಕಿತ್ಸೆಗಾಗಿ ಆಸ್ಪತ್ರೆ ದಾಖಲಾತಿಯ ನಂತರ ಪ್ರತಿ 24 ಗಂಟೆಗಳ ನಿರಂತರ ಆಸ್ಪತ್ರೆ ದಾಖಲಾತಿಗೆ ವಿಮಾಗಾರರು ದಿನಕ್ಕೆ ವಿಮಾ ಮೊತ್ತದ 0.5% ಅನ್ನು ಪಾವತಿಸುತ್ತಾರೆ.

**ಪ್ರಮಾಣಿತ ರಕ್ತ-ಆಹಾರ ಮಾನವರ ಮೂಲಕ ಹರಡುವ ಸೋಂಕಿನಿಂದ ಉಂಟಾಗುವ ರೋಗ(ಸ್ಟ್ಯಾಂಡರ್ಡ್ ವೆಕ್ಟರ್-ಬೋರ್ನ್ ಡಿಸೀಸ್) ಆರೋಗ್ಯಪಾಲಿಸಿ :**

ರಕ್ತ-ಆಹಾರ ಮಾನವರ ಮೂಲಕ ಹರಡುವ ರೋಗಗಳಿಗಾಗಿ ಪ್ರಮಾಣಿತ ಉತ್ಪನ್ನಗಳು ಈ ಕೆಳಗಿನ ಕವರ್ ಅನ್ನು ನೀಡುತ್ತವೆ ಎಂದು ಐಆರ್ ಡಿಎಐ ತನ್ನ 3 ಫೆಬ್ರವರಿ 2021 ರ ಮಾರ್ಗಸೂಚಿಗಳಲ್ಲಿ ನಿರ್ಧರಿಸಿದೆ:

1. **ಆಸ್ಪತ್ರೆ ದಾಖಲಾತಿಯ ಪ್ರಯೋಜನ:** ಈ ಕೆಳಗಿನ ಯಾವುದೇ ರೋಗಕಾರಕದಿಂದ ಹರಡುವ ಕಾಯಿಲೆಯ (ಗಳ) ಧನಾತ್ಮಕ ರೋಗನಿರ್ಣಯದ ಮೇಲೆ ಕನಿಷ್ಠ ನಿರಂತರ 72 ಗಂಟೆಗಳವರೆಗೆ ಆಸ್ಪತ್ರೆಗೆ ಸೇರಿಸುವುದಕ್ಕೆ ಒಳಪಟ್ಟು ವಿಮಾ ಮೊತ್ತದ 100% ಕ್ಕೆ ಸಮಾನವಾದ ಒಟ್ಟು ಮೊತ್ತದ ಪ್ರಯೋಜನವನ್ನುನೀಡುತ್ತದೆ.

   a) ಡೆಂಗ್ಯೂ ಜ್ವರ

   b) ಮಲೇರಿಯಾ

   c) ಫೈಲೇರಿಯಾ (ಲಿಂಫಾಟಿಕ್ ಫೈಲೇರಿಯಾಸಿಸ್)

**d)** ಕಾಲಾ-ಅಜಾರ್

**e)** ಚಿಕುನ್ ಗುನ್ಯಾ

**f)** ಜಾಪನೀಜ್ ಎನ್ಸೆಫಾಲಿಟಿಸ್

**g)** ಝೈಕಾ ವೈರಸ್

2. **ರೋಗನಿರ್ಣಯದ ಕವರ್:** ವಾಹಕದಿಂದ ಹರಡುವ ಪ್ರತಿ ಕವರ್ ಮಾಡಿದ ರೋಗಗಳ ಕವರ್ ಅವಧಿಯ ಮೊದಲ ಧನಾತ್ಮಕ ರೋಗನಿರ್ಣಯದ ಸಂದರ್ಭದಲ್ಲಿ (ಪ್ರಯೋಗಾಲಯ ಪರೀಕ್ಷೆಯ ಮೂಲಕ ಮತ್ತು ವೈದ್ಯರು ದೃಢೀಕರಿಸಿದ) ಪಾಲಿಸಿಯ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ವಿಮಾ ಮೊತ್ತದ **2%** ಅನ್ನು ಪಾವತಿಸಬೇಕು. ಪಾಲಿಸಿದಾರರು ಪಾಲಿಸಿ ವರ್ಷದಲ್ಲಿ ಒಮ್ಮೆ ಮಾತ್ರ ಪ್ರತಿ ರೋಗಕ್ಕೆ "ರೋಗನಿರ್ಣಯದ ಕವರ್" ಪಾವತಿಯಡಿಯಲ್ಲಿ ಪಾವತಿಗಳಿಗೆ ಅರ್ಹರಾಗಿರುತ್ತಾರೆ.

## G. ಕಾಂಬೊ-ಉತ್ಪನ್ನಗಳು

**ಹೆಲ್ತ್ ಪ್ಲಸ್ ಲೈಫ್ ಕಾಂಬೊ ಉತ್ಪನ್ನಗಳು** ಜೀವ ವಿಮಾ ಕಂಪನಿಯ ಜೀವ ವಿಮಾ ರಕ್ಷಣೆ ಮತ್ತು ಜೀವೇತರ ಮತ್ತು/ಅಥವಾ ಸ್ವತಂತ್ರ ಆರೋಗ್ಯ ವಿಮಾ ಕಂಪನಿಯು ನೀಡುವ ಆರೋಗ್ಯ ವಿಮಾ ರಕ್ಷಣೆಯ ಸಂಯೋಜನೆಯನ್ನು ನೀಡುತ್ತವೆ.

ಉತ್ಪನ್ನವನ್ನು ವೈಯಕ್ತಿಕ ವಿಮಾ ಪಾಲಿಸಿ ಮತ್ತು ಗುಂಪು ವಿಮೆಯ ಆಧಾರದ ಮೇಲೆ ನೀಡಬಹುದು. ಆದಾಗ್ಯೂ ಆರೋಗ್ಯ ವಿಮಾ ಫ್ಲೋಟರ್ ಪಾಲಿಸಿಗಳಿಗೆ ಸಂಬಂಧಿಸಿದಂತೆ, ವಿಮಾಸಕ್ತಿ ಮತ್ತು ಆಯಾ ವಿಮಾಗಾರರ ಇತರ ಅನ್ವಯವಾಗುವ ಅಂಡರ್ ರೈಟಿಂಗ್ ಮಾನದಂಡಗಳಿಗೆ ಒಳಪಟ್ಟು ಆರೋಗ್ಯ ವಿಮಾ ಪಾಲಿಸಿಯ ಪ್ರಸ್ತಾಪಕರಾಗಿರುವ ಕುಟುಂಬದ ಗಳಿಕೆಯ ಸದಸ್ಯರಲ್ಲಿ ಒಬ್ಬರ ಜೀವನದ ಮೇಲೆ ಶುದ್ಧ ಅವಧಿಯ ಜೀವ ವಿಮಾ ರಕ್ಷಣೆಯನ್ನು ಅನುಮತಿಸಲಾಗಿದೆ.

**ಪ್ಯಾಕೇಜ್ ಪಾಲಿಸಿಗಳು**

ಪ್ಯಾಕೇಜ್ ಅಥವಾ ಅಂಬ್ರೆಲಾ ಕವರ್ ಗಳು ಒಂದೇ ದಾಖಲೆಯಡಿಯಲ್ಲಿ ಕವರ್ ಗಳ ಸಂಯೋಜನೆಯನ್ನು ನೀಡುತ್ತವೆ.

ಆರೋಗ್ಯ ವಿಮೆಯಲ್ಲಿಯ ಪ್ಯಾಕೇಜ್ ಪಾಲಿಸಿಯ ಉದಾಹರಣೆಗಳಲ್ಲಿ ಗಂಭೀರ ಕಾಯಿಲೆಯ ಕವರ್ ಪ್ರಯೋಜನಗಳನ್ನು ನಷ್ಟ ಪರಿಹಾರ ಪಾಲಿಸಿಗಳು ಮತ್ತು ಜೀವ ವಿಮಾ ಪಾಲಿಸಿಗಳು ಮತ್ತು ಆಸ್ಪತ್ರೆಯ ದೈನಂದಿನ ನಗದು ಪ್ರಯೋಜನಗಳನ್ನು ನಷ್ಟ ಪರಿಹಾರ ಪಾಲಿಸಿಗಳೊಂದಿಗೆ ಸಂಯೋಜಿಸುವುದು ಸೇರಿದೆ.

**ಪ್ರವಾಸ ವಿಮೆ :**

ಆರೋಗ್ಯ ವಿಮೆ ಮಾತ್ರವಲ್ಲದೆ ಅನಾರೋಗ್ಯ/ಅಪಘಾತದಿಂದಾಗಿ ವೈದ್ಯಕೀಯ ವೆಚ್ಚಗಳ ಜೊತೆಗೆ ಅಪಘಾತದ ಸಾವು/ಅಂಗವೈಕಲ್ಯ ಪ್ರಯೋಜನಗಳನ್ನು ಒಳಗೊಂಡಿರುವ ಮತ್ತು ಬ್ಯಾಗೇಜ್ ನಲ್ಲಿ ಚೆಕ್ ಮಾಡಿದ ಸಾಮಾನುಗಳ ಆಗಮನದ ನಷ್ಟ ಅಥವಾ ವಿಳಂಬದಂತಹ ಕವರೇಜ್ ಗಳು, ಪಾಸ್‌ಪೋರ್ಟ್ ಮತ್ತು

ದಾಖಲೆಗಳ ನಷ್ಟ, ಆಸ್ತಿ/ವೈಯಕ್ತಿಕ ಹಾನಿಗಳಿಗೆ ಮೂರನೇ ವ್ಯಕ್ತಿಯ ಹೊಣೆಗಾರಿಕೆ, ಪ್ರವಾಸಗಳ ರದ್ದತಿ ಮತ್ತು ಪ್ರಯಾಣ ನೀತಿಗಳಡಿಯಲ್ಲಿ ಸಾಂಪ್ರದಾಯಿಕವಾಗಿ ಒದಗಿಸಲಾದ ಹೈಜಾಕ್ ಕವರ್ ಅನ್ನು ಕೂಡ ಒಳಗೊಂಡ ಪ್ಯಾಕೇಜ್ ಪಾಲಿಸಿಯಾಗಿ ಸಹ ಪ್ರವಾಸ ವಿಮಾ ಪಾಲಿಸಿಯನ್ನು ನೀಡಲಾಗುತ್ತದೆ. (ಪ್ರಯಾಣ ವಿಮೆಯ ವಿವರಗಳನ್ನು ನಂತರ ಒದಗಿಸಲಾಗಿದೆ.)

## H. ಬಡ ವರ್ಗಗಳಿಗೆ ಸೂಕ್ಷ್ಮ(ಮೈಕ್ರೋ) ವಿಮೆ ಮತ್ತು ಆರೋಗ್ಯ ವಿಮೆ

ಸೂಕ್ಷ್ಮ(ಮೈಕ್ರೋ)-ವಿಮಾ ಉತ್ಪನ್ನಗಳನ್ನು ನಿರ್ದಿಷ್ಟವಾಗಿ ಗ್ರಾಮೀಣ ಮತ್ತು ಅನೌಪಚಾರಿಕ ವಲಯಗಳ ಕಡಿಮೆ ಆದಾಯದ ಜನರ ರಕ್ಷಣೆಗಾಗಿ ವಿನ್ಯಾಸಗೊಳಿಸಲಾಗಿದೆ. ಇದು ಕೈಗೆಟುಕುವ ಕಂತು ಮತ್ತು ಲಾಭದ ಪ್ಯಾಕೇಜ್ ದೊಂದಿಗಿನ ಕಡಿಮೆ ಮೌಲ್ಯದ ಉತ್ಪನ್ನವಾಗಿದೆ. ಸೂಕ್ಷ್ಮ(ಮೈಕ್ರೋ) ವಿಮೆಯನ್ನು ಐಆರ್ ಡಿಎ ಸೂಕ್ಷ್ಮ ವಿಮಾ ನಿಯಮ(ಮೈಕ್ರೋ ಇನ್ಸೂರೆನ್ಸ್ ರೆಗ್ಯುಲೇಷನ್ಸ್)ಗಳು, **2005** ರಿಂದ ನಿಯಂತ್ರಿಸಲಾಗುತ್ತದೆ.

ಇಂತಹ ಕವರ್ ಗಳನ್ನು ಹೆಚ್ಚಾಗಿ ವಿವಿಧ ಸಮುದಾಯ ಸಂಸ್ಥೆಗಳು ಅಥವಾ ಸರ್ಕಾರೇತರ ಸಂಸ್ಥೆಗಳಿಂದ (ಎನ್ ಜಿಒ) ತಮ್ಮ ಸದಸ್ಯರಿಗೆ ಗುಂಪು ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ.

ಜನ ಆರೋಗ್ಯ ಬಿಮಾ ಪಾಲಿಸಿ ಮತ್ತು ಸಾರ್ವತ್ರಿಕ ಆರೋಗ್ಯ ಯೋಜನೆಗಳು ಸಮಾಜದ ಬಡ ವರ್ಗಗಳಿಗೆ ಸೇವೆಯನ್ನು ಪೂರೈಸಲು ಪಿಎಸ್ ಯು ಗಳು ವಿಶೇಷವಾಗಿ ರಚಿಸಿರುವ ಎರಡು ಪಾಲಿಸಿಗಳಾಗಿವೆ. ಈ ವರ್ಗಗಳಿಗೆ ಸೇವೆಯನ್ನು ಪೂರೈಸಲು ಖಾಸಗಿ ವಲಯದ ವಿಮಾ ಕಂಪನಿಗಳು ಸಹ ಬಿಮಾ ಕವಚ ಯೋಜನೆ, ಗ್ರಾಮೀಣ ಜೀವನ ರಕ್ಷಾ ಯೋಜನೆ, ಭಾಗ್ಯ ಲಕ್ಷ್ಮಿಯಂತಹ ಅನೇಕ ನವೀನ ಸೂಕ್ಷ್ಮ ವಿಮಾ ಆರೋಗ್ಯ ಉತ್ಪನ್ನಗಳನ್ನು ಹೊರತಂದಿವೆ - ಸಂಪೂರ್ಣ ಪಟ್ಟಿಯನ್ನು ಐಆರ್ ಡಿಎಐ ವೆಬ್ ಸೈಟ್ ನಲ್ಲಿ ಕಾಣಬಹುದು.

## I. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ

ಸರ್ಕಾರವು ಕೆಲವು ನಿರ್ದಿಷ್ಟ ರಾಜ್ಯಗಳಿಗೆ ಅನ್ವಯಿಸುವ ವಿವಿಧ ಆರೋಗ್ಯ ಯೋಜನೆಗಳನ್ನು ಸಹ ಪ್ರಾರಂಭಿಸಿದೆ. ಇದು ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ ಆರೋಗ್ಯ ವಿಮೆಯ ರಕ್ಷಣೆಯನ್ನು ಒದಗಿಸಲು ವಿಮಾ ಕಂಪನಿಗಳ ಸಹಯೋಗದೊಂದಿಗೆ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ(ಆರ್ ಎಸ್ ಬಿ ವೈ)ಯನ್ನು ಜಾರಿಗೊಳಿಸಿದೆ. ಆದಾಗ್ಯೂ ಆರ್ಎಸ್ ಬಿವೈ ಕೇವಲ ರೂ 30,000 ವಿಮಾ ಮೊತ್ತವನ್ನು ಒದಗಿಸಿದೆ, ಇದನ್ನು ಪ್ರಮುಖ ಶಸ್ತ್ರಚಿಕಿತ್ಸೆಗಳು/ಆಸ್ಪತ್ರೆ ವೆಚ್ಚಗಳನ್ನು ಸರಿದೂಗಿಸಲು ಸಾಕಷ್ಟು ಪರಿಗಣಿಸಲಾಗಿಲ್ಲ.

## J. ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ

ಆರ್ ಎಸ್ ಬಿ ವೈ ಯ ನ್ಯೂನತೆಗಳನ್ನು ಪರಿಹರಿಸಲು 2017 ರ ರಾಷ್ಟ್ರೀಯ ಆರೋಗ್ಯ ಪಾಲಿಸಿಯ ಶಿಫಾರಸ್ಸಿನಂತೆ, ಭಾರತ ಸರ್ಕಾರವು 2017 ರಲ್ಲಿ ಜಾಗತಿಕ ಆರೋಗ್ಯ ಕವರೇಜ್(ಯುನಿವರ್ಸಲ್ ಹೆಲ್ತ್ ಕವರೇಜ್) (ಯುಎಚ್ ಸಿ) ನ ದೃಷ್ಟಿಕೋನವನ್ನು ಸಾಧಿಸುವ ಪ್ರಮುಖ ಯೋಜನೆಯಾದ 'ಆಯುಷ್ಮಾನ್

ಭಾರತ್ ಯೋಜನೆ'ಯನ್ನು ಪ್ರಾರಂಭಿಸಿತು. ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ(ಪಿಎಮ್ ಜೆಎವೈ)ಯೆಂದೂ ಕರೆಯಲ್ಪಡುವ ಆಯುಷ್ಮಾನ್ ಭಾರತ್ ರೂ 5,00,000 ವಿಮಾ ಮೊತ್ತದೊಂದಿಗೆ ಬಂದಿತು.

ಇದು ಆಗಿನ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ (ಆರ್ ಎಸ್ ಬಿವೈ) ಯನ್ನು ಒಳಪಡಿಸಿತು. ಪಿಎಮ್-ಜೆಎವೈ ಸಂಪೂರ್ಣವಾಗಿ ಸರ್ಕಾರದಿಂದ ಹಣವನ್ನು ಪಡೆಯುತ್ತದೆ ಮತ್ತು ಅನುಷ್ಠಾನದ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಂಚಿಕೊಳ್ಳಲಾಗುತ್ತದೆ.

## K. ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ

ಇತ್ತೀಚೆಗೆ ಘೋಷಿಸಲಾದ ಪಿಎಮ್ ಎಸ್ ಬಿವೈ ಯ ವೈಶಿಷ್ಟ್ಯಗಳು ವೈಯಕ್ತಿಕ ಅಪಘಾತ ಸಾವು ಮತ್ತು ಅಂಗವೈಕಲ್ಯ ರಕ್ಷಣೆಯನ್ನು ಒಳಗೊಂಡಿವೆ:

**ಕವರೇಜ್ ವ್ಯಾಪ್ತಿ:** ಭಾಗವಹಿಸುವ ಬ್ಯಾಂಕ್ ಗಳಲ್ಲಿ 18 ರಿಂದ 70 ವರ್ಷ ವಯಸ್ಸಿನ ಎಲ್ಲ ಉಳಿತಾಯ ಬ್ಯಾಂಕ್ ಖಾತೆದಾರರು ಕೇವಲ ಒಂದು ಉಳಿತಾಯ ಬ್ಯಾಂಕ್ ಖಾತೆಯ ಮೂಲಕ ಸೇರಲು ಅರ್ಹರಾಗಿರುತ್ತಾರೆ ಮತ್ತು ಅವರು ಒಂದಕ್ಕಿಂತ ಹೆಚ್ಚು ಬ್ಯಾಂಕ್ ಗಳಲ್ಲಿ ನೋಂದಾಯಿಸಿದರೆ, ಅವರು ಯಾವುದೇ ಹೆಚ್ಚುವರಿ ಪ್ರಯೋಜನವನ್ನು ಪಡೆಯುವುದಿಲ್ಲ ಮತ್ತು ಪಾವತಿಸಿದ ಹೆಚ್ಚುವರಿ ಕಂತನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಬ್ಯಾಂಕ್ ಖಾತೆಗೆ ಆಧಾರ್ ಪ್ರಾಥಮಿಕ ಕೆವೈಸಿ ಆಗಿರುತ್ತದೆ.

**ದಾಖಲಾತಿ ವಿಧಾನ/ ಅವಧಿ:** ಜೂನ್ **1** ರಿಂದ ಮೇ **31** ರವರೆಗಿನ ಒಂದು ವರ್ಷದ ಅವಧಿಗೆ ಕವರ್ ಇರುತ್ತದೆ, ಇದಕ್ಕಾಗಿ ನಿಗದಿತ ನಮೂನೆಗಳಲ್ಲಿ ಗೊತ್ತುಪಡಿಸಿದ ಉಳಿತಾಯ ಬ್ಯಾಂಕ್ ಖಾತೆಯಿಂದ ಸ್ವಯಂ-ಡೆಬಿಟ್ ಮೂಲಕ ಸೇರಲು/ಪಾವತಿ ಮಾಡುವ ಆಯ್ಕೆಯನ್ನು ಪ್ರತಿ ವರ್ಷ ಮೇ **31** ರೊಳಗೆ ನೀಡಬೇಕಾಗುತ್ತದೆ.

ನಿರ್ದಿಷ್ಟ ನಿಯಮಗಳಿಗೆ ಒಳಪಟ್ಟು ಪೂರ್ಣ ವಾರ್ಷಿಕ ಕಂತು ಪಾವತಿಯ ನಂತರ ಸೇರಿಕೊಳ್ಳುವುದು ಸಾಧ್ಯವಾಗಬಹುದು. ಯಾವುದೇ ಹಂತದಲ್ಲಿ ಯೋಜನೆಯಿಂದ ನಿರ್ಗಮಿಸುವ ವ್ಯಕ್ತಿಗಳು ಮೇಲಿನ ವಿಧಾನದ ಮೂಲಕ ಮುಂದಿನ ವರ್ಷಗಳಲ್ಲಿ ಯೋಜನೆಗೆ ಪುನಃ ಸೇರಿಕೊಳ್ಳಬಹುದು.

ವಿಮೆಯಡಿಯಲ್ಲಿಯ ಪ್ರಯೋಜನಗಳು ಕೆಳಕಂಡಂತಿವೆ:

| ಪ್ರಯೋಜನಗಳ ಕೋಷ್ಟಕ | ವಿಮಾಮೊತ್ತ |
|---|---|
| ಸಾವು | ರೂ. **2** ಲಕ್ಷ |
| ಎರಡೂ ಕಣ್ಣುಗಳ ಸಂಪೂರ್ಣ ಮತ್ತು ಸರಿಪಡಿಸಲಾಗದ ನಷ್ಟ ಅಥವಾ ಎರಡೂ ಕೈಗಳು ಅಥವಾ ಕಾಲುಗಳ ಬಳಕೆಯಲ್ಲಿಯ ನಷ್ಟ ಅಥವಾ ಒಂದು ಕಣ್ಣಿನ ದೃಷ್ಟಿ ನಷ್ಟ ಮತ್ತು ಒಂದು ಕೈ ಅಥವಾ ಒಂದು ಕಾಲಿನ ಬಳಕೆಯ ನಷ್ಟ | ರೂ. **2** ಲಕ್ಷ |
| ಒಂದು ಕಣ್ಣಿನ ದೃಷ್ಟಿಯ ಸಂಪೂರ್ಣ ಮತ್ತು ಸರಿಪಡಿಸಲಾಗದ ನಷ್ಟ ಅಥವಾ ಒಂದು ಕೈ ಅಥವಾ ಕಾಲಿನ ಬಳಕೆಯ ನಷ್ಟ | ರೂ. 1 ಲಕ್ಷ |

ಸೇರ್ಪಡೆ ಮತ್ತು ನಾಮನಿರ್ದೇಶನದ ಸೌಲಭ್ಯವು ಎಸ್‌ಎಮ್‌ಎಸ್, ಇಮೇಲ್ ಅಥವಾ ವೈಯಕ್ತಿಕ ಭೇಟಿಯ ಮೂಲಕ ಲಭ್ಯವಿದೆ.

**ಕಂತು:** ಪ್ರತಿ ಸದಸ್ಯರಿಗೆ ರೂ. 12/-. ವಾರ್ಷಿಕ ಕಂತನ್ನು ಖಾತೆದಾರರ ಉಳಿತಾಯ ಬ್ಯಾಂಕ್ ಖಾತೆಯಿಂದ 'ಆಟೋ ಡೆಬಿಟ್' ಸೌಲಭ್ಯದ ಮೂಲಕ ಕಡಿತಗೊಳಿಸಲಾಗುತ್ತದೆ

**ರಕ್ಷಣೆಯ ಮುಕ್ತಾಯ: ಸದಸ್ಯರ ಅಪಘಾತದ ಕವರ್ ಈ ಕೆಳಗಿನ ಸಂದರ್ಭಗಳಲ್ಲಿ ಮುಕ್ತಾಯಗೊಳ್ಳುತ್ತದೆ:**

1. ಸದಸ್ಯರಿಗೆ **70** ವರ್ಷ ವಯಸ್ಸಾದ ಮೇಲೆ (ಹತ್ತಿರದ ಜನ್ಮ ದಿನದ ವಯಸ್ಸು) ಅಥವಾ
2. ಬ್ಯಾಂಕಿನ ಖಾತೆಯನ್ನು ಮುಚ್ಚುವುದು ಅಥವಾ ವಿಮೆಯನ್ನು ಜಾರಿಯಲ್ಲಿಡಲು ಹಣದ ಕೊರತೆ ಅಥವಾ

ನಿಗದಿತ ದಿನಾಂಕದಂದು ಖಾತೆಯಲ್ಲಿ ಸಾಕಷ್ಟು ಬಾಕಿ ಇಲ್ಲದಿರುವುದು ಅಥವಾ ಆಡಳಿತಾತ್ಮಕ ಸಮಸ್ಯೆಗಳಂತಹ ಯಾವುದೇ ತಾಂತ್ರಿಕ ಕಾರಣಗಳಿಂದ ವಿಮಾ ರಕ್ಷಣೆಯನ್ನು ನಿಲ್ಲಿಸಲಾಗಿದ್ದರೆ, ಅದನ್ನು ವಿಧಿಸಬಹುದಾದ ಷರತ್ತುಗಳಿಗೆ ಒಳಪಟ್ಟು ಪೂರ್ಣ ವಾರ್ಷಿಕ ಕಂತಿನ ಸ್ವೀಕೃತಿಯ ಮೇಲೆ ಮರುಸ್ಥಾಪಿಸಬಹುದು.

## L. ವೈಯಕ್ತಿಕ ಅಪಘಾತ ಮತ್ತು ಅಂಗವಿಕಲತೆಯ ಕವರ್

ಅನಿರೀಕ್ಷಿತ ಅಪಘಾತದ ಸಂದರ್ಭದಲ್ಲಿ ಉಂಟಾದ ಸಾವು ಮತ್ತು ಅಂಗವಿಕಲತೆಗೆ ವೈಯಕ್ತಿಕ ಅಪಘಾತ(ಪಿಎ)ದ ಕವರ್ ಪರಿಹಾರವನ್ನು ಒದಗಿಸುತ್ತದ..

ಒಂದು ಪಿ ಎ ಪಾಲಿಸಿಯಲ್ಲಿ,

a) ಮರಣದ ಲಾಭವು ವಿಮಾ ಮೊತ್ತದ **100%** ಪಾವತಿಯಾಗುತ್ತದೆ,

b) ಅಂಗವಿಕಲತೆಯ ಸಂದರ್ಭದಲ್ಲಿ ಪರಿಹಾರವು ಶಾಶ್ವತ ಅಂಗವೈಕಲ್ಯ ಉಂಟಾದಾಗ ವಿಮಾ ಮೊತ್ತದ ನಿಗದಿತ ಶೇಕಡಾವಾರು ಮೊತ್ತದಿಂದ ಬದಲಾಗುತ್ತದೆ

c) ತಾತ್ಕಾಲಿಕ ಅಂಗವೈಕಲ್ಯಕ್ಕೆ ಸಾಪ್ತಾಹಿಕ ಪರಿಹಾರ.

ಸಾಪ್ತಾಹಿಕ ಪರಿಹಾರವೆಂದರೆ, ಸಂಖ್ಯೆಯ ಪರಿಭಾಷೆಯಲ್ಲಿ ವಾರಗಳ ಗರಿಷ್ಠ ಮಿತಿಗೆ ಒಳಪಟ್ಟು ಅಂಗವಿಕಲತೆಯ ವಾರಕ್ಕೆ ಪರಿಹಾರವನ್ನು ಪಾವತಿಸಬೇಕಾದ ನಿಗದಿತ ಮೊತ್ತದ ಪಾವತಿ ಎಂದರ್ಥ.

### 1. ಕವರ್ ಮಾಡಲ್ಪಟ್ಟ ಅಂಗವೈಕಲ್ಯದ ವಿಧಗಳು

**ಸಾಮಾನ್ಯವಾಗಿ ಪಾಲಿಸಿಯಡಿಯಲ್ಲಿ ಒಳಗೊಂಡಿರುವ ಅಂಗವೈಕಲ್ಯದ ವಿಧಗಳು ಈ ಕೆಳಗಿನಂತಿವೆ:**

i. **ಶಾಶ್ವತವಾದ ಒಟ್ಟು ಅಂಗವೈಕಲ್ಯ (ಪಿಟಿಡಿ):** ಜೀವಮಾನ ಪೂರ್ತಿಯಾಗಿ ಸಂಪೂರ್ಣ ನಿಷ್ಕ್ರಿಯಗೊಳ್ಳುವುದು ಎಂದರ್ಥ. ಎಲ್ಲ ನಾಲ್ಕು ಅಂಗಗಳ ಪಾರ್ಶ್ವವಾಯು, ಕೋಮಾ ಸ್ಥಿತಿ, ಎರಡೂ

ಕಣ್ಣುಗಳು / ಎರಡೂ ಕೈಗಳು / ಎರಡೂ ಅಂಗಗಳು ಅಥವಾ ಒಂದು ಕೈ ಮತ್ತು ಒಂದು ಕಣ್ಣು ಅಥವಾ ಒಂದು ಕಣ್ಣು ಮತ್ತು ಒಂದು ಕಾಲು ಅಥವಾ ಒಂದು ಕೈ ಮತ್ತು ಒಂದು ಕಾಲು ನಷ್ಟವಾಗುವುದು

ii. **ಶಾಶ್ವತವಾದ ಭಾಗಶಃ ಅಸಾಮರ್ಥ್ಯ (ಪಿಪಿಡಿ):** ಜೀವಮಾನ ಪೂರ್ತಿಯಾಗಿ ಭಾಗಶಃ ನಿಷ್ಕ್ರಿಯಗೊಳ್ಳುವುದು ಎಂದರ್ಥ. ಬೆರಳುಗಳು, ಕಾಲ್ಬೆರಳುಗಳು, ಫಲಂಗಸ್ ಇತ್ಯಾದಿಗಳ ನಷ್ಟ.

iii. **ತಾತ್ಕಾಲಿಕವಾದ ಸಂಪೂರ್ಣ ಅಂಗವೈಕಲ್ಯ (ಟಿಟಿಡಿ):** ತಾತ್ಕಾಲಿಕ ಅವಧಿಯವರೆಗೆ ಸಂಪೂರ್ಣವಾಗಿ ನಿಷ್ಕ್ರಿಯಗೊಳ್ಳುವುದು ಎಂದರ್ಥ. ಈ ಕವರ್ ವಿಭಾಗವನ್ನು ಅಂಗವಿಕಲತೆಯ ಅವಧಿಯಲ್ಲಿ ಆದಾಯದ ನಷ್ಟವನ್ನು ಸರಿದೂಗಿಸಲಿಕ್ಕಾಗಿ ಉದ್ದೇಶಿಸಲಾಗಿದೆ.

ಗ್ರಾಹಕರಿಗೆ ಕೇವಲ ಮರಣದ ಕವರ್ ಅಥವಾ ಸಾವಿನ ಜೊತೆಗೆ ಶಾಶ್ವತ ಅಂಗವೈಕಲ್ಯ ಅಥವಾ ಮರಣ ಮತ್ತು ಶಾಶ್ವತ ಅಂಗವೈಕಲ್ಯ ಮತ್ತು ಮರಣ ಮತ್ತು ಶಾಶ್ವತ ಅಂಗವೈಕಲ್ಯ ಮತ್ತು ತಾತ್ಕಾಲಿಕ ಒಟ್ಟು ಅಂಗವೈಕಲ್ಯವನ್ನು ಸಹ ಆಯ್ಕೆ ಮಾಡುವ ಆಯ್ಕೆ ಇರುತ್ತದೆ.

**2. ವಿಮಾ ಮೊತ್ತ**

ಪಿಎ ಪಾಲಿಸಿಗಳಿಗೆ ವಿಮಾ ಮೊತ್ತವನ್ನು ಸಾಮಾನ್ಯವಾಗಿ ಒಟ್ಟು ಮಾಸಿಕ ಆದಾಯದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಸಾಮಾನ್ಯವಾಗಿ, ಇದು ಒಟ್ಟು ಮಾಸಿಕ ಆದಾಯದ 60 ಪಟ್ಟು ಹೆಚ್ಚಾಗಿರುತ್ತದೆ. ಆದಾಗ್ಯೂ, ಕೆಲವು ವಿಮಾಗಾರರು ಆದಾಯದ ಮಟ್ಟವನ್ನು ಪರಿಗಣಿಸದೆ ಸ್ಥಿರ ಯೋಜನೆ ಆಧಾರದ ಮೇಲೆ ಪಾಲಿಸಿಗಳನ್ನು ನೀಡುತ್ತಾರೆ. ಇಂತಹ ಪಾಲಿಸಿಗಳಲ್ಲಿ ಕವರ್ ನ ಪ್ರತಿಯೊಂದು ವಿಭಾಗಕ್ಕೆ ವಿಮಾ ಮೊತ್ತವು ಆಯ್ಕೆಮಾಡಿದ ಯೋಜನೆಗನುಗುಣವಾಗಿ ಬದಲಾಗುತ್ತದೆ.

**3. ವೈಯಕ್ತಿಕ ಅಪಘಾತ ವಿಮೆ – ಒಂದು ಪ್ರಯೋಜನದ ಯೋಜನೆ**

ಪ್ರಯೋಜನದ ಯೋಜನೆಯಾಗಿರುವುದರಿಂದ, ಪಿಎ ಪಾಲಿಸಿಗಳು ಕ್ಲೇಮ್ ಸಮಯದಲ್ಲಿ 'ಕೊಡುಗೆ'ಯ ತತ್ವಕ್ಕೆ ಒಳಪಟ್ಟಿರುವುದಿಲ್ಲ. ಹೀಗಾಗಿ, ಒಬ್ಬ ವ್ಯಕ್ತಿಯು ವಿವಿಧ ವಿಮಾಗಾರರೊಂದಿಗೆ ಒಂದಕ್ಕಿಂತ ಹೆಚ್ಚು ಪಾಲಿಸಿಗಳನ್ನು ಹೊಂದಿದ್ದರೆ, ಎಲ್ಲಾ ಪಾಲಿಸಿಗಳ ಅಡಿಯಲ್ಲಿ ಕ್ಲೇಮ್ ಗಳನ್ನು ಪಾವತಿಸಲಾಗುತ್ತದೆ.

**4. ಕವರ್ ನ ವ್ಯಾಪ್ತಿ**

ವೈದ್ಯಕೀಯ ವೆಚ್ಚಗಳನ್ನು ಅಂದರೆ ಅಪಘಾತದ ನಂತರ ಉಂಟಾದ ಆಸ್ಪತ್ರೆ/ ವೈದ್ಯಕೀಯ ವೆಚ್ಚಗಳನ್ನು ಸರಿದೂಗಿಸಿ ಮರುಪಾವತಿ ಮಾಡಲು ಹೆಚ್ಚಾಗಿ ಈ ಪಾಲಿಸಿಗಳನ್ನು ವಿಸ್ತರಿಸಲಾಗುತ್ತದೆ.

**5. ಮೌಲ್ಯವರ್ಧಿತ ಪ್ರಯೋಜನೆಗಳು**

ವೈಯಕ್ತಿಕ ಅಪಘಾತದ ಜೊತೆಗೆ, ಅನೇಕ ವಿಮಾಗಾರರು ಅಪಘಾತದ ಕಾರಣದಿಂದ ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿಯ ಆಸ್ಪತ್ರೆ ನಗದು, ಮರಣ ನಂತರದ ಅವಶೇಷಗಳ ಸಾಗಣೆಯ ವೆಚ್ಚ, ನಿಗದಿತ ಮೊತ್ತಕ್ಕೆ

ಶಿಕ್ಷಣದ ಪ್ರಯೋಜನ ಮತ್ತು ನಿಜವಾದ ಅಥವಾ ನಿಗದಿತ ಮಿತಿಯ ಆಧಾರದ ಮೇಲೆ ಆಂಬ್ಯುಲೆನ್ಸ್ ಶುಲ್ಕಗಳಂತಹ ಮೌಲ್ಯವರ್ಧಿತ ಪ್ರಯೋಜನಗಳನ್ನು ಸಹ ನೀಡುತ್ತಾರೆ.

**6. ಹೊರತುಗಳು:**

ಪಾಲಿಸಿಯ ಪ್ರಾರಂಭದ ಮೊದಲೇ ಇರುವ ಅಂಗವೈಕಲ್ಯದಿಂದ ಉಂಟಾದ ಅಪಘಾತಗಳು, ಮಾನಸಿಕ ಅಸ್ವಸ್ಥತೆಗಳಿಂದ ಅಥವಾ ಇತರ ಕಾಯಿಲೆಯಿಂದ ಉಂಟಾದ ಸಾವು ಅಥವಾ ಅಂಗವೈಕಲ್ಯ ಅಥವಾ ಯುದ್ಧ, ಆಕ್ರಮಣ, ಅಪರಾಧ ನರಹತ್ಯೆ ಅಥವಾ ಕೊಲೆ, ಉದ್ದೇಶಪೂರ್ವಕ ಸ್ವಯಂ-ಗಾಯ, ಆತ್ಮಹತ್ಯೆ, ಮಾದಕ ಔಷಧಗಳು/ಆಲ್ಕೋಹಾಲ್ ಸೇವನೆ, ವಾಯುಯಾನ ಅಥವಾ ಬಲೂನಿಂಗ್‌ನಂತಹ ಹೆಚ್ಚು ಅಪಾಯಕಾರಿ ಚಟುವಟಿಕೆಯಲ್ಲಿ ತೊಡಗಿರುವಾಗ ಉಂಟಾದ ಗಾಯಗಳು ವೈಯಕ್ತಿಕ ಅಪಘಾತ ವಿಮೆಯಡಿಯಲ್ಲಿ ಸಾಮಾನ್ಯವಾದ ಹೊರತುಗಳಾಗಿವೆ. ಇದು ಒಂದು ಸೂಚಕ ಪಟ್ಟಿಯಾಗಿದ್ದು ಮತ್ತು ಕಂಪನಿಯಿಂದ ಕಂಪನಿಗೆ ಬದಲಾಗಬಹುದು.

ಪಿಎ ಪಾಲಿಸಿಗಳನ್ನು ವ್ಯಕ್ತಿಗಳು, ಕುಟುಂಬ ಮತ್ತು ಗುಂಪುಗಳಿಗೆ ಸಹ ನೀಡಲಾಗುತ್ತದೆ.

**ಗುಂಪು ವೈಯಕ್ತಿಕ ಅಪಘಾತ ಪಾಲಿಸಿಗಳು**

**ಗುಂಪು ವೈಯಕ್ತಿಕ ಅಪಘಾತ ಪಾಲಿಸಿಗಳು ಸಾಮಾನ್ಯವಾಗಿ ವಾರ್ಷಿಕ ಪಾಲಿಸಿಗಳಾಗಿದ್ದು, ವಾರ್ಷಿಕೋತ್ಸವದಂದು ನವೀಕರಣಗಳನ್ನು ಅನುಮತಿಸಲಾಗುತ್ತದೆ. ಆದಾಗ್ಯೂ, ನಿರ್ದಿಷ್ಟ ಘಟನೆಗಳಿಗೆ ಕವರೇಜ್ ಒದಗಿಸಲು ಜೀವೇತರ ಮತ್ತು ಸ್ವತಂತ್ರ ಆರೋಗ್ಯ ವಿಮಾಗಾರರು ಗುಂಪು ವೈಯಕ್ತಿಕ ಅಪಘಾತ ಉತ್ಪನ್ನಗಳನ್ನು ಒಂದು ವರ್ಷಕ್ಕಿಂತ ಕಡಿಮೆಯಾದ ಅವಧಿಯೊಂದಿಗೆ ನೀಡಬಹುದು.**

**ಮುರಿದ ಮೂಳೆ ಪಾಲಿಸಿ ಮತ್ತು ದೈನಂದಿನ ಚಟುವಟಿಕೆಗಳ ನಷ್ಟಕ್ಕೆ ಪರಿಹಾರ**

ಇದು ವಿಶೇಷವಾದ ಪಿಎ ಪಾಲಿಸಿಯಾಗಿದೆ. ಪಟ್ಟಿ ಮಾಡಲಾದ ಮೂಳೆಮುರಿತಗಳ ವಿರುದ್ಧ ರಕ್ಷಣೆಯನ್ನು ಒದಗಿಸಲು ಈ ಪಾಲಿಸಿಯನ್ನು ವಿನ್ಯಾಸಗೊಳಿಸಲಾಗಿದೆ. ಪ್ರತಿ ಮೂಳೆ ಮುರಿತದ ವಿರುದ್ಧ ನಮೂದಿಸಲಾದ ವಿಮಾ ಮೊತ್ತದ ಸ್ಥಿರ ಪ್ರಯೋಜನ ಅಥವಾ ಶೇಕಡಾವಾರು ಮೊತ್ತವನ್ನು ಕ್ಲೇಮ್ ಸಮಯದಲ್ಲಿ ಪಾವತಿಸಲಾಗುತ್ತದೆ. ಪ್ರಯೋಜನದ ಪ್ರಮಾಣವು ಕವರ್ ಮಾಡಿದ ಮೂಳೆಯ ಪ್ರಕಾರ ಮತ್ತು ಮುರಿತದ ಸ್ವರೂಪವನ್ನು ಅವಲಂಬಿಸಿರುತ್ತದೆ.

## M. ಸಾಗರೋತ್ತರ ಪ್ರಯಾಣ ವಿಮೆ

**ಪಾಲಿಸಿಯ ಅವಶ್ಯಕತೆ:** ವ್ಯಾಪಾರ, ರಜಾದಿನಗಳು ಅಥವಾ ಅಧ್ಯಯನಕ್ಕಾಗಿ ಭಾರತದ ಹೊರಗೆ ಪ್ರಯಾಣಿಸುವಾಗ ಆಕಸ್ಮಿಕ ಗಾಯ ಅಥವಾ ಆಸ್ಪತ್ರೆಗೆ ದಾಖಲಾಗುವ ವೆಚ್ಚವನ್ನು ಕವರ್ ಮಾಡಲು. ವೈದ್ಯಕೀಯ ಆರೈಕೆಯ ವೆಚ್ಚ, ವಿಶೇಷವಾಗಿ ಯುಎಸ್‌ಎ ಮತ್ತು ಕೆನಡಾದಂತಹ ದೇಶಗಳಲ್ಲಿ ತುಂಬಾ ಹೆಚ್ಚಾಗಿರುತ್ತದೆ ಮತ್ತು ಹಣಕಾಸಿನ ಗಂಭೀರ ಸಮಸ್ಯೆಗಳನ್ನು ಉಂಟುಮಾಡಬಹುದು.

**ಕವರೇಜ್ ನ ವ್ಯಾಪ್ತಿ**

ಪ್ರಾಥಮಿಕವಾಗಿ ಇಂತಹ ಪಾಲಿಸಿಗಳು ಅಪಘಾತ ಮತ್ತು ಅನಾರೋಗ್ಯದ ಪ್ರಯೋಜನಗಳಿಗಾಗಿರುತ್ತವೆ, ಆದರೆ ಮಾರುಕಟ್ಟೆಯ ಪ್ಯಾಕೇಜ್ ನಲ್ಲಿ ಲಭ್ಯವಿರುವ ಹೆಚ್ಚಿನ ಉತ್ಪನ್ನಗಳು ಒಂದೇ ಉತ್ಪನ್ನದೊಳಗೆ ಕವರ್ ಗಳ ಹೆಚ್ಚಿನ ಶ್ರೇಣಿಯನ್ನು ಹೊಂದಿರುತ್ತವೆ.

**ನೀಡಲಾಗುವ ಸಾಮಾನ್ಯ ಕವರ್‌ಗಳು:**

a) **ವೈದ್ಯಕೀಯ ಮತ್ತು ಅನಾರೋಗ್ಯ ವಿಭಾಗ:**
   i. **ಅಪಘಾತದಿಂದ ಮೃತ್ಯು/ ಅಂಗವೈಕಲ್ಯ**
   ii. **ಅನಾರೋಗ್ಯ/ಅಪಘಾತದಿಂದಾಗಿ ವೈದ್ಯಕೀಯ ವೆಚ್ಚಗಳು**

b) **ವಾಪಸಾತಿ ಮತ್ತು ಸ್ಥಳಾಂತರಿಸುವಿಕೆ**

c) **ವೈಯಕ್ತಿಕ ಅಪಘಾತದ ಕವರ್**

d) **ವೈಯಕ್ತಿಕ ಬಾಧ್ಯತೆ**

e) **ಇತರ ವೈದ್ಯಕೀಯೇತರ ಕವರ್‌ಗಳು:**
   i. ಪ್ರವಾಸದ ರದ್ದತಿ
   ii. ಪ್ರವಾಸದ ವಿಳಂಬ
   iii. ಪ್ರವಾಸದಲ್ಲಿ ಅಡಚಣೆ
   iv. ತಪ್ಪಿದ ಸಂಪರ್ಕ(ಕನೆಕ್ಟೆಡ್ ಫ್ಲೈಟ್ಸ್ ಸಂದರಭಗಳಲ್ಲಿ)
   v. ಚೆಕ್ಡ್‌ಇನ್ ಬ್ಯಾಗೇಜ್ ನಲ್ಲಿ ವಿಳಂಬ
   vi. ಚೆಕ್ಡ್‌ಇನ್ ಬ್ಯಾಗೇಜ್ ನಷ್ಟ
   vii. ಪಾಸ್ ಪೋರ್ಟ್ ನಷ್ಟ
   viii. ತುರ್ತು ನಗದು ಮುಂಗಡ
   ix. ಹೈಜಾಕ್ ಭತ್ಯೆ
   x. ಜಾಮೀನು(ಬೇಲ್) ಬಾಂಡ್ ವಿಮೆ
   xi. ಹೈಜಾಕ್ ಕವರ್
   xii. ಪ್ರಾಯೋಜಕರ ರಕ್ಷಣೆ
   xiii. ಸ್ನೇಹಪರ ಭೇಟಿ
   xiv. ವಿದ್ಯಾಭ್ಯಾಸದಲ್ಲಿ ಅಡಚಣೆ
   xv. ಮನೆಯ ದರೋಡೆ

**1. ಯೋಜನೆಗಳ ಪ್ರಕಾರಗಳು**

ವ್ಯಾಪಾರ ಮತ್ತು ರಜಾದಿನದ ಯೋಜನೆಗಳು, ಅಧ್ಯಯನ ಯೋಜನೆಗಳು ಮತ್ತು ಉದ್ಯೋಗ ಯೋಜನೆಗಳು ಜನಪ್ರಿಯ ಪಾಲಿಸಿಗಳಾಗಿವೆ.

2. ಈ ಪಾಲಿಸಿಯನ್ನು ಯಾರು ತೆಗೆದುಕೊಳ್ಳಬಹುದು

ವ್ಯಾಪಾರ, ರಜೆ ಅಥವಾ ಅಧ್ಯಯನಕ್ಕಾಗಿ ವಿದೇಶಕ್ಕೆ ಪ್ರಯಾಣಿಸುವ ಭಾರತೀಯ ನಾಗರಿಕರು ಈ ಪಾಲಿಸಿಯನ್ನು ಪಡೆಯಬಹುದು. ವಿದೇಶದಲ್ಲಿ ಒಪ್ಪಂದದ ಮೇಲೆ ಕಳುಹಿಸಲಾದ ಭಾರತೀಯ ಉದ್ಯೋಗದಾತರ ಉದ್ಯೋಗಿಗಳೂ ಸಹ ಈ ಕವರ್ ಅನ್ನು ಪಡೆಯಬಹುದು..

3. ವಿಮಾಮೊತ್ತ ಮತ್ತು ಕಂತುಗಳು

ಕವರ್ ಅನ್ನು ಯುಎಸ್ ಡಾಲರ್‌ಗಳಲ್ಲಿ ನೀಡಲಾಗುತ್ತದೆ ಮತ್ತು ವೈದ್ಯಕೀಯ ವೆಚ್ಚಗಳು, ಸ್ಥಳಾಂತರಿಸುವಿಕೆ ಮತ್ತು ವಾಪಸಾತಿಯನ್ನು ಒಳಗೊಂಡಿರುವ ವಿಭಾಗಕ್ಕೆ ಸಾಮಾನ್ಯವಾಗಿ ಯುಎಸ್ ಡಿ 100,000 ರಿಂದ ಯುಎಸ್ ಡಿ 500,000 ಗಳವರೆಗೆ ಬದಲಾಗುತ್ತದೆ. ಹೊಣೆಗಾರಿಕೆಯ ಕವರ್ ಅನ್ನು ಹೊರತುಪಡಿಸಿ ಇತರ ವಿಭಾಗಗಳಿಗೆ ವಿಮಾ ಮೊತ್ತವು ಕಡಿಮೆಯಾಗಿದೆ. ಕಂತನ್ನು ಡಾಲರ್ ಗಳಲ್ಲಿ ಪಾವತಿಸಬೇಕಾದ ಉದ್ಯೋಗ ಯೋಜನೆಯ ಸಂದರ್ಭಗಳನ್ನು ಹೊರತುಪಡಿಸಿ ಕಂತುಗಳನ್ನು ಭಾರತೀಯ ರೂಪಾಯಿಗಳಲ್ಲಿ ಪಾವತಿಸಬಹುದು. ಯೋಜನೆಗಳು ಸಾಮಾನ್ಯವಾಗಿ ಎರಡು ವಿಧಗಳಾಗಿರುತ್ತವೆ:

- ✓ ಯುಎಸ್ಎ/ ಕೆನಡಾವನ್ನು ಹೊರತುಪಡಿಸಿ ವಿಶ್ವಾದ್ಯಂತ
- ✓ ಯುಎಸ್ಎ/ ಕೆನಡಾವನ್ನು ಸೇರಿದಂತೆ ವಿಶ್ವಾದ್ಯಂತ

ಕೆಲವು ಉತ್ಪನ್ನಗಳು ದೇಶಗಳ ಗುಂಪಿಗೆ ಕವರ್ ಅನ್ನು ನೀಡುತ್ತವೆ. ಉದಾಹರಣೆಗಳು ಏಷ್ಯನ್ ದೇಶಗಳಿಗೆ ಮಾತ್ರ ಪ್ರಯಾಣ, ಯುರೋಪಿಯನ್ ದೇಶಗಳಿಗೆ ಮಾತ್ರ ಅಥವಾ ನಿರ್ದಿಷ್ಟ ದೇಶಕ್ಕೆ ಮಾತ್ರ ಪ್ರಯಾಣ.

ಕಾರ್ಪೊರೇಟ್ ಫ್ರೀಕ್ವೆಂಟ್ ಫ್ಲೈಯರ್ ಯೋಜನೆಗಳು

ಇದು ವಾರ್ಷಿಕ ಪಾಲಿಸಿಯಾಗಿದ್ದು, ಕಾರ್ಪೊರೇಟ್/ಉದ್ಯೋಗದಾತರು ಮೇಲಿಂದ ಮೇಲೆ ಭಾರತದ ಹೊರಗೆ ಪ್ರವಾಸಗಳನ್ನು ಮಾಡುವ ತಮ್ಮ ಕಾರ್ಯನಿರ್ವಾಹಕರಿಗೆ ವೈಯಕ್ತಿಕ ಪಾಲಿಸಿಗಳನ್ನು ತೆಗೆದುಕೊಳ್ಳುತ್ತಾರೆ. ಒಂದು ವರ್ಷದಲ್ಲಿ ಅನೇಕ ಬಾರಿ ವಿದೇಶಕ್ಕೆ ಪ್ರವಾಸಿಸುವ ವ್ಯಕ್ತಿಗಳು ಸಹ ಈ ಕವರ್ ಅನ್ನು ತೆಗೆದುಕೊಳ್ಳಬಹುದು. ಮುಂಗಡ ಕಂತನ್ನು ಕಂಪನಿಯ ಉದ್ಯೋಗಿಗಳಿಂದ ಒಂದು ವರ್ಷದಲ್ಲಿ ಅಂದಾಜು ಮಾನವ ದಿನಗಳ ಪ್ರಯಾಣದ ಆಧಾರದ ಮೇಲೆ ಪಾವತಿಸಲಾಗುತ್ತದೆ. ಮೇಲಿನ ಪಾಲಿಸಿಗಳನ್ನು ವ್ಯಾಪಾರ ಮತ್ತು ರಜೆಯ ಪ್ರಯಾಣಕ್ಕಾಗಿ ಮಾತ್ರ ನೀಡಲಾಗುತ್ತದೆ. ಸಾಮಾನ್ಯವಾಗಿ ಸಾಗರೋತ್ತರ ವೈದ್ಯಕೀಯ/ಪ್ರಯಾಣ ವಿಮೆಗಳಿಗೆ ಅಸ್ತಿತ್ವದಲ್ಲಿರುವ ರೋಗಗಳನ್ನು ಹೊರಗಿಡಲಾಗುತ್ತದೆ.

## N. ಗುಂಪು ಆರೋಗ್ಯ ಕವರ್

1. ಗುಂಪು ಪಾಲಿಸಿಗಳು

ಅಧ್ಯಾಯದಲ್ಲಿ ಮೊದಲೇ ವಿವರಿಸಿದಂತೆ, ಉದ್ಯೋಗದಾತರು, ಸಂಘ, ಬ್ಯಾಂಕ್ ನ ಕ್ರೆಡಿಟ್ ಕಾರ್ಡ್ ವಿಭಾಗದಂತಹ ಗುಂಪಿನ ಮಾಲೀಕರಿಂದ ಪಾಲಿಸಿಯು ಇಡೀ ಗುಂಪಿನ ವ್ಯಕ್ತಿಗಳನ್ನು ಒಳಗೊಂಡಿರುವ ಗುಂಪು

ಪಾಲಿಸಿಯನ್ನು ತೆಗೆದುಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಈ ಪಾಲಿಸಿಗಳು ಒಂದು ವರ್ಷದ ನವೀಕರಿಸಬಹುದಾದ ಒಪ್ಪಂದಗಳಾಗಿವೆ.

**ಗುಂಪು ಪಾಲಿಸಿಗಳ ವೈಶಿಷ್ಟ್ಯಗಳು - ಆಸ್ಪತ್ರೆಯ ಪ್ರಯೋಜನದ ಕವರ್ ಗಳು.**

1. **ಕವರೇಜ್ ನ ವ್ಯಾಪ್ತಿ**

   ಉದ್ಯೋಗಿಗಳು ಮತ್ತು ಅವಲಂಬಿತ ಸಂಗಾತಿ, ಮಕ್ಕಳು ಮತ್ತು ಪೋಷಕರು/ಅತ್ತೆ ಮಾವ ಸೇರಿದಂತೆ ಅವರ ಕುಟುಂಬಗಳನ್ನು ಒಳಗೊಂಡ ಉದ್ಯೋಗದಾತರು ತೆಗೆದುಕೊಳ್ಳುವ ಪಾಲಿಸಿಯು ಗುಂಪು ಆರೋಗ್ಯ ವಿಮೆಯ ಅತ್ಯಂತ ಸಾಮಾನ್ಯ ರೂಪವಾಗಿದೆ.

2. **ಅವಶ್ಯಕತೆಗನುಸಾರವಾಗಿ ಹೇಳಿ ಮಾಡಿಸಿದ ಕವರ್**

   ಗುಂಪು(ಗ್ರೂಪ್) ಪಾಲಿಸಿಗಳು ಸಾಮಾನ್ಯವಾಗಿ ಗುಂಪಿನ ಅವಶ್ಯಕತೆಗಳಿಗೆ ತಕ್ಕಂತೆ ತಯಾರಿಸಲ್ಪಟ್ಟ ಕವರ್ ಗಳಾಗಿರುತ್ತವೆ. ಹೀಗಾಗಿ, ಗುಂಪು ಪಾಲಿಸಿಗಳಲ್ಲಿ, ಗುಂಪು ಪಾಲಿಸಿಯಡಿಯಲ್ಲಿ ಒಳಗೊಂಡಿರುವ ವೈಯಕ್ತಿಕ ಪಾಲಿಸಿಯ ಹಲವಾರು ಪ್ರಮಾಣಿತ ಹೊರತುಗಳನ್ನು ಕಾಣಬಹುದು.

3. **ಮಾತೃತ್ವದ ಕವರ್**

   ಗುಂಪಿನ ಪಾಲಿಸಿಯಲ್ಲಿಯ ಸಾಮಾನ್ಯ ವಿಸ್ತರಣೆಗಳಲ್ಲಿ ಒಂದು ಮಾತೃತ್ವದ ಕವರ್ ಆಗಿದೆ. ಮಗುವಿನ ಹೆರಿಗೆಗಾಗಿ ಆಸ್ಪತ್ರೆಗೆ ದಾಖಲಾದ ವೆಚ್ಚಗಳಿಗೆ ಮಾತೃತ್ವದ ಕವರ್ ಪರಿಹಾರವನ್ನೊದಗಿಸುತ್ತದೆ ಮತ್ತು ಸಿಝೇರಿಯನ್ ಹೆರಿಗೆಯನ್ನು ಒಳಗೊಂಡಿರುತ್ತದೆ. ಈ ಕವರ್ ಅನ್ನು ಸಾಮಾನ್ಯವಾಗಿ ಕುಟುಂಬದ ಒಟ್ಟಾರೆ ವಿಮಾ ಮೊತ್ತದೊಳಗೆ ನಿರ್ದಿಷ್ಟ ಮೊತ್ತಕ್ಕೆ ನಿರ್ಬಂಧಿಸಲಾಗಿದೆ.

4. **ಮಕ್ಕಳ ಕವರ್**

   ಮೊದಲ ದಿನದಿಂದ ಶಿಶುಗಳಿಗೆ ಕವರೇಜ್ ಅನ್ನು ನೀಡಲಾಗುತ್ತದೆ, ಕೆಲವೊಮ್ಮೆ ಮಾತೃತ್ವ ಕವರ್ ನ ಮಿತಿಗೆ ನಿರ್ಬಂಧಿಸಲಾಗುತ್ತದೆ ಮತ್ತು ಕೆಲವೊಮ್ಮೆ ಕುಟುಂಬದ ಸಂಪೂರ್ಣ ವಿಮಾ ಮೊತ್ತವನ್ನು ಸೇರಿಸಿ ವಿಸ್ತರಿಸಲಾಗುತ್ತದೆ.

5. **ಮೊದಲೇ ಅಸ್ತಿತ್ವದಲ್ಲಿರುವ ರೋಗಗಳು ಕವರ್ ಮಾಡಲ್ಪಟ್ಟಿವೆ, ಕಾಯುವ ಅವಧಿಯನ್ನು ಬಿಟ್ಟುಬಿಡಲಾಗಿದೆ**

   ಪೂರ್ವ ಅಸ್ತಿತ್ವದಲ್ಲಿರುವ ರೋಗದ ಹೊರತು, ಮೂವತ್ತು ದಿನಗಳ ಕಾಯುವ ಅವಧಿ, ಎರಡು ವರ್ಷಗಳ ಕಾಯುವ ಅವಧಿ, ಜನ್ಮಜಾತ ರೋಗಗಳಂತಹ ಹಲವಾರು ಸಾಮಾನ್ಯ ಹೊರತುಗಳನ್ನು ಹೇಳಿಮಾಡಿಸಿದ ಗುಂಪು ಪಾಲಿಸಿಗಳಲ್ಲಿ ಬಿಟ್ಟುಬಿಡಬಹುದು.

**6. ಕಂತು ಲೆಕ್ಕಾಚಾರ**

ಗುಂಪು ಪಾಲಿಸಿಗಾಗಿ ವಿಧಿಸಲಾಗುವ ಕಂತು ಗುಂಪಿನ ಸದಸ್ಯರ ವಯಸ್ಸಿನ ಪ್ರೊಫೈಲ್, ಗುಂಪಿನ ಗಾತ್ರ ಮತ್ತು ಮುಖ್ಯವಾಗಿ ಗುಂಪಿನ ಕ್ಲೇಮ್ ಗಳ ಅನುಭವವನ್ನು ಆಧರಿಸಿರುತ್ತದೆ.

**7. ಉದ್ಯೋಗದಾತ- ಉದ್ಯೋಗಿಗಳಲ್ಲದ ಗುಂಪುಗಳು**

ಭಾರತದಲ್ಲಿ, ನಿಯಂತ್ರಕ ನಿಬಂಧನೆಗಳು ಪ್ರಾಥಮಿಕವಾಗಿ ಗುಂಪು ವಿಮಾ ಕವರ್ ಅನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ ರಚನೆಯಾದ ಗುಂಪುಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸುತ್ತವೆ. ಗುಂಪಿನ ಪಾಲಿಸಿಗಳನ್ನು ಉದ್ಯೋಗದಾತರನ್ನು ಹೊರತುಪಡಿಸಿ ಇತರರಿಗೆ ನೀಡಿದಾಗ, ಅದರ ಸದಸ್ಯರಿಗೆ ಗುಂಪಿನ ಮಾಲೀಕರ ಸಂಬಂಧವನ್ನು ನಿರ್ಧರಿಸುವುದು ಮುಖ್ಯವಾಗಿದೆ.

| ಉದಾಹರಣೆ |
|---|

ಒಂದು ಬ್ಯಾಂಕ್ ತನ್ನ ಉಳಿತಾಯದ ಬ್ಯಾಂಕ್ ಖಾತೆದಾರರಿಗೆ ಅಥವಾ ಕ್ರೆಡಿಟ್ ಕಾರ್ಡ್ ಹೊಂದಿರುವವರಿಗೆ ಪಾಲಿಸಿಯನ್ನು ತೆಗೆದುಕೊಳ್ಳುವುದರಿಂದ ಏಕರೂಪದ ಗುಂಪನ್ನು ರೂಪಿಸುತ್ತದೆ, ಆ ಮೂಲಕ ದೊಡ್ಡ ಗುಂಪು ತಮ್ಮ ಅವಶ್ಯಕತೆಗಳಿಗೆ ಸರಿಹೊಂದುವಂತೆ ವಿನ್ಯಾಸಗೊಳಿಸಲಾದ ಪಾಲಿಸಿಯಿಂದ ಲಾಭ ಪಡೆಯಲು ಸಾಧ್ಯವಾಗುತ್ತದೆ.

**8. ಬೆಲೆ ನಿರ್ಧಾರ**

ಗುಂಪಿನ ಪಾಲಿಸಿಗಳಲ್ಲಿ, ಗುಂಪಿನ ಗಾತ್ರ ಮತ್ತು ಗುಂಪಿನ ಕ್ಲೇಮ್ ಗಳ ಅನುಭವದ ಆಧಾರದ ಮೇಲೆ ಕಂತಿನ ಮೇಲೆ ರಿಯಾಯಿತಿಗೆ ಅವಕಾಶವಿರುತ್ತದೆ.

2. ಕಾರ್ಪೊರೇಟ್ ಬಫರ್ ಅಥವಾ ಫ್ಲೋಟರ್ ಕವರ್

ಹೆಚ್ಚಿನ ಗುಂಪು ಪಾಲಿಸಿಗಳಲ್ಲಿ, ಪ್ರತಿ ಕುಟುಂಬವು ರೂ.1 ಲಕ್ಷದಿಂದ 5 ಲಕ್ಷಗಳವರೆಗೆ ಬದಲಾಗುವ ಮತ್ತು ಕೆಲವೊಮ್ಮೆ ಹೆಚ್ಚಾಗಿರುವ ಒಂದು ನಿರ್ದಿಷ್ಟ ಮೊತ್ತದ ವಿಮಾ ಮೊತ್ತಕ್ಕೆ ಕವರ್ ಮಾಡಲ್ಪಟ್ಟಿರುತ್ತದೆ. ವಿಶೇಷವಾಗಿ ಕುಟುಂಬದ ಸದಸ್ಯರ ಗಂಭೀರ ಅನಾರೋಗ್ಯದ ಸಂದರ್ಭದಲ್ಲಿ ಕುಟುಂಬದ ವಿಮಾ ಮೊತ್ತವು ಖಾಲಿಯಾಗುವ ಸಂದರ್ಭಗಳು ಉದ್ಭವಿಸುತ್ತವೆ. ಅಂತಹ ಸಂದರ್ಭಗಳಲ್ಲಿ, ಬಫರ್ ಕವರ್ ಅನ್ನು ಆರಿಸಿಕೊಂಡರೆ ಕುಟುಂಬದ ವಿಮಾ ಮೊತ್ತಕ್ಕಿಂತ ಹೆಚ್ಚಿನ ವೆಚ್ಚಗಳನ್ನು ಈ ಬಫರ್ ಮೊತ್ತದಿಂದ ಪೂರೈಸುವುದರಿಂದ ಪರಿಹಾರವನ್ನು ನೀಡುತ್ತದೆ.

ಒಂದು ಕುಟುಂಬದ ವಿಮಾ ಮೊತ್ತವು ಮುಗಿದ ನಂತರ, ಬಫರ್ ನಿಂದ ಮೊತ್ತವನ್ನು ಪಡೆಯಲಾಗುತ್ತದೆ. ಆದಾಗ್ಯೂ, ಈ ಬಳಕೆಯು ಸಾಮಾನ್ಯವಾಗಿ ಒಂದೇ ಸಲ ಆಸ್ಪತ್ರೆಗೆ ದಾಖಲಾಗುವುದರಿಂದ ವಿಮಾ ಮೊತ್ತವು ಖಾಲಿಯಾಗುವಂತಹ ಗಂಭೀರ ಅನಾರೋಗ್ಯ/ನಿರ್ಣಾಯಕ ಅನಾರೋಗ್ಯದ ವೆಚ್ಚಗಳಿಗೆ ಸೀಮಿತವಾಗಿರುತ್ತದೆ.

## O. ವಿಶೇಷ ಉತ್ಪನ್ನಗಳು

### 1. ರೋಗದ ಕವರ್ ಗಳು

ಇತ್ತೀಚಿನ ವರ್ಷಗಳಲ್ಲಿ, ಕ್ಯಾನ್ಸರ್, ಮಧುಮೇಹ, ಕೋವಿಡ್ -19 ಗಳಿಗಾಗಿ ರೋಗ ನಿರ್ದಿಷ್ಟ ಕವರ್ ಗಳನ್ನು ಭಾರತೀಯ ಮಾರುಕಟ್ಟೆಯಲ್ಲಿ ಪರಿಚಯಿಸಲಾಗಿದೆ. ಕವರ್ ಅಲ್ಪಾವಧಿಯ ಅಥವಾ - 5 ವರ್ಷಗಳಿಂದ 20 ವರ್ಷಗಳವರೆಗೆ ದೀರ್ಘಾವಧಿಯದ್ದಾಗಿರುತ್ತದೆ ಮತ್ತು ವಿಮಾಗಾರರಿಂದ ಪಾವತಿಸಿದ ನಿಯಮಿತ ಆರೋಗ್ಯ ತಪಾಸಣೆಯಂತಹ ಕ್ಷೇಮ ಪ್ರಯೋಜನವನ್ನು ಸಹ ಒಳಗೊಂಡಿರುತ್ತದೆ. ಪಾಲಿಸಿಯ ಎರಡನೇ ವರ್ಷದಿಂದ ಕಡಿಮೆ ಕಂತುಗಳ ರೂಪದಲ್ಲಿ ರಕ್ತದ ಗ್ಲೂಕೋಸ್, ರಕ್ತದೊತ್ತಡ ಇತ್ಯಾದಿ ಅಂಶಗಳ ಉತ್ತಮ ನಿಯಂತ್ರಣಕ್ಕಾಗಿ ಪ್ರೋತ್ಸಾಹನೆಯಿರುತ್ತದೆ. ಮತ್ತೊಂದೆಡೆ, ಕಡಿಮೆ ನಿಯಂತ್ರಣಕ್ಕಾಗಿ ಹೆಚ್ಚಿನ ಕಂತನ್ನು ವಿಧಿಸಲಾಗುತ್ತದೆ..

### 2. ಮಧುಮೇಹಿಗಳನ್ನು ಕವರ್ ಮಾಡಲು ವಿನ್ಯಾಸಗೊಳಿಸಲಾದ ಉತ್ಪನ್ನ

ಈ ಪಾಲಿಸಿಯನ್ನು **26** ಮತ್ತು **65** ವರ್ಷಗಳ ನಡುವಿನ ವ್ಯಕ್ತಿಗಳು ತೆಗೆದುಕೊಳ್ಳಬಹುದು ಮತ್ತು ತಮ್ಮ ವಯಸ್ಸಿನ **70** ವರ್ಷಗಳವರೆಗೆ ನವೀಕರಿಸಬಹುದಾಗಿದೆ. ವಿಮಾ ಮೊತ್ತವು ರೂ. **50,000** ರಿಂದ ರೂ. **5,00,000**ಗಳವರೆಗೆ ಇರಬಹುದು. ರೂಮ್ ಬಾಡಿಗೆಗೆ ನಿರ್ಬಂಧದ ಮಿತಿ ಅನ್ವಯಿಸುತ್ತದೆ. ಉತ್ಪನ್ನವು ಡಯಾಬಿಟಿಕ್ ರೆಟಿನೋಪತಿ (ಕಣ್ಣು), ಮೂತ್ರಪಿಂಡ, ಮಧುಮೇಹ ಕಾಲು, ದಾನಿಗಳ ವೆಚ್ಚ ಸೇರಿದಂತೆ ಮೂತ್ರಪಿಂಡ ಕಸಿ ಮುಂತಾದ ಮಧುಮೇಹದ ಆಸ್ಪತ್ರೆಯ ತೊಡಕುಗಳನ್ನು ಕವರ್ ಮಾಡುವ ಗುರಿಯನ್ನು ಹೊಂದಿದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ಪೂರ್ವ-ಆಸ್ಪತ್ರೆ ವೆಚ್ಚಗಳ ಕವರ್ ಅವಧಿಯು ವಿಮಾದಾರರಿಂದ ವಿಮಾದಾರರಿಗೆ ಬದಲಾಗುತ್ತಿದ್ದರೂ ಮತ್ತು ಪಾಲಿಸಿಯಲ್ಲಿ ವ್ಯಾಖ್ಯಾನಿಸಲಾಗಿದ್ದರೂ, ಅತ್ಯಂತ ಸಾಮಾನ್ಯವಾದ ಕವರ್ _______ ಪೂರ್ವ ಆಸ್ಪತ್ರೆ ದಾಖಲಾತಿಯಾಗಿದೆ.

**I.** ಹದಿನೈದು ದಿನಗಳು

**II.** ಮೂವತ್ತು ದಿನಗಳು

**III.** ನಲವತ್ತೈದು ದಿನಗಳು

**IV.** ಅರವತ್ತು ದಿನಗಳು

---

ಆರೋಗ್ಯ ಪಾಲಿಸಿಗಳಲ್ಲಿನ ಪ್ರಮುಖ ಪದಗಳು (ಎಲ್ಲ ಪದಗಳನ್ನು **22.07.2020** ದಿನಾಂಕದ ಆರೋಗ್ಯ ವಿಮಾ ಉತ್ಪನ್ನಗಳ ಪ್ರಮಾಣೀಕರಣದ ಕುರಿತು ಐಆರ್ ಡಿಎಐ ಮಾಸ್ಟರ್ ಸುತ್ತೋಲೆ(ಸರ್ಕ್ಯುಲರ್)ಯಲ್ಲಿ ವ್ಯಾಖ್ಯಾನಿಸಲಾಗಿದೆ)

**1. ನೆಟ್‌ವರ್ಕ್ ಒದಗಿಸುವವರು**

ನೆಟ್ ವರ್ಕ್ ಪೂರೈಕೆದಾರರು ಆಸ್ಪತ್ರೆ/ ನರ್ಸಿಂಗ್ ಹೋಮ್/ ಡೇ ಕೇರ್ ಸೆಂಟರ್ ಗಳನ್ನು ಉಲ್ಲೇಖಿಸುತ್ತಾರೆ, ಇದು ವಿಮಾದಾರ/ಟಿಪಿಎ ಜೊತೆಗೆ ವಿಮೆ ಮಾಡಿಸಿದ ರೋಗಿಗಳಿಗೆ ನಗದು ರಹಿತ ಚಿಕಿತ್ಸೆಯನ್ನು ಒದಗಿಸಲು ಟೈ-ಅಪ್ ನಲ್ಲಿರುತ್ತದೆ. ರೋಗಿಗಳು ನೆಟ್ ವರ್ಕ್ ಹೊರಗಿನ ಪೂರೈಕೆದಾರರ ಬಳಿಗೆ ಹೋಗಲು ಮುಕ್ತರಾಗಿರುತ್ತಾರೆ ಆದರೆ ಅಲ್ಲಿ ಅವರಿಗೆ ಸಾಮಾನ್ಯವಾಗಿ ಹೆಚ್ಚಿನ ಶುಲ್ಕವನ್ನು ವಿಧಿಸಲಾಗುತ್ತದೆ.

**2. ಆದ್ಯತೆಯ ಪೂರೈಕೆದಾರ ನೆಟ್‌ವರ್ಕ್ (ಪಿಪಿಎನ್)**

ಗುಣಮಟ್ಟದ ಚಿಕಿತ್ಸೆಯನ್ನು ಮತ್ತು ಉತ್ತಮ ದರಗಳನ್ನು ಖಚಿತಪಡಿಸಿಕೊಳ್ಳಲು ಆಸ್ಪತ್ರೆಗಳ ಆದ್ಯತೆಯ ನೆಟ್ ವರ್ಕ್ ಅನ್ನು ರಚಿಸಲು ವಿಮಾಗಾರರು ಆಯ್ಕೆಯನ್ನು ಹೊಂದಿರುತ್ತಾರೆ. ಅನುಭವ, ಬಳಕೆ ಮತ್ತು ಆರೈಕೆಯನ್ನು ಒದಗಿಸುವ ವೆಚ್ಚದ ಆಧಾರದ ಮೇಲೆ ವಿಮಾಗಾರರಿಂದ ಈ ಗುಂಪನ್ನು ಆಯ್ದ ಕೆಲವರಿಗೆ ಮಾತ್ರ ಸೀಮಿತಗೊಳಿಸಿದಾಗ, ಆದ್ಯತೆಯ ಪೂರೈಕೆದಾರ ಜಾಲಗಳು ರೂಪುಗೊಳ್ಳುತ್ತವೆ.

**3. ನಗದುರಹಿತ ಸೇವೆ**

ನಗದುರಹಿತ ಸೇವೆಯು ಆಸ್ಪತ್ರೆಗಳಿಗೆ ಯಾವುದೇ ಪಾವತಿ ಮಾಡದೇ ಕವರ್ ನ ಮಿತಿಯವರೆಗೆ ಚಿಕಿತ್ಸೆ ಪಡೆಯಲು ವಿಮಾದಾರರಿಗೆ ಅನುವು ಮಾಡಿಕೊಡುತ್ತದೆ. ವಿಮೆದಾರ ಮಾಡಬೇಕಾಗಿರುವುದೇನೆಂದರೆ ನೆಟ್ವರ್ಕ್ ಹೊಂದಿರುವ ಆಸ್ಪತ್ರೆಯನ್ನು ಸಂಪರ್ಕಿಸುವುದು ಮತ್ತು ವಿಮೆಯ ಪುರಾವೆಯಾಗಿರುವ ತಮ್ಮ ವೈದ್ಯಕೀಯ ಕಾರ್ಡನ್ನು ಸಲ್ಲಿಸುವುದು. ವಿಮಾಗಾರರು ಹಣರಹಿತ ಆರೋಗ್ಯ ಸೇವೆಗೆ ಅವಕಾಶ ಕಲ್ಪಿಸಿ, ಸ್ವೀಕಾರಾರ್ಹ ಪ್ರಮಾಣದ ಮೊತ್ತವನ್ನು ನೇರವಾಗಿ ನೆಟ್ವರ್ಕ್ ಪೂರೈಕೆದಾರಿಗೆ ಪಾವತಿ ಮಾಡುತ್ತಾರೆ. ಆದಾಗ್ಯೂ, ಪಾಲಿಸಿ ನಿಯಮಗಳಂತೆ ಪಾವತಿಸಲಾಗದ ವೆಚ್ಚಗಳಿಗೆ, ವಿಮಾದಾರರು ಪಾಲಿಸಿಯ ಮಿತಿಗಳನ್ನು ಮೀರಿದ ಮೊತ್ತಕ್ಕೆ ಪಾವತಿಯನ್ನು ಮಾಡಬೇಕಾಗುತ್ತದೆ.

**4. ತೃತೀಯ ಆಡಳಿತಗಾರರು (ಟಿಪಿಎ)**

ಆರೋಗ್ಯ ವಿಮೆಯ ಕ್ಷೇತ್ರದಲ್ಲಿ ತೃತೀಯ ಆಡಳಿತಗಾರರು ಅಥವಾ ಟಿಪಿಎಗಳ ಪರಿಚಯವು ಒಂದು ಪ್ರಮುಖ ಅಭಿವೃದ್ಧಿಯಾಗಿದೆ. ಪ್ರಪಂಚದಾದ್ಯಂತ ಅನೇಕ ವಿಮಾಗಾರರು ಆರೋಗ್ಯ ವಿಮಾ ಕ್ಲೇಮ್ ಗಳ ನಿರ್ವಹಣೆಗಾಗಿ ಸ್ವತಂತ್ರ ಸಂಸ್ಥೆಗಳ ಸೇವೆಗಳನ್ನು ಬಳಸಿಕೊಳ್ಳುತ್ತವೆ. ಈ ಸಂಸ್ಥೆಗಳನ್ನು ಟಿಪಿಎ ಗಳೆಂದು ಕರೆಯಲಾಗುತ್ತದೆ. ಭಾರತದಲ್ಲಿ, ಆರೋಗ್ಯ ಸೇವೆಗಳನ್ನು ಒದಗಿಸುವ ಸಲುವಾಗಿ ಇತರ ವಿಷಯಗಳೊಂದಿಗೆ ಟಿಪಿಎಗಳನ್ನು ವಿಮಾಗಾರರಿಂದ ತೊಡಗಿಸಿಕೊಳ್ಳಲಾಗಿದೆ:

i. **ಪಾಲಿಸಿದಾರರಿಗೆ ಆಸ್ಪತ್ರೆ ದಾಖಲಾಗುವಾಗ ಬಳಸಬಹುದಾದ ವಿಮಾ ಪಾಲಿಸಿಗೆ ಸಾಕ್ಷಿಯಾದ ಗುರುತಿನ ಕಾರ್ಡಿನ ವಿತರಣೆ.**

ii. **ನೆಟ್ ವರ್ಕ್ ಆಸ್ಪತ್ರೆಗಳಲ್ಲಿ ಹಣರಹಿತ ಸೇವೆ ಒದಗಿಸುವುದು**

iii. **ಕ್ಲೇಮ್ ಗಳ ಪ್ರಕ್ರಿಯೆ**

ಆರೋಗ್ಯ ಪಾಲಿಸಿದಾರರಿಗೆ ಆಸ್ಪತ್ರೆಯ ದಾಖಲಾತಿಗಾಗಿ ಅನನ್ಯ ಗುರುತಿನ ಕಾರ್ಡ್‌ಗಳನ್ನು ನೀಡುವುದರಿಂದ ಹಿಡಿದು ಕ್ಯಾಶ್ ಲೆಸ್ ಆಧಾರದ ಮೇಲೆ ಅಥವಾ ಮರುಪಾವತಿ ಆಧಾರದ ಮೇಲೆ ಕ್ಲೇಮ್ ಗಳ ಇತ್ಯರ್ಥದವರೆಗೆ ಟಿಪಿಎ ಸೇವೆ ಸಲ್ಲಿಸುತ್ತಾರೆ. ತೃತೀಯ ಪಕ್ಷದ ನಿರ್ವಾಹಕರು ಆಸ್ಪತ್ರೆಗಳು ಅಥವಾ ಆರೋಗ್ಯ ಸೇವೆ ಒದಗಿಸುವವರೊಂದಿಗೆ ಎಂಒಯು ಮಾಡಿಕೊಳ್ಳುತ್ತಾರೆ ಮತ್ತು ನೆಟ್ ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಯಾವುದೇ ವ್ಯಕ್ತಿಗೆ ನಗದು ರಹಿತ ಸೇವೆಯನ್ನು ನೀಡಲಾಗುವ ಬಗ್ಗೆ ಖಚಿತಪಡಿಸಿಕೊಳ್ಳುತ್ತಾರೆ. ಅವರು ವಿಮಾಗಾರರು (ರು) ಮತ್ತು ವಿಮಾದಾರರ (ರು) ನಡುವಿನ ಮಧ್ಯವರ್ತಿಗಳಾಗಿದ್ದು, ಆಸ್ಪತ್ರೆಗಳೊಂದಿಗೆ ಸಹಕರಿಸುತ್ತಾರೆ ಮತ್ತು ಆರೋಗ್ಯದ ಕ್ಲೇಮ್ ಗಳನ್ನು ಇತ್ಯರ್ಥಗೊಳಿಸುತ್ತಾರೆ.

**5. ಆಸ್ಪತ್ರೆ**

ಆಸ್ಪತ್ರೆಯೆಂದರೆ ಅನಾರೋಗ್ಯ ಮತ್ತು /ಅಥವಾ ಗಾಯಗಳಿಂದ ಬಳಲುತ್ತಿರುವ ಒಳರೋಗಿ ಆರೈಕೆಗೆ ಮತ್ತು ಡೇ ಕೇರ್ ಚಿಕಿತ್ಸೆಗಾಗಿ ಅನ್ವಯವಾಗುವಲ್ಲಿ ಸ್ಥಳೀಯ ಅಧಿಕಾರಿಗಳೊಂದಿಗೆ ಆಸ್ಪತ್ರೆ ಎಂದು ದಾಖಲಾದ, ಮತ್ತು ಒಂದು ನೋಂದಾಯಿತ ಮತ್ತು ಅರ್ಹ ವೈದ್ಯರ ಮೇಲ್ವಿಚಾರಣೆಯಲ್ಲಿರುವ ಮತ್ತು ಈ ಕೆಳಗಿನ ಎಲ್ಲಾ ಕನಿಷ್ಠ ಮಾನದಂಡಗಳನ್ನು ಅನುಸರಿಸುವ ಯಾವುದೇ ಒಂದು ಸಂಸ್ಥೆ ಎಂದರ್ಥ:

a) **10,00,000ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಪಟ್ಟಣಗಳಲ್ಲಿ ಕನಿಷ್ಠ 10 ಒಳರೋಗಿ ಹಾಸಿಗೆಗಳನ್ನು ಮತ್ತು ಇತರ ಎಲ್ಲ ಸ್ಥಳಗಳಲ್ಲಿ 15 ಒಳರೋಗಿ ಹಾಸಿಗೆಗಳನ್ನು ಹೊಂದಿರಬೇಕು;**

a) **ಎಲ್ಲ ಸಮಯದಲ್ಲಿಯೂ ಅರ್ಹತೆ ಪಡೆದ ಶುಶ್ರೂಷಾ ಸಿಬ್ಬಂದಿಯನ್ನು ಹೊಂದಿರಬೇಕು;**

b) **ಎಲ್ಲಾ ಸಮಯದಲ್ಲಿಯೂ ಉಸ್ತುವಾರಿ ಹೊತ್ತ ಅರ್ಹ ವೈದ್ಯರ(ಗಳ)ನ್ನು ಹೊಂದಿರಬೇಕು;**

c) **ಶಸ್ತ್ರಕ್ರಿಯೆ ನಡೆಯುವ ತನ್ನದೇ ಆದ ಒಂದು ಸಂಪೂರ್ಣ ಸುಸಜ್ಜಿತ ಆಪರೇಷನ್ ಥಿಯೇಟರ್ ಅನ್ನು ಹೊಂದಿರಬೇಕು;**

d) **ರೋಗಿಗಳ ದೈನಂದಿನ ದಾಖಲೆಗಳನ್ನು ನಿರ್ವಹಿಸುವುದು ಮತ್ತು ವಿಮಾ ಕಂಪನಿಯ ಅಧಿಕೃತ ಸಿಬ್ಬಂದಿಗೆ ಸುಲಭವಾಗಿ ದೊರಕುವಂತೆ ಮಾಡುವುದು.**

**6. ವೃತ್ತಿಪರ ವೈದ್ಯರು**

ವೃತ್ತಿಪರ ವೈದ್ಯರು ಭಾರತದ ಯಾವುದೇ ರಾಜ್ಯದ ಮೆಡಿಕಲ್ ಕೌನ್ಸಿಲ್ ನಿಂದ ಮಾನ್ಯ ನೋಂದಣಿ ಹೊಂದಿದ ಮತ್ತು ಆ ಮೂಲಕ ಅದರ ಅಧಿಕಾರ ವ್ಯಾಪ್ತಿಯೊಳಗೆ ವೈದ್ಯಕೀಯ ವೃತ್ತಿಯನ್ನು ನಡೆಸಿಕೊಂಡು ಹೋಗುವ

ಅಧಿಕಾರವಿರುವ; ಮತ್ತು ತಮ್ಮ ಪರವಾನೆ ಮತ್ತು ಅಧಿಕಾರ ವ್ಯಾಪ್ತಿಯೊಳಗೆ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ವ್ಯಕ್ತಿ. ಆದಾಗ್ಯೂ, ವಿಮಾ ಕಂಪೆನಿಗಳು ನೋಂದಾಯಿತ ವೈದ್ಯರೇ ವಿಮಾದಾರ ಅಥವಾ ಕುಟುಂಬದ ಯಾವುದೇ ನಿಕಟ ಸದಸ್ಯರಾಗಿರಕೂಡದೆಂದು ನಿರ್ಬಂಧ ಹೇರಲು ಸ್ವತಂತ್ರರಾಗಿರುತ್ತಾರೆ.

**ಅರ್ಹತೆ ಹೊಂದಿರುವ ನರ್ಸ್:** ಅರ್ಹತೆ ಹೊಂದಿದ ನರ್ಸ್ ಎಂದರೆ ಭಾರತದ ನರ್ಸಿಂಗ್ ಕೌನ್ಸಿಲ್ ಅಥವಾ ಭಾರತದ ಯಾವುದೇ ರಾಜ್ಯದ ನರ್ಸಿಂಗ್ ಕೌನ್ಸಿಲ್ ನಿಂದ ಮಾನ್ಯ ನೋಂದಣಿ ಹೊಂದಿರುವ ಒಬ್ಬ ವ್ಯಕ್ತಿ ಎಂದರ್ಥ.

**7. ಸಮಂಜಸವಾದ ಮತ್ತು ಅಗತ್ಯವಾದ ವೆಚ್ಚಗಳು**

**ಪಾಲಿಸಿಯು ನಿರ್ದಿಷ್ಟ ಕಾಯಿಲೆಯ ಚಿಕಿತ್ಸೆಗಾಗಿ ಮತ್ತು ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಸಮಂಜಸವೆಂದು ಪರಿಗಣಿಸಲಾಗುವ ವೆಚ್ಚಗಳಿಗೆ ಪರಿಹಾರ ಒದಗಿಸುವುದರಿಂದ ಆರೋಗ್ಯ ವಿಮಾ ಪಾಲಿಸಿಯು ಯಾವಾಗಲೂ ಈ ನಿಯಮವನ್ನು ಹೊಂದಿರುತ್ತದೆ.**

**8. ಕ್ಲೇಮ್ ನ ಸೂಚನೆ**

**ಪ್ರತಿಯೊಂದು ವಿಮಾ ಪಾಲಿಸಿಯು ಕ್ಲೇಮ್ ನ ತಕ್ಷಣದ ಮಾಹಿತಿ ಮತ್ತು ದಾಖಲೆಗಳ ಸಲ್ಲಿಕೆಗಾಗಿ ನಿರ್ದಿಷ್ಟ ಸಮಯದ ಮಿತಿಗಳನ್ನು ಒದಗಿಸುತ್ತದೆ. ಆರೋಗ್ಯ ವಿಮಾ ಪಾಲಿಸಿಗಳಲ್ಲಿ, ಗ್ರಾಹಕರು ನಗದು ರಹಿತ ಸೌಲಭ್ಯವನ್ನು ಬಯಸಿದಲ್ಲಿ, ಆಸ್ಪತ್ರೆಗೆ ದಾಖಲು ಮಾಡುವ ಸಾಕಷ್ಟು ಮೊದಲು ಸೂಚನೆಗಳನ್ನು ನೀಡಲಾಗುತ್ತದೆ. ಆದಾಗ್ಯೂ ಕ್ಲೇಮ್ ಗಳ ಮರುಪಾವತಿ ಪ್ರಕರಣಗಳಲ್ಲಿ ಕ್ಲೇಮ್ ದಾಖಲೆಗಳನ್ನು ಸಲ್ಲಿಸುವ ಸಮಯದ ಮಿತಿಯನ್ನು ಸಾಮಾನ್ಯವಾಗಿ ಬಿಡುಗಡೆಯ ದಿನಾಂಕದಿಂದ 15 ದಿನಗಳವರೆಗೆ ನಿಗದಿಪಡಿಸಲಾಗುತ್ತದೆ.**

**9. ಉಚಿತ ಆರೋಗ್ಯ ತಪಾಸಣೆ**

**ವೈಯಕ್ತಿಕ ಆರೋಗ್ಯ ಪಾಲಿಸಿಗಳಲ್ಲಿ, ಕ್ಲೇಮ್ ಮಾಡಿಲ್ಲದ ಪಾಲಿಸಿದಾರರಿಗೆ ಕೆಲವು ರೀತಿಯ ಪ್ರೋತ್ಸಾಹನೆಯನ್ನು ನೀಡಲು ಒಂದು ನಿಬಂಧನೆಯು ಸಾಮಾನ್ಯವಾಗಿ ಲಭ್ಯವಿರುತ್ತದೆ. ನಾಲ್ಕು ನಿರಂತರ, ಕ್ಲೇಮ್ ಮಾಡದ ಪಾಲಿಸಿ ಅವಧಿಗಳ ಕೊನೆಯಲ್ಲಿ ಆರೋಗ್ಯ ತಪಾಸಣೆಯ ವೆಚ್ಚವನ್ನು ಮರುಪಾವತಿಸಲು ಹಲವು ಪಾಲಿಸಿಗಳು ಒದಗಿಸುತ್ತವೆ.**

**10. ಸಂಚಿತ ಬೋನಸ್**

ಕ್ಲೇಮ್ ಮಾಡಿಲ್ಲದ ಪಾಲಿಸಿದಾರರಿಗೆ ಇನ್ನೊಂದು ರೀತಿಯ ಪ್ರೋತ್ಸಾಹನೆಯಾಗಿ ವಿಮಾಮೊತ್ತದ ಮೇಲೆ ಸಂಚಿತ ಬೋನಸ್ ಅನ್ನು ನೀಡಲಾಗುತ್ತದೆ. ಅಂದರೆ ಪ್ರತಿ ನವೀಕರಣದ ಸಮಯದಲ್ಲಿ ವಾರ್ಷಿಕವಾಗಿ ವಿಮಾಮೊತ್ತವು ಉದಾಹರಣೆಗೆ **5%** ಮತ್ತು ಗರಿಷ್ಠ **50%** ರ ಮಿತಿಗೆ ಒಳಪಟ್ಟು ಒಂದು ನಿಶ್ಚಿತ ಶೇಕಡಾವಾರು ಮೂಲಕ ಹೆಚ್ಚಾಗುತ್ತದೆ ಮತ್ತು ಇದು ಹತ್ತು ಕ್ಲೇಮ್ ಮಾಡದ ನವೀಕರಣಗಳಿಗೆ ಅನ್ವಯಿಸುತ್ತದೆ. ಇದಲ್ಲದೇ

ಯಾವುದಾದರೂ ಪಾಲಿಸಿ ಅವಧಿಯಲ್ಲಿ ಕ್ಲೇಮ್ ಮಾಡಿದರೆ ಗಳಿಸಿದ ಸಂಚಿತ ಬೋನಸ್ ಗಳಿಸಿರುವ ದರದಂತೆಯೇ ಕಡಿತಗೊಳ್ಳುತ್ತದೆ

| **ಉದಾಹರಣೆ** |
| --- |

ಒಬ್ಬ ವ್ಯಕ್ತಿಯು ರೂ. **5,000** ಕಂತಿಗೆ ರೂ. ***3*** ಲಕ್ಷಗಳ ಒಂದು ಪಾಲಿಸಿಯನ್ನು ತೆಗೆದುಕೊಳ್ಳುತ್ತಾರೆ. ಎರಡನೇ ವರ್ಷದಲ್ಲಿ, ಮೊದಲ ವರ್ಷದಲ್ಲಿ ಕ್ಲೇಮ್ ಮಾಡಿಲ್ಲದಿದ್ದ ಸಂದರ್ಭದಲ್ಲಿ, ಅವರು ಅದೇ ಮೊತ್ತದ ರೂ.**5,000** ಕಂತಿಗೆ ರೂ. ***3.15*** ಲಕ್ಷ (ಹಿಂದಿನ ವರ್ಷಕ್ಕಿಂತ ***5%*** ಹೆಚ್ಚು) ವಿಮಾ ಮೊತ್ತವನ್ನು ಪಡೆಯುತ್ತಾರೆ. ಹತ್ತು ವರ್ಷಗಳಲ್ಲಿ ಕ್ಲೇಮ್ ವಿಲ್ಲದಿದ್ದರೆ ನವೀಕರಣದ ಮೇಲೆ ಇದು ರೂ. ***4.5*** ಲಕ್ಷ ದವರೆಗೂ ಹೆಚ್ಚಾಗಬಹುದು*.*

**11. ಮಾಲಸ್ / ಬೋನಸ್**

ಆರೋಗ್ಯ ಪಾಲಿಸಿಯನ್ನು ಕ್ಲೇಮ್ ಗಳಿಂದ ಮುಕ್ತವಾಗಿಡಲು ಪ್ರೋತ್ಸಾಹನೆ ಇರುವಂತೆಯೇ, ಅದಕ್ಕೆ ವಿರುದ್ಧವಾಗಿ ಪರಿಸ್ಥಿತಿಯನ್ನು ಮಾಲಸ್ ಎಂದು ಕರೆಯಲಾಗುತ್ತದೆ. ಇಲ್ಲಿ, ಪಾಲಿಸಿಯಡಿಯಲ್ಲಿ ಕ್ಲೇಮ್ ಗಳು ತುಂಬಾ ಹೆಚ್ಚಿದ್ದರೆ, ನವೀಕರಣದ ಸಮಯದಲ್ಲಿ ಮಾಲಸ್ ಅಥವಾ ಕಂತಿನ ಹೆಚ್ಚುವರಿ(ಲೋಡಿಂಗ್)ಯನ್ನು ಸಂಗ್ರಹಿಸಲಾಗುತ್ತದೆ. ಆದಾಗ್ಯೂ, ಗುಂಪಿನ ಪಾಲಿಸಿಗಳ ಸಂದರ್ಭದಲ್ಲಿ, ಕ್ಲೇಮ್ ಅನುಪಾತವನ್ನು ಸಮಂಜಸವಾದ ಮಿತಿಗಳಲ್ಲಿ ಇರಿಸಿಕೊಳ್ಳಲು ಒಟ್ಟಾರೆ ಕಂತನ್ನು ಸೂಕ್ತವಾಗಿ ಲೋಡ್ ಮಾಡುವ ಮೂಲಕ ಮಾಲಸ್ ಅನ್ನು ವಿಧಿಸಲಾಗುತ್ತದೆ.

**12. ಕ್ಲೇಮ್ ಉದ್ಭವಿಸದ(ನೋ ಕ್ಲೇಮ್) ರಿಯಾಯಿತಿ**

ಕೆಲವು ಉತ್ಪನ್ನಗಳು ವಿಮಾ ಮೊತ್ತದ ಬೋನಸ್ ಬದಲಿಗೆ ಪ್ರತಿ ಕ್ಲೇಮ್ ವಿಲ್ಲದ ವರ್ಷದಲ್ಲಿ ಕಂತಿನ ಮೇಲೆ ರಿಯಾಯಿತಿಯನ್ನು ಒದಗಿಸುತ್ತವೆ.

**13. ಕೋಣೆ ಬಾಡಿಗೆಯ ನಿರ್ಬಂಧಗಳು**

ಕೆಲವು ಆರೋಗ್ಯ ಯೋಜನೆಗಳು ವಿಮಾದಾರರು ಆಯ್ಕೆಮಾಡುವ ಕೋಣೆಯ ವರ್ಗವನ್ನು ವಿಮಾ ಮೊತ್ತಕ್ಕೆ ಲಿಂಕ್ ಮಾಡುವ ಮೂಲಕ ನಿರ್ಬಂಧವನ್ನು ವಿಧಿಸುತ್ತವೆ. ಆದ್ದರಿಂದ ಪಾಲಿಸಿಯು ದಿನಕ್ಕೆ ವಿಮಾ ಮೊತ್ತದ 1% ರಷ್ಟು ಕೊಠಡಿ ಬಾಡಿಗೆ ನಿರ್ಬಂಧವನ್ನು ಹೊಂದಿದ್ದರೆ, ಒಂದು ಲಕ್ಷದ ವಿಮಾ ಮೊತ್ತವನ್ನು ಹೊಂದಿರುವ ವ್ಯಕ್ತಿಯು ದಿನಕ್ಕೆ 1,000 ರೂ.ಗಳ ಕೋಣೆಯನ್ನು ಪಡೆಯಬಹುದು.

**14. ನವೀಕರಣದ ಷರತ್ತು**

ಆರೋಗ್ಯ ವಿಮಾ ಪಾಲಿಸಿಗಳ ನವೀಕರಣದ ಕುರಿತಾದ ಐಆರ್ ಡಿಎಐ ಮಾರ್ಗಸೂಚಿಗಳು ವಂಚನೆ ಮತ್ತು ತಪ್ಪು ನಿರೂಪಣೆಗಳ ಆಧಾರದ ಪಾಲಿಸಿಗಳನ್ನು ಹೊರತುಪಡಿಸಿ ಆರೋಗ್ಯ ಪಾಲಿಸಿಗಳ ಜೀವಮಾನ ಪೂರ್ತಿಯವರೆಗೆ ಖಾತರಿಯ ನವೀಕರಣವನ್ನು ಕಡ್ಡಾಯಗೊಳಿಸುತ್ತದೆ. ಐಆರ್ ಡಿಎಐ ಆರೋಗ್ಯ ವಿಮಾ ನಿಯಂತ್ರಣ 2016 ರ ನಿಬಂಧನೆಗಳಿಗೆ ಅನುಸಾರವಾಗಿ, ಆರೋಗ್ಯ ವಿಮಾ ಪಾಲಿಸಿಗೆ )ವೈಯಕ್ತಿಕ ಅಪಘಾತ ಮತ್ತು ಪ್ರಯಾಣ ಪಾಲಿಸಿಗಳನ್ನು ಹೊರತುಪಡಿಸಿ( ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ

ಮತ್ತು ಯಾವುದೇ ವಿರಾಮವಿಲ್ಲದೆ ನಿಯತಕಾಲಿಕವಾಗಿ ನವೀಕರಿಸಲಾದ ಪಾಲಿಸಿಯನ್ನು ವಿಮಾದಾರರ ವಯಸ್ಸಿನ ಆಧಾರದ ಮೇಲೆ ನಿರಾಕರಿಸಲಾಗುವುದಿಲ್ಲ. ಹೀಗೆ, ಆರೋಗ್ಯ ವಿಮಾ ಪಾಲಿಸಿಗಳನ್ನು ಜೀವಮಾನವಿಡೀ ನವೀಕರಿಸಬಹುದಾಗಿದೆ..

**15. ರದ್ದುಗೊಳಿಸುವಿಕೆ ಷರತ್ತು**

ವಿಮಾ ಕಂಪನಿಯು ಯಾವುದೇ ಸಮಯದಲ್ಲಿ ಕೇವಲ ತಪ್ಪು ನಿರೂಪಣೆ, ವಂಚನೆ ಮತ್ತು ವಾಸ್ತವಿಕ ಸತ್ಯವನ್ನು ಬಹಿರಂಗಪಡಿಸದಿರುವುದು ಅಥವಾ ವಿಮೆದಾರರಿಂದ ಅಸಹಕಾರದ ಆಧಾರದ ಮೇಲೆ ಮಾತ್ರ ಪಾಲಿಸಿಯನ್ನು ರದ್ದುಗೊಳಿಸಬಹುದು..

ವಿಮಾಗಾರರಿಂದ ಪಾಲಿಸಿಗಳು ರದ್ದುಗೊಳಿಸಲ್ಪಟ್ಟಾಗ, ಪಾಲಿಸಿಯಡಿಯಲ್ಲಿ ಯಾವುದೇ ಕ್ಲೇಮ್ ಅನ್ನು ಪಾವತಿಸಿಲ್ಲದಿದ್ದರೆ ಉಳಿದ ವಿಮೆಯ ಅವಧಿಗೆ ಅನುಗುಣವಾದ ಕಂತಿನ ಮೊತ್ತದ ಪ್ರಮಾಣವನ್ನು ವಿಮಾದಾರರಿಗೆ ಹಿಂತಿರುಗಿಸಲಾಗುತ್ತದೆ. ಇದು ಸಾಮಾನ್ಯವಾಗಿ ಅನುಪಾತದ ಆಧಾರದ ಮೇಲೆ ಇರುತ್ತದೆ.

ವಾರ್ಷಿಕ ಪಾಲಿಸಿಗಳನ್ನು ವಿಮಾದಾರರು ರದ್ದುಗೊಳಿಸಿದಾಗ, ವಿಮಾಗಾರರು ಸಾಮಾನ್ಯವಾಗಿ ಪ್ರೋ-ರಾಟಾ ಕಂತುಗಳ ಬದಲಿಗೆ ಕಡಿಮೆ ಅವಧಿಯ ಮಾಪಕಗಳಲ್ಲಿ ಕಂತುಗಳನ್ನು ವಿಧಿಸುತ್ತಾರೆ. ಇದು ವಿಮಾಗಾರರಿಗೆ ವಿರುದ್ಧವಾದ ವಿರೋಧಿ ಆಯ್ಕೆಯನ್ನು ತಡೆಯುತ್ತದೆ ಮತ್ತು ವಿಮಾಗಾರರ ಆರಂಭಿಕ ವೆಚ್ಚಗಳನ್ನು ಭರಿಸುತ್ತದೆ.

**16. ನವೀಕರಣಕ್ಕಾಗಿ ಗ್ರೇಸ್ (ಕಾಲಾವಕಾಶ) ಅವಧಿ**

ಅಧ್ಯಾಯ 4 ರಲ್ಲಿ ಉಲ್ಲೇಖಿಸಿದಂತೆ, ಗ್ರೇಸ್ (ಕಾಲಾವಕಾಶ) ಅವಧಿಯ ನಿಬಂಧನೆಯು ಕಂತನ್ನು ಪಾವತಿಸದಿದ್ದಕ್ಕಾಗಿ ಲ್ಯಾಪ್ಸ್ ಆಗುವ ಪಾಲಿಸಿಯನ್ನು ಗ್ರೇಸ್ ಅವಧಿಯಲ್ಲಿ ಜಾರಿಯಲ್ಲಿ ಮುಂದುವರಿಸಲು ಅನುವು ಮಾಡಿಕೊಡುತ್ತದೆ.

ಮೇಲೆ ತಿಳಿಸಿದ ಹೆಚ್ಚಿನ ಪ್ರಮುಖ ಷರತ್ತುಗಳು, ವ್ಯಾಖ್ಯೆಗಳು, ಗ್ರೇಸ್ ಅವಧಿಗೆ ಸಂಬಂಧಿಸಿದ ಹೊರತುಗಳನ್ನು ಐಆರ್ ಡಿಎಐ ಹೊರಡಿಸಿದ ಆರೋಗ್ಯ ನಿಯಮಗಳು ಮತ್ತು ಆರೋಗ್ಯ ವಿಮೆ ಪ್ರಮಾಣೀಕರಣ ಮಾರ್ಗಸೂಚಿಗಳಡಿಯಲ್ಲಿ ಪ್ರಮಾಣೀಕರಿಸಲಾಗಿದೆ ಮತ್ತು ಕಾಲಕಾಲಕ್ಕೆ ನವೀಕರಿಸಲಾಗಿದೆ.

| ನಿಮ್ಮನ್ನು ಪರೀಕ್ಷಿಸಿಕೊಳ್ಳಿ *2* |
|---|

ಐಆರ್ ಡಿಎ ನಿಯಮಗಳ ಪ್ರಕಾರ, ಪ್ರತ್ಯೇಕ ಆರೋಗ್ಯ ಪಾಲಿಸಿಗಳ ನವೀಕರಣಕ್ಕಾಗಿ _______ ಗ್ರೇಸ್ ಅವಧಿಯ ಅವಕಾಶ ಇದೆ.

**I. ಹದಿನೈದು ದಿನಗಳು**

**II. ಮೂವತ್ತು ದಿನಗಳು**

**III. ನಲವತ್ತೈದು ದಿನಗಳು**

**IV. ಅರವತ್ತು ದಿನಗಳು**

**ನಿಮ್ಮನ್ನು ಪರೀಕ್ಷಿಸಿಕೊಳ್ಳಿಗೆ ಉತ್ತರಗಳು**

**ಉತ್ತರ 1 –** ಸರಿಯಾದ ಉತ್ತರ **II** ಆಗಿದೆ.

**ಉತ್ತರ 2 –** ಸರಿಯಾದ ಉತ್ತರ **II** ಆಗಿದೆ.

# ಅಧ್ಯಾಯ H-04

# ಆರೋಗ್ಯ ವಿಮೆಯ ಅಂಡರ್ ರೈಟಿಂಗ್

| ಅಧ್ಯಾಯ ಪರಿಚಯ |
| --- |

ಈ ಅಧ್ಯಾಯವು ನಿಮಗೆ ಆರೋಗ್ಯ ವಿಮೆಯ ಅಂಡರ್ ರೈಟಿಂಗ್ ಕುರಿತು ವಿವರವಾದ ಜ್ಞಾನವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಯಾವುದೇ ರೀತಿಯ ವಿಮೆಯಲ್ಲಿ ಅಂಡರ್ ರೈಟಿಂಗ್ ಬಹಳ ಮುಖ್ಯವಾದ ಅಂಶವಾಗಿದೆ ಮತ್ತು ವಿಮಾ ಪಾಲಿಸಿಯ ವಿತರಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಅಧ್ಯಾಯದಲ್ಲಿ, ನೀವು ಮೂಲಭೂತ ತತ್ವಗಳು, ಉಪಕರಣಗಳು, ವಿಧಾನಗಳು ಮತ್ತು ಅಂಡರ್ ರೈಟಿಂಗ್ ಪ್ರಕ್ರಿಯೆಯ ಬಗ್ಗೆ ತಿಳುವಳಿಕೆಯನ್ನು ಪಡೆಯುತ್ತೀರಿ. ಇದು ನಿಮಗೆ ಗುಂಪು ಆರೋಗ್ಯ ವಿಮೆಯ ಅಂಡರ್ ರೈಟಿಂಗ್ ಬಗ್ಗೆ ಸಹ ಜ್ಞಾನವನ್ನು ನೀಡುತ್ತದೆ.

| ಕಲಿಕೆಯ ಫಲಿತಾಂಶಗಳು |
| --- |

**A. ಅಂಡರ್ ರೈಟಿಂಗ್ ಎಂದರೇನು?**
**B. ಅಂಡರ್ ರೈಟಿಂಗ್ – ಮೂಲಭೂತ ಪರಿಕಲ್ಪನೆಗಳು**
**C. ಐಆರ್ ಡಿಎಐಯ ಇತರ ಆರೋಗ್ಯ ವಿಮಾ ನಿಯಮಗಳು**
**D. ಆರೋಗ್ಯ ವಿಮೆಯ ಪೋರ್ಟಬಿಲಿಟಿ(ವರ್ಗಾವಣೆ)**
**E. ಅಂಡರ್ ರೈಟಿಂಗ್ ನ ಮೂಲ ತತ್ವಗಳು ಮತ್ತು ಉಪಕರಣಗಳು**
**F. ಅಂಡರ್ ರೈಟಿಂಗ್ ಪ್ರಕ್ರಿಯೆ**
**G. ಗುಂಪು ಮಟ್ಟದಲ್ಲಿ ಆರೋಗ್ಯ ವಿಮೆ**
**H. ಸಾಗರೋತ್ತರ ಪ್ರಯಾಣ ವಿಮೆಯ ಅಂಡರ್ ರೈಟಿಂಗ್**
**I. ವೈಯಕ್ತಿಕ ಅಪಘಾತ ವಿಮೆಯ ಅಂಡರ್ರೈಟಿಂಗ್**

**ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ, ನೀವು ಈ ಕೆಳಗಿನ ವಿಷಯಗಳನ್ನು ಮಾಡಬಹುದು::**

**a)** ಅಂಡರ್ ರೈಟಿಂಗ್ ಎಂದರೆ ಏನೆಂದು ವಿವರಿಸುವುದು

**b)** ವಿಮೆಯ ಮೂಲ ಪರಿಕಲ್ಪನೆಗಳನ್ನು ವಿವರಿಸುವುದು

**c)** ಅಂಡರ್ ರೈಟರ್ ರು ಅನುಸರಿಸುವ ತತ್ವಗಳು ಮತ್ತು ಉಪಯೋಗಿಸುವ ವಿವಿಧ ಸಾಧನಗಳನ್ನು ವಿವರಿಸುವುದು

**d)** ವೈಯಕ್ತಿಕ ಆರೋಗ್ಯ ಪಾಲಿಸಿಗಳ ಅಂಡರ್ ರೈಟಿಂಗ್ ಸಂಪೂರ್ಣ ಪ್ರಕ್ರಿಯೆಯನ್ನು ಗೌರವಿಸುವುದು

**e)** ಗುಂಪು ಆರೋಗ್ಯ ಪಾಲಿಸಿಗಳನ್ನು ಹೇಗೆ ಅಂಡರ್ ರೈಟ್ ಮಾಡಲಾಗುತ್ತದೆ ಎಂಬುದನ್ನು ಚರ್ಚಿಸುವುದು

**ಈ ಸನ್ನಿವೇಶವನ್ನು ನೋಡಿ**

48 ವರ್ಷ ವಯಸ್ಸಿನ ಮನೀಶ್, ಸಾಫ್ಟ್ ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು, ಸ್ವತಃ ಆರೋಗ್ಯ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಲು ನಿರ್ಧರಿಸಿದರು. ಅವರು ವಿಮಾ ಕಂಪನಿಗೆ ಹೋದಾಗ ಅವರ ದೈಹಿಕ ರಚನೆ ಮತ್ತು ಆರೋಗ್ಯ, ಮಾನಸಿಕ ಆರೋಗ್ಯ, ಪೂರ್ವ ಅಸ್ತಿತ್ವದಲ್ಲಿರುವ ಕಾಯಿಲೆಗಳು, ಅವರ ಕುಟುಂಬದ ಆರೋಗ್ಯ ಇತಿಹಾಸ, ಅಭ್ಯಾಸಗಳು ಮತ್ತು ಮುಂತಾದವುಗಳಿಗೆ ಸಂಬಂಧಿಸಿದ ಹಲವಾರು ಪ್ರಶ್ನೆಗಳಿಗೆ ಉತ್ತರಿಸಲು ಅಗತ್ಯವಿರುವ ಪ್ರಸ್ತಾವನೆಯ ನಮೂನೆಯನ್ನು ನೀಡಿದರು.

ಅವರ ಪ್ರಸ್ತಾವನೆಯ ನಮೂನೆಯನ್ನು ಸ್ವೀಕರಿಸಿದ ನಂತರ, ಅವರು ಗುರುತಿನ ಮತ್ತು ವಯಸ್ಸಿನ ಪುರಾವೆ, ವಿಳಾಸದ ಪುರಾವೆ ಮತ್ತು ಹಿಂದಿನ ವೈದ್ಯಕೀಯ ದಾಖಲೆಗಳಂತಹ ಅನೇಕ ದಾಖಲೆಗಳನ್ನು ಸಲ್ಲಿಸಬೇಕಾಯಿತು. ನಂತರ ಅವರು ಆರೋಗ್ಯ ತಪಾಸಣೆ ಮತ್ತು ಕೆಲವು ವೈದ್ಯಕೀಯ ಪರೀಕ್ಷೆಗಳಿಗೆ ಒಳಗಾಗುವಂತೆ ಕೇಳಲಾಗಿ ಅವರಿಗೆ ಹತಾಶೆಯಾಯಿತು.

ತನ್ನನ್ನು ತಾನು ಆರೋಗ್ಯವಂತ ಮತ್ತು ಉತ್ತಮ ಆದಾಯದ ಮಟ್ಟವನ್ನು ಹೊಂದಿರುವವರೆಂದು ಪರಿಗಣಿಸಿದ ಮನೀಶ್, ತಮ್ಮ ವಿಷಯದಲ್ಲಿ ವಿಮಾ ಕಂಪನಿಯು ಏಕೆ ಅಂತಹ ಸುದೀರ್ಘ ಪ್ರಕ್ರಿಯೆಯನ್ನು ಅನುಸರಿಸುತ್ತಿದೆ ಎಂದು ಆಶ್ಚರ್ಯ ಪಡಲು ಪ್ರಾರಂಭಿಸಿದರು. ಇಷ್ಟೆಲ್ಲ ಪ್ರಕ್ರಿಯಯನ್ನು ದಾಟಿದ ನಂತರವೂ ವಿಮಾ ಕಂಪನಿಯವರು ವೈದ್ಯಕೀಯ ಪರೀಕ್ಷೆಗಳಲ್ಲಿ ಕೊಲೆಸ್ಟ್ರಾಲ್ ಮತ್ತು ಬಿಪಿ ಅಧಿಕವಾಗಿದೆ ಎಂದು ಹೇಳಿ, ನಂತರ ಹೃದ್ರೋಗಗಳು ಬರುವ ಸಾಧ್ಯತೆ ಹೆಚ್ಚಾಗಿದೆ ಎಂಬ ಕಾರಣದಿಂದ ವಿಮಾ ಕಂಪನಿ ಅವರಿಗೆ ಪಾಲಿಸಿಯನ್ನು ನೀಡಿದ್ದರೂ, ಕಂತು ಮಾತ್ರ ಅವರ ಸ್ನೇಹಿತ ಪಾವತಿಸುವುದಕ್ಕಿಂತ ಹೆಚ್ಚಾಗಿರುವುದರಿಂದ ಮತ್ತು ಆದ್ದರಿಂದ ಅವರು ಪಾಲಿಸಿಯನ್ನು ತೆಗೆದುಕೊಳ್ಳಲು ನಿರಾಕರಿಸಿದರು.

ಇಲ್ಲಿ, ವಿಮಾ ಕಂಪನಿಯು ತಮ್ಮ ಅಂಡರ್ ರೈಟಿಂಗ್ ಪ್ರಕ್ರಿಯೆಯ ಭಾಗವಾಗಿ ಈ ಎಲ್ಲ ಹಂತಗಳನ್ನು ಅನುಸರಿಸುತ್ತಿದೆ. ಅಪಾಯದ ವ್ಯಾಪ್ತಿಯನ್ನು ಒದಗಿಸುವಾಗ, ವಿಮಾಗಾರರು ಅಪಾಯಗಳನ್ನು ಸರಿಯಾಗಿ ಮೌಲ್ಯಮಾಪನ ಮಾಡಬೇಕಾಗುತ್ತದೆ ಮತ್ತು ಸಮಂಜಸವಾದ ಲಾಭವನ್ನು ಗಳಿಸಬೇಕಾಗುತ್ತದೆ. ಅಪಾಯವನ್ನು ಸರಿಯಾಗಿ ನಿರ್ಣಯಿಸದಿದ್ದರೆ ಮತ್ತು ಕ್ಲೇಮ್ ಉದ್ಭವಿಸಿದರೆ, ಅದು ನಷ್ಟಕ್ಕೆ ಕಾರಣವಾಗುತ್ತದೆ. ಇದಲ್ಲದೆ, ವಿಮಾಗಾರರು ಎಲ್ಲ ವಿಮಾದಾರರ ಪರವಾಗಿ ಕಂತುಗಳನ್ನು ಸಂಗ್ರಹಿಸುತ್ತಾರೆ ಮತ್ತು ಈ ಹಣವನ್ನು ಒಂದು ಟ್ರಸ್ಟ್ ನಂತೆ ಅವರು ನಿರ್ವಹಿಸಬೇಕಾಗುತ್ತದೆ.

## A. ಅಂಡರ್ ರೈಟಿಂಗ್ ಎಂದರೇನು?

### 1. *ಅಂಡರ್ ರೈಟಿಂಗ್*

ವಿಮಾ ಕಂಪನಿಗಳು ವಿಮಾ ಸಂಚಯನದಲ್ಲಿ ತಾವು ತರುವ ಅಪಾಯಕ್ಕೆ ಅನುಗುಣವಾಗಿ ಸಾಕಷ್ಟು ಕಂತನ್ನು ಪಾವತಿಸಲು ನಿರೀಕ್ಷಿಸುವ ಜನರನ್ನು ವಿಮೆ ಮಾಡಲು ಪ್ರಯತ್ನಿಸುತ್ತವೆ. ಪ್ರಸ್ತಾಪಕರಿಂದ ಮಾಹಿತಿಯನ್ನು ಸಂಗ್ರಹಿಸುವ ಮತ್ತು ವಿಶ್ಲೇಷಿಸುವ ಈ ಪ್ರಕ್ರಿಯೆಯನ್ನು ಅಂಡರ್ ರೈಟಿಂಗ್ ಎಂದು ಕರೆಯಲಾಗುತ್ತದೆ. ಈ ಪ್ರಕ್ರಿಯೆಯ ಮೂಲಕ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ, ಅವರು ಪ್ರಸ್ತಾಪಕರನ್ನು ವಿಮೆ ಮಾಡಬೇಕೆ ಎಂದು ನಿರ್ಧರಿಸುತ್ತಾರೆ. ಅವರು ಹಾಗೆ ಮಾಡಲು ನಿರ್ಧರಿಸಿದರೆ ಯಾವ ಕಂತು, ನಿಯಮಗಳು ಮತ್ತು ಷರತ್ತುಗಳಡಿಯಲ್ಲಿ, ಅಂತಹ ಅಪಾಯವನ್ನು ತೆಗೆದುಕೊಳ್ಳುವುದರಿಂದ ಅವರಿಗೆ ಸಮಂಜಸವಾದ ಲಾಭವನ್ನು ಪಡೆಯಲು ಸಾಧ್ಯವಾಗಬಹುದು.

**ವ್ಯಾಖ್ಯೆ/ವ್ಯಾಖ್ಯಾನ**

ಅಂಡರ್ ರೈಟಿಂಗ್ ಎನ್ನುವುದು ಅಪಾಯವನ್ನು ಸೂಕ್ತವಾಗಿ ನಿರ್ಣಯಿಸುವ ಪ್ರಕ್ರಿಯೆ ಮತ್ತು ವಿಮಾ ರಕ್ಷಣೆಯನ್ನು ನೀಡಬೇಕಾದ ನಿಯಮಗಳನ್ನು ನಿರ್ಧರಿಸುತ್ತದೆ. ಹೀಗಾಗಿ, ಇದು ಅಪಾಯದ ಮೌಲ್ಯಮಾಪನ ಮತ್ತು ಅಪಾಯದ ಬೆಲೆ ನಿರ್ಧರಿಸುವ ಪ್ರಕ್ರಿಯೆಯಾಗಿದೆ.

### 2. *ಅಂಡರ್ ರೈಟಿಂಗ್ ನ ಅಗತ್ಯ*

ವಿಮಾ ಕಂಪನಿಯು ಅಪಾಯವನ್ನು ಅಜಾಗರೂಕತೆಯಿಂದ ಸ್ವೀಕರಿಸುವುದರಿಂದ ಅಥವಾ ಕಡಿಮೆ ಕಂತುಗಳನ್ನು ಸ್ವೀಕರಿಸುವುದರಿಂದ ವಿಮಾಗಾರರ ದಿವಾಳಿತನಕ್ಕೆ ಕಾರಣವಾಗಬಹುದಾದ್ದರಿಂದ ಅಂಡರ್ ರೈಟಿಂಗ್ ವಿಮಾ ಕಂಪನಿಯ ಬೆನ್ನೆಲುಬಾಗಿದೆ. ಮತ್ತೊಂದೆಡೆ, ತುಂಬಾ ಆಯ್ಕೆ ಮಾಡುವದು ಅಥವಾ ಎಚ್ಚರಿಕೆಯಿಂದ ಇರುವುದು ವಿಮಾ ಕಂಪನಿಯು ಅಪಾಯವನ್ನು ಏಕರೂಪವಾಗಿ ಹರಡಲು ದೊಡ್ಡ ಸಂಚಯವನ್ನು ರಚಿಸುವುದರಲ್ಲಿ ತಡೆಯನ್ನುಂಟು ಮಾಡುತ್ತದೆ. ಆದ್ದರಿಂದ ಸಂಸ್ಥೆ ಸ್ಪರ್ಧಾತ್ಮಕ ಮತ್ತು ಲಾಭದಾಯಕವಾಗಲು ಅಪಾಯ ಮತ್ತು ವ್ಯವಹಾರದ ನಡುವಿನ ಸರಿಯಾದ ಸಮತೋಲನವನ್ನು ಕಾಪಾಡುವುದು ನಿರ್ಣಾಯಕವಾಗಿದೆ.

ಸಂಬಂಧಿಸಿದ ವಿಮಾ ಕಂಪನಿಯ ತತ್ತ್ವಶಾಸ್ತ್ರ, ನೀತಿಗಳು ಮತ್ತು ಅಪಾಯದ ಹಸಿವಿಗನುಸಾರವಾಗಿ ಅಂಡರ್ ರೈಟರ್ ರಿಂದ ಈ ಸಮತೋಲನದ ಪ್ರಕ್ರಿಯೆಯನ್ನು ಮಾಡಲಾಗುತ್ತದೆ. ವಯಸ್ಸು ಅನಾರೋಗ್ಯದ ಮತ್ತು ಸಾವಿನ ಸಾಧ್ಯತೆಯ ಮೇಲೆ ಪರಿಣಾಮ ಬೀರುತ್ತದೆಯಾದರೂ, ಅನಾರೋಗ್ಯವು ಸಾಮಾನ್ಯವಾಗಿ ಸಾವಿಗೆ ಬಹಳ ಮುಂಚೆಯೇ ಬರುತ್ತದೆ ಮತ್ತು ಮೇಲಿಂದ ಮೇಲೆ ಬರಬಹುದು ಎಂಬುದನ್ನು ಸಹ ನೆನಪಿನಲ್ಲಿಡಬೇಕು. ಆದ್ದರಿಂದ, ವಿಮೆಯ ಮಾನದಂಡಗಳು ಮತ್ತು ಮಾರ್ಗಸೂಚಿಗಳು ಸಾವಿನ ವ್ಯಾಪ್ತಿಗಿಂತ ಆರೋಗ್ಯ ರಕ್ಷಣೆಗೆ ಹೆಚ್ಚು ಬಿಗಿಯಾಗಿರುವುದು ಸಾಕಷ್ಟು ತಾರ್ಕಿಕವಾಗಿದೆ.

## 3. *ಅಂಡರ್ ರೈಟಿಂಗ್ - ಅಪಾಯದ ಮೌಲ್ಯಮಾಪನ*

ಆರೋಗ್ಯ ವಿಮೆಯಲ್ಲಿ, ಹಣಕಾಸು ಅಥವಾ ಆದಾಯ ಆಧಾರಿತ ಅಂಡರ್ ರೈಟಿಂಗ್ ಗಿಂತ ವೈದ್ಯಕೀಯ ಅಥವಾ ಆರೋಗ್ಯ ಸಂಶೋಧನೆಗಳ ಮೇಲೆ ಹೆಚ್ಚಿನ ಗಮನವಿರುತ್ತದೆ. ಆದಾಗ್ಯೂ, ವಿಮಾಸಕ್ತಿಯ ಅವಶ್ಯಕತೆ ಮತ್ತು ಯಾವುದೇ ಪ್ರತಿಕೂಲ ಆಯ್ಕೆಯನ್ನು ಆಗದಂತೆ ನೋಡಿಕೊಳ್ಳಲು ಮತ್ತು ಆರೋಗ್ಯ ವಿಮೆಯ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ಹಣಕಾಸಿನ ಅಂಡರ್ ರೈಟಿಂಗ್ ಮುಖ್ಯವಾಗಿದ್ದು ಅದನ್ನು ನಿರ್ಲಕ್ಷಿಸಲಾಗುವುದಿಲ್ಲ.

| ಉದಾಹರಣೆ |
|---|

ಮಧುಮೇಹ ಹೊಂದಿರುವ ವ್ಯಕ್ತಿಗೆ ಮರಣಕ್ಕಿಂತ ಆಸ್ಪತ್ರೆ ದಾಖಲಾತಿಯ ಅಗತ್ಯವಿರುವ ಹೃದಯ ಅಥವಾ ಮೂತ್ರಪಿಂಡದ ತೊಡಕುಗಳನ್ನು ಎದುರಿಸುವ ಹೆಚ್ಚಿನ ಅವಕಾಶವಿರುತ್ತದೆ ಮತ್ತು ವಿಮಾ ರಕ್ಷಣೆಯ ಸಮಯದಲ್ಲಿ ಅನಾರೋಗ್ಯದ ಕಂತುಗಳು ಹಲವಾರು ಬಾರಿ ಸಂಭವಿಸಬಹುದು. ಜೀವ ವಿಮಾ ಅಂಡರ್ ರೈಟಿಂಗ್ ಮಾರ್ಗಸೂಚಿಯು ಈ ವ್ಯಕ್ತಿಯನ್ನು ಸರಾಸರಿ ಅಪಾಯವೆಂದು ರೇಟ್ ಮಾಡಬಹುದು. ಆದಾಗ್ಯೂ, ವೈದ್ಯಕೀಯ ಅಂಡರ್ ರೈಟಿಂಗ್ ಗಾಗಿ, ಅವರು ಹೆಚ್ಚಿನ ಅಪಾಯ ಎಂದು ರೇಟ್ ಮಾಡುತ್ತಾರೆ.

## 4. *ಅನಾರೋಗ್ಯದ ಸಾಧ್ಯತೆಯ ಮೇಲೆ ಪರಿಣಾಮ ಬೀರುವ ಅಂಶಗಳು*

ಅಪಾಯವನ್ನು ನಿರ್ಣಯಿಸುವಾಗ ಅನಾರೋಗ್ಯದ ಮೇಲೆ ಪರಿಣಾಮ ಬೀರುವ ಈ ಕೆಳಗಿನಂತಹ ಅಂಶ(ಅನಾರೋಗ್ಯಕ್ಕೆ ಒಳಗಾಗುವ ಅಪಾಯ)ಗಳನ್ನು ಎಚ್ಚರಿಕೆಯಿಂದ ಪರಿಗಣಿಸಬೇಕು.:

a) **ವಯಸ್ಸು:** ವಯಸ್ಸು ಮತ್ತು ಅಪಾಯದ ಮಟ್ಟಕ್ಕನುಗುಣವಾಗಿ ಕಂತುಗಳನ್ನು ವಿಧಿಸಲಾಗುತ್ತದೆ. ಉದಾ. ಸೋಂಕುಗಳು ಮತ್ತು ಅಪಘಾತಗಳ ಹೆಚ್ಚಿನ ಅಪಾಯದಿಂದಾಗಿ ಶಿಶುಗಳು ಮತ್ತು ಮಕ್ಕಳ ಕಂತುಗಳು ಯುವ ವಯಸ್ಕರಿಗಿಂತ ಹೆಚ್ಚಾಗಿರುತ್ತದೆ. ಅದೇ ರೀತಿಯಾಗಿ, ಮಧುಮೇಹ, ಹಠಾತ್ ಹೃದಯ ಕಾಯಿಲೆ ಅಥವಾ ಅಂತಹ ಇತರ ಕಾಯಿಲೆಗಳಂತಹ ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿರುವ ಸಂಭವದಿಂದಾಗಿ 45 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಕರಿಗೆ ಕಂತುಗಳು ಹೆಚ್ಚಾಗಿರುತ್ತವೆ.

b) **ಲಿಂಗ:** ಗರ್ಭಾವಸ್ಥೆಯ ಅವಧಿಯಲ್ಲಿ ಮಹಿಳೆಯರು ಅನಾರೋಗ್ಯದ ಹೆಚ್ಚುವರಿ ಅಪಾಯಕ್ಕೆ ಒಡ್ಡಿಕೊಳ್ಳುತ್ತಾರೆ. ಆದಾಗ್ಯೂ, ಮಹಿಳೆಯರಿಗಿಂತ ಪುರುಷರು ಹೃದಯಾಘಾತದ ಪ್ರಭಾವಕ್ಕೆ ಅಥವಾ ಅವರು ಅಪಾಯಕಾರಿ ಉದ್ಯೋಗದಲ್ಲಿ ಹೆಚ್ಚು ತೊಡಗಿಸಿಕೊಂಡಿರುವುದರಿಂದ ಮಹಿಳೆಯರಿಗಿಂತ ಹೆಚ್ಚು ಉದ್ಯೋಗ ಸಂಬಂಧಿತ ಅಪಘಾತಗಳಿಗೆ ಒಳಗಾಗುತ್ತಾರೆ.

c) **ಅಭ್ಯಾಸಗಳು/ಚಟಗಳು:** ಯಾವುದೇ ರೂಪದಲ್ಲಿ ತಂಬಾಕು, ಮದ್ಯ ಅಥವಾ ಮಾದಕ ದ್ರವ್ಯಗಳ ಸೇವನೆಯು ಅನಾರೋಗ್ಯದ ಅಪಾಯದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

d) **ಉದ್ಯೋಗ:** ವಾಹನ ಚಾಲಕ, ಬ್ಲಾಸ್ಟರ್, ವಿಮಾನಚಾಲಕ ಇತ್ಯಾದಿಗಳಂತಹ ಕೆಲವು ಉದ್ಯೋಗಗಳಲ್ಲಿ ಅಪಘಾತಗಳ ಹೆಚ್ಚುವರಿ ಅಪಾಯ ಸಾಧ್ಯವಿರುತ್ತದೆ. ಅದೇ ರೀತಿಯಾಗಿ, ಎಕ್ಸ್-ರೇ ಯಂತ್ರ ನಿರ್ವಾಹಕರು, ಕಲ್ನಾರಿನ ಉದ್ಯಮದ ಕೆಲಸಗಾರರು, ಗಣಿಗಾರರು ಇತ್ಯಾದಿಗಳಂತಹ ಕೆಲವು ಉದ್ಯೋಗಗಳು ಹೆಚ್ಚಿನ ಆರೋಗ್ಯದ ಅಪಾಯಗಳನ್ನು ಹೊಂದಿರಬಹುದು.

e) **ಕುಟುಂಬದ ಇತಿಹಾಸ:** ಆನುವಂಶಿಕ ಅಂಶಗಳು ಅಸ್ತಮಾ, ಮಧುಮೇಹ ಮತ್ತು ಕೆಲವು ಕ್ಯಾನ್ಸರ್ ಗಳಂತಹ ರೋಗಗಳ ಮೇಲೆ ಪ್ರಭಾವ ಬೀರುತ್ತವಾದ್ದರಿಂದ ಇದು ಹೆಚ್ಚಿನ ಪ್ರಸ್ತುತತೆಯನ್ನು ಹೊಂದಿದೆ. ಇದು ಅನಾರೋಗ್ಯದ ಸಾಧ್ಯತೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಅಪಾಯವನ್ನು ಸ್ವೀಕರಿಸುವಾಗ ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

f) **ಮೈಕಟ್ಟು:** ಪುಷ್ಟ/ದಪ್ಪ, ತೆಳ್ಳಗಿನ ಅಥವಾ ಸರಾಸರಿ ಮೈಕಟ್ಟು ಕೆಲವು ಗುಂಪುಗಳಲ್ಲಿಯ ಅಸ್ವಸ್ಥತೆಗೆ ಸಂಬಂಧಿಸಿರಬಹುದು.

g) **ಹಿಂದಿನ ಅನಾರೋಗ್ಯ ಅಥವಾ ಶಸ್ತ್ರಚಿಕಿತ್ಸೆ:** ಹಿಂದಿನ ಅನಾರೋಗ್ಯವು ದೈಹಿಕ ದೌರ್ಬಲ್ಯವನ್ನು ಹೆಚ್ಚಿಸುವ ಅಥವಾ ಮರುಕಳಿಸುವ ಸಾಧ್ಯತೆಯನ್ನು ಹೊಂದಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು ಮತ್ತು ಅದರ ಪ್ರಕಾರ ಪಾಲಿಸಿ ನಿಯಮಗಳನ್ನು ನಿರ್ಧರಿಸಬೇಕು. ಉದಾ. ಮೂತ್ರಪಿಂಡದ ಕಲ್ಲು(ಕಿಡ್ನಿಸ್ಟೋನ್)ಗಳು ಮರುಕಳಿಸುತ್ತವೆ ಮತ್ತು ಅದೇ ರೀತಿ, ಒಂದು ಕಣ್ಣಿನಲ್ಲಿ ಕಣ್ಣಿನ ಪೊರೆಯು ಮತ್ತೊಂದು ಕಣ್ಣಿನಲ್ಲಿ ಕಣ್ಣಿನ ಪೊರೆ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

h) **ಪ್ರಸ್ತುತ ಆರೋಗ್ಯ ಸ್ಥಿತಿ ಮತ್ತು ಇತರ ಅಂಶಗಳು ಅಥವಾ ಕಾಯಿಲೆಗಳು:** ಅಪಾಯ ಮತ್ತು ವಿಮೆಯ ಮಟ್ಟವನ್ನು ಖಚಿತಪಡಿಸಿಕೊಳ್ಳಲು ಇದು ಮುಖ್ಯವಾಗಿದೆ ಮತ್ತು ಸೂಕ್ತ ಬಹಿರಂಗಪಡಿಸುವಿಕೆ ಮತ್ತು ವೈದ್ಯಕೀಯ ಪರೀಕ್ಷೆಯ ಮೂಲಕ ಸ್ಥಾಪಿಸಬಹುದು.

i) **ಪರಿಸರ ಮತ್ತು ವಾಸಸ್ಥಳ:** ಇವುಗಳು ಸಹ ಅನಾರೋಗ್ಯ ಸಾಧ್ಯತೆಯ ಮಟ್ಟದ ಮೇಲೆ ಪ್ರಭಾವ ಬೀರುತ್ತವೆ.

**ಆರೋಗ್ಯ ವಿಮೆಯಲ್ಲಿ ನೈತಿಕ ಅಪಾಯವನ್ನು ಅರ್ಥಮಾಡಿಕೊಳ್ಳುವುದು**

ವಯಸ್ಸು, ಲಿಂಗ, ಅಭ್ಯಾಸ/ಚಟಗಳು ಇತ್ಯಾದಿಗಳಂತಹ ಅಂಶಗಳು ಆರೋಗ್ಯದ ಅಪಾಯದ ದೈಹಿಕ ಅಪಾಯವನ್ನು ಸೂಚಿಸುತ್ತವೆಯಾದರೂ, ನಿಕಟವಾಗಿ ವೀಕ್ಷಿಸಬೇಕಾದ ಇನ್ನೊಂದು ಅಂಶವಿದೆ. ಇದು ಗ್ರಾಹಕರ ನೈತಿಕ ಅಪಾಯವಾಗಿದೆ, ಇದು ವಿಮಾ ಕಂಪನಿಗೆ ತುಂಬಾ ದುಬಾರಿಯಾಗಬಹುದಾಗಿದೆ.

ಕೆಟ್ಟ ನೈತಿಕ ಅಪಾಯದ ಒಂದು ತೀವ್ರವಾದ ಉದಾಹರಣೆಯೆಂದರೆ, ವಿಮಾದಾರನು ಆರೋಗ್ಯ ವಿಮೆಯನ್ನು ತೆಗೆದುಕೊಳ್ಳುತ್ತಾನೆ, ತಾನು ಕಡಿಮೆ ಸಮಯದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತೇನೆ ಎಂದು ತಿಳಿದಿದ್ದರೂ ಅದನ್ನು ವಿಮಾಗಾರರಿಗೆ ಬಹಿರಂಗಪಡಿಸುವುದಿಲ್ಲ. ಇಲ್ಲಿ ಕ್ಲೇಮ್ ಪಡೆಯಲು ವಿಮೆ ತೆಗೆದುಕೊಳ್ಳುವ ಉದ್ದೇಶಪೂರ್ವಕ ಉದ್ದೇಶವಿದೆ..

**ನಿಮ್ಮನ್ನು ಪರೀಕ್ಷಿಸಿ 1**

ಅಂಡರ್ ರೈಟಿಂಗ್ ಎನ್ನುವುದು __________ ಪ್ರಕ್ರಿಯೆಯಾಗಿದೆ.

I. ವಿಮಾ ಉತ್ಪನ್ನಗಳ ಮಾರ್ಕೆಟಿಂಗ್

II. ಗ್ರಾಹಕರಿಂದ ಕಂತುಗಳನ್ನು ಸಂಗ್ರಹಿಸುವುದು

III. ಅಪಾಯದ ಮೌಲ್ಯಮಾಪನ ಮತ್ತು ಅಪಾಯದ ಬೆಲೆನಿರ್ಧಾರ

IV. ವಿವಿಧ ವಿಮಾ ಉತ್ಪನ್ನಗಳನ್ನು ಮಾರಾಟ ಮಾಡುವುದು

## B. ಅಂಡರ್ ರೈಟಿಂಗ್ – ಮೂಲಭೂತ ಪರಿಕಲ್ಪನೆಗಳು

### 1. ಅಂಡರ್ ರೈಟಿಂಗ್ ನ ಉದ್ದೇಶ

ಅಂಡರ್ ರೈಟಿಂಗ್ ನ ಎರಡು ಮುಖ್ಯ ಉದ್ದೇಶಗಳಿವೆ.

i. ವಿಮಾಗಾರರ ವಿರುದ್ಧ ಆಯ್ಕೆಯಾದ ವಿರೋಧಿ ಆಯ್ಕೆಯನ್ನು ತಡೆಗಟ್ಟುವುದು

ii. ಅಪಾಯಗಳನ್ನು ವರ್ಗೀಕರಿಸಲು ಮತ್ತು ಅಪಾಯಗಳ ನಡುವೆ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು

**ವ್ಯಾಖ್ಯೆ/ವ್ಯಾಖ್ಯಾನ**

**ಅಪಾಯಗಳ ಮೌಲ್ಯಮಾಪನವು** ಆರೋಗ್ಯ ವಿಮೆಯ ಪ್ರತಿ ಪ್ರಸ್ತಾವನೆಯನ್ನು ಅದು ಪ್ರತಿನಿಧಿಸುವ ಅಪಾಯದ ಮಟ್ಟಕ್ಕನುಗುಣವಾಗಿ ಮೌಲ್ಯಮಾಪನ ಮಾಡುವ ಮತ್ತು ನಂತರ ವಿಮೆಯನ್ನು ನೀಡಬೇಕೆ ಅಥವಾ ಬೇಡವೇ ಮತ್ತು ಯಾವ ನಿಯಮಗಳ ಮೇಲೆ ನೀಡಬೇಕೆಂಬುದನ್ನು ನಿರ್ಧರಿಸುವ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ವಿರೋಧಿ ಆಯ್ಕೆ (ಅಥವಾ ಪ್ರತಿಕೂಲ ಆಯ್ಕೆ)ಯೆಂದರೆ ತಮ್ಮ ನಷ್ಟವನ್ನು ದಕ್ಕಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುವ ಬಗ್ಗೆ ಸಂಶಯ ಹೊಂದಿರುವ ಅಥವಾ ತಿಳಿದಿರುವ ಜನರು ವಿಮೆಯನ್ನು ಕುತೂಹಲದಿಂದ ದಕ್ಕಿಸಿಕೊಳ್ಳುವ ಮತ್ತು ಪ್ರಕ್ರಿಯೆಯಲ್ಲಿ ಲಾಭ ಪಡೆಯುವ ಪ್ರವೃತ್ತಿಯಾಗಿದೆ.

**ಉದಾಹರಣೆ**

ವಿಮಾಗಾರರು ಯಾರಿಗೆ ಮತ್ತು ಹೇಗೆ ವಿಮೆಯನ್ನು ನೀಡಬೇಕು ಎಂಬುದರ ಕುರಿತು ಆಯ್ಕೆ ಮಾಡದಿದ್ದರೆ, ಮಧುಮೇಹ, ಅಧಿಕ ಬಿಪಿ, ಹೃದಯ ಸಮಸ್ಯೆಗಳು ಅಥವಾ ಕ್ಯಾನ್ಸರ್ ನಂತಹ ಗಂಭೀರ ಕಾಯಿಲೆಗಳಿರುವ ಜನರು ಶೀಘ್ರದಲ್ಲೇ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ ಎಂದು ತಿಳಿದವರು ಆರೋಗ್ಯ ವಿಮೆಯನ್ನು ಖರೀದಿಸಲು ಹೆಚ್ಚಾಗಿ ಪ್ರಯತ್ನಿಸುವ ಮತ್ತು ವಿಮಾಗಾರರಿಗೆ ನಷ್ಟವನ್ನುಂಟು ಮಾಡುವ ಸಾಧ್ಯತೆಯಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ವಿಮಾಗಾರರು ಅಪಾಯವನ್ನು ಸರಿಯಾಗಿ ನಿರ್ಣಯಿಸದಿದ್ದರೆ, ಅದನ್ನು ವಿರುದ್ಧ ಆಯ್ಕೆ ಎನ್ನಲಾಗುತ್ತದೆ ಮತ್ತು ಪ್ರಕ್ರಿಯೆಯಲ್ಲಿ ಅವರು ನಷ್ಟವನ್ನು ಅನುಭವಿಸುತ್ತಾರೆ.

## 2. ಅಪಾಯಗಳಲ್ಲಿ ಸಮಾನತೆ

ಈಗ ಅಪಾಯಗಳ ನಡುವಿನ ಸಮಾನತೆಯನ್ನು ಪರಿಗಣಿಸೋಣ. "ಸಮಾನತೆ"ಯೆಂದರೆ ಒಂದೇ ರೀತಿಯ ಪ್ರಕಾರಗಳು ಮತ್ತು ಅಪಾಯದ ಮಟ್ಟಗಳಿಗೆ ಒಡ್ಡಿಕೊಳ್ಳುವ ಅರ್ಜಿದಾರರನ್ನು ಒಂದೇ ಕಂತಿನ ವರ್ಗದಲ್ಲಿ ಇರಿಸಲಾಗುತ್ತದೆ. ವಿಮಾಗಾರರು ವಿಧಿಸಬೇಕಾದ ಕಂತುಗಳನ್ನು ನಿರ್ಧರಿಸಲು ಕೆಲವು ರೀತಿಯ ಪ್ರಮಾಣೀಕರಣವನ್ನು ಹೊಂದಲು ಬಯಸುತ್ತಾರೆ. ಅಂಡರ್ ರೈಟರ್ ರಿಗೆ ಬರುವ ಪ್ರಸ್ತಾಪಗಳನ್ನು ಈ ಕೆಳಗೆ ನೀಡಿದಂತೆ ಅಪಾಯದ ಪ್ರಕಾರಗಳಾಗಿ ವರ್ಗೀಕರಿಸಲಾಗಿದೆ:

### i. ಪ್ರಮಾಣಿತ/ಸಾಮಾನ್ಯ ಅಪಾಯಗಳು

ಇವರು ನಿರೀಕ್ಷಿತ ಕಾಯಿಲೆ(ಅನಾರೋಗ್ಯಕ್ಕೆ ಒಳಗಾಗುವ ಸಾಧ್ಯತೆ)ಗೆ ಒಳಗಾಗುವ ಸಾಧ್ಯತೆ ಸರಾಸರಿಯಾಗಿರುವ ಜನರಾಗಿದ್ದಾರೆ.

### ii. ಆದ್ಯತೆಯ ಅಪಾಯಗಳು

ಕೆಲವು ಸಂದರ್ಭಗಳಲ್ಲಿ, ನಿರೀಕ್ಷಿತ ರೋಗದ ಸಾಧ್ಯತೆಯು ಸರಾಸರಿಗಿಂತ ಗಮನಾರ್ಹವಾಗಿ ಕಡಿಮೆಯಾಗಿರುತ್ತದೆ ಮತ್ತು ಆದ್ದರಿಂದ ಇವುಗಳನ್ನು ಆದ್ಯತೆಯ ಅಪಾಯಗಳೆಂದು ಕರೆಯಲಾಗುತ್ತದೆ. ಇವುಗಳಿಗೆ ಕಡಿಮೆ ಕಂತನ್ನು ವಿಧಿಸಬಹುದು.

### iii. ಕೆಳದರ್ಜೆಯ ಅಪಾಯಗಳು

ಇತರ ಕೆಲವು ಸಂದರ್ಭಗಳಲ್ಲಿ, ನಿರೀಕ್ಷಿತ ರೋಗದ ಸಾಧ್ಯತೆಯು ಸರಾಸರಿಗಿಂತ ಹೆಚ್ಚಾಗಿರಬಹುದು. ಈ ಅಪಾಯಗಳನ್ನು ಸಹ ವಿಮೆ ಮಾಡಬಹುದಾದರೂ, ವಿಮಾಗಾರರು ಹೆಚ್ಚಿನ ಕಂತುಗಳನ್ನು ವಿಧಿಸಬಹುದು ಮತ್ತು/ಅಥವಾ ಕೆಲವು ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಅವುಗಳನ್ನು ಸ್ವೀಕರಿಸಬಹುದು.

**iv. ನಿರಾಕರಿಸಲ್ಪಟ್ಟ ಅಪಾಯಗಳು**

ಕೆಲವು ಅನಾರೋಗ್ಯಕ್ಕೆ ಹೆಚ್ಚು ಒಳಗಾಗುವಂತೆ ಮಾಡುವ ಮತ್ತು ಕ್ಲೇಮ್ ಗಳನ್ನುಂಟು ಮಾಡುವ ವೈದ್ಯಕೀಯ ಅಥವಾ ಇತರ ಪರಿಸ್ಥಿತಿಗಳನ್ನು ಹೊಂದಿರುವ ಕೆಲವು ವ್ಯಕ್ತಿಗಳಿರುತ್ತಾರೆ. ಅಂತಹ ವ್ಯಕ್ತಿಗಳು ಅನಾರೋಗ್ಯಕ್ಕೆ ಒಳಗಾಗುತ್ತಾರೆ ಮತ್ತು ಅವರು ಸಾಮಾನ್ಯ ಸಂಚಯನದಲ್ಲಿ ಅಸಮಾನ ಮಟ್ಟದ ಹೊಣೆಗಾರಿಕೆಯನ್ನು ಉಂಟುಮಾಡುವ ಸಾಧ್ಯತೆಯಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸಂಚಯನದಲ್ಲಿರುವ ಇತರರು ಅನಾರೋಗ್ಯಕ್ಕೆ ಒಳಗಾಗುವ ಹೆಚ್ಚುಕಡಿಮೆ ಸರಾಸರಿ ಅವಕಾಶವನ್ನು ಹೊಂದಿರುವಾಗ, ಈ ವ್ಯಕ್ತಿಗಳು ಅನಾರೋಗ್ಯಕ್ಕೆ ಒಳಗಾಗುವ ಹೆಚ್ಚಿನ ಅವಕಾಶವನ್ನು ಹೊಂದಿರುತ್ತಾರೆ, ಇದರಿಂದಾಗಿ ಹೆಚ್ಚಿನ ಕಂತು ದರದಲ್ಲಿ ಸಹ ಅವರನ್ನು ವಿಮೆ ಮಾಡುವುದು ಕಷ್ಟವಾಗುತ್ತದೆ. [ಕೆಲವೊಮ್ಮೆ, ಅಂತಹ ವ್ಯಕ್ತಿಗಳು ತಮ್ಮ ಅನಾರೋಗ್ಯಕ್ಕೆ ಒಳಗಾಗುವ ಹೆಚ್ಚಿನ ಸಂಭವನೀಯತೆಯನ್ನು ಬಹಿರಂಗಪಡಿಸದಿದ್ದಾಗ ಮತ್ತು ಇತರ ಸಾಮಾನ್ಯ ಜನರಂತೆ ವಿಮೆ ಮಾಡಲು ಪ್ರಯತ್ನಿಸಿದಾಗ ನೈತಿಕ ಅಪಾಯವನ್ನುಂಟುಮಾಡಬಹುದು.] ಹೆಚ್ಚಿನ ವಿಮಾಗಾರರು ಇಂತಹ ಅಪಾಯಗಳನ್ನು ನಿರಾಕರಿಸುತ್ತಾರೆ ಮತ್ತು ಭವಿಷ್ಯದ ಬಳಕೆಗಾಗಿ ಅಂತಹ ಜನರ ಮಾಹಿತಿಯನ್ನು ರಚಿಸುತ್ತಾರೆ.

'ನಿರಾಕರಿಸಲ್ಪಟ್ಟ ಅಪಾಯ'ವಾಗಿರುವುದೆಂದರೆ ನಿರ್ದಿಷ್ಟ ವಿಮಾಗಾರರು ಆ ನಿರ್ದಿಷ್ಟ ಸಮಯದಲ್ಲಿ ಆ ರೀತಿಯ ವಿಮಾ ಉತ್ಪನ್ನಕ್ಕೆ ವ್ಯಕ್ತಿಯನ್ನು ವಿಮೆ ಮಾಡಬಯಸುವುದಿಲ್ಲ. ಆದಾಗ್ಯೂ, ಇನ್ನೊಬ್ಬ ವಿಮಾಗಾರರು ಅವನು/ಅವಳನ್ನು ಬೇರೆ ಕಂತು ದರದಲ್ಲಿ ಮತ್ತು/ಅಥವಾ ಬೇರೆ ಬೇರೆ ಷರತ್ತುಗಳೊಂದಿಗೆ ವಿಮೆ ಮಾಡುವ ಸಾಧ್ಯತೆಯಿದೆ. ಪರಿಸ್ಥಿತಿಗಳು ಬದಲಾದಾಗ ಅದೇ ವಿಮಾಗಾರರು ಅವನನ್ನು/ಅವಳನ್ನು ಇನ್ನೊಂದು ವಿಧದ ಪಾಲಿಸಿಗಾಗಿ ಅಥವಾ ಅದೇ ಪಾಲಿಸಿಗೆ ಸಹ ಪರಿಗಣಿಸಬಹುದು.

## 3. ಅಂಡರ್ ರೈಟಿಂಗ್ ಪ್ರಕ್ರಿಯೆ

**ಅಂಡರ್ ರೈಟಿಂಗ್ ಪ್ರಕ್ರಿಯೆಯು ಎರಡು ಹಂತಗಳಲ್ಲಿ ನಡೆಯುತ್ತದೆ:**

- ✓ ಪ್ರಾಥಮಿಕ ಅಥವಾ ಕ್ಷೇತ್ರ ಮಟ್ಟದಲ್ಲಿ ಅಥವಾ
- ✓ ಅಂಡರ್ ರೈಟಿಂಗ್ ಇಲಾಖೆಯ ಮಟ್ಟದಲ್ಲಿ

### a) ಪ್ರಾಥಮಿಕ ಅಂಡರ್ ರೈಟಿಂಗ್

ಪ್ರಾಥಮಿಕ ಅಂಡರ್ ರೈಟಿಂಗ್ (ಅಥವಾ ಕ್ಷೇತ್ರ ಮಟ್ಟದ ಅಂಡರ್ ರೈಟಿಂಗ್) ವಿಮಾ ರಕ್ಷಣೆಯನ್ನು ನೀಡಲು ಅರ್ಜಿದಾರರು ಸೂಕ್ತರೇ ಎಂಬುದನ್ನು ನಿರ್ಧರಿಸಲು ಏಜೆಂಟರು ಅಥವಾ ಕಂಪನಿಯ ಪ್ರತಿನಿಧಿಯಿಂದ ಮಾಹಿತಿ ಸಂಗ್ರಹಣೆಯನ್ನು ಒಳಗೊಂಡಿರುತ್ತದೆ. ಏಜೆಂಟರು ಪ್ರಾಥಮಿಕ ಅಂಡರ್ ರೈಟಿಂಗ್ ನ ಈ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ನಿರೀಕ್ಷಿತ ಗ್ರಾಹಕರನ್ನು ವಿಮೆ ಮಾಡಬಹುದೇ ಎಂದು ತಿಳಿಯಲು ಅವರು ಅತ್ಯುತ್ತಮ ಸ್ಥಾನದಲ್ಲಿರುತ್ತಾರೆ.

ಕೆಲವು ವಿಮಾ ಕಂಪನಿಗಳಿಗೆ ಪ್ರತಿನಿಧಿಗಳು ಪ್ರಸ್ತಾಪಕರ ಕುರಿತು ನಿರ್ದಿಷ್ಟ ಮಾಹಿತಿ, ಅಭಿಪ್ರಾಯ ಮತ್ತು ಶಿಫಾರಸುಗಳೊಂದಿಗೆ ಹೇಳಿಕೆ ಅಥವಾ ಗೌಪ್ಯ ವರದಿಯನ್ನು ಒದಗಿಸುವ ಅಗತ್ಯವಿದೆ.

ನೈತಿಕ ಅಪಾಯದ ವರದಿ ಎಂದು ಕರೆಯಲ್ಪಡುವ ಇದೇ ರೀತಿಯ ವರದಿಯನ್ನು ವಿಮಾ ಕಂಪನಿಯ ಅಧಿಕಾರಿಯಿಂದ ಸಹ ಕೇಳಲ್ಪಡಬಹುದು. ಈ ವರದಿಗಳು ಸಾಮಾನ್ಯವಾಗಿ ಆರೋಗ್ಯ ವಿಮೆಗಾಗಿ ಪ್ರಸ್ತಾಪಿಸಲಾದ ವ್ಯಕ್ತಿಯ ಉದ್ಯೋಗ, ಆದಾಯ ಮತ್ತು ಆರ್ಥಿಕ ಸ್ಥಿತಿ ಮತ್ತು ಖ್ಯಾತಿಯನ್ನು ಒಳಗೊಂಡಿರುತ್ತವೆ.

### 4. ಏಜೆಂಟರ ವಂಚನೆಯ ಮೇಲ್ವಿಚಾರಣೆಯ ಪಾತ್ರ

ವಿಮೆಗಾಗಿ ಅಪಾಯವನ್ನು ಆಯ್ಕೆಮಾಡುವ ನಿರ್ಧಾರಗಳು ಪ್ರಸ್ತಾವನೆ ನಮೂನೆಯಲ್ಲಿ ಪ್ರಸ್ತಾಪಿಸುವವರು ಬಹಿರಂಗಪಡಿಸಿದ ಸಂಗತಿಗಳನ್ನು ಅವಲಂಬಿಸಿರುತ್ತದೆ. ಈ ಸಂಗತಿಗಳು ನಿಜವೇ ಅಥವಾ ವಿಮಾಗಾರರಿಗೆ ಮೋಸ ಮಾಡುವ ಉದ್ದೇಶದಿಂದ ವಂಚನೆಯಿಂದ ತಪ್ಪಾಗಿ ನಿರೂಪಿಸಲಾಗಿದೆಯೇ ಎಂದು ತಿಳಿಯಲು ಕಛೇರಿಯಲ್ಲಿ ಕುಳಿತಿರುವ ಅಂಡರ್ ರೈಟರ್ ರಿಗೆ ಕಷ್ಟವಾಗುತ್ತದೆ.

ಏಜೆಂಟರು, ಪ್ರಾಥಮಿಕ ಅಂಡರ್ ರೈಟರ್ ರಾಗಿ ಇಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಏಜೆಂಟರು ಪ್ರಸ್ತಾಪಕರೊಂದಿಗೆ ನೇರವಾದ ವೈಯಕ್ತಿಕ ಸಂಪರ್ಕವನ್ನು ಹೊಂದಿರುವುದರಿಂದ, ಸಲ್ಲಿಸಿದ ಮಾಹಿತಿಯು ನಿಜವಾಗಿದೆಯೇ ಮತ್ತು ಯಾವುದೇ ಅಂಶವನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡಲಾದ ಅಥವಾ ತಪ್ಪಾಗಿ ನಿರೂಪಿಸಲಾಗಿರುವ ಬಗ್ಗೆ ಕಂಡುಹಿಡಿಯಲು ಅವನು ಅಥವಾ ಅವಳು ಅತ್ಯುತ್ತಮ ಸ್ಥಾನದಲ್ಲಿದ್ದಾರೆ.

#### a) ಅಂಡರ್ ರೈಟಿಂಗ್ ವಿಭಾಗದ ಪಾತ್ರ

ವಿಮಾಗಾರರ ಕಛೇರಿಯಲ್ಲಿರುವ ಅಂಡರ್ ರೈಟಿಂಗ್ ವಿಭಾಗವು ಅಂಡರ್ ರೈಟಿಂಗ್ ನ ಪ್ರಮುಖ ಭಾಗವನ್ನು ಮಾಡುತ್ತದೆ. ಇಲ್ಲಿ, ಅಂಡರ್ ರೈಟಿಂಗ್ ಕೆಲಸದಲ್ಲಿ ಪರಿಣಿತರಾಗಿರುವ ತಜ್ಞರು, ನಿರ್ದಿಷ್ಟ ಅಪಾಯದ ಎಲ್ಲ ಸಂಬಂಧಿತ ಮಾಹಿತಿಯನ್ನು ಮತ್ತು ಕೆಲವು ಜನಸಂಖ್ಯಾ ಮಾಹಿತಿಯನ್ನು ಪರಿಗಣಿಸುತ್ತಾರೆ ಮತ್ತು ವಿಶ್ಲೇಷಿಸುತ್ತಾರೆ. ಅವರು ಅಂತಿಮವಾಗಿ ವಿಮೆಯ ಪ್ರಸ್ತಾಪವನ್ನು ಒಪ್ಪಿಕೊಳ್ಳಬೇಕೇ ಎಂದು ನಿರ್ಧರಿಸುತ್ತಾರೆ, ನಿಯಮಗಳನ್ನು ನಿರ್ಧರಿಸುತ್ತಾರೆ ಮತ್ತು ಸೂಕ್ತವಾದ ಕಂತುಗಳನ್ನು ವಿಧಿಸುತ್ತಾರೆ.

## C. ಐಆರ್ ಡಿಎಐಯ ಇತರ ಆರೋಗ್ಯ ವಿಮಾ ನಿಯಮಗಳು

ಈ ಕೆಳಗೆ ನೀಡಿರುವಂತೆ ವಿಮಾದಾರರ ಪ್ರಯೋಜನಕ್ಕಾಗಿ ನಿಯಂತ್ರಕರು ಕೆಲವು ಬದಲಾವಣೆಗಳನ್ನು ತಂದಿದ್ದಾರೆ.

a. ವಿಮಾದಾರರಿಗೆ ಪಾಲಿಸಿಯನ್ನು ನೀಡುವ ಮೊದಲು ಅವರಿಗೆ ವಿಧಿಸಲಾದ ಕಂತಿಗಿಂತ ಹೆಚ್ಚಿನ ಶುಲ್ಕ ಯಾವುದೇ ಅಂಡರ್ ರೈಟಿಂಗ್ ಲೋಡಿಂಗ್ ನ ಬಗ್ಗೆ ತಿಳಿಸಬೇಕು ಮತ್ತು ಅಂತಹ ಲೋಡಿಂಗ್ ಗಳಿಗೆ ಪಾಲಿಸಿದಾರರ ನಿರ್ದಿಷ್ಟ ಒಪ್ಪಿಗೆಯನ್ನು ಪಡೆಯಬೇಕು.

b. ವಿಮಾ ಕಂಪನಿಗೆ ಪಾಲಿಸಿಯ ನಂತರದ ಹಂತದಲ್ಲಿ ಅಥವಾ ಅದರ ನವೀಕರಣದ ಸಮಯದಲ್ಲಿ ಉದ್ಯೋಗದ ಬದಲಾವಣೆಯಂತಹ ಯಾವುದೇ ಹೆಚ್ಚಿನ ಮಾಹಿತಿಯ ಅಗತ್ಯವಿದ್ದರೆ, ಪಾಲಿಸಿ ದಾಖಲೆಯ ಭಾಗವಾಗುವ ವಿಮಾದಾರರಿಂದ ಭರಿಸಬೇಕಾದ ಪ್ರಮಾಣಿತ ನಮೂನೆಗಳನ್ನು ಹೊಂದಿರುತ್ತದೆ.

c. ಅದೇ ವಿಮಾದಾರರೊಂದಿಗೆ ಶೀಘ್ರ ಪ್ರವೇಶ, ಮುಂದುವರಿದ ನವೀಕರಣಗಳು, ಅನುಕೂಲಕರ ಕ್ಲೇಮ್ ಗಳ ಅನುಭವ ಇತ್ಯಾದಿಗಳಿಗಾಗಿ ಪಾಲಿಸಿದಾರರಿಗೆ ಬಹುಮಾನ ನೀಡಲು ವಿಮಾಗಾರರು ವಿವಿಧ ಕಾರ್ಯವಿಧಾನಗಳನ್ನು ತರುತ್ತಾರೆ ಮತ್ತು ವಿವರಣಾ ಪತ್ರ(ಪ್ರಾಸ್ಪೆಕ್ಟಸ್) ಮತ್ತು ಪಾಲಿಸಿ ದಾಖಲೆಯಲ್ಲಿ ಅಂತಹ ಕಾರ್ಯವಿಧಾನ ಅಥವಾ ಪ್ರೋತ್ಸಾಹನೆಯನ್ನು ಮುಂಗಡವಾಗಿ ಬಹಿರಂಗಪಡಿಸುತ್ತಾರೆ.

## D. ಆರೋಗ್ಯ ವಿಮೆಯ ಪೋರ್ಟಬಿಲಿ(ವರ್ಗಾವಣೆ)

ಪೋರ್ಟಬಿಲಿಟಿಯನ್ನು ವೈಯಕ್ತಿಕ ಆರೋಗ್ಯ ವಿಮಾ ಪಾಲಿಸಿದಾರರಿಗೆ (ಕುಟುಂಬದ ಕವರ್ ನಲ್ಲಿರುವ ಎಲ್ಲ ಸದಸ್ಯರನ್ನು ಒಳಗೊಂಡಂತೆ) ಹಿಂದಿನ ಪಾಲಿಸಿಯನ್ನು ಯಾವುದೇ ವಿರಾಮವಿಲ್ಲದೆ ನಿರ್ವಹಿಸಿದ್ದರೆ, ಮೊದಲೇ ಅಸ್ತಿತ್ವದಲ್ಲಿರುವ ಪರಿಸ್ಥಿತಿಗಳು ಮತ್ತು ಸಮಯಕ್ಕೆ ಸೀಮಿತವಾದ ವಿನಾಯಿತಿಗಳಿಗಾಗಿ ಪಡೆದ ಕ್ರೆಡಿಟ್ ಅನ್ನು **ಒಬ್ಬ ವಿಮಾಗಾರರಿಂದ ಮತ್ತೊಂದು ವಿಮಾಗಾರರಿಗೆ ಅಥವಾ ಅದೇ ವಿಮಾದಾರರ ಒಂದು ಯೋಜನೆಯಿಂದ ಇನ್ನೊಂದಕ್ಕೆ ವರ್ಗಾಯಿಸಲು** ನೀಡಿರುವ **ಹಕ್ಕು** ಎಂದು ಐಆರ್ ಡಿಎಐ ವ್ಯಾಖ್ಯಾನಿಸುತ್ತದೆ.

ಪೋರ್ಟೆಬಿಲಿಟಿ ಎಂದರೆ ವಿಮಾದಾರರು ಒಬ್ಬ ವಿಮಾಗಾರರ ಕಾಲಾವಧಿಯಲ್ಲಿ ಗಳಿಸಿದ ತಮ್ಮ ಎಲ್ಲ ಪ್ರಯೋಜನಗಳನ್ನು ಇನ್ನೊಬ್ಬ ವಿಮಾಗಾರರಿಗೆ ಸಾಗಿಸುವ ಸವಲತ್ತು ಆಗಿದೆ. ವಿದ್ಯಾರ್ಥಿಗಳು ಪೋರ್ಟಬಿಲಿಟಿ ಸೇರಿದಂತೆ ಹಲವು ಅಭ್ಯಾಸಗಳನ್ನು ಪ್ರಮಾಣೀಕರಿಸಲು ರೂಢಿಗಳನ್ನು ರೂಪಿಸುವ ಆರೋಗ್ಯ ವಿಮಾ ವ್ಯವಹಾರದಲ್ಲಿ ಉತ್ಪನ್ನದ ದಾಖಲೆಯಲ್ಲಿ 22 ಜುಲೈ 2020 ದಿನಾಂಕದ ಐಆರ್ ಡಿಎಐಯ ಏಕೀಕೃತ(ಕನ್ಸಾಲಿಡೇಟೆಡ್) ಮಾರ್ಗಸೂಚಿಗಳನ್ನು ಓದಬಹುದು.

ಫ್ಯಾಮಿಲಿ ಫ್ಲೋಟರ್ ಪಾಲಿಸಿಗಳನ್ನು ಒಳಗೊಂಡಂತೆ ಸಾಮಾನ್ಯ ವಿಮಾಗಾರರು ಮತ್ತು ಆರೋಗ್ಯ ವಿಮಾಗಾರರು ನೀಡುವ ಎಲ್ಲ ವೈಯಕ್ತಿಕ ಪರಿಹಾರದ ಆರೋಗ್ಯ ವಿಮಾ ಪಾಲಿಸಿಗಳಡಿಯಲ್ಲಿ ಪೋರ್ಟಬಿಲಿಟಿಯನ್ನು ಅನುಮತಿಸಬೇಕು ಎಂದು ಐಆರ್ ಡಿಎಐ ಆದೇಶಿಸುತ್ತದೆ..

ಆದಾಗ್ಯೂ, ನವೀಕರಣದ ಸಮಯದಲ್ಲಿ ಮಾತ್ರ ವರ್ಗಾವಣೆಯನ್ನು ಮಾಡಬಹುದಾಗಿದೆ. ಕಾಯುವ ಅವಧಿಯ ಕ್ರೆಡಿಟ್ ಅನ್ನು ಹೊರತುಪಡಿಸಿ, ಕಂತು ಸೇರಿದಂತೆ ಹೊಸ ಪಾಲಿಸಿಯ ಇತರ ನಿಯಮಗಳನ್ನು ಹೊಸ ವಿಮಾ ಕಂಪನಿಯು ನಿರ್ಧರಿಸುತ್ತದೆ. ಕಾರ್ಯವಿಧಾನದ ಪ್ರಕಾರ, ನವೀಕರಣಕ್ಕೆ ಕನಿಷ್ಠ **45** ದಿನಗಳ ಮೊದಲು ವಿಮಾದಾರರು ಹಳೆಯ ವಿಮಾಗಾರರಿಗೆ ಪಾಲಿಸಿಯನ್ನು ವರ್ಗಾವಣೆ ಮಾಡಬೇಕಾದ ಕಂಪನಿಯನ್ನು ನಿರ್ದಿಷ್ಟಪಡಿಸಿ ವರ್ಗಾವಣೆಗಾಗಿ ವಿನಂತಿಯನ್ನು ಮಾಡಬೇಕು. ವಿರಾಮವಿಲ್ಲದೆ ಪಾಲಿಸಿಯನ್ನು ನವೀಕರಿಸಲ್ಪಟ್ಟಿರಬೇಕು (ವರ್ಗಾವಣೆಯ ಪ್ರಕ್ರಿಯೆಯಲ್ಲಿದ್ದರೆ **30** ದಿನಗಳ ಗ್ರೇಸ್ ಅವಧಿ ಇರುತ್ತದೆ). ವರ್ಗಾವಣೆ ಮಾಡುವ ಪಾಲಿಸಿದಾರರ ಆರೋಗ್ಯ ವಿಮಾ ಇತಿಹಾಸದ ಮಾಹಿತಿಯನ್ನು ಸುಗಮವಾಗಿ ಪ್ರವೇಶಿಸಲು ಮತ್ತು ಪಡೆಯಲು ಹೊಸ ವಿಮಾಗಾರರಿಗೆ ಸಕ್ರಿಯಗೊಳಿಸಲು ವ್ಯಕ್ತಿಗಳಿಗೆ ವಿಮಾ ಕಂಪನಿಗಳು

ನೀಡುವ ಎಲ್ಲ ಆರೋಗ್ಯ ವಿಮಾ ಪಾಲಿಸಿಗಳ ಬಗೆಗಿನ ಮಾಹಿತಿಯನ್ನು ನಿರ್ವಹಿಸುವ ವೆಬ್ ಆಧಾರಿತ ಸೌಲಭ್ಯವನ್ನು ಐಆರ್ ಡಿಎಐ ರಚಿಸಿದೆ.

## E. ಆರೋಗ್ಯ ವಿಮೆಯ ಸ್ಥಳಾಂತರ

ಸ್ಥಳಾಂತರವನ್ನು ಐಆರ್ ಡಿಎಐ ಯಿಂದ ಆರೋಗ್ಯ ವಿಮಾ ಪಾಲಿಸಿದಾರರಿಗೆ (ಕುಟುಂಬದ ಕವರ್ ಅಡಿಯಲ್ಲಿ ಎಲ್ಲಾ ಸದಸ್ಯರು ಮತ್ತು ಗುಂಪು ಆರೋಗ್ಯ ವಿಮಾ ಪಾಲಿಸಿಯ ಸದಸ್ಯರನ್ನು ಒಳಗೊಂಡಂತೆ) **ಅದೇ ವಿಮಾಗಾರರೊಂದಿಗೆ** ಪೂರ್ವ ಅಸ್ತಿತ್ವದಲ್ಲಿರುವ ಪರಿಸ್ಥಿತಿಗಳು ಮತ್ತು ಸಮಯಕ್ಕೆ ಸೀಮಿತವಾದ ಹೊರತುಗಳಿಗಾಗಿ ಪಡೆದ ಕ್ರೆಡಿಟ್ ಅನ್ನು **ವರ್ಗಾಯಿಸಲು** ನೀಡಲಾದ ಹಕ್ಕು ಎಂದು ವ್ಯಾಖ್ಯಾನಿಸಲಾಗಿದೆ.

ಐಆರ್ ಡಿಎಐಯ 22 ಜುಲೈ 2020 ದಿನಾಂಕದ ಆರೋಗ್ಯ ವಿಮಾ ವ್ಯವಹಾರದಲ್ಲಿ ಉತ್ಪನ್ನವನ್ನು ದಾಖಲಿಸುವ ಕುರಿತಾದ ಏಕೀಕೃತ ಮಾರ್ಗಸೂಚಿಗಳು ಆರೋಗ್ಯ ವಿಮಾ ಪಾಲಿಸಿಗಳ ಸ್ಥಳಾಂತರದ ಬಗೆಗಿನ ಮಾರ್ಗಸೂಚಿಗಳನ್ನು ಪರಿಷ್ಕರಿಸಿದೆ. ಇದು ಪ್ರತಿಯೊಬ್ಬ ವೈಯಕ್ತಿಕ ಪಾಲಿಸಿದಾರರಿಗೆ (ಫ್ಯಾಮಿಲಿ ಫ್ಲೋಟರ್ ಪಾಲಿಸಿಯಡಿಯಲ್ಲಿಯ ಸದಸ್ಯರನ್ನು ಒಳಗೊಂಡಂತೆ) ನಷ್ಟ ಪರಿಹಾರ ಆಧಾರಿತ ವೈಯಕ್ತಿಕ ಆರೋಗ್ಯ ವಿಮಾ ಪಾಲಿಸಿಯಡಿಯಲ್ಲಿ ಪಾಲಿಸಿದಾರರು ಬಳಸುವ ಸ್ಪಷ್ಟ ಆಯ್ಕೆಯಲ್ಲಿ ಸ್ಥಳಾಂತರದ ಆಯ್ಕೆಯನ್ನು ಒದಗಿಸಬೇಕೆಂದು ಹೇಳುತ್ತದೆ. ಗುಂಪು ಪಾಲಿಸಿಗಳಿಂದ ವೈಯಕ್ತಿಕ ಪಾಲಿಸಿಗೆ ಮಾಡಲಾಗುವ ಸ್ಥಳಾಂತರವು ಅಂಡರ್ ರೈಟಿಂಗ್ ಗೆ ಒಳಪಟ್ಟಿರುತ್ತದೆ.

ಅವನ/ಅವಳ ಪಾಲಿಸಿಯನ್ನು ಸ್ಥಳಾಂತರಿಸಲು ಇಚ್ಛಿಸುವ ಪಾಲಿಸಿದಾರರು, ಅವನ/ಅವಳ ಅಸ್ತಿತ್ವದಲ್ಲಿರುವ ಪಾಲಿಸಿಯ ಕಂತಿನ ನವೀಕರಣ ದಿನಾಂಕಕ್ಕಿಂತ ಕನಿಷ್ಠ 30 ದಿನಗಳ ಮೊದಲು ಕುಟುಂಬದ ಎಲ್ಲ ಸದಸ್ಯರೊಂದಿಗೆ ಪಾಲಿಸಿಯನ್ನು ಸ್ಥಳಾಂತರಿಸಲು ವಿಮಾ ಕಂಪನಿಗೆ ಅರ್ಜಿ ಸಲ್ಲಿಸಲು ಅನುಮತಿಸಲಾಗುತ್ತದೆ. ಆದಾಗ್ಯೂ, ವಿಮಾಗಾರರು 30 ದಿನಗಳ ಅವಧಿಗಿಂತ ಕಡಿಮೆ ಅವಧಿಯನ್ನು ಪರಿಗಣಿಸಲು ಸಿದ್ಧರಿದ್ದರೆ, ವಿಮಾಗಾರರು ಹಾಗೆ ಮಾಡಬಹುದು. ವಿಮಾಗಾರರು ಸ್ಥಳಾಂತರಕ್ಕಾಗಿ ಪ್ರತ್ಯೇಕವಾಗಿ ಯಾವುದೇ ಶುಲ್ಕವನ್ನು ವಿಧಿಸುವುದಿಲ್ಲ.

## F. ವಿಮೆಯ ಮೂಲ ತತ್ವಗಳು ಮತ್ತು ಅಂಡರ್ ರೈಟಿಂಗ್ ಉಪಕರಣಗಳು

### *1.* ಅಂಡರ್ ರೈಟಿಂಗ್ ಕ್ಕೆ ಅವಶ್ಯಕವಾದ ಸಂಬಂಧಿತ ಮೂಲ ತತ್ವಗಳು

ಜೀವ ವಿಮೆಯಾಗಿರಲಿ ಅಥವಾ ಸಾಮಾನ್ಯ ವಿಮೆಯಾಗಿರಲಿ, ಯಾವುದೇ ರೀತಿಯ ವಿಮೆಯಲ್ಲಿ ಅಪಾಯಗಳ ಸ್ವೀಕಾರದೊಂದಿಗೆ ಕಾರ್ಯನಿರ್ವಹಿಸುವ ಕೆಲವು ಕಾನೂನು ತತ್ವಗಳಿರುತ್ತವೆ. ಆರೋಗ್ಯ ವಿಮೆಯು ಸಹ ಈ ತತ್ವಗಳಿಂದ ಸಮಾನವಾಗಿ ನಿಯಂತ್ರಿಸಲ್ಪಡುತ್ತದೆ ಮತ್ತು ತತ್ವಗಳ ಯಾವುದೇ ಉಲ್ಲಂಘನೆಯು ಹೊಣೆಗಾರಿಕೆಯನ್ನು ತಪ್ಪಿಸಲು ವಿಮಾಗಾರರು ನಿರ್ಧರಿಸುವಲ್ಲಿ ಕಾರಣವಾಗಬಹುದು. (ಈ ತತ್ವಗಳನ್ನು ಸಾಮಾನ್ಯ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.)

## 2. ಅಂಡರ್ ರೈಟಿಂಗ್ ಉಪಕರಣಗಳು

ಇವುಗಳು ಅಪಾಯದ ವರ್ಗೀಕರಣವನ್ನು ಯಾವ ಆಧಾರದ ಮೇಲೆ ಮಾಡಲಾಗುತ್ತದೆ ಮತ್ತು ಕಂತುಗಳನ್ನು ಅಂತಿಮವಾಗಿ ನಿರ್ಧರಿಸಲಾಗುವ ಪ್ರಕ್ರಿಯೆಯಲ್ಲಿಯ ಅಂಡರ್ ರೈಟರ್ ರಿಗಾಗಿಯ ಮಾಹಿತಿಯ ಮೂಲಗಳಾಗಿವೆ. ಅಂಡರ್ ರೈಟರ್ ರಿಗಾಗಿ ಮಾಹಿತಿಯ ಕೆಲವು ಪ್ರಮುಖ ಸಾಧನಗಳನ್ನು ಈ ಕೆಳಗೆ ನೀಡಲಾಗಿದೆ:

### a) ಪ್ರಸ್ತಾವನೆಯ ನಮೂನೆ

ಈ ದಾಖಲೆಯು ಒಪ್ಪಂದದ ಆಧಾರವಾಗಿದ್ದು, ಪ್ರಸ್ತಾಪಕರ ಆರೋಗ್ಯ ಮತ್ತು ವೈಯಕ್ತಿಕ ವಿವರ (ಅಂದರೆ ವಯಸ್ಸು, ಉದ್ಯೋಗ, ಮೈಕಟ್ಟು, ಅಭ್ಯಾಸ/ಚಟಗಳು, ಆರೋಗ್ಯದ ಸ್ಥಿತಿ, ಆದಾಯ, ಕಂತು ಪಾವತಿ ವಿವರಗಳು ಇತ್ಯಾದಿ) ಗಳಿಗೆ ಸಂಬಂಧಿಸಿದ ಎಲ್ಲ ನಿರ್ಣಾಯಕ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ವಿಮಾದಾರರಿಂದ ಯಾವುದೇ ಉಲ್ಲಂಘನೆ ಅಥವಾ ಮಾಹಿತಿಯ ಮರೆಮಾಚುವಿಕೆಯು ಪಾಲಿಸಿಯನ್ನು ಅನೂರ್ಜಿತಗೊಳಿಸುತ್ತದೆ. (ಇದನ್ನು ಸಾಮಾನ್ಯ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.)

### b) ವಯಸ್ಸಿನ ಪುರಾವೆ

ವಿಮೆದಾರರ ವಯಸ್ಸಿನ ಆಧಾರದ ಮೇಲೆ ಕಂತುಗಳನ್ನು ನಿರ್ಧರಿಸಲಾಗುತ್ತದೆ. ಆದ್ದರಿಂದ ನೋಂದಣಿಯ ಸಮಯದಲ್ಲಿ ಬಹಿರಂಗಪಡಿಸಿದ ವಯಸ್ಸನ್ನು ವಯಸ್ಸಿನ ಪುರಾವೆಯನ್ನು ಸಲ್ಲಿಸುವ ಮೂಲಕ ಪರಿಶೀಲಿಸುವುದು ಕಡ್ಡಾಯವಾಗಿದೆ.

**ಉದಾಹರಣೆ**

ಭಾರತದಲ್ಲಿ, ವಯಸ್ಸಿನ ಪುರಾವೆ ಎಂದು ಪರಿಗಣಿಸಬಹುದಾದ ಹಲವಾರು ದಾಖಲೆಗಳಿವೆ ಆದರೆ ಅವೆಲ್ಲವೂ ಕಾನೂನುಬದ್ಧವಾಗಿ ಸ್ವೀಕಾರಾರ್ಹವಾಗಿರುವುದಿಲ್ಲ. ಮಾನ್ಯವಾದ ದಾಖಲೆಗಳನ್ನು ಹೆಚ್ಚಾಗಿ ಎರಡು ವಿಶಾಲ ವರ್ಗಗಳಲ್ಲಿ ವಿಂಗಡಿಸಲಾಗಿದ್ದು ಅವು ಈ ಕೆಳಗಿನಂತಿವೆ:

a) **ಪ್ರಮಾಣಿತ ವಯಸ್ಸಿನ ಪುರಾವೆ:** ಇವುಗಳಲ್ಲಿ ಕೆಲವು ಶಾಲಾ ಪ್ರಮಾಣಪತ್ರ, ಪಾಸ್ ಪೋರ್ಟ್, ನಿವಾಸದ ಪ್ರಮಾಣಪತ್ರ, ಪ್ಯಾನ್ ಕಾರ್ಡ್ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

b) **ಅಪ್ರಮಾಣಿತ ವಯಸ್ಸಿನ ಪುರಾವೆ:** ಇವುಗಳಲ್ಲಿ ಕೆಲವು ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಹಿರಿಯರ ಘೋಷಣೆ, ಗ್ರಾಮ ಪಂಚಾಯತ್ ಪ್ರಮಾಣಪತ್ರ ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

**ಆರ್ಥಿಕ ದಾಖಲೆಗಳು**

ಪ್ರಯೋಜನಕಾರಿ ಉತ್ಪನ್ನಗಳಿಗಾಗಿ ಮತ್ತು ನೈತಿಕ ಅಪಾಯವನ್ನು ಕಡಿಮೆ ಮಾಡಲು ಪ್ರಸ್ತಾಪಕರ ಆರ್ಥಿಕ ಸ್ಥಿತಿಯನ್ನು ತಿಳಿದುಕೊಳ್ಳುವುದು ವಿಶೇಷವಾಗಿ ಪ್ರಸ್ತುತವಾಗಿದೆ. ಆದಾಗ್ಯೂ, ಸಾಮಾನ್ಯವಾಗಿ ಹಣಕಾಸಿನ ದಾಖಲೆಗಳನ್ನು ಈ ಕೆಳಗಿನ ಸಂದರ್ಭಗಳಲ್ಲಿ ಮಾತ್ರ ಕೇಳಲಾಗುತ್ತದೆ:

- **a)** ವೈಯಕ್ತಿಕ ಅಪಘಾತದ ವಿಮೆ ಅಥವಾ
- **b)** ಹೆಚ್ಚು ವಿಮಾಮೊತ್ತದ ಕವರೇಜ್ ಅಥವಾ
- **c)** ಕೇಳಲಾದ ಕವರೇಜ್ ಗೆ ಹೋಲಿಸಿದರೆ ಹೇಳಲಾದ ಆದಾಯ ಮತ್ತು ಉದ್ಯೋಗವು ಹೊಂದಿಕೆಯಾಗದಿರುವಲ್ಲಿ.

**c) ವೈದ್ಯಕೀಯ ವರದಿಗಳು**

ವೈದ್ಯಕೀಯ ವರದಿಗಳ ಅವಶ್ಯಕತೆಯು ವಿಮಾಗಾರರ ಮಾನದಂಡಗಳನ್ನು ಆಧರಿಸಿದೆ ಮತ್ತು ಸಾಮಾನ್ಯವಾಗಿ ವಿಮಾದಾರರ ವಯಸ್ಸಿನ ಮೇಲೆ ಮತ್ತು ಕೆಲವೊಮ್ಮೆ ಆಯ್ಕೆ ಮಾಡಿದ ಕವರ್ ಪ್ರಮಾಣವನ್ನು ಅವಲಂಬಿಸಿರುತ್ತದೆ. ಪ್ರಸ್ತಾವನೆಯ ನಮೂನೆಯಲ್ಲಿನ ಕೆಲವು ಉತ್ತರಗಳು ವೈದ್ಯಕೀಯ ವರದಿಗಳನ್ನು ಕೇಳಲು ಕಾರಣವಾಗುವ ಕೆಲವು ಮಾಹಿತಿಯನ್ನು ಒಳಗೊಂಡಿರಬಹುದು.

**d) ಮಾರಾಟ ಸಿಬ್ಬಂದಿಯ ವರದಿಗಳು**

ಮಾರಾಟದ ಸಿಬ್ಬಂದಿಯನ್ನು ಕಂಪನಿಯ ತಳಮಟ್ಟದ ಅಂಡರ್ ರೈಟರ್ ರನ್ನಾಗಿಯೂ ಕಾಣಬಹುದು ಮತ್ತು ಅವರ ವರದಿಯಲ್ಲಿ ಅವರು ನೀಡಿದ ಮಾಹಿತಿಯು ಪ್ರಮುಖವಾದ ಪರಿಗಣನೆಯನ್ನು ರೂಪಿಸಬಹುದು. ಆದಾಗ್ಯೂ, ಮಾರಾಟದ ಸಿಬ್ಬಂದಿಯು ಹೆಚ್ಚಿನ ವ್ಯಾಪಾರವನ್ನು ಉತ್ಪಾದಿಸಲು ಪ್ರೋತ್ಸಾಹನೆಯನ್ನು ಹೊಂದಿರುವುದರಿಂದ, ಹಿತಾಸಕ್ತಿಯ ಸಂಘರ್ಷವಿರುವುದನ್ನು ಗಮನಿಸಬೇಕು.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 2**

ಅಂಡರ್ ರೈಟಿಂಗ್ ನಲ್ಲಿ ಅತ್ಯಂತ ಉತ್ತಮ ನಂಬಿಕೆಯ ತತ್ವವನ್ನು __________ ರಿಂದ ಅನುಸರಿಸುವ ಅಗತ್ಯವಿದೆ..

**I.** ವಿಮಾಗಾರರು

**II.** ವಿಮಾದಾರರು

**III.** ವಿಮಾಗಾರರು ವಿಮಾದಾರರು ಇಬ್ಬರೂ

**IV.** ವೈದ್ಯಕೀಯ ಪರೀಕ್ಷಕರು

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 3**

ವಿಮಾಸಕ್ತಿಯು ___________ ಅನ್ನು ಉಲ್ಲೇಖಿಸುತ್ತದೆ..

I. ವಿಮೆ ಮಾಡಬೇಕಾದ ಆಸ್ತಿಯಲ್ಲಿರುವ ವ್ಯಕ್ತಿಯ ಹಣಕಾಸಿನ ಆಸಕ್ತಿ

II. ಈಗಾಗಲೇ ವಿಮೆ ಮಾಡಲಾಗಿರುವ ಆಸ್ತಿ

III. ಒಂದಕ್ಕಿಂತ ಹೆಚ್ಚು ಕಂಪನಿಗಳು ಒಂದೇ ನಷ್ಟವನ್ನು ಭರಿಸುತ್ತಿರುವಾಗ ಪ್ರತಿ ವಿಮಾಗಾರರ ನಷ್ಟದ ಪಾಲು

IV. ವಿಮಾಗಾರರಿಂದ ವಸೂಲಿ ಮಾಡಬಹುದಾದ ನಷ್ಟದ ಮೊತ್ತ

## G. ಅಂಡರ್ ರೈಟಿಂಗ್ ಪ್ರಕ್ರಿಯೆ

ಅಗತ್ಯವಿರುವ ಮಾಹಿತಿಯನ್ನು ಸ್ವೀಕರಿಸಿದ ನಂತರ, ಅಂಡರ್ ರೈಟರ ರು ಪಾಲಿಸಿಯ ನಿಯಮಗಳನ್ನು ನಿರ್ಧರಿಸುತ್ತಾರೆ. ಆರೋಗ್ಯ ವಿಮಾ ವ್ಯವಹಾರವನ್ನು ಅಂಡರ್ ರೈಟ್ ಮಾಡಲು ಬಳಸುವ ಸಾಮಾನ್ಯ ನಮೂನೆಗಳು ಈ ಕೆಳಕಂಡಂತಿವೆ:

### 1. ವೈದ್ಯಕೀಯ ಅಂಡರ್ ರೈಟಿಂಗ್

ಆರೋಗ್ಯ ವಿಮಾ ಪಾಲಿಸಿಗೆ ಅರ್ಜಿ ಸಲ್ಲಿಸುವ ವ್ಯಕ್ತಿಯ ಆರೋಗ್ಯ ಸ್ಥಿತಿಯನ್ನು ನಿರ್ಧರಿಸಲು ಪ್ರಸ್ತಾಪಕರಿಂದ ವೈದ್ಯಕೀಯ ವರದಿಗಳನ್ನು ಕೇಳುವ ಪ್ರಕ್ರಿಯೆಯೇ ವೈದ್ಯಕೀಯ ಅಂಡರ್‌ರೈಟಿಂಗ್ ಆಗಿದೆ. ಸಂಗ್ರಹಿಸಿದ ಆರೋಗ್ಯ ಮಾಹಿತಿಯನ್ನು ನಂತರ ವಿಮಾಗಾರರು ಯಾವ ಮಿತಿಯವರೆಗೆ ಮತ್ತು ಯಾವ ಷರತ್ತುಗಳು ಮತ್ತು ಹೊರತುಗಳೊಂದಿಗೆ ಕವರೇಜ್ ನೀಡಬೇಕೆಂಬುದನ್ನು ನಿರ್ಧರಿಸಲು ಮೌಲ್ಯಮಾಪನ ಮಾಡುತ್ತಾರೆ. ಹೀಗಾಗಿ ವೈದ್ಯಕೀಯ ಅಂಡರ್ ರೈಟಿಂಗ್ ಅಪಾಯದ ಸ್ವೀಕಾರ ಅಥವಾ ನಿರಾಕರಣೆ ಮತ್ತು ಕವರ್ ನ ನಿಯಮಗಳನ್ನು ನಿರ್ಧರಿಸುತ್ತದೆ.

**ಉದಾಹರಣೆ**

ಅಧಿಕ ರಕ್ತದೊತ್ತಡ, ಅಧಿಕ ತೂಕ/ ಸ್ಥೂಲಕಾಯತೆ ಮತ್ತು ಹೆಚ್ಚಿದ ಸಕ್ಕರೆಯ ಮಟ್ಟಗಳಂತಹ ವೈದ್ಯಕೀಯ ಪರಿಸ್ಥಿತಿಗಳು ಹೃದಯ, ಮೂತ್ರಪಿಂಡ ಮತ್ತು ನರಮಂಡಲದ ಕಾಯಿಲೆಗಳಿಗೆ ಭವಿಷ್ಯದಲ್ಲಿ ಆಸ್ಪತ್ರೆಗೆ ದಾಖಲಾಗುವ ಹೆಚ್ಚಿನ ಸಂಭವನೀಯತೆಯನ್ನು ಹೊಂದಿರುತ್ತವೆ. ಆದ್ದರಿಂದ, ವೈದ್ಯಕೀಯ ಅಂಡರ್ ರೈಟಿಂಗ್ ಮಾಡಿ ಅಪಾಯವನ್ನು ನಿರ್ಣಯಿಸುವಾಗ ಈ ಪರಿಸ್ಥಿತಿಗಳನ್ನು ಎಚ್ಚರಿಕೆಯಿಂದ ಪರಿಗಣಿಸಬೇಕು..

ವೈದ್ಯಕೀಯ ಅಂಡರ್ ರೈಟಿಂಗ್ ಮಾರ್ಗಸೂಚಿಗಳು ಪ್ರಸ್ತಾಪಕರ ಕುಟುಂಬದ ವೈದ್ಯರಿಂದ ಪ್ರಸ್ತಾಪಕರ ಆರೋಗ್ಯದ ಸ್ಥಿತಿಯ ಬಗ್ಗೆ ಸಹಿ ಸಹಿತ ಘೋಷಣೆಯನ್ನು ಅವಶ್ಯಕವನ್ನಾಗಿ ಮಾಡಬಹುದು..

ಮೊದಲ ಬಾರಿಗೆ ಆರೋಗ್ಯ ವಿಮೆಗೆ ಅರ್ಜಿ ಮಾಡುವ 45-50 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳು, ಸಾಮಾನ್ಯವಾಗಿ ಆರೋಗ್ಯದ ಅಪಾಯದ ಪ್ರೊಫೈಲ್ ಅನ್ನು ನಿರ್ಣಯಿಸಲು ಮತ್ತು ಅವರ ಪ್ರಸ್ತುತ ಆರೋಗ್ಯ ಸ್ಥಿತಿಯ ಬಗ್ಗೆ ಮಾಹಿತಿಯನ್ನು ಪಡೆಯಲು ನಿರ್ದಿಷ್ಟ ರೋಗಶಾಸ್ತ್ರೀಯ ಪರೀಕ್ಷೆಗಳಿಗೆ ಒಳಗಾಗಬೇಕಾಗುತ್ತದೆ. ಅಂತಹ ತನಿಖೆಗಳು ಯಾವುದೇ ಪೂರ್ವ ಅಸ್ತಿತ್ವದಲ್ಲಿರುವ ವೈದ್ಯಕೀಯ ಪರಿಸ್ಥಿತಿಗಳು ಅಥವಾ ರೋಗಗಳ ಅಸ್ತಿತ್ವದ ಸೂಚನೆಯನ್ನು ಸಹ ನೀಡುತ್ತವೆ.

### 2. ವೈದ್ಯಕೀಯವಲ್ಲದ ಅಂಡರ್ ರೈಟಿಂಗ್

ಆರೋಗ್ಯ ವಿಮೆಗೆ ಅರ್ಜಿ ಸಲ್ಲಿಸುವ ಹೆಚ್ಚಿನ ಪ್ರಸ್ತಾಪಕರಿಗೆ ವೈದ್ಯಕೀಯ ಪರೀಕ್ಷೆಯ ಅಗತ್ಯವಿರುವುದಿಲ್ಲ.

ಪ್ರಸ್ತಾಪಕರು ಎಲ್ಲ ವಾಸ್ತವಿಕ ಸಂಗತಿಗಳನ್ನು ಸಂಪೂರ್ಣವಾಗಿ ಮತ್ತು ಸತ್ಯವಾಗಿ ಬಹಿರಂಗಪಡಿಸಿದ್ದರೂ ಮತ್ತು ಅದನ್ನು ಏಜೆಂಟರು ಎಚ್ಚರಿಕೆಯಿಂದ ಪರಿಶೀಲಿಸಿದ್ದರೂ, ವೈದ್ಯಕೀಯ ಪರೀಕ್ಷೆಯ ಅಗತ್ಯವು ತುಂಬಾ ಕಡಿಮೆಯಿರಬಹುದು.

| ಉದಾಹರಣೆ |
|---|

ಓರ್ವ ವ್ಯಕ್ತಿಯು ವೈದ್ಯಕೀಯ ಪರೀಕ್ಷೆಗಳು, ಕಾಯುವ ಅವಧಿಗಳು ಮತ್ತು ಪ್ರಕ್ರಿಯೆಯ ವಿಳಂಬಗಳ ದೀರ್ಘ ಪ್ರಕ್ರಿಯೆಯ ಮೂಲಕವಾಗಿ ಹೋಗದೆ ತ್ವರಿತವಾಗಿ ಆರೋಗ್ಯ ವಿಮಾ ರಕ್ಷಣೆಯನ್ನು ತೆಗೆದುಕೊಳ್ಳಬೇಕಾದರೆ, ಅವರು ವೈದ್ಯಕೀಯೇತರ ವಿಮಾ ಪಾಲಿಸಿಯನ್ನು ಆರಿಸಿಕೊಳ್ಳಬಹುದು. ವೈದ್ಯಕೀಯೇತರ ವಿಮಾ ಪಾಲಿಸಿಯಲ್ಲಿ, ಕಂತಿನ ದರಗಳು ಮತ್ತು ವಿಮಾ ಮೊತ್ತವನ್ನು ಸಾಮಾನ್ಯವಾಗಿ ವಯಸ್ಸು, ಲಿಂಗ, ಧೂಮಪಾನ ವರ್ಗ, ಮೈಕಟ್ಟು ಇತ್ಯಾದಿಗಳ ಆಧಾರದ ಮೇಲೆ ಮತ್ತು ಕೆಲವು ಆರೋಗ್ಯ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಪ್ರಕ್ರಿಯೆಯು ವೇಗವಾಗಿರುತ್ತದೆ ಆದರೆ ಕಂತುಗಳು ತುಲನಾತ್ಮಕವಾಗಿ ಹೆಚ್ಚಾಗಿರಬಹುದು.

### 3. ಸಂಖ್ಯಾತ್ಮಕ ರೇಟಿಂಗ್ ವಿಧಾನ

ಇದು ಅಂಡರ್ ರೈಟಿಂಗ್ ನಲ್ಲಿ ಅಳವಡಿಸಿಕೊಂಡ ಪ್ರಕ್ರಿಯೆಯಾಗಿದ್ದು ಇದರಲ್ಲಿ ಅಪಾಯದ ಪ್ರತಿಯೊಂದು ಅಂಶದ ಮೇಲೆ ಸಂಖ್ಯಾತ್ಮಕ ಅಥವಾ ಶೇಕಡಾವಾರು ಮೌಲ್ಯಮಾಪನಗಳನ್ನು ಮಾಡಲಾಗುತ್ತದೆ.

ವಯಸ್ಸು, ಲಿಂಗ, ಜನಾಂಗ, ಉದ್ಯೋಗ, ನಿವಾಸ, ಪರಿಸರ, ಮೈಕಟ್ಟು, ಅಭ್ಯಾಸ/ಚಟಗಳು, ಕುಟುಂಬ ಮತ್ತು ವೈಯಕ್ತಿಕ ಇತಿಹಾಸದಂತಹ ಅಂಶಗಳನ್ನು ಪೂರ್ವ-ನಿರ್ಧರಿತ ಮಾನದಂಡಗಳ ಆಧಾರದ ಮೇಲೆ ಸಂಖ್ಯಾತ್ಮಕವಾಗಿ ಪರಿಶೀಲಿಸಲಾಗುತ್ತದೆ ಮತ್ತು ಸ್ಕೋರ್ ಮಾಡಲಾಗುತ್ತದೆ.

### 4. ಅಂಡರ್ ರೈಟಿಂಗ್ ನಿರ್ಣಯಗಳು

ಸ್ವೀಕರಿಸಿದ ಮಾಹಿತಿಯನ್ನು ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಿದಾಗ ಮತ್ತು ಸೂಕ್ತವಾದ ಅಪಾಯದ ವರ್ಗಗಳಲ್ಲಿ ವರ್ಗೀಕರಿಸಿದಾಗ ವಿಮಾ ಪ್ರಕ್ರಿಯೆಯು ಪೂರ್ಣಗೊಳ್ಳುತ್ತದೆ. ಮೇಲಿನ ಪರಿಕರಗಳು ಮತ್ತು ತಮ್ಮ

ತೀರ್ಪಿನ ಆಧಾರದ ಮೇಲೆ, ಅಂಡರ್ ರೈಟರ್ ರು ಅಪಾಯವನ್ನು ಈ ಕೆಳಗಿನ ವರ್ಗಗಳಲ್ಲಿ ವರ್ಗೀಕರಿಸುತ್ತಾರೆ:

a) ಪ್ರಮಾಣಿತ ದರಗಳಲ್ಲಿ ಅಪಾಯವನ್ನು ಸ್ವೀಕರಿಸುವುದು

b) ಇದು ಎಲ್ಲ ಕಂಪನಿಗಳಲ್ಲಿ ಅಭ್ಯಾಸದಲ್ಲಿಲ್ಲದಿದ್ದರೂ ಹೆಚ್ಚುವರಿ ಕಂತಿ(ಲೋಡಿಂಗ್)ನೊಂದಿಗೆ ಅಪಾಯವನ್ನು ಸ್ವೀಕರಿಸುವುದು

c) ಕವರ್ ಅನ್ನು ನಿಗದಿತ ಸಮಯ/ ಅವಧಿಯವರೆಗೆ ಮುಂದೂಡುವುದು

d) ಕವರ್ ಅನ್ನು ನಿರಾಕರಿಸುವುದು

e) ವಿರುದ್ಧ ಪ್ರಸ್ತಾವನೆ(ಕೌಂಟರ್ ಆಫರ್) (ಕವರ್ ನ ಕೆಲವು ಭಾಗವನ್ನು ನಿರ್ಬಂಧಿಸುವುದು ಅಥವಾ ನಿರಾಕರಿಸುವುದು)

f) ಹೆಚ್ಚಿನ ಕಡಿತಗಳು ಅಥವಾ ಸಹ-ಪಾವತಿಯನ್ನು ವಿಧಿಸುವುದು

g) ಪಾಲಿಸಿಯಡಿಯಲ್ಲಿ ಶಾಶ್ವತ ಹೊರತು(ಗಳನ್ನು) ವಿಧಿಸುವುದು

ಯಾವುದೇ ಅನಾರೋಗ್ಯವನ್ನು ಶಾಶ್ವತವಾಗಿ ಹೊರತುಪಡಿಸಿದರೆ, ಅದನ್ನು ಪಾಲಿಸಿ ಪ್ರಮಾಣಪತ್ರದಲ್ಲಿ ಅನುಮೋದಿಸಲಾಗುತ್ತದೆ. ಇದು ಪಾಲಿಸಿಯಲ್ಲಿಯ ಪ್ರಮಾಣಿತ ಹೊರತುಗಳ ಹೊರತಾಗಿ ಹೆಚ್ಚುವರಿ ಹೊರತು ಆಗಿರುತ್ತದೆ ಮತ್ತು ಒಪ್ಪಂದದ ಭಾಗವನ್ನು ರೂಪಿಸುತ್ತದೆ.

5. ಸಾಮಾನ್ಯ ಅಥವಾ ಪ್ರಮಾಣಿತ ಹೊರಗಿಡುವಿಕೆಗಳ ಬಳಕೆ

ಬಹುಪಾಲು ಪಾಲಿಸಿಗಳು ತಮ್ಮ ಎಲ್ಲ ಸದಸ್ಯರಿಗೆ ಅನ್ವಯಿಸುವ ಹೊರತುಗಳನ್ನು ವಿಧಿಸುತ್ತವೆ. ಇವುಗಳನ್ನು ಪ್ರಮಾಣಿತ ಹೊರತುಗಳು ಅಥವಾ ಕೆಲವೊಮ್ಮೆ ಸಾಮಾನ್ಯ ಹೊರತುಗಳೆಂದು ಕರೆಯಲಾಗುತ್ತದೆ. ಪ್ರಮಾಣಿತ ಹೊರತುಗಳ ಅನುಷ್ಠಾನದಿಂದ ವಿಮಾಗಾರರು ತಮ್ಮ ಒಡ್ಡುವಿಕೆಯನ್ನು ಮಿತಿಗೊಳಿಸುತ್ತಾರೆ. ಇವುಗಳನ್ನು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

**6. ವಲಯವಾರು ಕಂತು**

ಸಾಮಾನ್ಯವಾಗಿ, ವಿಮಾದಾರರ ವಯಸ್ಸು ಮತ್ತು ಆಯ್ಕೆಮಾಡಿದ ವಿಮಾ ಮೊತ್ತವನ್ನು ಕಂತು ಅವಲಂಬಿಸಿರುತ್ತದೆ. ಹೆಚ್ಚಿನ ಕ್ಲೇಮ್ ಗಳ ವೆಚ್ಚದೊಂದಿಗೆ ಕೆಲವು ವಲಯಗಳಲ್ಲಿ ವಿಭಿನ್ನ ಕಂತನ್ನು ಪರಿಚಯಿಸಲಾಗಿದೆ ಉದಾ. ದೆಹಲಿ ಮತ್ತು ಮುಂಬೈ ಶಹರುಗಳು ಕೆಲವು ವಿಮಾಗಾರರಿಂದ ಕೆಲವು ಉತ್ಪನ್ನಗಳಿಗೆ ಹೆಚ್ಚಿನ ಕಂತಿನ ವಲಯದ ಭಾಗವಾಗಿವೆ. ಉದಾ. ಇಂದೋರ್ ಅಥವಾ ಜಮ್ಮುವಿನಂತಹ ನಗರಗಳಲ್ಲಿ 55-65 ವರ್ಷ ವಯಸ್ಸಿನ ವ್ಯಕ್ತಿಯ ಅದೇ ವಯಸ್ಸಿನ ವ್ಯಕ್ತಿಗಳಿಗಾಗಿ ಅದೇ ರೀತಿಯ ವೈಯಕ್ತಿಕ ಪಾಲಿಸಿಗಿಂತ ಮೆಟ್ರೋಗಳು ಮತ್ತು 'ಎ ಕ್ಲಾಸ್' ನಗರಗಳಲ್ಲಿ ಹೆಚ್ಚಿನ ಬೆಲೆಯನ್ನು ವಿಧಿಸಲಾಗುತ್ತದೆ.

## ನಿಮ್ಮನ್ನು ಪರೀಕ್ಷಿಸಿಕೊಳ್ಳಿ 4

ವೈದ್ಯಕೀಯ ಅಂಡರ್ ರೈಟಿಂಗ್ ಕುರಿತು ಈ ಕೆಳಗಿನ ಯಾವ ಹೇಳಿಕೆಗಳು ತಪ್ಪಾಗಿದೆ?

**I.** ಅದು ವೈದ್ಯಕೀಯ ವರದಿಗಳನ್ನು ಸಂಗ್ರಹಿಸಲು ಮತ್ತು ನಿರ್ಣಯಿಸಲು ಹೆಚ್ಚಿನ ವೆಚ್ಚವನ್ನು ಒಳಗೊಂಡಿರುತ್ತದೆ.

**II.** ಆರೋಗ್ಯ ವಿಮೆಗಾಗಿ ಮಾಡಲಾಗುವ ವೈದ್ಯಕೀಯ ವಿಮೆಯಲ್ಲಿ ಪ್ರಸ್ತುತ ಆರೋಗ್ಯದ ಸ್ಥಿತಿ ಮತ್ತು ವಯಸ್ಸು ಪ್ರಮುಖ ಅಂಶಗಳಾಗಿವೆ.

**III.** ಪ್ರಸ್ತಾಪಕರು ತಮ್ಮ ಆರೋಗ್ಯದ ಅಪಾಯದ ಪ್ರೊಫೈಲ್ ಅನ್ನು ನಿರ್ಣಯಿಸಲು ವೈದ್ಯಕೀಯ ಮತ್ತು ರೋಗಶಾಸ್ತ್ರೀಯ ತನಿಖೆಗಳಿಗೆ ಒಳಗಾಗಬೇಕಾಗುತ್ತದೆ.

**IV.** ಅಪಾಯದ ಪ್ರತಿಯೊಂದು ಅಂಶದ ಮೇಲೆ ಶೇಕಡಾವಾರು ಮೌಲ್ಯಮಾಪನವನ್ನು ಮಾಡಲಾಗುತ್ತದೆ.

## H. ಗುಂಪು ಮಟ್ಟದಲ್ಲಿ ಆರೋಗ್ಯ ವಿಮೆ

ಆರೋಗ್ಯ ವಿಮೆಗಾಗಿ ಗುಂಪನ್ನು ಸ್ವೀಕರಿಸುವಾಗ, ವಿಮಾಗಾರರು ಗುಂಪಿನಲ್ಲಿಯ ತೀವ್ರ ಮತ್ತು ಮೇಲಿಂದ ಮೇಲೆ ಆರೋಗ್ಯ ಸಮಸ್ಯೆಗಳನ್ನು ಹೊಂದಿರುವ ಕೆಲವು ಸದಸ್ಯರ ಅಸ್ತಿತ್ವದ ಸಾಧ್ಯತೆಯನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಾರೆ.

**1.** ಗುಂಪು ಆರೋಗ್ಯ ವಿಮೆ

ಗುಂಪು ಆರೋಗ್ಯ ವಿಮೆಯ ಗುಂಪಿನ ಆರೋಗ್ಯ ವಿಮೆಯ ಅಂಡರ್ ರೈಟಿಂಗ್ ವಿಮಾ ಕಂಪನಿಯ ಅಂಡರ್ ರೈಟಿಂಗ್ ಮಾರ್ಗಸೂಚಿಗಳು ಮತ್ತು ವಿಮಾ ನಿಯಂತ್ರಕರಿಂದ ಗುಂಪು ವಿಮೆಗಾಗಿ ನಿಗದಿಪಡಿಸಿದ ಮಾರ್ಗಸೂಚಿಗಳೊಳಗೆ ಬರುತ್ತದೆಯೇ ಎಂದು ಮೌಲ್ಯಮಾಪನ ಮಾಡಲು ಗುಂಪಿನ ಗುಣಲಕ್ಷಣಗಳನ್ನು ವಿಶ್ಲೇಷಿಸುವ ಅಗತ್ಯವಿದೆ.

ಗುಂಪು ಆರೋಗ್ಯ ವಿಮೆಯ ಪ್ರಮಾಣಿತ ಅಂಡರ್ ರೈಟಿಂಗ್ ಪ್ರಕ್ರಿಯೆಯು ಈ ಕೆಳಗಿನ ಅಂಶಗಳ ಮೇಲೆ ಪ್ರಸ್ತಾವಿತ ಗುಂಪನ್ನು ಮೌಲ್ಯಮಾಪನ ಮಾಡುವ ಅಗತ್ಯವಿದೆ:

**a)** ಗುಂಪಿನ ಪ್ರಕಾರ

**b)** ಗುಂಪಿನ ಗಾತ್ರ

**c)** ಉದ್ಯಮದ ಪ್ರಕಾರ

**d)** ವ್ಯಾಪ್ತಿಗೆ ಅರ್ಹರಾದ ವ್ಯಕ್ತಿಗಳು

**e)** ಸಂಪೂರ್ಣ ಗುಂಪನ್ನು ಕವರ್ ಮಾಡಲಾಗುತ್ತಿದೆಯೇ ಅಥವಾ ಸದಸ್ಯರಿಗೆ ಆಯ್ಕೆಯಿಂದ ಹೊರಗುಳಿಯುವ ಆಯ್ಕೆ ಇದೆಯೇ

f) ಕವರ್ ನ ಮಟ್ಟ - ಎಲ್ಲರಿಗೂ ಏಕರೂಪವಾಗಿರಲಿ ಅಥವಾ ವಿಭಿನ್ನವಾಗಿರಲಿ

g) ಲಿಂಗ, ವಯಸ್ಸು, ಏಕ ಅಥವಾ ಬಹು ಸ್ಥಳಗಳು, ಗುಂಪಿನ ಸದಸ್ಯರ ಆದಾಯದ ಮಟ್ಟಗಳು, ಉದ್ಯೋಗಿಗಳ ವಹಿವಾಟು ದರ, ಸಂಪೂರ್ಣ ಕಂತನ್ನು ಉದ್ಯೋಗದಾತ(ಗುಂಪು ಹೊಂದಿರುವವ)ರು ನೀಡುವವರಿದ್ದಾರೆಯೋ ಅಥವಾ ಸದಸ್ಯರು ಕಂತು ಪಾವತಿಯಲ್ಲಿ ಭಾಗವಹಿಸುವ ಅಗತ್ಯವಿದೆಯೋ ಮುಂತಾದ ಅಂಶಗಳ ಆಧಾರದ ಮೇಲೆ ಗುಂಪಿನ ಸಂಯೋಜನೆ

h) ವಿವಿಧ ಭೌಗೋಳಿಕ ಸ್ಥಾನಗಳಲ್ಲಿ ಹರಡಿರುವ ಬಹು ಸ್ಥಳಗಳ ಸಂದರ್ಭದಲ್ಲಿ ಪ್ರದೇಶಗಳಲ್ಲಿನ ಆರೋಗ್ಯ ವೆಚ್ಚಗಳಲ್ಲಿನ ವ್ಯತ್ಯಾಸ

i) ತೃತೀಯ ಪಕ್ಷದ ನಿರ್ವಾಹಕ(ಅವರ ಆಯ್ಕೆಮಾಡಿದ ಅಥವಾ ವಿಮಾಗಾರರಿಂದ ಆಯ್ಕೆಯಾದ)ರಿಂದ ಅಥವಾ ಸ್ವತಃ ವಿಮಾಗಾರರಿಂದ ಗುಂಪು ವಿಮೆಯ ನಿರ್ವಹಣೆಗೆ ಗುಂಪು ಹೊಂದಿರುವವರ ಆದ್ಯತೆ

j) ಪ್ರಸ್ತಾಪಕ ಗುಂಪಿನ ಕ್ಲೇಮ್ ಗಳ ಹಿಂದಿನ ಅನುಭವ

**ಉದಾಹರಣೆ**

ಗಣಿಗಳಲ್ಲಿ ಅಥವಾ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಸದಸ್ಯರ ಗುಂಪು ಹವಾನಿಯಂತ್ರಿತ ಕಚೇರಿಗಳಲ್ಲಿ ಕೆಲಸ ಮಾಡುವ ಸದಸ್ಯರ ಗುಂಪಿಗಿಂತ ಹೆಚ್ಚು ಆರೋಗ್ಯದ ಅಪಾಯವನ್ನು ಹೊಂದಿರುತ್ತದೆ. ಅಲ್ಲದೆ ರೋಗಗಳ ಸ್ವರೂಪ (ಆ ಮೂಲಕ ಕ್ಲೇಮ್ ಗಳು) ಎರಡೂ ಗುಂಪುಗಳಿಗೆ ಸಾಕಷ್ಟು ವಿಭಿನ್ನವಾಗಿರುವ ಸಾಧ್ಯತೆಯಿದೆ. ಆದ್ದರಿಂದ, ವಿಮಾಗಾರರು ಎರಡೂ ಸಂದರ್ಭಗಳಲ್ಲಿ ಗುಂಪು ಆರೋಗ್ಯ ವಿಮಾ ಪಾಲಿಸಿಗೆ ಅನುಗುಣವಾಗಿ ಬೆಲೆ ನಿರ್ಧರಿಸುತ್ತಾರೆ.

ಅದೇ ರೀತಿಯಾಗಿ ಐಟಿ ಕಂಪನಿಗಳಂತಹ ಹೆಚ್ಚಿನ ವಹಿವಾಟು ಹೊಂದಿರುವ ಗುಂಪುಗಳ ಸಂದರ್ಭದಲ್ಲಿ ಪ್ರತಿಕೂಲ ಆಯ್ಕೆಯನ್ನು ತಪ್ಪಿಸಲು, ವಿಮಾಗಾರರು ವಿಮೆಗೆ ಅರ್ಹರಾಗುವ ಮೊದಲು ಉದ್ಯೋಗಿಗಳು ತಮ್ಮ ಉಮೇದುವಾರಿಕೆ(ಪ್ರೊಬೇಷನರಿ)ಯ ಅವಧಿಯನ್ನು ಪೂರೈಸುವುದನ್ನು ಅಗತ್ಯತೆಯನ್ನಾಗಿ ಮಾಡುವ ಮೂಲಕ ಮುನ್ನೆಚ್ಚರಿಕೆಯ ಮಾನದಂಡಗಳನ್ನು ಪರಿಚಯಿಸಬಹುದು.

2. ಉದ್ಯೋಗದಾತ- ಉದ್ಯೋಗಿ ಗುಂಪುಗಳನ್ನು ಹೊರತುಪಡಿಸಿದ ಅಂಡರ್ ರೈಟಿಂಗ್

ಉದ್ಯೋಗದಾತ-ಉದ್ಯೋಗಿಗಳ ಗುಂಪುಗಳು ಸಾಂಪ್ರದಾಯಿಕವಾಗಿ ಗುಂಪು ಆರೋಗ್ಯ ವಿಮೆಯನ್ನು ನೀಡಲಾಗುವ ಅತ್ಯಂತ ಸಾಮಾನ್ಯ ಗುಂಪುಗಳಾಗಿವೆ, ಗುಂಪನ್ನು ಅಂಡರ್ ರೈಟ್ ಮಾಡುವಾಗ ಗುಂಪಿನ ಸಂಯೋಜನೆಯ ಗುಣಲಕ್ಷಣವು ಪ್ರಮುಖ ಪರಿಗಣನೆಯಲ್ಲಿ ಒಂದಾಗಿದೆ.

ಉದ್ಯೋಗದಾತ ಮತ್ತು ಉದ್ಯೋಗಿಗಳಲ್ಲದ ಗುಂಪುಗಳಿಗೆ ಸಹ ಆರೋಗ್ಯ ವಿಮೆಯನ್ನು ನೀಡಬಹುದು. ಐಆರ್ ಡಿಎಐ ವಿವಿಧ ಗುಂಪುಗಳೊಂದಿಗೆ ವ್ಯವಹರಿಸುವಾಗ ವಿಮಾಗಾರರು ಅಳವಡಿಸಿಕೊಳ್ಳುವ ವಿಧಾನವನ್ನು ನಿಯಂತ್ರಿಸುವ ದೃಷ್ಟಿಯಿಂದ ಗುಂಪು ವಿಮಾ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಅಂತಹ ಉದ್ಯೋಗದಾತರ ಗುಂಪುಗಳಲ್ಲಿ ಈ ಕೆಳಗಿನ ಗುಂಪುಗಳು ಸೇರಿವೆ:

a) ಉದ್ಯೋಗದಾತರ ಕಲ್ಯಾಣ ಸಂಘ

b) ನಿರ್ದಿಷ್ಟ ಕಂಪನಿಯಿಂದ ನೀಡಲಾದ ಕ್ರೆಡಿಟ್ ಕಾರ್ಡ್ ಗಳನ್ನು ಹೊಂದಿರುವವರು

*c)* ವಿಮೆಯನ್ನು ಆಡ್-ಆನ್ ಪ್ರಯೋಜನವನ್ನಾಗಿ ನೀಡುವ ನಿರ್ದಿಷ್ಟ ವ್ಯವಹಾರದ ಗ್ರಾಹಕರು

*d)* ಬ್ಯಾಂಕ್ ಮತ್ತು ವೃತ್ತಿಪರ ಸಂಘಗಳು ಅಥವಾ ಸೊಸೈಟಿಗಳಿಂದ ಸಾಲಪಡೆದವರು

## I. ಸಾಗರೋತ್ತರ ಪ್ರಯಾಣ ವಿಮೆಯ ಅಂಡರ್ ರೈಟಿಂಗ್

ಸಾಗರೋತ್ತರ ಪ್ರಯಾಣ ವಿಮಾ ಪಾಲಿಸಿಗಳಡಿಯಲ್ಲಿ ಮುಖ್ಯ ಕವರ್ ಆರೋಗ್ಯ ರಕ್ಷಣೆಯಾಗಿರುವುದರಿಂದ, ಅಂಡರ್ ರೈಟಿಂಗ್ ಸಾಮಾನ್ಯವಾಗಿ ಆರೋಗ್ಯ ವಿಮೆಯ ಮಾದರಿಯನ್ನು ಅನುಸರಿಸುತ್ತದೆ.

ಕಂತಿನ ಬೆಲೆ ನಿರ್ಧಾರ ಮತ್ತು ಸ್ವೀಕಾರವು ವೈಯಕ್ತಿಕ ಕಂಪನಿ ಮಾರ್ಗಸೂಚಿಗಳ ಪ್ರಕಾರವಿರುತ್ತದೆ ಆದರೆ ಕೆಲವು ಪ್ರಮುಖ ಪರಿಗಣನೆಗಳನ್ನು ಕೆಳಗೆ ನೀಡಲಾಗಿದೆ:

1. ಪ್ರಸ್ತಾಪಿಸುವವರ ವಯಸ್ಸು ಮತ್ತು ವಿದೇಶಿ ಪ್ರಯಾಣದ ಅವಧಿಯ ಮೇಲೆ ಕಂತಿನ ದರವು ಅವಲಂಬಿಸಿರುತ್ತದೆ.
2. ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆಯು ದುಬಾರಿಯಾಗಿರುವುದರಿಂದ, ದೇಶೀಯ ಆರೋಗ್ಯ ವಿಮಾ ಪಾಲಿಸಿಗಳಿಗೆ ಹೋಲಿಸಿದರೆ ಕಂತಿನ ದರಗಳು ಸಾಮಾನ್ಯವಾಗಿ ಹೆಚ್ಚಾಗಿರುತ್ತವೆ.
3. ವಿದೇಶಗಳಲ್ಲಿಯೂ ಸಹ, ಯುಎಸ್ಎ ಮತ್ತು ಕೆನಡಾ ದೇಶಗಳಿಗಾಗಿ ಕಂತಿನ ಮೊತ್ತ ಅತ್ಯಧಿಕವಾಗಿದೆ.
4. ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಪ್ರಸ್ತಾಪಕರು ಪಾಲಿಸಿಯನ್ನು ಬಳಸುವ ಸಾಧ್ಯತೆಯನ್ನು ಕಡಿಮೆಮಾಡಲು ಕಾಳಜಿಯನ್ನು ತೆಗೆದುಕೊಳ್ಳಬೇಕು ಮತ್ತು ಆದ್ದರಿಂದ ಯಾವುದೇ ಪೂರ್ವ ಅಸ್ತಿತ್ವದಲ್ಲಿರುವ ಕಾಯಿಲೆಯ ಅಸ್ತಿತ್ವವನ್ನು ಪ್ರಸ್ತಾವನೆಯ ಹಂತದಲ್ಲಿ ಎಚ್ಚರಿಕೆಯಿಂದ ಪರಿಗಣಿಸಬೇಕು.

## J. ವೈಯಕ್ತಿಕ ಅಪಘಾತ ವಿಮೆಯ ಅಂಡರ್ ರೈಟಿಂಗ್

ವೈಯಕ್ತಿಕ ಅಪಘಾತ ಪಾಲಿಸಿಗಳ ಅಂಡರ್ ರೈಟಿಂಗ್ ನಲ್ಲಿಯ ಪರಿಗಣನೆಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

**ಬೆಲೆನಿರ್ಧಾರ(ರೇಟಿಂಗ್)**

ವೈಯಕ್ತಿಕ ಅಪಘಾತ ವಿಮೆಯಲ್ಲಿ, ವಿಮಾದಾರರ ಉದ್ಯೋಗವು ಪರಿಗಣಿಸಲ್ಪಡುವ ಮುಖ್ಯ ಅಂಶವಾಗಿದೆ. ನಿರ್ವಹಿಸುವ ಕೆಲಸದ ಸ್ವರೂಪಕ್ಕೆ ಅನುಗುಣವಾಗಿ ವೃತ್ತಿ ಅಥವಾ ಉದ್ಯೋಗಕ್ಕೆ ಸಂಬಂಧಿಸಿದ ಅಪಾಯಗಳು ಬದಲಾಗುತ್ತದೆ. ಉದಾಹರಣೆಗೆ, ಕಟ್ಟಡವನ್ನು ನಿರ್ಮಿಸುತ್ತಿರುವ ಸ್ಥಳದಲ್ಲಿ ಕೆಲಸ ಮಾಡುವ ಸಿವಿಲ್ ಇಂಜಿನಿಯರ್ ರಿಗಿಂತ ಕಚೇರಿ ವ್ಯವಸ್ಥಾಪಕರು ಕೆಲಸದಲ್ಲಿ ಕಡಿಮೆ ಅಪಾಯಕ್ಕೆ ಒಳಗಾಗುತ್ತಾರೆ. ದರವನ್ನು

ನಿಗದಿಪಡಿಸಲು, ಉದ್ಯೋಗಗಳನ್ನು ಪ್ರತಿ ಗುಂಪು ಹೆಚ್ಚು ಅಥವಾ ಕಡಿಮೆ, ಒಂದೇ ರೀತಿಯ ಅಪಾಯಕ್ಕೆ ಒಡ್ಡುವಿಕೆಯನ್ನು ಪ್ರತಿಬಿಂಬಿಸುವ ಗುಂಪುಗಳಲ್ಲಿ ವರ್ಗೀಕರಿಸಲಾಗಿದೆ.

**ಅಪಾಯದ ವರ್ಗೀಕರಣ**

ವಿಮೆ ಮಾಡಿದ ವ್ಯಕ್ತಿಗೆ ಸಂಬಂಧಿಸಿದ ಅಪಾಯಗಳನ್ನು ಉದ್ಯೋಗದ ಆಧಾರದ ಮೇಲೆ ಮೂರು ಗುಂಪುಗಳಲ್ಲಿ ವರ್ಗೀಕರಿಸಬಹುದು:

- **ಅಪಾಯದ ಗುಂಪು I**

  ಲೆಕ್ಕಿಗ(ಅಕೌಂಟಂಟ್)ರು, ವೈದ್ಯರು, ವಕೀಲರು, ವಾಸ್ತುಶಿಲ್ಪಿಗಳು ಮತ್ತು ಆಡಳಿತ ಕಾರ್ಯಗಳಲ್ಲಿ ತೊಡಗಿರುವ ವ್ಯಕ್ತಿಗಳು, ಪ್ರಾಥಮಿಕವಾಗಿ ಒಂದೇ ರೀತಿಯ ಅಪಾಯಗಳ ಉದ್ಯೋಗಗಳಲ್ಲಿ ತೊಡಗಿರುವ ವ್ಯಕ್ತಿಗಳು.

- **ಅಪಾಯದ ಗುಂಪು II**

  ಮೇಲ್ವಿಚಾರಣಾ ಕಾರ್ಯಗಳಲ್ಲಿ ತೊಡಗಿರುವ ವಾಸ್ತುಶಿಲ್ಪಿಗಳು, ಗುತ್ತಿಗೆದಾರರು ಮತ್ತು ಅಭಿಯಾಂತ್ರಿಕ(ಇಂಜಿನಿಯರ್)ರು ಮತ್ತು ಇದೇ ರೀತಿಯ ಅಪಾಯಗಳ ಉದ್ಯೋಗದಲ್ಲಿ ತೊಡಗಿರುವ ವ್ಯಕ್ತಿಗಳು. ಹಸ್ತಚಾಲಿತ ಕೆಲಸದಲ್ಲಿ ತೊಡಗಿರುವ ಎಲ್ಲ ವ್ಯಕ್ತಿಗಳು (ಗುಂಪು **III** ಅಡಿಯಲ್ಲಿ ಬರುವವರನ್ನು ಹೊರತುಪಡಿಸಿ),

- **ಅಪಾಯದ ಗುಂಪು III**

  ಭೂಗತ ಗಣಿಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಅಥವಾ ರೇಸಿಂಗ್ ಆನ್ ವ್ಹೀಲ್ಸ್ ನಂತಹ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳು ಮತ್ತು ಅಂತಹುದೇ ಅಪಾಯದ ಉದ್ಯೋಗಗಳು/ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳು.

  ಅಪಾಯದ ಗುಂಪುಗಳನ್ನು ಕ್ರಮವಾಗಿ 'ಸಾಮಾನ್ಯ', 'ಮಧ್ಯಮ' ಮತ್ತು 'ಹೆಚ್ಚಿನ' ರೂಪದಲ್ಲಿ ಸಹ ಗುರುತಿಸಲಾಗುತ್ತದೆ.

**ವಯಸ್ಸಿನ ನಿರ್ಬಂಧಗಳು**

ಕೆಲಸ ಮಾಡುವ ಜನಸಂಖ್ಯೆಯ (ಉದ್ಯೋಗದಾತ ಉದ್ಯೋಗಿ) ಸಾಮಾನ್ಯ ವಯಸ್ಸಿನ ಮಿತಿಗಳು 18-70 ಆಗಿರುತ್ತದೆ. ಆದರೆ ವಿದ್ಯಾರ್ಥಿಗಳಿಗೆ ಕನಿಷ್ಠ ವಯಸ್ಸು 5 ವರ್ಷಗಳೂ ಆಗಿರಬಹುದು..

ಕವರ್ ಮತ್ತು ನವೀಕರಿಸಲು ಕನಿಷ್ಠ ಮತ್ತು ಗರಿಷ್ಠ ವಯಸ್ಸು ಕಂಪನಿಯಿಂದ ಕಂಪನಿಗೆ ಬದಲಾಗುತ್ತದೆ..

**ಫ್ಯಾಮಿಲಿ ಪ್ಯಾಕೇಜ್ ಕವರ್**

ವೈಯಕ್ತಿಕ ಅಪಘಾತ ಪಾಲಿಸಿಯು ಮಕ್ಕಳು ಮತ್ತು ಗಳಿಸದ ಸಂಗಾತಿಯ ಮರಣ ಮತ್ತು ಶಾಶ್ವತ ಅಂಗವೈಕಲ್ಯಕ್ಕೆ (ಒಟ್ಟು ಅಥವಾ ಭಾಗಶಃ) ಮಾತ್ರ ಕವರ್ ನೀಡುವ ಫ್ಯಾಮಿಲಿ ಪ್ಯಾಕೇಜ್ ಕವರ್ ಅನ್ನು ಸಹ

ಹೊಂದಿದೆ.

**ಗುಂಪು ಪಾಲಿಸಿಗಳಲ್ಲಿ ಕಂತು ರಿಯಾಯಿತಿ**

ವಿಮಾದಾರರ ಸಂಖ್ಯೆಯು ನಿರ್ದಿಷ್ಟ ಸಂಖ್ಯೆಯನ್ನು ಉದಾ. 100 ನ್ನು ಮೀರಿದರೆ ಕಂತಿನಲ್ಲಿ ಗುಂಪಿನ ರಿಯಾಯಿತಿಯನ್ನು ಅನುಮತಿಸಲಾಗಿದೆ. ಆದರೆ ಸಂಖ್ಯೆ ಚಿಕ್ಕದಾಗಿದ್ದರೆ ಉದಾ. 25 ಆಗಿದ್ದರೆ ಯಾವುದೇ ರಿಯಾಯಿತಿಯಿಲ್ಲದೆ ಗುಂಪು ಪಾಲಿಸಿಯನ್ನು ನೀಡಬಹುದು..

**ಗುಂಪು ರಿಯಾಯಿತಿಯ ಮಾನದಂಡಗಳು**

ಹೆಸರಿಸಲಾದ ಗುಂಪುಗಳಿಗೆ ಸಂಬಂಧಿಸಿದಂತೆ ಮಾತ್ರ ಗುಂಪು ಪಾಲಿಸಿಗಳನ್ನು ನೀಡಬೇಕು. ಗುಂಪು ರಿಯಾಯಿತಿ ಮತ್ತು ಇತರ ಪ್ರಯೋಜನಗಳನ್ನು ಪಡೆಯುವ ಉದ್ದೇಶಕ್ಕಾಗಿ, ಪ್ರಸ್ತಾವಿತ "ಗುಂಪು" ಈ ಕೆಳಗೆ ನೀಡಿದ ವರ್ಗಗಳಲ್ಲಿಯ ಯಾವುದಾದರೂ ಒಂದರ ಅಡಿಯಲ್ಲಿ ಸ್ಪಷ್ಟವಾಗಿ ಇರಬೇಕು:

- ಉದ್ಯೋಗಿಗಳ ಅವಲಂಬಿತರನ್ನು ಒಳಗೊಂಡಂತೆ ಉದ್ಯೋಗದಾತ - ಉದ್ಯೋಗಿಗಳ ಸಂಬಂಧ
- ನೋಂದಾಯಿತ ಸಹಕಾರ ಸಂಘದ ಸದಸ್ಯರು
- ನೋಂದಾಯಿತ ಸೇವಾ ಕ್ಲಬ್ ಗಳ ಸದಸ್ಯರು
- ಬ್ಯಾಂಕ್ / ಡೈನರ್ಸ್/ ಮಾಸ್ಟರ್/ ವೀಸಾಗಳ ಕ್ರೆಡಿಟ್ ಕಾರ್ಡ್ ಹೊಂದಿರುವವರು

ಮೇಲೆ ತಿಳಿಸಿದ ವರ್ಗಗಳಿಗಿಂತ ಭಿನ್ನವಾಗಿರುವ ಯಾವುದೇ ಬೇರೆ ವರ್ಗಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳ ಸಂದರ್ಭದಲ್ಲಿ, ಅವುಗಳನ್ನು ಆಯಾ ವಿಮಾದಾರರ ತಾಂತ್ರಿಕ ವಿಭಾಗವು ಚರ್ಚಿಸಬಹುದು ಮತ್ತು ನಿರ್ಧರಿಸಬಹುದು.

**ಕಂತು**

ಹೆಸರಿಸಲಾದ ಉದ್ಯೋಗಿಗಳಿಗೆ ಅಪಾಯಗಳ ವರ್ಗೀಕರಣ ಮತ್ತು ಆಯ್ಕೆಮಾಡಿದ ಪ್ರಯೋಜನಗಳ ಪ್ರಕಾರ ವಿವಿಧ ಕಂತಿನ ದರಗಳು ಅನ್ವಯಿಸುತ್ತವೆ.

**ಆನ್-ಡ್ಯೂಟಿ ಕವರ್**

ಪಿಎ ಪಾಲಿಸಿಗಳು ಆನ್-ಡ್ಯೂಟಿ ಮತ್ತು ಆಫ್-ಡ್ಯೂಟಿ ಅವಧಿಗೆ ಅಥವಾ ಪ್ರತ್ಯೇಕವಾಗಿ ಎರಡೂ ಕವರ್ ಗಳನ್ನು ಹೊಂದಿರಬಹುದು. ವಿಮಾ ಮೊತ್ತ, ಕರ್ತವ್ಯದ ಗಂಟೆಗಳ ಸಂಖ್ಯೆ ಇತ್ಯಾದಿಗಳ ಮೇಲೆ ಕಂತು ಅವಲಂಬಿತವಾಗಿರುತ್ತದೆ. ಕೆಲವು ಉದ್ಯೋಗದಾತರು ಕರ್ತವ್ಯದ ಅವಧಿಯನ್ನು ಮಾತ್ರ ಕವರ್ ಮಾಡಲು ತಮ್ಮನ್ನು ತಾವು ನಿರ್ಬಂಧಿಸಿಕೊಳ್ಳಲು ಬಯಸಬಹುದು.

**ಸಾವಿನ ಕವರ್ ನ ಹೊರತುಗಳು**

ವೈಯಕ್ತಿಕ ಕಂಪನಿ ಮಾರ್ಗಸೂಚಿಗಳಿಗೆ ಒಳಪಟ್ಟು ಮರಣದ ಪ್ರಯೋಜನವನ್ನು ಹೊರತುಪಡಿಸಿ ಗುಂಪು ಪಿ.ಎ ಪಾಲಿಸಿಗಳನ್ನು ನೀಡಲು ಸಾಧ್ಯವಿದೆ.

**ಗುಂಪು ರಿಯಾಯಿತಿ ಮತ್ತು ಬೋನಸ್ / ಮಾಲಸ್ ಗ್ರಾಹಕರ ವೈಯಕ್ತಿಕ ಕ್ಲೇಮ್ ಇತಿಹಾಸದ ಪ್ರಕಾರ ಪಾವತಿಸಿದ ಕಂತನ್ನು ಸರಿಹೊಂದಿಸುವ ವ್ಯವಸ್ಥೆ**

ಗುಂಪು ಪಾಲಿಸಿಗಳ ನವೀಕರಣದಡಿಯಲ್ಲಿ ಕ್ಲೇಮ್ ಗಳ ಅನುಭವಕ್ಕೆ ಸಂಬಂಧಿಸಿದಂತೆ ಬೆಲೆ ನಿರ್ಧಾರ(ರೇಟಿಂಗ್)ವನ್ನು ನಿರ್ಧರಿಸಲಾಗುತ್ತದೆ.

- ನವೀಕರಣ ಕಂತಿನಲ್ಲಿ (ಬೋನಸ್) ರಿಯಾಯಿತಿಯೊಂದಿಗೆ ಅನುಕೂಲಕರ ಅನುಭವವನ್ನು ಬಹುಮಾನವಾಗಿ ನೀಡಲಾಗುತ್ತದೆ
- ಪ್ರತಿಕೂಲ ಅನುಭವವನ್ನು ಒಂದು ಅನುಪಾತದ ಪ್ರಕಾರ ನವೀಕರಣ ಕಂತಿಗೆ (ಮಾಲಸ್) ಹೆಚ್ಚುವರಿ ಸೇರಿಸುವ (ಲೋಡ್ ಮಾಡುವ) ಮೂಲಕ ದಂಡವನ್ನು ವಿಧಿಸಲಾಗುತ್ತದೆ
- ಕ್ಲೇಮ್ ಗಳ ಅನುಭವವು ಶೇಕಡಾ **70** ರಷ್ಟಾಗಿದ್ದರೆ ನವೀಕರಣಕ್ಕೆ ಸಾಮಾನ್ಯ ದರಗಳು ಅನ್ವಯಿಸುತ್ತವೆ

| **ನಿಮ್ಮನ್ನು ಪರೀಕ್ಷಿಸಿಕೊಳ್ಳಿ 5** |
|---|

**1)** ಗುಂಪಿನ ಆರೋಗ್ಯ ವಿಮೆಯಲ್ಲಿ, ಗುಂಪನ್ನು ರಚಿಸುವ ಯಾವುದೇ ವ್ಯಕ್ತಿಯು ವಿಮಾಗಾರರ ವಿರುದ್ಧ ಆಯ್ಕೆಯಾಗಬಹುದು.

**2)** ಗುಂಪು ಆರೋಗ್ಯ ವಿಮೆಯು ಉದ್ಯೋಗದಾತ-ಉದ್ಯೋಗಿ ಗುಂಪುಗಳಿಗೆ ಮಾತ್ರ ಕವರ್ ಅನ್ನು ನೀಡುತ್ತದೆ.

**I.** ಹೇಳಿಕೆ **1** ನಿಜವಾಗಿದೆ ಮತ್ತು ಹೇಳಿಕೆ **2** ಸುಳ್ಳಾಗಿದೆ

**II.** ಹೇಳಿಕೆ 2 ನಿಜವಾಗಿದೆ ಮತ್ತು ಹೇಳಿಕೆ 1 ಸುಳ್ಳಾಗಿದೆ

**III.** ಹೇಳಿಕೆ **1** ನಿಜವಾಗಿದೆ ಮತ್ತು ಹೇಳಿಕೆ **2** ಎರಡೂ ನಿಜವಾಗಿವೆ

**IV.** ಹೇಳಿಕೆ **1** ನಿಜವಾಗಿದೆ ಮತ್ತು ಹೇಳಿಕೆ **2** ಎರಡೂ ಸುಳ್ಳಾಗಿವೆ

| ನಿಮ್ಮನ್ನು ಪರೀಕ್ಷಿಸಿಕೊಳ್ಳಿಗೆ ಉತ್ತರಗಳು |
|---|

**ಉತ್ತರ 1 –** ಸರಿಯಾದ ಆಯ್ಕೆ **III** ಆಗಿದೆ.

**ಉತ್ತರ 1 –** ಸರಿಯಾದ ಆಯ್ಕೆ **III** ಆಗಿದೆ..

**ಉತ್ತರ 1 –** ಸರಿಯಾದ ಆಯ್ಕೆ **I** ಆಗಿದೆ.

**ಉತ್ತರ 1 –** ಸರಿಯಾದ ಆಯ್ಕೆ **IV** ಆಗಿದೆ.

**ಉತ್ತರ 1 –** ಸರಿಯಾದ ಆಯ್ಕೆ **IV** ಆಗಿದೆ.

# ಅಧ್ಯಾಯ H-05

# ಆರೋಗ್ಯ ವಿಮೆಯ ಕ್ಲೇಮ್ ಗಳು

**ಅಧ್ಯಾಯ ಪರಿಚಯ**

ಈ ಅಧ್ಯಾಯದಲ್ಲಿ ನಾವು ಆರೋಗ್ಯ ವಿಮೆಯಲ್ಲಿಯ ಕ್ಲೇಮ್ ನಿರ್ವಹಣೆಯ ಪ್ರಕ್ರಿಯೆ, ಕ್ಲೇಮ್ ಗಳಿಗೆ ಸಂಬಂಧಿಸಿದ ಕಾರ್ಯವಿಧಾನಗಳು ಮತ್ತು ದಾಖಲಾತಿಗಳ ಬಗ್ಗೆ ಚರ್ಚಿಸಲಿದ್ದೇವೆ. ಇದರ ಹೊರತಾಗಿ, ನಾವು ವೈಯಕ್ತಿಕ ಅಪಘಾತ ವಿಮೆಯಡಿಯಲ್ಲಿಯ ಕ್ಲೇಮ್ ಗಳ ನಿರ್ವಹಣೆಯನ್ನು ಸಹ ಪರಿಶೀಲಿಸಲಿದ್ದೇವೆ ಮತ್ತು ಟಿಪಿಎಗಳ ಪಾತ್ರವನ್ನು ಅರ್ಥಮಾಡಿಕೊಳ್ಳುತ್ತೇವೆ.

**ಕಲಿಕೆಯ ಫಲಿತಾಂಶಗಳು**

**A.** ವಿಮೆಯಲ್ಲಿ ಕ್ಲೇಮ್ ಗಳ ನಿರ್ವಹಣೆ

**B.** ಆರೋಗ್ಯ ವಿಮೆಯ ಕ್ಲೇಮ್ ಗಳ ನಿರ್ವಹಣೆ

**C.** ಆರೋಗ್ಯ ವಿಮೆಯ ಕ್ಲೇಮ್ ಗಳಲ್ಲಿಯ ದಾಖಲಾತಿ

**D.** ತೃತೀಯ ಪಕ್ಷದ ನಿರ್ವಾಹಕರ ಪಾತ್ರ (ಟಿಪಿಎ*)*

**E.** ಕ್ಲೇಮ್ಸ್ ನಿರ್ವಹಣೆ - ವೈಯಕ್ತಿಕ ಅಪಘಾತ

**F.** ಕ್ಲೇಮ್ಸ್ ನಿರ್ವಹಣೆ – ಸಾಗರೋತ್ತರ ಪ್ರಯಾಣ ವಿಮೆ

ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ, ನೀವು ಈ ಕೆಳಗಿನ ಅಂಶಗಳನ್ನು ಮಾಡಲು ಸಾಧ್ಯವಾಗುತ್ತದೆ:

**a)** ವಿಮೆಯ ಕ್ಲೇಮ್ ಗಳಲ್ಲಿಯ ವಿವಿಧ ಪಾಲುದಾರರನ್ನು ವಿವರಿಸುವುದು

**b)** ಆರೋಗ್ಯ ವಿಮೆಯ ಕ್ಲೇಮ್ ಗಳನ್ನು ಹೇಗೆ ನಿರ್ವಹಿಸಲಾಗುತ್ತದೆ ಎಂಬುದನ್ನು ವಿವರಿಸುವುದು

**c)** ಆರೋಗ್ಯ ವಿಮೆಯ ಕ್ಲೇಮ್ ಗಳ ಇತ್ಯರ್ಥಕ್ಕೆ ಅಗತ್ಯವಿರುವ ವಿವಿಧ ದಾಖಲೆಗಳನ್ನು ಚರ್ಚಿಸುವುದು

**d)** ವಿಮಾಗಾರರಿಂದ ಕ್ಲೇಮ್ ಗಳಿಗಾಗಿ ಹೇಗೆ ಮೀಸಲುಗಳನ್ನು ಒದಗಿಸಲಾಗುತ್ತದೆಂಬುದನ್ನು ವಿವರಿಸುವುದು.

**e)** ವೈಯಕ್ತಿಕ ಅಪಘಾತದ ಕ್ಲೇಮ್ ಗಳನ್ನು ಚರ್ಚಿಸುವುದು

**f)** ಟಿಪಿಎ ಗಳ ಪರಿಕಲ್ಪನೆ ಮತ್ತು ಪಾತ್ರವನ್ನು ಅರ್ಥಮಾಡಿಕೊಳ್ಳುವುದು

## A. ವಿಮೆಯಲ್ಲಿ ಕ್ಲೇಮ್ ಗಳ ನಿರ್ವಹಣೆ

ವಿಮೆಯು ಒಂದು **'ಭರವಸೆ'**ಯಾಗಿದ್ದು ಪಾಲಿಸಿಯು ಆ ಭರವಸೆಗೆ **'ಸಾಕ್ಷಿ'**ಯಾಗಿರುತ್ತದೆಯೆಂದು ಬಹಳ ಚೆನ್ನಾಗಿ ಅರ್ಥಮಾಡಿಕೊಳ್ಳಲಾಗಿದೆ. ಪಾಲಿಸಿಯಡಿಯಲ್ಲಿ ವಿಮೆ ಮಾಡಿದ ಕ್ಲೇಮ್ ಗೆ ಕಾರಣವಾಗುವ ಘಟನೆಯ ಸಂಭವವು ಆ ಭರವಸೆಯ ನಿಜವಾದ ಪರೀಕ್ಷೆಯಾಗಿದೆ. ಒಬ್ಬ ವಿಮಾಗಾರರು ತಮ್ಮ ಕ್ಲೇಮ್ ಗಳ ಭರವಸೆಗಳನ್ನು ಎಷ್ಟು ಚೆನ್ನಾಗಿ ಇಟ್ಟುಕೊಳ್ಳುತ್ತಾರೆಂಬುದರ ಮೂಲಕ ಎಷ್ಟು ಉತ್ತಮವಾಗಿ ಕಾರ್ಯನಿರ್ವಹಿಸುತ್ತಾರೆಂಬುವುದರ ಮೌಲ್ಯಮಾಪನ ಮಾಡಲಾಗುತ್ತದೆ. ವಿಮಾ ಕಂಪನಿಯ ಕ್ಲೇಮ್ ಗಳನ್ನು ಪಾವತಿಸುವ ಸಾಮರ್ಥ್ಯವೇ ವಿಮೆಯಲ್ಲಿನ ಪ್ರಮುಖ ಬೆಲೆನಿರ್ಧಾರದ(ರೇಟಿಂಗ್) ಅಂಶವಾಗಿದೆ.

### 1. ಕ್ಲೇಮ್ ಪ್ರಕ್ರಿಯೆಯಲ್ಲಿಯ ಪಾಲುದಾರರು

ಕ್ಲೇಮ್ ಗಳನ್ನು ಹೇಗೆ ನಿರ್ವಹಿಸಲಾಗುತ್ತದೆಯೆಂಬುದನ್ನು ನೋಡುವ ಮೊದಲು ಕ್ಲೇಮ್ ಪ್ರಕ್ರಿಯೆಯಲ್ಲಿ ಆಸಕ್ತಿ ಹೊಂದಿರುವ ಪಕ್ಷಗಳನ್ನು ಅರ್ಥಮಾಡಿಕೊಳ್ಳಬೇಕು.

**ಚಿತ್ರ 1 ಕ್ಲೇಮ್ ಪ್ರಕ್ರಿಯೆಯಲ್ಲಿಯ ಪಾಲುದಾರರು**




| | |
|---|---|
| **ಗ್ರಾಹಕರು** | ವಿಮೆಯನ್ನು ಖರೀದಿಸುವ ವ್ಯಕ್ತಿಯು ಮೊದಲ ಪಾಲುದಾರರು ಮತ್ತು 'ಕ್ಲೇಮ್ ಪಡೆಯುವವರು'. |
| **ಮಾಲೀಕರು** | ವಿಮಾ ಕಂಪನಿಯ ಮಾಲೀಕರು 'ಹಕ್ಕುಗಳ ಪಾವತಿದಾರರಾಗಿ' ದೊಡ್ಡ ಪಾಲನ್ನು ಹೊಂದಿದ್ದಾರೆ. ಪಾಲಿಸಿದಾರರ ನಿಧಿಯಿಂದ ಕ್ಲೇಮ್ ಗಳನ್ನು ಪೂರೈಸಿದರೂ, ಹೆಚ್ಚಿನ ಸಂದರ್ಭಗಳಲ್ಲಿ, ಅವರು ಭರವಸೆಯನ್ನು ಉಳಿಸಿಕೊಳ್ಳಲು ಜವಾಬ್ದಾರರಾಗಿರುತ್ತಾರೆ. |
| **ಅಂಡರ್ ರೈಟರ್ ರು** | ವಿಮಾ ಕಂಪನಿಯೊಳಗೆ ಮತ್ತು ಎಲ್ಲ ವಿಮಾಗಾರರಲ್ಲಿ ಕ್ಲೇಮ್ ಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಉತ್ಪನ್ನಗಳನ್ನು ವಿನ್ಯಾಸಗೊಳಿಸಲು, ಪಾಲಿಸಿ ನಿಯಮಗಳು, ಷರತ್ತುಗಳು ಮತ್ತು ಬೆಲೆ ಇತ್ಯಾದಿಗಳನ್ನು ನಿರ್ಧರಿಸುವ |

| | |
|---|---|
| | ಜವಾಬ್ದಾರಿಯನ್ನು ಅಂಡರ್ ರೈಟರ್ ರು ಹೊಂದಿರುತ್ತಾರೆ. |
| **ನಿಯಂತ್ರಕರು** | ನಿಯಂತ್ರಕ (ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ)ರು ಈ ಕೆಳಗಿನ ಉದ್ದೇಶಗಳಲ್ಲಿ ಪ್ರಮುಖ ಪಾಲುದಾರರಾಗಿದ್ದಾರೆ:<br>✓ ವಿಮಾ ಪರಿಸರದಲ್ಲಿ ಕ್ರಮವನ್ನು ನಿರ್ವಹಿಸುವುದು<br>✓ ಪಾಲಿಸಿದಾರರ ಆಸಕ್ತಿಯನ್ನು ರಕ್ಷಿಸುವುದು<br>✓ ವಿಮಾದಾರರ ದೀರ್ಘಾವಧಿಯ ಆರ್ಥಿಕ ಆರೋಗ್ಯವನ್ನು ಖಚಿತಪಡಿಸಿಕೊಳ್ಳುವುದು. |
| **ತೃತೀಯ ಪಕ್ಷದ ಆಡಳಿತಗಾರರು** | ತೃತೀಯ ಪಕ್ಷದ ಆಡಳಿತಗಾರರೆಂದು ಕರೆಯಲ್ಪಡುವ ಆರೋಗ್ಯ ವಿಮೆಯ ಕ್ಲೇಮ್ ಗಳನ್ನು ಪ್ರಕ್ರಿಯೆಗೊಳಿಸುವ ಸೇವಾ ಮಧ್ಯವರ್ತಿಗಳು. |
| **ವಿಮಾ ಏಜೆಂಟರು/ ಬ್ರೋಕರ್ ರು** | ವಿಮಾ ಏಜೆಂಟರು/ ಬ್ರೋಕರ್ ರು ಪಾಲಿಸಿಗಳನ್ನು ಮಾರಾಟ ಮಾಡುವುದಲ್ಲದೆ, ಕ್ಲೇಮ್ ನ ಸಂದರ್ಭದಲ್ಲಿ ಗ್ರಾಹಕರಿಗೆ ಸೇವೆ ಸಲ್ಲಿಸುವುದನ್ನು ನಿರೀಕ್ಷಿಸಲಾಗುತ್ತದೆ. |
| **ಪೂರೈಕೆದಾರರು/ ಆಸ್ಪತ್ರೆಗಳು** | ಗ್ರಾಹಕರು ಸುಗಮವಾದ ಕ್ಲೇಮ್ ಅನುಭವವನ್ನು ಪಡೆಯುವ ಬಗ್ಗೆ, ವಿಶೇಷವಾಗಿ ಆಸ್ಪತ್ರೆಯು ಟಿಪಿಎ ಪ್ಯಾನೆಲ್‌ನಲ್ಲಿರುವಾಗ ವಿಮಾಗಾರರು ನಗದುರಹಿತ ಆಸ್ಪತ್ರೆ ದಾಖಲಾತಿಯನ್ನು ಒದಗಿಸುವುದನ್ನು ಅವರು ಖಚಿತಪಡಿಸುತ್ತಾರೆ. |

ಹೀಗೆ ಕ್ಲೇಮ್ ಗಳನ್ನು ಉತ್ತಮವಾಗಿ ನಿರ್ವಹಿಸುವುದು ಎಂದರೆ ಕ್ಲೇಮ್ ಗಳಿಗೆ ಸಂಬಂಧಿಸಿದ ಈ ಪ್ರತಿ ಪಾಲುದಾರರ ಉದ್ದೇಶಗಳನ್ನು ನಿರ್ವಹಿಸುವುದು ಎಂದರ್ಥ. ಸಹಜವಾಗಿ, ಕೆಲವು ಸಲ ಈ ಉದ್ದೇಶಗಳು ಪರಸ್ಪರ ಸಂಘರ್ಷಕ್ಕೆ ಒಳಗಾಗಬಹುದು.

**ಮೀಸಲು/ಕಾಯ್ದಿರಿಸುವಿಕೆ:** ಅನೇಕ ಸಂದರ್ಭಗಳಲ್ಲಿ, ವಿಮಾ ಕಂಪನಿಗಳು ಕ್ಲೇಮ್ ಗಳನ್ನು ತಕ್ಷಣವೇ ಇತ್ಯರ್ಥಪಡಿಸಲು ಸಾಧ್ಯವಾಗದಿರಬಹುದು ಮತ್ತು ಮಾಹಿತಿಗಾಗಿ ಅಥವಾ ವಿವಾದಗಳು, ದಾವೆ ಇತ್ಯಾದಿಗಳ ಫಲಿತಾಂಶಗಳಿಗಾಗಿ ಕಾಯಬೇಕಾಗಬಹುದು. ಆದ್ದರಿಂದ, ಪಾವತಿಗಳು ಬಾಕಿ ಇರುವವರೆಗೆ ಅವರು ಕ್ಲೇಮ್ ಮೊತ್ತವನ್ನು ಕಾಯ್ದಿರಿಸಬೇಕಾಗುತ್ತದೆ. ಮೀಸಲುಗಳು ಸಾಮಾನ್ಯವಾಗಿ ಬಾಕಿ ಇರುವ ಕ್ಲೇಮ್ ಗಳ ಮೇಲೆ ಪಾವತಿಸುವ ಮೊತ್ತದ ವಾಸ್ತವಿಕ ಅಂದಾಜುಗಳಾಗಿರುತ್ತವೆ.

ಕ್ಲೇಮ್ ಗಳ ಸ್ಥಿತಿಯ ಆಧಾರದ ಮೇಲೆ ವಿಮಾಗಾರರ ಪುಸ್ತಕಗಳಲ್ಲಿ ಎಲ್ಲ ಕ್ಲೇಮ್ ಗಳಿಗೆ ಮಾಡಲಾದ ನಿಬಂಧನೆಯ ಮೊತ್ತವನ್ನು ಮೀಸಲು/ ಕಾಯ್ದಿರಿಸುವಿಕೆಯು ಸೂಚಿಸುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ಈ ಕೆಳಗಿನವರಲ್ಲಿ ಯಾರು ಆರೋಗ್ಯ ವಿಮೆಯ ಕ್ಲೇಮ್ ಪ್ರಕ್ರಿಯೆಯಲ್ಲಿ ಪಾಲುದಾರರಾಗಿಲ್ಲ?

**I.** ಗ್ರಾಹಕರು

**II.** ಪೋಲೀಸ ವಿಭಾಗ

**III.** ನಿಯಂತ್ರಕರು

## B. ಆರೋಗ್ಯ ವಿಮೆಯ ಕ್ಲೇಮ್ ಗಳ ನಿರ್ವಹಣೆ

### 1. ಆರೋಗ್ಯ ವಿಮೆಯಲ್ಲಿ ಕ್ಲೇಮ್ ಪ್ರಕ್ರಿಯೆ

ಕ್ಲೇಮ್ ಅನ್ನು ವಿಮಾ ಕಂಪನಿಯಿಂದ ಅಥವಾ ವಿಮಾ ಕಂಪನಿಯಿಂದ ಅಧಿಕೃತಗೊಳಿಸಿದ ತೃತೀಯ ಪಕ್ಷದ ಆಡಳಿತಗಾರರ (ಟಿಪಿಎ) ಸೇವೆಗಳ ಮೂಲಕ ಸೇವೆ ಸಲ್ಲಿಸಬಹುದು.

ವಿಮಾದಾರರಿಗೆ/ಟಿಪಿಎಗೆ ಕ್ಲೇಮ್ ಬಗ್ಗೆ ತಿಳಿಯಪಡಿಸಿದ ಸಮಯದಿಂದ ಪಾಲಿಸಿ ನಿಯಮಗಳ ಪ್ರಕಾರ ಪಾವತಿಯನ್ನು ಮಾಡುವವರೆಗೆ, ಪ್ರತಿಯೊಂದೂ ತನ್ನದೇ ಆದ ಪ್ರಸ್ತುತತೆಯನ್ನು ಹೊಂದಿರುವ ಆರೋಗ್ಯದ ಕ್ಲೇಮ್ ಸುನಿರ್ದಿಷ್ಟ ಹಂತಗಳ ಮೂಲಕ ಹಾದುಹೋಗುತ್ತವೆ.

ಈ ಕೆಳಗೆ ವಿವರಿಸಿದ ಪ್ರಕ್ರಿಯೆಗಳು ಆರೋಗ್ಯ ವಿಮೆ (ಆಸ್ಪತ್ರೆ)ಯ ನಷ್ಟ ಪರಿಹಾರದ ಉತ್ಪನ್ನಗಳ ನಿರ್ದಿಷ್ಟ ಉಲ್ಲೇಖದಲ್ಲಿದ್ದು ಆರೋಗ್ಯ ವಿಮಾ ವ್ಯವಹಾರದ ಪ್ರಮುಖ ಭಾಗವಾಗಿವೆ.

ಸ್ಥಿರ ಪ್ರಯೋಜನ ಉತ್ಪನ್ನ ಅಥವಾ ಗಂಭೀರ ಅನಾರೋಗ್ಯ ಅಥವಾ ದೈನಂದಿನ ನಗದು ಉತ್ಪನ್ನ ಇತ್ಯಾದಿಗಳಡಿಯಲ್ಲಿ ಕ್ಲೇಮ್ ಗಾಗಿ ಸಾಮಾನ್ಯ ಪ್ರಕ್ರಿಯೆ ಮತ್ತು ಪೋಷಕ ದಾಖಲೆಗಳು ಅಂತಹ ಉತ್ಪನ್ನಗಳು ನಗದು ರಹಿತ ಸೌಲಭ್ಯದೊಂದಿಗೆ ಬರುವುದಿಲ್ಲ ಎಂಬ ಅಂಶವನ್ನು ಹೊರತುಪಡಿಸಿ ಸಾಕಷ್ಟು ಒಂದೇ ಸಮನಾಗಿರುತ್ತವೆ.

ನಷ್ಟ ಪರಿಹಾರ ಮತ್ತು ಮರುಪಾವತಿಯ ರೀತಿಯ ಕ್ಲೇಮ್ ಗಳ ಎರಡೂ ಸಂದರ್ಭಗಳಲ್ಲಿ, ಮೂಲಭೂತ ಹಂತಗಳು ಒಂದೇ ಆಗಿರುತ್ತವೆ.

**ಚಿತ್ರ 2 ಕ್ಲೇಮ್ ಪ್ರಕ್ರಿಯೆಯು ವ್ಯಾಪಕವಾಗಿ ಈ ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ (ಅದೇ ಕ್ರಮದಲ್ಲಿ ಇಲ್ಲದಿರಬಹುದು)**




**a) ಸೂಚನೆ**

ಕ್ಲೇಮ್ ನ ಸೂಚನೆಯು ಗ್ರಾಹಕರು ಮತ್ತು ಕ್ಲೇಮ್ ಗಳ ತಂಡದ ನಡುವಿನ ಸಂಪರ್ಕದ ಮೊದಲ ನಿದರ್ಶನವಾಗಿದೆ. ಗ್ರಾಹಕರು ತಾನು ಆಸ್ಪತ್ರೆಗೆ ದಾಖಲಾಗಲು ಯೋಜಿಸುತ್ತಿರುವುದಾಗಿ ಕಂಪನಿಗೆ ತಿಳಿಸಬಹುದು ಅಥವಾ ಆಸ್ಪತ್ರೆಗೆ ದಾಖಲಾದ ನಂತರ, ವಿಶೇಷವಾಗಿ ಆಸ್ಪತ್ರೆಗೆ ತುರ್ತು ದಾಖಲಾದ ಸಂದರ್ಭದಲ್ಲಿ ಮಾಹಿತಿ ನೀಡಲಾಗುವುದು.

ಇತ್ತೀಚಿನವರೆಗೂ, ಕ್ಲೇಮ್ ಘಟನೆಯ ಸೂಚನೆಯು ಒಂದು  ಔಪಚಾರಿಕ ಕ್ರಿಯೆಯಾಗಿತ್ತು. ಆದಾಗ್ಯೂ, ಇತ್ತೀಚೆಗೆ ವಿಮಾಗಾರರು ಪ್ರಾಯೋಗಿಕವಾಗಿ ಸಾಧ್ಯವಾದಷ್ಟು ಬೇಗನೇ ಕ್ಲೇಮ್ ನ ಸೂಚನೆಯನ್ನು

ನೀಡುವುದನ್ನು ಒತ್ತಾಯಿಸಲು ಪ್ರಾರಂಭಿಸಿದ್ದಾರೆ. ಸಾಮಾನ್ಯವಾಗಿ ಯೋಜಿತ ದಾಖಲಾತಿ ಸಂದರ್ಭದಲ್ಲಿ ಆಸ್ಪತ್ರೆಗೆ ಸೇರಿಸುವ ಮೊದಲು ಮತ್ತು ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ದಾಖಲಾದ 24 ಗಂಟೆಗಳ ಒಳಗೆ ಇದು ಅಗತ್ಯವಾಗಿರುತ್ತದೆ. ಈಗ ಮೊಬೈಲ್ ಅಪ್ಲಿಕೇಶನ್ ಗಳು/ವಿಮಾಗಾರರು/ಟಿಪಿಎಗಳು ನಡೆಸುವ ಕಾಲ್ ಸೆಂಟರ್ ಗಳು 24 ಗಂಟೆಗಳ ಕಾಲ ತೆರೆದಿರುವ ಜೊತೆಗೆ ಇಂಟರ್ ನೆಟ್ ಮತ್ತು ಇ-ಮೇಲ್ ಮೂಲಕ ಸೂಚನೆಯನ್ನು ನೀಡುವುದು ಸಾಧ್ಯವಿದೆ.

**b) ನೋಂದಣಿ**

ಕಂಪನಿಯು ನೇರವಾಗಿ ಅಥವಾ ಟಿಪಿಎಗಳ ಮೂಲಕ ಸೂಚನೆಯನ್ನು ಸ್ವೀಕರಿಸಿದ ನಂತರ, ಅದರ ವಿವರಗಳನ್ನು ನಿಖರತೆಗಾಗಿ ಹೊಂದಾಣಿಕೆ ಮಾಡಲಾಗುತ್ತದೆ ಮತ್ತು ಉಲ್ಲೇಖ ಸಂಖ್ಯೆ ಅಥವಾ ಕ್ಲೇಮ್ ನಿಯಂತ್ರಣ ಸಂಖ್ಯೆಯನ್ನು ರಚಿಸಲಾಗುತ್ತದೆ ಮತ್ತು ಕ್ಲೇಮ್ ದಾರರಿಗೆ ತಿಳಿಸಲಾಗುತ್ತದೆ. ನಂತರ ದಾಖಲೆಗಳನ್ನು ಪ್ರಾಥಮಿಕ ವ್ಯಾಪ್ತಿಗಾಗಿ ಪರಿಶೀಲಿಸಲಾಗುತ್ತದೆ ಮತ್ತು ನಗದು-ರಹಿತ ಯೋಜನೆಯಡಿ (ಮುಂದಿನ ವಿಭಾಗದಲ್ಲಿ ವಿವರಿಸಲಾಗಿದೆ) ಯೋಜಿತ ಶಸ್ತ್ರಚಿಕಿತ್ಸೆಯ ಸೂಚನೆಯಿದ್ದಲ್ಲಿ ಪೂರ್ವ-ಅಧಿಕೃತ ಸಂಭವನೀಯ ವೆಚ್ಚವನ್ನು ಆಸ್ಪತ್ರೆಗೆ ತಿಳಿಸಲಾಗುತ್ತದೆ.

ಮರುಪಾವತಿಯ ಆಧಾರದ ಮೇಲೆ ಅಂತಿಮ ಪರಿಹಾರಕ್ಕಾಗಿ ಬರುವ ಕ್ಲೇಮ್ ಗಳನ್ನು ಸ್ವೀಕಾರಸಾಧ್ಯತೆ, ವಿಮಾ ಮೊತ್ತ, ಕಡಿತಗಳು, ಉಪ-ಮಿತಿಗಳು ಇತ್ಯಾದಿಗಳ ಬಗ್ಗೆ ವಿವರವಾಗಿ ಪರಿಶೀಲಿಸಲಾಗುತ್ತದೆ. ದಾಖಲೆಗಳಲ್ಲಿ ಕೊರತೆಯಿರುವ ಸಂದರ್ಭದಲ್ಲಿ ಅದನ್ನು ತುಂಡು ತುಂಡಾಗಿ ತಿಳಿಸದೇ ಒಟ್ಟಿಗೆ ತಿಳಿಸಬೇಕು. ಕ್ಲೇಮ್ ಪ್ರಕ್ರಿಯೆಯು ಒಪ್ಪಂದದ ನಿಯಮಗಳನ್ನು ಪೂರೈಸುವುದನ್ನು ಖಚಿತಪಡಿಸಿಕೊಳ್ಳುವುದು ಮಾತ್ರವಲ್ಲದೆ, ಆಸ್ಪತ್ರೆಗಳು ಅಧಿಕ ಶುಲ್ಕ ವಿಧಿಸುವುದು, ಎರಡು ಪಟ್ಟು ಶುಲ್ಕ ವಿಧಿಸುವುದು ಇತ್ಯಾದಿಗಳಲ್ಲಿ ತೊಡಗಿಕೊಳ್ಳುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವುದನ್ನು ಒಳಗೊಂಡಿರುತ್ತದೆ ಎಂದು ತಿಳಿದುಕೊಳ್ಳುವುದು ಯೋಗ್ಯವಾಗಿದೆ.

**ಉದಾಹರಣೆ**

ಆಸ್ಪತ್ರೆಗೆ ದಾಖಲಾಗುವುದು ಸಾಮಾನ್ಯವಾಗಿ ಅಲೋಪತಿ ಚಿಕಿತ್ಸೆಯ ವಿಧಾನದೊಂದಿಗೆ ಸಂಬಂಧಿಸಿದೆ. ಆದಾಗ್ಯೂ, ರೋಗಿಯು ಈ ಕೆಳಗೆ ನೀಡಲಾದ ಇತರ ಚಿಕಿತ್ಸೆಯ ವಿಧಾನಗಳಿಗೆ ಒಳಗಾಗಬಹುದು:

- ✓ ಯುನಾನಿ
- ✓ ಸಿದ್ಧ
- ✓ ಹೋಮಿಯೋಪತಿ
- ✓ ಆಯುರ್ವೇದ
- ✓ ನಿಸರ್ಗೋಪಚಾರ(ನ್ಯಾಚುರೋಪತಿ) ಇತ್ಯಾದಿ.

ಹೆಚ್ಚಿನ ಪಾಲಿಸಿಗಳು ಈಗ ಈ ಚಿಕಿತ್ಸೆಯನ್ನು ಒಳಗೊಂಡಿದ್ದರೂ ಉಪ-ಮಿತಿಗಳಿರಬಹುದು.

**ಟೆಲಿಮೆಡಿಸಿನ್:** ವೈದ್ಯಕೀಯ ವಿಮಾ ಪಾಲಿಸಿಗಳ ನಿಯಮಗಳು ಮತ್ತು ಷರತ್ತುಗಳಲ್ಲಿ ನಿಯಮಿತ ವೈದ್ಯಕೀಯ ಸಮಾಲೋಚನೆಯನ್ನು ಅನುಮತಿಸುವಲ್ಲಿ ಟೆಲಿಮೆಡಿಸಿನ್ ಅನ್ನು ಸಹ ಅನುಮತಿಸಲು ಐಆರ್ ಡಿಎಐ ವಿಮಾಗಾರರನ್ನು ಕೇಳಿದೆ.

ತಮ್ಮ ಮನೆಗಳಿಂದ ಹೊರಗೆ ಹೋಗುವುದನ್ನು ತಪ್ಪಿಸಲು ಅಥವಾ ಕರೋನವೈರಸ್ ಸೋಂಕಿನಿಂದಾಗಿ ಅವರು ಸ್ವತಃ ಕ್ವಾರಂಟೈನ್ ನಲ್ಲಿದ್ದರೆ ಆನ್ ಲೈನ್ ಅಥವಾ ಟೆಲಿಫೋನ ಮೂಲಕ ವೈದ್ಯರನ್ನು ಸಂಪರ್ಕಿಸಲು ಆದ್ಯತೆ ನೀಡುವ ಪಾಲಿಸಿದಾರರಿಗೆ ಇದು ಸಹಾಯ ಮಾಡುತ್ತದೆ.

**ಪಾವತಿಸಬೇಕಾದ ಅಂತಿಮ ಕ್ಲೇಮ್ ಮೊತ್ತವನ್ನು ನಿರ್ಧರಿಸುವುದು:** ಪಾವತಿಸಬೇಕಾದ ಕ್ಲೇಮ್ ಮೊತ್ತವನ್ನು ನಿರ್ಧರಿಸುವ ಅಂಶಗಳು ಈ ಕೆಳಗಿನಂತಿವೆ:

a) ಸದಸ್ಯರಿಗೆ ಪಾಲಿಸಿಯಡಿಯಲ್ಲಿ ಲಭ್ಯವಿರುವ ವಿಮಾ ಮೊತ್ತ

b) ಈಗಾಗಲೇ ಮಾಡಿದ ಯಾವುದೇ ಕ್ಲೇಮ್ ಅನ್ನು ಗಣನೆಗೆ ತೆಗೆದುಕೊಂಡ ನಂತರ ಸದಸ್ಯರಿಗೆ ಪಾಲಿಸಿಯಡಿಯಲ್ಲಿ ಲಭ್ಯವಿರುವ ವಿಮಾ ಮೊತ್ತ:

c) ಉಪಮಿತಿಗಳು

d) ಅನಾರೋಗ್ಯಕ್ಕೆ ನಿರ್ದಿಷ್ಟವಾದ ಯಾವುದೇ ಮಿತಿಗಳನ್ನು ಪರಿಶೀಲಿಸಿ

e) ಸಂಚಿತ ಬೋನಸ್ ಗೆ ಅರ್ಹತೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಿ

f) ಮಿತಿಯೊಂದಿಗೆ ಕವರ್ ಮಾಡಲಾದ ಇತರ ವೆಚ್ಚಗಳು:

ಅಂತಿಮವಾಗಿ ಪಾವತಿಸಲಾಗುವ ಮೊತ್ತವು ಒಳಗೊಂಡಿರುವ ಅನಾರೋಗ್ಯ / ಗಾಯವನ್ನು ಪರಿಗಣನೆಗೆ ತೆಗೆದುಕೊಂಡು ಮತ್ತು ಭೌಗೋಳಿಕ ಪ್ರದೇಶದಲ್ಲಿ ಒಂದೇ ರೀತಿಯ ಅಥವಾ ಒಂದೇ ರೀತಿಯ ನಿರ್ದಿಷ್ಟ ಪ್ರಮಾಣಿತ ಸೇವೆಗಳಿಗೆ ಅಥವಾ ಪೂರೈಕೆಗೆ ಚಾಲ್ತಿಯಲ್ಲಿರುವ ಶುಲ್ಕಗಳಿಗನುಗುಣವಾದ ಸಮಂಜಸವಾದ ಮತ್ತು ಸಾಂಪ್ರದಾಯಿಕ ಶುಲ್ಕಗಳು ಅಂದರೆ ಸೇವೆಗಳು ಅಥವಾ ಸರಬರಾಜುಗಳ ಶುಲ್ಕಗಳಾಗಿರುತ್ತವೆ.

ಈ ಹಿಂದೆ ಪ್ರತಿ ಟಿಪಿಎ/ವಿಮಾಗಾರರು ಪಾವತಿಸಲಾಗದ ವಿಷಯಗಳ ತನ್ನದೇ ಆದ ಪಟ್ಟಿಯನ್ನು ಹೊಂದಿದ್ದರು, ಈಗ ಐಆರ್ ಡಿಎಐ ಆರೋಗ್ಯ ವಿಮಾ ಪ್ರಮಾಣೀಕರಣ ಮಾರ್ಗಸೂಚಿಗಳಡಿಯಲ್ಲಿ ಅದನ್ನು ಪ್ರಮಾಣೀಕರಿಸಲಾಗಿದೆ.

**c) ಕ್ಲೇಮ್ ಪಾವತಿ**

ಪಾವತಿಸಬೇಕಾದ ಕ್ಲೇಮ್ ಮೊತ್ತವನ್ನು ಕಂಡುಹಿಡಿದ ನಂತರ, ಗ್ರಾಹಕರು ಅಥವಾ ಆಸ್ಪತ್ರೆಗೆ ಸಂದರ್ಭಾನುಸಾರ ಪಾವತಿ ಮಾಡಲಾಗುತ್ತದೆ. ಚೆಕ್ ಮೂಲಕ ಅಥವಾ ಕ್ಲೇಮ್ ಹಣವನ್ನು ಗ್ರಾಹಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಯನ್ನು ಮಾಡಬಹುದು.

**d) ಕ್ಲೇಮ್ ಗಳ ನಿರಾಕರಣೆ**

ಸಲ್ಲಿಸಿದ ಕ್ಲೇಮ್ ಗಳಲ್ಲಿ **10%** ರಿಂದ **15%** ರಷ್ಟು ಪಾಲಿಸಿಗಳು ನಿಯಮಗಳಡಿಯಲ್ಲಿ ಬರುವುದಿಲ್ಲ ಎಂದು ಆರೋಗ್ಯ ಕ್ಲೇಮ್ ಗಳಲ್ಲಿಯ ಅನುಭವವು ಹೇಳುತ್ತದೆ. ಇದು ವಿವಿಧ ಕಾರಣಗಳಿಂದಾಗಿರಬಹುದು ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ:

**i.** ದಾಖಲಾತಿಯ ದಿನಾಂಕವು ವಿಮಾ ಅವಧಿಯೊಳಗೆ ಇರುವುದಿಲ್ಲ.

**ii.** ಕ್ಲೇಮ್ ಸಲ್ಲಿಸಿದ ಸದಸ್ಯರು ಕವರ್ ಗೆ ಒಳಪಟ್ಟಿರುವುದಿಲ್ಲ.

**iii.** ಮೊದಲೇ ಅಸ್ತಿತ್ವದಲ್ಲಿರುವ ಅನಾರೋಗ್ಯದ ಕಾರಣದಿಂದಾಗಿ (ಅಂತಹ ಸ್ಥಿತಿಯು ಪಾಲಿಸಿಯಲ್ಲಿ ಹೊರತಾಗಿರುತ್ತದೆ).

**iv.** ಮಾನ್ಯ ಕಾರಣವಿಲ್ಲದೆ ಸಲ್ಲಿಕೆಯಲ್ಲಿ ಅನಗತ್ಯವಾದ ವಿಳಂಬ.

**v.** ದಾಖಲಾತಿಯು ಸಕ್ರಿಯ ಚಿಕಿತ್ಸೆಗಾಗಿ ಅಲ್ಲದೇ; ಪ್ರವೇಶವು ಕೇವಲ ಆರೋಗ್ಯ ತಪಾಸಣೆ ಉದ್ದೇಶಕ್ಕಾಗಿ ಮಾತ್ರ ಆಗಿದೆ.

**vi.** ಚಿಕಿತ್ಸೆ ಪಡೆದ ಅನಾರೋಗ್ಯವನ್ನು ಪಾಲಿಸಿಯ ಅಡಿಯಲ್ಲಿ ಹೊರತುಪಡಿಸಲಾಗಿದೆ.

**vii.** ಮದ್ಯ ಅಥವಾ ಮಾದಕವಸ್ತುಗಳ ದುರುಪಯೋಗಗಳು ಅನಾರೋಗ್ಯದ ಕಾರಣವಾಗಿದೆ

**viii.** ಆಸ್ಪತ್ರೆ ದಾಖಲಾತಿ **24** ಗಂಟೆಗಳಿಗಿಂತ ಕಡಿಮೆಯಿರುತ್ತದೆ.

ಕ್ಲೇಮ್ ನ ಅಸ್ವೀಕೃತಿ ಅಥವಾ ನಿರಾಕರಣೆಯನ್ನು (ಯಾವುದೇ ಕಾರಣಕ್ಕಾಗಿ) ವಿಮಾ ಕಂಪನಿಯು ಗ್ರಾಹಕರಿಗೆ ಲಿಖಿತವಾಗಿ ತಿಳಿಸಬೇಕು. ಸಾಮಾನ್ಯವಾಗಿ, ಅಂತಹ ನಿರಾಕರಣೆಯ ಪತ್ರವು ನಿರಾಕರಣೆಯ ಕಾರಣವನ್ನು ಕ್ಲೇಮ್ ಅನ್ನು ನಿರಾಕರಿಸಿದ ಪಾಲಿಸಿ ಅವಧಿ/ಷರತ್ತನ್ನು ವಿವರಿಸುತ್ತ ಸ್ಪಷ್ಟವಾಗಿ ಹೇಳುತ್ತದೆ.

ಕ್ಲೇಮ್ ನಿರಾಕರಣೆಯ ಸಂದರ್ಭದಲ್ಲಿ ವಿಮಾಗಾರರಿಗೆ ನಿರೂಪಣೆ ಮಾಡುವದರ ಹೊರತಾಗಿ, ಗ್ರಾಹಕರು ಈ ಕೆಳಗಿನವರನ್ನು ಸಂಪರ್ಕಿಸುವ ಆಯ್ಕೆಯನ್ನು ಹೊಂದಿರುತ್ತಾರೆ:

- ✓ ವಿಮಾ ಓಂಬುಡ್ಸ್ ಮನ್ ಅಥವಾ
- ✓ ಗ್ರಾಹಕ ಆಯೋಗಗಳು ಅಥವಾ
- ✓ ಐಆರ್ ಡಿಎಐ ಅಥವಾ
- ✓ ನ್ಯಾಯಾಲಯಗಳು.

**e) ಅನುಮಾನಾಸ್ಪದ ಕ್ಲೇಮ್ ಗಳಿಗಾಗಿ ಕಂಪನಿಗಳು/ಟಿಪಿಎಗಳಿಂದ ಹೆಚ್ಚು ವಿವರವಾದ ತನಿಖೆಯ ಅಗತ್ಯವಿದೆ**

ವಿಮಾ ಕಂಪನಿಗೆ ತಪ್ಪು ವ್ಯವಹಾರದ ಅನುಮಾನ ಬಂದರೆ ಅದು ಕ್ಲೇಮ್ ಗಳನ್ನು ತನಿಖೆ ಮಾಡಬಹುದು. ಆರೋಗ್ಯ ವಿಮೆಯಲ್ಲಿ ಮಾಡಿದ ವಂಚನೆಗಳ ಕೆಲವು ಉದಾಹರಣೆಗಳು ಈ ಕೆಳಗಿನಂತಿವೆ:

i. ಸೋಗು ಹಾಕುವಿಕೆ, ವಿಮೆ ಮಾಡಿದ ವ್ಯಕ್ತಿ ಚಿಕಿತ್ಸೆ ಪಡೆದ ವ್ಯಕ್ತಿಗಿಂತ ಭಿನ್ನವಾಗಿರುವುದು.

ii. ಆಸ್ಪತ್ರೆಯಲ್ಲಿ ದಾಖಲಾತಿ ಮಾಡದೇ ಕ್ಲೇಮ್ ಸಲ್ಲಿಸಲು ದಾಖಲೆಗಳನ್ನು ತಯಾರಿಸುವುದು.

iii. ಆಸ್ಪತ್ರೆಯ ಸಹಾಯದಿಂದ ಅಥವಾ ಮೋಸದಿಂದ ರಚಿಸಲಾದ ಬಾಹ್ಯ ಬಿಲ್ ಗಳ ಸೇರ್ಪಡೆಯಿಂದ ವೆಚ್ಚಗಳನ್ನು ಹಿಗ್ಗಿಸುವುದು.

iv. ಕೆಲವು ಪರಿಸ್ಥಿತಿಗಳಲ್ಲಿ ಅಧಿಕವಾಗಿರುವ ರೋಗನಿರ್ಣಯದ ವೆಚ್ಚವನ್ನು ಸರಿದೂಗಿಸಲು ಹೊರರೋಗಿ ಚಿಕಿತ್ಸೆಯನ್ನು ಒಳರೋಗಿ/ಆಸ್ಪತ್ರೆ ದಾಖಲಾತಿಯನ್ನಾಗಿ ಪರಿವರ್ತಿಸಲಾಗುವುದು.

ತನಿಖೆ ಮಾಡಬೇಕಾದ ಕ್ಲೇಮ್ ಗಳಿಗೆ ಸಂಬಂಧಿಸಿದಂತೆ, ತನಿಖೆಗಳನ್ನು ಯಾವುದೇ ಸಂದರ್ಭದಲ್ಲಿ ಕ್ಲೇಮ್ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ **90** ದಿನಗಳ ಒಳಗೆ ತ್ವರಿತವಾಗಿ ಪ್ರಾರಂಭಿಸಬೇಕು ಮತ್ತು ಪೂರ್ಣಗೊಳಿಸಬೇಕು. ತನಿಖೆಯನ್ನು ಪೂರ್ಣಗೊಳಿಸಿದ **30** ದಿನಗಳಲ್ಲಿ ಕ್ಲೇಮ್ ಅನ್ನು ಇತ್ಯರ್ಥಗೊಳಿಸಬೇಕು. (ದಯವಿಟ್ಟು ಐಆರ್ ಡಿಎಐ (ಪಾಲಿಸಿದಾರರ ರಕ್ಷಣೆ), **2017** ನಿಯಮಾವಳಿಗಳನ್ನು ನೋಡಿ ಮತ್ತು ಅದಕ್ಕೆ ಅನುಗುಣವಾಗಿ ನವೀಕರಿಸಲಾಗಿದೆ)

**f) ಟಿಪಿಎ ಮೂಲಕ ನಗದುರಹಿತ ಇತ್ಯರ್ಥ ಪ್ರಕ್ರಿಯೆ**

ನಗದು ರಹಿತ ಸೌಲಭ್ಯ ಹೇಗೆ ಕೆಲಸ ಮಾಡುತ್ತದೆ**?** ಇದರ ಮಧ್ಯದಲ್ಲಿ ಟಿಪಿಎ ವಿಮಾಗಾರರು ಆಸ್ಪತ್ರೆಯೊಂದಿಗೆ ಮಾಡುವ ಒಪ್ಪಂದವಾಗಿದೆ. ಇತರ ವೈದ್ಯಕೀಯ ಸೇವಾ ಪೂರೈಕೆದಾರರೊಂದಿಗೆ ಸಹ ಒಪ್ಪಂದಗಳಿರಲು ಸಾಧ್ಯವಿದೆ. ನಗದು ರಹಿತ ಸೌಲಭ್ಯವನ್ನು ಒದಗಿಸಲು ಬಳಸುವ ಪ್ರಕ್ರಿಯೆಯನ್ನು ಈ ವಿಭಾಗದಲ್ಲಿ ಚರ್ಚಿಸಲಾಗಿದೆ:

ಕೋಷ್ಟಕ 3.1

| | |
|---|---|
| ಹಂತ **1** | • ಆರೋಗ್ಯ ವಿಮೆಯಡಿಯಲ್ಲಿ ಕವರ್ ಮಾಡಿರುವ ಗ್ರಾಹಕರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಅಥವಾ ಗಾಯವನ್ನು ಅನುಭವಿಸುತ್ತಾರೆ ಮತ್ತು ಆದ್ದರಿಂದ ಆಸ್ಪತ್ರೆಗೆ ಸೇರಿಸಲು ಸಲಹೆ ನೀಡಲಾಗುತ್ತದೆ. ಅವನು/ಅವಳು (ಅಥವಾ ಅವನ/ಅವಳ ಪರವಾಗಿ ಯಾರಾದರೂ) ವಿಮಾ ವಿವರಗಳೊಂದಿಗೆ ಆಸ್ಪತ್ರೆಯ ವಿಮಾ ಡೆಸ್ಕ್ ಅನ್ನು ಸಂಪರ್ಕಿಸುತ್ತಾರೆ:<br>i. ಟಿಪಿಎ ಹೆಸರು, |

| | |
|---|---|
| | ii. ಗ್ರಾಹಕರ ಸದಸ್ಯತ್ವದ ಸಂಖ್ಯೆ,<br>iii. ವಿಮಾಗಾರರ ಹೆಸರು, ಇತ್ಯಾದಿ. |
| ಹಂತ 2 | ಆಸ್ಪತ್ರೆಯು ಈ ಕೆಳಕಂಡ ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸುತ್ತದೆ<br>i) ರೋಗ ಪತ್ತೆ ಹಚ್ಚುವ ನಿರ್ಣಯ<br>ii) ಚಿಕಿತ್ಸೆಯ ವಿಧಾನ<br>iii) ಚಿಕಿತ್ಸೆ ಮಾಡುವ ವೈದ್ಯರ ಹೆಸರು<br>iv)ಪ್ರಸ್ತಾವಿತ ಒಳರೋಗಿಯಾಗಿ ಚಿಕಿತ್ಸೆ ಪಡೆಯುವ ಅವಧಿ<br>v) ಅಂದಾಜು ವೆಚ್ಚ<br>• ಇದನ್ನು ನಗದು ರಹಿತ ದೃಢೀಕರಣ ಫಾರ್ಮ್ ಎಂದು ಕರೆಯಲಾಗುವ ಸ್ವರೂಪದ ನಮೂನೆಯಲ್ಲಿ ಪ್ರಸ್ತುತಪಡಿಸಲಾಗುತ್ತದೆ. |
| ಹಂತ 3 | • ಟಿಪಿಎ ನಗದುರಹಿತ ದೃಢೀಕರಣ ನಮೂನೆಯಲ್ಲಿ ಒದಗಿಸಲಾದ ಮಾಹಿತಿಯನ್ನು ಅಧ್ಯಯನ ಮಾಡುತ್ತದೆ ಮತ್ತು ನಗದುರಹಿತ ಅಧಿಕಾರವನ್ನು ಒದಗಿಸಬಹುದೇ ಮತ್ತು ಹಾಗಿದ್ದಲ್ಲಿ, ಅದನ್ನು ಎಷ್ಟು ಮೊತ್ತಕ್ಕೆ ಅಧಿಕೃತಗೊಳಿಸಬೇಕೆಂಬುದನ್ನು ನಿರ್ಧರಿಸುತ್ತದೆ ಮತ್ತು ಅದನ್ನು ತಡಮಾಡದೆ ಆಸ್ಪತ್ರೆಗೆ ತಿಳಿಸಲಾಗುತ್ತದೆ. |
| ಹಂತ 4 | • ರೋಗಿಯ ಖಾತೆಯಲ್ಲಿ ಟಿಪಿಎಯಿಂದ ಅಧಿಕೃತಗೊಳಿಸಿದ ಮೊತ್ತವನ್ನು ಕ್ರೆಡಿಟ್ ಆಗಿ ಇರಿಸಿಕೊಂಡು ರೋಗಿಗೆ ಆಸ್ಪತ್ರೆಯಿಂದ ಚಿಕಿತ್ಸೆ ನೀಡಲಾಗುತ್ತದೆ. ಚಿಕಿತ್ಸೆಯಲ್ಲದ ವೆಚ್ಚಗಳು ಮತ್ತು ಪಾಲಿಸಿಯಡಿಯಲ್ಲಿ ಅಗತ್ಯವಿರುವ ಯಾವುದೇ ಸಹ-ಪಾವತಿಯನ್ನು ಸರಿದೂಗಿಸಲು ಠೇವಣಿಯನ್ನು ಪಾವತಿ ಮಾಡಲು ಸದಸ್ಯರನ್ನು ಕೇಳಬಹುದು. |
| ಹಂತ 5 | • ರೋಗಿ ಡಿಸ್ಚಾರ್ಜ್ ಮಾಡಲು ಸಿದ್ಧರಾದಾಗ, ಆಸ್ಪತ್ರೆಯು ನಿಜವಾದ ಚಿಕಿತ್ಸಾ ಶುಲ್ಕಗಳ ವಿರುದ್ಧ ಟಿಪಿಎ ಯಿಂದ ಅನುಮೋದಿಸಲ್ಪಟ್ಟ ರೋಗಿಯ ಖಾತೆಯಲ್ಲಿನ ವಿಮೆಯಿಂದ ಕವರ್ ಹೊಂದಿರುವ ಕ್ರೆಡಿಟ್ ಮೊತ್ತವನ್ನು ಪರಿಶೀಲಿಸುತ್ತದೆ.<br>• ಕ್ರೆಡಿಟ್ ಕಡಿಮೆಯಿದ್ದರೆ, ನಗದು ರಹಿತ ಚಿಕಿತ್ಸೆಗಾಗಿ ಹೆಚ್ಚುವರಿ ಕ್ರೆಡಿಟ್ ಅನುಮೋದನೆಗಾಗಿ ಆಸ್ಪತ್ರೆಯು ವಿನಂತಿಸುತ್ತದೆ.<br>• ಟಿಪಿಎ ಅದನ್ನೇ ವಿಶ್ಲೇಷಿಸುತ್ತದೆ ಮತ್ತು ಹೆಚ್ಚುವರಿ ಮೊತ್ತವನ್ನು ಅನುಮೋದಿಸುತ್ತದೆ. |
| ಹಂತ 6 | • ಸ್ವೀಕಾರಾರ್ಹವಲ್ಲದ ಶುಲ್ಕಗಳನ್ನು ರೋಗಿಯು ಪಾವತಿಸುತ್ತಾರೆ ಮತ್ತು ಡಿಸ್ಚಾರ್ಜ್ (ಬಿಡುಗಡೆ)ಪಡೆಯುತ್ತಾರೆ. ದಾಖಲೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ಲೇಮ್ ಫಾರ್ಮ್ ಮತ್ತು ಬಿಲ್ ಗೆ ಸಹಿ ಮಾಡಲು ಅವರನ್ನು ಕೇಳಲಾಗುತ್ತದೆ. |
| ಹಂತ 7 | • ಎಲ್ಲ ದಾಖಲೆಗಳನ್ನು ಆಸ್ಪತ್ರೆಯು ಕ್ರೋಢೀಕರಿಸುತ್ತದೆ ಮತ್ತು ಬಿಲ್ ನ ಪ್ರಕ್ರಿಯೆಗಾಗಿ |

| | |
|---|---|
| | ದಾಖಲೆಗಳನ್ನು ಟಿಪಿಎ ಗೆ ಪ್ರಸ್ತುತಪಡಿಸುತ್ತದೆ |
| ಹಂತ **8** | • ಕ್ಲೇಮ್ ಅನ್ನು ಪ್ರಕ್ರಿಯೆಗೊಳಿಸಿ ಮತ್ತು ವಿವರಗಳನ್ನು ಪರಿಶೀಲಿಸಿದ ನಂತರ ಟಿಪಿಎ ಆಸ್ಪತ್ರೆಗೆ ಪಾವತಿಯನ್ನು ಮಾಡಲು ಶಿಫಾರಸು ಮಾಡುತ್ತಾರೆ. |

**g) ಗ್ರಾಹಕರು ಅವನ/ಅವಳ ವಿಮಾ ವಿವರಗಳನ್ನು ತಮ್ಮ ಬಳಿ ಹೊಂದಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳಬೇಕು.**

ಅದು ಟಿಪಿಎ ಕಾರ್ಡ್, ಪಾಲಿಸಿ ನಕಲು, ಕವರ್ ನಿಯಮಗಳು ಮತ್ತು ಷರತ್ತುಗಳು ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಇವುಗಳು ಲಭ್ಯವಿಲ್ಲದಿದ್ದಾಗ, ಅವರು ಟಿಪಿಎಯನ್ನು ಸಂಪರ್ಕಿಸಬಹುದು (24 ಗಂಟೆಗಳ ಸಹಾಯವಾಣಿಯ ಮೂಲಕ) ಮತ್ತು ವಿವರಗಳನ್ನು ಪಡೆಯಬಹುದು.

**i.** ಗ್ರಾಹಕರು ಅವನ/ಅವಳ ಸಲಹಾ ವೈದ್ಯರು ಸೂಚಿಸಿದ ಆಸ್ಪತ್ರೆಯು ಟಿಪಿಎ ನೆಟ್ ವರ್ಕ್ ನಲ್ಲಿದೆಯೇ ಎಂಬುದನ್ನು ಪರಿಶೀಲಿಸಬೇಕು. ಇಲ್ಲದಿದ್ದರೆ, ಅಂತಹ ಚಿಕಿತ್ಸೆಗಾಗಿ ನಗದುರಹಿತ ಸೌಲಭ್ಯ ಲಭ್ಯವಿರುವ ಆಯ್ಕೆಗಳನ್ನು ಅವರು ಟಿಪಿಎಯೊಂದಿಗೆ ಪರಿಶೀಲಿಸಬೇಕಾಗುತ್ತದೆ.

**ii.** ಪೂರ್ವಾಧಿಕೃತ ನಮೂನೆಯಲ್ಲಿ ಸರಿಯಾದ ವಿವರಗಳನ್ನು ನಮೂದಿಸಲಾಗಿದೆಯೇ ಎಂದು ಅವನು/ಅವಳು ಖಚಿತಪಡಿಸಿಕೊಳ್ಳಬೇಕು. 2013 ರಲ್ಲಿ ಜಾರಿಪಡಿಸಲಾದ ಆರೋಗ್ಯ ವಿಮೆಯಲ್ಲಿಯ ಪ್ರಮಾಣೀಕರಣದ ಮಾರ್ಗಸೂಚಿಗಳ ಪ್ರಕಾರ ಈ ನಮೂನೆಯನ್ನು ಐಆರ್ ಡಿಎಐ ಪ್ರಮಾಣೀಕರಿಸಿದೆ. ಪ್ರಕರಣವು ಸ್ಪಷ್ಟವಾಗಿಲ್ಲದಿದ್ದರೆ, ನಗದು ರಹಿತ ಸೌಲಭ್ಯವನ್ನು ಟಿಪಿಎಗಳು ನಿರಾಕರಿಸಬಹುದು ಅಥವಾ ಅದರ ಬಗ್ಗೆ ಪ್ರಶ್ನಿಸಬಹುದು.

**iii.** ಕೋಣೆಯ ಬಾಡಿಗೆ ಅಥವಾ ಕಣ್ಣಿನ ಪೊರೆಯಂತಹ ನಿರ್ದಿಷ್ಟ ಚಿಕಿತ್ಸೆಗಳ ಮಿತಿಗಳಂತಹ ಮಿತಿಗಳಿಗನುಗುಣವಾಗಿ ಆಸ್ಪತ್ರೆಯ ಶುಲ್ಕಗಳು ಇರುವುದನ್ನು ಅವನು/ಅವಳು ಖಚಿತಪಡಿಸಿಕೊಳ್ಳಬೇಕು.

**iv.** ಗ್ರಾಹಕರು ಡಿಸ್ಚಾರ್ಜ್ ಬಗ್ಗೆ ಮುಂಚಿತವಾಗಿ ಟಿಪಿಎಯವರಿಗೆ ತಿಳಿಸಬೇಕು ಮತ್ತು ಡಿಸ್ಚಾರ್ಜ್ ಮಾಡುವ ಮೊದಲು ಅಗತ್ಯವಿರುವ ಯಾವುದೇ ಹೆಚ್ಚುವರಿ ಅನುಮೋದನೆಯನ್ನು ಟಿಪಿಎಯವರಿಗೆ ಕಳುಹಿಸಲು ಆಸ್ಪತ್ರೆಗೆ ವಿನಂತಿಸಬೇಕು. ರೋಗಿಯು ಆಸ್ಪತ್ರೆಯಲ್ಲಿ ಅನಗತ್ಯವಾಗಿ ಕಾಯಬೇಕಾಗುವುದಿಲ್ಲ ಎಂಬುದನ್ನು ಇದು ಖಚಿತಪಡಿಸುತ್ತದೆ.

ಆಸ್ಪತ್ರೆಯಲ್ಲಿ ನಗದು ರಹಿತ ಚಿಕಿತ್ಸೆಗಾಗಿ ಗ್ರಾಹಕರು ವಿನಂತಿಸಿ ಅನುಮೋದನೆಯನ್ನು ತೆಗೆದುಕೊಳ್ಳುತ್ತಾರೆ ಆದರೆ ರೋಗಿಯನ್ನು ಬೇರೆಡೆಗೆ ಸೇರಿಸಲು ನಿರ್ಧರಿಸುವ ಸಂಭವವೂ ಇರುತ್ತದೆ. ಅಂತಹ ಸಂದರ್ಭಗಳಲ್ಲಿ, ನಗದು ರಹಿತ ಅನುಮೋದನೆಯನ್ನು ಬಳಸುತ್ತಿಲ್ಲ ಎಂದು ಟಿಪಿಎಗೆ ಸಂಪರ್ಕಿಸಲು ಆಸ್ಪತ್ರೆಗೆ ಗ್ರಾಹಕರು ತಿಳಿಸಬೇಕು ಮತ್ತು ಕೇಳಬೇಕು.

ಹಾಗೆ ಮಾಡದಿದ್ದರೆ, ಅನುಮೋದಿಸಲಾದ ಮೊತ್ತವನ್ನು ಗ್ರಾಹಕರ ಪಾಲಿಸಿಯಲ್ಲಿ ನಿರ್ಬಂಧಿಸಬಹುದು ಮತ್ತು ನಂತರದ ವಿನಂತಿಗಳಿಗೆ ಅನುಮೋದನೆಯ ಸಮಯದಲ್ಲಿ ಅದನ್ನು ಪರಿಗಣಿಸಿ ಭೇದವನ್ನು ಮಾಡಬಹುದು.

## C. ಆರೋಗ್ಯ ವಿಮೆಯ ಕ್ಲೇಮ್ ಗಳಲ್ಲಿ ದಾಖಲಾತಿ

ಗ್ರಾಹಕರು ಸಲ್ಲಿಸಬೇಕಾದ ಪ್ರತಿಯೊಂದು ದಾಖಲೆಗಳ ಅವಶ್ಯಕತೆ ಮತ್ತು ಅವುಗಳು ಒಳಗೊಂಡ ವಿಷಯವನ್ನು ಈ ವಿಭಾಗವು ವಿವರಿಸುತ್ತದೆ:

### 1. ಡಿಸ್ಚಾರ್ಜ್ ಸಾರಾಂಶ

ಡಿಸ್ಚಾರ್ಜ್ ಸಾರಾಂಶವನ್ನು ಆರೋಗ್ಯ ವಿಮಾ ಕ್ಲೇಮ್ ಅನ್ನು ಪ್ರಕ್ರಿಯೆಗೊಳಿಸಲು ಅಗತ್ಯವಿರುವ ಪ್ರಮುಖ ದಾಖಲೆಯೆಂದು ಕರೆಯಬಹುದು. ಇದು ರೋಗಿಯ ಸ್ಥಿತಿ ಮತ್ತು ಚಿಕಿತ್ಸೆಯ ಪ್ರಕಾರದ ಸಂಪೂರ್ಣ ಮಾಹಿತಿಯನ್ನು ವಿವರಿಸುತ್ತದೆ ಮತ್ತು ಅನಾರೋಗ್ಯ/ಗಾಯ ಮತ್ತು ಚಿಕಿತ್ಸೆಯ ಪ್ರಕಾರವನ್ನು ಅರ್ಥಮಾಡಿಕೊಳ್ಳಲು ಕ್ಲೇಮ್ ಪ್ರಕ್ರಿಯೆಗೊಳಿಸುವ ವ್ಯಕ್ತಿಗೆ ಅಪಾರವಾಗಿ ಸಹಾಯ ಮಾಡುತ್ತದೆ. ರೋಗಿಯು ದುರದೃಷ್ಟವಶಾತ್ ಬದುಕುಳಿಯದಿದ್ದರೆ, ಡಿಸ್ಚಾರ್ಜ್ ಸಾರಾಂಶವನ್ನು ಅನೇಕ ಆಸ್ಪತ್ರೆಗಳಲ್ಲಿ **ಸಾವಿನ ಸಾರಾಂಶ(ಡೆತ್ ಸಮರಿ)** ಎಂದು ಕರೆಯಲಾಗುತ್ತದೆ. ಡಿಸ್ಚಾರ್ಜ್ ಸಾರಾಂಶವನ್ನು ಯಾವಾಗಲೂ ಮೂಲರೂಪದಲ್ಲಿ ಪಡೆಯಲಾಗುತ್ತದೆ.

### 2. ತಪಾಸಣೆಯ ವರದಿ

ತಪಾಸಣೆಯ ವರದಿಗಳು ರೋಗನಿರ್ಣಯ ಮತ್ತು ಚಿಕಿತ್ಸೆಯನ್ನು ಹೋಲಿಸಿ ನೋಡಲು ಸಹಾಯ ಮಾಡುತ್ತವೆ, ಮತ್ತು ಆ ಮೂಲಕ ಚಿಕಿತ್ಸೆಯನ್ನು ಪ್ರೇರೇಪಿಸಿದ ನಿಖರವಾದ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಮಾಹಿತಿಯನ್ನು ಮತ್ತು ಆಸ್ಪತ್ರೆ ದಾಖಲಾತಿಯ ಸಮಯದಲ್ಲಿ ಮಾಡಿದ ಆರೋಗ್ಯದ ಪ್ರಗತಿಯನ್ನು ಒದಗಿಸುತ್ತವೆ ಉದಾ. ರಕ್ತ ಪರೀಕ್ಷೆಯ ವರದಿಗಳು, ಎಕ್ಸ್-ರೇ ವರದಿಗಳು ಮತ್ತು ಬಾಯಪ್ಸಿ ವರದಿಗಳು. ನಿರ್ದಿಷ್ಟ ವಿನಂತಿಯ ಮೇರೆಗೆ ವಿಮಾಗಾರರು ಎಕ್ಸ್-ರೇ ಮತ್ತು ಇತರ ಫಿಲ್ಮ್ ಗಳನ್ನು ಗ್ರಾಹಕರಿಗೆ ಹಿಂತಿರುಗಿಸಬಹುದು.

### 3. ಏಕೀಕೃತ ಮತ್ತು ವಿವರವಾದ ಬೆಲೆಪಟ್ಟಿ(ಬಿಲ್)ಗಳು:

ವಿಮಾ ಪಾಲಿಸಿಯಡಿಯಲ್ಲಿ ಪಾವತಿಸಬೇಕಾದ ವೆಚ್ಚಗಳನ್ನು ನಿರ್ಧರಿಸುವ ದಾಖಲೆ ಇದಾಗಿದೆ. ಏಕೀಕೃತ ಬೆಲೆಪಟ್ಟಿ(ಬಿಲ್) ಒಟ್ಟಾರೆ ಚಿತ್ರವನ್ನು ಪ್ರಸ್ತುತಪಡಿಸಿದರೆ, ವಿವರವಾದ ಬೆಲೆಪಟ್ಟಿ(ಬಿಲ್)ಯು ಉಲ್ಲೇಖಿತ ಸಂಕೇತ(ಕೋಡ್)ಗಳ ವಿವರಗಳನ್ನು ಒದಗಿಸುತ್ತದೆ. ಬೆಲೆಪಟ್ಟಿ(ಬಿಲ್)ಗಳನ್ನು ಮೂಲರೂಪದಲ್ಲಿಯೇ ಪಡೆಯಬೇಕು.

## 4. ಪಾವತಿಯ ರಸೀದಿ

ಆರೋಗ್ಯ ವಿಮಾ ಕ್ಲೇಮ್ ನ ಮರುಪಾವತಿಗೆ ಆಸ್ಪತ್ರೆಯಿಂದ ಪಾವತಿಸಿದ ಬೆಲೆಪಟ್ಟಿ(ಬಿಲ್)ಯ ಒಟ್ಟು ಮೊತ್ತಕ್ಕೆ ಅನುಗುಣವಾದ ಮೊತ್ತದ ಔಪಚಾರಿಕ ರಸೀದಿಯ ಅಗತ್ಯವಿರುತ್ತದೆ.

ರಶೀದಿಗೆ ಸಂಖ್ಯೆಯಿರಬೇಕು ಮತ್ತು ಅಥವಾ ಸ್ಟ್ಯಾಂಪ್ ಮಾಡಿರಬೇಕು ಮತ್ತು ಅದನ್ನು ಮೂಲರೂಪದಲ್ಲಿ ಪ್ರಸ್ತುತಪಡಿಸಬೇಕು.

## 5. ಕ್ಲೇಮ್ ನಮೂನೆ

ಕ್ಲೇಮ್ ನಮೂನೆ(ಫಾರ್ಮ್)ಯು ಕ್ಲೇಮ್ ಅನ್ನು ಪ್ರಕ್ರಿಯೆಗೊಳಿಸಲು ಔಪಚಾರಿಕವಾದ ಮತ್ತು ಕಾನೂನುಬದ್ಧ ವಿನಂತಿಯಾಗಿದೆ ಮತ್ತು ಗ್ರಾಹಕರು ಸಹಿ ಮಾಡಲ್ಪಟ್ಟ ಮೂಲಸ್ವರೂಪದಲ್ಲಿ ಸಲ್ಲಿಸಲಾಗುತ್ತದೆ. ಕ್ಲೇಮ್ ನಮೂನೆ(ಫಾರ್ಮ್)ಯನ್ನು ಈಗ ಐಆರ್ ಡಿಎಐ ಪ್ರಮಾಣೀಕರಿಸಿದೆ.

ರೋಗ, ಚಿಕಿತ್ಸೆ ಇತ್ಯಾದಿಗಳ ಮಾಹಿತಿಯ ಹೊರತಾಗಿ, ವಿಮೆ ಮಾಡಿದ ವ್ಯಕ್ತಿಯ ಕ್ಲೇಮ್ ನಮೂನೆ(ಫಾರ್ಮ್)ಯಲ್ಲಿ ಮಾಡುವ ಘೋಷಣೆಯು ಕಾನೂನು ಅರ್ಥದಲ್ಲಿ ಅತ್ಯಂತ ಪ್ರಮುಖ ದಾಖಲೆಯಾಗಿದೆ.

## 6. ಗುರುತಿನ ಪುರಾವೆ

ನಮ್ಮ ಜೀವನದಲ್ಲಿ ವಿವಿಧ ಚಟುವಟಿಕೆಗಳಿಗಾಗಿ ಗುರುತಿನ ಪುರಾವೆಗಳ ಬಳಕೆಯು ಹೆಚ್ಚುತ್ತಿರುವಾಗ, ಸಾಮಾನ್ಯ ಗುರುತಿನ ಪುರಾವೆಯಲ್ಲಿ ಹೆಸರಿಸಲಾಗಿರುವ ವ್ಯಕ್ತಿ ಮತ್ತು ಚಿಕಿತ್ಸೆ ಪಡೆದ ವ್ಯಕ್ತಿ ಒಬ್ಬರೇ ಮತ್ತು ಒಂದೇ ಎಂಬುದನ್ನು ಪರಿಶೀಲಿಸಲು ಸಹಾಯ ಮಾಡುತ್ತದೆ. ಸಾಮಾನ್ಯವಾಗಿ ಕೋರುವ ಗುರುತಿನ ದಾಖಲೆಗಳು ಮತದಾರರ ಗುರುತಿನ ಚೀಟಿ, ಚಾಲನಾ ಪರವಾನೆ(ಡ್ರೈವಿಂಗ್ ಲೈಸೆನ್ಸ್), ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್ ಇತ್ಯಾದಿಗಳಾಗಿರಬಹುದು.

## 7. ನಿರ್ದಿಷ್ಟ ಕ್ಲೇಮ್ ಗಳಿಗೆ ಸಂಭವನೀಯ ದಾಖಲೆಗಳು

ಮೇಲೆ ಹೇಳಿರುವದನ್ನು ಹೊರತುಪಡಿಸಿ ಕೆಲವು ರೀತಿಯ ಕ್ಲೇಮ್ ಗಳಲ್ಲಿ ಹೆಚ್ಚುವರಿಯಾಗಿ ಅಗತ್ಯವಿರುವ ದಾಖಲೆಗಳಿರುತ್ತವೆ. ಅವು ಈ ಕೆಳಗಿನಂತಿವೆ:

- **a)** ಅಪಘಾತದ ಕ್ಲೇಮ್ ಗಳು, ನೋಂದಾಯಿತ ಪೊಲೀಸ್ ಠಾಣೆಗೆ ಆಸ್ಪತ್ರೆಯಿಂದ ನೀಡಲಾದ ಎಫ್ಐಆರ್ ಅಥವಾ ಮೆಡಿಕೋ-ಲೀಗಲ್ ಪ್ರಮಾಣಪತ್ರದ ಅಗತ್ಯವಿರಬಹುದು.
- **b)** ಸಂಕೀರ್ಣವಾದ ಅಥವಾ ಹೆಚ್ಚಿನ ಮೌಲ್ಯದ ಕ್ಲೇಮ್ ಗಳ ಸಂದರ್ಭದಲ್ಲಿ ಒಳಾಂಗಣ ಕೇಸ್ ಪೇಪರ್ ಗಳು.
- **c)** ಅನ್ವಯವಾಗುವಲ್ಲಿ ಡಯಾಲಿಸಿಸ್/ಕೀಮೋಥೆರಪಿ/ಫಿಸಿಯೋಥೆರಪಿ ಚಾರ್ಟ್‌ಗಳು.

d) ಆಸ್ಪತ್ರೆಯ ಅವಶ್ಯಕತೆಗಳ ವ್ಯಾಖ್ಯೆಯ ಅನುಸರಣೆಯನ್ನು ಪರಿಶೀಲಿಸಲಿಕ್ಕೆ ಆಸ್ಪತ್ರೆಯ ನೋಂದಣಿ ಪ್ರಮಾಣಪತ್ರ

| **ನಿಮ್ಮನ್ನು ಪರೀಕ್ಷಿಸಿಕೊಳ್ಳಿ - 2** |
|---|

ಒಳರೋಗಿಗೆ ಮಾಡಿದ ಎಲ್ಲ ಚಿಕಿತ್ಸೆಯನ್ನು ವಿವರಿಸುವ ಯಾವ ದಾಖಲೆಯನ್ನು ಆಸ್ಪತ್ರೆಯಲ್ಲಿ ನಿರ್ವಹಿಸಲಾಗುತ್ತದೆ**?**

**I.** ತನಿಖೆಯ ವರದಿ

**II.** ಡಿಸ್ಚಾರ್ಜ್ ಸಾರಾಂಶ

**III.** ಕೇಸ್ ಪೇಪರ್

**IV.** ಆಸ್ಪತ್ರೆಯ ನೋಂದಣಿ ಪ್ರಮಾಣಪತ್ರ

| **ನಿಮ್ಮನ್ನು ಪರೀಕ್ಷಿಸಿಕೊಳ್ಳಿ- 3** |
|---|

ಕ್ಲೇಮ್ ಗಳ ಸ್ಥಿತಿಯ ಆಧಾರದ ಮೇಲೆ ವಿಮಾಗಾರರ ಪುಸ್ತಕಗಳಲ್ಲಿ ಎಲ್ಲ ಕ್ಲೇಮ್ ಗಳಿಗೆ ಮಾಡಲಾದ ನಿಬಂಧನೆಯ ಮೊತ್ತವನ್ನು ________ ಎಂದು ಕರೆಯಲಾಗುತ್ತದೆ..

**I.** ಸಂಚಯನ

**II.** ಖಾತೆ (ಅಕೌಂಟಿಂಗ್)

**III.** ಮೀಸಲು ಇಡುವುದು

**IV.** ಹೂಡಿಕೆ

---

## D. ತೃತೀಯ ಪಕ್ಷದ ಆಡಳಿತಗಾರರ ಪಾತ್ರ (ಟಿಪಿಎ)

**ಟಿಪಿಎಗಳ ಪಾತ್ರವನ್ನು ಹಿಂದಿನ ಅಧ್ಯಾಯಗಳಲ್ಲಿಯೂ ಚರ್ಚಿಸಲಾಗಿದೆ. ಟಿಪಿಎ ನೀಡುವ ಸೇವೆಗಳನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ ಇದರಿಂದ ಗ್ರಾಹಕರು ಮಾರಾಟಗಾರರಿಂದ ಸೂಕ್ತ ಸೇವೆಗಳನ್ನು ಒದಗಿಸಬಹುದು.**

ವಿಮಾ ಪಾಲಿಸಿಯ ಮಾರಾಟ ಮತ್ತು ವಿತರಣೆಯ ನಂತರ ಟಿಪಿಎ ಸೇವೆಗಳ ವ್ಯಾಪ್ತಿಯು ಪ್ರಾರಂಭವಾಗುತ್ತದೆ. ವಿಮಾಗಾರರು ಟಿಪಿಎಗಳನ್ನು ಬಳಸದಿದ್ದಲ್ಲಿ, ಸೇವೆಗಳನ್ನು ವಿಮಾ ಕಂಪನಿಯ ಆಂತರಿಕ ತಂಡದಿಂದ ನಿರ್ವಹಿಸಲಾಗುತ್ತದೆ.

1. **ಆರೋಗ್ಯ ವಿಮೆಯ ಮಾರಾಟದ ನಂತರ ಸೇವೆ**

**a)** ಪ್ರಸ್ತಾವನೆಯನ್ನು (ಮತ್ತು ಕಂತನ್ನು) ಸ್ವೀಕರಿಸಿದ ನಂತರ, ಕವರೇಜ್ ಪ್ರಾರಂಭವಾಗುತ್ತದೆ.

**b)** ಪಾಲಿಸಿಯ ಸೇವೆಗಾಗಿ ಟಿಪಿಎಯನ್ನು ಬಳಸಬೇಕಾದರೆ, ವಿಮಾಗಾರರು ಗ್ರಾಹಕರು ಮತ್ತು ಪಾಲಿಸಿಯ ಬಗ್ಗೆ ಮಾಹಿತಿಯನ್ನು ಟಿಪಿಎಗೆ ರವಾನಿಸುತ್ತಾರೆ.

**c)** ಟಿಪಿಎ ಸದಸ್ಯರನ್ನು ನೋಂದಾಯಿಸುತ್ತದೆ (ಪ್ರಸ್ತಾಪಕರು ಪಾಲಿಸಿಯನ್ನು ತೆಗೆದುಕೊಳ್ಳುವ ವ್ಯಕ್ತಿಯಾಗಿದ್ದರೂ, ಸದಸ್ಯರು ಪಾಲಿಸಿಯಡಿಯಲ್ಲಿ ಕವರ್ ಹೊಂದಿರುತ್ತಾರೆ) ಮತ್ತು ಭೌತಿಕ ಅಥವಾ ಎಲೆಕ್ಟ್ರಾನಿಕ್ ಕಾರ್ಡ್ ನ ಸ್ವರೂಪದಲ್ಲಿ ಸದಸ್ಯತ್ವ ಗುರುತನ್ನು ನೀಡಬಹುದು.

**d)** ಸದಸ್ಯರಿಗೆ ಆಸ್ಪತ್ರೆಗೆ ದಾಖಲಾಗಲು ಅಥವಾ ಕವರ್ ಮಾಡಲಾದ ಚಿಕಿತ್ಸೆಗಾಗಿ ಪಾಲಿಸಿಯ ಬೆಂಬಲ ಅಗತ್ಯವಿರುವಾಗ ನಗದು ರಹಿತ ಸೌಲಭ್ಯವನ್ನು ಪಡೆಯಲು ಹಾಗೂ ಕ್ಲೇಮ್ ಗಳ ಪ್ರಕ್ರಿಯೆಗೆ ಟಿಪಿಎಯೊಂದಿಗಿನ ಸದಸ್ಯತ್ವವನ್ನು ಬಳಸಲಾಗುತ್ತದೆ.

**e)** ಕ್ಲೇಮ್ ಅಥವಾ ನಗದು ರಹಿತ ವಿನಂತಿಯನ್ನು ಟಿಪಿಎ ಪ್ರಕ್ರಿಯೆಗೊಳಿಸುತ್ತಾರೆ ಮತ್ತು ವಿಮಾಗಾರರೊಂದಿಗೆ ಒಪ್ಪಿದ ಸಮಯದೊಳಗೆ ಸೇವೆಗಳನ್ನು ಒದಗಿಸುತ್ತಾರೆ.

**f)** ವಿಮಾದಾರರು ಪಾಲಿಸಿ ಮತ್ತು ಟಿಪಿಎಗೆ ಸಂಬಂಧಿಸಿದ ಗುರುತಿನ ಚೀಟಿಯನ್ನು ಹೊಂದಿರಬೇಕು.

**g)** ನಗದು ರಹಿತ ಸೌಲಭ್ಯವನ್ನು ವಿನಂತಿಸಲು ಒದಗಿಸಿದ ಮಾಹಿತಿಯ ಆಧಾರದ ಮೇಲೆ ಟಿಪಿಎ ಪೂರ್ವಾನುಮತಿ ಅಥವಾ ಖಾತರಿ ಪತ್ರವನ್ನು ಆಸ್ಪತ್ರೆಗೆ ನೀಡುತ್ತಾರೆ.

**h)** ಒದಗಿಸಲಾದ ಮಾಹಿತಿಯಲ್ಲಿ ಸ್ಪಷ್ಟತೆಯಿಲ್ಲದಿದ್ದರೆ ಅಥವಾ ಮಾಹಿತಿ ಲಭ್ಯವಿಲ್ಲದಿದ್ದರೆ, ಟಿಪಿಎ ನಗದುರಹಿತ ವಿನಂತಿಯನ್ನು ತಿರಸ್ಕರಿಸಬಹುದು. ಅಂತಹ ಸಂದರ್ಭಗಳಲ್ಲಿ ಕ್ಲೇಮ್ ಅನ್ನು ಮರುಪಾವತಿಯ ಆಧಾರದ ಮೇಲೆ ಪರಿಶೀಲಿಸಬಹುದು.

2. **ಗ್ರಾಹಕ ಸಂಬಂಧ ಮತ್ತು ಸಂಪರ್ಕ ನಿರ್ವಹಣೆ**

ಟಿಪಿಎ ಗಳು ಕ್ಲೇಮ್ ಗಳ ಸೇವೆಯಲ್ಲಿ ತೊಡಗಿಸಿಕೊಂಡಿರುವುದರಿಂದ, ಸಾಮಾನ್ಯವಾಗಿ ತಮ್ಮದೇ ಆದ ದೂರು ಪರಿಹಾರ ಕಾರ್ಯವಿಧಾನವನ್ನು ಹೊಂದಿರುತ್ತವೆ.

---

## E. ಕ್ಲೇಮ್ ಗಳ ನಿರ್ವಹಣೆ - ವೈಯಕ್ತಿಕ ಅಪಘಾತ

ಕ್ಲೇಮ್ ನ ಅಧಿಸೂಚನೆಯನ್ನು ಸ್ವೀಕರಿಸಿದ ನಂತರ ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:

**a)** ಪಾಲಿಸಿಯಡಿಯಲ್ಲಿ ಕ್ಲೇಮ್ ಮಾಡಿದ ವ್ಯಕ್ತಿಯು ಕವರ್ ಮಾಡಲ್ಪಟ್ಟಿದ್ದಾರೆ

**b)** ಅಪಘಾತದ ದಿನಾಂಕದಂದು ಪಾಲಿಸಿ ಮಾನ್ಯವಾಗಿರುತ್ತದೆ ಮತ್ತು ಕಂತನ್ನು ಸ್ವೀಕರಿಸಲಾಗಿದೆ

c) ನಷ್ಟವು ಪಾಲಿಸಿ ಅವಧಿಯೊಳಗೆ ಇರುತ್ತದೆ

d) ನಷ್ಟವು "ಅಪಘಾತ"ದಿಂದ ಉಂಟಾಗಿದೆಯೇ ಹೊರತು ಅನಾರೋಗ್ಯದಿಂದಲ್ಲ

e) ಯಾವುದೇ ವಂಚನೆಯ ಸಾಧ್ಯತೆಗಳಿಗಾಗಿ ಪರಿಶೀಲಿಸಿ ಮತ್ತು ಅಗತ್ಯವಿದ್ದರೆ ತನಿಖೆಯನ್ನು ನಿಯೋಜಿಸಿ

f) ಕ್ಲೇಮ್ ಅನ್ನು ನೋಂದಾಯಿಸಿ ಮತ್ತು ಅದಕ್ಕಾಗಿ ಹಣ ಮೀಸಲಿಡಿ

g) ಕ್ಲೇಮ್ ಪೂರ್ತಿಗೊಳಿಸುವ (ಟರ್ನ್‌ಅರೌಂಡ್) ಸಮಯವನ್ನು ಕಾಪಾಡಿಕೊಳ್ಳಿ (ಕ್ಲೇಮ್ ಸರ್ವಿಸಿಂಗ್ ಸಮಯ) ಮತ್ತು ಕ್ಲೇಮ್ ನ ಪ್ರಗತಿಯ ಬಗ್ಗೆ ಗ್ರಾಹಕರಿಗೆ ತಿಳಿಸಿ.

**1. ಕ್ಲೇಮ್ ತನಿಖೆಗಳು**

ಕ್ಲೇಮ್ ಗಳ ತನಿಖೆಯು ಕ್ಲೇಮ್ ನ ಸಿಂಧುತ್ವವನ್ನು ನಿರ್ಧರಿಸುವುದು ಮತ್ತು ನಷ್ಟದ ನೈಜ ಕಾರಣ ಮತ್ತು ವ್ಯಾಪ್ತಿಯನ್ನು ಕಂಡುಹಿಡಿಯುವ ಕುರಿತಾಗಿದೆ. ಕ್ಲೇಮ್ ದಾಖಲೆಗಳನ್ನು ಸ್ವೀಕರಿಸಿದ ನಂತರ, ಕ್ಲೇಮ್ ಅನುಮಾನಾಸ್ಪದವಾಗಿ ಕಂಡುಬಂದರೆ, ಪರಿಶೀಲನೆಗಾಗಿ ಕ್ಲೇಮ್ ಅನ್ನು ಆಂತರಿಕ/ವೃತ್ತಿಪರ ತನಿಖಾಧಿಕಾರಿಗೆ ನಿಯೋಜಿಸಬಹುದು.

| **ಉದಾಹರಣೆ** |
|---|

ಪ್ರಕರಣದ ಮಾರ್ಗಸೂಚಿಯ ಉದಾಹರಣೆ:

ರಸ್ತೆ ಸಂಚಾರ ಅಪಘಾತ

i. ಘಟನೆ ಯಾವಾಗ ನಡೆಯಿತು - ನಿಖರವಾದ ಸಮಯ ಮತ್ತು ದಿನಾಂಕ ಸ್ಥಳ? ದಿನಾಂಕ ಮತ್ತು ಸಮಯ

ii. ವಿಮೆ ಮಾಡಿದವರು ಪಾದಚಾರಿ, ಪ್ರಯಾಣಿಕರು/ಹಿಂಬದಿ ಸಹಪ್ರವಾಸಿ(ಪಿಲಿಯನ್ ರೈಡರ್)ಯಾಗಿ ಪ್ರಯಾಣಿಸುತ್ತಿದ್ದರೇ ಅಥವಾ ಅಪಘಾತಕ್ಕೀಡಾದ ವಾಹನವನ್ನು ಚಾಲನೆ ಮಾಡುತ್ತಿದ್ದರೆ?

---

ವೈಯಕ್ತಿಕ ಅಪಘಾತದ ಕ್ಲೇಮ್ ಗಳಲ್ಲಿ ಸಂಭವನೀಯ ವಂಚನೆ ಮತ್ತು ಮೋಸದ ಕೆಲವು ಉದಾಹರಣೆಗಳು:

i. ಟಿಟಿಡಿ ಅವಧಿಯಲ್ಲಿಯ ಉತ್ಪ್ರೇಕ್ಷೆ.

ii. ಅನಾರೋಗ್ಯವನ್ನು ಅಪಘಾತ ಎಂದು ಪ್ರಸ್ತುತಪಡಿಸಲಾಗಿದೆ ಉದಾ. ರೋಗಶಾಸ್ತ್ರೀಯ ಕಾರಣಗಳಿಂದಾಗಿ ಬೆನ್ನುನೋವು ಮನೆಯಲ್ಲಿ 'ಬಿದ್ದ/ಜಾರಿದ' ಎಂದು ವರದಿ ಮಾಡಿದ ನಂತರ ಪಿಎ ಕ್ಲೇಮ್ ಆಗಿ ಪರಿವರ್ತಿಸಲಾಗಿದೆ

ಡಿಸ್ಚಾರ್ಜ್ ವೌಚರ್ ವಿಶೇಷವಾಗಿ ಸಾವಿನ ಕ್ಲೇಮ್ ಗಳನ್ನು ಒಳಗೊಂಡಿರುವ ವೈಯಕ್ತಿಕ ಅಪಘಾತದ ಕ್ಲೇಮ್ ಗಳ ಇತ್ಯರ್ಥಕ್ಕೆ ಪ್ರಮುಖ ದಾಖಲೆಯಾಗಿದೆ,. ಪ್ರಸ್ತಾವನೆಯ ಸಮಯದಲ್ಲಿ ನಾಮನಿರ್ದೇಶಿತರ ವಿವರಗಳನ್ನು ಪಡೆಯುವುದು ಸಹ ಮುಖ್ಯವಾಗಿದೆ ಮತ್ತು ಅದು ಪಾಲಿಸಿ ದಾಖಲೆಯ ಭಾಗವಾಗಿರಬೇಕು.

**2. ಕ್ಲೇಮ್ ದಾಖಲಾತಿ- ಪ್ರತಿ ಕಂಪನಿಯು ಒಂದು ಪಟ್ಟಿಯನ್ನು ನೀಡುತ್ತದೆ**

- **a)** ಸರಿಯಾಗಿ ಪೂರ್ಣಗೊಳಿಸಲಾದ ಹಕ್ಕುದಾರರ ನಾಮನಿರ್ದೇಶಿತರಿಂದ/ಕುಟುಂಬ ಸದಸ್ಯರಿಂದ ಸಹಿ ಮಾಡಲಾದ ವೈಯಕ್ತಿಕ ಅಪಘಾತದ ಹಕ್ಕು ನಮೂನೆ
- **b)** ಪ್ರಥಮ ಮಾಹಿತಿ ವರದಿಯ ಮೂಲ ಅಥವಾ ದೃಢೀಕೃತ ಪ್ರತಿ.
- **c)** ಮರಣ ಪ್ರಮಾಣಪತ್ರದ ಮೂಲ ಅಥವಾ ದೃಢೀಕರಿಸಿದ ಪ್ರತಿ.
- **d)** ಮರಣೋತ್ತರ ಪರೀಕ್ಷೆ(ಪೋಸ್ಟ್ ಮಾರ್ಟೆಮ್)ಯನ್ನು ನಡೆಸಲಾಗಿದ್ದರೆ ಮರಣೋತ್ತರ ಪರೀಕ್ಷಾ ವರದಿ(ಪೋಸ್ಟ್ ಮಾರ್ಟೆಮ್)ಯ ದೃಢೀಕೃತ ಪ್ರತಿ.
- **e)** ಎಎಮ್ಎಲ್ (ಆಂಟಿ ಮನಿ ಲಾಂಡರಿಂಗ್)ದಾಖಲೆಗಳ ದೃಢೀಕೃತ ಪ್ರತಿ - ಹೆಸರು ಪರಿಶೀಲನೆಗಾಗಿ (ಪಾಸ್‌ಪೋರ್ಟ್ / ಪ್ಯಾನ್ ಕಾರ್ಡ್ / ಮತದಾರರ ಐಡಿ / ಡ್ರೈವಿಂಗ್ ಪರವಾನೆ) ವಿಳಾಸ ಪರಿಶೀಲನೆಗಾಗಿ (ದೂರವಾಣಿ ಬಿಲ್ / ಬ್ಯಾಂಕ್ ಖಾತೆಯ ಪುರಾವೆ, ವಿದ್ಯುತ್ ಬಿಲ್ / ರೇಷನ್ ಕಾರ್ಡ್).
- **f)** ಎಲ್ಲ ಕಾನೂನು ಉತ್ತರಾಧಿಕಾರಿಗಳಿಂದ ಸರಿಯಾಗಿ ಸಹಿ ಮಾಡಲಾದ ಮತ್ತು ನೋಟರೈಸ್ ಮಾಡಲಾದ ಶಪಥಪತ್ರ(ಅಫಿಡವಿಟ್) ಮತ್ತು ನಷ್ಟ ಪರಿಹಾರ ಕರಾರುಪತ್ರ(ಇಂಡೆಮ್ನಿಟಿ ಬಾಂಡ್)ಗಳನ್ನು ಹೊಂದಿರುವ ಕಾನೂನು ಉತ್ತರಾಧಿಕಾರಿ ಪ್ರಮಾಣಪತ್ರ
- **g)** ವಿಮಾದಾರರ ಅಂಗವೈಕಲ್ಯವನ್ನು ಪ್ರಮಾಣೀಕರಿಸುವ ಸಿವಿಲ್ ಸರ್ಜನ್ ಅಥವಾ ಯಾವುದೇ ಸಮಾನರಾದ ಸಮರ್ಥ ವೈದ್ಯರಿಂದ ಶಾಶ್ವತ ಅಂಗವೈಕಲ್ಯದ ಪ್ರಮಾಣಪತ್ರ.
- **h)** ಚಿಕಿತ್ಸೆ ನೀಡುವ ವೈದ್ಯರಿಂದ ಅಂಗವೈಕಲ್ಯದ ಪ್ರಕಾರ ಮತ್ತು ಅಂಗವೈಕಲ್ಯದ ಅವಧಿಯನ್ನು ನಮೂದಿಸುವ ವೈದ್ಯಕೀಯ ಪ್ರಮಾಣಪತ್ರ. ಉದ್ಯೋಗದಾತರಿಂದ ಸರಿಯಾಗಿ ಸಹಿ ಮತ್ತು ಮೊಹರು ಹೊಂದಿರುವ ಸರಿಯಾದ ರಜೆಯ ಅವಧಿಯ ವಿವರಗಳನ್ನು ನೀಡುವ ರಜೆ ಪ್ರಮಾಣಪತ್ರ.

ಮೇಲಿನ ಪಟ್ಟಿಯು ಕೇವಲ ಸೂಚಕವಾಗಿದೆ, ಪ್ರಕರಣದ ನಿರ್ದಿಷ್ಟ ಸಂಗತಿಗಳನ್ನವಲಂಬಿಸಿ ವಿಶೇಷವಾಗಿ ತನಿಖೆ ಮಾಡಬೇಕಾದ ವಂಚನೆಯ ಕೋನದಿಂದ ಅನುಮಾನಾಸ್ಪದ ಪ್ರಕರಣಗಳಸಂದರ್ಭಗಳಲ್ಲಿ ಹೆಚ್ಚಿನ ದಾಖಲೆಗಳು (ಗಾಯ ಗುರುತುಗಳ ಛಾಯಾಚಿತ್ರಗಳು, ಅಪಘಾತದ ಸ್ಥಳ ಇತ್ಯಾದಿಗಳನ್ನು ಒಳಗೊಂಡಂತೆ) ಅಗತ್ಯವಾಗಬಹುದು.

## ನಿಮ್ಮನ್ನು ಪರೀಕ್ಷಿಸಿಕೊಳ್ಳಿ *4*

ಶಾಶ್ವತ ಒಟ್ಟು ಅಂಗವೈಕಲ್ಯದ ಕ್ಲೇಮ್ ಗಾಗಿ ಈ ಕೆಳಗಿನ ಯಾವ ದಾಖಲೆಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ?

**I.** ಸರಿಯಾಗಿ ಪೂರ್ಣಗೊಳಿಸಲಾದ ಕ್ಲೇಮ್ ದಾರರಿಂದ ಸಹಿ ಮಾಡಲಾದ ವೈಯಕ್ತಿಕ ಅಪಘಾತದ ಕ್ಲೇಮ್ ನಮೂನೆ(ಫಾರ್ಮ್).

**II.** ವಿಮಾ ಪಾಲಿಸಿಯ ಪ್ರತಿ.

**III.** ವಿಮಾದಾರರ ಅಂಗವೈಕಲ್ಯವನ್ನು ಪ್ರಮಾಣೀಕರಿಸುವ ಸಿವಿಲ್ ಸರ್ಜನ್ ಅಥವಾ ಯಾವುದೇ ಸಮಾನರಾದ ಸಮರ್ಥ ವೈದ್ಯರಿಂದ ಶಾಶ್ವತ ಅಂಗವೈಕಲ್ಯದ ಪ್ರಮಾಣಪತ್ರ.

**IV.** ಚಿಕಿತ್ಸೆ ನೀಡುವ ವೈದ್ಯರಿಂದ ವಿಮಾದಾರರು ತಮ್ಮ ಸಾಮಾನ್ಯ ಕರ್ತವ್ಯಗಳನ್ನು ನಿರ್ವಹಿಸಲು ಯೋಗ್ಯರಾಗಿದ್ದಾರೆಂದು ಪ್ರಮಾಣೀಕರಿಸುವ ಫಿಟ್ ನೆಸ್ ಪ್ರಮಾಣಪತ್ರ.

## F. ಕ್ಲೇಮ್ ಗಳ ನಿರ್ವಹಣೆ- ಸಾಗರೋತ್ತರ ಪ್ರಯಾಣ ವಿಮೆ

ಈ ಪಾಲಿಸಿಯಡಿಯಲ್ಲಿಯ ಕವರೇಜ್ (ವ್ಯಾಪ್ತಿ)ಅನ್ನು ಈಗಾಗಲೇ ಉತ್ಪನ್ನದ ಅಧ್ಯಾಯದಡಿಯಲ್ಲಿ ಚರ್ಚಿಸಲಾಗಿದೆ. ಸಾಗರೋತ್ತರ ಪ್ರಯಾಣದ ಸಮಯದಲ್ಲಿ ಉಂಟಾಗುವ ಕ್ಲೇಮ್ ಗಳನ್ನು ಹೇಗೆ ನಿರ್ವಹಿಸಲಾಗುತ್ತದೆ ಎಂಬುದನ್ನು ವಿವರಿಸಲು ಈ ವಿಭಾಗವು ಪ್ರಯತ್ನಿಸುತ್ತದೆ.

ಕ್ಲೇಮ್ ಸೇವೆಗಳು ಮೂಲಭೂತವಾಗಿ ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ:

**a)** ಕ್ಲೇಮ್ ಅಧಿಸೂಚನೆಯನ್ನು **24*7** ಆಧಾರದ ಮೇಲೆ ತೆಗೆದುಕೊಳ್ಳುವುದು;

**b)** ಕ್ಲೇಮ್ ನಮೂನೆ(ಫಾರ್ಮ್) ಮತ್ತು ಕಾರ್ಯವಿಧಾನವನ್ನು ಕಳುಹಿಸುವುದು;

**c)** ನಷ್ಟದ ನಂತರ ತಕ್ಷಣ ಏನು ಮಾಡಬೇಕೆಂಬುದರ ಬಗ್ಗೆ ಗ್ರಾಹಕರಿಗೆ ಮಾರ್ಗದರ್ಶನ ನೀಡುವುದು;

**d)** ವೈದ್ಯಕೀಯ ಮತ್ತು ಅನಾರೋಗ್ಯದ ಕ್ಲೇಮ್ ಗಳಿಗಾಗಿ ನಗದುರಹಿತ ಸೇವೆಗಳನ್ನು ವಿಸ್ತರಿಸುವುದು;

**e)** ವಾಪಸಾತಿ ಮತ್ತು ಸ್ಥಳಾಂತರಿಸುವಿಕೆಗೆ ವ್ಯವಸ್ಥೆ ಮಾಡುವುದು, ತುರ್ತು ನಗದು ಮುಂಗಡ.

ಸಹಾಯಕ ಕಂಪನಿಗಳು – ಸಾಗರೋತ್ತರ ಕ್ಲೇಮ್ ಗಳಲ್ಲಿ ಪಾತ್ರ

ಸಹಾಯಕ ಕಂಪನಿಗಳು ತಮ್ಮದೇ ಆದ ಕಛೇರಿಗಳನ್ನು ಮತ್ತು ಪ್ರಪಂಚದಾದ್ಯಂತ ಇತರ ರೀತಿಯ ಸೇವಾ ಪೂರೈಕೆದಾರರೊಂದಿಗೆ ಸಂಬಂಧದ ವ್ಯವಸ್ಥೆಗಳನ್ನು ಹೊಂದಿರುತ್ತವೆ. ಈ ಕಂಪನಿಗಳು ವಿಮಾ ಕಂಪನಿಗಳ ಗ್ರಾಹಕರಿಗೆ ಪಾಲಿಸಿಯಡಿಯಲ್ಲಿ ಒಳಗೊಂಡಿರುವ ಆಕಸ್ಮಿಕ ಸಂದರ್ಭಗಳಲ್ಲಿ ಸಹಾಯವನ್ನು ನೀಡುತ್ತವೆ.

ಈ ಕಂಪನಿಗಳು ಕ್ಲೇಮ್ ನೋಂದಣಿ ಮತ್ತು ಮಾಹಿತಿಗಾಗಿ ಅಂತರಾಷ್ಟ್ರೀಯ ಶುಲ್ಕರಹಿತ (ಟೋಲ್ ಫ್ರೀ) ಸಂಖ್ಯೆಗಳನ್ನು ಒಳಗೊಂಡಂತೆ 24*7 ಕರೆ ಕೇಂದ್ರ(ಕಾಲ್ ಸೆಂಟರ್)ವನ್ನು ನಿರ್ವಹಿಸುತ್ತವೆ. ಅವು ಈ ಕೆಳಗಿನ

ಸೇವೆಗಳನ್ನು ಸಹ ನೀಡುತ್ತವೆ ಮತ್ತು ನಿರ್ದಿಷ್ಟ ವಿಮಾ ಕಂಪನಿಯೊಂದಿಗಿನ ಒಪ್ಪಂದ, ಒಳಗೊಂಡಿರುವ ಪ್ರಯೋಜನಗಳು ಇತ್ಯಾದಿಗಳನ್ನು ಅವಲಂಬಿಸಿ ಸೇವೆಗಳ ಶುಲ್ಕಗಳು ಬದಲಾಗುತ್ತವೆ.

**a)** ವೈದ್ಯಕೀಯ ನೆರವು ಸೇವೆಗಳು:

i. ವೈದ್ಯಕೀಯ ಸೇವಾ ಪೂರೈಕೆದಾರರ ಉಲ್ಲೇಖಗಳು

ii. ಆಸ್ಪತ್ರೆಗೆ ದಾಖಲಾತಿಯ ವ್ಯವಸ್ಥೆ

iii. ತುರ್ತು ವೈದ್ಯಕೀಯ ಸ್ಥಳಾಂತರಣದ ವ್ಯವಸ್ಥೆ

iv. ತುರ್ತು ವೈದ್ಯಕೀಯ ವಾಪಸಾತಿ ವ್ಯವಸ್ಥೆ

v. ಮೃತ ದೇಹದ ಅವಶೇಷ(ಮಾರ್ಟಲ್)ಗಳ ವಾಪಸಾತಿ

vi. ಸಹಾನುಭೂತಿಯ ಭೇಟಿ ವ್ಯವಸ್ಥೆಗಳು

vii. ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಸಹಾಯ/ ಬೆಂಗಾವಲು

**b)** ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ಮತ್ತು ನಂತರ ವೈದ್ಯಕೀಯ ಸ್ಥಿತಿಯ ಬಗ್ಗೆ ಮೇಲ್ವಿಚಾರಣೆ ಮಾಡುವುದು

**c)** ಅಗತ್ಯ ಔಷಧಗಳ ವಿತರಣೆ

**d)** ಪಾಲಿಸಿಯ ನಿಯಮಗಳು ಮತ್ತು ಷರತ್ತುಗಳು ಮತ್ತು ವಿಮಾ ಕಂಪನಿಯ ಅನುಮೋದನೆಗೆ ಒಳಪಟ್ಟು ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ಉಂಟಾಗುವ ವೈದ್ಯಕೀಯ ವೆಚ್ಚಗಳ ಖಾತರಿ.

**e)** ಪ್ರವಾಸ ಪೂರ್ವದ ಮಾಹಿತಿ ಮತ್ತು ಇತರ ಸೇವೆಗಳು:

i. ವೀಸಾಗಳು ಮತ್ತು ಅವಶ್ಯಕ ಲಸಿಕೆ(ಇನಾಕ್ಯುಲೇಷನ್)ಗಳು

ii. ರಾಯಭಾರ ಕಚೇರಿ(ಎಂಬೆಸ್ಸಿ)ಯ ತಜ್ಞ ವೈದ್ಯರೆಡೆಗೆ ಉಲ್ಲೇಖಿತ ಸೇವೆಗಳು

iii. ಕಳೆದುಹೋದ ಪಾಸ್ ಪೋರ್ಟ್ ಮತ್ತು ಕಳೆದುಹೋದ ಸಾಮಾನು(ಲಗೇಜ್) ಸಹಾಯ ಸೇವೆಗಳು

iv. ತುರ್ತು ಸಂದೇಶ ರವಾನೆ ಸೇವೆಗಳು

v. ಜಾಮೀನು ಕರಾರುಪತ್ರ(ಬಾಂಡ್)ದ ವ್ಯವಸ್ಥೆ

vi. ತುರ್ತು ಆರ್ಥಿಕ ಸಹಾಯ

**f)** ಭಾಷಾನುವಾದಕ(ಇಂಟರ್ಪ್ರಿಟರ್)ರ ಉಲ್ಲೇಖ/ಶಿಫಾರಸು

**g)** ಕಾನೂನು ಉಲ್ಲೇಖ/ಶಿಫಾರಸು।

h) ವಕೀಲರೊಂದಿಗೆ ವೇಳೆಯನ್ನು ನಿಶ್ಚಿತಪಡಿಸುವುದು

a) **ಆಸ್ಪತ್ರೆಗೆ ದಾಖಲಾತಿ ವಿಧಾನ(ಪ್ರೊಸೀಜರ್)ಗಳು**

i. ವಿಮಾದಾರರು ಮಾನ್ಯವಾದ ಆರೋಗ್ಯ ಅಥವಾ ಸಾಗರೋತ್ತರ ಪ್ರಯಾಣದ ವಿಮಾ ಪಾಲಿಸಿಯನ್ನು ಒದಗಿಸಿದ ನಂತರ ಹೆಚ್ಚಿನ ಆಸ್ಪತ್ರೆಗಳು ಎಲ್ಲ ಅಂತರರಾಷ್ಟ್ರೀಯ ವಿಮಾ ಕಂಪನಿಗಳಿಂದ ಪಾವತಿಗಳ ಖಾತರಿಯನ್ನು ಸ್ವೀಕರಿಸುತ್ತವೆ.

ii. ಆಸ್ಪತ್ರೆಗಳು ತಕ್ಷಣವೇ ಚಿಕಿತ್ಸೆಯನ್ನು ಪ್ರಾರಂಭಿಸುತ್ತವೆ. ವಿಮಾ ರಕ್ಷಣೆಯಿದ್ದರೆ ವಿಮಾ ಪಾಲಿಸಿಯಿಂದ ಪಾವತಿ ಮಾಡಲಾಗುತ್ತದೆ ಅಥವಾ ರೋಗಿಯು ಸ್ವತಃ ಪಾವತಿಸಬೇಕಾಗುತ್ತದೆ. ಪಾವತಿಗಳು ವಿಳಂಬವಾಗುವುದರಿಂದ ಆಸ್ಪತ್ರೆಗಳು ಶುಲ್ಕವನ್ನು ಹೆಚ್ಚಿಸುತ್ತವೆ.

iii. ನೆಟ್ ವರ್ಕ್ ಆಸ್ಪತ್ರೆಗಳು ಮತ್ತು ಕಾರ್ಯವಿಧಾನಗಳಿಗೆ ಸಂಬಂಧಿಸಿದ ಮಾಹಿತಿಯು ಸಹಾಯಕ ಕಂಪನಿಗಳು ಒದಗಿಸಿದ ಶುಲ್ಕರಹಿತ(ಟೋಲ್ ಫ್ರೀ) ಸಂಖ್ಯೆಗಳಲ್ಲಿ ವಿಮಾದಾರರಿಗೆ ಲಭ್ಯವಿರುತ್ತದೆ.

iv. ಆಸ್ಪತ್ರೆಗೆ ದಾಖಲಾಗುವ ಅಗತ್ಯವಿದ್ದಲ್ಲಿ, ವಿಮಾದಾರರು ಕರೆ ಕೇಂದ್ರ(ಕಾಲ್ ಸೆಂಟರ್)ದಲ್ಲಿ ಅದನ್ನು ತಿಳಿಸಬೇಕಾಗುತ್ತದೆ ಮತ್ತು ಮಾನ್ಯವಾದ ಪ್ರಯಾಣ ವಿಮಾ ಪಾಲಿಸಿಯೊಂದಿಗೆ ನಿರ್ದಿಷ್ಟ ಆಸ್ಪತ್ರೆಗೆ ಹೋಗಬೇಕು.

v. ಆಸ್ಪತ್ರೆಗಳು ಪಾಲಿಸಿಯ ಸಿಂಧುತ್ವವನ್ನು ಪರಿಶೀಲಿಸಲು ಮತ್ತು ಕವರೇಜ್ ಗಳನ್ನು ಪರಿಶೀಲಿಸಲು ಸಾಮಾನ್ಯವಾಗಿ ಸಹಾಯ ಕಂಪನಿಗಳು/ವಿಮಾಗಾರರನ್ನು ಕಾಲ್ ಸೆಂಟರ್ ಸಂಖ್ಯೆಗಳಲ್ಲಿ ಸಂಪರ್ಕಿಸುತ್ತವೆ.

vi. ಪಾಲಿಸಿಯನ್ನು ಆಸ್ಪತ್ರೆಯು ಅಂಗೀಕರಿಸಿದ ನಂತರ ವಿಮಾದಾರರು ಆಸ್ಪತ್ರೆಯಲ್ಲಿ ನಗದುರಹಿತ ಆಧಾರದ ಮೇಲೆ ಚಿಕಿತ್ಸೆ ಪಡೆಯುತ್ತಾರೆ.

vii. ಕ್ಲೇಮ್ ನ ಅಂಗೀಕಾರವನ್ನು ನಿರ್ಧರಿಸಲು ವಿಮಾಗಾರರು/ಸಹಾಯ ಒದಗಿಸುವವರಿಗೆ ಅಗತ್ಯವಿರುವ ಕೆಲವು ಮೂಲಭೂತ ಮಾಹಿತಿಗಳು:

1. ಅನಾರೋಗ್ಯದ ವಿವರಗಳು
2. ಯಾವುದೇ ಹಿಂದಿನ ಅನಾರೋಗ್ಯದ ಇತಿಹಾಸದ ಸಂದರ್ಭದಲ್ಲಿ, ಆಸ್ಪತ್ರೆಯ ವಿವರಗಳು, ಭಾರತದಲ್ಲಿಯ ಸ್ಥಳೀಯ ವೈದ್ಯಕೀಯ ಅಧಿಕಾರಿ:
   - ✓ ಹಿಂದಿನ ಇತಿಹಾಸ, ಪ್ರಸ್ತುತ ಚಿಕಿತ್ಸೆ ಮತ್ತು ಆಸ್ಪತ್ರೆಯಲ್ಲಿ ಯೋಜಿಸಲಾದ ಮುಂದಿನ ಚಿಕಿತ್ಸೆಯ ಪ್ರಕಾರ ಮತ್ತು ತಕ್ಷಣ ಕಳುಹಿಸಲು ವಿನಂತಿ
   - ✓ ಚಿಕಿತ್ಸೆ ನೀಡುವ ವೈದ್ಯರ ಹೇಳಿಕೆಯೊಂದಿಗೆ ಕ್ಲೇಮ್ ಫಾರ್ಮ್
   - ✓ ಪಾಸ್ ಪೋರ್ಟ್ ನಕಲು

✓ ವೈದ್ಯಕೀಯ ಮಾಹಿತಿ ನಮೂನೆಯ ಬಿಡುಗಡೆ

**b) ವೈದ್ಯಕೀಯ ವೆಚ್ಚಗಳು ಮತ್ತು ಇತರ ವೈದ್ಯಕೀಯೇತರ ಕ್ಲೇಮ್ ಗಳ ಮರುಪಾವತಿ:**

ಸಾಮಾನ್ಯವಾಗಿ ವಿಮಾದಾರರು ಭಾರತಕ್ಕೆ ಮರಳಿದ ನಂತರ ಮರುಪಾವತಿಯ ಕ್ಲೇಮ್ ಗಳನ್ನು ಸಲ್ಲಿಸುತ್ತಾರೆ. ಕ್ಲೇಮ್ ದಾಖಲೆಗಳನ್ನು ಸ್ವೀಕರಿಸಿದ ನಂತರ, ಕ್ಲೇಮ್ ಅನ್ನು ಸಾಮಾನ್ಯ ವಿಧಾನದಂತೆ ಪ್ರಕ್ರಿಯೆಗೊಳಿಸಲಾಗುತ್ತದೆ. ಕ್ಲೇಮ್ ಗಳಿಗೆ ವಿದೇಶಿ ಕರೆನ್ಸಿಯಲ್ಲಿ ಪಾವತಿ ಮಾಡಲಾಗುವ ನಗದುರಹಿತ ಕ್ಲೇಮ್ ಗಳಿಗೆ ವ್ಯತಿರಿಕ್ತವಾಗಿ ಎಲ್ಲ ಸ್ವೀಕಾರಾರ್ಹ ಪಾವತಿಗಳನ್ನು ಭಾರತೀಯ ರೂಪಾಯಿ(ಐಎನ್ಆರ್)ಯಲ್ಲಿ ಮಾಡಲಾಗುತ್ತದೆ.

ಮರುಪಾವತಿ ಕ್ಲೇಮ್ ಗಳನ್ನು ಪ್ರಕ್ರಿಯೆಗೊಳಿಸುವಾಗ, ರೂಪಾಯಿ(ಐಎನ್ಆರ್)ಯಲ್ಲಿಯ ಹೊಣೆಗಾರಿಕೆಯ ಪ್ರಮಾಣವನ್ನು ಪಡೆಯಲು ನಷ್ಟದ ದಿನಾಂಕದಂದು ಕರೆನ್ಸಿ ಪರಿವರ್ತನೆ ದರವನ್ನು ಅನ್ವಯಿಸಲಾಗುತ್ತದೆ. ನಂತರ ಚೆಕ್ ಅಥವಾ ಎಲೆಕ್ಟ್ರಾನಿಕ್ ವರ್ಗಾವಣೆಯ ರೂಪದಲ್ಲಿ ಪಾವತಿಯನ್ನು ಮಾಡಲಾಗುತ್ತದೆ.

**c) ವೈದ್ಯಕೀಯ ಅಪಘಾತ ಮತ್ತು ಅನಾರೋಗ್ಯದ ವೆಚ್ಚಗಳಿಗೆ ಕ್ಲೇಮ್ ದಾಖಲಾತಿ**

- **i.** ಕ್ಲೇಮ್ ನಮೂನೆ(ಫಾರ್ಮ್)
- **ii.** ವೈದ್ಯರ ವರದಿ
- **iii.** ಮೂಲ ದಾಖಲಾತಿ/ ಬಿಡುಗಡೆ(ಡಿಸ್ಚಾರ್ಜ್) ಕಾರ್ಡ್
- **iv.** ಮೂಲ ಬೆಲೆಪಟ್ಟಿ(ಬಿಲ್)ಗಳು/ ರಶೀದಿಗಳು/ ಶಿಫಾರಿತ ಔಷಧದ ಚೀಟಿ (ಪ್ರಿಸ್ಕ್ರಿಪ್ಷನ್)
- **v.** ಮೂಲ ಎಕ್ಸ್-ರೇ ವರದಿಗಳು/ **Pathological** (ಪೆಥಾಲಾಜಿಕಲ್)/ ಪರೀಕ್ಷಾತ್ಮಕ ವರದಿಗಳು
- **vi.** ಪಾಸ್ ಪೋರ್ಟ್ ನ ನಕಲು/ ಪ್ರವೇಶ ಮತ್ತು ನಿರ್ಗಮನದ ಮುದ್ರೆಯೊಂದಿಗೆ ವಿಸಾ

ಮೇಲಿನ ಪಟ್ಟಿಯು ಕೇವಲ ಸೂಚಕವಾಗಿದೆ. ನಿರ್ದಿಷ್ಟ ಪ್ರಕರಣದ ವಿವರಗಳನ್ನು ಅವಲಂಬಿಸಿ ಅಥವಾ ನಿರ್ದಿಷ್ಟ ವಿಮಾಗಾರರು ಅನುಸರಿಸುವ ಕ್ಲೇಮ್ ಇತ್ಯರ್ಥದ ಪಾಲಿಸಿ/ ಕಾರ್ಯವಿಧಾನವನ್ನು ಅವಲಂಬಿಸಿ ಹೆಚ್ಚುವರಿ ಮಾಹಿತಿ/ದಾಖಲೆಗಳು ಅಗತ್ಯವಾಗಬಹುದು.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ವಿಮಾದಾರರು ಮಾನ್ಯವಾದ _________ ವಿಮಾ ಪಾಲಿಸಿಯನ್ನು ಒದಗಿಸಿದ ನಂತರ ಹೆಚ್ಚಿನ ಆಸ್ಪತ್ರೆಗಳು ಎಲ್ಲ ಅಂತರರಾಷ್ಟ್ರೀಯ ವಿಮಾ ಕಂಪನಿಗಳಿಂದ ಪಾವತಿಗಳ ಖಾತರಿಯನ್ನು ಸ್ವೀಕರಿಸುತ್ತವೆ.

**I.** ಕಾನೂನು ಬಾಧ್ಯತೆ

**II.** ಕೋರೋನಾ ರಕ್ಷಕ

**III.** ಸಾಗರೋತ್ತರ ಪ್ರಯಾಣ

**IV.** ದತ್ತಿ

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ ಪ್ರಶ್ನೆಗಳಿಗೆ ಉತ್ತರಗಳು**

**ಉತ್ತರ 1 - ಸರಿಯಾದ ಉತ್ತರ II ಆಗಿದೆ**

**ಉತ್ತರ 2 - ಸರಿಯಾದ ಉತ್ತರ II ಆಗಿದೆ**

**ಉತ್ತರ 3 - ಸರಿಯಾದ ಉತ್ತರ III ಆಗಿದೆ**

**ಉತ್ತರ 4 - ಸರಿಯಾದ ಉತ್ತರ IV ಆಗಿದೆ**

**ಉತ್ತರ 5 - ಸರಿಯಾದ ಉತ್ತರ III ಆಗಿದೆ**

---

**ಸಾರಾಂಶ**

**a)** ವಿಮೆಯು ಒಂದು **'ಭರವಸೆ'**ಯಾಗಿದ್ದು ಪಾಲಿಸಿಯು ಆ ಭರವಸೆಗೆ **'ಸಾಕ್ಷಿ'**ಯಾಗಿರುತ್ತದೆ. ಪಾಲಿಸಿಯಡಿಯಲ್ಲಿ ವಿಮೆ ಮಾಡಿದ ಕ್ಲೇಮ್ ಗೆ ಕಾರಣವಾಗುವ ಘಟನೆಯ ಸಂಭವವು ಆ ಭರವಸೆಯ ನಿಜವಾದ ಪರೀಕ್ಷೆಯಾಗಿದೆ

**b)** ವಿಮಾ ಕಂಪನಿಯ ಕ್ಲೇಮ್ ಗಳನ್ನು ಪಾವತಿಸುವ ಸಾಮರ್ಥ್ಯವೇ ವಿಮೆಯಲ್ಲಿನ ಪ್ರಮುಖ ಬೆಲೆನಿರ್ಧಾರದ(ರೇಟಿಂಗ್) ಅಂಶವಾಗಿದೆ

**c)** ವಿಮೆಯನ್ನು ಖರೀದಿಸುವ ಗ್ರಾಹಕರು ಮೊದಲ ಪಾಲುದಾರರು ಮತ್ತು ಕ್ಲೇಮ್ ಪಡೆಯುವವರು'.

**d)** ನಗದುರಹಿತ ಕ್ಲೇಮ್ ನಲ್ಲಿ ನೆಟ್ ವರ್ಕ್ ಆಸ್ಪತ್ರೆಯು ವಿಮಾದಾರ/ಟಿಪಿಎಯಿಂದ ಪೂರ್ವ-ಅನುಮೋದನೆಯ ಆಧಾರದ ಮೇಲೆ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತದೆ ಮತ್ತು ನಂತರ ಕ್ಲೇಮ್ ನ ಇತ್ಯರ್ಥಕ್ಕಾಗಿ ದಾಖಲೆಗಳನ್ನು ಸಲ್ಲಿಸುತ್ತದೆ.

**e)** ಮರುಪಾವತಿ ಕ್ಲೇಮ್ ನಲ್ಲಿ, ಗ್ರಾಹಕರು ತಮ್ಮ ಸ್ವಂತ ಸಂಪನ್ಮೂಲಗಳಿಂದ ಆಸ್ಪತ್ರೆಗೆ ಪಾವತಿಸುತ್ತಾನೆ ಮತ್ತು ನಂತರ ಪಾವತಿಗಾಗಿ ವಿಮಾಗಾರ/ಟಿಪಿಎಗೆ ಕ್ಲೇಮ್ ಮಾಡುತ್ತಾರೆ.

**f)** ಕ್ಲೇಮ್ ಸೂಚನೆಯು ಗ್ರಾಹಕರು ಮತ್ತು ಕ್ಲೇಮ್ ತಂಡದ ನಡುವಿನ ಸಂಪರ್ಕದ ಮೊದಲ ನಿದರ್ಶನವಾಗಿದೆ.

**g)** ಕ್ಲೇಮ್ ಸಂದರ್ಭದಲ್ಲಿ ವಿಮಾ ಕಂಪನಿಗೆ ಕ್ಲೇಮ್ ಅನುಮಾನಾಸ್ಪದವಾಗಿ ಕಂಡು ಬಂದರೆ ಕ್ಲೇಮ್ ನ ತನಿಖೆಯನ್ನು ವಿಮಾಗಾರ/ಟಿಪಿಎ ಮೂಲಕ ಕಚೇರಿಯಂತರ್ಗತವಾಗಿ ಮಾಡಬಹುದು ಅಥವಾ ವೃತ್ತಿಪರ ತನಿಖಾ ಸಂಸ್ಥೆಗೆ ವಹಿಸಿಕೊಡಬಹುದು ಪರಿಶೀಲನೆಗಾಗಿ ಕ್ಲೇಮ್ ಅನ್ನು ಆಂತರಿಕ/ವೃತ್ತಿಪರ ತನಿಖಾಧಿಕಾರಿಗೆ ನಿಯೋಜಿಸಬಹುದು

**h)** ಮೀಸಲು/ಕಾಯ್ದಿರಿಸುವಿಕೆಯು ಕ್ಲೇಮ್ ಗಳ ಸ್ಥಿತಿಯ ಆಧಾರದ ಮೇಲೆ ವಿಮಾಗಾರರ ಪುಸ್ತಕಗಳಲ್ಲಿ ಎಲ್ಲ ಕ್ಲೇಮ್ ಗಳಿಗಾಗಿ ಮಾಡಲಾದ ನಿಬಂಧನೆಯ ಮೊತ್ತವನ್ನು ಸೂಚಿಸುತ್ತದೆ.

i) ನಿರಾಕರಣೆಯ ಸಂದರ್ಭದಲ್ಲಿ, ಗ್ರಾಹಕರು ವಿಮಾಗಾರರನ್ನು ಸಂಪರ್ಕಿಸುವುದನ್ನು ಹೊರತುಪಡಿಸಿ, ವಿಮಾ ಓಂಬುಡ್ಸ್ ಮನ್ ಅಥವಾ ಗ್ರಾಹಕ ಆಯೋಗಗಳು ಅಥವಾ ಕಾನೂನು ಪ್ರಾಧಿಕಾರಗಳನ್ನು ಸಂಪರ್ಕಿಸುವ ಆಯ್ಕೆಯನ್ನು ಹೊಂದಿರುತ್ತಾರೆ.

j) ವಂಚನೆಗಳು ಹೆಚ್ಚಾಗಿ ಆಸ್ಪತ್ರೆಯ ಪರಿಹಾರ ಪಾಲಿಸಿಗಳಲ್ಲಿ ಸಂಭವಿಸುತ್ತವೆ ಆದರೆ ವಂಚನೆ ಕ್ಲೇಮ್ ಗಳನ್ನು ಮಾಡಲು ವೈಯಕ್ತಿಕ ಅಪಘಾತ ಪಾಲಿಸಿಗಳನ್ನು ಸಹ ಬಳಸಲಾಗುತ್ತದೆ.

k) ಟಿಪಿಎ ವಿಮಾಗಾರರಿಗೆ ಅನೇಕ ಪ್ರಮುಖ ಸೇವೆಗಳನ್ನು ಒದಗಿಸುತ್ತಾರೆ ಮತ್ತು ಶುಲ್ಕದ ರೂಪದಲ್ಲಿ ಸಂಭಾವನೆಯನ್ನು ಪಡೆಯುತ್ತಾರೆ.

# ವಿಭಾಗ

# ಸಾಮಾನ್ಯ ವಿಮೆ

# ಅಧ್ಯಾಯ G-01

# ಸಾಮಾನ್ಯ ವಿಮೆ ದಾಖಲಾತಿ

## ಅಧ್ಯಾಯ ಪರಿಚಯ

ಅಧ್ಯಾಯ 7 ರಲ್ಲಿ ಚರ್ಚಿಸಿದಂತೆ, ಪ್ರಸ್ತಾವನೆಯ ನಮೂನೆಯು ವಿಮೆಗಾಗಿ ಪ್ರಸ್ತಾಪಿಸಲಾದ ಅಪಾಯವನ್ನು ಸ್ವೀಕರಿಸುವ ಬಗ್ಗೆ ನಿರ್ಧರಿಸಲು ವಿಮಾ ಕಂಪನಿಗೆ ಉಪಯುಕ್ತವಾದ ಮಾಹಿತಿಯನ್ನು ಒಳಗೊಂಡಿರುತ್ತದೆ.

ವಿಮೆಯ ವಿವಿಧ ಶಾಖೆಗಳಲ್ಲಿ, ವಿಮೆ ಮಾಡಲ್ಪಟ್ಟ ವಿಷಯವಸ್ತು, ವಿಮಾ ಕವರ್ ನ ಪ್ರಕಾರ ಮತ್ತು ಉದ್ಭವಿಸಬಹುದಾದ ಕ್ಲೇಮ್ ಗಳ ಪ್ರಕಾರಗಳನ್ನವಲಂಬಿಸಿ ದಾಖಲಾತಿ ಅಗತ್ಯಗಳು ವಿಭಿನ್ನವಾಗಿವೆ ಎಂದು ನಾವು ನೋಡಿದ್ದೇವೆ.

## ಕಲಿಕೆಯ ಫಲಿತಾಂಶಗಳು

**A.** ಪ್ರಸ್ತಾವನೆಯ ನಮೂನೆಗಳು

**B.** ಪ್ರಸ್ತಾವನೆಯ ಸ್ವೀಕೃತಿ (ಅಂಡರ್ ರೈಟಿಂಗ್)

**C.** ಕಂತಿನ ರಶೀದಿ

**D.** ಕವರ್ ನೋಟ್ ಗಳು/ವಿಮೆಯ ಪ್ರಮಾಣಪತ್ರ /ಪಾಲಿಸಿ ದಾಖಲೆ

**E.** ಖಾತರಿಗಳು

**F.** ಅನುಮೋದನೆಗಳು

**G.** ಪಾಲಿಸಿಗಳ ಅರ್ಥವಿವರಣೆ

**H.** ನವೀಕರಣದ ಸೂಚನೆ

ಈ ಅಧ್ಯಾಯವನ್ನು ಅಧ್ಯಯನ ಮಾಡಿದ ನಂತರ, ನೀವು ಈ ಕೆಳಗಿನ ವಿಷಯಗಳನ್ನು ಮಾಡಬಹುದು:

**a)** ಪ್ರಸ್ತಾವನೆಯ ನಮೂನೆಯಲ್ಲಿಯ ವಿಷಯಗಳನ್ನು ವಿವರಿಸುವುದು.

**b)** ವಿವರಣಾಪತ್ರ(ಪ್ರಾಸ್ಪೆಕ್ಟಸ್)ದ ಪ್ರಾಮುಖ್ಯತೆಯನ್ನು ವಿವರಿಸುವುದು

**c)** ಕಂತು ರಶೀದಿಯನ್ನು ಅರ್ಥಮಾಡಿಕೊಳ್ಳುವುದು.

**d)** ವಿಮಾ ಪಾಲಿಸಿ ದಾಖಲೆಯಲ್ಲಿಯ ವ್ಯಾಖ್ಯೆಗಳು ಮತ್ತು ಪದಗಳನ್ನು ವಿವರಿಸುವುದು.

**e)** ಪಾಲಿಸಿ ಷರತ್ತುಗಳು ಮತ್ತು ಖಾತರಿಗಳನ್ನು ಚರ್ಚಿಸುವುದು.

**f)** ಅನುಮೋದನೆಗಳನ್ನು ನೀಡಲಾದ ಕಾರಣಗಳನ್ನು ಗಮನಿಸುವುದು.

**g)** ನವೀಕರಣ ಸೂಚನೆಗಳನ್ನು ನೀಡಲಾದ ಕಾರಣಗಳನ್ನು ಗಮನಿಸುವುದು.

## A. ಪ್ರಸ್ತಾವನೆಯ ನಮೂನೆ

ಪ್ರಸ್ತಾವನೆಯ ನಮೂನೆಯು ವಿಮಾ ಕಂಪನಿಯು ವಿಮೆಗಾಗಿ ಪ್ರಸ್ತಾಪಿಸಲ್ಪಟ್ಟ ಅಪಾಯವನ್ನು ಸ್ವೀಕರಿಸಲು ಉಪಯುಕ್ತವಾದ ಮಾಹಿತಿಯನ್ನು ಒಳಗೊಂಡಿರುತ್ತದೆ. ಅತ್ಯಂತ ಉತ್ತಮ ನಂಬಿಕೆಯ ತತ್ವ ಮತ್ತು ವಾಸ್ತವಿಕ ಮಾಹಿತಿಯ ಬಹಿರಂಗಪಡಿಸುವಿಕೆಯ ಕರ್ತವ್ಯವು ವಿಮೆಯ ಪ್ರಸ್ತಾಪದ ನಮೂನೆಯೊಂದಿಗೆ ಪ್ರಾರಂಭವಾಗುತ್ತದೆ.

### ಉದಾಹರಣೆ

ವಿಮಾದಾರರು ಅಲಾರಾಂ ಅನ್ನು ನಿರ್ವಹಿಸುವ ಅಗತ್ಯವಿದ್ದಲ್ಲಿ ಅಥವಾ ತನ್ನ ಚಿನ್ನಾಭರಣದ ಅಂಗಡಿ(ಶೋರೂಮ್)ಯಲ್ಲಿ ಸ್ವಯಂಚಾಲಿತ ಅಲಾರಾಂ ವ್ಯವಸ್ಥೆಯನ್ನು ಹೊಂದಿರುವ ಬಗ್ಗೆ ಹೇಳಿದ್ದರೆ, ಅವರು ಅದನ್ನು ಬಹಿರಂಗಪಡಿಸುವ ಅಗತ್ಯವಿದೆಯಲ್ಲದೆ, ಪಾಲಿಸಿಯ ಅವಧಿಯುದ್ದಕ್ಕೂ ಅದು ಕೆಲಸಮಾಡುವ ಸ್ಥಿತಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಈ ಅಂಶಗಳ ಆಧಾರದ ಮೇಲೆ ಪ್ರಸ್ತಾವನೆಯನ್ನು ಸ್ವೀಕರಿಸುವ ಮತ್ತು ಅದಕ್ಕೆ ಅನುಗುಣವಾಗಿ ಅಪಾಯದ ಬೆಲೆಯನ್ನು ನಿಗದಿಪಡಿಸುವ ವಿಮಾಗಾರರಿಗೆ ಅಲಾರಾಂ ನ ಅಸ್ತಿತ್ವವು ಒಂದು ವಾಸ್ತವಿಕ ಸತ್ಯವಾಗಿದೆ.

### 1. ಪ್ರಸ್ತಾವನೆಯ ರೂಪದಲ್ಲಿಯ ಪ್ರಶ್ನೆಗಳ ಸ್ವರೂಪ

ಪ್ರಸ್ತಾವನೆಯ ನಮೂನೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಸ್ವರೂಪವು ಸಂಬಂಧಪಟ್ಟ ವಿಮೆಯ ವರ್ಗಕ್ಕನುಗುಣವಾಗಿ ಬದಲಾಗುತ್ತದೆ.

i. **ಅಗ್ನಿ ವಿಮೆ**ಯ ಪ್ರಸ್ತಾವನೆಯ ನಮೂನೆಗಳನ್ನು ಸಾಮಾನ್ಯವಾಗಿ ಮನೆಗಳು, ಅಂಗಡಿಗಳು ಇತ್ಯಾದಿಗಳಂತಹ ತುಲನಾತ್ಮಕವಾಗಿ ಸರಳವಾದ/ಪ್ರಮಾಣಿತ ಅಪಾಯಗಳಿಗೆ ಬಳಸಲಾಗುತ್ತದೆ. ದೊಡ್ಡ ಕೈಗಾರಿಕಾ ಅಪಾಯಗಳಿಗೆ, ಅಪಾಯವನ್ನು ಸ್ವೀಕರಿಸುವ ಮೊದಲು ಅಪಾಯದ ತಪಾಸಣೆಯನ್ನು ವಿಮಾಗಾರರಿಂದ ವ್ಯವಸ್ಥೆಗೊಳಿಸಲಾಗುತ್ತದೆ. ನಿರ್ದಿಷ್ಟ ಮಾಹಿತಿಯನ್ನು ಸಂಗ್ರಹಿಸಲು ಪ್ರಸ್ತಾವನೆಯ ನಮೂನೆಯ ಜೊತೆಗೆ ವಿಶೇಷ ಪ್ರಶ್ನಾವಳಿಗಳನ್ನು ಕೆಲವೊಮ್ಮೆ ಬಳಸಲಾಗುತ್ತದೆ.

   **ಅಗ್ನಿ** ವಿಮೆಯ ಪ್ರಸ್ತಾವನೆಯ ನಮೂನೆಯು ಇತರ ವಿಷಯಗಳ ಜೊತೆಗೆ, ಈ ಕೆಳಗಿನ ಆಸ್ತಿಯ ವಿವರಣೆಯನ್ನು ಒಳಗೊಂಡಿರುವ ಮಾಹಿತಿಯನ್ನು ಹೊಂದಿರುತ್ತದೆ:

   - ✓ ಬಾಹ್ಯ ಗೋಡೆಗಳು ಮತ್ತು ಛಾವಣಿಯ ನಿರ್ಮಾಣ, ಮಹಡಿಯ ಸಂಖ್ಯೆ
   - ✓ ಕಟ್ಟಡದ ಪ್ರತಿಯೊಂದು ಭಾಗದ ಉಪಯೋಗ
   - ✓ ಅಪಾಯಕಾರಿ ಸರಕುಗಳ ಉಪಸ್ಥಿತಿ
   - ✓ ಕಚ್ಚಾ ವಸ್ತು ಮತ್ತು ಸಿದ್ಧಪಡಿಸಿದ ಸರಕುಗಳನ್ನು ಒಳಗೊಂಡಂತೆ ತಯಾರಿಕೆಯ ಪ್ರಕ್ರಿಯೆ
   - ✓ ವಿಮೆಗಾಗಿ ಪ್ರಸ್ತಾಪಿಸಲಾದ ಮೊತ್ತಗಳು

- ✓ ವಿಮೆಯ ಅವಧಿ, ಇತ್ಯಾದಿ.

ii. **ಮೋಟಾರು ವಿಮೆಯಲ್ಲಿ,** ವಾಹನ, ಅದರ ಕಾರ್ಯಾಚರಣೆಗಳು, ತಯಾರಿಕೆ ಮತ್ತು ಸಾಗಿಸುವ ಸಾಮರ್ಥ್ಯ, ಮಾಲೀಕರು ಮತ್ತು ಹೇಗೆ ನಿರ್ವಹಿಸುತ್ತಾರೆ ಮುಂತಾದ ಸಂಬಂಧಿತ ವಿಮಾ ಇತಿಹಾಸದ ಕುರಿತು ಪ್ರಶ್ನೆಗಳನ್ನು ಕೇಳಲಾಗುತ್ತದೆ.

iii. ವೈಯಕ್ತಿಕ ಅಪಘಾತ ಮತ್ತು ಪ್ರಯಾಣ ವಿಮೆಯಂತಹ **ಆರೋಗ್ಯ ವಿಮಾ ಪ್ರಕಾರಗಳಲ್ಲಿ,** ಪ್ರಸ್ತಾಪಿಸುವವರ ಆರೋಗ್ಯ, ಜೀವನ ವಿಧಾನ ಮತ್ತು ಅಭ್ಯಾಸ/ಚಟಗಳು, ಮೊದಲೇ ಅಸ್ತಿತ್ವದಲ್ಲಿರುವ ಆರೋಗ್ಯದ ಪರಿಸ್ಥಿತಿಗಳು, ವೈದ್ಯಕೀಯ ಇತಿಹಾಸ, ಆನುವಂಶಿಕ ಲಕ್ಷಣಗಳು, ಹಿಂದಿನ ವಿಮಾ ಅನುಭವ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಪಡೆಯಲು ಪ್ರಸ್ತಾವನೆಯ ನಮೂನೆಗಳನ್ನು ವಿನ್ಯಾಸಗೊಳಿಸಲಾಗಿದೆ.

iv. **ಇತರ ವಿವಿಧ ವಿಮೆಗಳಲ್ಲಿ,** ಪ್ರಸ್ತಾವನೆಯ ನಮೂನೆಗಳು ಕಡ್ಡಾಯವಾಗಿರುತ್ತವೆ ಮತ್ತು ಅವುಗಳು ಉತ್ತಮ ನಂಬಿಕೆಯ ಸಾಮಾನ್ಯ ಕಾನೂನು ಕರ್ತವ್ಯವನ್ನು ಪೂರೈಸುವ ಘೋಷಣೆಯನ್ನು ಸಂಯೋಜಿಸುತ್ತವೆ..

**2. ಪ್ರಸ್ತಾವನೆಯ ಅಂಶಗಳು**

**i. ಪ್ರಸ್ತಾಪಕರ ಸಂಪೂರ್ಣ ಹೆಸರು**

ಪ್ರಸ್ತಾಪಕರು ತಮ್ಮನ್ನು ನಿಸ್ಸಂದಿಗ್ಧವಾಗಿ ಗುರುತಿಸಿಕೊಳ್ಳಲು ಶಕ್ತರಾಗಿರಬೇಕು. ಪಾಲಿಸಿಯಡಿಯಲ್ಲಿನ ಪ್ರಯೋಜನಗಳನ್ನು ವಿಮಾದಾರರು ಮಾತ್ರ ಸ್ವೀಕರಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ವಿಮಾಗಾರರಿಗೆ ತಾವು ಯಾರೊಂದಿಗೆ ಒಪ್ಪಂದವನ್ನು ಮಾಡಲಾಗಿದೆ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯವಾಗಿರುತ್ತದೆ.

**ii. ಪ್ರಸ್ತಾಪಕರ ವಿಳಾಸ ಮತ್ತು ಸಂಪರ್ಕಸಂಖ್ಯೆ**

ಪ್ರಸ್ತಾಪಕವರ ವಿಳಾಸ ಮತ್ತು ಸಂಪರ್ಕ ವಿವರಗಳನ್ನು ಸಂಗ್ರಹಿಸಲು ಸಹ ಮೇಲೆ ತಿಳಿಸಲಾದ ಕಾರಣಗಳು ಅನ್ವಯಿಸುತ್ತವೆ.

**iii. ಪ್ರಸ್ತಾಪಕರ ವೃತ್ತಿ, ಉದ್ಯೋಗ ಅಥವಾ ವ್ಯಾಪಾರ**

ಆರೋಗ್ಯ ಮತ್ತು ವೈಯಕ್ತಿಕ ಅಪಘಾತ ವಿಮೆಯಂತಹ ಕೆಲವು ಸಂದರ್ಭಗಳಲ್ಲಿ, ಅಪಾಯದ ಮೇಲೆ ವಾಸ್ತವಿಕ ಮಹತ್ವವನ್ನು ಹೊಂದಿರಬಹುದಾದ ಪ್ರಸ್ತಾಪಕರ ವೃತ್ತಿ, ಉದ್ಯೋಗ ಅಥವಾ ವ್ಯವಹಾರವು ಪ್ರಾಮುಖ್ಯತೆಯನ್ನು ಹೊಂದಿರುತ್ತದೆ.

**iv. ವಿಮೆಯ ವಿಷಯವಸ್ತುವಿನ ವಿವರಗಳು ಮತ್ತು ಗುರುತು**

ವಿಮೆಗಾಗಿ ಪ್ರಸ್ತಾಪಿಸಲಾದ ವಿಷಯ ವಸ್ತುವನ್ನು ಪ್ರಸ್ತಾಪಿಸುವವರು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

| ಉದಾಹರಣೆ |
|---|

ಪ್ರಸ್ತಾಪಿಸುವವರು ಈ ಕೆಳಗೆ ನೀಡಲಾದ ಮಾಹಿತಿಯ ಅಂಶಗಳನ್ನು ಸ್ಪಷ್ಟಪಡಿಸಬೇಕಾಗುತ್ತದೆ:

i. ಖಾಸಗಿ ಕಾರು [ಇಂಜಿನ್ ಸಂಖ್ಯೆ, ಚಾಸಿಸ್ ಸಂಖ್ಯೆ, ನೋಂದಣಿ ಸಂಖ್ಯೆ ಮುಂತಾದ ಅದರ ಗುರುತಿನೊಂದಿಗೆ] ಅಥವಾ

ii. ವಸತಿ ಮನೆ [ಅದರ ಪೂರ್ಣ ವಿಳಾಸ ಮತ್ತು ಗುರುತಿನ ಸಂಖ್ಯೆಗಳೊಂದಿಗೆ] ಅಥವಾ

iii. ಸಾಗರೋತ್ತರ ಪ್ರಯಾಣ [ಯಾರಿಂದ, ಯಾವಾಗ, ಯಾವ ದೇಶಕ್ಕೆ, ಯಾವ ಉದ್ದೇಶಕ್ಕಾಗಿ] ಅಥವಾ

iv. ಪ್ರಕರಣವನ್ನವಲಂಬಿಸಿ ವ್ಯಕ್ತಿಯ ಆರೋಗ್ಯ [ವ್ಯಕ್ತಿಯ ಹೆಸರು, ವಿಳಾಸ ಮತ್ತು ಗುರುತಿನ ಜೊತೆಗೆ] ಇತ್ಯಾದಿ

v. ವಿಮಾ ಮೊತ್ತವು ಪಾಲಿಸಿಯಡಿಯಲ್ಲಿ ವಿಮಾಗಾರರ ಹೊಣೆಗಾರಿಕೆಯ ಮಿತಿಯನ್ನು ಸೂಚಿಸುತ್ತದೆ ಮತ್ತು ಅದನ್ನು ಎಲ್ಲ ಪ್ರಸ್ತಾವನೆಯ ನಮೂನೆಗಳಲ್ಲಿ ಸೂಚಿಸಬೇಕು.

vi. **ಹಿಂದಿನ ಮತ್ತು ಪ್ರಸ್ತುತ ವಿಮೆ:** ಸಾಮಾನ್ಯ ಅಧ್ಯಾಯಗಳಲ್ಲಿ ನೋಡಿದಂತೆ, ಪ್ರಸ್ತಾಪಕರು ತಮ್ಮ ಹಿಂದಿನ ವಿಮೆಗಳ ವಿವರಗಳನ್ನು ವಿಮಾಗಾರರಿಗೆ ತಿಳಿಸುವ ಅಗತ್ಯವಿದೆ.

ಆಸ್ತಿ ವಿಮೆಯಲ್ಲಿ, ವಿವಿಧ ವಿಮಾಗಾರರಿಂದ ವಿಮಾದಾರರು ಪಾಲಿಸಿಗಳನ್ನು ತೆಗೆದುಕೊಳ್ಳುವ ಅವಕಾಶವಿರುತ್ತದೆ ಮತ್ತು ನಷ್ಟ ಸಂಭವಿಸಿದಾಗ, ಅವರು ಒಂದಕ್ಕಿಂತ ಹೆಚ್ಚು ವಿಮಾಗಾರರಿಂದ ಕ್ಲೇಮ್ ಮಾಡಬಹುದು. ಕೊಡುಗೆಯ ತತ್ವವನ್ನು ಅನ್ವಯಿಸಲಾಗುತ್ತದೆ ಮತ್ತು ವಿಮಾದಾರರು ನಷ್ಟಪರಿಹಾರವನ್ನು ಪಡೆಯುತ್ತಾರೆ ಮತ್ತು ಅದೇ ಅಪಾಯಕ್ಕಾಗಿ ಹಲವು ವಿಮಾ ಪಾಲಿಸಿಗಳಿಂದ ಲಾಭ/ಲಾಭವನ್ನು ಪಡೆಯುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಈ ಮಾಹಿತಿಯ ಅಗತ್ಯವಿರುತ್ತದೆ.

ಇದಲ್ಲದೆ, ವೈಯಕ್ತಿಕ ಅಪಘಾತ ವಿಮೆಯಲ್ಲಿ ವಿಮಾಗಾರರು ಅದೇ ವಿಮಾದಾರರು ತೆಗೆದುಕೊಂಡ ಇತರ ಪಿಎ ಪಾಲಿಸಿಗಳಡಿಯಲ್ಲಿ ವಿಮಾ ಮೊತ್ತವನ್ನು ಅವಲಂಬಿಸಿ ಕವರೇಜ್ ಮೊತ್ತವನ್ನು (ವಿಮಾ ಮೊತ್ತ) ನಿರ್ಬಂಧಿಸಲು ಬಯಸುತ್ತಾರೆ.

**vii. ನಷ್ಟದ ಅನುಭವ**

ವಿಮೆ ಮಾಡಿರಲಿ ಅಥವಾ ಇಲ್ಲದಿರಲಿ, ಅವರು ಅನುಭವಿಸಿದ ಎಲ್ಲ ನಷ್ಟಗಳ ಸಂಪೂರ್ಣ ವಿವರಗಳನ್ನು ಘೋಷಿಸಲು ಪ್ರಸ್ತಾಪಕರನ್ನು ಕೇಳಲಾಗುತ್ತದೆ. ಇದು ವಿಮೆದಾರರಿಗೆ ವಿಮೆಯ ವಿಷಯವಸ್ತುವಿನ ಬಗ್ಗೆ ಮತ್ತು ವಿಮಾದಾರರು ಈ ಹಿಂದೆ ಅಪಾಯವನ್ನು ಹೇಗೆ ನಿರ್ವಹಿಸಿದ್ದಾರೆಂಬ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಅಂಡರ್ ರೈಟರ್‌ಗಳು ಅಂತಹ ಉತ್ತರಗಳಿಂದ ಅಪಾಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು ಮತ್ತು ಅಪಾಯದ ತಪಾಸಣೆಗಳನ್ನು ನಡೆಸಲು ಅಥವಾ ಹೆಚ್ಚಿನ ವಿವರಗಳನ್ನು ಸಂಗ್ರಹಿಸಲು ನಿರ್ಧರಿಸಬಹುದು.

**viii. ವಿಮಾದಾರರಿಂದ ಘೋಷಣೆ**

ವಿಮಾಗಾರರಿಗೆ ಎಲ್ಲ ವಾಸ್ತವಿಕ ಮಾಹಿತಿಯನ್ನು ಒದಗಿಸುವುದು ಪ್ರಸ್ತಾವನೆಯ ನಮೂನೆ(ಫಾರ್ಮ್)ಯ ಉದ್ದೇಶವಾಗಿರುವುದರಿಂದ, **ಅದರಲ್ಲಿಯ ಉತ್ತರಗಳು ನಿಜ ಮತ್ತು ನಿಖರವಾಗಿವೆಯೆಂಬ ವಿಮಾದಾರರ**

**ಘೋಷಣೆಯನ್ನು** ಮತ್ತು **ನಮೂನೆ(ಫಾರ್ಮ್)ಯು ವಿಮಾ ಒಪ್ಪಂದದ ಆಧಾರವಾಗಿದೆಯೆಂದು ಅವರ ಒಪ್ಪಿಗೆಯನ್ನು** ನಮೂನೆ(ಫಾರ್ಮ್)ಯು ಒಳಗೊಂಡಿರುತ್ತದೆ. ಯಾವುದೇ ತಪ್ಪು ಉತ್ತರವು ಒಪ್ಪಂದವನ್ನು ತಪ್ಪಿಸಲು ವಿಮಾಗಾರರಿಗೆ ಹಕ್ಕನ್ನು ನೀಡುತ್ತದೆ. ಎಲ್ಲ ಪ್ರಸ್ತಾವನೆಯ ನಮೂನೆಗಳಿಗೆ ಸಾಮಾನ್ಯವಾಗಿರುವ ಇತರ ವಿಭಾಗಗಳು **ಸಹಿ, ದಿನಾಂಕ ಮತ್ತು ಕೆಲವು ಸಂದರ್ಭಗಳಲ್ಲಿ ಏಜೆಂಟ್‌ನ ಶಿಫಾರಸಿಗೆ** ಸಂಬಂಧಿಸಿವೆ.

## B. ಪ್ರಸ್ತಾವನೆಯ ಸ್ವೀಕೃತಿ (ಅಂಡರ್ ರೈಟಿಂಗ್)

ಮೊದಲೇ ನೋಡಿದಂತೆ, ಪೂರ್ಣಗೊಂಡ ಪ್ರಸ್ತಾವನೆಯ ನಮೂನೆಯು ಈ ಕೆಳಗಿನ ಮಾಹಿತಿಯನ್ನು ವಿವರವಾಗಿ ನೀಡುತ್ತದೆ:

- ✓ ವಿಮಾದಾರರ ವಿವರಗಳು
- ✓ ವಿಷಯವಸ್ತುವಿನ ವಿವರಗಳು
- ✓ ಅಗತ್ಯವಿರುವ ಕವರ್ ನ ಪ್ರಕಾರ
- ✓ ಧನಾತ್ಮಕ ಮತ್ತು ಋಣಾತ್ಮಕ ಎರಡೂ ರೀತಿಯ ಭೌತಿಕ ಲಕ್ಷಣಗಳ ವಿವರಗಳು - ನಿರ್ಮಾಣದ ಪ್ರಕಾರ ಮತ್ತು ಗುಣಮಟ್ಟ, ವಯಸ್ಸು, ಅಗ್ನಿಶಾಮಕ ಉಪಕರಣಗಳ ಉಪಸ್ಥಿತಿ, ಭದ್ರತೆಯ ಪ್ರಕಾರ ಇತ್ಯಾದಿ,
- ✓ ವಿಮೆ ಮತ್ತು ನಷ್ಟದ ಹಿಂದಿನ ಇತಿಹಾಸ

ಆಸ್ತಿ, ಮೋಟಾರು ಅಥವಾ ಸರಕು ಸಾಗಾಣಿಕೆ ವಿಮೆಯ ಸಂದರ್ಭದಲ್ಲಿ, ಅಪಾಯದ ಸ್ವರೂಪ ಮತ್ತು ಮೌಲ್ಯವನ್ನವಲಂಬಿಸಿ, ಸ್ವೀಕಾರಕ್ಕೆ ಮುನ್ನ ಅಪಾಯದ ಪೂರ್ವ-ತಪಾಸಣಾ ಸಮೀಕ್ಷೆಯನ್ನು ವಿಮಾಗಾರರು ವ್ಯವಸ್ಥೆಗೊಳಿಸಬಹುದು. ಪ್ರಸ್ತಾವನೆಯಲ್ಲಿ ಲಭ್ಯವಿರುವ ಮಾಹಿತಿ, ಅಪಾಯದ ತಪಾಸಣೆಯ ವರದಿ, ಹೆಚ್ಚುವರಿ ಪ್ರಶ್ನಾವಳಿಗಳಿಗೆ ಉತ್ತರಗಳು ಮತ್ತು ಇತರ ದಾಖಲೆಗಳ (ವಿಮಾದಾರರಿಂದ ಕೇಳಬಹುದು) ಆಧಾರದ ಮೇಲೆ ವಿಮಾಗಾರರು ತಮ್ಮ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ನಂತರ ವಿಮಾಗಾರರು ಅಪಾಯದ ಅಂಶಕ್ಕೆ ಅನ್ವಯಿಸಬೇಕಾದ ದರವನ್ನು ನಿರ್ಧರಿಸುತ್ತಾರೆ ಮತ್ತು ವಿವಿಧ ನಿಯತಾಂಕಗಳ ಆಧಾರದ ಮೇಲೆ ಕಂತನ್ನು ಲೆಕ್ಕಾಚಾರ ಮಾಡುತ್ತಾರೆ, ನಂತರ ಅದನ್ನು ವಿಮಾದಾರರಿಗೆ ತಿಳಿಸಲಾಗುತ್ತದೆ. ಪ್ರಸ್ತಾಪಗಳನ್ನು ವಿಮಾಗಾರರು ವೇಗವಾಗಿ ಮತ್ತು ದಕ್ಷತೆಯೊಂದಿಗೆ ಪ್ರಕ್ರಿಯೆಗೊಳಿಸುತ್ತಾರೆ ಮತ್ತು ತಮ್ಮ ಎಲ್ಲ ನಿರ್ಧಾರಗಳನ್ನು ಸಮಂಜಸವಾದ ಅವಧಿಯಲ್ಲಿ ಲಿಖಿತವಾಗಿ ವಿಮಾದಾರರಿಗೆ ತಿಳಿಸುತ್ತಾರೆ.

## ವ್ಯಾಖ್ಯೆ/ವ್ಯಾಖ್ಯಾನ

**ಅಂಡರ್ ರೈಟಿಂಗ್:** ಪಾಲಿಸಿದಾರರ ಹಿತಾಸಕ್ತಿಗಳ ರಕ್ಷಣೆ) ನಿಯಮಗಳು, 2017 ರ ಪ್ರಕಾರ, ಕಂಪನಿಯು 15 ದಿನಗಳ ಅವಧಿಯೊಳಗೆ ಪ್ರಸ್ತಾವನೆಯನ್ನು ಪ್ರಕ್ರಿಯೆಗೊಳಿಸಬೇಕು. ಏಜೆಂಟರು ಈ ಅವಧಿ ಮಿತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಆಂತರಿಕವಾಗಿ ಅನುಸರಿಸಿ ಮತ್ತು ಗ್ರಾಹಕ ಸೇವೆಯ ಮೂಲಕ ಮತ್ತು ಅಗತ್ಯವಿದ್ದಾಗ ನಿರೀಕ್ಷಿತ ಗ್ರಾಹಕರು/ವಿಮಾದಾರರೊಂದಿಗೆ ಸಂವಹನ ನಡೆಸುವರೆಂದು ನಿರೀಕ್ಷಿಸಲಾಗುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸುವ ಮತ್ತು ಸ್ವೀಕಾರದ ಬಗ್ಗೆ ನಿರ್ಧರಿಸುವ ಈ ಸಂಪೂರ್ಣ ಪ್ರಕ್ರಿಯೆಯನ್ನು ಅಂಡರ್ ರೈಟಿಂಗ್ ಎಂದು ಕರೆಯಲಾಗುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ1**

ಪಾಲಿಸಿದಾರರ ಹಿತಾಸಕ್ತಿಗಳ ರಕ್ಷಣೆ) ನಿಯಮಗಳು, 2017 ರ ಪ್ರಕಾರ, ವಿಮಾ ಕಂಪನಿಯು __________ ಒಳಗೆ ವಿಮಾ ಪ್ರಸ್ತಾವನೆಯನ್ನು ಪ್ರಕ್ರಿಯೆಗೊಳಿಸಬೇಕು.

**I.** **7** ದಿನಗಳು

**II.** **15** ದಿನಗಳು

**III.** **30** ದಿನಗಳು

**IV.** **45** ದಿನಗಳು

---

## C. ಕಂತು ರಶೀದಿ

**ಕಂತು** ಎನ್ನುವುದು ವಿಮಾ ಒಪ್ಪಂದದಡಿಯಲ್ಲಿ ವಿಮೆಯ ವಿಷಯವಸ್ತುವನ್ನು ವಿಮೆ ಮಾಡುವುದಕ್ಕಾಗಿ ವಿಮಾಗಾರರಿಗೆ ವಿಮೆದಾರರಿಂದ ಪಾವತಿಸಲಾಗುವ ಪರಿಗಣನೆ ಅಥವಾ ಮೊತ್ತವಾಗಿದೆ. ಅಧ್ಯಾಯ 4 ರಲ್ಲಿ ಚರ್ಚಿಸಿದಂತೆ, ವಿಮಾ ಕಾಯಿದೆಯ ಸೆಕ್ಷನ್ 64 ವಿಬಿ ಯ ಪ್ರಕಾರ **ವಿಮಾ ಒಪ್ಪಂದದ ಪ್ರಾರಂಭದ ದಿನಾಂಕದ ಮೊದಲು ಕಂತನ್ನು ಮುಂಗಡವಾಗಿ ಪಾವತಿಸಬೇಕೆಂಬುದನ್ನು** ಏಜೆಂಟರು ಯಾವಾಗಲೂ ಗಮನದಲ್ಲಿಟ್ಟುಕೊಳ್ಳಬೇಕು.

**ಮುಖ್ಯಾಂಶಗಳು**

**a)** ವಿಮಾ ಕಾಯಿದೆ-1938 ರ ಸೆಕ್ಷನ್ 64 ವಿಬಿ ಕಂತನ್ನು ಮುಂಚಿತವಾಗಿ ಸ್ವೀಕರಿಸುವವರೆಗೆ ಅಥವಾ ಪಾವತಿಸಲಾದ ಬಗ್ಗೆ ಖಾತರಿಪಡಿಸುವವರೆಗೆ ಅಥವಾ ನಿಗದಿತ ರೀತಿಯಲ್ಲಿ ಮುಂಗಡವಾಗಿ ಠೇವಣಿ ಮಾಡುವವರೆಗೆ ಯಾವುದೇ ವಿಮಾಗಾರರು ಯಾವುದೇ ಅಪಾಯವನ್ನು ತೆಗೆದುಕೊಳ್ಳಬಾರದು ಎಂಬುದನ್ನು ಒದಗಿಸುತ್ತದೆ. 58 ಮತ್ತು 59 ವಿಮಾ ನಿಯಮಗಳು ಕೆಲವು ಪರಿಸ್ಥಿತಿಗಳಲ್ಲಿ ಈ ಮುಂಗಡ ಕಂತು ಪಾವತಿಯ ಷರತ್ತಿಗೆ ಕೆಲವು ಹೊರತುಗಳನ್ನು ಒದಗಿಸುತ್ತವೆ.

**b)** ಒಬ್ಬ ವಿಮಾ ಏಜೆಂಟರು ವಿಮಾಗಾರರ ಪರವಾಗಿ ವಿಮಾ ಪಾಲಿಸಿಯ ಮೇಲೆ ಕಂತನ್ನು ಸಂಗ್ರಹಿಸಿದರೆ, ಅವರು ಬ್ಯಾಂಕ್ ಮತ್ತು ಅಂಚೆ ರಜಾದಿನಗಳನ್ನು ಹೊರತುಪಡಿಸಿ ಕಂತನ್ನು ಸಂಗ್ರಹಿಸಿದ ಇಪ್ಪತ್ನಾಲ್ಕು ಗಂಟೆಗಳೊಳಗೆ ತನ್ನ ಕಮಿಷನ್ ಅನ್ನು ಕಡಿತಗೊಳಿಸದೆ ಸಂಪೂರ್ಣವಾಗಿ ಸಂಗ್ರಹಿಸಿದ ಕಂತನ್ನು ವಿಮಾಗಾರರಿಗೆ ಅಂಚೆಯ ಮೂಲಕ ಠೇವಣಿ ಮಾಡಬೇಕು ಅಥವಾ ಕಳುಹಿಸಬೇಕು..

**c)** ನಗದು ರೂಪದಲ್ಲಿ ಅಥವಾ ಚೆಕ್ ಮೂಲಕ ಕಂತನ್ನು ಪಾವತಿಸಿದ ದಿನಾಂಕದಿಂದ ಮಾತ್ರ ಅಪಾಯವನ್ನು ಸ್ವೀಕರಿಸಬಹುದು ಎಂಬುದನ್ನು ಸಹ ಒದಗಿಸಲಾಗಿದೆ.

**d)** ಕಂತನ್ನು ಪೋಸ್ಟ ಮೂಲಕ ಅಥವಾ ಮನಿ ಆರ್ಡರ್ ಅಥವಾ ಅಂಚೆ ಮೂಲಕ ಕಳುಹಿಸಲಾದ ಚೆಕ್ ಮೂಲಕ ಪಾವತಿಸಿದರೆ, ಮನಿ ಆರ್ಡರ್ ಅನ್ನು ಬುಕ್ ಮಾಡಿದ ಅಥವಾ ಚೆಕ್ ಅನ್ನು ಪೋಸ್ಟ್ ಮಾಡಿದ ದಿನಾಂಕದಂದು ಅಪಾಯವನ್ನು ಸ್ವೀಕರಿಸಬಹುದು.

**e)** ಪಾಲಿಸಿಯ ರದ್ದತಿ ಅಥವಾ ಅಥವಾ ಬೇರೆ ಯಾವುದೇ ರೀತಿಯಲ್ಲಿ ಅದರ ನಿಯಮಗಳು ಮತ್ತು ನಿಬಂಧನೆಗಳಲ್ಲಿಯ ಬದಲಾವಣೆಯ ಸಂದರ್ಭದಲ್ಲಿ ವಿಮಾಗಾರರಿಂದ ಮಾಡಬೇಕಾದ ಕಂತಿನ ಯಾವುದೇ ಮರುಪಾವತಿಯನ್ನು ವಿಮಾಗಾರರು ಸರಿಯಾದ ರಸೀದಿಯನ್ನು ವಿಮಾದಾರರಿಂದ ಪಡೆದು ನೇರವಾಗಿ ವಿಮಾದಾರರಿಗೆ ಕ್ರಾಸ್ಡ್ ಅಥವಾ ಆರ್ಡರ್ ಚೆಕ್ ಮೂಲಕ ಅಥವಾ ಅಂಚೆ ಮೂಲಕ ಹಣದ ಆದೇಶ ಅಥವಾ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಪಾವತಿಸುತ್ತಾರೆ ಮತ್ತು ಅಂತಹ ಮರುಪಾವತಿಯನ್ನು ಯಾವುದೇ ಸಂದರ್ಭದಲ್ಲಿ ಏಜೆಂಟರ ಖಾತೆಗೆ ಜಮಾ ಮಾಡಲಾಗುವುದಿಲ್ಲ.

## D. ಕವರ್ ನೋಟ್ಸ್/ ವಿಮಾ ಪ್ರಮಾಣಪತ್ರ/ ಪಾಲಿಸಿ ದಾಖಲೆ

ಅಂಡರ್ ರೈಟಿಂಗ್ ಪೂರ್ಣಗೊಂಡ ನಂತರ ಪಾಲಿಸಿಯನ್ನು ನೀಡಲು ಸ್ವಲ್ಪ ಸಮಯ ಬೇಕಾಗಬಹುದು. **ಪಾಲಿಸಿಯ ತಯಾರಿಕೆಯು ಬಾಕಿ ಉಳಿದಿರುವಾಗ ಅಥವಾ ವಿಮೆಯ ಮಾತುಕತೆಗಳು ಪ್ರಗತಿಯಲ್ಲಿರುವಾಗ ಮತ್ತು ತಾತ್ಕಾಲಿಕ ಆಧಾರದ ಮೇಲೆ ರಕ್ಷಣೆಯನ್ನು ಒದಗಿಸುವುದು ಅವಶ್ಯಕ ಅಥವಾ ಅನ್ವಯವಾಗುವಾಗ, ನಿಜವಾದ ದರವನ್ನು ನಿರ್ಧರಿಸಲು ಆವರಣವನ್ನು ಪರಿಶೀಲನೆ ಜಾರಿಯಲ್ಲಿರುವಾಗ,** ಪಾಲಿಸಿಯಡಿ ರಕ್ಷಣೆಯನ್ನು ಖಚಿತಪಡಿಸಲು ಕವರ್ ನೋಟ್ ಅನ್ನು ನೀಡಲಾಗುತ್ತದೆ. ಇದು ಕವರ್ ನ ವಿವರಣೆಯನ್ನು ನೀಡುತ್ತದೆ. ಕೆಲವೊಮ್ಮೆ, ವಿಮಾಗಾರರು ಕವರ್ ನೋಟ್ ಬದಲಿಗೆ ತಾತ್ಕಾಲಿಕ ವಿಮಾ ರಕ್ಷಣೆಯನ್ನು ದೃಢೀಕರಿಸುವ ಪತ್ರವನ್ನು ನೀಡುತ್ತಾರೆ.

ಕವರ್ ನೋಟ್ ಅನ್ನು ಸ್ಟ್ಯಾಂಪ್ ಮಾಡದಿದ್ದರೂ, ಕವರ್ ನೋಟ್‌ನಲ್ಲಿಯ ವಿಷಯವು ಸಂಬಂಧಪಟ್ಟ ವಿಮಾ ವರ್ಗಕ್ಕೆ ವಿಮಾದಾರರ ನೀತಿಯ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ ಎಂದು ಸ್ಪಷ್ಟಪಡಿಸುತ್ತದೆ. ಅಪಾಯವನ್ನು ಯಾವುದೇ ಖಾತರಿಗಳಿಂದ ನಿಯಂತ್ರಿಸಲ್ಪಟ್ಟಿದ್ದರೆ, ವಿಮೆಯು ಅಂತಹ ಖಾತರಿಗಳಿಗೆ ಒಳಪಟ್ಟಿರುತ್ತದೆ ಎಂದು ಕವರ್ ನೋಟ್ ಹೇಳುತ್ತದೆ. ಕವರ್ ನೋಟ್ ಅನ್ವಯಿಸುವ ಉದಾ. ಅಗ್ರೀಡ್ ಬ್ಯಾಂಕ್ ಕ್ಲಾಸ್, ಡಿಕ್ಲೇರೇಶನ್ ಕ್ಲಾಸ್ ಇತ್ಯಾದಿಗಳಂತಹ ವಿಶೇಷ ಷರತ್ತುಗಳಿಗೆ ಸಹ ಒಳಪಟ್ಟಿರುತ್ತದೆ.

ಕವರ್ ನೋಟ್ ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

**a)** ವಿಮಾದಾರರ ಹೆಸರು ಮತ್ತು ವಿಳಾಸ

**b)** ವಿಮಾಮೊತ್ತ

**c)** ವಿಮೆಯ ಅವಧಿ

**d)** ಕವರ್ ಮಾಡಲಾದ ಅಪಾಯ

e) **ದರ ಮತ್ತು ಕಂತು:** ದರ ತಿಳಿದಿಲ್ಲದಿದ್ದರೆ, ತಾತ್ಕಾಲಿಕ ಕಂತು

f) **ಕವರ್ ಮಾಡಲಾದ ಅಪಾಯದ ವಿವರಣೆ:** ಉದಾಹರಣೆಗೆ ಬೆಂಕಿ ವಿಮೆಯ ಕವರ್ ನೋಟ್ ಕಟ್ಟಡದ ಗುರುತಿನ ವಿವರಗಳು, ಅದರ ನಿರ್ಮಾಣ ಮತ್ತು ವಸತಿಯನ್ನು ಸೂಚಿಸುತ್ತದೆ.

g) ಕವರ್ ನೋಟ್ ನ ಅನುಕ್ರಮ ಸಂಖ್ಯೆ

h) ಜಾರಿಗೊಳಿಸಿದ ದಿನಾಂಕ

i) **ಕವರ್ ನೋಟ್ ನ ಸಿಂಧುತ್ವ**ವು ಸಾಮಾನ್ಯವಾಗಿ ಹದಿನೈದು ದಿನಗಳ ಅವಧಿಗೆ ಮತ್ತು ವಿರಳವಾಗಿ **60** ದಿನಗಳವರೆಗೆ ಇರುತ್ತದೆ

**ಕವರ್ ನೋಟ್‌ಗಳನ್ನು ಪ್ರಧಾನವಾಗಿ ಸಾಗರ ಮತ್ತು ಮೋಟಾರು ವ್ಯಾಪಾರ ವರ್ಗಗಳಲ್ಲಿ ಬಳಸಲಾಗುತ್ತದೆ.**

**1. ಸಾಗಾಣಿಕೆ ವಿಮೆ ಕವರ್ ನೋಟ್ ಗಳು**

ಸ್ಟೀಮರ್ ನ ಹೆಸರು, ಪ್ಯಾಕೇಜುಗಳ ಸಂಖ್ಯೆ ಅಥವಾ ನಿಖರವಾದ ಮೌಲ್ಯ ಇತ್ಯಾದಿಗಳಂತಹ ಪಾಲಿಸಿ ನೀಡಲು ಅಗತ್ಯವಿರುವ ವಿವರಗಳು ತಿಳಿದಿಲ್ಲದಿದ್ದಾಗ ಇವುಗಳನ್ನು ಸಾಮಾನ್ಯವಾಗಿ ನೀಡಲಾಗುತ್ತದೆ. ರಫ್ತಿಗೆ ಸಂಬಂಧಿಸಿದಂತೆ ಸಹ, ಕವರ್ ನೋಟ್ ಅನ್ನು ನೀಡಬಹುದು ಉದಾ. ರಫ್ತುದಾರರಿಂದ ಸಾಗಣೆಗೆ ಉದ್ದೇಶಿಸಲಾದ ನಿರ್ದಿಷ್ಟ ಪ್ರಮಾಣದ ಸರಕುಗಳನ್ನು ಹಡಗುಕಟ್ಟೆ(ಡಾಕ್)ಗಳಿಗೆ ಕಳುಹಿಸಲಾಗುತ್ತದೆ. ಸಾಕಷ್ಟು ಹಡಗು ಸ್ಥಳ(ಶಿಪ್ಪಿಂಗ್ ಸ್ಪೇಸ್)ವನ್ನು ಪೂರೈಸುವಲ್ಲಿಯ ತೊಂದರೆಯಿಂದಾಗಿ, ಉದ್ದೇಶಿತ ಹಡಗಿನ ಮೂಲಕ ಸರಕು ಸಾಗಣೆಯು ನಡೆಯುವುದಿಲ್ಲವಾದ್ದರಿಂದ ನಿರ್ದಿಷ್ಟ ಹಡಗಿನ ಮೂಲಕ ಕಳುಹಿಸಬಹುದಾದ ಪ್ರಮಾಣವನ್ನು ತಿಳಿಯಲಾಗುವುದಿಲ್ಲ. ಸಂಪೂರ್ಣ ವಿವರಗಳು ಲಭ್ಯವಿದ್ದಾಗ ಮತ್ತು ವಿಮಾ ಕಂಪನಿಗೆ ತಿಳಿಸಿದಾಗ ನಿಯಮಿತ ಪಾಲಿಸಿಯ ಮೂಲಕ ಅನುಸರಿಸಬೇಕಾದ ಕೆಲವು ಸಂದರ್ಭಗಳಲ್ಲಿ, ಕವರ್ ನೋಟ್ ಅಗತ್ಯವಾಗಬಹುದು.

ಸಾಗಾಣಿಕೆ ವಿಮೆ ಕವರ್ ಟಿಪ್ಪಣಿಯನ್ನು ಈ ಕೆಳಗಿನ ಸಾಲುಗಳಲ್ಲಿ ವಿವರಿಸಬಹುದು:

i. **ಸಾಗಾಣಿಕೆ ವಿಮೆ** ಕವರ್ ನೋಟ್ ಸಂಖ್ಯೆ

ii. ಜಾರಿಪಡಿಸಿದ ದಿನಾಂಕ

iii. ವಿಮಾದಾರರ ಹೆಸರು

iv. ಸಿಧುತ್ವದ ಅವಧಿ

"ವಿನಂತಿಸಿದಂತೆ, ನೀವು ಕಂಪನಿಯ ಪಾಲಿಸಿಯ ಸಾಮಾನ್ಯ ಷರತ್ತುಗಳಿಗೆ ಒಳಪಟ್ಟು ರೂ. _______________ ಕವರ್ ಹೊಂದಿರುತ್ತೀರಿ."

a) **ಉಪವಾಕ್ಯಗಳು(ಕ್ಲಾಸ್ ಗಳು):** ಯುದ್ಧದ ಎಸ್ ಆರ್ ಸಿಸಿ ಅಪಾಯಗಳನ್ನು ಒಳಗೊಂಡಂತೆ ಸಾಂಸ್ಥಿಕ ಸರಕು ಷರತ್ತು (ಇನ್ಸ್ಟಿಟ್ಯೂಟ್ ಕಾರ್ಗೋ ಕ್ಲಾಜೆಸ್) ಎ, ಬಿ ಅಥವಾ ಸಿ, ಗಳ ಪ್ರಕಾರ ರದ್ದತಿಯ 7 ದಿನಗಳ ಮೊದಲ ಸೂಚನೆಗೆ ಒಳಪಟ್ಟಿರುತ್ತದೆ.

b) **ಷರತ್ತು(ಕಂಡೀಷನ್)ಗಳು:** ಪಾಲಿಸಿಯ ವಿತರಣೆಗಾಗಿ ಶಿಪ್ಪಿಂಗ್ ಮಾಡಬೇಕಾದ ಸಾಗಣೆಯ ದಾಖಲೆಗಳ ಸ್ವೀಕೃತಿಯ ಮೇಲೆ ಶಿಪ್ ಮೆಂಟ್ ವಿವರಗಳನ್ನು ಒದಗಿಸಬೇಕು. ಘೋಷಣೆ ಮತ್ತು/ಅಥವಾ ರವಾನೆಗೆ ಮುಂಚಿತವಾಗಿ ಸ್ಟೀಮರ್‌ನಲ್ಲಿ ನಷ್ಟ ಅಥವಾ ಹಾನಿಯುಂಟಾದ ಸಂದರ್ಭದಲ್ಲಿ, ಮೌಲ್ಯಮಾಪನದ ಆಧಾರವು ಸರಕುಗಳ ಪ್ರಧಾನ ವೆಚ್ಚ ಮತ್ತು ವಾಸ್ತವವಾಗಿ ಉಂಟಾದ ಶುಲ್ಕಗಳು ಮತ್ತು ಅದಕ್ಕೆ ವಿಮಾದಾರರು ಜವಾಬ್ದಾರರಾಗಿರುತ್ತಾರೆ ಎಂದು ಈ ಮೂಲಕ ಒಪ್ಪಿಕೊಳ್ಳಲಾಗಿದೆ.

ಒಳನಾಡಿನ ಸಾರಿಗೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಪಾಲಿಸಿಯ ವಿತರಣೆಗೆ ಅಗತ್ಯವಿರುವ ಎಲ್ಲ ಸಂಬಂಧಿತ ಮಾಹಿತಿ ಲಭ್ಯವಿರುತ್ತದೆ ಮತ್ತು ಆದ್ದರಿಂದ ಕವರ್ ನೋಟ್ ಅಪರೂಪವಾಗಿ ಅಗತ್ಯವಿರುತ್ತದೆ. ಆದಾಗ್ಯೂ, ಕೆಲವು ಸಂದರ್ಭಗಳಲ್ಲಿ ಕವರ್ ನೋಟ್ ಗಳನ್ನು ನೀಡಲಾಗುವುದು ಮತ್ತು ಸರಕು, ಸಾಗಣೆ ಇತ್ಯಾದಿಗಳ ಸಂಪೂರ್ಣ ವಿವರಣೆಯನ್ನು ಒಳಗೊಂಡಿರುವ ಪಾಲಿಸಿಗಳನ್ನು ನಂತರ ನೀಡಲಾಗುತ್ತದೆ.

**2. ಮೋಟಾರು ಕವರ್ ನೋಟ್ ಗಳು**

ಇವುಗಳನ್ನು ಆಯಾ ಕಂಪನಿಗಳು ಸೂಚಿಸಿದ ರೂಪದಲ್ಲಿ ನೀಡಲಾಗುವುದು ಮೋಟಾರು ಕವರ್ ನೋಟಿನ ಕಾರ್ಯಾಚರಣೆಯ ಉಪವಾಕ್ಯ ಈ ಕೆಳಗಿನಂತೆ ಇರಬಹುದು::

" ನಮೂನೆಯಲ್ಲಿ ವಿವರಿಸಲಾದ, ಕೆಳಗೆ ಉಲ್ಲೇಖಿಸಲಾದ ವಿಮಾದಾರರು ಅದರಲ್ಲಿ ವಿವರಿಸಲಾದ ಮೋಟಾರು ವಾಹನ(ಗಳಿಗೆ)ಕ್ಕೆ ಸಂಬಂಧಿಸಿದಂತೆ ವಿಮೆಗಾಗಿ ಪ್ರಸ್ತಾಪಿಸಿದ್ದಾರೆ ಮತ್ತು ರೂ......ಗಳ ಮೊತ್ತವನ್ನು ಕಂತಿನ ರೂಪದಲ್ಲಿ ಪಾವತಿಸಿದ ನಂತರ ...... ಅಪಾಯವನ್ನು ಕಂಪನಿಯ ಅದಕ್ಕೆ ಅನ್ವಯಿಸುವ ಸಾಮಾನ್ಯ ಪಾಲಿಸಿ ನಿಯಮಗಳ(ಈ ಕೆಳಗೆ ನೀಡಿದ ಯಾವುದೇ ವಿಶೇಷ ಷರತ್ತುಗಳಿಗೊಳಪಟ್ಟು)ಡಿಯಲ್ಲಿ ಅದರ ಮೇಲಿನ ವಿಮೆಯು ಕಂಪನಿಯಿಂದ ಅಂತ್ಯಗೊಳಿಸಿದಲ್ಲಿ ಮತ್ತು ಕಂಪನಿಯು ಅಪಾಯದಲ್ಲಿರುವ ಅವಧಿಯವರೆಗೆ ಶುಲ್ಕವಾಗಿ ಅಂಥ ವಿಮೆಗೆ ನೀಡಬೇಕಾದ ವಿಧಿಸಲಾದ ಕಂತು ಮೊತ್ತದ ಅನುಪಾತದಲ್ಲಿಯ ಮೊತ್ತದ ಭಾಗವನ್ನು ವಿಧಿಸಲಾಗುತ್ತದೆ ಮತ್ತು ಕಂಪನಿಯಿಂದ ಲಿಖಿತವಾಗಿ ಸೂಚನೆ ನೀಡಿ ಕವರ್ ಅನ್ನು ರದ್ದು ಮಾಡಿದ ಹೊರತು ಕವರ್ ಮಾಡಲಾಗಿದೆ."

**ಮೋಟಾರ್ ಕವರ್ ನೋಟ್ ಸಾಮಾನ್ಯವಾಗಿ ಈ ಕೆಳಗಿನ ವಿವರಗಳನ್ನು ಒಳಗೊಂಡಿರುತ್ತದೆ:**

a) ನೋಂದಣಿ ಗುರುತು ಮತ್ತು ಸಂಖ್ಯೆ, ಅಥವಾ ವಿಮೆ ಮಾಡಿದ ವಾಹನಗಳ ವಿವರಣೆ/ ಕ್ಯೂಬಿಕ್ ಸಾಮರ್ಥ್ಯ/ ಸಾಗಿಸುವ ಸಾಮರ್ಥ್ಯ/ ತಯಾರಿಕೆ/ ಉತ್ಪಾದನೆಯ ವರ್ಷ, ಎಂಜಿನ್ ಸಂಖ್ಯೆ, ಚಾಸಿಸ್ ಸಂಖ್ಯೆ

b) ವಿಮಾದಾರರ ಹೆಸರು ಮತ್ತು ವಿಳಾಸ

**c)** ಕಾಯಿದೆಯ ಉದ್ದೇಶಕ್ಕಾಗಿ ವಿಮೆಯ ಪ್ರಾರಂಭದ ಪರಿಣಾಮಕಾರಿ ದಿನಾಂಕ ಮತ್ತು ಸಮಯ. ಸಮಯ……, ದಿನಾಂಕ……

**d)** ವಿಮೆಯ ಮುಕ್ತಾಯ ದಿನಾಂಕ

**e)** ವಾಹನ ಚಲಾಯಿಸಲು ಅರ್ಹರಾಗಿರುವ ವ್ಯಕ್ತಿಗಳು ಅಥವಾ ವರ್ಗಗಳು

**f)** ಬಳಕೆಗೆ ಸಂಬಂಧಿಸಿದಂತೆ ಮಿತಿಗಳು

**g)** ಹೆಚ್ಚುವರಿ ಅಪಾಯಗಳು, ಯಾವುದಾದರೂ ಇದ್ದರೆ

1988 ರ ಮೋಟಾರು ವಾಹನಗಳ ಕಾಯಿದೆಯ **X** ಮತ್ತು **XI** ಅಧ್ಯಾಯಗಳ ನಿಬಂಧನೆಗಳಿಗನುಗುಣವಾಗಿ ನೀಡಲಾದ ಪ್ರಮಾಣಪತ್ರವನ್ನು ಮೋಟಾರು ಕವರ್ ನೋಟ್ ಒಳಗೊಂಡಿರುತ್ತದೆ..

| ಪ್ರಮುಖ |
|---|
| ಕವರ್ ನೋಟ್‌ನ ಸಿಂಧುತ್ವವನ್ನು ಒಂದು ಬಾರಿಗೆ **15** ದಿನಗಳವರೆಗೆ ವಿಸ್ತರಿಸಬಹುದು, ಆದರೆ ಯಾವುದೇ ಸಂದರ್ಭದಲ್ಲಿ ಕವರ್ ನೋಟ್ ನ ಒಟ್ಟು ಅವಧಿಯು ಅರವತ್ತು ದಿನಗಳನ್ನು ಮೀರಬಾರದು. |

ಗಮನಿಸಿ: ಕವರ್ ನೋಟ್ ನಲ್ಲಿಯ ಪದಗಳು ವಿಮಾಗಾರರಿಂದ ವಿಮಾಗಾರರಿಗೆ ಬದಲಾಗಬಹುದು

ಕವರ್ ನೋಟ್ ಗಳ ಬಳಕೆಯನ್ನು ಹೆಚ್ಚಿನ ಕಂಪನಿಗಳು ವಿರೋಧಿಸುತ್ತಿವೆ. ಇಂದಿನ ತಂತ್ರಜ್ಞಾನವು ತಕ್ಷಣವೇ ಪಾಲಿಸಿ ದಾಖಲೆಯನ್ನು ನೀಡುವುದನ್ನು ಸುಲಭಗೊಳಿಸುತ್ತದೆ.

**3. ವಿಮೆಯ ಪ್ರಮಾಣಪತ್ರ – ಮೋಟಾರು ವಿಮೆ**

ಪುರಾವೆ ಅಗತ್ಯವಿರುವ ಸಂದರ್ಭಗಳಲ್ಲಿ ವಿಮೆಯ ಪ್ರಮಾಣಪತ್ರವು ವಿಮೆಯ ಅಸ್ತಿತ್ವವನ್ನು ಒದಗಿಸುತ್ತದೆ. ಉದಾಹರಣೆಗೆ ಮೋಟಾರು ವಿಮೆಯಲ್ಲಿ, ಪಾಲಿಸಿಯ ಜೊತೆಗೆ, ಮೋಟಾರು ವಾಹನಗಳ ಕಾಯಿದೆಯಲ್ಲಿ ಅಗತ್ಯವಿರುವಂತೆ ವಿಮೆಯ ಪ್ರಮಾಣಪತ್ರವನ್ನು ನೀಡಲಾಗುತ್ತದೆ. **ಈ ಪ್ರಮಾಣಪತ್ರವು ಪೊಲೀಸ್ ಮತ್ತು ನೋಂದಣಿ ಅಧಿಕಾರಿಗಳಿಗೆ ವಿಮೆಯ ಪುರಾವೆಗಳನ್ನು ಒದಗಿಸುತ್ತದೆ**. ಖಾಸಗಿ ಕಾರುಗಳ ಮಾದರಿ ಪ್ರಮಾಣಪತ್ರವನ್ನು ಈ ಕೆಳಗೆ ನೀಡಲಾಗಿದ್ದು, ಪ್ರಮುಖ ವೈಶಿಷ್ಟ್ಯಗಳನ್ನು ತೋರಿಸುತ್ತದೆ.

ಮೋಟಾರು ವಾಹನಗಳ ಕಾಯಿದೆ, **1988**

ವಿಮೆಯ ಪ್ರಮಾಣಪತ್ರ

ಪ್ರಮಾಣಪತ್ರದ ಸಂ. ಪಾಲಿಸಿ ಸಂ.

1. ನೋಂದಣಿ ಗುರುತು ಮತ್ತು ಸಂಖ್ಯೆ, ನೋಂದಣಿಯ ಸ್ಥಳ, ಇಂಜಿನ್ ಸಂಖ್ಯೆ/ಚಾಸಿಸ್ ಸಂಖ್ಯೆ/ ತಯಾರಿಕೆ/ತಯಾರಿಕೆಯ ವರ್ಷ.
2. ಹೊರಭಾಗದ ಪ್ರಕಾರ/ ಸಿ.ಸಿ/ ಆಸನ ಸಾಮರ್ಥ್ಯ/ ನಿವ್ವಳ ಕಂತು/ ನೋಂದಣಿ ಪ್ರಾಧಿಕಾರದ ಹೆಸರು
3. ಭೌಗೋಳಿಕ ಪ್ರದೇಶ - ಭಾರತ.`

4. ವಿಮೆ ಮಾಡಿದ ಘೋಷಿತ ಮೌಲ್ಯ (ಐಡಿವಿ)

5. ವಿಮಾದಾರರ, ವ್ಯಾಪಾರ ಅಥವಾ ವೃತ್ತಿಯ ಹೆಸರು ಮತ್ತು ವಿಳಾಸ.

6. ಕಾಯಿದೆಯ ಉದ್ದೇಶಕ್ಕಾಗಿ ವಿಮೆಯ ಪ್ರಾರಂಭದ ಪರಿಣಾಮಕಾರಿ ದಿನಾಂಕ. ಇಂದ.......... ಗಂ.ನಿ.ಸೆ ಗಳಿಂದ ದಿನಾಂಕ........ ಗಂ.ನಿ.ಸೆ ವರೆಗೆ

7. ವಿಮೆಯ ಮುಕ್ತಾಯದ ದಿನಾಂಕ: ಮಧ್ಯರಾತ್ರಿ ...................

8. ವಾಹನ ಚಲಾಯಿಸಲು ಅರ್ಹರಾಗಿರುವ ವ್ಯಕ್ತಿಗಳು ಅಥವಾ ವರ್ಗಗಳು.

(a) ವಿಮಾದಾರರು:

(b) ವಿಮಾದಾರರ ಆದೇಶದ ಮೇರೆಗೆ ಅಥವಾ ಅವರ ಅನುಮತಿಯೊಂದಿಗೆ ಚಾಲನೆ ಮಾಡುತ್ತಿರುವ ಯಾವುದೇ ಇತರ ವ್ಯಕ್ತಿ

ವಾಹನ ಚಲಾಯಿಸುವ ವ್ಯಕ್ತಿಯು ಅಪಘಾತದ ಸಮಯದಲ್ಲಿ ಪರಿಣಾಮಕಾರಿ ಚಾಲನಾ ಪರವಾನೆಯನ್ನು ಹೊಂದಿದ್ದಾರೆ ಮತ್ತು ಅಂತಹ ಪರವಾನೆಯನ್ನು ಹೊಂದಲು ಅಥವಾ ಪಡೆಯಲು ಅನರ್ಹರಾಗಿರುವುದಿಲ್ಲ. ಪರಿಣಾಮಕಾರಿ ಕಲಿಕಾ ಪರವಾನಗಿಯನ್ನು ಹೊಂದಿರುವ ವ್ಯಕ್ತಿಯು ಸಹ ವಾಹನವನ್ನು ಓಡಿಸಬಹುದು ಮತ್ತು ಅಂತಹ ವ್ಯಕ್ತಿಯು ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989 ರ ನಿಯಮ 3 ರ ಅಗತ್ಯವನ್ನು ಪೂರೈಸುತ್ತಾರೆ.

ಬಳಕೆಗೆ ಮಿತಿಗಳು

ಪಾಲಿಸಿಯು ಈ ಕೆಳಗೆ ನೀಡಿದ ಬಳಕೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕಾಗಿ ವಾಹನ ಬಳಕೆಯನ್ನು ಒಳಗೊಂಡಿದೆ:

(a) ಬಾಡಿಗೆ ಅಥವಾ ಪ್ರತಿಫಲ;

(b) ಸರಕುಗಳ ಸಾಗಣೆ (ವೈಯಕ್ತಿಕ ಸಾಮಾನುಗಳನ್ನು ಹೊರತುಪಡಿಸಿ)

(c) ಸಂಘಟಿತ ರೇಸಿಂಗ್,

(d) ರೇಸ್ ಮಾಡುವುದು,

(e) ವೇಗದ ಪರೀಕ್ಷಣೆ

(f) ವಿಶ್ವಾಸಾರ್ಹತೆಯ ಪ್ರಯೋಗಗಳು

(g) ಮೋಟಾರು ವ್ಯಾಪಾರಕ್ಕೆ ಸಂಬಂಧಿಸಿದಂತೆ ಯಾವುದೇ ಉದ್ದೇಶ..

ಮೋಟಾರು ವಾಹನಗಳ ಕಾಯಿದೆ, 1988 ರ ಅಧ್ಯಾಯ X ಮತ್ತು ಅಧ್ಯಾಯ XI ರ ನಿಬಂಧನೆಗಳಿಗನುಸಾರವಾಗಿ ಈ ಪ್ರಮಾಣಪತ್ರಕ್ಕೆ ಸಂಬಂಧಿಸಿದ ಪಾಲಿಸಿ ಮತ್ತು ಈ ವಿಮಾ ಪ್ರಮಾಣಪತ್ರವನ್ನು ನೀಡಲಾಗಿದೆ ಎಂದು ನಾನು/ ನಾವು ಈ ಮೂಲಕ ಪ್ರಮಾಣೀಕರಿಸುತ್ತೇವೆ..

ಪರೀಕ್ಷಿಸಲಾಗಿದೆ......

**(ಅಧಿಕೃತ ವಿಮಾಗಾರರು)**

**ಸಂಬಂಧಪಟ್ಟ ಅಧಿಕಾರಿಗಳ ಪರಿಶೀಲನೆಗಾಗಿ ಎಲ್ಲ ಸಮಯದಲ್ಲೂ ವಾಹನದಲ್ಲಿ ವಿಮೆಯ ಮೋಟಾರು ಪ್ರಮಾಣಪತ್ರವನ್ನು ಕೊಂಡೊಯ್ಯುವ ಅಗತ್ಯವಿದೆ.**

## 4. ಪಾಲಿಸಿ ದಾಖಲೆ

**ಪಾಲಿಸಿಯು ಔಪಚಾರಿಕ ದಾಖಲೆಯಾಗಿದ್ದು ಅದು ವಿಮೆಯ ಒಪ್ಪಂದದ ಪುರಾವೆಯನ್ನು ಒದಗಿಸುತ್ತದೆ.** ಈ ದಾಖಲೆಯನ್ನು ಭಾರತೀಯ ಮುದ್ರಾಂಕ ಕಾಯಿದೆ(ಇಂಡಿಯನ್ ಸ್ಟ್ಯಾಂಪ್ ಆಕ್ಟ್), 1899 ರ ನಿಬಂಧನೆಗಳಿಗನುಗುಣವಾಗಿ ಮುದ್ರೆ(ಸ್ಟ್ಯಾಂಪ್) ಮಾಡಬೇಕು..

ಸಾಮಾನ್ಯ ವಿಮಾ ಪಾಲಿಸಿಯು ಸಾಮಾನ್ಯವಾಗಿ ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

- **a)** ವಿಮಾದಾರರ ಹೆಸರು (ಗಳು) ಮತ್ತು ವಿಳಾಸ (ಗಳು) ಮತ್ತು ವಿಷಯವಸ್ತುವಿನ ವಿಷಯದಲ್ಲಿ ವಿಮಾಸಕ್ತಿಯನ್ನು ಹೊಂದಿರುವ ಯಾವುದೇ ವ್ಯಕ್ತಿ;
- **b)** ವಿಮೆ ಮಾಡಿದ ಆಸ್ತಿ ಅಥವಾ ಆಸಕ್ತಿಯ ಸಂಪೂರ್ಣ ವಿವರಣೆ;
- **c)** ಪಾಲಿಸಿಯಡಿಯಲ್ಲಿ ವಿಮೆ ಮಾಡಲಾದ ಆಸ್ತಿ ಅಥವಾ ಆಸಕ್ತಿಯ ಸ್ಥಳ/ಗಳು ಮತ್ತು ಸೂಕ್ತವಾದಲ್ಲಿ, ಆಯಾ ವಿಮಾ ಮೌಲ್ಯಗಳೊಂದಿಗೆ;
- **d)** ವಿಮೆಯ ಅವಧಿ;
- **e)** ವಿಮಾ ಮೊತ್ತಗಳು;
- **f)** ಅಪಾಯಗಳು ಮತ್ತು ಹೊರತುಗಳು;
- **g)** ಅನ್ವಯಿಸುವ ಯಾವುದೇ ಹೆಚ್ಚುವರಿ / ಕಡಿತ;
- **h)** ಪಾವತಿಸಬೇಕಾದ ಕಂತು ಮತ್ತು ಕಂತು ತಾತ್ಕಾಲಿಕವಾಗಿ ಹೊಂದಾಣಿಕೆಗೆ ಒಳಪಟ್ಟಿದ್ದರೆ, ಕಂತಿನ ಹೊಂದಾಣಿಕೆಯ ಕಾರಣ;
- **i)** ಪಾಲಿಸಿ ನಿಯಮಗಳು, ಷರತ್ತುಗಳು ಮತ್ತು ಖಾತರಿಗಳು;
- **j)** ಪಾಲಿಸಿಯಡಿಯಲ್ಲಿ ಕ್ಲೇಮ್ ಗೆ ಕಾರಣವಾಗುವ ಸಂಭವವಿರುವ ಆಕಸ್ಮಿಕವು ಸಂಭವಿಸಿದ ಮೇಲೆ ವಿಮಾದಾರರಿಂದ ತೆಗೆದುಕೊಳ್ಳಬೇಕಾದ ಕ್ರಮ;
- **k)** ಕ್ಲೇಮ್ ಗೆ ಕಾರಣವಾಗುವ ಘಟನೆಯ ಸಂದರ್ಭದಲ್ಲಿ ವಿಮೆಯ ವಿಷಯವಸ್ತುವಿಗೆ ಸಂಬಂಧಿಸಿದಂತೆ ವಿಮಾದಾರರ ಬಾಧ್ಯತೆಗಳು ಮತ್ತು ಅಂತಹ ಸಂದರ್ಭಗಳಲ್ಲಿ ವಿಮಾಗಾರರ ಹಕ್ಕುಗಳು;
- **l)** ಯಾವುದೇ ವಿಶೇಷ ಷರತ್ತುಗಳು ;
- **m)** ತಪ್ಪು ನಿರೂಪಣೆ, ವಂಚನೆ, ವಾಸ್ತವಿಕ ಸಂಗತಿಗಳನ್ನು ಬಹಿರಂಗಪಡಿಸದಿರುವುದು ಅಥವಾ ವಿಮಾದಾರರ ಅಸಹಕಾರದ ಆಧಾರದ ಮೇಲೆ ಪಾಲಿಸಿಯನ್ನು ರದ್ದುಪಡಿಸುವ ಅವಕಾಶ;
- **n)** ಪಾಲಿಸಿಗೆ ಸಂಬಂಧಿಸಿದಂತೆ ಎಲ್ಲಾ ಸಂವಹನಗಳನ್ನು ಕಳುಹಿಸಬೇಕಾದ ವಿಮಾದಾರರ ವಿಳಾಸ;
- **o)** ಆಡ್-ಆನ್ ಕವರ್‌ಗಳ ವಿವರಗಳು ಮತ್ತು/ಅಥವಾ ಅನುಮೋದನೆಗಳು ಯಾವುದಾದರೂ ಇದ್ದರೆ;

**p)** ದೂರು ಪರಿಹಾರ ಕಾರ್ಯವಿಧಾನದ ವಿವರಗಳು ಮತ್ತು ಓಂಬುಡ್ಸ್ ಮನ್ ರ ವಿಳಾಸ

### ನಿಮ್ಮನ್ನು ಪರೀಕ್ಷಿಸಿಕೊಳ್ಳಿ1

ಕವರ್ ಟಿಪ್ಪಣಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ನಿಜವಾಗಿದೆ?

**I.** ಕವರ್ ನೋಟ್ ಗಳನ್ನು ಪ್ರಧಾನವಾಗಿ ಜೀವ ವಿಮೆಯಲ್ಲಿ ಬಳಸಲಾಗುತ್ತದೆ

**II.** ಸಾಮಾನ್ಯ ವಿಮೆಯ ಎಲ್ಲಾ ವರ್ಗಗಳಲ್ಲಿ ಕವರ್ ನೋಟ್ ಗಳನ್ನು ಪ್ರಧಾನವಾಗಿ ಬಳಸಲಾಗುತ್ತದೆ

**III.** ಕವರ್ ಕವರ್ ನೋಟ್ ಗಳನ್ನು ಪ್ರಧಾನವಾಗಿ ಆರೋಗ್ಯ ವಿಮೆಯಲ್ಲಿ ಬಳಸಲಾಗುತ್ತದೆ

**IV.** ಕವರ್ ನೋಟ್ ಗಳನ್ನು ಮುಖ್ಯವಾಗಿ ಸಾಗರ ವಿಮೆ ಮತ್ತು ಮೋಟಾರು ವರ್ಗಗಳ ಸಾಮಾನ್ಯ ವಿಮೆಯಲ್ಲಿ ಬಳಸಲಾಗುತ್ತದೆ

---

## E. ಖಾತರಿಗಳು

**ಖಾತರಿಯೆನ್ನುವುದು ಒಪ್ಪಂದದ ಸಿಂಧುತ್ವಕ್ಕಾಗಿ ಅಕ್ಷರಶಃ ಅನುಸರಿಸಬೇಕಾದ ಪಾಲಿಸಿಯಲ್ಲಿ ಸ್ಪಷ್ಟವಾಗಿ ಹೇಳಲಾದ ಷರತ್ತಾಗಿದೆ. ಖಾತರಿಯು ಪ್ರತ್ಯೇಕವಾದ ದಾಖಲೆಯಲ್ಲ. ಇದು ಕವರ್ ನೋಟ್ಸ್ ಮತ್ತು ಪಾಲಿಸಿ ದಾಖಲೆ ಈ ಎರಡರ ಭಾಗವಾಗಿದೆ.** ಇದು ಒಪ್ಪಂದದ ಪೂರ್ವನಿದರ್ಶನವಾಗಿದೆ. ಇದು ಅಪಾಯದ ಮೇಲೆ ನೇರ ಪರಿಣಾಮ ಬೀರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಲೆಕ್ಕಿಸದೆ ಕಟ್ಟುನಿಟ್ಟಾಗಿ ಮತ್ತು ಅಕ್ಷರಶಃ ಗಮನಿಸಬೇಕು ಮತ್ತು ಅನುಸರಿಸಬೇಕು. ಒಂದು ಖಾತರಿಯನ್ನು ಉಲ್ಲಂಘಿಸಿದರೆ, ಉಲ್ಲಂಘನೆಯು ನಿರ್ದಿಷ್ಟ ನಷ್ಟಕ್ಕೆ ಕಾರಣವಾಗಿಲ್ಲ ಅಥವಾ ನಷ್ಟಕ್ಕೆ ಕೊಡುಗೆಯನ್ನು ನೀಡಿಲ್ಲ ಎಂದು ಸ್ಪಷ್ಟವಾಗಿ ಸ್ಥಾಪಿತವಾದಾಗಲೂ ಸಹ ವಿಮಾಗಾರರ ಆಯ್ಕೆಯಲ್ಲಿ ಪಾಲಿಸಿಯು ಅನೂರ್ಜಿತವಾಗಬಹುದು. ಆದಾಗ್ಯೂ, ಪ್ರಾಯೋಗಿಕವಾಗಿ, ಖಾತರಿಯಯ ಉಲ್ಲಂಘನೆಯು ಸಂಪೂರ್ಣವಾಗಿ ತಾಂತ್ರಿಕ ಸ್ವರೂಪದ್ದಾಗಿದ್ದರೆ ಮತ್ತು ಯಾವುದೇ ರೀತಿಯಲ್ಲಿ ನಷ್ಟಕ್ಕೆ ಕೊಡುಗೆ ನೀಡಿಲ್ಲದಿದ್ದರೆ ಅಥವಾ ನಷ್ಟದ ಹೆಚ್ಚುವಿಕೆಗೆ ಕಾರಣವಾಗದಿದ್ದರೆ, ವಿಮಾಗಾರರು ತಮ್ಮ ವಿವೇಚನೆಯಿಂದ ಕಂಪನಿಯ ಪಾಲಿಸಿಯ ನಿಯಮಗಳು ಮತ್ತು ಮಾರ್ಗಸೂಚಿಗಳ ಪ್ರಕಾರ ಕ್ಲೇಮ್ ಗಳನ್ನು ಪ್ರಕ್ರಿಯೆಗೊಳಿಸಬಹುದು.

### 1. ಬೆಂಕಿ ವಿಮೆಯ ಖಾತರಿಗಳನ್ನು (ಕೆಲವು ಉದಾಹರಣೆಗಳು) ಈ ಕೆಳಗೆ ನೀಡಲಾಗಿದೆ

ಪಾಲಿಸಿಯ ಅವಧಿಯಲ್ಲಿ ವಿಮೆ ಮಾಡಿದ ಆವರಣದಲ್ಲಿ ಯಾವುದೇ ಅಪಾಯದ ಸರಕುಗಳನ್ನು ಸಂಗ್ರಹಿಸಬಾರದು ಎಂದು ಖಾತರಿಪಡಿಸಲಾಗಿದೆ.

**ಅನುತ್ಪಾದನಾ ಅಪಾಯ(ಸೈಲೆಂಟ್ ರಿಸ್ಕ್):** ಸತತ **30** ದಿನಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಿಮೆ ಮಾಡಿದ ಆವರಣದಲ್ಲಿ ಯಾವುದೇ ಉತ್ಪಾದನಾ ಚಟುವಟಿಕೆಯನ್ನು ನಡೆಸಲಾಗುವುದಿಲ್ಲ ಎಂದು ಖಾತರಿಪಡಿಸಲಾಗಿದೆ.

**ಸಿಗರೇಟ್ ಫಿಲ್ಟರ್ ತಯಾರಿಕೆ**: **30**°ಸೆಂ ಗಿಂತ ಕಡಿಮೆ ಫ್ಲ್ಯಾಷ್ ಪಾಯಿಂಟ್ ಹೊಂದಿರುವ ಯಾವುದೇ ದ್ರಾವಕಗಳನ್ನು ಆವರಣದಲ್ಲಿ ಬಳಸಲಾಗುವುದಿಲ್ಲ / ಸಂಗ್ರಹಿಸಲಾಗುವುದಿಲ್ಲ ಎಂದು ಖಾತರಿಪಡಿಸಲಾಗಿದೆ

2. **ಸಾಗಾಣಿಕೆ ವಿಮೆಯಲ್ಲಿ, ಒಂದು ಖಾತರಿಯನ್ನು** ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ: "ಪ್ರಾಮಿಸರಿ ವಾರಂಟಿ, ಅಂದರೆ, ಕೆಲವು ನಿರ್ದಿಷ್ಟ ಕೆಲಸವನ್ನು ಮಾಡಲಾಗುವುದು ಅಥವಾ ಮಾಡಬಾರದು ಅಥವಾ ಕೆಲವು ಷರತ್ತುಗಳನ್ನು ಪೂರೈಸಲಾಗುವುದು ಎಂದು ಭರವಸೆ ನೀಡಿದವರು ಪಾಲಿಸುವ ಖಾತರಿಯಾಗಿದೆ, ಅಥವಾ ಆ ಮೂಲಕ ಅವರು ಒಂದು ನಿರ್ದಿಷ್ಟ ಸ್ಥಿತಿಯ ಅಸ್ತಿತ್ವವನ್ನು ದೃಢೀಕರಿಸುತ್ತಾರೆ ಅಥವಾ ನಿರಾಕರಿಸುತ್ತಾರೆ"

ಸಾಗರ ಸರಕು ವಿಮೆ(ಮೆರೈನ್ ಕಾರ್ಗೋ ಇನ್ಶೂರೆನ್ಸ್)ಯಲ್ಲಿ, ಸರಕುಗಳನ್ನು (ಉದಾ. ಚಹಾ) ಕಲಾಯಿ ಮಾಡಲಾದ ಆವರಣ(ಟಿನ್-ಲೈನ್ಡ್ ಕೇಸ್)ಗಳಲ್ಲಿ ಪ್ಯಾಕ್ ಮಾಡಲಾಗುತ್ತದೆ ಎಂಬುದನ್ನು ನೆರವೇರಿಸುವ ಖಾತರಿಯನ್ನು ಸೇರಿಸಲಾಗುತ್ತದೆ. **ಹಡಗು(ಮರೈನ್ ಹಲ್)ದ ವಿಮೆ**ಯಲ್ಲಿ ವಿಮೆ ಮಾಡಲಾದ **ಹಡಗು ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ ಓಡಾಡುವುದಿಲ್ಲ ಎಂಬ ಖಾತರಿಯನ್ನು ಸೇರಿಸುವ ಮೂಲಕ,** ವಿಮಾಗಾರರಿಗೆ ತಾವು ರಕ್ಷಣೆ ನೀಡಲು ಒಪ್ಪಿಕೊಂಡಿರುವ ಅಪಾಯದ ವ್ಯಾಪ್ತಿಯ ಬಗ್ಗೆ ಕಲ್ಪನೆಯನ್ನು ನೀಡಲಾಗುತ್ತದೆ. ಖಾತರಿಯನ್ನು ಉಲ್ಲಂಘಿಸಿದರೆ, ಆರಂಭದಲ್ಲಿ ಒಪ್ಪಿದ ಅಪಾಯವನ್ನು ಬದಲಾಯಿಸಲಾಗುತ್ತದೆ ಮತ್ತು ವಿಮಾಗಾರರು ಉಲ್ಲಂಘನೆಯ ದಿನಾಂಕದಿಂದ ಹೆಚ್ಚಿನ ಹೊಣೆಗಾರಿಕೆಯಿಂದ ತನ್ನನ್ನು ಬಿಡುಗಡೆ ಮಾಡಲು ಅನುಮತಿಸುತ್ತಾನೆ.

3. **ಕನ್ನಗಳ್ಳರ ವಿಮೆ**ಯಲ್ಲಿ, ಆಸ್ತಿಯನ್ನು ಇಪ್ಪತ್ನಾಲ್ಕು ಗಂಟೆಗಳ ಕಾಲ ಕಾವಲುಗಾರರಿಂದ ಕಾಯಲ್ಪಡುತ್ತದೆ ಎಂಬುದನ್ನು ಖಾತರಿಪಡಿಸಲಾಗಿದೆ. ಪಾಲಿಸಿಗೆ ಲಗತ್ತಿಸಲಾದ ಖಾತರಿಗಳನ್ನು ಅನುಸರಿಸಿದರೆ ಮಾತ್ರ ಪಾಲಿಸಿಯ ದರಗಳು**,** ನಿಯಮಗಳು ಮತ್ತು ಷರತ್ತುಗಳು ಒಂದೇ ಆಗಿರುತ್ತವೆ**.**

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ಖಾತರಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ**?**

**I.** ಖಾತರಿಯೆನ್ನುವುದು ಪಾಲಿಸಿಯಲ್ಲಿ ಎಂದಿಗೂ ಹೇಳದ ಒಂದು ಷರತ್ತಾಗಿದೆ

**II.** ಖಾತರಿಯು ಪಾಲಿಸಿ ದಾಖಲೆಯ ಒಂದು ಭಾಗವಾಗಿದೆ

**III.** ಖಾತರಿಯನ್ನು ಯಾವಾಗಲೂ ವಿಮಾದಾರರಿಗೆ ಪ್ರತ್ಯೇಕವಾಗಿ ತಿಳಿಸಲಾಗುತ್ತದೆ ಮತ್ತು ಅದು ಪಾಲಿಸಿ ದಾಖಲೆಯ ಭಾಗವಾಗಿರಲಾಗದು

**IV.** ಖಾತರಿಯನ್ನು ಉಲ್ಲಂಘಿಸಿದರೂ ಕ್ಲೇಮ್ ಗಳನ್ನು ಪಾವತಿಸಬೇಕಾಗುತ್ತದೆ**.**

## F. ಅನುಮೋದನೆಗಳು

ಪ್ರಮಾಣಿತ ರೂಪದಲ್ಲಿ ಪಾಲಿಸಿಗಳನ್ನು ನೀಡುವುದು ವಿಮಾದಾರರ ಅಭ್ಯಾಸವಾಗಿದೆ; ಕೆಲವು ಅಪಾಯಗಳನ್ನು ಒಳಗೊಳ್ಳುವುದು ಮತ್ತು ಕೆಲವು ಇತರರನ್ನು ಹೊರತುಪಡಿಸಿ.

**ವ್ಯಾಖ್ಯೆ/ವ್ಯಾಖ್ಯಾನ**

ಪಾಲಿಸಿಯ ಕೆಲವು ನಿಯಮಗಳು ಮತ್ತು ಷರತ್ತುಗಳನ್ನು ವಿತರಿಸುವ ಸಮಯದಲ್ಲಿ ಅಥವಾ ಪಾಲಿಸಿಯ ಅವಧಿಯಲ್ಲಿ ಮಾರ್ಪಡಿಸಬೇಕಾದರೆ, ತಿದ್ದುಪಡಿಗಳನ್ನು/ಬದಲಾವಣೆಗಳನ್ನು ಅನುಮೋದನೆ ಎಂಬ ದಾಖಲೆಯನ್ನು ಹೊಂದಿಸುವ ಮೂಲಕ ಮಾಡಲಾಗುತ್ತದೆ.

---

ಇದನ್ನು ಪಾಲಿಸಿಗೆ ಲಗತ್ತಿಸಲಾಗುತ್ತದೆ ಮತ್ತು ಅದರ ಭಾಗವಾಗಿರುತ್ತದೆ. ಪಾಲಿಸಿ ಮತ್ತು ಅನುಮೋದನೆ ಈ ಎರಡೂ ಒಟ್ಟಿಗೆ ಒಪ್ಪಂದದ ಪುರಾವೆಗಳನ್ನು ರೂಪಿಸುತ್ತವೆ. ಬದಲಾವಣೆಗಳು/ತಿದ್ದುಪಡಿಗಳನ್ನು ದಾಖಲಿಸಲು ಪಾಲಿಸಿಯ ಜಾರಿಯ ಸಮಯದಲ್ಲಿ ಸಹ ಅನುಮೋದನೆಗಳನ್ನು ನೀಡಬಹುದು.

ವಾಸ್ತವಿಕ ಮಾಹಿತಿಯು ಬದಲಾದಾಗ, ವಿಮಾದಾರರು ವಿಮಾ ಕಂಪನಿಗೆ ಸೂಚನೆ ನೀಡಬೇಕು, ಅವರು ಇದನ್ನು ಗಮನಿಸುತ್ತಾರೆ ಮತ್ತು ಅನುಮೋದನೆಯ ಮೂಲಕ ವಿಮಾ ಒಪ್ಪಂದದ ಭಾಗವಾಗಿ ಅದನ್ನು ಸಂಯೋಜಿಸುತ್ತಾರೆ..

ಸಾಮಾನ್ಯವಾಗಿ ಈ ಕೆಳಗಿನವುಗಳಿಗೆ ಸಂಬಂಧಿಸಿದ ಪಾಲಿಸಿಯಡಿಯಲ್ಲಿ ಅನುಮೋದನೆಗಳು ಅಗತ್ಯವಿದೆ:

a) ವಿಮಾ ಮೊತ್ತದಲ್ಲಿನ ಬದಲಾವಣೆಗಳು/ ಮಾರ್ಪಾಡು

b) ಮಾರಾಟ, ಅಡಮಾನ ಇತ್ಯಾದಿಗಳ ಮೂಲಕ ವಿಮಾಸಕ್ತಿಯಲ್ಲಿ ಆದ ಬದಲಾವಣೆ.

c) ಹೆಚ್ಚುವರಿ ಅಪಾಯಗಳನ್ನು ಕವರ್ ಮಾಡಲು ವಿಮೆಯ ವಿಸ್ತರಣೆ/ ಪಾಲಿಸಿ ಅವಧಿಯ ವಿಸ್ತರಣೆ

d) ಅಗ್ನಿ ವಿಮೆಯ ಸಂದರ್ಭದಲ್ಲಿ ಅಪಾಯದಲ್ಲಿ ಬದಲಾವಣೆ, ಉದಾ. ನಿರ್ಮಾಣದ ಬದಲಾವಣೆ, ಅಥವಾ ಕಟ್ಟಡದಲ್ಲಿಯ ವಸತಿ

e) ಆಸ್ತಿಯನ್ನು ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು

f) ವಿಮೆಯ ರದ್ದತಿ

g) ಹೆಸರು ಅಥವಾ ವಿಳಾಸದಲ್ಲಿ ಬದಲಾವಣೆ ಇತ್ಯಾದಿ.

**ಮಾದರಿ**

ವಿವರಣೆಯ ಉದ್ದೇಶಕ್ಕಾಗಿ, ಕೆಲವು ಅನುಮೋದನೆಗಳ ಮಾದರಿಗಳನ್ನು ಕೆಳಗೆ ಪುನರುತ್ಪಾದಿಸಲಾಗಿದೆ:

**ರದ್ದತಿ**

ವಿಮಾದಾರರ ಕೋರಿಕೆಯ ಮೇರೆಗೆ ಪಾಲಿಸಿಯನ್ನು ಈ ಮೂಲಕ ವಿಮೆಯನ್ನು ರದ್ದುಗೊಳಿಸಲಾಗಿದೆ ಎಂದು ಘೋಷಿಸಲಾಗಿದೆ. ವಿಮೆಯು **............** ತಿಂಗಳುಗಳು ಅವಧಿಯವರೆಗೆ ಜಾರಿಯಲ್ಲಿದ್ದು, ವಿಮಾದಾರರಿಗೆ ಯಾವುದೇ ಮರುಪಾವತಿ ಬಾಕಿ ಇರುವುದಿಲ್ಲ.

**ಸರಕು(ಸ್ಟಾಕ್) ಮೌಲ್ಯದ ಕವರ್ ನಲ್ಲಿ ಹೆಚ್ಚಳ:**

"ಈ ಪಾಲಿಸಿಯ ವ್ಯಾಪ್ತಿಗೆ ಒಳಪಡುವ ಸ್ಟಾಕ್ ಅನ್ನು ಹೆಚ್ಚಿಸಲಾಗಿದೆ ಎಂದು ವಿಮಾದಾರರು ಸಲಹೆ ನೀಡಿದ ನಂತರ ವಿಮಾ ಮೊತ್ತವನ್ನು ರೂ. ……ಗಳಿಗೆ ಬದಲಾಯಿಸಲಾಗಿದೆ ಎಂದು ಈ ಕೆಳಗಿನಂತೆ ಚರ್ಚಿಸಲಾಗಿದೆ:

ಮೇಲೆ **(ವಿವರಿಸಿ)** ರೂ.

ಮೇಲೆ **(ವಿವರಿಸಿ)** ರೂ.

ಈ ಮೂಲಕ ವಿಧಿಸಲಾದ ಪರಿಗಣನೆಯಲ್ಲಿ ಹೆಚ್ಚುವರಿ ಕಂತು ವಿಧಿಸಲಾಗಿದೆ.

ಮುಂದಿನ ವಾರ್ಷಿಕ ಕಂತು ರೂ**..........**

ಈಗ ಒಟ್ಟು ವಿಮಾ ಮೊತ್ತವು ರೂ. **.......**ಆಗಿರುತ್ತದೆ

ಅಲ್ಲದೇ ಈ ಪಾಲಿಸಿಯ ನಿಯಮಗಳು, ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

**ಸಾಗಾಣಿಕೆ ವಿಮೆಯಲ್ಲಿ ಬಾಹ್ಯ ಅಪಾಯವನ್ನು ಸೇರಿಸಲು ಕವರ್ ವಿಸ್ತರಣೆ**

ವಿಮಾದಾರರ ಕೋರಿಕೆಯ ಮೇರೆಗೆ, ಮೇಲಿನ ಪಾಲಿಸಿಯಡಿಯಲ್ಲಿ ಒಡೆಯುವಿಕೆಯ ಅಪಾಯಗಳನ್ನು ಸೇರಿಸಲು ಈ ಮೂಲಕ ಒಪ್ಪಿಕೊಳ್ಳಲಾಗಿದೆ.

**ಅದರ ಪರಿಗಣನೆಯಲ್ಲಿ, ವಿಮಾದಾರರಿಗೆ ಈ ಕೆಳಗಿನಂತೆ ಹೆಚ್ಚುವರಿ ಕಂತನ್ನು ವಿಮಾದಾರರಿಗೆ ರೂ............. ವಿಧಿಸಲಾಗಿದೆ**

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ಪಾಲಿಸಿಯ ಕೆಲವು ನಿಯಮಗಳು ಮತ್ತು ಷರತ್ತುಗಳನ್ನು ವಿತರಿಸುವ ಸಮಯದಲ್ಲಿ ಅಥವಾ ಪಾಲಿಸಿಯ ಅವಧಿಯಲ್ಲಿ ಮಾರ್ಪಡಿಸಬೇಕಾದರೆ _________ ಮೂಲಕ ತಿದ್ದುಪಡಿಗಳನ್ನು ಹೊಂದಿಸುವದರಿಂದ ಮಾಡಲಾಗುತ್ತದೆ.

**V.** ಖಾತರಿ

**VI.** ಅನುಮೋದನೆ

**VII.** ಬದಲಾವಣೆ

**VIII.** ಮಾರ್ಪಾಡುಗಳು ಸಾಧ್ಯವಿಲ್ಲ

## G. ಪಾಲಿಸಿಗಳ ಅರ್ಥವಿವರಣೆ

ವಿಮೆಯ ಒಪ್ಪಂದಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸಲಾಗುತ್ತದೆ ಮತ್ತು ವಿಮಾ ಪಾಲಿಸಿಯ ಪದಗಳನ್ನು ವಿಮಾಗಾರರು ರಚಿಸುತ್ತಾರೆ. ಈ ಪಾಲಿಸಿಗಳನ್ನು ವಿವಿಧ ನ್ಯಾಯಾಲಯಗಳು ಸ್ಥಾಪಿಸಿದ ನಿರ್ಮಾಣ ಅಥವಾ ಕೆಲವು ಉತ್ತಮವಾಗಿ ವ್ಯಾಖ್ಯಾನಿಸಲಾದ ನಿಯಮಗಳ ಪ್ರಕಾರ ಅರ್ಥೈಸಿಕೊಳ್ಳಬೇಕು. **ನಿರ್ಮಾಣದ ಪ್ರಮುಖ ನಿಯಮವೆಂದರೆ ಪಕ್ಷಗಳ ಉದ್ದೇಶವು ಸಫಲವಾಗಬೇಕು ಮತ್ತು ಇದರ ಉದ್ದೇಶವು ಪಾಲಿಸಿಯಲ್ಲಿಯೇ ಸ್ಪಷ್ಟಪಡಿಸಬೇಕೆಂಬುದಾಗಿದೆ**. ಪಾಲಿಸಿಯನ್ನು ಅಸ್ಪಷ್ಟ ರೀತಿಯಲ್ಲಿ ನೀಡಿದರೆ, ನ್ಯಾಯಾಲಯಗಳು ಸಾಮಾನ್ಯ ಪಾಲಿಸಿಯನ್ನು ಎರಡನೇಯವರು(ವಿಮಾಗಾರರು) ರಚಿಸಿದ್ದಾರೆಂಬ ತತ್ವದ ಪ್ರಕಾರ ವಿಮಾದಾರರ ಪರವಾಗಿ ಮತ್ತು ವಿಮಾಗಾರರ ವಿರುದ್ಧವಾಗಿ ವ್ಯಾಖ್ಯಾನಿಸುತ್ತವೆ.

ಈ ಕೆಳಗಿನ ನಿಯಮಗಳ ಪ್ರಕಾರ ಪಾಲಿಸಿ ಪದಗಳನ್ನು ತಿಳಿದುಕೊಳ್ಳಲಾಗುತ್ತದೆ ಮತ್ತು ಅರ್ಥೈಸಲಾಗುತ್ತದೆ:

**a) ಹಾಗೆ ಮಾಡುವಲ್ಲಿ ಅಸಂಗತತೆ ಇದ್ದಲ್ಲಿ ಅದನ್ನು ಹೊರತುಪಡಿಸಿ ಒಂದು ವ್ಯಕ್ತಪಡಿಸಿದ ಷರತ್ತು ಸೂಚಿತ ಷರತ್ತನ್ನು ಅತಿಕ್ರಮಿಸುತ್ತದೆ.**

**b) ಪ್ರಮಾಣಿತ ಮುದ್ರಿತ ಪಾಲಿಸಿ ನಮೂನೆ ಮತ್ತು ಟೈಪ್ ಮಾಡಿದ ಅಥವಾ ಕೈಬರಹದ ಭಾಗಗಳ ನಡುವಿನ ವಿರೋಧಾಭಾಸದ ಸಂದರ್ಭದಲ್ಲಿ, ಟೈಪ್ ಮಾಡಿದ ಅಥವಾ ಕೈಬರಹದ ಭಾಗವನ್ನು ನಿರ್ದಿಷ್ಟ ಒಪ್ಪಂದದಲ್ಲಿ ಪಕ್ಷಗಳ ಉದ್ದೇಶವನ್ನು ವ್ಯಕ್ತಪಡಿಸುತ್ತದೆಂದು ಪರಿಗಣಿಸಲಾಗುತ್ತದೆ ಮತ್ತು ಅವುಗಳು ಮೂಲ ಮುದ್ರಿತ ಪದಗಳ ಅರ್ಥವನ್ನು ರದ್ದುಗೊಳಿಸುತ್ತವೆ.**

**c) ಅನುಮೋದನೆಯು ಒಪ್ಪಂದದ ಇತರ ಭಾಗಗಳಿಗೆ ವಿರುದ್ಧವಾಗಿದ್ದರೆ, ಅನುಮೋದನೆಯು ನಂತರದ ದಾಖಲೆಯಾಗಿರುವುದರಿಂದ ಅದರ ಅರ್ಥವು ಮೇಲುಗೈ ಸಾಧಿಸುತ್ತದೆ.**

**d) ಇಟಾಲಿಕ್ಸ್ ನಲ್ಲಿಯ ವಾಕ್ಯಾಂಶಗಳು ಅಸಮಂಜಸವಾಗಿರುವ ಸಾಮಾನ್ಯ ಮುದ್ರಿತ ಪದಗಳನ್ನು ಅಮಾನ್ಯಗೊಳಿಸುತ್ತವೆ.**

**e) ಪಾಲಿಸಿಯ ಒಳಭಾಗದಲ್ಲಿರುವ ಪದಗಳಿಗಿಂತ ಪಾಲಿಸಿಯ ಮಾರ್ಜಿನ್ ನಲ್ಲಿ ಮುದ್ರಿಸಲಾದ ಅಥವಾ ಟೈಪ್ ಮಾಡಲಾದ ಷರತ್ತುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕು.**

**f) ಪಾಲಿಸಿಗೆ ಲಗತ್ತಿಸಲಾದ ಅಥವಾ ಅಂಟಿಸಿದ ಷರತ್ತುಗಳು ಕನಿಷ್ಠ ಷರತ್ತುಗಳು ಮತ್ತು ಪಾಲಿಸಿಯ ದೇಹದಲ್ಲಿನ ಷರತ್ತುಗಳನ್ನು ಅಮಾನ್ಯಗೊಳಿಸುತ್ತವೆ.**

g) **ಟೈಪ್‌ರೈಟರ್ ನಿಂದ ಬರೆದ ಪದಗಳು ಅಥವಾ ಶಾಯಿಯ ರಬ್ಬರ್ ಸ್ಟ್ಯಾಂಪ್ ನಿಂದ ಮುದ್ರಿತವಾದ ಪದಗಳು ಮುದ್ರಿತ ಪದಗಳನ್ನು ಅಮಾನ್ಯಗೊಳಿಸುತ್ತವೆ.**

h) **ಟೈಪ್ ಮಾಡಿದ ಅಥವಾ ಪ್ರಭಾವಿತವಾದ ಪದಗಳಿಗಿಂತ ಕೈಬರಹವು ಆದ್ಯತೆಯನ್ನು ಪಡೆದುಕೊಳ್ಳುತ್ತದೆ.**

i) **ಅಂತಿಮವಾಗಿ, ಯಾವುದೇ ಅಸ್ಪಷ್ಟತೆ ಅಥವಾ ಸ್ಪಷ್ಟತೆಯ ಕೊರತೆಯಿದ್ದಲ್ಲಿ ವ್ಯಾಕರಣ ಮತ್ತು ವಿರಾಮಚಿಹ್ನೆಯ ಸಾಮಾನ್ಯ ನಿಯಮಗಳನ್ನು ಅನ್ವಯಿಸಲಾಗುತ್ತದೆ.**

| ಮುಖ್ಯಾಂಶಗಳು |
|---|

**1. ಪಾಲಿಸಿಗಳ ನಿರ್ಮಾಣ**

**ವಿಮಾ ಪಾಲಿಸಿಯು ವಾಣಿಜ್ಯ ಒಪ್ಪಂದಕ್ಕೆ ಸಾಕ್ಷಿಯಾಗಿದೆ ಮತ್ತು ಇತರ ಒಪ್ಪಂದಗಳಂತೆ ನ್ಯಾಯಾಲಯಗಳು ಅಳವಡಿಸಿಕೊಂಡ ನಿರ್ಮಾಣ ಮತ್ತು ವ್ಯಾಖ್ಯಾನದ ಸಾಮಾನ್ಯ ನಿಯಮಗಳು ವಿಮಾ ಒಪ್ಪಂದಗಳಿಗೆ ಅನ್ವಯಿಸುತ್ತವೆ.**

**ನಿರ್ಮಾಣದ ಪ್ರಮುಖ ನಿಯಮವೆಂದರೆ ಒಪ್ಪಂದದ ಪಕ್ಷಗಳ ಉದ್ದೇಶವು ಸಾಧ್ಯವಾಗಬೇಕು, ಆ ಉದ್ದೇಶವನ್ನು ಪಾಲಿಸಿ ದಾಖಲೆಯಿಂದಲೇ ಮತ್ತು ಅದಕ್ಕೆ ಲಗತ್ತಿಸಲಾದ ಪ್ರಸ್ತಾವನೆಯ ನಮೂನೆ, ಷರತ್ತುಗಳು, ಅನುಮೋದನೆಗಳು, ಖಾತರಿಗಳು ಇತ್ಯಾದಿಗಳಿಂದ ಸಂಗ್ರಹಿಸಬೇಕು ಮತ್ತು ಅದನ್ನು ಒಪ್ಪಂದದ ಒಂದು ಭಾಗವಾಗಿ ರೂಪಿಸಬೇಕು.**

**2. ಪದಗಳ ಅರ್ಥಗಳು**

ಬಳಸಿದ ಪದಗಳನ್ನು ಅವುಗಳ ಸಾಮಾನ್ಯ ಮತ್ತು ಜನಪ್ರಿಯ ಅರ್ಥದಲ್ಲಿ ಅರ್ಥೈಸಿಕೊಳ್ಳಬೇಕು. **ಪದಗಳಿಗೆ ಬಳಸಬೇಕಾದ ಅರ್ಥವು ಬೀದಿಯಲ್ಲಿರುವ ಸಾಮಾನ್ಯ ಮನುಷ್ಯನು ಅರ್ಥೈಸುವ ಅರ್ಥವಾಗಿದೆ. ಹೀಗಾಗಿ, "ಬೆಂಕಿ" ಎಂದರೆ ಜ್ವಾಲೆ ಅಥವಾ ನಿಜವಾದ ಸುಡುವಿಕೆ ಎಂದರ್ಥ.**

ಮತ್ತೊಂದೆಡೆ, **ವಾಕ್ಯದ ಸಂದರ್ಭವು ಬೇರೆ ರೀತಿಯಲ್ಲಿ ಸೂಚಿಸದ ಹೊರತು ಸಾಮಾನ್ಯ ವ್ಯವಹಾರ ಅಥವಾ ವ್ಯಾಪಾರ ಅರ್ಥವನ್ನು ಹೊಂದಿರುವ ಪದಗಳನ್ನು ಆ ಅರ್ಥದೊಂದಿಗೆಯೇ ಅರ್ಥೈಸಲಾಗುತ್ತದೆ.** ಶಾಸನದಿಂದ ಪದಗಳನ್ನು ವ್ಯಾಖ್ಯಾನಿಸಲಾಗಿದ್ದರೆ, ಭಾರತೀಯ ದಂಡ ಸಂಹಿತೆಯಲ್ಲಿರುವಂತೆ "ಕಳ್ಳತನ" ದಂತಹ ವ್ಯಾಖ್ಯಾನದ ಅರ್ಥವನ್ನು ಬಳಸಲಾಗುತ್ತದೆ.

ವಿಮಾ ಪಾಲಿಸಿಗಳಲ್ಲಿ ಬಳಸಲಾದ ಅನೇಕ ಪದಗಳು ಹಿಂದಿನ ಕಾನೂನು ನಿರ್ಧಾರಗಳ ವಿಷಯವಾಗಿದೆ ಮತ್ತು ಕೆಳಗಿನ ನ್ಯಾಯಾಲಯದ ನಿರ್ಧಾರಗಳು ಉನ್ನತ ನ್ಯಾಯಾಲಯದ ನಿರ್ಧಾರಗಳಿಗೆ ಬದ್ಧವಾಗಿರುತ್ತವೆ . ತಾಂತ್ರಿಕ ಪದಗಳಿಗೆ ವಿರುದ್ಧವಾದ ಸೂಚನೆ ಇಲ್ಲದಿದ್ದರೆ ಯಾವಾಗಲೂ ಅವುಗಳ ತಾಂತ್ರಿಕ ಅರ್ಥವನ್ನು ನೀಡಬೇಕು.

---

## H. ನವೀಕರಣದ ಸೂಚನೆ

ಹೆಚ್ಚಿನ ಜೀವೇತರ ವಿಮಾ ಪಾಲಿಸಿಗಳನ್ನು ವಾರ್ಷಿಕ ಆಧಾರದ ಮೇಲೆ ವಿಮೆ ಮಾಡಲಾಗುತ್ತದೆ.

ವಿಮಾದಾರರಿಗೆ ಅವರ ಪಾಲಿಸಿಯು ನಿರ್ದಿಷ್ಟ ದಿನಾಂಕದಂದು ಮುಕ್ತಾಯಗೊಳ್ಳಲಿದೆ ಎಂದು ಸಲಹೆ ನೀಡಲು ಯಾವುದೇ ಕಾನೂನು ಬಾಧ್ಯತೆ ವಿಮಾಗಾರರ ಮೇಲೆ ಇಲ್ಲದಿದ್ದರೂ, ಸೌಜನ್ಯ ಮತ್ತು ಆರೋಗ್ಯಕರ ವ್ಯಾಪಾರ ಅಭ್ಯಾಸದಂತೆ, ವಿಮಾಗಾರರು ಅವಧಿಯ ದಿನಾಂಕದ ಮುಂಚಿತವಾಗಿ ಪಾಲಿಸಿಯ ನವೀಕರಣವನ್ನು ಆಹ್ವಾನಿಸಲು ನವೀಕರಣ ಸೂಚನೆಯನ್ನು ನೀಡುತ್ತಾರೆ. ಸೂಚನೆ ಪಾಲಿಸಿಯ ಎಲ್ಲಾ ಸಂಬಂಧಿತ ವಿವರಗಳಾದ ವಿಮಾ ಮೊತ್ತ, ವಾರ್ಷಿಕ ಕಂತು, ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ವಿಮಾದಾರರಿಗೆ ಅಪಾಯದಲ್ಲಿ ಉಂಟಾದ ಯಾವುದೇ ವಸ್ತು ಬದಲಾವಣೆಗಳನ್ನು ತಿಳಿಸಬೇಕು ಎಂದು ಸಲಹೆ ನೀಡುವ ಟಿಪ್ಪಣಿಯನ್ನು ಸೇರಿಸುವುದು ಅಭ್ಯಾಸವಾಗಿದೆ.

**ಮೋಟಾರು ನವೀಕರಣದ ಸೂಚನೆಯಲ್ಲಿ, ಉದಾಹರಣೆಗೆ, ವಿಮಾದಾರರ ಗಮನವನ್ನು ಪ್ರಸ್ತುತ ಅಗತ್ಯತೆಗಳ ಬೆಳಕಿನಲ್ಲಿ ವಿಮಾ ಮೊತ್ತ (ಅಂದರೆ ವಾಹನದ ವಿಮೆದಾರರು ಘೋಷಿಸಿದ ಮೌಲ್ಯ) ವನ್ನು ಪರಿಷ್ಕರಿಸಬೇಕು.**

ಕಂತನ್ನು ಮುಂಚಿತವಾಗಿ ಪಾವತಿಸದ ಹೊರತು ಯಾವುದೇ ಅಪಾಯವನ್ನು ಊಹಿಸಲಾಗುವುದಿಲ್ಲ ಎಂಬ ಶಾಸನಬದ್ಧ ನಿಬಂಧನೆಯೆಡೆಗೆ ವಿಮಾದಾರರ ಗಮನವನ್ನು ಸಹ ಆಹ್ವಾನಿಸಲಾಗುತ್ತದೆ.

### ನಿಮ್ಮನ್ನು ಪರೀಕ್ಷಿಸಿಕೊಳ್ಳಿ 5

ನವೀಕರಣ ಸೂಚನೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

I. ನಿಯಮಾವಳಿಗಳ ಪ್ರಕಾರ, ಪಾಲಿಸಿಯ ಅವಧಿ ಮುಗಿಯುವ 30 ದಿನಗಳ ಮೊದಲು ವಿಮಾದಾರರಿಗೆ ನವೀಕರಣ ಸೂಚನೆಯನ್ನು ಕಳುಹಿಸಲು ವಿಮಾಗಾರರ ಮೇಲೆ ಕಾನೂನು ಬಾಧ್ಯತೆಯಿರುತ್ತದೆ

II. ನಿಯಮಾವಳಿಗಳ ಪ್ರಕಾರ, ಪಾಲಿಸಿಯ ಅವಧಿ ಮುಗಿಯುವ 15 ದಿನಗಳ ಮೊದಲು ವಿಮಾದಾರರಿಗೆ ನವೀಕರಣ ಸೂಚನೆಯನ್ನು ಕಳುಹಿಸಲು ವಿಮಾಗಾರರ ಮೇಲೆ ಕಾನೂನು ಬಾಧ್ಯತೆಯಿರುತ್ತದೆ

III. ನಿಯಮಾವಳಿಗಳ ಪ್ರಕಾರ, ಪಾಲಿಸಿಯ ಅವಧಿ ಮುಗಿಯುವ 7 ದಿನಗಳ ಮೊದಲು ವಿಮಾದಾರರಿಗೆ ನವೀಕರಣ ಸೂಚನೆಯನ್ನು ಕಳುಹಿಸಲು ವಿಮಾಗಾರರ ಮೇಲೆ ಕಾನೂನು ಬಾಧ್ಯತೆಯಿರುತ್ತದೆ

**IV.** ನಿಯಮಾವಳಿಗಳ ಪ್ರಕಾರ ಪಾಲಿಸಿಯ ಅವಧಿ ಮುಗಿಯುವ ಮೊದಲು ವಿಮಾದಾರರಿಗೆ ನವೀಕರಣದ ಸೂಚನೆಯನ್ನು ಕಳುಹಿಸಲು ವಿಮಾಗಾರರ ಮೇಲೆ ಯಾವುದೇ ಕಾನೂನು ಬಾಧ್ಯತೆಯಿರುವುದಿಲ್ಲ

---

**ಸಾರಾಂಶ**

**a)** ಪ್ರಸ್ತಾವನೆಯ ನಮೂನೆಯು ದಾಖಲಾತಿಯ ಮೂಲಭೂತವಾಗಿ ಮೊದಲ ಹಂತವಾಗಿದೆ, ಅದರ ಮೂಲಕ ವಿಮಾದಾರರು ತಮ್ಮ ಬಗ್ಗೆ ತಿಳಿಸುತ್ತಾರೆ

**b)** ಪಾಲಿಸಿಯ ಪ್ರಾರಂಭದ ಮೊದಲು ವಾಸ್ತವಿಕ ಮಾಹಿತಿಯನ್ನು ಬಹಿರಂಗಪಡಿಸುವ ಕರ್ತವ್ಯವು ಉದ್ಭವಿಸುತ್ತದೆ ಮತ್ತು ಒಪ್ಪಂದದ ಮುಕ್ತಾಯದ ನಂತರವೂ ಮುಂದುವರಿಯುತ್ತದೆ

**c)** ವಿಮಾ ಕಂಪನಿಗಳು ಸಾಮಾನ್ಯವಾಗಿ ಪ್ರಸ್ತಾವನೆಯ ನಮೂನೆಯ ಕೊನೆಯಲ್ಲಿ ವಿಮಾದಾರರಿಂದ ಸಹಿ ಮಾಡಬೇಕಾದ ಘೋಷಣೆಯನ್ನು ಸೇರಿಸುತ್ತವೆ

**d)** ಪ್ರಸ್ತಾವನೆಯ ನಮೂನೆಯಲ್ಲಿ ಈ ಕೆಳಗಿನ ಅಂಶಗಳು ಸೇರಿವೆ:

- **i.** ಪ್ರಸ್ತಾಪಕರ ಸಂಪೂರ್ಣ ಹೆಸರು
- **ii.** ಪ್ರಸ್ತಾಪಕರ ವಿಳಾಸ ಮತ್ತು ಸಂಪರ್ಕ ವಿವರಗಳು
- **iii.** ಪ್ರಸ್ತಾಪಕರ ವೃತ್ತಿ, ಉದ್ಯೋಗ ಅಥವಾ ವ್ಯಾಪಾರ
- **iv.** ವಿಮೆಯ ವಿಷಯವಸ್ತುವಿನ ವಿವರಗಳು ಮತ್ತು ಗುರುತು
- **v.** ವಿಮಾಮೊತ್ತ
- **vi.** ಹಿಂದಿನ ಮತ್ತು ಪ್ರಸ್ತುತ ವಿಮೆ
- **vii.** ನಷ್ಟದ ಅನುಭವ
- **viii.** ವಿಮಾದಾರರಿಂದ ಘೋಷಣೆ

**e)** ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುವ ಏಜೆಂಟರು, ಅಪಾಯದ ಬಗ್ಗೆ ಎಲ್ಲ ವಾಸ್ತವಿಕ ಮಾಹಿತಿಯನ್ನು ವಿಮಾದಾರರಿಂದ ವಿಮಾಗಾರರಿಗೆ ಒದಗಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**f)** ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸುವ ಮತ್ತು ಸ್ವೀಕಾರದ ಬಗ್ಗೆ ನಿರ್ಧರಿಸುವ ಪ್ರಕ್ರಿಯೆಯನ್ನು ಅಂಡರ್ ರೈಟಿಂಗ್ ಎಂದು ಕರೆಯಲಾಗುತ್ತದೆ.

g) ಕಂತು ಎನ್ನುವುದು ವಿಮಾ ಒಪ್ಪಂದದಡಿಯಲ್ಲಿ ವಿಮೆಯ ವಿಷಯವಸ್ತುವಿನ ವಿಮೆಗಾಗಿ ವಿಮೆದಾರರಿಂದ ವಿಮಾಗಾರರಿಗೆ ಪಾವತಿಸಿದ ಪರಿಗಣನೆ ಅಥವಾ ಮೊತ್ತವಾಗಿದೆ.

h) ನಗದು, ಯಾವುದೇ ಮಾನ್ಯತೆ ಪಡೆದ ಬ್ಯಾಂಕಿಂಗ್ ನೆಗೋಶಿಯೇಬಲ್ ಉಪಕರಣ, ಪೋಸ್ಟಲ್ ಮನಿ ಆರ್ಡರ್, ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್, ಇಂಟರ್ ನೆಟ್, ಇ-ಟ್ರಾನ್ಸ್ ಫರ್, ಡೈರೆಕ್ಟ್ ಕ್ರೆಡಿಟ್ ಅಥವಾ ಕಾಲಕಾಲಕ್ಕೆ ಐಆರ್ ಡಿಎಐ ಅನುಮೋದಿಸಿದ ಯಾವುದೇ ವಿಧಾನದ ಮೂಲಕ ಕಂತು ಪಾವತಿಯನ್ನು ಮಾಡಬಹುದು.

i) ಪಾಲಿಸಿಯ ತಯಾರಿ ಬಾಕಿ ಇರುವಾಗ ಅಥವಾ ವಿಮೆಯ ಮಾತುಕತೆಗಳು ಪ್ರಗತಿಯಲ್ಲಿರುವಾಗ ಮತ್ತು ತಾತ್ಕಾಲಿಕ ಆಧಾರದ ಮೇಲೆ ವಿಮಾ ರಕ್ಷಣೆಯನ್ನು ಒದಗಿಸುವುದು ಅವಶ್ಯಕವಿದ್ದಾಗ ಕವರ್ ನೋಟ್ ಅನ್ನು ನೀಡಲಾಗುತ್ತದೆ.

j) ಕವರ್ ನೋಟ್ ಗಳನ್ನು ಪ್ರಧಾನವಾಗಿ ಸಾಗಾಣಿಕೆ ಮತ್ತು ಮೋಟಾರು ವ್ಯಾಪಾರದ ವರ್ಗಗಳಲ್ಲಿ ಬಳಸಲಾಗುತ್ತದೆ.

k) ವಿಮೆಯ ಪ್ರಮಾಣಪತ್ರವು ಪುರಾವೆ ಅಗತ್ಯವಿರುವ ಸಂದರ್ಭಗಳಲ್ಲಿ ವಿಮೆಯ ಅಸ್ತಿತ್ವವನ್ನು ಒದಗಿಸುತ್ತದೆ

l) ಪಾಲಿಸಿಯು ಔಪಚಾರಿಕ ದಾಖಲೆಯಾಗಿದ್ದು ಅದು ವಿಮೆಯ ಒಪ್ಪಂದದ ಪುರಾವೆಯನ್ನು ಒದಗಿಸುತ್ತದೆ.

m) ಖಾತರಿ ಎನ್ನುವುದು ಪಾಲಿಸಯಲ್ಲಿ ಸ್ಪಷ್ಟವಾಗಿ ಹೇಳಲಾದ ಷರತ್ತಾಗಿದ್ದು, ಇದನ್ನು ಒಪ್ಪಂದದ ಮಾನ್ಯತೆಗಾಗಿ ಅಕ್ಷರಶಃ ಅನುಸರಿಸಬೇಕು.

n) ಪಾಲಿಸಿಯ ಕೆಲವು ನಿಯಮಗಳು ಮತ್ತು ಷರತ್ತುಗಳನ್ನು ನೀಡುವ ಸಮಯದಲ್ಲಿ ಅಥವಾ ಪಾಲಿಸಿ ಅವಧಿಯಲ್ಲಿ ಮಾರ್ಪಡಿಸಬೇಕಾದರೆ, ಅನುಮೋದನೆ ಎಂಬ ದಾಖಲೆಯ ಮೂಲಕ ತಿದ್ದುಪಡಿಗಳನ್ನು/ಬದಲಾವಣೆಗಳನ್ನು ಹೊಂದಿಸುವ ಮೂಲಕ ಮಾಡಲಾಗುತ್ತದೆ.

o) ನಿರ್ಮಾಣದ ಪ್ರಮುಖ ನಿಯಮವೆಂದರೆ ಪಕ್ಷಗಳ ಉದ್ದೇಶವು ಮೇಲುಗೈ ಸಾಧಿಸಬೇಕು ಮತ್ತು ಈ ಉದ್ದೇಶವನ್ನು ಪಾಲಿಸಿಯಲ್ಲಿಯೇ ನೋಡಬೇಕು.

---

ಪ್ರಮುಖ ಪದಗಳು

a) **ಪಾಲಿಸಿ ನಮೂನೆ**

b) **ಕಂತಿನ ಮುಂಗಡ ಪಾವತಿ**

c) **ಕವರ್ ನೋಟ್**

d) **ವಿಮೆಯ ಪ್ರಮಾಣಪತ್ರ**

**e)** ನವೀಕರಣದ ಸೂಚನೆ

**f)** ಖಾತರಿ

---

| ನಿಮ್ಮನ್ನು ಪರೀಕ್ಷಿಸಲು ಪ್ರಶ್ನೆಗಳಿಗೆ ಉತ್ತರಗಳು |
|---|

ಉತ್ತರ 1 - ಸರಿಯಾದ ಆಯ್ಕೆ II ಆಗಿದೆ

ಉತ್ತರ 2 - ಸರಿಯಾದ ಆಯ್ಕೆ IV ಆಗಿದೆ

ಉತ್ತರ 3 - ಸರಿಯಾದ ಆಯ್ಕೆ II ಆಗಿದೆ

ಉತ್ತರ 4 - ಸರಿಯಾದ ಆಯ್ಕೆ II ಆಗಿದೆ

ಉತ್ತರ 5 - ಸರಿಯಾದ ಆಯ್ಕೆ IV ಆಗಿದೆ

---

# ಅಧ್ಯಾಯ G-02

# ಅಂಡರ್ ರೈಟಿಂಗ್ ಮತ್ತು ಬೆಲೆ ನಿರ್ಧಾರ

**ಅಧ್ಯಾಯ ಪರಿಚಯ**

ಸಾಮಾನ್ಯ ವಿಮೆಗೆ ಸಂಬಂಧಿಸಿದ ವಿವಿಧ ಪರಿಕಲ್ಪನೆಗಳು ಮತ್ತು ತತ್ವಗಳನ್ನು ನಾವು ಕಲಿತಿದ್ದೇವೆ. ವಿಮಾಗಾರರು ಅಪಾಯವನ್ನು ಸ್ವೀಕರಿಸಬೇಕೆ ಅಥವಾ ಬೇಡವೇ ಎಂಬುದನ್ನು ನಿರ್ಧರಿಸುವ ಪ್ರಕ್ರಿಯೆಯೇ ಅಂಡರ್ ರೈಟಿಂಗ್ ಆಗಿದೆ. ಇದಕ್ಕಾಗಿ, ಅಂಡರ್ ರೈಟರ್ ರು ಅಪಾಯವನ್ನು ವಿಶ್ಲೇಷಿಸುತ್ತಾರೆ. ಅಪಾಯ ಎಷ್ಟು ಅಪಾಯಕಾರಿಯಾಗಿದೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳುತ್ತಾರೆ. ಅಲ್ಲದೆ, ಎಷ್ಟು ಹಣವನ್ನು ಕಂತಿನ ರೂಪದಲ್ಲಿ ಸಂಗ್ರಹಿಸಬೇಕು. ಅಲ್ಲದೇ, ಕೆಲವೊಮ್ಮೆ ಅಪಾಯಗಳನ್ನು ಸುಧಾರಿಸಲು ಷರತ್ತುಗಳಿಗೆ ಒಳಪಟ್ಟು ಮಾತ್ರ ಅಪಾಯಗಳನ್ನು ಸ್ವೀಕರಿಸಬೇಕಾಗಬಹುದು. ಈ ಎಲ್ಲ ಕೋನಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ..

**ಕಲಿಕೆಯ ಫಲಿತಾಂಶಗಳು**

**A.** ಭೌತಿಕ ಅಪಾಯಗಳು

**B.** ಭೌತಿಕ ಅಪಾಯಗಳು –ಅಪಾಯ ನಿರ್ವಹಣೆಯ ಮಹತ್ವ, ವಾಕ್ಯಾಂಶಗಳು ಮತ್ತು ಬೆಲೆನಿರ್ಧಾರ

**C.** ಹೆಚ್ಚುವರಿ/ಕಡಿತ ಮತ್ತು ಕವರ್ ಅನ್ನು ನಿರ್ಬಂಧಿಸುವುದನ್ನು ನಿರ್ಧರಿಸುವುದು

**D.** ನೈತಿಕ ಅಪಾಯ

**E.** ವಿಮಾಮೊತ್ತವನ್ನು ನಿಗದಿಪಡಿಸುವುದು

**ಈ ಅಧ್ಯಾಯವನ್ನು ಅಧ್ಯಯನ ಮಾಡಿದ ನಂತರ, ನೀವು ಈ ಕೆಳಗಿನ ಅಂಶಗಳನ್ನು ಅರಿಯಲು ಸಾಧ್ಯವಾಗುತ್ತದೆ:**

1. ಭೌತಿಕ ಅಪಾಯವನ್ನು ಅರ್ಥಮಾಡಿಕೊಳ್ಳುವುದು
2. ಅಂಡರ್ ರೈಟಿಂಗ್ ಅನ್ನು ಒಂದು ಕಾರ್ಯವಾಗಿ ಗೌರವಿಸುವುದು
3. ಅಪಾಯವನ್ನು ಕಡಿಮೆ ಮಾಡಲು ಅಂಡರ್ ರೈಟರ್ ರು ಬಳಸುವ ವಿಧಾನಗಳು
4. ವಿಮಾ ಮೊತ್ತವನ್ನು ಹೇಗೆ ನಿಗದಿಪಡಿಸಲಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು.

## A. ಭೌತಿಕ ಅಪಾಯಗಳು

ಆಸ್ತಿ ಮತ್ತು ವ್ಯಕ್ತಿಗಳು ಒಡ್ಡಿಕೊಂಡಿರುವ ವಿವಿಧ ಅಪಾಯಗಳ ಸಂಪೂರ್ಣ ಜ್ಞಾನವು ಅಂಡರ್ ರೈಟಿಂಗ್ ಮಾಡಲು ಅತ್ಯಂತ ಅವಶ್ಯಕವಾಗಿರುತ್ತದೆ.

ಪ್ರಸ್ತಾವನೆಯ ನಮೂನೆಯಲ್ಲಿ ನೀಡಿದ ಮಾಹಿತಿಯಿಂದ ಭೌತಿಕ ಅಪಾಯವನ್ನು ಕಂಡುಹಿಡಿಯಬಹುದು. ಅಪಾಯದ ಸಮೀಕ್ಷೆ ಅಥವಾ ಪರಿಶೀಲನೆಯಿಂದ ಇದನ್ನು ಇನ್ನೂ ಉತ್ತಮವಾಗಿ ಕಂಡುಹಿಡಿಯಬಹುದು. ವಿಮೆಯ ವಿವಿಧ ವರ್ಗಗಳಲ್ಲಿ ಭೌತಿಕ ಅಪಾಯದ ಕೆಲವು ಉದಾಹರಣೆಗಳು ಈ ಕೆಳಗಿನಂತಿವೆ.

**a) ಬೆಂಕಿ**

i. **ನಿರ್ಮಾಣ:** ಗೋಡೆಗಳು ಮತ್ತು ಛಾವಣಿಗಳಲ್ಲಿ ಬಳಸುವ ಕಟ್ಟಡ ಸಾಮಗ್ರಿಗಳನ್ನು ನಿರ್ಮಾಣವು ಸೂಚಿಸುತ್ತದೆ. ಕಾಂಕ್ರೀಟ್ ಕಟ್ಟಡವು ಮರದ ಕಟ್ಟಡಕ್ಕಿಂತ ಶ್ರೇಷ್ಠವಾಗಿದೆ.

ii. **ಎತ್ತರ:** ಮಹಡಿಗಳ ಸಂಖ್ಯೆ ಹೆಚ್ಚಾದಷ್ಟೂ ಬೆಂಕಿಯನ್ನು ನಂದಿಸುವಲ್ಲಿನ ತೊಂದರೆಯಿಂದಾಗಿ ಅಪಾಯ ಹೆಚ್ಚಾಗಿರುತ್ತದೆ. ಅಲ್ಲದೆ, ಹೆಚ್ಚಿನ ಸಂಖ್ಯೆಯ ಮಹಡಿಗಳು ಮೇಲಿನ ಮಹಡಿಗಳ ಕುಸಿತದ ಮತ್ತು ಭಾರೀ ಕುಸಿತದ ಪರಿಣಾಮದಿಂದಾಗಿ ಹೆಚ್ಚು ಹಾನಿಯನ್ನು ಉಂಟುಮಾಡುವ ಅಪಾಯವನ್ನು ಒಳಗೊಂಡಿರುತ್ತವೆ.

iii. **ನೆಲಹಾಸಿನ ಸ್ವರೂಪ**: ಮರದ/ಕಟ್ಟಿಗೆಯ ನೆಲಗಳು ಬೆಂಕಿಗೆ ಇಂಧನವನ್ನು ಸೇರಿಸುತ್ತವೆ. ಅಲ್ಲದೆ, ಬೆಂಕಿಯ ಸಂದರ್ಭದಲ್ಲಿ ಮರದ ಮಹಡಿಗಳು ಸುಲಭವಾಗಿ ಕುಸಿಯುತ್ತವೆ, ಮೇಲಿನ ಮಹಡಿಗಳಿಂದ ಬೀಳುವ ಯಂತ್ರಗಳು ಅಥವಾ ಸರಕುಗಳ ಮೂಲಕ ಕೆಳಗಿನ ಮಹಡಿಗಳಲ್ಲಿಯ ಆಸ್ತಿಗೆ ಹಾನಿಯಾಗುತ್ತದೆ.

iv. **ವಸತಿ(ಆಕ್ಯುಪೆನ್ಸಿ):** ಕಟ್ಟಡದ ವಸತಿ(ಆಕ್ಯುಪೆನ್ಸಿ) ಮತ್ತು ಅದನ್ನು ಬಳಸಲಾಗುವ ಉದ್ದೇಶ. ವಸತಿ(ಆಕ್ಯುಪೆನ್ಸಿ)ಯಿಂದ ವಿವಿಧ ರೀತಿಯ ಅಪಾಯಗಳು ಉಂಟಾಗುತ್ತವೆ.

v. **ಬೆಂಕಿ ಹೊತ್ತುವ ಅಪಾಯ:** ರಾಸಾಯನಿಕಗಳನ್ನು ಉತ್ಪಾದಿಸುವ ಅಥವಾ ದೊಡ್ಡ ಪ್ರಮಾಣದಲ್ಲಿ ಬಳಸುವ ಕಟ್ಟಡಗಳು ಗಣನೀಯವಾದ **ಬೆಂಕಿ ಹೊತ್ತಿಕೊಳ್ಳುವ ಅಪಾಯ**ವನ್ನು ಒಳಗೊಂಡಿರುತ್ತವೆ. ಬೆಂಕಿ ಪ್ರಾರಂಭವಾದಾಗ, ಮರವು ಬೇಗನೆ ಸುಟ್ಟುಹೋಗುವುದರಿಂದ ಕಟ್ಟಿಗೆ ಮಾರುವ ಸ್ಥಳವು ಹೆಚ್ಚಿನ ದಹನಶೀಲತೆಯ ಅಪಾಯವನ್ನು ಒದಗಿಸುತ್ತದೆ. ಬೆಂಕಿಯ ಸಂದರ್ಭದಲ್ಲಿ ಕಟ್ಟಡದಲ್ಲಿರುವ ವಿಷಯ/ವಸ್ತುಗಳು ಹೆಚ್ಚು ಹಾನಿಗೆ ಒಳಗಾಗಬಹುದು.

ಉದಾಹರಣೆಗೆ, ಕಾಗದ, ಬಟ್ಟೆ ಇತ್ಯಾದಿಗಳು ಬೆಂಕಿಯ ಹಾನಿಗೆ ಮಾತ್ರವಲ್ಲದೆ ನೀರು, ಶಾಖ ಇತ್ಯಾದಿಗಳಿಂದ ಸಹ ಹಾನಿಗೊಳಗಾಗುತ್ತವೆ.

vi. **ತಯಾರಿಕೆಯ ಪ್ರಕ್ರಿಯೆ:** ರಾತ್ರಿ ಸಮಯದಲ್ಲಿ ಕೆಲಸವನ್ನು ನಡೆಸಿದರೆ, ಕೃತಕ ದೀಪಗಳ ಬಳಕೆ, ಘರ್ಷಣೆಗೆ ಕಾರಣವಾಗುವ ಯಂತ್ರೋಪಕರಣಗಳ ನಿರಂತರ ಬಳಕೆ ಮತ್ತು ಆಯಾಸದ ಕಾರಣದಿಂದಾಗಿ ಕಾರ್ಮಿಕರ ಅಸಡ್ಡೆಯಿಂದ ಅಪಾಯವು ಹೆಚ್ಚಾಗುತ್ತದೆ.

vii. **ಪರಿಸ್ಥಿತಿ/ ಅಪಾಯದ ಸ್ಥಳ:** ದಟ್ಟಣೆಯ ಪ್ರದೇಶದಲ್ಲಿಯ ಸ್ಥಾನ, ಅಪಾಯಕಾರಿ ಪಕ್ಕದ ಆವರಣಗಳಿಗೆ ಒಡ್ಡಿಕೊಂಡಿರುವುದು ಮತ್ತು ಅಗ್ನಿಶಾಮಕ ದಳದಿಂದ ದೂರವಿರುವುದು ಭೌತಿಕ ಅಪಾಯದ ಉದಾಹರಣೆಯಾಗಿದೆ.

**b) ಸಾಗರ(ಸಾಗಾಣಿಕೆ ವಿಮೆ)**

i. **ಹಡಗಿನ ವಯಸ್ಸು ಮತ್ತು ಸ್ಥಿತಿ:** ಹಳೆಯ ಹಡಗುಗಳು ಕೆಳಮಟ್ಟದ ಅಪಾಯಗಳಾಗಿವೆ.

ii. **ಕೈಗೊಳ್ಳಬೇಕಾದ ಸಮುದ್ರಯಾನ:** ಪ್ರಯಾಣದ ಮಾರ್ಗ, ಭಾರ/ಸರಕುಗಳನ್ನು ಏರಿಸುವ(ಲೋಡ್) ಮತ್ತು ಇಳಿಸುವಿಕೆಯ ಪರಿಸ್ಥಿತಿಗಳು ಮತ್ತು ಬಂದರುಗಳಲ್ಲಿಯ ಗೋದಾಮು ಸೌಲಭ್ಯಗಳು ಪರಿಣಾಮ ಬೀರುವ ಅಂಶಗಳಾಗಿವೆ.

iii. **ಸರಕುಗಳ ಸ್ವರೂಪ:** ಹೆಚ್ಚಿನ ಮೌಲ್ಯದ ವಸ್ತುಗಳು ಕಳ್ಳತನಕ್ಕೆ ಒಳಗಾಗುತ್ತವೆ; ಯಂತ್ರೋಪಕರಣಗಳು ಸಾಗಣೆಯಲ್ಲಿ ಒಡೆಯುವಿಕೆಗೆ ಒಳಗಾಗುತ್ತವೆ.

iv. **ಪ್ಯಾಕಿಂಗ್ ಮಾಡುವ ವಿಧಾನ:** ಚೀಲ(ಬ್ಯಾಗ್) ಗಳಲ್ಲಿನ ಸರಕುಗಳಿಗಿಂತ ಬೇಲ್ ಗಳಲ್ಲಿ ತುಂಬಿದ ಸರಕು ಉತ್ತಮವೆಂದು ಪರಿಗಣಿಸಲಾಗಿದೆ. ಅಲ್ಲದೇ, ಒಂದೇ ಪದರಿನ ಚೀಲ(ಬ್ಯಾಗ್) ಗಳಿಗಿಂತ ಎರಡು ಪದರುಗಳ ಚೀಲ(ಬ್ಯಾಗ್)ಗಳು ಸುರಕ್ಷಿತವಾಗಿರುತ್ತವೆ. ಮೊದಲೊಮ್ಮೆ ಉಪಯೋಗಿಸಿದ (ಸೆಕೆಂಡ್ ಹ್ಯಾಂಡ್) ಡ್ರಮ್ ಗಳಲ್ಲಿ ಲಿಕ್ವಿಡ್ ಕಾರ್ಗೋ ಕೆಟ್ಟ ಭೌತಿಕ ಅಪಾಯವನ್ನು ಉಂಟುಮಾಡುತ್ತದೆ.

**c) ಮೋಟಾರು**

i. **ವಾಹನದ ವಯಸ್ಸು ಮತ್ತು ಸ್ಥಿತಿ:** ಹಳೆಯ ವಾಹನಗಳು ಅಪಘಾತಗಳಿಗೆ ಒಳಗಾಗುವ ಸಾಧ್ಯತೆ ಹೆಚ್ಚು.

ii. **ವಾಹನದ ಪ್ರಕಾರ:** ಸ್ಪೋರ್ಟ್ಸ್ ಕಾರುಗಳು ಹೆಚ್ಚಿನ ಭೌತಿಕ ಅಪಾಯವನ್ನು ಒಳಗೊಂಡಿರುತ್ತವೆ.

**d) ದರೋಡೆ**

i. **ಸರಕುಗಳ ಸ್ವರೂಪ:** ಸಣ್ಣ ಗಾತ್ರದ ಹೆಚ್ಚಿನ ಮೌಲ್ಯದ ವಸ್ತುಗಳು (ಉದಾ. ಆಭರಣಗಳು) ಮತ್ತು ಸುಲಭವಾಗಿ ಮಾರಬಹುದಾದ ಸರಕುಗಳನ್ನು ಕೆಟ್ಟ ಅಪಾಯಗಳೆಂದು ಪರಿಗಣಿಸಲಾಗುತ್ತದೆ.

ii. **ಪರಿಸ್ಥಿತಿ:** ನೆಲ ಅಂತಸ್ತಿನ ಅಪಾಯಗಳು ಮೇಲಿನ ಅಂತಸ್ತಿನ ಅಪಾಯಗಳಿಗಿಂತ ಕೆಳಮಟ್ಟದ್ದಾಗಿವೆ: ಏಕಾಂತ/ಒಂಟಿ ಪ್ರದೇಶಗಳಲ್ಲಿ ನೆಲೆಗೊಂಡಿರುವ ಖಾಸಗಿ ವಸತಿಗಳು ಅಪಾಯಕಾರಿಯಾಗಿರುತ್ತವೆ.

iii. **ನಿರ್ಮಾಣ ಅಪಾಯ**: ಹಲವಾರು ಬಾಗಿಲುಗಳು ಮತ್ತು ಕಿಟಕಿಗಳು ಕೆಟ್ಟ ಭೌತಿಕ ಅಪಾಯವನ್ನು ಉಂಟುಮಾಡುತ್ತವೆ.

e) **ವೈಯಕ್ತಿಕ ಅಪಘಾತ**

i. **ವ್ಯಕ್ತಿಯ ವಯಸ್ಸು**: ತುಂಬ ವಯಸ್ಸಾದ ವ್ಯಕ್ತಿಗಳು ಅಪಘಾತಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿರುತ್ತದೆ; ಜೊತೆಗೆ ಅಪಘಾತದ ಸಂದರ್ಭದಲ್ಲಿ ಚೇತರಿಸಿಕೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ.

ii. **ಉದ್ಯೋಗದ ಸ್ವರೂಪ**: ಜಾಕಿಗಳು, ಗಣಿಗಾರಿಕೆ ಎಂಜಿನಿಯರ್ ರು, ಕೈಕೆಲಸಗಾರರು ಕೆಟ್ಟ ಭೌತಿಕ ಅಪಾಯದ ಉದಾಹರಣೆಗಳಾಗಿವೆ.

iii. **ಆರೋಗ್ಯ ಮತ್ತು ದೈಹಿಕ ಸ್ಥಿತಿ**: ಮಧುಮೇಹದಿಂದ ಬಳಲುತ್ತಿರುವ ವ್ಯಕ್ತಿಯು ಅಪಘಾತದಿಂದಾದ ದೈಹಿಕ ಗಾಯದ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆಯ ಚಿಕಿತ್ಸೆಗೆ ಪ್ರತಿಕ್ರಿಯಿಸದಿರಬಹುದು.

## B. ಭೌತಿಕ ಅಪಾಯಗಳು - ಅಪಾಯ ನಿರ್ವಹಣೆಯ ಪ್ರಾಮುಖ್ಯತೆ, ಷರತ್ತುಗಳು ಮತ್ತು ಬೆಲೆನಿರ್ಧಾರ

ಭೌತಿಕ ಅಪಾಯಗಳನ್ನು ಎದುರಿಸಲು ಅಂಡರ್ ರೈಟರ್ ರು ಈ ಕೆಳಗಿನ ವಿಧಾನಗಳನ್ನು ಬಳಸುತ್ತಾರೆ:

- ✓ ಹೆಚ್ಚುವರಿ ಕಂತು
- ✓ ಪಾಲಿಸಿಯ ಮೇಲೆ ಖಾತರಿಗಳನ್ನು ಅನ್ವಯಿಸುವುದು
- ✓ ಕೆಲವು ಷರತ್ತುಗಳನ್ನು ಅನ್ವಯಿಸುವುದು
- ✓ ಹೆಚ್ಚುವರಿ/ಕಡಿತಗಳನ್ನು ಹೇರುವುದು
- ✓ ಮಂಜೂರು ಮಾಡಲಾದ ಕವರ್ ಅನ್ನು ನಿರ್ಬಂಧಿಸುವುದು
- ✓ ಕವರ್ ನಿರಾಕರಣೆ

a) **ಹೆಚ್ಚುವರಿ ಕಂತು**

ಅಪಾಯದ ಒಡ್ಡಿಕೊಂಡಿರುವುದರಲ್ಲಿ ಕೆಲವು ಪ್ರತಿಕೂಲ ವೈಶಿಷ್ಟ್ಯಗಳಿರಬಹುದು, ಇದಕ್ಕಾಗಿ ವಿಮಾಗಾರರು ಅದನ್ನು ಸ್ವೀಕರಿಸುವ ಮೊದಲು ಹೆಚ್ಚುವರಿ ಕಂತನ್ನು ವಿಧಿಸಲು ನಿರ್ಧರಿಸಬಹುದು. ಕ್ಲೇಮ್ ಗಳ ಹೆಚ್ಚಿನ ಸಂಭವನೀಯತೆ ಅಥವಾ ದೊಡ್ಡ ಮೊತ್ತದ ಕ್ಲೇಮ್ ಗಳ ಸಂಭವವನ್ನು ಕಂತಿನ ಮೇಲೆ ಹೆಚ್ಚುವರಿ(ಲೋಡ್)ಯನ್ನು ಹೇರುವ ಮೂಲಕ ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

| ಉದಾಹರಣೆ |
|---|

ನಿಗದಿತ ಮಾನದಂಡಗಳನ್ನು ಅನುಸರಿಸುವ ಲೈನರ್ ಗಳು ಅಥವಾ ಇತರ ಹಡಗುಗಳಿಂದ ಸಾಗಿಸಲಾಗುವ ಸರಕುಗಳಿಗೆ ಕಂತಿನ ಸಾಮಾನ್ಯ ದರವನ್ನು ವಿಧಿಸಲಾಗುತ್ತದೆ. ಆದಾಗ್ಯೂ, ಹಳೆಯ ಅಥವಾ ಕಡಿಮೆ ತೂಕದ ಹಡಗುಗಳಲ್ಲಿ ಸರಕುಗಳನ್ನು ಸಾಗಿಸಿದರೆ ಹೆಚ್ಚುವರಿ ಕಂತನ್ನು ವಿಧಿಸಲಾಗುತ್ತದೆ.

ವೈಯಕ್ತಿಕ ಅಪಘಾತ ವಿಮೆಯಲ್ಲಿ ವಿಮಾದಾರರು ಪರ್ವತಾರೋಹಣ, ರೇಸಿಂಗ್, ದೊಡ್ಡ ಬೇಟೆ ಮುಂತಾದ ಅಪಾಯಕಾರಿ ವೃತ್ತಿಗಳಲ್ಲಿ ತೊಡಗಿದ್ದರೆ ಹೆಚ್ಚುವರಿ ಕಂತನ್ನು ವಿಧಿಸಲಾಗುತ್ತದೆ.

ಕೆಲವೊಮ್ಮೆ ಮೋಟಾರು ವಿಮೆ ಅಥವಾ ಆರೋಗ್ಯ ವಿಮಾ ಪಾಲಿಸಿಗಳಂತಹ ಪ್ರತಿಕೂಲ ಕ್ಲೇಮ್ ಗಳ ಅನುಪಾತಕ್ಕಾಗಿ ಕಂತಿನ ಮೇಲೆ ಹೆಚ್ಚುವರಿ(ಲೋಡ್)ಯನ್ನು ಹೇರಲಾಗುತ್ತದೆ.

---

**b) ಖಾತರಿಗಳ ಹೇರಿಕೆ**

ವಿಮಾಗಾರರು ಭೌತಿಕ ಅಪಾಯವನ್ನು ಕಡಿಮೆ ಮಾಡಲು ಸೂಕ್ತವಾದ ಖಾತರಿಗಳನ್ನು ಸೇರಿಸುತ್ತಾರೆ. ಕೆಲವು ಉದಾಹರಣೆಗಳನ್ನು ಈ ಕೆಳಗೆ ನೀಡಲಾಗಿದೆ.

| ಉದಾಹರಣೆ |
|---|

i. **ಸರಕು ಸಾಗಾಣಿಕೆ ವಿಮೆ:** ಸರಕುಗಳನ್ನು (ಉದಾ. ಚಹಾ) ಕಲಾಯಿ ಮಾಡಲಾದ(ಟಿನ್ ಲೈನ್ಡ್) ಕೇಸ್ ಗಳಲ್ಲಿ ಪ್ಯಾಕ್ ಮಾಡಲಾಗುವುದನ್ನು ಪಾಲಿಸಲು ವಾರಂಟಿಯನ್ನು ಸೇರಿಸಲಾಗುತ್ತದೆ.

ii. **ದರೋಡೆ:** ಆಸ್ತಿಯನ್ನು ಇಪ್ಪತ್ನಾಲ್ಕು ಗಂಟೆಗಳ ಕಾಲ ಕಾವಲುಗಾರರು ಕಾವಲು ಕಾಯುತ್ತಾರೆಂದು ಖಾತರಿಪಡಿಸಲಾಗಿದೆ.

iii. **ಬೆಂಕಿ:** ಬೆಂಕಿ ವಿಮೆಯಲ್ಲಿ, ಸಾಮಾನ್ಯ ಕೆಲಸದ ಸಮಯವನ್ನು ಮೀರಿ ಆವರಣವನ್ನು ಬಳಸಲಾಗುವುದಿಲ್ಲ ಎಂದು ಖಾತರಿಪಡಿಸಲಾಗಿದೆ.

iv. **ಮೋಟಾರು:** ವೇಗ ಪರೀಕ್ಷೆ ಅಥವಾ ರೇಸಿಂಗ್ ಗಾಗಿ ವಾಹನವನ್ನು ಬಳಸಲಾಗುವುದಿಲ್ಲ ಎಂದು ಖಾತರಿಪಡಿಸಲಾಗಿದೆ.

---

| **ಉದಾಹರಣೆ** |
|---|

**ಸರಕು ಸಾಗಾಣಿಕೆ ವಿಮೆ:** ಭಾಗಗಳಿಗಾದ ಸಣ್ಣ ಹಾನಿಯು ದುಬಾರಿ ಯಂತ್ರೋಪಕರಣಗಳ ರಚನಾತ್ಮಕವಾದ ಒಟ್ಟು ನಷ್ಟಕ್ಕೆ ಕಾರಣವಾಗಬಹುದು. ಅಂತಹ ಯಂತ್ರಪಕರಣಗಳು ಅಂಡರ್ ರೈಟರ್ ರ ಹೊಣೆಗಾರಿಕೆಯನ್ನು ಅಂತಹ ಯಂತ್ರೋಪಕರಣಗಳ ಯಾವುದೇ ಮುರಿದ ಭಾಗವನ್ನು ಬದಲಿಸುವ, ಫಾರ್ವರ್ಡ್ ಮಾಡುವ ಮತ್ತು ಮರುಹೊಂದಿಸುವ ವೆಚ್ಚಕ್ಕೆ ಮಾತ್ರ ಮಿತಿಗೊಳಿಸುವ ಬದಲಿ ಷರತ್ತಿಗೆ ಒಳಪಟ್ಟಿರುತ್ತವೆ.

ಎರಕಹೊಯ್ದ ಪೈಪ್ ಗಳು, ಹಾರ್ಡ್ ಬೋರ್ಡ್ ಗಳು ಕೆಲವೊಮ್ಮೆ ಅಂಚುಗಳಲ್ಲಿ ಮಾತ್ರ ಹಾನಿಗೊಳಗಾಗುತ್ತವೆ. ಎರಕಹೊಯ್ದ ಪೈಪ್ ಗಳು, ಹಾರ್ಡ್ ಬೋರ್ಡ್ ಇತ್ಯಾದಿಗಳ ಮೇಲಿನ ಸಾಗಾಣಿಕೆ ಪಾಲಿಸಿಗಳು

ಹಾನಿಗೊಳಗಾದ ಭಾಗವನ್ನು ಕತ್ತರಿಸಬೇಕು ಮತ್ತು ಬಾಕಿಯನ್ನು ಬಳಸಿಕೊಳ್ಳಬೇಕು ಎಂಬ ಕಟಿಂಗ್ ಷರತ್ತುಗಳಿಗೆ ಒಳಪಟ್ಟಿರುತ್ತವೆ.

---

**c) ಹೆಚ್ಚುವರಿ / ಕಡಿತಗಳನ್ನು ನಿರ್ಧರಿಸುವುದು ಮತ್ತು ಕವರ್ ಅನ್ನು ನಿರ್ಬಂಧಿಸುವುದು**

ನಷ್ಟದ ಮೊತ್ತವು ಕಡಿತ/ಹೆಚ್ಚುವರಿಯನ್ನು ಮೀರಿದಾಗ ಬಾಕಿಯನ್ನು 'ಹೆಚ್ಚುವರಿ' ಷರತ್ತಿನ ಅಡಿಯಲ್ಲಿ ಪಾವತಿಸಲಾಗುತ್ತದೆ. ಮಿತಿಗಿಂತ ಕಡಿಮೆ ನಷ್ಟವನ್ನು ಪಾವತಿಸಲಾಗುವುದಿಲ್ಲ.

ಈ ಷರತ್ತುಗಳ ಉದ್ದೇಶವು ಸಣ್ಣ ಕ್ಲೇಮ್ ಗಳನ್ನು ತೊಡೆದುಹಾಕುವುದಾಗಿದೆ. ವಿಮಾದಾರರು ನಷ್ಟದ ಭಾಗವನ್ನು ಪಾವತಿಸುವಂತೆ ಮಾಡಿರುವುದರಿಂದ, ಹೆಚ್ಚಿನ ಕಾಳಜಿಯನ್ನು ವ್ಯಾಯಾಮ ಮಾಡಲು ಮತ್ತು ನಷ್ಟವನ್ನು ತಡೆಗಟ್ಟುವಿಕೆಯ ಅಭ್ಯಾಸ ಮಾಡಲು ಅವರನ್ನು ಪ್ರೋತ್ಸಾಹಿಸಲಾಗುತ್ತದೆ.

| ಉದಾಹರಣೆ |
| --- |

i. **ಮೋಟಾರು:** ಹಳೆಯ ಮೋಟಾರು ವಾಹನದ ಪ್ರಸ್ತಾಪವನ್ನು ಸಮಗ್ರ ನಿಯಮಗಳ ಮೇಲೆ ಸ್ವೀಕರಿಸಲಾಗುವುದಿಲ್ಲ ಆದರೆ ವಿಮಾದಾರರು ನಿರ್ಬಂಧಿತ ಅಂದರೆ ಮೂರನೇ ವ್ಯಕ್ತಿಯ ಅಪಾಯಗಳ ವಿರುದ್ಧ ಮಾತ್ರ ಕವರ್ ಅನ್ನು ನೀಡುತ್ತಾರೆ.

ii. **ವೈಯಕ್ತಿಕ ಅಪಘಾತ:** ಸ್ವೀಕಾರದ ಗರಿಷ್ಠ ವಯಸ್ಸಿನ ಮಿತಿಯನ್ನು ದಾಟಿದ ವೈಯಕ್ತಿಕ ಅಪಘಾತದ ಪ್ರಸ್ತಾಪಕರಿಗೆ ಸಮಗ್ರ ನಿಯಮಗಳ ಬದಲಿಗೆ ಅಂಗವೈಕಲ್ಯ ಪ್ರಯೋಜನಗಳನ್ನು ಒಳಗೊಂಡಂತೆ ಸಾವಿನ ಅಪಾಯಕ್ಕೆ ಮಾತ್ರ ರಕ್ಷಣೆ ನೀಡಬಹುದು.

**d) ರಿಯಾಯಿತಿಗಳು**

ಅಪಾಯವು ಅನುಕೂಲಕರವಾಗಿದ್ದರೆ ಕಡಿಮೆ ದರಗಳನ್ನು ವಿಧಿಸಲಾಗುತ್ತದೆ ಅಥವಾ ಸಾಮಾನ್ಯ ಕಂತಿನಲ್ಲಿ ರಿಯಾಯಿತಿಯನ್ನು ನೀಡಲಾಗುತ್ತದೆ. ಬೆಂಕಿ ವಿಮೆಯಲ್ಲಿಯ ಅಪಾಯದ ಸುಧಾರಣೆಗೆ ಈ ಕೆಳಗಿನ ವೈಶಿಷ್ಟ್ಯಗಳನ್ನು ಪರಿಗಣಿಸಲಾಗಿದೆ.

i. ಆವರಣದೊಳಗೆ ಸಿಂಚನ(ಸ್ಪ್ರಿಂಕ್ಲರ್) ವ್ಯವಸ್ಥೆಯ ಅಳವಡಿಕೆ

ii. ಆವರಣದಲ್ಲಿ ಕೊಳಾಯಿ ವ್ಯವಸ್ಥೆ(ಹೈಡ್ರಂಟ್ ಸಿಸ್ಟಮ್)ಯ ಸ್ಥಾಪನೆ

iii. ಬಕೆಟ್‌ಗಳು, ಸರಾಗವಾಗಿ ಸಾಗಿಸಬಹುದಾದ ಬೆಂಕಿ ನಂದಿಸುವ ಸಾಧನ(ಪೋರ್ಟಬಲ್ ಎಕ್ಸ್‌ಟಿಂಗ್ವಿಷರ್)ಗಳು ಮತ್ತು ಹಸ್ತಚಾಲಿತ ಅಗ್ನಿಶಾಮಕ ಪಂಪ್ ಗಳನ್ನು ಒಳಗೊಂಡಿರುವ ಕೈ ಉಪಕರಣಗಳ ಸ್ಥಾಪನೆ.

iv. ಸ್ವಯಂಚಾಲಿತ ಅಗ್ನಿಶಾಮಕ ಎಚ್ಚರಿಕೆ(ಅಲಾರ್ಮ್)ಯ ಸ್ಥಾಪನೆ

**ಉದಾಹರಣೆ**

ಮೋಟಾರು ವಿಮೆಯಡಿಯಲ್ಲಿ ಮೋಟಾರು ಸೈಕಲ್ ಅನ್ನು ಯಾವಾಗಲೂ ಸೈಡ್-ಕಾರ್ ಅನ್ನು ಲಗತ್ತಿಸಿ ಉಪಯೋಗಿಸುತ್ತಿದ್ದರೆ ಮಾತ್ರ ಈ ವೈಶಿಷ್ಟ್ಯವು ವಾಹನದ ಹೆಚ್ಚಿನ ಸ್ಥಿರತೆಯ ಕಾರಣದಿಂದಾಗಿ ಸುಧಾರಿತ ಅಪಾಯಕ್ಕೆ ಕೊಡುಗೆ ನೀಡುವುದರಿಂದ ಕಂತಿನಲ್ಲಿ ರಿಯಾಯಿತಿಯನ್ನು ಒದಗಿಸಲಾಗುತ್ತದೆ.

**ಸಾಗಾಣಿಕೆ ವಿಮೆ**ಯಲ್ಲಿ, ವಿಮಾಗಾರರು "ಫುಲ್ ಲೋಡ್" ಕಂಟೇನರ್ ಕಳ್ಳತನ ಮತ್ತು ಕೊರತೆಯ ಸಂಭವವನ್ನು ಕಡಿಮೆ ಮಾಡುವುದರಿಂದ ಕಂತಿನಲ್ಲಿ ರಿಯಾಯಿತಿಗಳನ್ನು ನೀಡುವುದನ್ನು ಪರಿಗಣಿಸಬಹುದು.

ಗುಂಪಿನ ವೈಯಕ್ತಿಕ ಅಪಘಾತದ ಕವರ್ ಅಡಿಯಲ್ಲಿ, ದೊಡ್ಡ ಗುಂಪಿನ ಕವರೇಜ್ ಗಾಗಿ, ಇದು ವಿಮಾದಾರರ ಆಡಳಿತಾತ್ಮಕ ಕೆಲಸ ಮತ್ತು ವೆಚ್ಚಗಳನ್ನು ಕಡಿಮೆ ಮಾಡುವುದರಿಂದ ಕಂತಿನಲ್ಲಿ ರಿಯಾಯಿತಿಗಳನ್ನು ನೀಡಲಾಗುತ್ತದೆ.

---

**e)** ಕ್ಲೇಮ್ ರಹಿತ ವರ್ಷಕ್ಕಾಗಿ ಬೋನಸ್ (ನೋ ಕ್ಲೇಮ್ ಬೆನಸ್)(ಎನ್ ಸಿಬಿ**)**

ಪಡೆಯಬಹುದಾದ ಗರಿಷ್ಠ ಬೋನಸ್ ನ ಮಿತಿಯೊಂದಿಗೆ ಪ್ರತಿಯೊಂದು ಕ್ಲೇಮ್ ರಹಿತ ನವೀಕರಣ ವರ್ಷಕ್ಕೆ ಒಂದು ನಿರ್ದಿಷ್ಟ ಶೇಕಡಾವಾರು ಮೊತ್ತವನ್ನು ಬೋನಸ್ ನಂತೆ ನೀಡಲಾಗುತ್ತದೆ. ಕ್ಲೇಮ್ ರಹಿತ ವರ್ಷಗಳವರೆಗೆ ಸಂಪೂರ್ಣ ಗುಂಪಿಗೆ ಅಥವಾ ಮೋಟಾರು ವಾಹನದ ಸ್ವಂತ ಹಾನಿಯ ಪಾಲಿಸಿದಾರರಿಗೆ ಉಂಟಾದ ಕ್ಲೇಮ್ ಅನುಪಾತವನ್ನು ಅವಲಂಬಿಸಿ, ನವೀಕರಣದ ಸಮಯದಲ್ಲಿ ಮಾತ್ರ ಒಟ್ಟು ಕಂತಿನಲ್ಲಿ ಕಡಿತದ ಮೂಲಕ ಇದನ್ನು ಅನುಮತಿಸಲಾಗುತ್ತದೆ.

**ಯಾವುದೇ ಅಂಡರ್ ರೈಟಿಂಗ್ ಅನುಭವವನ್ನು ಸುಧಾರಿಸಲು ಕ್ಲೇಮ್ ಬೋನಸ್ ಪ್ರಬಲ ತಂತ್ರವಾಗಿದೆ ಮತ್ತು ಬೆಲೆನಿರ್ಧಾರ ವ್ಯವಸ್ಥೆ(ರೇಟಿಂಗ್ ಸಿಸ್ಟಮ್)ಗಳ ಅವಿಭಾಜ್ಯ ಅಂಗವಾಗಿದೆ.** ಈ ಬೋನಸ್ ವಿಮಾದಾರರಲ್ಲಿ ನೈತಿಕ ಅಪಾಯದ ಅಂಶವನ್ನು ಗುರುತಿಸುತ್ತದೆ. ಮೋಟಾರು ವಿಮೆಯಲ್ಲಿರುವಂತೆ ಉತ್ತಮ ಚಾಲನಾ ಕೌಶಲ್ಯವನ್ನು ಅಳವಡಿಸಿಕೊಳ್ಳುವ ಮೂಲಕ ಅಥವಾ ಆರೋಗ್ಯ ಪಾಲಿಸಿಗಳಲ್ಲಿ ಅವರ ಆರೋಗ್ಯದ ಉತ್ತಮ ಕಾಳಜಿಯನ್ನು ತೆಗೆದುಕೊಳ್ಳುವ ಮೂಲಕ ಕ್ಲೇಮ್ ಗಳನ್ನು ಸಲ್ಲಿಸದಿರುವ ವಿಮಾದಾರರಿಗೆ ಇದು ಪ್ರತಿಫಲ ನೀಡುತ್ತದೆ.

**f) ನಿರಾಕರಣೆ**

ಭೌತಿಕ ಅಪಾಯವು ಗಣನೀಯವಾಗಿ ಕೆಟ್ಟ ಅಪಾಯವನ್ನು ಒಳಗೊಂಡಿದ್ದರೆ, ಅಪಾಯವು ವಿಮೆಮಾಡಲಾಗದ ಅಪಾಯವೆಂದು ನಿರಾಕರಿಸಲ್ಪಡುತ್ತದೆ. ತಮ್ಮ ಹಿಂದಿನ ನಷ್ಟದ ಅನುಭವ, ಅಪಾಯಗಳ ಜ್ಞಾನ ಮತ್ತು ಒಟ್ಟಾರೆ ಅಂಡರ್ ರೈಟಿಂಗ್ ನೀತಿಯ ಆಧಾರದ ಮೇಲೆ, ವಿಮಾಗಾರರು ಪ್ರತಿ ವರ್ಗದ ವಿಮೆಯಲ್ಲಿ ನಿರಾಕರಿಸಬೇಕಾದ ಅಪಾಯಗಳ ಪಟ್ಟಿಯನ್ನು ರೂಪಿಸಿದ್ದಾರೆ.

## C. ನೈತಿಕ ಅಪಾಯ

ಈ ಕೆಳಗಿನ ವಿಧಾನಗಳಲ್ಲಿ ನೈತಿಕ ಅಪಾಯವು ಉದ್ಭವಿಸಬಹುದು:

**a) ಅಪ್ರಾಮಾಣಿಕತೆ**

ಕೆಟ್ಟ ನೈತಿಕ ಅಪಾಯದ ಒಂದು ತೀವ್ರವಾದ ಉದಾಹರಣೆಯೆಂದರೆ, ವಿಮಾದಾರನು ಕ್ಲೇಮ್ ಅನ್ನು ಪಡೆಯಲು ಅಥವಾ ನಷ್ಟವನ್ನುಂಟುಮಾಡುವ ಉದ್ದೇಶಪೂರ್ವಕ ಉದ್ದೇಶದಿಂದ ವಿಮೆಯನ್ನು ತೆಗೆದುಕೊಳ್ಳುವುದಾಗಿದೆ. ಒಬ್ಬ ಪ್ರಾಮಾಣಿಕ ವಿಮಾದಾರರು ಸಹ ಹಣಕಾಸಿನ ತೊಂದರೆಗಳಲ್ಲಿ ಸಿಲುಕಿಕೊಂಡರೆ ನಷ್ಟವನ್ನು ಉಂಟುಮಾಡಲು ಪ್ರಚೋದಿಸಲ್ಪಡಬಹುದು..

**b) ಅಜಾಗರೂಕತೆ**

ನಷ್ಟದ ಬಗ್ಗೆ ಉದಾಸೀನತೆ ಅಜಾಗರೂಕತೆಯ ಉದಾಹರಣೆಯಾಗಿದೆ. ವಿಮೆಯ ಅಸ್ತಿತ್ವದ ಕಾರಣದಿಂದಾಗಿ ವಿಮಾದಾರರು ವಿಮೆ ಮಾಡಿದ ಆಸ್ತಿಯ ಬಗ್ಗೆ ಅಸಡ್ಡೆ ಮನೋಭಾವವನ್ನು ಅಳವಡಿಸಿಕೊಳ್ಳಬಹುದು.

ವಿಮಾದಾರರು ಒಬ್ಬ ವಿಮೆ ಮಾಡದಿದ್ದ ವಿವೇಕಯುತ ಮತ್ತು ಸಮಂಜಸವಾದ ಮನುಷ್ಯನಂತೆ ಆಸ್ತಿಯ ಕಾಳಜಿಯನ್ನು ತೆಗೆದುಕೊಳ್ಳದಿದ್ದರೆ ನೈತಿಕ ಅಪಾಯವು ಅತೃಪ್ತಿಕರವಾಗಿರುತ್ತದೆ.

**c) ಕೈಗಾರಿಕಾ ಸಂಬಂಧಗಳು**

ಉದ್ಯೋಗದಾತ-ಉದ್ಯೋಗಿಗಳಲ್ಲಿ ಸಂಬಂಧವು ಕೆಟ್ಟ ನೈತಿಕ ಅಪಾಯದ ಅಂಶವನ್ನು ಒಳಗೊಂಡಿರಬಹುದು.

**d) ತಪ್ಪಾದ ಕ್ಲೇಮ್ ಗಳು**

ಕ್ಲೇಮ್ ಗಳು ಸಂಭವಿಸಿದಾಗ ಈ ರೀತಿಯ ನೈತಿಕ ಅಪಾಯವು ಉದ್ಭವಿಸುತ್ತದೆ. ವಿಮಾದಾರರು ಉದ್ದೇಶಪೂರ್ವಕವಾಗಿ ನಷ್ಟವನ್ನು ಉಂಟುಮಾಡದಿರಬಹುದು ಆದರೆ ನಷ್ಟ ಸಂಭವಿಸಿದ ಮೇಲೆ, ನಷ್ಟ ಪರಿಹಾರದ ತತ್ವವನ್ನು ಸಂಪೂರ್ಣವಾಗಿ ಕಡೆಗಣಿಸಿ, ಅವರು ಅಸಮಂಜಸವಾದ ಹೆಚ್ಚಿನ ಮೊತ್ತದ ಪರಿಹಾರವನ್ನು ಕೇಳಲು ಪ್ರಯತ್ನಿಸುತ್ತಾರೆ.

**ಮಾಹಿತಿ**

**ಉಪ-ಮಿತಿಗಳು:** ವಿಮಾದಾರರು ಹೆಚ್ಚಿದ ಬೆಲೆ(ಬಿಲ್)ಗಳಿಗೆ ತಡೆಹಾಕಲು ಕೊಠಡಿಯ ವೆಚ್ಚಗಳು, ಶಸ್ತ್ರಚಿಕಿತ್ಸಾ ವಿಧಾನಗಳು ಅಥವಾ ವೈದ್ಯರ ಶುಲ್ಕಕ್ಕಾಗಿ ಪ್ರತ್ಯೇಕವಾಗಿ ಒಟ್ಟು ಪಾವತಿಯ ಮೇಲೆ ಮಿತಿಯನ್ನು ವಿಧಿಸಬಹುದು.

ವಿಮಾದಾರರ ನೈತಿಕ ಅಪಾಯವನ್ನು ಅನುಮಾನಿಸಿದರೆ, ಏಜೆಂಟರು ಅವರಿಗೆ ಪ್ರೋತ್ಸಾಹನೆ ನೀಡಬಾರದು ಅಥವಾ ಅಂತಹ ಪ್ರಸ್ತಾಪಗಳನ್ನು ವಿಮಾ ಕಂಪನಿಗೆ ತರಬಾರದು. ಅಂತಹ ಸಮಸ್ಯೆಗಳನ್ನು ವಿಮಾ ಕಂಪನಿ ಅಧಿಕಾರಿಗಳ ಮುಂದೆ ತರಬೇಕು..

**1. ಅಲ್ಪಾವಧಿಯ ಮಾಪಕಗಳು**

ಸಾಮಾನ್ಯವಾಗಿ, ಕಂತಿನ ದರಗಳನ್ನು ಹನ್ನೆರಡು ತಿಂಗಳ ಅವಧಿಗೆ ಉಲ್ಲೇಖಿಸಲಾಗುತ್ತದೆ. ಪಾಲಿಸಿಯನ್ನು ಕಡಿಮೆ ಅವಧಿಗಾಗಿ ತೆಗೆದುಕೊಂಡರೆ, ಶಾರ್ಟ್ ಪೀರಿಯಡ್ ಸ್ಕೇಲ್ ಎಂದು ಕರೆಯಲಾಗುವ ವಿಶೇಷ ಪ್ರಮಾಣದ ದರದ ಕಂತನ್ನು ವಿಧಿಸಲಾಗುತ್ತದೆ. ಅಲ್ಪಾವಧಿಯ ವಿಮೆಗೆ ವಿಧಿಸಬಹುದಾದ ಕಂತು ಅನುಪಾತಕ್ಕೆ ಅನುಗುಣವಾಗಿರುವುದಿಲ್ಲ.

ಅಲ್ಪಾವಧಿಯ ಮಾಪಕಗಳ ಅಗತ್ಯ

**a)** ಈ ದರಗಳನ್ನು ಅನ್ವಯಿಸಲಾಗುತ್ತದೆ ಏಕೆಂದರೆ 12 ತಿಂಗಳ ಅವಧಿಗೆ ಅಥವಾ ಕಡಿಮೆ ಅವಧಿಯ ಪಾಲಿಸಿಗೆ ಜಾರಿಗೊಳಿಸುವಿಕೆಯು ಒಳಗೊಂಡಿರುವ ವೆಚ್ಚಗಳು ಬಹುಷಃ ಒಂದೇ ಆಗಿರುತ್ತವೆ..

**b)** ಅಲ್ಲದೆ, ವಾರ್ಷಿಕ ಪಾಲಿಸಿಯಲ್ಲಿ ವರ್ಷಕ್ಕೊಮ್ಮೆ ಮಾತ್ರ ನವೀಕರಣ ಪ್ರಕ್ರಿಯೆಯ ಅಗತ್ಯವಿರುತ್ತದೆ ಆದರೆ ಅಲ್ಪಾವಧಿಯ ವಿಮೆಗಳು ಹೆಚ್ಚು ಆಗಾಗ್ಗೆ ನವೀಕರಣಗಳನ್ನು ಒಳಗೊಂಡಿರುತ್ತವೆ. ಅನುಪಾತದಲ್ಲಿ ಕಂತನ್ನು ಅನುಮತಿಸಿದರೆ, ವಿಮಾದಾರರ ಕಡೆಯಿಂದ ಅಲ್ಪಾವಧಿಯ ಪಾಲಿಸಿಗಳನ್ನು ತೆಗೆದುಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತದೆ ಮತ್ತು ಆ ಮೂಲಕ,

**c)** ಜೊತೆಗೆ, ಕೆಲವು ವಿಮೆಗಳು ಋತುಮಾನಕ್ಕನುಸರಿಸಿದ ಲಕ್ಷಣಗಳನ್ನು ಹೊಂದಿರುತ್ತವೆ ಮತ್ತು ಆ ಋತುವಿನಲ್ಲಿ ಅಪಾಯವು ಹೆಚ್ಚಾಗಿರುತ್ತದೆ. ಕೆಲವೊಮ್ಮೆ ಅಪಾಯವು ಹೆಚ್ಚಾಗಿರು ಅಂತಹ ಅವಧಿಯಲ್ಲಿ ವಿಮೆಗಳನ್ನು ತೆಗೆದುಕೊಳ್ಳಲಾಗುತ್ತದೆ ಮತ್ತು ಆ ಮೂಲಕ ವಿಮಾಗಾರರ ವಿರುದ್ಧವಾದ ಆಯ್ಕೆ ನಡೆಯುತ್ತದೆ. ಅಂತಹ ವಿಮಾಗಾರರ ವಿರುದ್ಧವಾದ ಆಯ್ಕೆಯನ್ನು ತಡೆಗಟ್ಟಲು ಅಲ್ಪಾವಧಿಯ ಮಾಪಕಗಳನ್ನು ಅಭಿವೃದ್ಧಿಪಡಿಸಲಾಗಿದೆ. ವಿಮಾದಾರರಿಂದ ವಾರ್ಷಿಕ ವಿಮೆಯನ್ನು ರದ್ದುಗೊಳಿಸಿದಾಗ ಅವು ಅನ್ವಯಿಸುತ್ತವೆ. ಆ ಸಂದರ್ಭದಲ್ಲಿ ವಿಮಾಗಾರರು ಅಪಾಯದಲ್ಲಿದ್ದ ಅವಧಿಯವರೆಗಿನ ಕಡಿಮೆ ಅವಧಿಯ ಕಂತನ್ನು ಇರಿಸಿಕೊಂಡು ಮರುಪಾವತಿ ಮಾಡಲಾಗುತ್ತದೆ.

**ಕನಿಷ್ಠ ಕಂತು**

ಪ್ರತಿ ಪಾಲಿಸಿಯಡಿಯಲ್ಲಿ ಕನಿಷ್ಠ ಕಂತನ್ನು ವಿಧಿಸುವುದು ಅಭ್ಯಾಸವಾಗಿದೆ, ಆದ್ದರಿಂದ ಪಾಲಿಸಿಯನ್ನು ನೀಡುವ ಆಡಳಿತಾತ್ಮಕ ವೆಚ್ಚಗಳನ್ನು ಒಳಗೊಳ್ಳಲಾಗುತ್ತದೆ.

| **ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1** |
|---|

ನೈತಿಕ ಅಪಾಯವನ್ನು ಪತ್ತೆಹಚ್ಚಿದಾಗ ಏಜೆಂಟರಿಂದ ಏನನ್ನು ನಿರೀಕ್ಷಿಸಲಾಗುತ್ತದೆ?

I. ಮೊದಲಿನಂತೆ ವಿಮೆಯನ್ನು ಮುಂದುವರಿಸುವುದು

II. ವಿಮಾಗಾರರಿಗೆ ಅದರ ವರದಿಯನ್ನು ಮಾಡುವುದು

III. ಕ್ಲೇಮ್ ಗಳಲ್ಲಿ ಪಾಲನ್ನು ಕೇಳುವುದು

IV. ಕಣ್ಣು ಮುಚ್ಚಿ ದುರ್ಲಕ್ಷ್ಯ ಮಾಡುವುದು

---

## D. ವಿಮಾ ಮೊತ್ತವನ್ನು ನಿಗದಿಪಡಿಸುವುದು

ವಿಮಾಮೊತ್ತವು ಪಾಲಿಸಿ ಷರತ್ತಿನ ಪ್ರಕಾರ ವಿಮಾ ಕಂಪನಿಯು ನೀಡುವ ಪರಿಹಾರದ ಗರಿಷ್ಠ ಮೊತ್ತವಾಗಿದೆ. ವಿಮಾದಾರನು ಪರಿಹಾರದ ಮಿತಿಯನ್ನು ಆಯ್ಕೆಮಾಡುವಲ್ಲಿ ಅದು ಕ್ಲೇಮ್ ಸಮಯದಲ್ಲಿ ಮರುಪಾವತಿಸಲಾಗುವ ಗರಿಷ್ಠ ಮೊತ್ತವಾಗಿರುವುದರಿಂದ ಬಹಳ ಜಾಗರೂಕರಾಗಿರಬೇಕು.

ವಿಮಾ ಮೊತ್ತವನ್ನು ಯಾವಾಗಲೂ ವಿಮಾದಾರರಿಂದಲೇ ನಿಗದಿಪಡಿಸಲಾಗುತ್ತದೆ. ಇದೇ ಮೊತ್ತದ ಆಧಾರದ ಮೇಲೆ ಪಾಲಿಸಿಯಡಿಯಲ್ಲಿಯ ಕಂತಿನ ದರವನ್ನು ಪಡೆಯಲಾಗುತ್ತದೆ.

ಇದು ಆಸ್ತಿಯ ನಿಜವಾದ ಮೌಲ್ಯವನ್ನು ಪ್ರತಿನಿಧಿಸಬೇಕು. ಹೆಚ್ಚಿನ ವಿಮೆ ಇದ್ದರೆ, ವಿಮಾದಾರರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ ಮತ್ತು ಕಡಿಮೆ ವಿಮೆಯಡಿಯಲ್ಲಿ, ಕ್ಲೇಮ್ ಪ್ರಮಾಣಾನುಗುಣವಾಗಿ ಕಡಿಮೆಯಾಗುತ್ತದೆ.

**ವಿಮಾ ಮೊತ್ತವನ್ನು ನಿರ್ಧರಿಸುವುದು**

ಪ್ರತಿಯೊಂದು ವರ್ಗದ ವ್ಯವಹಾರದಡಿಯಲ್ಲಿ ವಿಮಾದಾರರಿಗೆ ವಿಮಾ ಮೊತ್ತವನ್ನು ನಿರ್ಧರಿಸುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಈ ಕೆಳಗಿನ ಅಂಶಗಳ ಬಗ್ಗೆ ಸಲಹೆ ನೀಡಬೇಕು:

a) **ವೈಯಕ್ತಿಕ ಅಪಘಾತ ವಿಮೆ:** ಕಂಪನಿಯಿಂದ ನೀಡಲಾಗುವ ವಿಮಾ ಮೊತ್ತವು ನಿಗದಿತ ಮೊತ್ತವಾಗಿರಬಹುದು ಅಥವಾ ಅದು ವಿಮಾದಾರರ ಆದಾಯವನ್ನು ಆಧರಿಸಿರಬಹುದು. ಕೆಲವು ವಿಮಾ ಕಂಪನಿಗಳು ನಿರ್ದಿಷ್ಟ ಅಂಗವೈಕಲ್ಯಕ್ಕಾಗಿ ವಿಮಾದಾರರ ಮಾಸಿಕ ಆದಾಯದ 60 ಪಟ್ಟು ಅಥವಾ 100 ಪಟ್ಟು ಸಮಾನವಾದ ಪ್ರಯೋಜನವನ್ನು ನೀಡಬಹುದು. ಗರಿಷ್ಠ ಮೊತ್ತದ ಮೇಲೆ ಮಿತಿ ಅಥವಾ 'ಕ್ಯಾಪ್' ಇರಬಹುದು. ಪರಿಹಾರಗಳು ಕಂಪನಿಯಿಂದ ಕಂಪನಿಗೆ ಬದಲಾಗಬಹುದು. ಗುಂಪಿನ ವೈಯಕ್ತಿಕ ಅಪಘಾತ ಪಾಲಿಸಿಗಳಲ್ಲಿ ವಿಮಾ ಮೊತ್ತವನ್ನು ಪ್ರತಿ ವಿಮಾದಾರರಿಗೆ ಪ್ರತ್ಯೇಕವಾಗಿ ನಿಗದಿಪಡಿಸಬಹುದು ಅಥವಾ ವಿಮಾದಾರರಿಗೆ ಪಾವತಿಸಬೇಕಾದ ಪರಿಹಾರಗಳಿಗೆ ಜೋಡಿಸಬಹುದು.

b) **ಮೋಟಾರು ವಿಮೆ:** ಮೋಟಾರು ವಿಮೆಯ ಸಂದರ್ಭದಲ್ಲಿ ವಿಮಾ ಮೊತ್ತವು ವಿಮಾದಾರರ ಘೋಷಿತ ಮೌಲ್ಯವಾಗಿದೆ [ಐಡಿವಿ]. ಇದು ವಾಹನದ ಮೌಲ್ಯವಾಗಿದ್ದು ಹಿಂದಿನ ಭಾರತದ ಮೋಟಾರು ಸುಂಕ(ಇಂಡಿಯಾ ಮೋಟಾರ್ ಟ್ಯಾರಿಫ್)ದಲ್ಲಿ ಸೂಚಿಸಿದಂತೆ ಶೇಕಡಾವಾರು ಸವಕಳಿಯೊಂದಿಗೆ

ವಾಹನದ ಪ್ರಸ್ತುತ ತಯಾರಿಕೆಯ ಪಟ್ಟಿ ಮಾಡಲಾದ ಮಾರಾಟದ ಬೆಲೆಯನ್ನು ಸರಿಹೊಂದಿಸುವ ಮೂಲಕ ತಲುಪಲಾಗುತ್ತದೆ. ತಯಾರಕರ ಪಟ್ಟಿಯು ಮಾರಾಟ ಬೆಲೆಯು ನೋಂದಣಿ ಮತ್ತು ವಿಮೆಯನ್ನು ಹೊರತುಪಡಿಸಿ ಸ್ಥಳೀಯ ಸುಂಕಗಳು/ತೆರಿಗೆಗಳನ್ನು ಒಳಗೊಂಡಿರುತ್ತದೆ.

ಐಡಿವಿ = (ತಯಾರಕರ ಪಟ್ಟಿ ಮಾಡಲಾದ ಮಾರಾಟದ ಬೆಲೆ - ಸವಕಳಿ) + (ಪಟ್ಟಿ ಮಾಡಲಾದ ಮಾರಾಟದ ಬೆಲೆ-ಸವಕಳಿಯಲ್ಲಿ ಸೇರಿಸದ ಪರಿಕರಗಳು) ಮತ್ತು ನೋಂದಣಿ ಮತ್ತು ವಿಮಾ ವೆಚ್ಚಗಳನ್ನು ಹೊರತುಪಡಿಸುತ್ತದೆ.

ಬಳಕೆಯಲ್ಲಿಲ್ಲದ ಅಥವಾ 5 ವರ್ಷಕ್ಕಿಂತ ಹಳೆಯದಾದ ವಾಹನಗಳ ಐಡಿವಿಯನ್ನು ವಿಮಾಗಾರರು ಮತ್ತು ವಿಮೆದಾರರ ನಡುವಿನ ಪರಸ್ಪರ ಒಪ್ಪಂದದ ಮೂಲಕ ಲೆಕ್ಕಹಾಕಲಾಗುತ್ತದೆ. ಸವಕಳಿಯ ಬದಲಿಗೆ, ಸಮೀಕ್ಷತರು(ಸರ್ವೇಯರ್‌ಗಳು), ಕಾರ್ ಡೀಲರ್‌ಗಳು ಇತ್ಯಾದಿಗಳಿಂದ ವಾಹನದ ಸ್ಥಿತಿಯನ್ನು ಮೌಲ್ಯಮಾಪನ ಮಾಡುವ ಮೂಲಕ ಹಳೆಯ ಕಾರುಗಳ ಐಡಿವಿಯನ್ನು ಪಡೆಯಲಾಗುತ್ತದೆ.

ಐಡಿವಿಯೆಂದರೆ ವಾಹನವು ಕಳುವಾದಾಗ ಅಥವಾ ಸಂಪೂರ್ಣ ನಷ್ಟವನ್ನು ಅನುಭವಿಸಿದರೆ ನೀಡಲಾಗುವ ಪರಿಹಾರದ ಮೊತ್ತವಾಗಿದೆ. ಕಾರಿನ ಮಾರುಕಟ್ಟೆ ಮೌಲ್ಯದ ಸಮೀಪವಿರುವ ಐಡಿವಿಯನ್ನು ಪಡೆಯಲು ಹೆಚ್ಚು ಶಿಫಾರಸು ಮಾಡಲಾಗಿದೆ. ವಿಮಾದಾರರಿಗೆ ಐಡಿವಿಯನ್ನು ಕಡಿಮೆ ಮಾಡಲು ವಿಮಾಗಾರರು 5% ರಿಂದ 10% ರ ವ್ಯಾಪ್ತಿಯನ್ನು ಒದಗಿಸುತ್ತಾರೆ. ಕಡಿಮೆ ಐಡಿವಿಯೆಂದರೆ ಕಡಿಮೆ ಕಂತು ಎಂದರ್ಥ.

c) **ಅಗ್ನಿ ವಿಮೆ:** ಅಗ್ನಿ ವಿಮೆಯಲ್ಲಿ ಕಟ್ಟಡಗಳು/ಸ್ಥಾವರ ಮತ್ತು ಯಂತ್ರೋಪಕರಣಗಳು ಮತ್ತು ನೆಲೆವಸ್ತುಗಳಿಗೆ ಪರಿಹಾರ ಅಥವಾ ಮರುಸ್ಥಾಪನೆಯ ಮೌಲ್ಯದ ಆಧಾರದ ಮೇಲೆ ವಿಮಾ ಮೊತ್ತವನ್ನು ನಿಗದಿಪಡಿಸಬಹುದು. ವಸ್ತುವಿನ ಬೆಲೆಯಲ್ಲಿ ಸವಕಳಿಯನ್ನು ಕಡಿಮೆ ಮಾಡಿದ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ವಸ್ತುಗಳನ್ನು ಕವರ್ ಮಾಡಲಾಗುತ್ತದೆ. (ಮರುಸ್ಥಾಪನೆಯ ಮೌಲ್ಯವನ್ನು ಅಧ್ಯಾಯ 28- ವಾಣಿಜ್ಯ ವಿಮೆಯಲ್ಲಿ ವಿವರವಾಗಿ ವಿವರಿಸಲಾಗಿದೆ)

d) **ಸರಕುಗಳ ವಿಮೆ:** ಸರಕುಗಳ ಸಂದರ್ಭದಲ್ಲಿ, ವಿಮಾ ಮೊತ್ತವು ಅವುಗಳ ಮಾರುಕಟ್ಟೆ ಮೌಲ್ಯವಾಗಿದೆ. ನಷ್ಟದ ನಂತರ ಹಾನಿಗೊಳಗಾದ ಕಚ್ಚಾ ವಸ್ತುಗಳನ್ನು ಬದಲಿಸಲು ಮಾರುಕಟ್ಟೆಯಲ್ಲಿ ಈ ಸರಕುಗಳನ್ನು ಖರೀದಿಸಲು ಬೇಕಾಗಬಹುದಾದ ವೆಚ್ಚದಲ್ಲಿ ವಿಮೆದಾರರಿಗೆ ಮರುಪಾವತಿಸಲಾಗುತ್ತದೆ.

e) **ಸರಕು ಸಾಗಾಣಿಕೆ ವಿಮೆ:** ಇದು ಒಪ್ಪಿದ ಮೌಲ್ಯದ ಪಾಲಿಸಿಯಾಗಿದೆ ಮತ್ತು ಒಪ್ಪಂದದ ಸಮಯದಲ್ಲಿ ವಿಮಾಗಾರರು ಮತ್ತು ವಿಮಾದಾರರ ನಡುವಿನ ಒಪ್ಪಂದದ ಪ್ರಕಾರ ವಿಮಾ ಮೊತ್ತವಿರುತ್ತದೆ. ಸಾಮಾನ್ಯವಾಗಿ ಇದು ಸರಕುಗಳ ವೆಚ್ಚದ ಮೊತ್ತ ಮತ್ತು ವಿಮೆ + ಸರಕು ಅಂದರೆ ಸಿಐಎಫ್ ಮೌಲ್ಯವನ್ನು ಒಳಗೊಂಡಿರುತ್ತದೆ.

f) **ಹಡಗು ವಿಮೆ:** ಹಡಗು ಹೊರಭಾಗ(ಹಲ್)ದ ವಿಮೆಯಲ್ಲಿ, ವಿಮಾ ಮೊತ್ತವು ಒಪ್ಪಂದದ ಆರಂಭದಲ್ಲಿ ವಿಮಾಗಾರರು ಮತ್ತು ವಿಮಾದಾರರ ನಡುವೆ ಒಪ್ಪಿಕೊಂಡ ಮೌಲ್ಯವಾಗಿದೆ. ಹಲ್/ಹಡಗಿನ ತಪಾಸಣೆಯ ನಂತರ ಪ್ರಮಾಣೀಕೃತ ಮೌಲ್ಯಮಾಪಕರಿಂದ ಈ ಮೌಲ್ಯವನ್ನು ತಲುಪಲಾಗುತ್ತದೆ.

g) **ಹೊಣೆಗಾರಿಕೆಯ ವಿಮೆ: ಹೊ**ಣೆಗಾರಿಕೆಯ ಪಾಲಿಸಿಗಳ ಸಂದರ್ಭದಲ್ಲಿ ವಿಮಾ ಮೊತ್ತವನ್ನು ಒಡ್ಡಿಕೊಂಡಿರುವಿಕೆಯ ಪ್ರಮಾಣ, ಭೌಗೋಳಿಕ ಹರಡುವಿಕೆಯ ಆಧಾರದ ಮೇಲೆ ಕೈಗಾರಿಕಾ ಘಟಕಗಳ ಹೊಣೆಗಾರಿಕೆಯ ಒಡ್ಡುವಿಕೆಯ ಪ್ರಮಾಣವಾಗಿದೆ. ಹೆಚ್ಚುವರಿ ಕಾನೂನು ವೆಚ್ಚಗಳು ಮತ್ತು ಖರ್ಚುಗಳು ಕ್ಲೇಮ್ ಪರಿಹಾರದ ಭಾಗವಾಗಿರಬಹುದು. ಮೇಲಿನ ನಿಯತಾಂಕಗಳ ಆಧಾರದ ಮೇಲೆ ವಿಮಾದಾರರಿಂದ ವಿಮಾ ಮೊತ್ತವನ್ನು ನಿರ್ಧರಿಸಲಾಗುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ - 2**

ತನ್ನ ವಿರುದ್ಧ ಯಾವುದೇ ನಿರ್ಲಕ್ಷ್ಯದ ಕ್ಲೇಮ್ ಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ವೈದ್ಯರಿಗೆ ವಿಮಾ ಯೋಜನೆಯನ್ನು ಸೂಚಿಸಿ.

I. ವೈಯಕ್ತಿಕ ಅಪಘಾತ ವಿಮೆ

II. ವೃತ್ತಿಪರ ಹೊಣೆಗಾರಿಕೆ ವಿಮೆ

III. ಹಡಗು ಹೊರಭಾಗ(ಹಲ್)ದ ವಿಮೆ

IV. ಆರೋಗ್ಯ ವಿಮೆ

---

**ಸಾರಾಂಶ**

a) ದರ ತಯಾರಿಕೆಗೆ ಅಪಾಯಗಳನ್ನು ವರ್ಗೀಕರಿಸುವ ಪ್ರಕ್ರಿಯೆ ಮತ್ತು ಅವು ಯಾವ ವರ್ಗಕ್ಕೆ ಸೇರುತ್ತವೆ ಎಂಬುದನ್ನು ನಿರ್ಧರಿಸುವುದು ಮುಖ್ಯವಾಗಿದೆ.

b) ವಿಮೆಗಾಗಿ ನೀಡಲಾದ ಅಪಾಯವು ಸ್ವೀಕಾರಾರ್ಹವೇ, ಮತ್ತು ಹಾಗಿದ್ದಲ್ಲಿ, ಯಾವ ದರ, ನಿಯಮಗಳು ಮತ್ತು ಷರತ್ತುಗಳಡಿಯಲ್ಲಿ ವಿಮಾ ರಕ್ಷಣೆಯನ್ನು ಸ್ವೀಕರಿಸಲಾಗುತ್ತದೆ ಎಂಬುದನ್ನು ನಿರ್ಧರಿಸುವ ಪ್ರಕ್ರಿಯೆಯೇ ಅಂಡರ್ ರೈಟಿಂಗ್ ಆಗಿದೆ.

c) ದರವು ವಿಮೆಯ ನಿರ್ದಿಷ್ಟ ಘಟಕದ ಬೆಲೆಯಾಗಿದೆ.

d) ವಿಮೆಯ ಬೆಲೆ ಸಮರ್ಪಕ ಮತ್ತು ಸಮಂಜಸವಾಗಿರಬೇಕು ಎಂದು ಖಚಿತಪಡಿಸಿಕೊಳ್ಳುವುದು ದರ ತಯಾರಿಕೆಯ ಮೂಲ ಉದ್ದೇಶವಾಗಿದೆ.

e) ವೆಚ್ಚಗಳು, ಮೀಸಲುಗಳು ಮತ್ತು ಲಾಭಗಳನ್ನು ಒದಗಿಸಲು ಶೇಕಡಾವಾರುಗಳನ್ನು ಸೇರಿಸುವ ಮೂಲಕ 'ಶುದ್ಧ ಕಂತನ್ನು' ಸೂಕ್ತವಾಗಿ ಹೇರಿಕೆ(ಲೋಡ್) ಮಾಡಲಾಗುತ್ತದೆ ಅಥವಾ ಹೆಚ್ಚಿಸಲಾಗುತ್ತದೆ..

f) ವಿಮೆಯ ಭಾಷೆಯಲ್ಲಿ ಅಪಾಯ ಎಂಬ ಪದವು ನಿರ್ದಿಷ್ಟ ಅಪಾಯದಿಂದ ಉಂಟಾಗುವ ನಷ್ಟದ ಅವಕಾಶವನ್ನು ಸೃಷ್ಟಿಸುವ ಅಥವಾ ಹೆಚ್ಚಿಸುವ ಪರಿಸ್ಥಿತಿಗಳು ಅಥವಾ ವೈಶಿಷ್ಟ್ಯಗಳು ಅಥವಾ ಗುಣಲಕ್ಷಣಗಳನ್ನು ಸೂಚಿಸುತ್ತದೆ.

**g)** ಕಡಿತ/ಹೆಚ್ಚುವರಿಗಳ ಷರತ್ತುಗಳನ್ನು ವಿಧಿಸುವ ಉದ್ದೇಶವು ಸಣ್ಣ ಹಕ್ಕುಗಳನ್ನು ತೊಡೆದುಹಾಕುವುದಾಗಿದೆ.

**h)** ಕ್ಲೇಮ್ ರಹಿತ ವರ್ಷಗಳಿಗಾಗಿ (ನೋ ಕ್ಲೇಮ್) ಬೋನಸ್ ವಿಮೆಯ ಅನುಭವವನ್ನು ಸುಧಾರಿಸಲು ಪ್ರಬಲ ತಂತ್ರವಾಗಿದೆ ಮತ್ತು ರೇಟಿಂಗ್ ವ್ಯವಸ್ಥೆಗಳ ಅವಿಭಾಜ್ಯ ಅಂಗವಾಗಿದೆ.

**i)** ಪಾಲಿಸಿ ಷರತ್ತಿನ ಪ್ರಕಾರ ವಿಮಾ ಕಂಪನಿಯು ಪರಿಹಾರವನ್ನು ನೀಡುವ ಗರಿಷ್ಠ ಮೊತ್ತವು ವಿಮಾ ಮೊತ್ತವಾಗಿದೆ.

---

## ಪ್ರಮುಖ ಪದಗಳು

**a)** ಅಂಡರ್ ರೈಟಿಂಗ್

**b)** ಬೆಲೆ ನಿರ್ಧಾರ

**c)** ಭೌತಿಕ ಅಪಾಯಗಳು

**d)** ನೈತಿಕ ಅಪಾಯಗಳು

**e)** ನಷ್ಟಪರಿಹಾರ

**f)** ಕಂತಿನ ಮೇಲೆ ಹೆಚ್ಚುವರಿಯ ಹೇರಿಕೆ

**g)** ಖಾತರಿಗಳು

**h)** ಕಡಿತಗಳು

**i)** ಹೆಚ್ಚುವರಿ

---

## ನಿಮ್ಮನ್ನು ಪರೀಕ್ಷಿಸಿ ಪ್ರಶ್ನೆಗಳಿಗೆ ಉತ್ತರಗಳು

ಉತ್ತರ 1 - ಸರಿಯಾದ ಉತ್ತರ II ಆಗಿದೆ.

ಉತ್ತರ 1 - ಸರಿಯಾದ ಉತ್ತರ II ಆಗಿದೆ.

---

# ಅಧ್ಯಾಯ G-03

# ವೈಯಕ್ತಿಕ ಮತ್ತು ಚಿಲ್ಲರೆ ವಿಮೆ

## ಅಧ್ಯಾಯ ಪರಿಚಯ

ನಾವು ಸಾಮಾನ್ಯ ವಿಮೆಗೆ ಸಂಬಂಧಿಸಿದ ವಿವಿಧ ಪರಿಕಲ್ಪನೆಗಳು ಮತ್ತು ತತ್ವಗಳನ್ನು ಹಿಂದಿನ ಅಧ್ಯಾಯಗಳಲ್ಲಿ ಕಲಿತಿದ್ದೇವೆ. ವಿವಿಧ ಮಾರುಕಟ್ಟೆಗಳಲ್ಲಿ ಸಾಮಾನ್ಯ ವಿಮಾ ಉತ್ಪನ್ನಗಳನ್ನು ವಿಭಿನ್ನವಾಗಿ ವರ್ಗೀಕರಿಸಲಾಗಿದೆ. ಕೆಲವರು ಅವುಗಳನ್ನು ಆಸ್ತಿ, ಅಪಘಾತ ಮತ್ತು ಹೊಣೆಗಾರಿಕೆ ಎಂದು ವರ್ಗೀಕರಿಸುತ್ತಾರೆ. ಬೇರೆಡೆ, ಅವುಗಳನ್ನು ಬೆಂಕಿ, ಸಾಗರ, ಮೋಟಾರು ಮತ್ತು ಇತರ ಎಂದು ವರ್ಗೀಕರಿಸಲಾಗಿದೆ. ಈ ಅಧ್ಯಾಯದಲ್ಲಿ, ಚಿಲ್ಲರೆ ಗ್ರಾಹಕರು ಖರೀದಿಸುವ ವೈಯಕ್ತಿಕ ಅಪಘಾತ, ಪ್ರಯಾಣ, ಮನೆ ಮತ್ತು ಅಂಗಡಿಕಾರರ ವಿಮೆ ಮತ್ತು ಮೋಟಾರು ವಿಮೆಯಂತಹ ಸಾಮಾನ್ಯ ಉತ್ಪನ್ನಗಳ ಕುರಿತು ಚರ್ಚಿಸಲಾಗಿದೆ..

## ಕಲಿಕೆಯ ಫಲಿತಾಂಶಗಳು

**A.** ಚಿಲ್ಲರೆ ವಿಮಾ ಉತ್ಪನ್ನಗಳು

**B.** ಎಲ್ಲ ಅಪಾಯಗಳು'ಮತ್ತು ಹೆಸರಿಸಿದ ಅಪಾಯಗಳು'ವಿಮಾ ಪಾಲಿಸಿ

**C.** ಪ್ಯಾಕೇಜ್ ಪಾಲಿಸಿಗಳು

**D.** ಅಂಗಡಿದಾರರ ವಿಮೆ

**E.** ಗೃಹಸ್ಥರ ವಿಮೆ

**F.** ವಿಮಾಮೊತ್ತ ಮತ್ತು ಕಂತು

**G.** ಮೋಟಾರು ವಿಮೆ

ಈ ಅಧ್ಯಾಯವನ್ನು ಅಧ್ಯಯನ ಮಾಡಿದ ನಂತರ, ನೀವು ಈ ಅಂಶಗಳನ್ನು ಅರಿತುಕೊಳ್ಳಬಹುದು::

1. ಗೃಹಸ್ಥರ ವಿಮೆಯನ್ನು ವಿವರಿಸುವುದು
2. ಅಂಗಡಿದಾರರ ವಿಮೆಯ ಕವರ್ ಅನ್ನು ತಯಾರಿಸುವುದು
3. ಮೋಟಾರು ವಿಮೆಯನ್ನು ಚರ್ಚಿಸುವುದು

## A. ಚಿಲ್ಲರೆ ವಿಮಾ ಉತ್ಪನ್ನಗಳು

ಕೆಲವು ಆಸಕ್ತಿಗಳನ್ನು(ಆಸ್ತಿ / ಹೊಣೆಗಾರಿಕೆ) ರಕ್ಷಿಸಲು ವ್ಯಕ್ತಿಗಳಿಗಾಗಿ ಖರೀದಿಸಲಾಗುವ ಕೆಲವು ವಿಮಾ ಉತ್ಪನ್ನಗಳಿವೆ. ಅಂತಹ ವಿಮೆಗಳಿಗೆ ಸಣ್ಣ ವಾಣಿಜ್ಯ ಅಥವಾ ವ್ಯಾಪಾರ ಆಸಕ್ತಿಗಳು ಇರಬಹುದಾದರೂ, ಇವುಗಳನ್ನು ಸಾಮಾನ್ಯವಾಗಿ ವ್ಯಕ್ತಿಗಳಿಗೆ ಮಾರಾಟ ಮಾಡಲಾಗುತ್ತದೆ. ಕೆಲವು ಮಾರುಕಟ್ಟೆಗಳಲ್ಲಿ ಇವುಗಳನ್ನು 'ಸ್ಮಾಲ್ ಟಿಕೆಟ್' ಪಾಲಿಸಿಗಳು ಅಥವಾ 'ಚಿಲ್ಲರೆ ಪಾಲಿಸಿಗಳು' ಅಥವಾ 'ಚಿಲ್ಲರೆ ಉತ್ಪನ್ನಗಳು' ಎಂದು ಕರೆಯಲಾಗುತ್ತದೆ. ಮನೆ, ಮೋಟಾರು ಕಾರುಗಳು, ದ್ವಿಚಕ್ರ ವಾಹನಗಳು, ಅಂಗಡಿಗಳಂತಹ ಸಣ್ಣ ವ್ಯಾಪಾರಗಳು ಇತ್ಯಾದಿಗಳ ವಿಮೆಗಳು ಈ ವರ್ಗಕ್ಕೆ ಬರುತ್ತವೆ. ಖರೀದಿದಾರರು ಸಹ ಅದೇ ಗ್ರಾಹಕ ವಿಭಾಗದಿಂದ ಬಂದವರಾಗಿರುವುದರಿಂದ ಸಾಮಾನ್ಯವಾಗಿ ಈ ಉತ್ಪನ್ನಗಳನ್ನು ವೈಯಕ್ತಿಕ ವಿಮೆಗಳೊಂದಿಗೆ ವ್ಯವಹರಿಸುವ ಅದೇ ಏಜೆಂಟರು/ವಿತರಣಾ ಚಾನಲ್ ಗಳು ಮಾರಾಟ ಮಾಡುತ್ತವೆ.

## B. ಎಲ್ಲ ಅಪಾಯಗಳು' ಮತ್ತು 'ಹೆಸರಿಸಿದ ಅಪಾಯಗಳು' ವಿಮಾ ಪಾಲಿಸಿ

ಜೀವೇತರ ವಿಮಾ ಪಾಲಿಸಿಗಳನ್ನು ಸ್ಥೂಲವಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದು:

- ✓ ಹೆಸರಿಸಲಾದ ಅಪಾಯದ ಪಾಲಿಸಿಗಳು
- ✓ ಎಲ್ಲ ಅಪಾಯದ ಪಾಲಿಸಿಗಳು

i. "ಎಲ್ಲ ಅಪಾಯಗಳು" ಎಂದರೆ ವಿಮಾ ಒಪ್ಪಂದವು ನಿರ್ದಿಷ್ಟವಾಗಿ ಹೊರಗಿಡದ ಯಾವುದೇ ಅಪಾಯವನ್ನು ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕವರ್ ಮಾಡಲಾಗುತ್ತದೆ.

ii. ಎಲ್ಲ ಅಪಾಯಗಳ ವಿಮೆಯು ಲಭ್ಯವಿರುವ ಅತ್ಯಂತ ವ್ಯಾಪಕವಾದ ಕವರೇಜ್ ಆಗಿದೆ. ಆದ್ದರಿಂದ ಇದು ಇತರ ವಿಧದ ಪಾಲಿಸಿಗಳಿಗಿಂತ ಪ್ರಮಾಣಾನುಗುಣವಾಗಿ ಹೆಚ್ಚಿನ ಬೆಲೆಯನ್ನು ಹೊಂದಿದೆ ಮತ್ತು ಈ ರೀತಿಯ ವಿಮೆಯ ವೆಚ್ಚವನ್ನು ಕ್ಲೇಮ್ ನ ಸಂಭವನೀಯತೆಯ ವಿರುದ್ಧ ಅಳೆಯಲಾಗುತ್ತದೆ.

iii. ಹೆಸರಿಸಲಾದ ಅಪಾಯದ ಪಾಲಿಸಿಗಳೆಂದರೆ, ಒಳಗೊಂಡಿರುವ ಅಪಾಯಗಳನ್ನು ನಿರ್ದಿಷ್ಟವಾಗಿ ಪಟ್ಟಿಮಾಡಲಾಗಿದೆ ಮತ್ತು ವ್ಯಾಖ್ಯಾನಿಸಲಾಗಿದೆ.

## C. ಪ್ಯಾಕೇಜ್ ಪಾಲಿಸಿಗಳು

i. ಪ್ಯಾಕೇಜ್ ಕವರ್‌ಗಳು ಒಂದೇ ದಾಖಲೆಯ ಅಡಿಯಲ್ಲಿ ಅನೇಕ ಕವರ್‌ಗಳ ಸಂಯೋಜನೆಯನ್ನು ನೀಡುತ್ತವೆ.

ii. ಗೃಹಸ್ಥರ ಪಾಲಿಸಿ, ಅಂಗಡಿಕಾರರ ಪಾಲಿಸಿ, ಆಫೀಸ್ ಪ್ಯಾಕೇಜ್ ಪಾಲಿಸಿ ಇತ್ಯಾದಿ ಕವರ್ ಗಳ ಉದಾಹರಣೆಗಳಿವೆ. ಒಂದು ಪಾಲಿಸಿಯಡಿಯಲ್ಲಿ, ಕಟ್ಟಡಗಳು, ವಸ್ತುಗಳು ಇತ್ಯಾದಿ ಸೇರಿದಂತೆ ವಿವಿಧ ಭೌತಿಕ ಸ್ವತ್ತುಗಳನ್ನು ಕವರ್ ಮಾಡಲು ಪ್ರಯತ್ನಿಸುತ್ತದೆ.

iii. ಇಂತಹ ಪಾಲಿಸಿಗಳು ಕೆಲವು ವೈಯಕ್ತಿಕ ಪ್ರಕಾರಗಳು ಅಥವಾ ಹೊಣೆಗಾರಿಕೆಯ ಕವರ್ ಗಳನ್ನೂ ಸಹ ಒಳಗೊಂಡಿರಬಹುದು.

iv. ಪ್ಯಾಕೇಜ್ ಕವರ್ ಗಳು ಎಲ್ಲ ವಿಭಾಗಗಳಿಗೆ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳನ್ನು ಹೊಂದಿರಬಹುದು ಮತ್ತು ಪಾಲಿಸಿಯ ನಿರ್ದಿಷ್ಟ ವಿಭಾಗಗಳಿಗೆ ನಿರ್ದಿಷ್ಟ ನಿಯಮಗಳನ್ನು ಹೊಂದಿರಬಹುದು.

## D. ಅಂಗಡಿಕಾರರ ವಿಮೆ

ಅಂಗಡಿ ಮಾಲೀಕರು ವ್ಯಾಪಾರವನ್ನು ಮರುಪ್ರಾರಂಭಿಸಲು ದೊಡ್ಡ ಪ್ರಮಾಣದ ಹಣವನ್ನು ಹೊಂದಿರುವ ಸಾಂಘಿಕ ವ್ಯಾಪಾರ ಸಂಸ್ಥೆ(ಕಾರ್ಪೊರೇಟ್ ಹೌಸ್)ಯಲ್ಲ. ಒಂದೇ ಒಂದು ವಿಪತ್ತು ಅವಳ/ಅವನ ಅಂಗಡಿಯನ್ನು ಮುಚ್ಚಲು ಕಾರಣವಾಗಬಹುದು ಮತ್ತು ಬಹುಶಃ ಅವಳ/ಅವನ ಕುಟುಂಬವನ್ನು ಹಾಳುಮಾಡಬಹುದು. ಮರುಪಾವತಿಸಬೇಕಾದ ಬ್ಯಾಂಕ್ ಸಾಲವೂ ಇರಬಹುದು. ಅಂಗಡಿಯ ಮಾಲೀಕರ ಕಾರ್ಯಾಚರಣೆಗಳಿಂದಾಗಿ ಸಾರ್ವಜನಿಕರಿಗೆ ವೈಯಕ್ತಿಕ ಗಾಯ ಅಥವಾ ಅವಳ/ಅವನ ಆಸ್ತಿಗೆ ಹಾನಿಯಾಗುವ ಸಾಧ್ಯತೆ ಯಾವಾಗಲೂ ಇರುತ್ತದೆ ಮತ್ತು ಹಾನಿಯನ್ನು ಪಾವತಿಸಲು ನ್ಯಾಯಾಲಯವು ಅಂಗಡಿ ಮಾಲೀಕರನ್ನು ಹೊಣೆಗಾರರನ್ನಾಗಿ ಮಾಡುತ್ತದೆ. ಅಂತಹ ಸಂದರ್ಭಗಳು ಅಂಗಡಿಯವರನ್ನು ಸಹ ಹಾಳುಮಾಡಬಹುದು. ಆದ್ದರಿಂದ, ಈ ಜೀವನೋಪಾಯವನ್ನು ಸುರಕ್ಷಿತಗೊಳಿಸುವುದು ಬಹಳ ಅವಶ್ಯಕವಾಗಿರುತ್ತದೆ.

ವಾಣಿಜ್ಯ ಮಳಿಗೆ/ಚಿಲ್ಲರೆ ವ್ಯಾಪಾರದ ಇಂತಹ ಹಲವು ಅಂಶಗಳನ್ನು ಒಳಗೊಳ್ಳಲು ಅಂಗಡಿಕಾರರ ವಿಮಾ ಪಾಲಿಸಿಗಳನ್ನು ರೂಪಿಸಲಾಗಿದೆ. ಪುರಾತನ ವಸ್ತುಗಳ ಅಂಗಡಿ, ಕ್ಷೌರಿಕನ ಅಂಗಡಿ, ಬ್ಯೂಟಿ ಪಾರ್ಲರ್, ಪುಸ್ತಕದಂಗಡಿ, ಡಿಪಾರ್ಟ್‌ಮೆಂಟ್ ಸ್ಟೋರ್, ಡ್ರೈ ಕ್ಲೀನರ್ಸ್, ಗಿಫ್ಟ್ ಶಾಪ್, ಫಾರ್ಮಸಿ, ಸ್ಟೇಷನರಿ ಅಂಗಡಿ, ಆಟಿಕೆ ಅಂಗಡಿ, ಉಡುಪುಗಳ ಅಂಗಡಿ ಇತ್ಯಾದಿಗಳಂತಹ ಅನೇಕ ರೀತಿಯ ಅಂಗಡಿಗಳ ನಿರ್ದಿಷ್ಟ ಆಸಕ್ತಿಗಳನ್ನು ಕವರ್ ಮಾಡಲು ಅವಶ್ಯಕತೆಗೆ ತಕ್ಕಂತೆ ಸೃಷ್ಟಿಸಲಾದ ಪಾಲಿಸಿಗಳಿವೆ.

### 1. ಅಂಗಡಿಕಾರರ ವಿಮೆ ಏನನ್ನು ಒಳಗೊಂಡಿದೆ?

ಚಿಲ್ಲರೆ ವ್ಯಾಪಾರದ ನಿರ್ದಿಷ್ಟ ಕ್ಷೇತ್ರಗಳನ್ನು ರಕ್ಷಿಸಲು ಕವರ್ ಒದಗಿಸಲು ಪಾಲಿಸಿಯನ್ನು ಅವಶ್ಯಕತೆಗನುಸಾರವಾಗಿ ತಯಾರಿಸಬಹುದು. ಸಾಮಾನ್ಯವಾಗಿ ಬೆಂಕಿ, ಭೂಕಂಪ, ಪ್ರವಾಹ ಅಥವಾ ದುರುದ್ದೇಶಪೂರಿತ ಹಾನಿ ಮತ್ತು ದರೋಡೆಯಿಂದಾಗಿ ಅಂಗಡಿಯ ರಚನೆ ಮತ್ತು ವಸ್ತುಗಳಿಗೆ ಆಗುವ ಹಾನಿಯನ್ನು ಇದು ಕವರ್ ಮಾಡುತ್ತದೆ. ಅಂಗಡಿ ವಿಮೆಯು ವ್ಯಾಪಾರದಲ್ಲಿಯ ಅಡೆತಡೆಯ ರಕ್ಷಣೆಯನ್ನು ಸಹ ಕವರ್ ಮಾಡುತ್ತದೆ. ವ್ಯಾಪಾರದ ಕಾರ್ಯಾಚರಣೆಯಲ್ಲಿ ಅಡೆತಡೆಯನ್ನುಂಟುಮಾಡುವ ಅನಿರೀಕ್ಷಿತ ಅಪಾಯದ ಕಾರ್ಯಾಚರಣೆಯ ಸಂದರ್ಭದಲ್ಲಿ ಇದು ಯಾವುದೇ ಆದಾಯದ ನಷ್ಟ ಅಥವಾ ಹೆಚ್ಚುವರಿ ವೆಚ್ಚವನ್ನು ಒಳಗೊಂಡಿರುತ್ತದೆ. ವಿಮಾದಾರರು ತಮ್ಮ ಚಟುವಟಿಕೆಗಳ ವ್ಯಾಪ್ತಿಯನ್ನವಲಂಬಿಸಿ ಕವರೇಜ್ ಅನ್ನು ಆಯ್ಕೆ ಮಾಡಬಹುದು.

ವಿಮಾದಾರರು ಆಯ್ಕೆ ಮಾಡಿಕೊಳ್ಳಬಹುದಾದ ಹೆಚ್ಚುವರಿ ಕವರ್ ಗಳು ವಿಮಾಗಾರರಿಂದ ವಿಮಾಗಾರರಿಗೆ ಬದಲಾಗಬಹುದು ಮತ್ತು ಜೀವೇತರ ವಿಮಾ ಕಂಪನಿಗಳ ಆಯಾ ವೆಬ್ ಸೈಟ್ ಗಳಿಂದ ಪರಿಶೀಲಿಸಬಹುದು. ಇವುಗಳು ಈ ಕೆಳಗಿನಂತಿರಬಹುದು:

i. **ದರೋಡೆ ಮತ್ತು ಗೃಹಭಂಗ:** ಗೃಹಭಂಗ, ದರೋಡೆ ಮತ್ತು ಕಛೇರಿಯ ವಿಷಯದ ದರೋಡೆಗಾಗಿ ಕವರ್

ii. **ಯಂತ್ರೋಪಕರಣಗಳ ಸ್ಥಗಿತ:** ವಿದ್ಯುತ್ / ಯಾಂತ್ರಿಕ ಉಪಕರಣಗಳು ಕೆಟ್ಟು ಸ್ಥಗಿತವಾಗುವ ಕವರ್

iii. **ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ಸಲಕರಣೆಗಳು:**

- ✓ ಎಲೆಕ್ಟ್ರಾನಿಕ್ ಸಲಕರಣೆಗಳಿಗೆ ಎಲ್ಲ-ಅಪಾಯದ ಕವರ್ ಅನ್ನು ಒದಗಿಸುತ್ತದೆ
- ✓ ಎಲೆಕ್ಟ್ರಾನಿಕ್ ಯಂತ್ರೋಪಕರಣಗಳ ನಷ್ಟಕ್ಕಾಗಿ ಕವರ್

iv. **ಹಣದ ವಿಮೆ:** ಅಪಘಾತದ ಕಾರಣದಿಂದಾಗಿ ಆಗುವ ಹಣದ ನಷ್ಟದ ವಿರುದ್ಧ ಕವರ ಅನ್ನು ನೀಡುತ್ತದೆ:

- ✓ ವ್ಯಾಪಾರದ ಆವರಣದಿಂದ ಬ್ಯಾಂಕಿಗೆ ಮತ್ತು ತದ್ವಿರುದ್ಧವಾಗಿ (ಬ್ಯಾಂಕಿನಿಂದ ವ್ಯಾಪಾರ ಆವರಣಕ್ಕೆ) ಸಾಗಣೆ
- ✓ ವ್ಯಾಪಾರ ಆವರಣದಲ್ಲಿ ಭದ್ರವಾದ ತಿಜೋರಿ
- ✓ ವ್ಯಾಪಾರ ಆವರಣದಲ್ಲಿ ಒಂದು ಹಣದ ಪೆಟ್ಟಿಗೆ (ಬಾಕ್ಸ್/ ಡ್ರಾಯರ್/ ಕೌಂಟರ್)

v. **ಬ್ಯಾಗೇಜ್:** ಅಧಿಕೃತ ಉದ್ದೇಶಗಳಿಗಾಗಿ ಪ್ರಯಾಣದಲ್ಲಿರುವಾಗ ಸಾಮಾನುಗಳ ನಷ್ಟವನ್ನು ಸರಿದೂಗಿಸಲಾಗುತ್ತದೆ

vi. ಸ್ಥಿರ(ಫಿಕ್ಸ್ಡ್) ಪ್ಲೇಟ್ ಗ್ಲಾಸ್ ಮತ್ತು ಸ್ಯಾನಿಟರಿ ಫಿಟ್ಟಿಂಗ್ ಗಳಿಗಾದ ಆಕಸ್ಮಿಕ ಹಾನಿಯ ನಷ್ಟವನ್ನು ಒಳಗೊಳ್ಳುತ್ತವೆ:

- ✓ ಸ್ಥಿರ(ಫಿಕ್ಸ್ಡ್) ಪ್ಲೇಟ್ ಗ್ಲಾಸ್
- ✓ ನೈರ್ಮಲ್ಯ(ಸ್ಯಾನಿಟರಿ) ಫಿಟ್ಟಿಂಗ್ ಗಳು
- ✓ ನಿಯಾನ್ ಸೈನ್ / ಗ್ಲೋ ಸೈನ್ / ಹೋರ್ಡಿಂಗ್

vii. **ವೈಯಕ್ತಿಕ ಅಪಘಾತ**

viii. **ನಂಬಿಕೆ ದ್ರೋಹ / ಉದ್ಯೋಗಿಗಳ ಅಪ್ರಾಮಾಣಿಕತೆ:** ಉದ್ಯೋಗಿಗಳ ಅಪ್ರಾಮಾಣಿಕ ಕೃತ್ಯಗಳಿಂದ ಉಂಟಾಗುವ ನಷ್ಟ ಅಥವಾ ಹಾನಿಯನ್ನು ಕವರ್ ಮಾಡುತ್ತದೆ

ix. **ಕಾನೂನು ಹೊಣೆಗಾರಿಕೆ:**

- ✓ ಉದ್ಯೋಗದ ಅವಧಿಯಲ್ಲಿ ಮತ್ತು ಕೆಲಸದ ಸಮಯದಲ್ಲಿ ಸಂಭವಿಸುವ ಅಪಘಾತಗಳಿಗೆ ಪರಿಹಾರ

✓ ತೃತೀಯ ಪಕ್ಷಗಳಿಗೆ ಕಾನೂನು ಹೊಣೆಗಾರಿಕೆಯ ಕವರ್ ಅನ್ನು ಒದಗಿಸುತ್ತದೆ

ಬೆಂಕಿ/ ದರೋಡೆ/ಬ್ಯಾಗೇಜ್/ಪ್ಲೇಟ್ ಗ್ಲಾಸ್/ನಿಷ್ಠೆ ಖಾತರಿ(ಫಿಡೆಲಿಟಿ ಗ್ಯಾರಂಟಿ)/ಕೆಲಸಗಾರರ ಪರಿಹಾರ ಮತ್ತು ಸಾರ್ವಜನಿಕ ಹೊಣೆಗಾರಿಕೆ ಪಾಲಿಸಿಗಳನ್ನು (ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ) ಪ್ರತ್ಯೇಕವಾಗಿ ಸಹ ತೆಗೆದುಕೊಳ್ಳಬಹುದು.

ಭಯೋತ್ಪಾದನೆಯ ಕವರ್ ಅನ್ನು ಕೂಡ ವಿಸ್ತರಿಸಬಹುದು. ಸಾಮಾನ್ಯವಾಗಿ ಗೃಹಸ್ಥರ ವಿಮೆಯಲ್ಲಿರುವಂತೆಯೇ ಹೊರತುಗಳು ಇರುತ್ತವೆ.

---

## E. ಗೃಹಸ್ಥರ ವಿಮೆ

ಗೃಹಸ್ಥರ ವಿಮಾ ಪಾಲಿಸಿಯಡಿಯಲ್ಲಿ ಕವರೇಜ್ ಗಳ ವಿಸ್ತಾರ ಸಾಕಷ್ಟಾಗಿರಬಹುದು. ಇದು ಸಾಮಾನ್ಯವಾಗಿ ಮನೆಯವರ ಎಲ್ಲಾ ಅಗತ್ಯಗಳ ಪ್ಯಾಕೇಜ್ ಆಗಿರುತ್ತದೆ.

ಬೆಂಕಿ, ಸಿಡಿಲು, ಸ್ಫೋಟ ಮತ್ತು ವಿಮಾನ ಪತನ/ತಾಡನ/ಅಪ್ಪಳಿಸುವಿಕೆಯಿಂದಾದ ಹಾನಿ (ಸಾಮಾನ್ಯವಾಗಿ ಫ್ಲೆಕ್ಸಾ ಎಂದು ಕರೆಯಲಾಗುತ್ತದೆ); ಚಂಡಮಾರುತ, ಬಿರುಗಾಳಿ, ಪ್ರವಾಹ ಮತ್ತು ಮುಳುಗಡೆ (ಸಾಮಾನ್ಯವಾಗಿ ಎಸ್ ಟಿಎಫ್ಐ ಎಂದು ಕರೆಯಲಾಗುತ್ತದೆ); ಮತ್ತು ದರೋಡೆಗಳನ್ನು ಒಳಗೊಂಡಿರುವ ನಷ್ಟಗಳನ್ನು ಸಾಮಾನ್ಯವಾಗಿ ಕವರ್ ಮಾಡುತ್ತವೆ. ಕವರೇಜ್ ಕಂಪನಿಯಿಂದ ಕಂಪನಿಗೆ ಮತ್ತು ಪಾಲಿಸಿಯಿಂದ ಪಾಲಿಸಿಗೆ ಭಿನ್ನವಾಗಿರುತ್ತದೆ.

ಮನೆಯ ಕಟ್ಟಡದ ಹೊರತಾಗಿ, ಇದು ದರೋಡೆ, ಮನೆ ಅತಿಕ್ರಮಣ, ಅಪಹಾರ ಮತ್ತು ಕಳ್ಳತನ ವಿರುದ್ಧ ಮನೆಯಲ್ಲಿಯ ವಸ್ತುಗಳನ್ನು ಕವರ್ ಮಾಡುತ್ತದೆ. ಧರಿಸಿರುವಾಗ ಅಥವಾ ತಿಜೋರಿಯಲ್ಲಿ (ಲಾಕ್ ಮಾಡಿದ ಸೇಫ್‌ನಲ್ಲಿ) ಇರಿಸಿದ ಆಭರಣಗಳನ್ನು ಸಹ ಗೃಹಸ್ಥರ ವಿಮೆಯಡಿಯಲ್ಲಿ ವಿಮೆ ಮಾಡಬಹುದು. ಗೃಹೋಪಯೋಗಿ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳ ವಿದ್ಯುತ್ ಮತ್ತು ಯಾಂತ್ರಿಕ ವೈಫಲ್ಯಕ್ಕೂ ಕವರ್ ಅನ್ನು ನೀಡಲಾಗುತ್ತದೆ..

ಅದೇ ರೀತಿಯಾಗಿ, ಗೃಹಸ್ಥರ ವಿಮಾ ಪ್ಯಾಕೇಜ್ ವೈಯಕ್ತಿಕ ಸಾಮಾನು ಸರಂಜಾಮುಗಳ ನಷ್ಟ, ಪ್ರಯಾಣದ ಸಮಯದಲ್ಲಿ ಕಳೆದುಹೋಗುವಿಕೆ ಅಥವಾ ನೆರೆಹೊರೆಯವರು/ಸಂದರ್ಶಕರೆಡೆಗೆ ಹೊಣೆಗಾರಿಕೆಗಳು ಸಹ ಗೃಹರಕ್ಷಕರ ವಿಮಾ ಪ್ಯಾಕೇಜ್ ನ ಭಾಗವಾಗಿರಬಹುದು. ಕೆಲವು ವಿಮಾದಾರರು ಪೆಡಲ್ ಸೈಕಲ್, ವೈಯಕ್ತಿಕ ಅಪಘಾತ ಮತ್ತು ಕೆಲಸಗಾರರ ಪರಿಹಾರಕ್ಕಾಗಿ ಸಹ ಕವರೇಜ್ ಅನ್ನು ಒದಗಿಸುತ್ತಾರೆ.

**1**ನೇ ಏಪ್ರಿಲ್, **2021** ರಿಂದ ಬೆಂಕಿ ಮತ್ತು ಸಂಬಂಧಿತ ಅಪಾಯಗಳ ವಿಮಾ ವ್ಯವಹಾರವನ್ನು ನಡೆಸುವ ಎಲ್ಲ ಸಾಮಾನ್ಯ ವಿಮಾಗಾರರಿಂದ ಕಡ್ಡಾಯವಾಗಿ ನೀಡಲಾಗುವ - **10** ವರ್ಷಗಳ ಅವಧಿಯೊಂದಿಗೆ ಭಾರತ್ ಗೃಹ ರಕ್ಷಾ ಪಾಲಿಸಿಯೆಂಬ ಪ್ರಮಾಣಿತ ಉತ್ಪನ್ನವನ್ನು ಐಆರ್ ಡಿಎಐ ಪರಿಚಯಿಸಿದೆ.

**ಭಾರತ್ ಗೃಹ ರಕ್ಷಾ (ಗೃಹ ನಿರ್ಮಾಣ ಮತ್ತು ಗೃಹ ವಸ್ತುಗಳಿಗಾಗಿ) ಪಾಲಿಸಿಯು ಬೆಂಕಿ**, ನೈಸರ್ಗಿಕ ವಿಕೋಪ, ಅರಣ್ಯ, ಕಾಡು ಮತ್ತು ಪೊದೆಗಳ ಬೆಂಕಿ, ಯಾವುದೇ ರೀತಿಯ ಪರಿಣಾಮ ಹಾನಿ, ಗಲಭೆ, ಮುಷ್ಕರ, ದುರುದ್ದೇಶಪೂರಿತ ಹಾನಿಗಳು, ಕಾಯಿದೆಗಳು ಭಯೋತ್ಪಾದನೆ, ನೀರಿನ ಟ್ಯಾಂಕ್‌ಗಳು, ಉಪಕರಣಗಳು ಮತ್ತು ಪೈಪ್‌ಗಳು ಒಡೆದು ಹರಿಯುವುದು, ಸ್ವಯಂಚಾಲಿತ ಸ್ಪ್ರಿಂಕ್ಲರ್ ಸ್ಥಾಪನೆಗಳಿಂದ ಸೋರಿಕೆ ಮತ್ತು ದರೋಡೆಯಂತಹ ಯಾವುದೇ ಘಟನೆಗಳು ಸಂಭವಿಸಿದ 7 ದಿನಗಳಲ್ಲಿ ವ್ಯಾಪಕ ಶ್ರೇಣಿಯ ಅಪಾಯಗಳ ವಿರುದ್ಧ ರಕ್ಷಣೆಯನ್ನು ನೀಡುತ್ತದೆ. ಈ ಪಾಲಿಸಿಯು 1 ರಿಂದ 10 ವರ್ಷಗಳ ಅವಧಿಗೆ ಇರಬಹುದು.

ಗೃಹ ಕಟ್ಟಡದ ಜೊತೆಗೆ, ಪಾಲಿಸಿಯು ಸಾಮಾನ್ಯ ಮನೆಯಲ್ಲಿಯ ವಸ್ತುಗಳನ್ನು ಸ್ವಯಂಚಾಲಿತವಾಗಿ (ವಿವರಗಳ ಘೋಷಣೆಯ ಅಗತ್ಯವಿಲ್ಲದೆ) ಗರಿಷ್ಠ ರೂ.10 ಲಕ್ಷಗಳಿಗೆ ಒಳಪಟ್ಟು ಕಟ್ಟಡದ ವಿಮಾ ಮೊತ್ತದ 20% ರಷ್ಟು ಕವರ್ ಮಾಡುತ್ತದೆ. ವಿವರಗಳನ್ನು ಘೋಷಿಸುವ ಮೂಲಕ ಸಾಮಾನ್ಯ ವಿಷಯಗಳಿಗೆ ಹೆಚ್ಚಿನ ವಿಮಾ ಮೊತ್ತವನ್ನು ಸಹ ಆಯ್ಕೆ ಮಾಡಬಹುದು.

ಈ ಪಾಲಿಸಿಯು ಎರಡು ಐಚ್ಛಿಕ ಕವರ್ ಗಳನ್ನು ನೀಡುತ್ತದೆ, ಅವುಗಳೆಂದರೆ (**i**) ಆಭರಣಗಳು ಮತ್ತು ವಿರಳ/ಅಪರೂಪದ ಅಮೂಲ್ಯ ವಿಷಯಗಳಿಗೆ ವಿಮೆ; ಮತ್ತು (**ii**) ಪಾಲಿಸಿಯಡಿಯಲ್ಲಿ ವಿಮೆ ಮಾಡಿದ ಅಪಾಯದ ಕಾರಣದಿಂದ ವಿಮಾದಾರ ಮತ್ತು ಸಂಗಾತಿಯ ವೈಯಕ್ತಿಕ ಅಪಘಾತ.

ಪಾಲಿಸಿಯು ಕಡಿಮೆ ವಿಮೆಯನ್ನು ಸಂಪೂರ್ಣ ಮನ್ನಾ ಮಾಡುತ್ತದೆ. ಅಂದರೆ, ಪಾಲಿಸಿದಾರರು ಘೋಷಿಸಿದ ವಿಮಾ ಮೊತ್ತವು ಪ್ರಶ್ನಾರ್ಹ ಆಸ್ತಿಗಾಗಿ ಘೋಷಿಸಬೇಕಾದ ಮೊತ್ತಕ್ಕಿಂತ ಕಡಿಮೆಯಾಗಿದ್ದರೆ, ಪಾಲಿಸಿದಾರರ ಕ್ಲೇಮ್ ಅನುಪಾತಕ್ಕನುಗುಣವಾಗಿ ಇತ್ಯರ್ಥವಾಗುದೇ ಘೋಷಿಸಲಾದ ವಿಮಾ ಮೊತ್ತದವರೆಗೆ ಇತ್ಯರ್ಥಮಾಡಲಾಗುತ್ತದೆ.

---

## F. ವಿಮಾಮೊತ್ತ ಮತ್ತು ಕಂತು

ಕೈಗಾರಿಕಾ ಘಟಕಗಳು ಅಥವಾ ಕಚೇರಿಗಳು ಆಸ್ತಿಗಳ ಮೌಲ್ಯವನ್ನು ತೋರಿಸುವ ಖಾತೆಗಳ ಪುಸ್ತಕಗಳನ್ನು ನಿರ್ವಹಿಸುತ್ತವೆ, ಆದ್ದರಿಂದ, ವಿಮಾ ಮೊತ್ತವನ್ನು ಕಂಡುಹಿಡಿಯುವುದು ಕಷ್ಟವಾಗುವುದಿಲ್ಲ. ಅಂಗಡಿ ಮತ್ತು ಮನೆಯ ವಿಷಯದಲ್ಲಿ ಇದು ಯಾವಾಗಲೂ ಸಾಧ್ಯವಾಗದಿರಬಹುದು..

ಈಗಾಗಲೇ ಹೇಳಿದಂತೆ, ಗೃಹಸ್ಥರ ವಿಮೆಯಡಿಯಲ್ಲಿ ಸಾಮಾನ್ಯವಾಗಿ, ವಿಮಾ ಮೊತ್ತವನ್ನು ನಿಗದಿಪಡಿಸಲು ಎರಡು ವಿಧಾನಗಳಿವೆ, ಅವುಗಳೆಂದರೆ, ಮಾರುಕಟ್ಟೆ ಮೌಲ್ಯ ಮತ್ತು ಮರುಸ್ಥಾಪನೆ/ಬದಲಿ ಮೌಲ್ಯ.

ಹಣ, ಸಾಮಾನು ಸರಂಜಾಮು(ಬ್ಯಾಗೇಜ್), ವೈಯಕ್ತಿಕ ಅಪಘಾತದಂತಹ ಹೆಚ್ಚುವರಿ ಕವರೇಜ್ ಗಾಗಿ ವಿಮಾ ಮೊತ್ತ ಮತ್ತು ಆಯ್ಕೆ ಮಾಡಿದ ಕವರ್ ಗಳ ಮೇಲೆ ಕಂತು ಅವಲಂಬಿತವಾಗಿರುತ್ತದೆ.

**ವಿಮಾ ಮೊತ್ತವನ್ನು ಹೇಗೆ ನಿರ್ಧರಿಸುವುದು?**

i. ಬೆಂಕಿ ವಿಮೆಗಾಗಿ ವಿಮಾ ಮೊತ್ತವನ್ನು ನಿಗದಿಪಡಿಸಲು ಸಾಮಾನ್ಯವಾಗಿ,ಎರಡು ವಿಧಾನಗಳಿವೆ. ಒಂದು ಮಾರುಕಟ್ಟೆ ಮೌಲ್ಯ (ಎಮ್ ವಿ) ಮತ್ತು ಇನ್ನೊಂದು ಮರುಸ್ಥಾಪನೆಯ ಮೌಲ್ಯ (ಆರ್ ಐವಿ). ಎಮ್.ವಿ. ಪ್ರಕರಣದಲ್ಲಿ, ನಷ್ಟದ ಸಂದರ್ಭದಲ್ಲಿ, ಅದರ ವಯಸ್ಸಿನ ಆಧಾರದ ಮೇಲೆ ಆಸ್ತಿಯ ಮೇಲೆ ಸವಕಳಿಯನ್ನು ವಿಧಿಸಲಾಗುತ್ತದೆ. ಈ ವಿಧಾನದಡಿಯಲ್ಲಿ, ವಿಮಾದಾರರಿಗೆ ಆಸ್ತಿಯನ್ನು ಬದಲಿಸಲು ಸಾಕಾಗುವಷ್ಟು ಮೊತ್ತವನ್ನು ಪಾವತಿಸಲಾಗುವುದಿಲ್ಲ.

ii. ಆರ್ ಐವಿ ವಿಧಾನದಲ್ಲಿ, ವಿಮಾ ಕಂಪನಿಯು ವಿಮಾ ಮೊತ್ತದ ಮಿತಿಗೆ ಒಳಪಟ್ಟು ಬದಲಿ ವೆಚ್ಚವನ್ನು ಪಾವತಿಸುತ್ತದೆ. ಈ ವಿಧಾನದಡಿಯಲ್ಲಿ, ಯಾವುದೇ ಸವಕಳಿಯನ್ನು ವಿಧಿಸಲಾಗುವುದಿಲ್ಲ. ಹಾನಿಗೊಳಗಾದ ಆಸ್ತಿಯನ್ನು ಸರಿಪಡಿಸಬೇಕು/ಬದಲಾಯಿಸಬೇಕು ಎಂಬುದು ಕ್ಲೇಮ್ ಪಡೆಯುವಲ್ಲಿನ ಷರತ್ತಾಗಿರುತ್ತದೆ. ಆರ್ ಐವಿ ವಿಧಾನವನ್ನು ಸ್ಥಿರ ಸ್ವತ್ತುಗಳಿಗೆ ಮಾತ್ರ ಅನುಮತಿಸಲಾಗಿದ್ದು ಮತ್ತು ಪ್ರಕ್ರಿಯೆಯಲ್ಲಿರುವ ಸ್ಟಾಕ್ ಗಳು ಮತ್ತು ಸ್ಟಾಕ್ ಗಳಂತಹ ಇತರ ಸ್ವತ್ತುಗಳಿಗೆ ಅನುಮತಿಸಲಾಗಿಲ್ಲ ಎಂಬುದನ್ನು ಗಮನಿಸಬಹುದು.

ಹೆಚ್ಚಿನ ಪಾಲಿಸಿಗಳು ಮನೆಯ ರಚನೆಯ ಪುನರ್ನಿರ್ಮಾಣಕ್ಕಾಗಿ 'ಮರುಸ್ಥಾಪನೆಯ ಮೌಲ್ಯ' ವೆಂದು ಕರೆಯಲಾಗುವ (ಮತ್ತು 'ಮಾರುಕಟ್ಟೆ ಮೌಲ್ಯ' ದ ಮೇಲೆ ಅಲ್ಲ) ಮನೆಯ ಪುನರ್ರಚನೆಯನ್ನು ವಿಮೆ ಮಾಡುತ್ತವೆ. ಮರುಸ್ಥಾಪನೆಯ ಮೌಲ್ಯವು ಮನೆ ಹಾನಿಗೊಳಗಾಗಿದ್ದರೆ ಅದನ್ನು ಮರುನಿರ್ಮಾಣ ಮಾಡಲು ತಗಲುವ ವೆಚ್ಚವಾಗಿದೆ. ಮತ್ತೊಂದೆಡೆ, ಮಾರುಕಟ್ಟೆ ಮೌಲ್ಯವು ಆಸ್ತಿಯ ವಯಸ್ಸು, ಸವಕಳಿ ಮುಂತಾದ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ.

ಸಾಮಾನ್ಯವಾಗಿ ಪ್ರತಿ ಚದರ ಅಡಿಗೆ ನಿರ್ಮಾಣ ವೆಚ್ಚದ ದರದೊಂದಿಗೆ ವಿಮಾದಾರರ ಮನೆಯ ನಿರ್ಮಿತ ಪ್ರದೇಶವನ್ನು ಗುಣಿಸುವ ಮೂಲಕ ಲೆಕ್ಕಹಾಕಲಾಗುತ್ತದೆ. ಪೀಠೋಪಕರಣಗಳು, ಬಾಳಿಕೆ ಬರುವ ವಸ್ತುಗಳು, ಬಟ್ಟೆಗಳು, ಪಾತ್ರೆಗಳು, ಇತ್ಯಾದಿ ಮನೆಯಲ್ಲಿಯ ವಸ್ತುಗಳನ್ನು ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಮೌಲ್ಯೀಕರಿಸಲಾಗುತ್ತದೆ ಅಂದರೆ ಸವಕಳಿಯನ್ನು ಕಡಿಮೆಮಾಡಿದ ನಂತರ ಅದೇ ರೀತಿಯ ವಸ್ತುಗಳ ಪ್ರಸ್ತುತದಲ್ಲಿಯ ಮಾರುಕಟ್ಟೆ ಮೌಲ್ಯವೆಂದರ್ಥ.

ವಿಮೆ ಮಾಡಿದ ಮೌಲ್ಯ ಮತ್ತು ಕವರೇಜ್ ಅನ್ನು ಕಂತು ಅವಲಂಬಿಸಿರುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ಪ್ಯಾಕೇಜ್ ಪಾಲಿಸಿಗೆ ಸಂಬಂಧಿಸಿದಂತೆ ಈ ಕೆಳಗೆ ಹೇಳಿದ ಯಾವ ಹೇಳಿಕೆಗಳು ಸರಿಯಾಗಿವೆ?

I. ಪ್ಯಾಕೇಜ್ ಪಾಲಿಸಿಯು ಒಂದೇ ದಾಖಲೆಯಡಿಯಲ್ಲಿ ಕವರ್ ಗಳ ಸಂಯೋಜನೆಯನ್ನು ಒದಗಿಸುತ್ತದೆ

II. ಪ್ಯಾಕೇಜ್ ಪಾಲಿಸಿಯು ಕಟ್ಟಡಗಳಂತಹ ಭೌತಿಕ ಸ್ವತ್ತುಗಳನ್ನು ಮಾತ್ರ ಕವರ್ ಮಾಡುತ್ತದೆ

III. ಹೆಸರಿಸಲಾದ ಅಪಾಯದ ಪಾಲಿಸಿ ಅಥವಾ ಪ್ಯಾಕೇಜ್ ಪಾಲಿಸಿಯು ಒಂದೇ ಬೆಲೆಗೆ ಬರುತ್ತದೆ.

**IV.** ಹೆಸರಿಸಲಾದ ಅಪಾಯದ ಪಾಲಿಸಿಗಳನ್ನು ಮಾತ್ರ ಖರೀದಿಸಬಹುದು ಮತ್ತು ಪ್ಯಾಕೇಜ್ ಪಾಲಿಸಿಗಳು ಲಭ್ಯವಿಲ್ಲ.

**ವ್ಯಾಖ್ಯೆ/ವ್ಯಾಖ್ಯಾನ**

**ಕೆಲವು ಪ್ರಮುಖ ವ್ಯಾಖ್ಯೆಗಳು /ವ್ಯಾಖ್ಯಾನಗಳು**

**a)** **ದರೋಡೆಯೆಂ**ದರೆ ಆಕ್ರಮಣಕಾರಿ ಮತ್ತು ಪತ್ತೆ ಮಾಡಬಹುದಾದ ವಿಧಾನಗಳಿಂದ ವಿಮೆ ಮಾಡಿದ ಆವರಣಕ್ಕೆ ಅಲ್ಲಿಂದ  ಕಳ್ಳತನ ಮಾಡುವ ಉದ್ದೇಶದಿಂದ ಅನಿರೀಕ್ಷಿತ ಮತ್ತು ಅನಧಿಕೃತ ಪ್ರವೇಶ ಅಥವಾ ನಿರ್ಗಮನ.

**b)** ಅಪರಾಧವನ್ನು ಮಾಡುವ ಉದ್ದೇಶದಿಂದ ಮನೆಯೊಳಗೆ ಪ್ರವೇಶಿಸಿ ಅತಿಕ್ರಮಣ ನಡೆಸಿದಾಗ **ಗೃಹಭಂಗ** ನಡೆದಿದೆ ಎಂದು ಹೇಳಲಾಗುತ್ತದೆ..

**c)** **ಲೂಟಿ**ಯೆಂದರೆ ವಿಮಾದಾರ ಮತ್ತು/ಅಥವಾ ವಿಮಾದಾರರ ಉದ್ಯೋಗಿಗಳ ವಿರುದ್ಧ ಆಕ್ರಮಣಕಾರಿ ಮತ್ತು ಹಿಂಸಾತ್ಮಕ ವಿಧಾನಗಳನ್ನು ಬಳಸಿಕೊಂಡು ವಿಮಾದಾರರ ಆವರಣದಲ್ಲಿನ ವಸ್ತುಗಳ ಕಳ್ಳತನ ಮಾಡುವುದು.

**d)** **ತಿಜೋರಿ**ಯೆಂದರೆ ವಿಮಾದಾರರ ಆವರಣದೊಳಗೆ ಮೌಲ್ಯಯುತವಾದ ವಸ್ತುಗಳ ಸುರಕ್ಷಿತ ಮತ್ತು ಭದ್ರ ಶೇಖರಣೆಗಾಗಿ ವಿನ್ಯಾಸಗೊಳಿಸಲಾದ ಬಲವಾದ ಮತ್ತು ಪ್ರವೇಶವನ್ನು ನಿರ್ಬಂಧಿಸಲಾದ ಅಲಮಾರು/ಬೀರು.

**e)** ಕಳ್ಳತನವು ಎಲ್ಲ ಅಪರಾಧಗಳಿಗೆ ಒಂದು ಸಾಮಾನ್ಯ ಪದವಾಗಿದ್ದು ಇದರಲ್ಲಿ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಮತ್ತು ಮೋಸದಿಂದ ಅನುಮತಿ ಅಥವಾ ಒಪ್ಪಿಗೆಯಿಲ್ಲದೆ ಮತ್ತು ಅದನ್ನು ತೆಗೆದುಕೊಳ್ಳುವವರ ಬಳಕೆಗಾಗಿ ಅಥವಾ ಸಂಭಾವ್ಯ ಮಾರಾಟಕ್ಕೆ ಪರಿವರ್ತಿಸುವ ಉದ್ದೇಶದಿಂದ ಇನ್ನೊಬ್ಬರ ಆಸ್ತಿಯನ್ನು ತೆಗೆದುಕೊಳ್ಳುತ್ತಾನೆ. ಕಳ್ಳತನವು 'ಅಪಹಾರ'ಕ್ಕೆ ಸಮಾನಾರ್ಥಕ ಪದವಾಗಿದೆ.

---

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ಅಂಗಡಿಕಾರರ ಪ್ಯಾಕೇಜ್ ಪಾಲಿಸಿಯಡಿಯಲ್ಲಿ, ವಿಮಾದಾರರು ಹೆಚ್ಚುವರಿ 'ಸ್ಥಿರ ಪ್ಲೇಟ್ ಗ್ಲಾಸ್(ಫಿಕ್ಸ್ಡ್ ಪ್ಲೇಟ್ ಗ್ಲಾಸ್) ಮತ್ತು ಸ್ಯಾನಿಟರಿ ಫಿಟ್ಟಿಂಗ್ಸ್' ಕವರ್ ಅನ್ನು ಆಯ್ಕೆ ಮಾಡಬಹುದು. ಇದು ಕೆಳಗಿನವುಗಳಲ್ಲಿಯ ಯಾವುದಕ್ಕೆ ಆಕಸ್ಮಿಕ ಹಾನಿಯ ನಷ್ಟವನ್ನು ಒಳಗೊಂಡಿರುತ್ತದೆ?

**I.** 'ಸ್ಥಿರ ಪ್ಲೇಟ್ ಗ್ಲಾಸ್(ಫಿಕ್ಸ್ಡ್ ಪ್ಲೇಟ್ ಗ್ಲಾಸ್)

**II.** ಸ್ಯಾನಿಟರಿ ಫಿಟ್ಟಿಂಗ್ಸ್

**III.** ನಿಯಾನ್ ಸ್ಪೆನ್ಸ್

**IV.** ಮೇಲಿನ ಎಲ್ಲವೂ

## G. ಮೋಟಾರು ವಿಮೆ

ಈ ಕೊಟ್ಟ ಸನ್ನಿವೇಶವನ್ನು ಯೋಚಿಸಿ: ರೇವತಿಯವರು ತನ್ನ ಉಳಿತಾಯದ ಎಲ್ಲ ಹಣವನ್ನು ಬಳಸಿ ಒಂದು ಹೊಸ ಕಾರನ್ನು ಖರೀದಿಸಿ ಅದನ್ನು ಚಲಾಯಿಸಲು ಹೊರಟಿದ್ದಾರೆ. ಎಲ್ಲಿಂದಲೋ ನಾಯಿಯೊಂದು ದಾರಿಯಲ್ಲಿ ಬಂದು ಅದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ರೇವತಿ ಏಕಾಏಕಿ ಧಾವಿಸಿ ಡಿವೈಡರ್ ಮುರಿದು ಡಿವೈಡರ್ ಮೇಲೆ ಹೋಗಿ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಯನ್ನು ಗಾಯಗೊಳಿಸಿದ್ದಾರೆ. ಒಂದೇ ಒಂದು ಘಟನೆಯ ಫಲಿತಾಂಶವು ರೇವತಿಯವರ ಸ್ವಂತ ಕಾರು, ಸಾರ್ವಜನಿಕ ಆಸ್ತಿ, ಇನ್ನೊಂದು ಕಾರಿಗೆ ಹಾನಿಯುಂಟಾಗಿದೆ ಮತ್ತು ಇನ್ನೊಬ್ಬ ವ್ಯಕ್ತಿಗೆ ಗಾಯವಾಗಿದೆ.

ಈ ಸನ್ನಿವೇಶದಲ್ಲಿ, ರೇವತಿಯವರು ಕಾರು ವಿಮೆಯನ್ನು ಹೊಂದಿಲ್ಲದಿದ್ದರೆ, ಕಾರನ್ನು ಖರೀದಿಸಲು ಆಕೆಗೆ ತಗಲುವ ವೆಚ್ಚಕ್ಕಿಂತ ಹೆಚ್ಚಿನ ಹಣವನ್ನು ಪಾವತಿಸಬೇಕಾಗಬಹುದು.

- ✓ ರೇವತಿ ಅಥವಾ ಅದೇ ತೆರನಾದ ವ್ಯಕ್ತಿಗಳ ಬಳಿ ಪಾವತಿಸಲು ಅಷ್ಟು ಹಣವಿರುತ್ತದೆಯೇ?
- ✓ ರೇವತಿಯವರ ಕ್ರಿಯೆಗಳಿಗೆ ಇತರ ಪಕ್ಷದ ವಿಮೆ ಪಾವತಿಸಬೇಕೇ?
- ✓ ಅವರು ವಿಮೆಯನ್ನು ಹೊಂದಿಲ್ಲದಿದ್ದರೆ ಏನಾಗಬಹುದು?

ಅದಕ್ಕಾಗಿಯೇ ದೇಶದ ಕಾನೂನುಗಳು ತೃತೀಯ ಪಕ್ಷದ ಹೊಣೆಗಾರಿಕೆಯ ವಿಮೆಯನ್ನು ಹೊಂದುವುದನ್ನು ಕಡ್ಡಾಯಗೊಳಿಸುತ್ತವೆ. ಮೋಟಾರು ವಿಮೆಯು ಈ ವಿಷಯಗಳು ಸಂಭವಿಸುವುದನ್ನು ತಡೆಯುವುದಿಲ್ಲವಾದರೂ, ಮಾಲೀಕರಿಗೆ ಆರ್ಥಿಕ ಭದ್ರತೆಯ ಕವರ್ ಅನ್ನು ಒದಗಿಸುತ್ತದೆ.

ಅಪಘಾತದ ಹೊರತಾಗಿ, ಕಾರು ಕಳ್ಳತನವಾಗಬಹುದು, ಅಪಘಾತದಿಂದ ಹಾನಿಗೊಳಗಾಗಬಹುದು ಅಥವಾ ಬೆಂಕಿಯಿಂದ ನಾಶವಾಗಬಹುದು ಮತ್ತು ಮಾಲೀಕರು ಆರ್ಥಿಕವಾಗಿ ಬಳಲಬಹುದು.

ವಾಹನದ ಮಾಲೀಕರು (ಅಂದರೆ ಭಾರತದಲ್ಲಿಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಲ್ಲಿ ವಾಹನವನ್ನು ನೋಂದಾಯಿಸಿದ ವ್ಯಕ್ತಿ.) ಮೋಟಾರು ವಿಮೆಯನ್ನು ತೆಗೆದುಕೊಳ್ಳಬೇಕು

### ಮುಖ್ಯಾಂಶಗಳು

**ಕಡ್ಡಾಯ ತೃತೀಯ ಪಕ್ಷದ ವಿಮೆ**

ಮೋಟಾರು ವಾಹನ ಕಾಯಿದೆ, 1988 ರ ಪ್ರಕಾರ, ಸಾರ್ವಜನಿಕ ರಸ್ತೆಗಳಲ್ಲಿ ಸಂಚರಿಸುವ ವಾಹನದ ಪ್ರತಿಯೊಬ್ಬ ಮಾಲೀಕರು ತೃತೀಯ ಪಕ್ಷಗಳಿಗೆ ಅಪಘಾತದ ಪರಿಣಾಮವಾಗಿ ಉಂಟಾಗುವ ಆಕಸ್ಮಿಕ ಸಾವು, ದೈಹಿಕ ಗಾಯ ಅಥವಾ ಆಸ್ತಿಗೆ ಹಾನಿಗಳಿಗಾಗಿ ಪರಿಹಾರವನ್ನು ಪಾವತಿಸಲು ಮಾಲೀಕರು

ಕಾನೂನುಬದ್ಧವಾಗಿ ಹೊಣೆಗಾರರಾಗಿರುವುದರಿಂದ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳುವುದು ಕಡ್ಡಾಯವಾಗಿದೆ. ಅಂತಹ ವಿಮೆಯ ಪುರಾವೆಯಾಗಿ ವಿಮಾ ಪ್ರಮಾಣಪತ್ರವನ್ನು ವಾಹನದಲ್ಲಿ ಒಯ್ಯಬೇಕು.

**1. ಮೋಟಾರು ವಿಮೆಯ ಕವರೇಜ್**

ದೇಶವು ವಾಹನಗಳ ಅತಿದೊಡ್ಡ ಸಂಖ್ಯೆಯನ್ನು ಹೊಂದಿದೆ. ದಿನವೂ ಒಂದಷ್ಟು ಹೊಸ ವಾಹನಗಳು ರಸ್ತೆಗೆ ಬರುತ್ತಲೇ ಇರುತ್ತವೆ. ಅವುಗಳಲ್ಲಿ ಹಲವು ತುಂಬಾ ದುಬಾರಿಯೂ ಸಹ ಆಗಿರುತ್ತವೆ. ಭಾರತದಲ್ಲಿ ವಾಹನಗಳು ಜಂಕ್(ಎಸೆಯಲ್ಪಡುವುದು /ಸ್ಕ್ರ್ಯಾಪ್) ಆಗುವುದಿಲ್ಲ, ಆದರೆ ಕೈ ಬದಲಾಯಿಸುತ್ತಲೇ ಇರುತ್ತವೆ ಎಂದು ಜನರು ಹೇಳುತ್ತಾರೆ. ಇದರರ್ಥ ಹಳೆಯ ವಾಹನಗಳು ರಸ್ತೆಯಲ್ಲಿ ಮುಂದುವರಿಯುತ್ತವೆ ಮತ್ತು ಹೊಸ ವಾಹನಗಳು ಸೇರ್ಪಡೆಗೊಳ್ಳುತ್ತವೆ. ವಾಹನಗಳ ಸಂಖ್ಯೆಗೆ ಅನುಗುಣವಾಗಿ ರಸ್ತೆಗಳ ವಿಸ್ತೀರ್ಣ (ಚಾಲನಾ ಸ್ಥಳ) ಬೆಳೆಯುತ್ತಿಲ್ಲ. ರಸ್ತೆಯಲ್ಲಿ ಸಂಚರಿಸುವವರ ಸಂಖ್ಯೆಯೂ ಹೆಚ್ಚುತ್ತಿದೆ. ದೇಶದಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಪೊಲೀಸ್ ಮತ್ತು ಆಸ್ಪತ್ರೆಯಲ್ಲಿಯ ಅಂಕಿಅಂಶಗಳು ಹೇಳುತ್ತವೆ. ಅಪಘಾತ ಸಂತ್ರಸ್ತರಿಗೆ ನ್ಯಾಯಾಲಯಗಳು ನೀಡುವ ಪರಿಹಾರದ ಮೊತ್ತ ಹೆಚ್ಚುತ್ತಿದೆ. ವಾಹನ ದುರಸ್ತಿ ವೆಚ್ಚವೂ ಹೆಚ್ಚುತ್ತಿದೆ. **ಇವೆಲ್ಲವೂ ದೇಶದಲ್ಲಿ ಮೋಟಾರು ವಿಮೆಯ ಮಹತ್ವವನ್ನು ಎತ್ತಿ ತೋರಿಸುತ್ತವೆ.**

ಮೋಟಾರು ವಿಮೆಯು ವಾಹನಗಳ ನಷ್ಟ ಮತ್ತು ಅಪಘಾತಗಳು ಮತ್ತು ಇತರ ಕೆಲವು ಕಾರಣಗಳಿಂದಾಗುವ ಹಾನಿಯನ್ನು ಕವರ್ ಮಾಡುತ್ತದೆ. ಮೋಟಾರು ವಿಮೆಯು ತಮ್ಮ ವಾಹನಗಳಿಂದ ಉಂಟಾದ ಅಪಘಾತಗಳ ಬಲಿಯಾದವರಿಗೆ ಪರಿಹಾರ ನೀಡುವಲ್ಲಿಯ ವಾಹನ ಮಾಲೀಕರ ಕಾನೂನು ಹೊಣೆಗಾರಿಕೆಯನ್ನು ಸಹ ಕವರ್ ಮಾಡುತ್ತದೆ.

ಸರ್ಕಾರದ ಆದೇಶದ ಹೊರತಾಗಿಯೂ, ದೇಶದ ಎಲ್ಲ ವಾಹನಗಳಿಗೆ ವಿಮೆ ಮಾಡಲಾಗಿಲ್ಲ.

ಮೋಟಾರು ವಿಮೆಯು ಸಾರ್ವಜನಿಕ ರಸ್ತೆಗಳಲ್ಲಿ ಚಲಿಸುವ ಈ ಕೆಳಗೆ ಹೇಳಿದಂತಹ ಎಲ್ಲ ರೀತಿಯ ವಾಹನಗಳನ್ನು ಒಳಗೊಂಡಿದೆ:

- ✓ ದ್ವಿಚಕ್ರ ವಾಹನಗಳು
- ✓ ಖಾಸಗಿ ಮೋಟಾರುಗಳು
- ✓ ಸರಕು ಸಾಗಿಸುವ ಮತ್ತು ಪ್ರಯಾಣಿಕರನ್ನು ಸಾಗಿಸುವ ಎಲ್ಲ ರೀತಿಯ ವಾಣಿಜ್ಯ ವಾಹನಗಳು
- ✓ ಇತರ ವಿವಿಧ ರೀತಿಯ ವಾಹನಗಳು ಉದಾ. ಕ್ರೇನ್ ಗಳು
- ✓ ಮೋಟಾರು ವ್ಯಾಪಾರ (ಶೋರೂಮ್ ಗಳು ಮತ್ತು ಗ್ಯಾರೇಜ್ ಗಳಲ್ಲಿಯ ವಾಹನಗಳು)

## ‘ತೃತೀಯ ಪಕ್ಷದ ವಿಮೆ’

ಮತ್ತೊಂದು ಪಕ್ಷದ ಕಾನೂನು ಕ್ರಮಗಳ ವಿರುದ್ಧ ರಕ್ಷಣೆಗಾಗಿ ಖರೀದಿಸಿದ ವಿಮಾ ಪಾಲಿಸಿ. ವಿಮಾದಾರರ ಕ್ರಿಯೆಯಿಂದ ಉಂಟಾಗುವ ಹೊಣೆಗಾರಿಕೆಗಾಗಿ ಮತ್ತೊಂದು ಪಕ್ಷದ ಕ್ಲೇಮ್(ಮೂರನೇ ವ್ಯಕ್ತಿ)ಗಳ ರಕ್ಷಣೆಗಾಗಿ ವಿಮಾ ಕಂಪನಿ(ಎರಡನೇ ವ್ಯಕ್ತಿ)ಯಿಂದ ತೃತೀಯ ಪಕ್ಷದ ವಿಮೆಯನ್ನು ವಿಮಾದಾರ(ಮೊದಲನೇಯ ವ್ಯಕ್ತಿ)ರಿಂದ ಖರೀದಿಸಲಾಗುತ್ತದೆ.

**ತೃತೀಯ ಪಕ್ಷದ ವಿಮೆಯನ್ನು 'ಬಾಧ್ಯತಾ ವಿಮೆ' ಎಂದೂ ಕರೆಯಲಾಗುತ್ತದೆ.**

ಮಾರುಕಟ್ಟೆಯಲ್ಲಿ ಜನಪ್ರಿಯವಾಗಿರುವ ಪ್ರಮುಖ ರೀತಿಯ ಎರಡು ಕವರ್ ಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

**ಕೇವಲ ಕಾಯಿದೆ [ಬಾಧ್ಯತೆ] ಪಾಲಿಸಿ:** ಮೋಟಾರು ವಾಹನ ಕಾಯಿದೆಯ ಪ್ರಕಾರ ಸಾರ್ವಜನಿಕ ಸ್ಥಳದಲ್ಲಿ ಸಂಚರಿಸುವ ಯಾವುದೇ ವಾಹನವು ತೃತೀಯ ಪಕ್ಷಗಳಿಗಿರುವ ತಮ್ಮ ಹೊಣೆಗಾರಿಕೆಗಳನ್ನು ವಿಮೆ ಮಾಡುವುದು ಕಡ್ಡಾಯವಾಗಿದೆ.

ಈ ಪಾಲಿಸಿಯು ವಾಹನ ಮಾಲೀಕರ ಕಾನೂನು ಹೊಣೆಗಾರಿಕೆಯನ್ನು ಮಾತ್ರ ಕವರ್ ಮಾಡುತ್ತದೆ:

- ✓ ತೃತೀಯ ಪಕ್ಷದ ದೈಹಿಕ ಗಾಯ ಅಥವಾ ಸಾವು
- ✓ ತೃತೀಯ ಪಕ್ಷದ ಆಸ್ತಿ ಹಾನಿ

ಸಾವು ಅಥವಾ ಗಾಯ ಮತ್ತು ಹಾನಿಗೆ ಸಂಬಂಧಿಸಿದಂತೆ ಅನಿಯಮಿತ ಮೊತ್ತಕ್ಕೆ ಹೊಣೆಗಾರಿಕೆಯನ್ನು ಕವರ್ ಮಾಡಲಾಗಿರುತ್ತದೆ.

ಮೋಟಾರು ಅಪಘಾತದಿಂದ ಉಂಟಾದ ಸಾವು ಅಥವಾ ಗಾಯದ ಸಂದರ್ಭದಲ್ಲಿ ತೃತೀಯ ಪಕ್ಷದ ಬಲಿಯಾದವರಿಗೆ ಪರಿಹಾರಕ್ಕಾಗಿ ಕ್ಲೇಮ್ ಗಳನ್ನು ದೂರುದಾರರು ಮೋಟಾರು ಅಪಘಾತ ಕ್ಲೇಮ್ ಟ್ರಿಬ್ಯೂನಲ್(ಎಮ್ಎಸಿಟಿ)ನಲ್ಲಿ ಸಲ್ಲಿಸಬೇಕು.

## ‘ಕಡ್ಡಾಯವಾದ ವೈಯಕ್ತಿಕ ಅಪಘಾತ (ಸಿಪಿಎ) ವಿಮೆ’

ಮಾಲೀಕರು-ಚಾಲಕರಿಗೆ ಕಡ್ಡಾಯವಾಗಿ ಸ್ವತಂತ್ರ ವೈಯಕ್ತಿಕ ಅಪಘಾತದ ಕವರ್ ಅನ್ನು ವಿತರಿಸಲು ಜನವರಿ 1 2019 ರಿಂದ ಜಾರಿಪಡಿಸಿ ಐಆರ್ ಡಿಎಐ ಅನುಮತಿಯನ್ನು ನೀಡಿದೆ. ವಿಮೆ ಮಾಡಲಾದ ವಾಹನದಲ್ಲಿ ಏರುವಾಗ / ಇಳಿಯುವಾಗ ಅಥವಾ ಸಹ ಚಾಲಕರಾಗಿ ಪ್ರಯಾಣಿಸುವುದನ್ನು ಒಳಗೊಂಡಂತೆ ಚಾಲನೆಯ ಕವರ್ ಅನ್ನು ಮಾಲೀಕ-ಚಾಲಕರಿಗೆ ಒದಗಿಸಲಾಗುತ್ತದೆ. ಆದಾಗ್ಯೂ, ಪಾಲಿಸಿದಾರರು ಕೇವಲ ಹೊಣೆಗಾರಿಕೆ ಪಾಲಿಸಿ ಅಥವಾ ಪ್ಯಾಕೇಜ್ ಪಾಲಿಸಿಯನ್ನು ಭಾಗವಾಗಿ ಸಿಪಿಎ ಕವರ್ ಅನ್ನು ಆಯ್ಕೆ ಮಾಡಿಕೊಳ್ಳಬಹುದು. ಪಾಲಿಸಿದಾರರು ಸ್ವತಂತ್ರ ಸಿಪಿಎ ಪಾಲಿಸಿಯನ್ನು ಆಯ್ಕೆ ಮಾಡಿಕೊಂಡರೆ, ಹೊಣೆಗಾರಿಕೆಯ ಭಾಗವಾಗಿ ನೀಡಲಾದ ಸಿಪಿಎ ಕವರ್ ಅಥವಾ ಪ್ಯಾಕೇಜ್ ಪಾಲಿಸಿಯನ್ನು ಅಳಿಸಿ ಹಾಕಲಾಗುತ್ತದೆ.

**ಪ್ಯಾಕೇಜ್/ಸಮಗ್ರ ಪಾಲಿಸಿ: (ಸ್ವಂತ ಹಾನಿ + ತೃತೀಯ ಪಕ್ಷದ ಹೊಣೆಗಾರಿಕೆ)**

ಮೇಲಿನವುಗಳ ಜೊತೆಗೆ, ನಿರ್ದಿಷ್ಟಪಡಿಸಿದ ಅಪಾಯಗಳಿಂದ ವಿಮೆ ಮಾಡಲಾದ ವಾಹನದ ನಷ್ಟ ಅಥವಾ ಹಾನಿ (ಮೋಟಾರು ವಾಹನಗಳಿಗೆ ಸ್ವಂತ ಹಾನಿ ಎಂದು ಕರೆಯಲಾಗುತ್ತದೆ)ಯನ್ನು ಸಹ ಪಾಲಿಸಿಯಲ್ಲಿ ಇತರ ನಿಯಮಗಳು ಮತ್ತು ಷರತ್ತುಗಳನ್ನು ಘೋಷಿಸಿದ ಮೌಲ್ಯ(ಐಡಿವಿಯೆಂದು ಕರೆಯಲಾಗುತ್ತದೆ - ಮೇಲೆ ಚರ್ಚಿಸಲಾಗಿದೆ)ಕ್ಕೆ ಒಳಪಟ್ಟು ಕವರ್ ಮಾಡಲಾಗುತ್ತದೆ. ಈ ಅಪಾಯಗಳಲ್ಲಿ ಕೆಲವು ಬೆಂಕಿ, ಕಳ್ಳತನ, ಗಲಭೆ ಮತ್ತು ಮುಷ್ಕರ, ಭೂಕಂಪ, ಪ್ರವಾಹ, ಅಪಘಾತ ಇತ್ಯಾದಿಗಳಾಗಿವೆ.

ಕೆಲವು ವಿಮಾಗಾರರು ಅಪಘಾತದ ಸ್ಥಳದಿಂದ ವರ್ಕ್ ಶಾಪ್ ಗೆ ಎಳೆದೊಯ್ಯುವ ಶುಲ್ಕವನ್ನು ಸಹ ಪಾವತಿಸಬಹುದು. ಕೇವಲ ಕಾಯಿದೆ (ಬಾಧ್ಯತೆ) ಪಾಲಿಸಿಯಡಿಯಲ್ಲಿ ನೀಡಲಾದ ಕಡ್ಡಾಯದ ಕವರ್ ಜೊತೆಗೆ ಬೆಂಕಿ ಮತ್ತು/ಅಥವಾ ಕಳ್ಳತನದ ಅಪಾಯವನ್ನು ಮಾತ್ರ ಒಳಗೊಂಡಿರುವ ನಿರ್ಬಂಧಿತ ಕವರ್ ಸಹ ಲಭ್ಯವಿದೆ.

ಪಾಲಿಸಿಯು ವಾಹನದಲ್ಲಿ ಅಳವಡಿಸಲಾದ ಜೋಡಣೆಗಳಿಗಾಗುವ ನಷ್ಟ ಅಥವಾ ಹಾನಿ, ಪ್ರಯಾಣಿಕರಿಗೆ ಖಾಸಗಿ ಕಾರು ಪಾಲಿಸಿಗಳಡಿಯಲ್ಲಿ ವೈಯಕ್ತಿಕ ಅಪಘಾತದ ರಕ್ಷಣೆ, ಬಾಡಿಗೆ ಚಾಲಕ; ವಾಣಿಜ್ಯ ವಾಹನಗಳಲ್ಲಿ ಉದ್ಯೋಗಿಗಳಿಗೆ ಮತ್ತು ಶುಲ್ಕರಹಿತ ಪ್ರಯಾಣಿಕರಿಗೆ ಕಾನೂನು ಹೊಣೆಗಾರಿಕೆಯನ್ನು ಸಹ ಒಳಗೊಂಡಿರುತ್ತದೆ. ವಿಮಾಗಾರರು ಉಚಿತ ತುರ್ತು ಸೇವೆಗಳನ್ನು ಅಥವಾ ಸ್ಥಗಿತಿಯ ಸಂದರ್ಭದಲ್ಲಿ ಪರ್ಯಾಯದ ಕಾರಿನ ಬಳಕೆಯನ್ನು ಸಹ ಒದಗಿಸುತ್ತಾರೆ.

**2. ಹೊರತುಗಳು**

ಪಾಲಿಸಿಗಳಡಿಯಲ್ಲಿ ಕೆಲವು ಪ್ರಮುಖ ಹೊರತುಗಳೆಂದರೆ ಸವೆತ ಮತ್ತು ಸವಕಳಿ, ಸ್ಥಗಿತಗಳು, ಪರಿಣಾಮವಾಗಿ ಉಂಟಾಗುವ ನಷ್ಟ ಮತ್ತು ಅಮಾನ್ಯ ಚಾಲನಾ ಪರವಾನಗಿ(ಡ್ರೈವಿಂಗ್ ಲೈಸೆನ್ಸ್)ಯೊಂದಿಗೆ ಅಥವಾ ಮದ್ಯದ ಅಮಲಿನಲ್ಲಿ ಚಾಲನೆ ಮಾಡುವುದರಿಂದ ಉಂಟಾದ ನಷ್ಟಗಳಾಗಿವೆ. `ಬಳಕೆಯ ಮಿತಿಗಳಿಗೆ' ಅನುಗುಣವಾಗಿಲ್ಲದ ವಾಹನದ ಬಳಕೆ (ಉದಾ. ಖಾಸಗಿ ಕಾರನ್ನು ಟ್ಯಾಕ್ಸಿಯಾಗಿ ಬಳಸಲಾಗುತ್ತಿದೆ)ಯನ್ನು ಸಹ ಕವರ್ ಮಾಡುವುದಿಲ್ಲ.

**3. ವಿಮಾಮೊತ್ತ ಮತ್ತು ಕಂತು**

ಮೋಟಾರು ಪಾಲಿಸಿಯಲ್ಲಿ ವಾಹನದ ವಿಮಾ ಮೊತ್ತವನ್ನು ವಿಮಾದಾರರ ಘೋಷಿತ ಮೌಲ್ಯ (ಐಡಿವಿ) ಎಂದು ಉಲ್ಲೇಖಿಸಲಾಗುತ್ತದೆ.

ವಾಹನ ಕಳ್ಳತನವಾದ ಸಂದರ್ಭದಲ್ಲಿ ಅಥವಾ ಅಪಘಾತವಾದಲ್ಲಿ ದುರಸ್ತಿಗೆ ಮೀರಿದ ಸಂಪೂರ್ಣ ಹಾನಿಯ ಸಂದರ್ಭದಲ್ಲಿ, ಕ್ಲೇಮ್ ಮೊತ್ತವನ್ನು ಐಡಿವಿಯ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

ಬೆಲೆ ನಿರ್ಧಾರ(ರೇಟಿಂಗ್)/ಕಂತು ಲೆಕ್ಕಾಚಾರವು ವಿಮಾದಾರರ ಘೋಷಿತ ಮೌಲ್ಯ, ಘನ ಸಾಮರ್ಥ್ಯ, ಭೌಗೋಳಿಕ ವಲಯ, ವಾಹನದ ವಯಸ್ಸು ಇತ್ಯಾದಿ ಅಂಶಗಳನ್ನು ಅವಲಂಬಿಸಿರುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 3**

ಮೋಟಾರು ವಿಮೆಯನ್ನು ಯಾರ ಹೆಸರಿನಲ್ಲಿ ತೆಗೆದುಕೊಳ್ಳಬೇಕು?

I. ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಲ್ಲಿ ಹೆಸರು ನೋಂದಾಯಿಸಿರುವ ವಾಹನ ಮಾಲೀಕರ ಹೆಸರಿನಲ್ಲಿ

II. ಮಾಲೀಕರು ಬೇರೆಯಾಗಿದ್ದು ವಾಹನವನ್ನು ಚಲಾಯಿಸುವ ವ್ಯಕ್ತಿಯು ಭಿನ್ನವಾಗಿದ್ದರೆ, ಆಗ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು ವಾಹನವನ್ನು ಚಲಾಯಿಸುವ ವ್ಯಕ್ತಿಯ ಹೆಸರಿನಲ್ಲಿ

III. ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು ವಾಹನ ಮಾಲೀಕರು ಸೇರಿದಂತೆ ವಾಹನ ಮಾಲೀಕರ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ

IV. ಮಾಲೀಕರನ್ನು ಹೊರತುಪಡಿಸಿ ವಾಹನವನ್ನು ಬೇರೆ ಯಾರಾದರೂ ಚಲಾಯಿಸುವವರಿದ್ದರೆ, ಪ್ರಾಥಮಿಕ ಪಾಲಿಸಿಯು ವಾಹನ ಮಾಲೀಕರ ಹೆಸರಿನಲ್ಲಿರಬೇಕು ಮತ್ತು ಹೆಚ್ಚುವರಿ ಪಾಲಿಸಿಗಳನ್ನು ವಾಹನವನ್ನು ಚಾಲನೆ ಮಾಡುವ ಎಲ್ಲ ಜನರ ಹೆಸರಿನಲ್ಲಿ ಖರೀದಿಸಬೇಕು.

**ಸಾರಾಂಶ**

a) ಗೃಹಸ್ಥರ ವಿಮಾ ಪಾಲಿಸಿಯು ಪಾಲಿಸಿಯಲ್ಲಿ ಹೆಸರಿಸಲಾದ ಅಪಾಯಗಳು ಅಥವಾ ಘಟನೆಗಳಿಂದ ವಿಮೆ ಮಾಡಿದ ಆಸ್ತಿಗೆ ಉಂಟಾದ ನಷ್ಟದ ಮೇಲೆ ಮಾತ್ರ ರಕ್ಷಣೆಯನ್ನು ನೀಡುತ್ತದೆ. ಕವರ್ ಮಾಡಲಾದ ಅಪಾಯಗಳನ್ನು ಸ್ಫುಟವಾಗಿ ಸ್ಪಷ್ಟಪಡಿಸಲಾಗುತ್ತದೆ.

b) ಗೃಹಸ್ಥರ ವಿಮೆಯು ಬೆಂಕಿ, ಗಲಭೆಗಳು, ಪೈಪ್ ಗಳ ಸ್ಫೋಟ, ಭೂಕಂಪಗಳು ಇತ್ಯಾದಿಗಳ ವಿರುದ್ಧ ರಚನೆ ಮತ್ತು ಅದರಲ್ಲಿಯ ವಸ್ತುಗಳನ್ನು ಕವರ್ ಮಾಡುತ್ತದೆ. ಕಟ್ಟಡದ ಹೊರತಾಗಿ, ಇದು ದರೋಡೆ, ಗೃಹಭಂಗ, ಅಪಹಾರ ಮತ್ತು ಕಳ್ಳತನದ ವಿರುದ್ಧದ ವಸ್ತುಗಳನ್ನು ಕವರ್ ಮಾಡುತ್ತದೆ.

c) ಪ್ಯಾಕೇಜ್ ಕವರ್ ಒಂದೇ ದಾಖಲೆಯಡಿಯಲ್ಲಿ ಅನೇಕ ಕವರ್ ಗಳ ಸಂಯೋಜನೆಯನ್ನು ಒದಗಿಸುತ್ತದೆ.

d) ಗೃಹಸ್ಥರ ವಿಮೆಗಾಗಿ ವಿಮಾ ಮೊತ್ತವನ್ನು ನಿಗದಿಪಡಿಸಲು ಸಾಮಾನ್ಯವಾಗಿ ಎರಡು ವಿಧಾನಗಳಿವೆ. ಒಂದು ಮಾರುಕಟ್ಟೆ ಮೌಲ್ಯ (ಎಮ್ ವಿ) ಮತ್ತು ಇನ್ನೊಂದು ಮರುಸ್ಥಾಪನೆಯ ಮೌಲ್ಯ (ಆರ್ ಐವಿ).

e) ಅಂಗಡಿಕಾರರ ವಿಮೆಯು ಸಾಮಾನ್ಯವಾಗಿ ಬೆಂಕಿ, ಭೂಕಂಪ, ಪ್ರವಾಹ ಅಥವಾ ದುರುದ್ದೇಶಪೂರಿತ ಹಾನಿ ಮತ್ತು ದರೋಡೆಯಿಂದಾಗಿ ಅಂಗಡಿಯ ಕಟ್ಟಡ ಮತ್ತು ವಸ್ತುಗಳಿಗೆ ಆಗುವ ಹಾನಿಯನ್ನು ಇದು ಕವರ್ ಮಾಡುತ್ತದೆ. ಅಂಗಡಿಕಾರರ ವಿಮೆಯು ವ್ಯಾಪಾರದಲ್ಲಿಯ ಅಡೆತಡೆಗಳಿಗೆ ಸಹ ರಕ್ಷಣೆಯನ್ನು ಒಳಗೊಳ್ಳಬಹುದು.

**f)** ಮೋಟಾರು ವಿಮೆಯು ವಾಹನಗಳ ನಷ್ಟ ಮತ್ತು ಅಪಘಾತಗಳು ಮತ್ತು ಇತರ ಕೆಲವು ಕಾರಣಗಳಿಂದಾಗುವ ಹಾನಿಯನ್ನು ಕವರ್ ಮಾಡುತ್ತದೆ. ಮೋಟಾರು ವಿಮೆಯು ತಮ್ಮ ವಾಹನಗಳಿಂದ ಉಂಟಾದ ಅಪಘಾತಗಳ ಬಲಿಯಾದವರಿಗೆ ಪರಿಹಾರ ನೀಡುವಲ್ಲಿಯ ವಾಹನ ಮಾಲೀಕರ ಕಾನೂನು ಹೊಣೆಗಾರಿಕೆಯನ್ನು ಸಹ ಕವರ್ ಮಾಡುತ್ತದೆ. ಮಾಲೀಕ-ಚಾಲಕರಿಗೆ ಕಡ್ಡಾಯದ ವೈಯಕ್ತಿಕ ಅಪಘಾತದ ವಿಮೆ ಮಾಡಲಾದ ವಾಹನದಲ್ಲಿ ಏರುವಾಗ / ಇಳಿಯುವಾಗ ಅಥವಾ ಸಹ ಚಾಲಕರಾಗಿ ಪ್ರಯಾಣಿಸುವುದನ್ನು ಒಳಗೊಂಡಂತೆ ಚಾಲನೆಯ ಕವರ್ ಅನ್ನು ಮಾಲೀಕ-ಚಾಲಕರಿಗೆ ಒದಗಿಸಲಾಗುತ್ತದೆ.

---

## ಪ್ರಮುಖ ಪದಗಳು

**a)** ಗೃಹಸ್ಥರ ವಿಮೆ

**b)** ಅಂಗಡಿಕಾರರ ವಿಮೆ

**c)** ಮೋಟಾರು ವಿಮೆ

---

## ನಿಮ್ಮನ್ನು ಪರೀಕ್ಷಿಸಿ ಪ್ರಶ್ನೆಗಳಿಗೆ ಉತ್ತರಗಳು

**ಉತ್ತರ 1 - ಸರಿಯಾದ ಉತ್ತರ I ಆಗಿದೆ.**

**ಉತ್ತರ 2 - ಸರಿಯಾದ ಉತ್ತರ IV ಆಗಿದೆ.**

**ಉತ್ತರ 3 - ಸರಿಯಾದ ಉತ್ತರ I ಆಗಿದೆ.**

---

# ಅಧ್ಯಾಯ G-04

# ವಾಣಿಜ್ಯ ವಿಮೆ

## ಅಧ್ಯಾಯ ಪರಿಚಯ

ನಾವು ವ್ಯಕ್ತಿಗಳು ಮತ್ತು ಕುಟುಂಬಗಳು ಎದುರಿಸುವ ಅಪಾಯಗಳನ್ನು ಒಳಗೊಂಡಿರುವ ವಿವಿಧ ರೀತಿಯ ವಿಮಾ ಉತ್ಪನ್ನಗಳನ್ನು ಹಿಂದಿನ ಅಧ್ಯಾಯದಲ್ಲಿ ಪರಿಗಣಿಸಿದ್ದೇವೆ. ಇತರ ರಕ್ಷಣೆಯ ಅಗತ್ಯತೆಗಳನ್ನು ಹೊಂದಿರುವ ಗ್ರಾಹಕರ ಮತ್ತೊಂದು ಗಂಪು ಇದೆ. ಇವುಗಳು ವಿವಿಧ ರೀತಿಯ ಸರಕು ಮತ್ತು ಸೇವೆಗಳಲ್ಲಿ ತೊಡಗಿರುವ ಅಥವಾ ವ್ಯವಹರಿಸುತ್ತಿರುವ ವಾಣಿಜ್ಯ ಅಥವಾ ವ್ಯಾಪಾರ ಉದ್ಯಮಗಳು ಅಥವಾ ಸಂಸ್ಥೆಗಳಾಗಿವೆ. ಈ ವಿಭಾಗವು ಎದುರಿಸುತ್ತಿರುವ ಅಪಾಯಗಳನ್ನು ಕವರ್ ಮಾಡಲು ಲಭ್ಯವಿರುವ ವಿಮಾ ಉತ್ಪನ್ನಗಳನ್ನು ಈ ಅಧ್ಯಾಯದಲ್ಲಿ ನಾವು ಪರಿಗಣಿಸುತ್ತೇವೆ.

## ಕಲಿಕೆಯ ಫಲಿತಾಂಶಗಳು

ಕೆಳಗಿನ ವಿಮೆಯ ಮೂಲಭೂತ ಅಂಶಗಳನ್ನು ಅರ್ಥಮಾಡಿಕೊಳ್ಳಿ:

A. ಆಸ್ತಿ/ ಅಗ್ನಿ ವಿಮೆ

B. ವ್ಯಾಪಾರ ಅಡಚಣೆ ವಿಮೆ

C. ದರೋಡೆ ವಿಮೆ

D. ಹಣದ ವಿಮೆ

E. ನಿಷ್ಠೆ ಖಾತರಿ(ಫಿಡೆಲಿಟಿ ಗ್ಯಾರಂಟಿ) ವಿಮೆ

F. ಬ್ಯಾಂಕರ್ಸ್ ಪರಿಹಾರ(ಇಂಡೆಮ್ನಿಟಿ) ವಿಮೆ

G. ಜ್ಯುವೆಲರ್ಸ್ ಬ್ಲಾಕ್ ಪಾಲಿಸಿ

H. ಇಂಜಿನಿಯರಿಂಗ್ ವಿಮೆ

I. ಕೈಗಾರಿಕಾ ಎಲ್ಲ ಅಪಾಯಗಳ ವಿಮೆ

J. ಸಾಗಾಣಿಕೆ ವಿಮೆ

K. ಹೊಣೆಗಾರಿಕೆ ವಿಮಾ ಪಾಲಿಸಿಗಳು

ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ, ಚರ್ಚಿಸಲಾದ **11** ವಿಧದ ವಿಮೆಗಳ ಪ್ರಾಮುಖ್ಯತೆ ಮತ್ತು ಮೂಲಭೂತ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಲು ನಿಮದೆ ಸಾಧ್ಯವಾಗುತ್ತದೆ.

## A. ಆಸ್ತಿ/ ಅಗ್ನಿ ವಿಮೆ

ವಾಣಿಜ್ಯ ಉದ್ಯಮಗಳನ್ನು ವಿಶಾಲವಾಗಿ ಎರಡು ವಿಧಗಳಾಗಿ ವಿಂಗಡಿಸಲಾಗಿದೆ:

- ✓ ಸಣ್ಣ ಮತ್ತು ಮಧ್ಯಮ ಉದ್ಯಮಗಳು [ಎಸ್‌ಎಮ್‌ಈಗಳು]
    - ಭಾರತ ಸೂಕ್ಷ್ಮ ಪಾಲಿಸಿ
    - ಭಾರತ ಲಘು ಪಾಲಿಸಿ
- ✓ ದೊಡ್ಡ ವ್ಯಾಪಾರ ಉದ್ಯಮಗಳು

  ಪ್ರಮಾಣಿತ ಬೆಂಕಿ ಮತ್ತು ವಿಶೇಷ ಅಪಾಯಗಳ ಪಾಲಿಸಿ (ಎಸ್‌ಎಫ್‌ಎಸ್ ಪಿ), ಐಎಆರ್ ಇತ್ಯಾದಿ.

ಐತಿಹಾಸಿಕವಾಗಿ, ಈ ಗ್ರಾಹಕರ ಅಗತ್ಯಗಳನ್ನು ಪೂರೈಸುವ ಮೂಲಕ ಸಾಮಾನ್ಯ ವಿಮಾ ಕ್ಷೇತ್ರವು ಹೆಚ್ಚಾಗಿ ಅಭಿವೃದ್ಧಿಗೊಂಡಿದೆ.

ಸಾಮಾನ್ಯ ವಿಮಾ ಉತ್ಪನ್ನಗಳನ್ನು ವಾಣಿಜ್ಯ ಉದ್ಯಮಗಳಿಗೆ ಮಾರಾಟ ಮಾಡುವುದೆಂದರೆ ಅವುಗಳ ಅಗತ್ಯತೆಗಳೊಂದಿಗೆ ಎಚ್ಚರಿಕೆಯಿಂದ ವಿಮಾ ಉತ್ಪನ್ನಗಳನ್ನು ಹೊಂದಾಣಿಕೆ ಮಾಡುವ ಅಗತ್ಯವಿರುತ್ತದೆ. ಲಭ್ಯವಿರುವ ಉತ್ಪನ್ನಗಳ ಬಗ್ಗೆ ಏಜೆಂಟರು ಸರಿಯಾದ ತಿಳುವಳಿಕೆಯನ್ನು ಹೊಂದಿರಬೇಕು. ಈ ಕೆಲವು ಸಾಮಾನ್ಯ ವಿಮಾ ಉತ್ಪನ್ನಗಳನ್ನು ನಾವು ಸಂಕ್ಷಿಪ್ತವಾಗಿ ಪರಿಗಣಿಸೋಣ.

### 1. ಪ್ರಮಾಣಿತ ಬೆಂಕಿ ಮತ್ತು ವಿಶೇಷ ಅಪಾಯಗಳ ಪಾಲಿಸಿ (ಎಸ್‌ಎಫ್‌ಎಸ್ ಪಿ)

ವಾಣಿಜ್ಯ ಸಂಸ್ಥೆಗಳಿಗೆ ಅಲ್ಲದೇ ಆಸ್ತಿಯ ಮಾಲೀಕರಿಗೆ, ಆಸ್ತಿಯನ್ನು ಟ್ರಸ್ಟ್ ನಲ್ಲಿ ಅಥವಾ ಕಮಿಷನ್ ನಲ್ಲಿ ಹೊಂದಿರುವವರು ಮತ್ತು ಆಸ್ತಿಯಲ್ಲಿ ಹಣಕಾಸಿನ ಆಸಕ್ತಿ ಹೊಂದಿರುವ ವ್ಯಕ್ತಿಗಳು/ಹಣಕಾಸು ಸಂಸ್ಥೆಗಳಿಗೆ ಬೆಂಕಿ ವಿಮಾ ಪಾಲಿಸಿಯು ಸೂಕ್ತವಾಗಿದೆ.

ನಿರ್ದಿಷ್ಟ ಆವರಣದಲ್ಲಿರುವ ಕಟ್ಟಡಗಳು, ಕೈಗಾರಿಕಾ ಘಟಕ ಮತ್ತು ಯಂತ್ರೋಪಕರಣಗಳು, ಪೀಠೋಪಕರಣಗಳು, ಸ್ಥಿರವಸ್ತುಗಳು, ಜೋಡಣೆಗಳು ಮತ್ತು ಇತರ ವಸ್ತುಗಳು, ಸರಕುಗಳು ಮತ್ತು ಪ್ರಕ್ರಿಯೆಯಲ್ಲಿರುವ ಸರಕುಗಳಂತಹ ಎಲ್ಲ ಸ್ಥಿರ ಮತ್ತು ಸಾಗಿಸಬಹುದಾದ ಆಸ್ತಿಗಳು, ಪೂರೈಕೆದಾರರು/ಗ್ರಾಹಕರ ಆವರಣದಲ್ಲಿಯ ಸರಕುಗಳು,

ನಂಬಿಕೆ(ಟ್ರಸ್ಟ್)ಯಲ್ಲಿ ಇರಿಸಲಾಗಿರುವ ಸರಕುಗಳನ್ನು ನಿರ್ದಿಷ್ಟವಾಗಿ ಘೋಷಿಸಲ್ಪಟ್ಟಿದ್ದರೆ, ರಿಪೇರಿಗಾಗಿ ಆವರಣದಿಂದ ತಾತ್ಕಾಲಿಕವಾಗಿ ಹೊರಗೆ ಒಯ್ಯಲಾದ ಯಂತ್ರೋಪಕರಣಗಳನ್ನು ವಿಮೆ ಮಾಡಬಹುದು. ವ್ಯವಹಾರವನ್ನು ಅದರ ಸಾಮಾನ್ಯ ಚಾಲನೆಗೆ ಮರಳಿ ತರಲು ಹಾನಿಗೊಳಗಾದ ಆಸ್ತಿಯನ್ನು ಮರುನಿರ್ಮಾಣ ಮಾಡಲು ಮತ್ತು ನವೀಕರಿಸಲು ವಿತ್ತೀಯ ಪರಿಹಾರ ಅತ್ಯಗತ್ಯವಾಗಿರುತ್ತದೆ. ಇಲ್ಲಿ ಅಗ್ನಿ ವಿಮೆ ತನ್ನ ಪಾತ್ರವನ್ನು ವಹಿಸುತ್ತದೆ.

**1.1. ಒಂದು ಪ್ರಮಾಣಿತ ಬೆಂಕಿ ಪಾಲಿಸಿ ಏನನ್ನು ಕವರ್ ಮಾಡುತ್ತದೆ?**

ಸಾಂಪ್ರದಾಯಿಕವಾಗಿ ಬೆಂಕಿ ಪಾಲಿಸಿಯಿಂದ ಕವರ್ ಮಾಡಲಾಗುವ ಕೆಲವು ಅಪಾಯ(ಹಿಂದಿನ ಅಖಿಲ ಭಾರತ ಅಗ್ನಿಶಾಮಕ ಸುಂಕದ ಪ್ರಕಾರ)ಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

ವಾಣಿಜ್ಯ ಅಪಾಯಗಳ ಬೆಂಕಿ ಪಾಲಿಸಿಯು ಈ ಕೆಳಗಿನ ಅಪಾಯಗಳನ್ನು ಕವರ್ ಮಾಡುತ್ತದೆ:

- ✓ ಬೆಂಕಿ
- ✓ ಸಿಡಿಲು
- ✓ ಸ್ಫೋಟ/ ಅಂತಃಸ್ಫೋಟ
- ✓ ಗಲಭೆ ಮುಷ್ಕರ ಮತ್ತು ದುರುದ್ದೇಶಪೂರಿತ ಹಾನಿ
- ✓ ಹೊಡೆತ/ಅಪ್ಪಳಿಸುವಿಕೆಯ ಪರಿಣಾಮದಿಂದಾದ ಹಾನಿ
- ✓ ವಿಮಾನ ಹಾನಿ
- ✓ ಗಾಳಿ, ಬಿರುಗಾಳಿ, ಚಂಡಮಾರುತ, ಟೈಫೂನ್, ಜೋರಾದ ಮಳೆ(ಹರಿಕೇನ್), ಸುಂಟರಗಾಳಿ, ಪ್ರವಾಹ ಮತ್ತು ಮುಳುಗಡೆ
- ✓ ಬಂಡೆಗಳ ಕುಸಿತವನ್ನು ಸೇರಿದಂತೆ ಕುಸಿತ ಮತ್ತು ಭೂಕುಸಿತ
- ✓ ನೀರಿನ ಟ್ಯಾಂಕ್ ಗಳು, ಉಪಕರಣಗಳು ಮತ್ತು ಪೈಪ್ ಗಳು ಒಡೆದು ತುಂಬಿ ಹರಿಯುವುದು
- ✓ ಕ್ಷಿಪಣಿ ಪರೀಕ್ಷಾ ಕಾರ್ಯಾಚರಣೆಗಳು
- ✓ ಸ್ವಯಂಚಾಲಿತ ಸಿಂಚಕ(ಸ್ಪ್ರಿಂಕ್ಲರ್) ಸ್ಥಾಪನೆಯಿಂದ ಸೋರಿಕೆಗಳು
- ✓ ಕಾಳ್ಗಿಚ್ಚು

ವಾಣಿಜ್ಯ ವಿಮೆಯನ್ನು ವೈಯಕ್ತಿಕ ಮತ್ತು ಚಿಲ್ಲರೆ ವಿಮಾ ಪ್ರಕಾರಗಳಿಂದ ಪ್ರತ್ಯೇಕಿಸುವ ಎರಡು ಪ್ರಮುಖವಾದ ವೈಶಿಷ್ಟ್ಯಗಳಿವೆ.

**a)** ವಾಣಿಜ್ಯ ಉದ್ಯಮಗಳ ಆಸ್ತಿಗಳ ಮೌಲ್ಯವು ಓರ್ವ ವ್ಯಕ್ತಿಯ ಆಸ್ತಿಗಿಂತ ದೊಡ್ಡದಾಗಿರುವುದರಿಂದ ಸಂಸ್ಥೆಗಳು ಅಥವಾ ವ್ಯಾಪಾರ ಉದ್ಯಮಗಳ ವಿಮಾ ಅಗತ್ಯತೆಗಳು ವ್ಯಕ್ತಿಗಳಿಗಿಂತ ಹೆಚ್ಚು ದೊಡ್ಡದಾಗಿರುತ್ತದೆ. ವಾಣಿಜ್ಯ ಉದ್ಯಮಗಳ ಆಸ್ತಿಗಳ ನಷ್ಟ ಅಥವಾ ಹಾನಿಯು ಕಂಪನಿಯ ಉಳಿವು ಮತ್ತು ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು.

**b)** ಸಾಮಾನ್ಯವಾಗಿ ಕಾನೂನು ಅಥವಾ ಇತರ ಅವಶ್ಯಕತೆಗಳಿಂದ ವಾಣಿಜ್ಯ ಉದ್ಯಮದ ವಿಮೆಯ ಬೇಡಿಕೆಯು ಕಡ್ಡಾಯವಾಗಿದೆ ಅಥವಾ ಅಗತ್ಯವಾಗಿದೆ. ಉದಾಹರಣೆಗೆ, ಕೈಗಾರಿಕಾ ಘಟಕಗಳು ಮತ್ತು ಸ್ವತ್ತುಗಳನ್ನು ಬ್ಯಾಂಕ್ ಸಾಲದ ಮೂಲಕ ಸ್ಥಾಪಿಸಿದಾಗ, ಅವುಗಳ ವಿಮೆಯು ಸಾಲದ ಷರತ್ತಾಗಿರಬಹುದು.

- ಭಾರತದಲ್ಲಿಯ ಅನೇಕ ಸಾಂಘಿಕ(ಕಾರ್ಪೊರೇಟ್) ಉದ್ಯಮಗಳು ವೃತ್ತಿಪರವಾಗಿ ನಡೆಸಲ್ಪಡುವ ಕಂಪನಿಗಳಾಗಿದ್ದು ಅವುಗಳಲ್ಲಿ ಹಲವಾರು ಬಹುರಾಷ್ಟ್ರೀಯ ಕಂಪನಿಗಳಾಗಿವೆ.
- ಅವುಗಳು ತಮ್ಮ ಸ್ವತ್ತುಗಳನ್ನು ರಕ್ಷಿಸಲು ಸೂಕ್ತವಾದ ಅಪಾಯ ನಿರ್ವಹಣಾ ತಂತ್ರಗಳು ಮತ್ತು ವಿಮೆಯನ್ನು ಅಳವಡಿಸಿಕೊಳ್ಳುವುದು ಸೇರಿದಂತೆ ಜಾಗತಿಕ ಗುಣಮಟ್ಟದ ಮಾನದಂಡಗಳನ್ನು ನಿರ್ವಹಿಸುವ ಅಗತ್ಯವಿದೆ.

ಮೇಲೆ ಚರ್ಚಿಸಿದ ಅಪಾಯಗಳಿಂದುಂಟಾಗುವ ಯಾವುದೇ ನಷ್ಟವು ಕೆಲವು ಹೊರತುಗಳಿಗೆ ಒಳಪಟ್ಟು ಪಾಲಿಸಿಯಿಂದ ಕವರ್ ಮಾಡಲ್ಪಡುತ್ತದೆ.

**1.2. ಪರಿಷ್ಕೃತ ಪ್ರಮಾಣಿತ ಬೆಂಕಿ ಮತ್ತು ವಿಶೇಷ ಅಪಾಯಗಳ (ಎಸ್ಎಫ್ಎಸ್ ಪಿ) ಪಾಲಿಸಿಗಳು:**

ಪರಿಷ್ಕೃತ ಪ್ರಮಾಣಿತ ಬೆಂಕಿ ಮತ್ತು ವಿಶೇಷ ಅಪಾಯಗಳ (ಎಸ್ಎಫ್ಎಸ್ ಪಿ) ಪಾಲಿಸಿಯನ್ನು ಈ **ಕೆಳಗೆ** ನೀಡಿದ **ಅಪಾಯಗಳಿ**ಗಾಗಿ ಈ ಕೆಳಗೆ ನೀಡಿದ ಎರಡು ಪ್ರಮಾಣಿತ ಉತ್ಪನ್ನಗಳಿಂದ ಬದಲಾಯಿಸಲಾಗುತ್ತದೆ ಮತ್ತು ಬೆಂಕಿ ಮತ್ತು ಸಂಬಂಧಿತ ಅಪಾಯಗಳ ವಿಮಾ ವ್ಯವಹಾರದಲ್ಲಿರುವ ಎಲ್ಲ ಸಾಮಾನ್ಯ ವಿಮಾದಾರರು ಅವುಗಳನ್ನು ಕಡ್ಡಾಯವಾಗಿ ಒದಗಿಸಬೇಕೆಂದು ಐಆರ್ ಡಿಎಐ 1 ಏಪ್ರಿಲ್, 2021 ರಿಂದ ಜಾರಿಗೆ ಬರುವಂತೆ ಮಾರ್ಗಸೂಚಿಗಳನ್ನು ಹೊರಡಿಸಿದೆ.

i. **ಭಾರತ ಸೂಕ್ಷ್ಮ ಉದ್ಯಮ ಸುರಕ್ಷಾ (ಒಟ್ಟು ಮೌಲ್ಯ ರೂ. 5 ಕೋಟಿಯವರೆಗಿನ ಅಪಾಯದಲ್ಲಿರುವ ಉದ್ಯಮಗಳಿಗೆ ಮೀಸಲಾಗಿದೆ)-** ಎಮ್ಎಸ್ಎಮ್ಈಗಳ ಆರ್ಥಿಕ ರಕ್ಷಣೆಗಾಗಿ ವಿನ್ಯಾಸಗೊಳಿಸಲಾಗಿದೆ

ಈ ಪಾಲಿಸಿಯು ಒಂದು ಸ್ಥಳದಲ್ಲಿರುವ ಎಲ್ಲ ವಿಮೆ ಮಾಡಬಹುದಾದ ಆಸ್ತಿ ವರ್ಗಗಳ ರೂ. **5** ಕೋಟಿಗಳವರೆಗಿನ ಅಪಾಯವನ್ನು ಹೊಂದಿರುವ ಕಟ್ಟಡ/ರಚನೆಗಳು, ಕೈಗಾರಿಕಾ ಘಟಕಗಳು ಮತ್ತು ಯಂತ್ರೋಪಕರಣಗಳು, ಸರಕು ಮತ್ತು ಉದ್ಯಮಗಳ ಇತರ ಸ್ವತ್ತುಗಳಿಗೆ ಕವರ್ ಅನ್ನು ಒದಗಿಸುತ್ತದೆ. ಈ ಪಾಲಿಸಿಯು ವಾಸಸ್ಥಳಗಳಿಗೆ ಮೀಸಲಾದ ಪಾಲಿಸಿಗೆ ಹೋಲುವ ವ್ಯಾಪಕ ಶ್ರೇಣಿಯ ಅಪಾಯಗಳ ವಿರುದ್ಧ ಸಹ ಕವರ್ ಅನ್ನು ನೀಡುತ್ತದೆ.

ಮೂಲಭೂತ ಕವರ್ ಗೆ ಹೆಚ್ಚುವರಿಯಾಗಿ - ಬದಲಾವಣೆಗಳು, ಸೇರ್ಪಡೆಗಳು ಅಥವಾ ವಿಸ್ತರಣೆಗಳಿಗೆ ಕವರ್, ಫ್ಲೋಟರ್ ಆಧಾರದ ಮೇಲೆ ಸರಕುಗಳಿಗೆ ಕವರ್, ಸರಕುಗಳ ತಾತ್ಕಾಲಿಕ ತೆಗೆದುಹಾಕುವಿಕೆಗಾಗಿ ಕವರ್, ನಿರ್ದಿಷ್ಟ ವಸ್ತುಗಳಿಗೆ ಕವರ್, ಪ್ರಾರಂಭದ ವೆಚ್ಚಗಳಿಗೆ ಕವರ್ ( ನಷ್ಟದ ನಂತರ), ಆರ್ಕಿಟೆಕ್ಟ್ ರು, ಸರ್ವೇಕ್ಷಣದಾರರು ಮತ್ತು ಸಲಹಾಗಾರ ಅಭಿಯಂತ(ಇಂಜಿನಿಯರ್)ರಿಗೆ ವೃತ್ತಿಪರ ಶುಲ್ಕವನ್ನು ಪಾವತಿಸಲು ಕವರ್, ಕಸವನ್ನು ತೆಗೆದುಹಾಕುವ ವೆಚ್ಚ ಮತ್ತು ಪುರಸಭೆಯ ನಿಯಮಗಳಿಂದ ಕಡ್ಡಾಯವಾಗಿ ವೆಚ್ಚಗಳಂತಹ ಅನೇಕ ಅಂತರ್ನಿರ್ಮಿತ ಕವರ್ ಗಳನ್ನು ಈ ಪಾಲಿಸಿಯು ಹೊಂದಿರುತ್ತದೆ.

ಕಚೇರಿಗಳು, ಹೋಟೆಲ್ ಗಳು, ಕೈಗಾರಿಕೆಗಳು, ಶೇಖರಣಾ ಅಪಾಯಗಳು ಮತ್ತು ಮುಂತಾದ ಸೂಕ್ಷ್ಮ ಮಟ್ಟದ ಉದ್ಯಮಗಳು ಪಾಲಿಸಿಯನ್ನು ತೆಗೆದುಕೊಳ್ಳಬಹುದು. **15%** ರಷ್ಟು ಪಾಲಿಸಿ ಕಡಿಮೆ ವಿಮೆ(ಅಂಡರ್

ಇನ್ಶ್ಯೂರೆನ್ಸ್)ಯನ್ನು ಬಿಟ್ಟು ಬಿಡ(ಮನ್ನಾ)ಲಾಗಿದೆ. ಭಾರತ ಸೂಕ್ಷ್ಮ ಉದ್ಯಮ ಪಾಲಿಸಿಗಳು ಪಾಲಿಸಿಯ ಅವಧಿಯಲ್ಲಿ ವಿಮಾ ಮೊತ್ತವನ್ನು ಅನುಮೋದನೆಯ ಮೂಲಕ ಹೆಚ್ಚಿಸಲು ಅವಕಾಶ ಮಾಡಿಕೊಡುತ್ತವೆ.

ii. **ಭಾರತ ಲಘು ಉದ್ಯಮ ಸುರಕ್ಷಾ (ಒಟ್ಟು ರೂ. 5 ಕೋಟಿ ಮತ್ತು ರೂ. 50 ಕೋಟಿಯವರೆಗಿನ ಮೌಲ್ಯದ ಅಪಾಯದಲ್ಲಿರುವ ಉದ್ಯಮಗಳಿಗೆ ಮೀಸಲಾಗಿದೆ)** ಎಮ್‌ಎಸ್‌ಎಮ್‌ಈಗಳ ಆರ್ಥಿಕ ರಕ್ಷಣೆಗಾಗಿ ವಿನ್ಯಾಸಗೊಳಿಸಲಾಗಿದೆ

ಈ ಪಾಲಿಸಿಯು ಒಂದು ಸ್ಥಳದಲ್ಲಿ ಪಾಲಿಸಿ ಪ್ರಾರಂಭದ ದಿನಾಂಕದಂದು ಒಟ್ಟು ಮೌಲ್ಯವು ರೂ.5 ಕೋಟಿಗಿಂತ ಹೆಚ್ಚಾಗಿರುವ ಆದರೆ ರೂ. 50 ಕೋಟಿ ರೂಗಳನ್ನು ಮೀರದ ಅಪಾಯವನ್ನು ಹೊಂದಿರುವ ಎಲ್ಲ ವಿಮೆ ಮಾಡಬಹುದಾದ ಆಸ್ತಿ ವರ್ಗಗಳ ಕಟ್ಟಡಗಳು/ರಚನೆಗಳು, ಕೈಗಾರಿಕಾ ಘಟಕ ಮತ್ತು ಯಂತ್ರೋಪಕರಣಗಳು, ಸರಕು ಮತ್ತು ಉದ್ಯಮಗಳ ಇತರ ಸ್ವತ್ತುಗಳಿಗೆ ಕವರ್ ಅನ್ನು ಒದಗಿಸುತ್ತದೆ. ಈ ಪಾಲಿಸಿಯು ಸಹ ಸೂಕ್ಷ್ಮ ಮಟ್ಟದ ಸಂಸ್ಥೆಗಳಿಗೆ ಪಾಲಿಸಿ ನೀಡುವ ಮೇಲೆ ತಿಳಿಸಲಾದ ಎಲ್ಲ ಅಂತರ್ನಿರ್ಮಿತ ಕವರ್ ಗಳನ್ನು ಹೊಂದಿದೆ. ವಿಮೆಯನ್ನು ನೀಡಲಾಗುವ ಅಪಾಯಗಳು ಸಹ ಸೂಕ್ಷ್ಮ ಮಟ್ಟದ ಸಂಸ್ಥೆಗಳಿಗೆ ಮೀಸಲಾದ ಪಾಲಿಸಿಯನ್ನು ಹೋಲುತ್ತವೆ.

ಮತ್ತೊಮ್ಮೆ ಪಾಲಿಸಿಯನ್ನು, ಕಚೇರಿಗಳು, ಹೋಟೆಲ್ ಗಳು, ಕೈಗಾರಿಕೆಗಳು, ಶೇಖರಣಾ ಅಪಾಯಗಳು ಮತ್ತು ಮುಂತಾದ ಎಲ್ಲ ರೀತಿಯ ಅಪಾಯಗಳಿಗೆ ತೆಗೆದುಕೊಳ್ಳಬಹುದು. ಭಾರತ ಲಘು ಉದ್ಯಮ ಪಾಲಿಸಿಯ ಅವಧಿಯಲ್ಲಿ ವಿಮಾ ಮೊತ್ತವನ್ನು ಅನುಮೋದನೆಯ ಮೂಲಕ ಹೆಚ್ಚಿಸಲು ಅವಕಾಶ ಮಾಡಿಕೊಡುತ್ತವೆ.

**iii. ಬೆಂಕಿ ವಿಮಾ ಪಾಲಿಸಿಗಳಡಿಯಲ್ಲಿಯ ಹೊರತುಗಳು**

ಸಾಂಪ್ರದಾಯಿಕವಾಗಿ ವಿಮಾಗಾರರು ಬೆಂಕಿ ಪಾಲಿಸಿಗಳ ವ್ಯಾಪ್ತಿಯಿಂದ ಈ ಕೆಳಗಿನವುಗಳನ್ನು ಹೊರಗಿಡುತ್ತಾರೆ.

**ಈ ಕೆಳಗಿನಂತಹ ಹೊರತುಪಡಿಸಿದ ಅಪಾಯಗಳಿಂದಾಗಿ ನಷ್ಟಗಳು**

i. ಯುದ್ಧ ಮತ್ತು ಯುದ್ಧದಂತಹ ಚಟುವಟಿಕೆಗಳು.

ii. ಪರಮಾಣು ಅಪಾಯಗಳು

iii. ಅಯಾನೀಕರಣ ಮತ್ತು ವಿಕಿರಣ

iv. ಮಾಲಿನ್ಯ ಮತ್ತು ಕಲುಷಿತಗೊಳಿಸುವಿಕೆಯ ನಷ್ಟಗಳು

**ಸಾಮಾನ್ಯ ವಿಮೆಯಲ್ಲಿಯ ಇತರ ಪಾಲಿಸಿಗಳಿಂದ ಕವರ್ ಮಾಡಲಾಗುವ ಅಪಾಯಗಳು**

i. ಯಂತ್ರೋಪಕರಣಗಳ ಸ್ಥಗಿತ,

ii. ವ್ಯವಹಾರದಲ್ಲಿಯ ಅಡೆತಡೆ

iv. ಆಡ್-ಆನ್ ಕವರ್ ಗಳು

ಆದಾಗ್ಯೂ ಭೂಕಂಪ, ಬೆಂಕಿ ಮತ್ತು ಆಘಾತದಂತಹ ವಿಮೆ ಮಾಡಿದ ಅಪಾಯದ ಪರಿಣಾಮವಾಗಿ ವಿದ್ಯುತ್ ವೈಫಲ್ಯದ ನಂತರ ಶೀತ ಶೇಖರಣೆಯಲ್ಲಿನ ದಾಸ್ತಾನು ನಷ್ಟವಾಗುವುದು, ಅವಶೇಷಗಳನ್ನು ತೆಗೆದುಹಾಕುವಲ್ಲಿ ಒಳಗೊಂಡಿರುವ ಹೆಚ್ಚುವರಿ ಖರ್ಚು, ಪಾಲಿಸಿಯಿಂದ ಕವರ್ ಮಾಡಿದ ಮೊತ್ತಕ್ಕಿಂತ ಹೆಚ್ಚಿನ ವಾಸ್ತುಶಿಲ್ಪಿ, ಸಲಹಾ ಎಂಜಿನಿಯರ್ ಗಳ ಶುಲ್ಕ, ಕಾಡ್ಗಿಚ್ಚು, ಸ್ವಯಂಪ್ರೇರಿತ ದಹನ ಮತ್ತು ಸ್ವಂತ ವಾಹನಗಳಿಗೆ ತಾಡನ/ಅಪ್ಪಳಿಸುವಿಕೆಯ ಪರಿಣಾಮದಿಂದಾದ ಹಾನಿ; ಭಯೋತ್ಪಾದನೆಯಂತಹ ಕೆಲವು ಅಪಾಯಗಳನ್ನು ಹೆಚ್ಚುವರಿ ಕಂತು ಪಾವತಿಯಿಂದ ಕವರ್ ಮಾಡಬಹುದು.

v. ಬೆಂಕಿ ಪಾಲಿಸಿಯ ವಿವಿಧ ಪ್ರಕಾರಗಳು

ಬೆಂಕಿ ಪಾಲಿಸಿಗಳನ್ನು ಸಾಮಾನ್ಯವಾಗಿ 12 ತಿಂಗಳ ಅವಧಿಗಾಗಿ ನೀಡಲಾಗುತ್ತದೆ. ವಸತಿಗಳಿಗೆ ಮಾತ್ರ, ವಿಮಾ ಕಂಪನಿಗಳು ದೀರ್ಘಾವಧಿಯ ಅಂದರೆ 12 ತಿಂಗಳಿಗಿಂತ ಹೆಚ್ಚು ಅವಧಿಗಾಗಿ ಪಾಲಿಸಿಗಳನ್ನು ನೀಡುತ್ತವೆ. ಕೆಲವು ಸಂದರ್ಭಗಳಲ್ಲಿ ಅಲ್ಪಾವಧಿಯ ಮಾಪಕಗಳು ಅನ್ವಯಿಸುವ ಅಲ್ಪಾವಧಿಯ ಪಾಲಿಸಿಗಳನ್ನು ಸಹ ನೀಡಲಾಗುತ್ತದೆ.

a. **ಮಾರುಕಟ್ಟೆ ಮೌಲ್ಯ ಮತ್ತು ಮರುಸ್ಥಾಪನೆ ಮೌಲ್ಯದ ಪಾಲಿಸಿಗಳು:** ನಷ್ಟದ ಸಂದರ್ಭದಲ್ಲಿ, ವಿಮಾಗಾರರು ಸಾಮಾನ್ಯವಾಗಿ ಮಾರುಕಟ್ಟೆ ಮೌಲ್ಯ [ಇದು ಸವಕಳಿ ಕಳೆದ ನಂತರದ ಮೌಲ್ಯವಾಗಿರುತ್ತದೆ]ವನ್ನು ಪಾವತಿಸುತ್ತಾರೆ. ಮರುಸ್ಥಾಪನೆ ಮೌಲ್ಯದ ಪಾಲಿಸಿಯಡಿಯಲ್ಲಿ, ವಿಮಾಗಾರರು ಹಾನಿಗೊಳಗಾದ ಆಸ್ತಿಯನ್ನು ಅದೇ ರೀತಿಯ ಹೊಸ ಆಸ್ತಿಯ ಮೂಲಕ ಬದಲಾಯಿಸುವ ವೆಚ್ಚವನ್ನು ಪಾವತಿಸುತ್ತಾರೆ.

   ಕಟ್ಟಡಗಳು, ಕೈಗಾರಿಕಾ ಘಟಕಗಳು, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ಸ್ಥಿರವಸ್ತು, ಜೋಡಣೆಗಳನ್ನು ಕವರ್ ಮಾಡಲು ಮರುಸ್ಥಾಪನೆಯ ಮೌಲ್ಯದ ಪಾಲಿಸಿಗಳನ್ನು ನೀಡಲಾಗುತ್ತದೆ. ಸಾಮಾನ್ಯವಾಗಿ ಮರುಸ್ಥಾಪನೆಯ ಮೌಲ್ಯದ ಪಾಲಿಸಿಗಳನ್ನು ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಕವರ್ ಮಾಡಲಾಗುವ ಸರಕುಗಳನ್ನು ಕವರ್ ಮಾಡಲು ನೀಡಲಾಗುವುದಿಲ್ಲ.

b. **ಘೋಷಣೆ ಪಾಲಿಸಿ:** ಗೋದಾಮಿನಲ್ಲಿಯ ಸರಕುಗಳ ಮೌಲ್ಯಗಳಲ್ಲಿ ಮೇಲಿಂದ ಮೇಲೆ ಆಗುವ ಏರಿಳಿತಗಳನ್ನು ನೋಡಿಕೊಳ್ಳಲು, ಕೆಲವು ಷರತ್ತುಗಳಿಗೆ ಒಳಪಟ್ಟು ಘೋಷಣೆ ಪಾಲಿಸಿಯನ್ನು ನೀಡಲಾಗುತ್ತದೆ. ವಿಮಾ ಮೊತ್ತವು ಪಾಲಿಸಿಯ ಅವಧಿಯಲ್ಲಿ ಗೋದಾಮಿನಲ್ಲಿ ಸಂಗ್ರಹವಾಗುವ ನಿರೀಕ್ಷೆಯಿರುವ ಅತ್ಯಧಿಕ ಸರಕಿನ ಮೌಲ್ಯವಾಗಿರಬೇಕು. ಈ ಮೌಲ್ಯದ ಮೇಲೆ ತಾತ್ಕಾಲಿಕ ಕಂತನ್ನು ವಿಧಿಸಲಾಗುತ್ತದೆ. ವಿಮಾದಾರರು ಪಾಲಿಸಿ ಜಾರಿಯಲ್ಲಿರುವ ಸಮಯದಲ್ಲಿ ಒಪ್ಪಿಕೊಂಡ ಮಧ್ಯಂತರಗಳಲ್ಲಿ ತಮ್ಮ ಸರಕುಗಳ ಮೌಲ್ಯವನ್ನು ಘೋಷಿಸಬೇಕು. ಪಾಲಿಸಿ ಅವಧಿಯ ಕೊನೆಯಲ್ಲಿ ಕಂತಿನ ಜೊತೆಗೆ ಇದನ್ನು ಸರಿಹೊಂದಿಸಬಹುದು.

c. **ಫ್ಲೋಟರ್ ಪಾಲಿಸಿಗಳು:** ವಿವಿಧ ನಿರ್ದಿಷ್ಟ ಸ್ಥಳಗಳಲ್ಲಿ ಸಂಗ್ರಹಿಸಲಾದ ಸರಕುಗಳ ದಾಸ್ತಾನುಗಳಿಗೆ ಒಂದು ವಿಮಾ ಮೊತ್ತದಡಿಯಲ್ಲಿ ಫ್ಲೋಟರ್ ಪಾಲಿಸಿಗಳನ್ನು ನೀಡಬಹುದು. ಅನಿರ್ದಿಷ್ಟ ಸ್ಥಳಗಳನ್ನು

ಕವರ್ ಮಾಡಲಾಗುವುದಿಲ್ಲ. ಕಂತು ದರವು **10%** ನಷ್ಟು ಹೆಚ್ಚುವರಿ(ಲೋಡಿಂಗ್)ಯೊಂದಿಗೆ ಯಾವುದೇ ಒಂದು ಸ್ಥಳದಲ್ಲಿ ವಿಮಾದಾರರ ಸರಕುಗಳಿಗೆ ಅನ್ವಯವಾಗುವ ಅತ್ಯಧಿಕ ದರವಾಗಿದೆ. ವಿಮಾ ಮೊತ್ತವು ವಿವಿಧ ಸ್ಥಳಗಳಲ್ಲಿ 'ಫ್ಲೋಟ್' ಆಗುವುದರಿಂದ ಇವುಗಳನ್ನು ಫ್ಲೈರ್ ಫ್ಲೋಟರ್ ಪಾಲಿಸಿಗಳೆಂದೂ ಕರೆಯುತ್ತಾರೆ.

**vi. ಕಂತು ಬೆಲೆ ನಿರ್ಧಾರವು ಈ ಕೆಳಗಿನ ಅಂಶಗಳನ್ನವಲಂಬಿಸಿರುತ್ತದೆ:**

**a)** ಕೈಗಾರಿಕಾ ಅಥವಾ ಇನ್ನಾವುದೇ ಆಗಿರಲಿ ವಸತಿಯ ಪ್ರಕಾರ.

**b)** ಕೈಗಾರಿಕಾ ಸಂಕೀರ್ಣದಲ್ಲಿರುವ ಎಲ್ಲ ಆಸ್ತಿಗೆ ತಯಾರಿಸಲ್ಪಡುವ ಉತ್ಪನ್ನ (ಗಳನ್ನು)ವನ್ನವಲಂಬಿಸಿ ಒಂದು ದರವನ್ನು ವಿಧಿಸಲಾಗುತ್ತದೆ.

**c)** ಕೈಗಾರಿಕಾ ಸಂಕೀರ್ಣಗಳ ಹೊರಗಿರುವ ಸೌಲಭ್ಯಗಳನ್ನು ಪ್ರತ್ಯೇಕ ಸ್ಥಳದಲ್ಲಿ ವಸತಿಯ ಸ್ವರೂಪವನ್ನವಲಂಬಿಸಿ ಬೆಲೆ ನಿರ್ಧರಿಸಲಾಗುತ್ತದೆ.

**d)** ಹೊಂದಿರುವ ಸರಕುಗಳ ಅಪಾಯಕಾರಿ ಸ್ವರೂಪದ ಆಧಾರದ ಮೇಲೆ ಶೇಖರಣಾ ಪ್ರದೇಶಗಳಿಗೆ ಬೆಲೆ ನಿರ್ಧರಿಸಲಾಗುತ್ತದೆ.

**e)** "ಆಡ್ ಆನ್" ಕವರ್ ಗಳನ್ನು ಸೇರಿಸಲು ಹೆಚ್ಚುವರಿ ಕಂತನ್ನು ವಿಧಿಸಲಾಗುತ್ತದೆ.

**f)** ಹಿಂದಿನ ಕ್ಲೇಮ್ ಗಳ ಇತಿಹಾಸ ಮತ್ತು ಆವರಣದಲ್ಲಿ ಒದಗಿಸಲಾದ ಅಗ್ನಿಶಾಮಕ ರಕ್ಷಣಾ ಸೌಲಭ್ಯಗಳ ಆಧಾರದ ಮೇಲೆ ಕಂತಿನಲ್ಲಿ ರಿಯಾಯಿತಿಯನ್ನು ನೀಡಲಾಗುತ್ತದೆ..

**g)** ಕಂತಿನಲ್ಲಿ ಕಡಿತವನ್ನು ಪಡೆಯಲು ಗಲಭೆ, ಮುಷ್ಕರ, ದುರುದ್ದೇಶಪೂರಿತ ಹಾನಿ ಕವರ್ ಗಳು ಮತ್ತು ಪ್ರವಾಹದ ಗುಂಪಿನ ಅಪಾಯಗಳಿಂದ ಹೊರಗುಳಿಯುವ ಆಯ್ಕೆ ಮಾಡಿಕೊಳ್ಳಬಹುದು.

ಅಲ್ಲದೇ ಬೆಲೆ ನಿರ್ಧಾರದ ನಮೂನೆಯು ವಿಮಾಗಾರರಿಂದ ವಿಮಾಗಾರರಿಗೆ ಬದಲಾಗಬಹುದು.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ವಾಣಿಜ್ಯ ಅಪಾಯಗಳ ಬೆಂಕಿ ಪಾಲಿಸಿಯು ________ ಅಪಾಯವನ್ನು ಒಳಗೊಳ್ಳುತ್ತದೆ

**I.** ಹೆದ್ದಾರಿಯಲ್ಲಿ ವಾಹನ ಸುಡುವಿಕೆ

**II.** ಹಡಗಿನಲ್ಲಿಯ ಬೆಂಕಿ

**III.** ಕಾರ್ಖಾನೆಯಲ್ಲಿಯ ಸ್ಫೋಟ

**IV.** ಬೆಂಕಿಯಿಂದಾಗಿ ಆಸ್ಪತ್ರೆಗೆ ದಾಖಲೀಕರಣ

## B. ವ್ಯವಹಾರದಲ್ಲಿಯ ಅಡೆತಡೆ ವಿಮೆ

ವ್ಯವಹಾರದಲ್ಲಿಯ ಅಡೆತಡೆ ವಿಮೆಯನ್ನು ಕ್ಲೇಮ್ ತರುವಾಯ ಅನುಕ್ರಮ ನಷ್ಟ ವಿಮೆ ಅಥವಾ ಲಾಭದ ನಷ್ಟ ವಿಮೆ ಎಂದೂ ಕರೆಯಲಾಗುತ್ತದೆ.

ಬೆಂಕಿ ವಿಮೆಯು ವಸ್ತು ಅಥವಾ ಆಸ್ತಿ ಹಾನಿ ಅಥವಾ ಕಟ್ಟಡ, ಕೈಗಾರಿಕಾ ಘಟಕ, ಯಂತ್ರೋಪಕರಣಗಳು, ಸ್ಥಿರ ವಸ್ತುಗಳು, ಜೋಡಣೆಗಳು, ಮಾರಾಟದ ಸರಕುಗಳು ಇತ್ಯಾದಿಗಳಿಗೆ ವಿಮೆ ಮಾಡಿದ ಅಪಾಯಗಳಿಂದ ಉಂಟಾಗುವ ಭೌತಿಕ ಅಥವಾ ಆಸ್ತಿ ನಷ್ಟದ ವಿರುದ್ಧ ಪರಿಹಾರವನ್ನು ಒದಗಿಸುತ್ತದೆ. **ಇದು** ಅಡಚಣೆಯ ಅವಧಿಯಲ್ಲಿ ವಿವಿಧ ಆರ್ಥಿಕ ನಷ್ಟಗಳಿಗೆ ಕಾರಣವಾಗಬಹುದಾದ **ವಿಮಾದಾರರ ವ್ಯವಹಾರದ ಸಂಪೂರ್ಣ ಅಥವಾ ಭಾಗಶಃ ಅಡೆತಡೆಗೆ ಕಾರಣವಾಗಬಹುದು.**

**ವ್ಯವಹಾರ ಅಡೆತಡೆ ಪಾಲಿಸಿಯಡಿಯಲ್ಲಿಯ ವ್ಯಾಪ್ತಿ(ಕವರೇಜ್)**

ಪರಿಣಾಮದ ನಷ್ಟ (ಸಿಎಲ್**)** ಪಾಲಿಸಿ [ವ್ಯವಹಾರದ ಅಡೆತಡೆ (ಬಿಐ)**]** ನಿವ್ವಳ ಲಾಭ ಮತ್ತು ಸ್ಥಾಯಿ ಶುಲ್ಕಗಳನ್ನು ಒಳಗೊಂಡಿರುವ ಮತ್ತು ಅಂತಿಮ ನಷ್ಟವನ್ನು ಕಡಿಮೆ ಮಾಡಲು ಸಾಧ್ಯವಾದಷ್ಟು ಬೇಗ ವ್ಯವಹಾರವನ್ನು ಸಾಮಾನ್ಯ ಸ್ಥಿತಿಗೆ ಮರಳಿ ತರುವಲ್ಲಿ ವಿಮಾದಾರರು ಮಾಡಿದ ಕೆಲಸದ ವೆಚ್ಚವನ್ನು ಒಳಗೊಂಡಿರುವ ಒಟ್ಟಾರೆ ಲಾಭ ಎಂದು ಕರೆಯಲ್ಪಡುವ ನಷ್ಟಕ್ಕೆ ಪರಿಹಾರವನ್ನು ಒದಗಿಸುತ್ತದೆ. ಕವರ್ ಮಾಡಲಾದ ಅಪಾಯಗಳು ಮತ್ತು ಷರತ್ತುಗಳು ಬೆಂಕಿ ಪಾಲಿಸಿಯಡಿಯಲ್ಲಿಯಂತೆಯೇ ಇರುತ್ತವೆ.

**ಉದಾಹರಣೆ**

ಕಾರು ತಯಾರಕರ ಕೈಗಾರಿಕಾ ಘಟಕಕ್ಕೆ ಬೆಂಕಿಯು ಹಾನಿಯನ್ನುಂಟುಮಾಡಿದರೆ, ಉತ್ಪಾದನಾ ನಷ್ಟವು ಉತ್ಪಾದಕರ ಆದಾಯದ ನಷ್ಟಕ್ಕೆ ಕಾರಣವಾಗುತ್ತದೆ. ಈ ಆದಾಯದ ನಷ್ಟ ಮತ್ತು ಹೆಚ್ಚುವರಿ ವೆಚ್ಚಗಳು ವಿಮೆ ಮಾಡಲಾದ ಅಪಾಯದಿಂದ ಉಂಟಾಗಿದ್ದರೆ ಅದನ್ನು ವಿಮೆ ಮಾಡಬಹುದು.

---

ಪ್ರಮಾಣಿತ ಬೆಂಕಿ ಮತ್ತು ವಿಶೇಷ ಅಪಾಯಗಳ ಪಾಲಿಸಿಯಡಿಯಲ್ಲಿ ಕ್ಲೇಮ್ ಇದ್ದರೆ ಮಾತ್ರ ಈ ಪಾಲಿಸಿಯ ಅಡಿಯಲ್ಲಿ ಕ್ಲೇಮ್ ಗಳು ಸ್ವೀಕಾರಾರ್ಹವಾಗಿರುವುದರಿಂದ ಈ ಪಾಲಿಸಿಯನ್ನು ಪ್ರಮಾಣಿತ ಬೆಂಕಿ ಮತ್ತು ವಿಶೇಷ ಅಪಾಯಗಳ ಪಾಲಿಸಿಯೊಂದಿಗೆ ಮಾತ್ರ ತೆಗೆದುಕೊಳ್ಳಬಹುದು.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 2**

ವ್ಯವಹಾರ ಅಡಚಣೆ ವಿಮಾ ಪಾಲಿಸಿಯನ್ನು ___________ ಜೊತೆಯಲ್ಲಿ ಮಾತ್ರ ತೆಗೆದುಕೊಳ್ಳಬಹುದು.

**I.** ಪ್ರಮಾಣಿತ ಬೆಂಕಿ ಮತ್ತು ವಿಶೇಷ ಅಪಾಯಗಳ ವಿಮಾ ಪಾಲಿಸಿ

**II.** ಪ್ರಮಾಣಿತ ಸಮುದ್ರ ವಿಮಾ ಪಾಲಿಸಿ

**III.** ಪ್ರಮಾಣಿತ ಮೋಟಾರು ವಿಮಾ ಪಾಲಿಸಿ

**IV.** ಪ್ರಮಾಣಿತ ಆರೋಗ್ಯ ವಿಮಾ ಪಾಲಿಸಿ

---

## C. ದರೋಡೆ ವಿಮೆ

ಕಾರ್ಖಾನೆಗಳು, ಅಂಗಡಿಗಳು, ಕಛೇರಿಗಳು, ಸರಕುಗಳು, ಸಾಮಾನುಗಳು, ಪೀಠೋಪಕರಣ ಸ್ಥಿರವಸ್ತುಗಳು ಮತ್ತು ಕಳ್ಳತನ ಮಾಡಬಹುದಾದ ಬೀಗ ಹಾಕಿದ ಬೀರುವಿನಲ್ಲಿ ಇರಬಹುದಾದ ನಗದುಗಳನ್ನೊಳಗೊಂಡ ಉಗ್ರಾಣ ಮತ್ತು ಗೋದಾಮುಗಳಂತಹ ವ್ಯಾಪಾರದ ಆವರಣಗಳಿಗೆ ಪಾಲಿಸಿಯು ಮೀಸಲಾಗಿದೆ. ಕವರ್ ವ್ಯಾಪ್ತಿಯನ್ನು ಪಾಲಿಸಿಯಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಲಾಗಿರುತ್ತದೆ.

**ದರೋಡೆ ವಿಮೆಯಡಿಯಲ್ಲಿ ಕವರ್ ಮಾಡಲಾದ ಅಪಾಯಗಳು**

**a)** ಆವರಣದೊಳಗೆ ನಿಜವಾದ ಬಲವಂತದ ಮತ್ತು ಹಿಂಸಾತ್ಮಕ ಪ್ರವೇಶದ ನಂತರ ಅಥವಾ ಆವರಣದಿಂದ ನಿಜವಾದ, ಬಲವಂತದ ಮತ್ತು ಹಿಂಸಾತ್ಮಕ ನಿರ್ಗಮನದ ನಂತರ ಉಂಟಾದ ಆಸ್ತಿಯ ನಷ್ಟ ಅಥವಾ ಕಳ್ಳತನ/ದರೋಡೆ.

**b)** ದರೋಡೆಕೋರರಿಂದ ವಿಮೆ ಮಾಡಿದ ಆಸ್ತಿ ಅಥವಾ ಆವರಣಕ್ಕುಂಟಾದ ಹಾನಿ. ವಿಮೆ ಮಾಡಿದ ಆಸ್ತಿಯು ವಿಮೆ ಮಾಡಿದ ಆವರಣದಿಂದ ಕಳೆದುಹೋದಾಗ ಮಾತ್ರ ಕವರ್ ಮಾಡಲಾಗುತ್ತದೆಯೇ ಹೊರತು ಬೇರೆ ಯಾವುದೇ ಆವರಣದಿಂದ ಕಳುವಾದಾಗ ಅಲ್ಲ.

**ನಗದು ಕವರ್:** ದರೋಡೆ ಕವರ್ ನ ಪ್ರಮುಖ ಭಾಗವೆಂದರೆ ನಗದು ಕವರ್ ಆಗಿದೆ. ದರೋಡೆ ನಿರೋಧಕ ಮತ್ತು ಅನುಮೋದಿತ ತಯಾರಿಕೆ ಮತ್ತು ವಿನ್ಯಾಸವನ್ನು ಹೊಂದಿರುವ ಸುರಕ್ಷಿತ ಬೀರುವಿನಲ್ಲಿ ಹಣವನ್ನು ಭದ್ರಪಡಿಸಿದಾಗ ಮಾತ್ರ ಈ ಕವರ್ ಕಾರ್ಯನಿರ್ವಹಿಸುತ್ತದೆ. ನಗದು ರಕ್ಷಣೆಯನ್ನು ನೀಡಲು ಅನ್ವಯವಾಗುವ ಸಾಮಾನ್ಯ ಷರತ್ತುಗಳನ್ನು ಈ ಕೆಳಗೆ ನೀಡಲಾಗಿದೆ:

**a)** ಕೀಲಿಕೈಯನ್ನು ಹಿಂಸೆ ಅಥವಾ ಹಿಂಸೆಯ ಬೆದರಿಕೆಗಳಿಂದ ಅಥವಾ ಬಲದ ವಿಧಾನಗಳ ಮೂಲಕ ಪಡೆದಲ್ಲಿ ಮಾತ್ರ ಬೀರುವನ್ನು ತೆರೆಯಲು ಮೂಲ ಕೀಲಿಯನ್ನು ಬಳಸಿ ಸೇಫ್‌ನಿಂದ ಕಳುವಾದ ನಗದನ್ನು ಕವರ್ ಮಾಡಲಾಗುತ್ತದೆ. ಇದನ್ನು ಸಾಮಾನ್ಯವಾಗಿ "ಕೀಲಿಕೈ ಷರತ್ತು" ಎಂದು ಕರೆಯಲಾಗುತ್ತದೆ.

**b)** ಸುರಕ್ಷಿತ ಬೀರುವಿನಲ್ಲಿಯ ನಗದು ಮೊತ್ತದ ಸಂಪೂರ್ಣ ಪಟ್ಟಿಯನ್ನು ಬೀರು ಸ್ಥಳದವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಸುರಕ್ಷಿತವಾಗಿ ಇರಿಸಲಾಗುತ್ತದೆ. ವಿಮಾಗಾರರ ಹೊಣೆಗಾರಿಕೆಯು ಅಂತಹ ದಾಖಲೆಗಳಿಂದ ನಿಜವಾಗಿ ತೋರಿಸಲ್ಪಟ್ಟ ಮೊತ್ತಕ್ಕೆ ಸೀಮಿತವಾಗಿರುತ್ತದೆ.

### 1. ಮೊದಲ ನಷ್ಟ ವಿಮೆ

ಹೆಚ್ಚಿನ ಪ್ರಮಾಣದಲ್ಲಿ ಕಡಿಮೆ ಮೌಲ್ಯವನ್ನು ಹೊಂದಿರುವ ಸಂದರ್ಭಗಳಲ್ಲಿ, (ಬೇಲ್ ಗಳಲ್ಲಿ ಹತ್ತಿ, ಧಾನ್ಯ, ಸಕ್ಕರೆ ಇತ್ಯಾದಿ) ಒಂದೇ ಸಂದರ್ಭದಲ್ಲಿ ಸಂಪೂರ್ಣ ಸ್ಟಾಕ್ ಅನ್ನು ಕಳೆದುಕೊಳ್ಳುವ ಅಪಾಯವನ್ನು ವಿರಳ(ರಿಮೋಟ್)ವೆಂದು ಪರಿಗಣಿಸಲಾಗುತ್ತದೆ. ದರೋಡೆ ಮಾಡಬಹುದಾದ ಮೌಲ್ಯವನ್ನು ಸಂಭವನೀಯ ಗರಿಷ್ಠ ನಷ್ಟ (ಪಿಎಮ್ಎಲ್)ವೆಂದು ಖಚಿತಪಡಿಸಲಾಗುತ್ತದೆ ಮತ್ತು ಈ ಗರಿಷ್ಠ ಸಂಭವನೀಯ ನಷ್ಟಕ್ಕೆ ಪೂರ್ಣ ಕಂತನ್ನು ವಿಧಿಸಲಾಗುತ್ತದೆ ಮತ್ತು ಪಿಎಮ್ಎಲ್ ಸಂಪೂರ್ಣ ಸರಕಿನ

ಮೇಲೆ ಫ್ಲೋಟ್ ಆಗುವಾಗ ಉಳಿದ ಮೊತ್ತದ ಸರಕಿನಲ್ಲಿ ಪೂರ್ಣ ಕಂತಿನ ನಿರ್ದಿಷ್ಟ ಶೇಕಡಾವನ್ನು ವಿಧಿಸಲಾಗುತ್ತದೆ. ಎರಡನೇ ಕಳ್ಳತನವು ತಕ್ಷಣವೇ ಆಗದಿರಬಹುದು ಅಥವಾ ವಿಮೆದಾರರು ಅದರ ಮರುಕಳಿಸುವಿಕೆಯನ್ನು ತಡೆಯಲು ಹೆಚ್ಚುವರಿ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದು ಊಹಿಸಲಾಗಿದೆ.

2. **ಬೆಂಕಿ ವಿಮೆಯಂತೆಯೇ ಸರಕುಗಳಿಗೆ ಸಂಬಂಧಿಸಿದಂತೆ ಸಹ ಘೋಷಣೆ ಕವರ್ ಮತ್ತು ಫ್ಲೋಟರ್ ಕವರ್ ಸಾಧ್ಯವಿದೆ.**

3. **ಹೊರತುಗಳು**

ನೌಕರರು, ಕುಟುಂಬದ ಸದಸ್ಯರು ಅಥವಾ ಆವರಣದಲ್ಲಿ ಕಾನೂನುಬದ್ಧವಾಗಿ ಇರುವ ಇತರ ವ್ಯಕ್ತಿಗಳಿಂದಾದ ಕಳ್ಳತನವನ್ನು ಅಥವಾ ಅಪಹಾರ ಅಥವಾ ಸಾಮಾನ್ಯ ಕಳ್ಳತನವನ್ನು ಪಾಲಿಸಿಯು ಕವರ್ ಮಾಡುವುದಿಲ್ಲ. ಇದು ಬೆಂಕಿ ಅಥವಾ ಪ್ಲೇಟ್ ಗ್ಲಾಸ್ ಪಾಲಿಸಿಯಿಂದ ಆವರಿಸಲ್ಪಟ್ಟ ನಷ್ಟಗಳನ್ನು ಸಹ ಹೊರತುಪಡಿಸುತ್ತದೆ.

4. **ವಿಸ್ತರಣೆಗಳು**

ಹೆಚ್ಚುವರಿ ಕಂತಿನಲ್ಲಿ ಗಲಭೆ, ಮುಷ್ಕರಗಳು ಮತ್ತು ಭಯೋತ್ಪಾದನೆಯ ಅಪಾಯಗಳನ್ನು ಕವರ್ ಮಾಡಲು ಪಾಲಿಸಿಯನ್ನು ವಿಸ್ತರಿಸಬಹುದು.

5. **ಕಂತು**

ದರೋಡೆ ಪಾಲಿಸಿಯ ಕಂತು ದರಗಳು ವಿಮೆ ಮಾಡಿದ ಆಸ್ತಿಯ ಸ್ವರೂಪ, ವಿಮೆದಾರನ ನೈತಿಕ ಅಪಾಯ, ಆವರಣದ ನಿರ್ಮಾಣ ಮತ್ತು ಸ್ಥಳ, ಸುರಕ್ಷತಾ ಕ್ರಮಗಳು (ಉದಾ. ಕಾವಲುಗಾರರು, ಕಳ್ಳರ ಅಲಾರ್ಮ್), ಹಿಂದಿನ ಕ್ಲೇಮ್ ಗಳ ಅನುಭವ ಇತ್ಯಾದಿಗಳನ್ನು ಅವಲಂಬಿಸಿರುತ್ತದೆ.

ಹೆಚ್ಚಿನ ಮೌಲ್ಯಗಳನ್ನು ಒಳಗೊಂಡಿರುವಲ್ಲಿ ಪ್ರಸ್ತಾವನೆ ನಮೂನೆಯಲ್ಲಿ ನೀಡಲಾದ ವಿವರಗಳ ಜೊತೆಗೆ, ವಿಮಾಗಾರರಿಂದ ಸ್ವೀಕಾರ ಪೂರ್ವ ತಪಾಸಣೆಯನ್ನು ಮಾಡಲಾಗುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 3**

ದರೋಡೆ ಪಾಲಿಸಿಯ ಕಂತು _____________ ಅನ್ನು ಅವಲಂಬಿಸಿರುತ್ತದೆ.

I. ವಿಮೆ ಮಾಡಿದ ಆಸ್ತಿಯ ಸ್ವರೂಪ

II. ಸ್ವತಃ ವಿಮಾದಾರನ ನೈತಿಕ ಅಪಾಯ

III. ಆವರಣದ ನಿರ್ಮಾಣ ಮತ್ತು ಸ್ಥಳ

IV. ಮೇಲಿನ ಎಲ್ಲವೂ

## D. ಹಣದ ವಿಮೆ

ನಗದು ಹಣದ ನಿರ್ವಹಣೆಯು ಯಾವುದೇ ವ್ಯವಹಾರದ ಅವಿಭಾಜ್ಯ ಅಂಗವಾಗಿದೆ. ಹಣದ ವಿಮೆಯ ಪಾಲಿಸಿಯು ಬ್ಯಾಂಕುಗಳು ಮತ್ತು ಕೈಗಾರಿಕಾ ವ್ಯಾಪಾರ ಸಂಸ್ಥೆಗಳನ್ನು ಹಣದ ನಷ್ಟದಿಂದ ರಕ್ಷಿಸುವ ಉದ್ದೇಶವನ್ನು ಹೊಂದಿದೆ. ಆವರಣದಲ್ಲಿ ಹಾಗೂ ಹೊರಗಡೆ ಹಣ ಅಪಾಯದಲ್ಲಿರುತ್ತದೆ. ಹಿಂಪಡೆಯುವಾಗ, ಠೇವಣಿ ಇಡುವಾಗ, ಪಾವತಿ ಮಾಡುವಾಗ ಅಥವಾ ಸಂಗ್ರಹಣೆ ಮಾಡುವಾಗ ಅದು ಕಾನೂನುಬಾಹಿರವಾಗಿ ಕಸಿದುಕೊಂಡು ಹೋಗಲ್ಪಡಬಹುದು.

### 1. ಹಣದ ವಿಮೆಯ ಕವರೇಜ್

ನಗದು, ಚೆಕ್ ಗಳು/ ಪೋಸ್ಟಲ್ ಆರ್ಡರ್ ಗಳು/ ಪೋಸ್ಟಲ್ ಸ್ಟ್ಯಾಂಪ್ ಗಳನ್ನು ಬಳಸುತ್ತಿರುವಾಗ ಸಂಭವಿಸಬಹುದಾದ ನಷ್ಟವನ್ನು ಸರಿದೂಗಿಸಲು ಹಣದ ವಿಮಾ ಪಾಲಿಸಿಯನ್ನು ವಿನ್ಯಾಸಗೊಳಿಸಲಾಗಿದೆ. ಸಾಮಾನ್ಯವಾಗಿ ಎರಡು ವಿಭಾಗಗಳಡಿಯಲ್ಲಿ ಈ ಪಾಲಿಸಿಯು ರಕ್ಷಣೆಯನ್ನು ಒದಗಿಸುತ್ತದೆ

a) **ಸಾಗಣೆ ವಿಭಾಗ:** ಇದು ದರೋಡೆ ಅಥವಾ ಕಳ್ಳತನ ಅಥವಾ ಇತರ ಆಕಸ್ಮಿಕ ಕಾರಣದಿಂದ ಅಥವಾ ವಿಮಾದಾರರು ಅಥವಾ ಅವರ ಅಧಿಕೃತ ಉದ್ಯೋಗಿಗಳಿಂದ ಹೊರಗೆ ಸಾಗಿಸುವಾಗ ಉಂಟಾಗುವ ಹಣದ ನಷ್ಟವನ್ನು ಕವರ್ ಮಾಡುತ್ತದೆ.

ಸಾಗಣೆ ವಿಭಾಗವು ಎರಡು ಮೊತ್ತಗಳನ್ನು ನಿರ್ದಿಷ್ಟಪಡಿಸುತ್ತದೆ:

i. **ಪ್ರತಿ ಸಾಗಣೆಯ ಮಿತಿ**: ಇದು ಪ್ರತಿ ನಷ್ಟಕ್ಕೆ ಸಂಬಂಧಿಸಿದಂತೆ ವಿಮಾಗಾರರು ಪಾವತಿಸಬೇಕಾದ ಗರಿಷ್ಠ ಮೊತ್ತವಾಗಿದೆ.

ii. **ಸಂಪೂರ್ಣ ಪಾಲಿಸಿಯ ಅವಧಿಯಲ್ಲಿ ಸಾಗಣೆಮಾಡಬಹುದಾದ ಅಂದಾಜು ಮೊತ್ತ:** ಇದು ಕಂತು ಮೊತ್ತವನ್ನು ಪಡೆಯಲು ಅನ್ವಯಿಸಬೇಕಾದ ಕಂತು ದರವನ್ನು ನಿರ್ಧರಿಸಲು ಪರಿಗಣಿಸಬೇಕಾದ ಮೊತ್ತವನ್ನು ಪ್ರತಿನಿಧಿಸುತ್ತದೆ.

ಬೆಂಕಿ ವಿಮೆಯಲ್ಲಿಯ ಅಭ್ಯಾಸದಂತೆಯೇ **"ಘೋಷಣೆಯ ಆಧಾರದ ಮೇಲೆ"** ಪಾಲಿಸಿಗಳನ್ನು ನೀಡಬಹುದು. ಹೀಗೆ ವಿಮಾಗಾರರು ಸಾಗಣೆಯಲ್ಲಿಯ ಅಂದಾಜು ಮೊತ್ತದ ಮೇಲೆ ತಾತ್ಕಾಲಿಕ ಕಂತನ್ನು ವಿಧಿಸುತ್ತಾರೆ ಮತ್ತು ವಿಮಾದಾರರು ಘೋಷಿಸಿದಂತೆ ಪಾಲಿಸಿ ಅವಧಿಯಲ್ಲಿಯ ಸಾಗಣೆಯಲ್ಲಿಯ ನಿಜವಾದ ಮೊತ್ತವನ್ನಾಧರಿಸಿ ಪಾಲಿಸಿಯ ಅವಧಿ ಮುಗಿಯುವ ಸಮಯದಲ್ಲಿ ಈ ಕಂತನ್ನು ಸರಿಹೊಂದಿಸುತ್ತಾರೆ.

b) **ಆವರಣದ ವಿಭಾಗ:** ಈ ವಿಭಾಗವು ದರೋಡೆ, ಗೃಹಭಂಗ, ಅಪಹಾರ ಇತ್ಯಾದಿಗಳಿಂದಾಗಿ ಆವರಣದಲ್ಲಿ / ಕೀಲಿಹಾಕಿ ಸುರಕ್ಷಿತವಾಗಿಟ್ಟ ಬೀರುವಿನಿಂದಾದ ನಗದು ನಷ್ಟವನ್ನು ಕವರ್ ಮಾಡುತ್ತದೆ. ಪಾಲಿಸಿಯ

ಇತರ ವೈಶಿಷ್ಟ್ಯಗಳು ಸಾಮಾನ್ಯವಾಗಿ ಕಲಿಕೆಯ ಫಲಿತಾಂಶ ಸಿ ಅಡಿಯಲ್ಲಿ ಚರ್ಚಿಸಲಾದ ದರೋಡೆ ವಿಮೆಯಂತೆಯೇ (ವ್ಯಾಪಾರ ಆವರಣದ) ಇರುತ್ತವೆ.

**2. ಮಹತ್ವದ ಹೊರತುಗಳು**

ಇವಗಳಲ್ಲಿ ಈ ಕೆಳಗಿನವುಗಳು ಸೇರಿವೆ:

**a)** ದೋಷ ಅಥವಾ ಲೋಪದಿಂದಾದ ಕೊರತೆ,

**b)** ಅಧಿಕೃತ ವ್ಯಕ್ತಿಯನ್ನು ಹೊರತುಪಡಿಸಿ ಇತರರಿಗೆ ವಹಿಸಿಕೊಡಲಾದ ಹಣದ ನಷ್ಟ ಮತ್ತು

**c)** ಗಲಭೆ, ಮುಷ್ಕರ ಮತ್ತು ಭಯೋತ್ಪಾದನೆ

**3. ವಿಸ್ತರಣೆಗಳು**

ಹೆಚ್ಚುವರಿ ಕಂತು ಪಾವತಿ ಮಾಡಿ ಪಾಲಿಸಿಯ ಕವರ್ ಅನ್ನು ಈ ಕೆಳಗಿನವುಗಳಿಗೆ ವಿಸ್ತರಿಸಬಹುದು:

**a)** ನಗದು ಸಾಗಿಸುವ ವ್ಯಕ್ತಿಗಳ ಅಪ್ರಾಮಾಣಿಕತೆ,

**b)** ಗಲಭೆ, ಮುಷ್ಕರ ಮತ್ತು ಭಯೋತ್ಪಾದನೆ ಅಪಾಯಗಳು

**c)** ವಿತರಣಾ ಅಪಾಯ, ಇದು ನೌಕರರಿಗೆ ವೇತನ ಪಾವತಿಯ ಸಮಯದಲ್ಲಿ ಅನುಭವಿಸಿದ ನಷ್ಟವಾಗಿದೆ

**4. ಕಂತು**

ಕಂತಿನ ದರವನ್ನು ವಿಮಾದಾರರ ಕಂಪನಿಯ ಯಾವುದೇ ಒಂದು ಸಮಯದಲ್ಲಿ ನಗದು ಸಾಗಿಸುವ ಹೊಣೆಗಾರಿಕೆ, ಸಾಗಣೆಯ ವಿಧಾನ, ಒಳಗೊಂಡಿರುವ ದೂರ, ತೆಗೆದುಕೊಂಡ ಸುರಕ್ಷತಾ ಕ್ರಮಗಳು ಇತ್ಯಾದಿಗಳನ್ನು ಅವಲಂಬಿಸಿ ನಿಗದಿಪಡಿಸಲಾಗಿದೆ. ಪಾಲಿಸಿಯ ಅವಧಿ ಮುಗಿಯುವ **30** ದಿನಗಳೊಳಗೆ ಮಾಡಿದ ಘೋಷಣೆಯ ಆಧಾರದ ಮೇಲೆ ವರ್ಷವಿಡೀ ಸಾಗಿಸುವ ನಿಜವಾದ ನಗದಿನ ಪ್ರಕಾರ ಕಂತನ್ನು ಸರಿಹೊಂದಿಸಬಹುದು.

| **ನಿಮ್ಮನ್ನು ಪರೀಕ್ಷಿಸಿಕೊಳ್ಳಿ 4** |
|---|

ಈ ಕೆಳಗಿನವುಗಳಲ್ಲಿ ಯಾವುದು ಹಣದ ವಿಮಾ ಪಾಲಿಸಿಯಡಿಯಲ್ಲಿ ಕವರ್ ಮಾಡಲ್ಪಟ್ಟಿದೆ?

**I.** ದೋಷ ಅಥವಾ ಲೋಪದಿಂದಾದ ಕೊರತೆ

**II.** ದರೋಡೆಯಿಂದಾಗಿ ಒಬ್ಬರ ಆವರಣದಿಂದ ನಗದು ನಷ್ಟ

**III.** ಅಧಿಕೃತ ವ್ಯಕ್ತಿಯನ್ನು ಹೊರತುಪಡಿಸಿ ಇತರರಿಗೆ ವಹಿಸಿಕೊಡಲಾದ ಹಣದ ನಷ್ಟ

**IV.** ಗಲಭೆ, ಮುಷ್ಕರ ಮತ್ತು ಭಯೋತ್ಪಾದನೆ

## E. ನಿಷ್ಠೆ ಖಾತರಿ(ಫಿಡೆಲಿಟಿ ಗ್ಯಾರಂಟಿ) ವಿಮೆ

ಕಂಪನಿಗಳು ತಮ್ಮ ಉದ್ಯೋಗಿಗಳ ವಂಚನೆ ಅಥವಾ ಅಪ್ರಾಮಾಣಿಕತೆಯಂತಹ ವೈಟ್ ಕಾಲರ್ ಅಪರಾಧಗಳೆಂದು ಕರೆಯಲ್ಪಡುವ ಕಾರಣದಿಂದಾಗಿ ಆರ್ಥಿಕ ನಷ್ಟವನ್ನು ಅನುಭವಿಸುತ್ತವೆ. ನಿಷ್ಠೆ ಖಾತರಿ(ಫಿಡೆಲಿಟಿ ಗ್ಯಾರಂಟಿ) ವಿಮೆಯು ಉದ್ಯೋಗದಾತರಿಗೆ ತಮ್ಮ ಉದ್ಯೋಗಿಗಳ ವಂಚನೆ ಅಥವಾ ಅಪ್ರಾಮಾಣಿಕತೆಯಿಂದಾಗಿ ಸುಳ್ಳುಪತ್ರ/ನಕಲಿ ಸಹಿ, ಹಣ ನುಂಗಿಹಾಕುವಿಕೆ, ಲೂಟಿ, ದುರುಪಯೋಗ ಮತ್ತು ಉಪೇಕ್ಷೆಯಿಂದಾಗಿ ಅನುಭವಿಸಿದ ಆರ್ಥಿಕ ನಷ್ಟದ ವಿರುದ್ಧ ಪರಿಹಾರವನ್ನು ನೀಡುತ್ತದೆ.

### 1. ನಿಷ್ಠೆ ಖಾತರಿ(ಫಿಡೆಲಿಟಿ ಗ್ಯಾರಂಟಿ) ವಿಮೆಯಡಿಯಲ್ಲಿ ಕವರೇಜ್

ನೇರ ಹಣದ ನಷ್ಟದ ವಿರುದ್ಧ ಕವರ್ ನೀಡಲಾಗುತ್ತದೆ ಮತ್ತು ಪರಿಣಾಮದ ನಷ್ಟಗಳನ್ನು ಒಳಗೊಂಡಿರುವುದಿಲ್ಲ.

a) ನಷ್ಟವು ಹಣ, ಸೆಕ್ಯೂರಿಟಿ(ಷೇರು, ಡಿಬೆಂಚರ್ ಇತ್ಯಾದಿ) ಅಥವಾ ಸರಕುಗಳಿಗೆ ಸಂಬಂಧಿಸಿದಂತೆ ಇರಬೇಕು

b) ನಿರ್ದಿಷ್ಟಪಡಿಸಿದ ಕರ್ತವ್ಯಗಳ ಅವಧಿಯಲ್ಲಿ ನಂಬಿಕೆ ದ್ರೋಹವನ್ನು ಮಾಡಿರಬೇಕು;

c) ಪಾಲಿಸಿಯ ಮುಕ್ತಾಯದ 12 ತಿಂಗಳೊಳಗೆ ಅಥವಾ ಮರಣ ನಿವೃತ್ತಿ ರಾಜೀನಾಮೆ ಅಥವಾ ಉದ್ಯೋಗಿಯ ವಜಾಗಳಲ್ಲಿ ಯಾವುದು ಮೊದಲು ಸಂಭವಿಸುವುದೋ ಆ ದಿನಾಂಕದ ಒಳಗೆ ನಷ್ಟವನ್ನು ಕಂಡುಹಿಡಿಯಲಾಗಿರಬೇಕು

d) ಮರು ನೇಮಕಗೊಂಡ ಅಪ್ರಾಮಾಣಿಕ ಉದ್ಯೋಗಿಗೆ ಸಂಬಂಧಿಸಿದಂತೆ ಯಾವುದೇ ಕವರ್ ಅನ್ನು ಒದಗಿಸಲಾಗುವುದಿಲ್ಲ

### 2. ನಿಷ್ಠೆ ಖಾತರಿ(ಫಿಡೆಲಿಟಿ ಗ್ಯಾರಂಟಿ) ಪಾಲಿಸಿಗಳ ವಿಧಗಳು

ಈ ಕೆಳಗೆ ಚರ್ಚಿಸಿದಂತೆ ನಿಷ್ಠೆ ಖಾತರಿ(ಫಿಡೆಲಿಟಿ ಗ್ಯಾರಂಟಿ) ಪಾಲಿಸಿಗಳ ಅನೇಕ ವಿಧಗಳಿವೆ:

a) **ವೈಯಕ್ತಿಕ ಪಾಲಿಸಿ:** ಒಬ್ಬ ವ್ಯಕ್ತಿಗೆ ಮಾತ್ರ ಖಾತರಿ ನೀಡಬೇಕಾಗಿರುವಲ್ಲಿ ಈ ರೀತಿಯ ಪಾಲಿಸಿಯನ್ನು ಬಳಸಲಾಗುತ್ತದೆ. ಉದ್ಯೋಗಿಯ ಹೆಸರು, ಹುದ್ದೆ ಮತ್ತು ಖಾತರಿ ಮೊತ್ತವನ್ನು ನಿರ್ದಿಷ್ಟಪಡಿಸಬೇಕು.

b) **ಸಾಮೂಹಿಕ ಪಾಲಿಸಿ:** ಈ ಪಾಲಿಸಿಯು ಪ್ರತಿ ಉದ್ಯೋಗಿಯ ಕರ್ತವ್ಯಗಳ ಟಿಪ್ಪಣಿ ಮತ್ತು ಪ್ರತ್ಯೇಕ ವಿಮಾ ಮೊತ್ತಗಳನ್ನೊಳಗೊಂಡಂತೆ ಖಾತರಿ ಅನ್ವಯವಾಗುವ ಉದ್ಯೋಗಿಗಳ ಹೆಸರನ್ನು ಪಟ್ಟಿ ಮಾಡುವ ವಿವರಪಟ್ಟಿಯನ್ನು ಒಳಗೊಂಡಿರುತ್ತದೆ.

c) **ಫ್ಲೋಟಿಂಗ್ ಪಾಲಿಸಿ ಅಥವಾ ಫ್ಲೋಟರ್:** ಈ ಪಾಲಿಸಿಯಲ್ಲಿ, ಕವರ್ ಮಾಡಬೇಕಾದ ವ್ಯಕ್ತಿಗಳ ಹೆಸರುಗಳು ಮತ್ತು ಕರ್ತವ್ಯಗಳನ್ನು ವೇಳಾಪಟ್ಟಿಯಲ್ಲಿ ಸೇರಿಸಲಾಗುತ್ತದೆ, ಆದರೆ ವೈಯಕ್ತಿಕ ಮೊತ್ತದ ಖಾತರಿಯ ಬದಲಿಗೆ, ಇಡೀ ಗುಂಪಿನ ಮೇಲೆ ನಿರ್ದಿಷ್ಟ ಪ್ರಮಾಣದ ಖಾತರಿಯನ್ನು "ಫ್ಲೋಟ್" ಮಾಡಲಾಗುತ್ತದೆ. ಹೆಚ್ಚುವರಿ ಕಂತು ಪಾವತಿಸುವ ಮೂಲಕ ಮೂಲ ವಿಮಾಮೊತ್ತವನ್ನು

ಮರುಸ್ಥಾಪಿಸದಿದ್ದರೆ, ಯಾವುದೇ ಒಬ್ಬ ಉದ್ಯೋಗಿಗೆ ಸಂಬಂಧಿಸಿದಂತೆ ಕ್ಲೇಮ್ ಘಟನೆ ಫ್ಲೋಟೆಡ್ ಗ್ಯಾರಂಟಿಯನ್ನು ಕಡಿಮೆ ಮಾಡುತ್ತದೆ.

d) **ಸ್ಥಾನಗಳ ಪಾಲಿಸಿ:** ಇದು ವಿವರಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಮೊತ್ತಕ್ಕೆ ಖಾತರಿ ನೀಡಬೇಕಾದ ಹೆಸರುಗಳನ್ನು ನಮೂದಿಸದೇ "**ಸ್ಥಾನಗಳ**" (ಸೆ, ಕ್ಯಾಷಿಯರ್, ಖಾತೆ ಅಧಿಕಾರಿ ಇತ್ಯಾದಿ)ನ್ನು ನಮೂದಿಸುವ ಕೇವಲ ಒಂದು ವ್ಯತ್ಯಾಸದೊಂದಿಗೆ ಒಂದು ಸಾಮೂಹಿಕ ಪಾಲಿಸಿಯನ್ನು ಹೋಲುತ್ತದೆ.

e) **ಬ್ಲಾಂಕೆಟ್ ಪಾಲಿಸಿ:** ಈ ಪಾಲಿಸಿಯು ಹೆಸರುಗಳು ಅಥವಾ ಸ್ಥಾನಗಳನ್ನು ತೋರಿಸದೆ ಸಂಪೂರ್ಣ ಸಿಬ್ಬಂದಿಯನ್ನು ಒಳಗೊಂಡಿರುತ್ತದೆ. ವಿಮಾಗಾರರಿಂದ ಉದ್ಯೋಗಿಗಳ ಬಗ್ಗೆ ಯಾವುದೇ ವಿಚಾರಣೆಯನ್ನು ಮಾಡಲಾಗುವುದಿಲ್ಲ. ಇಂತಹ ಪಾಲಿಸಿಗಳು ದೊಡ್ಡ ಸಂಖ್ಯೆಯ ಸಿಬ್ಬಂದಿಯನ್ನು ಹೊಂದಿರುವ ಉದ್ಯೋಗದಾತರಿಗೆ ಮಾತ್ರ ಸೂಕ್ತವಾಗಿದೆ ಮತ್ತು ಸಂಸ್ಥೆಯು ಉದ್ಯೋಗಿಗಳ ಪೂರ್ವೇತಿಹಾಸದ ಬಗ್ಗೆ ಸಾಕಷ್ಟು ವಿಚಾರಣೆಗಳನ್ನು ಮಾಡುತ್ತದೆ. ಉದ್ಯೋಗದಾತರು ಪಡೆಯುವ ಉಲ್ಲೇಖಗಳು ಕ್ಲೇಮ್ ನ ಸಂದರ್ಭದಲ್ಲಿ ವಿಮಾಗಾರರಿಗೆ ಲಭ್ಯವಿರಬೇಕು. ಈ ಪಾಲಿಸಿಯನ್ನು ಒಳ್ಳೆಯ ಖ್ಯಾತಿಯ ದೊಡ್ಡ ಸಂಸ್ಥೆಗಳಿಗೆ ಮಾತ್ರ ನೀಡಲಾಗುತ್ತದೆ.

**3. ಕಂತು**

ಕಂತಿನ ದರವು ವ್ಯಾಪಾರದ ಉದ್ಯೋಗದ ಪ್ರಕಾರ, ಉದ್ಯೋಗಿಯ ಸ್ಥಿತಿ, ತಪಾಸಣೆ ಮತ್ತು ಮೇಲ್ವಿಚಾರಣೆಯ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ *5***

ನಿಷ್ಠೆ ಖಾತರಿ(ಫಿಡೆಲಿಟಿ ಗ್ಯಾರಂಟಿ) ವಿಮೆಯು _______________ ನಷ್ಟವನ್ನು ಸರಿದೂಗಿಸುತ್ತದೆ.

I. ತಮ್ಮ ಉದ್ಯೋಗಿಗಳ ವಂಚನೆ ಅಥವಾ ಅಪ್ರಾಮಾಣಿಕತೆಯಿಂದ ಅವರು ಅನುಭವಿಸಿದ ಆರ್ಥಿಕ ನಷ್ಟದ ವಿರುದ್ಧ ಉದ್ಯೋಗದಾತರಿಗಾದ ನಷ್ಟ

II. ತಮ್ಮ ಉದ್ಯೋಗದಾತರಿಂದಾದ ವಂಚನೆ ಅಥವಾ ಅಪ್ರಾಮಾಣಿಕತೆಯಿಂದಾಗಿ ಅನುಭವಿಸಿದ ಆರ್ಥಿಕ ನಷ್ಟದ ವಿರುದ್ಧ ಉದ್ಯೋಗಿಗಳಿಗಾದ ನಷ್ಟ

III. ಸಾಂಘಿಕ(ಕಾರ್ಪೊರೇಟ್) ವಂಚನೆ ಅಥವಾ ಅಪ್ರಾಮಾಣಿಕತೆಯಿಂದ ಅನುಭವಿಸಿದ ಆರ್ಥಿಕ ನಷ್ಟದ ವಿರುದ್ಧ ಮೂರನೇ ವ್ಯಕ್ತಿಗಳಿಗಾದ ನಷ್ಟ

IV. ಕಂಪನಿಯ ನಿರ್ವಹಣೆಯ ವಂಚನೆ ಅಥವಾ ಅಪ್ರಾಮಾಣಿಕತೆಯಿಂದಾಗಿ ಅವರು ಅನುಭವಿಸಿದ ಆರ್ಥಿಕ ನಷ್ಟದ ವಿರುದ್ಧ ಷೇರುದಾರರಿಗೆ

## F. ಬ್ಯಾಂಕರ್ ರ ನಷ್ಟಪರಿಹಾರ(ಬ್ಯಾಂಕರ್ಸ್ ಇಂಡೆಮ್ನಿಟಿ)ದ ವಿಮೆ

ಈ ಸಮಗ್ರ ಕವರ್ ಅನ್ನು ಬ್ಯಾಂಕ್ ಗಳು, ಎನ್ ಬಿಎಫ್ ಸಿಗಳು ಮತ್ತು ಹಣವನ್ನು ಒಳಗೊಂಡ ಕಾರ್ಯಾಚರಣೆಗಳೊಂದಿಗೆ ವ್ಯವಹರಿಸುವ ಇತರ ಸಂಸ್ಥೆಗಳಿಗೆ ಹಣ ಮತ್ತು ಭದ್ರತೆಗಳಿಗೆ ಸಂಬಂಧಿಸಿದಂತೆ ಅವರು ಎದುರಿಸುತ್ತಿರುವ ವಿಶೇಷ ಅಪಾಯಗಳನ್ನು ಪರಿಗಣಿಸಿ ರಚಿಸಲಾಗಿದೆ.

### 1. ಬ್ಯಾಂಕರ್ ರ ನಷ್ಟಪರಿಹಾರ(ಬ್ಯಾಂಕರ್ಸ್ ಇಂಡೆಮ್ನಿಟಿ)ದ ವಿಮೆಯಡಿಯಲ್ಲಿ ಕವರೇಜ್

ಬ್ಯಾಂಕರ್ ನ ಅಗತ್ಯತೆಯ ಆಧಾರದ ಮೇಲೆ ಈ ಪಾಲಿಸಿಯಲ್ಲಿ ವಿಭಿನ್ನ ವ್ಯತ್ಯಾಸಗಳಿವೆ.

- **a)** ಬೆಂಕಿ, ಕಳ್ಳತನ, ಗಲಭೆ ಮತ್ತು ಮುಷ್ಕರದಿಂದಾಗಿ ಹಣದ ನೋಟು(ಸೆಕ್ಯೂರಿಟಿ)ಗಳು ಕಟ್ಟಡದೊಳಗೆ ಕಳೆದುಹೋಗಿವೆ ಅಥವಾ ಹಾನಿಗೊಳಗಾಗುತ್ತವೆ.
- **b)** ಅಧಿಕೃತ ಉದ್ಯೋಗಿಗಳ ಕೈಯಲ್ಲಿ ಆಸ್ತಿಯನ್ನು ಆವರಣದ ಹೊರಗೆ ಸಾಗಿಸಿದಾಗ ನೌಕರರ ನಿರ್ಲಕ್ಷ್ಯ ಸೇರಿದಂತೆ ಯಾವುದೇ ಕಾರಣದಿಂದ ನಷ್ಟವನ್ನು ಅನುಭವಿಸಲಾಗುತ್ತದೆ.
- **c)** ಚೆಕ್‌ಗಳು, ಡ್ರಾಫ್ಟ್‌ಗಳು, ಸ್ಥಿರ ಠೇವಣಿ ರಸೀದಿಗಳು ಇತ್ಯಾದಿಗಳ ನಕಲಿ ಅಥವಾ ಬದಲಾವಣೆ
- **d)** ಹಣ/ನೋಟು(ಸೆಕ್ಯುರಿಟಿ)ಗಳು ಅಥವಾ ಅಡವಿಟ್ಟ ಸರಕುಗಳಿಗೆ ಸಂಬಂಧಿಸಿದಂತೆ ಉದ್ಯೋಗಿಗಳ ಅಪ್ರಾಮಾಣಿಕತೆ.
- **e)** ರಜಿಸ್ಟರ್ ಪೋಸ್ಟ್ ಪಾರ್ಸೆಲ್‌ಗಳ ಮೂಲಕ ರವಾನೆ.
- **f)** ಮೌಲ್ಯಮಾಪಕರ ಅಪ್ರಾಮಾಣಿಕತೆ.
- **g)** 'ಜನತಾ ಏಜೆಂಟ್ಸ್', 'ಛೋಟಿ ಬಚತ್ ಯೋಜನಾ ಏಜೆಂಟ್ಸ್' ನಂತಹ ಬ್ಯಾಂಕಿನ ಏಜೆಂಟರ ಕೈಯಲ್ಲಿ ಕಳೆದುಹೋದ ಹಣ.

ಕವರ್ ಅನ್ನು ಕಂಡುಹಿಡಿಯುವ(ಡಿಸ್ಕವರಿ) ಆಧಾರದ ಮೇಲೆ ನೀಡಲಾಗುತ್ತದೆ, ಅಂದರೆ ಪಾಲಿಸಿಯು ನಷ್ಟ ಸಂಭವಿಸಿದ ಅವಧಿಗೆ ಅಗತ್ಯವಾಗಿರದೇ ನಷ್ಟವನ್ನು ಪತ್ತೆಹಚ್ಚಿದ ಅವಧಿಗೆ ಪ್ರತಿಕ್ರಿಯಿಸುತ್ತದೆ. ಆದರೆ ನಷ್ಟವು ನಿಜವಾಗಿ ಸಂಭವಿಸಿದಾಗ ಕವರ್ ಅಸ್ತಿತ್ವದಲ್ಲಿರಬೇಕು..

ಸಾಂಪ್ರದಾಯಿಕವಾಗಿ ನಷ್ಟವು ಸಂಭವಿಸಿದಾಗ ಅದಕ್ಕಿಂತ ಹಿಂದಿನ ದಿನಾಂಕದಿಂದ ಕವರ್ ಜಾರಿಯಲ್ಲಿರುವುದಕ್ಕೆ ಒಳಪಟ್ಟು ಕಂಡುಹಿಡಿದ ದಿನಾಂಕದಿಂದ **2** ವರ್ಷಗಳ ಮೊದಲಿನ ಅವಧಿಯೊಳಗಿನ ನಷ್ಟವನ್ನು ಮಾತ್ರ ಪಾವತಿಸಲಾಗುವುದು.

### 2. ಪ್ರಮುಖ ಹೊರತುಗಳು

ವ್ಯಾಪಾರದ ನಷ್ಟಗಳು, ನಿರ್ಲಕ್ಷ್ಯ, ಸಾಫ್ಟ್ ವೇರ್ ಅಪರಾಧಗಳು ಮತ್ತು ಪಾಲುದಾರರು/ನಿರ್ದೇಶಕರ ಅಪ್ರಾಮಾಣಿಕತೆಗಳು ಪ್ರಮುಖ ಹೊರತುಗಳಾಗಿವೆ

**3. ವ್ಯಾಪ್ತಿ**

ಪಾಲಿಸಿಯು ಈ ಕೆಳಗೆ ಹೆಸರಿಸಲಾದ 7 ವಿಭಾಗಗಳನ್ನು ಒಳಗೊಂಡಿದೆ:

1. ಆವರಣದಲ್ಲಿ
2. ಸಾಗಣೆಯಲ್ಲಿ
3. ನಕಲಿ ಅಥವಾ ಬದಲಾವಣೆ
4. ಅಪ್ರಾಮಾಣಿಕತೆ
5. ಅಡಮಾನವಿಟ್ಟ ಸರಕುಗಳು
6. ರಜಿಸ್ಟರ್ಡ್ ಪೋಸ್ಟಲ್ ಸೇವೆ
7. ಮೌಲ್ಯಮಾಪಕರು
8. ಜನತಾ ಏಜೆಂಟರು

**4. ವಿಮಾಮೊತ್ತ**

ಮೊದಲ 5 ವಿಭಾಗಗಳ ಮೇಲೆ ಸಾಮಾನ್ಯವಾಗಿ ಫ್ಲೋಟ್ ಆಗುವ **ವಿಮಾ ಮೊತ್ತ**ವನ್ನು ಬ್ಯಾಂಕ್ ನಿಗದಿಪಡಿಸಬೇಕು. ಇದನ್ನು 'ಮೂಲ ವಿಮಾ ಮೊತ್ತ' ಎಂದು ಕರೆಯಲಾಗುತ್ತದೆ. ಮೂಲ ವಿಮಾ ಮೊತ್ತವು ಸಾಕಷ್ಟಿಲ್ಲದಿದ್ದರೆ ವಿಭಾಗ (1) ಮತ್ತು (2) ಕ್ಕೆ ಹೆಚ್ಚುವರಿ ವಿಮಾ ಮೊತ್ತವನ್ನು ಖರೀದಿಸಬಹುದು. ಹೆಚ್ಚುವರಿ ಕಂತು ಪಾವತಿಯ ಮೂಲಕ ವಿಮಾ ಮೊತ್ತದ ಒಂದು ಕಡ್ಡಾಯ ಮತ್ತು ಸ್ವಯಂಚಾಲಿತ ಮರುಸ್ಥಾಪನೆಯನ್ನು ಸಹ ಪಾಲಿಸಿ ಅನುಮತಿಸುತ್ತದೆ

**5. ಬೆಲೆ ನಿರ್ಧರಿಸುವಿಕೆ**

ಕಂತು ಲೆಕ್ಕಾಚಾರವು ಈ ಕೆಳಗಿನ ಅಂಶಗಳನ್ನು ಆಧರಿಸಿದೆ:

a) ಮೂಲ ವಿಮಾಮೊತ್ತ
b) ಹೆಚ್ಚುವರಿ ವಿಮಾಮೊತ್ತ
c) ಸಿಬ್ಬಂದಿಯ ಸಂಖ್ಯೆ
d) ಶಾಖೆಗಳ ಸಂಖ್ಯೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ *6***

ಈ ಕೆಳಗಿನವುಗಳಲ್ಲಿ ಯಾವುದನ್ನು ಬ್ಯಾಂಕರ್ ರ ಪರಿಹಾರ ವಿಮಾ ಪಾಲಿಸಿಯಡಿಯಲ್ಲಿ ಕವರ್ ಮಾಡಬಹುದು**??**

I. ಬೆಂಕಿಯಿಂದಾಗಿ ಆವರಣದೊಳಗೆ ಹಣದ ನೋಟುಗಳು ಕಳೆದುಹೋಗಿವೆ ಅಥವಾ ಹಾನಿಗೊಳಗಾಗುತ್ತವೆ

II. ಚೆಕ್ಕುಗಳ ನಕಲಿ ಸಹಿ ಅಥವಾ ಬದಲಾವಣೆ

III. ಹಣಕ್ಕೆ ಸಂಬಂಧಿಸಿದಂತೆ ಉದ್ಯೋಗಿಗಳ ಅಪ್ರಾಮಾಣಿಕತೆ

IV. ಮೇಲಿನ ಎಲ್ಲವೂ

---

## G. ಜ್ಯುವೆಲರ್ಸ್ ಬ್ಲಾಕ್ ಪಾಲಿಸಿ

ಇತ್ತೀಚಿನ ವರ್ಷಗಳಲ್ಲಿ, ಆಭರಣಗಳು, ವಿಶೇಷವಾಗಿ ವಜ್ರಗಳ ವಿಶ್ವ ವ್ಯಾಪಾರದಲ್ಲಿ ಭಾರತವು ಪ್ರಮುಖ ಕೇಂದ್ರವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಆಮದು ಮಾಡಿದ ಕಚ್ಚಾ ವಜ್ರಗಳನ್ನು ಕತ್ತರಿಸಿ, ಪಾಲಿಶ್ ಮಾಡಿ ರಫ್ತು ಮಾಡಲಾಗುತ್ತದೆ. ಆಭರಣ ಚಿನ್ನ ಮತ್ತು ಬೆಳ್ಳಿಯ ವಸ್ತುಗಳು, ವಜ್ರಗಳು ಮತ್ತು ಅಮೂಲ್ಯ ರತ್ನಗಳು, ಮಣಿಕಟ್ಟಿನ ಕೈಗಡಿಯಾರಗಳು ಇತ್ಯಾದಿಗಳಂತಹ ಹೆಚ್ಚಿನ ಮೌಲ್ಯದ ವಸ್ತುಗಳನ್ನು ಸಣ್ಣ ಪ್ರಮಾಣದಲ್ಲಿ ಮಾರಾಟ ಮಾಡುವುದನ್ನು ಒಳಗೊಂಡಿರುವ ಆಭರಣ ವ್ಯಾಪಾರಿಯ ಎಲ್ಲ ಅಪಾಯಗಳ ಬಗ್ಗೆ ಇದು ಕಾಳಜಿ ವಹಿಸುತ್ತದೆ. ವ್ಯಾಪಾರವು ಈ ದುಬಾರಿ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸುವುದು ಮತ್ತು ಅವುಗಳನ್ನು ವಿವಿಧ ಆವರಣಗಳು ನಡುವೆ ಸಾಗಿಸುವುದನ್ನು ಒಳಗೊಂಡಿರುತ್ತದೆ.

### 1. ಜ್ಯುವೆಲರ್ಸ್ ಬ್ಲಾಕ್ ಪಾಲಿಸಿಯ ಕವರೇಜ್

ಜ್ಯುವೆಲರ್ಸ್ ಬ್ಲಾಕ್ ಪಾಲಿಸಿಯು ಪ್ಯಾಕೇಜ್ ಪಾಲಿಸಿಯಾಗಿದ್ದು, ಇದನ್ನು ಸಾಂಪ್ರದಾಯಿಕವಾಗಿ 4 ವಿಭಾಗಗಳಾಗಿ ವಿಂಗಡಿಸಲಾಗಿದೆ. ವಿಭಾಗ 1 ರ ಅಡಿಯಲ್ಲಿ ಕವರೇಜ್ ಅನ್ನು ಸಾಮಾನ್ಯವಾಗಿ ಕಡ್ಡಾಯಗೊಳಿಸಲಾಗುತ್ತದೆ ಆದರೆ ವಿಮಾದಾರರು ಇತರ ವಿಭಾಗಗಳನ್ನು ಸಹ ತಮ್ಮ ಆಯ್ಕೆಯಲ್ಲಿ ಪಡೆಯಲು ಅನುಮತಿಸಲಾಗುತ್ತಾದೆ ಎಲೆಕ್ಟ್ರಾನಿಕ್ ಉಪಕರಣಗಳು, ಪ್ಲೇಟ್ ಗ್ಲಾಸ್, ಸೈನೇಜ್ ಇತ್ಯಾದಿ ಮತ್ತು ಉದ್ಯೋಗಿಗಳ ಪರಿಹಾರ, ಉದ್ಯೋಗಿಗಳ ನಂಬಿಕೆ ದ್ರೋಹದಂತಹ ಹೊಣೆಗಾರಿಕೆಗಳಂತಹ ಇತರ ಸ್ವತ್ತುಗಳನ್ನು ಕವರ್ ಮಾಡಲು ಇನ್ನೂ ಕೆಲವು ವಿಭಾಗಗಳನ್ನು ಸೇರಿಸುವುದು ಸಹ ಮಾರುಕಟ್ಟೆಯಲ್ಲಿಯ ಅಭ್ಯಾಸವಾಗಿದೆ.

ಈ ಕವರ್ ಗೆ ಪ್ರತ್ಯೇಕ ವಿಭಾಗವಿಲ್ಲದಿದ್ದರೆ ಸಂಪೂರ್ಣ ರಕ್ಷಣೆಗಾಗಿ ವಿಮೆದಾರರಿಂದ ನಿಷ್ಠೆ ಖಾತರಿ ಕವರ್ ಅನ್ನು ಸಹ ತೆಗೆದುಕೊಳ್ಳಬೇಕು.

ಪ್ರತಿಯೊಂದು ಪ್ರಕರಣದ ಅರ್ಹತೆಯ ಮೇಲೆ ಅಪಾಯಗಳನ್ನು ಬೆಲೆ ನಿರ್ಧಾರ(ರೇಟ್) ಮಾಡಲಾಗುತ್ತದೆ. ದಿನ ರಾತ್ರಿಯಿರುವ ವಿಶೇಷ ಕಾವಲುಗಾರ, ಕ್ಲೋಸ್ ಸರ್ಕ್ಯೂಟ್ ಟಿವಿ/ಅಲಾರ್ಮ್ ಸಿಸ್ಟಮ್, ಎಕ್ಸ್ ಕ್ಲೂಸಿವ್ ಸ್ಟ್ರಾಂಗ್ ರೂಮ್ ಮತ್ತು ಯಾವುದೇ ಇತರ ಸುರಕ್ಷತಾ ಅನುಕೂಲಕ್ಕಾಗಿ ರಿಯಾಯಿತಿಗಳೊಂದಿಗೆ ಪ್ರತಿ ವಿಭಾಗಕ್ಕೆ ವಿಭಿನ್ನ ಕಂತಿನ ದರಗಳನ್ನು ಅನ್ವಯಿಸಲಾಗುತ್ತದೆ.

## ನಿಮ್ಮನ್ನು ಪರೀಕ್ಷಿಸಿಕೊಳಿಳಿ 7

ಜ್ಯುವೆಲರ್ಸ್ ಬ್ಲಾಕ್ ಪಾಲಿಸಿಯ ಸಂದರ್ಭದಲ್ಲಿ, ಸಾಂಪ್ರದಾಯಿಕವಾಗಿ ಬಹು ವಿಭಾಗಗಳಿವೆ, ಅವುಗಳಲ್ಲಿ ಒಂದು ಸಾಮಾನ್ಯವಾಗಿ ಕಡ್ಡಾಯವಾಗಿದ್ದರೆ ಉಳಿದ ವಿಭಾಗಗಳು ___________.

**I.** ಕಡ್ಡಾಯ

**II.** ಅನುಭವಗಳ ಹಿನ್ನೋಟದಿಂದ ನೀಡಬಹುದಾದ (ರೆಟ್ರೋಸ್ಪೆಕ್ಟಿವ್)

**III.** ಐಚ್ಛಿಕ

**IV.** ಪರಿಹಾರದಾಯಕ

---

## H. ಇಂಜಿನಿಯರಿಂಗ್ ವಿಮೆ

ಎಂಜಿನಿಯರಿಂಗ್ ವಿಮೆಯು ಸಾಮಾನ್ಯ ವಿಮೆಯ ಒಂದು ಶಾಖೆಯಾಗಿದ್ದು ಬೆಂಕಿ ವಿಮೆಯ ಬೆಳವಣಿಗೆಯೊಂದಿಗೆ ಸಮಾನಾಂತರವಾಗಿ ಅಭಿವೃದ್ಧಿಗೊಂಡಿದೆ. ಇದರ ಮೂಲವನ್ನು ಕೈಗಾರಿಕಾ ಘಟಕಗಳು ಮತ್ತು ಯಂತ್ರೋಪಕರಣಗಳಿಗೆ ಪ್ರತ್ಯೇಕ ಕವರ್ ನ ಅಗತ್ಯವನ್ನು ಎತ್ತಿ ತೋರಿಸುವ ಕೈಗಾರಿಕೀಕರಣದ ಅಭಿವೃದ್ಧಿಯೊಂದಿಗೆ ಗುರುತಿಸಬಹುದು. ನಿರ್ದಿಷ್ಟವಾಗಿ ಹೊರತುಪಡಿಸಿದ ಯಾವುದೇ ಕಾರಣದಿಂದಾದ ಹಾನಿಯನ್ನು ಹೊರತು ಪಡಿಸಿ ಕವರ್ ಮಾಡುವ ಎಲ್ಲ ಅಪಾಯಗಳ ಕವರ್ ಪರಿಕಲ್ಪನೆಯನ್ನು ಎಂಜಿನಿಯರಿಂಗ್ ಪ್ರಾಜೆಕ್ಟ್ ಗಳಿಗೆ ಸಂಬಂಧಿಸಿದಂತೆ ಅಭಿವೃದ್ಧಿಪಡಿಸಲಾಗಿದೆ. ಉತ್ಪನ್ನಗಳು ನಿರ್ಮಾಣದಿಂದ ಕ್ರಿಯಾತ್ಮಕ ಪರೀಕ್ಷೆಯವರೆಗೆ ಕೈಗಾರಿಕಾ ಘಟಕವು ಕಾರ್ಯನಿರ್ವಹಿಸುವವರೆಗೆ ವಿವಿಧ ಹಂತಗಳನ್ನು ಒಳಗೊಂಡಿವೆ. ಈ ವಿಮೆಯ ಗ್ರಾಹಕರು ಸಣ್ಣ ಮತ್ತು ದೊಡ್ಡ ಕೈಗಾರಿಕಾ ಘಟಕಗಳು. ಇದು ಎಲೆಕ್ಟ್ರಾನಿಕ್ ಉಪಕರಣಗಳನ್ನು ಹೊಂದಿರುವ ಘಟಕಗಳು ಮತ್ತು ದೊಡ್ಡ ಯೋಜನೆಗಳನ್ನು ಮಾಡುವ ಗುತ್ತಿಗೆದಾರರನ್ನು ಸಹ ಒಳಗೊಂಡಿದೆ. ಎಂಜಿನಿಯರಿಂಗ್ ವಿಮಾ ಪಾಲಿಸಿಗಳಲ್ಲಿ ಎರಡು ವಿಧಗಳಿವೆ:

**1)** ವಾರ್ಷಿಕ ಪಾಲಿಸಿಗಳು-ಸಾಮಾನ್ಯವಾಗಿ ಒಂದು ವರ್ಷದ ಅವಧಿ-

   **a)** ಯಂತ್ರೋಪಕರಣಗಳ ಸ್ಥಗಿತ ಪಾಲಿಸಿ

   **b)** ಬಾಯ್ಲರ್ ಪ್ರೆಶರ್ ಪ್ಲಾಂಟ್ ಪಾಲಿಸಿ

   **c)** ಎಲೆಕ್ಟ್ರಾನಿಕ್ ಸಲಕರಣೆ ಪಾಲಿಸಿ

   **d)** ಗುತ್ತಿಗೆದಾರರ ಕೈಗಾರಿಕಾ ಘಟಕ ಮತ್ತು ಯಂತ್ರೋಪಕರಣಗಳ ಪಾಲಿಸಿ

   **e)** ಸರಕು ಕೆಟ್ಟುಹೋಗುವ ಪಾಲಿಸಿ

   **f)** ಸಿವಿಲ್ ಎಂಜಿನಿಯರಿಂಗ್ ಪೂರ್ಣಗೊಂಡ ಅಪಾಯ

2) ಪ್ರಾಜೆಕ್ಟ್ ಅವಧಿಯನ್ನು ಆಧರಿಸಿ ವಿವಿಧ ಅವಧಿಯೊಂದಿಗೆ ಪ್ರಾಜೆಕ್ಟ್ ಪಾಲಿಸಿಗಳು-

a) ಗುತ್ತಿಗೆದಾರರ ಎಲ್ಲ ಅಪಾಯದ ಪಾಲಿಸಿ

b) ನಿರ್ಮಾಣ ಎಲ್ಲ ಅಪಾಯಗಳ ಪಾಲಿಸಿ

**ಇಂಜಿನಿಯರಿಂಗ್ ಪಾಲಿಸಿಗಳಿಗೆ ಸಂಬಂಧಿಸಿದಂತೆ ಎರಡು "ಪರಿಣಾಮಕಾರಿ ನಷ್ಟ" ಪಾಲಿಸಿಗಳಿವೆ::**

**a) ಯಂತ್ರೋಪಕರಣದ ಸ್ಥಗಿತಿ ಲಾಭದ ನಷ್ಟದ ಪಾಲಿಸಿ (ಎಮ್ ಬಿ ಎಲ್ ಒ ಪಿ)ಯನ್ನು ಯಂತ್ರೋಪಕರಣದ ಸ್ಥಗಿತಿ ಪಾಲಿಸಿಯೊಂದಿಗೆ ಅಥವಾ ಬಾಯ್ಲರ್ ಮತ್ತು ಪ್ರೆಶರ್ ಪ್ಲಾಂಟ್ ಪಾಲಿಸಿಯೊಂದಿಗೆ ತೆಗೆದುಕೊಳ್ಳಲಾಗುತ್ತದೆ ಮತ್ತು**

**b) ಮುಂಗಡ ಲಾಭದ ನಷ್ಟ (ಎಎಲ್ಒಪಿ) ಅಥವಾ ಪ್ರಾರಂಭದಲ್ಲಿ ವಿಳಂಬಿತ (ಡಿಎಸ್ ಯು) ಪ್ರಾಜೆಕ್ಟ್ ಪಾಲಿಸಿಯೊಂದಿಗೆ ತೆಗೆದುಕೊಳ್ಳಲಾಗುತ್ತದೆ.**

ನಾವು ಈ ಪಾಲಿಸಿಗಳನ್ನು ಸಂಕ್ಷಿಪ್ತವಾಗಿ ಪರಿಗಣಿಸೋಣ:

**A. <u>ವಾರ್ಷಿಕ ಪಾಲಿಸಿಗಳು</u>**

1. **ಯಂತ್ರೋಪಕರಣಗಳ ಸ್ಥಗಿತಿಯ ಪಾಲಿಸಿ (ಎಮ್ ಬಿ):** ಈ ಪಾಲಿಸಿಯು ಯಂತ್ರಗಳೊಂದಿಗೆ ಕಾರ್ಯನಿರ್ವಹಿಸುವ ಮತ್ತು ಕೈಗಾರಿಕಾ ಘಟಕಗಳ ಮತ್ತು ಯಂತ್ರೋಪಕರಣಗಳ ಸ್ಥಗಿತದ ಗಂಭೀರ ಪರಿಣಾಮವನ್ನು ಎದುರಿಸಬೇಕಾಗುವ ಪ್ರತಿಯೊಂದು ಉದ್ಯಮಕ್ಕೆ ಸೂಕ್ತವಾಗಿದೆ. ಈ ಪಾಲಿಸಿಯು ಜನರೇಟರ್ ಗಳು, ಟ್ರಾನ್ಸ್ ಫಾರ್ಮರ್ ಮತ್ತು ಇತರ ಎಲೆಕ್ಟ್ರಿಕಲ್, ಮೆಕ್ಯಾನಿಕಲ್ ಮತ್ತು ಲಿಫ್ಟಿಂಗ್ ಉಪಕರಣಗಳಂತಹ ಯಂತ್ರಗಳನ್ನು ಕವರ್ ಮಾಡುತ್ತದೆ.

ವಿಮಾದಾರ ಆಸ್ತಿಗೆ ಯಾವುದೇ ಕಾರಣದಿಂದ (ಹೊರತುಪಡಿಸಿದ ಅಪಾಯಗಳಿಗೆ ಒಳಪಟ್ಟು) ಯಾಂತ್ರಿಕ ಅಥವಾ ವಿದ್ಯುತ್ ಸ್ಥಗಿತಿಯಿಂದ ಅನಿರೀಕ್ಷಿತ ಮತ್ತು ಹಠಾತ್ ಭೌತಿಕ ಹಾನಿಯನ್ನು ಪಾಲಿಸಿ ಕವರ್ ಮಾಡುತ್ತದೆ::

a) ಅದು ಕೆಲಸದಲ್ಲಿರುವಾಗ ಅಥವಾ ವಿಶ್ರಾಂತಿಯಲ್ಲಿರುವಾಗ.

b) ಸ್ವಚ್ಛಗೊಳಿಸುವಿಕೆ ಅಥವಾ ಕೂಲಂಕುಷ ಪರೀಕ್ಷೆಗಾಗಿ ಜೋಡಣೆಗಳನ್ನು ಬಿಚ್ಚಿದಾಗ

c) ಸ್ವಚ್ಛಗೊಳಿಸುವ ಅಥವಾ ಕೂಲಂಕುಷ ಪರೀಕ್ಷಣೆಯ ಸಮಯದಲ್ಲಿ ಮತ್ತು ನಂತರ ಮರುಜೋಡಣೆಯ ಸಮಯದಲ್ಲಿ.

d) ಆವರಣದಲ್ಲಿ ಸ್ಥಳಾಂತರಿಸುವಾಗ.

ಪ್ರತ್ಯೇಕ ಯಂತ್ರೋಪಕರಣಗಳ ಮರುಸ್ಥಾಪನೆ/ಬದಲಿ ಮೌಲ್ಯದ ಮೇಲೆ ಕಂತನ್ನು ವಿಧಿಸಲಾಗುತ್ತದೆ. ಯಂತ್ರವನ್ನು ಒಟ್ಟಾರೆಯಾಗಿ ವಿಮೆ ಮಾಡಬೇಕು. ದರಗಳು ಯಂತ್ರದ ಪ್ರಕಾರವನ್ನು, ಅದನ್ನು ಬಳಸುವ

ಉದ್ಯಮ ಮತ್ತು ಅದರ ಮೌಲ್ಯವನ್ನವಲಂಬಿಸಿರುತ್ತದೆ. ಸ್ವತಂತ್ರ ಸೌಲಭ್ಯಗಳು, ಲಭ್ಯವಿರುವ ಬಿಡಿಭಾಗಗಳು ಮತ್ತು ಕ್ಲೇಮ್ ಗಳ ಅನುಭವದಂತಹ ಅಂಶಗಳ ಆಧಾರದ ಮೇಲೆ ರಿಯಾಯಿತಿಗಳನ್ನು ನೀಡಲಾಗುತ್ತದೆ.

2. **ಬಾಯ್ಲರ್ ಮತ್ತು ಪ್ರೆಶರ್ ಪ್ಲಾಂಟ್ ಪಾಲಿಸಿ**: ಇದು ಬಾಯ್ಲರ್ ಗಳು ಮತ್ತು ಪ್ರೆಶರ್ ವೆಸಲ್ಸ್ (ಒತ್ತಡ ಪಾತ್ರೆ)ಗಳನ್ನು ಈ ಕೆಳಗೆ ನೀಡಿದ ಅಪಾಯಗಳ ವಿರುದ್ಧವಾಗಿ ಕವರ್ ಮಾಡುತ್ತದೆ,

    a) ಬೆಂಕಿಯಿಂದ ಹೊರತುಪಡಿಸಿ ಬಾಯ್ಲರ್ ಮತ್ತು/ಅಥವಾ ಇತರ ಒತ್ತಡದ ಸ್ಥಾವರಕ್ಕೆ ಮತ್ತು ಸುತ್ತಮುತ್ತಲಿನ ವಿಮಾದಾರರ ಆಸ್ತಿಗೆ ಹಾನಿ; ಮತ್ತು

    b) ಅಂತಹ ಬಾಯ್ಲರ್ ಮತ್ತು/ಅಥವಾ ಪ್ರೆಶರ್ ಪ್ಲಾಂಟ್ ನ ಆಂತರಿಕ ಒತ್ತಡದಿಂದಾಗಿ ಸ್ಫೋಟ ಅಥವಾ ಕುಸಿತದಿಂದ ಉಂಟಾದ ವ್ಯಕ್ತಿಗಾದ ದೈಹಿಕ ಗಾಯ, ಅಥವಾ ತೃತೀಯ ಪಕ್ಷದ ಆಸ್ತಿಗಾದ ಹಾನಿಗಳ ಸಂದರ್ಭದಲ್ಲಿ ವಿಮಾದಾರರ ಕಾನೂನು ಹೊಣೆಗಾರಿಕೆ.

**ಬೆಂಕಿ ಪಾಲಿಸಿ ಮತ್ತು ಬಾಯ್ಲರ್ ವಿಮಾ ಪಾಲಿಸಿಯು ಪರಸ್ಪರ ಪ್ರತ್ಯೇಕವಾಗಿರುವುದರಿಂದ, ಸಾಕಷ್ಟು ರಕ್ಷಣೆಗಾಗಿ, ಎರಡೂ ಪಾಲಿಸಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲ ಇಂಜಿನಿಯರಿಂಗ್ ಪಾಲಿಸಿಗಳ ಅಡಿಯಲ್ಲಿ ವಿಮಾ ಮೊತ್ತವು ಪ್ರಸ್ತುತ ಬದಲಿ ಮೌಲ್ಯವಾಗಿರಬೇಕು.**

3. **ಎಲೆಕ್ಟ್ರಾನಿಕ್ ಸಲಕರಣೆ ಪಾಲಿಸಿ:** ಇದು ಸಿಪಿಯು, ಕೀಬೋರ್ಡ್ ಗಳು, ಮಾನಿಟರ್ ಗಳು, ಪ್ರಿಂಟರ್ ಗಳು, ಯುಪಿಎಸ್, ಸಿಸ್ಟಮ್ ಸಾಫ್ಟ್ ವೇರ್ ಇತ್ಯಾದಿಗಳನ್ನು ಒಳಗೊಂಡಿರುವ ಸಂಪೂರ್ಣ ಕಂಪ್ಯೂಟರ್ ಸಿಸ್ಟಮ್ ಅನ್ನು ಒಳಗೊಂಡಿರುವ ವಿವಿಧ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳನ್ನು ಕವರ್ ಮಾಡುತ್ತದೆ. ಸಹಾಯಕ ಸಾಧನಗಳಾದ ಹವಾನಿಯಂತ್ರಣ, ತಾಪನ ಮತ್ತು ವಿದ್ಯುತ್ ಪರಿವರ್ತನೆ ಇತ್ಯಾದಿಗಳನ್ನು ಸಹ ಕವರ್ ಮಾಡುತ್ತದೆ.

ಈ ಪಾಲಿಸಿಯು ಬೆಂಕಿ ಪಾಲಿಸಿ, ಯಂತ್ರೋಪಕರಣಗಳ ವಿಮಾ ಪಾಲಿಸಿ ಮತ್ತು ದರೋಡೆ ಪಾಲಿಸಿಯ ಸಂಯೋಜನೆಯಾಗಿದೆ. ದೋಷಯುಕ್ತ ವಿನ್ಯಾಸ (ಖಾತರಿಯಡಿಯಲ್ಲಿ ಕವರ್ ಹೊಂದಿಲ್ಲ), ನೈಸರ್ಗಿಕ ವಿದ್ಯಮಾನಗಳ ಪರಿಣಾಮಗಳು ಅನಿಶ್ಚಯತೆಗಳನ್ನು, ವೋಲ್ಟೇಜ್ ಏರಿಳಿತಗಳಿಂದ ದೋಷಪೂರಿತ ಕಾರ್ಯಚಟುವಟಿಕೆಗಳು, ಪ್ರಭಾವದ ಆಘಾತ ಇತ್ಯಾದಿ, ದರೋಡೆ, ಮನೆ ಒಡೆಯುವಿಕೆ ಮತ್ತು ಕಳ್ಳತನವನ್ನು ಸಹ ಪಾಲಿಸಿಯು ಕವರ್ ಮಾಡುತ್ತದೆ.

ಪ್ರತಿಯೊಂದು ಪ್ರತಿ ಸಂದರ್ಭದಲ್ಲಿಯ ಜವಾಬ್ದಾರಿ ಅಥವಾ ಹೊಣೆಗಾರಿಕೆಯನ್ನವಲಂಬಿಸಿ, ಮಾಲೀಕರು, ಗುತ್ತಿಗೆದಾರರು ಅಥವಾ ಬಾಡಿಗೆದಾರರಿಗೆ ಪಾಲಿಸಿಯು ಲಭ್ಯವಿರುತ್ತದೆ. ಇದು ಸಾಮಾನ್ಯವಾಗಿ ವಿವಿಧ ರೀತಿಯ ನಷ್ಟಗಳನ್ನು ಕವರ್ ಮಾಡುವ ಮೂರು ವಿಭಾಗಗಳನ್ನು ಹೊಂದಿದೆ:

a) **ವಿಭಾಗ 1:** ಉಪಕರಣಗಳಿಗಾದ ನಷ್ಟ ಮತ್ತು ಹಾನಿ

b) **ವಿಭಾಗ 2:** ಕಂಪ್ಯೂಟರ್ ಬಾಹ್ಯ ಹಾರ್ಡ್ ಡಿಸ್ಕ್ಸ್ ಗಳಂತಹ ಬಾಹ್ಯ ಡೇಟಾ ಮಾಧ್ಯಮಕ್ಕಾದ ನಷ್ಟ ಮತ್ತು ಹಾನಿ

c) **ವಿಭಾಗ 3:** ಹೆಚ್ಚಾದ ಕೆಲಸದ ವೆಚ್ಚ - **12, 26, 40** ಅಥವಾ **52** ವಾರಗಳವರೆಗೆ ಬದಲಿ ಉಪಕರಣಗಳ ಮೇಲೆ ಮುಂದುವರಿದ ಡೇಟಾ ಸಂಸ್ಕರಣೆಯನ್ನು ಖಚಿತಪಡಿಸಿಕೊಳ್ಳಲು.

4. **ಗುತ್ತಿಗೆದಾರರ ಕೈಗಾರಿಕಾ ಘಟಕ ಮತ್ತು ಯಂತ್ರೋಪಕರಣ (ಸಿಪಿಎಮ್) ಪಾಲಿಸಿ:** ನಿರ್ಮಾಣ ವ್ಯವಹಾರದಲ್ಲಿ ತೊಡಗಿರುವ ಗುತ್ತಿಗೆದಾರರಿಗೆ ಕ್ರೇನ್ ಗಳು, ಅಗೆಯುವ ಯಂತ್ರಗಳು ಅನಿರೀಕ್ಷಿತ ಮತ್ತು ಹಠಾತ್ ಭೌತಿಕ ನಷ್ಟದಿಂದ ಅಥವಾ ಯಾವುದೇ ಕಾರಣದಿಂದ ಹಾನಿಗೊಳಗಾದಂತಹ ಎಲ್ಲ ರೀತಿಯ ಯಂತ್ರಗಳನ್ನು ಕವರ್ ಮಾಡಲು ಸೂಕ್ತವಾಗಿದೆ:

a) ದರೋಡೆ, ಕಳ್ಳತನ, ಗಲಭೆ, ಚಂಡಮಾರುತ, ದುರುದ್ದೇಶಪೂರಿತ ಹಾನಿ, ಬಿರುಗಾಳಿ

b) ಬೆಂಕಿ ಮತ್ತು ಸಿಡಿಲು, ಬಾಹ್ಯ ಸ್ಫೋಟ, ಭೂಕಂಪ ಮತ್ತು ನೈಸರ್ಗಿಕ ವಿಪತ್ತಗಳ ಅಪಾಯಗಳು

c) ಕೆಲಸದಲ್ಲಿರುವಾಗ ದೋಷಯುಕ್ತ ನಿರ್ವಹಣೆ, ಬೀಳಿಸುವಿಕೆ ಅಥವಾ ಬೀಳುವಿಕೆ, ಕುಸಿತ, ಘರ್ಷಣೆ ಮತ್ತು ಪ್ರಭಾವದಿಂದಾಗಿ ಆಕಸ್ಮಿಕ ಹಾನಿ; ತೃತೀಯ ಪಕ್ಷದ ಹಾನಿಗಾಗಿ ವಿಸ್ತರಿಸಬಹುದು.

ವಿಧಿಸಬೇಕಾದ ಕಂತು ಉಪಕರಣದ ಪ್ರಕಾರ ಮತ್ತು ಅದು ಕಾರ್ಯನಿರ್ವಹಿಸುವ ಸ್ಥಳವನ್ನು ಅವಲಂಬಿಸಿರುತ್ತದೆ.

ಉಪಕರಣವು ಕೆಲಸದಲ್ಲಿರುವಾಗ ಅಥವಾ ವಿಶ್ರಾಂತಿಯಲ್ಲಿರುವಾಗ ಅಥವಾ ಸ್ವಚ್ಛಗೊಳಿಸಲು ಅಥವಾ ಕೂಲಂಕಷವಾಗಿ ಪರಿಶೀಲಿಸಲು ಅಥವಾ ಅದರ ನಂತರ ಮರು-ಜೋಡಣೆಗಾಗಿ ಭಾಗಗಳನ್ನು ಬಿಡಿಸಿದಾಗ ಕವರ್ ಕಾರ್ಯನಿರ್ವಹಿಸುತ್ತದೆ. ಅದೇ ಉಪಕರಣವು ಗುತ್ತಿಗೆದಾರರ ಸ್ವಂತ ಆವರಣದಲ್ಲಿ ನಿಂತಿರುವಾಗ ಸಹ ಕವರ್ ಅನ್ವಯಿಸುತ್ತದೆ. ಆದಾಗ್ಯೂ "ಎನಿವೇರ್ ಇನ್ ಇಂಡಿಯಾ ಆಧಾರದ" ಉಪಕರಣಗಳನ್ನು ಒಳಗೊಂಡಿರುವ ಫ್ಲೋಟರ್ ಪಾಲಿಸಿಯು 10% ಹೆಚ್ಚುವರಿ ಕಂತನ್ನು ವಿಧಿಸುವ ಮೂಲಕ ಮತ್ತು ಕೆಲವು ಷರತ್ತುಗಳೊಂದಿಗೆ ಲಭ್ಯವಿದೆ.

5. **ಸರಕು ಕೆಟ್ಟುಹೋಗುವ ಪಾಲಿಸಿ:** ಈ ಪಾಲಿಸಿಯು ಶೀತ ಶೇಖರಣೆ(ಕೋಲ್ಡ್ ಸ್ಟೋರೇಜ್) (ವೈಯಕ್ತಿಕ ಅಥವಾ ಸಹಕಾರ ಸಂಘ)ಯ ಮಾಲೀಕರಿಗೆ ಅಥವಾ ಶೀತ ಶೇಖರಣೆ (ಕೋಲ್ಡ್ ಸ್ಟೋರೇಜ್)ಯನ್ನು ಗುತ್ತಿಗೆಗೆ ತೆಗೆದುಕೊಳ್ಳುವವರಿಗೆ ಅಥವಾ ಹಾಳಾಗುವ ಸರಕುಗಳ ಶೇಖರಣೆಗಾಗಿ ಬಾಡಿಗೆಗೆ ತೆಗೆದುಕೊಳ್ಳುವವರಿಗೆ ಸೂಕ್ತವಾಗಿದೆ. ಶೈತ್ಯೀಕರಣ ಸ್ಥಾವರ ಮತ್ತು ಯಂತ್ರೋಪಕರಣಗಳ ಸ್ಥಗಿತಿಯ ನಂತರದ ಸರಕು ಕೆಟ್ಟುಹೋಗುವಿಕೆ ಮತ್ತು ಮಾಲಿನ್ಯದ ಅಪಾಯದ ಮತ್ತು ತಾಪಮಾನದ ಏರಿಕೆ ಮತ್ತು ಶೀತಲ ಶೇಖರಣಾ ಕೊಠಡಿಗಳಿಗೆ ಶೈತ್ಯೀಕರಣಗಳು ಹಠಾತ್ ಮತ್ತು ಅನಿರೀಕ್ಷಿತವಾಗಿ ಕೆಟ್ಟುಹೋಗುವ ಕಾರಣದಿಂದಾಗಿ ಉಂಟಾಗುವ ನಷ್ಟದ ಅಪಾಯದ ವಿರುದ್ಧ ಕವರ್ ಇರುತ್ತದೆ.

6. **ಸಿವಿಲ್ ಇಂಜಿನಿಯರಿಂಗ್ ಪೂರ್ಣಗೊಂಡ ಅಪಾಯ:** ಸಿವಿಲ್ ಪ್ರಾಜೆಕ್ಟ್ ಗಳನ್ನು ಪೂರ್ಣಗೊಳಿಸಿದ ನಂತರ ಸುಸ್ಥಿತಿಯಲ್ಲಿಟ್ಟಿರಬೇಕಾದ ಗುತ್ತಿಗೆದಾರರು ಇದನ್ನು ಸಾಮಾನ್ಯವಾಗಿ ತೆಗೆದುಕೊಳ್ಳುತ್ತಾರೆ. ಸೇತುವೆಗಳು, ಡ್ರೈ ಡಾಕ್ ಗಳು, ಬಂದರುಗಳು, ಜೆಟ್ಟಿ ರೈಲು ಮಾರ್ಗಗಳು, ಬಂಡೆ ತುಂಬಿದ ಅಣೆಕಟ್ಟುಗಳು, ಕಾಂಕ್ರೀಟ್ ಅಣೆಕಟ್ಟುಗಳು, ಮಣ್ಣಿನ ಅಣೆಕಟ್ಟುಗಳು, ಕಾಲುವೆಗಳು, ನೀರಾವರಿ ವ್ಯವಸ್ಥೆ ಮುಂತಾದ ನಾಗರಿಕ

ಯೋಜನೆಗಳನ್ನು ಈ ಪಾಲಿಸಿಯಡಿಯಲ್ಲಿ ಪರಿಗಣಿಸಲಾಗುತ್ತದೆ. ಕವರ್ ಮಾಡಲಾಗುವ ಅಪಾಯಗಳು ಈ ಕೆಳಗಿನಂತಿವೆ–

1. **ಬೆಂಕಿ**
2. **ಸಿಡಿಲು**
3. **ಸ್ಫೋಟ/ ಅಂತಃಸ್ಫೋಟ**
4. **ಗಲಭೆ, ಮುಷ್ಕರ, ದುರುದ್ದೇಶಪೂರಿತ ಹಾನಿ**
5. **ಯಾವುದೇ ರೈಲು/ರಸ್ತೆ ಅಥವಾ ನೀರಿನಿಂದ ಚಲಿಸುವ ವಾಹನ ಅಥವಾ ಪ್ರಾಣಿಗಳಿಂದ ಅಪ್ಪಳಿಸುವಿಕೆ**
6. **ಗಾಳಿ, ಚಂಡಮಾರುತ, ಟೈಫೂನ್, ಬಿರುಗಾಳಿ, ಹರಿಕೇನ್, ಸುಂಟರಗಾಳಿ, ಪ್ರವಾಹ ಮತ್ತು ಮುಳುಗಡೆ, ನೀರಿನ ಅಲೆಗಳ ಕ್ರಿಯೆ**
7. **ಕುಸಿತ ಮತ್ತು ಭೂಕುಸಿತ (ಬಂಡೆಕುಸಿತವೂ ಸೇರಿದಂತೆ)ದಿಂದಾದ ಹಾನಿ**
8. **ಭೂಕಂಪ ಬೆಂಕಿ ಮತ್ತು ಆಘಾತ/ಶಾಕ್ (ಭೂಕಂಪದಿಂದಾಗಿ ಪ್ರವಾಹವೂ ಸೇರಿದಂತೆ), ಸುನಾಮಿ**
9. **ಹಿಮ, ಹಿಮಪಾತ, ಮಂಜುಗಡ್ಡೆ.**

**B. <u>ಪ್ರಾಜೆಕ್ಟ್ ಪಾಲಿಸಿಗಳು</u>**

ಈ ಪಾಲಿಸಿಗಳನ್ನು ಸಾಮಾನ್ಯವಾಗಿ ಪ್ರಾಜೆಕ್ಟ್ ಅವಧಿಯವರೆಗೆ ನೀಡಲಾಗುತ್ತದೆ ಮತ್ತು ವಾರ್ಷಿಕ ಆಧಾರದ ಮೇಲೆ ಇರುವುದಿಲ್ಲ.

1. **ಗುತ್ತಿಗೆದಾರರ ಎಲ್ಲ ಅಪಾಯಗಳ (ಸಿಎಆರ್) ಪಾಲಿಸಿ:** ಸಣ್ಣ ಕಟ್ಟಡಗಳಿಂದ ಬೃಹತ್ ಅಣೆಕಟ್ಟುಗಳು, ಕಟ್ಟಡಗಳು, ಸೇತುವೆಗಳು, ಸುರಂಗಗಳು ಇತ್ಯಾದಿಗಳವರೆಗೆ ಸಿವಿಲ್ ಎಂಜಿನಿಯರಿಂಗ್ ಯೋಜನೆಗಳಲ್ಲಿ ತೊಡಗಿರುವ ಗುತ್ತಿಗೆದಾರರು ಮತ್ತು ಪ್ರಮುಖರ ಹಿತಾಸಕ್ತಿಗಳನ್ನು ರಕ್ಷಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ. ಪಾಲಿಸಿಯು "ಎಲ್ಲ ಅಪಾಯ" ಕವರ್ ಅನ್ನು ಒದಗಿಸುತ್ತದೆ - ಹೀಗಾಗಿ ನಿರ್ಮಾಣ ಸ್ಥಳದಲ್ಲಿ ವಿಮೆ ಮಾಡಲಾದ ಆಸ್ತಿಗೆ ಸಂಭವಿಸುವ ಯಾವುದೇ ಹಠಾತ್ ಮತ್ತು ಅನಿರೀಕ್ಷಿತ ನಷ್ಟ ಅಥವಾ ಹಾನಿಯ ವಿರುದ್ಧ ಪರಿಹಾರವನ್ನು ಒದಗಿಸುತ್ತದೆ. ತೃತೀಯ ಪಕ್ಷದ ಮತ್ತು ಇತರ ಒಡ್ಡುವಿಕೆಗಳನ್ನು ಕವರ್ ಮಾಡಲು ಇದನ್ನು ವಿಸ್ತರಿಸಬಹುದು. ವಿಧಿಸಬಹುದಾದ ಕಂತು ಯೋಜನೆಯ ಸ್ವರೂಪ, ಯೋಜನಾ ವೆಚ್ಚ, ಯೋಜನೆಯ ಅವಧಿ, ಭೌಗೋಳಿಕ ಸ್ಥಳ ಮತ್ತು ಪರೀಕ್ಷೆಯ ಅವಧಿಯನ್ನು ಅವಲಂಬಿಸಿರುತ್ತದೆ.

2. ನಿರ್ಮಾಣ ಎಲ್ಲ **ಅಪಾಯ(ಎರೆಕ್ಷನ್ ಆಲ್ ರಿಸ್ಕ್) (ಇಎಆರ್)ಗಳ ಪಾಲಿಸಿ:** ಈ ಪಾಲಿಸಿಯನ್ನು ಶೇಖರಣೆ ಮತ್ತು ನಿರ್ಮಾಣ(ಸ್ಟೋರೇಜ್-ಕಮ್-ಎರೆಕ್ಷನ್) (ಎಸ್ ಸಿಇ) ಪಾಲಿಸಿ ಎಂದೂ ಕರೆಯಲಾಗುತ್ತದೆ. ಇದು ವಿವಿಧ ಬಾಹ್ಯ ಅಪಾಯಗಳಿಗೆ ಒಡ್ಡಿಕೊಂಡಿರುವ ಕೈಗಾರಿಕಾ ಘಟಕ ಮತ್ತು ಯಂತ್ರೋಪಕರಣಗಳನ್ನು

ನಿರ್ಮಿಸಲಾಗುತ್ತಿರುವ ಯೋಜನೆಯ ಪ್ರಮುಖರು ಅಥವಾ ಗುತ್ತಿಗೆದಾರರಿಗೆ ಸೂಕ್ತವಾಗಿದೆ. ಇದು ಸಮಗ್ರ ವಿಮಾ ಪಾಲಿಸಿಯಾಗಿದ್ದು, ಪ್ರಾಜೆಕ್ಟ್ ಸೈಟ್ ನಲ್ಲಿ ವಸ್ತುಗಳನ್ನು ಇಳಿಸಿದ ಕ್ಷಣದಿಂದ ಯಾವುದೇ ರೀತಿಯ ಅನಿಶ್ಚಯತೆಯನ್ನು ಒಳಗೊಂಡಿರುತ್ತದೆ ಮತ್ತು ಯೋಜನೆಯನ್ನು ಪರೀಕ್ಷಿಸಿ, ನಿಯೋಜಿಸುವ ಮತ್ತು ಹಸ್ತಾಂತರಿಸುವವರೆಗೆ ಸಂಪೂರ್ಣ ಯೋಜನೆಯ ಅವಧಿಯಲ್ಲಿ ಮುಂದುವರಿಯುತ್ತದೆ.

ವಿಧಿಸಬಹುದಾದ ಕಂತು ಯೋಜನೆಯ ಸ್ವರೂಪ, ವೆಚ್ಚ, ಪ್ರಾಜೆಕ್ಟ್ ನ ಅವಧಿ, ಭೌಗೋಳಿಕ ಸ್ಥಳ ಮತ್ತು ಪರೀಕ್ಷೆಯ ಅವಧಿಯನ್ನು ಅವಲಂಬಿಸಿರುತ್ತದೆ.

ಅಗತ್ಯವಿದ್ದಲ್ಲಿ, ಪ್ರಾಜೆಕ್ಟ್ ಸೈಟ್ ನಲ್ಲಿ ವಿತರಿಸುವವರೆಗೆ ಸಾಗಣೆಯ ಹಂತದಲ್ಲಿ ಉಪಕರಣಗಳು ಮತ್ತು ಸಾಮಗ್ರಿಗಳಿಗೆ ಕವರೇಜ್ ಒದಗಿಸಲು ನಿರ್ಮಾಣ ಪಾಲಿಸಿಯೊಂದಿಗೆ ಸಾಗಾಣಿಕೆ ಕವರ್ ಅನ್ನು ನೀಡಬಹುದು.

**C. ಪರಿಣಾಮಕಾರಿ ನಷ್ಟದ ಪಾಲಿಸಿಗಳು (ಕಾನ್ಸಿಕ್ವೆನ್ಶಿಯಲ್ ನಷ್ಟದ ಪಾಲಿಸಿಗಳು)**

ಈ ರೀತಿಯ ಪಾಲಿಸಿಗಳನ್ನು ಇತರ ನಷ್ಟಗಳ ಪರಿಣಾಮವಾಗಿ ಉಂಟಾಗುವ ನಷ್ಟವನ್ನು ಕವರ್ ಮಾಡಲು ನೀಡಲಾಗುತ್ತದೆ. ಇವುಗಳನ್ನು 'ವ್ಯಾಪಾರ ಅಡಚಣೆ' ಪಾಲಿಸಿಗಳು ಅಥವಾ 'ಲಾಭಗಳ ನಷ್ಟ' ಪಾಲಿಸಿಗಳೆಂದೂ ಕರೆಯಲಾಗುತ್ತದೆ.

**3. ಯಂತ್ರೋಪಕರಣಗಳ ಲಾಭದ ನಷ್ಟ (ಎಮ್ಎಲ್ಒಪಿ) ಪಾಲಿಸಿ**

ಯಂತ್ರೋಪಕರಣಗಳ ಸ್ಥಗಿತಿ ಅಥವಾ ಬಾಯ್ಲರ್ ಸ್ಫೋಟದ ಪರಿಣಾಮವಾಗಿ ಅಡೆತಡೆಗಳು ಅಥವಾ ವಿಳಂಬಗಳ ಪರಿಣಾಮವಾಗಿ ಭಾರಿ ಪ್ರಮಾಣದ ನಷ್ಟವುಂಟಾಗುವ ಕೈಗಾರಿಕೆಗಳಿಗೆ ಈ ಪಾಲಿಸಿಯು ಸೂಕ್ತವಾಗಿದೆ.

ಸ್ಥಗಿತಿ ಅಥವಾ ನಷ್ಟ ಮತ್ತು ಮರುಸ್ಥಾಪನೆಯ ನಡುವಿನ ಸಮಯದ ವಿಳಂಬವು ದೊಡ್ಡದಾಗಿದ್ದಲ್ಲಿ, ವಹಿವಾಟಿನಲ್ಲಿಯ ಕಡಿತ ಮತ್ತು ಕೆಲಸದ ವೆಚ್ಚದಲ್ಲಿನ ಹೆಚ್ಚಳದಿಂದಾಗಿ ಮಧ್ಯಂತರ ಅವಧಿಯಲ್ಲಾಗುವ ಲಾಭದ ನಷ್ಟವನ್ನು ಈ ಪಾಲಿಸಿಯು ಸರಿದೂಗಿಸುತ್ತದೆ. ವ್ಯಾಪಾರ ಅಡಚಣೆ ಪಾಲಿಸಿಯ ನಿಯಮಗಳು ಮತ್ತು ಷರತ್ತುಗಳು ಮತ್ತು ಕವರೇಜ್, ಈ ಹಿಂದೆ ಅಧ್ಯಾಯದಲ್ಲಿ ಚರ್ಚಿಸಲಾದ ಬೆಂಕಿ ಪಾಲಿಸಿಯ ನಷ್ಟವನ್ನು ಅನುಸರಿಸುವ ವ್ಯಾಪಾರ ಅಡಚಣೆ ಪಾಲಿಸಿಯಂತೆಯೇ ಇರುತ್ತದೆ.

**4. ಮುಂಗಡ ಲಾಭದಲ್ಲಿಯ ನಷ್ಟದ ಕವರ್ (ಎಎಲ್ಒಪಿ) ಅಥವಾ ಪ್ರಾರಂಭದಲ್ಲಿ ವಿಳಂಬ ಪಾಲಿಸಿ (ಡಿ.ಎಸ್.ಯು.)**

ಪ್ರಾಜೆಕ್ಟ್ ಸಮಯದಲ್ಲಿ ಆಕಸ್ಮಿಕ ಹಾನಿಗಳಿಂದಾಗಿ ವಿಳಂಬದಿಂದ ಪ್ರಾಜೆಕ್ಟ್ ಮೇಲೆ ಆಗುವ ಆರ್ಥಿಕ ಪರಿಣಾಮಗಳನ್ನು ಇದು ಕವರ್ ಮಾಡುತ್ತದೆ. ನಿರೀಕ್ಷಿತ ಗಳಿಕೆಯಿಂದ ವಂಚಿತರಾದ ವಿಮಾದಾರರಿಗೆ ಮತ್ತು ಹಣಕಾಸು ಸಂಸ್ಥೆಗಳಿಗೆ ಯೋಜನೆಯಲ್ಲಿ ಅವರ ಆಸಕ್ತಿಯ ಮಟ್ಟಿಗೆ ಇದು ಸೂಕ್ತವಾಗಿದೆ. ಪ್ರಾಜೆಕ್ಟ್ ನ

ನಿಜವಾದ ಆರಂಭದ ಮೊದಲು ಎಮ್ ಸಿಈ/ ಈಎಆರ್/ ಸಿಎಆರ್ ಪಾಲಿಸಿಗೆ ವಿಸ್ತರಣೆಯಾಗಿ ಇದನ್ನು ನೀಡಲಾಗಿದೆ.

ಅವಧಿ ಸಾಲ, ಡಿಬೆಂಚರ್ ಗಳು, ದಿನಗೂಲಿ ಮತ್ತು ವೇತನಗಳು ಇತ್ಯಾದಿಗಳ ಮೇಲಿನ ಬಡ್ಡಿ ಮತ್ತು ನಿಗದಿತ ದಿನಾಂಕದಂದು ವ್ಯವಹಾರವನ್ನು ಪ್ರಾರಂಭಿಸಿದರೆ ಗಳಿಸಬಹುದಾದ ನಿರೀಕ್ಷಿತ ನಿವ್ವಳ ಲಾಭದಂತಹ ನಿರಂತರ ವೆಚ್ಚಗಳ ರೂಪದಲ್ಲಿ ಹಣಕಾಸಿನ ನಷ್ಟವನ್ನು ಪಾಲಿಸಿ ಕವರ್ ಮಾಡುತ್ತದೆ.

ಕಂತು ನಿರ್ಧಾರವು ವಿವಿಧ ನಿರ್ಣಾಯಕ ಅಂಶಗಳ ಮತ್ತು ಲಭ್ಯವಿರುವ ಮರು-ವಿಮೆಯ ಬೆಂಬಲವನ್ನು ಅವಲಂಬಿಸಿರುತ್ತದೆ. ನಿರೀಕ್ಷಿತ ಒಟ್ಟು ಲಾಭ ಅಥವಾ ವಹಿವಾಟು ಮತ್ತು ಪರಿಹಾರದ ಅವಧಿಯು ಪಾವತಿಸಬೇಕಾದ ಕಂತನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಅಂಶಗಳಾಗಿವೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 8**

ಪ್ರಾರಂಭದಲ್ಲಿ ವಿಳಂಬ ಪಾಲಿಸಿಯನ್ನು _____________ ಎಂದೂ ಕರೆಯಲಾಗುತ್ತದೆ.

**I.** ಯಂತ್ರೋಪಕರಣಗಳ ಲಾಭದಲ್ಲಿಯ ನಷ್ಟದ ಕವರ್

**II.** ಮುಂಗಡ ಲಾಭದ ನಷ್ಟದ ಕವರ್

**III.** ಗುತ್ತಿಗೆದಾರರ ಎಲ್ಲ ಅಪಾಯದ ಕವರ್

**IV.** ಗುತ್ತಿಗೆದಾರರ ಸ್ಥಾವರ ಮತ್ತು ಯಂತ್ರೋಪಕರಣಗಳ ಕವರ್

## I. ಕೈಗಾರಿಕೆಗಳ ಎಲ್ಲ ಅಪಾಯಗಳ ವಿಮೆ

ಕೈಗಾರಿಕೆಗಳ ಎಲ್ಲ ಅಪಾಯಗಳ ಪಾಲಿಸಿಯನ್ನು ಭಾರತದಲ್ಲಿಯ ಉತ್ಪಾದನೆ ಮತ್ತು ಶೇಖರಣಾ ಸೌಲಭ್ಯಗಳ ಕೈಗಾರಿಕಾ ಆಸ್ತಿಗಳನ್ನು ಒಂದೇ ಪಾಲಿಸಿಯಡಿಯಲ್ಲಿ ಕವರ್ ಮಾಡಲು ವಿನ್ಯಾಸಗೊಳಿಸಲಾಗಿದೆ. ಇದು ವಾಸ್ತವಿಕ ಹಾನಿ ಮತ್ತು ವ್ಯವಹಾರದ ಅಡಚಣೆಯ ವಿರುದ್ಧ ಪರಿಹಾರವನ್ನು ಒದಗಿಸುತ್ತದೆ.

ಸಾಮಾನ್ಯವಾಗಿ, ಪಾಲಿಸಿಯು ಈ ಕೆಳಗಿನವುಗಳಿಗೆ ರಕ್ಷಣೆಯನ್ನು ನೀಡುತ್ತದೆ:

**i.** ಬೆಂಕಿ ವಿಮಾ ಅಭ್ಯಾಸದ ಪ್ರಕಾರ ಬೆಂಕಿ ಮತ್ತು ನಿರ್ದಿಷ್ಟಪಡಿಸಿದ ಅಪಾಯಗಳು,

**ii.** ದರೋಡೆ (ಲೂಟಿಯನ್ನು ಹೊರಚುಪಡಿಸಿ)

**iii.** ಯಂತ್ರೋಪಕರಣಗಳ ಸ್ಥಗಿತಿ/ ಬಾಯ್ಲರ್ ಸ್ಫೋಟ/ ಎಲೆಕ್ಟ್ರಾನಿಕ್ ಉಪಕರಣಗಳು

**iv.** ಮೇಲೆ ತಿಳಿಸಲಾದ ಅಪಾಯಗಳ ಕಾರ್ಯಾಚರಣೆಯ ನಂತರ ವ್ಯಾಪಾರದಲ್ಲಿಯ ಅಡೆತಡೆ

**(**ಗಮನಿಸಿ: ಮೇಲಿನ **(iii)** ಅಡಿಯಲ್ಲಿ ವ್ಯಾಪಾರದ ಅಡೆತಡೆಯನ್ನು ಸಾಮಾನ್ಯವಾಗಿ ಪ್ಯಾಕೇಜ್ ಕವರ್ ನಲ್ಲಿ ಸೇರಿಸಲಾಗುವುದಿಲ್ಲ ಆದರೆ ಐಚ್ಛಿಕ ಕವರ್ ಆಗಿ ಲಭ್ಯವಿದೆ)

- ✓ ವೈಯಕ್ತಿಕ ಕಾರ್ಯಾಚರಣಾ ಪಾಲಿಸಿಗಳಿಂದ ಒದಗಿಸಲಾದ ಕವರ್ ಗಳಿಗೆ ಹೋಲಿಸಿದರೆ ಈ ಪಾಲಿಸಿಯು ವ್ಯಾಪಕವಾದ ಶ್ರೇಣಿಯ ಕವರ್ ಅನ್ನು ನೀಡುತ್ತದೆ.
- ✓ ಪಾಲಿಸಿಯ ಕಂತು ದರಗಳು ಆಯ್ಕೆಮಾಡಿದ ಕವರ್, ಕ್ಲೇಮ್ ಗಳ ಅನುಭವ ಮತ್ತು ಆಯ್ಕೆ ಮಾಡಿದ ಕಡಿತಗಳು, ಎಮ್ಎಲ್ಒಪಿ ಗಾಗಿ ಅಪಾಯದ ಮೌಲ್ಯಮಾಪನ ವರದಿ ಇತ್ಯಾದಿಗಳನ್ನು ಅವಲಂಬಿಸಿರುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 9**

ಈ ಕೆಳಗಿನವುಗಳಲ್ಲಿ ಯಾವುದು ಕೈಗಾರಿಕೆಗಳ ಎಲ್ಲ ಅಪಾಯಗಳ ವಿಮೆಯಡಿಯಲ್ಲಿ ಕವರ್ ಮಾಡಲಾಗುವುದಿಲ್ಲ**?**

**I.** ಬೆಂಕಿ ವಿಮಾ ಅಭ್ಯಾಸದ ಪ್ರಕಾರ ಬೆಂಕಿ ಮತ್ತು ವಿಶೇಷ ಅಪಾಯಗಳು

**II.** ಲೂಟಿ

**III.** ಯಂತ್ರೋಪಕರಣಗಳ ಸ್ಥಗಿತಿ

**IV.** ಎಲೆಕ್ಟ್ರಾನಿಕ್ ಸಲಕರಣೆ

## J. ಸಾಗರ/ಮರೈನ್ ವಿಮೆ

**ಸಾಗರ/ಮರೈನ್ ವಿಮೆಯನ್ನು ಎರಡು ವಿಧಗಳಾಗಿ ವರ್ಗೀಕರಿಸಲಾಗಿದೆ: ಸಾಗರ/ಮರೈನ್ ಸರಕು ಮತ್ತು ಸಾಗರ/ಮರೈನ್ ಹಲ್**

### *1.* ಸಾಗರ ಸರಕು ವಿಮೆ

'ಸಾಗರ' ಎಂಬ ಪದವು ಸಮುದ್ರದ (ಸಾಗರ) ದುಸ್ಸಾಹಸಗಳಿಂದಾಗುವ ನಷ್ಟವನ್ನು ಮಾತ್ರ ಸೂಚಿಸಬಹುದು ಆದರೆ **ಸಾಗರ/ಮರೈನ್ ಸರಕು ವಿಮೆ**ಯು ಅದಕ್ಕಿಂತ ಸಾಕಷ್ಟು ಹೆಚ್ಚಿನದನ್ನು ಕವರ್ ಮಾಡುತ್ತದೆ. ಇದು ದೇಶದೊಳಗೆ ಮತ್ತು ವಿದೇಶದಲ್ಲಿ ರೈಲು, ರಸ್ತೆ, ಸಮುದ್ರ, ವಾಯು ಅಥವಾ ನೋಂದಾಯಿತ ಪೋಸ್ಟ್ ಮೂಲಕ ಸಾಗಣೆಯ ಸಮಯದಲ್ಲಿ ಸರಕುಗಳ ನಷ್ಟ ಅಥವಾ ಹಾನಿಗೆ ಸಂಬಂಧಿಸಿದಂತೆ ಪರಿಹಾರವನ್ನು ಒದಗಿಸುತ್ತದೆ. ಸರಕುಗಳ ಪ್ರಕಾರವು ವಜ್ರಗಳಿಂದ ಹಿಡಿದು ಗೃಹೋಪಯೋಗಿ ವಸ್ತುಗಳು, ಸಿಮೆಂಟ್, ಧಾನ್ಯಗಳಂತಹ ಬೃಹತ್ ವಸ್ತುಗಳು, ಪ್ರಾಜೆಕ್ಟ್ ಗಳಿಗೆ ದೊಡ್ಡ ಆಯಾಮದ ಸರಕುಗಳು ಇತ್ಯಾದಿಗಳವರೆಗೆ ಇರಬಹುದು.

ದೇಶೀಯ ವ್ಯಾಪಾರದಲ್ಲಿ ಹಾಗೂ ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಸರಕು ವಿಮೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸರಕುಗಳನ್ನು ಮಾರಾಟಗಾರ ಅಥವಾ ಖರೀದಿದಾರರಿಂದ ನಷ್ಟ ಅಥವಾ ಹಾನಿಗಾಗಿ ಕವರ್ ಮಾಡಿರಬೇಕೆಂದು ಹೆಚ್ಚಿನ ಮಾರಾಟದ ಒಪ್ಪಂದಗಳು ಕೇಳುತ್ತವೆ.

**ಸರಕು ಸಾಗಾಣಿಕೆ ವಿಮೆ ಯಾರು ಮಾಡುತ್ತಾರೆ:** ಮಾರಾಟಗಾರ ಅಥವಾ ಸರಕುಗಳ ಖರೀದಿದಾರರು [ಸರಕು] ಮಾರಾಟದ ಒಪ್ಪಂದದ ಆಧಾರದ ಮೇಲೆ ಸರಕುಗಳನ್ನು ವಿಮೆ ಮಾಡಬಹುದು.

ಸಾಗರ ವಿಮಾ ಒಪ್ಪಂದವು ಯಾವುದೇ ದೇಶದ ಗಡಿಯನ್ನು ಮೀರಿ ಸಾಗಣೆಯಲ್ಲಿರುವ ಸರಕುಗಳನ್ನು ಒಳಗೊಂಡಿರುವುದರಿಂದ ಅಂತರಾಷ್ಟ್ರೀಯವಾಗಿ ಅನ್ವಯವಾಗುವ ನಿಬಂಧನೆಗಳನ್ನು ಹೊಂದಿರಬೇಕಾಗಿರುತ್ತದೆ. ಕವರ್ ಗಳು ಅಂತರರಾಷ್ಟ್ರೀಯ ಸಂಪ್ರದಾಯಗಳು ಮತ್ತು ಪಾಲಿಸಿಗೆ ಲಗತ್ತಿಸಲಾದ ಕೆಲವು ಷರತ್ತುಗಳಿಂದ ನಿಯಂತ್ರಿಸಲಾಗುತ್ತದೆ.

ಮೂಲ ಪಾಲಿಸಿ ದಾಖಲೆಯು ಸಾಮಾನ್ಯ ಷರತ್ತುಗಳನ್ನು ಒಳಗೊಂಡಿದ್ದರೆ, ಕವರ್ ಮತ್ತು ವಿನಾಯಿತಿಗಳ ವ್ಯಾಪ್ತಿ ಮತ್ತು ವಿಶೇಷ ಹೊರತುಗಳನ್ನು ಸಾಂಸ್ಥಿಕ ಸರಕು ಷರತ್ತುಗಳು (ಐಸಿಸಿ) ಎಂದು ಕರೆಯಲ್ಪಡುವ ಪ್ರತ್ಯೇಕ ಷರತ್ತುಗಳಿಂದ ಲಗತ್ತಿಸಲಾಗಿದೆ. ಇವುಗಳನ್ನು ಇನ್ ಸ್ಟಿಟ್ಯೂಟ್ ಆಫ್ ಲಂಡನ್ ಅಂಡರ್ ರೈಟರ್ಸ್ ರಚಿಸಿದ್ದಾರೆ.

**a) ಸಾಗರ/ಮೆರೈನ್ ಸರಕು ವಿಮೆಯಡಿಯಲ್ಲಿಯ ಕವರೇಜ್**

ಸರಕು ಪಾಲಿಸಿಗಳು ಮೂಲಭೂತವಾಗಿ ವಸ್ತು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಣೆಯಲ್ಲಿರುವಾಗ ಕವರ್ ಮಾಡುವ ಪ್ರಯಾಣದ ಪಾಲಿಸಿಗಳಾಗಿವೆ. ಆದಾಗ್ಯೂ, ವಿಮಾದಾರರು ತಮ್ಮ ನಿಯಂತ್ರಣದಲ್ಲಿರುವ ಎಲ್ಲಾ ಸಂದರ್ಭಗಳಲ್ಲಿ ಯಾವಾಗಲೂ ಸಮಂಜಸವಾದ ಕಾಳಜಿಯೊಂದಿಗೆ ಕಾರ್ಯನಿರ್ವಹಿಸಬೇಕಾಗುತ್ತದೆ. ಈ ಪಾಲಿಸಿಯ ಮುಖ್ಯ ಲಕ್ಷಣವೆಂದರೆ ಇದು ಒಪ್ಪಿದ ಮೌಲ್ಯದ ಪಾಲಿಸಿಯಾಗಿದೆ. ವಿಮಾದಾರರು ಮತ್ತು ವಿಮಾಗಾರರ ನಡುವೆ ಮೌಲ್ಯಮಾಪನವನ್ನು ಒಪ್ಪಿಕೊಳ್ಳಲಾಗುತ್ತದೆ ಮತ್ತು ವಂಚನೆಯ ಅನುಮಾನವಿಲ್ಲದ ಹೊರತು ಮರುಮೌಲ್ಯಮಾಪನಕ್ಕೆ ಒಳಪಡುವುದಿಲ್ಲ. ವಿಮಾ ಮೊತ್ತದ ಸಮಾವೇಶವು ಸಿಐಎಫ್ + 10% (ವೆಚ್ಚ ವಿಮೆ ಮತ್ತು ಸರಕು + 10%) ಆಗಿದೆ. ಮತ್ತೊಂದು ವಿಶಿಷ್ಟ ವೈಶಿಷ್ಟ್ಯವೆಂದರೆ ಪಾಲಿಸಿಯನ್ನು ಮುಕ್ತವಾಗಿ ವರ್ಗಾಯಿಸಬಹುದು.

ಕವರ್ ಸಾಮಾನ್ಯವಾಗಿ ಪಾಲಿಸಿಯಲ್ಲಿ ಹೆಸರಿಸಲಾದ ಸ್ಥಳದಲ್ಲಿ ಸರಕುಗಳು ಗೋದಾಮಿನಿಂದ ಹೊರಡುವ ಸಮಯದಿಂದ ಪ್ರಾರಂಭವಾಗುತ್ತದೆ ಮತ್ತು ಮಾರಾಟದ ಒಪ್ಪಂದದ ನಿಯಮಗಳನ್ನವಲಂಬಿಸಿ ಪಾಲಿಸಿಯಲ್ಲಿ ಹೆಸರಿಸಲಾದ ಗಮ್ಯಸ್ಥಾನದಲ್ಲಿ ಕೊನೆಗೊಳ್ಳುತ್ತದೆ.

ಅನ್ವಯವಾಗುವ ನಿಯಮಗಳು ಮತ್ತು ಷರತ್ತುಗಳು ಈ ಕೆಳಗೆ ನೀಡಿದ ವಿಷಯಗಳಿಂದ ನಿಯಂತ್ರಿಸಲ್ಪಡುತ್ತವೆ;

i. ಒಳನಾಡಿನ ಸಾಗಣೆಗಾಗಿ ಒಳನಾಡಿನ ಸಾರಿಗೆ ಷರತ್ತು (ಐಟಿಸಿ) ಎ, ಬಿ ಅಥವಾ ಸಿ

ii. ಸಮುದ್ರದ ಮೂಲಕ ಸಾಗಣೆಗಾಗಿ ಸಾಂಸ್ಥಿಕ ಸರಕು ಷರತ್ತು (ಐಸಿಸಿ) ಎ, ಬಿ, ಅಥವಾ ಸಿ

iii. ವಿಮಾನ ಮಾರ್ಗದ ಮೂಲಕ ಸಾಗಣೆಗಾಗಿ ಸಾಂಸ್ಥಿಕ ಸರಕು ಷರತ್ತು (ಐಸಿಸಿ) ಎ, ಬಿ, ಅಥವಾ ಸಿ

ಸಾಂಸ್ಥಿಕ ಸರಕು ಷರತ್ತು ಸಿ ಸರಕು ಸಾಗಿಸುವ ವಾಹನ ಅಥವಾ ಹಡಗಿಗೆ ಅಪಘಾತದಿಂದುಂಟಾದ ನಷ್ಟ ಅಥವಾ ಈ ಕೆಳಗೆ ನೀಡಲಾದ ಯಾವುದೇ ಕಾರಣಗಳಿಂದುಂಟಾದ ಹಾನಿಯಾಗಿರುವ ಕನಿಷ್ಠ ಕವರ್ ಅನ್ನು ಅನುಮತಿಸುತ್ತದೆ:

i. ಬೆಂಕಿ ಅಥವಾ ಸ್ಫೋಟ
ii. ವಾಹನದ ಹಳಿತಪ್ಪುವಿಕೆ ಅಥವಾ ಪಲ್ಟಿ
iii. ಹಡಗು ತೀರ ಬಿಟ್ಟು ಹೋಗುವಿಕೆ(ಸ್ಟ್ರಾಂಡಿಂಗ್), ಹಡಗು ನುಜ್ಜಾಗುವುದು(ಗ್ರೌಂಡಿಂಗ್) ಅಥವಾ ಮುಳುಗುವಿಕೆ (ಹಡಗಿನ ಸಂದರ್ಭದಲ್ಲಿ)
iv. ಬಾಹ್ಯ ವಸ್ತುವಿನೊಂದಿಗೆ ಅಪ್ಪಳಿಸುವುದು/ಘರ್ಷಣೆ
v. ಕಷ್ಟದ ಬಂದರಿನಲ್ಲಿ ಸರಕುಗಳ ವಿಸರ್ಜನೆ
vi. ಸಾಮಾನ್ಯ ಸರಾಸರಿ ತ್ಯಾಗ
vii. ಸರಕುಗಳನ್ನು ಎಸೆಯಬೇಕಾಗುವುದು(ಜೆಟ್ಟಿಸನ್).

ಸಾಂಸ್ಥಿಕ ಸರಕು ಷರತ್ತು ಬಿ ಸಿ ಗಿಂತ ವಿಶಾಲವಾಗಿದೆ. **C** ಯಲ್ಲಿ ಒಳಗೊಂಡಿರುವ ಅಪಾಯಗಳ ಹೊರತಾಗಿ ಇದು ಈ ಕೆಳಗೆ ನೀಡಲಾದ ನಷ್ಟ ಅಥವಾ ಹಾನಿಯನ್ನು ಒಳಗೊಂಡಿರುತ್ತದೆ:

i. ಭೂಕಂಪ, ಜ್ವಾಲಾಮುಖಿ ಸ್ಫೋಟ ಮತ್ತು ಸಿಡಿಲು ಮುಂತಾದ ನೈಸರ್ಗಿಕ (ಎಒಜಿ) ಅಪಾಯಗಳು
ii. ಒಳನಾಡಿನ ಸಾರಿಗೆಯಲ್ಲಿ ಸೇತುವೆಗಳ ಕುಸಿತ
iii. ಸಾಗರ ಸಾಗಣೆಯ ಸಂದರ್ಭದಲ್ಲಿ ಹಡಗಿನಿಂದ ಕಡಲಿನಲ್ಲಿ ಚೆಲ್ಲುವದಿಂದಾಗಿ ಮತ್ತು ಜೋಲಿಯಿಂದಾದ ನಷ್ಟ
iv. ಹಡಗಿನೊಳಗೆ ನೀರು ನುಗ್ಗುವಿಕೆ.

ಸಾಂಸ್ಥಿಕ ಸರಕು ಷರತ್ತು ಎ ವಿಶಾಲವಾದ ಕವರ್ ಆಗಿದ್ದು, ಇದು ಬಿ ಮತ್ತು ಸಿ ಯ ಎಲ್ಲ ಅಪಾಯಗಳನ್ನು ಮತ್ತು ಕೆಲವು ಈ ಕೆಳಗೆ ನೀಡಿದಂತಹ ಯಾವುದೇ ಹೊರತುಗಳನ್ನು ಹೊರತುಪಡಿಸಿ ಇತರ ಅಪಾಯದ ನಷ್ಟ ಅಥವಾ ಹಾನಿಯನ್ನು ಕವರ್ ಮಾಡುತ್ತದೆ:

i. ವಿಮಾದಾರರ ಉದ್ದೇಶಪೂರ್ವಕ ನಡವಳಿಕೆಯಿಂದಾದ ನಷ್ಟ ಅಥವಾ ಹಾನಿ
ii. ಸಾಮಾನ್ಯ ಸೋರಿಕೆ, ಒಡೆಯುವಿಕೆ, ಸವಕಳಿ ಅಥವಾ ತೂಕ / ಪರಿಮಾಣದಲ್ಲಿ ಸಾಮಾನ್ಯ ನಷ್ಟ
iii. ಪ್ಯಾಕಿಂಗ್ ನಲ್ಲಿ ಕೊರತೆ

iv. ಅಂತರ್ಗತ ದುರ್ಗುಣ

v. ವಿಳಂಬಗಳು

vi. ಮಾಲೀಕರ ದಿವಾಳಿತನದಿಂದಾಗಿ ನಷ್ಟ

vii. ಪರಮಾಣು ಅಪಾಯಗಳು

ಒಳನಾಡು, ವಾಯು ಮತ್ತು ಸಮುದ್ರದ ಎಲ್ಲ ಷರತ್ತುಗಳಿಗೆ ಈ ಹೊರತುಗಳು ಸಾಮಾನ್ಯವಾಗಿವೆ. ಕಲ್ಲಿದ್ದಲು, ಬೃಹತ್ ತೈಲ ಮತ್ತು ಚಹಾ ಇತ್ಯಾದಿಗಳಂತಹ ನಿರ್ದಿಷ್ಟ ಸರಕುಗಳ ವ್ಯಾಪಾರಕ್ಕಾಗಿ ಪ್ರತ್ಯೇಕ ಷರತ್ತುಗಳಿವೆ. ಯುದ್ಧ, ಮುಷ್ಕರಗಳು, ಗಲಭೆಗಳು, ನಾಗರಿಕ ಗಲಭೆ ಮತ್ತು ಭಯೋತ್ಪಾದನೆಯನ್ನು ಕವರ್ ಮಾಡಲು ಹೆಚ್ಚುವರಿ ಕಂತು ಪಾವತಿಸುವ ಮೂಲಕ ಸಾಗರ ರಕ್ಷಣೆಯನ್ನು ವಿಸ್ತರಿಸಬಹುದು. ಸಾಗರ ಮತ್ತು ವಾಯುಯಾನ ಪಾಲಿಸಿಗಳು ಯುದ್ಧದ ಅಪಾಯಗಳ ವಿರುದ್ಧ ರಕ್ಷಣೆ ನೀಡುವ ವಿಮೆಯ ಏಕೈಕ ಶಾಖೆಗಳಾಗಿವೆ..

**ಮುಖ್ಯಾಂಶ**

ಸಾಗರ/ಮರ್ರೈನ್ ಪಾಲಿಸಿಯಡಿಯಲ್ಲಿ, ಪ್ರಮಾಣಿತ ಪಾಲಿಸಿ ನಮೂನೆಯಡಿಯಲ್ಲಿ ಮತ್ತು ಪಾಲಿಸಿಗೆ ಲಗತ್ತಿಸಲಾದ ವಿವಿಧ ಷರತ್ತುಗಳಡಿಯಲ್ಲಿ ಒಳಗೊಂಡಿರುವ ಅಪಾಯಗಳು ಸ್ಥೂಲವಾಗಿ ಮೂರು ವರ್ಗಗಳಾಗಿರುತ್ತವೆ:

**i.** ಸಾಗರ/ಮರ್ರೈನ್ ಅಪಾಯಗಳು,

**ii.** ಬಾಹ್ಯ ಅಪಾಯಗಳು ಮತ್ತು

**iii.** ಯುದ್ಧ, ಮುಷ್ಕರ ಗಲಭೆ, ನಾಗರಿಕ ಗಲಭೆ ಮತ್ತು ಭಯೋತ್ಪಾದನೆಯ ಅಪಾಯಗಳು.

---

**b) ವಿವಿಧ ರೀತಿಯ ಸಾಗರ/ಮರ್ರೈನ್ ಪಾಲಿಸಿಗಳು**

**i. ನಿರ್ದಿಷ್ಟ ಪಾಲಿಸಿ**

ಈ ಪಾಲಿಸಿಯು ಒಂದೇ ಸಾಗಣೆಯನ್ನು ಒಳಗೊಳ್ಳುತ್ತದೆ. ಇದು ನಿರ್ದಿಷ್ಟ ಪ್ರಯಾಣ ಅಥವಾ ಸಾರಿಗೆಗೆ ಮಾನ್ಯವಾಗಿರುತ್ತದೆ. ನಿಯಮಿತ ಆಮದು ಮತ್ತು ರಫ್ತು ವ್ಯಾಪಾರದಲ್ಲಿ ತೊಡಗಿರುವ ವ್ಯಾಪಾರಿಗಳು ಅಥವಾ ಒಳನಾಡಿನ ಸಾಗಣೆಯ ಮೂಲಕ ನಿಯಮಿತವಾಗಿ ಸರಕುಗಳನ್ನು ಕಳುಹಿಸುವ ವ್ಯಾಪಾರಿಗಳಿಗೆ ಮುಕ್ತ ಪಾಲಿಸಿಯಂತಹ ವಿಶೇಷ ವ್ಯವಸ್ಥೆಗಳಡಿಯಲ್ಲಿ ವಿಮೆಗಳನ್ನು ವ್ಯವಸ್ಥೆ ಮಾಡಲು ಅನುಕೂಲಕರವಾಗಿದೆ.

**ii. ಮುಕ್ತ ಪಾಲಿಸಿ**

ಸರಕುಗಳ ದೇಶದೊಳಗಿನ ಸಾಗಣೆಯನ್ನು ಮುಕ್ತ ಪಾಲಿಸಿಯಡಿಯಲ್ಲಿ ಕವರ್ ಮಾಡಬಹುದು. ಪಾಲಿಸಿಯು ಒಂದು ವರ್ಷಕ್ಕೆ ಮಾನ್ಯವಾಗಿರುತ್ತದೆ ಮತ್ತು ಈ ಅವಧಿಯಲ್ಲಿಯ ಎಲ್ಲ ರವಾನೆಗಳನ್ನು ವಿಮಾದಾರರು ತಮ್ಮ ನಡುವೆ ಒಪ್ಪಿದಂತೆ ಪಾಕ್ಷಿಕ, ಮಾಸಿಕ ಅಥವಾ ತ್ರೈಮಾಸಿಕ ಆಧಾರದ ಮೇಲೆ ವಿಮಾಗಾರರಿಗೆ ಸೂಚಿಸಬೇಕು..

**iii. ಮುಕ್ತ ಕವರ್**

ಮುಕ್ತ ಕವರ್, ಹೆಚ್ಚಿನ ಸಂಖ್ಯೆಯ ಸಾಗಣೆ/ರವಾನೆಗಳನ್ನು ಕವರ್ ಮಾಡಲು ವಿಮಾದಾರರಿಗೆ ನಿರಂತರ ರಕ್ಷಣೆಯನ್ನು ನೀಡುವ ಒಂದು ವರ್ಷದ ಒಪ್ಪಂದವಾಗಿರುತ್ತದೆ. ಸರಕುಗಳ ಮೇಲಿನ ಕಂತನ್ನು ವಿಮಾದಾರರು ನಿರ್ವಹಿಸುವ ಆಯಾ ನಗದು ಠೇವಣಿ ಖಾತೆಯಿಂದ ಸರಿಹೊಂದಿಸಲಾಗುತ್ತದೆ. ನಿರಂತರ ವ್ಯಾಪಾರ ಹೊಂದಿರುವ ದೊಡ್ಡ ರಫ್ತುದಾರರು ಮತ್ತು ಆಮದುದಾರರಿಗೆ ಮುಕ್ತ ಕವರ್ ಗಳನ್ನು ನೀಡಲಾಗುತ್ತದೆ

ಮುಕ್ತ ಕವರ್ ಗಳು ಒಂದು ವರ್ಷದ ಸಾಗರ ರವಾನೆಗಳ ವಹಿವಾಟುಗಳಿಗೆ ಕವರ್ ನ ನಿಯಮಗಳು ಮತ್ತು ಕಂತು ದರಗಳನ್ನು ನಿಗದಿಪಡಿಸುತ್ತವೆ. ಮುಕ್ತ ಕವರ್ ಒಂದು ಪಾಲಿಸಿಯಾಗಿರುವುದಿಲ್ಲ ಮತ್ತು ಅದನ್ನು ಸ್ಟ್ಯಾಂಪ್ ಮಾಡಲಾಗಿಲ್ಲ. ವಿಮಾ ಪ್ರಮಾಣಪತ್ರವನ್ನು ಪ್ರತಿ ಘೋಷಣೆಗೆ ಸೂಕ್ತ ಮೌಲ್ಯಕ್ಕಾಗಿ ಸ್ಟ್ಯಾಂಪ್ ಮಾಡಲಾಜಾರಿ ಮಾಡಲಾಗುತ್ತದೆ.

**iv. ಸುಂಕ ಮತ್ತು ಹೆಚ್ಚಿದ ಮೌಲ್ಯ ವಿಮೆ**

ಕಸ್ಟಮ್ಸ್ ಸುಂಕದ ಪಾವತಿಯಿಂದಾಗಿ ಸರಕುಗಳ ಮೌಲ್ಯವನ್ನು ಹೆಚ್ಚಿಸಿದರೆ ಅಥವಾ ಇಳಿಸಿದ ದಿನಾಂಕದಂದು ಗಮ್ಯಸ್ಥಾನದಲ್ಲಿ ಸರಕುಗಳ ಮಾರುಕಟ್ಟೆ ಮೌಲ್ಯದಲ್ಲಿ ಹೆಚ್ಚಳವಾದರೆ ಈ ಪಾಲಿಸಿಗಳು ಹೆಚ್ಚುವರಿ ವಿಮೆಯನ್ನು ಒದಗಿಸುತ್ತವೆ.

**2. ಸಾಗರ/ಮರೈನ್ ಹಲ್ ವಿಮೆ**

'ಹಲ್' ಎಂಬ ಪದವು ಹಡಗು ಅಥವಾ ಇತರ ಜಲ ಸಾರಿಗೆ ವಾಹನದ ಹೊರಮೈಯ್ಯನ್ನು ಸೂಚಿಸುತ್ತದೆ.

ವಿವಿಧ ದೇಶಗಳಲ್ಲಿ ಅನ್ವಯವಾಗುವ ಅಂತರರಾಷ್ಟ್ರೀಯ ಷರತ್ತುಗಳ ಪ್ರಕಾರ ಸಾಗರ / ಮರೈನ್ ಹಲ್ ವಿಮೆಯನ್ನು ಮಾಡಲಾಗುತ್ತದೆ. ಸಾಗರ/ಮೆರೈನ್ ಹಲ್ ಕವರ್ ಗಳಲ್ಲಿ ಮೂಲಭೂತವಾಗಿ ಎರಡು ವಿಧಗಳಿವೆ:

a) **ನಿರ್ದಿಷ್ಟ ಪ್ರಯಾಣವನ್ನು ಕವರ್ ಮಾಡುವುದು: ಇಲ್ಲಿ ಬಳಸಲಾದ ಷರತ್ತುಗಳ ಗುಂಪನ್ನು ಸಾಂಘಿಕ ಪ್ರಯಾಣ(ಇನ್‌ಸ್ಟಿಟ್ಯೂಟ್ ವಾಯೇಜ್) ಷರತ್ತುಗಳೆಂದು ಕರೆಯಲಾಗುತ್ತದೆ**

b) **ಅವಧಿಯನ್ನು ಒಳಗೊಳ್ಳುವುದು: ಸಾಮಾನ್ಯವಾಗಿ ಒಂದು ವರ್ಷ. ಇಲ್ಲಿ ಬಳಸಲಾದ ಷರತ್ತುಗಳ ಗುಂಪನ್ನು ಸಾಂಘಿಕ (ಇನ್‌ಸ್ಟಿಟ್ಯೂಟ್ (ಸಮಯ)) ಷರತ್ತುಗಳೆಂದು ಕರೆಯಲಾಗುತ್ತದೆ**

c) ಯುದ್ಧದ ಅಪಾಯಗಳನ್ನು ವಿಶೇಷ ನಿಯಮಗಳಿಂದ ನಿಯಂತ್ರಿಸಲಾಗುತ್ತದೆ ಮತ್ತು ಸಂಗ್ರಹಿಸಿದ ಕಂತುಗಳನ್ನು ಕೇಂದ್ರ ಸರ್ಕಾರಕ್ಕೆ ಜಮಾ ಮಾಡಲಾಗುತ್ತದೆ.

| ಮಾಹಿತಿ |
|---|

**ಹಲ್ ವಿಮೆಯು ಈ ಕೆಳಗಿನ ವಿಮೆಯನ್ನು ಸಹ ಒಳಗೊಂಡಿದೆ:**

i. ದೋಣಿಗಳು, ಲಾಂಚ್ ಗಳು, ಪ್ರಯಾಣಿಕ ಹಡಗುಗಳು ಮುಂತಾದ ಒಳನಾಡ ಹಡಗುಗಳು.

ii. ಹೂಳೆತ್ತುವ ಸಾಧನ(ಡ್ರೆಡ್ಜರ್)ಗಳು (ಯಾಂತ್ರೀಕೃತ ಅಥವಾ ಯಾಂತ್ರಿಕವಲ್ಲದ)

iii. ಮೀನುಗಾರಿಕೆ ಹಡಗುಗಳು (ಯಾಂತ್ರೀಕೃತ ಅಥವಾ ಯಾಂತ್ರೀಕೃತವಲ್ಲದ)

iv. ನೌಕಾಯಾನ ಹಡಗುಗಳು (ಯಾಂತ್ರೀಕೃತ ಅಥವಾ ಯಾಂತ್ರೀಕೃತವಲ್ಲದ)

v. ಬಂದರು ಕಟ್ಟೆ(ಜೆಟ್ಟಿ)ಗಳು ಮತ್ತು ಹಡಗು ಕಟ್ಟೆ(ವಾರ್ವ್ಸ್)ಗಳು

vi. ನಿರ್ಮಾಣದ ಹಂತದಲ್ಲಿರುವ ಹಡಗುಗಳು

---

**ಹಡಗಿನ ಮಾಲೀಕರು ಹಡಗಿನಲ್ಲಿ ಮಾತ್ರವಲ್ಲದೆ,** ವಿಮೆಯ ಅವಧಿಯಲ್ಲಿ ಗಳಿಸಬೇಕಾದ **ಸರಕು ಸಾಗಣೆಯ ಬಾಡಿಗೆಯಲ್ಲಿಯೂ ವಿಮಾಸಕ್ತಿಯನ್ನು ಹೊಂದಿರುತ್ತಾರೆ**. ಸರಕು ಸಾಗಣೆಯೊಂದಿಗೆ ಹಡಗಿನ ಮಾಲೀಕರು ನಿಬಂಧನೆಗಳು ಮತ್ತು ಮಳಿಗೆಗಳನ್ನು ಒಳಗೊಂಡಂತೆ ಹಡಗನ್ನು ಅಳವಡಿಸಲು ಅವರು ಖರ್ಚು ಮಾಡಿದ ಮೊತ್ತದಲ್ಲಿ ವಿಮಾಸಕ್ತಿಯನ್ನು ಹೊಂದಿರುತ್ತಾರೆ. **ಈ ವೆಚ್ಚಗಳನ್ನು ವಿತರಣೆಗಳು ಎಂದು ಕರೆಯಲಾಗುತ್ತದೆ ಮತ್ತು ಒಂದು ಸಮಯದ ಅವಧಿಗೆ ಹಲ್ ಪಾಲಿಸಿಯೊಂದಿಗೆ ಏಕಕಾಲದಲ್ಲಿ ವಿಮೆ ಮಾಡಲಾಗುತ್ತದೆ.**

| ಪ್ರಮುಖ |
|---|

**ವಿಮಾನಯಾನ ವಿಮೆ:** ವಿಮಾನಕ್ಕೆ ವಿಮಾನದ ನಷ್ಟ ಅಥವಾ ಹಾನಿಯನ್ನು ಕವರ್ ಮಾಡುವ ಸಮಗ್ರ ಪಾಲಿಸಿಯು ಲಭ್ಯವಿದೆ ಮತ್ತು ತೃತೀಯ ಪಕ್ಷಗಳಿಗೆ ಮತ್ತು ಪ್ರಯಾಣಿಕರಿಗೆ ವಿಮಾನದ ಕಾರ್ಯಾಚರಣೆಯಿಂದ ಉಂಟಾಗುವ ನಷ್ಟಗಳಿಗೆ ಕಾನೂನು ಹೊಣೆಗಾರಿಕೆಯನ್ನು ಕವರ್ ಮಾಡುತ್ತದೆ.

| **ನಿಮ್ಮನ್ನು ಪರೀಕ್ಷಿಸಿಕೊಳ್ಳಿ 10** |
|---|

ವಿಮೆಯ ಯಾವ ಶಾಖೆಯು ಯುದ್ಧದ ಅಪಾಯಗಳ ವಿರುದ್ಧ ರಕ್ಷಣೆ ನೀಡುತ್ತದೆ?

I. ಸಾಗರ/ಮರೈನ್ ಪಾಲಿಸಿಗಳು

II. ವಾಯುಯಾನ ಪಾಲಿಸಿಗಳು

III. ಮೇಲಿನ ಎರಡೂ

IV. ಮೇಲಿನ ಎರಡೂ ಅಲ್ಲ

---

## K. ಹೊಣೆಗಾರಿಕೆ ಪಾಲಿಸಿಗಳು

ಒಬ್ಬ ವ್ಯಕ್ತಿಯು ಎಷ್ಟೇ ಜಾಗರೂಕರಾಗಿದ್ದರೂ ಅಪಘಾತಗಳನ್ನು ಸಂಪೂರ್ಣವಾಗಿ ತಪ್ಪಿಸಲು ಸಾಧ್ಯವಿಲ್ಲ. ಇದು ಒಬ್ಬರಿಗಾಗುವ ಗಾಯಕ್ಕೆ ಕಾರಣವಾಗಬಹುದು ಮತ್ತು ಅವರ ಆಸ್ತಿಗೆ ಹಾನಿಯಾಗಬಹುದು ಮತ್ತು ಏಕಕಾಲದಲ್ಲಿ ತೃತೀಯ ಪಕ್ಷಗಳಿಗೆ ಗಾಯ ಮತ್ತು ಅವರ ಆಸ್ತಿಗೆ ಹಾನಿಯಾಗಬಹುದು. ಹೀಗೆ ಬಾಧಿತರಾದ ವ್ಯಕ್ತಿಗಳು ಅಂತಹ ನಷ್ಟಕ್ಕೆ ಪರಿಹಾರವನ್ನು ಅಪೇಕ್ಷಿಸುತ್ತಾರೆ.

ಗ್ರಾಹಕರಿಗೆ ಹಾನಿಯನ್ನುಂಟುಮಾಡುವ ಚಾಕೊಲೇಟ್ ಗಳು ಅಥವಾ ಔಷಧಗಳು ಎಂದು ಹೇಳಿ, ತಯಾರಿಸಿದ ಮತ್ತು ಮಾರಾಟ ಮಾಡುವ ಉತ್ಪನ್ನದಲ್ಲಿಯ ದೋಷದಿಂದಲೂ ಹೊಣೆಗಾರಿಕೆಯು ಉದ್ಭವಿಸಬಹುದು. ಅಂತೆಯೇ, ರೋಗಿಯ ತಪ್ಪು ರೋಗನಿರ್ಣಯ / ಚಿಕಿತ್ಸೆಯಿಂದ ಅಥವಾ ಕಕ್ಷಿದಾರರ ದಾವೆಯನ್ನು ವಕೀಲರು ಸರಿಯಾಗಿ ನಿರ್ವಹಿಸದ ಪ್ರಕರಣದಿಂದ ಹೊಣೆಗಾರಿಕೆಯು ಉದ್ಭವಿಸಬಹುದು.

ತೃತೀಯ ಪಕ್ಷ, ಗ್ರಾಹಕರು ಅಥವಾ ರೋಗಿಯು ಆಪಾದಿತ ತಪ್ಪಿಗೆ ಪರಿಹಾರವನ್ನು ಕೋರುವ ಅಂತಹ ಎಲ್ಲ ಸಂದರ್ಭಗಳಲ್ಲಿ, ಪರಿಹಾರದ ಪಾವತಿ ಅಥವಾ ಕ್ಲೇಮ್ ದಾರರು ಸಲ್ಲಿಸಿದ ಮೊಕದ್ದಮೆಗಳನ್ನು ಸಮರ್ಥಿಸುವಲ್ಲಿ ಒಳಗೊಂಡಿರುವ ವೆಚ್ಚಗಳನ್ನು ಪೂರೈಸುವ ಅಗತ್ಯವನ್ನು ಹೆಚ್ಚಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಪಾವತಿಸುವ ಹೊಣೆಗಾರಿಕೆಯಿಂದ ಆರ್ಥಿಕ ನಷ್ಟ ಉಂಟಾಗುತ್ತದೆ. ಅಂತಹ ಹೊಣೆಗಾರಿಕೆಯ ಅಸ್ತಿತ್ವ ಮತ್ತು ಪಾವತಿಸಬೇಕಾದ ಪರಿಹಾರದ ಮೊತ್ತವನ್ನು ಸಿವಿಲ್ ನ್ಯಾಯಾಲಯವು ಆಪಾದಿತ ನಿರ್ಲಕ್ಷ್ಯ/ವಂಚನೆಯ ಬದಿಯನ್ನು ತಿಳಿದುಕೊಂಡು ನಿರ್ಧರಿಸುತ್ತದೆ. ಹೊಣೆಗಾರಿಕೆಯ ವಿಮಾ ಪಾಲಿಸಿಗಳು ಅಂತಹ ಹೊಣೆಗಾರಿಕೆಗಳ ಕವರೇಜ್ ಅನ್ನು ಒದಗಿಸುತ್ತವೆ. ನಾವು ಕೆಲವು ಹೊಣೆಗಾರಿಕೆ ಪಾಲಿಸಿಗಳನ್ನು ನೋಡೋಣ.

**ಶಾಸನಬದ್ಧ ಹೊಣೆಗಾರಿಕೆ**

ಪರಿಹಾರದ ಪಾವತಿಯನ್ನು ಒದಗಿಸುವ ಕೆಲವು ಕಾನೂನುಗಳು ಅಥವಾ ಶಾಸನಗಳಿವೆ. ಆ ಕಾನೂನುಗಳು ಈ ಕೆಳಗಿನಂತಿವೆ:

- ✓ ಸಾರ್ವಜನಿಕ ಹೊಣೆಗಾರಿಕೆ ವಿಮಾ ಕಾಯಿದೆ, **1991** ಮತ್ತು
- ✓ ಉದ್ಯೋಗಿಗಳ ಪರಿಹಾರ ಕಾಯಿದೆ **1923** ಅನ್ನು **2010** ರಲ್ಲಿ ತಿದ್ದುಪಡಿ ಮಾಡಲಾಗಿದೆ

ಅಂತಹ ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ರಕ್ಷಣೆಗಾಗಿ ವಿಮಾ ಪಾಲಿಸಿಗಳು ಲಭ್ಯವಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನೋಡೋಣ.

### 1. ಕಡ್ಡಾಯ ಸಾರ್ವಜನಿಕ ಹೊಣೆಗಾರಿಕೆ ಪಾಲಿಸಿ

ಸಾರ್ವಜನಿಕ ಹೊಣೆಗಾರಿಕೆ ವಿಮಾ ಕಾಯಿದೆ, **1991** ಅಪಾಯಕಾರಿ ವಸ್ತುಗಳನ್ನು ನಿರ್ವಹಿಸುವವರ ಮೇಲೆ ಅಂತಹ ನಿರ್ವಹಣೆಯ ಸಮಯದಲ್ಲಿ ತೃತೀಯ ಪಕ್ಷ ಗಾಯಗೊಂಡರೆ ಅಥವಾ ಅವರ ಆಸ್ತಿ ಹಾನಿಗೊಳಗಾದರೆ ಯಾವುದೇ ತಪ್ಪಿಲ್ಲದ ಆಧಾರದ ಮೇಲೆ ಹೊಣೆಗಾರಿಕೆಯನ್ನು ವಿಧಿಸುತ್ತದೆ. ಅಪಾಯಕಾರಿ ಪದಾರ್ಥಗಳ

ಹೆಸರುಗಳು ಮತ್ತು ಪ್ರತಿಯೊಂದರ ಪ್ರಮಾಣವನ್ನು 'ಕಾಯಿದೆ'ಯಲ್ಲಿ ಪಟ್ಟಿ ಮಾಡಲಾಗಿದೆ. ಪ್ರತಿ ವ್ಯಕ್ತಿಗೆ ಪಾವತಿಸಬೇಕಾದ ಪರಿಹಾರದ ಮೊತ್ತವನ್ನು ಕೆಳಗೆ ತೋರಿಸಿರುವಂತೆ ನಿಗದಿಪಡಿಸಲಾಗಿದೆ.

**ಪಾವತಿಸಬೇಕಾದ ಪರಿಹಾರ**

| | |
|---|---|
| ಮಾರಣಾಂತಿಕ ಅಪಘಾತ | ರೂ. **25,000** |
| ಶಾಶ್ವತ ಒಟ್ಟು ಅಂಗವೈಕಲ್ಯ | ರೂ. **25,000** |
| ಶಾಶ್ವತ ಭಾಗಶಃ ಅಂಗವೈಕಲ್ಯ | ರೂ. **25,000** ಯ **%** ಅಂಗವೈಕಲ್ಯದ **%** ಅನ್ನು ಅವಲಂಬಿಸಿ |
| ತಾತ್ಕಾಲಿಕ ಭಾಗಶಃ ಅಂಗವೈಕಲ್ಯ | ರೂ. **1000** ಪ್ರತಿ ತಿಂಗಳು, ಗರಿಷ್ಠ **3** ತಿಂಗಳು |
| ನಿಜವಾದ ವೈದ್ಯಕೀಯ ವೆಚ್ಚಗಳು | ಗರಿಷ್ಟ **Rs. 12,500** ಗಳವರೆಗೆ |
| ಆಸ್ತಿಗೆ ನಿಜವಾದ ಹಾನಿ ..ಗಳವರೆಗಿನ | ರೂ. **6,000** |

ಕಂತು ಎಒಎ (ಯಾವುದೇ ಒಂದು ಅಪಘಾತ) ಮಿತಿ ಮತ್ತು ಗ್ರಾಹಕರ ವಹಿವಾಟನ್ನು ಆಧರಿಸಿದೆ. ಈ ಪಾಲಿಸಿಯ ವಿಶೇಷ ವೈಶಿಷ್ಟ್ಯವೆಂದರೆ ವಿಮಾದಾರರು ಕಂತಿಗೆ ಸಮನಾದ ಮೊತ್ತವನ್ನು ಪರಿಸರ ಪರಿಹಾರ ನಿಧಿಗೆ ಕೊಡುಗೆಯಾಗಿ ಕಡ್ಡಾಯವಾಗಿ ಪಾವತಿಸಬೇಕಾಗುತ್ತದೆ. ಹೆಚ್ಚಿನ ಸಂಖ್ಯೆಯ ತೃತೀಯ ಪಕ್ಷಗಳು ಬಾಧಿತವಾಗಿದ್ದರೆ ಮತ್ತು ಪಾವತಿಸಬೇಕಾದ ಪರಿಹಾರದ ಒಟ್ಟು ಮೊತ್ತವು ಎ.ಒ.ಎ. ಮಿತಿಯನ್ನು ಮೀರಿದರೆ ಬಾಕಿ ಮೊತ್ತವನ್ನು ನಿಧಿಯಿಂದ ಪಾವತಿಸಲಾಗುತ್ತದೆ.

**2. ಸಾರ್ವಜನಿಕ ಹೊಣೆಗಾರಿಕೆ ಪಾಲಿಸಿ (ಕೈಗಾರಿಕಾ/ಕೈಗಾರಿಕೇತರ ಅಪಾಯಗಳು)**

ಈ ವಿಧದ ಪಾಲಿಸಿಯು ತೃತೀಯ ಪಕ್ಷದ ವೈಯಕ್ತಿಕ ಗಾಯ ಅಥವಾ ಆಸ್ತಿ ನಾಶ [ಟಿಪಿಪಿಐ ಅಥವಾ ಟಿಪಿಪಿಡಿ]ಕ್ಕೆ ಕಾರಣವಾಗುವ ವಿಮಾದಾರರ ತಪ್ಪು/ ನಿರ್ಲಕ್ಷ್ಯದಿಂದ ಉಂಟಾಗುವ ಹೊಣೆಗಾರಿಕೆಯನ್ನು ಕವರ್ ಮಾಡುತ್ತದೆ.

ಹೋಟೆಲ್ ಗಳು, ಸಿನಿಮಾ ಹಾಲ್ ಗಳು, ಆಡಿಟೋರಿಯಂಗಳು, ವಸತಿ ಆವರಣಗಳು, ಕಚೇರಿಗಳು, ಕ್ರೀಡಾಂಗಣಗಳು, ಗೋಡೌನ್ ಗಳು ಮತ್ತು ಅಂಗಡಿಗಳ ಮೇಲೆ ಪರಿಣಾಮ ಬೀರುವ ಕೈಗಾರಿಕಾ ಅಪಾಯಗಳು ಮತ್ತು ಕೈಗಾರಿಕೇತರ ಅಪಾಯಗಳನ್ನು ಒಳಗೊಂಡ ಪ್ರತ್ಯೇಕ ಪಾಲಿಸಿಗಳಿವೆ. ಇದು ಟಿಪಿಪಿಐ/ ಟಿಪಿಪಿಡಿಗೆ ಸಂಬಂಧಿಸಿದಂತೆ ಭಾರತೀಯ ಕಾನೂನಿನ ಪ್ರಕಾರ ಕ್ಲೇಮ್ ದಾರರ ವೆಚ್ಚಗಳು, ಶುಲ್ಕಗಳು ಮತ್ತು ಖರ್ಚುಗಳನ್ನು ಒಳಗೊಂಡಂತೆ ಪರಿಹಾರವನ್ನು ಪಾವತಿಸಲು ಕಾನೂನು ಹೊಣೆಗಾರಿಕೆಯನ್ನು ಕವರ್ ಮಾಡುತ್ತದೆ.

ಪಾಲಿಸಿಯು ಈ ಕೆಳಗಿನವುಗಳನ್ನು ಕವರ್ ಮಾಡುವುದಿಲ್ಲ:

**a)** ಉತ್ಪನ್ನಗಳ ಹೊಣೆ

**b)** ಮಾಲಿನ್ಯದ ಹೊಣೆ

**c)** ಸಾರಿಗೆ ಮತ್ತು

**d)** ಕೆಲಸಗಾರರು/ನೌಕರರಿಗಾದ ಗಾಯಗಳು

**3. ಉತ್ಪನ್ನಗಳ ಹೊಣೆಗಾರಿಕೆ ಪಾಲಿಸಿ**

ಉತ್ಪನ್ನಗಳ ಹೊಣೆಗಾರಿಕೆಯ ವಿಮೆಯ ಬೇಡಿಕೆಯು ಇಂದು ತಯಾರಿಸಲ್ಪಟ್ಟ ಮತ್ತು ಸಾರ್ವಜನಿಕರಿಗೆ ಮಾರಾಟವಾಗುವ ವಿವಿಧ ರೀತಿಯ ಉತ್ಪನ್ನಗಳಿಂದಾಗಿ (ಉದಾಹರಣೆಗೆ ಪೂರ್ವಸಿದ್ಧ ಆಹಾರ ಪದಾರ್ಥಗಳು, ಅನಿಲ ಪಾನೀಯ, ಔಷಧಿಗಳು ಮತ್ತು ಚುಚ್ಚುಮದ್ದುಗಳು, ವಿದ್ಯುತ್ ಉಪಕರಣಗಳು, ಯಾಂತ್ರಿಕ ಉಪಕರಣಗಳು, ರಾಸಾಯನಿಕಗಳು ಇತ್ಯಾದಿ) ಹುಟ್ಟಿಕೊಂಡಿದೆ. ಉತ್ಪನ್ನದಲ್ಲಿಯ ದೋಷವು ಸಾವು, ದೈಹಿಕ ಗಾಯ ಅಥವಾ ಅನಾರೋಗ್ಯ ಅಥವಾ ತೃತೀಯ ಪಕ್ಷಗಳ ಆಸ್ತಿಗೆ ಹಾನಿಯನ್ನುಂಟುಮಾಡಿದರೆ, ಅದು ಕ್ಲೇಮ್ ಉದ್ಭವಿಸಲು ಕಾರಣವಾಗಬಹುದು. ಉತ್ಪನ್ನ ಹೊಣೆಗಾರಿಕೆ ಪಾಲಿಸಿಗಳು ವಿಮಾದಾರರ ಈ ಹೊಣೆಗಾರಿಕೆಯನ್ನು ಕವರ್ ಮಾಡುತ್ತವೆ.

ರಫ್ತು ಮತ್ತು ದೇಶೀಯ ಮಾರಾಟಕ್ಕೆ ಕವರ್ ಲಭ್ಯವಿದೆ.

**4. ಲಿಫ್ಟ್ (ತೃತೀಯ ಪಕ್ಷ) ಹೊಣೆಗಾರಿಕೆ ವಿಮೆ**

ಲಿಫ್ಟ್ ಗಳ ಬಳಕೆ ಮತ್ತು ಕಾರ್ಯಾಚರಣೆಯಿಂದ ಉಂಟಾಗುವ ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಕಟ್ಟಡಗಳ ಮಾಲೀಕರಿಗೆ ಪಾಲಿಸಿಯು ನಷ್ಟ ಪರಿಹಾರವನ್ನು ಒದಗಿಸುತ್ತದೆ. ಇದು ಈ ಕೆಳಗೆ ನೀಡಿದ ಕಾನೂನು ಬಾಧ್ಯತೆಗಳನ್ನು ಕವರ್ ಮಾಡುತ್ತದೆ:

**a)** ಯಾವುದೇ ವ್ಯಕ್ತಿಯ ಸಾವು / ದೈಹಿಕ ಗಾಯ (ವಿಮಾದಾರರ ಉದ್ಯೋಗಿಗಳನ್ನು ಹೊರತುಪಡಿಸಿ)

**b)** ಆಸ್ತಿಗಾದ ಹಾನಿ (ವಿಮಾದಾರ ಸ್ವಂತ ಅಥವಾ ಉದ್ಯೋಗಿಗಳ ಆಸ್ತಿಯನ್ನು ಹೊರತುಪಡಿಸಿ)

ಕಂತು ದರಗಳು ಪರಿಹಾರದ ಮಿತಿ, ಯಾವುದೇ ಒಬ್ಬ ವ್ಯಕ್ತಿ, ಯಾವುದೇ ಒಂದು ಅಪಘಾತ ಮತ್ತು ಯಾವುದೇ ಒಂದು ವರ್ಷವನ್ನು ಅವಲಂಬಿಸಿರುತ್ತದೆ.

**5. ವೃತ್ತಿಪರ ಹೊಣೆಗಾರಿಕೆ**

ತಮ್ಮ ವೃತ್ತಿಪರ ಕರ್ತವ್ಯಗಳ ನಿರ್ವಹಣೆಯಲ್ಲಿಯ ನಿರ್ಲಕ್ಷ್ಯದಿಂದ ಉಂಟಾಗುವ ಹಾನಿಯನ್ನು ಪಾವತಿಸಲು ಅವರ ಕಾನೂನು ಬಾಧ್ಯತೆಯ ವಿರುದ್ಧ ವೃತ್ತಿಪರರಿಗೆ ವಿಮಾ ರಕ್ಷಣೆಯನ್ನು ಒದಗಿಸಲು ವೃತ್ತಿಪರ ಪರಿಹಾರಗಳನ್ನು ವಿನ್ಯಾಸಗೊಳಿಸಲಾಗಿದೆ. ಇಂತಹ ಕವರ್ ಗಳು ವೈದ್ಯರ ಆಸ್ಪತ್ರೆಗಳಿಗೆ; ಎಂಜಿನಿಯರ್ ರು, ವಾಸ್ತುಶಿಲ್ಪಿಗಳು; ಚಾರ್ಟರ್ಡ್ ಅಕೌಂಟೆಂಟ್ ರು, ಹಣಕಾಸು ಸಲಹೆಗಾರರು, ವಕೀಲರು, ವಿಮಾ ದಲ್ಲಾಳಿಗಳಿಗೆ ಲಭ್ಯವಿರುತ್ತವೆ.

**6. ನಿರ್ದೇಶಕರು ಮತ್ತು ಅಧಿಕಾರಿಗಳ ಹೊಣೆಗಾರಿಕೆ ಪಾಲಿಸಿ**

ಕಂಪನಿಯ ನಿರ್ದೇಶಕರು ಮತ್ತು ಅಧಿಕಾರಿಗಳು ನಂಬಿಕೆ ಮತ್ತು ಜವಾಬ್ದಾರಿಯ ಸ್ಥಾನಗಳನ್ನು ಹೊಂದಿರುತ್ತಾರೆ. ಕಂಪನಿಯ ವ್ಯವಹಾರಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆಯಲ್ಲಿ ಅವರು ಮಾಡಿದ ತಪ್ಪಾದ

ಕೃತ್ಯಗಳಿಗಾಗಿ ಷೇರುದಾರರು, ಉದ್ಯೋಗಿಗಳು, ಸಾಲಗಾರರು ಮತ್ತು ಕಂಪನಿಯ ಇತರ ಮಧ್ಯಸ್ಥಗಾರರಿಗೆ ಹಾನಿಯನ್ನು ಪಾವತಿಸಲು ಅವರು ಜವಾಬ್ದಾರರಾಗಬಹುದು. ಅಂತಹ ಹೊಣೆಗಾರಿಕೆಯನ್ನು ಸರಿದೂಗಿಸಲು ಈ ಪಾಲಿಸಿಯನ್ನು ರೂಪಿಸಲಾಗಿದೆ ಮತ್ತು ಅವರ ಎಲ್ಲ ನಿರ್ದೇಶಕರನ್ನು ಕವರ್ ಮಾಡಲು ಕಂಪನಿಗೆ ನೀಡಲಾಗುತ್ತದೆ.

**7. ಉದ್ಯೋಗಿಗಳ ಪರಿಹಾರ ವಿಮೆ**

ಈ ಪಾಲಿಸಿಯು ವಿಮಾದಾರರಿಗೆ ಅವರ ಉದ್ಯೋಗದಲ್ಲಿರುವಾಗ ಅವರ ಉದ್ಯೋಗಿಗಳಿಗೆ ಅಪಘಾತದಿಂದ ಉಂಟಾಗುವ ಗಾಯ ಅಥವಾ ಉದ್ಯೋಗದ ದೆಸೆಯಿಂದ ಕಾಯಿಲೆಯಿಂದ ಬಳಲಿದರೆ ಪರಿಹಾರವನ್ನು ಪಾವತಿಸಲು ಅವರ ಕಾನೂನು ಹೊಣೆಗಾರಿಕೆಗೆ ಸಂಬಂಧಿಸಿದಂತೆ ಪರಿಹಾರವನ್ನು ಒದಗಿಸುತ್ತದೆ. ಇದನ್ನು ಕೆಲಸಗಾರರ ಪರಿಹಾರ ವಿಮೆ ಎಂದೂ ಕರೆಯುತ್ತಾರೆ.

**ಮಾರುಕಟ್ಟೆಯಲ್ಲಿ ಎರಡು ರೀತಿಯ ವಿಮೆಗಳು ಪ್ರಚಲಿತದಲ್ಲಿವೆ::**

a) **ಕೋಷ್ಟಕ ಎ:** ನೌಕರರ ಪರಿಹಾರ ಕಾಯಿದೆ, **1923, (**ಕಾರ್ಮಿಕರ ಪರಿಹಾರ ಕಾಯಿದೆ, **1923),** ಮಾರಣಾಂತಿಕ ಅಪಘಾತ ಕಾಯಿದೆ, **1855** ಮತ್ತು ಸಾಮಾನ್ಯ ಕಾನೂನಿನಡಿಯಲ್ಲಿ ಉದ್ಯೋಗಿಗಳ ಅಪಘಾತಗಳಿಗೆ ಕಾನೂನು ಹೊಣೆಗಾರಿಕೆಯ ವಿರುದ್ಧ ಪರಿಹಾರ.

b) **ಟೇಬಲ್ ಬಿ:** ಮಾರಣಾಂತಿಕ ಅಪಘಾತಗಳ ಕಾಯಿದೆ, **1855** ಮತ್ತು ಸಾಮಾನ್ಯ ಕಾನೂನಿನಡಿಯಲ್ಲಿ ಕಾನೂನು ಹೊಣೆಗಾರಿಕೆಯ ವಿರುದ್ಧ ಪರಿಹಾರ.

ಪ್ರಸ್ತಾವನೆ ನಮೂನೆಯಲ್ಲಿ ಘೋಷಿಸಿದ ನೌಕರರ ಅಂದಾಜು ವೇತನದ ಮೇಲೆ ಕಂತಿನ ದರವನ್ನು ಅನ್ವಯಿಸಲಾಗುತ್ತದೆ.

ಪಾಲಿಸಿಯನ್ನು ಈ ಕೆಳಗಿನವುಗಳನ್ನು ಕವರ್ ಮಾಡಲು ವಿಸ್ತರಿಸಬಹುದು:

i. ಗಾಯಗೊಂಡ ಉದ್ಯೋಗಿಗಳ ಗಾಯಗಳ ಚಿಕಿತ್ಸೆಗಾಗಿ, ನಿರ್ದಿಷ್ಟ ಮೊತ್ತದವರೆಗೆ ವಿಮಾದಾರರಿಂದ ಭರಿಸಲಾದ ವೈದ್ಯಕೀಯ ಮತ್ತು ಆಸ್ಪತ್ರೆ ವೆಚ್ಚಗಳು

ii. ಕಾಯಿದೆಯಲ್ಲಿ ಪಟ್ಟಿ ಮಾಡಲಾದ ಔದ್ಯೋಗಿಕ ರೋಗಗಳಿಗೆ ಹೊಣೆಗಾರಿಕೆ

iii. ಗುತ್ತಿಗೆದಾರರ ಉದ್ಯೋಗಿಗಳೆಡೆಗೆ ಹೊಣೆಗಾರಿಕೆ

| ನಿಮ್ಮನ್ನು ಪರೀಕ್ಷಿಸಿಕೊಳ್ಳಿ 11 |
|---|

ಸಾರ್ವಜನಿಕ ಹೊಣೆಗಾರಿಕೆ ವಿಮಾ ಕಾಯಿದೆ, **1991**ಯಡಿಯಲ್ಲಿ, ಮಾರಣಾಂತಿಕವಲ್ಲದ ಅಪಘಾತಗಳಿಗೆ ನಿಜವಾದ ವೈದ್ಯಕೀಯ ವೆಚ್ಚಗಳಿಗೆ ಎಷ್ಟು ಪರಿಹಾರವನ್ನು ಪಾವತಿಸಬೇಕು?

I. ರೂ. 6,250

II. ರೂ, 12,500

**III.** ರೂ. **25,000**

**IV.** ರೂ. **50,000**

| ನಿಮ್ಮನ್ನು ಪರೀಕ್ಷಿಸಿರಿ ಪ್ರಶ್ನೆಗಳಿಗೆ ಉತ್ತರಗಳು |
|---|

**ಉತ್ತರ 1 - ಸರಿಯಾದ ಉತ್ತರ III ಆಗಿದೆ**

**ಉತ್ತರ 2 - ಸರಿಯಾದ ಉತ್ತರ I ಆಗಿದೆ**

**ಉತ್ತರ 3 - ಸರಿಯಾದ ಉತ್ತರ IV ಆಗಿದೆ**

**ಉತ್ತರ 4 - ಸರಿಯಾದ ಉತ್ತರ II ಆಗಿದೆ**

**ಉತ್ತರ 5 - ಸರಿಯಾದ ಉತ್ತರ I ಆಗಿದೆ**

**ಉತ್ತರ 6 - ಸರಿಯಾದ ಉತ್ತರ IV ಆಗಿದೆ**

**ಉತ್ತರ 7 - ಸರಿಯಾದ ಉತ್ತರ III ಆಗಿದೆ**

**ಉತ್ತರ 8 - ಸರಿಯಾದ ಉತ್ತರ II ಆಗಿದೆ**

**ಉತ್ತರ 9 - ಸರಿಯಾದ ಉತ್ತರ II ಆಗಿದೆ**

**ಉತ್ತರ 10 - ಸರಿಯಾದ ಉತ್ತರ III ಆಗಿದೆ**

**ಉತ್ತರ 11 - ಸರಿಯಾದ ಉತ್ತರ II ಆಗಿದೆ**

# ಅಧ್ಯಾಯ G-05

# ಸಾಮಾನ್ಯ ವಿಮಾ ಕ್ಲೇಮ್ ಗಳು

## ಅಧ್ಯಾಯ ಪರಿಚಯ

ಆರಂಭದಲ್ಲಿ ಮಾಡಿದ ನಷ್ಟದ ಸಂದರ್ಭದಲ್ಲಿ ವಿಮಾದಾರನಿಗೆ ಪರಿಹಾರವನ್ನು ನೀಡುವ ಭರವಸೆಯು ಯಾವುದೇ ವಿಮಾ ಒಪ್ಪಂದದ ತಿರುಳಾಗಿದೆ. ಈ ಅಧ್ಯಾಯವು ನಷ್ಟ ಸಂಭವಿಸಿದ ಸಮಯದಿಂದ, ಕ್ಲೇಮ್ ಇತ್ಯರ್ಥದ ಸಂಪೂರ್ಣ ಪ್ರಕ್ರಿಯೆಯನ್ನು ಗ್ರಹಿಸಲು ಸುಲಭವಾಗುವಂತೆ ಕಾರ್ಯವಿಧಾನಗಳು ಮತ್ತು ದಾಖಲೆಗಳ ಬಗ್ಗೆ ಚರ್ಚಿಸುತ್ತದೆ. ಇದು ವಿಮಾದಾರರು ಅಥವಾ ವಿಮಾಗಾರರಿಂದ ವಿವಾದಿತ ಕ್ಲೇಮ್ ಗಳೊಂದಿಗೆ ವ್ಯವಹರಿಸುವ ವಿಧಾನವನ್ನು ವಿವರಿಸುತ್ತದೆ.

## ಕಲಿಕೆಯ ಫಲಿತಾಂಶಗಳು

**A.** ಕ್ಲೇಮ್ ಗಳ ಇತ್ಯರ್ಥದ ಪ್ರಕ್ರಿಯೆ

**B.** ಸರ್ವೇಕ್ಷಣದಾರರು ಮತ್ತು ನಷ್ಟ ಮೌಲ್ಯಮಾಪಕರ ಪಾತ್ರ

---

ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ, ನೀವು ಹೀಗೆ ಈ ಕೆಳಗಿನ ವಿಷಯಗಳನ್ನು ಅರಿತುಕೊಳ್ಳಬಹುದು:

1. ಕ್ಲೇಮ್ ಇತ್ಯರ್ಥ ಕಾರ್ಯಗಳ ಪ್ರಾಮುಖ್ಯತೆ ಬಗೆಗೆ ವಾದಿಸುವುದು
2. ನಷ್ಟದ ಸೂಚನೆಯ ಕಾರ್ಯವಿಧಾನಗಳನ್ನು ವಿವರಿಸುವುದು
3. ಕ್ಲೇಮ್ ನ ತನಿಖೆ ಮತ್ತು ಮೌಲ್ಯಮಾಪನವನ್ನು ಬೆಲೆ ನಿರ್ಣಯಿಸುವುದು
4. ಸರ್ವೇಕ್ಷಣದಾರರು ಮತ್ತು ನಷ್ಟ ಮೌಲ್ಯಮಾಪಕರ ಪ್ರಾಮುಖ್ಯತೆಯನ್ನು ವಿವರಿಸುವುದು
5. ಕ್ಲೇಮ್ ನಮೂನೆ(ಫಾರ್ಮ್)ಗಳಲ್ಲಿರುವ ವಿಷಯಗಳನ್ನು ವಿವರಿಸುವುದು
6. ಕ್ಲೇಮ್ ಗಳ ಹೊಂದಾಣಿಕೆ ಮತ್ತು ಇತ್ಯರ್ಥವನ್ನು ವಿವರಿಸುವುದು

## A. ಕ್ಲೇಮ್ ಇತ್ಯರ್ಥದ ಪ್ರಕ್ರಿಯೆ

### 1. ಕ್ಲೇಮ್ ಗಳ ಇತ್ಯರ್ಥದ ಮಹತ್ವ

ನಷ್ಟದ ಘಟನೆಯ ಸಂಭವಿಸಿದ ಮೇಲೆ ಪಾಲಿಸಿದಾರರ ಕ್ಲೇಮ್ ಗಳನ್ನು ಇತ್ಯರ್ಥಪಡಿಸುವುದು ವಿಮಾ ಕಂಪನಿಯ ಪ್ರಮುಖ ಕಾರ್ಯವಾಗಿದೆ. ಈ ಭರವಸೆಯನ್ನು ವಿಮಾಗಾರರು ಪಾಲಿಸಿದಾರರಿಗೆ ಪಾವತಿಸುವಲ್ಲಿ ಅಥವಾ ತೃತೀಯ ಪಕ್ಷದಿಂದ ವಿಮಾದಾರರ ವಿರುದ್ಧ ಮಾಡಿದ ಕ್ಲೇಮ್ ಗಳನ್ನು ಪಾವತಿಸುವಲ್ಲಿ ತ್ವರಿತ, ನ್ಯಾಯೋಚಿತ ಮತ್ತು ಸಮಾನವಾದ ಸೇವೆಯನ್ನು ಒದಗಿಸುವ ಮೂಲಕ ಪೂರೈಸುತ್ತಾರೆ.

ಜೀವೇತರ ವಿಮಾ ಕಂಪನಿಗಳಲ್ಲಿಯ ಒಂದು ಕಂಪನಿಯ ಸಮಿತಿ ಕೋಣೆ(ಬೋರ್ಡ್ ರೂಮ್)ಯಲ್ಲಿ "ಸಾಧ್ಯವಾದರೆ ಪಾವತಿಸಿ; ಅಗತ್ಯವೇ ಇದ್ದರೆ ನಿರಾಕರಿಸಿ" ಎಂದು ಬರೆಯಲಾಗಿತ್ತು. ಅದು ವಿಮೆಯ ಉದಾತ್ತ ವ್ಯವಹಾರದ ಆತ್ಮವಾಗಿದೆ.

**ಕ್ಲೇಮ್ ಗಳನ್ನು ವೃತ್ತಿಪರವಾಗಿ ಇತ್ಯರ್ಥಪಡಿಸುವುದು ವಿಮಾ ಕಂಪನಿಯ ಅತಿದೊಡ್ಡ ಜಾಹೀರಾತೆಂದು ಪರಿಗಣಿಸಲಾಗಿದೆ.**

#### a) ತ್ವರಿತತೆ

ವಿಮಾದಾರರು ಸಾಂಸ್ಥಿಕ ಗ್ರಾಹಕ(ಕಾರ್ಪೊರೇಟ್ ಕ್ಲೈಂಟ್)ರಾಗಿರಲಿ ಅಥವಾ ವ್ಯಕ್ತಿಯಾಗಿರಲಿ ಅಥವಾ ನಷ್ಟದ ಗಾತ್ರವು ದೊಡ್ಡದಾಗಿರಲಿ ಅಥವಾ ಚಿಕ್ಕದಾಗಿರಲಿ ಕ್ಲೇಮ್ ಗಳ ತ್ವರಿತ ಪರಿಹಾರ ಬಹಳ ಮುಖ್ಯವಾಗಿರುತ್ತದೆ. ನಷ್ಟದ ನಂತರ ವಿಮಾದಾರರಿಗೆ ಸಾಧ್ಯವಾದಷ್ಟು ಬೇಗ ವಿಮಾ ಪರಿಹಾರದ ಅಗತ್ಯವಿರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ವಿಮಾದಾರರು ನಷ್ಟದ ನಂತರ ಸಾಧ್ಯವಾದಷ್ಟು ಬೇಗ - ತ್ವರಿತವಾಗಿ ಹಣವನ್ನು ಪಡೆದರೆ, ಅದು ಅವರಿಗೆ ಗರಿಷ್ಠ ಪ್ರಯೋಜನವಾಗಿದೆ. ವಿಮಾದಾರರಿಗೆ ಹೆಚ್ಚಿನ ಅಗತ್ಯವಿರುವಾಗ ಕ್ಲೇಮ್ ಮೊತ್ತವನ್ನು ಪಾವತಿಸುವುದು ವಿಮಾ ಕಂಪನಿಯ ಕರ್ತವ್ಯವಾಗಿದೆ.

#### b) ವೃತ್ತಿಪರತೆ

ವಿಮಾ ಅಧಿಕಾರಿಗಳು ಪ್ರತಿಯೊಂದು ಕ್ಲೇಮ್ ಅನ್ನು ಅದರ ಅರ್ಹತೆಯ ಮೇಲೆ ಪರಿಗಣಿಸುತ್ತಾರೆ ಮತ್ತು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವ ಎಲ್ಲ ದಾಖಲೆಗಳನ್ನು ಪರಿಶೀಲಿಸದೆ ಕ್ಲೇಮ್ ಅನ್ನು ತಿರಸ್ಕರಿಸಲು ಪೂರ್ವಾಗ್ರಹ ಅಥವಾ ಪೂರ್ವ-ಕಲ್ಪಿತ ಕಲ್ಪನೆಗಳನ್ನು ಅನ್ವಯಿಸುವುದಿಲ್ಲ.

i. ನಷ್ಟ ನಿಜವಾಗಿಯೂ ಸಂಭವಿಸಿದೆಯೇ?

ii. ಹಾಗಿದ್ದಲ್ಲಿ, ನಷ್ಟವನ್ನುಂಟುಮಾಡುವ ಘಟನೆಯೇ ನಿಜವಾಗಿಯೂ ಹಾನಿಯನ್ನುಂಟುಮಾಡಿದೆಯೇ?

iii. ಈ ಘಟನೆಯಿಂದಾದ ಹಾನಿಯ ಪ್ರಮಾಣ.

iv. ನಷ್ಟಕ್ಕೆ ನಿಜವಾದ ಕಾರಣವೇನು?

v. ನಷ್ಟವನ್ನು ಪಾಲಿಸಿಯಡಿಯಲ್ಲಿ ಕವರ್ ಮಾಡಲಾಗಿತ್ತೇ?

vi. ಒಪ್ಪಂದ/ಪಾಲಿಸಿ ಷರತ್ತುಗಳ ಪ್ರಕಾರ ಕ್ಲೇಮ್ ಅನ್ನು ಪಾವತಿಸಲು ಯೋಗ್ಯವಾಗಿದೆಯೇ?

vii. ಹಾಗಿದ್ದಲ್ಲಿ, ಎಷ್ಟು ಪಾವತಿಸಬೇಕು?

ಈ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ವಿಮಾ ಕಂಪನಿಯು ಕಂಡುಹಿಡಿಯಬೇಕು.

ಕ್ಲೇಮ್ ಗಳನ್ನು ಪ್ರಕ್ರಿಯೆಗೊಳಿಸುವುದು ಒಂದು ಪ್ರಮುಖ ಚಟುವಟಿಕೆಯಾಗಿದೆ. ಎಲ್ಲ ಕ್ಲೇಮ್ ಗಳ ನಮೂನೆಗಳು, ಕಾರ್ಯವಿಧಾನಗಳು ಮತ್ತು ಪ್ರಕ್ರಿಯೆಗಳನ್ನು ಕಂಪನಿಯು ಎಚ್ಚರಿಕೆಯಿಂದ ವಿನ್ಯಾಸಗೊಳಿಸಿದ್ದು, ಪಾಲಿಸಿಯಡಿಯಲ್ಲಿ 'ಪಾವತಿಸಬೇಕಾದ' ಎಲ್ಲಾ ಕ್ಲೇಮ್ ಗಳನ್ನು ತ್ವರಿತವಾಗಿ ಪಾವತಿಸಲಾಗುತ್ತದೆ ಮತ್ತು ಪಾವತಿಸಲಾಗದವುಗಳನ್ನು ಪಾವತಿಸಲಾಗುವುದಿಲ್ಲ.

ವಿಮಾದಾರರಿಗೆ ತಿಳಿದಿರುವ ಕಂಪನಿಯ ಪ್ರತಿನಿಧಿಯಾಗಿರುವುದರಿಂದ, ಏಜೆಂಟರು ಎಲ್ಲ ಸಂಬಂಧಿತ ನಮೂನೆ(ಫಾರ್ಮ್)ಗಳನ್ನು ಸರಿಯಾದ ಮಾಹಿತಿಯೊಂದಿಗೆ ಸರಿಯಾಗಿ ಭರ್ತಿ ಮಾಡಲಾಗಿದೆ, ನಷ್ಟವನ್ನು ಸಾಬೀತುಪಡಿಸುವ ಎಲ್ಲಾ ದಾಖಲೆಗಳನ್ನು ಲಗತ್ತಿಸಲಾಗಿದೆ ಮತ್ತು ಎಲ್ಲ ನಿಗದಿತ ಕಾರ್ಯವಿಧಾನಗಳನ್ನು ಸಮಯೋಚಿತವಾಗಿ ಅನುಸರಿಸಲಾಗುತ್ತದೆ ಮತ್ತು ಸರಿಯಾಗಿ ಸಲ್ಲಿಸಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಬೇಕು. ಕಂಪನಿಗೆ. ನಷ್ಟದ ಸಮಯದಲ್ಲಿ ಏಜೆಂಟರ ಪಾತ್ರವನ್ನು ಈಗಾಗಲೇ ಚರ್ಚಿಸಲಾಗಿದೆ.

2. **ನಷ್ಟದ ಸೂಚನೆ ಅಥವಾ ತಿಳಿಸುವುದು**

ನಷ್ಟವನ್ನು ತಕ್ಷಣವೇ ವಿಮಾಗಾರರಿಗೆ ತಿಳಿಸಬೇಕೆಂದು ಪಾಲಿಸಿ ಷರತ್ತುಗಳು ಹೇಳುತ್ತವೆ. ವಿಮಾಗಾರರಿಗೆ ನಷ್ಟದ ಪ್ರಾರಂಭಿಕ ಹಂತಗಳಲ್ಲಿ ತನಿಖೆಯನ್ನು ನಡೆಸುವುದನ್ನು ಅನುಮತಿಸುವುದು ತಕ್ಷಣ ಸೂಚನೆ ನೀಡುವ ಈ ಪಾಲಿಸಿ ಷರತ್ತಿನ ಉದ್ದೇಶವಾಗಿದೆ. ವಿಳಂಬಗಳು ನಷ್ಟಕ್ಕೆ ಸಂಬಂಧಿಸಿದ ಮೌಲ್ಯಯುತ ಮಾಹಿತಿಯ ನಷ್ಟಕ್ಕೆ ಕಾರಣವಾಗಬಹುದು. ಅದರಿಂದ ವಿಮಾಗಾರರು ನಷ್ಟವನ್ನು ಕಡಿಮೆಮಾಡಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಮತ್ತು ಹಾನಿಗೊಂಡ ವಸ್ತುಗಳನ್ನು ರಕ್ಷಿಸಲು ತೆಗೆದುಕೊಳ್ಳಬೇಕಾದ ಹಂತಗಳನ್ನು ಸೂಚಿಸಲು ಸಹ ಸಾಧ್ಯವಾಗಬಹುದು. ನಷ್ಟದ ಸೂಚನೆಯನ್ನು ಸೂಕ್ತವಾಗಿ ಶಕ್ಯವಾದಷ್ಟು ತೀವ್ರತೆಯಿಂದ ನೀಡಬೇಕು.

ಪ್ರಾರಂಭಿಕ ಪರೀಕ್ಷಣೆ / ತನಿಖೆಯ ನಂತರ ಕ್ಲೇಮ್ ಗೆ ಒಂದು ಸಂಖ್ಯೆಯನ್ನು ನೀಡಲಾಗುತ್ತದೆ ಮತ್ತು ಕ್ಲೇಮ್ ದಾಖಲೆಯಲ್ಲಿ ವಿಮಾದಾರರ ಹೆಸರು, ಅಂದಾಜಿಸಲಾದ ನಷ್ಟದ ಮೊತ್ತ, ನಷ್ಟದ ದಿನಾಂಕಗಳಂದಿಗೆ ನೋಂದಾಯಿಸಲಾಗುತ್ತದೆ ಆನಂತರ ಕ್ಲೇಮ್ ಪ್ರಕ್ರಿಯೆಗೊಳಿಸಲು ಸಿದ್ಧವಾಗಿದೆ.

**ಕೆಲವು ಪಾಲಿಸಗಳಡಿಯಲ್ಲಿ (ಉದಾ. ದರೋಡೆ) ಸೂಚನೆಯನ್ನು ಪೋಲೀಸ ಅಧಿಕಾರಿಗಳಿಗೆ ಸಹ ನೀಡಬೇಕಾಗುತ್ತದೆ. ರೈಲು ಸರಕು ಸಾಗಣೆ ಪಾಲಿಸಿಗಳಡಿಯಲ್ಲಿ ರೈಲ್ವೇಗಳಿಗೆ ನೋಟೀಸನ್ನು ಕೊಡಬೇಕಾಗುತ್ತದೆ.**

3. **ತನಿಖೆ ಮತ್ತು ಮೌಲ್ಯಮಾಪನ**

**a) ಸಮೀಕ್ಷೆ**

ವಿಮಾದಾರರಿಂದ ಕ್ಲೇಮ್ ನಮೂನೆಯನ್ನು ಸ್ವೀಕರಿಸಿದ ನಂತರ ವಿಮಾಗಾರರು ನಷ್ಟದ ತನಿಖೆ ಮತ್ತು ಮೌಲ್ಯಮಾಪನದ ಬಗ್ಗೆ ನಿರ್ಧರಿಸುತ್ತಾರೆ. ಕ್ಲೇಮ್ ಮೊತ್ತವು ಚಿಕ್ಕದಾಗಿದ್ದರೆ, ನಷ್ಟದ ಕಾರಣ ಮತ್ತು ನಷ್ಟದ ಪ್ರಮಾಣವನ್ನು ನಿರ್ಧರಿಸಲು ವಿಮಾಗಾರರ ಅಧಿಕಾರಿಗಳು ತನಿಖೆಯನ್ನು ಮಾಡುತ್ತಾರೆ.

ಇತರ ಕ್ಲೇಮ್ ಗಳ **ತನಿಖೆ**ಯನ್ನು ನಷ್ಟದ ಮೌಲ್ಯಮಾಪನದಲ್ಲಿ ಪರಿಣಿತರಾಗಿರುವ ಸ್ವತಂತ್ರ ಪರವಾನೆ ಹೊಂದಿದ ವೃತ್ತಿಪರ ಸಮೀಕ್ಷಕರಿಂಗೆ ವಹಿಸಿಕೊಡಲಾಗುತ್ತದೆ. ವಿಮಾಗಾರರು ಮತ್ತು ವಿಮಾದಾರರು ಆಸಕ್ತ ಪಕ್ಷಗಳಾಗಿರುವುದರಿಂದ, ಯಾವುದೇ ವಿವಾದದ ಸಂದರ್ಭದಲ್ಲಿ ಸ್ವತಂತ್ರ ವೃತ್ತಿಪರ ವ್ಯಕ್ತಿಯ ನಿಷ್ಪಕ್ಷಪಾತ ಅಭಿಪ್ರಾಯವು ಎರಡೂ ಪಕ್ಷಗಳಿಗೆ ಮತ್ತು ನ್ಯಾಯಾಲಯಕ್ಕೆ ಸ್ವೀಕಾರಾರ್ಹವಾಗಿರಬೇಕು ಎಂಬ ತತ್ವವನ್ನು ಆಧರಿಸಿದೆ.

**b) ಕ್ಲೇಮ್ ಗಳ ಮೌಲ್ಯಮಾಪನ**

ಬೆಂಕಿ ಘಟನೆಯ ಸಂದರ್ಭದಲ್ಲಿ, ಪೋಷಕ ದಾಖಲೆಗಳೊಂದಿಗೆ ಸಮೀಕ್ಷೆಯ ವರದಿಯ ಆಧಾರದ ಮೇಲೆ ಕ್ಲೇಮ್ ಅನ್ನು ನಿರ್ಣಯಿಸಲಾಗುತ್ತದೆ. ಅಗತ್ಯವಿದ್ದಲ್ಲಿ ಪೊಲೀಸ್ ವರದಿ/ ಅಗ್ನಿಶಾಮಕ ದಳದ ವರದಿ, ತನಿಖಾಧಿಕಾರಿಗಳ ವರದಿಯನ್ನೂ ಪಡೆಯಲಾಗುತ್ತದೆ. ವೈಯಕ್ತಿಕ ಅಪಘಾತದ ಕ್ಲೇಮ್ ಗಳಿಗಾಗಿ, ಅಪಘಾತದ ಕಾರಣ ಅಥವಾ ಅನಾರೋಗ್ಯದ ಸ್ವರೂಪ ಮತ್ತು ಅಂಗವೈಕಲ್ಯದ ಅವಧಿಯನ್ನು ನಿರ್ದಿಷ್ಟಪಡಿಸುವ ವರದಿಯನ್ನು ವಿಮಾದಾರನು ಚಿಕಿತ್ಸೆ ನೀಡುವ ವೈದ್ಯರಿಂದ ಸಲ್ಲಿಸಬೇಕಾಗುತ್ತದೆ.

ಪಾಲಿಸಿ ಷರತ್ತುಗಳಲ್ಲಿ, ವಿಮಾಗಾರರು ಸ್ವತಂತ್ರ ವೈದ್ಯಕೀಯ ಪರೀಕ್ಷೆಯನ್ನು ಏರ್ಪಡಿಸುವ ಹಕ್ಕನ್ನು ಕಾಯ್ದಿರಿಸುತ್ತಾರೆ. "ಕಾರ್ಮಿಕರ ಪರಿಹಾರ"ದ ಕ್ಲೇಮ್ ಗಳಿಗೆ ಬೆಂಬಲವಾಗಿ ವೈದ್ಯಕೀಯ ಪುರಾವೆಗಳು ಸಹ ಅಗತ್ಯವಿದೆ. ಪಶುವೈದ್ಯರ ವರದಿಯ ಆಧಾರದ ಮೇಲೆ ಜಾನುವಾರು ಮತ್ತು ಜಾನುವಾರುಗಳ ಕ್ಲೇಮ್ ಗಳನ್ನು ನಿರ್ಣಯಿಸಲಾಗುತ್ತದೆ.

| ಮಾಹಿತಿ |
|---|

ನಷ್ಟ ಅಥವಾ ಹಾನಿಯ ಸೂಚನೆಯ ಸ್ವೀಕೃತಿಯ ಮೇಲೆ ವಿಮಾಗಾರರು ಈ ಕೆಳಗಿನ ಅಂಶಗಳನ್ನು ಪರಿಶೀಲಿಸುತ್ತಾರೆ:

1. ನಷ್ಟ ಅಥವಾ ಹಾನಿ ಸಂಭವಿಸಿದ ದಿನಾಂಕದಂದು ವಿಮಾ ಪಾಲಿಸಿಯು ಜಾರಿಯಲ್ಲಿರುತ್ತದೆ
2. ವಿಮೆ ಮಾಡಿದ ಅಪಾಯದಿಂದ ನಷ್ಟ ಅಥವಾ ಹಾನಿ ಉಂಟಾಗಿದೆ
3. ನಷ್ಟದಿಂದ ಪ್ರಭಾವಿತವಾದ ಆಸ್ತಿ (ವಿಮೆಯ ವಿಷಯವಸ್ತು) ಪಾಲಿಸಿಯಡಿಯಲ್ಲಿ ವಿಮೆ ಮಾಡಿರುವುದೇ ಆಗಿರುತ್ತದೆ

4. ವಿಳಂಬವಿಲ್ಲದೆ ನಷ್ಟದ ಸೂಚನೆಯನ್ನು ಸ್ವೀಕರಿಸಲಾಗಿದೆ.

ಮರಣ ಮತ್ತು ವೈಯಕ್ತಿಕ ಗಾಯಗಳನ್ನು ಒಳಗೊಂಡ ಮೋಟಾರು ತೃತೀಯ ಪಕ್ಷಗಳ ಕ್ಲೇಮ್ ಗಳನ್ನು ವೈದ್ಯರ ವರದಿಯ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುತ್ತದೆ. ಈ ಕ್ಲೇಮ್ ಗಳೊಂದಿಗೆ ಮೋಟಾರು ಅಪಘಾತ ಕ್ಲೇಮ್ಸ್ ನ್ಯಾಯಮಂಡಳಿ(ಟ್ರಿಬ್ಯೂನಲ್) ವ್ಯವಹರಿಸುತ್ತದೆ ಮತ್ತು ಪಾವತಿಸಬೇಕಾದ ಮೊತ್ತವನ್ನು ಕ್ಲೇಮ್ ದಾರರ ವಯಸ್ಸು ಮತ್ತು ಆದಾಯದಂತಹ ಅಂಶಗಳಿಂದ ನಿರ್ಧರಿಸಲಾಗುತ್ತದೆ.

ತೃತೀಯ ಪಕ್ಷದ ಆಸ್ತಿ ಹಾನಿಯನ್ನು ಒಳಗೊಂಡಿರುವ ಕ್ಲೇಮ್ ಗಳನ್ನು ಸಮೀಕ್ಷೆಯ ವರದಿಯ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುತ್ತದೆ.

- ✓ ಮೋಟಾರು ಸ್ವಂತ ಹಾನಿಯ ಕ್ಲೇಮ್ ಅನ್ನು ಸಮೀಕ್ಷಕರ ವರದಿಯ ಆಧಾರದ ಮೇಲೆ ನಿರ್ಣಯಿಸಲಾಗುತ್ತದೆ.
- ✓ ತೃತೀಯ ಪಕ್ಷದ ಆಸ್ತಿ ಹಾನಿಯನ್ನು ಒಳಗೊಂಡಿದ್ದರೆ ಪೊಲೀಸ್ ವರದಿಯು ಅಗತ್ಯವಿರಬಹುದು.

**ಮಾಹಿತಿ**

ತನಿಖೆಯು ನಷ್ಟದ ಮೌಲ್ಯಮಾಪನಕ್ಕಿಂತ ಭಿನ್ನವಾಗಿರುತ್ತದೆ. ಮಾನ್ಯವಾದ ಕ್ಲೇಮ್ ಮಾಡಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಮತ್ತು ವಿಮಾಸಕ್ತಿಯ ಅನುಪಸ್ಥಿತಿ, ವಾಸ್ತವಿಕ ಸಂಗತಿಗಳನ್ನು ನಿಗ್ರಹಿಸುವುದು ಅಥವಾ ತಪ್ಪಾಗಿ ನಿರೂಪಿಸುವುದು, ಉದ್ದೇಶಪೂರ್ವಕವಾಗಿ ನಷ್ಟವನ್ನು ಸೃಷ್ಟಿಸುವುದು ಇತ್ಯಾದಿಗಳಂತಹ ಪ್ರಮುಖ ವಿವರಗಳನ್ನು ಅನುಮಾನಗಳನ್ನು ಪರಿಶೀಲಿಸಲು ಮತ್ತು ತಳ್ಳಿಹಾಕಲಾಗುತ್ತದೆ ಎಂಬುದನ್ನು ಇಲ್ಲವೆಂದು ಖಾತ್ರಿಪಡಿಸಲು ತನಿಖೆಯನ್ನು ಮಾಡಲಾಗುತ್ತದೆ.

ವಿಮಾ ಸಮೀಕ್ಷಕರು ತನಿಖೆಯ ಕೆಲಸವನ್ನು ಸಹ ಕೈಗೊಳ್ಳುತ್ತಾರೆ. ಸಮೀಕ್ಷಕರು ಸಾಧ್ಯವಾದಷ್ಟು ಬೇಗ ಕೆಲಸವನ್ನಾರಂಭಿಸಿದರೆ ಹೆಚ್ಚು ಸಹಾಯವಾಗುತ್ತದೆ. ಆದ್ದರಿಂದ, ಕ್ಲೇಮ್ ಸೂಚನೆಯನ್ನು ಸ್ವೀಕರಿಸಿದ ನಂತರ ಸಾಧ್ಯವಾದಷ್ಟು ಬೇಗ ಸಮೀಕ್ಷಕರನ್ನು ನೇಮಿಸುವುದು ಅಭ್ಯಾಸವಾಗಿದೆ.

**B. ಸಮೀಕ್ಷಕರು ಮತ್ತು ನಷ್ಟ ಮೌಲ್ಯಮಾಪಕರ ಪಾತ್ರ**

**a) ಸಮೀಕ್ಷಕರು**

ಸಮೀಕ್ಷಕರು ಐಆರ್ ಡಿಎಐಯಿಂದ ಪರವಾನಗಿ ಪಡೆದ ವೃತ್ತಿಪರರಾಗಿರುತ್ತಾರೆ. ಅವರು ನಿರ್ದಿಷ್ಟ ಪ್ರದೇಶಗಳಲ್ಲಿನ ನಷ್ಟವನ್ನು ಪರಿಶೀಲಿಸುವಲ್ಲಿ ಮತ್ತು ಮೌಲ್ಯಮಾಪನ ಮಾಡುವಲ್ಲಿ ಪರಿಣತರಾಗಿರುತ್ತಾರೆ. ಸಮೀಕ್ಷಕರನ್ನು ಸಾಮಾನ್ಯವಾಗಿ ವಿಮಾ ಕಂಪನಿಯಿಂದ ಶುಲ್ಕ ಪಾವತಿ ಮಾಡಿ ನೇಮಿಸಲಾಗುತ್ತದೆ. ಸಮೀಕ್ಷಕರು ಮತ್ತು ನಷ್ಟ ಮೌಲ್ಯಮಾಪಕರನ್ನು ಸಾಮಾನ್ಯ ವಿಮಾ ಕಂಪನಿಗಳು ಸಾಮಾನ್ಯವಾಗಿ ಕ್ಲೇಮ್ ನ ಸಮಯದಲ್ಲಿ ನೇಮಿಸಿಕೊಳ್ಳುತ್ತವೆ. ಅವರು ಕ್ಲೇಮ್ ಗೆ ಸಂಬಂಧಿಸಿದ ಆಸ್ತಿಯನ್ನು, ನಷ್ಟದ ಕಾರಣಗಳು ಮತ್ತು

ಸಂದರ್ಭಗಳನ್ನು ಪರಿಶೀಲಿಸುತ್ತಾರೆ. ಅವರು ನಷ್ಟದ ಪ್ರಮಾಣವನ್ನು ಅಂದಾಜು ಮಾಡುತ್ತಾರೆ ಮತ್ತು ವಿಮಾ ಕಂಪನಿಗೆ ವರದಿಗಳನ್ನು ಸಲ್ಲಿಸುತ್ತಾರೆ.

ಮುಂದಿನ ನಷ್ಟವನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಸೂಕ್ತ ಕ್ರಮಗಳ ಬಗ್ಗೆ ಅವರು ವಿಮಾಗಾರರಿಗೆ ಸಲಹೆಯನ್ನು ಸಹ ನೀಡುತ್ತಾರೆ. ವಿಮಾ ಕಾಯಿದೆ, **1938,** ವಿಮಾ ನಿಯಮಗಳು **1939** ಮತ್ತು ಐಆರ್ ಡಿಎಐ ನೀಡಿದ ನಿರ್ದಿಷ್ಟ ನಿಯಮಗಳ ನಿಬಂಧನೆಗಳ ಮೂಲಕ ಸಮೀಕ್ಷಕರನ್ನು ನಿಯಂತ್ರಿಸಲಾಗುತ್ತದೆ.

ರಫ್ತುಗಳಿಗಾಗಿ ಪ್ರಯಾಣದ ಪಾಲಿಸಿ' ಅಥವಾ 'ಸಾಗರ ಮುಕ್ತ ಕವರ್(ಮೆರೈನ್ ಓಪನ್ ಕವರ್)' ಸಂದರ್ಭದಲ್ಲಿ ದೇಶದ ಹೊರಗೆ ಮಾಡಲಾದ ಕ್ಲೇಮ್ ಗಳನ್ನು ಪಾಲಿಸಿಯಲ್ಲಿ ಹೆಸರಿಸಲಾದ ವಿದೇಶದಲ್ಲಿ ನೆಲೆಸುವ ಏಜೆಂಟರ ಮೂಲಕ ಮೌಲ್ಯಮಾಪನವನ್ನು ಮಾಡಲಾಗುತ್ತದೆ. ಈ ಏಜೆಂಟರು ನಷ್ಟವನ್ನು ನಿರ್ಣಯಿಸಬಹುದು ಮತ್ತು ಪಾವತಿಯನ್ನು ಮಾಡಬಹುದು, ಮತ್ತು ವಿಮಾಗಾರರು ಅದನ್ನು ಅವರ ಕ್ಲೇಮ್ ಇತ್ಯರ್ಥದ ಶುಲ್ಕವನ್ನೊಳಗೊಂಡು ಮರುಪಾವತಿ ಮಾಡುತ್ತಾರೆ. ಪರ್ಯಾಯವಾಗಿ, ಎಲ್ಲಾ ಕ್ಲೇಮ್ ದಾಖಲೆಗಳನ್ನು ವಿಮಾ ಕ್ಲೇಮ್ ಇತ್ಯರ್ಥದ ಏಜೆಂಟರು ಸಂಗ್ರಹಿಸುತ್ತಾರೆ ಮತ್ತು ವಿಮಾಗಾರರಿಗೆ ಅವರ ಮೌಲ್ಯಮಾಪನದ ಶುಲ್ಕದೊಂದಿಗೆ ಸಲ್ಲಿಸುತ್ತಾರೆ.

**ಪ್ರಮುಖ**

**ವಿಮಾ ಕಾಯಿದೆಯ ಸೆಕ್ಷನ್ 64 ಯುಎಮ್**

ಮೋಟಾರು ಸ್ವಂತ ಹಾನಿ ಸಂದರ್ಭದಲ್ಲಿ ಐವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ಕ್ಲೇಮ್ ಗೆ ಮತ್ತು ಇತರ ಆಸ್ತಿ ಹಾನಿಯ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತದ ಕ್ಲೇಮ್ ಗಳಲ್ಲಿ, ವಿಮಾಗಾರರು ಕ್ಲೇಮ್ ಗಳ ಮೌಲ್ಯಮಾಪನಕ್ಕಾಗಿ ಸಮೀಕ್ಷಕರನ್ನು ನೇಮಿಸಬೇಕಾಗುತ್ತದೆ. ಇತರ ಕ್ಲೇಮ್ ಗಳಿಗಾಗಿ ವಿಮಾಗಾರರು ಮೌಲ್ಯಮಾಪನಕ್ಕಾಗಿ ಇತರ ವ್ಯಕ್ತಿಗಳನ್ನು (ಪ್ರಸ್ತುತದಲ್ಲಿ ಸಮೀಕ್ಷಕರು ಅಥವಾ ನಷ್ಟದ ಮೌಲ್ಯಮಾಪಕರಾಗಿ ನೇಮಕಗೊಳ್ಳಲು ಅನರ್ಹರಾಗಿರುವ ವ್ಯಕ್ತಿಯನ್ನು ಹೊರತುಪಡಿಸಿ) ನೇಮಿಸಿಕೊಳ್ಳಬಹುದು.

---

### 5. ಕ್ಲೇಮ್ ನಮೂನೆಗಳು

ಕ್ಲೇಮ್ ನಮೂನೆಯಲ್ಲಿಯ ವಿಷಯಗಳು ಪ್ರತಿ ವರ್ಗದ ವಿಮೆಯೊಂದಿಗೆ ಬದಲಾಗುತ್ತವೆ. ಸಾಮಾನ್ಯವಾಗಿ ಕ್ಲೇಮ್ ನಮೂನೆಯು ನಷ್ಟದ ದಿನಾಂಕ, ಸಮಯ, ನಷ್ಟದ ಕಾರಣ, ನಷ್ಟದ ಪ್ರಮಾಣ, ಇತ್ಯಾದಿಗಳಂತಹ ನಷ್ಟದ ಸಂದರ್ಭಗಳ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಪಡೆಯಲು ವಿನ್ಯಾಸಗೊಳಿಸಲಾಗಿರುತ್ತದೆ. ಇತರ ಪ್ರಶ್ನೆಗಳು ಒಂದು ವರ್ಗದ ವಿಮೆಯಿಂದ ಇನ್ನೊಂದಕ್ಕೆ ಬದಲಾಗುತ್ತವೆ.

**ಉದಾಹರಣೆ**

ಬೆಂಕಿ ಕ್ಲೇಮ್ ನಮೂನೆಯಲ್ಲಿ ಕೋರಿದ ಮಾಹಿತಿಯ ಉದಾಹರಣೆಯನ್ನು ಈ ಕೆಳಗೆ ನೀಡಲಾಗಿದೆ:

i. ವಿಮಾದಾರರ ಹೆಸರು, ಪಾಲಿಸಿ ಸಂಖ್ಯೆ ಮತ್ತು ವಿಳಾಸ

ii. ಬೆಂಕಿಯ ದಿನಾಂಕ, ಸಮಯ, ಕಾರಣ ಮತ್ತು ಸಂದರ್ಭಗಳು

iii. ಹಾನಿಗೊಳಗಾದ ಆಸ್ತಿಯ ವಿವರಗಳು

iv. ಬೆಂಕಿಯ ಘಟನೆಯ ಸಮಯದಲ್ಲಿ ಆಸ್ತಿಯ ಸೂಕ್ತ ಮೌಲ್ಯ. ಕ್ಲೇಮ್ ಮಾಡಲಾದ ವಿಮೆಯಡಿಯಲ್ಲಿ ಹಲವಾರು ವಸ್ತುಗಳನ್ನು ಒಳಗೊಂಡಿರುವಾಗ. [ಕ್ಲೇಮ್ ಸಂಭವಿಸುವ ಸ್ಥಳ ಮತ್ತು ಸಮಯದಲ್ಲಿ ಸವಕಳಿ, ಸವಕಳಿ ಕಡಿತವನ್ನು (ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳಿಗೆ ಸಂಬಂಧಿಸಿದಂತೆ ಪಾಲಿಸಿಯು "ಪುನಃಸ್ಥಾಪನೆ ಮೌಲ್ಯ" ಆಧಾರದ ಮೇಲೆ ಇಲ್ಲದಿದ್ದರೆ) ಕಳೆದ ನಂತರದ ಆಸ್ತಿಯ ನೈಜ ಮೌಲ್ಯವನ್ನು ಆಧರಿಸಿರಬೇಕು.] ಅದರಲ್ಲಿ ಯಾವುದೇ ಲಾಭವನ್ನು ಒಳಗೊಂಡಿರಕೂಡದು.

v. ಅವಶೇಷದ ಮೌಲ್ಯದ ಕಡಿತದ ನಂತರದ ಕ್ಲೇಮ್ ಮಾಡಿದ ಮೊತ್ತ

vi. ಬೆಂಕಿ ಸಂಭವಿಸಿದ ಆವರಣದ ಪರಿಸ್ಥಿತಿ ಮತ್ತು ವಸತಿ/ಹಿಡಿತ

vii. ಮಾಲೀಕರು, ಅಡಮಾನ ಅಥವಾ ಇತರರಾಗಿ ವಿಮಾದಾರರು ಕ್ಲೇಮ್ ಮಾಡುವ ಸಾಮರ್ಥ್ಯ

viii. ಹಾನಿಗೊಳಗಾದ ಆಸ್ತಿಯಲ್ಲಿ ಇತರ ಯಾವುದೇ ವ್ಯಕ್ತಿ ಆಸಕ್ತಿಯನ್ನು ಹೊಂದಿದ್ದರೆ

ix. ಅಂತಹ ಆಸ್ತಿಯ ಮೇಲೆ ಯಾವುದೇ ಇತರ ವಿಮೆ ಜಾರಿಯಲ್ಲಿದ್ದರೆ, ಅದರ ವಿವರಗಳು.

---

ಇದು ವಿಮಾದಾರರ ಹೇಳಿಕೆ ಮತ್ತು ಸಹಿ ಮತ್ತು ದಿನಾಂಕದವನ್ನೊಳಗೊಂಡ ಹೇಳಿಕೆಯ ಸತ್ಯ ಮತ್ತು ನಿಖರತೆಯ ಘೋಷಣೆಯನ್ನು ಅನುಸರಿಸುತ್ತದೆ.

ವಿಮಾ ಕಂಪನಿಯು ಕ್ಲೇಮ್ ನಮೂನೆಯನ್ನು ನೀಡುವುದು ಕ್ಲೇಮ್ ನ ಹೊಣೆಗಾರಿಕೆಯನ್ನು ವಿಮಾಗಾರರು ಒಪ್ಪಿಕೊಳ್ಳುತ್ತಾರೆ ಎಂಬುದನ್ನು ಸೂಚಿಸುವುದಿಲ್ಲ ಅಥವಾ ಅರ್ಥವಲ್ಲ. ಕ್ಲೇಮ್ ನಮೂನೆಗಳನ್ನು 'ಪೂರ್ವಾಗ್ರಹವಿಲ್ಲದೆ' ಎಂಬ ಟಿಪ್ಪಣಿಯೊಂದಿಗೆ ನೀಡಲಾಗುತ್ತದೆ.

**ಪೋಷಕ / ಸಹಾಯಕ ದಾಖಲೆಗಳು**

ಕ್ಲೇಮ್ ನಮೂನೆಗೆ ಹೆಚ್ಚುವರಿಯಾಗಿ, ಕ್ಲೇಮ್ ಅನ್ನು ದೃಢೀಕರಿಸಲು ಕ್ಲೇಮ್ ದಾರರಿಂದ ಕೆಲವು ದಾಖಲೆಗಳನ್ನು ಸಲ್ಲಿಸಬೇಕು ಅಥವಾ ವಿಮಾಗಾರರಿಂದ ಸಮರ್ಥಿಸಬೇಕು..

i. ಬೆಂಕಿ ಕ್ಲೇಮ್ ಗಳಿಗಾಗಿ, ಅಗ್ನಿಶಾಮಕ ದಳದ ವರದಿಯು ಅಗತ್ಯವಾಗಿರುತ್ತದೆ.

ii. ಚಂಡಮಾರುತದಿಂದಾದ ಹಾನಿಗಾಗಿ, ಹವಾಮಾನ ಕಚೇರಿಯಿಂದ ವರದಿಯನ್ನು ಕರೆಯಬಹುದು

iii. ದರೋಡೆಯ ಕ್ಲೇಮ್ ಗಳಲ್ಲಿ, ಪೊಲೀಸರಿಂದ ವರದಿ ಅಗತ್ಯವಾಗಬಹುದು.

iv. ಮಾರಣಾಂತಿಕ ಅಪಘಾತದ ಕ್ಲೇಮ್ ಗಳಿಗಾಗಿ, ಆಕಸ್ಮಿಕ ಅಥವಾ ಅಸ್ವಾಭಾವಿಕ ಮರಣವನ್ನು ತನಿಖೆ ಮಾಡುವ ಅಧಿಕಾರಿ (ತನಿಖಾಧಿಕಾರಿ) ಮತ್ತು ಪೊಲೀಸರಿಂದ ವರದಿಗಳು ಅಗತ್ಯವಾಗಬಹುದು.

v. ಮೋಟಾರು ಕ್ಲೇಮ್ ಗಳಿಗಾಗಿ, ವಿಮಾದಾರರ ಚಾಲನಾ ಪರವಾನೆ(ಡ್ರೈವಿಂಗ್ ಲೈಸೆನ್ಸ್), ನೋಂದಣಿ ಪುಸ್ತಕ, ಪೊಲೀಸ್ ವರದಿ ಇತ್ಯಾದಿಗಳನ್ನು ಪರೀಕ್ಷಿಸಲು ಬಯಸಬಹುದು.

vi. ಸಾಗರ ಸರಕು ಕ್ಲೇಮ್ ಗಳಲ್ಲಿ, ದಾಖಲೆಗಳ ಸ್ವರೂಪವು ನಷ್ಟದ ಅಂದರೆ ಒಟ್ಟು ನಷ್ಟ, ಭಾಗಶಃ ನಷ್ಟ, ಒಳನಾಡು ಅಥವಾ ಸಾಗರೋತ್ತರ ಸಾರಿಗೆ ಕ್ಲೇಮ್ ಗಳು ಇತ್ಯಾದಿ ಪ್ರಕಾರದಿಂದ ಬದಲಾಗುತ್ತದೆ.

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ 1**

ಈ ಕೆಳಗಿನ ಯಾವ ಚಟುವಟಿಕೆಗಳನ್ನು ಕ್ಲೇಮ್ ಗಳ ಇತ್ಯರ್ಥದಲ್ಲಿ ವೃತ್ತಿಪರವೆಂದು ಪರಿಗಣಿಸಲಾಗುವುದಿಲ್ಲ**??**

I. ನಷ್ಟದ ಕಾರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹುಡುಕುವುದು

II. ಪೂರ್ವಾಗ್ರಹದೊಂದಿಗೆ ಕ್ಲೇಮ್ ಅನ್ನು ನೋಡುವುದು

III. ನಷ್ಟವು ವಿಮೆ ಮಾಡಿದ ಅಪಾಯದ ಪರಿಣಾಮದಿಂದಾದ ಬಗ್ಗೆ ಖಚಿತಪಡಿಸಿಕೊಳ್ಳುವುದು

IV. ಕ್ಲೇಮ್ ಅಡಿಯಲ್ಲಿ ಪಾವತಿಸಬೇಕಾದ ಮೊತ್ತವನ್ನು ಪ್ರಮಾಣೀಕರಿಸುವುದು

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ *2***

ರಾಜ್ ಕಾರು ಅಪಘಾತದಲ್ಲಿ ಸಿಲುಕಿದ್ದಾರೆ. ಅವರ ಕಾರನ್ನು ಮೋಟಾರು ವಿಮಾ ಸಮಗ್ರ ಪಾಲಿಸಿಯಡಿಯಲ್ಲಿ ವಿಮೆ ಮಾಡಲಾಗಿದೆ. ರಾಜ್ ಈ ಕೆಳಗಿನವುಗಳಲ್ಲಿ ಯಾವುದನ್ನು ಮಾಡುವುದು ಹೆಚ್ಚು ಸೂಕ್ತವಾಗಿದೆ**?**

I. ನಷ್ಟದ ಬಗ್ಗೆ ವಿಮಾಗಾರರಿಗೆ ಸಾಧ್ಯವಾದಷ್ಟು ಬೇಗ ಸೂಚಿಸುವುದು

II. ವಿಮೆಯ ನವೀಕರಣದ ಸಮಯದಲ್ಲಿ ವಿಮಾಗಾರರಿಗೆ ಸೂಚಿಸುವುದು

III. ಹೆಚ್ಚಿನ ಪರಿಹಾರ ಮೊತ್ತವನ್ನು ಪಡೆಯಲು ಕಾರನ್ನು ಮತ್ತಷ್ಟು ಹಾನಿಗೊಳಿಸುವುದು

IV. ಹಾನಿಯನ್ನು ನಿರ್ಲಕ್ಷಿಸುವುದು

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ *3***

ಕ್ಲೇಮ್ ಗಳ ತನಿಖೆ ಮತ್ತು ಕ್ಲೇಮ್ ಗಳ ಮೌಲ್ಯಮಾಪನದ ಕುರಿತು ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ**?**

I. ಕ್ಲೇಮ್ ಗಳ ತನಿಖೆ ಮತ್ತು ಕ್ಲೇಮ್ ಗಳ ಮೌಲ್ಯಮಾಪನ ಒಂದೇ ಆಗಿರುತ್ತದೆ

II. ಕ್ಲೇಮ್ ಗಳ ತನಿಖೆಯು ಕ್ಲೇಮ್ ನ ಸಿಂಧುತ್ವವನ್ನು ನಿರ್ಧರಿಸುತ್ತದೆ ಆದರೆ ವಿಮೆ ಮಾಡಿದ ಅಪಾಯದಿಂದ ನಷ್ಟ ಉಂಟಾಗಿದೆಯೇ ಮತ್ತು ಯಾವುದೇ ಖಾತರಿಯ ಉಲ್ಲಂಘನೆಯಾಗಿದೆಯೇ ಎಂಬುದನ್ನು ಮೌಲ್ಯಮಾಪನ ಮಾಡುವುದು

III. ಕ್ಲೇಮ್ ಗಳ ಮೌಲ್ಯಮಾಪನವು ಕ್ಲೇಮ್ ನ ಸಿಂಧುತ್ವವನ್ನು ನಿರ್ಧರಿಸಲು ಪ್ರಯತ್ನಿಸುತ್ತದೆ ಆದರೆ ತನಿಖೆಯ ಸಂಬಂಧವು ನಷ್ಟದ ಕಾರಣ ಮತ್ತು ವ್ಯಾಪ್ತಿಯೊಂದಿಗೆ ಹೆಚ್ಚಾಗಿರುತ್ತದೆ

IV. ಕ್ಲೇಮ್ ಗಳನ್ನು ಪಾವತಿಸುವ ಮೊದಲು ಕ್ಲೇಮ್ ಗಳ ತನಿಖೆಯನ್ನು ಮಾಡಲಾಗುತ್ತದೆ ಮತ್ತು ಕ್ಲೇಮ್ ಗಳನ್ನು ಪಾವತಿಸಿದ ನಂತರ ಕ್ಲೇಮ್ ಗಳ ಮೌಲ್ಯಮಾಪನವನ್ನು ಮಾಡಲಾಗುತ್ತದೆ

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ *4***

ಸಮೀಕ್ಷಕರಿಗೆ ಪರವಾನಗಿ ನೀಡುವ ಅಧಿಕಾರ ಯಾರದು?

I. ಭಾರತೀಯ ಸಮೀಕ್ಷಕರ ಸಂಘ

II. ಸಮೀಕ್ಷಕರ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ

III. ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ

IV. ಭಾರತ ಸರ್ಕಾರ

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ *5***

ಚಂಡಮಾರುತ ಹಾನಿಯ ಕ್ಲೇಮ್ ಅನ್ನು ಪರಿಶೀಲಿಸುವಾಗ ಈ ಕೆಳಗಿನ ಯಾವ ದಾಖಲೆಗಳನ್ನು ಹೆಚ್ಚಾಗಿ ಅಗತ್ಯಪಡಿಸಬಹುದು?

I. ಆಕಸ್ಮಿಕ ಅಥವಾ ಅಸ್ವಾಭಾವಿಕ ಮರಣವನ್ನು ತನಿಖೆ ಮಾಡುವ ಅಧಿಕಾರಿ(ತನಿಖಾಧಿಕಾರಿ)ಯ ವರದಿ

II. ಅಗ್ನಿಶಾಮಕದಳದ ವರದಿ

III. ಪೋಲೀಸರ ವರದಿ

IV. ಹವಾಮಾನ ಇಲಾಖೆಯಿಂದ ವರದಿ

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ *6***

ಪಾಲಿಸಿಯಡಿಯಲ್ಲಿ ಪಾವತಿಸಿದ ನಷ್ಟವನ್ನು ತೃತೀಯ ಪಕ್ಷದಿಂದ ಮರುಪಡೆಯಲು ಯಾವ ತತ್ವದಡಿಯಲ್ಲಿ ವಿಮಾಗಾರರು ವಿಮಾದಾರರ ಕ್ಲೇಮ್ ಗಳನ್ನು ಪಡೆದುಕೊಳ್ಳಬಹುದು?

I. ಕೊಡುಗೆ/ಸಹಪಾವತಿ

II. ಬಿಡುಗಡೆ/ಡಿಸ್ಚಾರ್ಜ್

**III.** ಸಬ್ ರೋಗೇಶನ್

**IV.** ನಷ್ಟಪರಿಹಾರ

**ನಿಮ್ಮನ್ನು ಪರೀಕ್ಷಿಸಿಕೊಳ್ಳಿ *7***

ಒಂದು ನಿರ್ದಿಷ್ಟ ನಷ್ಟವನ್ನು ಅದು ಪಾಲಿಸಿಯಡಿಯಲ್ಲಿ ಕವರ್ ಮಾಡಿಲ್ಲದ ಕಾರಣದಿಂದಾಗಿ ಪಾವತಿಸಲಾಗುವುದಿಲ್ಲವೆಂದು ವಿಮಾಗಾರರು ನಿರ್ಧರಿಸಿದರೆ ಅಂತಹ ವಿಷಯಗಳ ಬಗ್ಗೆ ಯಾರು ನಿರ್ಧರಿಸುತ್ತಾರೆ**?**

**I.** ವಿಮಾಗಾರರ ನಿರ್ಣಯವು ಅಂತಿಮವಾಗಿರುತ್ತದೆ

**II.** ಅಂಪೈರ್

**III.** ಮಧ್ಯಸ್ಥಗಾರ

**IV.** ನ್ಯಾಯಾಲಯ

---

**ಸಾರಾಂಶ**

**a)** ಕ್ಲೇಮ್ ಗಳನ್ನು ವೃತ್ತಿಪರವಾಗಿ ಇತ್ಯರ್ಥಪಡಿಸುವುದು ವಿಮಾ ಕಂಪನಿಯ ಅತಿದೊಡ್ಡ ಜಾಹೀರಾತೆಂದು ಪರಿಗಣಿಸಲಾಗಿದೆ.

**b)** ನಷ್ಟವನ್ನು ತಕ್ಷಣವೇ ವಿಮಾಗಾರರಿಗೆ ತಿಳಿಸಬೇಕೆಂದು ಪಾಲಿಸಿ ಷರತ್ತುಗಳು ಹೇಳುತ್ತವೆ.

**c)** ಕ್ಲೇಮ್ ಮೊತ್ತವು ಚಿಕ್ಕದಾಗಿದ್ದರೆ, ನಷ್ಟದ ಕಾರಣ ಮತ್ತು ನಷ್ಟದ ಪ್ರಮಾಣವನ್ನು ನಿರ್ಧರಿಸಲು ವಿಮಾಗಾರರ ಅಧಿಕಾರಿಗಳು ತನಿಖೆಯನ್ನು ಮಾಡುತ್ತಾರೆ. ಆದರೆ ಇತರ ಕ್ಲೇಮ್ ಗಳ ತನಿಖೆಯನ್ನು ನಷ್ಟದ ಮೌಲ್ಯಮಾಪನದಲ್ಲಿ ಪರಿಣಿತರಾಗಿರುವ ಸ್ವತಂತ್ರ ಪರವಾನೆ ಹೊಂದಿದ ವೃತ್ತಿಪರ ಸಮೀಕ್ಷಕರಿಂಗೆ ವಹಿಸಿಕೊಡಲಾಗುತ್ತದೆ.

**d)** ಸಾಮಾನ್ಯವಾಗಿ ಕ್ಲೇಮ್ ನಮೂನೆಯು ನಷ್ಟದ ದಿನಾಂಕ, ಸಮಯ, ನಷ್ಟದ ಕಾರಣ, ನಷ್ಟದ ಪ್ರಮಾಣ, ಇತ್ಯಾದಿಗಳಂತಹ ನಷ್ಟದ ಸಂದರ್ಭಗಳ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಪಡೆಯಲು ವಿನ್ಯಾಸಗೊಳಿಸಲಾಗಿರುತ್ತದೆ.

**e)** ಕ್ಲೇಮ್ ಗಳ ಮೌಲ್ಯಮಾಪನವು ನಷ್ಟದ ಕಾರಣವು ವಿಮೆ ಮಾಡಿದ ಅಪಾಯದಿಂದ ಉಂಟಾಗಿದೆಯೇ ಮತ್ತು ಯಾವುದೇ ಖಾತರಿಯ ಉಲ್ಲಂಘನೆಯಾಗಿದೆಯೇ ಎಂಬುದನ್ನು ಮೌಲ್ಯಮಾಪನ ಮಾಡುವ ಪ್ರಕ್ರಿಯೆಯಾಗಿದೆ. ವಿಮಾದಾರರು ಅನುಭವಿಸಿದ ನಷ್ಟದ ಪ್ರಮಾಣ ಮತ್ತು ಪಾಲಿಸಿಯಡಿಯಲ್ಲಿಯ ವಿಮಾಗಾರರ ಹೊಣೆಗಾರಿಕೆಯನ್ನು ನಿರ್ಣಯಿಸಲಾಗುತ್ತದೆ. ಕ್ಲೇಮ್ ಮೊತ್ತವನ್ನು ಪಾವತಿಸುವ ಮೊದಲು ಇದನ್ನು ಮಾಡಲಾಗುತ್ತದೆ.

**f)** ಪಾಲಿಸಿಯಡಿಯಲ್ಲಿ ಡಿಸ್ಚಾರ್ಜ್ ಅನ್ನು ಪಡೆದ ನಂತರವೇ ಕ್ಲೇಮ್ ನ ಇತ್ಯರ್ಥವನ್ನು ಮಾಡಲಾಗುತ್ತದೆ.

## ಪ್ರಮುಖ ಪದಗಳು

**a)** ನಷ್ಟದ ಸೂಚನೆ

**b)** ತನಿಖೆ ಮತ್ತು ಮೌಲ್ಯಮಾಪನ

**c)** ಸಮೀಕ್ಷಕರು ಮತ್ತು ನಷ್ಟ ಮೌಲ್ಯಯಮಾಪಕರು

**d)** ಕ್ಲೇಮ್ ನಮೂನೆಗಳು

**e)** ಹೊಂದಾಣಿಕೆ ಮತ್ತು ಇತ್ಯರ್ಥ

## ನಿಮ್ಮನ್ನು ಪರೀಕ್ಷಿಸಿ*ಕೊಳ್ಳಿಗೆ*ಪ್ರಶ್ನೆಗಳಿಗೆ ಉತ್ತರಗಳು

ಉತ್ತರ 1 - ಸರಿಯಾದ ಉತ್ತರ **II** ಆಗಿದೆ.

ಉತ್ತರ 2 - ಸರಿಯಾದ ಉತ್ತರ **I** ಆಗಿದೆ.

ಉತ್ತರ 3 - ಸರಿಯಾದ ಉತ್ತರ **II** ಆಗಿದೆ.

ಉತ್ತರ 4 - ಸರಿಯಾದ ಉತ್ತರ **III** ಆಗಿದೆ.

ಉತ್ತರ 5 - ಸರಿಯಾದ ಉತ್ತರ **IV** ಆಗಿದೆ.

ಉತ್ತರ 6 - ಸರಿಯಾದ ಉತ್ತರ **III** ಆಗಿದೆ.

ಉತ್ತರ 7 - ಸರಿಯಾದ ಉತ್ತರ **IV** ಆಗಿದೆ.

# ವಿಭಾಗ

# ಅನುಬಂಧ

# ಅಧ್ಯಾಯ A-01

# ಅನುಬಂಧ

ವಿದ್ಯಾರ್ಥಿಗಳಿಗೆ ಸಾಮಾನ್ಯ ವಿಮೆಯಲ್ಲಿ ಬಳಸಲಾಗುವ ಪ್ರಸ್ತಾವನೆಯ ನಮೂನೆಗಳ ಉತ್ತಮ ಕಲ್ಪನೆಯನ್ನು ಪಡೆಯಲು ಅನುವು ಮಾಡಿಕೊಡಲು ಈ ಅನುಬಂಧಗಳನ್ನು ಒದಗಿಸಲಾಗಿದೆ.

ಅನುಬಂಧ ಎ

ಮೋಟಾರು ವಿಮೆ ಪ್ರಸ್ತಾವನೆಯ ನಮೂನೆ

ಖಾಸಗಿ ಕಾರು/ದ್ವಿಚಕ್ರವಾಹನ - ಪ್ಯಾಕೇಜ್ ಪಾಲಿಸಿ

| | | |
|---|---|---|
| ಪ್ರಸ್ತಾಪಕರ ಹೆಸರು | | |
| ಸಂಪರ್ಕಕ್ಕಾಗಿ ವಿಳಾಸ | ವಿಮಾದಾರರನ್ನು ಗುರುತಿಸುವಿಕೆ | |
| ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ | | ಮೊಬೈಲ್ ಸಂಖ್ಯೆ: |
| ಈಮೇಲ್ ವಿಳಾಸ | | |
| ಬ್ಯಾಂಕ್ ಖಾತೆ ಸಂಖ್ಯೆ (ಉಳಿತಾಯ ಖಾತೆ/ಚಾಲ್ತಿ ಖಾತೆ) | | ಪ್ಯಾನ್ ಸಂಖ್ಯೆ: |
| ಎಚ್ ಪಿಎ / ಅಡಮಾನ | | |
| ಅವಶ್ಯಕವಾಗಿರುವ ಪಾಲಿಸಿ ಪ್ರಕಾರ | ಪ್ಯಾಕೇಜ್ ಪಾಲಿಸಿ | |
| | ದಿಂದ ಸಮಯ.......ದಿನಾಂಕ | ವರೆಗೆ |

ವಾಹನದ ವಿವರಗಳು

| ನೋಂದಣಿ ಸಂಖ್ಯೆ | ಇಂಜಿನ್ ಸಂಖ್. ಮತ್ತು ಚಾಸಿಸ್ ಸಂಖ್ಯೆ | ತಯಾರಿಕೆಯ ವರ್ಷ | ತಯಾರಿಕೆ ಮತ್ತು ಮಾದರಿ/ ಹೊರಮೈ(ಬಾಡಿ) ಪ್ರಕಾರ | ಕ್ಯೂಬಿಕ್ ಸಾಮರ್ಥ್ಯ | ಆಸನ ಸಾಮರ್ಥ್ಯ | ಬಣ್ಣ | ಬಳಸಿದ ಇಂಧನ |
|---|---|---|---|---|---|---|---|
| | | | | | | | |

ವಿಮೆಮಾಡಿದ ವಾಹನದ ಸರಿಯಾಗಿ ಗುರುತು

| | | | | | | |
|---|---|---|---|---|---|---|
| | | | | | | |

ಕಂಪನಿಯ ನೀತಿಯಂತೆ ಹೆಚ್ಚುವರಿ ಪ್ರೀಮಿಯಂ ಅಥವಾ ರಿಯಾಯಿತಿ ಕೊಡುವುದಕ್ಕೆ ಪರಿಗಣಿಸಬೇಕಾದ ಅಂಶಗಳು

ನೋಂದಣಿ ಅಧಿಕಾರಿ - ಹೆಸರು ಮತ್ತು ಸ್ಥಳ

ವಾಹನದ ಮೌಲ್ಯ

| ಇನ್ವಾಯ್ಸ್ ಮೌಲ್ಯ | ಎಲೆಕ್ಟ್ರಿಕ್ / ಎಲೆಕ್ಟ್ರಾನಿಕ್ ಜೋಡಣೆಗಳು | ಎಲೆಕ್ಟ್ರಿಕ್ ಅಲ್ಲದ ಜೋಡಣೆಗಳು | ಸೈಡ್ ಕಾರ್ /ಟ್ರೇಲರ್ | ಎಲ್ ಪಿಡಿ/ಸಿಎನ್ ಜಿ ಕಿಟ್ | ಒಟ್ಟು ಮೌಲ್ಯ | ಐಡಿವಿ |
|---|---|---|---|---|---|---|
| | | | | | | |

ಇದು ಕ್ಲೇಮ್ ಇತ್ಯರ್ಥದ ಮತ್ತು ಕಂತಿಗೆ ಆಧಾರವಾಗಿರುತ್ತದೆ

ವಾಹನದ ಇತಿಹಾಸ

| ಹಿಂದಿನ ಪಾಲಿಸಿ ಸಂಖ್ಯೆ | ಕವರ್ ನ ಪ್ರಕಾರ | ವಿಮಾಗಾರರ ಹೆಸರು ಮತ್ತು ವಿಳಾಸ | ಕ್ಲೈಮ್ ರಹಿತ(ನೋ ಕ್ಲೇಮ್) ಬೋನಸ್ ನ ಅರ್ಹತೆ | ಪಾಲಿಸಿ ಅವಧಿ ಮುಕ್ತಾಯದ ದಿನಾಂಕ | ಹಿಂದಿನ 3 ವರ್ಷಗಳ ಕ್ಲೇಮ್ ಅನುಭವ | ಮೊದಲ ಖರೀದಿ ಮತ್ತು ನೋಂದಣಿಯ ದಿನಾಂಕ |
|---|---|---|---|---|---|---|
| | | | | ಅಂಡರ್ ರೈಟಿಂಗ್ ಅಂಶಗಳು-ಬೆಲೆ ನಿರ್ಧಾರ(ರೇಟಿಂಗ್)ದ ಮೇಲೆ ಪ್ರಭಾವವನ್ನು ಹೊಂದಿವೆ | | |

ವಾಹನದ ಬಳಕೆ

| ಬಳಕೆಯ ಉದ್ದೇಶ | ವಾಹನದ ಪಾರ್ಕಿಂಗ್ ವಿವರಗಳು | ಚಾಲಕರ ವಿವರಗಳು | ವರ್ಷದಲ್ಲಿ ಸರಾಸರಿ ಕಿಮೀ ಚಾಲನೆ/ಓಟ |
|---|---|---|---|
| ಸಂತೋಷ | ಕವರ್ ಮಾಡಲಾದ ಗ್ಯಾರೇಜು | ಸ್ವತಃ | |
| ವೃತ್ತಿಪರ | ಕವರ್ ಮಾಡಿಲ್ಲದ ಗ್ಯಾರೇಜು | ಪಾವತಿಸಿದ ಚಾಲಕ | |
| ವ್ಯವಹಾರ/ವ್ಯಾಪಾರ | ಆವರಣ(ಕಂಪೌಂಡ್) ಒಳಗಡೆ | ಸಂಬಂಧಿಕರು | |
| ಸಾಂಸ್ಥಿಕ(ಕಾರ್ಪೊರೇಟ್) | ರಸ್ತೆಬದಿಗೆ | ಗೆಳೆಯರು | |

ಅಪಾಯವನ್ನು ಅರಿತುಕೊಳ್ಳಲು ವಿಮಾಗಾರರಿಗೆ ಸಹಾಯಮಾಡುತ್ತದೆ

ಅಪಾಯ ತಗ್ಗಿಸುವಿಕೆ / ಪ್ರತಿಕೂಲ ಅಪಾಯವನ್ನು ತಿಳಿಯಲು

ರಿಯಾಯಿತಿ ಮತ್ತು ಹೆಚ್ಚುವರಿ

| | |
|---|---|
| ಸ್ವಯಂಪ್ರೇರಿತ ಹೆಚ್ಚುವರಿ: ನೀವು ಕಡ್ಡಾಯವಾದ ಪಾಲಿಸಿ ಹೆಚ್ಚುವರಿಗಿಂತ ಸ್ವಯಂಪ್ರೇರಿತ ಹೆಚ್ಚುವರಿಯನ್ನು ಆಯ್ಕೆ ಮಾಡುತ್ತೀರಾ | ಹೌದು/ಇಲ್ಲ - ಹೌದೆಂದರೆ ದಯವಿಟ್ಟು ಮೊತ್ತವನ್ನು ಸ್ಪಷ್ಟಪಡಿಸಿ ದ್ವಿಚಕ್ರ ವಾಹನ - ರೂ. 500/700/1000/1500/3000 ಖಾಸಗಿ |
| ನೀವು ಭಾರತೀಯ ಆಟೋಮೊಬೈಲ್ ಸಂಘದ ಸದಸ್ಯರಾಗಿರುವಿರಾ | ಹೌದು/ಇಲ್ಲ - ಹೌದೆಂದರೆ ದಯವಿಟ್ಟು ಈ ವಿವರಗಳನ್ನು ನೀಡಿರಿ:<br>1. ಸಂಘದ ಹೆಸರು<br>2.ಸದಸ್ಯತ್ವದ ಸಂಖ್ಯೆ: ಮುಕ್ತಾಯದ ದಿನಾಂಕ: |
| ವಾಹನಕ್ಕೆ ಎಆರ್ ಎಐ ನಿಂದ ಪ್ರಮಾಣೀಕರಿಸಲಾದ ಕಳ್ಳತನ ವಿರೋಧಿ ಸಾಧನವನ್ನು ಅಳವಡಿಸಲಾಗಿದೆಯೇ | ಹೌದು/ಇಲ್ಲ - ಹೌದೆಂದರೆ ಅಳವಡಿಕೆಯ ಪ್ರಮಾಣಪತ್ರವನ್ನು ಲಗತ್ತಿಸಿ |
| ವಾಹವನ್ನು ಅಸಾಂಪ್ರದಾಯಿಕ ಮೂಲದಿಂದ ನಡೆಸಲ್ಪಡುತ್ತದೆಯೇ | ಹೌದು/ಇಲ್ಲ - ಹೌದೆಂದರೆ ದಯವಿಟ್ಟು ವಿವರಗಳನ್ನು ಸ್ಪಷ್ಟಪಡಿಸಿ |
| ವಾಹನವನ್ನು ದ್ವಿ-ಇಂಧನ ಕಿಟ್/ಫೈಬರ್ ಗ್ಲಾಸ್ ಟ್ಯಾಂಕ್ ಅಳವಡಿಸಿ ಚಾಲನೆ ಮಾಡಲಾಗುತ್ತದೆಯೇ | ಹೌದು/ಇಲ್ಲ - ಹೌದೆಂದರೆ ದಯವಿಟ್ಟು ವಿವರಗಳನ್ನು ಸ್ಪಷ್ಟಪಡಿಸಿ |
| ನೀವು ಟಿಪಿಪಿಡಿ ಕವರ್ ಅನ್ನು ಕಾನೂನು ಮಿತಿಯಾದ ರೂ. 6000/- ಗಳಿಗೆ ಮಿತಿಗೊಳಿಸಬಯಸುವಿರಾ | ಹೌದು/ಇಲ್ಲ |

ಅವಶ್ಯಕ ಹೆಚ್ಚುವರಿ ಕವರ್ ಗಳು

| | |
|---|---|
| ಬಿಡಿಭಾಗಗಳ ಕಳುವು (ಕೇವಲ ದ್ವಿಚಕ್ರ ವಾಹನಗಳು) | |
| ಚಾಲಕರ ಕಾನೂನು ಹೊಣೆಗಾರಿಕೆ | |
| ಪಾವತಿಸಿದ/ಬಾಡಿಗೆ ಚಾಲಕರಿಗಾಗಿ ಪಿ ಎ | |

ಕಡ್ಡಾಯ: ಮಾಲೀಕ ಚಾಲಕರಿಗೆ ವೈಯಕ್ತಿಕ ಅಪಘಾತದ ಕವರ್

ಮಾಲೀಕ ಚಾಲಕರಿಗೆ ವೈಯಕ್ತಿಕ ಅಪಘಾತದ ಕವರ್ ಕಡ್ಡಾಯವಾಗಿದೆ. ದಯವಿಟ್ಟು ನಾಮನಿರ್ದೇಶನದ ವಿವರಗಳನ್ನು ನೀಡಿರಿ:

ಎ. ನಾಮನಿರ್ದೇಶಿತರ ಹೆಸರು ಮತ್ತು ವಯಸ್ಸು:

ಬಿ. ಸಂಬಂಧ:

ಸಿ. ನೇಮಕಗೊಂಡವರ ಹೆಸರು:

(ನಾಮನಿರ್ದೇಶಿತರು ಅಲ್ಪ ವಯಸ್ಸಿನವರಾಗಿದ್ದರೆ)

ಡಿ. ನಾಮನಿರ್ದೇಶಿತರೊಂದಿಗೆ ಸಂಬಂಧ:

ಹೆಚ್ಚುವರಿ ಕಂತಿಗೆ ಒಳಪಟ್ಟು ಹೆಚ್ಚುವರಿ ಕವರೇಜ್

1. ಕಡ್ಡಾಯ ಪಿ ಎ ರೂ. 15 ತಕ್ಷಗಳು ಇರುತ್ತದೆ

2. ವಾಹನವು ಕಂಪನಿ, ಭಾಗೀದಾರ ಸಂಸ್ಥೆ ಅಥವಾ ಅಂತಹುದೇ ಸಾಸ್ಥಿಕ(ಕಾರ್ಪೊರೇಟ್) ಸಂಸ್ಥೆಯ ಮಾಲೀಕತ್ವದಲ್ಲಿರುವಾಗ ಅಥವಾ ಮಾಲೀಕ ಚಾಲಕರು ಮಾನ್ಯ ಚಾಲನಾ ಪರವಾನೆಯನ್ನು ಹೊಂದಿಲ್ಲದ ಸಂದರ್ಭದಲ್ಲಿ ಮಾಲೀಕರಿಗೆ ಕಡ್ಡಾಯ ಪಿ ಎ ಅನ್ನು ನೀಡಲು ಸಾಧ್ಯವಿಲ್ಲ.

ಹೆಸರಿಸಿದ ವ್ಯಕ್ತಿಗಳಿಗೆ ಪಿ ಎ ಕವರ್

| ನೀವು ಹೆಸರಿಸಿದ ವ್ಯಕ್ತಿಗಳ ಹೆಸರುಗಳನ್ನು ಪಿಎ ಕವರ್ ನಲ್ಲಿ ಸೇರಿಸಬಯಸುವಿರಾ | | | | | |
|---|---|---|---|---|---|
| ಹೆಸರಿಸಿದ ವಸತಿಗಾರರ ಪಿಎ | (ಐಎಮ್ ಟಿ -15) | ಹೆಸರು | ಆಯ್ಕೆ ಮಾಡಲಾದ | ನಾಮನಿರ್ದೇಶಿತರು | ಸಂಬಂಧ |

| | | | | | |
|---|---|---|---|---|---|
| ಕವರ್ | | | ಸಿಎಸ್ಐ ರೂ. | | |
| | | 1) | | | |
| | | 2) | | | |
| | | 3) | | | |
| | | ಹೌದು/ಇಲ್ಲ, ಹೌದಾದರೆ ಹೆಸರು ಮತ್ತು ಆಯ್ಕೆ ಮಾಡಲಾದ ಮೂಲ ವಿಮಾಮೊತ್ತ(ಸಿಎಸ್ಐ)<br>(ಸೂಚನೆ- ಖಾಸಗಿ ಕಾರುಗಳ ಸಂದರ್ಭದಲ್ಲಿ ಪ್ರತಿ ವ್ಯಕ್ತಿಗೆ ಲಭ್ಯವಿರುವ ಸಿಎಸ್ಐರೂ. 2 ಲಕ್ಷಗಳು ಮತ್ತು ಮೋಟೋರೈಜ್ಡ್ ದ್ವಿಚಕ್ರವಾಹನಗಳ ಸಂದರ್ಭದಲ್ಲಿ ರೂ. 1 ಲಕ್ಷವಿರುತ್ತದೆ. | | | |
| ಹೆಸರಿಸದ ವ್ಯಕ್ತಿಗಳು/ಸಹಪ್ರವಾಸಿ/ಹೆಸರಿಸದ ಪ್ರವಾಸಿಗಳಿಗೆ ಪಿಎ | | | | | |
| ಆಡ್ ಆನ್ ಕವರ್ | | | | | |
| ಸವಕಳಿ ಇಲ್ಲ | | | | | |
| ಸೌಜನ್ಯ ಕಾರು | | | | | |
| ವೈದ್ಯಕೀಯ ವೆಚ್ಚಗಳು | | | | | |
| ವೈಯಕ್ತಿಕ ಪರಿಣಾಮಗಳು | | | | | |

ಬೆಲೆನಿರ್ಧಾರದ ಮೇಲೆ ಪ್ರಭಾವವನ್ನು ಹೊಂದಿರುವ ಮಾಹಿತಿ, ಕೆಲವು ಸಂಖ್ಯಾಶಾಸ್ತ್ರೀಯ ಉದ್ದೇಶಕ್ಕಾಗಿ ಸಹಿತ

ಇತರ ವಿವರಗಳು

| | |
|---|---|
| ವಾಹನದ ಬಳಕೆಯು ಸ್ವಂತ ಆವರಣಕ್ಕೆ ಸೀಮಿತವಾಗಿದೆಯೇ | ಹೌದು/ಇಲ್ಲ |
| ವಾಹನವು ಪರರಾಷ್ಟ್ರದ ರಾಯಭಾರ ಕಚೇರಿಗೆ ಸಂಬಂಧಿಸಿದೆಯೇ | ಹೌದು/ಇಲ್ಲ |
| ಕಾರನ್ನು ವಿಂಟೇಜ್ ಕಾರು ಎಂದು ಪ್ರಮಾಣೀಕರಿಸಲಾಗಿದೆಯೇ | ಹೌದು/ಇಲ್ಲ |
| ವಾಹನವನ್ನು ಅಂಧ/ಅಂಗವಿಕಲ ವ್ಯಕ್ತಿಗಳಿಗಾಗಿ ವಿನ್ಯಾಸಗೊಳಿಸಲಾಗಿದೆಯೇ | ಹೌದು/ಇಲ್ಲ, ಹೌದಾದರೆ ದಯವಿಟ್ಟು ಆರ್ ಟಿ ಎ ಅನುಮೋದನೆಯ ವಿವರಗಳನ್ನು ಸ್ಪಷ್ಟಪಡಿಸಿ |
| ವಾಹನವನ್ನು ಚಾಲನಾ ಬೋಧನೆಗೆ ಬಳಸಲಾಗುತ್ತದೆಯೇ | ಹೌದು/ಇಲ್ಲ |
| ಭೌಗೋಳಿಕ ಪ್ರದೇಶದ ವಿಸ್ತರಣೆ ಅವಶ್ಯಕವಾಗಿದೆಯೇ | ನೇಪಾಳ, ಬಾಂಗ್ಲಾದೇಶ, ಭೂತಾನ, ಮಾಲದೀವ್ಸ್, ಪಾಕಿಸ್ತಾನ, ಶ್ರೀಲಂಕಾ |

ಒಂದು ಪುಟದ ಪಾಲಿಸಿಯನ್ನು ಹೊಂದಬಯಸುವಿರಾ ಹೌದು/ಇಲ್ಲ

ಅತ್ಯಂತ ನಂಬಿಕೆಯ ಆಧಾರದ

**ವಿಮಾದಾರರಿಂದ ಘೋಷಣೆ**

ನಾನು/ನಾವು ಈ ಮೂಲಕ ಘೋಷಿಸುವುದೇನೆಂದರೆ, ಈ ನಮೂನೆಯಲ್ಲಿ ನಾನು/ನಾವು ನೀಡಿದ ಹೇಳಿಕೆಗಳು ನನ್ನ/ನಮ್ಮ ತಿಳುವಳಿಕೆ ಮತ್ತು ನಂಬಿಕೆಯಲ್ಲಿ ಸತ್ಯವಾಗಿವೆ ಮತ್ತು ನನ್ನ/ನಮ್ಮ ಈ ಘೋಷಣೆಯು ನನ್ನ/ನಮ್ಮ ಮತ್ತು------------------ನಡುವಿನ ಒಪ್ಪಂದಕ್ಕೆ ಆಧಾರವಾಗಿದೆಯೆಂದು ನಾನು/ನಾವು ಒಪ್ಪುತ್ತೇವೆ.

ನಾನು/ನಾವು ಈ ಮೂಲಕ ಘೋಷಿಸುವುದೇನೆಂದರೆ ಈ ನಮೂನೆಯ ಸಲ್ಲಿಸುವಿಕೆಯ ನಂತರ ಮಾಡಲ್ಪಟ್ಟ ಯಾವುದೇ ಸೇರ್ಪಡೆ ಅಥವಾ ಬದಲಾವಣೆಯನ್ನು ವಿಮಾಗಾರರಿಗೆ ತಕ್ಷಣವೇ ತಿಳಿಸಲ್ಪಡಬೇಕು ಎಂಬುದನ್ನು ಒಪ್ಪುತ್ತೇವೆ.

ಹಿಂದಿನ ಪಾಲಿಸಿ ಮುಕ್ತಾಯದ ಅವಧಿಯಿಂದ ಇಂದಿನವರೆಗೆ ನನ್ನ/ನಮ್ಮ ವಾಹನಕ್ಕೆ ಯಾವುದೇ ಅಪಘಾತವಾಗಿಲ್ಲವೆಂದು ನಾನು/ನಾವು ಈ ಮೂಲಕ ಖಾತ್ರಿಪಡಿಸುತ್ತೇವೆ. ನಾನು /ನಾವು ಕಂತು ಪಾವತಿಯನ್ನು----------ಯಲ್ಲಿ-------------ರಂದು ಸಲ್ಲಿಸಿದ ಬಗ್ಗೆ ಖಾತ್ರಿಪಡಿಸುತ್ತೇವೆ.

ನಿಮ್ಮೊಂದಿಗಿರುವ ಮೇಲಿನ ವಾಹನದ ವಿಮೆಗಾಗಿ, ಇಲ್ಲಿಯವರೆಗೆ ..........(ಸಮಯ)ದ ಮೊದಲು ಉಂಟಾದ ಯಾವುದೇ ಅಪಘಾತದಿಂದ ಉಂಟಾಗುವ ಯಾವುದೇ ನಷ್ಟ / ಹಾನಿ / ಹೊಣೆಗಾರಿಕೆಗೆ ನೀವು ಯಾವುದೇ ಹೊಣೆಗಾರಿಕೆ ಅಥವಾ ಯಾವುದೇ ಸ್ವರೂಪದ ಹೊಣೆಯನ್ನು ಹೊಂದಿಲ್ಲ ಎಂದು ಅರ್ಥಮಾಡಿಕೊಂಡಿದೆ ಮತ್ತು ಒಪ್ಪಿಕೊಳ್ಳಲಾಗಿದೆ.

ವಾಹನವು ಪರಿಪೂರ್ಣ ಮತ್ತು ರಸ್ತೆಯೋಗ್ಯ ಸ್ಥಿತಿಯಲ್ಲಿದೆಯೆಂದು ನಾನು/ನಾವು ಘೋಷಿಸುತ್ತೇವೆ.

ಸ್ಥಳ:

ದಿನಾಂಕ:

ಪ್ರಸ್ತಾಪಕರ ಸಹಿ

**ಭಾರತ ಗೃಹ ರಕ್ಷಾ, ಭಾರತ ಸೂಕ್ಷ್ಮ ಮತ್ತು ಭಾರತ ಲಘು ಉದ್ಯಮದ ಪ್ರಸ್ತಾವನೆ ನಮೂನೆಗಳು**

**ಪ್ರಮಾಣಿತ ಉತ್ಪನ್ನಗಳ, ಅಂದರೆ ಭಾರತ್ ಗೃಹ ರಕ್ಷಾ, ಭಾರತ್ ಸೂಕ್ಷ್ಮ ಮತ್ತು ಭಾರತ್ ಲಘು ಉದ್ಯಮ ಮತ್ತು ಅವುಗಳ ಪ್ರಸ್ತಾಪದ ನಮೂನೆಗಳ ಉತ್ತಮ ತಿಳುವಳಿಕೆಗಾಗಿ ದಯವಿಟ್ಟು ಐಆರ್ ಡಿಎಐ ವೆಬ್‌ಸೈಟ್ ಗೆ ಕೆಳಗಿನ ಲಿಂಕ್ ಅನ್ನು ಪರಿಶೀಲಿಸಿ.**

**https://www.irdai.gov.in/ADMINCMS/cms/Uploadedfiles/StandardProducts/Annexure-I-BharatGrihaRaksha.pdf**